KARNATAKA STATE ARCHIVES

KARNATAKA STATE ARCHIVES

KARNATAKA STATE ARCHIVES

ARS 34 APP 82

NAVAYUGA KANNADA WEEKLY

From 20.10.1955

Contd From Roll No. 145

Roll No. 146

ARS 34 APP 82

NAVAYUGA KANNADA WEEKLY

From 20.10.1955

Contd From Roll No. 145

Roll No. 146

ARS 34 APP 82

NAVAYUGA KANNADA WEEKLY

From 20.10.1955

Cont'd From Roll No. 145

Roll No. 146



ರಾಷ್ಟ್ರಾಧ್ಯಕ್ಷೆ ಡಾ। ರಾಜೇಂದ್ರ ಪ್ರಸಾದರು ಈಚೆಗೆ ಪ್ರಧಾನಿ ನೆಹರುಗಳು ಲೋಕ ಶಾಂತಿಯ ಸಾಧನೆಗಾಗಿಯೂ ಭಾರತದ ಸಾರ್ವಾಂಗಿಕ ಏಳಿಗೆಗಾಗಿಯೂ ಅವಿಶ್ರಾಂತವಾಗಿ ಪರಿಶ್ರಮಿಸಿದುದಕ್ಕೆ ಮೆಚ್ಚಿಕೆಯನ್ನು ಸೂಚಿಸಿ, ಅತ್ಯುಚ್ಚ ಪ್ರಶಸ್ತಿಯಾದ "ಭಾರತ ರತ್ನ" ಪದಕವನ್ನು ದಯಪಾಲಿಸಿದರು. ಜವಾಹರನೆಂಬ ಹೆಸರಿನಿಂದಲೇ ರತ್ನದ ನೆನಪನ್ನು ತಂದು ಕೊಡುವ ಪ್ರಧಾನಿಗಳ ಮುಖಿಳಿಕಮಲವು ಈ ಗೌರವಶ್ರೀಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಅಭಿಮಾನದಿಂದ ಅರಳಿಕೊಂಡಿರುವುದನ್ನು ಚಿತ್ರ ತೋರಿಸುತ್ತದೆ.

ರಾಜಸ್ಥಾನದ ಸರ್ದಾರ್ ಶಹರಿನಲ್ಲಿ ಈಚೆಗೆ ಗ್ರಾಮ ಜ್ಯೋತಿ ಕೇಂದ್ರ ಎಂಬ ಸಂಸ್ಥೆಯನ್ನು ರಾಷ್ಟ್ರಾಧ್ಯಕ್ಷರು ಉದ್ಘಾಟಿಸಿದರು. ಈ ಕೇಂದ್ರದಲ್ಲಿ ಕುಶಲ ಕಲೆಗಳಲ್ಲಿಯೂ ಹಸ್ತಶಿಲ್ಪಗಳಲ್ಲಿಯೂ ವೃತ್ತಿಗಳಲ್ಲಿಯೂ ಪಾರಂಗತರಾಗುವಂತೆ ಚೆನ್ನಾದ ಶಿಕ್ಷಣ ನೀಡಲ್ಪಡುತ್ತದೆ. ಭಾರತದಲ್ಲಿ ಮೂಲೋದ್ಯೋಗಗಳ ಬೆಳವಣಿಗೆಯು ಎಷ್ಟು ಆವಶ್ಯಕವಾಗಿದೆಯೋ ಸಾರ್ವಜನಿಕವಾಗಿಯೂ ಲಾಭದಾಯಿಕವಾದ ಮತ್ತು ಸಾಂಸ್ಕೃತಿಕ ಮಹತ್ವದಿಂದ ಕೂಡಿದ ಪ್ರಾಚೀನ ವೃತ್ತಿಗಳಿಗೆ ಪ್ರೋತ್ಸಾಹವನ್ನು ಕೊಡುವುದೂ ಅಗತ್ಯವಾಗಿದೆ. ರಾಷ್ಟ್ರಾಧ್ಯಕ್ಷರು ಹಳ್ಳಿಗಳಲ್ಲಿ ಪ್ರಕಾಶವನ್ನು ಚೆಲ್ಲುವ ಈ ನಮೂನೆಯ ಕೇಂದ್ರದ ಪರಿಶೀಲನೆ ನಡೆಸಿ ತೃಪ್ತಿ ಸೂಚಿಸುತ್ತಿರುವುದನ್ನು ಚಿತ್ರದಲ್ಲಿ ಕಾಣುತ್ತೇವೆ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಸಾವಿಗೆ ಮುಂಚೆ ಸಮಾಧಿ—

ಬರೆದವರು: ಧನ್ವಂತ. ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ೨. ಬೆಲೆ: ರೂ. ೨—೦—೦.

ಇಂಗ್ಲಿಷಿನಲ್ಲಿ ಎಡ್ಗರ್ ಎಲೆನ್ ಪೋನ ಕತೆಗಳು ರೋಮಾಂಚಕ ಸಾಹಿತ್ಯಕ್ಕೊಂದು ಮಾದರಿಯಾಗಿವೆ. ಕಳೆದ ಶತವಾನದಲ್ಲಿ ಆಗಿಹೋದ ಈ ಪಾಶ್ಚಾತ್ಯ ಸಾಹಿತಿಯ ಹದಿನೈದು ಕತೆಗಳನ್ನು ಶ್ರೀ ಧನ್ವಂತರು ಇಲ್ಲಿ ಕನ್ನಡಿಸಿದ್ದಾರೆ. ಕತೆಗಳಲ್ಲಿ ಹೆಚ್ಚಾಗಿ ಅದ್ಭುತ ಮತ್ತು ವಿಸ್ಮಯಕರ ವೃತ್ತಾಂತಗಳೇ ಕಂಡುಬರುತ್ತವೆ. ಒಂದಕ್ಕೊಂದನ್ನು ಜುರುಕಾಗಿ ಬಿಡಿಸಿದ ಮಾದರಿಯಲ್ಲಿ ಹೆಚ್ಚಿನ ಕತೆಗಳಿವೆ ಎನ್ನಬಹುದು. ಲಾಲಿತ್ಯ ಮತ್ತು ಸರಸತೆಗೆ ಈ ಕತೆಗಳಲ್ಲಿ ಅವಕಾಶ ಬೊರೆತಿಲ್ಲ—ಆದರೆ ಇವುಗಳು ಮನುಷ್ಯ ಕೃತಪ್ರಯೋಗಗಳ ನಾನಾಮುಖಿಗಳನ್ನು ರಮ್ಯವಾಗಿ ಚಿತ್ರಿಸುತ್ತವೆ ಎಂಬುದೇನೂ ಸುಳ್ಳಲ್ಲ. ಹಾಗೆ ನಿರೂಪಿಸುವಾಗ ಗೂಢಸತ್ಯವೊಂದನ್ನು ನಿಧಾನವಾಗಿ ಮಂದಬಿಚ್ಚಿ ಪಡಿಸುವುದಕ್ಕೆ ಲೇಖಕರು ಸಮರ್ಥರಾಗುತ್ತಾರೆ ಎಂಬುದೂ ಹೊಳೆಯದಿರದು. ಕನ್ನಡದ ಸಣ್ಣಕತೆಗಳ ಕ್ಷೇತ್ರದಲ್ಲಿ ಇಪ್ಪರ ವರೆಗೆ ಸಾಕಷ್ಟು ಹೆಚ್ಚಾಗಿ ಅರಳಿರಪ ಪುಷ್ಪಗಳ ಬಗೆ

ಲಘು ಪರಿಚಯ

ಮುಡಿಕೇರಿಯಿಂದ ಶ್ರೀ ಬಿ. ಎಸ್. ಗೋಪಾಲಕೃಷ್ಣ ಇವರ ಸಂಪಾದಕತ್ವದಲ್ಲಿ ಕನ್ನಡ "ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಗತಿಯನ್ನೆ ಮುಖ್ಯ ಗುರಿಯಾಗಿಟ್ಟುಕೊಂಡ" ಕೊಡಗಿನ ಪ್ರಥಮ ಮಾಸಪತ್ರಿಕೆ "ನಂದಾದೀಪ" ಇದೇ ಆಕ್ಟೋಬರದಲ್ಲಿ ಬೆಳಗಿದೆ. ಪತ್ರಿಕೆಗೆ ಸ್ವಾಗತಕೋರಿ, ಒಳ್ಳೆಯ ಮಟ್ಟವನ್ನು ಉದ್ಯಮ ಶೀಲತೆಯಲ್ಲಿ ಪ್ರದರ್ಶಿಸಿ, ಅದು ಬೆಳೆದು ಬಾಳಲೆಂದು ಹಾರೈಸುತ್ತೇವೆ.

ಹೃಷಿಕೇಶದ ದಿವ್ಯಧಾಮದಲ್ಲಿ ಸ್ವಾಮಿ ಶಿವಾನಂದರ ಆಶ್ರಯದಿಂದ ಪ್ರಕಟವಾಗುವ "ದಿವ್ಯ ಜೀವನ" "THE DIVINE LIFE" ಎಂಬ ಮಾಸಪತ್ರಿಕೆಯ ಸಪ್ತಂಬರ್ ತಿಂಗಳ ಸಂಚಿಕೆಯು ಸ್ವಾಮೀಜಿಯ ೬೫ನೇ ಜನ್ಮದಿನ ಸಂಚಿಕೆಯಾಗಿ ಪ್ರಕಟವಾಗಿದೆ. ಇದರಲ್ಲಿ ಶಿವಾನಂದರ ಆಧ್ಯಾತ್ಮಿಕ ಪ್ರತಿಭೆ ಅವರ ಜೀವನಾದರ್ಶ ಇತ್ಯಾದಿಗಳ ಮೇಲೆ ಬೆಳಕು ಬೀರುವ ಅವರ ಭಕ್ತವೃಂದದ ಹಲವಾರು ಲೇಖನಗಳನ್ನು ಕಾಣುತ್ತೇವೆ.

ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ ಅರವಟಿಗೆ ಇವರು ೧—೪—೧೯೫೫ ರಿಂದ ೩೧—೩—೧೯೫೫ ವರೆಗಿನ ತಮ್ಮ ಚಟುವಟಿಕೆಯ ಆರನೇ ವರ್ಷಕ್ಕೆ ಸಂಬಂಧಿಸಿದ ಪ್ರಕಟಿಸಿರುವ ವರದಿಯು ಸರ್ವೋದಯದ ಆದರ್ಶ ಸಾಧನೆಯಲ್ಲಿ ಗಣ್ಯ ಪ್ರಗತಿಯನ್ನು ಕಾರ್ಯಕರ್ತರು ಸಾಧಿಸಿರುವರೆಂದು ತೋರಿಸಿ ಕೊಡುತ್ತದೆ. ಗ್ರಾಮ ಜೀವನವನ್ನು ಸುಖಕರವಾಗಿ ಮಾಡುವ ಹಲವಾರು ವಿಧಾಯಕ ರಂಗಗಳಲ್ಲಿ ನಿಷ್ಠೆಯಿಂದ ದುಡಿದಿರುವುದರ ವಿವರಗಳು ತುಂಬ ಸಮಾಧಾನಕರವಾಗಿವೆ. ಸರ್ವೋದಯ ಸಮಿತಿಗೆ ಇತೋಽಭ್ಯುದಯವಾದ ಶ್ರೇಯಸ್ಸನ್ನು ಕೋರುತ್ತೇವೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

"Ably written—Quite up-to-date valuable service"
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ನೂಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶೀ. ಮುಂಜೇಶ್ವ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು" ದಿ। ಕಿಲ್ಲೆಯವರಿಂದ ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರುಣ ನಚಿತ್ರ ಎಂದೆಂದೂ ಜನಮನದಿಂದ ಮಾಯವಾಗಲಾರದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಪೇಲ್ಲರಗತಿಯ ಕವಿತೆಗಳ ಸಂಗ್ರಹ.

ಸಪುಂಟಿ ೩೫
VOL. 35
ಉಡುಪಿ, 20—10—1955

ಪ್ರಾಥಮಿಕ ವಿದ್ಯಾಭ್ಯಾಸ

ಮದ್ರಾಸು ಸರಕಾರದವರು ಕಳೆದ ವರ್ಷದ ನವಂಬರ ತಿಂಗಳಲ್ಲಿ ಡಾ. ಅಲಗಪ್ಪ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಪದ್ಧತಿಯನ್ನು ಪರಿಶೀಲಿಸುವುದಕ್ಕೋಸ್ಕರ ಸಮಿತಿಯೊಂದನ್ನು ನೇಮಿಸಿದ್ದರೆಂದು ಓದುಗರಿಗೆ ನೆನಪಿರಬಹುದು. ಸಮಿತಿಯವರು ಇದೇ ಗಾಂಧಿಜಯಂತಿಯಂದು ಸರಕಾರಕ್ಕೆ ತನ್ನ್ಮ ವರದಿಯನ್ನು ಒಪ್ಪಿಸಿರುವರೆಂದು ತಿಳಿದುಬರುತ್ತದೆ.

ಸಾರ್ವಜನಿಕರ ಅವಗಾಹನೆಯ ಬಗ್ಗೆ ಈ ವರದಿಯನ್ನು ಇನ್ನು ಕೆಲವೇ ವಾರಗಳಲ್ಲಿ ಪ್ರಕಟಿಸಲು ಸರಕಾರ ಬಯಸಿದೆ. ಮುಂದಿನ ತಿಂಗಳಲ್ಲಿ ನೇರಲಿರುವ ಶಾಸನಾಂಗದ ಅಧಿವೇಶನ ಕಾಲದಲ್ಲಿ ಸದಸ್ಯರಿಗೆ ಸಮಿತಿಯ ಸಿಫಾರಸುಗಳು ತಿಳಿದಿರಬೇಕೆಂದೂ ತಮ್ಮ್ಮ ಅಭಿಪ್ರಾಯಂಗಳನ್ನು ಸರಕಾರಕ್ಕೆ ವಿದಿತಪಡಿಸಲು ಅವರು ಶಕ್ತರಾಗಬೇಕೆಂದೂ ಸರಕಾರ ಆಶಿಸುತ್ತಿರುವುದರಿಂದ ಜನತೆಯ ಪ್ರತಿನಿಧಿಗಳ ಅಧ್ಯಯನಕ್ಕೆ ಸಾಕಷ್ಟು ಅವಕಾಶ ಸಿಗುವಂತೆ ಬೇಗನೆ ವರದಿಯು ಪ್ರಕಟವಾಗುವುದರಲ್ಲಿ ಸಂದೇಹವಿಲ್ಲವೆಂದು ಭಾವಿಸಬಹುದು.

ಇದರ ನಡುವೆ ವಿದಿತ ವರ್ಗಗಳ ಮೂಲಕ ಕೆಲವು ಸಂಗತಿಗಳು ವರದಿಯ ಕುರಿತಾಗಿ ಬಹಿರಂಗವಾಗಿದೆ. ವರದಿಯನ್ನು ಸರಕಾರವು ತೀವ್ರವಾಗಿ ಪರ್ಯಾಲೋಚಿಸುತ್ತಿರುವುದೆಂಬುದನ್ನು ಯಾರೂ ಹೇಳುವ ಅಗತ್ಯವಿಲ್ಲ. ಪರ್ಯಾಲೋಚನೆಯು ಬಳಿಕ ಬೇಗನೆ ನಿರ್ಣಯಗಳನ್ನು ಕೈಗೊಂಡು ಮುಂದಿನ ಶಾಲಾ ವರ್ಷದಲ್ಲಿ— ಅಂದರೆ ೧೯೫೬-೫೭ನೇ ಸಾಲಿಗೆ ನಿರ್ಣಯಗಳನ್ನು ಕಾರ್ಯಗತ ಗೊಳಿಸಲು ಸರಕಾರ ಇಚ್ಚಿಸುತ್ತಿರುವಂತೆ ಕಾಣುತ್ತದೆ.

ಸಮಿತಿಯವರು ಕ್ರಾಂತಿಕಾರಿಯಾದ ಯಾವ ಸೂಚನೆಗಳನ್ನೂ ಮಾಡಿಲ್ಲವೆಂದು ಹೇಳಲಾಗುತ್ತದೆ ಈಗಿನ ಪದ್ಧತಿಯಲ್ಲಿ ತೀವ್ರ ಬದಲಾವಣೆಗಳನ್ನು ಈ ಸಮಿತಿ ಸೂಚಿಸಿಲ್ಲ: ಪ್ರಗತಿಯ ಹೆಜ್ಜೆಯು ಮಾತ್ರ ತೀವ್ರವಾಗಬೇಕೆಂದು ಹೇಳಿದೆ—ಎಂದು ವಿದಿತ ವರ್ಗಗಳು ತಿಳಿಸಿರುತ್ತವೆ.

ಮೂಲ ಶಿಕ್ಷಣ ಕ್ರಮವನ್ನು ಮುಂದೊತ್ತಿಕೊಂಡು ಹೋಗುವ ವಿಷಯದಲ್ಲಿ ಈಗಿನ ವಿಧಾನವನ್ನು ಜಾಗರೂಕತೆಯಿಂದ ಮತ್ತು ಪ್ರಗತಿಪರವಾಗಿ ಅನುಸರಿಸಬೇಕೆಂದು ಸಮಿತಿ ಅಭಿಪ್ರಾಯ ಪಟ್ಟಿರುವುದೊಂದು ತೋರುತ್ತದೆ. ಪ್ರಾಥಮಿಕ ಶಿಕ್ಷಣ ಪ್ರಾಥಮಿಕ ತರಗತಿಗಳಿಗೆ ಇದನ್ನು ವಿಸ್ತರಿಸಬೇಕು. ಹೆಚ್ಚಿನ ಶಾಲೆಗಳಲ್ಲಿ ತೋಟಗಾರಿಕೆಯನ್ನು ವೃತ್ತಿಯಾಗಿ ಪರಿಗ್ರಹಿಸಬಹುದು; ಸಾಧ್ಯವಿದ್ದಲ್ಲೆಲ್ಲ ಕುಂಬಾರಿಕೆ ಚಾಪೆಹೆಣೆಯುವುದು ಇತ್ಯಾದಿಗಳನ್ನು ಅವಲಂಬಿಸಬಹುದು. ಕಚ್ಚಾ ಸರಕುಗಳ ಕ್ರಯದಲ್ಲಿ ಒಂದಂಶವನ್ನು ತೆತ್ತು ಈ ಉತ್ಪಾದನೆಯನ್ನು ಸ್ವಂತಕ್ಕೆ ಉಪಯೋಗಿಸಲು ವಿದ್ಯಾರ್ಥಿಗಳಿಗೆ ಬಿಡಬೇಕು—ಎಂದು ಸಮಿತಿ ಹೇಳಿದೆಯಾಗಿ ಸುದ್ದಿ.

ಆದಷ್ಟು ಹೆಚ್ಚು ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಬರಬೇಕೆಂದು ಸಮಿತಿಯು ಹಲವಾರು ಸೂಚನೆಗಳನ್ನು ಮಾಡಿದೆಯೆಂದೂ ಗೊತ್ತಾಗಿರುತ್ತದೆ. ಪ್ರಾಥಮಿಕ ಶಿಕ್ಷಣಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ನೀಡಬೇಕೆನ್ನುತ್ತಾ ಅದು ಬ್ರಿಟನಿನ ಉದಾಹರಣೆಯನ್ನು ನೀಡಿದೆಯಂತೆ— ಆ ದೇಶದಲ್ಲಿ ವರ್ಷಕ್ಕೆ ೪೦ ಕೋಟಿ ಪೌಂಡುಗಳಷ್ಟು ಹಣ ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚವಾಗುತ್ತದೆ; ಇದರಲ್ಲಿ ೧೦ ಲಕ್ಷ ಪೌಂಡುಗಳಷ್ಟು ಕಟ್ಟಡಗಳಿಗಾಗಿ ಪ್ರತಿವಾರ ನೀಡಲ್ಪಡುತ್ತವೆ.

ನಮ್ಮ ದೇಶದಲ್ಲಿ ೩೦೦ರಿಂದ ೫೦೦ ಜನರ ನಡುವಿರುವ ಪ್ರತಿಯೊಂದೂ ಹಳ್ಳಿಗೆ ಒಂದರಂತೆ ಇದು ಸಾಧ್ಯವಿಲ್ಲದಿದ್ದರೆ ಎಂಥ ಪ್ರಸಂಗದಲ್ಲಿಯೇ ಆಗಲಿ, ಮಕ್ಕಳಿಗೆ ಹೋಗಿಬರಲು ಹೆಚ್ಚು ದೂರವಾಗದಂತೆ —ಶಾಲೆಗಳನ್ನು ಸ್ಥಾಪಿಸಬೇಕು. ಇವುಗಳ ಕಟ್ಟಡ ರಚನೆಗೆ ರಾಷ್ಟ್ರೀಯ ವಿಸ್ತರಣಾ ನೇವೆ ಇತ್ಯಾದಿ ಅಭಿವೃದ್ಧಿ ಪ್ರಯತ್ನಗಳ ಸಹಾಯವನ್ನು ಪಡೆಯಬಹುದು. ತೋಟ ತಯಾರಿಸಲೂ ಆಟದ ಮೈದಾನಿಗಾಗಿಯೂ ಭೂದಾನ ಚಳವಳಿಯನ್ನು ನಡೆಸಬಹುದು. ಸಾಧ್ಯವಾದಷ್ಟು ಮಟ್ಟಿಗೆ ಮಧ್ಯಾಹ್ನದ ಊಟವನ್ನು ಮಕ್ಕಳಿಗೆ ಧರ್ಮಾರ್ಥವಾಗಿ ಶಾಲೆಯ ವತಿಯಿಂದಲ್ಲಿಯೇ ಕೊಡಬೇಕು. ಊರಿನವರು ಅರ್ಧ ಖರ್ಚನ್ನು ಹೊರುವ ತಳಹದಿಯ ಮೇಲೆ ಈ ಕಾರ್ಯಕ್ರಮವನ್ನು ಪ್ರಾರಂಭಿಸಬಹುದು. ಇದಲ್ಲದೆ ಸ್ಲೇಟು, ಕಡ್ಡಿ ಮತ್ತು ಪುಸ್ತಕಗಳನ್ನು ಧರ್ಮಾರ್ಥವಾಗಿ ಕೊಡಬೇಕು-ಎಂದು ಸಮಿತಿ ಸಲಹೆ ಮಾಡಿರುತ್ತದೆ.

ರಾಜ್ಯದಲ್ಲಿ ಈಗ ಐದರಿಂದ ೧೫ವರ್ಷ ಪ್ರಾಯದ ೬೩ ಲಕ್ಷ ಮಕ್ಕಳಿದ್ದಾರೆ; ಇದರಲ್ಲಿ ಶಾಲೆಯಲ್ಲಿ ಶಿಕ್ಷಣಪಡೆಯುತ್ತಿರುವವರು ೩೭ಲಕ್ಷ ಮಾತ್ರ. ಘಟನೆಯಂತೆ ಸರಕಾರದ ಮೇಲಿರುವ ಈ ಸಂಬಂಧದ ಹೊಣೆಗಾರಿಕೆಯನ್ನು ಆದಷ್ಟು ಶೀಘ್ರವಾಗಿ ನಿರ್ವಹಿಸಬೇಕು. ಮಕ್ಕಳು ಸ್ವೇಚ್ಛೆಯಿಂದ ಶಾಲೆಗೆ ಬರುವಂತೆ ಉತ್ತಮ ವಾತಾವರಣವನ್ನು ನಿರ್ಮಿಸಬೇಕು. ಸಾಮಾನ್ಯವಾಗಿ ಹೆತ್ತವರ ಉದಾಸೀನತೆಯೇ ಮಕ್ಕಳು ಶಾಲೆಗೆ ಬರದಿರುವುದರ ಕಾರಣ. ಸುದೈವದಿಂದ ಈಗ ಪ್ರತಿಯೊಂದು ಗ್ರಾಮದ ಮೂಲೆಯಿಂದಲೂ ಶಾಲೆಗಳಿಗೆ ಬೇಡಿಕೆ ಬರುತ್ತಿದೆ. ಇದರ ಸದುಪಯೋಗ ಪಡೆಯದೆ ಬಿಡಬಾರದು. ಶಾಲೆಗೆ ಬಾರದ ಮಕ್ಕಳ ಹೆತ್ತವರೊಡನೆ ಅಧ್ಯಾಪಕರು ಸಂಪರ್ಕವನ್ನು ಬೆಳೆಸಿ, ಪರಿಸ್ಥಿತಿಯನ್ನು ಸುಧಾರಿಸಲು ನೋಡಬೇಕು-ಎಂಬುದಾಗಿಯೂ ಸಮಿತಿ ಹೇಳಿರುತ್ತದೆ.

ಶಾಲೆಗಳಲ್ಲಿ ರ
ಕೊಡುವುದಕ್ಕೆ
ಕೂ ಲ ವಿ ಲ್ಲ ,
ಶಿಕ್ಷಣ ಕೊಡುವು
ಧವಿಲ್ಲ ಎಂದು ಸ
ವರದಿಯಾಗಿದೆ.
ಡಿಮೆ ವಯಸ್ಸಿನ
ಸೋರಿ ಪದ್ಧತಿಯ
ಷ್ಟ್ಯಗಳಿಗನುಸಾ
ಅನುಸರಿಸುವ ಶಾ
ದೆಂದೂ ಅದು ಸ
ಪಾಧ್ಯಾಯ ಶಾ
ವುದಕ್ಕೆ ಉತ್ತೇಜ
ಸೌಕರ್ಯವನ್ನೂ
ರ್ಗಿರ್ದರಲ್ಲಿ ಮಾ
ಪರಿಷ್ಕರಿಸಲು ಸಿ
ಕು; ಎಂಟನೇ
ಸರಕಾರಿ ಪರೀಕ್
ಯೇ ಮುಂದರಿಯ
ತರಗತಿಯಿಂದ ಆ
ಇಂಗ್ಲೀಷಿನ ಶಿಕ್ಷಣ
ನೀಡಬೇಕು —
ಯಾಗಿ ಗೊತ್ತಾಗಿ

ಶಾಲೆಗಳ ಆಡ
ಬ್ಬ ನೇವಹಿಸಿಕೊ
ದು; ಪ್ರತಿಯೊಂ
ಮಂಡಳವನ್ನು ನೆ
ಒಬ್ಬಬ್ಬರು ಸದಸ್ಯ
ಕು. ಉಪಾಧ್ಯಾಯ
ಶಾಲೆಗಳಿಗೂ ಈ
ಸಬೇಕು—ಎಂದ
ಯಂತೆ. ಇನ್ನು
ಡ್ರ್ ಮತ್ತು ಗ್ರಾ
ಗೆ ಶಾಲೆಗಳನ್ನು
ತನ್ನ ಅಧಿಕಾರ ವ
ಶಾಲೆಗಳನ್ನು ನಡೆ
ರ ಹೊರಗೆ ಪ್ರಾ
ಅಧಿಕಾರ ಕೊಡ
ಜಿಲ್ಲಾ ಬೋರ್ಡು
ಜಾಯತುಗಳ ಪ್ರ
ರದ ಪ್ರತಿನಿಧಿಗಳ
ದ ಅಧಿಕಾರಾವಧಿ
೨೦೦ ಶಾಲೆಗಳ
ಒಂದು ಮಂಡಳಕ್
ಪಕ್ಕಿಂತ ಹೆಚ್ಚಲ್ಲ
ಶಿಕ್ಷಣ ಸಂಬಂಧಿ
ದಾಯ ಈ ವ್ಯಾ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಪ್ರಧಾನ ಕಾರ್ಯಾಲಯ: ಉಡುಪಿ.] [ಸ್ಥಾಪನೆ: 1925.
ಸುಖಸಂತೋಷವನ್ನು ಬರಮಾಡಿಕೊಳ್ಳುವುದು ಹೇಗೆ?
ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಆಕಸ್ಮಿಕ ಘಟನೆಯಲ್ಲ. ಅದನ್ನು ನಡುದಾರಿಯ ಪರೆಗೆ ಹೋಗಿ, ಸೆಂಧಿಸಿ, ಮನೆಗೆ ಸ್ವಾಗತಿಸಬೇಕಾಗುತ್ತದೆ. ಕೆಲವು ವರ್ಷಗಳಷ್ಟು ಮುಂದಾಗಿಯೇ ತಕ್ಕ ಯೋಜನೆಯನ್ನು ಮಾಡಿರಬೇಕೆಂದು ಇದರ ಅರ್ಥ. ನಿಮ್ಮ ಗುರಿಯನ್ನು ಗೊತ್ತುಪಡಿಸುವುದು ಮತ್ತು ಅದನ್ನು ಮುಟ್ಟಲು ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ಮೊದಲನೆಯ ಕೆಲಸ. ಈ ಬಗೆಯ ಕಾರ್ಯಕ್ರಮಗಳಲ್ಲಿ ನಿಮಗೆಷ್ಟು ಸಾಧ್ಯವೋ ಅಷ್ಟು ಹಣವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ಮುಖ್ಯವಾದೊಂದು ವಿಷಯ. ನಾವು ಇದಕ್ಕೆ ಪ್ರತಿ ಅರ್ಧ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಳಿತಾಯವು ಬೇಗನೆ ಬೆಳವಣಿಗೆಯನ್ನು ಹೊಂದುವಂತೆ ನೆರವಾಗುತ್ತೇವೆ.
ಚಲಾವಣೆ ಬಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ

ರಾಷ್ಟ್ರಾಧ್ಯಕ್ಷ ಡಾ। ರಾಜೇಂದ್ರ ಪ್ರಸಾದರು ಈಚೆಗೆ ಪ್ರಧಾನಿ ನೆಹರುಗಳು ಲೋಕ ಶಾಂತಿಯ ಸಾಧನೆಗಾಗಿಯೂ ಭಾರತದ ಸಾರ್ವಾಂಗಿಕ ಏಳಿಗೆಗಾಗಿಯೂ ಅವಿಶ್ರಾಂತವಾಗಿ ಪರಿಶ್ರಮಿಸಿದುದಕ್ಕೆ ಮೆಚ್ಚಿಕೆಯನ್ನು ಸೂಚಿಸಿ, ಅತ್ಯುಚ್ಚ ಪ್ರಶಸ್ತಿಯಾದ "ಭಾರತ ರತ್ನ" ಪದಕವನ್ನು ದಯಪಾಲಿಸಿದರು. ಜವಾಹರನೆಂಬ ಹೆಸರಿನಿಂದಲೇ ರತ್ನದ ನೆನಪನ್ನು ತಂದು ಕೊಡುವ ಪ್ರಧಾನಿಗಳ ಮುಖಕಮಲವು ಈ ಗೌರವಶ್ರೀಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಅಭಿಮಾನದಿಂದ ಅರಳಿಕೊಂಡಿರುವುದನ್ನು ಚಿತ್ರ ತೋರಿಸುತ್ತಿದೆ.

ರಾಜಸ್ಥಾನದ ಸರ್ದಾರ್ ಶಹರಿನಲ್ಲಿ ಈಚೆಗೆ ಗ್ರಾಮ ಜ್ಯೋತಿ ಕೇಂದ್ರ ಎಂಬ ಸಂ
ಯನ್ನು ರಾಷ್ಟ್ರಾಧ್ಯಕ್ಷರು ಉದ್ಘಾಟಿಸಿದರು. ಈ ಕೇಂದ್ರದಲ್ಲಿ ಕುಶಲ ಕಲೆಗಳಲ್ಲಿಯೂ ಹ
ನೈಪುಣ್ಯದ, ನೃತ್ತಿಗಳಲ್ಲಿಯೂ ಪಾರಂಗತರಾಗುವಂತೆ ಜನ್ನಾದ ಶಿಕ್ಷಣ ನೀಡಲ್ಪಡುತ್ತ
ಭಾರತದಲ್ಲಿ ಮೂಲೋದ್ಯೋಗಗಳ ಬೆಳವಣಿಗೆಯು ಎಷ್ಟು ಅವಶ್ಯಕವಾಗಿದೆಯೋ ಸಾಂ
ದಾಯಿಕವಾದ ಮತ್ತು ಸಾಂಸ್ಕೃತಿಕ ಮಹತ್ವದಿಂದ ಕೂಡಿದ ಪ್ರಾಚೀನ ವೃತ್ತಿಗಳಿಗೆ ಪ್ರೋತ್ಸಾ
ನವನ್ನು ಕೊಡುವುದೂ ಆಗತ್ಯವಾಗಿದೆ. ರಾಷ್ಟ್ರಾಧ್ಯಕ್ಷರು ಹಳ್ಳಿಗಳಲ್ಲಿ ಪ್ರಕಾಶವನ್ನು ಚೆಲ್ಲುವ
ಪಾದರಿ ಕೇಂದ್ರದ ಪರಿಶೀಲನೆ ನಡೆಸಿ ತೃಪ್ತಿ ಸೂಚಿಸುತ್ತಿರುವುದನ್ನು ಚಿತ್ರದಲ್ಲಿ ಕಾಣುತ್ತೇವೆ

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಸಾವಿಗೆ ಮುಂಚೆ ಸಮಾಧಿ—

ಬರೆದವರು: ಧನ್ವಂತ. ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ೨. ಬೆಲೆ: ರೂ. ೨—೦—೦.

ಇಂಗ್ಲಿಷಿನಲ್ಲಿ ಎಡ್ಗರ್ ಎಲೆನ್ ಪೋನ ಕತೆಗಳು ರೋಮಾಂಚಕ ಸಾಹಿತ್ಯಕ್ಕೊಂದು ಮಾದರಿಯಾಗಿವೆ. ಕಳೆದ ಶತಮಾನದಲ್ಲಿ ಆಗಿಹೋದ ಈ ಪಾಶ್ಚಾತ್ಯ ಸಾಹಿತಿಯ ಹದಿನೈದು ಕತೆಗಳನ್ನು ಶ್ರೀ ಧನ್ವಂತರು ಇಲ್ಲಿ ಕನ್ನಡಿಸಿದ್ದಾರೆ. ಕತೆಗಳಲ್ಲಿ ಹೆಚ್ಚಾಗಿ ಅದ್ಭುತ ಮತ್ತು ವಿಸ್ಮಯಕರ ನೃತ್ತಾಂತಗಳೇ ಕಂಡುಬರುತ್ತವೆ. ಒಗಟೊಂದನ್ನು ಜಾಣುಕಾಗಿ ಬಿಡಿಸಿದ ಮಾದರಿಯಲ್ಲಿ ಹೆಚ್ಚಿನ ಕತೆಗಳಿವೆ ಎನ್ನಲಡ್ಡಿಯಿಲ್ಲ. ಲಾಲಿತ್ಯ ಮತ್ತು ಸರಸತೆಗೆ ಈ ಕತೆಗಳಲ್ಲಿ ಅವಕಾಶ ಬೊರೆತಿಲ್ಲ—ಆದರೆ ಇವುಗಳು ಮನುಷ್ಯ ಕೃತಪ್ರಮಾದಗಳ ನಾನಾನುಭವಗಳನ್ನು ರಮ್ಯವಾಗಿ ಚಿತ್ರಿಸುತ್ತವೆ ಎಂಬುದೇನೂ ಸುಳ್ಳಲ್ಲ. ಹಾಗೆ ನಿರೂಪಿಸುವಾಗ ಗೂಢಸತ್ಯವೊಂದನ್ನು ನಿಧಾನವಾಗಿ ಮಂಡಿಟ್ಟು ಪಡಿಸುವುದಕ್ಕೆ ಲೇಖಕರು ಸಮರ್ಥರಾಗುತ್ತಾರೆ ಎಂಬುದೂ ಹೊಳೆಯದಿರದು. ಕನ್ನಡದ ಸಣ್ಣಕತೆಗಳ ಕ್ಷೇತ್ರದಲ್ಲಿ ಇಪ್ಪರ ವರೆಗೆ ಸಾಕಷ್ಟು ಹೆಚ್ಚಾಗಿ ಆದರೆಲ್ಲ ಪುಸ್ತಕಗಳ ಬಗೆ

ಲಘು ಪರಿಚಯ

ಮುಡಿಕೇರಿಯಿಂದ ಶ್ರೀ ಬಿ. ಎಸ್. ಗೋಪಾಲಕೃಷ್ಣ ಇವರ ಸಂಪಾದಕತ್ವದಲ್ಲಿ ಕನ್ನಡ "ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಗತಿಯನ್ನೆ ಮುಖ್ಯ ಗುರಿಯಾಗಿಟ್ಟುಕೊಂಡ" ಕೊಡಗಿನ ಪ್ರಥಮ ಮಾಸಪತ್ರಿಕೆ "ಸಂದಾದೀಪ" ಇದೇ ಅಕ್ಟೋಬರಿನಲ್ಲಿ ಬೆಳಗಿದೆ. ಪತ್ರಿಕೆಗೆ ಸ್ವಾಗತಕೋರಿ, ಒಳ್ಳೆಯ ಮಟ್ಟವನ್ನು ಉದ್ಯ

ಮ ಶೀಲತೆಯುಳ್ಳಿ ಪ್ರದರ್ಶಿಸಿ, ಅದು ಬೆಳೆದು ಬಾಳಲೆಂದು ಹಾರೈಸುತ್ತೇವೆ.

ಹೃಷಿ ಕೇಶದ ದಿವ್ಯಧಾಮದಲ್ಲಿ ಸ್ವಾಮಿ ಶಿವಾನಂದರ ಆಶ್ರಯದಿಂದ ಪ್ರಕಟವಾಗುವ "ದಿವ್ಯ ಜೀವನ" "THE DIVINE LIFE" ಎಂಬ ಮಾಸಪತ್ರಿಕೆಯ ಸಪ್ತಂಬರ ತಿಂಗಳ ಸಂಚಿಕೆಯು ಸ್ವಾಮೀಜಿಯ ೬೯ನೇ ಜನ್ಮದಿನ ಸಂಚಿಕೆಯಾಗಿ ಪ್ರಕಟವಾಗಿದೆ. ಇದರಲ್ಲಿ ಶಿವಾನಂದರ ಅಧ್ಯಾತ್ಮಿಕ ಪ್ರತಿಭೆ ಅವರ ಜೀವನಾದರ್ಶ ಇತ್ಯಾದಿಗಳ ಮೇಲೆ ಬೆಳಕು ಬೀರುವ ಅವರ ಭಕ್ತವೃಂದದ ಹಲವಾರು ಲೇಖನಗಳನ್ನು ಕಾಣುತ್ತೇವೆ.

ಧಾರವಾಡ ಜಿಲ್ಲಾ ಸರ್ವೋದಯ ಯೋ
ಜನೆ, ಅಗಸ್ಟಿಗೆ ಇವರು ೧—೪—೧೯೫೫ ರಿಂದ ೩೧—೩—೧೯೫೬ ವರೆಗಿನ ತಮ್ಮ ಚಟುವಟಿಕೆಯ ಆರನೇ ವರ್ಷಕ್ಕೆ ಸಂಬಂಧಿಸಿ ಪ್ರಕಟಿಸಿರುವ ವರದಿಯು ಸರ್ವೋದಯದ ಆದರ್ಶ ಸಾಧನೆಯಲ್ಲಿ ಗಣ್ಯ ಪ್ರಗತಿಯನ್ನು ಕಾರ್ಯಕರ್ತರು ಸಾಧಿಸಿರುವರೆಂದು ತೋರಿಸಿ ಕೊಡುತ್ತದೆ. ಗ್ರಾಮ ಜೀವನವನ್ನು ಸುಖಕರವಾಗಿ ಮಾಡುವ ಹಲವಾರು ವಿಧಾಯಕ ರಂಗಗಳಲ್ಲಿ ನಿಷ್ಠೆಯಿಂದ ದುಡಿದಿರುವುದರ ವಿವರಗಳು ತುಂಬ ಸನ್ನಾಧಾನಕರವಾಗಿವೆ. ಸರ್ವೋದಯ ಸಮಿತಿಗೆ ಇತೋಪ್ಯತಿಶಯವಾದ ಶ್ರೇಯಸ್ಸನ್ನು ಕೋರುತ್ತೇವೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್**, ಎಲ್. ಐ. ಎಮ್.

"Ably written—Quite up-to-date valuable service"
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೊಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು" ದಿ। ಕಿಲ್ಲೆಯವರಿ ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕಥನಚಿತ್ರ ಎಂದೆಂದೂ ಜನಮನದಿಂದ ಮಾಯವಾಹೋಗದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ.

ಸಪುಂಟೆ ೩೫
VOL. 35

ಉಡುಪಿ, 20—10—1955

ಪ್ರಾಥಮಿಕ ವಿದ್ಯಾಭ್ಯಾಸ

ಮದ್ರಾಸು ಸರಕಾರದವರು ಕಳೆದ ವರ್ಷದ ನವಂಬರ ತಿಂಗಳಲ್ಲಿ ಡಾ. ಅಲಗಪ್ಪ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಪದ್ಧತಿಯನ್ನು ಪರಿಶೀಲಿಸುವುದಕ್ಕೋಸ್ಕರ ಸಮಿತಿಯೊಂದನ್ನು ನೇಮಿಸಿದ್ದರೆಂದು ಓದುಗರಿಗೆ ನೆನಪಿರಬಹುದು. ಸಮಿತಿಯವರು ಇದೇ ಗಾಂಧಿಜಯಂತಿಯಂದು ಸರಕಾರಕ್ಕೆ ತನ್ನ ವರದಿಯನ್ನು ಒಪ್ಪಿಸಿರುವರೆಂದು ತಿಳಿದುಬರುತ್ತದೆ.

ಸಾರ್ವಜನಿಕರ ಅವಗಾಹನೆಯ ಬಗ್ಗೆ ಈ ವರದಿಯನ್ನು ಇನ್ನು ಕೆಲವೇ ವಾರಗಳಲ್ಲಿ ಪ್ರಕಟಿಸಲು ಸರಕಾರ ಬಯಸಿದೆ. ಮುಂದಿನ ತಿಂಗಳಲ್ಲಿ ಸೇರಲಿರುವ ಶಾಸನಾಂಗದ ಅಧಿವೇಶನ ಕಾಲದಲ್ಲಿ ಸದಸ್ಯರಿಗೆ ಸಮಿತಿಯ ಸಿಫಾರಸುಗಳು ತಿಳಿದಿರಬೇಕೆಂದೂ ತಮ್ಮ ಅಭಿಪ್ರಾಯಗಳನ್ನು ಸರಕಾರಕ್ಕೆ ವಿದಿತಪಡಿಸಲು ಅವರು ಶಕ್ತರಾಗಬೇಕೆಂದೂ ಸರಕಾರ ಆಶಿಸುತ್ತಿರುವುದರಿಂದ ಜನತೆಯ ಪ್ರತಿನಿಧಿಗಳ ಅಧ್ಯಯನಕ್ಕೆ ಸಾಕಷ್ಟು ಅವಕಾಶ ಸಿಗುವಂತೆ ಬೇಗನೆ ವರದಿಯು ಪ್ರಕಟವಾಗುವುದರಲ್ಲಿ ಸಂದೇಹವಿಲ್ಲವೆಂದು ಭಾವಿಸಬಹುದು.

ಇದರ ನಡುವೆ ವಿದಿತ ವರ್ಗಗಳ ಮೂಲಕ ಕೆಲವು ಸಂಗತಿಗಳು ವರದಿಯ ಕುರಿತಾಗಿ ಬಹಿರಂಗವಾಗಿದೆ. ವರದಿಯನ್ನು ಸರಕಾರವು ತೀವ್ರವಾಗಿ ಪರ್ಯಾಲೋಚಿಸುತ್ತಿರುವುದೆಂಬುದನ್ನು ಯಾರೂ ಹೇಳುವ ಅಗತ್ಯವಿಲ್ಲ. ಪರ್ಯಾಲೋಚನೆಯ ಬಳಿಕ ಬೇಗನೆ ನಿರ್ಣಯಗಳನ್ನು ಕೈಗೊಂಡು ಮುಂದಿನ ಶಾಲಾ ವರ್ಷದಲ್ಲಿ — ಅಂದರೆ ೧೯೫೬-೫೭ನೇ ಸಾಲಿಗೆ ನಿರ್ಣಯಗಳನ್ನು ಕಾರ್ಯಗತ ಗೊಳಿಸಲು ಸರಕಾರ ಇಚ್ಛಿಸುತ್ತಿರುವಂತೆ ಕಾಣುತ್ತದೆ.

ಸಮಿತಿಯವರು ಕ್ರಾಂತಿಕಾರಿಯಾದ ಯಾವ ಸೂಚನೆಗಳನ್ನೂ ಮಾಡಿಲ್ಲವೆಂದು ಹೇಳಲಾಗುತ್ತದೆ ಈಗಿನ ಪದ್ಧತಿಯಲ್ಲಿ ತೀವ್ರ ಬದಲಾವಣೆಗಳನ್ನು ಈ ಸಮಿತಿ ಸೂಚಿಸಿಲ್ಲ: ಪ್ರಗತಿಯ ಹೆಜ್ಜೆಯು ಮಾತ್ರ ತೀವ್ರವಾಗಬೇಕೆಂದು ಹೇಳಿದೆ—ಎಂದು ವಿದಿತ ವರ್ಗಗಳು ತಿಳಿಸಿರುತ್ತವೆ.

ಮೂಲ ಶಿಕ್ಷಣ ಕ್ರಮವನ್ನು ಮುಂದೊತ್ತಿಕೊಂಡು ಹೋಗುವ ವಿಷಯದಲ್ಲಿ ಈಗಿನ ವಿಧಾನವನ್ನು ಜಾಗರೂಕತೆಯಿಂದ ಮತ್ತು ಪ್ರಗತಿಪರವಾಗಿ ಅನುಸರಿಸಬೇಕೆಂದು ಸಮಿತಿ ಅಭಿಪ್ರಾಯ ಪಟ್ಟಿರುವುದೆಂದು ಕೇಳುತ್ತೇವೆ. ಪ್ರಾಥಮಿಕ ಶಾಲೆಗಳ ಪ್ರಾಥಮಿಕ ತರಗತಿಗಳಿಗೆ ಇದನ್ನು ವಿಸ್ತರಿಸಬೇಕು. ಹೆಚ್ಚಿನ ಶಾಲೆಗಳಲ್ಲಿ ತೋಟಗಾರಿಕೆಯನ್ನು ವೃತ್ತಿಯಾಗಿ ಪರಿಗ್ರಹಿಸಬಹುದು; ಸಾಧ್ಯವಿದ್ದಲ್ಲೆಲ್ಲ ಕುಂಬಾರಿಕೆ ಚಾಪೆಹೆಣೆಯುವುದು ಇತ್ಯಾದಿಗಳನ್ನು ಅವಲಂಬಿಸಬಹುದು. ಕಚ್ಚಾ ಸರಕುಗಳ ಕ್ರಯದಲ್ಲಿ ಒಂದಂಶವನ್ನು ತೆತ್ತು ಈ ಉತ್ಪಾದನೆಯನ್ನು ಸ್ವಂತಕ್ಕೆ ಉಪಯೋಗಿಸಲು ವಿದ್ಯಾರ್ಥಿಗಳಿಗೆ ಬಿಡಬೇಕು—ಎಂದು ಸಮಿತಿ ಹೇಳಿದೆಯಾಗಿ ಸುದ್ದಿ.

ಆದಷ್ಟು ಹೆಚ್ಚು ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಬರಬೇಕೆಂದು ಸಮಿತಿಯು ಹಲವಾರು ಸೂಚನೆಗಳನ್ನು ಮಾಡಿದೆಯೆಂದೂ ಗೊತ್ತಾಗಿರುತ್ತದೆ. ಪ್ರಾಥಮಿಕ ಶಿಕ್ಷಣಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ನೀಡಬೇಕೆನ್ನುತ್ತಾ ಅದು ಬ್ರಿಟನಿನ ಉದಾಹರಣೆಯನ್ನು ನೀಡಿದೆಯಂತೆ—ಆ ದೇಶದಲ್ಲಿ ವರ್ಷಕ್ಕೆ ೪ ಕೋಟಿ ಪೌಂಡುಗಳಷ್ಟು ಹಣ ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚವಾಗುತ್ತದೆ; ಇದರಲ್ಲಿ ೧೦ ಲಕ್ಷ ಪೌಂಡುಗಳಷ್ಟು ಕಟ್ಟಡಗಳಿಗಾಗಿ ಪ್ರತಿವಾರ ನೀಡಲ್ಪಡುತ್ತವೆ.

ನಮ್ಮ ದೇಶದಲ್ಲಿ ೩೦೦ರಿಂದ ೪೦೦ ಜನರ ವರೆಗಿರುವ ಪ್ರತಿಯೊಂದೂ ಹಳ್ಳಿಗೆ ಒಂದರಂತೆ ಇದು ಸಾಧ್ಯವಿಲ್ಲದಿದ್ದರೆ ಎಂಥ ಪ್ರಸಂಗದಲ್ಲಿಯೇ ಆಗಲಿ, ಮಕ್ಕಳಿಗೆ ಹೋಗಿಬರಲು ಹೆಚ್ಚು ದೂರವಾಗದಂತೆ —ಶಾಲೆಗಳನ್ನು ಸ್ಥಾಪಿಸಬೇಕು. ಇವುಗಳ ಕಟ್ಟಡ ರಚನೆಗೆ ರಾಷ್ಟ್ರೀಯ ವಿಸ್ತರಣಾ ಸೇವೆ ಇತ್ಯಾದಿ ಅಭಿವೃದ್ಧಿ ಪ್ರಯತ್ನಗಳ ಸಹಾಯವನ್ನು ಪಡೆಯಬಹುದು. ತೋಟ ತಯಾರಿಸಲೂ ಆಟದ ಮೈದಾನಿಗಾಗಿಯೂ ಭೂದಾನ ಚಳವಳಿಯನ್ನು ನಡೆಸಬಹುದು. ಸಾಧ್ಯವಾದಷ್ಟು ಮಟ್ಟಿಗೆ ಮಧ್ಯಾಹ್ನದ ಊಟವನ್ನು ಮಕ್ಕಳಿಗೆ ಧರ್ಮಾರ್ಥವಾಗಿ ಶಾಲೆಯ ವತಿಯಿಂದಲ್ಲಿಯೇ ಕೊಡಬೇಕು. ಊರಿನವರು ಅರ್ಧ ಖರ್ಚನ್ನು ಹೊರುವ ತಳಹದಿಯ ಮೇಲೆ ಈ ಕಾರ್ಯಕ್ರಮವನ್ನು ಪ್ರಾರಂಭಿಸಬಹುದು. ಇವಲ್ಲದೆ ಸ್ಲೇಟು, ಕಡ್ಡಿ ಮತ್ತು ಪುಸ್ತಕಗಳನ್ನು ಧರ್ಮಾರ್ಥವಾಗಿ ಕೊಡಬೇಕು—ಎಂದು ಸಮಿತಿ ಸಲಹೆ ಮಾಡಿರುತ್ತದೆ.

ರಾಜ್ಯದಲ್ಲಿ ಈಗ ೫ರಿಂದ ೧೪ವರ್ಷ ಪ್ರಾಯದ ೬೩ ಲಕ್ಷ ಮಕ್ಕಳಿದ್ದಾರೆ; ಇದರಲ್ಲಿ ಶಾಲೆಯಲ್ಲಿ ಶಿಕ್ಷಣಪಡೆಯುತ್ತಿರುವವರು ೩೨ಲಕ್ಷ ಮಾತ್ರ. ಘಟನೆಯಂತೆ ಸರಕಾರದ ಮೇಲಿರುವ ಈ ಸಂಬಂಧದ ಹೊಣೆಗಾರಿಕೆಯನ್ನು ಆದಷ್ಟು ಶೀಘ್ರವಾಗಿ ನಿರ್ವಹಿಸಬೇಕು. ಮಕ್ಕಳು ಸ್ವೇಚ್ಛೆಯಿಂದ ಶಾಲೆಗೆ ಬರುವಂತೆ ಉತ್ತಮ ವಾತಾವರಣವನ್ನು ನಿರ್ಮಿಸಬೇಕು. ಸಾಮಾನ್ಯವಾಗಿ ಹೆತ್ತವರ ಉದಾಸೀನತೆಯೇ ಮಕ್ಕಳು ಶಾಲೆಗೆ ಬರದಿರುವುದರ ಕಾರಣ. ಸುದೈವದಿಂದ ಈಗ ಪ್ರತಿಯೊಂದು ಗ್ರಾಮದ ಮೂಲೆಯಿಂದಲೂ ಶಾಲೆಗಳಿಗೆ ಬೇಡಿಕೆ ಬರುತ್ತಿದೆ. ಇದರ ಸದುಪಯೋಗ ಪಡೆಯದೆ ಬಿಡಬಾರದು. ಶಾಲೆಗೆ ಬಾರದ ಮಕ್ಕಳ ಹೆತ್ತವರೊಡನೆ ಅಧ್ಯಾಪಕರು ಸಂಪರ್ಕವನ್ನು ಬೆಳೆಸಿ, ಪರಿಸ್ಥಿತಿಯನ್ನು ಸುಧಾರಿಸಲು ನೋಡಬೇಕು—ಎಂಬುದಾಗಿಯೂ ಸಮಿತಿ ಹೇಳಿರುತ್ತದೆ.

ಶಾಲೆಗಳಲ್ಲಿ ಧ
ಕೊಡುವುದಕ್ಕೆ
ಕೂ ಲ ವಿ ಲ್ಲ ,
ಶಿಕ್ಷಣ ಕೊಡುವು
ಧವಿಲ್ಲ ಎಂದು ಸ
ವರದಿಯಾಗಿದೆ.
ಡಿಮೆ ವಯಸ್ಸಿನ
ಸೋರಿ ಪದ್ಧತಿಯ
ಪ್ಪ್ಯಗಳಿಗನುಸಾ
ಅನುಸರಿಸುವ ಶಾ
ದೆಂದೂ ಅದು ಸ
ಪಾಧ್ಯಾಯ ಶಾ
ವುದಕ್ಕೆ ಉತ್ತೇಜ
ಸೌಕರ್ಯವನ್ನೂ
ರ್ಗಸ್ಥರಲ್ಲಿ ಮಾ
ಪರಿಷ್ಕರಿಸಲು ಸಿ
ಕು; ಎಂಟನೇ
ಸರಕಾರಿ ಪರೀ
ಯೇ ಮುಂದರಿ
ತರಗತಿಯಿಂದ
ಇಂಗ್ಲೀಷಿನ ಶಿಕ್ಷ
ನೀಡಬೇಕು —
ಯಾಗಿ ಗೊತ್ತಾ

ಶಾಲೆಗಳ ಅ
ಬ್ಬ ನೇಮಿಸಿಕೊ
ದು; ಪ್ರತಿಯೊಂ
ಮಂಡಳವನ್ನು ನೆ
ಒಬ್ಬಿಬ್ಬರು ಸ
ಕು ಉಪಾಧ್ಯಾ
ಶಾಲೆಗಳಿಗೂ ಈ
ಸಬೇಕು—ಎಂದ
ಯಂತೆ. ಇನ್ನು
ಡ್ಡ ಮತ್ತು ಗ
ಗೆ ಶಾಲೆಗಳನ್ನು
ತನ್ನ ಅಧಿಕಾರ
ಶಾಲೆಗಳನ್ನು ನ
ರ ಹೊರಗೆ ಪ್ರಾ
ಅಧಿಕಾರ ಕೊಡ
ಜಿಲ್ಲಾ ಬೋಡು
ಜಾಯತುಗಳ ಪ್ರ
ರದ ಪ್ರತಿನಿಧಿಗಳ
ದ ಅಧಿಕಾರಾವಧಿ
೨೦೦ ಶಾಲೆಗಳ
ಒಂದು ಮಂಡಳಕ್ಕೆ
ಕ್ಕಿಂತ ಹೆಚ್ಚಲ್ಲ
ಶಿಕ್ಷಣ ಸಂಬಂಧ
ದಾಯ ಈ ಪ್ರಾ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಪ್ರಧಾನ ಕಾರ್ಯಾಲಯ: ಉಡುಪಿ.] [ಸ್ಥಾಪನೆ: 1925.
ಸುಖಸಂತೋಷವನ್ನು ಬರಮಾಡಿಕೊಳ್ಳುವುದು ಹೇಗೆ?
ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಆಕಸ್ಮಿಕ ಘಟನೆಯಲ್ಲ. ಅದನ್ನು ನಡುದಾರಿಯ ವರೆಗೆ ಹೋಗಿ, ಸಂಧಿಸಿ, ಮನೆಗೆ ಸ್ವಾಗತಿಸಬೇಕಾಗುತ್ತದೆ. ಕೆಲವು ವರ್ಷಗಳಷ್ಟು ಮುಂದಾಗಿಯೇ ತಕ್ಕ ಯೋಜನೆಯನ್ನು ಮಾಡಿರಬೇಕೆಂದು ಇದರ ಅರ್ಥ. ನಿಮ್ಮ ಗುರಿಯನ್ನು ಗೊತ್ತು ಪಡಿಸುವುದು ಮತ್ತು ಅದನ್ನು ಮುಟ್ಟಲು ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ಮೊದಲನೆಯ ಕೆಲಸ. ಈ ಬಗೆಯ ಕಾರ್ಯಕ್ರಮಗಳಲ್ಲಿ ನಿಮಗೆಷ್ಟು ಸಾಧ್ಯವೋ ಅಷ್ಟು ಹಣವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ಮುಖ್ಯವಾದೊಂದು ವಿಷಯ. ನಾವು ಇದಕ್ಕೆ ಪ್ರತಿ ಅರ್ಧ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಳಿತಾಯವು ಬೇಗನೆ ಬೆಳವಣಿಗೆಯನ್ನು ಹೊಂದುವಂತೆ ನೆರವಾಗುತ್ತೇವೆ.
ಚಲಾವಣೆ ಬಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ

ರಾಷ್ಟ್ರಾಧ್ಯಕ್ಷ ಡಾ। ರಾಜೇಂದ್ರ ಪ್ರಸಾದರು ಈಚೆಗೆ ಪ್ರಧಾನಿ ನೆಹರುಗಳು ಲೋಕ ಶಾಂತಿಯ ಸಾಧನೆಗಾಗಿಯೂ ಭಾರತದ ಸಾರ್ವಾಂಗಿಕ ಏಳಿಗೆಗಾಗಿಯೂ ಅವಿಶ್ರಾಂತವಾಗಿ ಪರಿಶ್ರಮಿಸಿದುದಕ್ಕೆ ಮೆಚ್ಚಿಕೆಯನ್ನು ಸೂಚಿಸಿ, ಅತ್ಯುಚ್ಚ ಪ್ರಶಸ್ತಿಯಾದ "ಭಾರತ ರತ್ನ" ಪದಕವನ್ನು ದಯಪಾಲಿಸಿದರು. ಜವಾಹರನೆಂಬ ಹೆಸರಿನಿಂದಲೇ ರತ್ನದ ನೆನಪನ್ನು ತಂದು ಕೊಡುವ ಪ್ರಧಾನಿಗಳ ಮುಖಕಮಲವು ಈ ಗೌರವಶ್ರೀಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಅಭಿಮಾನದಿಂದ ಅರಳಿಕೊಂಡಿರುವುದನ್ನು ಚಿತ್ರ ತೋರಿಸುತ್ತದೆ.

ರಾಜಸ್ಥಾನದ ಸರ್ದಾರ್ ಶಹರಿನಲ್ಲಿ ಈಚೆಗೆ ಗ್ರಾಮ ಜ್ಯೋತಿ ಕೇಂದ್ರ ಎಂಬ ಸಂಸ್ಥೆಯನ್ನು ರಾಷ್ಟ್ರಾಧ್ಯಕ್ಷರು ಉದ್ಘಾಟಿಸಿದರು. ಈ ಕೇಂದ್ರದಲ್ಲಿ ಕುಶಲ ಕಲೆಗಳಲ್ಲಿಯೂ ಹಸ್ತನೈಪುಣ್ಯದ ವೃತ್ತಿಗಳಲ್ಲಿಯೂ ಪಾರಂಗತರಾಗುವಂತೆ ಜೆನ್ನಾದ ಶಿಕ್ಷಣ ನೀಡಲ್ಪಡುತ್ತದೆ. ಭಾರತದಲ್ಲಿ ಮೂಲೋದ್ಯೋಗಗಳ ಬೆಳವಣಿಗೆಯು ಎಷ್ಟು ಆವಶ್ಯಕವಾಗಿದೆಯೋ ಸಾರ್ವಪ್ರದಾಯಿಕವಾದ ಮತ್ತು ಸಾಂಸ್ಕೃತಿಕ ಮಹತ್ವದಿಂದ ಕೂಡಿದ ಪ್ರಾಚೀನ ವೃತ್ತಿಗಳಿಗೆ ಪ್ರೋತ್ಸಾಹವನ್ನು ಕೊಡುವುದೂ ಆಗತ್ಯವಾಗಿದೆ. ರಾಷ್ಟ್ರಾಧ್ಯಕ್ಷರು ಹಳ್ಳಿಗಳಲ್ಲಿ ಪ್ರಕಾಶವನ್ನು ಚೆಲ್ಲುವ ಈ ಮಾದರಿ ಕೇಂದ್ರದ ಪರಿಶೀಲನೆ ನಡೆಸಿ ತೃಪ್ತಿ ಸೂಚಿಸುತ್ತಿರುವುದನ್ನು ಚಿತ್ರದಲ್ಲಿ ಕಾಣುತ್ತೇವೆ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಸಾವಿಗೆ ಮುಂಚೆ ಸಮಾಧಿ—

ಬರೆದವರು: ಧನ್ವಂತ. ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ೨. ಬೆಲೆ: ರೂ. ೨—೦—೦.

ಇಂಗ್ಲಿಷಿನಲ್ಲಿ ಎಡ್ಗರ್ ಎಲೆನ್ ಪೋನ ಕತೆಗಳು ರೋಮಾಂಚಕ ಸಾಹಿತ್ಯಕ್ಕೊಂದು ಮಾದರಿಯಾಗಿವೆ. ಕಳೆದ ಶತವಾನದಲ್ಲಿ ಆಗಿಹೋದ ಈ ಪಾಶ್ಚಾತ್ಯ ಸಾಹಿತಿಯ ಹದಿನೈದು ಕತೆಗಳನ್ನು ಶ್ರೀ ಧನ್ವಂತರು ಇಲ್ಲಿ ಕನ್ನಡಿಸಿದ್ದಾರೆ. ಕತೆಗಳಲ್ಲಿ ಹೆಚ್ಚಾಗಿ ಅದ್ಭುತವು ತ್ತು ವಿಸ್ಮಯಕರ ನೃತ್ತಾಂತಗಳೇ ಕಂಡುಬರುತ್ತವೆ. ಒಗಟೊಂದನ್ನು ಚುರುಕಾಗಿ ಬಿಡಿಸಿದ ಮಾದರಿಯಲ್ಲಿ ಹೆಚ್ಚಿನ ಕತೆಗಳಿವೆ ಎನ್ನಬಹುದು. ಲಾಲಿತ್ಯ ಮತ್ತು ಸರಸತೆಗೆ ಈ ಕತೆಗಳಲ್ಲಿ ಅವಕಾಶ ದೊರೆತಿಲ್ಲ—ಆದರೆ ಇವುಗಳು ಮನುಷ್ಯ ಕೃತಪ್ರಯೋಗಗಳ ನಾನಾಮುಖಗಳನ್ನು ರಮ್ಯವಾಗಿ ಚಿತ್ರಿಸುತ್ತವೆ ಎಂಬುದೇನೂ ಸುಳ್ಳಲ್ಲ. ಹಾಗೆ ನಿರೂಪಿಸುವಾಗ ಗೂಢಸತ್ಯವೊಂದನ್ನು ನಿಧಾನವಾಗಿ ಮಂದಟ್ಟು ಪಡಿಸುವುದಕ್ಕೆ ಲೇಖಕರು ಸಮರ್ಥರಾಗುತ್ತಾರೆ ಎಂಬುದೂ ಹೊಳೆಯದಿರದು. ಕನ್ನಡದ ಸಣ್ಣಕತೆಗಳ ಕ್ಷೇತ್ರದಲ್ಲಿ ಇಷ್ಟರ ವರೆಗೆ ಸಾಕಷ್ಟು ಬೆಚ್ಚಾಗಿ ಅರಳಿರದ ಹುಪ್ಪಗಳ ಬಗೆ

ಲಘು ಪರಿಚಯ

ಮುಡಿಕೇರಿಯಿಂದ ಶ್ರೀ ಬಿ. ಎಸ್. ಗೋಪಾಲಕೃಷ್ಣ ಇವರ ಸಂಪಾದಕತ್ವದಲ್ಲಿ ಕನ್ನಡ "ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಗತಿಯನ್ನೆ ಮುಖ್ಯ ಗುರಿಯಾಗಿಟ್ಟುಕೊಂಡ" ಕೊಡಗಿನ ಪ್ರಥಮ ಮಾಸಪತ್ರಿಕೆ "ನಂದಾದೀಪ" ಇದೇ ಅಕ್ಟೋಬರಿನಲ್ಲಿ ಬೆಳಗಿದೆ. ಪತ್ರಿಕೆಗೆ ಸ್ವಾಗತಕೋರಿ, ಒಳ್ಳೆಯ ಮಟ್ಟವನ್ನು ಉದ್ಯಮ ಶೀಲತೆಯಲ್ಲಿ ಪ್ರದರ್ಶಿಸಿ, ಅದು ಬೆಳೆದು ಬಾಳಲೆಂದು ಹಾರ್ಸಿಸುತ್ತೇವೆ.

ಹೃಷಿ ಕೇಶದ ದಿವ್ಯಧಾಮದಲ್ಲಿ ಸ್ವಾಮಿ ಶಿವಾನಂದರ ಆಶ್ರಯದಿಂದ ಪ್ರಕಟವಾಗುವ "ದಿವ್ಯ ಜೀವನ" "THE DIVINE LIFE" ಎಂಬ ಮಾಸಪತ್ರಿಕೆಯ ಸಪ್ತಂಬರ ತಿಂಗಳ ಸಂಚಿಕೆಯು ಸ್ವಾಮೀಜಿಯ ೬೯ನೇ ಜನ್ಮದಿನ ಸಂಚಿಕೆಯಾಗಿ ಪ್ರಕಟವಾಗಿದೆ. ಇದರಲ್ಲಿ ಶಿವಾನಂದರ ಆಧ್ಯಾತ್ಮಿಕ ಪ್ರತಿಭೆ ಅವರ ಜೀವನಾದರ್ಶ ಇತ್ಯಾದಿಗಳ ಮೇಲೆ ಬೆಳಕು ಬೀರುವ ಅವರ ಭಕ್ತವೃಂದದ ಹಲವಾರು ಲೇಖನಗಳನ್ನು ಕಾಣುತ್ತೇವೆ.

ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ ಅರವಟಿಗೆ ಇವರು ೧—೪—೧೯೫೫ ರಿಂದ ೩೧—೩—೧೯೫೬ ವರೆಗಿನ ತಮ್ಮ ಚಟುವಟಿಕೆಯ ಅರನೇ ವರ್ಷಕ್ಕೆ ಸಂಬಂಧಿಸಿ ಪ್ರಕಟಿಸಿರುವ ವರದಿಯು ಸರ್ವೋದಯದ ಆದರ್ಶ ಸಾಧನೆಯಲ್ಲಿ ಗಣ್ಯ ಪ್ರಗತಿಯನ್ನು ಕಾರ್ಯಕರ್ತರು ಸಾಧಿಸಿರುವರೆಂದು ತೋರಿಸಿ ಕೊಡುತ್ತದೆ. ಗ್ರಾಮ ಜೀವನವನ್ನು ಸುಖಕರವಾಗಿ ಮಾಡುವ ಹಲವಾರು ವಿಧಾಯಕ ರಂಗಗಳಲ್ಲಿ ನಿನ್ನೆಯಿಂದ ದುಡಿದಿರುವುದರ ವಿವರಗಳು ತುಂಬ ಸಮಾಧಾನಕರವಾಗಿವೆ. ಸರ್ವೋದಯ ಸಮಿತಿಗೆ ಇತೋಽಭ್ಯುದಯವಾದ ಶ್ರೇಯಸ್ಸನ್ನು ಕೋರುತ್ತೇವೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ನುನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್**, ಎಲ್. ಐ. ಎಮ್.

"Ably written—Quite up-to-date valuable service"

ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್ **ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ**, ಎಮ್. ಬಿ. ಸಿ. ಎಸ್. ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳಿಗೆ, ಹೆಂಗಸರಿಗೆ, ಗರ್ಭಿಣಿಯರಿಗೆ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹಂತಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ನಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿ ಬಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರುಣ ನಚಿತ್ರ ಎಂದೆಂದೂ ಜನಮನದಿಂದ ಮಾಯಾ ಹೋಗದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ಮುರಲಿ

ಪೋಲ್ತರೆಗೆತಿಯ ಕವಿತೆಗಳ ಸಂಗ್ರಹ.

ಸಪುಂಟೆ ೩೫
VOL. 35
ಉಡುಪಿ, 20—10—1955

ಪ್ರಾಥಮಿಕ ವಿದ್ಯಾಭ್ಯಾಸ

ಮದ್ರಾಸು ಸರಕಾರದವರು ಕಳೆದ ವರ್ಷದ ನವಂಬರ ತಿಂಗಳಲ್ಲಿ ಡಾ. ಅಲಗಪ್ಪ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಪದ್ಧತಿಯನ್ನು ಪರಿಶೀಲಿಸುವುದಕ್ಕೋಸ್ಕರ ಸಮಿತಿಯೊಂದನ್ನು ನೇಮಿಸಿದ್ದರೆಂದು ಓದುಗರಿಗೆ ನೆನಪಿರಬಹುದು. ಸಮಿತಿಯವರು ಇದೇ ಗಾಂಧಿಜಯಂತಿಯಂದು ಸರಕಾರಕ್ಕೆ ತಮ್ಮ ವರದಿಯನ್ನು ಒಪ್ಪಿಸಿರುವರೆಂದು ತಿಳಿದುಬರುತ್ತದೆ.

ಸಾರ್ವಜನಿಕರ ಅವಗಾಹನೆಯ ಬಗ್ಗೆ ಈ ವರದಿಯನ್ನು ಇನ್ನು ಕೆಲವೇ ವಾರಗಳಲ್ಲಿ ಪ್ರಕಟಿಸಲು ಸರಕಾರ ಬಯಸಿದೆ. ಮುಂದಿನ ತಿಂಗಳಲ್ಲಿ ಸೇರಲಿರುವ ಶಾಸನಾಂಗದ ಅಧಿವೇಶನ ಕಾಲದಲ್ಲಿ ಸದಸ್ಯರಿಗೆ ಸಮಿತಿಯ ಸಿಫಾರಸುಗಳು ತಿಳಿದಿರಬೇಕೆಂದೂ ತಮ್ಮ ಅಭಿಪ್ರಾಯಗಳನ್ನು ಸರಕಾರಕ್ಕೆ ವಿದಿತಪಡಿಸಲು ಅವರು ಶಕ್ತರಾಗಬೇಕೆಂದೂ ಸರಕಾರ ಆಶಿಸುತ್ತಿರುವುದರಿಂದ ಜನತೆಯ ಪ್ರತಿನಿಧಿಗಳ ಅಧ್ಯಯನಕ್ಕೆ ಸಾಕಷ್ಟು ಅವಕಾಶ ಸಿಗುವಂತೆ ಬೇಗನೆ ವರದಿಯು ಪ್ರಕಟವಾಗುವುದರಲ್ಲಿ ಸಂದೇಹವಿಲ್ಲವೆಂದು ಭಾವಿಸಬಹುದು.

ಇದರ ನಡುವೆ ವಿದಿತ ವರ್ಗಗಳ ಮೂಲಕ ಕೆಲವು ಸಂಗತಿಗಳು ವರದಿಯ ಕುರಿತಾಗಿ ಬಹಿರಂಗವಾಗಿದೆ. ವರದಿಯನ್ನು ಸರಕಾರವು ತೀವ್ರವಾಗಿ ಪರ್ಯಾಲೋಚಿಸುತ್ತಿರುವುದೆಂಬುದನ್ನು ಯಾರೂ ಹೇಳುವ ಅಗತ್ಯವಿಲ್ಲ. ಪರ್ಯಾಲೋಚನೆಯು ಬಳಿಕ ಬೇಗನೆ ನಿರ್ಣಯಗಳನ್ನು ಕೈಗೊಂಡು ಮುಂದಿನ ಶಾಲಾ ವರ್ಷದಲ್ಲಿ—ಅಂದರೆ ೧೯೫೬-೫೭ನೇ ಸಾಲಿಗೆ ನಿರ್ಣಯಗಳನ್ನು ಕಾರ್ಯಗತ ಗೊಳಿಸಲು ಸರಕಾರ ಇಚ್ಛಿಸುತ್ತಿರುವಂತೆ ಕಾಣುತ್ತದೆ.

ಸಮಿತಿಯವರು ಕ್ರಾಂತಿಕಾರಿಯಾದ ಯಾವ ಸೂಚನೆಗಳನ್ನೂ ಮಾಡಿಲ್ಲವೆಂದು ಹೇಳಲಾಗುತ್ತದೆ ಈಗಿನ ಪರಿಸ್ಥಿತಿಯಲ್ಲಿ ತೀವ್ರ ಬದಲಾವಣೆಗಳನ್ನು ಈ ಸಮಿತಿ ಸೂಚಿಸಿಲ್ಲ: ಪ್ರಗತಿಯ ಹೆಜ್ಜೆಯು ಮಾತ್ರ ತೀವ್ರವಾಗಬೇಕೆಂದು ಹೇಳಿದೆ—ಎಂದು ವಿದಿತ ವರ್ಗಗಳು ತಿಳಿಸಿರುತ್ತವೆ.

ಮೂಲ ಶಿಕ್ಷಣ ಕ್ರಮವನ್ನು ಮುಂದೊತ್ತಿಕೊಂಡು ಹೋಗುವ ವಿಷಯದಲ್ಲಿ ಈಗಿನ ವಿಧಾನವನ್ನು ಜಾಗರೂಕತೆಯಿಂದ ಮತ್ತು ಪ್ರಗತಿಪರವಾಗಿ ಅನುಸರಿಸಬೇಕೆಂದು ಸಮಿತಿ ಅಭಿಪ್ರಾಯ ಪಟ್ಟಿರುವುದೆಂದು ಕೇಳುತ್ತೇವೆ. ಪ್ರಾಥಮಿಕ ಶಾಲೆಗಳ ಪ್ರಾಥಮಿಕ ತರಗತಿಗಳಿಗೆ ಇದನ್ನು ವಿಸ್ತರಿಸಬೇಕು. ಹೆಚ್ಚಿನ ಶಾಲೆಗಳಲ್ಲಿ ತೋಟಗಾರಿಕೆಯನ್ನು ವೃತ್ತಿಯಾಗಿ ಪರಿಗ್ರಹಿಸಬಹುದು; ಸಾಧ್ಯವಿದ್ದಲ್ಲೆಲ್ಲ ಕುಂಬಾರಿಕೆ ಚಾಪೆಹೆಣೆಯುವುದು ಇತ್ಯಾದಿಗಳನ್ನು ಆವಲಂಬಿಸಬಹುದು. ಕಚ್ಚಾ ಸರಕುಗಳ ಕ್ರಯದಲ್ಲಿ ಒಂದಂಶವನ್ನು ತೆತ್ತು ಈ ಉತ್ಪಾದನೆಯನ್ನು ಸ್ವಂತಕ್ಕೆ ಉಪಯೋಗಿಸಲು ವಿದ್ಯಾರ್ಥಿಗಳಿಗೆ ಬಿಡಬೇಕು—ಎಂದು ಸಮಿತಿ ಹೇಳಿದೆಯೆಂದು ಸುದ್ದಿ.

ಆದಷ್ಟು ಹೆಚ್ಚು ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಬರಬೇಕೆಂದು ಸಮಿತಿಯು ಹಲವಾರು ಸೂಚನೆಗಳನ್ನು ಮಾಡಿದೆಯೆಂದೂ ಗೊತ್ತಾಗಿರುತ್ತದೆ. ಪ್ರಾಥಮಿಕ ಶಿಕ್ಷಣಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ನೀಡಬೇಕೆನ್ನುತ್ತಾ ಅದು ಬ್ರಿಟನಿನ ಉದಾಹರಣೆಯನ್ನು ನೀಡಿದೆಯಂತೆ—ಆ ದೇಶದಲ್ಲಿ ವರ್ಷಕ್ಕೆ ೪ ಕೋಟಿ ಪೌಂಡುಗಳಷ್ಟು ಹಣ ಪ್ರಾಥಮಿಕ ಶಿಕ್ಷಣಕ್ಕಾಗಿ ಖೆಚ್ಚವಾಗುತ್ತದೆ; ಇದರಲ್ಲಿ ೧೧೦ ಲಕ್ಷ ಪೌಂಡುಗಳಷ್ಟು ಕಟ್ಟಡಗಳಿಗಾಗಿ ಪ್ರತಿವಾರ ನೀಡಲ್ಪಡುತ್ತವೆ.

ನಮ್ಮ ದೇಶದಲ್ಲಿ ೩೦೦ರಿಂದ ೫೦೦ ಜನರಿಗೆ ವರಿಗಿರುವ ಪ್ರತಿಯೊಂದೂ ಹಳ್ಳಿಗೆ ಒಂದರಂತೆ ಇದು ಸಾಧ್ಯವಿಲ್ಲದಿದ್ದರೆ ಎಂಥ ಪ್ರಸಂಗದಲ್ಲಿಯೇ ಆಗಲಿ, ಮಕ್ಕಳಿಗೆ ಹೋಗಿಬರಲು ಹೆಚ್ಚು ದೂರವಾಗದಂತೆ—ಶಾಲೆಗಳನ್ನು ಸ್ಥಾಪಿಸಬೇಕು. ಇವುಗಳ ಕಟ್ಟಡ ರಚನೆಗೆ ರಾಷ್ಟ್ರೀಯ ವಿಸ್ತರಣಾ ಸೇವೆ ಇತ್ಯಾದಿ ಅಭಿವೃದ್ಧಿ ಪ್ರಯತ್ನಗಳ ಸಹಾಯವನ್ನು ಪಡೆಯಬಹುದು. ತೋಟ ತಯಾರಿಸಲೂ ಆಟದ ಮೈದಾನಿಗಾಗಿಯೂ ಭೂದಾನ ಜಲವಳವನ್ನು ನಡೆಸಬಹುದು. ಸಾಧ್ಯವಾದಷ್ಟು ಮಟ್ಟಿಗೆ ಮಧ್ಯಾಹ್ನದ ಊಟವನ್ನು ಮಕ್ಕಳಿಗೆ ಧರ್ಮಾರ್ಥವಾಗಿ ಶಾಲೆಯ ವತಿಯಿಂದಲ್ಲಿಯೇ ಕೊಡಬೇಕು. ಊರಿನವರು ಅರ್ಧ ಖರ್ಚನ್ನು ಹೊರುವ ತಳಹದಿಯ ಮೇಲೆ ಈ ಕಾರ್ಯಕ್ರಮವನ್ನು ಪ್ರಾರಂಭಿಸಬಹುದು. ಇದಲ್ಲದೆ ಸ್ಲೇಟು, ಕಡ್ಡಿ ಮತ್ತು ಪುಸ್ತಕಗಳನ್ನು ಧರ್ಮಾರ್ಥವಾಗಿ ಕೊಡಬೇಕು—ಎಂದು ಸಮಿತಿ ಸಲಹೆ ಮಾಡಿರುತ್ತದೆ.

ರಾಜ್ಯದಲ್ಲಿ ಈಗ ೫೫ ಲಕ್ಷ ಮಕ್ಕಳಿದ್ದಾರೆ; ಇದರಲ್ಲಿ ಶಾಲೆಯಲ್ಲಿ ಶಿಕ್ಷಣಪಡೆಯುತ್ತಿರುವವರು ೩೨ ಲಕ್ಷ ಮಾತ್ರ. ಘಟನೆಯಂತೆ ಸರಕಾರದ ಮೇಲಿರುವ ಈ ಸಂಬಂಧದ ಹೊಣೆಗಾರಿಕೆಯನ್ನು ಅದಷ್ಟು ಶೀಘ್ರವಾಗಿ ನಿರ್ವಹಿಸಬೇಕು. ಮಕ್ಕಳು ಸ್ವೇಚ್ಛೆಯಿಂದ ಶಾಲೆಗೆ ಬರುವಂತೆ ಉತ್ತಮ ವಾತಾವರಣವನ್ನು ನಿರ್ಮಿಸಬೇಕು. ಸಾಮಾನ್ಯವಾಗಿ ಹೆತ್ತವರ ಉದಾಸೀನತೆಯೇ ಮಕ್ಕಳು ಶಾಲೆಗೆ ಬರದಿರುವುದರ ಕಾರಣ. ಸುದೈವದಿಂದ ಈಗ ಪ್ರತಿಯೊಂದು ಗ್ರಾಮದ ಮೂಲೆಯಿಂದಲೂ ಶಾಲೆಗಳಿಗೆ ಬೇಡಿಕೆ ಬರುತ್ತಿದೆ. ಇದರ ಪದುಪಯೋಗ ಪಡೆಯದೆ ಬಿಡಬಾರದು. ಶಾಲೆಗೆ ಬಾರದ ಮಕ್ಕಳ ಹೆತ್ತವರೊಡನೆ ಅಧ್ಯಾಪಕರು ಸಂಪರ್ಕವನ್ನು ಬೆಳೆಸಿ, ಪರಿಸ್ಥಿತಿಯನ್ನು ಸುಧಾರಿಸಲು ನೋಡಬೇಕು—ಎಂಬುದಾಗಿಯೂ ಸಮಿತಿ ಹೇಳಿರುತ್ತದೆ.

ಶಾಲೆಗಳಲ್ಲಿ ಧ
ಕೊಡುವುದಕ್ಕೆ
ಕೂಲಿವಿಲ್ಲ,
ಶಿಕ್ಷಣ ಕೊಡುವು
ಧವಿಲ್ಲ ಎಂದು ಸ
ವರದಿಯಾಗಿದೆ.
ಡಿಮೆ ವಯಸ್ಸಿನ
ಸೋರಿ ಪದ್ಧತಿಯ
ಷ್ಟ್ಯಗಳಿಗೆನುಸಾ
ಅನುಸರಿಸುವ ಶಾ
ದೆಂದೂ ಅದು ಸ
ಪಾಧ್ಯಾಯ ಶಾ
ವುದಕ್ಕೆ ಉತ್ತೇಜ
ಸೌಕರ್ಯವನ್ನೂ
ರ್ಗಸ್ಥರಲ್ಲಿ ಮಾ
ಪರಿಷ್ಕರಿಸಲು ಸಿ
ಕು; ಎಂಟನೇ
ಸರಕಾರಿ ಪರೀ
ಯೇ ಮುಂದರಿಂ
ತರಗತಿಯಿಂದ
ಇಂಗ್ಲೀಷಿನ ಶಿಕ್ಷಣ
ನೀಡಬೇಕು —
ಯಾಗಿ ಗೊತ್ತಾ

ಶಾಲೆಗಳ ಆಡ
ಬ್ಬ ನೇವಹಿಸಿಕೊ
ದು; ಪ್ರತಿಯೊಂ
ಮಂಡಳವನ್ನು ನ
ಒಬ್ಬಿಬ್ಬರು ಸದ
ಕು. ಉಪಾಧ್ಯಾಯ
ಶಾಲೆಗಳಿಗೂ ಈ
ಸಬೇಕು—ಎಂದ
ಯಂತೆ. ಇನ್ನು
ರ್ಡು ಮತ್ತು ಗ್ರಾ
ಗೆ ಶಾಲೆಗಳನ್ನು
ತನ್ನ ಅಧಿಕಾರ
ಶಾಲೆಗಳನ್ನು ನಡೆ
ರ ಹೊರಗೆ ಪ್ರಾ
ಅಧಿಕಾರ ಕೊಡ
ಜಿಲ್ಲಾ ಬೋರ್ಡು
ಚಾಯತುಗಳ ಪ್ರ
ರದ ಪ್ರತಿನಿಧಿಗಳ
ದ ಅಧಿಕಾರಾವಧಿ
೨೦೦ ಶಾಲೆಗಳ
ಒಂದು ಮಂಡಳಕ್ಕೆ
ಪಕ್ಕಿಂತ ಹೆಚ್ಚಲ್ಲ
ಶಿಕ್ಷಣ ಸಂಬಂಧ
ದಾಯ ಈ ಪ್ರಾ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಪ್ರಧಾನ ಕಾರ್ಯಾಲಯ: ಉಡುಪಿ.] [ಸ್ಥಾಪನೆ: 1925.
ಸುಖಸಂತೋಷವನ್ನು ಬರಮಾಡಿಕೊಳ್ಳುವುದು ಹೇಗೆ?
ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಆಕಸ್ಮಿಕ ಘಟನೆಯಲ್ಲ. ಅದನ್ನು ನಡುದಾರಿಯ ವರೆಗೆ ಹೋಗಿ, ಸಂಧಿಸಿ, ಮನೆಗೆ ಸ್ವಾಗತಿಸಬೇಕಾಗುತ್ತದೆ. ಕೆಲವು ವರ್ಷಗಳಷ್ಟು ಮುಂದಾಗಿಯೇ ತಕ್ಕ ಯೋಜನೆಯನ್ನು ಮಾಡಿರಬೇಕೆಂದು ಇದರ ಅರ್ಥ. ನಿಮ್ಮ ಗುರಿಯನ್ನು ಗೊತ್ತು ಪಡಿಸುವುದು ಮತ್ತು ಅದನ್ನು ಮುಟ್ಟಲು ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ಮೊದಲನೆಯ ಕೆಲಸ. ಈ ಬಗೆಯ ಕಾರ್ಯಕ್ರಮಗಳಲ್ಲಿ ನಿಮಗೆಷ್ಟು ಸಾಧ್ಯವೋ ಅಷ್ಟು ಜೀವನವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ಮುಖ್ಯವಾದೊಂದು ವಿಷಯ. ನಾವು ಇದಕ್ಕೆ ಪ್ರತಿ ಅರ್ಧ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಳಿತಾಯವು ಬೇಗನೆ ಬೆಳವಣಿಗೆಯನ್ನು ಹೊಂದುವಂತೆ ನೆರವಾಗುತ್ತೇವೆ.
ಚಲಾವಣೆ ಬಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ

ರಾಷ್ಟ್ರಾಧ್ಯಕ್ಷ ಡಾ। ರಾಜೇಂದ್ರ ಪ್ರಸಾದರು ಈಚೆಗೆ ಪ್ರಧಾನಿ ನೆಹರುಗಳು ಲೋಕ ಶಾಂತಿಯ ಸಾಧನೆಗಾಗಿಯೂ ಭಾರತದ ಸಾರ್ವಾಂಗಿಕ ಏಳಿಗೆಗಾಗಿಯೂ ಅವಿಶ್ರಾಂತವಾಗಿ ಪರಿಶ್ರಮಿಸಿದುದಕ್ಕೆ ಮೆಚ್ಚಿಕೆಯನ್ನು ಸೂಚಿಸಿ, ಅತ್ಯುಚ್ಚ ಪ್ರಶಸ್ತಿಯಾದ "ಭಾರತ ರತ್ನ" ಪದಕವನ್ನು ದಯಪಾಲಿಸಿದರು. ಜವಾಹರೆನೆಂಬ ಹೆಸರಿನಂದಲೇ ರತ್ನದ ನೆನಪನ್ನು ತಂದು ಕೊಡುವ ಪ್ರಧಾನಿಗಳ ಮುಖಕಮಲವು ಈ ಗೌರವಶ್ರೀಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಅಭಿಮಾನಾನಂದಿಂದ ಅರಳಿಕೊಂಡಿರುವುದನ್ನು ಚಿತ್ರ ತೋರಿಸುತ್ತಿದೆ.

ರಾಜಸ್ಥಾನದ ಸರ್ಕಾರ ಶಹರಿನಲ್ಲಿ ಈಚೆಗೆ ಗ್ರಾಮ ಜ್ಯೋತಿ ಕೇಂದ್ರ ಎಂಬ ಸಂ
ಯನ್ನು ರಾಷ್ಟ್ರಾಧ್ಯಕ್ಷರು ಉದ್ಘಾಟಿಸಿದರು. ಈ ಕೇಂದ್ರದಲ್ಲಿ ಕುಶಲ ಕಲೆಗಳಲ್ಲಿಯೂ ತ
ನೈಪುಣ್ಯದ, ವೃತ್ತಿಗಳಲ್ಲಿಯೂ ಸಾರಂಗತರಾಗುವಂತೆ ಚೆನ್ನಾದ ಶಿಕ್ಷಣ ನೀಡಲ್ಪಡುತ್ತ
ಭಾರತದಲ್ಲಿ ಮೂಲೋದ್ಯೋಗಗಳ ಬೆಳವಣಿಗೆಯು ಎಷ್ಟು ಆವಶ್ಯಕವಾಗಿದೆಯೋ ಸಾರ
ದಾಯಿಕವಾದ ಮತ್ತು ಸಾಂಸ್ಕೃತಿಕ ಮಹತ್ವದಿಂದ ಕೂಡಿದ ಪ್ರಾಚೀನ ವೃತ್ತಿಗಳಿಗೆ ಪ್ರೋತ್ಸಾ
ನವನ್ನು ಕೊಡುವುದೂ ಅಗತ್ಯವಾಗಿದೆ. ರಾಷ್ಟ್ರಾಧ್ಯಕ್ಷರು ಹಳ್ಳಿಗಳಲ್ಲಿ ಪ್ರಕಾಶವನ್ನು ಚೆಲ್ಲುವ
ಮಾದರಿ ಕೇಂದ್ರದ ಪರಿಶೀಲನೆ ನಡೆಸಿ ತೃಪ್ತಿ ಸೂಚಿಸುತ್ತಿರುವುದನ್ನು ಚಿತ್ರದಲ್ಲಿ ಕಾಣುತ್ತೇ

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಸಾವಿಗೆ ಮುಂಚೆ ಸಮಾಧಿ—

ಬರೆದವರು: ಧನ್ವಂತ. ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ೨. ಬೆಲೆ: ರೂ. ೨—೦—೦.

ಇಂಗ್ಲಿಷಿನಲ್ಲಿ ಎಡ್ಗರ್ ಎಲೆನ್ ಪೋನ ಕತೆಗಳು ರೋಮಾಂಚಕ ಸಾಹಿತ್ಯಕ್ಕೊಂದು ಮಾದರಿಯಾಗಿವೆ. ಕಳೆದ ಶತವಾನದಲ್ಲಿ ಆಗಿಹೋದ ಈ ಪಾಶ್ಚಾತ್ಯ ಸಾಹಿತಿಯ ಹದಿನೈದು ಕತೆಗಳನ್ನು ಶ್ರೀ ಧನ್ವಂತರು ಇಲ್ಲಿ ಕನ್ನಡಿಸಿದ್ದಾರೆ. ಕತೆಗಳಲ್ಲಿ ಹೆಚ್ಚಾಗಿ ಅದ್ಭುತ ಮತ್ತು ವಿಸ್ಮಯಕರ ನೃತ್ತಾಂತಗಳೇ ಕಂಡುಬರುತ್ತವೆ. ಒಗಟೊಂದನ್ನು ಜಾರುಕಾಗಿ ಬಿಡಿಸಿದ ಮಾದರಿಯಲ್ಲಿ ಹೆಚ್ಚಿನ ಕತೆಗಳಿವೆ ಎನ್ನಬಹುದು. ಲಾಲಿತ್ಯ ಮತ್ತು ನರಸತೆಗೆ ಈ ಕತೆಗಳಲ್ಲಿ ಅವಕಾಶ ದೊರೆತಿಲ್ಲ—ಆದರೆ ಇವುಗಳು ಮನುಷ್ಯ ಕೃತಪ್ರಸೂದಗಳ ನಾನಾಮುಖಗಳನ್ನು ರಮ್ಯವಾಗಿ ಚಿತ್ರಿಸುತ್ತವೆ ಎಂಬುದೇನೂ ಸುಳ್ಳಲ್ಲ. ಹಾಗೆ ನಿರೂಪಿಸುವಾಗ ಗಂಭೀರತೆಯೊಂದನ್ನು ನಿಧಾನವಾಗಿ ಮುಂದಟ್ಟು ಪಡಿಸುವುದಕ್ಕೆ ಲೇಖಕರು ಸಮರ್ಥರಾಗಿರುತ್ತಾರೆ ಎಂಬುದೂ ಹೊಳೆಯದಿರದು. ಕನ್ನಡದ ಸಣ್ಣಕತೆಗಳ ಕ್ಷೇತ್ರದಲ್ಲಿ ಇಷ್ಟರ ವರೆಗೆ ಸಾಕಷ್ಟು ಹೆಚ್ಚಾಗಿ ಅರಳಿರದ ಪುಷ್ಪಗಳ ಬಗೆ

ಲಘು ಪರಿಚಯ

ಮಡಿಕೇರಿಯಿಂದ ಶ್ರೀ ಬಿ. ಎಸ್. ಗೋಪಾಲಕೃಷ್ಣ ಇವರ ಸಂಪಾದಕತ್ವದಲ್ಲಿ ಕನ್ನಡ "ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಗತಿಯನ್ನೆ ಮುಖ್ಯ ಗುರಿಯಾಗಿಟ್ಟುಕೊಂಡ" ಕೊಡಗಿನ ಪ್ರಥಮ ಮಾಸಪತ್ರಿಕೆ "ಕಂದಾದೀಪ" ಇದೇ ಅಕ್ಟೋಬರದಲ್ಲಿ ಬೆಳಗಿದೆ. ಪತ್ರಿಕೆಗೆ ಸ್ವಾಗತಕೋರಿ, ಒಳ್ಳೆಯ ಮಟ್ಟವನ್ನು ಉದ್ಯ

ಧಾರವಾಡ ಜಿಲ್ಲಾ ಸರ್ವೋದಯ ಯೆ
ಜನೆ, ಅರವಟಿಗೆ ಇವರು ೦—೪—೧೯
ರಿಂದ ೩೦—೩—೧೯೫೫ ವರೆಗಿನ ತಮ್ಮ
ಟುವಟಿಕೆಯ ಆರನೇ ವರ್ಷಕ್ಕೆ ಸಂಬಂಧ
ಪ್ರಕಟಿಸಿರುವ ವರದಿಯು ಸರ್ವೋದಯ
ಆದರ್ಶ ಸಾಧನೆಯಲ್ಲಿ ಗಣ್ಯ ಪ್ರಗತಿಯ
ಕಾರ್ಯಕರ್ತರು ಸಾಧಿಸಿರುವರೆಂದು ತೋ
ಸಿ ಕೊಡುತ್ತದೆ. ಗ್ರಾಮ ಜೀವನವನ್ನು ಸು
ಕರವಾಗಿ ಮಾಡುವ ಹಲವಾರು ವಿಧಾಯ
ರಂಗಗಳಲ್ಲಿ ನಿಷ್ಠೆಯಿಂದ ದುಡಿದಿರುವು
ವಿವರಗಳು ತುಂಬ ಸಮಾಧಾನಕರವಾಗಿ
ಸರ್ವೋದಯ ಸಮಿತಿಗೆ ಇತೋಽಭ್ಯಧಿಕ
ವಾದ ಶ್ರೇಯಸ್ಸನ್ನು ಕೋರುತ್ತೇವೆ.

ಮಿ ಶೀಲತೆಯಲ್ಲಿ ಪ್ರದರ್ಶಿಸಿ, ಅದು ಬೆಳೆದು ಬಾಳಲೆಂದು ಹಾರೈಸುತ್ತೇವೆ.

ಹೃಷಿ ಕೇಶದ ದಿವ್ಯಧಾಮದಲ್ಲಿ ಸ್ವಾಮಿ ಶಿವಾನಂದರ ಆಶ್ರಮದಿಂದ ಪ್ರಕಟವಾಗುವ "ದಿವ್ಯ ಜೀವನ" "THE DIVINE LIFE" ಎಂಬ ಮಾಸಪತ್ರಿಕೆಯ ಸಪ್ತಂಬರ ತಿಂಗಳ ಸಂಚಿಕೆಯು ಸ್ವಾಮೀಜಿಯ ೬೯ನೇ ಜನ್ಮದಿನ ಸಂಚಿಕೆಯಾಗಿ ಪ್ರಕಟವಾಗಿದೆ. ಇದರಲ್ಲಿ ಶಿವಾನಂದರ ಆಧ್ಯಾತ್ಮಿಕ ಪ್ರತಿಭೆ ಅವರ ಜೀವನಾದರ್ಶ ಇತ್ಯಾದಿಗಳ ಮೇಲೆ ಬೆಳಕು ಬೀರುವ ಅವರ ಭಕ್ತವೃಂದದ ಹಲವಾರು ಲೇಖನಗಳನ್ನು ಕಾಣುತ್ತೇನೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್**, ಎಲ್. ಏ. ಎಮ್.

"Ably written—Quite up-to-date valuable service"
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೊರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೇಣಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರು ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರುಣ ಚಿತ್ರ ಎಂದೆಂದೂ ಜನಮನದಿಂದ ಮಾಯವಾಗದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ

ಸಪುಂಟ ೩೫
VOL. 35

ಉಡುಪಿ, 20-10-1955

ಪ್ರಾಥಮಿಕ ವಿದ್ಯಾಭ್ಯಾಸ

ಮದ್ರಾಸು ಸರಕಾರದವರು ಕಳೆದ ವರ್ಷದ ನವಂಬರ ತಿಂಗಳಲ್ಲಿ ಡಾ. ಅಲಗಪ್ಪ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಪದ್ಧತಿಯನ್ನು ಪರಿಶೀಲಿಸುವುದಕ್ಕೋಸ್ಕರ ಸಮಿತಿಯೊಂದನ್ನು ನೇಮಿಸಿದ್ದರೆಂದು ಓದುಗರಿಗೆ ನೆನಪಿರಬಹುದು. ಸಮಿತಿಯವರು ಇದೇ ಗಾಂಧಿಜಯಂತಿಯಂದು ಸರಕಾರಕ್ಕೆ ತನ್ನ ವರದಿಯನ್ನು ಒಪ್ಪಿಸಿರುವರೆಂದು ತಿಳಿದುಬರುತ್ತದೆ.

ಸಾರ್ವಜನಿಕರ ಅವಗಾಹನೆಯ ಬಗ್ಗೆ ಈ ವರದಿಯನ್ನು ಇನ್ನು ಕೆಲವೇ ವಾರಗಳಲ್ಲಿ ಪ್ರಕಟಿಸಲು ಸರಕಾರ ಬಯಸಿದೆ. ಮುಂದಿನ ತಿಂಗಳಲ್ಲಿ ಸೇರಲಿರುವ ಶಾಸನಾಂಗದ ಅಧಿವೇಶನ ಕಾಲದಲ್ಲಿ ಸದಸ್ಯರಿಗೆ ಸಮಿತಿಯ ಸಿಫಾರಾಸುಗಳು ತಿಳಿದಿರಬೇಕೆಂದೂ ತಮ್ಮ ಅಭಿಪ್ರಾಯಗಳನ್ನು ಸರಕಾರಕ್ಕೆ ವಿದಿತಪಡಿಸಲು ಅವರು ಶಕ್ತರಾಗಬೇಕೆಂದೂ ಸರಕಾರ ಆಶಿಸುತ್ತಿರುವುದರಿಂದ ಜನತೆಯ ಪ್ರತಿನಿಧಿಗಳ ಅಧ್ಯಯನಕ್ಕೆ ಸಾಕಷ್ಟು ಅವಕಾಶ ಸಿಗುವಂತೆ ಬೇಗನೆ ವರದಿಯು ಪ್ರಕಟವಾಗುವುದರಲ್ಲಿ ಸಂದೇಹವಿಲ್ಲವೆಂದು ಭಾವಿಸಬಹುದು.

ಇದರ ನಡುವೆ ವಿದಿತ ವರ್ಗಗಳ ಮೂಲಕ ಕೆಲವು ಸಂಗತಿಗಳು ವರದಿಯ ಕುರಿತಾಗಿ ಬಹಿರಂಗವಾಗಿದೆ. ವರದಿಯನ್ನು ಸರಕಾರವು ತೀವ್ರವಾಗಿ ಪರ್ಯಾಲೋಚಿಸುತ್ತಿರುವುದೆಂಬುದನ್ನು ಯಾರೂ ಹೇಳುವ ಅಗತ್ಯವಿಲ್ಲ. ಪರ್ಯಾಲೋಚನೆಯ ಬಳಿಕ ಬೇಗನೆ ನಿರ್ಣಯಗಳನ್ನು ಕೈಗೊಂಡು ಮುಂದಿನ ಶಾಲಾ ವರ್ಷದಲ್ಲಿ – ಅಂದರೆ ೧೯೫೬-೫೭ನೇ ಸಾಲಿಗೆ ನಿರ್ಣಯಗಳನ್ನು ಕಾರ್ಯಗತ ಗೊಳಿಸಲು ಸರಕಾರ ಇಚ್ಛಿಸುತ್ತಿರುವಂತೆ ಕಾಣುತ್ತದೆ.

ಸಮಿತಿಯವರು ಕ್ರಾಂತಿಕಾರಿಯಾದ ಯಾವ ಸೂಚನೆಗಳನ್ನೂ ಮಾಡಿಲ್ಲವೆಂದು ಹೇಳಲಾಗುತ್ತದೆ ಈಗಿನ ಪದ್ಧತಿಯಲ್ಲಿ ತೀವ್ರ ಬದಲಾವಣೆಗಳನ್ನು ಈ ಸಮಿತಿ ಸೂಚಿಸಿಲ್ಲ: ಪ್ರಗತಿಯ ಹೆಜ್ಜೆಯು ಮಾತ್ರ ತೀವ್ರವಾಗಬೇಕೆಂದು ಹೇಳಿದೆ—ಎಂದು ವಿದಿತ ವರ್ಗಗಳು ತಿಳಿಸಿರುತ್ತವೆ.

ಮೂಲ ಶಿಕ್ಷಣ ಕ್ರಮವನ್ನು ಮುಂದೊತ್ತಿಕೊಂಡು ಹೋಗುವ ವಿಷಯದಲ್ಲಿ ಈಗಿನ ವಿಧಾನವನ್ನು ಜಾಗರೂಕತೆಯಿಂದ ಮತ್ತು ಪ್ರಗತಿಪರವಾಗಿ ಅನುಸರಿಸಬೇಕೆಂದು ಸಮಿತಿ ಅಭಿಪ್ರಾಯ ಪಟ್ಟಿರುವುದೆಂದು ತಿಳಿದುಬಂದಿದೆ. ಪ್ರಾಥಮಿಕ ಶಾಲೆಗಳ ಪ್ರಾಥಮಿಕ ತರಗತಿಗಳಿಗೆ ಇದನ್ನು ವಿಸ್ತರಿಸಬೇಕು. ಹೆಚ್ಚಿನ ಶಾಲೆಗಳಲ್ಲಿ ತೋಟಗಾರಿಕೆಯನ್ನು ವೃತ್ತಿಯಾಗಿ ಪರಿಗ್ರಹಿಸಬಹುದು; ಸಾಧ್ಯವಿದ್ದಲ್ಲೆಲ್ಲ ಕುಂಬಾರಿಕೆ ಚಾಪೆಹೆಣೆಯುವುದು ಇತ್ಯಾದಿಗಳನ್ನು ಆವಲಂಬಿಸಬಹುದು. ಕಚ್ಚಾ ಸರಕುಗಳ ಕ್ರಯದಲ್ಲಿ ಒಂದಂಶವನ್ನು ತೆತ್ತು ಈ ಉತ್ಪಾದನೆಯನ್ನು ಸ್ವಂತಕ್ಕೆ ಉಪಯೋಗಿಸಲು ವಿದ್ಯಾರ್ಥಿಗಳಿಗೆ ಬಿಡಬೇಕು—ಎಂದು ಸಮಿತಿ ಹೇಳಿದೆಯಾಗಿ ಸುದ್ದಿ.

ಆದಷ್ಟು ಹೆಚ್ಚು ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಬರಬೇಕೆಂದು ಸಮಿತಿಯು ಹಲವಾರು ಸೂಚನೆಗಳನ್ನು ಮಾಡಿದೆಯೆಂದೂ ಗೊತ್ತಾಗಿರುತ್ತದೆ. ಪ್ರಾಥಮಿಕ ಶಿಕ್ಷಣಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ನೀಡಬೇಕೆನ್ನುತ್ತಾ ಅದು ಬ್ರಿಟನಿನ ಉದಾಹರಣೆಯನ್ನು ನೀಡಿದೆಯಂತೆ—ಆ ದೇಶದಲ್ಲಿ ವರ್ಷಕ್ಕೆ ೪ಂಕೋಟಿ ಪೌಂಡುಗಳಷ್ಟು ಹಣ ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚವಾಗುತ್ತದೆ; ಇದರಲ್ಲಿ ೧೧ಲಕ್ಷ ಪೌಂಡುಗಳಷ್ಟು ಕಟ್ಟಡಗಳಿಗಾಗಿ ಪ್ರತಿವಾರ ನೀಡಲ್ಪಡುತ್ತವೆ.

ನಮ್ಮ ದೇಶದಲ್ಲಿ ಇಂದಿಂದ ಜಾರಿಯಲ್ಲಿರುವ ಪ್ರತಿಯೊಂದೂ ಹಳ್ಳಿಗೆ ಒಂದರಂತೆ ಇದು ಸಾಧ್ಯವಿಲ್ಲದಿದ್ದರೆ ಎಂಥ ಪ್ರಸಂಗದಲ್ಲಿಯೇ ಆಗಲಿ, ಮಕ್ಕಳಿಗೆ ಹೋಗಿಬರಲು ಹೆಚ್ಚು ದೂರವಾಗದಂತೆ –ಶಾಲೆಗಳನ್ನು ಸ್ಥಾಪಿಸಬೇಕು ಇವುಗಳ ಕಟ್ಟಡ ರಚನೆಗೆ ರಾಷ್ಟ್ರೀಯ ವಿಸ್ತರಣಾ ಸೇವೆ ಇತ್ಯಾದಿ ಅಭಿವೃದ್ಧಿ ಪ್ರಯತ್ನಗಳ ಸಹಾಯವನ್ನು ಪಡೆಯಬಹುದು. ತೋಟ ತಯಾರಿಸಲೂ ಆಟದ ಮೈದಾನಿಗಾಗಿಯೂ ಭೂದಾನ ಚಳವಳಿಯನ್ನು ನಡೆಸಬಹುದು. ಸಾಧ್ಯವಾದಷ್ಟು ಮಟ್ಟಿಗೆ ಮಧ್ಯಾಹ್ನದ ಊಟವನ್ನು ಮಕ್ಕಳಿಗೆ ಧರ್ಮಾರ್ಥವಾಗಿ ಶಾಲೆಯ ವರಾಂಡದಲ್ಲಿಯೇ ಕೊಡಬೇಕು. ಊರಿನವರು ಅರ್ಧ ಖರ್ಚನ್ನು ಹೊರುವ ತಳಹದಿಯ ಮೇಲೆ ಈ ಕಾರ್ಯಕ್ರಮವನ್ನು ಪ್ರಾರಂಭಿಸಬಹುದು. ಇದಲ್ಲದೆ ಸ್ಲೇಟು, ಕಡ್ಡಿ ಮತ್ತು ಪುಸ್ತಕಗಳನ್ನು ಧರ್ಮಾರ್ಥವಾಗಿ ಕೊಡಬೇಕು-ಎಂದು ಸಮಿತಿ ಸಲಹೆ ಮಾಡಿರುತ್ತದೆ.

ರಾಜ್ಯದಲ್ಲಿ ಈಗ ೫ರಿಂದ ೧೪ವರ್ಷ ಪ್ರಾಯದ ೬೩ ಲಕ್ಷ ಮಕ್ಕಳಿದ್ದಾರೆ; ಇದರಲ್ಲಿ ಶಾಲೆಯಲ್ಲಿ ಶಿಕ್ಷಣಪಡೆಯುತ್ತಿರುವವರು ೩೨ಲಕ್ಷ ಮಾತ್ರ. ಘಟನೆಯಂತೆ ಸರಕಾರದ ವೇಲಿರುವ ಈ ಸಂಬಂಧದ ಹೊಣೆಗಾರಿಕೆಯನ್ನು ಆದಷ್ಟು ಶೀಘ್ರವಾಗಿ ನಿರ್ವಹಿಸಬೇಕು. ಮಕ್ಕಳು ಸ್ವೇಚ್ಛೆಯಿಂದ ಶಾಲೆಗೆ ಬರುವಂತೆ ಉತ್ತಮ ವಾತಾವರಣವನ್ನು ನಿರ್ಮಿಸಬೇಕು. ಸಾಮಾನ್ಯವಾಗಿ ಹೆತ್ತವರ ಉದಾಸೀನತೆಯೇ ಮಕ್ಕಳು ಶಾಲೆಗೆ ಬರದಿರುವುದರ ಕಾರಣ. ಸುದೈವದಿಂದ ಈಗ ಪ್ರತಿಯೊಂದು ಗ್ರಾಮದ ಮೂಲೆಯಿಂದಲೂ ಶಾಲೆಗಳಿಗೆ ಬೇಡಿಕೆ ಬರುತ್ತಿದೆ. ಇದರ ಸದುಪಯೋಗ ಪಡೆಯದೆ ಬಿಡಬಾರದು. ಶಾಲೆಗೆ ಬಾರದ ಮಕ್ಕಳ ಹೆತ್ತವರೊಡನೆ ಅಧ್ಯಾಪಕರು ಸಂಪರ್ಕವನ್ನು ಬೆಳೆಸಿ, ಪರಿಸ್ಥಿತಿಯನ್ನು ಸುಧಾರಿಸಲು ನೋಡಬೇಕು-ಎಂಬುದಾಗಿಯೂ ಸಮಿತಿ ಹೇಳಿರುತ್ತದೆ.

ಶಾಲೆಗಳಲ್ಲಿ ಕ
ಕೊಡುವುದಕ್ಕೆ
ಕೂಲವಿಲ್ಲ,
ಶಿಕ್ಷಣ ಕೊಡುವು
ಧವಿಲ್ಲ ಎಂದು ಸ
ವರದಿಯಾಗಿದೆ.
ಡಿಮೆ ವಯಸ್ಸಿನ
ಸೋರಿ ಪದ್ಧತಿಯ
ಷ್ಟ್ಯಗಳಿಗನುಸಾ
ಅನುಸರಿಸುವ ಶಾ
ದೆಂದೂ ಅದು ಸ
ಪಾಧ್ಯಾಯ ಶಾ
ವುದಕ್ಕೆ ಉತ್ತೇಜ
ಸೌಕರ್ಯವನ್ನೂ
ರ್ಗಿರ್ಯರಲ್ಲಿ ಮಾ
ಪರಿಷ್ಕರಿಸಲು ಪಿ
ಕು; ಎಂಟನೇ
ಸರಕಾರಿ ಪರೀಕ
ಯೇ ಮುಂದರಿ
ತರಗತಿಯಿಂದ ಆ
ಇಂಗ್ಲೀಷಿನ ಶಿಕ್ಷಣ
ನೀಡಬೇಕು —
ಯಾಗಿ ಗೊತ್ತಾಗ

ಶಾಲೆಗಳ ಆಡ
ಬ್ಬ ನೇವಹಿಸಿಕೊ
ದು; ಪ್ರತಿಯೊಂ
ಮುಂಡಳವನ್ನು ನೆ
ಒಬ್ಬಬ್ಬರು ಸದಸ್ಯ
ಕು ಉಸಾಧ್ಯಾಯ
ಶಾಲೆಗಳಿಗೂ ಈ
ಸಬೇಕು—ಎಂದು
ಯಂತೆ. ಇನ್ನು
ಡ್ರ್ ಮತ್ತು ಗ್ರಾ
ಗೆ ಶಾಲೆಗಳನ್ನು
ತನ್ನ ಅಧಿಕಾರ ವ
ಶಾಲೆಗಳನ್ನು ನಡೆ
ರ ಹೊರಗೆ ಪ್ರಾ
ಅಧಿಕಾರ ಕೊಡ
ಜಿಲ್ಲಾ ಬೋಡು
ಚಾಯತುಗಳ ಪ್ರ
ರದ ಪ್ರತಿನಿಧಿಗಳ
ದ ಅಧಿಕಾರಾವಧಿ
೨೦೦ ಶಾಲೆಗಳ
ಒಂದು ಮಂಡಳಕ
ಕ್ಕಿಂತ ಹೆಚ್ಚಲ್ಲ
ಶಿಕ್ಷಣ ಸಂಬಂಧ
ದಾಯ ಈ ವ್ಯಾ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.

ಪ್ರಧಾನ ಕಾರ್ಯಾಲಯ: ಉಡುಪಿ.] [ಸ್ಥಾಪನೆ: 1925.

ಸುಖಸಂತೋಷವನ್ನು ಬರಮಾಡಿಕೊಳ್ಳುವುದು ಹೇಗೆ?

ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಆಕಸ್ಮಿಕ ಘಟನೆಯಲ್ಲ. ಅದನ್ನು ನಡುದಾರಿಯ ವರೆಗೆ ಹೋಗಿ, ಸಂಧಿಸಿ, ಮನೆಗೆ ಸ್ವಾಗತಿಸಬೇಕಾಗುತ್ತದೆ. ಕೆಲವು ವರ್ಷಗಳಷ್ಟು ಮುಂದಾಗಿಯೇ ತಕ್ಕ ಯೋಜನೆಯನ್ನು ಮಾಡಿರಬೇಕೆಂದು ಇದರ ಅರ್ಥ. ನಿಮ್ಮ ಗುರಿಯನ್ನು ಗೊತ್ತುಪಡಿಸುವುದು ಮತ್ತು ಅದನ್ನು ಮುಟ್ಟಲು ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ಮೊದಲನೆಯ ಕೆಲಸ. ಈ ಬಗೆಯ ಕಾರ್ಯಕ್ರಮಗಳಲ್ಲಿ ನಿಮಗೆಷ್ಟು ಸಾಧ್ಯವೋ ಅಷ್ಟು ಹಣವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ಮುಖ್ಯವಾದೊಂದು ವಿಷಯ. ನಾವು ಇದಕ್ಕೆ ಪ್ರತಿ ಅರ್ಧ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಳಿತಾಯವು ಬೇಗನೆ ಬೆಳವಣಿಗೆಯನ್ನು ಹೊಂದುವಂತೆ ನೆರವಾಗುತ್ತೇವೆ.

ಚಲಾವಣೆ ಬಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ.

ಪವಿತ್ರ ಪುಣ್ಯ ಕ್ಷೇತ್ರ

ತಲಕಾವೇರಿಯು ಕೊಡಗಿನ ಅತ್ಯಂತ ಪ್ರೇಕ್ಷಣೀಯ ಸ್ಥಳವೂ ಹೌದು. ಇಲ್ಲಿ ಪುಣ್ಯಕಾಮಿಗಳಷ್ಟೇ ಬರುವುದಲ್ಲ, ಕೊಡಗಿಗೆಬಂದ ಪ್ರವಾಸಿಗಳತಂಡವೂ ತಲಕಾವೇರಿಯನ್ನು ಸಂದರ್ಶಿಸಲು ತಪ್ಪುವುದಿಲ್ಲ; ಮಡಿಕೇರಿಯಿಂದ ೮ಲ ಮೈಲುಗಳಷ್ಟು ದೂರ ಚಿನ್ನಾದ ಮೂರ್ಗದಲ್ಲಿ ಸಂಚರಿಸಿ, ಪ್ರಕೃತಿಯ ಮಡಿಲಲ್ಲಿ ಕೆಲವು ಗಳಿಗೆಗಳನ್ನು ಕಳೆಯಲು ಎಲ್ಲರಿಗೂ ಆನಂದವಾಗುತ್ತದೆ.

ಬ್ರಹ್ಮಗಿರಿ ಎಂದು ಕರೆಯಲ್ಪಡುವ ಉನ್ನತ ಬೆಟ್ಟವೇ ದಕ್ಷಿಣ ಭಾರತದ ಜೀವನಾಡಿಯಂತಿರುವ ಕಾವೇರಿಯ ಉಗಮ ಸ್ಥಳ. ಇಲ್ಲಿಂದ ಹರಿಯತೊಡಗಿ ೫೦೦ ಮೈಲುಗಳಿಗಿಂತಲೂ ಹೆಚ್ಚುದೂರ ಸಂಚರಿಸಿ, ಇಕ್ಕೆಲಗಳಲ್ಲಿಯೂ ಹಸಿರು ತುಂಬಿದ ಭತ್ತದ ಪೈರಿನಿಂದ ಕಂಗೊಳಿಸುವ ಒಂಗಾಳಾಖಾತವನ್ನು ಕಾವೇರಿಯು ಸೇರುತ್ತದೆ. ದಕ್ಷಿಣ ಭಾರತದ ಸಮೃದ್ಧಿಯ ಎಲ್ಲ ಶ್ರೇಯಸ್ಸೂ ಕಾವೇರಿಗೆ ಸಲ್ಲುತ್ತದೆ.

ನೈಸರ್ಗಿಕ ದೃಶ್ಯ

ಪ್ರವಾಸಿಯು ಬಸ್ಸು ಅಥವಾ ಕಾರಿನಲ್ಲಿ ಹೋಗುವಾಗ ನುತ್ತಲೂ ಮನಸ್ಸನ್ನು ಮುಗ್ಧಗೊಳಿಸುವ ಚೆಲುವಿನ ನೋಟಗಳು ಕಣ್ಣಿಗೆ ಬೀಳುತ್ತವೆ. ಭತ್ತದ ಗದ್ದೆಗಳೂ, ಕಾಫಿ, ಏಲಕ್ಕಿ, ಮತ್ತು ಕಿತ್ತಳೆ ಹಣ್ಣಿನ ಹುಲುಸಾದ ಬೆಳೆಯಿರುವ ತೋಟಗಳೂ ಅರಣ್ಯ ಸಂಪತ್ತಿನಿಂದ ತುಂಬಿ ತುಳುಕುವ ಕೊಡಗಿಗೆ ಇನ್ನಷ್ಟು ಐಶ್ವರ್ಯವನ್ನು ನೀಡುತ್ತವೆ. ಮನುಷ್ಯ ಕೃತ ಸಾಹಸಗಳನ್ನು ನಾಚಿಸುವಂತೆ ನಿಸರ್ಗದ ನರ್ತನವೇ ಇಲ್ಲಿ ನಡೆದಿದೆ ಎಂಬುದು ಪ್ರವಾಸಿಯ ಮೊದಲ ಅನುಭವವಾಗುತ್ತದೆ.

ಕೈಯಲ್ಲೊಂದು ಬಂದೂಕು ಹಿಡಿದಿದ್ದರೆ, ತಲಕಾವೇರಿಯಲ್ಲಿ ಬೇಟೆಯು ವಿನೋದದಲ್ಲಿ ತನ್ಮಯರಾಗಬಹುದು; ಬರಿಸೈಯಲ್ಲೇ ಹೋದರೂ ಕಾವೇರಿ ಬೆಟ್ಟದ ನಡುವೆ ಝುಳುಝುಳು ನಿನಾದದೊಡನೆ ಹರಿದು ಹೋಗುವ ರಮ್ಯ ಚಿತ್ರವನ್ನು ಕಂಡು ನಮಗೆ ಆನಂದವಾಗದಿರದು. ಸುತ್ತಲೂ ಎತ್ತರವಾಗಿ ನೆಗೆದು ನಿಂತಿರುವ ಬೆಟ್ಟಗಳಿರುವಾಗ ನಡುವೆ ಕಣಿವೆಯಲ್ಲಿ ಹಸಿರಿನ ಶೋಭೆ ಅವರ್ಣನೀಯವಾದ ಆನಂದವನ್ನು ತಂದುಕೊಡುತ್ತದೆ.



[illegible] ನ್ನು ಹೊಂದಿದೆ, ಕೇಂದ್ರ ಸರಕಾರದ ನೇರಾದ ಆಡಳಿತಕ್ಕೆ ಇದು ಒಳಪಟ್ಟಿದೆ. ಕಳೆದ ಚುನಾವಣೆಯ ಬಳಿಕ ಜನರಿಗೆ ಹೊಣೆಗಾರವಾದ ಶಾಸನ ಸಭೆಯೂ ಮಂತ್ರಿ ಮಂಡಳವೂ ಕೊಡಗಿನಲ್ಲಿ ಏರ್ಪಟ್ಟಿದೆ. ಈಚೆಗೆ ಪ್ರಕಟವಾದ ಫಜಲಿಆಲಿ ಆಯೋಗದ ವರದಿಯು ಕಾರ್ಯಗತವಾದರೆ, ಸಂಯುಕ್ತ ಕರ್ನಾಟಕ ರಾಜ್ಯದಲ್ಲಿಕೊಡಗು ಒಂದುಜಿಲ್ಲೆಯ ರೂಪದಲ್ಲಿಸೇರಿಹೋಗುತ್ತದೆ. ಆಗ ಉಳಿದ ಕನ್ನಡ ಪ್ರದೇಶಗಳೊಡನೆ ಕೊಡಗಿನ ಸಂಪರ್ಕ ಮತ್ತು ಸಂಬಂಧ ಇನ್ನಷ್ಟು ಗಾಢವಾಗುವುದು ನಿಶ್ಚಯ.

ಸುಮಾರು ೧೫೦೦ ಚದರ ಮೈಲು ವಿಸ್ತೀರ್ಣದ ಕೊಡಗು ಮೈಸೂರಿನೊಡನೆ ಈ ಗಾಗಲೇ ಆರ್ಥಿಕ ಸಂಬಂಧವನ್ನು ಹೊಂದಿರುತ್ತದೆ. ಭೌಗೋಲಿಕವಾಗಿಯೂ ಸಾಂಸ್ಕೃತಿಕವಾಗಿಯೂ ಕೊಡಗನ್ನು ಮೈಸೂರಿನಿಂದ ಬೇರ್ಪಡಿಸುವುದು ಸಾಧ್ಯವಿಲ್ಲವೆಂದರೂ ತಪ್ಪಲ್ಲ ಮಲೆನಾಡಿನ ಬಹು ದೊಡ್ಡ ಅಂಶವು ಮೈಸೂರಿನಲ್ಲಿದೆ; ಕೊಡಗು ಕೇವಲ ಮಲೆನಾಡು. ಸಂಯುಕ್ತ ಕರ್ನಾಟಕ ರಾಜ್ಯವು ಮಲೆನಾಡಿನ ಅಭಿವೃದ್ಧಿಗೆ ಉತ್ತಮ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬಲ್ಲುದಾದುದರಿಂದ ಕೊಡಗಿನ ಸಂಪತ್ತು ಭವಿಷ್ಯದಲ್ಲಿ ಹೆಚ್ಚಿಕೊಳ್ಳುವ ಸಂಭವ ಸ್ಪಷ್ಟವಾಗಿ ಕಾಣಿಸುತ್ತದೆ.

ಜನ ಜೀವನ

ಮಂಗಳೂರಿನಿಂದ ಮೈಸೂರಿಗೆ ಪ್ರಯಾಣಿಸುವಾಗ ಮಡಿಕೇರಿಯ ದೊಡ್ಡ [illegible] ಭನಯುಕ್ತ ಆಡಳಿತೆಯು ಬಳಿಕ,೧೯೨೦–೧೯೩೪ ನೇ ವರ್ಷದ ವರೆಗೆ ಸ್ಥಳೀಯ ಅರಸರ ಆಳಿಕೆಯನ್ನು ಅದು ಅನುಭವಿಸಿತು. ಬ್ರಿಟಿಷರು ಇಮ್ಮಡಿ ವೀರ ರಾಜ ಅರಸರನ್ನು ರಾಜ್ಯಭ್ರಷ್ಟರಾಗಿಮಾಡಿ,ಕೊಡಗನ್ನು ತಮ್ಮ ಕಮಿಶನರರಿಗೆ ಒಪ್ಪಿಸಿ ಕೊಟ್ಟರು.

ಕೊಡಗಿನ ಜನಸಂಖ್ಯೆ ಸುಮಾರು ೨೩೦,೦೦೦. ಇವರೆಲ್ಲ ಕನ್ನಡ ಬಲ್ಲವರು; ವ್ಯವಹಾರದಭಾಷೆಯೂಕನ್ನಡ.ಆದರೆಕೊಡಗರೆಂದು ಕರೆಯಲ್ಪಡುವ ವಿಶಿಷ್ಟ ಜನ ಸಮುದಾಯವೊಂದು ಇಲ್ಲಿದೆ—ಇವರ ಸಂಖ್ಯಾ ಪ್ರಮಾಣ ಸುಮಾರು ೬೦೦೦ ಈ ಜನರ ಆಭಿರುಚಿಯಲ್ಲಿ ಒಳ್ಳೆಯ ಪರಿಷ್ಕಾರ ಕಾಣುಬರುತ್ತದೆ.ಅವರು ನಿಷ್ಣಾತರಾದ ಬೇಟೆಗಾರರು; ಯುದ್ಧ ಕ್ಷೇತ್ರದಲ್ಲಿ ನಿಷ್ಣಾತರಾಗಿ ಮೆರೆಯಬಲ್ಲ ಪರಂಪರೆಯುಳ್ಳವರು; ಸಾಹಸಿಗಳೂ ಶೂರರೂ ಆಗಿರುವಂತೆ ಕಲಾಪ್ರಿಯರೂ ಹೌದು.

ಸುಸಂಸ್ಕೃತ ಪುತ್ರರು

ಭಾರತದ ಪದಾತಿದಳದ ಸರ್ವ ಪ್ರಥಮ ಭಾರತೀಯ ಸೇನಾಪತಿಯಾಗಿ ಹೆಸರು ಗಳಿಸಿದ, ಈಗ ಆಸ್ಟ್ರೇಲಿಯದಲ್ಲಿ ಭಾರತ ಸರಕಾರದ ರಾಯಭಾರಿಯಾಗಿರುವ ಜನರಲ್ ಕರಿಯಪ್ಪನವರೂ ಕೊರಿಯದಲ್ಲಿ ಯುದ್ಧ ಕೈದಿಗಳ ಯೋಗ ಕ್ಷೇಮವನ್ನು ನೋಡಿಕೊಂಡ ದಕ್ಷ ಭಾರತೀಯ ಸೇನಾಪತಿ ಲೆಫ್ಟನೆಂಟ್ ಜನರಲ್ ತಿಮ್ಮಯ್ಯ ನವರೂ ಕೊಡಗಿನ ಸುಪುತ್ರರು.

ಸಾಮಾನ್ಯ ಭಾರತೀಯರಿಗಿಂತ ಭಿನ್ನವಾದ ಸಂಸ್ಕಾರವನ್ನು ಕೊಡಗರು ಹೊಂದಿದ್ದಾರೆ. ಅವರ ಸಂಸ್ಕೃತಿಯ ಕುರಿತು ಅಭಿಮಾನ ಮೂಡಿಸುತ್ತದೆ.

ಕೃಷಿಯಲ್ಲಿ ಆಸಕ್ತಿ

ಮಡಿಕೇರಿಯಲ್ಲದ್ದಾಗ ಓಂಕಾರೇಶ್ವರ ಮಂದಿರವನ್ನು ನೋಡಿ, ಅಲ್ಲಿ ಹಿಂದು ಜಾಗು ಮುಸ್ಲಿಂ ಕಲೆಯು ಸಂಗಮವಾಗಿರುವುದನ್ನು ಕಂಡು ಪ್ರವಾಸಿಕರು ಆನಂದಿಸಬಹುದು. ಕೊಡಗಿನ ಹಿಂದಿನ ರಾಜರ ಕೋಟೆಯನ್ನೂ ಅರಮನೆಯನ್ನೂ ನೋಡಿ ಸಂತೋಷಿಸಬಹುದು. ಯಾವನಾಡಿರೊಬ್ಬ ತೋಟಗಾರನ ಆತಿಥ್ಯ ಲಭ್ಯವಾದರೆ, ಮೋಜಿನ ಮೃಗಯಾವಿಹಾರಕ್ಕೂ ಸಿದ್ಧರಾಗಬಹುದು.

ಕೊಡಗಿನ ಮಹಿಳೆಯರನ್ನು ಅವರು ಸೀರೆಯುಡುವ ಪದ್ಧತಿಯಿಂದಲೂ ತಲೆಗೆ ಕಟ್ಟಿಕೊಳ್ಳುವ ಬಣ್ಣದ ರುಮಾಲಿನಿಂದಲೂ ಕೂಡಲೇ ಪ್ರತ್ಯೇಕಿಸಿ, ಗುರುತಿಸಬಹುದು. ಈ ನಾಡಿನಲ್ಲಿ ಎಲ್ಲರೂ ಗಟ್ಟಿಮುಟ್ಟಾದ ಆಳುಗಳು; ಸುಂದರ ಸೌಷ್ಠವ ಪಡೆದ ಪುಣ್ಯ ಜೀವಿಗಳು. ದುಡಿಯುವವುದರಲ್ಲಿ ಅವರಿಗೆ ತುಂಬಾ ಪ್ರೀತಿ—ಅವರ ಹುತ್ತರಿ ಹಾಡು ಕೃಷಿಯಲ್ಲಿ ಅವರಿಗಿರುವ ಅಭಿಮಾನದ ದ್ಯೋತಕವಾಗಿದೆ ಇದು ಕೊಡಗಿನ ಕುರಿತಾಗಿಸಂದರ್ಶಕರಲ್ಲೂ ಸದ್ಭಾವವನ್ನು ಹೆಚ್ಚಿಸುತ್ತದೆ. ನಮ್ಮ ಜಿಲ್ಲೆಯ ಪ್ರಸಿದ್ಧ ಕನ್ನಡ ಕವಿ ದಿವಂಗತ ಪಂಜೆಯಮಂ ಕೊಡಗಿನ ಬೆಡಗನ್ನು ವರ್ಣಿಸಿ ಬರೆದ ಆ ಕವಿತೆಗಳ ಸಾಲುಗಳು ಪದೇ ಪದೇ ನಮ್ಮ ನೆನಪಿಗೆ, ಆ ನಾಡಿಗೆ ಹೋಗಿಬಂದ ಬಳಿಕ, ಬರುತ್ತಿರುತ್ತವೆ.

THE CANARA MUTUAL
Assurance Company Limited

Managing Director: **T. R. A. PAI**

Head Office: **UDIPI**, S. India.] [Estd: 1935.

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ

ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | **ರೂ. 15** ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ನೊತ್ತವು
ಒಂದು ಕೋಟಿ ರೂಪ್ಯಾಗಳನ್ನು ವಿೂರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

15 ದಿವಸಗಳ ರಿಯಾಯಿತಿ

ಒಂದು ಫೌಂಟನ್ ಪೆನ್ ಅಥವಾ ಒಂದು ಸಿಗರೇಟು ಲೈಟರ್ ಧನಾರ್ಡರ್. ಪ್ರತಿಯೊಂದಕ್ಕೆ 5 ವರ್ಷ ಗ್ಯಾರಂಟಿ. ಪಾಕೆಟ್ ವಾಚ್ 9/-, ಉತ್ತಮ 11/-. ಟಾಯಂಪೀಸು (ಅಲಾರಮ್) 12/; ಉತ್ತಮ 14/.

ಸೈಜು 7¾ ನಂಬ್ರ 15

15 ಜುವೆಲುಗಳ ರೋಲ್ಡ್ ಗೋಲ್ಡ್ – 31/-
5 ಜುವೆಲುಗಳ ಉತ್ತಮ – 24/-

ಸೈಜು 9¾ ವಾಟರ್‌ಪ್ರೂಫ್ ನಂಬ್ರ 16

17 ಜುವೆಲುಗಳುಳ್ಳ ಸ್ಟೀಲಿನದ್ದು 40/-
15 ಜುವೆಲುಗಳುಳ್ಳ ,, 35/-

ಸೈಜು 8¾ ನಂಬ್ರ 18



ಸಂಯುಕ್ತ ಕರ್ನಾಟಕ ರಾಜ್ಯವನ್ನು ರಚಿಸಲು ಫಜಲಿ ಆಲಿ ಆಯೋಗವು ಸಿಫಾರಸು ಮಾಡಿರುವುದರಿಂದ ಸಾಮಾನ್ಯವಾಗಿ ಮೈಸೂರಿನ ಪ್ರಜೆಗಳಿಗೂ ಮೈಸೂರೇತರ ಪ್ರದೇಶಗಳ ನಾಗರಿಕರಂತೆ ಸಂತೋಷವಾಗಿದೆ; ಆದರೆ "ಮೈಸೂರಿನ ವೈಶಿಷ್ಟ್ಯ"ವನ್ನು ರಕ್ಷಿಸಿಕೊಳ್ಳುವುದರಲ್ಲಿ ವಿಶೇಷವಾದ ಆಸಕ್ತಿಯುಳ್ಳ ಕೆಲವು ವರ್ಗಗಳು ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿರುವುದೆಂದು ವರದಿಗಳಿಂದ ತಿಳಿದು ಬರುತ್ತದೆ.

ವಿರಸದ ಕಾರಣ

ಆಯೋಗ ನೇಮಕ ಗೊಂಡ ಕೆಲಸ ಮುಯದ ಬಳಿಕ ನಿಧಾನವಾಗಿ ವ್ಯಕ್ತವಾಗ ತೊಡಗಿದ ಮೈಸೂರಿನ ಕೆಲವು ಪ್ರಮುಖ ನಿಲುಮೆಯು ಈಗ ವಿಲಕ್ಷಣವಾದ ವಿರೋಧದ ಸ್ವರೂಪವನ್ನು ತಾಳಿವೆ. ರಾಜಕೀಯ ಕೈವಾಡವಿರುವ ಈ ವಿರೋಧದಲ್ಲಿ ವಿದ್ಯಾರ್ಥಿಗಳೂ ಧುಮುಕಿ, ಪ್ರಶ್ನೆಯನ್ನು ಅನಾವಶ್ಯಕವಾಗಿ ಜಟಿಲವಾಗಿ ಮಾಡುತ್ತಿದ್ದಾರೆ. ಎರಡು ಕರ್ನಾಟಕ ರಾಜ್ಯಗಳನ್ನು ರಚಿಸುವುದಕ್ಕೆ ಆಯೋಗವು ಸಮ್ಮತಿಸದಿರುವುದು ಮತ್ತು ರಾಜ ಪ್ರಮುಖರ ಹುದ್ದೆಯನ್ನು ರದ್ದುಗೊಳಿಸಲು ಅದು ಸಿಫಾರಸು ಮಾಡಿರುವುದು ಮೈಸೂರಿನ ವೈಶಿಷ್ಟ್ಯದ ರಕ್ಷಕರಿಗೆ ಬಲವಾದ ಆಘಾತವನ್ನು ಉಂಟುಮಾಡಿವೆ. ಅವರು ಬಹಿರಂಗವಾಗಿ ಚಳವಳ ನಡೆಸಿ ವಿರಸದ ವಾತಾವರಣವನ್ನು ಸೃಷ್ಟಿಸಿರುವುದಕ್ಕೆ ಇದೇ ಮೂಲಕಾರಣ.

ಪ್ರಬಲ ಭಿನ್ನಾಭಿಪ್ರಾಯ

ಮೈಸೂರಿನ ಮಂತ್ರಿ ಮಂಡಳದಲ್ಲಿ ಏಕೀಕರಣದ ವಿರೋಧ ಧ್ವನಿಯು ಆಗಾಗ್ಗೆ ಏಳುತ್ತಿತ್ತೆಂದು ಮುಂಜೆಯೇ ಘಟನೆಗಳು ಸ್ಪಷ್ಟ ಪಡಿಸಿದ್ದವು; ಮುಖ್ಯವಾಗಿ ಶಿಕ್ಷಣ ಮಂತ್ರಿ ಶ್ರೀ ಎ. ಜಿ. ರಾಮಚಂದ್ರ ರಾವ್, ಕಂದಾಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪ ಮತ್ತು ಆರೋಗ್ಯ ಮಂತ್ರಿ ಶ್ರೀ ಟಿ. ಜಿನ್ನಯ್ಯ ಇವರು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಸಂಯುಕ್ತ ಕರ್ನಾಟಕ ರಾಜ್ಯದ ರಚನೆಗೆ ತೋರಿಸುತ್ತಿದ್ದ ಸಹಾನುಭೂತಿಯನ್ನು ವಿರೋಧಿಸುತ್ತಿದ್ದರು. ಇತ್ತೀಚೆಯವರೆಗೆ ಶಾಸನಾಂಗದ ಕಾಂಗ್ರೆಸು ಪಕ್ಷದ ಪ್ರತೋವ ಸ್ಥಾನದಲ್ಲಿದ್ದ ಶ್ರೀ ಎನ್. ಹುಚ್ಚಮಾಸ್ತಿ ಗೌಡರಲ್ಲದೆ ಬೇರೆ ಕೆಲವು ಜನ ಪ್ರತಿನಿಧಿಗಳೂ ಮುಖ್ಯ ಮಂತ್ರಿಗಳ ನಿಲುಮೆಯನ್ನು ವಿರೋಧಿಸಿ, ಭಿನ್ನಾಭಿಪ್ರಾಯವನ್ನು ವ್ಯಕ್ತ ಪಡಿಸಿದ ಮಂತ್ರಿಗಳನ್ನು ಬೆಂಬಲಿಸುತ್ತಿದ್ದರು. ಮಂತ್ರಿ ಮಂಡಳದಲ್ಲಿ ಪ್ರಬಲ ಭಿನ್ನಾಭಿಪ್ರಾಯ ವಿದ್ದ ದೆಸೆಯಿಂದಲೇ ಶೇಷಾದ್ರಿ ಸಮಿತಿಯನ್ನು ರಚಿಸಲಾಯಿತೆಂದೂ ಈಗಲೂ ಬಹು ಸಂಖ್ಯಾತ ಜ

ಸಚಿವತ್ರಯರ ಪ್ರಕಟಣೆ

ಇದೇ ಗಂಜೇ ದಿನಾಂಕ ಮೈಸೂರಿನಲ್ಲಿ ಪ್ರಾರಂಭವಾಗಿರುವ ಶಾಸನಾಂಗದ ದಸರೆಯ ಅಧಿವೇಶನ ಕಾಲದಲ್ಲಿ ಮಂತ್ರಿಮಂಡಳದಲ್ಲಿರುವ ಭಿನ್ನಾಭಿಪ್ರಾಯವು ಸಂಯುಕ್ತ ಪ್ರಕಟಣೆಯೊಂದರ ಮೂಲಕ ಅತ್ಯಂತ ಸ್ಪಷ್ಟರೂಪದಲ್ಲಿ ವ್ಯಕ್ತವಾಯಿತು. ಮೇಲೆ ಉಲ್ಲೇಖಿಸಿದ ಮಂತ್ರಿತ್ರಯರ ಮತ್ತು ಶಾಸನಾಂಗದ ಕೆಲವು ಸದಸ್ಯರ ಸಹಿಯೊಡನೆ ಹೊರಬಿದ್ದಿರುವ ಈ ಹೇಳಿಕೆಯು ಶಾಸನಾಂಗದಲ್ಲಿ ತೀಕ್ಷ್ಣ ಚರ್ಚೆಯ ವಿಷಯವಾಯಿತು. ಪ್ರಕಟಣೆ ಹೀಗೆ ಹೇಳುತ್ತದೆ— "ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸಿದ ಆಯೋಗದ ಸೂಚನೆಗಳು ಹೈದರಾಬಾದು ಮತ್ತು ವಿದರ್ಭಗಳಿಗೆ ಏನು ನೀಡಲಾಗಿದೆಯೊ ಅದರಿಂದ ಮೈಸೂರನ್ನು ವಂಚಿತವಾಗಿ ಮಾಡಿವೆ. ಆಯೋಗದವರು ರೂಪಿಸಿರುವ ಭಾರತದ ಮುಂದಿನ ಭೂಪಟದಲ್ಲಿ ಮೈಸೂರಿಗಿಂತ ಸೂರಂಬ ಹೆಸರ
ಕ್ಕೂ ಆಯೋಗ
ತ ವಿಸ್ತಾರವಾ
ಲ್ಲಿ ಅದನ್ನು ಸ
ಇಂಥ ಪರಿಸ್ಥಿತಿ
ಮತ್ತು ಅಭ್ಯುದ
ದು ನಿಶ್ಚಯ; ಒ
ಟ್ಟಿಗೆ ಸೂಚನೆ
ಘಾತಕವಾಗಿವೆ
(ಎನೇ

ಗಳು, ಕೊಳ್ಳೆಗಾಲ, ಕೊಡಗು ಮತ್ತು ದಕ್ಷಿಣ ಕನ್ನಡವನ್ನೊಳಗೊಂಡ ಮೈಸೂರು ಎಂದು ರಾಜ್ಯವಾಗಲಿ; ಮೈಸೂರಿನಲ್ಲಿರುತ್ತಿರುವ ಕನ್ನಡ ಪ್ರದೇಶಗಳನ್ನೆಲ್ಲ ಒಟ್ಟು ಸೇರಿಸಿ ಕರ್ನಾಟಕವೆಂಬ ಹೆಸರಿನ ಇನ್ನೊಂದು ರಾಜ್ಯವಾಗಲಿ! ಇವೆರಡು ರಾಜ್ಯಗಳು ಜನಸಂಖ್ಯೆಯಲ್ಲಾಗಲೀ ವಿಸ್ತಾರದಲ್ಲಾಗಲೀ ಪ್ರದೇಶಗಳ ಆರ್ಥಿಕ ಹೊಂದಿಕೆಯಲ್ಲಾಗಲೀ ಸಮಾನ ಸ್ವರೂಪವನ್ನು ತಾಳುತ್ತವೆ. ಇವುಗಳು ತಮ್ಮೊಳಗೂ ರಾಜ್ಯಗಳಿಗೆ ಶಾಂತಿಯನ್ನೂ ಉತ್ಕರ್ಷವನ್ನೂ ಸಂತೋಷವನ್ನೂ ತರುತ್ತವೆ; ಮತ್ತು ಭಾರತದ ಶಕ್ತಿಯನ್ನು ಹೆಚ್ಚಿಸುವ ಸಾಧನಗಳಾಗುತ್ತವೆ."

ಚಳವಳಿಯ ಬಲಾಬಲ

ಮೊದಲೇ ವಿಭಾಜಿತವಾಗಿರುವ ಬಳ್ಳಾರಿ ಜಿಲ್ಲೆಯನ್ನು ಸುನಃ ತುಂಡರಿಸುವುದಕ್ಕೆ ಈ ಮಂತ್ರಿಗಳ ವಿರೋಧವನ್ನು ತೋರಿಸಿದ್ದಾರೆ; ಆದರೆ, ಈ ಕಡೆಗೆ ಇತರ ಮಾತಿರಲಿ, ಸ್ವತಃ ಬಳ್ಳಾರಿ ಜನತೆಯ ಗಮನವೂ ಸಾಕಷ್ಟು ಹೋಗಿಲ್ಲ. ಎರಡೂ "ಎರಡು ಕರ್ನಾಟಕ"ಗಳ ಪ್ರತಿವಾದನೆಯ ಕುರಿತಾಗಿಯೇ ಲಕ್ಷ್ಯವನ್ನು ಹೂರೈಸುತ್ತಿದ್ದಾರೆ; ಈ ಆಂದೋಲನದ ಪರಿಣಾಮವೇನಾಗುವುದೋ ಎಂದು ಶಂಕಿಸುತ್ತಿದ್ದಾರೆ. ಎರಡು ಕರ್ನಾಟಕಗಳರಚನೆಯನ್ನು ವಿರೋಧಿಸಿ, ಸಂಯುಕ್ತ ಕರ್ನಾಟಕ ರಾಜ್ಯದ ತತ್ವವನ್ನು ಎತ್ತಿ ಹಿಡಿಯುವ ವಿಷಯದಲ್ಲಿ ಮೈಸೂರಿನೊಳಗೆ ಜನಾಭಿಪ್ರಾಯವನ್ನು ಸಂಘಟಿಸುವ ಕೆಲಸ ಸಾಕಷ್ಟು ತತ್ಪರತೆಯಿಂದ ನಡೆದಿರುವಂತೆ ತೋಂಡು ಬರುತ್ತಿಲ್ಲ. ಆದರೆ, ಶೇಷಾದ್ರಿ ಸಮಿತಿಯ ವರದಿಯನ್ನು ಚರ್ಚಿಸಿದ ಕಾಲದಲ್ಲಿ ಏಕೀಕರಣಕ್ಕೆ ಬೆಂಬಲ ಕೊಟ್ಟ ಬಹು ಸಂಖ್ಯಾಕ ಸದಸ್ಯರು ಆಯೋಗದ ಸೂಚನೆಗಳಿಗೆ ಸಹ ಬೆಂಬಲ ನೀಡಬಹುದೆಂದು ಏಕೀಕರಣವಾದಿಗಳ ವಿಶ್ವಾಸವಿದಲ್ಲದೆ, ಮೈಸೂರಿನ ಅಭಿಪ್ರಾಯಕ್ಕಿಂತ ಗಳನ್ನು ನಡೆಸುವ ವಿಚಾರವನ್ನು ಇಟ್ಟುಕೊಂಡಿರುವುದರಿಂದ, ಸದ್ಯ ಅಧಿಕಾರಾರೂಢವಾಗಿರುವ ಹಾಗು ರಾಷ್ಟ್ರದಲ್ಲಿ ಅತ್ಯಂತ ಪ್ರಬಲ ಹಾಗು ಸುಸಂಘಟಿತ ಪಕ್ಷವಾಗಿರುವ ಕಾಂಗ್ರೆಸ್ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ತೀವ್ರ ಸಮಾಲೋಚನೆಗಳನ್ನು ಈಗಾಗಲೇ ತೊಡಗಿರುತ್ತದೆ. ಕೇಂದ್ರ ಚುನಾವಣಾ ಸಮಿತಿಯೊಂದನ್ನು ಆದು ಕೆಲವು ವಾರಗಳ ಹಿಂದೆಯೇ ರಚಿಸಿಕೊಂಡಿತ್ತು; ಇದೀಗ ಮೊನ್ನೆ ೧೨-೧೪ ರಂದು ಜರಗಿದ ಕಾಂಗ್ರೆಸು ಕಾರ್ಯಕಾರಿ ಸಮಿತಿಯು ಕಾಂಗ್ರೆಸು ಪಕ್ಷದ ತಿಕೇಟನ್ನು ಪಡೆದು ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರಲ್ಲಿ ಯಾವ್ಯಾವ ಯೋಗ್ಯತೆಗಳಿರಬೇಕೆಂಬುದನ್ನು ಅಷ್ಟ ಸೂತ್ರಗಳ ಮೂಲಕ ನಿರ್ದೇಶಿಸಿರುತ್ತದೆ.

ಮನೋಭಾವದ ಪರಿಗಣನೆ

ಸಮಾಜವಾದಿ ಮಾದರಿಯ ಸಮಾಜವನ್ನು ರಚಿಸುವುದೇ ಕಾಂಗ್ರೆಸಿನ ಉದ್ದೇಶವಾಗಿರುವುದರಿಂದ, ಈ ಪಕ್ಷದ ಪರವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವವರ ಮನೋಭಾವವು ಈ ಧ್ಯೇಯ ಸಾಧನೆಗೆ ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎಂಬುದನ್ನು ಪರಿಗಣಿಸಬೇಕೆಂದು ಚುನಾವಣಾ ಸಮಿತಿ ತಿಳಿಸಿದೆ. ಅಸ್ಪೃಶ್ಯತೆಯ ಉಚ್ಚಾಟನೆ, ಭೂಸುಧಾರಣೆ, ಆರ್ಥಿಕ ಸಮತೆ, ಶ್ರಮಜೀವಿಗಳ ಕಲ್ಯಾಣ ಇತ್ಯಾದಿಗಳ ಕುರಿತು ಉಮೇದುವಾರನ ನಿಲುವುಗಳು ಎಷ್ಟರ ಮಟ್ಟಿಗೆ ಅನುಕೂಲವಾಗಿವೆ ಎಂಬುದಕ್ಕೆ ಮತದಾರರೊಡನೆ ಸಂಪರ್ಕ

ಈಗಾಗಲೇ ಜನರ ಪ್ರತಿನಿಧಿಯಾಗಿದ್ದರೆ, ಅಂಥ ಉಮೇದುವಾರನು ತನ್ನ ಮತದಾರ ಕ್ಷೇತ್ರದೊಡನೆ ಗಾಢವಾದ ಸಂಬಂಧವನ್ನು ಇಟ್ಟುಕೊಂಡಿರುವನೆ, ಅಲ್ಲಿಯ ಕ್ಷೇಮಾಭ್ಯುದಯಕ್ಕಾಗಿ ಕೆಲಸ ಮಾಡಿ, ಜನರ ಪ್ರೀತಿ ಸಂಪಾದಿಸಿರುವನೆ ಎಂಬುದನ್ನು ವಿಚಾರಿಸಬೇಕೆಂದು ಸಮಿತಿ ತೀರ್ಮಾನಿಸಿದೆ. ಹರಿಯಾಳ್ತನಕ್ಕಾಗಿ ಅರ್ಜಿ ಹಾಕಿದವರಿಗೆ ಸಂಪತ್ತಿನ ಸದಸ್ಯತ್ವ, ಶಾಸನಾಂಗದ ಸದಸ್ಯತ್ವ, ಸ್ಥಳೀಯ ಸಂಸ್ಥೆಗಳ ಸದಸ್ಯತ್ವ ಇತ್ಯಾದಿ ಪ್ರಾತಿನಿಧಿಕ ಸ್ವರೂಪದ ಕೆಲಸ ನಿರ್ವಹಿಸಿ ಅನುಭವ ವಿದೆಯೆ, ಇದ್ದರೆ ಈ ಅನುಭವ ಎಷ್ಟರ ಮಟ್ಟಿಗೆ ಮಧುರವಾಗಿದೆ ಎಂಬುದನ್ನು ಗಮನಿಸಬೇಕಾಗಿ ಸಮಿತಿ ನಿರ್ಣಯಿಸಿದೆ. ಹರಿಯಾಳು ಹಿಂದೆ ನಡೆಸಿದ ಕೆಲಸಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂದೂ ಅದರ ಅಭಿಪ್ರಾಯವಾಗಿದೆ

ಪಕ್ಷನಿಷ್ಠೆಯ ಒರೆಗಲ್ಲು

ಉಮೇದುವಾರನು ಪಕ್ಷಕ್ಕೆ ನಿಷ್ಠೆಯನ್ನು ತೋರಿಸುತ್ತಿರುವನೊ ಎಂಬುದು ಸಹ ಮುಖ್ಯವಾದ ವಿಷಯ. ಕಟ್ಟುನಿಟ್ಟಾಗಿ ಶಿಸ್ತಿನ ಪಾಲನೆ ಮಾಡುವವನನ್ನೆ ಹರಿಯಾಳಾಗಿ ಆರಿಸಬೇಕೆಂದು ಸಮಿತಿ ನಿಶ್ಚಯಿಸಿದೆ. ಆತನು ಕ್ರಿಯಾಶೀಲ ಸದಸ್ಯನಾಗಿರಬೇಕೆಂದೂ ಪಕ್ಷಕ್ಕೆ ಸಲ್ಲಿಸಬೇಕಾದ ವಂತಿಗೆ ಹಣವನ್ನು ಕ್ರಮ ಪ್ರಕಾರ ಕೊಡುತ್ತಿರುವವನಾಗಿರಬೇಕೆಂದೂ ಅದು ಎಚ್ಚರಿಕೆಯನ್ನು ಕೊಟ್ಟಿದೆ. ಹರಿಯಾಳಾಗಿ ನಿಲ್ಲುವವರು ಮಾತ್ರ ಮೇಲಿನ ವಿಷಯಗಳನ್ನು ಗಮನಿಸಬೇಕೆಂದು ಅಥವಾ ಯಾವುದೇ ವಿಧಾಯಕ ಕಾರ್ಯ ನಡೆಸುವ ಸಂಘದ ಚಟುವಟಿಕೆಗಳಲ್ಲಿ ಉಮೇದುವಾರನು ಶ್ರದ್ಧೆಯಿಂದ ಭಾಗ ವಹಿಸಿರುವನೇ ಎಂಬುದು ಸಹ ವಿಚಾರಿಸಲ್ಪಡಬೇಕೆಂದು ಸಮಿತಿ ಹೇಳಿದೆ.

ಅಯ್ಕೆಯ ಕ್ರಮ

ಕಾಂಗ್ರೆಸಿನ ಆಯ್ಕೆಯ ಕ್ರಮವು ಜನತೆಯ ಅಭಿಪ್ರಾಯವು ಸ್ಪಷ್ಟ ರೀತಿಯಲ್ಲಿ ವ್ಯಕ್ತಗೊಳ್ಳುವುದಕ್ಕೆ ಪೋಷಕವಾಗಿದೆ; ನಾಮಪತ್ರ ಸಲ್ಲಿಸುವ ದಿನದ ಆರು ತಿಂಗಳ ಮೊದಲೇ ಪ್ರದೇಶ ಕಾಂಗ್ರೆಸು ಸಮಿತಿಯು ಜಿಲ್ಲೆಯ ಕಾಂಗ್ರೆಸು ಸಮಿತಿಗಳಿಂದ ಆಯಾ ಜಿಲ್ಲೆಯ ಮತದಾರ ಕ್ಷೇತ್ರಗಳಲ್ಲಿ ನಿಲ್ಲಿಸಬೇಕಾದ ಉಮೇದುವಾರರ ಬಗ್ಗೆ ಸಲಹೆಗಳನ್ನು ಕೇಳಲಿದೆ. ಮುಂದೆ ಕೇಂದ್ರ ಚುನಾವಣಾ ಸಮಿತಿಯು ಒಬ್ಬ ಪ್ರತಿನಿಧಿಯೊಡನೆ ತನ್ನ ಕೇವು ಪ್ರತಿನಿಧಿಗಳನ್ನು ಸೇರಿಸಿ, ಈ ಸಂಯುಕ್ತ ಮಂಡಳವನ್ನು ಪ್ರತಿಯೊಂದು ಜಿಲ್ಲಾ ಕೇಂದ್ರಕ್ಕೆ ಕಳಿಸಿ, ಅಲ್ಲಿಯ ಸ್ಥಳೀಯ ಅಭಿಪ್ರಾಯವನ್ನು ಕೇಳಿಕೊಳ್ಳಲಿದೆ. ಕಾಂಗ್ರೆಸಿನ ಅಭ್ಯುದಯದಲ್ಲಿ ಆಸ್ಥೆಯುಳ್ಳವರು ಆಗ ಪ್ರತಿನಿಧಿ ಮಂಡಳಕ್ಕೆ ಯೋಗ್ಯ ಸೂಚನೆಗಳನ್ನು ಕೊಡಬಲ್ಲರು; ಸಾರ್ವಜನಿಕರು ಸಹ ಉತ್ತಮ ಮಾರ್ಗದರ್ಶನವನ್ನು ಈ ಸಂದರ್ಭದಲ್ಲಿ ನೂಡಬಲ್ಲರು.

ಹುರಿಯಾಳುಗಳ ಯಾದಿ

ಸ್ಥಳೀಯ ಅಭಿಪ್ರಾಯವನ್ನು ಗಮನಿಸಿದ ಬಳಿಕ, ಈ ಮಂಡಳವು ಪ್ರತಿಯೊಂದು ಮತದಾರ ಕ್ಷೇತ್ರಕ್ಕೆ ಸಂಬಂಧಿಸಿ, ಐದಕ್ಕಿಂತ ಹೆಚ್ಚಲ್ಲದ ಹುರಿಯಾಳುಗಳ ಯಾದಿಯೊಂದನ್ನು ಪ್ರದೇಶ ಕಾಂಗ್ರೆಸು ಸಮಿತಿಗೆ ಒಪ್ಪಿಸುತ್ತದೆ. ಈ ಯಾದಿಯೊಳಗಿಂದ ಪ್ರದೇಶ ಕಾಂಗ್ರೆಸು ಸಮಿತಿಯು ಪ್ರತಿಯೊಂದು ಮತದಾರ ಕ್ಷೇತ್ರಕ್ಕೆ ಯಾರು ಉಮೇದುವಾರನಾಗಬೇಕೆಂದು ಆಯ್ಕೆ ಮಾಡುತ್ತದೆ; ಮತ್ತು ತನ್ನ ಆಯ್ಕೆಯ ಕಾರಣಗಳನ್ನು ವಿವರವಾಗಿ ನಮೂದಿಸಿ ಕೇಂದ್ರ ಚುನಾವಣಾ ಸಮಿತಿಗೆ ಈ ಹೆಸರನ್ನು ಕಳಿಸುತ್ತದೆ. ಒಂದು ವೇಳೆ ಪ್ರದೇಶ ಕಾಂಗ್ರೆಸಿನ ಆಯ್ಕೆಯು ಒಪ್ಪತಕ್ಕದ್ದಲ್ಲವಾದರೆ, ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದವರ ಭಿನ್ನಾಭಿಪ್ರಾಯ

(ಅನೇ ಸುಟ ನೋಡಿರಿ)

ತಲೂ ಕೇಂದ್ರದ ಸಂಸತ್ತು ತಳೆಯುವ ನಿಲುವಿನೆಯೇ ಆಯೋಗದ ಸಿಫಾರಸುಗಳಿಗೆ ಕೊನೆಯ ರೂಪ ಕೊಡುವುದರಿಂದ ಈ ಭಿನ್ನಾಭಿಪ್ರಾಯಕ್ಕೆ ಮಹತ್ವ ಕೊಡದಿದ್ದರೂ ನಡೆದೀತೆಂದು ಏಕೀಕರಣವಾದಿಗಳು ನಂಬಿರುವ ಹಾಗೆ ಕಾಣುತ್ತದೆ.

ನಮ್ಮ ಹೊಸ ಯೋಜನೆ:

ಥ್ರಿಫ್ಟ್ ಡಿಪೋಜಿಟ್ ಖಾತೆ:

ಎಲ್ಲರಿಗೂ ಅನುಕೂಲವಾಗುವ ಉಳಿತಾಯ ಯೋಜನೆ.
ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿ.
ಧಾರಾಳವಾದ ಸೌಲತ್ತು.

ಇಂದೇ ಥ್ರಿಫ್ಟ್ ಡಿಪೊಸಿಟ್ ಖಾತೆಯನ್ನು ಪ್ರಾರಂಭಿಸಿ
ನಿಮ್ಮ ಉಳಿತಾಯದಲ್ಲಿ ಅಧಿಕ ಮುನಾಫೆಯನ್ನು ಪಡೆಯಿರಿ.

ನಮ್ಮ ಯಾವದೇ ಶಾಖೆಯಲ್ಲಿ ವಿಚಾರಿಸಿರಿ:

CANARA BANK LIMITED

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಆಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13.

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.

ತಾರೀಕನ ವರಗೆ ಮಾನ್ಯ ನೀರಿದ ಅಖಿಲ ಭಾರತ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು ಬರುವ ನವಂಬರದ ೮ ಮತ್ತು ೯ನೇ ದಿನಾಂಕಗಳಲ್ಲಿ ಆಮಿಲ ಭಾರತ ಕಾಂಗ್ರೆಸಿನ ಪೂರ್ಣಾಧಿವೇಶನವನ್ನು ನೆರೆಯಿಸಲು ತೀರ್ಮಾನಿಸಿದೆ. ಇಲ್ಲಿ ಫಜಲ ಅಲಿ ಆಯೋಗದ ವರದಿಯನ್ನು ಕೂಲಂಕಷವಾಗಿ ಚರ್ಚಿಸಿ, ಕಾಂಗ್ರೆಸು ಪಕ್ಷವು ತನ್ನ ನಿಲುಮೆಯನ್ನು ನಿರ್ಧರಿಸುತ್ತದೆ.

ಧುರೀಣರೊಡನೆ ಸಮಾಲೋಚನೆ

ಎಲ್ಲರಿಗೂ ಒಪ್ಪಿಗೆಯಾದ ನಿಶ್ಚಿತ ತೀರ್ಮಾನಗಳಿಗೆ ಬರಲಾಗುವಂತೆ ವಿವಿಧ ಪ್ರದೇಶ ಕಾಂಗ್ರೆಸುಗಳ ಅಧ್ಯಕ್ಷರನ್ನು ನವಂಬರದ ೭ನೇ ತಾರೀಕು ಕಾಂಗ್ರೆಸಾಧ್ಯಕ್ಷ ಶ್ರೀ ಧೇಬರರು ಕರೆಸಿಕೊಳ್ಳುವರೆಂದು ತಿಳಿದಿದೆ. ಇಲ್ಲಿ ನಡೆಯುವ ಸಮಾಲೋಚನೆಯೂ ಇದೇ ತಿಂಗಳ ೨೧ನೇ ತಾರೀಕು ವಿವಿಧ ರಾಜ್ಯಗಳ ಮುಖ್ಯ ಮಂತ್ರಿಗಳು ಹೊಸದೆಹಲಿಯಲ್ಲಿ ಸೇರಿ ನಡೆಸುವ ವಿಚಾರ ವಿನಿಮಯಗಳೂ ಕಾಂಗ್ರೆಸಿನ ಧೋರಣೆಗೆ ನಿಶ್ಚಿತ ರೂಪವನ್ನು ಕೊಡಲು ಸಹಾಯಕವಾಗ ಬಹುದೆಂದು ವಿಶ್ವಾಸ ಪಡಲಾಗಿದೆ.

ಸಾನಾನ್ಯ ಸ್ವಾಗತ

ಕಾರ್ಯಕಾರಿ ಸಮಿತಿಯು ಸಾಮಾನ್ಯವಾಗಿ ಆಯೋಗದ ಸೂಚನೆಗಳನ್ನು ಸ್ವಾಗತಿಸಿದೆ; ಸಾಧ್ಯವಾದಷ್ಟು ಮಟ್ಟಿಗೆ ಆಯೋಗದ ಶಿಫಾರಸುಗಳನ್ನು ಇದ್ದುದಿದ್ದಂತೆ ಅಂಗೀಕರಿಸಬೇಕೆಂದು ಅಲ್ಲಿ ಧುರೀಣರು ಅಭಿಪ್ರಾಯ ವ್ಯಕ್ತಪಡಿಸಿದರೆಂದು ವರದಿಯಾಗಿದೆ. ಇದಕ್ಕೆ ಎಲ್ಲರ ಅನುಮೋದನೆ ದೊರಿತ್ತಿಲ್ಲವೆಂದೂ ಕೆಲವು ವಿಶಿಷ್ಟ ವಿಷಯಗಳಲ್ಲಿ ಆಯೋಗದ ಸಲಹೆಗಳನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲವೆಂಬ ವಾದ ಮುಂದೆ ಬಂದಿರುವುದಾಗಿಯೂ ತಿಳಿದು ಬರುತ್ತದೆ.

ಕಾಂಗ್ರೆಸಿಗರ ಭಿನ್ನಾಭಿಪ್ರಾಯ

ಪುನರ್ಘಟಿತ ರಾಜ್ಯಗಳ ಮೇರೆಯನ್ನು ನಿರ್ಧರಿಸುವುದು ಕಾಂಗ್ರೆಸಿಗೆ ನುಂಗಲಾರದ ತುಕ್ಕಾಗಿದೆ-ಏಕೆಂದರೆ ಭಾಷೆಯು ತಳಹದಿಯ ಮೇಲೆ ರಚಿಸಲ್ಪಟ್ಟಿರುವ ವಿವಿಧ ಪ್ರದೇಶ ಕಾಂಗ್ರೆಸುಗಳು ಗಡಿವಲಯದ ಮೇಲೆ ತಮ್ಮ ಅಧಿಕಾರವೇ ನ್ಯಾಯಬದ್ಧವಾದುದೆಂದು ವಾದಿಸುತ್ತಿವೆ. ಪ್ರದೇಶ ಕಾಂಗ್ರೆಸುಗಳ ನಿಲುಮೆಗೆ ಕೆಲಮಟ್ಟಿಗೆ ಸಂಬಂಧಿಸಿದ ರಾಜ್ಯಗಳ ಮುಖ್ಯ ಮಂತ್ರಿ ಮತ್ತು ಸರಕಾರಿ ವಲಯದ ಬೆಂಬಲವೂ ಸಿಗುತ್ತಿದೆ. ಹೀಗೆ ಕಾಂಗ್ರೆಸಿಗರೇ ಜಗಳಾಡುವ ಪರಿಸ್ಥಿತಿ ಏರ್ಪಟ್ಟಿದೆ ಎಂದು ಸಾಮಾನ್ಯವಾಗಿ ಹೇಳಬಹುದು.

ಮೈಸೂರಿನ ಸಹಕಾರವಿಲ್ಲ.

ಕರ್ನಾಟಕದ ಮಟ್ಟಿಗೆ ಬಹಳ ಕಠಿಣ ಪರಿಸ್ಥಿತಿಯೊದನ್ನೂ ನಿಜ. ಆದರೆ ಮೈಸೂರಿನ ಹೆಸರನ್ನು ಉಳಿಸಗೊಡದಷ್ಟು ಮುಂದಕ್ಕೆ ಆಯೋಗ ಹೋಗಿರುವುದಕ್ಕೆ ತಮ್ಮ ಅಸಮಾಧಾನವನ್ನು ಸೂಚಿಸಲು ಅವರು ಸಂಕೋಚಪಟ್ಟಿಲ್ಲ. ಇದು ಭಿನ್ನಾಭಿಪ್ರಾಯ ಹೊಂದಿರುವ ಗುಂಪಿನ ಬಲ ಹೆಚ್ಚಲು ನೆರವಾಗಬಹುದು. ಈ ಭಿನ್ನಾಭಿಪ್ರಾಯವಿರುವ ದೆಸೆಯಿಂದಲೇ ಮೈಸೂರು ಸರಕಾರ ಯಾವ ಸಮರ್ಥವಾದವನ್ನೂ ಮುಂದಿ ಇಡುವ ಸ್ಥಿತಿಯಲ್ಲಿಲ್ಲವೆಂಬುದು ಸ್ಪಷ್ಟ.

ಸಮ್ಮಸಾಚಿತ್ವದ ಅಗತ್ಯ

ಶ್ರೀ ಅಂಬಲಿಯವರು ಅಧ್ಯಕ್ಷರಾಗಿರುವ ಕರ್ನಾಟಕ ಪ್ರದೇಶ ಕಾಂಗ್ರೆಸು ಈಗ ಸಮ್ಮಸಾಚಿತ್ವವನ್ನೆ ತೋರಿಸಬೇಕಾಗಿದೆ—ಎಂದರೆ ಯಾವುದೇ ಸರಕಾರದ ಬೆಂಬಲವಿಲ್ಲದೆ ಅವರು ಮಂತಾರನ್ನು, ತೆಲುಗರನ್ನು, ತಮಿಳರನ್ನು ಮತ್ತು ಕೇರಳೀಯರನ್ನು ಎದುರಿಸಬೇಕಾಗಿದೆ. ಮಂತಾರರು ಬೆಳಗಾಂವಿ, ನಿಪ್ಪಾಣಿಗಳ ನೇಲಷ್ಟೇಯಲ್ಲ, ಕಾರವಾರದ ಮೇಲೆ ಸಹ ತಮ್ಮ ಅಧಿಕಾರವಿದೆ ಎಂದಿದ್ದಾರೆ; ಆಂಧ್ರದ ಬಾಯಿಗೆ ಬಳ್ಳಾರಿ ಆಹುತಿಯಾಗಿ ಬಿದ್ದಿದೆ; ತಮಿಳರ ಪಾಲಿಗೆ ನೀಲಗಿರಿ ಜಿಲ್ಲೆಯಂಥ ಪ್ರದೇಶ ಹೋಗಿದೆ; ಕೇರಳೀಯರು ಕಾಸರಗೋಡನ್ನು ನುಂಗುತ್ತಿದ್ದಾರೆ; ಈ ಪರಿಸ್ಥಿತಿಯನ್ನು ಸುಧಾರಿಸಲೆಂದು ಕರ್ನಾಟಕ ಪ್ರದೇಶ ಕಾಂಗ್ರೆಸು, ಉಳಿದ ಪ್ರದೇಶಗಳ ಕಾಂಗ್ರೆಸಿನೊಡನೆ ವೈರ ಕಟ್ಟಿಕೊಳ್ಳಬಲ್ಲುದೆ? ಹಾಗೆ ಮಾಡಲು ವರಿಷ್ಠರು ಸಮ್ಮತಿಸಿಯಾರೆ?

ಎಚ್ಚರಿಸುವ ಗೊತ್ತುವಳಿ

ಇಲ್ಲವೆಂದು ಈಗ ತೀರ ಚಿನ್ನಾಗಿ ತಿಳಿಯಿಲ್ಲ; ಆದರೆ "ಚಳವಳಿ" ನಡೆಸಲು ತಾನು ಬಿಡುವಂತಿಲ್ಲ" ಎಂದು ಗೊತ್ತುವಳಿಯೊಂದರ ಮೂಲಕ ಸಾರಿರುತ್ತದೆ ಶಿಫಾರಸುಗಳನ್ನು ಸಮಗ್ರ ದೃಷ್ಟಿಕೋಣದಿಂದ ವಿಚಾರಿಸಿಯೇ ತೀರ್ಮಾನಕ್ಕೆ ಬರಬೇಕು ಎಂದು ತಿಳಿಸಿರು

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸಾಂಡಲ್ ವುಡ್ ಆಯಿಲ್

ಫಜಲ ಅಲಿ ಆಯೋಗ

ಕೈಪಲಾನಿಯವರ ಪ್ರತಿಕ್ರಿ

ಪ್ರಜಾಸಮಾಜವಾದಿ ಪಕ್ಷದ ಧುರೀಣ ಆಚಾರ್ಯ ಕೈಪಲಾನಿಯವರು ಮದ್ರಾಸಿನಲ್ಲಿ ಪತ್ರಿಕೋದ್ಯೋಗಿಗಳ ಪ್ರಶ್ನೆಗೆ ಉತ್ತರಿಸುತ್ತಾ ಫಜಲ ಅಲಿ ಆಯೋಗದ ವರದಿಯ ಕುರಿತು ತಮ್ಮ ಸವಿಸ್ತಾರವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ವಿನೋದಕ್ಕಾಗಿ ಅವರು ಈ ಸೂಚನೆಗಳಂದಾಗಿ "ಭಾರತದ ಯಾವುದೇ ಭಾಗವು ಭಾರತದ ಹೊರಗಡೆ ಸೇರಿಸಲ್ಪಟ್ಟಿಲ್ಲ"! ಎಂದು ಹೇಳಿದರೂ ಆಯೋಗವು ಅತ್ಯುತ್ತಮವಾದ ಕೆಲಸವನ್ನು ಮಾಡಿದೆ ಎಂದು ತೃಪ್ತಿಯನ್ನು ಸೂಚಿಸಿದರು.

ಬೇರೆ ಬೇರೆ ಭಾಷಾನುಗುಣ ಪ್ರದೇಶಗಳವ್ಯಪರಸ್ಪರ ಸಂಗತವಲ್ಲದ ಭಿನ್ನ ಭಿನ್ನ ಬೇಡಿಕೆಗಳನ್ನು ತೃಪ್ತಿಪಡಿಸುವುದು ಸಾಧ್ಯವೇ ಇಲ್ಲ ಎನ್ನುತ್ತಾ ಆಚಾರ್ಯ ಕೈಪಲಾನಿಯವರು ಯಾವುದೇ ಆಯೋಗವು ಇದಕ್ಕಿಂತ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ನಡೆಸುವಂತಿರಲಿಲ್ಲ ಎಂದರು.

ತಮ್ಮದೇ ಆದ ವಿಶಿಷ್ಟ ಭಾಷೆಯುಳ್ಳ ಬೇರೆ ಬೇರೆ ಪ್ರದೇಶಗಳು ಅಡಳಿತ ಕ್ಷೇತ್ರದಲ್ಲಿ ಒಟ್ಟಿಗೆ ಕೆಲಸ ಮಾಡಬಲ್ಲವೆ ಎಂಬ ಪ್ರಶ್ನೆಗೆ ಆಚಾರ್ಯ ಕೃಪಲಾನಿ

ಯವರು
ರಜನೆಯನ್ನು
ಕಾರಣ ಕಾಶ
ನದ ಭೂಪ
ವದೇ ಬಗೆಯ
ಸಮಸ್ಯೆಯಿಲ್ಲ
ನರ್ಘಟಿಸುವ
ಎಂದು ಸಾರಿ

ಭಾಷಾನು
ವಿಂಗಡಿಸುವು
ಲಿ ದುಷ್ಪರಿಣಾ
ಪ್ರಶ್ನೆಗೆ "ನನ
ಐಕ್ಯದ ವಿಷಯ
ವಿನೆ; ಭಿನ್ನಾ
ವೆ, ಮತ್ತು ಆ
ಪದ್ಧವೆ" ಎಂ
ರತದ ಒಗ್ಗಟ್ಟಿ
ಲ್ಲಿಯ ಸಂಸ್ಥೆ
ಯು ಒಂದೇ
ರಿಂದ ಅದು
ಒಂದೇ ತೆಂ
ಹೇಳಿದರು.

ವಿದೇಶಗಳ
ಡುತ್ತಾ ಅವ
ಐದು ಮತ್ತು
ಭಾಷೆಗಳನ್ನಾ
ಭಾಷಾ ದೇಶ
ಳ ಸಾಮಾನ್ಯ
ತಂಕವಾಗಿಲ್ಲ.
ಸಿದರು.

ಚಂದಾದ

ನವಯು
ನುನಿಯೊತ
ಸೋಸ್ವಲ್
ಳುಹಿಸಿರಿ,
ಎಂಡ್ ಬ್ಯಾ
ಯಾನದೇ
ಗೆದ ಖಾತೆಗೆ

ರಾಷ್ಟ್ರಾಧ್ಯಕ್ಷ ಡಾ। ರಾಜೇಂದ್ರ ಪ್ರಸಾದರು ಈಚೆಗೆ ಪ್ರಧಾನಿ ನೆಹರುಗಳು ಲೋಕ ಶಾಂತಿಯ ಸಾಧನೆಗಾಗಿಯೂ ಭಾರತದ ಸಾರ್ವಾಂಗಿಕ ಏಳಿಗೆಗಾಗಿಯೂ ಅವಿಶ್ರಾಂತವಾಗಿ ಪರಿಶ್ರಮಿಸಿದುದಕ್ಕೆ ಮೆಚ್ಚಿಕೆಯನ್ನು ಸೂಚಿಸಿ, ಅತ್ಯುಜ್ಜ್ವ ಪ್ರಶಸ್ತಿಯಾದ "ಭಾರತ ರತ್ನ" ಪದಕವನ್ನು ದಯಪಾಲಿಸಿದರು. ಜವಾಹರನೆಂಬ ಹೆಸರಿನಿಂದಲೇ ರತ್ನದ ನೆನಪನ್ನು ತಂದು ಕೊಡುವ ಪ್ರಧಾನಿಗಳ ಮುಖಕಮಲವು ಈ ಗೌರವಶ್ರೀಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಅಭಿಮಾನದಿಂದ ಅರಳಿಕೊಂಡಿರುವುದನ್ನು ಚಿತ್ರ ತೋರಿಸುತ್ತದೆ.

ರಾಜಸ್ಥಾನದ ಸರ್ವಾರೆ ಶಹರಿನಲ್ಲಿ ಈಚೆಗೆ ಗ್ರಾಮ ಜ್ಯೋತಿ ಕೇಂದ್ರ ಎಂಬ ಸಂ
ಯನ್ನು ರಾಷ್ಟ್ರಾಧ್ಯಕ್ಷರು ಉದ್ಘಾಟಿಸಿದರು. ಈ ಕೇಂದ್ರದಲ್ಲಿ ಕುಲಕಸುಬುಗಳಲ್ಲಿಯೂ ಹಸ
ನೈಪುಣ್ಯದ.. ವೃತ್ತಿಗಳಲ್ಲಿಯೂ ವಾರಂಗೆತರಾಗುವಂತೆ ಜೀನ್ನಾದ ಶಿಕ್ಷಣ ನೀಡಲ್ಪಡುತ್ತದೆ
ಭಾರತದಲ್ಲಿ ಮೂಲೋದ್ಯೋಗಗಳ ಬೆಳವಣಿಗೆಯು ಎಷ್ಟು ಅವಶ್ಯಕವಾಗಿದೆಯೋ ಸಾಂಪ್ರ
ದಾಯಿಕವಾದ ಮತ್ತು ಸಾಂಸ್ಕೃತಿಕ ಮಹತ್ವದಿಂದ ಕೂಡಿದ ಪ್ರಾಚೀನ ವೃತ್ತಿಗಳಿಗೆ ಪ್ರೋತ್ಸಾಹ
ವನ್ನು ಕೊಡುವುದೂ ಆಗತ್ಯವಾಗಿದೆ. ರಾಷ್ಟ್ರಾಧ್ಯಕ್ಷರು ಹಳ್ಳಿಗಳಲ್ಲಿ ಪ್ರಕಾಶವನ್ನು ಚೆಲ್ಲುವ ಈ
ಮಾದರಿ ಕೇಂದ್ರದ ಪರಿಶೀಲನೆ ನಡೆಸಿ ತೃಪ್ತಿ ಸೂಚಿಸುತ್ತಿರುವುದನ್ನು ಚಿತ್ರದಲ್ಲಿ ಕಾಣುತ್ತೇವೆ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಸಾವಿಗೆ ಮುಂಚೆ ಸಮಾಧಿ—

ಬರೆದವರು: ಧನ್ವಂತ. ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ೨. ಬೆಲೆ: ರೂ. ೨—೦—೦.

ಇಂಗ್ಲಿಷಿನಲ್ಲಿ ಎಡ್ಗರ್ ಎಲೆನ್ ಪೋನ ಕತೆಗಳು ರೋಮಾಂಚಕ ಸಾಹಿತ್ಯಕ್ಕೊಂದು ಮಾದರಿಯಾಗಿವೆ. ಕಳೆದ ಶತಮಾನದಲ್ಲಿಲ್ಲಿ ಆಗಿಹೋದ ಈ ಪಾಶ್ಚಾತ್ಯ ಸಾಹಿತಿಯ ಹದಿನೈದು ಕತೆಗಳನ್ನು ಶ್ರೀ ಧನ್ವಂತರು ಇಲ್ಲಿ ಕನ್ನಡಿಸಿದ್ದಾರೆ. ಕತೆಗಳಲ್ಲಿ ಹೆಚ್ಚಾಗಿ ಅದ್ಭುತ ಮತ್ತು ವಿಸ್ಮಯಕರ ವೃತ್ತಾಂತಗಳೇ ಕಂಡುಬರುತ್ತವೆ. ಒಗ್ಗಟೊಂದನ್ನು ಜುರುಕಾಗಿ ಬಿಡಿಸಿದ ಮಾದರಿಯಲ್ಲಿ ಹೆಚ್ಚಿನ ಕತೆಗಳಿವೆ ಎನ್ನಬಹುದು. ಲಾಲಿತ್ಯ ಮತ್ತು ಸರಸತೆಗೆ ಈ ಕತೆಗಳಲ್ಲಿ ಅವಕಾಶ ದೊರೆತಿಲ್ಲ—ಆದರೆ ಇವುಗಳು ಪುಸುಷ್ಯ ಕೃತಪ್ರಮಾದಗಳ ನಾನಾಮುಖಗಳನ್ನು ರಮ್ಯವಾಗಿ ಚಿತ್ರಿಸುತ್ತವೆ ಎಂಬುದೇನೂ ಸುಳ್ಳಲ್ಲ. ಹಾಗೆ ನಿರೂಪಿಸುವಾಗ ಗೂಢಸತ್ಯವೊಂದನ್ನು ನಿಧಾನವಾಗಿ ಮಂದಟ್ಟು ಪಡಿಸುವುದಕ್ಕೆ ಲೇಖಕರು ಸಮರ್ಥರಾಗುತ್ತಾರೆ ಎಂಬುದೂ ಹೊಳೆಯದಿರದು. ಕನ್ನಡದ ಸಣ್ಣಕತೆಗಳ ಕ್ಷೇತ್ರದಲ್ಲಿ ಇಷ್ಟರ ವರೆಗೆ ಸಾಕಷ್ಟು ಪೆಚ್ಚಾಗಿ ಅರಳಿರುವ ಪುಷ್ಪಗಳ ಒಗೆ

ಲಘು ಪರಿಚಯ

ಮಡಿಕೇರಿಯಿಂದ ಶ್ರೀ ಬಿ. ಎಸ್. ಗೋಪಾಲಕೃಷ್ಣ ಇವರ ಸಂಪಾದಕತ್ವದಲ್ಲಿ ಕನ್ನಡ "ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಗತಿಯನ್ನೆ ಮುಖ್ಯ ಗುರಿಯಾಗಿಟ್ಟುಕೊಂಡ" ಕೊಡಗಿನ ಪ್ರಥಮ ಮಾಸಪತ್ರಿಕೆ "ನಂದಾದೀಪ" ಇದೇ ಆಕ್ಟೋಬರದಲ್ಲಿ ಬೆಳಗಿದೆ. ಪತ್ರಿಕೆಗೆ ಸ್ವಾಗತಕೋರಿ, ಒಳ್ಳೆಯ ಮಟ್ಟವನ್ನು ಉದ್ಯಮ ಶೀಲತೆಬುಲ್ಲಿ ಪ್ರದರ್ಶಿಸಿ, ಅದು ಬೆಳೆದು ಬಾಳಲೆಂದು ಹಾರೈಸುತ್ತೇವೆ.

ಜೈನ ಕೇಶದ ದಿವ್ಯಧಾಮದಲ್ಲಿ ಸ್ವಾಮಿ ಶಿವಾನಂದರ ಆಶ್ರಮದಿಂದ ಪ್ರಕಟವಾಗುವ "ದಿವ್ಯ ಜೀವನ" "THE DIVINE LIFE" ಎಂಬ ಮಾಸಪತ್ರಿಕೆಯ ಸಪ್ತಂಬರ ತಿಂಗಳ ಸಂಚಿಕೆಯು ಸ್ವಾಮೀಜಿಯ ೬೯ನೇ ಜನ್ಮದಿನ ಸಂಚಿಕೆಯಾಗಿ ಪ್ರಕಟವಾಗಿದೆ. ಇದರಲ್ಲಿ ಶಿವಾನಂದರ ಆಧ್ಯಾತ್ಮಿಕ ಪ್ರತಿಭೆ ಅವರ ಜೀವನಾದರ್ಶ ಇತ್ಯಾದಿಗಳ ಮೇಲೆ ಬೆಳಕು ಬೀರುವ ಅವರ ಭಕ್ತವೃಂದದ ಹಲವಾರು ಲೇಖನಗಳನ್ನು ಕಾಣುತ್ತೇವೆ.

ಧಾರವಾಡ ಜಿಲ್ಲಾ ಸರ್ವೋದಯ ಯೋ
ಜನೆ, ಅರನಟಗಿ ಇವರು ೧—೪—೧೯೫೫ ರಿಂದ ೩೧—೩—೧೯೫೫ ವರೆಗಿನ ತಮ್ಮ ಚ
ಟುವಟಿಕೆಯ ಆರನೇ ವರ್ಷಕ್ಕೆ ಸಂಬಂಧಿಸಿ
ಪ್ರಕಟಿಸಿರುವ ವರದಿಯು ಸರ್ವೋದಯದ
ಆದರ್ಶ ಸಾಧನೆಯಲ್ಲಿ ಗಣ್ಯ ಪ್ರಗತಿಯನ್ನ
ಕಾರ್ಯಕರ್ತರು ಸಾಧಿಸಿರುವರೆಂದು ತೋರಿ
ಸಿ ಕೊಡುತ್ತದೆ. ಗ್ರಾಮ ಜೀವನವನ್ನು ಸು
ಕರವಾಗಿ ಮಾಡುವ ಹಲವಾರು ವಿಧಾಯಕ
ರಂಗಗಳಲ್ಲಿ ನಿಷ್ಠೆಯಿಂದ ದುಡಿದಿರುವುದ
ವಿವರಗಳು ತುಂಬ ಸವಾಧಾನಕರವಾಗಿವೆ
ಸರ್ವೋದಯ ಸಮಿತಿಗೆ ಇತೋಪ್ಯತಿಶಯ
ವಾದ ಶ್ರೇಯಸ್ಸನ್ನು ಕೋರುತ್ತೇವೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಫಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್**, ಎಲ್. ಐ. ಎಮ್.

"Ably written—Quite up-to-date valuable service"
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳಿಗೆ, ಹೆಂಗಸರಿಗೆ, ಗರ್ಭಿಣಿಯರಿಗೆ, ಇತರ ಎಲ್ಲಾ ಸಾಮಾನ್ಯ ಕಾಫಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಚ್ಚಿನ ವಿಚಾರ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನ
ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವ
ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ,
ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು" ದಿ। ಕಿಲ್ಲೆಯವರ
ಒಲಿದಿದ್ದ.. ಇದು ಅವರ ಕರ್ಣನ ಪಾತ್ರವನ್ನ
ನೋಡಿದವರಿಗೇ ಗೊತ್ತು. ಆ ದುರಂತ ಕಥ
ನಚಿತ್ರ ಎಂದೆಂದೂ ಜನಮನದಿಂದ ಮಾ
ಹೋಗದು". (ಪ್ರೊ। ಎಂ. ಆರ್. ಶಾಸ್ತ್ರಿ
ಮುನ್ನುಡಿಯಿಂದ) ಭಾರತದ ಕರ್ಣನ ಪಾ
ವನ್ನು ವರ್ಣಿಸುವ ಪುಸ್ತಕ. ಬೆಲೆ 0-6-

ಮುರಲಿ

ಮೇಲ್ತರಗತಿಯ ಕಾಲೇಜಿಗೆ ಸೇರಿದ

ಸಪುಂಟ ೩೫
VOL. 35



ಪ್ರಾಥಮಿಕ ವಿದ್ಯಾಭ್ಯಾಸ

ಮದ್ರಾಸು ಸರಕಾರದವರು ಕಳೆದ ವರ್ಷದ ನವಂಬರ ತಿಂಗಳಲ್ಲಿ ಡಾ. ಅಲಗಪ್ಪ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಪದ್ಧತಿಯನ್ನು ಪರಿಶೀಲಿಸುವುದಕ್ಕೋಸ್ಕರ ಸಮಿತಿಯೊಂದನ್ನು ನೇಮಿಸಿದ್ದರೆಂದು ಓದುಗರಿಗೆ ನೆನೆಪಿರಬಹುದು. ಸಮಿತಿಯವರು ಇದೇ ಗಾಂಧಿಜಯಂತಿಯಂದು ಸರಕಾರಕ್ಕೆ ತನ್ನ್ಮ ವರದಿಯನ್ನು ಒಪ್ಪಿಸಿರುವರೆಂದು ತಿಳಿದುಬರುತ್ತದೆ.

ಸಾರ್ವಜನಿಕರ ಅವಗಾಹನೆಯ ಬಗ್ಗೆ ಈ ವರದಿಯನ್ನು ಇನ್ನು ಕೆಲವೇ ವಾರಗಳಲ್ಲಿ ಪ್ರಕಟಿಸಲು ಸರಕಾರ ಬಯಸಿದೆ. ಮುಂದಿನ ತಿಂಗಳಲ್ಲಿ ಸೇರಲಿರುವ ಶಾಸನಾಂಗದ ಅಧಿವೇಶನ ಕಾಲದಲ್ಲಿ ಸದಸ್ಯರಿಗೆ ಸಮಿತಿಯ ಸಿಫಾರಸುಗಳು ತಿಳಿದಿರಬೇಕೆಂದೂ ತಮ್ಮ ಅಭಿಪ್ರಾಯಗಳನ್ನು ಸರಕಾರಕ್ಕೆ ವಿದಿತಪಡಿಸಲು ಅವರು ಶಕ್ತರಾಗಬೇಕೆಂದೂ ಸರಕಾರ ಆಶಿಸುತ್ತಿರುವುದರಿಂದ ಜನತೆಯ ಪ್ರತಿನಿಧಿಗಳ ಅಧ್ಯಯನಕ್ಕೆ ಸಾಕಷ್ಟು ಅವಕಾಶ ಸಿಗುವಂತೆ ಬೇಗನೆ ವರದಿಯು ಪ್ರಕಟವಾಗುವುದರಲ್ಲಿ ಸಂದೇಹವಿಲ್ಲವೆಂದು ಭಾವಿಸಬಹುದು.

ಇದರ ನಡುವೆ ವಿದಿತ ವರ್ಗಗಳ ಮೂಲಕ ಕೆಲವು ಸಂಗತಿಗಳು ವರದಿಯ ಕುರಿತಾಗಿ ಬಹಿರಂಗವಾಗಿದೆ. ವರದಿಯನ್ನು ಸರಕಾರವು ತೀವ್ರವಾಗಿ ಪರ್ಯಾಲೋಚಿಸುತ್ತಿರುವುದೆಂಬುದನ್ನು ಯಾರೂ ಹೇಳುವ ಅಗತ್ಯವಿಲ್ಲ. ಪರ್ಯಾಲೋಚನೆಯು ಬಳಿಕ ಬೇಗನೆ ನಿರ್ಣಯಗಳನ್ನು ಕೈಗೊಂಡು ಮುಂದಿನ ಶಾಲಾ ವರ್ಷದಲ್ಲಿ – ಅಂದರೆ ೧೯೩೬-೩೭ನೇ ಸಾಲಿಗೆ ನಿರ್ಣಯಗಳನ್ನು ಕಾರ್ಯಗತ ಗೊಳಿಸಲು ಸರಕಾರ ಇಚ್ಚಿಸುತ್ತಿರುವಂತೆ ಕಾಣುತ್ತದೆ.

ಸಮಿತಿಯವರು ಕ್ರಾಂತಿಕಾರಿಯಾದ ಯಾವ ಸೂಚನೆಗಳನ್ನೂ ಮಾಡಿಲ್ಲವೆಂದು ಹೇಳಲಾಗುತ್ತದೆ ಈಗಿನ ಪದ್ಧತಿಯಲ್ಲಿ ತೀವ್ರ ಬದಲಾವಣೆಗಳನ್ನು ಈ ಸಮಿತಿ ಸೂಚಿಸಿಲ್ಲ: ಪ್ರಗತಿಯ ಹೆಜ್ಜೆಯು ಮಾತ್ರ ತೀವ್ರವಾಗಬೇಕೆಂದು ಹೇಳಿದೆ—ಎಂದು ವಿದಿತ ವರ್ಗಗಳು ತಿಳಿಸಿರುತ್ತವೆ.

ಮೂಲ ಶಿಕ್ಷಣ ಕ್ರಮವನ್ನು ಮುಂದೊತ್ತಿಕೊಂಡು ಹೋಗುವ ವಿಷಯದಲ್ಲಿ ಈಗಿನ ವಿಧಾನವನ್ನು ಜಾಗರೂಕತೆಯಿಂದ ಮತ್ತು ಪ್ರಗತಿಪರವಾಗಿ ಅನುಸರಿಸಬೇಕೆಂದು ಸಮಿತಿ ಅಭಿಪ್ರಾಯ ಪಟ್ಟಿರು

ಪ್ರಾಥಮಾಧ್ಯಮಿಕ ಶಾಲೆಗಳ ಪ್ರಾಥಮಿಕ ತರಗತಿಗಳಿಗೆ ಇದನ್ನು ವಿಸ್ತರಿಸಬೇಕು. ಹೆಚ್ಚಿನ ಶಾಲೆಗಳಲ್ಲಿ ತೋಟಗಾರಿಕೆಯನ್ನು ವೃತ್ತಿಯಾಗಿ ಪರಿಗ್ರಹಿಸಬಹುದು; ಸಾಧ್ಯವಿದ್ದಲ್ಲಿಲ್ಲ ಕುಂಬಾರಿಕೆ ಚಾಪೆಹೆಣೆಯುವುದು ಇತ್ಯಾದಿಗಳನ್ನು ಅವಲಂಬಿಸಬಹುದು. ಕಚ್ಚಾ ಸರಕುಗಳ ಕ್ರಯದಲ್ಲಿ ಒಂದಂಶವನ್ನು ತೆತ್ತು ಈ ಉತ್ಪಾದನೆಯನ್ನು ಸ್ವಂತಕ್ಕೆ ಉಪಯೋಗಿಸಲು ವಿದ್ಯಾರ್ಥಿಗಳಿಗೆ ಬಿಡಬೇಕು—ಎಂದು ಸಮಿತಿ ಹೇಳಿದೆಯಾಗಿ ಸುದ್ದಿ.

ಆದಷ್ಟು ಹೆಚ್ಚು ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಬರಬೇಕೆಂದು ಸಮಿತಿಯು ಹಲವಾರು ಸೂಚನೆಗಳನ್ನು ಮಾಡಿದೆಯೆಂದೂ ಗೊತ್ತಾಗಿರುತ್ತದೆ. ಪ್ರಾಥಮಿಕ ಶಿಕ್ಷಣಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ನೀಡಬೇಕೆನ್ನುತ್ತಾ ಅದು ಬ್ರಿಟನಿನ ಉದಾಹರಣೆಯನ್ನು ನೀಡಿದೆಯಂತೆ—ಆ ದೇಶದಲ್ಲಿ ವರ್ಷಕ್ಕೆ ೪೦ ಕೋಟಿ ಪೌಂಡುಗಳಷ್ಟು ಹಣ ಪ್ರಾಥಮಿಕ ಶಿಕ್ಷಣಕ್ಕಾಗಿ ವೆಚ್ಚವಾಗುತ್ತದೆ; ಇದರಲ್ಲಿ ೧೦ ಲಕ್ಷ ಪೌಂಡುಗಳಷ್ಟು ಕಟ್ಟಡಗಳಿಗಾಗಿ ಪ್ರತಿವಾರ ನೀಡಲ್ಪಡುತ್ತವೆ.

ನಮ್ಮ ದೇಶದಲ್ಲಿ ೩೦೦ರಿಂದ ೫೦೦ ಜನರ ವರಿಗಿರುವ ಪ್ರತಿಯೊಂದೂ ಹಳ್ಳಿಗೆ ಒಂದರಂತೆ ಇದು ಸಾಧ್ಯವಿಲ್ಲದಿದ್ದರೆ ಎಂಥ ಪ್ರಸಂಗದಲ್ಲಿಯೇ ಆಗಲಿ, ಮಕ್ಕಳಿಗೆ ಹೋಗಿಬರಲು ಹೆಚ್ಚು ದೂರವಾಗದಂತೆ –ಶಾಲೆಗಳನ್ನು ಸ್ಥಾಪಿಸಬೇಕು. ಇವುಗಳ ಕಟ್ಟಡ ರಚನೆಗೆ ರಾಷ್ಟ್ರೀಯ ವಿಸ್ತರಣಾ ಸೇವೆ ಇತ್ಯಾದಿ ಅಭಿವೃದ್ಧಿ ಪ್ರಯತ್ನಗಳ ಸಹಾಯವನ್ನು ಪಡೆಯಬಹುದು. ತೋಟ ತಯಾರಿಸಲೂ ಆಟದ ಮೈದಾನಿಗಾಗಿಯೂ ಭೂದಾನ ಚಳವಳಿಯನ್ನು ನಡೆಸಬಹುದು. ಸಾಧ್ಯವಾದಷ್ಟು ಮಟ್ಟಿಗೆ ಮಧ್ಯಾಹ್ನದ ಊಟವನ್ನು ಮಕ್ಕಳಿಗೆ ಧರ್ಮಾರ್ಥವಾಗಿ ಶಾಲೆಯ ವಠಾರದಲ್ಲಿಯೇ ಕೊಡಬೇಕು. ಊರಿನವರು ಅರ್ಧ ಕರ್ಚನ್ನು ಹೊರುವ ತಳಹದಿಯ ಮೇಲೆ ಈ ಕಾರ್ಯಕ್ರಮವನ್ನು ಪ್ರಾರಂಭಿಸಬಹುದು. ಇದಲ್ಲದೆ ಸ್ಲೇಟು, ಕಡ್ಡಿ ಮತ್ತು ಪುಸ್ತಕಗಳನ್ನು ಧರ್ಮಾರ್ಥವಾಗಿ ಕೊಡಬೇಕು—ಎಂದು ಸಮಿತಿ ಸಲಹೆ ಮಾಡಿರುತ್ತದೆ.

ರಾಜ್ಯದಲ್ಲಿ ಈಗ ೫ರಿಂದ ೧೪ವರ್ಷ ಪ್ರಾಯದ ೬೩ ಲಕ್ಷ ಮಕ್ಕಳಿದ್ದಾರೆ; ಇದರಲ್ಲಿ ಶಾಲೆಯಲ್ಲಿ ಶಿಕ್ಷಣಪಡೆಯುತ್ತಿರುವವರು ೩೨ಲಕ್ಷ ಮಾತ್ರ. ಘಟನೆಯಂತೆ ಸರಕಾರದ ಮೇಲಿರುವ ಈ ಸಂಬಂಧದ ಹೊಣೆಗಾರಿಕೆಯನ್ನು ಅದಷ್ಟು ಶೀಘ್ರವಾಗಿ ನಿರ್ವಹಿಸಬೇಕು. ಮಕ್ಕಳು ಸ್ವೇಚ್ಛೆಯಿಂದ ಶಾಲೆಗೆ ಬರುವಂತೆ ಉತ್ತಮ ವಾತಾವರಣವನ್ನು ನಿರ್ಮಿಸಬೇಕು. ಸಾಮಾನ್ಯವಾಗಿ ಹೆತ್ತವರ ಉದಾಸೀನತೆಯೇ ಮಕ್ಕಳು ಶಾಲೆಗೆ ಬರದಿರುವುದರ ಕಾರಣ. ಸುದ್ದಿವೆದಿಂದ ಈಗ ಪ್ರತಿಯೊಂದು ಗ್ರಾಮದ ಮೂಲೆಯಿಂದಲೂ ಶಾಲೆಗಳಿಗೆ ಬೇಡಿಕೆ ಬರುತ್ತಿದೆ. ಇದರ ಸದುಪಯೋಗ ಪಡೆಯದೆ ಬಿಡಬಾರದು. ಶಾಲೆಗೆ ಬಾರದ ಮಕ್ಕಳ ಹೆತ್ತವರೊಡನೆ ಅಧ್ಯಾಪಕರು ಸಂಪರ್ಕವನ್ನು ಬೆಳೆಸಿ, ಪರಿಸ್ಥಿತಿಯನ್ನು ಸುಧಾರಿಸಲು ನೋಡಬೇಕು–ಎಂಬುದಾಗಿಯೂ ಸಮಿತಿ ಹೇಳಿರುತ್ತದೆ.

ಜಾಲಿಗರ್ಭ
ಕೊಡುವುದಕ್ಕೆ
ಕೂಲಿಯಿಲ್ಲ
ಶಿಕ್ಷಣ ಕೊಡುವ
ಧವಿಲ್ಲ ಎಂದು
ವರದಿಯಾಗಿದೆ.
ಡಿಮೆ ವಯಸ್ಸಿನ
ಸೋರಿ ಪದ್ಧತಿಯ
ಷ್ಟ್ಯಗಳಿಗನುಸಾರ
ಅನುಸರಿಸುವ ಶಾ
ದೆಂದೂ ಆದು ಸ
ಪಾಧ್ಯಾಯ ಶಾ
ವುದಕ್ಕೆ ಉತ್ತೇಜ
ಸೌಕರ್ಯವನ್ನೂ
ರ್ಗಾರರಲ್ಲಿ ಮಾ
ಪರಿಷ್ಕರಿಸಲು ಸಿ
ಕು; ಎಂಟನೇ
ಸರಕಾರಿ ಪರೀಕ್ಷ
ಯೇ ಮುಂದರಿ
ತರಗತಿಯಿಂದ ಲ
ಇಂಗ್ಲೀಷಿನ ಶಿಕ್ಷಣ
ನೀಡಬೇಕು —
ಯಾಗಿ ಗೊತ್ತಾಗಿ

ಶಾಲೆಗಳ ಆಡ
ಬ್ಬ ನೇವಹಿಸಿಕೊ
ದು; ಪ್ರತಿಯೊಂ
ಮಂಡಳವನ್ನು ನೆ
ಒಬ್ಬಿಬ್ಬರು ಸದಸ್ಯ
ಕು. ಉಪಾಧ್ಯಾಯ
ಶಾಲೆಗಳಿಗೂ ಈ
ಸಬೇಕು—ಎಂದ
ಯಂತೆ. ಇನ್ನು
ಡ್ರು ಮತ್ತು ನಾ
ಗೆ ಶಾಲೆಗಳನ್ನು
ತನ್ನ ಅಧಿಕಾರ
ಶಾಲೆಗಳನ್ನು ನಿ
ರ ಜೊತೆಗೆ ಪ್ರಾ
ಅಧಿಕಾರ ಕೊಡ
ಜಿಲ್ಲಾ ಬೋರ್ಡುಗ
ಹಾಯತೆಗಳ ಪ್ರ
ರವ ಪ್ರತಿನಿಧಿಗಳ
ದ ಅಧಿಕಾರಾವಧಿ
೨೦೦ ಶಾಲೆಗಳ
ಹಿಂದು ಮಂಡಳಿಕೆ
ಪಕ್ಕಿಂತ ಹೆಚ್ಚಿಲ್ಲ
ಶಿಕ್ಷಣ ಸಂಬಂಧ
ದಾಯ ಈ ವಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಪ್ರಧಾನ ಕಾರ್ಯಾಲಯ: ಉಡುಪಿ.] [ಸ್ಥಾಪನೆ: 1935.
ಸುಖಸಂತೋಷವನ್ನು ಬರಮಾಡಿಕೊಳ್ಳುವುದು ಹೇಗೆ?
ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಆಕಸ್ಮಿಕ ಘಟನೆಯಲ್ಲ. ಅದನ್ನು ನಡುದಾರಿಯ ವರೆಗೆ ಹೋಗಿ, ಸಂಧಿಸಿ, ಮನೆಗೆ ಸ್ವಾಗತಿಸಬೇಕಾಗುತ್ತದೆ. ಕೆಲವು ವರ್ಷಗಳಷ್ಟು ಮುಂದಾಗಿಯೇ ತಕ್ಕ ಯೋಜನೆಯನ್ನು ಮಾಡಿರಬೇಕೆಂದು ಇದರ ಅರ್ಥ. ನಿಮ್ಮ ಗುರಿಯನ್ನು ಗೊತ್ತು ಪಡಿಸುವುದು ಮತ್ತು ಅದನ್ನು ಮುಟ್ಟಲು ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ಮೊದಲನೆಯ ಕೆಲಸ. ಈ ಬಗೆಯ ಕಾರ್ಯಕ್ರಮಗಳಲ್ಲಿ ನಿಮಗೆಷ್ಟು ಸಾಧ್ಯವೋ ಅಷ್ಟು ಧನವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ಮುಖ್ಯವಾದೊಂದು ವಿಷಯ. ನಾವು ಇದಕ್ಕೆ ಪ್ರತಿ ಅರ್ಧ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಳಿತಾಯವು ಬೇಗನೆ ಬೆಳವಣಿಗೆಯನ್ನು ಹೊಂದುವಂತೆ ನೆರವಾಗುತ್ತೇವೆ.
ಚಲಾವಣೆಯ ಬಂಡವಾಳ ರೂ. 7,50,000/- ವಿತರಿಸಿದ್ದು ಮಿತಿ

ಭಾರತ ರತ್ನ ಶ್ರೀ ನೆಹರು

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ಈಚೆಗೆ ಪ್ರಧಾನಿ ನೆಹರುಗಳು ಲೋಕ ಶಾಂತಿಯ ಸಾಧನೆಗಾಗಿಯೂ ಭಾರತದ ಸರ್ವಾಂಗಿಕ ಏಳಿಗೆಗಾಗಿಯೂ ಅವಿಶ್ರಾಂತವಾಗಿ ಪರಿಶ್ರಮಿಸಿದುದಕ್ಕೆ ಮೆಚ್ಚಿಕೆಯನ್ನು ಸೂಚಿಸಿ, ಅತ್ಯುಚ್ಚ ಪ್ರಶಸ್ತಿಯಾದ "ಭಾರತ ರತ್ನ" ಪದಕವನ್ನು ದಯಪಾಲಿಸಿದರು. ಜವಾಹರನೆಂಬ ಹೆಸರಿಂದಲೇ ರತ್ನದ ನೆನಪನ್ನು ತಂದು ಕೊಡುವ ಪ್ರಧಾನಿಗಳ ಮುಖಕಮಲವು ಈ ಗೌರವಶ್ರೀಯನ್ನು ಸ್ವೀಕರಿಸುವ ಸಂದರ್ಭದಲ್ಲಿ ಅಧಿಕವಾಗಿದ್ದುದರಿಂದ ಅರಳಿಕೊಂಡಿರುವುದನ್ನು ಚಿತ್ರ ತೋರಿಸುತ್ತದೆ.

ಗ್ರಾಮ ಜ್ಯೋತಿ ಕೇಂದ್ರ

ರಾಜಸ್ಥಾನದ ಸರ್ದಾರ ಶಹರಿನಲ್ಲಿ ಈಚೆಗೆ ಗ್ರಾಮ ಜ್ಯೋತಿ ಕೇಂದ್ರ ಎಂಬ ಸಂಸ್ಥೆಯನ್ನು ರಾಷ್ಟ್ರಾಧ್ಯಕ್ಷರು ಉದ್ಘಾಟಿಸಿದರು. ಈ ಕೇಂದ್ರದಲ್ಲಿ ಕುಶಲ ಕಲೆಗಳಲ್ಲಿಯೂ ಹಸ್ತೈಶಲ್ಯದ, ವೃತ್ತಿಗಳಲ್ಲಿಯೂ ಪಾರಂಗತರಾಗುವಂತೆ ಬೆನ್ನಾದ ಶಿಕ್ಷಣ ನೀಡಲ್ಪಡುತ್ತದೆ. ಭಾರತದಲ್ಲಿ ಗೃಹೋದ್ಯೋಗಗಳ ಬೆಳವಣಿಗೆಯು ಎಷ್ಟು ಆವಶ್ಯಕವಾಗಿದೆಯೋ ಸಾರ್ವಜನಿಕವಾದ ಮತ್ತು ಸಾಂಸ್ಕೃತಿಕ ಮಹತ್ವದಿಂದ ಕೂಡಿದ ಪ್ರಾಚೀನ ವೃತ್ತಿಗಳಿಗೆ ಪ್ರೋತ್ಸಾಹವನ್ನು ಕೊಡುವುದೂ ಅಗತ್ಯವಾಗಿದೆ. ರಾಷ್ಟ್ರಾಧ್ಯಕ್ಷರು ಹಳ್ಳಿಗಳಲ್ಲಿ ಸ್ವಕಾರವನ್ನು ಚೆಲ್ಲುವ ಈ ಮಾದರಿ ಕೇಂದ್ರದ ಪರಿಶೀಲನೆ ನಡೆಸಿ ತೃಪ್ತಿ ಸೂಚಿಸುತ್ತಿರುವುದನ್ನು ಚಿತ್ರದಲ್ಲಿ ಕಾಣುತ್ತೇವೆ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವ ವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಸಾವಿಗೆ ಮುಂಚೆ ಸಮಾಧಿ—

ಬರೆದವರು: ಧನ್ವಂತ. ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು ೩. ಬೆಲೆ: ರೂ. ೨—೦—೦.

ಇಂಗ್ಲಿಷಿನಲ್ಲಿ ಎಡ್ಗರ್ ಎಲೆನ್ ಪೋನ ಕತೆಗಳು ಜೋಪಾನಾಂಜಕ ಸಾಹಿತ್ಯಕ್ಕೊಂದು ಮಾದರಿಯಾಗಿವೆ. ಕಳೆದ ಶತವಾನದಲ್ಲಿ ಆಗಿಹೋದ ಈ ಪಾಶ್ಚಾತ್ಯ ಸಾಹಿತಿಯ ಹದಿನೈದು ಕತೆಗಳನ್ನು ಶ್ರೀ ಧನ್ವಂತರು ಇಲ್ಲಿ ಕನ್ನಡಿಸಿದ್ದಾರೆ. ಕತೆಗಳಲ್ಲಿ ಹೆಚ್ಚಾಗಿ ಅದ್ಭುತ ಮತ್ತು ವಿಸ್ಮಯಕರ ಸ್ವತ್ತಾಂತಗಳೇ ಕಂಡುಬರುತ್ತವೆ. ಒಗಟೊಂದನ್ನು ಹುರುಕಾಗಿ ಬಿಡಿಸಿದ ಪಾದರಿಯಲ್ಲಿ ಜಿಜ್ಞಾಸೆ ಕತೆಗಳಿವೆ ಎನ್ನಲಡ್ಡಿಯಿಲ್ಲ. ಹಾಲಿತ್ಯ ಮತ್ತು ಸರಸತೆಗೆ ಈ ಕತೆಗಳಲ್ಲಿ ಅವಕಾಶ ದೊರೆತಿಲ್ಲ—ಅವರೆ ಇವುಗಳು ಮನುಷ್ಯ ಕೃತಕೃತ್ಯನಾದಗಳ ನಾನಾನಮುಖಗಳನ್ನು ರಮ್ಯವಾಗಿ ಚಿತ್ರಿಸುತ್ತವೆ ಎಂಬುದೇನೂ ಸುಳ್ಳಲ್ಲ. ಹಾಗೆ ನಿರೂಪಿಸುವಾಗ ಗೂಢತತ್ವೋಂದನ್ನು ನಿಘಾಸಾಗಿ ಮಂಡಿಟ್ಟು ಪಡಿಸುವುದಕ್ಕೆ ಲೇಖಕರು ಸನದ್ಧರಾಗುತ್ತಾರೆ ಎಂಬುದೂ ಹೊಳೆಯದಿರದು. ಕನ್ನಡದ ಸಣ್ಣಕತೆಗಳ ಕ್ಷೇತ್ರದಲ್ಲಿ ಇಪ್ಪರ ವರೆಗೆ ಸಾಕಷ್ಟು ಹೆಚ್ಚಾಗಿ ಆರಂಭದ ಹುಪ್ಪಗಳ ಬಗೆಯೊಂದು ಈ ಅನುವಾದದಿಂದ ಪಲಾಶಣ ಪಡಿದೆ. ಪೋನ ಈ ಕನ್ನಡ ರೂಪದಲ್ಲಿ ಕಸುವಿದೆ; ಭಾಷಾಮಯಾರ್ಪಡಿಗೆ ಗಾರವ ಕೊಡಲಾಗಿದೆ. ಈ ದೃಷ್ಟಿಯಿಂದ ಧನ್ವಂತರ ಕೆಲಸ ಚೊಕ್ಕರೀತಿಯಲ್ಲಿ ನಡೆದಿದೆ ಎನ್ನಬೇಕು.

ಕು.

ಲಘು ಪರಿಚಯ

ಮಡಿಕೇರಿಯಿಂದ ಶ್ರೀ ಬಿ. ಎಸ್. ಗೋಪಾಲಕೃಷ್ಣ ಇವರಿ ಸಂಪಾದಕತ್ವದಲ್ಲಿ ಕನ್ನಡ "ಸಾಹಿತ್ಯ ಮತ್ತು ಸಂಸ್ಕೃತಿಗಳ ಪ್ರಗತಿಯನ್ನೆ ಮುಖ್ಯ ಗುರಿಯಾಗಿಟ್ಟುಕೊಂಡ" ಕೊಡಗಿನ ಪ್ರಥಮ ಮಾಸಪತ್ರಿಕೆ "ಸಂದಾದೀಪ" ಇದೇ ಅಕ್ಟೋಬರಿದಲ್ಲಿ ಬೆಳಗಿದೆ. ಪತ್ರಿಕೆಗೆ ಸ್ವಾಗತಕೋರಿ. ಒಳ್ಳೆಯ ಮಟ್ಟವನ್ನು ಉದ್ಯ ಮ ಶೀಲತೆಯಲ್ಲಿ ಪ್ರದರ್ಶಿಸಿ, ಅದು ಬೆಳೆದು ಬಾಳಲೆಂದು ಹಾರೈಸುತ್ತೇವೆ.

ಹೃಷೀಕೇಶದ ದಿವ್ಯಧಾಮದಲ್ಲಿ ಸ್ವಾಮಿ ಶಿವಾನಂದರ ಆಶ್ರಯದಿಂದ ಪ್ರಕಟವಾಗುವ "ದಿವ್ಯ ಜೀವನ" "THE DIVINE LIFE" ಎಂಬ ಮಾಸಿಕ ಪತ್ರಿಕೆಯ ಸಪ್ತಂಬರ ತಿಂಗಳ ಸಂಚಿಕೆಯು ಸ್ವಾಮೀಜಿಯ ೬೯ನೇ ಜನ್ಮದಿನ ಸಂಚಿಕೆಯಾಗಿ ಪ್ರಕಟವಾಗಿದೆ. ಇದರಲ್ಲಿ ಶಿವಾನಂದರ ಆಧ್ಯಾತ್ಮಿಕ ಪ್ರತಿಭೆ ಅವರ ಜೀವನಾದರ್ಶ ಇತ್ಯಾದಿಗಳ ಮೇಲೆ ಬೆಳಕು ಬೀರುವ ಅವರ ಭಕ್ತವೃಂದದ ಹಲವಾರು ಲೇಖನಗಳನ್ನು ಕಾಣುತ್ತೇವೆ.

ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ ಅವಧಿಯು ಇವರು ೧—೪—೧೯೫೫ ರಿಂದ ೩೧—೩—೧೯೫೫ ವರೆಗಿನ ತಮ್ಮ ಟುವಟಿಕೆಯ ಅರನೇ ನರ್ಷಕ್ಕೆ ಸಂಬಂಧಿಸಿ ಪ್ರಕಟಿಸಿರುವ ನರದಿಯು ಸರ್ವೋದಯದ ಆದರ್ಶ ಸಾಧನೆಯಲ್ಲಿ ಗಣ್ಯ ಪ್ರಗತಿಯನ್ನು ಕಾರ್ಯಕರ್ತರು ಸಾಧಿಸಿರುವರೆಂದು ತೋರಿಸಿ ಕೊಡುತ್ತದೆ. ಗ್ರಾಮದಾನ ಜೀವನದಾನವನ್ನು ನುಡಿಕರವಾಗಿ ಮಾಡುವ ಸಲವಾರು ವಿಧಾಯಕ ರಂಗಗಳಲ್ಲಿ ನಿಷ್ಠೆಯಿಂದ ದುಡಿದಿರುವುದರ ವಿವರಗಳು ತುಂಬ ಸಮಾಧಾನಕರವಾಗಿವೆ. ಸರ್ವೋದಯ ಸಮಿತಿಗೆ ಇತೋಧಿಕ ಶಕ್ತಿಯನ್ನು ವಾದ ಶ್ರೇಯಸ್ಸನ್ನು ಕೋರುತ್ತೇವೆ.

ಜನಪ್ರಿಯ ಪುಸ್ತಕದ ಮೂಗನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮುದ್ದು" ಇದ್ದರೆ ಗಾಬರಿಯೇಕೆ?

ಮನೆ-ಮುದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

"Ably written—Quite up-to-date valuable service"
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨—೦—೦ (ಟಪ್ಪಲ್ ಖರ್ಚು ಬೇರೆ).

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಡಿ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬೆಳಿ ಕಾಗದ, ಅಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು" ದಿ ಕಿಲ್ಲೆಯವರಿಂದ ಬಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕಥೆಯನ್ನು ನಿಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು". (ಪ್ರೊ॥ ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಸಾಹಸವನ್ನು ವರ್ಣಿಸುವ ಪುಸ್ತಕ. ಬೆಲೆ 0-6-

ಮುರಲಿ

ಮೇಲ್ಕರಗಿಯ ಕವಿತೆಗಳ ಸಂಗ್ರಹ. ಬೆಲೆ(0-12-0.
ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ಇವುಗಳ ಬೇಕಾದ ಪ್ರತಿಗಳಿಗೆಬರೆಯಿರಿ: ನವಭಾರತ ಪುಸ್ತಕ ಭಂಡಾರ ಉಡು

Edited, Printed & Published By K. H. Shetty, at the Navayuga Press, Udipi S. India

REGD. NO. M. 2615

LICENCE NO. 31

ನವಯುಗ

ಸಪುಂಟ ೩೫

VOL. 35

ಉಡುಪಿ, 20—10—1955

ಸಂಚಿಕೆ ೮

NO. 8

ಪ್ರಾಥಮಿಕ ವಿದ್ಯಾಭ್ಯಾಸ

ಮದ್ರಾಸು ಸರಕಾರದವರು ಕಳೆದ ವರ್ಷದ ನವಂಬರ ತಿಂಗಳಲ್ಲಿ ಡಾ. ಆಲಗಪ್ಪ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣಪದ್ಧತಿಯನ್ನು ಪರಿಶೀಲಿಸುವುದಕ್ಕೋಸ್ಕರ ಸಮಿತಿಯೊಂದನ್ನು ನೇಮಿಸಿದ್ದರೆಂದು ಓದುಗರಿಗೆ ನೆನಪಿರಬಹುದು. ಸಮಿತಿಯವರು ಇದೇ ಗಾಂಧಿಜಯಂತಿಯಂದು ಸರಕಾರಕ್ಕೆ ತನ್ನ ವರದಿಯನ್ನು ಒಪ್ಪಿಸಿರುವರೆಂದು ತಿಳಿದುಬರುತ್ತದೆ.

ಸಾರ್ವಜನಿಕರ ಅವಗಾಹನೆಯ ಬಗ್ಗೆ ಈ ವರದಿಯನ್ನು ಇನ್ನು ಕೆಲವೇ ವಾರಗಳಲ್ಲಿ ಪ್ರಕಟಿಸಲು ಸರಕಾರ ಬಯಸುವೆ. ಮುಂದಿನ ತಿಂಗಳಲ್ಲಿ ನೇರಲಿರುವ ಶಾಸನಾಂಗದ ಅಧಿವೇಶನ ಕಾಲದಲ್ಲಿ ಸದಸ್ಯರಿಗೆ ಸಮಿತಿಯ ಸಿಫಾರಾಸುಗಳು ತಿಳಿದಿರಬೇಕೆಂದೂ ತಮ್ಮ ಅಭಿಪ್ರಾಯಗಳನ್ನು ಸರಕಾರಕ್ಕೆ ವಿದಿತಪಡಿಸಲು ಅವರು ಶಕ್ತರಾಗಬೇಕೆಂದೂ ಸರಕಾರ ಆಶಿಸುತ್ತಿರುವುದರಿಂದ ಜನತೆಯ ಪ್ರತಿನಿಧಿಗಳ ಅಧ್ಯಯನಕ್ಕೆ ಸಾಕಷ್ಟು ಅವಕಾಶ ಸಿಗುವಂತೆ ಬೇಗನೆ ವರದಿಯು ಪ್ರಕಟವಾಗುವುದರಲ್ಲಿ ಸಂದೇಹವಿಲ್ಲವೆಂದು ಭಾವಿಸಬಹುದು.

ಇದರ ನಡುವೆ ವಿದಿತ ವರ್ಗಗಳ ಮೂಲಕ ಕೆಲವು ಸಂಗತಿಗಳು ವರದಿಯ ಕುರಿತಾಗಿ ಬಹಿರಂಗವಾಗಿದೆ. ವರದಿಯನ್ನು ಸರಕಾರವು ತೀವ್ರವಾಗಿ ಪರ್ಯಾಲೋಚಿಸುತ್ತಿರುವುದೆಂಬುದನ್ನು ಯಾರೂ ಹೇಳುವ ಅಗತ್ಯವಿಲ್ಲ ಪರ್ಯಾಲೋಚನೆಯ ಬಳಿಕ ಬೇಗನೆ ನಿರ್ಣಯಗಳನ್ನು ಕೈಗೊಂಡು ಮುಂದಿನ ಶಾಲಾ ವರ್ಷದಲ್ಲಿ— ಅಂದರೆ ೧೯೫೬-೫೭ನೇ ಸಾಲಿಗೆ ನಿರ್ಣಯಗಳನ್ನು ಕಾರ್ಯಗತ ಗೊಳಿಸಲು ಸರಕಾರ ಇಚ್ಚಿಸುತ್ತಿರುವಂತೆ ಕಾಣುತ್ತದೆ.

ಸಮಿತಿಯವರು ಕ್ರಾಂತಿಕಾರಿಯಾದ ಯಾವ ಸೂಚನೆಗಳನ್ನೂ ಮಾಡಿಲ್ಲವೆಂದು ಹೇಳಲಾಗುತ್ತದೆ ಈಗಿನ ಪರಿಸ್ಥಿತಿಯಲ್ಲಿ ತೀವ್ರಬದಲಾವಣೆಗಳನ್ನು ಈ ಸಮಿತಿ ಸೂಚಿಸಿಲ್ಲ ಪ್ರಗತಿಯ ಹೆಜ್ಜೆಯು ಮಾತ್ರ ತೀವ್ರವಾಗಿಬೇಕೆಂದು ಹೇಳಿದೆ—ಎಂದು ವಿದಿತ ವರ್ಗಗಳು ತಿಳಿಸಿರುತ್ತವೆ.

ಮೂಲ ಶಿಕ್ಷಣ ಕ್ರಮವನ್ನು ಮುಂದೊತ್ತಿಕೊಂಡು ಹೋಗುವ ವಿಷಯದಲ್ಲಿ ಈಗಿನ ವಿಧಾನವನ್ನು ಜಾಗರೂಕತೆಯಿಂದ ಮತ್ತು ಪ್ರಗತಿಪರವಾಗಿ ಅನುಸರಿಸಬೇಕೆಂದು ಸಮಿತಿ ಅಭಿಪ್ರಾಯ ಪಟ್ಟಿರುವುದೆಂದು ಕೇಳುತ್ತೇವೆ. ಪ್ರಾಥಮಿಕ ಶಾಲೆಗಳಲ್ಲಿ ಮೂಲ ಶಿಕ್ಷಣವನ್ನ ತೊಡಗಬೇಕು; ಕೃತ್ಯೇಣ ಮಾಧ್ಯಮಿಕ ಮತ್ತು ಪ್ರೌಢಮಾಧ್ಯಮಿಕ ಶಾಲೆಗಳ ಪ್ರಾಥಮಿಕ ತರಗತಿಗಳಿಗೆ ಇದನ್ನು ವಿಸ್ತರಿಸಬೇಕು. ಹೆಚ್ಚಿನ ಶಾಲೆಗಳಲ್ಲಿ ತೋಟಗಾರಿಕೆಯನ್ನು ವೃತ್ತಿಯಾಗಿ ಪರಿಗ್ರಹಿಸಬಹುದು; ಸಾಧ್ಯವಿದ್ದಲ್ಲೆಲ್ಲ ಕುಂಬಾರಿಕೆ ಚಾಪೆಹೆಣೆಯುವುದು ಇತ್ಯಾದಿಗಳನ್ನು ಆವಲಂಬಿಸಬಹುದು ಕಚ್ಚಾ ಸರಕುಗಳ ಕ್ರಯದಲ್ಲಿ ಒಂದಂಶವನ್ನು ತೆತ್ತು ಈ ಉತ್ಪಾದನೆಯನ್ನು ಸ್ವಂತಕ್ಕೆ ಉಪಯೋಗಿಸಲು ವಿದ್ಯಾರ್ಥಿಗಳಿಗೆ ಬಿಡಬೇಕು.—ಎಂದು ಸಮಿತಿ ಹೇಳಿದೆಯಾಗಿ ಸುದ್ದಿ.

ಆದಷ್ಟು ಹೆಚ್ಚು ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಒರಬೇಕೆಂದು ಸಮಿತಿಯು ಹಲವಾರು ಸೂಚನೆಗಳನ್ನು ಮಾಡಿದೆಯೆಂದೂ ಗೊತ್ತಾಗಿರುತ್ತದೆ ಪ್ರಾಥಮಿಕ ಶಿಕ್ಷಣಕ್ಕೆ ಅತಿ ಹೆಚ್ಚಿನ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ನೀಡಬೇಕೆನ್ನುತ್ತಾ ಆದು ಬ್ರಿಟನಿನ ಉದಾಹರಣೆಯನ್ನು ನೀಡಿದೆಯಂತೆ—ಆ ದೇಶದಲ್ಲಿ ವರ್ಷಕ್ಕೆ ೪ ಕೋಟಿ ಪೌಂಡುಗಳಷ್ಟು ಹಣ ಪ್ರಾಥಮಿಕ ಶಿಕ್ಷಣಕ್ಕಾಗಿ ಖೆರ್ಚಾಗುತ್ತದೆ, ಇದರಲ್ಲಿ ೧೧ಲಕ್ಷ ಪೌಂಡುಗಳಷ್ಟು ಕಟ್ಟಡಗಳಾಗಿ ಪ್ರತಿವರ್ಷ ನೀಡಲ್ಪಡುತ್ತವೆ

ನಮ್ಮ ದೇಶದಲ್ಲಿ ಪ್ರತಿ ೧೦೦ರಿಂದ ೪೦೦ಜನರ ನಡುವಿನ ಪ್ರತಿಯೊಂದೂ ಹಳ್ಳಿಗೆ ಒಂದರಂತೆ ಇದು ಸಾಧ್ಯವಿಲ್ಲದಿದ್ದರೆ ಎಂಥ ಸ್ಥಳಗಳಲ್ಲಿಯೇ ಆಗಲಿ, ಮಕ್ಕಳಿಗೆ ಹೋಗಿಬರಲು ಹೆಚ್ಚು ದೂರವಾಗದಂತೆ —ಶಾಲೆಗಳನ್ನು ಸ್ಥಾಪಿಸಬೇಕು ಇವುಗಳ ಕಟ್ಟಡ ರಚನೆಗೆ ರಾಷ್ಟ್ರೀಯ ವಿಸ್ತರಣಾ ಸೇವೆ ಇತ್ಯಾದಿ ಅಭಿವೃದ್ಧಿ ಪ್ರಯತ್ನಗಳ ಸಹಾಯವನ್ನು ಪಡೆಯಬಹುದು ತೋಟ ತಯಾರಿಸಲೂ ಆಟದ ಮೈದಾನಿಗಾಗಿಯೂ ಭೂದಾನ ಚಳವಳಿಯನ್ನು ನಡೆಸಬಹುದು ಸಾಧ್ಯವಾದಷ್ಟು ಮಟ್ಟಿಗೆ ಮಧ್ಯಾಹ್ನದ ಊಟವನ್ನು ಮಕ್ಕಳಿಗೆ ಧರ್ಮಾರ್ಥವಾಗಿ ಶಾಲೆಯ ವರಾಂದಲ್ಲಿಯೇ ಕೊಡಬೇಕು. ಊರಿನವರು ಅರ್ಧ ಖರ್ಚನ್ನು ಹೊರುವ ತಳಪಡಿಯ ಮೇಲೆ ಈ ಕಾರ್ಯಕ್ರಮವನ್ನು ಪ್ರಾರಂಭಿಸಬಹುದು ಇದಲ್ಲದೆ ಸ್ಲೇಟು, ಕಡ್ಡಿ ಮತ್ತು ಪುಸ್ತಕಗಳನ್ನು ಧರ್ಮಾರ್ಥವಾಗಿ ಕೊಡಬೇಕು-ಎಂದು ಸಮಿತಿ ಸಲಹೆ ಮಾಡಿರುತ್ತದೆ

ರಾಜ್ಯದಲ್ಲಿ ಈಗ ಸುಮಾರು ೧೪ವರ್ಷ ಪ್ರಾಯದ ೬೩ ಲಕ್ಷ ಮಕ್ಕಳಿತ್ತಾರೆ, ಇದರಲ್ಲಿ ಶಾಲೆಯಲ್ಲಿ ಶಿಕ್ಷಣಪಡೆಯುತ್ತಿರುವವರು ೩೫ಲಕ್ಷ ಮಾತ್ರ ಘಟನೆಯಂತೆ ಸರಕಾರದ ವೇಲಿರುವ ಈ ಸಂಬಂಧದ ಜವಾಬ್ದಾರಿಕಾರ್ಯವನ್ನು ಅದಷ್ಟು ಶೀಘ್ರವಾಗಿ ನಿರ್ವಹಿಸಬೇಕು ಮಕ್ಕಳು ಸ್ಕೂಲ್ಜೆಯಿಂದಲಿ ಲೆಗೆ ಬರುವಂತೆ ಉತ್ತಮ ವಾತಾವರಣವನ್ನು ನಿರ್ಮಿಸಬೇಕು ಸಾಮಾನ್ಯವಾಗಿ ಹೆತ್ತವರ ಉದಾಸೀನತೆಯೇ ಮಕ್ಕಳು ಶಾಲೆಗೆ ಬರದಿರುವುದರ ಕಾರಣ ಸದ್ಯವದಂದ ಈಗ ಪ್ರತಿಯೊಂದು ಗ್ರಾಮದ ಮೂಲೆಯಿಂದಲೂ ಶಾಲೆಗಳಿಗೆ ಬೇಡಿಕೆ ಬರುತ್ತಿದೆ ಇದರ ಪದುಪಯೋಗ ಪಡೆಯದೆ ಬಿಡಬಾರದು. ಶಾಲೆಗೆ ಬಾರದ ಮಕ್ಕಳ ಹೆತ್ತವರೊಡನೆ ಅಧ್ಯಾಪಕರು ಸಂಪರ್ಕವನ್ನು ಬೆಳೆಸಿ, ಪರಿಸ್ಥಿತಿಯನ್ನ ಸುಧಾರಿಸಲು ನೋಡಬೇಕು-ಎಂಬುದಾಗಿಯೂ ಸಮಿತಿ ಹೇಳಿರುತ್ತದೆ.

ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಕೊಡುವುದಕ್ಕೆ ಜನಾದೇಶವು ಅನುಕೂಲವಿಲ್ಲ, ಆದರೆ ನೈತಿಕ ಶಿಕ್ಷಣ ಕೊಡುವುದಕ್ಕೆ ಯಾರಿಂದೂ ವಿರೋಧವಿಲ್ಲ ಎಂದು ಸಮಿತಿ ಹೇಳಿದೆಯೆಂದು ವರದಿಯಾಗಿದೆ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ನೊಂಟಿ ಸೇರಿ ಪದ್ಧತಿಯನ್ನು ಸ್ಥಳೀಯ ವೈಶಿಷ್ಟ್ಯಗಳಿಗನುಸಾರವಾಗಿ ತಿದ್ದಿಕೊಂಡು ಅನುಸರಿಸುವ ಶಾಲೆಗಳನ್ನು ತೆರೆಯಬಹುದೆಂದೂ ಅದು ಸೂಚಿಸಿದೆಯಂತೆ ಏಕೋಪಾಧ್ಯಾಯ ಶಾಲೆಗಳಲ್ಲಿ ಕೆಲಸ ಮಾಡುವುದಕ್ಕೆ ಉತ್ತೇಜನೆಯ ರೂಪದಲ್ಲಿ ವಸತಿ ಸೌಕರ್ಯವನ್ನೂ ಒದಗಿಸಿಕೊಡಬೇಕು, ರ್ಗಾರಲ್ಲಿ ಮಾಡಿದ ಪಾಠ ಪಟ್ಟಿಯನ್ನು ಪರಿಷ್ಕರಿಸಲು ಸಿಬಂಧಿಯನ್ನು ನೇಮಿಸಬೇಕು, ಎಂಟನೇ ತರಗತಿಯ ಕೊನೆಗಿನ ಸರಕಾರಿ ಪರೀಕ್ಷಾ ಪದ್ಧತಿ ಈಗಿನಂತೆಯೇ ಮುಂದರಿಯಬೇಕು, ಆದರೆ ಇನ್ನೇ ತರಗತಿಯಿಂದ ಅನೇ ತರಗತಿಯ ವರೆಗೆ ಇಂಗ್ಲೀಷಿನ ಶಿಕ್ಷಣವನ್ನು ಕಡ್ಡಾಯವಾಗಿ ನೀಡಬೇಕು —ಎಂದು ವರದಿಯಲ್ಲಿದೆಯಾಗಿ ಗೊತ್ತಾಗುತ್ತದೆ

ಶಾಲೆಗಳ ಆಡಳಿತೆಯನ್ನು ವ್ಯಕ್ತಿಯೊಬ್ಬ ನೇವಹಿಸಿಕೊಂಡಿರುವುದಕ್ಕೆ ಬಡಬಾರದು, ಪ್ರತಿಯೊಂದೂ ಶಾಲೆಗೆ ಆಡಳಿತ ಮಂಡಳವನ್ನು ನೇಮಿಸಬೇಕು ಇದರಲ್ಲಿ ಒಬ್ಬಿಬ್ಬರು ಸರಕಾರದ ಪ್ರತಿನಿಧಿಗಳಿರಬೇಕು ಉಪಾಧ್ಯಾಯರೇ ಆಡಳಿತ ನಡೆಸುವ ಶಾಲೆಗಳಿಗೂ ಈ ಕ್ರಮವನ್ನು ವಿಸ್ತರಿಸಬೇಕು—ಎಂದು ಸಮಿತಿಯು ತಿಳಿಸಿದೆಯಂತೆ ಇನ್ನು ಮುಂದೆ ಜಿಲ್ಲಾ ಬೋರ್ಡ ಮತ್ತು ಗ್ರಾಮ ಪಂಚಾಯತುಗಳಿಗೆ ಶಾಲೆಗಳನ್ನು ನಡೆಸಿಗೊಡಬಾರದು ತನ್ನ ಅಧಿಕಾರ ವಲಯದಲ್ಲಿ ನಗರ ಸಭೆ ಶಾಲೆಗಳನ್ನು ನಡೆಸಬಹುದು; ಆದರೆ ಆದರ ಮೇಲಿಗೆ ಪ್ರಾದೇಶಿಕ ಮಂಡಳಿಗೆ ಆ ಅಧಿಕಾರ ಕೊಡಬೇಕು ಈ ಮಂಡಳದಲ್ಲಿ ಜಿಲ್ಲಾ ಬೋರ್ಡ, ಮತ್ತು ಗ್ರಾಮ ಪಂಚಾಯತುಗಳ ಪ್ರತಿನಿಧಿಗಳಿರಬೇಕು ಮಂಡಳದ ಅಧಿಕಾರಾವಧಿ ೩ ವರ್ಷ, ಸುಮಾರು ೩೦೦ ಶಾಲೆಗಳ ಆಡಳಿತವನ್ನು ಇಂಥ ಒಂದು ಮಂಡಳಿಕ್ಕೆ ಒಪ್ಪಿಸಬಹುದು, ಅಷ್ಟಕ್ಕಿಂತ ಹೆಚ್ಚಲ್ಲ ಜಿಲ್ಲಾ ಬೋರ್ಡಿಗೆ ಶಿಕ್ಷಣ ಸಂಬಂಧದಲ್ಲಿ ಈಗ ಬರುವ ಆದಾಯ ಈ ಪ್ರಾದೇಶಿಕ ಮಂಡಳಿಕ್ಕೆ ಇನ್ನು ಮುಂದೆ ಸಲ್ಲುತ್ತದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ
[ಸ್ಥಾಪನೆ 1930
ಪ್ರಧಾನ ಕಾರ್ಯಾಲಯ ಉಡುಪಿ]

ಸುಖಸಂತೋಷವನ್ನು ಬರಮಾಡಿಕೊಳ್ಳುವುದು ಹೇಗೆ?

ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಆಕಸ್ಮಿಕ ಘಟನೆಯು ಅವನ್ನು ನಡುದಾರಿಯ ಪರಿಗೆ ಹೋಗಿ, ಸಂಧಿಸಿ, ಮನೆಗೆ ಸ್ವಾಗತಿಸುವ ಕಾರ್ಯಕ್ರಮವಲ್ಲ ಕೆಲವು ವರ್ಷಗಳಷ್ಟು ಮುಂದಾಗಿಯೇ ತಕ್ಕ ಯೋಜನೆಯನ್ನು ಸಾದರಪಡಿಸಿದಾಗ ಇದರೆ ಅರ್ಥ ನಿಮ್ಮ ಗುರಿಯನ್ನು ಗೊತ್ತುಪಡಿಸುವುದು ಮತ್ತು ಅದನ್ನು ಸುಲಭವಾಗಿ ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ನಮ್ಮ ಉದ್ದೇಶವೂ ಕೆಲಸ ಈ ಬಗೆಯ ಕಾರ್ಯಕ್ರಮಗಳಲ್ಲಿ ನಿಮಗೆನ್ನು ಸಾಧ್ಯವೋ ಅಷ್ಟು ಉಳಿತಾಯವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ನಮ್ಮುದ್ದೇಶವೂ ವಿಷಯ ನಾವು ಇದಕ್ಕೆ ಪ್ರತಿ ಆರ್ಥ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಳಿತಾಯವು ಬೇಗನೆ ಬಳವಣಿಗೆಯನ್ನು ಹೊಂದುವಂತೆ ನೆರವಾಗುತ್ತೇವೆ

ಚಲಾವಣೆ ಭಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ

THE CANARA INDUSTRIAL & BANKING SYNDICATE LTD.
Head Office UDIPI, S India] [Estd 1925

ಕೊಡಗಿನ ಜನಜೀವನದ ಬೆಡಗು

ತಲ ಕಾವೇರಿಯ ರೋಮಾಂಚಕ ಸಂದರ್ಶನ

ಮೊನ್ನೆ ಸೋಮವಾರ ತುಲಾ ಸಂಕ್ರಮಣದಂದು ದಕ್ಷಿಣ ಭಾರತದ ಎಲ್ಲೆಡೆಯಿಂದಲೂ ಸಹಸ್ರಾರು ಮಂದಿ ಕೇರಿಗೆ, ತಲಕಾವೇರಿಗೆ, ಜನರು ಯಾತ್ರೆ ಹೊರಟಿದ್ದರು. ಆ ಪರ್ವದಿನದಲ್ಲಿ ಕಾವೇರಿಯ ಪುಣ್ಯ ಜಲದಲ್ಲಿ ತೀರ್ಥಸ್ನಾನಮಾಡಿ, ಧನ್ಯರಾಗುವುದೇ ಅವರ ಉದ್ದೇಶ.

ಪವಿತ್ರ ಪುಣ್ಯ ಕ್ಷೇತ್ರ

ತಲಕಾವೇರಿಯು ಕೊಡಗಿನ ಅತ್ಯಂತ ಪ್ರೇಕ್ಷಣೀಯ ಸ್ಥಳವೂ ಹೌದು. ಇಲ್ಲಿ ಪುಣ್ಯಕಾಮಿಗಳಷ್ಟೇ ಬರುವುದಲ್ಲ; ಕೊಡಗಿಗೆಬಂದ ಪ್ರವಾಸಿಗಳತಂಡವೂ ತಲ ಕಾವೇರಿಯನ್ನು ಸಂದರ್ಶಿಸಲು ತಪ್ಪುವುದಿಲ್ಲ; ಮಡಿಕೇರಿಯಿಂದ ೮೮ ಮೈಲುಗಳಷ್ಟು ದೂರ ಬೆನ್ನಾದ ಮೂರ್ಗದಲ್ಲಿಸಂಚರಿಸಿ, ಪ್ರಕೃತಿಯ ಮಡಲಲ್ಲಿಕೆಲವು ಗಳಿಗೆಗಳನ್ನು ಕಳೆಯಲು ಎಲ್ಲರಿಗೂ ಆನಂದವಾಗುತ್ತದೆ.

ಬ್ರಹ್ಮಗಿರಿ ಎಂದು ಕರೆಯಲ್ಪಡುವ ಉನ್ನತ ಬೆಟ್ಟವೇ ದಕ್ಷಿಣ ಭಾರತದ ಜೀವನಾಡಿಯಂತಿರುವ ಕಾವೇರಿಯ ಉಗಮ ಸ್ಥಳ. ಇಲ್ಲಿಂದ ಹರಿಯತೊಡಗಿ ೫೦೦ ಮೈಲುಗಳಿಗಿಂತಲೂ ಹೆಚ್ಚುದೂರ ಸಂಚರಿಸಿ; ಇಕ್ಕೆಲಗಳಲ್ಲಿಯೂ ಹಸಿರು ತುಂಬಿದ ಭತ್ತದ ಪೈರಿನಿಂದ ಸಿಂಗರಿಸಿ, ಬಂಗಾಳಾಖಾತವನ್ನು ಕಾವೇರಿಯು ಸೇರುತ್ತದೆ. ದಕ್ಷಿಣ ಭಾರತದ ಸಮೃದ್ಧಿಯ ಎಲ್ಲ ಶ್ರೇಯಸ್ಸೂ ಕಾವೇರಿಗೆ ಸಲ್ಲುತ್ತದೆ.

ನೈಸರ್ಗಿಕ ದೃಶ್ಯ

ಪ್ರವಾಸಿಯು ಬಸ್ಸು ಅಥವಾ ಕಾರಿನಲ್ಲಿ ಹೋಗುವಾಗ ಸುತ್ತಲೂ ಮನಸ್ಸನ್ನು ಮುದ್ದಾಗೊಳಿಸುವ ಚೆಲುವಿನ ನೋಟಗಳು ಕಣ್ಣಿಗೆ ಬೀಳುತ್ತವೆ. ಭತ್ತದ ಗದ್ದೆಗಳೂ, ಕಾಫಿ, ಏಲಕ್ಕಿ, ಮತ್ತು ಕಿತ್ತಳೆ ಹಣ್ಣಿನ ಕಲಬಾದ ಬೆಳೆಯಿರುವ ತೋಟಗಳೂ ಅರಣ್ಯ ಸಂಪತ್ತಿನಿಂದ ತುಂಬಿ ತುಳುಕುವ ಕೊಡಗಿಗೆ ಇನ್ನಷ್ಟು ವೈವ್ಯರ್ಯವನ್ನು ನೀಡುತ್ತವೆ. ಮಾನುಷ್ಯ ಕೃತ ಸಾಹಸಗಳನ್ನು ನಾಚಿಸುವಂತೆ ನಿಸರ್ಗದ ನರ್ತನವೇ ಇಲ್ಲಿ ನಜೆದಿದೆ ಎಂಬುದು ಪ್ರವಾಸಿಯ ಮೊದಲ ಅನುಭವವಾಗುತ್ತದೆ.

ಕೈಯಲ್ಲೊಂದು ಬಂದೂಕು ಹಿಡಿದಿದ್ದರೆ, ತಲಕಾವೇರಿಯಲ್ಲಿ ಬೇಟೆಗು ಏನೋದದಲ್ಲಿ ತನ್ಮಯರಾಗಬಹುದು; ಬರಿಕೈಯಲ್ಲೇ ಹೋದರೂ ಕಾವೇರಿ ಬೆಟ್ಟದ ನಡುವೆ ಝುಳು ಝುಳು ನಿನಾದದೊಡನೆ ಹರಿದು ಹೋಗುವ ರಮ್ಯ ಚಿತ್ರವನ್ನು ಕಂಡು ನಮಗೆ ಆನಂದವಾಗದಿರದು. ಸುತ್ತಲೂ ಎತ್ತರವಾಗಿ ನೆಗೆದು ನಿಂತಿರುವ ಬೆಟ್ಟಗಳಿರುವಾಗ ನಡುವೆ ಕಣಿವೆಯಲ್ಲಿ ಹಸಿರಿನ ತೋಳೆ ಅವರ್ಣನೀಯವಾದ ಆನಂದವನ್ನು ತಂದುಕೊಡುತ್ತದೆ.

ನಾಡಿನ ಇತಿಹಾಸ

ಕೊಡಗು ಈಗ ಪ್ರತ್ಯೇಕ ಆಸ್ತಿತ್ವವನ್ನು ಹೊಂದಿದೆ; ಕೇಂದ್ರ ಸರಕಾರದ ನೇರಾದ ಆಡಳಿತಕ್ಕೆ ಇದು ಒಳಪಟ್ಟಿದೆ. ಕಳೆದ ಚುನಾವಣೆಯ ಬಳಿಕ ಜನರಿಗೆ ಹೊಣೆಗಾರವಾದ ಶಾಸನ ಸಭೆಯೂ ಮಂತ್ರಿಮಂಡಳವೂ ಕೊಡಗಿನಲ್ಲಿ ಏರ್ಪಟ್ಟಿದೆ. ಈಚೆಗೆ ಪ್ರಕಟವಾದ ಫಜಲಿಅಲಿ ಆಯೋಗದ ವರದಿಯು ಕಾರ್ಯಗತವಾದರೆ, ಸಂಯುಕ್ತ ಕರ್ನಾಟಕ ರಾಜ್ಯದಲ್ಲಿಕೊಡಗು ಒಂದುಜಿಲ್ಲೆಯ ರೂಪದಲ್ಲಸೇರಿಹೋಗುತ್ತದೆ. ಆಗ ಉಳಿದ ಕನ್ನಡ ಪ್ರದೇಶಗಳೊಡನೆ ಕೊಡಗಿನ ಸಂಪರ್ಕ ಮತ್ತು ಸಂಬಂಧ ಇನ್ನಷ್ಟು ಗಾಢವಾಗುವುದು ನಿಶ್ಚಯ.

ಸುಮಾರು ೧೫೦೦ ಚದರ ಮೈಲು ವಿಸ್ತೀರ್ಣದ ಕೊಡಗು ಮೈಸೂರಿನೊಡನೆ ಈ ಗಾಗಲೇ ಆರ್ಥಿಕ ಸಂಬಂಧವನ್ನು ಹೊಂದಿರುತ್ತದೆ. ಭೌಗೋಲಿಕವಾಗಿಯೂ ಸಾಂಸ್ಕೃತಿಕವಾಗಿಯೂ ಕೊಡಗನ್ನು ಮೈಸೂರಿಂದ ಬೇರ್ಪಡಿಸುವುದು ಸಾಧ್ಯವಿಲ್ಲವೆಂದರೂ ತಪ್ಪಲ್ಲ. ಮಲೆನಾಡಿನ ಬಹು ದೊಡ್ಡ ಅಂಶವು ಮೈಸೂರಿನಲ್ಲಿದೆ; ಕೊಡಗು ಕೇವಲ ಮಲೆನಾಡು. ಸಂಯುಕ್ತ ಕರ್ನಾಟಕ ರಾಜ್ಯವು ಮಲೆನಾಡಿನ ಅಭಿವೃದ್ಧಿಗೆ ಉತ್ತಮ ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬಲ್ಲುದಾದುದರಿಂದ ಕೊಡಗಿನ ಸಂಪತ್ತು ಭವಿಷ್ಯದಲ್ಲಿ ಹೆಚ್ಚಿಕೊಳ್ಳುವ ಸಂಭವ ಸ್ಪಷ್ಟವಾಗಿ ಕಾಣಿಸುತ್ತದೆ.

ಜನ ಜೀವನ

ಮಂಗಳೂರಿನಿಂದ ಮೈಸೂರಿಗೆ ಪ್ರಯಾಣಿಸುವಾಗ ಮಡಿಕೇರಿಯ ದೊಡ್ಡ ಪೇಟೆನಡುವೆ ಸಿಗುತ್ತದೆ. ಇದು ಕೊಡಗಿನ ರಾಜಧಾನಿ—ಬೆಟ್ಟು ಸುತ್ತುವಿನ ವೈಭವಯುಕ್ತ ಆಡಳಿತೆಯು ಬಳಿಕ ೧೯೩೦-೧೯೩೫ ನೇ ವರ್ಷದ ವರೆಗೆ ಸ್ಥಳೀಯ ಅರಸರ ಆಳಿಕೆಯನ್ನು ಅದು ಅನುಭವಿಸಿತು. ಬ್ರಿಟಿಷರು ಇಮ್ಮಡಿ ವೀರ ರಾಜ ಅರಸರನ್ನು ರಾಜ್ಯಭ್ರಷ್ಟರಾಗಿಮಾಡಿ,ಕೊಡಗನ್ನು ತಮ್ಮ ಕಮಿಷನರರಿಗೆ ಒಪ್ಪಿಸಿ ಕೊಟ್ಟರು.

ಕೊಡಗಿನ ಜನಸಂಖ್ಯೆ ಸುಮಾರು ೨೫೦,೦೦೦. ಇವರೆಲ್ಲ ಕನ್ನಡ ಬಲ್ಲವರು; ವ್ಯವಹಾರದಭಾಷೆಯೂಕನ್ನಡ.ಆದರೆಕೊಡಗರೆಂದು ಕರೆಯಲ್ಪಡುವ ವಿಶಿಷ್ಟ ಜನ ಸಮುದಾಯವೊಂದು ಇಲ್ಲಿದೆ—ಇವರ ಸಂಖ್ಯಾ ಪ್ರಮಾಣ ಸುಮಾರು ೬೦೦೦೦ ಈ ಜನರ ಆಭರುಚಿಯಲ್ಲಿ ಒಳ್ಳೆಯ ಪರಿಷ್ಕಾರ ಕಾಣುಬರುತ್ತದೆ.ಅವರು ನಿಷ್ಣಾತರಾದ ಬೇಟೆಗಾರರು; ಯುದ್ಧ ಕ್ಷೇತ್ರದಲ್ಲಿ ನಿಷ್ಣಾತರಾಗಿ ಮೆರೆಯಬಲ್ಲ ಪರಂಪರೆಯುಳ್ಳವರು; ಸಾಹಸಿಗಳೂ ಶೂರರೂ ಆಗಿರುವಂತೆ ಕಲಾಪ್ರಿಯರೂ ಹೌದು.

ಸುಸಂಸ್ಕೃತ ಪುತ್ರರು

ಭಾರತದ ಪದಾತಿದಳದ ಸರ್ವ ಪ್ರಥಮ ಭಾರತೀಯ ಸೇನಾಪತಿಯೂಗಿ ಹೆಸರು ಹೊಂದಿ, ಈಗ ಆಸ್ಟ್ರೇಲಿಯದಲ್ಲಿ ಭಾರತ ಸರಕಾರದ ರಾಯಭಾರಿಯೂಗಿರುವ ಜನರಲ್ ಕಾರ್ಯಪ್ಪನವರೂ ಕೊರಿಯದಲ್ಲಿ ಯುದ್ಧ ಕೈದಿಗಳ ಯೋಗ ಕ್ಷೇಮವನ್ನು ನೋಡಿಕೊಂಡ ದಕ್ಷ ಭಾರತೀಯ ಸೇನಾಪತಿ ಲೆಫ್ಟನೆಂಟ್ ಜನರಲ್ ತಿಮ್ಮಯ್ಯ ನವರೂ ಕೊಡಗಿನ ಸುಪುತ್ರರು.

ಸಾಮಾನ್ಯ ಭಾರತೀಯರಿಗಿಂತ ಭಿನ್ನವಾದ ಸಂಸ್ಕಾರವನ್ನು ಕೊಡಗರು ಹೊಂದಿರುವರೆಂದು ಅವರ ಉಡುಪು ತೊಡುಪುಗಳೇ ವ್ಯಕ್ತಪಡಿಸುತ್ತವೆ. ಹಬ್ಬ ಹರಿದಿನಗಳಲ್ಲಿಯೂ ಮುದುವೆ ಮುಂಜಿಗಳಲ್ಲಿ ತಮ್ಮರಾಷ್ಟ್ರೀಯ ಪೋಷಾಕನ್ನು ಧರಿಸಿ ಬರುವ ಕೊಡಗರು ಸಾಮಾನ್ಯ ಸಂದರ್ಶಕನಿಗೆ ಆಶ್ಚರ್ಯವನ್ನುಂಟು ಮಾಡುತ್ತಾರೆ; ಅವರ ಗಂಭೀರ ನರ್ತನ, ಉಲ್ಲಾಸ ಮತ್ತು ಉತ್ಸಾಹದ ಹೊಳೆ ಹರಿಸುವ ಹಾಡು—ಅವರ ಸಂಸ್ಕೃತಿಯ ಕುರಿತು ಅಭಿಮಾನ ಮೂಡಿಸುತ್ತದೆ.

ಕೃಷಿಯಲ್ಲಿ ಆಸಕ್ತಿ

ಮಡಿಕೇರಿಯಕ್ಕಿದ್ದಾಗ ಓಂಕಾರೇಶ್ವರ ಮಂದಿರವನ್ನುನೋಡಿ, ಅಲ್ಲಿ ಹಿಂದು ಮಾಗು ಮುಸ್ಲಿಂ ಕಲೆಯು ಸಂಗಮವಾಗಿರುವುದನ್ನು ಕಂಡು ಪ್ರವಾಸಿಕರು ಆನಂದಿಸಬಹುದು. ಕೊಡಗಿನ ಹಿಂದಿನ ರಾಜರ ಕೋಟೆಯನ್ನೂ ಅರಮನೆಯನ್ನೂ ನೋಡಿ ಸಂತೋಷಿಸಬಹುದು. ಯಾವನಾದರೂ ಕೊಬ್ಬು ತೋಟಗಾರನೆ ಆಶಿಷ್ಕ ಲಭ್ಯವಾದರೆ, ಮೋಜಿನ ಮೃಗಯಾವಿಹಾರಕ್ಕೂ ಸಿದ್ಧರಾಗಬಹುದು.

ಕೊಡಗಿನ ಮಹಿಳೆಯರನ್ನು ಅವರು ಸೀರೆಯುಡುವ ವಿದ್ಧತಿಯಿಂದಲೂ ತಲೆಗೆ ಕಟ್ಟುಕೊಳ್ಳುವ ಬಣ್ಣಾದ ರುಮಾಲಿನಿಂದಲೂ ಕೂಡಲೇ ಪ್ರತ್ಯೇಕಿಸಿ, ಗುರುತಿಸಬಹುದು. ಈ ನಾಡಿನಲ್ಲಿ ಎಲ್ಲರೂ ಗಟ್ಟಿ ಮುಟ್ಟಾದ ಆಳುಗಳು; ಸುಂದರ ಶರೀರ ಪಡೆದ ಪುಣ್ಯ ಜೀವಿಗಳು. ದುಡಿಯವವರೆ ದರಲ್ಲಿ ಅವರಿಗೆ ಪಂಚಾ ಪ್ರೀತಿ—ಅವರ ಹುತ್ತರಿ ಹಾಡು ಕೃಷಿಯಲ್ಲಿ ಅವರಿಗಿರುವ ಅಭಿಮಾನವನ್ನ ದ್ಯೋತಕವಾಗಿದೆ. ಇದು ಕೊಡಗಿನ ಕುರಿತಾಗಿಸಂದರ್ಶಕರಲ್ಲೂ ಸದ್ಭಾವನೆಯನ್ನು ಹೆಚ್ಚಿಸುತ್ತದೆ. ನಮ್ಮ ಜಿಲ್ಲೆಯ ಪ್ರಸಿದ್ಧ ಕನ್ನಡ ಕವಿ ದಿವಂಗತ ಪಂಜೆಯವರು ಕೊಡಗಿನ ಬೆಡಗನ್ನು ವರ್ಣಿಸಿ ಬರೆದ ೪ ಕವಿತೆಗಳ ಸಾಲುಗಳು ಪದೇ ಪದೇ ನನ್ನ ನೆನಪಿಗೆ, ಆ ನಾಡಿಗೆ ಹೋಗಿಬಂದ ಬಳಿಕ, ಬರುತ್ತಿರುತ್ತವೆ.

THE CANARA MUTUAL
Assurance Company Limited
Managing Director: T. R. A. PAI
Head Office: **UDIPI**, S. India.] [Estd: 1935.

ಅತ್ಯುತ್ತಮ ಜೋನಸ್

ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪ್ಯಾಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund -Navis" UDIPI, S. India.

15 ದಿವಸಗಳ ರಿಯಾಯಿತಿ

ಒಂದು ಫೌಂಟಿನ್ ಪೆನ್" ಅಥವಾ ಒಂದು ಸಿಗರೇಟು ಲೈಟರ್ ಧರ್ಮಾರ್ಥ. ಪ್ರತಿಯೊಂದಕ್ಕೆ ೬ ವರ್ಷ ಗ್ಯಾರಂಟಿ. ಪಾಕೆಟ್ ವಾಚ್ 9/-, ಉತ್ತಮ 11/- ಟಾಯಂಪೀಸು (ಅಲಾರಮ್) 12/; ಉತ್ತಮ 14/.

ಸೈಜು 7¾ ನಂಬ್ರ 15



15 ಜುವೆಲುಗಳ ರೋಲ್ಡ್ ಗೋಲ್ಡ್ –31/-
5 ಜುವೆಲುಗಳ ಉತ್ತಮ – 21/.

ಸೈಜು 9¾ ವಾಟರ್‌ಪ್ರೂಫ್ ನಂಬ್ರ 16

17 ಜುವೆಲುಗಳುಳ್ಳ ಸ್ಟೀಲಿನದ್ದು 40/-
15 ಜುವೆಲುಗಳುಳ್ಳ ,, 35/-

ಸೈಜು 8¾ ನಂಬ್ರ 18



15 ಜುವೆಲುಗಳುಳ್ಳ ರೋಲ್ಡ್‌ಗೋಲ್ಡ್ 29/-
5 ,, (ಲೇಡಿಸ್ ಮತ್ತು ಜಂಟ್ಸ್)20/-
13 ಸ್ಟೋನ್ ಸೆಕೆಲ್ಡ – 16/-

ಪತ್ರವ್ಯವಹಾರ ಇಂಗ್ಲೀಷಿನಲ್ಲಿ. ಟಪ್ಪಾಲು ವೆಚ್ಚ 1-8-0.

CALCUTTA WATCH CO. (Sec. 268)
Post Box No. 12203, CALCUTTA—5.



ಮೈಸೂರಿನ ವೈಶಿಷ್ಟ್ಯ ರಕ್ಷಕರ ಪ್ರಕಟಣೆ

ಸಂಯುಕ್ತ ಕರ್ನಾಟಕ ರಾಜ್ಯದ ಕುರಿತು ತೀವ್ರ ಭಿನ್ನಾಭಿಪ್ರಾಯ

ಸಂಯುಕ್ತ ಕರ್ನಾಟಕ ರಾಜ್ಯವನ್ನು ರಚಿಸಲು ಫಜಲಿ ಅಲಿ ಆಯೋಗವು ಸಿಫಾರಸು ಮಾಡಿರುವುದರಿಂದ ಸಾಮಾನ್ಯವಾಗಿ ಮೈಸೂರಿನ ಪ್ರಜೆಗಳಿಗೂ ಮೈಸೂರೇತರ ಪ್ರದೇಶಗಳ ನಾಗರಿಕರಂತೆ ಸಂತೋಷವಾಗಿದೆ; ಆದರೆ "ಮೈಸೂರಿನ ವೈಶಿಷ್ಟ್ಯ"ವನ್ನು ರಕ್ಷಿಸಿಕೊಳ್ಳುವುದರಲ್ಲಿ ವಿಶೇಷವಾದ ಆಶಕ್ತಿಯುಳ್ಳ ಕೆಲವು ವರ್ಗಗಳು ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿರುವುದೆಂದು ವರದಿಗಳಿಂದ ತಿಳಿದು ಬರುತ್ತದೆ

ವಿರಸದ ಕಾರಣ

ಆಯೋಗ ಫೇಮಕ ಗೊಂಡ ಕೆಲಸ ಮುಗಿದ ಬಳಿಕ ನಿಧಾನವಾಗಿ ವ್ಯಕ್ತವಾಗ ತೊಡಗಿದ ಮೈಸೂರಿನ ಕೆಲವು ಪ್ರಮುಖರ ನಿಲುಮೆಯು ಈಗ ವಿಲಕ್ಷಣವಾದ ವಿರೋಧದ ಸ್ವರೂಪವನ್ನು ತಾಳಿದೆ. ರಾಜಕೀಯ ಕೈವಾಡವಿರುವ ಈ ವಿರೋಧದಲ್ಲಿ ವಿದ್ಯಾರ್ಥಿಗಳೂ ಭಾಗಿಯಾಗಿ, ಪ್ರಶ್ನೆಯನ್ನು ಅನಾವಶ್ಯಕವಾಗಿ ಜಟಿಲವಾಗಿ ಮಾಡುತ್ತಿದ್ದಾರೆ. ಎರಡು ಕರ್ನಾಟಕ ರಾಜ್ಯಗಳನ್ನು ರಚಿಸುವುದಕ್ಕೆ ಆಯೋಗವು ಸಮ್ಮತಿಸದಿರುವುದು ಮತ್ತು ರಾಜ್ಯ ಪ್ರಮುಖರ ಹುದ್ದೆಯನ್ನು ರದ್ದುಗೊಳಿಸಲು ಅದು ಸಿಫಾರಸು ಮಾಡಿರುವುದು ಮೈಸೂರಿನ ವೈಶಿಷ್ಟ್ಯದ ರಕ್ಷಕರಿಗೆ ಬಲವಾದ ಆಘಾತವನ್ನು ಉಂಟುಮಾಡಿದೆ. ಅವರು ಬಹಿರಂಗವಾಗಿ ಚಳವಳ ನಡೆಸಿ ವಿರಸದ ವಾತಾವರಣವನ್ನು ಸೃಷ್ಟಿಸಿರುವುದಕ್ಕೆ ಇದೇ ಮೂಲಕಾರಣ.

ಪ್ರಬಲ ಭಿನ್ನಾಭಿಪ್ರಾಯ

ಮೈಸೂರಿನ ಮಂತ್ರಿ ಮಂಡಳದಲ್ಲಿ ವಿಕೇಕರಣದ ವಿರೋಧ ಧ್ವನಿಯು ಆಗಾಗ್ಗೆ ಏಳುತ್ತಿತ್ತೆಂದು ಮುಂಜೆಯೇ ಘಟನೆಗಳು ಸ್ಪಷ್ಟ ಪಡಿಸಿದ್ದವು; ಮುಖ್ಯವಾಗಿ ಶಿಕ್ಷಣ ಮಂತ್ರಿ ಶ್ರೀ ಎ. ಜಿ. ರಾಮಚಂದ್ರ ರಾವ್, ಕಂದಾಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪ ಮತ್ತು ಆರೋಗ್ಯ ಮಂತ್ರಿ ಶ್ರೀ ಟಿ. ಚೆನ್ನಯ್ಯ ಇವರು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಸಂಯುಕ್ತ ಕರ್ನಾಟಕ ರಾಜ್ಯದ ರಚನೆಗೆ ತೋರಿಸುತ್ತಿದ್ದ ಸಹಾನುಭೂತಿಯನ್ನು ವಿರೋಧಿಸುತ್ತಿದ್ದರು. ಇತ್ತೀಚೆಯವರೆಗೆ ಶಾಸನಾಂಗದ ಕಾಂಗ್ರೆಸು ಪಕ್ಷದ ಪ್ರತೀವ ಸ್ಥಾನದಲ್ಲಿದ್ದ ಶ್ರೀ ಎನ್. ಹುಚ್ಚುಮಾಸ್ತಿ ಗೌಡರಲ್ಲದೆ ಬೇರೆ ಕೆಲವು ಜನ ಪ್ರತಿನಿಧಿಗಳೂ ಮುಖ್ಯ ಮಂತ್ರಿಗಳ ನಿಲುಮೆಯನ್ನು ವಿರೋಧಿಸಿ, ಭಿನ್ನಾಭಿಪ್ರಾಯವನ್ನು ವ್ಯಕ್ತ ಪಡಿಸಿದ ಮಂತ್ರಿಗಳನ್ನು ಬೆಂಬಲಿಸುತ್ತಿದ್ದರು. ಮಂತ್ರಿ ಮಂಡಳದಲ್ಲಿ ಪ್ರಬಲ ಭಿನ್ನಾಭಿಪ್ರಾಯ ವಿದ್ದ ದೆಸೆಯಿಂದಲೇ ಶೇಷಾದ್ರಿ ಸಮಿತಿಯನ್ನು ರಚಿಸಲಾಯಿತೆಂದೂ ಈವರೆಗೆ ಬಹು ಸಂಖ್ಯಾಕ ಜನ ಪ್ರತಿನಿಧಿಗಳ ಬೆಂಬಲ ದೊರೆತ್ತೂ ಸಚಿವ ಸಂಪುಟದಲ್ಲಿ ವಿರೋಧ ಮತ್ತು ಉಳಿದುದರಿಂದ ಆಯೋಗಕ್ಕೆ ಮೈಸೂರು ಸರಕಾರ ತನ್ನ ಅಭಿಪ್ರಾಯವನ್ನು ತಿಳಿಸುವುದಾಗಲಿಲ್ಲವೆಂದೂ ಈಗ ಸ್ಪಷ್ಟವಾಗಿದೆ.

ಸಚಿವತ್ರಯರ ಪ್ರಕಟಣೆ

ಇದೇ ೧೦ನೇ ದಿನಾಂಕ ಮೈಸೂರಿನಲ್ಲಿ ಪ್ರಾರಂಭವಾಗಿರುವ ಶಾಸನಾಂಗದ ದಸರೆಯ ಅಧಿವೇಶನ ಕಾಲದಲ್ಲಿ ಮಂತ್ರಿಮಂಡಳದಲ್ಲಿರುವ ಭಿನ್ನಾಭಿಪ್ರಾಯವು ಸಂಯುಕ್ತ ಪ್ರಕಟಣೆಯೊಂದರ ಮೂಲಕ ಅತ್ಯಂತ ಸ್ಪಷ್ಟರೂಪದಲ್ಲಿ ವ್ಯಕ್ತವಾಯಿತು. ಮೇಲೆ ಉಲ್ಲೇಖಿಸಿದ ಮಂತ್ರಿತ್ರಯರ ಮತ್ತು ಶಾಸನಾಂಗದ ಕೆಲವು ಸದಸ್ಯರ ಸಹಿಯೊಡನೆ ಹೊರಬಿದ್ದಿರುವ ಈ ಹೇಳಿಕೆಯು ಶಾಸನಾಂಗದಲ್ಲಿ ತೀಕ್ಷ್ಣ ಚರ್ಚೆಯ ವಿಷಯವಾಯಿತು. ಪ್ರಕಟಣೆ ಹೀಗೆ ಹೇಳುತ್ತದೆ—

"ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸಿದ ಆಯೋಗದ ಸೂಚನೆಗಳು ಹೃದಯಾಹಾದು ಮತ್ತು ವಿದರ್ಭಗಳಿಗೆ ಏನು ನೀಡಲಾಗಿದೆಯೊ ಅದರಿಂದ ಮೈಸೂರನ್ನು ವಂಚಿತವಾಗಿ ಮಾಡಿವೆ. ಆಯೋಗದವರು ರೂಪಿಸಿರುವ ಭಾರತದ ಮುಂದಿನ ಭೂಪಟದಲ್ಲಿ ಮೈಸೂರಿಗಿಂತ ಕಡಿಮೆ ಜನಸಂಖ್ಯೆಯಿರುವ ಮೇಲಿನೆರಡು ರಾಜ್ಯಗಳು ಸ್ವಾತಂತ್ರ್ಯ ಪಡೆದಿವೆ. ಅವರಿಗೆ ತನ್ನ ಮಹಾರಾಜರುಗಳಿಂದ ಭವ್ಯವಾಗಿ ಕಟ್ಟಲ್ಪಟ್ಟು ಮಾದರಿ ರಾಜ್ಯವೇ ದು ಹೆಸರುಸೊಂದಿದ ಮೈಸೂರನ್ನು ಅಖಿಲ ಭಾರತದ ಚಿತ್ರದಿಂದ ಅಳಸಿಬಿಡಲಾಗಿದೆ. ಮೈಸೂರಿಂಬ ಹೆಸರನ್ನಾದರೂಮುಂದರಿಸಲು ಕ್ಕೂ ಆಯೋಗ ಬಿಟ್ಟಿರುವದಿಲ್ಲ. ಕನಗಿಂತ ವಿಸ್ತಾರವಾದ ಹಿಂದುಳಿದ ಪ್ರದೇಶದಲ್ಲಿ ಆದನ್ನು ಸಮಾವೇಶಗೊಳಿಸಲಾಗಿದೆ. ಇಂಥ ಪರಿಸ್ಥಿತಿಯಲ್ಲಿ ಮೈಸೂರಿನ ಪ್ರಗತಿ ಮತ್ತು ಅಭ್ಯುದಯವು ಕುಂಠಿತವಾಗುವುದು ನಿಶ್ಚಯ; ಒಟ್ಟಾರೆ ಮೈಸೂರಿನ ಮಟ್ಟಿಗೆ ಸೂಚನೆಗಳು ನಿಜವಾಗಿಯೂ ಘಾತಕವಾಗಿವೆ

(ಉಸಿ ಪುಟ ನೋಡಿರಿ)


ಎಲ್ಲರಿಗೂ ಗೊತ್ತು —
ಪ್ರತಿಯೊಂದು ಬ್ರೂಕ್ ಬಾಂಡ್ ಚಹಾ ಪೊಟ್ಟಣದಿಂದಲೂ ನೀವು ಹೆಚ್ಚು ಬಟ್ಟಲು ಉತ್ತಮ ಚಹಾವನ್ನು ಪಡೆಯುತ್ತೀರಿ
ಪ್ರತಿನಿತ್ಯವೂ ಜನರು 24,90,496 ಬ್ರೂಕ್ ಬಾಂಡ್ ಚಹಾ ಪೊಟ್ಟಣಗಳನ್ನು ಕೊಳ್ಳುತ್ತಾರೆ
ಬ್ರೂಕ್ ಬಾಂಡ್ ಚಹಾ ಹಸನಾಗಿರುವುದು, ಕಾರಣ ಅದು ತ್ವರಿತದಿಂದ ತಲುಪಿಸಲ್ಪಡುವುದು
Brooke Bond Tea
Brooke Bond Tea
ಆದಕಾರಣವೇ ಇತರ ಯಾವದೇ ಚಹಾಗಿಂತಲೂ
ಬ್ರೂಕ್ ಬಾಂಡ್ ಚಹಾವನ್ನೇ
ಹೆಚ್ಚು ಜನರು ಕುಡಿಯುತ್ತಾರೆ!

(೩ನೇ ಪುಟದಿಂದ)

"ಎರಡು ಕರ್ನಾಟಕ"

ಮಂತ್ರಿಗಳ ಹೇಳಿಕೆ ಮುಂದೆ ಹೀಗೆ ತಿಳಿಸುತ್ತದೆ—"ಮೈಸೂರಿನ ಜನರು ಕನ್ನಡ ಪ್ರದೇಶಗಳನ್ನು ಎರಡು ರಾಜ್ಯಗಳಲ್ಲಿ ವಿಘಟಿಸಬೇಕೆಂದು ಕೇಳುತ್ತಿದ್ದಾರೆ. ಕೊಳ್ಳೆಗಾಲ, ಕೊಡಗು ಮತ್ತು ದಕ್ಷಿಣ ಕನ್ನಡವನ್ನೊಳಗೊಂಡ ಮೈಸೂರು ಒಂದು ರಾಜ್ಯವಾಗಲಿ; ಮೈಸೂರಿನಲ್ಲಿರುವ ಕನ್ನಡ ಪ್ರದೇಶಗಳನ್ನೆಲ್ಲ ಒಟ್ಟುಗೂಡಿಸಿ ಕರ್ನಾಟಕವೆಂಬ ಹೆಸರಿನ ನ್ಯೂನ್ಯಂದುರಾಜ್ಯವಾಗಲಿ! ಇವೆರಡು ರಾಜ್ಯಗಳು ಜನಸಂಖ್ಯೆಯಲ್ಲಾಗಲೀ ವಿಸ್ತಾರದಲ್ಲಾಗಲೀ ಪ್ರದೇಶಗಳ ಆರ್ಥಿಕ ಹೊಂದಿಕೆಯಲ್ಲಾಗಲೀ ಸಮಾನ ಸ್ವರೂಪವನ್ನು ತಾಳುತ್ತವೆ. ಇವುಗಳು ತಮ್ಮೆರಡೂ ರಾಜ್ಯಗಳಿಗೆ ಶಾಂತಿಯನ್ನೂ ಉತ್ಕರ್ಷವನ್ನೂ ಸಂತೋಷವನ್ನೂ ತರುತ್ತವೆ; ಮತ್ತು ಭಾರತದ ಶಕ್ತಿಯನ್ನು ಹೆಚ್ಚಿಸುವ ಸಾಧನಗಳಾಗುತ್ತವೆ."

ಚಳವಳಿಯ ಬಲಾಬಲ

ಮೊದಲೇ ವಿಭಾಜಿತವಾಗಿರುವ ಬಳ್ಳಾರಿ ಜಿಲ್ಲೆಯನ್ನು ಸುನಃ ತುಂಡರಿಸುವುದಕ್ಕೆ ಈ ಮಂತ್ರಿಗಳ ವಿರೋಧವನ್ನು ಸೂಚಿಸಿದ್ದಾರೆ; ಆದರೆ, ಈ ಕಡೆಗೆ ಇತರರ ಮಾತಿರಲಿ, ಸ್ವತಃ ಬಳ್ಳಾರಿ ಜನತೆಯ ಗಮನವೂ ಸಾಕಷ್ಟು ಹೋಗಿಲ್ಲ. ಎಲ್ಲರೂ "ಎರಡು ಕರ್ನಾಟಕ"ಗಳ ಪ್ರತಿಪಾದನೆಯ ಕುರಿತಾಗಿಯೇ ಲಕ್ಷ್ಯವನ್ನು ಸೂರ್ಯೆಸುತ್ತಿದ್ದಾರೆ; ಈ ಆಂದೋಲನದ ಪರಿಣಾಮವೇನಾಗುವುದೋ ಎಂದು ಶಂಕಿಸುತ್ತಿದ್ದಾರೆ. ಎರಡು ಕರ್ನಾಟಕಗಳರಚನೆಯನ್ನು ವಿರೋಧಿಸಿ, ಸಂಯುಕ್ತ ಕರ್ನಾಟಕ ರಾಜ್ಯದ ತತ್ವವನ್ನು ಎತ್ತಿ ಹಿಡಿಯುವ ವಿಷಯದಲ್ಲಿ ಮೈಸೂರಿನೊಳಗೆ ಜನಾಭಿಪ್ರಾಯವನ್ನು ಸಂಘಟಿಸುವ ಕೆಲಸ ಸಾಕಷ್ಟು ತತ್ಪರತೆಯಿಂದ ನಡೆದಿರುವಂತೆ ಕಂಡು ಬರುತ್ತಿಲ್ಲ. ಆದರೆ, ಶೇಷಾದ್ರಿ ಸಮಿತಿಯ ವರದಿಯನ್ನು ಚರ್ಚಿಸಿದ ಕಾಲದಲ್ಲಿ ಏಕೀಕರಣಕ್ಕೆ ಬೆಂಬಲ ಕೊಟ್ಟ ಬಹು ಸಂಖ್ಯಾಕ ಸದಸ್ಯರು ಆಯೋಗದ ಸೂಚನೆಗಳಿಗೆ ಸಹ ಬೆಂಬಲ ಸೂಚಿಸಬಹುದೆಂದು ಏಕೀಕರಣವಾದಿಗಳ ವಿಶ್ವಾಸ. ಇದಲ್ಲದೆ, ಮೈಸೂರಿನ ಅಭಿಪ್ರಾಯಕ್ಕೆಂತಲೂ ಕೇಂದ್ರದ ಸಂಸತ್ತು ತಲೆಯುವ ನಿಲುವೇ ಆಯೋಗದ ಸಿಫಾರಸುಗಳಿಗೆ ಕೊನೆಯ ರೂಪ ಕೊಡುವುದರಿಂದ ಈ ಭಿನ್ನಾಭಿಪ್ರಾಯಕ್ಕೆ ಮಹತ್ವ ಕೊಡದಿದ್ದರೂ ನಡೆದೀತೆಂದು ಏಕೀಕರಣವಾದಿಗಳು ನಂಬಿರುವ ಹಾಗೆ ಕಾಣುತ್ತದೆ.

ಉಮೇದುವಾರರ ಅರ್ಹತೆ

ಕಾಂಗ್ರೆಸಿನ ಅಷ್ಟ ಸೂತ್ರಗಳ ಒರೆಗಲ್ಲು

ಭಾರತ ಸರಕಾರವು ೧೯೫೭ನೇ ಫೆಬ್ರವರಿ—ಎಪ್ರೀಲುಗಳ ನಡುವೆ ಚುನಾವಣೆಗಳನ್ನು ನಡೆಸುವ ವಿಚಾರವನ್ನು ಇಟ್ಟುಕೊಂಡಿರುವುದರಿಂದ, ಸದ್ಯ ಅಧಿಕಾರಾರೂಢವಾಗಿರುವ ಹಾಗು ರಾಷ್ಟ್ರದಲ್ಲಿ ಅತ್ಯಂತ ಪ್ರಬಲ ಹಾಗು ಸುಸಂಘಟಿತ ಪಕ್ಷವಾಗಿರುವ ಕಾಂಗ್ರೆಸ್ ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ತೀವ್ರ ಜನಾಲೋಚನೆಗಳನ್ನು ಈಗಾಗಲೇ ತೊಡಗಿರುತ್ತದೆ. ಕೇಂದ್ರ ಚುನಾವಣಾ ಸಮಿತಿಯೊಂದನ್ನು ಅದು ಕೆಲವು ವಾರಗಳ ಹಿಂದೆಯೇ ರಚಿಸಿಕೊಂಡಿತ್ತು; ಇದೀಗ ಮೊನ್ನೆ ೧೭-೧೪ ರಂದು ಜರಗಿದ ಕಾಂಗ್ರೆಸು ಕಾರ್ಯಕಾರಿ ಸಮಿತಿಯು ಕಾಂಗ್ರೆಸು ಪಕ್ಷದ ತಿಕೇಟನ್ನು ಪಡೆದು ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರಲ್ಲಿ ಯಾವ್ಯಾವ ಯೋಗ್ಯತೆಗಳಿರಬೇಕೆಂಬುದನ್ನು ಅಷ್ಟ ಸೂತ್ರಗಳ ಮೂಲಕ ನಿರ್ದೇಶಿಸಿರುತ್ತದೆ.

ಮನೋಭಾವದ ಪರಿಗಣನೆ

ಸಮಾಜವಾದಿ ಮಾದರಿಯ ಸಮಾಜವನ್ನು ರಚಿಸುವುದೇ ಕಾಂಗ್ರೆಸಿನ ಒಂದೇ ಶವಾಗಿರುವುದರಿಂದ, ಈ ಪಕ್ಷದ ಪರವಾಗಿ ಚುನಾವಣೆಯಲ್ಲಿ ಸ್ಪರ್ಧಿಸುವವರ ಮನೋಭಾವವು ಈ ಧ್ಯೇಯ ಸಾಧನೆಗೆ ಎಷ್ಟರ ಮಟ್ಟಿಗೆ ಅನುಕೂಲವಾಗಿದೆ ಎಂಬುದನ್ನು ಪರಿಗಣಿಸಬೇಕೆಂದು ಚುನಾವಣಾ ಸಮಿತಿ ತಿಳಿಸಿದೆ. ಅಸ್ಪೃಶ್ಯತೆಯ ಉಚ್ಚಾಟನೆ, ಭೂಸುಧಾರಣೆ, ಆರ್ಥಿಕ ಸಮತೆ, ಶ್ರಮಜೀವಿಗಳ ಕಲ್ಯಾಣ ಇತ್ಯಾದಿಗಳ ಕುರಿತು ಉಮೇದುವಾರನ ನಿಲುವುಗಳು ಎಷ್ಟರ ಮಟ್ಟಿಗೆ ಅನುಕೂಲವಾಗಿವೆ ಎಂಬುದಕ್ಕೆ ಮಹತ್ವ ಕೊಡಲ್ಪಟ್ಟಿದೆ. ಇದರೊಡನೆ ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಅಥವಾ ಯಾವುದೇ ವಿಧಾಯಕ ಕಾರ್ಯ ನಡೆಸುವ ಸಂಘದ ಚಟುವಟಿಕೆಗಳಲ್ಲಿ ಉಮೇದುವಾರನು ಶ್ರದ್ಧೆಯಿಂದ ಭಾಗ ವಹಿಸಿರುವನೇ ಎಂಬುದು ಸಹ ವಿಚಾರಿಸಲ್ಪಡಬೇಕೆಂದು ಸಮಿತಿ ಹೇಳಿದೆ.

ಮತದಾರರೊಡನೆ ಸಂಪರ್ಕ

ಈಗಾಗಲೇ ಜನರ ಪ್ರತಿನಿಧಿಯಾಗಿದ್ದರೆ, ಅಂಥ ಉಮೇದುವಾರನು ತನ್ನ ಮತದಾರ ಕ್ಷೇತ್ರದೊಡನೆ ಗಾಢವಾದ ಸಂಬಂಧವನ್ನು ಇಟ್ಟುಕೊಂಡಿರುವನೆ, ಅಲ್ಲಿಯ ಕ್ಷೇಮಾಭ್ಯುದಯಕ್ಕಾಗಿ ಕೆಲಸ ಮಾಡಿ, ಜನರ ಪ್ರೀತಿ ಸಂಪಾದಿಸಿರುವನೆ ಎಂಬುದನ್ನು ವಿಚಾರಿಸಬೇಕೆಂದು ಸಮಿತಿ ತೀರ್ಮಾನಿಸಿದೆ. ಹುರಿಯಾಳ್ತನಕ್ಕಾಗಿ ಅರ್ಜಿ ಹಾಕಿದವರಿಗೆ ಸಂಸತ್ತಿನ ಸದಸ್ಯತ್ವ, ಶಾಸನಾಂಗದ ಸದಸ್ಯತ್ವ, ಸ್ಥಳೀಯ ಸಂಸ್ಥೆಗಳ ಸದಸ್ಯತ್ವ ಇತ್ಯಾದಿ ಪ್ರಾತಿನಿಧಿಕ ಸ್ವರೂಪದ ಕೆಲಸ ನಿರ್ವಹಿಸಿ ಅನುಭವ ವಿದೆಯೆಂ ಇದ್ದರೆ ಈ ಅನುಭವ ಎಷ್ಟರ ಮಟ್ಟಿಗೆ ಮಧುರವಾಗಿದೆ ಎಂಬುದನ್ನು ಗಮನಿಸಬೇಕಾಗಿ ಸಮಿತಿ ನಿರ್ಣಯಿಸಿದೆ. ಹುರಿಯಾಳು ಹಿಂದೆ ನಡೆಸಿದ ಕೆಲಸಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕೆಂದೂ ಆದರ ಅಭಿಪ್ರಾಯವಾಗಿದೆ

ಪಕ್ಷನಿಷ್ಠೆಯ ಒರೆಗಲ್ಲು

ಉಮೇದುವಾರನು ಪಕ್ಷನಿಷ್ಠೆಯನ್ನು ತೋರಿಸುತ್ತಿರುವನೆಂಬುದು ಸಹ ಮುಖ್ಯವಾದ ವಿಷಯ: ಕಟ್ಟುನಿಟ್ಟಾಗಿ ಶಿಸ್ತಿನ ಪಾಲನೆ ಮಾಡುವವನನ್ನೆ ಹುರಿಯಾಳಾಗಿ ಆರಿಸಬೇಕೆಂದು ಸಮಿತಿ ನಿಶ್ಚಯಿಸಿದೆ. ಆತನು ಕ್ರಿಯಾಶೀಲ ಸದಸ್ಯನಾಗಿರಬೇಕೆಂದೂ ಪಕ್ಷಕ್ಕೆ ಸಲ್ಲಿಸಬೇಕಾದ ವಂತಿಗೆ ಹಣವನ್ನು ಕ್ರಮ ಪ್ರಕಾರ ಕೊಡುತ್ತಿರಬೇಕೆಂದೂ ಅದು ಎಚ್ಚರಿಕೆಯನ್ನು ಕೊಟ್ಟಿದೆ. ಹುರಿಯಾಳಾಗಿ ನಿಲ್ಲುವವರು ಮಾತ್ರ ಮೇಲಿನ ವಿಷಯಗಳನ್ನು ಗಮನಿಸಬೇಕೆಂದು ಭಾವಿಸುವುದು ತಪ್ಪು; ಜನರು ಸಹ ಈ ಅಷ್ಟ ಸೂತ್ರಗಳಕಡೆಗೆ ಗಮನ ಕೊಡುವುದು ಅವಶ್ಯವಾಗಿದೆ. ಏಕೆಂದರೆ, ಯೋಗ್ಯತೆಯುಳ್ಳ ಕುರಿಯಾಳುಗಳನ್ನು ಹುಡುಕುವುದರಲ್ಲಿ ಈ ಸೂತ್ರಗಳ ಒರೆಗಲ್ಲು ಜನರಿಗೆ ನೆರವಾಗುತ್ತದೆ.

ಆಯ್ಕೆಯ ಕ್ರಮ

ಕಾಂಗ್ರೆಸಿನ ಆಯ್ಕೆಯ ಕ್ರಮವು ಜನತೆಯ ಅಭಿಪ್ರಾಯವು ಸ್ಪಷ್ಟ ರೀತಿಯಲ್ಲಿ ವ್ಯಕ್ತಗೊಳ್ಳುವುದಕ್ಕೆ ಪೋಷಕವಾಗಿದೆ; ನಾಮಪತ್ರ ಸಲ್ಲಿಸುವ ದಿನದ ಆರು ತಿಂಗಳ ಮೊದಲೇ ಪ್ರದೇಶ ಕಾಂಗ್ರೆಸು ಸಮಿತಿಯು ಜಿಲ್ಲೆಯ ಕಾಂಗ್ರೆಸು ಸಮಿತಿಗಳಿಂದ ಆಯಾ ಜಿಲ್ಲೆಯ ಮತದಾರ ಕ್ಷೇತ್ರಗಳಲ್ಲಿ ನಿಲ್ಲಿಸಬೇಕಾದ ಉಮೇದುವಾರರ ಬಗ್ಗೆ ಸಲಹೆಗಳನ್ನು ಕೇಳಲಿದೆ. ಮುಂದೆ ಕೇಂದ್ರ ಚುನಾವಣಾ ಸಮಿತಿಯ ಒಬ್ಬ ಪ್ರತಿನಿಧಿಯೊಡನೆ ತನ್ನ ಕೆಲವು ಪ್ರತಿನಿಧಿಗಳನ್ನು ಸೇರಿಸಿ, ಈ ಸಂಯುಕ್ತ ಮಂಡಳವನ್ನು ಪ್ರತಿಯೊಂದು ಜಿಲ್ಲಾ ಕೇಂದ್ರಕ್ಕೆ ಕಳಿಸಿ, ಅಲ್ಲಿಯ ಸ್ಥಳೀಯ ಅಭಿಪ್ರಾಯವನ್ನು ಕೇಳಿಕೊಳ್ಳಲಿದೆ. ಕಾಂಗ್ರೆಸಿನ ಅಭ್ಯುದಯದಲ್ಲಿ ಆಸ್ಥೆಯುಳ್ಳವರು ಆಗ ಪ್ರತಿನಿಧಿ ಮಂಡಳಕ್ಕೆ ಯೋಗ್ಯ ಸೂಚನೆಗಳನ್ನು ಕೊಡಬಲ್ಲರು; ಸಾರ್ವಜನಿಕರು ಸಹ ಉತ್ತಮ ಮಾರ್ಗದರ್ಶನವನ್ನು ಈ ಸಂದರ್ಭದಲ್ಲಿ ಮಾಡಬಲ್ಲರು.

ಹುರಿಯಾಳುಗಳ ಯಾದಿ

ಸ್ಥಳೀಯ ಅಭಿಪ್ರಾಯವನ್ನು ಗಮನಿಸಿದ ಬಳಿಕ, ಈ ಮಂಡಳವು ಪ್ರತಿಯೊಂದು ಮತದಾರ ಕ್ಷೇತ್ರಕ್ಕೆಸಂಬಂಧಿಸಿ,ಐದಕ್ಕಿಂತ ಹೆಚ್ಚಿಲ್ಲದ ಹುರಿಯಾಳುಗಳ ಯಾದಿಯೊಂದನ್ನ ಪ್ರದೇಶ ಕಾಂಗ್ರೆಸು ಸಮಿತಿಗೆ ಒಪ್ಪಿಸುತ್ತದೆ. ಈ ಯಾದಿಯೊಳಗಿಂದ ಪ್ರದೇಶ ಕಾಂಗ್ರೆಸು ಸಮಿತಿಯು ಪ್ರತಿಯೊಂದು ಮತದಾರ ಕ್ಷೇತ್ರಕ್ಕೆ ಯಾರು ಉಮೇದುವಾರನಾಗಬೇಕೆಂದು ಆಯ್ಕೆ ಮಾಡುತ್ತದೆ; ಮತ್ತು ತನ್ನ ಆಯ್ಕೆಯ ಕಾರಣಗಳನ್ನು ವಿವರವಾಗಿ ನಮೂದಿಸಿ ಕೇಂದ್ರ ಚುನಾವಣಾ ಸಮಿತಿಗೆ ಈ ಹೆಸರನ್ನು ಕಳಿಸುತ್ತದೆ. ಒಂದು ವೇಳೆ ಪ್ರದೇಶ ಕಾಂಗ್ರೆಸಿನ ಆಯ್ಕೆಯು ಒಮ್ಮತದ್ದಲ್ಲವಾದರೆ, ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದವರ ಭಿನ್ನಾಭಿಪ್ರಾ

(೮ನೇ ಪುಟ ನೋಡಿರಿ)

ನಮ್ಮ ಹೊಸ ಯೋಜನೆ:

ಥ್ರಿಫ್ಟ್ ಡಿಪೋಜಿಟ್ ಖಾತೆ:

ಎಲ್ಲರಿಗೂ ಅನುಕೂಲವಾಗುವ ಉಳಿತಾಯ ಯೋಜನೆ.
ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿ.
ಧಾರಾಳವಾದ ಸೌಲತ್ತು.

ಇಂದೇ ಥ್ರಿಫ್ಟ್ ಡಿಪೋಸಿಟ್ ಖಾತೆಯನ್ನು ಪ್ರಾರಂಭಿಸಿ ನಿಮ್ಮ ಉಳಿತಾಯದಲ್ಲಿ ಆಧಿಕ ಮುನಾಫೆಯನ್ನು ಪಡೆಯಿರಿ.

ನಮ್ಮ ಯಾವದೇ ಶಾಖೆಯಲ್ಲಿ ವಿಚಾರಿಸಿರಿ:

CANARA BANK LIMITED

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

1956: ನಮ್ಮ ಸುವರ್ಣ ಮಹೋತ್ಸವದ ವರ್ಷ.

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಆಸ್ತ್ಮ, ಗೊರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13.

ಪ. ಕನ್ನಡದ ಕೆಳಗಿನ ವಿಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ನಿಜರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

ಆಂದೋಲನದ ಮನೋಭಾವ ಬೇಡ

ಕಾಂಗ್ರೆಸಿಗರ ಕರ್ತವ್ಯದ ಕುರಿತು ಎಚ್ಚರಿಕೆ

ಹೊಸದೆಹಲಿಯಲ್ಲಿ ೧೩ರಿಂದ ೧೫ನೇ ತಾರೀಕಿನ ವರೆಗೆ ಮೊನ್ನೆ ಸೇರಿದ ಅಖಿಲ ಭಾರತ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು ಬರುವ ನವಂಬರದ ೮ ಮತ್ತು ೯ನೇ ದಿನಾಂಕಗಳಲ್ಲಿ ಅಖಿಲ ಭಾರತ ಕಾಂಗ್ರೆಸಿನ ಪೂರ್ಣಾಧಿವೇಶನವನ್ನು ನೆರೆಯಿಸಲು ತೀರ್ಮಾನಿಸಿದೆ. ಇಲ್ಲಿ ಫಜಲ ಅಲಿ ಆಯೋಗದ ವರದಿಯನ್ನು ಕೂಲಂಕಷವಾಗಿ ಚರ್ಚಿಸಿ, ಕಾಂಗ್ರೆಸು ಪಕ್ಷವು ತನ್ನ ನಿಲುಮೆಯನ್ನು ನಿರ್ಧರಿಸುತ್ತದೆ.

ಧುರೀಣರೊಡನೆ ಸಮಾಲೋಚನೆ

ಎಲ್ಲರಿಗೂ ಒಪ್ಪಿಗೆಯಾದ ನಿಶ್ಚಿತ ತೀರ್ಮಾನಗಳಿಗೆ ಬರಲಾಗುವಂತೆ ವಿವಿಧ ಪ್ರದೇಶ ಕಾಂಗ್ರೆಸುಗಳ ಅಧ್ಯಕ್ಷರನ್ನು ನವಂಬರದ ೭ನೇ ತಾರೀಕು ಕಾಂಗ್ರೆಸಾಧ್ಯಕ್ಷ ಶ್ರೀ ಧೇಬರರು ಕರೆಸಿಕೊಳ್ಳುವರೆಂದು ತಿಳಿದಿದೆ. ಇಲ್ಲಿ ನಡೆಯುವ ಸಮಾಲೋಚನೆಯೂ ಇದೇ ತಿಂಗಳ ೨೧ನೇ ತಾರೀಕು ವಿವಿಧ ರಾಜ್ಯಗಳ ಮುಖ್ಯ ಮಂತ್ರಿಗಳು ಹೊಸದೆಹಲಿಯಲ್ಲಿ ಸೇರಿ ನಡೆಸುವ ವಿಚಾರ ವಿನಿಮಯಗಳಿಗೂ ಕಾಂಗ್ರೆಸಿನ ಧೋರಣೆಗೆ ನಿಶ್ಚಿತ ರೂಪವನ್ನು ಕೊಡಲು ಸಹಾಯಕವಾಗ ಬಹುದೆಂದು ವಿಶ್ವಾಸ ಪಡಲಾಗಿದೆ.

ಸಾಮಾನ್ಯ ಸ್ವಾಗತ

ಕಾರ್ಯಕಾರಿ ಸಮಿತಿಯು ಸಾಮಾನ್ಯವಾಗಿ ಆಯೋಗದ ಸೂಚನೆಗಳನ್ನು ಸ್ವಾಗತಿಸಿದೆ; ಸಾಧ್ಯವಾದಮಟ್ಟಿಗೆ ಆಯೋಗದ ಶಿಫಾರಸುಗಳನ್ನು ಇದ್ದುದಿದ್ದಂತೆ ಅಂಗೀಕರಿಸಬೇಕೆಂದು ಅಲ್ಲಿ ಧುರೀಣರು ಅಭಿಪ್ರಾಯ ವ್ಯಕ್ತಪಡಿಸಿದರೆಂದು ವರದಿಯಾಗಿದೆ. ಇದಕ್ಕೆ ಎಲ್ಲರ ಅನುಮೋದನೆ ದೊರೆತ್ತಿಲ್ಲವೆಂದೂ ಕೆಲವು ವಿಶಿಷ್ಟ ವಿಷಯಗಳಲ್ಲಿ ಆಯೋಗದ ಸಲಹೆಗಳನ್ನು ಒಪ್ಪಿಕೊಳ್ಳುವುದು ಸಾಧ್ಯವಿಲ್ಲ ವೆಂಬ ವಾದ ಮುಂದೆ ಬಂದಿರುವುದಾಗಿಯೂ ತಿಳಿದು ಬರುತ್ತದೆ.

ಕಾಂಗ್ರೆಸಿಗರ ಭಿನ್ನಾಭಿಪ್ರಾಯ

ಪುನರ್ಘಟಿತ ರಾಜ್ಯಗಳ ಮೇರೆಯನ್ನು ನಿರ್ಧರಿಸುವುದು ಕಾಂಗ್ರೆಸಿಗೆ ನುಂಗಲಾರದ ತುಕ್ಕಾಗಿದೆ-ಏಕೆಂದರೆ ಭಾಷೆಯು ತಳಹದಿಯ ಮೇಲೆ ರಚಿಸಲ್ಪಟ್ಟಿರುವ ವಿವಿಧ ಪ್ರದೇಶ ಕಾಂಗ್ರೆಸುಗಳು ಗಡಿವಲಯದ ಮೇಲೆ ತಮ್ಮ ಅಧಿಕಾರವೇ ನ್ಯಾಯಬದ್ಧವಾದುದೆಂದು ವಾದಿಸುತ್ತಿವೆ. ಪ್ರದೇಶ ಕಾಂಗ್ರೆಸುಗಳ ನಿಲುಮೆಗೆ ಕೆಲಮಟ್ಟಿಗೆ ಸಂಬಂಧಿಸಿದ ರಾಜ್ಯಗಳ ಮುಖ್ಯ ಮಂತ್ರಿ ಮತ್ತು ಸರಕಾರಿ ವಲಯದ ದೆಂಬಲವೂ ಸಿಗುತ್ತಿದೆ. ಹೀಗೆ ಕಾಂಗ್ರೆಸಿಗರೇ ಜಗಳಾಡುವ ಪರಿಸ್ಥಿತಿ ಏರ್ಪಟ್ಟಿದೆ ಎಂದು ಸಾಮಾನ್ಯವಾಗಿ ಹೇಳಬಹುದು.

ಮೈಸೂರಿನ ಸಹಕಾರವಿಲ್ಲ.

ಕರ್ನಾಟಕದ ಮಟ್ಟಿಗೆ ಬಹಳ ಕಠಿಣವಾದ ಪರಿಸ್ಥಿತಿಯೇ ಎದುರಿಗಿದೆ—ಮೈಸೂರು ಪ್ರದೇಶ ಕಾಂಗ್ರೆಸಿನ ಪ್ರತಿಕ್ರಿಯೆಯು ಇನ್ನೂ ತಿಳಿದು ಬಂದಿಲ್ಲ; ಅಲ್ಲಿಯ ಅಧ್ಯಕ್ಷ ಶ್ರೀ ಚೆನ್ನಯ್ಯನವರು ಎಲ್ಲ ಕಡೆ ಪ್ರಾಯೋಗಳವರನ್ನೂ ಒಟ್ಟಿಗೆ ಕರೆದು ಕೊಂಡು ಹೋಗುವ ಆತುರವನ್ನು ವ್ಯಕ್ತಪಡಿಸಿರುವುದೇನೂ ನಿಜ. ಆದರೆ ಮೈಸೂರಿನ ಹಿಸರನ್ನು ಉಳಿಸಗೊಡದಷ್ಟು ಮುಂದಕ್ಕೆ ಆಯೋಗ ಹೋಗಿರುವುದಕ್ಕೆ ತಮ್ಮ ಅಸಮಾಧಾನವನ್ನು ಸೂಚಿಸಲು ಅವರು ಸಂಕೋಚಪಟ್ಟಿಲ್ಲ. ಇದು ಭಿನ್ನಾಭಿಪ್ರಾಯ ಹೊಂದಿರುವ ಗುಂಪಿನ ಬಲ ಹೆಚ್ಚಲು ನೆರವಾಗಬಹುದು. ಈ ಭಿನ್ನಾಭಿಪ್ರಾಯವಿರುವ ದೆಸೆಯಿಂದಲೇ ಮೈಸೂರು ಸರಕಾರ ಯಾವ ಸಮರ್ಥವಾದವನ್ನೂ ಮುಂದೆ ಇಡುವ ಸ್ಥಿತಿಯಲ್ಲಿಲ್ಲವೆಂಬುದು ಸ್ಪಷ್ಟ.

ಸಮ್ಮತಿಸಾಧ್ಯತೆಯ ಅಗತ್ಯ

ಶ್ರೀ ಅಂಬಲಿಯವರು ಅಧ್ಯಕ್ಷರಾಗಿರುವ ಕರ್ನಾಟಕ ಪ್ರದೇಶ ಕಾಂಗ್ರೆಸು ಈಗ ಸಮ್ಮತಿಸಾಧ್ಯತೆಯನ್ನೆ ತೋರಿಸಬೇಕಾಗಿದೆ—ಎಂದರೆ ಯಾವುದೇ ಸರಕಾರದ ಬೆಂಬಲವಿಲ್ಲದೆ ಅವರು ಮುಖಾಮುಖ್ಯನ್ನು, ಕೆಲುಗರನ್ನು, ತಮಿಳರನ್ನು ಮತ್ತು ಕೇರಳೀಯರನ್ನು ಎದುರಿಸಬೇಕಾಗಿದೆ. ಮರಾಠರು ಬೆಳಗಾಂವಿ, ನಿಪ್ಪಾಣಿಗಳ ಮೇಲಷ್ಟೇಯಲ್ಲ, ಕಾರವಾರದ ಮೇಲೆ ಸಹ ತಮ್ಮ ಅಧಿಕಾರವಿದೆ ಎಂದಿದ್ದಾರೆ; ಆಂಧ್ರದ ಬಾಯಿಗೆ ಬಳ್ಳಾರಿ ಅಹುತಿಯಾಗಿ ಬಿದ್ದಿದೆ; ತಮಿಳರ ಪಾಲಿಗೆ ನೀಲಗಿರಿ ಜಿಲ್ಲೆಯಂಥ ಪ್ರದೇಶ ಹೋಗಿದೆ; ಕೇರಳೀಯರು ಕಾಸರಗೋಡನ್ನು ನುಂಗುತ್ತಿದ್ದಾರೆ; ಈ ಪರಿಸ್ಥಿತಿಯನ್ನು ಸುಧಾರಿಸಲೆಂದು ಕರ್ನಾಟಕ ಪ್ರದೇಶ ಕಾಂಗ್ರೆಸು, ಉಳಿದ ಪ್ರದೇಶಗಳ ಕಾಂಗ್ರೆಸಿನೊಡನೆ ವೈರ ಕಟ್ಟಿಕೊಳ್ಳಬಲ್ಲುದೆ? ಹಾಗೆ ಮಾಡಲು ವರಿಷ್ಠರು ಸಮ್ಮತಿಸಿಯಾರೆ?

ಎಚ್ಚರಿಸುವ ಗೊತ್ತುವಳಿ

ಇಲ್ಲವೆಂದು ಈಗ ತೀರ ಚಿನ್ನಾಗಿ ತಿಳಿದು ಬಂದಿದೆ; ಕಾಂಗ್ರೆಸು ಕಾರ್ಯಕಾರಿ ಸಮಿತಿಯು "ಪರಸ್ಪರ ತಿಳುವಳಿಕೆಯಿಂದ ಒಮ್ಮತಕ್ಕೆ ಬರಬಹುದಾದರೆ ಅಡ್ಡಿಯಿಲ್ಲ; ಆದರೆ "ಚಳವಳಿ ನಡೆಸಲು ತಾನು ಬಿಡುವಂತಿಲ್ಲ" ಎಂದು ಗೊತ್ತುವಳಿಯೊಂದರ ಮೂಲಕ ಸಾರಿರುತ್ತದೆ. ಶಿಫಾರಸುಗಳನ್ನು ಸಮಗ್ರ ದೃಷ್ಟಿಕೋಣದಿಂದ ವಿಚಾರಿಸಿಯೇ ತೀರ್ಮಾನಕ್ಕೆ ಬರಬೇಕು ಎಂದು ತಿಳಿಸಿರುತ್ತದೆ. ಒತ್ತಾಯವನ್ನಾಗಲೀ ಆಂದೋಲನವನ್ನಾಗಲೀ ಧ್ಯೇಯ ಸಾಧನೆಗೆ ಉಪಯೋಗಿಸುವ ಇತರ ಗುಂಪುಗಳೊಡನೆ ಕಾಂಗ್ರೆಸಿಗರು ಸೇರಿಕೊಳ್ಳಬಾರದೆಂದೂ ಅದು ಎಚ್ಚರಿಕೆಯನ್ನು ಕೊಟ್ಟಿದೆ. ಬಿಚ್ಚು ಮನಸ್ಸಿನ ಅಭಿಪ್ರಾಯಗಳನ್ನು ಕಾಂಗ್ರೆಸಿಗರು ವರಿಷ್ಠರ ಮುಂದೆ ಮಂಡಿಸಬಹುದೆಂದೂ ಆದರೆ ಅಶಾಂತಿಯನ್ನು ಹುಟ್ಟಿಸಬಹುದಾದ ಚಟುವಟಿಕೆಗಳಲ್ಲಿ ತೊಡಗಬಾರದೆಂದೂ ಈ ಗೊತ್ತುವಳಿಯು ನಿಜವಾದ ಉಶಯ.

ಫಜಲ ಅಲಿ ಆಯೋಗದ ವರದಿ

ಕೃಪಲಾನಿಯವರ ಪ್ರತಿಕ್ರಿಯೆ

ಪ್ರಜಾಸಮಾಜವಾದಿ ಪಕ್ಷದ ಧುರೀಣ ಆಚಾರ್ಯ ಕೃಪಲಾನಿಯವರು ಮದ್ರಾಸಿನಲ್ಲಿ ಪತ್ರಿಕೋದ್ಯೋಗಿಗಳ ಪ್ರಶ್ನೆಗೆ ಉತ್ತರಿಸುತ್ತಾ ಫಜಲ ಅಲಿ ಆಯೋಗದ ವರದಿಯ ಕುರಿತು ತಮ್ಮ ಸಮಾಧಾನಕರವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು. ವಿನೋದಕ್ಕಾಗಿ ಅವರು ಈ ಸೂಚನೆಗಳಂದಾಗಿ "ಭಾರತದ ಯಾವುದೇ ಭಾಗವು ಭಾರತದ ಹೊರಗಡೆ ಸೇರಿಸಲ್ಪಟ್ಟಲ್ಲ"! ಎಂದು ಹೇಳಿದರೂ ಆಯೋಗವು ಅತ್ಯುತ್ತಮವಾದ ಕೆಲಸವನ್ನು ನೂಡಿದೆ ಎಂದು ತೃಪ್ತಿಯನ್ನು ಸೂಚಿಸಿದರು.

ಬೇರೆ ಬೇರೆ ಭಾಷಾನುಗುಣ ಪ್ರದೇಶಗಳವ್ಯಪರಸ್ಪರ ಸಂಗತವಲ್ಲದ ಭಿನ್ನ ಭಿನ್ನ ಬೇಡಿಕೆಗಳನ್ನು ತೃಪ್ತಿಪಡಿಸುವುದು ಸಾಧ್ಯವೇ ಇಲ್ಲ ಎನ್ನುತ್ತಾ ಆಚಾರ್ಯ ಕೃಪಲಾನಿಯವರು ಯಾವುದೇ ಆಯೋಗವು ಇದಕ್ಕಿಂತ ಒಳ್ಳೆಯ ರೀತಿಯಲ್ಲಿ ಕೆಲಸವನ್ನು ನಡೆಸುವಂತಿರಲಿಲ್ಲ ಎಂದರು.

ತಮ್ಮದೇ ಆದ ವಿಶಿಷ್ಟ ಭಾಷೆಯುಳ್ಳ ಬೇರೆ ಬೇರೆ ಪ್ರದೇಶಗಳು ಅಡಳಿತ ಕ್ಷೇತ್ರದಲ್ಲಿ ಒಟ್ಟಿಗೆ ಕೆಲಸ ಮಾಡಬಲ್ಲವೆ ಎಂಬ ಪ್ರಶ್ನೆಗೆ ಆಚಾರ್ಯ ಕೃಪಲಾನಿಯವರು ದ್ವಿಭಾಷಾ ರಾಜ್ಯಗಳ ರಚನೆಯನ್ನು ವಿರೋಧಿಸಲು ತನಗೇನೂ ಕಾರಣ ಕಾಣುವುದಿಲ್ಲ ಎಂದರು. ಭಾರತದ ಭೂಪಟದ ಪುನಾರಚನೆಯು ಯಾವದೇ ಬಗೆಯದಾಗಲಿ ಅಲ್ಲಿ ದ್ವಿಭಾಷಾ ಸಮಸ್ಯೆಯಿಲ್ಲದಂತೆ ಪ್ರದೇಶಗಳನ್ನು ಪುನರ್ಘಟಿಸುವುದು ಸಾಧ್ಯವಿಲ್ಲದ ವಿಷಯ ಎಂದು ಸಾರಿದರು.

ಭಾಷಾನುಗುಣವಾಗಿ ರಾಜ್ಯಗಳನ್ನು ವಿಂಗಡಿಸುವುದು ರಾಷ್ಟ್ರದ ಐಕ್ಯದ ಮೇಲೆ ದುಷ್ಪರಿಣಾಮ ಬೀರುವುದೇ ಎಂಬ ಪ್ರಶ್ನೆಗೆ "ನನಗೆ ಭಾರತದ ಮೂಲ ಭೂತ ಐಕ್ಯದ ವಿಷಯದಲ್ಲಿ ಸಂಪೂರ್ಣ ವಿಶ್ವಾಸವಿದೆ; ಭಿನ್ನಾಭಿಪ್ರಾಯಗಳು ಗೌಣವಾಗಿವೆ, ಮತ್ತು ಅವುಗಳು ಸ್ಥಳೀಯ ಸ್ವರೂಪದ್ದಿವೆ" ಎಂದು ಉತ್ತರವಿತ್ತರು. ಭಾರತದ ಒಗ್ಗಟ್ಟನ್ನು ರಕ್ಷಿಸುವ ಸಂಗತಿ ಇಲ್ಲಿಯ ಸಂಸ್ಕೃತಿಯಾಗಿದೆ; ಈ ಸಂಸ್ಕೃತಿಯು ಒಂದೇ ಮೂಲದಿಂದ ಬಂದಿರುವುದರಿಂದ ಅದು ಭಾರತದ ಎಲ್ಲೆಡೆಯಲ್ಲೂ ಒಂದೇ ತೆರನಾಗಿದೆ—ಎಂದೂ ಅವರು ಹೇಳಿದರು.

ವಿದೇಶಗಳ ಉದಾಹರಣೆಯನ್ನು ಕೊಡುತ್ತಾ ಅವರು "ಯುಗೊಸ್ಲಾವಿಯದಲ್ಲಿ ಐದು ಮತ್ತು ಸ್ವಿಜರ್ಲೇಂಡಿನಲ್ಲಿ ಮೂರು ಭಾಷೆಗಳನ್ನಾಡುತ್ತಾರೆ. ಹೀಗೆ ಇವು ಬಹು ಭಾಷಾ ದೇಶಗಳಾಗಿದ್ದರೂ ಆ ರಾಷ್ಟ್ರಗಳ ಸಾಮಾನ್ಯ ಒಗ್ಗಟ್ಟಿಗೆ ಭಾಷೆಗಳಿಂದ ಆತಂಕವಾಗಿಲ್ಲ.' ಎಂಬುದಾಗಿ ಸ್ಪಷ್ಟ ಪಡಿಸಿದರು.

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶಿಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಚಂದಾದಾರರಲ್ಲಿ ವಿನಂತಿ.

ನವಯುಗದ ಚಂದಾ ಹಣವನ್ನು ಮನಿಯಾರ್ಡರು ಮೂಡಿರಿ, ಯಾ ಪೋಸ್ಟಲ್ ಆರ್ಡರು ಮೂಲಕ ಕಳುಹಿಸಿರಿ, ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಪಾವತಿ ಮಾಡಿರಿ.

ಇಲ್ಲವಾದರೆ

ನಾವು ಅನಿವಾರ್ಯವಾಗಿ ಕಳುಹಿಸುವ ವಿ. ಪಿ. ಪಿ. ಯನ್ನಾದರೂ ದಯವಾಡಿ ಸ್ವೀಕರಿಸಿ ಪ್ರೋತ್ಸಾಹಿಸಿರಿ.

—ಮೆನೇಜರ್.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೦-೧೦-'೫೫	೮

"ಎರಡು ಕರ್ನಾಟಕ"

ರೋಮಾಂಚಕವಾದ ಕರ್ನಾಟಕ ಏಕೀಕರಣದ ಕತೆಯು ಕೊನೆಯ ಘಟ್ಟವನ್ನು ಸಮೀಪಿಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಎಂದೂ ಇಲ್ಲದಷ್ಟು ಮುತಭೇದವನ್ನು ಕನ್ನಡಿಗರು ವ್ಯಕ್ತಪಡಿಸುತ್ತಿರುವುದು ತೀಚಿನೀಯವಾಗಿದೆ. ಮುಖ್ಯವಾಗಿ ಮೈಸೂರಿನಲ್ಲಿ ಸಂಯುಕ್ತ ಕರ್ನಾಟಕ ರಾಜ್ಯದ ಕುರಿತು ಪ್ರಕಟವಾಗುತ್ತಿರುವ ವಿರೋಧವು ಖೇದವಾಯಕವಾಗಿದೆ. ತಮ್ಮ ಮಂತ್ರಿ ಮಂಡಳದಲ್ಲಿಯೇ ಭಿನ್ನಾಭಿಪ್ರಾಯವಿರುವ ದೆಸೆಯಿಂದ ಶ್ರೀ. ಹನುಮಂತಯ್ಯನವರು ಮುಖ್ಯ ಮಂತ್ರಿಗಳ ಪರಿಷತ್ತಿನಲ್ಲಿ ಮೈಸೂರಿನ ಪರಕಾರದ ಪರವಾಗಿ ಏನು ಹೇಳಬಲ್ಲರೋ? ಏಕೀಕರಣದ ಸಮರ್ಥನೆಯನ್ನು ಅವರು ಮಾಡಿದ್ದರೆ, ಅದರ ಪರಿಣಾಮ ಘಾತಕವಾದೀತೆಂಬುದರಲ್ಲೇನೂ ಅನುಮಾನವಿಲ್ಲ; ಮೈಸೂರಿನವರೀಗ ಗಟ್ಟಿ ಮನಸ್ಸು ಮಾಡಬೇಕೆಂದು ಕನ್ನಡಿಗರಲ್ಲಿ ಬಹು ಸಂಖ್ಯಾಕರು ಹಾರೈಸುತ್ತಿದ್ದಾರೆ; ಅವರೀ ದೀತಿಯ ಮನೋಭಾವ ಮೂಡಬಂದಿರುವಂತೇನು ಕಾಣಿಸುತ್ತಿಲ್ಲ. ಕನ್ನಡ ಪ್ರದೇಶಗಳನ್ನೆಲ್ಲ ಒಂದೇ ರಾಜ್ಯದ ಅಧಿಸತ್ಯದಲ್ಲಿ ತರಲೆಂದು ನಲ್ವತ್ತಕ್ಕಿಂತಲೂ ಹೆಚ್ಚು ವರ್ಷಗಳ ವರೆಗೆ ನಡೆಸಿದ ಹೋರಾಟವು ಫಲವನ್ನು ಕೊಡುವ ಸಲ್ಲಕ್ಷಣಗಳು ಸ್ಪಷ್ಟವಾಗಿರುವಾಗ ಮೈಸೂರಿನಲ್ಲಿ ಎರಡು ಕರ್ನಾಟಕವಾಗಲಿ ಎಂಬ ಪಲ್ಲವಿಯನ್ನು ಹಾಡಲಾಗುತ್ತಿದೆ! ರಾಜಸತ್ತೆಯು ನಶಿಸಿ ಪ್ರಜಾಸತ್ತೆಯು ತಲೆ ಎತ್ತಿರುವ ಈ ಯುಗದಲ್ಲಿ ಸಹ ನಮ್ಮ ರಾಜಸ್ಯಮುಖರನ್ನೇನು ಉಚ್ಚಾಟನೆಗೊಳಿಸುವುದು ಬೇಡ ಎಂದು ಮೈಸೂರಿನಲ್ಲಿ ಹೇಳಲಾಗುತ್ತಿದೆ. ಇದರಷ್ಟು ಅಭಿಮಾನ ಹೀನವಾದ ವಿಷಯ ಬೇರೇನು ಇದ್ದೀತು? ಮೈಸೂರು ಶಬ್ದದ ಮೇಲೆ ಅನುರಾಗ ತೋರ್ಪಡಿಸುವ ಪೋಹವೂ ಕ್ಷುಲ್ಲಕತಾದುದಾಗಿದೆ. ಮೈಸೂರಿನ್ನೊಳಗೊಂಡ ಎಲ್ಲ ಕನ್ನಡ ಪ್ರದೇಶಗಳಿಗೆ "ಕರ್ನಾಟಕ" ಎಂಬ ಹೆಸರನ್ನು ಕೊಡುವುದು ಈ ವರ್ಗಗಳಿಗೆ ಸಮ್ಮತ ವಿಲ್ಲದಿರುವಾಗ, ಕೊಡಗು, ಕೊಲ್ಲಿಗಾಲ ಮತ್ತು ದಕ್ಷಿಣ ಕನ್ನಡಗಳಿಂದಲೂ ಈಗಿನ ಮೈಸೂರಿನಿಂದಲೂ ಕೂಡಿರಬೇಕೆನ್ನುವ ಒಂದು ಕರ್ನಾಟಕ ರಾಜ್ಯಕ್ಕೆ ಮೈಸೂರು ಎಂಬ ಹೆಸರನ್ನಿಡಬಲು ಮೈಸೂರೇತರ ಪ್ರದೇಶಗಳವರು ಒಪ್ಪುವರೆಂದು ಈ ಮಹಾನುಭಾವರಿಗೆ ಹೇಳಿದವರಾರು? ಕೊಡಗು ಹಿರಿಯಣ್ಣ ಮೈಸೂರಿನೆ ಅವರ್ಶವನ್ನೂ ಸರಿಸಿ ಸ್ವತ್ಯೇಕ ರಾಜ್ಯವಾಗಿಯೇ ಉಳಿಯಲು ಮೊದಲಿಂದಲೂ ಆತುರವನ್ನು ತೋರಿಸುತ್ತಾ ಬಂದಿದೆ; ಅಲ್ಲಿಯ ಸರಕಾರದ ಅಭಿಪ್ರಾಯ ಕರ್ನಾಟಕ ಏಕೀಕರಣಕ್ಕೆ ಅನುಕೂಲವಾಗಿಲ್ಲವೆಂದು ಜನಜನಿತವಾಗಿದೆ. ದಕ್ಷಿಣ ಕನ್ನಡಿಗರಲ್ಲಿ ಸಹ ಮೈಸೂರಿನೊಡನೆ ಸೇರಿಕೊಳ್ಳಬೇಕೆಂಬ ಲವಲವಿಕೆ ಸಾರ್ವತ್ರಿಕವಾಗಿದೆ ಎಂದು ಹೇಳುವಂತಿಲ್ಲ. ಎಲ್ಲ ಕನ್ನಡ ಪ್ರದೇಶಗಳೂ ಮೈಸೂರು ಮತ್ತು ಕೊಡಗುಗಳೂ ಸೇರಿ ಕರ್ನಾಟಕದ ಏಕೀಕರಣದ ಧ್ಯೇಯ ಸಾಧನಪ್ರಜ್ಞೆಯುವುದಾದರೆ, ಆಗ ಸಾಂಸ್ಕೃತಿಕ ಬಾಂಧವ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಹೊಸ ರಾಜ್ಯದಲ್ಲಿ ಅಂತರ್ಗತವಾಗಿಲು ದಕ್ಷಿಣ ಕನ್ನಡದ ಜನತೆ ಆಕ್ಷೇಪಿಸುವುದಿಲ್ಲ. ಹಾಗೇನೂ ಇರದೆ, ಮೈಸೂರಿಗೆ ನೂರು ಮೈಲುಗಳಷ್ಟು ಉದ್ದದ ಕರಾವಳಿಯನ್ನು ದೊರಕಿಸಿ ಕೊಡುವುದಕ್ಕಾಗಿ ಮಾತ್ರ ಎಂಬಂತೆ ಆ ರಾಜ್ಯದೊಡನೆ ಸೇರಿಕೊಂಡು, ಉಳಿದ ಕನ್ನಡ ಬಾಂಧವರನ್ನು ಬೇರೆಯೇ ರಾಜ್ಯವೊಂದರಲ್ಲಿ ನೂಕಲು ದಕ್ಷಿಣ ಕನ್ನಡಿಗರು ಸಿದ್ಧರಿಲ್ಲ. ಏಕೀಕರಣದ ಕನಸನ್ನು ದಕ್ಷಿಣ ಕನ್ನಡಿಗರು ಕಂಡ ಮೊದಲಿನ ದಿನಗಳಲ್ಲಿ ಬ್ರಿಟಿಷರ ವಶದಲ್ಲಿದ್ದ ಕನ್ನಡ ಪ್ರದೇಶಗಳ ಏಕೀಕರಣ ಎಂಬ ಗುರಿ ಇತ್ತೆಂಬುದನ್ನು ಇಲ್ಲಿ ಸ್ಮರಣೆಗೆ ತಂದುಕೊಳ್ಳಬೇಕಾಗಿದೆ. ಆದರೆ ಮೈಸೂರಿನ ಕೇಂದ್ರದಲ್ಲಿದ್ದ ಕನ್ನಡ ಸಾಹಿತ್ಯ ಪರಿಷತ್ತೇ ಮುಂತಾದವುಗಳು ಮೈಸೂರಿಗೆ ಸಹ ಏಕೀಕರಣದ ಆಶೆ ಇದೆ ಎಂದು ಪ್ರತಿಪಾದಿಸುತ್ತಾ ಬಂದಿವೆಂಬುದನ್ನೂ ಇಲ್ಲಿ ನೆನೆಯಬೇಕಾಗಿದೆ. ದಕ್ಷಿಣ ಕನ್ನಡಕ್ಕೆ ಮೈಸೂರಿನೊಂದಿಗೆ ಸೇರಿ ಸಿಗುವ ಸುಖವಾದರೂ ಏನು? ಹೆಚ್ಚೆಂದರೆ ಜಿಲ್ಲೆಯಲ್ಲೊಂದು ಪ್ರಬುದ್ಧ ಖಂಡರದ ರಚನೆಯಾದೀತು ಈ ಕೆಲಸ ಕೇಂದ್ರ ಸರಕಾರದ ಪರಿಶೀಲನೆಯಲ್ಲಿ ಈಗಾಗಲೇ ಇರುವುದರಿಂದ ಮೈಸೂರಿನ ಅನುಗ್ರಹವಿಲ್ಲದಿದ್ದರೂ ದಕ್ಷಿಣ ಕನ್ನಡಿಗರು ಶಾಕಿತರಾಗಬೇಕಾದ ಪ್ರಸಂಗವಿಲ್ಲ. ಆಡಳಿತವು ಘನವಾದುದೇ ಕ್ಷೇತ್ರದಲ್ಲಿಯಾಗಲೀ ಮೈಸೂರಿಗಿಂತ ದಕ್ಷಿಣ ಕನ್ನಡವು ಒಂದು ಹೆಜ್ಜೆ ಮುಂದೆಯೇ ಇದೆ; ಕನಿಷ್ಟಪಕ್ಷಕ್ಕೆ ಸಮಾನತೆಯನ್ನಾದರೂ ಕಾಯ್ದುಕೊಂಡಿದೆ—ಮೈಸೂರಿನ ಅಪೂರ್ಣ ಮಾದರಿಯನ್ನು ನೋಡಿ ಕಲಿಯುವುದಾಗಲೀ ಪ್ರಯೋಜನ ಹೊಂದುವುದಾಗಲೀ ಏನೂ ಉಳಿದುಂತಿಲ್ಲ. ಆದುದರಿಂದ ದಕ್ಷಿಣ ಕನ್ನಡಿಗರಿಗೆ ಎರಡು ಕರ್ನಾಟಕ ರಾಜ್ಯದ ಪಲ್ಲವಿಯು ಎಷ್ಟಕ್ಕೂ ಆಕರ್ಷಕವಾಗಿಲ್ಲ. ಮೈಸೂರಿನ ಪ್ರಭೃತಿಗಳು ಕೆಲವರು ಎರಡು ಕರ್ನಾಟಕ ರಾಜ್ಯಗಳ ರಚನೆಯ ಮಾತನ್ನಾಡುವಾಗ ಇವನ್ನು ಮರೆಯುಬಾರದು—ನಕ್ಕೆಯಲ್ಲಿ ಒಮ್ಮುಟ್ಟಿನ ಪ್ರದೇಶವೆಂದು ಮೈಸೂರು ಮತ್ತು ದಕ್ಷಿಣ ಕನ್ನಡಗಳು ಕಂಡರೂ ಭೌಗೋಲಿಕವಾಗಿ ಮೈಸೂರು ಪೀಠ ಭೂಮಿ ಮತ್ತು ದಕ್ಷಿಣ ಕನ್ನಡವು ಕರಾವಳಿಯಾಗಿದೆ ಎಂಬುದನ್ನೂ ಈ ಪ್ರದೇಶಗಳಲ್ಲಿ ಸಂಸ್ಕೃವು ಸುಲಭ ಸಾಧ್ಯವಾಗಿಲ್ಲವೆಂಬುದನ್ನೂ ಗಮನಿಸದಿರಬಾರದು. ಆದುದರಿಂದ ದಕ್ಷಿಣ ಕನ್ನಡದವರು ಮೈಸೂರಿನೊಡನೆ ತಾವು ಮಾತ್ರ ಸೇರಿಕೊಂಡು, ಮುಂಬಯಿ ಮತ್ತು ಹೈದರಾಬಾದುಗಳ ಕನ್ನಡ ಪ್ರದೇಶಗಳವರನ್ನು ಅವರಷ್ಟಕ್ಕೆ ಬಿಟ್ಟು ಬಿಡಲು ಒಪ್ಪುವುದು ದೂರದ ಮಾತು. ಈಗಿನಂತೆ ಎರಡು ಕರ್ನಾಟಕಗಳ ಪಲ್ಲವಿಯನ್ನು ಮೈಸೂರಿನವರು ಹಾಡುತ್ತಾ ಕುಳಿತರೆ, ದಕ್ಷಿಣ ಕನ್ನಡವು ಅವರಿಗೆ ಸಿಗದೆ ಹೋದೀತು; ಕೊಡಗು ಸಹ ಪ್ರತ್ಯೇಕತೆಗೆ ಪಟ್ಟು ಹಿಡಿದು ಕುಳಿತೀತು—ಹೀಗೆಲ್ಲ ಆಗದೆ, ಏಕೀಕರಣ ಮರಳಿ ಕನಸಾಗುತ್ತದೆ! ಮೈಸೂರು ಮೈಸೂರಾಗಿಯೇ ಉಳಿದು, ಬೇರೆ ಕನ್ನಡ ಪ್ರದೇಶಗಳೇ ಒಂದು ರಾಜ್ಯವಾಗಿ ಉಳಿಯುವ ಪ್ರಸಂಗವೇ ಬಂದೀತು! ಇದನ್ನೆಲ್ಲ ಮೈಸೂರಿಗರು ಚೆನ್ನಾಗಿ ಆಲೋಚಿಸಬೇಕು. ಆ ದೇಶದ ವೈಶಿಷ್ಟ್ಯ ರಕ್ಷಕರು ಬಳ್ಳಾರಿಯನ್ನು ಪುನಃ ವಿಭಜಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆಂಬ ಸಂಗತಿಯನ್ನು ಈ ಸಂದರ್ಭದಲ್ಲಿ ನೆನೆದರೆ, ಬಳ್ಳಾರಿಯನ್ನು ಉಳಿಸಿಕೊಳ್ಳುವುದಕ್ಕಾಗಿಯೂ ಎರಡು ಕರ್ನಾಟಕಗಳ ಪಲ್ಲವಿಯನ್ನು ತ್ಯಜಿಸಬೇಕೆಂದು ಹೇಳಬೇಕಾಗುತ್ತದೆ. ಏಕೆಂದರೆ, ಸಂಯುಕ್ತ ಕರ್ನಾಟಕ ರಾಜ್ಯ ರಚನೆಯಾದರೆ, ಆಗ ಕನ್ನಡಿಗರ ಪಾಲಿಗೆ ತುಂಗಭದ್ರೆಯ ಆಣೆಕಟ್ಟಿನಿಂದ ಮೂರರಲ್ಲಿ ಎರಡಂಶ ಪ್ರಯೋಜನವೂ ಆಂಧ್ರರಿಗೆ ಒಂದಂಶ ಲಾಭವೂ ಹೋಗುತ್ತದೆ ಇದನ್ನು ಕೇಂದ್ರ ಸರಕಾರಕ್ಕೆ ಮನದಟ್ಟುಪಡಿಸಿ, ಆಂಧ್ರರ ಬಾಯಿಗೆ ಬಿದ್ದಿರುವ ಬಳ್ಳಾರಿಯನ್ನು ಪುನಃ ಪಡೆಯ ಬಹುದು; ಮೈಸೂರು ಸ್ವಲ್ಪ ಗಟ್ಟಿ ಮನಸ್ಸು ಮಾಡಿದರೆ ಆಂಧ್ರರಿಗೆ ಈಗಾಗಲೇ ದಾನವಾಗಿರುವ ಬಳ್ಳಾರಿ ಜಿಲ್ಲೆಯು ಉಳಿದ ಮೂರು ತಾಲೂಕುಗಳನ್ನೂ ಆಣೆಕಟ್ಟಿನಿಂದ ಪ್ರಯೋಜನ ಹೊಂದುತ್ತಿರುವ ಪ್ರದೇಶಗಳೆಂಬ ಸಮರ್ಥನಕಾರಣದಿಂದ ಮರಳಿ ಪಡೆಯಬಹುದು. ಎರಡು ಕರ್ನಾಟಕಗಳ ಮಾತನ್ನಾಡುತ್ತಿದ್ದರೆ, ಕನ್ನಡ ಪ್ರದೇಶಗಳ. ಮೈಸೂರಿನಲ್ಲಿರುವ ಬಳ್ಳಾರಿ, ಕರ್ನಾಟಕದ ರಾಯಚೂರು ಮತ್ತು ಆಂಧ್ರದಲ್ಲಿ ಹಂಚಿ ಹೋಗಿ, ಅರ್ಧದ ವಾದವೇ ಎತ್ತಿ ಹಿಡಿಯಲ್ಪಡುವುದು ನಿಶ್ಚಯ. ಇವನ್ನೆಲ್ಲ ಗಣನೆಗೆ ತಂದುಕೊಳ್ಳದೆ ಎರಡು ಕರ್ನಾಟಕವೆಂದು ಒದರುವುದು ಭೂಷಣಪ್ರಾಯವಾದ ವಿಷಯವಲ್ಲ; ದೇವರು ಕೊಟ್ಟರೂ ಪೂಜಾರಿ ಬಡನೆಂಬ ಗಾದೆಯ ಮಾತನ್ನು ಕನ್ನಡಿಗರು ನಿತ್ಯವೂ ನೆನೆಯುತ್ತಿರಬೇಕಾಗಿ ಬರುವ ದಿನಗಳನ್ನು ಮೈಸೂರಿನ ಧುರೀಣರು ಕನ್ನಡಿಗರ ಪಾಲಿಗೆ ದಯನಾಡಿ ತಂದು ಕೊಡಬಾರದು; ಜನತೆಯ ಶಾಪಕ್ಕೆ ಗುರಿಯಾಗಿ ಕೂಡದು ಇಷ್ಟು ವಿವೇಕ ಧುರೀಣರಲ್ಲಿದೆ – ಎಂದು ನಾವು ನಂಬುತ್ತೇವೆ.

ಅಭಿವೃದ್ಧಿ ಪ್ರಯತ್ನಗಳ ಭವಿಷ್ಯ

ಆಯೋಗದ ವರದಿಯಿಂದ ಆತಂಕವೆ?

ರಾಜ್ಯಗಳ ಪುನರ್ಘಟನೆಯ ಸಮಸ್ಯೆಯು ಅಭಿವೃದ್ಧಿ ಪ್ರಯತ್ನಗಳನ್ನು ಮುಂದೊತ್ತಿಕೊಂಡು ಹೋಗುವ ವಿಷಯದಲ್ಲಿ ಆತಂಕವನ್ನು ಮೂಡದಿರದೆಂದು ಮದ್ರಾಸಿನ ಆರೋಗ್ಯ ಮಂತ್ರಿ ಮಾನ್ಯ ಶ್ರೀ. ಎ. ಬಿ. ಶೆಟ್ಟಿ, ಪ್ರಸಿದ್ಧ ಔದ್ಯಮಿಕ ತಜ್ಞ ಸರ್ ಎಂ. ವಿಶ್ವೇಶ್ವರಯ್ಯ ಮುಂತಾದವರು ಅಭಿಪ್ರಾಯ ಪಟ್ಟಿದ್ದಾರೆ. ರಾಷ್ಟ್ರಕ್ಕೆ ರಾಜ್ಯಗಳ ಪುನರ್ಘಟನೆಗಿಂತಲೂ ಮಹತ್ವದ ಪ್ರಶ್ನೆಗಳನ್ನು ಬಿಡಿಸುವ ಅವಶ್ಯಕತೆ ಇಂದಿದೆ ಎಂದಿವರ ಸಾಮಾನ್ಯ ನಿಲುಮೆಯಾಗಿದೆ.

ಪರದೇಶಗಳ ಅಭಿಮತ

ವಿದೇಶಗಳಲ್ಲಿ ಸಹ ಆಯೋಗದ ವರದಿಯು ಸಾಕಷ್ಟು ಕುತೂಹಲವನ್ನು ಹುಟ್ಟಿಸಿದೆ. ಭಾರತದ ಸಾರ್ವಜನಿಕ ಆಡಳಿತದ ಇತಿಹಾಸದಲ್ಲಿ ಆಯೋಗದ ವರದಿಯು ಹೊಸ ಅಧ್ಯಾಯವನ್ನು ತೆರೆಯುವುದೆಂದೂ ಅದು ವಿದ್ವತ್ಪೂರ್ಣವಾದ ಪ್ರಬಂಧವೆಂದೂ ಬ್ರಿಟನಿನಲ್ಲಿ ಅಭಿಪ್ರಾಯ ಪಡಲಾಗಿದೆ. ಅಮೇರಿಕದಲ್ಲಿ ಜನತೆಯು ಬಹುದಿನಗಳ ಅಭಿಲಾಷೆಯನ್ನು ನೆರವೇರಿಸಲು ನೆಹರುಗಳೀಗ ನೋಡಬೇಕಾಗಿ ಬಂದಿದೆ ಎನ್ನಲಾಗಿದೆ. ಅಗ್ನಿ ಪರೀಕ್ಷೆ ಎಂದು ನೆಹರುಗಳೇ ಕರೆದಿರುವ ಈ ಸಮಸ್ಯೆ ಶಾಂತವಾಗಿ, ಮತ್ತು ತೃಪ್ತಿಕರವಾಗಿ ಬಗೆಹರಿದರೆ ದೇಶದೊಳಗೆ ಹಾಗೂ ಹೊರಗೆ ಸಮಾಧಾನವುಂಟಾಗುವುದಲ್ಲದೆ, ನೆಹರುಗಳ ದಕ್ಷತೆ ಮತ್ತು ಮುನ್ನೋಟದ ಕುರಿತಾದ ವಿಶ್ವಾಸವಲಿಕೆಯೂ ಹೆಚ್ಚುವುದೆಂದು ಒಪ್ಪಲಾಗುತ್ತದೆ.

ಕನ್ನಡಿಗರ ಸಮಸ್ಯೆ

ಪೃಷ್ಠಿ ಮತ್ತು ಸಮಾಧಾನಗಳು ಎಷ್ಟರ ಮಟ್ಟಿಗೆ ನೆಲೆಗೊಳ್ಳಬಹುದು ಎಂಬುದೇ ಮುಖ್ಯವಾದ ವಿಷಯ—ಕನ್ನಡಿಗರಲ್ಲೆಲ್ಲ ತಳಮಳ ಹುಟ್ಟಿದೆ; ಬಳ್ಳಾರಿಯನ್ನು ಉಳಿಸಿಕೊಳ್ಳಬಹುದೆಂದು ಹೇಳಲಾಗುತ್ತಿದ್ದರೂ ಕಾಸರಗೋಡನ್ನು ರಕ್ಷಿಸಬಲ್ಲೆವೆಂದು ಧೈರ್ಯ ಹೇಳುವವರು ಒಬ್ಬರೂ ಇಲ್ಲ! "ಸಮರ್ಥವಾದ"ವನ್ನು ಮುಂದಿಡಿರಿ ಎಂದು ಶ್ರೀ. ಬಿ. ಶಿವರಾಯರಂಥವರು ಹೇಳುತ್ತಿದ್ದರೂ ಕಾಂಗ್ರೆಸಿನ ಶಿಸ್ತು ಮತ್ತು ಎಚ್ಚರಿಕೆಯ ಮಾತುಗಳು ಸ್ಪಷ್ಟವಾಗಿ ಜನತೆಯ ಪರವಾಗಿ ವಾದಿಸುವುದಕ್ಕೆ ತಡೆಯೊಡ್ಡಿವೆ. ಹೀಗಿರುವಾಗ ಸಜ್ಜನರಿಯೂ ಕನ್ನಡ ನಾಡಿನಲ್ಲಿ ಸೇರಬೇಕಾದ ಹೈದರಾಬಾದಿನ ಬೀದರ, ಅನಂತಪುರದ ಮಡಕಶಿರ, ಕೋಲಾಪುರದ ಅಕ್ಕಲ ಕೋಟೆ ಇತ್ಯಾದಿಗಳ ಸುದ್ದಿಯನ್ನು ಎತ್ತುವವರಾದರೂ ಯಾರು?

ಬಲವಾದ ವಿರೋಧ

ಸಮಗ್ರ ದೃಷ್ಟಿಕೋಣವನ್ನಿಟ್ಟು ಕೊಂಡು ಆಯೋಗದ ವರದಿಯನ್ನು ಪರಿಶೀಲಿಸಬೇಕೆಂದು ಧುರೀಣರೆನ್ನಿಸಿಕೊಂಡರೂ ಜನತೆಗೆ ಇದರಿಂದೇನೂ ಸಮಾಧಾನವಾಗಿಲ್ಲ. ಆಯೋಗದ ಸೂಚನೆಗಳಲ್ಲಿ ತರ್ಕಬದ್ಧವಾದ ಅಂಶವೇನೂ ಇಲ್ಲ ಎಂದೇ ಅಭಿಪ್ರಾಯಪಡಲಾಗಿದೆ ಭಾಷಾನುಗುಣ ಘಟಕಗಳಿಗೆ ಮಹತ್ವ ಕೊಡುವುದು ತಪ್ಪು ಎಂದ ಆಯೋಗವು ೧೬ರಲ್ಲಿ ೧೪ ರಾಜ್ಯಗಳನ್ನು ಭಾಷೆಯ ತಳಹದಿಯ ಮೇಲೆಯೇ ರೂಪಿಸಿದೆ ಎನ್ನಲಾಗುತ್ತದೆ ತಮ್ಮದೆಂಬ ಭಾಷಾ ಘಟಕವಿಲ್ಲದುದಕ್ಕೆ ಗುಜರಾತಿಗಳೂ ಪಂಜಾಬಿನ ಸೀಖರೂ ತುಂಬ ನೊಂದಿದ್ದಾರೆ. ಗುಜರಾತಿನಲ್ಲಿ ಪಕ್ಷಾತೀತ ಸಭೆಗಳನ್ನು ನೆರೆಯಿಸಿ, ಮಹಾ

ಹಾ ಗುಜರಾತನ್ನು ರಚಿಸುವ ಜೇಡಿಕೆ ಮುಂದೊತ್ತಲ್ಪಡುತ್ತಿದ್ದರೆ, ಪಂಜಾಬಿನ ಅಕಾಲಿ ದಳದ ನಾಯಕರು ಪಂಜಾಬಿ ಭಾಷೆಯ ರಾಜ್ಯಕ್ಕಾಗಿ ಆಗ್ರಹ ಪಡುತ್ತಿದ್ದಾರೆ.

ಮರಾಠರ ಛಲ

ಮುಂಬಯಿಯ ಮಹಾರಾಷ್ಟ್ರೀಯರು ಅಯೋಗದ ವರದಿಯಿಂದ ರೊಚ್ಚಿಗೆದ್ದಿದ್ದಾರೆ—ವಿದರ್ಭವೆಂಬ ಸಣ್ಣ ಮಹಾರಾಷ್ಟ್ರ ರಾಜ್ಯವನ್ನು ಆಯೋಗ ರಚಿಸಿರುವುದಾದರೂ ಸಂಯುಕ್ತ ಮಹಾರಾಷ್ಟ್ರದ ರಚನೆಗೆ ಅದು ಸಮ್ಮತಿಯನ್ನು ವ್ಯಕ್ತಪಡಿಸಿಲ್ಲ. ಮುಂಬಯಿಯ ಮರಾಠಿ ಪ್ರದೇಶಗಳನ್ನೂ ಹೈದರಾಬಾದಿನ ಮರಾಠಿ ವಲಯವನ್ನೂ ಗುಜರಾತಿಗೆಕೊಡದೆ ಸೆಣಸಾಡಬೇಕಾಗಿ ಬರುವ ದ್ವಿಭಾಷಾ ರಾಜ್ಯವಾದ ನೂತನ ಮುಂಬಯಿಯಲ್ಲಿ ಆಯೋಗ ಸೇರಿಸಿದೆ. ತೆಲಂಗಾಣದ ಜನತೆಗೆ ಗ್ರಹಿಸಲೇ ಇಷ್ಟವಿಲ್ಲದ ಬಳಿಕ ಆಂಧ್ರಕ್ಕೆ ಸೇರಿಕೊಳ್ಳುವ ನಿರ್ಣಯ ಕೈಗೊಳ್ಳಲು ಅಧಿಕಾರವನ್ನು ಆಯೋಗ ನೀಡಿದ್ದರೂ ವಿದರ್ಭದೊಡನೆ ಸೇರಿಕೊಳ್ಳಲು ಹೊರಗಿನ ಮಹಾರಾಷ್ಟ್ರ ಪ್ರದೇಶಗಳವರಿಗೆ ಅವಕಾಶವನ್ನು ಅದು ಒದಗಿಸಿಲ್ಲ. ಈ ಪ್ರಕಾರದ ಅನ್ಯಾಯವು ಯಾವ ನಿಷ್ಪಕ್ಷಪಾತ ನಿರೀಕ್ಷಕನ ದೃಷ್ಟಿಗೂ ಬೀಳದಿರುವಂತಿಲ್ಲ. ಸತ್ಯ ಹೀಗಿರುವಾಗ ಭಾಷಾಧಿಮಾನಿಗಳಾದ ಮರಾಠಿ ಮುಖಂಡರು ದೊಡ್ಡ ಚಳವಳಿ ನಡೆಸಲು ಮುಂದಾಗಿದ್ದಾರೆ. ಮುಂಬಯಿಯು ಕೇಂದ್ರವಾಗಿ ಸಂಯುಕ್ತ ಮಹಾರಾಷ್ಟ್ರದ ನಿರ್ಮಾಣವೇ ಇವರ ಧ್ಯೇಯವಾಗಿದೆ.

ಚಿಕ್ಕ ರಾಜ್ಯಗಳಿಗೆ ಒತ್ತಾಯ

ಉತ್ತರ ಪ್ರದೇಶವನ್ನು ವಿಭಜಿಸಬೇಕೆಂಬ ಸರದಾರ ಪಣಿಕ್ಕರರ ಸೂಚನೆಗೆ ಸಾಕಷ್ಟು ಅನುಮೋದನೆ ದೊರೆತಿಲ್ಲ; ಆದರೆ ಈಗಿನ ಮಧ್ಯಪ್ರದೇಶದೊಡನೆ ಭೋಪಾಳ ರನ್ನಷ್ಟೇಯಲ್ಲದೆ ಮಧ್ಯ ಭಾರತವನ್ನು ಸಹ ಸೇರಿಸಿರುವುದು ಯಾರಿಗೂ ತೃಪ್ತಿಯನ್ನು ತಂದಿಲ್ಲ. ಆ ರಾಜ್ಯದ ವಿಸ್ತಾರಣದಿಂದ ಬಹಳ ಹೆಚ್ಚಿಕೊಳ್ಳುವುದೆಂದು ನೆಹರುಗಳ ಅಭಿಪ್ರಾಯವಿದೆಯಾಗಿಯೂ ಆಡಳಿತದ ತೊಂದರೆಗೆ ಇದ. ಕಾರಣವಾದೀತೆಂದು ಅವರು ಹೇಳಿರುವುದಾಗಿಯೂ ತಿಳಿದುಬರುತ್ತದೆ. ತಮಗೆ ಮಹಾ ಕೋಸಲ ವಷ್ಟೆ ಬೇಕಾಗಿದ್ದಾಗ, ಅದಕ್ಕೂ ಹೆಚ್ಚಿನದನ್ನು ಆಯೋಗ ಕೊಡಮಾಡಿರುವುದಕ್ಕೆ ಪಂಡಿತ ರವಿಶಂಕರ ಶುಕ್ಲರಿಗೂ ಅಚ್ಚರಿಯಾಗಿದೆ. ಆಯೋಗದ ಅಧ್ಯಕ್ಷರಾದ ಫಜಲ ಅಲಿಯವರು ಹಿಮಾಚಲ ಪ್ರದೇಶವನ್ನು ಪ್ರತ್ಯೇಕವಾಗಿಡಬೇಕೆಂದು ಸೂಚಿಸಿದ್ದುದರಿಂದ ಪಂಜಾಬಿ ಮಾತನಾಡುವ ರಾಜ್ಯದ ಬೇಡಿಕೆಗೆ ಇನ್ನಷ್ಟು ಬಲ ಬಂದಿದೆ. ಇವೆಲ್ಲವುಗಳನ್ನು ಇತ್ಯರ್ಥಮಾಡಬೇಕಾಗಿ ಬರುವಾಗ, "ದೊಡ್ಡ ರಾಜ್ಯಗಳ ರಚನೆಯೇ ಯೋಗ್ಯ" ಎಂದು ಆಯೋಗದವರು ಪಟ್ಟ ಅಭಿಪ್ರಾಯವನ್ನು ಮೂಲೆಗೆ ತಳ್ಳಿ ಚಿಕ್ಕ ರಾಜ್ಯಗಳ ಉದಯಕ್ಕೆಯೇ ಅವಕಾಶ ನೀಡಬೇಕಾದೀತೋ ಎಂಬ ಸಂಶಯ ಹೇಳುತ್ತದೆ.

ಗೋವೆ ಹಾಗು ಅಮೇರಿಕ

ಧೋರಣೆಯ ವಿವರಣೆ

ಅಮೇರಿಕದ ರಾಯಭಾರಿ ಶ್ರೀ ಕೂಪರರು ಗೋವೆಗೆ ತಮ್ಮ ದೇಶವು ಸೈನ್ಯ ಸಹಾಯವನ್ನು ನೀಡುತ್ತಿಲ್ಲವೆಂದೂ ಶಸ್ತ್ರಾಸ್ತ್ರಗಳನ್ನು ಸಹ ಸರಬರಾಯಿಸುತ್ತಿಲ್ಲವೆಂದೂ ಆ ಉದ್ದೇಶವೇ ತಮ್ಮ ದೇಶಕ್ಕಿಲ್ಲವೆಂದೂ ಸ್ಪಷ್ಟ ಪಡಿಸಿದ್ದಾರೆ.

ತಮ್ಮಿಂದ ಸಹಾಯ ಪಡೆದ ಪಾಕಿಸ್ತಾನದಂಥ ಯಾವುದೇ ರಾಷ್ಟ್ರವಾದರೂ ಗೋವೆಗೆ ಶಸ್ತ್ರಾಸ್ತ್ರಗಳನ್ನು ಸಾಗಿಸುವ ಪಕ್ಷದಲ್ಲಿ ಅಂಥ ಸಹಾಯವನ್ನು ಕೂಡಲೇ ನಿಲ್ಲಿಸಿ ಬಿಡುವುದಕ್ಕೆ ತಮ್ಮ ಸರಕಾರ ಪ್ರಯತ್ನಿಸುವುದೆಂದೂ ಅವರು ತಿಳಿಸಿದ್ದಾರೆ.

ಗೋವೆಯಲ್ಲಿ ಅಮೇರಿಕದ ಶಸ್ತ್ರಾಸ್ತ್ರಗಳಿವೆ ಎಂಬ ವರದಿಯು ಸಂಪೂರ್ಣ ನಿರಾಧಾರವಾಗಿದೆ ಎಂದವರು ಸಾರಿದರು. ವಸಾಹತು ವಾದವನ್ನು ಗೋವೆಯಲ್ಲಿ ಎತ್ತಿ ಹಿಡಿಯಲು ತಮ್ಮ ಸರಕಾರ ಉದ್ದೇಶಿಸಿಲ್ಲವೆಂದು ಅವರು ಘೋಷಿಸಿದರು. ಯಾವುದೇ ನೈತಿಕ ಅಥವಾ ರಾಜಕೀಯ ಬೆಂಬಲವನ್ನು ಈ ವಿಷಯದಲ್ಲಿ ಪೋರ್ಚುಗಾಲಿಗೆ ಅಮೇರಿಕ ನೀಡಿಲ್ಲ ಎಂದವರು ಹೇಳಿದರು.

ಗೋವೆಯಲ್ಲಿ ಸುಹ್ರವರ್ದಿ

"ಪಾಕಿಸ್ತಾನದ ಕೈವಾಡವಿಲ್ಲ"

ಈಚೆಗೆ ತಾವಾಮಿ ಲೀಗಿನ ಧುರೀಣರಾದ ಸುಹ್ರವರ್ದಿಯವರು ಗೋವೆಗೆಹೋಗಿ, ಅಲ್ಲಿ ಸರಕಾರದ ಅತಿಥಿಗಳಾಗಿದ್ದು, ಗೋವಾಂತಕರಿಗೆ ಪಾಕಿಸ್ತಾನವು ಆಹಾರ ಸರಕುಗಳನ್ನು ಧಾರಾಳವಾಗಿ ಸಾಗಿಸುವುದೆಂದೂ ರಾಜಕೀಯ ಆಂದೋಲನದ ದೆಸೆಯಿಂದ ಗೋವಾಂತಕರು ಬೆದರಬೇಕಾಗಿಲ್ಲವೆಂದೂ ಅವಶ್ಯಬಿದ್ದರೆ ಪಾಕಿಸ್ತಾನದಿಂದ ಸತ್ಯಾಗ್ರಹವನ್ನೆದುರಿಸಲು ಸುಮಾರು ಮಂದಿಯನ್ನು ಸಜ್ಜುಗೊಳಿಸುವುದೆಂದೂ ಹೇಳಿದ್ದರು.

ಪಾಕಿಸ್ತಾನದ ವಿದೇಶ ಮಂತ್ರಿಗಳು ಇದಕ್ಕೆ ಸಂಬಂಧಿಸಿ ಹೇಳಿಕೆ ಕೊಡುತ್ತಾ ಪ್ರತಿಪಕ್ಷದ ನಾಯಕನ ಈ ವ್ಯವಹಾರದಲ್ಲಿ ಸರಕಾರದ ಕೈವಾಡವಿಲ್ಲ ಎಂದು ತಿಳಿಸಿದ್ದಾರೆ. ಪೋರ್ಚುಗಾಲಿನೊಡನೆ ಸಕಲ ಭಾರತದೊಡನಿರುವಂತೆಯೇ ಪಾಕಿಸ್ತಾನ ಕೈ ಸ್ನೇಹವಿದೆ. ಪೋರ್ಚುಗಾಲಿನ ಅಧಿಕಾರದಲ್ಲಿರುವ ಗೋವೆಯು ತುರಿತು ನವ್ಯ ಅಭಿಪ್ರಾಯ ಪ್ರಕಟಪಡಬೇಕಾದ ಅಗತ್ಯ ನೇನೂ ಈಗ ಬಂದಿಲ್ಲ ನಾವು ಸ್ನೇಹಪರ ವಾಗಿಯೇ ಮುಂದರಿಯುತ್ತೇವೆ—ಎಂದು ಪಾಕಿಸ್ತಾನ ಸರಕಾರದ ವಕ್ತಾರರು ಇವ ಕೈ ಬಿಟ್ಟಿಸಣಿ ಜೋಡಿಸಿದ್ದಾರೆ.

ವಿಜಯ ಬ್ಯಾಂಕಿನ ಪ್ರಧಾನ ಕಚೇರಿಯ ಹೊಸಕಟ್ಟಡದ ಪ್ರವೇಶ ಸಮಾರಂಭವು ಮದ್ರಾಸಿನ ಆರೋಗ್ಯ ಸಚಿವ ಶ್ರೀ ಎ. ಬಿ. ಶೆಟ್ಟರಿಂದಲೂ, ಸೇಫ್ ಡಿಪೋಸಿಟ್ ವೋಲ್ಟಿನ ಪ್ರಾರಂಭೋತ್ಸವವು ಕೊಡಗಿನ ಕಾನೂನು ಮಂತ್ರಿ ಶ್ರೀ ಕೆ. ಮಲ್ಲಪ್ಪನವರಿಂದಲೂ ಇದೇ ತಾ. 26ನೇ ಸಂಜೆ 5 ಗಂಟೆಗೆ ಮಂಗಳೂರು ಟೌನ್ ಹಾಸ್ ಹಿಲ್‌ನಲ್ಲಿ ಜರಗಲಿವೆ.

ಕ್ಷಯ ರೋಗದ ಕುರಿತು ನೀವು ತಿಳಿಯತಕ್ಕ ಸತ್ಯಾಂಶಗಳು

ಕ್ಷಯ ರೋಗದಿಂದ ವರ್ಷಂಪ್ರತಿಯೂ 5,00,000ಕ್ಕೂ ಮಿಕ್ಕಿದ ಮರಣಗಳುಂಟಾಗುತ್ತಿವೆ; ಅಂದರೆ ದಿನಕ್ಕೆ 1,500 ಮರಣಗಳು ಅರ್ಥಾತ್ ನಿಮಿಷಕ್ಕೊಂದು ಮರಣ ಸಂಭವಿಸುತ್ತದೆ!

25,00,000 ಜನರಲ್ಲಿ ಸ್ರದಲ ಕ್ಷಯ ರೋಗಗಳಿವೆ!

ಕ್ಷಯ ರೋಗದ ಚಿಕಿತ್ಸೆಯು ವಿಶೇಷ ಖರ್ಚಿನದಾದುದರಿಂದ ಹೆಚ್ಚಿನ ರೋಗಿಗಳು ಆದಕ್ಕೆ ಹಣ ಖರ್ಚು ಮಾಡಿ ಚಿಕಿತ್ಸೆ ಒದಗಿಸಿಕೊಳ್ಳಲಾರರು.

ಇತರ ಎಲ್ಲಾ ಸಾಂಕ್ರಾಮಿಕ ರೋಗಗಳಿಗಿಂತಲೂ, **ಕ್ಷಯ ರೋಗ**ವು ಹೆಚ್ಚಿನ ಜನರ ಪ್ರಾಣವನ್ನು ಕೆಗೆದು ಬಿಡುತ್ತದೆ.

ಎಲ್ಲ ವಯಸ್ಸಿನ ಜನರನ್ನೂ ಮುಖ್ಯವಾಗಿ 15ರಿಂದ 35 ವರ್ಷದೊಳಗಿನವರನ್ನು **ಕ್ಷಯ ರೋಗ**ವು ಹೆಚ್ಚಾಗಿ ಆಹುತಿ ತೆಗೆದುಕೊಳ್ಳುತ್ತದೆ.

ಕ್ಷಯ ರೋಗವನ್ನು ತಡೆಗಟ್ಟಲು ವರ್ಷಂಪ್ರತಿಯೂ ಟಿ. ಬಿ. ಮುದ್ರೆಗಳ ಮಾರಾಟ ಚಳವಳಿಯನ್ನು ನಡೆಸಲಾಗುತ್ತದೆ.

ಹೆಚ್ಚಿನ ಪ್ರಮಾಣದಲ್ಲಿ ಟಿ. ಬಿ. ಮುದ್ರೆಗಳನ್ನು

ಕೊಂಡು ಕೊಂಡು, ಉಪಯೋಗಿಸಿರಿ.

ಒಂದು ಮುದ್ರೆಯ ಬೆಲೆ ಕೇವಲ ಒಂದಾಣೆ.

ಮುದ್ರೆಗಳು ಸಿಗುವ ಸ್ಥಳಗಳು:— ಒನೆರರಿ ಸೆಕ್ರೆಟರಿ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಮದ್ರಾಸ್, ಛೀಫ್ ಪೆಲ್ಟ್ ಆಫೀಸರ್, ರಿಪನ್ ಬಿಲ್ಡಿಂಗ್ಸ್, ಮದ್ರಾಸು-3; ಶ್ರೀ ಡಿ. ಮೋಹನ್ ರಾವ್, ಬಿ. ಎ., ಬಿ. ಎಲ್., ಒನೆರರಿ ಸೆಕ್ರೆಟರಿ, ಟಿ. ಬಿ. ಸೀಲ್ ಸೇಲ್ ಕಮಿಟಿ, ಗೋಪಾಲಕೃಷ್ಣ ಟೆಂಪಲ್ ರೋಡ್, ಮಂಗಳೂರು-1 ಮತ್ತು ಸ್ಟೇಟಿನ ಇತರ ಏಜನ್ಸಿಗಳು.

ಇಂಡಿಯಾದಲ್ಲಿ ಆರನೆ ಟಿ. ಬಿ. ಮುದ್ರೆ ಮಾರಾಟ ಚಳವಳಿ

(ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾದವರಿಂದ ನಡೆಸಲ್ಪಡುವಂಥಾದ್ದು.)

ಜಾಹೀರಾತು ಸ್ಥಳವನ್ನು ದಾನವಿತ್ತವರು:

ನೇಶನಲ್ ಕಾರ್ಬನ್ ಕಂಪೆನಿ (ಇಂಡಿಯಾ) ಲಿಮಿಟೆಡ್, ಕಲ್ಕತ್ತ.

ನಮ್ಮ ಜಿಲ್ಲೆಯ ಒಳನಾಡಿನ ನೀರು ದಾರಿಯ ಯೋಜನೆ

ಸಿಂಡಿಕೇಟ್ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಡಾ| ಮಾಧವ ಪೈ ಅವರು ನಮ್ಮ ಜಿಲ್ಲೆಗೊಂದು ಒಳನಾಡಿನ ನೀರು ದಾರಿ (Inland water way) ಯ ಯೋಜನೆಯನ್ನು ಒದಗಿಸುವ ಸಲುವಾಗಿ ದಿನಾಂಕ 13—10—1955 ರಂದು ಮುಕುಂದ ನಿವಾಸದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಕರೆದಿದ್ದರು. ಟಿ. ಎ. ಪೈ ಎಂ. ಎಲ್. ಎ ಅವರು ಅಧ್ಯಕ್ಷತೆ ವಹಿಸಿದ್ದರು, ರಿವಿನ್ಯೂ ಅಧಿಕಾರಿಗಳೂ ಇತರೆ ಸಾರ್ವಜನಿಕರೂ ಹಾಜರಿದ್ದ ಸಭೆಯಲ್ಲಿ ನೀರು ದಾರಿಯ ಕುರಿತು ವಿಚಾರ ವಿನಿಮಯವು ನಡೆಯಿತು.

ವಿಷಯವನ್ನು ಪ್ರಸ್ತಾಪಿಸುತ್ತಾ ಡಾಕ್ಟರ್ ಮಾಧವ ಪೈ ಅವರು ಗಂಗೊಳ್ಳಿಯಿಂದ ಮಂಗಳೂರಿನ ವರೆಗೆ ಇರುವ ನದಿಗಳನ್ನೆಲ್ಲಾ ಜೋಡಿಸುವಂತೆ ಒಂದು ನೀರು ದಾರಿಯನ್ನು ರಚಿಸುವುದರಿಂದ ಜಿಲ್ಲೆಯ ಸಾರಿಗೆಯ ಪ್ರಶ್ನೆಯು ಸುಲಭದಲ್ಲಿ ಪರಿಹಾರವಾಗುವುದೆಂದು ಸೂಚಿಸಿದರು. "ನೀರು ದಾರಿ ಯಾವಾಗಲೂ ಜನತೆಗೆ ಅಗ್ಗವಾಗಿ ದೊರೆಯುವ ಸಾಧ್ಯ. ನೀರು ದಾರಿಯ ಅಸುಪಾಸಿನ ಜನರಿಗೆ ಇದರಿಂದ ಕೆಲಸವು ದೊರೆತು ನಿರುದ್ಯೋಗದ ಪ್ರಶ್ನೆಯನ್ನು ಬಗೆಹರಿಸಿದಂತಾಗುವುದು.

(ಉಳಿದ ಪಟ್ಟದಿಂದ)

ಯವನ್ನು ವ್ಯಕ್ತಪಡಿಸಿದವರಿಗಲಾನೆ ಮತ್ತು ಅವರು ಸೂಚಿಸಿದವರ ಹೆಸರನ್ನು ಸಹ ಪ್ರದೇಶ ಕಾಂಗ್ರೆಸು ತನ್ನ ಬಹುಮತದ ತೀರ್ಮಾನದೊಡನೆ ಕೇಂದ್ರ ಚುನಾವಣಾ ಸಮಿತಿಗೆ ಕಳಿಸಬೇಕು. ಕೇಂದ್ರದ ಸಮಿತಿಯು ಎಲ್ಲವನ್ನೂ ಕೂಲಂಕುಷವಾಗಿ ವಿಚಾರಿಸಿ, ಕೊನೆಯ ನಿರ್ಣಯವನ್ನು ಕೈಗೊಳ್ಳುತ್ತದೆ. ಇಲ್ಲಿ ಎತ್ತಿ ಹಿಡಿಯಲ್ಪಟ್ಟವನೇ ಕಾಂಗ್ರೆಸು ಪಕ್ಷದ ಪರಿಯಾಳೆಂದು ಚುನಾವಣೆಯ ರಂಗಕ್ಕೆ ಇಳಿಯುತ್ತಾನೆ. ಈ ಕೊನೆಯ ತೀರ್ಮಾನ ನಾಮ ಪತ್ರ ಸಲ್ಲಿಸುವ ದಿನಕ್ಕೆ ಒಂದು ತಿಂಗಳ ಮೊದಲು ವ್ಯಕ್ತಪಡುತ್ತದೆ.

ಪ್ರಕಟಣೆ

ಉಡುಪಿ ತಾಲೂಕ ಮಂದಾರ್ತಿ ಶ್ರೀದುರ್ಗಾಪರಮೇಶ್ವರೀ ಅಮ್ಮನವರ ಸನ್ನಿಧಿಯ ದಶಾವತಾರ ಸೇವೆಯನ್ನು 1955-56 ರಲ್ಲಿ ತಿರುಗಾಡಿಸುವ ಹಕ್ಕನ್ನು ಮದ್ರಾಸು ಎಂಡೋಮೆಂಟ್ ಕಮೀಶನರವರ ಹುಕುಂಗೆ ವಳಪಟ್ಟು ಸ್ಥಿರಪಡಿಸುವರೆ ತಾರೀಕು 30-10-55ನೇ ಆದಿತ್ಯವಾರ ಬೆಳಿಗ್ಗೆ ಗಂಟೆ 11ಕ್ಕೆ ಸೀಲು ಹಾಕಿದೆ ಟೆಂಡರುಗಳನ್ನು ಆಫೀಸಿನಿಂದ ನಿರ್ಣಯಿಸಿದ ಶರ್ತಗಳಿಗನುಸಾರವಾಗಿ ಸ್ವೀಕರಿಸಲಾಗುವದು. ಕಾಯುಸುಳ್ಳವರು ಶರ್ತಗಳನ್ನು ಟೆಂಡರು ದಿನದಿಂದ ಮುಂಚಿತವಾಗಿಯೇ ದೇವಸ್ಥಾನದ ಆಫೀಸಿನಲ್ಲಿ ಪಂಚೀಲಿಸಿ ಟೆಂಡರು ಕೊಡತಕ್ಕದ್ದು.

(Sd) B. Umesha Rao.
Executive officer
ಮಂದಾರ್ತಿ ದೇವಸ್ಥಾನ ತಾ. 3-10-55

ನೀರು ದಾರಿಯ ಇಕ್ಕೆಡೆಗಳಲ್ಲಿ 200-300 ಅಡಿ ಜಾಗವನ್ನು ಸರಕಾರದವರು ತಮ್ಮ ವಶಪಡಿಸಿಕೊಂಡು ಉದ್ದೇಶಗಳನ್ನು ನಿರ್ಮಾಣಮಾಡುವವರಿಗೆ ಗೇಣಿಗೆ ಕೊಟ್ಟರೆ/ಅಥವಾ ಸಾಧಾರಿದರೆ ನೀರುದಾರಿಯು ಉದ್ದೇಶಕ್ಕೂ ಉದ್ದೇಶಗಳು ಬೆಳೆಯಲು ಅನುಕೂಲವಾಗುತ್ತದೆ—ಈ ದೊಡ್ಡ ದೇಶದಲ್ಲಿ ಉದ್ದೇಶಗಳನ್ನು ವಿಕೇಂದ್ರೀಕರಿಸಿದಷ್ಟೂ ಒಳ್ಳೆಯದಲ್ಲವೆ? ಮುಂದಿನ ಕರ್ನಾಟಕದಲ್ಲಿ ನಮ್ಮ ಎರಡು ಜಿಲ್ಲೆಗಳ ಕರಾವಳಿ ಪ್ರದೇಶಗಳು ಈಗಿನಂತೆ ಹಿಂದುಳಿಯಲು ಶಕ್ಯವೇ ಇಲ್ಲವೆಂದು ನನಗೆ ತೋರುತ್ತದೆ. ಹಾಗೆಯೇ ಮೀನುಗಾರಿಕೆಯ ಅಖಿಲಭಾರತ ಸಂಸ್ಥೆಯ ಸ್ಥಾಪನೆಗೂ ಮಲ್ಪೆ ಪ್ರಶಸ್ತವಾಗಿದೆ. ಕಾಳೇನದೀ ಶರಾವತಿ ಯೋಜನೆಗಳಿಂದ ವಿದ್ಯುತ್ತೂ ಬಂದರೆ ಕರ್ನಾಟಕವ ಸಂಪತ್ತು ಧನ್ಯವಾಗುವುದರಲ್ಲಿ ಸಂದೇಹವೇನು?

ಪುತ್ತೂರು — ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. 8ರಲ್ಲಿ ಉಡುಪಿ ಎಸ್. ಜಿ. ಎಸ್. ಕಾಲೇಜಿನ ಪ್ರಾಧ್ಯಾಪಕರುಗಳಾದ ಶ್ರೀ. ಕು ಶಿ. ಹರಿದಾಸ ಭಟ್ಟರ ಭಾಷಣವೂ, ಎಚ್. ಕೆ ರಾಮಚಂದ್ರ ಮೂರ್ತಿಯವರ ಕಾವ್ಯ ವಾಚನವೂ ಜರಗಿತು. ಶ್ರೀ. ಶಿವರಾಮ ಕಾರಂತರು ಅತಿಥಿಗಳ ಪರಿಚಯ ಮಾಡಿದರು.

ನಿಂಜೂರು— ಸ್ಥಳೀಯ ಶ್ರೀ ವಿವೇಕಾನಂದ ಸೇವಾ ಸಂಘದ ಭವನ ನಿರ್ಮಾಣದ ಬಗ್ಗೆ ಹುಬ್ಬಳ್ಳಿ, ಪೂನಾ ಮತ್ತು ಬೊಂಬಾಯಿಯಲ್ಲಿರುವ ಊರ ಮಹನೀಯರೆನ್ನು ಶ್ರೀಗಳಾದ ರಾಜು ಸೆಟ್ಟಿ, ಮತ್ತು ಹಿರಿಯಣ್ಣ ಸೆಟ್ಟಿಯವರು ಭೇಟಿಯಾಗಿ ರೂ 3187—3—0 ನ್ನು ಸಂಗ್ರಹಿಸಿರುವರು. ಸಂಸ್ಥೆ ಕಾರ್ಯಕಾರೀ ಸಭೆಯು ತಾ. 16ರಲ್ಲಿ ಜರಗಿ ಧನಸಹಾಯ ನಿತ್ತವರೆಲ್ಲರಿಗೂ ಧನ್ಯವಾದಗಳನ್ನರ್ಪಿಸಿತು. ಈ ಸಂಘದ ಆಶ್ರಯದಲ್ಲಿ ಇದೇ ತಾ. 21 ಮತ್ತು 22ರಲ್ಲಿ ನವರಾತ್ರಿ ಮಹೋತ್ಸವವು ಹರಿಕಥೆ, ಯಕ್ಷಗಾನಾದಿ ಕಾರ್ಯಕ್ರಮಗಳಿಂದ ಜರಗಲಿರುವುದೆಂದೂ ಸರ್ವರಿಗೂ ಸ್ವಾಗತವಿದೆಯೆಂದೂ ಕಾರ್ಯದರ್ಶಿಗಳು ತಿಳಿಸುತ್ತಾರೆ.

ದ. ಕ. ಲೇಖಕರಿಗೆ ಹಾರಿಕೋಷ: ಮದ್ರಾಸು ವಿಶ್ವವಿದ್ಯಾನಿಲಯದವರು ಭಾರತೀಯ ಭಾಷೆಗಳಲ್ಲಿ ಬರೆದ ಗ್ರಂಥಗಳಿಗೆ ಬಹುಮಾನ ಕೊಡುವ ಯೋಜನೆಯಂತೆ 1954ರ ಪಾರಿತೋಷಕವಾದ ರೂಪಾಯಿ 750-/ನ್ನು ಸುರತ್ಕಲ್ ವಿದ್ಯಾದಾಯಿನಿ ಹೈಸ್ಕೂಲ್ ಹೆಡ್ ಮಾಸ್ಟರ್ ಶ್ರೀ ಎಸ್. ವಾಸುದೇವ ರಾವ್, ಅವರು ಬರೆದ "ಭಾರತದ ಹೊಸ ಭೂವಿನರ ತಿ" ಎಂಬ ಕನ್ನಡ ಕೃತಿಗೆ ಕೊಟ್ಟಿರುವರೆಂದು ತಿಳಿದುಬರುತ್ತದೆ.

ನೀಲಾವರ— ಸುಜಿಪಮುದೀನ ಹಾ. ಎ. ಶಾಲೆಯಲ್ಲಿ ಇದೇ 21ನೇ ತಾರೀಕು ಸಂಜೆ 3ಗಂಟೆಗೆ ಹೆತ್ತವರ ಕೂಟವನ್ನೊಳಗೊಂಡ ಶಾರದಾ ಪೂಜಾ ಸಮಾರಂಭ ಜರಗಲಿದ್ದು ಶ್ರೀ ಎನ್. ಅಣ್ಣಪ್ಪ ಭಟ್ಟರು ಸರ್ವರಿಗೂ ಸ್ವಾಗತಬಯಸುತ್ತಾರೆ.

ನುದ್ರಾಸಿನ ಮಂತ್ರಿ ಮಾನ್ಯ ಭಕ್ತವತ್ಸಲಮರ ಆಗಮನ

ಮದ್ರಾಸು ಪ್ರಾಂತದ ಕೃಷಿಮಂತ್ರಿ ಮಾನ್ಯ ಶ್ರೀ. ಎಸ್. ಭಕ್ತವತ್ಸಲಂ ರವರು ಇದೇ ತಾ. 17ರಂದು ರಾತ್ರಿ ರೈಲಿನಲ್ಲಿ ಮಂಗಳೂರಿಗೆ ಬಂದರು. ರೈಲ್ವೆ ನಿಲ್ದಾಣದಲ್ಲಿ ಸಲವು ಪ್ರಮುಖರು ಸ್ವಾಗತಿಸಿದರು. ತಾ. 18ರಂದು ಬೆಳಿಗ್ಗೆ 'ಮಾನ್ಯ ಮಂತ್ರಿಗಳು ಉಡುಪಿ, ಆಲೆಪೂರು ಕೇಂದ್ರಕ್ಕೆ ಹೋಗಿ ಅಲ್ಲಿಯ ಪ್ರಯೋಕಿಕಾ ಗೃಹವನ್ನು ಉದ್ಘಾಟನೆ ನೂಡಿದರು ಸಮಾರಂಭದ ಅಧ್ಯಕ್ಷತೆಯನ್ನು ಡಾ! ಟಿ. ಎಸ್. ಎ. ಪೈಗಳು ವಹಿಸಿದ್ದರು. ಕಟ್ಟಡ ಸಮಿತಿ ಅಧ್ಯಕ್ಷ ಶ್ರೀ. ಟಿ. ಎ. ಪೈ, ಎಮ್. ಎಲ್. ಎ. ಅವರು ಸ್ವಾಗತ ಭಾಷಣ ಮಾಡಿದರು. ಮಂತ್ರಿಗಳು ಉದ್ಘಾಟನಾ ಭಾಷಣದಲ್ಲಿ ಗ್ರಾಮಸ್ತರ ಮುಖ್ಯ ಕರ್ತವ್ಯವಾದ ಖರ್ಚಿನಲ್ಲಿ ಆಧಾರಾಂಶವನ್ನು ಕೊಟ್ಟ ಶ್ರೀ ಶ್ಯಾಮರಾಯರ ಔದಾರ್ಯವನ್ನು ಪ್ರಶಂಸಿದರು. ಶ್ರೀ. ಎ. ಜೆ. ಆಳ್ವ ಅವರು ಮಂತ್ರಿಗಳ ಭಾಷಣವನ್ನು ಕನ್ನಡಿಸಿದರು. ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ರಂಗಣ್ಣ ಭಟ್ಟರು ಧನ್ಯವಾದಗಳನ್ನರ್ಪಿಸಿದರು. ಅಲ್ಲಿಂದ ಮಂತ್ರಿಗಳು ಪುತ್ತೂರು ಹರಿಜನ ಕೊಲನಿಯ ಕಡೆಯಿಂದ ಮನವಿಯನ್ನು ಸ್ವೀಕರಿಸಿ ಪುತ್ತೂರು ದೇವಸ್ಥಾನದಲ್ಲಿ ವಿದ್ಯುದ್ದೀಪ ಜಗಲಿನ್ನು ಉದ್ಘಾಟಿಸಿದರು. ಶ್ರೀ ಟಿ. ಎ. ಪೈಗಳು ಸ್ವಾಗತಮಾತುಗಳನ್ನಾಡಿದರು. ಶ್ರೀ ಆನ್ಮುಂಜೆ ಮೂಧವ ನಾಯ್ಕರು ಧನ್ಯವಾದಗಳನ್ನರ್ಪಿಸಿದರು. ಅಲ್ಲಿಂದ ಮಂತ್ರಿಗಳು ಕಿಣಿಕಲ್ಲ ಬೆಟ್ಟಿಗೆ ಹೋಗಿ ಅಲ್ಲಿಯ ಏಕೋಪಾಧ್ಯಾಯ ಶಾಲಾ ಕಟ್ಟಡದ ಶಂಕುಸ್ಥಾಪನೆ ಮಾಡಿದರು. ಶ್ರೀ ಮೋನಪ್ಪ ಸೆಟ್ಟರು ಪುಷ್ಪ ಹಾರವನ್ನಿತ್ತರು. ಶ್ರೀ ಟಿ. ಎ. ಪೈಗಳು ಅಧ್ಯಕ್ಷತೆವಹಿಸಿದ್ದರು. ಶಾಲಾ ಹೆಡ್ಮಾಸ್ಟರರು ಧನ್ಯವಾದಗಳನ್ನಿತ್ತರು.

ಮಾನ್ಯ ಮಂತ್ರಿಗಳು ಕೆಮ್ಮಣ್ಣಿಗೆ ಆಗಮಿಸಿದಾಗ ಅವರಿಗೆ ಟೀಂಪ್ ವಾದ್ಯದ ಸ್ವಾಗತ ದೊರೆಯಿತು. ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಮಾನ್ಯ ಮಂತ್ರಿಗಳು ವಿದ್ಯುದ್ದೀಪಸ್ಥಂಭಗಳನ್ನು ಉದ್ಘಾಟಿಸಿದರು. ಪಂಚಾಯತ ಬೋರ್ಡಿನ ಅಧ್ಯಕ್ಷರು ಮಾನಪತ್ರ ಅರ್ಪಿಸಿದರು. ಮೈಸೂರ ಜೀವನ ಮಟ್ಟವನ್ನು ಉತ್ತಮ ಗೊಳಿಸಲು ಬೇಕಾದ ಕಾರ್ಯಕ್ರಮವನ್ನು ಸರಕಾರವು ಕೈಕೊಂಡಿರುವುದಾಗಿ ಮಂತ್ರಿಗಳು ಹೇಳಿದರು. ಮಧ್ಯಾಹ್ನ ಪ್ರವಾಸಿ ಬಂದಿಖಾನೆಯಲ್ಲಿಯೂ ಕುಟುಂಬಯೋಜನೆ ಕೇಂದ್ರವನ್ನು ಕುರಿತಾದ ಪ್ರದರ್ಶನವನ್ನೂ ಏರ್ಪಡಿಸಿ, ಭೋಜನಾದಿಗಳ ನಂತರ ಮಂತ್ರಿಗಳು ಮಂಗಳೂರಿಗೆ ಪ್ರಯಾಣ ಮಾಡಿದರು.

ಮಂಗಳೂರಲ್ಲಿ ಜಿಲ್ಲಾ ಬೋರ್ಡಿನ ಮಾನವಿ ಸ್ವೀಕಾರ, ಕೋಲ್ಡ್ ಸ್ಟೋರೇಜ್ ಮತ್ತು ಫ್ಲೈಕ್ ಫ್ರೀಜಿಂಗ್ ಪ್ಲಾಂಟಿನ ಉದ್ಘಾಟನೆ ಮತ್ತು ಕರ್ನಾಟಕ ಪೊಲಿಟೆಕ್ನಿಕ್ ಹೈಸ್ಕೂಲಿನ ಉದ್ಘಾಟನೆ ಮೊದಲಾದ ಕಾರ್ಯಕ್ರಮಗಳನ್ನು ಸಾಂಗಗೊಳಿಸಿದರು.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

Tel: "MENONCO." Phone: No. 671.
T. N. MENON & COMPANY
Wholesale & retail merchants in:- Sole-crepe, Plastic-Sheets, All kinds of Leathers, Leather goods, Leather-cloth, Wax, Thread, Twine, Panel Pins, Paper, Straw-board, Students' Note-Book, Zip Fasteners, Batteries, Photo-Frames, Tarpaulin, Ply-wood, Wire Mesh & All items of Fittings & Making materials for Foot-wears, Suit-cases, Hand bags, Money-purses, Steel-Trunks, Etc. Etc.
POST BAG No. 1, BEACH ROAD, QUILON.



ಕೇಂದ್ರದ ಕೃಷಿ ಮಂತ್ರಿ ಡಾ। ಪಂಜಾಬ್ ರಾವ್ ದೇಶಮುಖರು ತಾ. ೧೬ರಲ್ಲು ಬೆಳಿಗ್ಗೆ ಬೊಂಬಾಯಿಯಿಂದವಿಮಾನಮೂಲಕ ಬಜ್ಪೆಗೆ ಬಂದಿಳಿದಾಗ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾವ್, ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ। ಕೆ. ಕೆ. ಹೆಗ್ಡೆ, ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಆಡಿಗ, ಜಿಲ್ಲಾ ಕೃಷಿ ಅಧಿಕಾರಿ ಶ್ರೀ ಕೆ. ಸಂಜೀವ ಶೆಟ್ಟಿ, ಎಮ್. ಎಲ್. ಎ. ಗಳಾದ ಶ್ರೀ ಯುತರು ಬಿ. ವಿ. ಬಾಳಿಗ ಮತ್ತು ಟಿ. ಎ. ಪೈ ಎಮ್. ಎಲ್. ಸಿ. ಗಳಾದ ಶ್ರೀ ಎಸ್. ನರ್ಸಪ್ಪಯ್ಯ, ಶ್ರೀಗಳಾದ ಎಮ್. ಶಿವರಾವ್, ಬಿ. ಬಿ. ಶೆಟ್ಟಿ, ಕೆ. ಬಿ. ಜಿನರಾಜ ಹೆಗ್ಡೆ, ಎಸ್. ಎನ್. ರಾಜಣ್, ಕುದ್ರಿ ವಾಸುದೇವ ಶೆಣೈ, ಬೈಂದೂರು ಪ್ರಭಾಕರ ರಾವ್ ಮೊದಲಾದವರು ಸುಸ್ವಾಗತ ಬಿತ್ತರು.

ಮಲ್ಪೆಯಲ್ಲಿ

ಮಾನ್ಯ ಮಂತ್ರಿಗಳು ಬಜ್ಪೆಯಿಂದ ಕಾರ್ಕಳ ಮಾರ್ಗವಾಗಿ ಉಡುಪಿಗೆ ಬಂದು ಸೀದಾ ಮಲ್ಪೆಯ ಮೀನು ಒಣಗಿಸುವ ಕೇಂದ್ರಕ್ಕೆ ಆಗಮಿಸಿದಾಗ ಬೇಂಡು ವಾದ್ಯದಿಂದ ಸ್ವಾಗತಿಸಲ್ಪಟ್ಟರು. ಶ್ರೀ ಟಿ. ಎ. ಪೈ, ಎಮ್ ಎಲ್. ಎ. ಅವರು ಪೊಗದೇರ ಬಂಧುಗಳ ಪರವಾಗಿ ಮನವಿಯೊಂದನ್ನು ಅರ್ಪಿಸಿದರು. ಅದರಲ್ಲಿ ಮಲ್ಪೆಯಲ್ಲೊಂದು ಅಖಿಲಭಾರತ ಮೀನುಗಾರಿಕೆ ವಿಜ್ಞಾನ ಮತ್ತು ಸಮುದ್ರ ವಿಜ್ಞಾನದ ತರಬೇತಿ ಸಂಸ್ಥೆ ಸ್ಥಾಪಿಸಬೇಕು. ಮಲ್ಪೆಯನ್ನು ಆಳಸಮುದ್ರ ಮೀನುಗಾರಿಕೆ ಮತ್ತು ಮೀನುಗಾರಿಕೆಯ ಬಂದರು ವಾಗಿ ಅಭಿವೃದ್ಧಿಪಡಿಸಬೇಕು. ಮೀನು ಹಾಳಾಗದಂತೆ ಇಡುವ ಮತ್ತು ಡಬ್ಬಿಯಲ್ಲಿ ಮೀನು ಸಾಕಣೆ ಕಾರ್ಖಾನೆಯನ್ನು ಸ್ಥಾಪಿಸಬೇಕು. ಮೀನು ಗೊಬ್ಬರ ತಯಾರಿ ಕಾರ್ಖಾನೆ ಸ್ಥಾಪಿಸಬೇಕು. ನಸಿ ಮೀನಿಗೆ ಸರಿಯಾದ ನೂಾಟ ವ್ಯವಸ್ಥೆ ಒದಗಿಸಬೇಕು. ಮೀನುಗಾರರ ಸಹಕಾರಿ ಯೋಜನೆಗೆ ಸಹಾಯಧನ ಒದಗಿಸಬೇಕು.

ಮೀನು ಸಾಗಾಟಕ್ಕೆ ಕದಿಮೆದರದ ವ್ಯವಸ್ಥೆ ಮಾಡಬೇಕು. ಕರಾವಳಿ ಗ್ರಾಮಗಳಲ್ಲಿ ಮೀನುಗಾರಿಕೆ ಇತ್ಯಾದಿ ಕರಾವಳಿ ವ್ಯವಹಾರಾಭಿವೃದ್ಧಿಗಾಗಿ ಪ್ರತ್ಯೇಕ ಸಮಾಜವಿಕಾಸ ಯೋಜನೆಯಿರಬೇಕು ಎಂದು ಸೂಚಿಸಲಾಗಿತ್ತು.

ಮಂತ್ರಿಗಳು ಉತ್ತರಿಸುತ್ತಾ ಮಲ್ಪೆಯ ಮೊಗವೀರರಿಗೆ ಕೂಡಾ ಕೆಲವೊಂದು ಪ್ರಯೋಜನಗಳು ಖಂಡಿತವಾಗಿಯೂ ದೊರೆಯುವವು ಎಂದರು. ಸಹಕಾರಿ ತತ್ವದ ಮೇಲೆ ಸಹಕಾರಿ ಸಂಘವಿರುವುದು ಅಂತೆಯೇ ಸಹಕಾರಿ ನೆಲೆಯಲ್ಲಿ ಕೇಂದ್ರ ಭಾರ್ ಮೆಡಿಕಲ್ ಕಾಲೇಜು ತಲೆಯೆತ್ತಿದುರುವ ಕಂತೋಷಕರ ಎಂದರು. ಮುಂದುವರಿಯುತ್ತಾ ಮಂತ್ರಿಗಳು ಸಾರ್ವೆ, ಸ್ಟೀಡನ್ ಮೊದಲಾದ ಸ್ಥಳಗಳಲ್ಲಿ ಸಹಕಾರಿ ತಳಪಾಯದಲ್ಲಿ ನಡೆಯುತ್ತಿರುವ ವ್ಯಾಪಾರ ವಹಿವಾಟುಗಳನ್ನು ಉದಾಹರಿಸಿದರು. ಮೀನುಗಾರಿಕೆಯ ಅಭಿವೃದ್ಧಿಗಾಗಿ ಕೆಲವು ಬಂದರುಗಳನ್ನು ಸುಧಾರಿಸಲಾಗುವುದು. ಪ್ರಧಾನಿ ನೆಹರೂರವರ ಮುಂದಾಳ್ತನದಲ್ಲಿ ಬಡವರ ಉದ್ಧಾರವು ನೇರವಾಗಿ ನಡೆಯುವುದು. ರಾಷ್ಟ್ರದ ಪ್ರಗತಿಗೆ ಸ್ವಾತ್ಮೋನ್ನತಿ ಮತ್ತು ವಿಶ್ವಾಸವಿಲ್ಲದ ನಾಯಕರು ಮತ್ತು ಅವರಲ್ಲಿ ವಿಶ್ವಾಸವಿಡತಕ್ಕ ಜನತೆಯ ಆವಶ್ಯಕತೆಯಿದೆ ಎಂದು ಹೇಳಿದರು. ಶ್ರೀ ಎಸ್. ನುಜ್ಜರಾಜರು ವಂದನೆಗಳನ್ನರ್ಪಿಸಿದರು. ನಂತರ ಮಲ್ಪೆ ಬಂದರ ಪರಿಶೀಲನೆ ಮೀನು ಹಿಡಿಯುವ ಸ್ಥಳಗಳನ್ನು ಸಂದರ್ಶಿಸಿ ಉಡುಪಿಗೆ ಆಗಮಿಸಿದರು.

ಮಧ್ಯಾಹ್ನ ಮುಕುಂದಾಪ್ರವಾಸವನ್ನು ಸ್ಥಳೀಯ ಸಹಕಾರಿ ಸಂಸ್ಥೆಗಳ ಕಡೆಯಿಂದ ಏರ್ಪಡಿಸಲಾಗಿದ್ದ ಭೋಜನ ಸತ್ಕಾರದಲ್ಲಿ ಭಾಗವಹಿಸಿದರು

ಆರಂಭದಲ್ಲಿ ಬೇರೆ ಬೇರೆ ಸಹಕಾರಿ ಸಂಘಗಳ ಪ್ರತಿನಿಧಿಗಳು ಹೂಮಾಲೆಗಳನ್ನರ್ಪಿಸಿದರು. ತೋಕಲ್ ಕೋಪರೇಟಿವ್ ಯೂನಿಯನಿನ ಅಧ್ಯಕ್ಷ ಶ್ರೀ ಕೆ. ಜೆ. ಬಲ್ಲಾಳರು ಮಾನಪತ್ರ ನನ್ನರ್ಪಿಸಿದರು. ಮಾನಪತ್ರದಲ್ಲಿ ಸ್ಥಳೀಯ ಬೇಂಕಿಂಗ್, ಇನ್ಸೂರೆನ್ಸ್ ಮತ್ತು ಸಹಕಾರಿ ಸಂಘಗಳ ಸರಿಯಮ ವಿತ್ತಭದ ನೇತಾರರ ಸಂಘದವರಿಗೆ ಮನೆ ಕಟ್ಟಲಿಕ್ಕೂ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೂ ಧನ ಸಹಾಯವನ್ನು ಕೇಳಲಾಗಿತ್ತು. ಮಂತ್ರಿಗಳು ಇಲ್ಲಿ ಸಹಕಾರ ಚಳವಳಿ ಮುಂದೆವರಿದು ದಕ್ಕಾಗಿ ಸಂತೋಷ ನ್ಯಕ್ತಪಡಿಸುತ್ತಾ ಅಂತಾ ರಾಷ್ಟ್ರೀಯ ರಫ್ತು ವ್ಯಾಪಾರ ಮೊದಲಾದುವನ್ನು ಸಹಕಾರಿ ತಳಪಾಯದಲ್ಲಿಯೇ ಮಾಡಬೇಕೆಂದು ಸೂಚಿಸಿದರು. ಜಿಲ್ಲೆ ಜಿಲ್ಲೆಗಳಿಗಿನ ವ್ಯಾಪಾರ ಇತ್ಯಾದಿಗಳನ್ನು ಸಹಕಾರಿ ತಳಪಾಯದಲ್ಲಿ ಮಾಡಬೇಕೆಂದು ಸಲಹೆಯನ್ನಿತ್ತರು.

ಸಹಕಾರಿ ಸಂಸ್ಥೆಗಳಲ್ಲಿ ಒಬ್ಬ ವ್ಯಕ್ತಿಯು ಪ್ರಭಾವ ಬೀಳದಂತೆ ಎಚ್ಚರಿಕೆ ವಹಿಸಬೇಕಾಗಿಯೂ ಜನರಿಗೆ ಸಹಕಾರಿ ಸಂಘಸಂಸ್ಥೆಗಳಿಂದ ಹೆಚ್ಚಿನ ಪ್ರಯೋಜನವಿಗುವಂತಾಗಬೇಕೆಂದೂ ಅಪೇಕ್ಷಿಸಿ, ಸ್ವಾಗತಕ್ಕಾಗಿ ಅಭಾರ ಸೂಚಿಸಿದರು. ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರು ಆರಂಭದಲ್ಲಿ ಪ್ರಾಸ್ತಾವಿಕ ಭಾಷಣಮಾಡಿದ್ದಲ್ಲದೆ ಅಂತ್ಯದಲ್ಲಿ ಧನ್ಯವಾದಗಳನ್ನಿತ್ತರು.

ನಂತರ ಮಂತ್ರಿಗಳು ಮಣಿಪಾಲ ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿದರು. ಡಾ. ಟಿ. ಎಂ. ಎ. ಪೈಗಳು ಕಾಲೇಜಿನ ಉದ್ದೇಶಾದಿಗಳನ್ನು ವಿವರಿಸಿದರು. ಮಂತ್ರಿಗಳು ಕಾಲೇಜು ಸ್ಥಾಪನೆಗೊಂಡ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ವಿದ್ಯಾರ್ಥಿಗಳನ್ನುದ್ದೇಶಿಸಿ ನೂತನಾಡುತ್ತಾ, ಡಾಕ್ಟರರ ಆಭಾವವಿರುವ ಈ ಕಾಲದಲ್ಲಿ ವಿದ್ಯಾರ್ಥಿಗಳು ಮುಂದಾಗಿ ಸಹಾಯ ಧನವಿತ್ತು ಕಾಲೇಜಿಗೆ ಸೇರಿದುದು ಅಭಿನಂದನೀಯವೆಂದರು. ಕಾಲೇಜು ಯೂನಿಯನ್ ಅಧ್ಯಕ್ಷ ಶ್ರೀ. ವಿಜಯ ನಗರ್‌ಸರು ಧನ್ಯವಾದವಿತ್ತರು. ಅಲ್ಲಿಂದ ಮಂತ್ರಿಗಳು ಮಂಗಳೂರಿಗೆ ಬಂದರು.

ಮಂಗಳೂರಲ್ಲಿ—ಮಂತ್ರಿಗಳು ಮಣಿಪಾಲದಿಂದ ಮಂಗಳೂರಿಗೆ ಬಂದು ಅಲ್ಲಿಯ ನಗರ ಸಭೆಯ ಕಡೆಯಿಂದ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಅರ್ಪಿಸಿದ ಮಾನಪತ್ರವನ್ನು ಸ್ವೀಕರಿಸಿದರು. ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಉತ್ತರ ಭಾಗವು ಕೇರಳಕ್ಕೆ ವರ್ಗಾಯಿಸಲ್ಪಡದಂತೆ ಮಾಡಲು ಮಂತ್ರಿಗಳು ತಮ್ಮ ವಾಕ್ಚಾತುರ್ಯವನ್ನು ಬೀರಬೇಕು ಎಂಬರ್ಥವಿರುವ ವಿಷಯಗಳು ಮಾನಪತ್ರದಲ್ಲಿ ಹೇಳಲಾಗಿದ್ದವು. ನಗರ ಪ್ರದೇಶಗಳ ಆಭಿವೃದ್ಧಿಗೆ ಸರಕಾರವು ಹೆಚ್ಚು ಗಮನ ಕೊಡುತ್ತಿದೆ. ಈ ನಗರದ ನೈರ್ಮಲ್ಯ ಕಾರ್ಯಗಳು, ಚರಂಡಿ ಯೋಜನೆಗಳಿಗೆ ಹೆಚ್ಚಿನ ಗಮನಕೊಡಲಾಗುವುದು ಎಂದರು.

ಸಾರ್ವಜನಿಕ ಸಭೆ

ಡಾ। ಪಿ. ಎಸ್. ದೇಶಮುಖರು ಸಂಜೆ ಕೇಂದ್ರ ಮೈದಾನದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡುತ್ತಾ, ಹೀಗೆಂದರು. "ಕಾಸರಗೋಡು ತಾಲೂಕಿನ ಕನ್ನಡ ಪ್ರದೇಶವನ್ನು ಭಾಷೀ ಕರ್ನಾಟಕದಲ್ಲಿ ಇರಗೊಡಿಸಬೇಕೆಂಬ ಇಲ್ಲಿಯ ಜನತೆಯ ಕೋಳಿಕೆಗೆ ನನ್ನ ಸಹಾನುಭೂತಿಯಿದೆ. ಪ್ರಾ. ಸು. ಸಮಿತಿಯ ವರದಿಯಲ್ಲಿ ಜಿಲ್ಲೆಗಳನ್ನು ತುಂಡರಿಸಬಾರದೆಂದು ಸೂಚಿಸಿದ್ದಾರೆ. ಆದರೆ ಕೆಲವೊಂದೆಡೆಗಳಲ್ಲಿ ಅವರು ತಾಲೂಕು ವಾರಾಗಿಯೂ ವಿಂಗಡಿಸಲು ಸೂಚನೆಯಿತ್ತುದು. ಈ ತತ್ವಕ್ಕೆ ವಿರುದ್ಧ ಸೂಚಿಸಿರುವಾಗಿದೆ. ಅಂತೂ ಜನರು ಉದ್ರೇಕಗೊಂಡು ನರದಿಯ ಕುರಿತು ಗಲಭೆ ಎಬ್ಬಿಸದೆ ಬಲಯುತವಾದ ಕೋಳಿಕೆಗಳನ್ನು ಮುಂದಿಡಬೇಕಾಗಿದೆ" ಎಂದರು. ಬಳಿಕ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮೀನುಗಾರಿಕೆ ಅಭಿವೃದ್ಧಿಯ ಸಾಕಲ್ಯ ಯೋಜನೆಗಳು, ಕಾಂಗ್ರೆಸ್ ಸರಕಾರ ಸಾಧಿಸಿದ ಮಹತ್ಕಾರ್ಯಗಳು ಇತ್ಯಾದಿ ವಿಷಯಗಳನ್ನೆತ್ತಿ ಭಾಷಣ ಮಾಡಿದರು. ಸಭಾರಂಭದಲ್ಲಿ ಶ್ರೀ. ಎಫ್. ಎಕ್ಸ್. ಡಿ. ಪಿಂಟೋರವರು ಸ್ವಾಗತವಿತ್ತರು. ಕೊನೆಯಲ್ಲಿ ಶ್ರೀ. ಕೆ. ಸದಾನಂದ ಹೆಗ್ಡೆ, ಎಮ್. ಪಿ. ಯವರು ಧನ್ಯವಾದಗಳನ್ನಿತ್ತರು.

ಸಹಕಾರೀ ಮಾರಾಟ ಸಂಘದ ಹೊಸ ಭಂಡಸಾಲೆ ಉದ್ಘಾಟನೆ

ಮಾನ್ಯ ಮಂತ್ರಿ ಡಾ. ದೇಶಮುಖರು ಮಂಗಳೂರಿನ ಸಹಕಾರಿ ಮುಖಂಡರಲ್ಲಿ ದ. ಕ. ಜಿಲ್ಲಾ ಕೃಷಿಕರ ಸಹಕಾರೀ ಮಾರಾಟ ಸಂಘದ ಹೊಸ ಭಂಡಸಾಲೆಯನ್ನು ಉದ್ಘಾಟಿಸುತ್ತಾ, ಸಹಕಾರಿ ಪದ್ಧತಿಯು ಆದಷ್ಟು ಪ್ರಗತಿ ಹೊಂದುವಂತೆ ಹಲವಾರು ಶಾಸನಾದಿಗಳನ್ನು ಕೈಕೊಳ್ಳಲಾಗಿದ್ದರೂ, ಎಣಿಸಿದಷ್ಟು ಫಲಕಾರಿಯಾಗಿಲ್ಲ. ಮಾರಾಟ ವ್ಯವಸ್ಥೆಯ ವಿಭಾಗದಲ್ಲಿ ಮಾತ್ರ ವ್ಯಕ್ತಿಗಳ ಪ್ರಾಬಲ್ಯದಿಂದಾಗಿ ಚಳವಳವು ಆಗಬೇಕಾದ ರೀತಿಯಲ್ಲಿ ಪ್ರಗತಿಯಾಗಿಲ್ಲ. ಸಹಕಾರೀ ಮಾರಾಟ ಸಂಸ್ಥೆಗಳು, ಭವ್ಯವಾದ ಗ್ರಾಮಾಂತರಗಳ ಸಹಕಾರೀ ಸಂಸ್ಥೆಗಳ ಹಿಂದು ಪ್ರನುಖ ಅಂಗವಾಗಿ ಕಾರ್ಯೋನ್ಮುಖವಾಗಬೇಕಾಗಿದೆ. ಮಾರಾಟ ಸಂಸ್ಥೆಗಳು ಪ್ರಾಥಮಿಕ ಸಹಕಾರೀ ಸಾಲ ಸಂಸ್ಥೆ ಮತ್ತು ಕೃಷಿ ಉತ್ಪತ್ತಿದು ತಯಾರಿಕೆಯಲ್ಲಿ ಹತ್ತಿರದ ಸಂಪರ್ಕ ಬೆಳೆಸಬೇಕಾಗಿದೆ. ಸರಕಾರದ ಬೆಂಬಲ, ತಾಂತ್ರಿಕ ಸಹಾಯ ಮತ್ತು ಸಾಕಷ್ಟು ಶೇಖರಣ ವ್ಯವಸ್ಥೆ ದೊರೆತಲ್ಲಿ ಮಾರಾಟ ಸಂಸ್ಥೆಗಳು ಖಾಸಗಿ ವ್ಯಾಪಾರ ಸಂಸ್ಥೆ ಗಳಿಗಿಂತಲೂ ಕೃಷಿಕನಿಗೆ ಹೆಚ್ಚಿನ ಸೇವೆಯನ್ನು ಸಲ್ಲಿಸಲು ಸಾಧ್ಯವಾಗ ಬಹುದು" ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಎಸ್. ಹೆಗ್ಡೆ, ಎ. ಪಿ. ಯವರು ವಹಿಸಿದರು ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಸಂದೇಶವಾಚನಮಾಡಿದರು. ಶ್ರೀ ಬೈಂದೂರು ಪ್ರಭಾಕರ ರಾಯರು ಸ್ವಾಗತಭಾಷಣವಾಡಿದರು. ಪ್ರಾಂತೀಯ ರಿಜಿಸ್ಟ್ರಾರ್ ಶ್ರೀ ಪಳನಿ ಸ್ವಾಮಿ ಮುನಲಿಯಾರ್, ಶ್ರೀ ಎಸ್. ನರ್ಸಪ್ಪಯ್ಯ, ಎಂ. ಎಲ್. ಸಿ. ಮೊದಲಾದವರು ಮಾತನಾಡಿದರು. ತದನಂತರ ಈ ಸ್ಥಳದಲ್ಲಿಯೇ ಜಾಗತಿಕ ಆಹಾರ ಮತ್ತು ಕೃಷಿ ಸಂಸ್ಥೆಯ ವಾರ್ಷಿಕೋತ್ಸವವು ನುಂತ್ರಿಗಳ ಆಧ್ಯಕ್ಷತೆಯಲ್ಲಿ ಜರಗಿತು. ಉಡುಪಿಯ ಶ್ರೀ ಗೋವಿಂದರಾಜ ಹೆಗ್ಡೆಯವರಿಗೆ ಎಳ್ಳಿಗೆ 7995ರಾತ್ರು ಭತ್ತ ಬೆಳೆಸಿದುದಕ್ಕೆ 1954-55ರ ಜಿಲ್ಲಾ ಬಹುಮಾನವನ್ನು ಕೊಡಲಾಯಿತು.

ಮಂತ್ರಿಗಳು ಕೆನರಾ ಚೇಂಬರ್ ಆಫ್. ಕಾಮರ್ಸಿಗೆ ಭೇಟಿಯಿತ್ತು ಮನವಿಯನ್ನು ಸ್ವೀಕರಿಸಿ, ಸ್ವಾಂತ ಸುನರ್ರಜನೆಯಾಗುವ ಸಂದರ್ಭದಲ್ಲಿರುವುದರಿಂದ ಕೆಲವೊಂದು ಯೋಜನೆಗಳು ಮುಂದೆ ಬೀಳಬಹುದೆಂದೂ ಶ್ರನುಪಹಿಸಿ ಮುಡಿದು ಉತ್ತಾದನೆ ಹೆಚ್ಚಿಸುವುದು ಜನರನ್ನೆ ಹೊಂದಿದೆ ಎಂದೂ ಹೇಳಿದರು ಆ ಮೇಲೆ ಕೋಲ್ಡ್ ಸ್ಟೋರೇಜ್ ಪ್ಲಾಂಟನ್ನು ಸಂದರ್ಶಿಸಿ, ಊಟತೀರ್ಥಿಸಿಕೊಂಡು ಬಜ್ಪೆಯಲ್ಲಿ ವಿಮಾನವೇರಿ ಬೊಂಬಾಯಿಗೆ ಹಿಂತಿರುಗಿದರು.

ಬೊಂಬಾಯಿ:

ಚೆಂಬೂರು ಕರ್ನಾಟಕ ಸಂಘದ ಆಶ್ರಯದಲ್ಲಿ- ಗಾಂಧಿ ಜಯಂತಿದಿನ ಶ್ರೀ ಎಚ್. ವಿ. ಇನಾರದಿಯನವರು ಧರ್ಮಾರ್ಥ ವಾಚನಾಲಯವೊಂದನ್ನು ತೆರೆದರು.

ರಾಷ್ಟ್ರಭಾಷೆಯ ಮತ್ತು ಹಿಂದೀ ನಿಕೇತನ- ಗಳಂಬ ಎರಡು ಸಂಸ್ಥೆಗಳು ಕಳವ ನೂಾನೆಗಳಿಂದ ಅಲಿಗಿಯಲ್ಲಿ ಹಿಂದೀ ಭಾಷಾ ಪ್ರಚಾರಕಾರ್ಯ ನಡೆಸುತ್ತಲಿರುವುದು ಅಭಿನಂದನೀಯ.

ಕೇಂದ್ರದ ಕೃಷಿ ಮಂತ್ರಿಗಳ ಆಗಮನ

ಉಡುಪಿ—ಮಂಗಳೂರುಗಳಲ್ಲಿ ಕಾರ್ಯಕ್ರಮಗಳು

ಉಡುಪಿ ಡಿ. ಮು. ಕೋರ್ಟಿನಲ್ಲಿ

C. S. No. 271/55.

ಸಂಕನ್ಮ ಶೆಟ್ಟಿ... ವಾದಿಳು.

ಮತ್ತು

1 ಮುತ್ತಕ್ಕ ಶೆಟ್ತಿ. 2 ಅಂತಂಮು ಶೆಟ್ತಿ 3 ಹಿರಿಯಣ್ಣ ಶೆಟ್ಟಿ, 4 ಜನಗ್ನಾತ ಶೆಟ್ಟಿ— ಪ್ರತಿವಾದಿರು

ಇವರೊಳಿಗೆ

ಮೇಲ್ಕಾಂಡ ವ್ಯಾಜ್ಯದಲ್ಲಿ 3ನೇ ಪ್ರತಿವಾದಿ ಹಿರಿಯಣ್ಣ ಶೆಟ್ಟಿಗೆ ಅಗತಕ್ಕ ವ್ಯಾಜ್ಯದ ನೋಟೀಸು ತಾರೀಖು 3—11—55ಕ್ಕೆ ಇಟ್ಟಿರುವುದರಿಂದ ಸದ್ರಿ ಪ್ರತಿವಾದಿಯು ಅಕ್ಷೇಪಣೆ ಇರುವದನ್ನು, ಆ ದಿನ ಸದ್ರಿ ಕೋರ್ಟುಮುಂದೆ ಹಾಜ್ರಾಗಿ ಜಾಹೀರುನುಡಿಕೊಳ್ಳತಕ್ಕದ್ದು—

P. Padmanabha Rao,
Vakil for Plaintiff.

Udipi, Dated 15—10—55.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ



ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಯೋಗುವ ೪ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ವಾಕಿಸ್ವರು:

(1) ಸುದರ್ಶನ ಆಯುರ್ವೇದ ವೈದ್ಯಕಾಲ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

THE CANARA BANKING CORPORATION LTD.
50 YEARS of BANKING SERVICE
ESTD 1906

Popular. Progressive. Prosperous.

A branch of the Bank will shortly be opened at MADURAI.

ರಾಜಪ್ರಮುಖರ ಸ್ಥಾನಮಾನ

ಪ್ರಜಾಪ್ರಭುತ್ವಕ್ಕೆ ಸಲ್ಲದೆಂಬ ಅಭಿಪ್ರಾಯ

ರಾಜ್ಯ-ಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸಿದ ಫಜಲ ಆಲಿ ಆಯೋಗವು ಕೆಲವು ಕ್ರಾಂತಿಕಾರಿಯಾದ ಸೂಚನೆಗಳನ್ನು ಮಾಡಿದೆ. ಇವುಗಳಲ್ಲಿ ಒಂದು ರಾಜಪ್ರಮುಖರ ಸ್ಥಾನವನ್ನು ರದ್ದುಗೊಳಿಸುವುದಕ್ಕೆ ಸಂಬಂಧಿಸಿದೆ. ಈ ಸಂದರ್ಭದಲ್ಲಿ ಮೈಸೂರಿನಲ್ಲಿ ಕೆಲವು ವರ್ಗಗಳು ತೀವ್ರ ಆಸಮಾಧಾನವನ್ನು ವ್ಯಕ್ತಪಡಿಸಿವೆ; ಸಾಮಾನ್ಯ ನಾಗರಿಕರು ಮಾತ್ರ ಈ ಸೂಚನೆಯನ್ನು ಸ್ವಾಗತಿಸಿದ್ದಾರೆ.

ಗವರ್ನರರೊಡನೆ ಹೋಲಿಕೆ

ಈಗಿನ "ಬಿ" ವರ್ಗದ ರಾಜ್ಯಗಳಲ್ಲಿ ರಾಜಪ್ರಮುಖರ ಸ್ಥಾನವೇನು ಎಂಬುದನ್ನು ಆಯೋಗವು ವಿವರಿಸಿದೆ. ಆಯೋಗದ ಹೇಳಿಕೆಗನುಸಾರವಾಗಿ "ಆ" ವರ್ಗದ ಗವರ್ನರರಂತೆಯೇ "ಬಿ" ವರ್ಗದ ರಾಜಪ್ರಮುಖರು ಸಹ ಹೆಚ್ಚು ಕಡಿಮೆ ಘಟನಾತ್ಮಕ ಮುಖ್ಯಸ್ಥರಾಗಿದ್ದಾರೆ. "ಆ" ವರ್ಗದ ರಾಜ್ಯದ ಗವರ್ನರನೊಬ್ಬನನ್ನು ರಾಷ್ಟ್ರಾಧ್ಯಕ್ಷರು ನೇಮಿಸುವಾರಾದರೆ, ಹೈದರಾಬಾದು ಮತ್ತು ಮೈಸೂರುಗಳಲ್ಲಿ ಕ್ರಮವಾಗಿ ನಿಜಾಮ ಮತ್ತು ಮಹಾರಾಜರೆಂದು ಯಾರು ಮನ್ನಿಸಲ್ಪಡುವರೋ ಅವರು ರಾಜಪ್ರಮುಖರೆನಿಸುತ್ತಾರೆ; ಉಳಿದ "ಬಿ" ವರ್ಗದ ರಾಜ್ಯಗಳ ಮಟ್ಟಿಗೆ ರಾಷ್ಟ್ರಾಧ್ಯಕ್ಷರು ಯಾರನ್ನು ಮನ್ನಿಸುತ್ತಾರೋ ಅವರು ರಾಜಪ್ರಮುಖರಾಗುತ್ತಾರೆ. ಒಬ್ಬ ಗವರ್ನರನನ್ನು ರಾಷ್ಟ್ರಾಧ್ಯಕ್ಷರು ಹೇಗೆ ಅಧಿಕಾರದಿಂದ ನಿವೃತ್ತಗೊಳಿಸಬಲ್ಲರೊ ಆದರಂತೆ ರಾಜಪ್ರಮುಖನೆಂದು ಕೊಡಲ್ಪಟ್ಟ ಮನ್ನಣೆಯನ್ನು ರಾಷ್ಟ್ರಾಧ್ಯಕ್ಷರು ಹಿಂದೆಗೆದುಕೊಳ್ಳಬಲ್ಲರು—ಎಂದು ಆಯೋಗ ತಿಳಿಸಿದೆ.

ರಾಜಕೀಯ ಮುಖ

ಹೀಗಿದ್ದರೂ ರಾಜಪ್ರಮುಖರ ಸ್ಥಾನಕ್ಕೆ ರಾಜಕೀಯ ಮಹತ್ವವೊಂದಿರುವುದನ್ನು ಆಯೋಗ ನೆನಪಿಗೆ ತಂದುಕೊಟ್ಟಿದೆ. ದೇಶದ ಪ್ರಜಾಸತ್ತಾತ್ಮಕ ಬಾಳಿಕೆಗೆ ಹೊಂದಿಕೆಯಾಗದ ವಿಷಯವೆಂದು ರಾಜಪ್ರಮುಖರ ಸ್ಥಾನವನ್ನು ಬಹು ದೊಡ್ಡ ಸಾರ್ವಜನಿಕ ಆಭಿಪ್ರಾಯವು ಹಂಗಣಿಸಿದೆ; ಮತ್ತು ಅವನ್ನು ಬಾಂಧರಿಸುವುದಕ್ಕೆ ಅಸಮ್ಮತಿಯನ್ನು ಸೂಚಿಸಿದೆ. ಈ ಬಗ್ಗೆ ಮುಂದಿಡಲಾದ ವಾದಪ್ರತಿವಾದಗಳ ಅಳವಾದ ಭಾವನೆಗಳವ ಎಂದು ಆಯೋಗವು ಮನ-ಂದಿದೆ. ಮೊದಲನೆಯದಾಗಿ ರಾಜ್ಯದ ಘಟನಾತ್ಮಕ ಮುಖ್ಯಸ್ಥನು ಸಾಮಾನ್ಯವಾಗಿ ಆದೇ ರಾಜ್ಯದವನಾಗಿರಬಾರದು ಎಂದು ಆಯೋಗದ ಅಭಿಪ್ರಾಯ. ರಾಜಪ್ರಮುಖನು ಸ್ಥಳೀಯ ನೈತ್ರದಲ್ಲಿ ಗಾಢವಾದ ಪ್ರಭಾವವನ್ನೂ ಆಸಕ್ತಿಯನ್ನೂ ಪಡೆದವನಾಗಿರಬಾರದು ಎಂಬ ಆಯೋಗದ ಅಭಿಪ್ರಾಯವು ಸಮಂಜಸವಾದುದು. ಆದರೆ ಈ ಸಲಹೆಯನ್ನು ಕಾರ್ಯಗತಗೊಳಿಸುವುದು ಕಷ್ಟಕರವಾದ ವಿಷಯವೆಂದು ರಾಜಪ್ರಮುಖರ ಸ್ಥಾನಮಾನಕ್ಕೆ ವಿಮರ್ಶಗತವಾದ ವಿಷಯ ಎಂದು ಆಯೋಗ ಪರಿಗಣಿಸಿದೆ.

ಹಿಂದಿನ ಸಂಬಂಧ

ತಾವು ಹಿಂದೆ ವಂಶಪಾರಂಪರ್ಯವಾಗಿ ಆಳಿಕೊಂಡು ಬಂದು ಗಾಢವಾದ ಸಂಬಂಧವಿರುವ ಪ್ರದೇಶಗಳಲ್ಲಿಯೇ ಈಗ ರಾಜಪ್ರಮುಖರಾಗಿ ಮೆರೆಯುವವರು ಭಾರತಸರಕಾರದ ದೃಷ್ಟಿಯಿಂದಾಗಲೀ ಸಂಬಂಧಿಸಿದ ರಾಜ್ಯಸರಕಾರಗಳ ದೃಷ್ಟಿಯಿಂದಾಗಲೀ ಆ ರಾಜ್ಯದ ಘಟನಾತ್ಮಕ ಮುಖ್ಯಸ್ಥನೆಂಬ ನೆಲೆಯಿಂದ ತಮ್ಮ ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಶಕ್ತರಾದಾರೆಯೇ ಎಂಬ ವಿಷಯದಲ್ಲಿ ಸಂಶಯವನ್ನು ಆಯೋಗ ವ್ಯಕ್ತಪಡಿಸಿದೆ. ಪ್ರಜಾಸತ್ತಾತ್ಮಕ ಪದ್ಧತಿಗೆ ಆನುಗುಣವಲ್ಲದ ವಿಷಯವೆಂಬುದರಿಂದಷ್ಟೇ ಯಲ್ಲ-ರಾಜಪ್ರಮುಖರ ಸ್ಥಾನವನ್ನು ಇರಲೊಳಿಸಿದರೆ, ಆ ಸ್ಥಾನಬಲದಿಂದ ಸೃಷ್ಟಿಸಲ್ಪಡುವ ಪರಿಸ್ಥಿತಿಯು ನಿಷ್ಠೆಯತೆಯನ್ನು ಅದು ಉಳಿಸಿಕೊಂಡು ಹೋಗುವ ಭಯವಿದೆ; ಇದು ಎಷ್ಟಮ್ಯ ಅಪೇಕ್ಷಣೀಯವಾದುದಲ್ಲ. ಆದುದರಿಂದ ರಾಜಪ್ರಮುಖಾಸ್ಥಾನವನ್ನು ರದ್ದುಗೊಳಿಸುವುದಕ್ಕೆಯೇ ಆಯೋಗ ಸಿಫಾರಸು ಮಾಡಿದೆ.

ಕೇಂದ್ರದ ಒಪ್ಪಂದ

ಭಾರತಸರಕಾರದವರಿಗೆ ಈಗ ರಾಜಪ್ರಮುಖ ಸ್ಥಾನದಲ್ಲಿರುವವರೊಡನೆ ಇರಬೇಕಾದಾದ ತಿಳಿವಳಿಕೆ ಮತ್ತು ಒಪ್ಪಂದವು ಕುರಿತು ಆಯೋಗ ಹೆಚ್ಚಿನ ಆಸಕ್ತಿಯನ್ನು ಪ್ರದರ್ಶಿಸಿಲ್ಲ. ಕೇಂದ್ರಸ್ಥ ಆಳರರ ಹಿಂದಿನ ರಾಜ್ಯಗಳ ಅಂತರಂಗದ ಕಾರಣದಿಂದ ಕೆಲವು ವಿಶೇಷ ರಿಯಾಯಿತಿಗಳನ್ನೂ ವಿಷಯವಾದ ವರ್ಷಾಸನಗಳನ್ನೂ ನೀಡುತ್ತಿದೆ. ಇದಲ್ಲದೆ ರಾಜಪ್ರಮುಖರೊಂದಿಗೆ ಸ್ನೇಹಬಲದಿಂದ ಇದರಲ್ಲಿ ಕೆಲವರಿಗೆ ಬೇರೆಕೆಲವು ಸೌಕರ್ಯಗಳೂ ವೇತನವೂ ಸಿಗುತ್ತವೆ. ಆಯೋಗದ ಸಿಫಾರಸಿನಂತೆ ನಡೆದರೆ, ಈ ಎರಡನೇ ಬಗೆಯ ಸೌಕರ್ಯ ಮಾತ್ರ ಹೋಗುತ್ತದೆ; ಬೇರೆಲ್ಲ ವಿಷಯಗಳಲ್ಲಿ ಕೇಂದ್ರವೆ ವಚನ ಉಳಿಯುವುದೆರಿಂದ, ಪಶ್ರ ಬ್ರಸ್ಟರಾಜಪ್ರಮುಖರ ಹಳ್ಳಿ ಬಾಧ್ಯತೆಗಳಲ್ಲಿ ಹೆಚ್ಚಿನಬದಲಾವಣೆಯೇನೂ ಆಗುವುದಿಲ್ಲ. ದೇಶವಲ್ಲಿಪ್ರಜಾಪ್ರಭುತ್ವ ಪದ್ಧತಿಯನ್ನು ಎತ್ತಿ ಹಿಡಿಯುವುದರಲ್ಲಿ ಆಯೋಗ ಒಂದು ಹೆಜ್ಜೆ ಮುಂದೆಹೋಗಿದೆ ಎಂದಿಸ್ಪೇ ಹೇಳಲಬಹುದು ಹೊರತು ಯಾವು ದೂರಿನ ಹಾಗಿಲ್ಲ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ಮೊತ್ತವು ಕೊಡಲಾಗುತ್ತದೆ. ಸುಲಭ ಕಂತಿನ ಮರುಪಾವತಿ. ಇಂದಿನಿಷ್ಟೇ ಕೆಳಗಿನ ವಿಳಾಸಕ್ಕೆ ಆರ್ಜಿಮಾಡಿಕೊಳ್ಳುವುದು.

P. O. Box No. 3219 BOMBAY-



ಸಾರ್ವಜನಿಕ ಆಡಳಿತ

ಅರ್ಥ ಸಚಿವರ ವಿಚಾರಗಳು

ಕೇಂದ್ರದ ಅರ್ಥಸಚಿವರಾದ ಶ್ರೀ ಸಿ. ಡಿ. ದೇಶಮುಖರು ಪಾಟ್ನಾ ವಿಶ್ವವಿದ್ಯಾಲಯದ ಸಾರ್ವಜನಿಕ ಆಡಳಿತ ಸಂಸ್ಥೆಯ ಆಶ್ರಯದಲ್ಲಿ ಇಡೀ ಒಸೇ ದಿನಾಂಕ ಬೋಧಪ್ರದವಾದ ಭಾಷಣವನ್ನು ಮಾಡಿ, ಭಾರತದ ಇಂದಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಆಡಳಿತಾಧಿಕಾರಿಗಳ ವರ್ತನೆ ಹೇಗಿರಬೇಕೆಂದು ಚಿತ್ರಿಸಿದರು. ಅಭಿವೃದ್ಧಿ ಪ್ರಯತ್ನಗಳು ಯಶಸ್ವಿನ ಸೌಪಾದಿಸಬೇಕಾದರೆ ಸಾರ್ವಜನಿಕ ಆಡಳಿತಗಾರರೆ ಸುಸೋಭಾವನೆಯಲ್ಲಿ ಬದಲಾವಣೆ ಆವಶ್ಯವೆಂದೂ ತಮ್ಮ ಕರ್ತವ್ಯ ನುಷ್ಠಾ ಜವಾಬ್ದಾರಿಯ ವಿಷಯದಲ್ಲಿ ಅವರು ಜಾಗೃತಿಯನ್ನು ಹೊಂದಿರುವುದು ಅತ್ಯಗತ್ಯವೆಂದೂ ಅವರು ಹೇಳಿದ್ದರು.

ಭಾರತೀಕರಣದ ಪರಿಣಾಮ

ಸ್ವಾತಂತ್ರ್ಯವು ಆಡಳಿತಾಧಿಕಾರಿಗಳ ಪಾತ್ರಕ್ಕೆ ಹೊಸರೂಪವನ್ನು ಕೊಟ್ಟಿದೆ. ಹಿಂದೆಯಾದರೆ ಪರಕೀಯ ಅಧಿಕಾರಿಗಳೇ ಹೆಚ್ಚಾಗಿ ಆಡಳಿತದ ಕೇಂದ್ರ ಸ್ಥಾನಗಳಲ್ಲಿದ್ದರು. ಭಾರತೀಕರಣದ ಗತಿಯು ಬಹಳ ನಿಧಾನವಾಗಿದ್ದಿತು. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಪರಕೀಯ ಆಡಳಿತಾಧಿಕಾರಿಗಳು ಹೊರಟುಹೋಗಿ, ಭಾರತೀಯರೆನ್ನೇ ಉನ್ನತ ಸ್ಥಾನಕ್ಕೆ ಏರಿಸಬೇಕಾಗಿ ಬಂದುದರಿಂದ ದಕ್ಷತೆ ಮತ್ತು ಕಾರ್ಯಕ್ಷಮತೆಗಳು ಸಹಜವಾಗಿಯೇ ಕುಂಠಿತವಾಗುವು. ಇದರೊಂದಿಗೆ ದೇಶದ ಆರ್ಥಿಕಬೆಳವಣಿಗೆಯ ಪ್ರಶ್ನೆಯೂ ಸೇರಿಕೊಂಡು ಸಮಸ್ಯೆಯನ್ನು ಜಟಿಲವಾಗಿ ಮಾಡಿತು—ಎಂದು ಶ್ರೀ ದೇಶಮುಖರು ವಿವರಿಸಿದರು.

ಅಪ್ರಯೋಜಕ ಶಿಕ್ಷಣ

ಸರಕಾರವು ಸಮಾಜವಾದಿ ಮಾದರಿಯ ಸಮಾಜರಚನೆಯ ತತ್ವವನ್ನು ಅಂಗೀಕರಿಸಿ, ಆಡಳಿತಾಧಿಕಾರಿಗಳು ನಿರಂಕುಶರಿಂದ ವಿಶಿಷ್ಟ ಜನತೆಯ ಇಚ್ಛೆಗೆ ವಮ್ಯತ್ವಗೊಡುವ ಸಾರ್ವಜನಿಕ ಸೇವಕರಾಗುವಂತೆ ಮಾಡಿತು. ಆದರೆ ಸಮರ್ಥ ಆಡಳಿತದೊಡನೆ ಅಭಿವೃದ್ಧಿ ಪ್ರಯತ್ನಗಳ ತಿಳಿವಳಿಕೆಯನ್ನು ಈ ಅಧಿಕಾರಿವರ್ಗಲ್ಲಿ ಸಮಾವೇಶಗೊಳಿಸುವುದು ಇನ್ನೊಂದು ಸಮಸ್ಯೆಯಾಗಿ ಪರಿಣಮಿಸಿತು. ಸದ್ಯದ ಶಿಕ್ಷಣವು ಪರಿಸ್ಥಿತಿಯನ್ನು ಸುಧಾರಿಸಲು ಅನುಕೂಲವಾಗಿಲ್ಲ. ಭಾರತದಲ್ಲಿ ನೈಪುಣ್ಯವುಳ್ಳವರ ಕೊರತೆಯಿಲ್ಲವಾದರೂ ಅವರನ್ನು ಗುರುತಿಸಿ, ಆಕರ್ಷಿಸುವುದು ಸುಲಭವಲ್ಲ. ಶಿಕ್ಷಣಪದ್ಧತಿಯಲ್ಲಿ ಬದಲಾವಣೆಯನ್ನು ಸಾಧಿಸಿದರೆ ಈ ಕಷ್ಟವನ್ನು ಪರಿಹರಿಸಬಹುದು—ಎಂದು ಅವರು ಸಲಹೆ ನೀಡಿದರು.

ತರಬೇತಿ ಬೇಕಾಗಿದೆ

ಆಡಳಿತಾಧಿಕಾರಿಗಳಿಗೆ ಇಂದು ಬಹುಮುಖವಾದ ತರಬೇತಿ ಅಗತ್ಯವಿದೆ; ಅಭಿವೃದ್ಧಿ ಪ್ರಯತ್ನಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವ್ಯಾವ ಬಗೆಯ ಸಿಬ್ಬಂದಿಯ ಅವಶ್ಯಕತೆ ಇದೆ ಎಂದು ಕಂಡುಹಿಡಿದು, ಅದಕ್ಕೆ ತಕ್ಕ ತರಬೇತಿಯ ಸೌಕರ್ಯಗಳನ್ನೊದಗಿಸುವುದು ವಿಹಿತ. ಇದರಿಂತೆ ವಿಳಂಬ ಧೋರಣೆಯು ನಿವಾರಣೆ ಹೊಂದುವುದಕ್ಕೂ ಆಡಳಿತ ವಿಧಾನವಲ್ಲಿ ಸುಧಾರಣೆಯನ್ನು ಮಾಡಬೇಕು ಕೆಲವು ಪ್ರಸಂಗಗಳಲ್ಲಿ ಆಡಳಿತಾಧಿಕಾರಿಗಳು ವಿಶೇಷ ದಕ್ಷತೆಯನ್ನು ತೋರಿಸಿದರೂ ಶಾಸನಾಂಗದ ಸದಸ್ಯರ ಕಟು ಟೀಕೆ ತಪ್ಪುವುದಿಲ್ಲ. ಇದು ಜನಾಬ್ದಾರಿಯನ್ನು ಒಪ್ಪಿಕೊಳ್ಳದೆ ಕಾಗದ ಪತ್ರಗಳನ್ನು ದೂರ ಸರಿಸಿ, ಮೇಲಿನವರ ಅಜ್ಞೆಯನ್ನೇ ಇದಿರು ನೋಡುವಂತೆ ಅಧಿಕಾರಿಗಳನ್ನು ಪ್ರೇರೇಪಿಸುತ್ತದೆ- ಎಂದು ಅರ್ಥ ಸಚಿವರು ನುಡಿದರು.

ಮಾನವೀಯ ಸಂಬಂಧ

ಮಂತ್ರಿಗಳಿಗೂ ಆಡಳಿತಾಧಿಕಾರಿಗಳಿಗೂ ಗಾಢವಾದ ಮಾನವೀಯ ಸಂಬಂಧ ಬೆಳೆದು ಬರಬೇಕು. ಅಧಿಕಾರಿಗಳಿಗೆ ತಪ್ಪುಗಳೇ ತೋರಿದ್ದು ದಮ್ಮು ಹೇಳುವ ನುತ್ತು ಯೋಗ್ಯ ನಿರ್ಣಯಗಳನ್ನು ಕೈಗೊಳ್ಳುವ ಸ್ವಾತಂತ್ರ್ಯವನ್ನು ಕೊಡಬೇಕು. ವರ್ಷಕ್ಕೊಳ್ಳ ವ್ಯಕ್ತಿಗಳ ಆಶ್ರಯವನ್ನು ಪಡೆದು ಬೇಗ್ಯತೆಯಿಲ್ಲದಿದ್ದರೂ ಮೇಲಕ್ಕೇರಲು ಸಮರ್ಥರಿಯವರಿಗೆ ವಿಶ್ವಾಸವಿದ್ದರೂ ಜಾಗ್ರತೆ ಇರಬೇಕು ಎಂದು ಮುಂತಾಗಿ ಅವರು ಸೂಚಿಸಿದರು.

ಜನರ ಸಹಕಾರ

ಪಾಸಗಿ ರಂಗದಲ್ಲಿ ಹೆಚ್ಚಿನ ಸಂಬಳದಿ ಅವಿಷವು ಉತ್ತಮ ಕೆತ್ತೃತ್ವಶಾಲಿಗಳನ್ನು ಆಕರ್ಷಿಸುತ್ತಿದೆ; ಸಂಬಳ ಪ್ರಮಾಣವಲ್ಲರಿಯವ ವೈಪರೀತ್ಯವನ್ನು-ಪರಿಹರಿಸಲು ಬದ್ಧವಾದ ಸರಕಾರ ಈ ತಂತ್ರವನ್ನು ಅನುಸರಿಸಿಲಾರದು. ಅದುದರಿಂದ ಆಡಳಿತ ರಂಗದಲ್ಲಿ ಪ್ರವೇಶಿಸುವವರು ಭದ್ರತೆ ನುತ್ತು ಸ್ವಂತ ಲಾಭಕ್ಕಿಂತಲೂ ಸೇವೆಯ ದೃಷ್ಟಿಯುಳ್ಳವರಾಗಿದ್ದಾರೆಂದು ಭಾವಿಸುವುದೊಳಿತು. ಆವರ ಈ ದೃಷ್ಟಿಯನ್ನು ಜನರು ಪ್ರೋತ್ಸಾಹಿಸಬೇಕು. ಆದರಂತೆ ಅಧಿಕಾರಿಗಳು ಸಹ ಇಂದು ತಮ್ಮ ಕೆಲಸದ ಯಶಸ್ಸು ಕೇವಲ ದಕ್ಷತೆಯನ್ನು ಹೊಂದಿಕೊಂಡಿಲ್ಲವೆಂದೂ ಸಾಮಾಜಿಕ ಪುನಾರಚನೆ ಮತ್ತು ಕಲ್ಯಾಣಪ್ರದ ಅಭಿವೃದ್ಧಿ ಪ್ರಯತ್ನಗಳಲ್ಲಿ ಜನರ ಸಹಕಾರವನ್ನು ಪಡೆಯುವವಲ್ಲಿ ತಾವೆಷ್ಟು ಯಶಸ್ವಿಯಾಗಿರುವೆಂಬ ಸಾಮರ್ಥ್ಯವು ಇಲ್ಲಿ ಪರಿಗಣಿಸಲ್ಪಡುತ್ತದೆ ಎಂದೂ ಮನಗಾಣಬೇಕು-ಎಂಬುದಾಗಿ ಶ್ರೀ ದೇಶಮುಖರು ಉಪದೇಶಿಸಿದರು.

ಕಾಸರಗೋಡು ಡಿ. ಮು. ಕೊರ್ಟ್‌ನಲ್ಲಿ

S. C. No. 157/1955.

T. A. ಸುಂಕುದ ಕುಂಞಾ— ವಾದಿ

ಮತ್ತು

ಸಿ. ಶ್ರೀಪಾದ ರಾವ್ ಕೂಡಾ— ಪ್ರತಿವಾದಿರು

ಕಾಸರಗೋಡು ಕ್ವಜೆಯಲ್ಲಿರುವ ಕಕ್ಕಾನಾರು ನರಸಿಂಹ ಕಂಮಿತ್ತರ ಮಗ 1ನೇ ಪ್ರತಿವಾದಿ ಸಿ. ಶ್ರೀಧರ ರಾವ್ ಮತ್ತು ಪೊಣಕ್ಕೆ ಹೆಂಗ್ಸಿನ ಮಗಳು 4ನೇ ಪ್ರತಿವಾದಿಯು ಪೀತಾಂಬರ ಹೆಂಗ್ಸು ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನಂದರೆ;

ವಾದಿಗೆ 1ನೇ ಪ್ರತಿವಾದಿ ಮತ್ತು 4ನೇ ಪ್ರತಿವಾದಿಳ ತಾಯಿ ವೃತಸಿಟ್ಟ ಪೊಣಕ್ಕೆ ಹೆಂಗ್ಸು ಕೂಡಾ 2ಜನರು ತಾ. 28-11-1955 ರಲ್ಲು ರೂಪಾ 250-0-0ಕ್ಕೆ ಬರಕೊಟ್ಟ ಪ್ರೊನೋಟಿನ ಅಸ್ಸು ಬಡ್ಡಿ ಖೈವೇಜು ವಸ್ಸಿಗೆ ಬರಆಾಡಿಕೊಳ್ಳುವರೆ ದಾಕ್ಲು ಮಾಡಿದ ಹೇಲ್ಕಂಡ ನ್ಯಾಜ್ಯ ಮತ್ತು 4-11-1955ಕ್ಕೆ ತಪ್ಪಿಗೆ ಇಪ್ಪರುವುದರಿಂದ ಆ ದಿನಸ ನೀವು ಹಗಲು ಘಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉದಪರಿನು ಎರೆ ತಪ್ಪಿದ್ದಲ್ಲಿ ನಿಮ್ಮನ್ನು ಎಕ್ಸಪಾರ್ಟಿಮಾ ಡಲಾಗುವದು ಎಂದು ಈ ಸೂಲ್ಕ ತಿಳಿಸೋಣಾಗಿಯದೆ

ಕಳ್ಳಿಗೆ ಮಹಾಬಲ ಭಂಡಾರಿ.
ಎಂ. ಎ. ಎಲ್. ಎಲ್. ಬಿ.
ವಾದಿಯಕಡೆ ಎಡ್ವೋಕೇಟ್.
ಕಾಸರಗೋಡು 12-10-55.

ಕುಮಾರಿ ಬಿಲ್ಲೆಗಳು (ಸರಕಾರಿ ರಜಿಸ್ಟರ್ಡ್)

ಹಡೆತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 3/- ಸ್ಪೆಷಲ್ ರೂ. 8/-

Mrs. P. DEVEE, F. Ds. (N. J.) (ವಿ.ಪಿ.ಪಿ. ಪ್ರತ್ಯೇಕ)
CALCUTTA—40 ಸ್ಯಾಕಿಸ್ಟರು: ಪ್ರಭಾಕರನೆಪ್ಪೆ, ಮಂಗಳೂರು

ರೋಗ ನಿರೋಧ ಚಟುವಟಿಕೆ

ಚಿಕಿತ್ಸೆಗಿಂತಲೂ ಇದರ ಮಹತ್ವ ಹೆಚ್ಚು

ಮದ್ರಾಸಿನಲ್ಲಿ ರಾಜ್ಯದ ಆರೋಗ್ಯಾಧಿಕಾರಿಗಳು ತಮ್ಮ ಕ್ಷೇತ್ರದ ಕಾರ್ಯಕಲಾಪಗಳ ಕುರಿತು ವಿಚಾರ ವಿನಿಮಯ ನಡೆಸಲು ಮತ್ತು ಸೇವೆಯ ಗುಣಮಟ್ಟವನ್ನು ಎತ್ತರಿಸುವ ಉಪಾಯ ಗಳನ್ನು ಕಂಡುಹಿಡಿಯಲು ಒಂದು ಸಮ್ಮೇಳ ನವನ್ನು ಉದ್ಘಾಟಿಸಿದರು. ಜರೆಯಿಗ ಎಚ್ಚತ್ತಿರಿ ವರೆಂದೂ ಸಾರ್ವಜನಿಕ ಆರೋಗ್ಯವೇ ಸುಂ ತಾವ ವಿಷಯಗಳಲ್ಲಿ ನೀಡಲಾದ ಒಳ್ಳೆಯ ಸ ಲಹೆಗಳನ್ನು ಸ್ವೀಕರಿಸಲು ಜನರು ಸಿದ್ಧರಿ ರುವುದು ವ್ಯಕ್ತವಾಗಿದೆಯೆಂದೂ ಈ ಮನೋ ಭಾವದ ಸಂಪೂರ್ಣ ಲಾಭವನ್ನು ಪಡೆಯಲು ಆರೋಗ್ಯಾಧಿಕಾರಿಗಳು ಪ್ರಯತ್ನಿಸಬೇಕೆಂದೂ ಶ್ರೀ ನಾದರು ಸೂಚಿಸಿದರು.

ಮಂತ್ರಿಗಳ ಅಭಿಪ್ರಾಯ

ಮಾನ್ಯ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರೂ ಸಭೆಯನ್ನು ಉದ್ದೇಶಿಸಿ ಸಿದ್ಧ ಕ್ಷೂರ್ಣ ಭಾಷಣವನ್ನು ಮಾಡಿದರು. ರೋಗ ಗಳಿಗೆ ಚಿಕಿತ್ಸೆ ನಡೆಸುವುದಕ್ಕಿಂತಲೂ ರೋಗ ಗಳು ಬಾರದಂತೆ ನಿರೋಧಕ ಕ್ರಮಗಳನ್ನು ಕೈಗೊಳ್ಳುವ ಅವಶ್ಯಕತೆಯನ್ನು ಮನಗಾಣ ಬೇಕೆಂದೂ ಅವರು ಈ ಸಂದರ್ಭದಲ್ಲಿ ಒತ್ತಿ ಹೇಳಿದರು. ಸಾಂಕ್ರಾಮಿಕ ರೋಗಗಳ ನಿಯಂ ತ್ರಣಕ್ಕೆಂತ ಜನರ ಸಾಮಾನ್ಯ ಆರೋಗ್ಯಾ ಭ್ಯಾಸಗಳನ್ನು ಸುಧಾರಿಸುವುದಕ್ಕೆ ಪ್ರಾಮುಖ್ಯ ತೆ ನೀಡಬೇಕು ಎಂದವರು ಸಲಹೆ ನೀಡಿದರು.

ಆರೋಗ್ಯ ವಿಷಯದಲ್ಲಿ ೧೯೪೮ನೇ ವರ್ಷ ಸ್ಥಾಪಿಸಲ್ಪಟ್ಟ ವಿಶ್ವ ಆರೋಗ್ಯ ಸಂಸ್ಥೆಯು ಹೊಸಯುಗದ ಆರಂಭವನ್ನು ಸೂಚಿಸಿತು. ಸಾರ್ವಜನಿಕ ಆರೋಗ್ಯದ ಪ್ರತಿಯೊಂದೂ ಅಂಗದ ಕುರಿತು ಈ ಸಂಸ್ಥೆಯು ನುರಿತ ತಾಂ ತ್ರಿಕ ಅನುಭವವನ್ನೂ ಸಲಹೆಯನ್ನೂ ಕೊ ಟ್ಟು, ಆರೋಗ್ಯ ಕ್ಷೇತ್ರದ ಮಟ್ಟವನ್ನು ಜಗ ತ್ತಿನಾದ್ಯಂತ ಎತ್ತರಿಸಲು ನೋಡುತ್ತಿದೆ— ಎಂದು ಶ್ರೀ ಶೆಟ್ಟಿಯವರು ತಿಳಿಸಿದರು.

ಹೊರಗಿನ ನೆರವು

ನೂತನ ತಾಂತ್ರಿಕ ವಿಧಾನಗಳ ಬಳಕೆ ಮತ್ತು ವಿಸ್ತೃತವಾದ ಹೊರದೇಶಗಳ ನೆರವು ಇವುಗಳ ದೆಸೆಯಿಂದ ಹಿಂದೆಲಿದ ರಾಷ್ಟ್ರಗಳಿ ಗೆ ಸಪ ಇನ್ನು ಕೆಲವೇ ವರ್ಷಗಳಲ್ಲಿ ಕತಮಾ ನಗಳಿಂದ ಸಾರ್ವಜನಿಕ ಆರೋಗ್ಯವನ್ನು ಕೆಡಿ ಸುತ್ತಾ ಕಾಡುತ್ತಿದ್ದ ಭಯಂಕರ ರೋಗಗಳ ನಿಯಂತ್ರಣ ಸೈಯಲು ಸಾಧ್ಯವಾದಿತೆಂದು ಮಂತ್ರಿಗಳು ಆಶಿಸಿದರು. ಮಲೇರಿಯ ನಿಯಂತ್ರಣ ಕಾರ್ಯಕ್ರಮ, ಬಿ. ಸಿ. ಜಿ. ಡಾಕಿನ ಚಳಿಗಳ, ವೈಂಗಿಕ ರೋಗಗಳ ವಿರು ದ್ಧ ವ್ಯಾಪಕವಾದ ಉಪಶಮನ ವ್ಯವಸ್ಥೆ ಇ ತ್ಯಾದಿಗಳನ್ನು ವಿಶ್ವ ಆರೋಗ್ಯ ಸಂಸ್ಥೆ, ಮ ಕ್ಕಳ ಕ್ಷೇಮಚಿಂತನ ಸಂಸ್ಥೆ ಮತ್ತಿತರ ಅಂತಾ ರಾಷ್ಟ್ರೀಯ ಸ್ವರೂಪದ ಸಂಘಗಳ ಸಹಾಯ ವನ್ನು ಔಷಧ ದ್ರವ್ಯ ಮತ್ತು ಸಲಕರಣೆಗಳ ಮತ್ತು ತಾಂತ್ರಿಕ ಸಲಹೆಯರೂಪದಲ್ಲಿ ಪಡೆ ದು ಮುಂದೊತ್ತಲಾಗುತ್ತಿದೆ ಎಂದು ಶ್ರೀ ಶೆ ಟ್ಟಿಯವರು ವಿದಿತ ಪಡಿಸಿದರು.

ಪಶ್ಚಿಮ ಯುರೋಪು, ಉತ್ತರ ಅಮೇರಿ ಕ ಮುಂತಾದ ಆರ್ಥಿಕಾಭಿವೃದ್ಧಿಯನ್ನು ಹೊಂ ದಿದ ಜಗತ್ತಿನ ಪ್ರದೇಶಗಳು ನೀರು, ಹಾಲು ಮತ್ತಿತರ ಆಹಾರ ಪ್ರವ್ಯಗಳು, ಕ್ರಿಮಿಕೀಟಗ ಳು ಇವುಗಳಿಂದ ಹರಡುವ ರೋಗಗಳ ನಿಯಂತ್ರಣ ಮತ್ತು ಉಚ್ಚಾಟನೆಯಲ್ಲಿ ಗಣ ನೀಯವಾದ ಪ್ರಗತಿಯನ್ನೂ ಯಶಸ್ಸನ್ನೂ ಸಂಪಾದಿಸಿವೆ ಎಂದು ಮಂತ್ರಿಗಳು ಹೇಳಿದ ರು. ಆದರೆ ಭಾರತದ ಸತ್ಯ ಚಿತ್ರವು ಬೇರೆ ಯೇ ಅನುಭವವನ್ನು ಕೊಡುತ್ತಿದೆ ಎಂದು ಅವರು ವ್ಯಸನಿಸಿದರು.

ಹಳ್ಳಿಯ ಆರೋಗ್ಯ

ನಾವೆಲ್ಲರೂ ಅನಾರೋಗ್ಯಕರವಾದ ಪರಿಸ್ಥಿ ತಿಗಳಲ್ಲಿ ವಾಸಿಸುವ ಮತ್ತು ಹೊಸಿಕಾಂಶ ಳುಳ್ಳ ಆಹಾರವನ್ನುಣ್ಣದ ಜನರಾಗಿದ್ದೇವೆ. ನಮ್ಮ ದೇಶದ ಆರೋಗ್ಯ ಸಮಸ್ಯೆಯ ಮೂಲ ಲಭೂತ ಅಂಶಗಳೆಂದರೆ ದಾರಿದ್ರ್ಯ ಮತ್ತು ಅಜ್ಞಾನ ೧೯೫೧ನೇ ವರ್ಷದ ಆದಿ ಭಾಗದಲ್ಲಿ ಮದ್ರಾಸಿನಲ್ಲಿ ಒಂದು ತಿಂಗಳವರೆಗೆ ಸಂದರ್ಶಿ ಸಿದ ಡಾ! ಕಾರ್ಲ್ ಇವಾಂಗ್ ಮತ್ತು ಡಾ. ಜಾನ್ ಗೋರ್ಡನ್ ಇವರು ಭಾರತದ ಆರೋಗ್ಯ ಸಮಸ್ಯೆಯ ಮೂಲ ಬೆಳಕನ್ನು ಚೆಲ್ಲಿದ್ದಾ ರೆಂದು ನೆನಪಿಗೆ ತಂದುಕೊಟ್ಟರು.

ಅವರಿಗನುಸಾರವಾಗಿ, ಗ್ರಾಮಗಳ ಆರೋ ಗ್ಯರಕ್ಷಣೆಯೇ ಭಾರತದ ಮೂಲಭೂತ ಸಮ ಸ್ಯೆಯಾಗಿದೆ. ಕೇವಲ ರೋಗ ಚಿಕಿತ್ಸೆಯ ಕ್ರ ಮಗಳನ್ನು ಕೈಗೊಂಡ ಮಾತ್ರದಿಂದ ಹಳ್ಳಿಯ ಆರೋಗ್ಯ ಸಮಸ್ಯೆಯನ್ನು ಪರಿಹರಿಸಬಹುದೆಂ ದು ಈ ವಿಶ್ವ ಪ್ರಸಿದ್ಧ ವೈದ್ಯರು ಭಾವಿಸುವು ದಿಲ್ಲ. ತಾವು ಸಂದರ್ಶಿಸಿದ ಗ್ರಾಮಗಳಲ್ಲಿ ಆ ಸ್ಪತ್ರೆಗಳಿಗಿಂತಲೂ ಸಾಯಿಪಾನೆಗಳ ಅನಿಷ್ಟ ಕತೆಯೇ ಹೆಚ್ಚಾಗಿದೆ ಎಂದು ಈ ವೈದ್ಯರ ಅ ಭಿಪ್ರಾಯ-ಎಂಬುದಾಗಿ ಶ್ರೀ ಶೆಟ್ಟಿಯವರು ನಿವೇದಿಸಿದರು.

ಕಾರ್ಯಕರ್ತರು ಬೇಕು

ಈ ಸಂದರ್ಭಕರು ಭಾರತದ ಆರೋಗ್ಯಾ ಧಿಕಾರಿಗಳು ಬಹಳ ಕಷ್ಟಕರವಾದ ಪರಿಸ್ಥಿ ಯಲ್ಲಿ ಕೆಲಸಮಾಡುತ್ತಿರುವುದನ್ನು ಕಂಡರು. ಕಾರ್ಯಕ್ಷೇತ್ರವು ಬಹಳ ವಿಶಾಲವಾಗಿದೆ! ಸಮಸ್ಯೆಗಳೂ ಜಟಿಲವಾಗಿವೆ. ಕೆಲಸಗಾರರು ಮಾತ್ರ ಕಡಿಮೆಯಾಗಿದ್ದಾರೆ; ಅವರಿಗೆ ಸಹಾ ಯಸಲ್ಲಿಸಲು ಬೇಕಾದಷ್ಟು ಹಣದ ಅನುಕೂ ಲತೆಯೂ ವೇಕದಲ್ಲಿಲ್ಲ. ಪೂರೈಸಿದ ಹಣದಲ್ಲಿ ಅತಿಸೊತ್ತಾಸಾಲು ಆರೋಗ್ಯಾಭಿವೃದ್ಧಿಯ ರೋಗಚಿಕಿತ್ಸೆಯ ವಿಭಾಗಕ್ಕೆಯೇ ಹೋಗುತ್ತ ದೆ; ಹೊರತು ರೋಗನಿರೋಧಕ ಚಟುವಟಿಕೆ ಗಳಿಗಲ್ಲ ಎಂದು ಮಂತ್ರಿಗಳು ನಿವೇದಿಸಿದರು.

ಗ್ರಾಮಗಳಲ್ಲಿ ನೆಲೆನಿಂತು ಸಾಮಾನ್ಯ ಸಿ ಬ್ಬಂದಿ ಮತ್ತು ಸಹಾಯಕ ಕಾರ್ಯಕರ್ತರ ನೆರವಿನಿಂದ ಗ್ರಾಮಗಳ ಬಹುಮುಖವಾದ ಆರೋಗ್ಯ ಸಮಸ್ಯೆಗಳನ್ನು ನಿವಾರಿಸಲು ಸಿದ್ಧ ರಾದ ಹೊಸಬಗೆಯ ವೈದ್ಯರನ್ನು ತರಬೇತಿ ಗೊಳಿಸಬೇಕಾಗಿದೆ ಎಂದು ಮಂತ್ರಿಗಳು ಅಭಿ ಪ್ರಾಯ ಪಟ್ಟರು. ರೋಗನಿರೋಧಕ ಚಟುವಟಿ ಟಿಕೆಗಳಿಗೆ ರೋಗ ಚಿಕಿತ್ಸೆಗಿಂತಲೂ ಹೆಚ್ಚಿನ ಪ್ರಾಮುಖ್ಯತೆಯನ್ನು ಇನ್ನು ಮುಂದೆ ಕೊಡಬೇ ಕು. ಸುತ್ತಿನ ವಾತಾವರಣ, ಆಹಾರಾಭ್ಯಾ ಸ ಮತ್ತು ಜನಸಂಖ್ಯೆಯ ನಿಯಂತ್ರಣ ಇವು ಗಳಿಗೆ ಬಹಳ ಹೆಚ್ಚಿನ ಪ್ರಾಶಕ್ತ್ಯವನ್ನು ಭವಿ ಷ್ಯದಲ್ಲಿ ನೀಡಬೇಕು ಎಂದವರು ಸೂಚಿಸಿ ದರು.

ಆಧುನಿಕ ವಿಚಾರ

ನಾವು ಇಸ್ಪರ ವರೆಗೆ ಆರೋಗ್ಯಕರವಾದ ವಾತಾವರಣವನ್ನು ನಿರ್ಮಿಸಿ ರೋಗಗಳು ಬಾರದಂತೆ ನೋಡಿಕೊಳ್ಳುವ ಕಡೆಗೆ ಆತ್ಯಲ್ಪ ಗಮನವನ್ನಿತ್ತಿದ್ದೇವೆ. ಇಷ್ಟೆತ್ತು ಜನರೆಲ್ಲರೂ ಹೆ ಚ್ಚು ಆಸ್ಪತ್ರೆಗಳಿಗೂ ವೈದ್ಯರಿಗೂ ಔಷಧಕ್ಕೂ ಬೇಡಿಕೆ ಮುಂದಿಡುತ್ತಿರುವರೇ ಹೊರತು ಸಾ ರ್ವಜನಿಕ ಆರೋಗ್ಯ ರಕ್ಷಣೆಯ ರೋಗನಿ ರೋಧ ಕಾರ್ಯಕ್ರಮದಲ್ಲಿ ಸಾಕಷ್ಟು ಆಸಕ್ತಿ ಯನ್ನು ಪ್ರದರ್ಶಿಸುತ್ತಿಲ್ಲ. ಜನರು ಈಗಲಾದ ರೂ ಉತ್ತಮ ಆರೋಗ್ಯವು ಆಸ್ಪತ್ರೆಗಳ ಮೇ ಲೆ, ವೈದ್ಯರ ಮೇಲೆಮತ್ತು ಔಷಧದ ಶೀಷೆಗಳ ಮೇಲೆ ಹೊಂದಿಕೊಂದಿಲ್ಲವೆಂಬ ಮನಗಾಣ ಲಿ! ಆರೋಗ್ಯವನ್ನು ಉತ್ತಮವಾಗಿಡುವ ಸಂ ಗತಿಗಳೆಂದರೆ ಕುಡಿಯಲಾದ ಮನೆ, ಪೋಷ ಕಾಂಶಗಳುಳ್ಳ ಸಮತೂಕದ ಆಹಾರ, ಉದ್ದ ಸೀರಿನ ಉಪಯೋಗ ಇವುಗಳೇ ಎಂದು ತಿಳಿ ಯಲಿ! ಎಂದು ಶ್ರೀ ಶೆಟ್ಟಿಯವರು ಹಾರೈಸಿ ದರು.

ಆಧುನಿಕ ವಿಚಾರ ಪ್ರಣಾಳಿಯು ರೋಗಿಗೆ ಚಿಕಿತ್ಸೆಯ ಸೌಲಭ್ಯಗಳೊದಗಿಸಿ ರೋಗನಿರೋಧ ಕ ಸೌಕರ್ಯಗಳನ್ನು ಒದಗಿಸುವುದರ ಕಡೆ ಹರಿದಿದೆ ಎನ್ನುತ್ತಾ ವೈದ್ಯಕೀಯ ವಿಶ್ವವಿದ್ಯಾ ಲಯಗಳಲ್ಲಿ ರೋಗ ನಿರೋಧ ಹಾಗು ಸಾ ಮಾಜಿಕ ಆರೋಗ್ಯ ರಕ್ಷಣಾ ವಿಭಾಗಗಳನ್ನು ತೆರೆಯುತ್ತಿರುವುದರ ಕಡೆಗೆ ಮಂತ್ರಿಗಳು ಗ ಮನವನ್ನು ಸೆಳೆದರು. ರೋಗಿಯು ಚಿಕಿತ್ಸೆಯ ಲ್ಲಿ ಆತನು ವಾಸಿಸುವ ವಾತಾವರಣವನ್ನು ಗಣನೆಗೆ ತೆಗೆದುಕೊಳ್ಳಲು ಈಗ ನೋಡಲಾ ಗುತ್ತಿದೆ ಎಂದರು. ಆರೋಗ್ಯ ಕ್ಷೇತ್ರದಲ್ಲಿ ಇನ್ನು ಮುಂದೆ ವೆಚ್ಚವಾಗುವ ಹಣವನ್ನು ರೋಗನಿರೋಧ ಕಾರ್ಯಕ್ರಮಗಳಿಗೆ ಮೀಸ ಲಾಗಿಡುವುದು ಅಪೇಕ್ಷಣೀಯವೆಂದು ಅವರು ಸಾರಿದರು.

ಪಟ್ಟಣಗಳಿಗೂ ಹಳ್ಳಿಗಳಿಗೂ ಲುದ್ದವಾದ ನೀರಿನ ಸೂಕ್ತಿಕೆಗಾಗಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಸಹಾಯಧನ ಕೊಡುತ್ತಿರುವುದ ನ್ನು ಸ್ವಾಗತಿಸಿ ದ್ವಿತೀಯ ಯೋಜನೆಯಲ್ಲಿ ಭವಿಷ್ಯದ ಕುರಿತು ಇನ್ನಷ್ಟು ಸಂತೋಷಕೊ ಡುವ ವಿಷಯಗಳಿವೆ ಎಂದು ಮಂತ್ರಿಗಳು ಹೇಳಿದರು. ಸಾಮುದಾಯಿಕ ಅಭಿವೃದ್ಧಿ ಬಲ ಯಗಳಲ್ಲಿಯೂ ರಾಷ್ಟ್ರೀಯ ವಿಸ್ತರಣಾ ಸೇ ವೆಯ ಕ್ಷೇತ್ರಗಳಲ್ಲಿಯೂ ವೈದ್ಯಕೀಯ ಹಾ ಗು ಆರೋಗ್ಯ ವಿಭಾಗಗಳಲ್ಲಿ ಸಮನ್ವಯ ಸಾ ಧಿಸಲು ನೋಡಿರುವುದಕ್ಕೆ ಮೆಚ್ಚಿಕೆಯನ್ನು ಅ ವರು ವ್ಯಕ್ತಪಡಿಸಿದರು ಆಯಾ ಕ್ಷೇತ್ರದ ವಿ ಶಿಷ್ಟ ಸಮಸ್ಯೆಗಳ ಪರಿಹಾರಕ್ಕೆ ನೆರವಾಗ ಬಲ್ಲ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದರ ಮಹತ್ವವನ್ನು ಅವರು ಬಿಂದಿಸಿದರು.

ಉತ್ತಮ ಆಹಾರ ಅಭ್ಯಾಸ

ದೇಶದ ಪೋಷಣೆಗೂ ಆರೋಗ್ಯ ರಕ್ಷಣೆ ಗೂ ಅತ್ಯಾವಶ್ಯಕವಾದ ಜೀವ ಸತ್ವಗಳಿಂ ದ ಕೂಡಿದ ಆಹಾರವನ್ನು ಉಪಯೋಗಿಸು ವಂತೆ ಜನರಲ್ಲಿ ಮನವೊಲಿಸುವ ಮತ್ತು ಅವರಿ ಗೆ ನೆರವಾಗುವ ಆತ್ಯವಶ್ಯವನ್ನು ಮಂತ್ರಿಗಳು ತಿ ಳಿಸಿ ಹೇಳಿದರು. ಮುಖ್ಯವಾಗಿ ಬಳ್ಳಿಗಳಿಗೆ ಸಾ ರಜನಕವೇ ಮುಂತಾದ ಆತ್ಯಮೂಲ್ಯ ಆಹಾ ರಾಂಶಗಳ ಆಭಾವವಿರದಂತೆ ನೋಡಿಕೊಳ್ಳ ಬೇಕು ಎಂದರು. ಆರೋಗ್ಯಾಧಿಕಾರಿಗಳು ಜ ನರ ದೈನಂದಿನ ಆಹಾರಕ್ರಮದಲ್ಲಿ ಯಾವ ಬದಲಾವಣೆಗಳು ಸ್ವಾಗತಾರ್ಹವೆಂಬುದನ್ನು ಅವರ ಆರ್ಥಿಕಶಕ್ತಿಗೆ ಹೊಂದಿಕೊಳ್ಳುವಂತೆ ಸೂಚಿಸಬೇಕು ಎಂದವರು ನಿನಂತಿಸಿದರು. ಉದಾಹರಣೆಗೆ ಗಿರಿಜೆಯಲ್ಲಿ ತಯಾರಿಸಿದ ಆ ಕ್ಸಿಯ ಬದಲು ಕೈಯಲ್ಲಿ ಕುಟ್ಟಿ ಸಿದ್ಧಗೊಳಿ ಸಿದ ಅಕ್ಕಿಯ ಉಪಯೋಗದ ಪ್ರಯೋಜನವ ನ್ನು ಅವರು ತಿಳಿಸಬಹುದು ಎಂದರು.

ಆರೋಗ್ಯದ ಮಟ್ಟವನ್ನು ಎತ್ತರಿಸುವಲ್ಲಿ ಶಿಕ್ಷಣದ ಪಾತ್ರವನ್ನು ಪ್ರಸ್ತಾಪಿಸುತ್ತಾ ಮಾ ನ್ಯಮಂತ್ರಿಗಳು ಪ್ರತ್ಯಕ್ಷವಾಗಿ ಮನಗಾಣಿಸಿ ಕೊಡುವ ಜ್ಞಾಪಕಗಳೇ ಉತ್ತಮ ಶಿಕ್ಷಣವನ್ನು ನೀಡಂತ್ತವೆ ಎಂದರು. ಪುಸ್ತಕಗಳಿಗೆ ಕೊಡುವ ಶಿಕ್ಷಣದಲ್ಲಿ ಮನೆಯ ವಾತಾವರಣ ಪುಸ್ತ ಅವರ ಕಷ್ಟಗಳ ಬೇರುವ ಕ್ರಮಗಳ ಪ್ರಭಾವ ವೇ ಹೆಚ್ಚೆಂದು ಹೇಳುತ್ತಾ ತಮ್ಮ ಹೆತ್ತವರು ಅಳವಡಿಸಿಕೊಂಡಿರುವ ಆರೋಗ್ಯ ಪುಸ್ತ ಆಹಾರಾಭ್ಯಾಸಗಳನ್ನು ಮನೆ ಮತ್ತು ಶಾಲೆ ಗಳಲ್ಲಿ ಬಂಧುಗಳು, ಶಿಕ್ಷಕರು, ಸಪೆಪಾಠಿಗ ಳು ಅನುಸರಿಸುವ ರೀತಿಗಳನ್ನೂ ಸಾಮಾನ್ಯ ವಾಗಿ ಮಕ್ಕಳು ಅನುಕರಿಸುತ್ತಾರೆ; ಆದುದರಿಂ ದ ನುಕ್ಕಳಿ ಮುಂದೆ ಒಳ್ಳೆಯ ಆದರ್ಶವ ನ್ನು ಹಾಕಿಕೊಡುವಂತೆ ದೊಡ್ಡವರೂ ಇತರ ರೂ ನಡೆದುಕೊಳ್ಳಬೇಕು ಎಂದರು. ರೋಗ ನಿವಾರಣೆ ಚಟುವಟಿಕೆಗಳಿಂದ ಆಶ್ಚರ್ಯಗೊ ಳ್ಳುವ ನನ್ನು ಇಂದಿನ ಸಮಸ್ಯೋಭಾವದ ಸ್ಥಾ ನದಲ್ಲಿ ರೋಗನಿರೋಧ ಕಾರ್ಯಕ್ರಮಗಳ ಕಡೆಗೆ ಆಸಕ್ತಿ ಪ್ರದರ್ಶಿಸುವ ಪ್ರವೃತ್ತಿಯು ಹುಟ್ಟಿಕೊಳ್ಳಬೇಕು ಎಂದವರು ಕೊನೆಯಲ್ಲಿ ಅಪೇಕ್ಷಿಸಿದರು.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:— (1) ಉಡುಪಿ (2) ಮರಾತ ಗಲ್ಲಿ, ಹುಬ್ಬಳ್ಳಿ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ರೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ ೩½%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸನಿಹದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದು ವರೆಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿ ಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.	
24 ತಿಂಗಳಿಗೆ	4%
12 ,,	3½%
6 ,,	3½%
3 ,,	3%
ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಟ್ ಎಕೌಂಟು	½%

THE MOOLKY BANK LTD., MULKI.



ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಮಾಧ್ಯಮ

ಇಂಗ್ಲೀಷನ್ನೆ ಉಳಿಸಿಕೊಳ್ಳುವ ಅವಶ್ಯಕತೆ

ಮೈಸೂರು ರಾಜ್ಯದಲ್ಲಿ ಇದೇ ಆದಿತ್ಯ ವಾರದಿಂದ (ದಿನಾಂಕ ೧೬) ಒಂದು ಸಪ್ತಾಹವು ಆಚರಿಸಲ್ಪಡುತ್ತಿದೆ "ಕನ್ನಡವನ್ನು ಮೈಸೂರಿನ ಸರಕಾರ ತನ್ನ ಒಳಾಡಳಿತ ವ್ಯವಹಾರಕ್ಕೆ ಮಾಧ್ಯಮವಾಗಿ ಕೂಡಲೇ ಬಳಸಬೇಕು" ಎಂದು ಒತ್ತಾಯಿಸುವುದೇ ಈ ಚಳವಳದ ಮುಖ್ಯೋದ್ದೇಶ

ಪ್ರಾದೇಶಿಕ ಭಾಷೆಯನ್ನು ಕೇವಲ ಒಳಾಡಳಿತಕ್ಕಾಗಿ ಒಳಸಬೇಕೆಂದಷ್ಟೇ ಚಳವಳನಡೆಯುತ್ತಿರದೆ, ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಣದ ಮಾಧ್ಯಮವಾಗಿ ಅದನ್ನು ಉಸಯೋಗಿಸಬೇಕೆಂದು ಸಹ ಕೇಳಿಕೊಳ್ಳಲಾಗುತ್ತದೆ ಮೈಸೂರಿನ ವಿಶ್ವವಿದ್ಯಾಲಯವು ಈಗಾಗಲೇ ಈ ದಿಸೆಯಲ್ಲಿ ಪ್ರಾರಂಭದ ಹೆಜ್ಜೆಯನ್ನಿಟ್ಟು "ಇಂಟರ್ ಮೀಡಿಯೇಟ್" ವರೆಗಿನ ಶಿಕ್ಷಣಕ್ಕೆ ಕನ್ನಡವನ್ನು ಉಪಯೋಗಿಸಲು ತೀರ್ಮಾನಿಸಿದೆಯೆಂದು ಕೇಳುತ್ತೇವೆ

ವಿರೋಧಕರ ವಾದ

ಆದರೆ ವಿಶ್ವವಿದ್ಯಾಲಯದ ವಟ್ಟದಲ್ಲಿ ಪ್ರಾದೇಶಿಕ ಭಾಷೆಯನ್ನು, ನೂತಿಗೆ ಬೇಕಾದರೆ ಇಂಗ್ಲೀಷೇ ತರಭಾಷೆಯೊಂದನ್ನು, ಬಳಸುವ ಕುರಿತು ಒಮ್ಮತವಿರುವಂತೆ ಕಾಣುವುದಿಲ್ಲ ಡಾ. ಕೆ. ಎಸ್, ರಂಗಪ್ಪ ಎಂಬ ಮಹಶೀಯರೊಬ್ಬರು 'ಹಿಂದು' ಪತ್ರಿಕೆಗೆ ಇದೀಗೆರ್ಲೆ ಲೇಖನವೊಂದನ್ನು ಈಜೆಗೆ ಒರೆದು, ವೈಜ್ಞಾನಿಕ ಅಧ್ಯಯನಕ್ಕೆ ಇಂಗ್ಲೀಷನ್ನೆ ಅವಲಂಬಿಸುವುದರಿಂದ ಬಹಳ ಹೆಚ್ಚಿನ ಪ್ರಯೋಜನವಿದೆ ಎಂದು ಬಲವಾಗಿ ಪ್ರತಿಪಾದಿಸಿದ್ದಾರೆ. ಅವರ ವಿಚಾರಗಳು ಸಂಪೂರ್ಣ ತರ್ಕಬದ್ಧವಾಗಿವೆ ಎಂದೇನಿಸ್ಸ, ಆದರೆ ಗಮನಿಸಬೇಕಾದ ಹಲವು ವಿಷಯಗಳಿಂದ ಈ ಲೇಖನ ಕೂಡಿರುವುದೇನು ಸುಳ್ಳಲ್ಲ.

ಡಾ. ರಂಗಪ್ಪನವರು ಹಿಂದಿ ಅಥವಾ ಪ್ರಾದೇಶಿಕ ಭಾಷೆಗಳನ್ನು ಶಿಕ್ಷಣ ಮಾಧ್ಯಮವಾಗಿ ಬಳಸುವವರು ಕಲಾವಿಭಾಗದವಿದ್ಯಾರ್ಥಿಗಳೆಂದೂ ಇಂಗ್ಲೀಷಿನ ಬಳಕೆಯನ್ನು ಮುಂದರಿಸಲು ಒತ್ತಾಯಿಸುವವರು ವೈಜ್ಞಾನಿಕ ವಿಭಾಗದವರೆಂದೂ ಹೇಳುತ್ತಾರೆ ಪ್ರಾದೇಶಿಕ ಅಥವಾ ಹಿಂದಿ ಭಾಷೆಯನ್ನು ವೈಜ್ಞಾನಿಕ ವಿಭಾಗದಲ್ಲಿ ಸಶಕ್ತೀಕರಣ ಮಾಧ್ಯಮವಾಗಿ ಬಳಸಬೇಕೆನ್ನುವವರಿಗೆ ಈ ವಿಭಾಗದ ಆವಶ್ಯಕತೆಯ ಜ್ಞಾನ ಸ್ಪಷ್ಟವಾಗಿಲ್ಲ ಎಂದು ರಂಗಪ್ಪನವರ ಅಭಿಪ್ರಾಯ. ದರ್ಶನ ಶಾಸ್ತ್ರ, ತರ್ಕ ಶಾಸ್ತ್ರ, ಜ್ಯೋತಿಷ ಶಾಸ್ತ್ರ ಇತ್ಯಾದಿಗಳನ್ನು ಸಂಸ್ಕೃತದಲ್ಲಿ ಅಥವಾ ಸಂಸ್ಕೃತಜನ್ಯವಾದ ದೇಶಿಕ ಭಾಷೆಗಳಲ್ಲಿ ಅಧ್ಯಯನ ಮಾಡಬಹುದು, ಸಂಶೋಧನೆಗೂ ಮುಂದಾಗಬಹುದು ಎಂಬ ಕಾರಣದಿಂದ ಅಣುಭೌತ ಶಾಸ್ತ್ರ ಆಧುನಿಕ ರೋಗ ನಿದಾನ ಶಾಸ್ತ್ರ, ವಿದ್ಯುದ್ರಸಾಯನ ಶಾಸ್ತ್ರ ಇತ್ಯಾದಿ ವಿಭಾಗಗಳಲ್ಲಿ ಕೆಲಸ ನಡಸಬಹುದೆಂದೂ ಜರ್ಜಿ ಮತ್ತು ಸಂಶೋಧನೆಗಳಿಗೆ ದೇಶೀಯ ಭಾಷೆಯ ಮಾಧ್ಯಮವನ್ನು ಉಸಯೋಗಿಸಬಹುದೆಂದೂ ಹೇಳುವುದರಲ್ಲಿ ಅರ್ಥವಿಲ್ಲ ಎಂದು ರಂಗಪ್ಪನವರ ವಾದ.

ಶಬ್ದ ಸಂಪತ್ತಿಲ್ಲ

ವೈಜ್ಞಾನಿಕ ವಿಭಾಗಗಳ ಸೂಕ್ಷ್ಮಾತಿಸೂಕ್ಷ್ಮ ಬೆಳವಣಿಗೆ ಜಟಿಲತೆ ಮತ್ತು ವಿಶಾಲತೆಗಳ ತಿಳಿವಳಿಕೆಯುಳ್ಳವರು ಮತ್ತು ವಿಜ್ಞಾನವು ಹೊಂದುತ್ತಿರುವ ತೀವ್ರ ಪ್ರಗತಿಯನ್ನು ಗಮನಿಸಿದವರು ಪ್ರಾದೇಶಿಕ ಅಥವಾ ಹಿಂದಿ ಭಾಷೆಯು ಮಾಧ್ಯಮವನ್ನು ಬಳಸುವ ತಪ್ಪು ಹೆಜ್ಜೆಯನ್ನಿಡುವಂತಿಲ್ಲ ಎಂದು ರಂಗಪ್ಪನವರು ಹೇಳುತ್ತಾರೆ ದಿನದಿನಕ್ಕೂ ಹೆಚ್ಚುತ್ತಿರುವ ಜನಸಂಖ್ಯೆ ಪ್ರಮಾಣವನ್ನು ಲಕ್ಷ್ಯಿಸಿ, ಎಲ್ಲರ ಜೀವನ ಮಟ್ಟವನ್ನು ಎತ್ತರಿಸಲು ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿ ಅವಶ್ಯವೆನ್ನುವವರು ಭಾರತೀಯ ವೈಜ್ಞಾನಿಕ ಕ್ಷೇತ್ರದ ಅಭಿವೃದ್ಧಿಯ ಗಂಟೆಯನ್ನು ಕೆಲವು ಹೀಗೆಯ ವರೆಗೆ ಹಿಂದೂಡಲು ಒಪ್ಪುವುದು ಕಷ್ಟ ಎಂದವರ ಅಲುಮೆಯಾಗಿದೆ

ಭಾರತದಲ್ಲಿ ೧೭೯ ಭಾಷೆಗಳವೆಯೆಂದೂ ಅವುಗಳಲ್ಲಿ ೧೫ ಪ್ರಬುದ್ಧ ಭಾಷೆಗಳೆಂದೂ ತಿಳಿದು ಬರುತ್ತದೆ ಇವೆಲ್ಲದ ಕ್ಕೂ ಪುರಾತನ ಇತಿಹಾಸವಿದೆಯಾದರೂ ಅಧುನಿಕ ವಿಜ್ಞಾನವು ಈ ಭಾಷೆಗಳ ವ್ಯಾಪ್ತಿ ಮತ್ತು ಪರಿಮಿತಿಯನ್ನು ಮೀರಿ ಬೆಳೆದಿದೆ ಎಂಬುದನ್ನು ಮರೆಯಬಾರದಾಗಿ ರಂಗಪ್ಪನವರ ಅಭಿಪ್ರಾಯ. ವೈಜ್ಞಾನಿಕ ನುತ್ತು ತಾಂತ್ರಿಕ ಅಭಿವೃದ್ಧಿ ಕ್ರಮಗಳಿಗೆ ಸಂಬಂಧಿಸಿದ ವಿಷಯಗಳನ್ನು ದೇಶ ಭಾಷೆಯಲ್ಲಿ ವಿವರಿಸಲು ಶಬ್ದಗಳು ದೊರೆಯುವುದಿಲ್ಲ, ನಾವು ಹೊಸತಾಗಿ ಶಬ್ದಗಳನ್ನು ಎರಕ ಹೊಯ್ದರೂ ಹೊಸ ಪರಿಭಾಷೆಯು ಇಂಗ್ಲೀಷಿನಷ್ಟೇ ಪರಕೀಯ ವೆನಿಸುತ್ತದೆ ಎಂದು ಇವರ ವಾದ.

ಅನುವಾದದಿಂದ ಕೆಲಸವಾಗದು

ವೈಜ್ಞಾನಿಕ ವಿಷಯಗಳನ್ನು ದೇಶ ಭಾಷೆಗಳಲ್ಲಿ ಕಲಿಯುವ ಕಷ್ಟವ ನಿವಾರಣೆಗೆ ಅನುವಾದದ ಸರಳ ಮಾರ್ಗವನ್ನು ಹಿಡಿಯಬಹುದೆಂದು ಹೇಳಲಾಗುತ್ತದೆ. ಆದರೆ ಇದು ವ್ಯವಹಾರ್ಯವಾದ ಕ್ರಮವಲ್ಲ. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ೩೦ ವರ್ಷಗಳ ಪರಿಶ್ರಮದ ಬಳಿಕ ೪೦೦ ಪುಸ್ತಕಗಳನ್ನು ಮಾತ್ರ ಅನುವಾದಿಸಲಾಯಿತು. ಈ ಪುಸ್ತಕದಲ್ಲಿ ೬೪೦೦೦ ಹೊಸ ಶಬ್ದಗಳನ್ನು ಎರಕ ಹೊಯ್ದು ತುಂಬಿಸಲಾಯಿತು. ಈ ಹೊಸಶಬ್ದಗಳು ಚೀನೀ ಭಾಷೆಯಷ್ಟೇ ಭಾರತೀಯರಿಗೆ ಅಪರಿಚಿತವಾಗಿದ್ದವು, ನಿತ್ಯಭಾಷೆಯಲ್ಲಿ ಇವು ಇಳಿಯದೆ ಪರೀಕ್ಷೆಗಾಗಿ ಕಲಿಯುವ ಹೊಸ ಭಾಷೆಯಾಗಿ ಈ ವಿಶಾಲವಾದ ಶಬ್ದ ಸಮುದಾಯ ಪರಿಣಮಿಸಿತು. ಇಷ್ಟಲ್ಲದೆಉರ್ದುವಿನಲ್ಲಿ ೪೦೦ ಪುಸ್ತಕಗಳಷ್ಟೇ ತಯಾರಾದ ಈ ಅವಧಿಯಲ್ಲಿ ೪೦೦೦೦ ಹೊಸಸಂಪುಟಗಳೂ ಅಸಂಖ್ಯಾತ ಲೇಖನಾದಿಗಳೂ ವೈಜ್ಞಾನಿಕ ವಿಷಯಗಳ ಪ್ರಗತಿಯ ಕುರಿತು ಪ್ರಕಟವಾಗಿದ್ದವು. ಇಷ್ಟು ವಿಶಾಲವಾದ ಸಾಹಿತ್ಯ ರಾಶಿಯು ಪ್ರಯೋಜನವನ್ನು ಪಡೆಯಲು ಉರ್ದುವಿನಲ್ಲಿ ಕಲಿಕವನಿಗೆ ಸಾಧ್ಯವಿರಲಿಲ್ಲ— ಎಂದು ರಂಗಪ್ಪನವರು ತಮ್ಮ ಪಕ್ಷವನ್ನು ಮಂಡಿಸಿದ್ದಾರೆ.

ದೇಶಭಾಷೆಗಳಲ್ಲಿ ಸಾಮಾನ್ಯವಾಗಿ ಉಪಯೋಗನಲ್ಲಿರುವ ಶಬ್ದಗಳನ್ನು ಬಳಸಿಕೊಂಡು ಉಳಿದವುಗಳ ವಟ್ಟಿಗೆ ಅಂತಾರಾಷ್ಟ್ರೀಯ ಸ್ವರೂಪದ ಶಬ್ದಗಳನ್ನೆ ಉಪಯೋಗಿಸಬಹುದೆಂದು ಕೆಲವರ ಅಭಿಪ್ರಾಯವಿದೆ. ಇದರಿಂದ ಹೊಸಶಬ್ದಗಳನ್ನು ಸೃಷ್ಟಿಸುವ ಕೆಲಸವೇನೋ ತಪ್ಪುತ್ತದೆ ಆದರೆ ಉಳಿದ ಕಷ್ಟಗಳು ನೀಗುವುದಿಲ್ಲ. ಉದಾಹರಣೆಗೆ ಒಂದು ವಿಶ್ವವಿದ್ಯಾಲಯದಲ್ಲಿ ಕಲಿತವನು ಇನ್ನೊಂದು ವಿಶ್ವವಿದ್ಯಾಲಯದಲ್ಲಿ ತನ್ನ ಅಧ್ಯಯನವನ್ನು ಮುಂದರಿಸಿಕೊಂಡು ಹೋಗಲಾರನು. ಹಿಂದಿಯನ್ನು ಎಲ್ಲ ಭಾರತೀಯ ವಿಶ್ವವಿದ್ಯಾಲಯಗಳಲ್ಲಿ ಬಳಸುವುದರಿಂದ ಈ ತೊಂದರೆಯೂ ತಪ್ಪಬಹುದೆಂದು ಹೇಳಲಾಗುತ್ತದೆ. ಇದೂ ಸರಿಯಲ್ಲ —ಉಚ್ಚ ಶ್ರೇಣಿಯ ವೈಜ್ಞಾನಿಕ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿ ಬಯಸುವ ವಿದ್ಯಾರ್ಥಿಯು ಹೆಲವಾರು ಆತ್ಯಾಧುನಿಕ ಪುಸ್ತಕಗಳನ್ನೂ ಪತ್ರಿಕೆ ಮತ್ತಿತರ ಒಗೆಯ ಪ್ರಕಟಣೆಗಳನ್ನೂ ಅವಲಂಬಿಸ ವ ಅವಶ್ಯಕತೆ ಬೀಳುತ್ತದೆ ಹಿಂದಿಯಲ್ಲಿ ಇದಕ್ಕೆಲ್ಲ ಅವಕಾಶ ಎದೆಯೆ?

ಇಂಗ್ಲೀಷಿನ ಅಶ್ರಯ

ಇಂಗ್ಲೀಷೊಂದೇ ಈ ಎಲ್ಲ ಆವಶ್ಯಕತೆಗಳನ್ನು ಸುಗಮವಾಗಿ ಪೂರೈಸ ಬಲ್ಲ ಭಾಷೆಯಾಗಿದೆ. ಜಗತ್ತಿನ ಸುಶಿಕ್ಷಿತರಲ್ಲಿ ಅತಿ ಹೆಚ್ಚು ಪ್ರಸಾರವಿರುವ ಭಾಷೆ ಇದಾಗಿದೆ, ಹೀಗಾಗಿ ಅದನ್ನು ಅವಲಂಬಿಸುವುದರಿಂದ ನಮ್ಮ ಎಲ್ಲ ತೊಂದರೆಗಳೂ ಸಾಮಾನ್ಯವಾಗಿ ತಪ್ಪುತ್ತವೆ. ಆ ಭಾಷೆಯಲ್ಲಿ ಜಗತ್ಪ್ರಸಿದ್ಧವಾದ ನೂರಾರು ಪುಸ್ತಕಾಲಯಗಳು ವೈಜ್ಞಾನಿಕ ಕ್ಷೇತ್ರದಲ್ಲಿನ ಬೆಳವಣಿಗೆಯ ಕುರಿತು ತೀರ ಇತ್ತೀಚೆಯ ಮಾಹಿತಿಯನ್ನೊದಗಿಸಿ ಕೊಡುವ ಪುಸ್ತಕಗಳನ್ನು ಪ್ರಕಟಿಸುತ್ತವೆ; ಬೇರೆ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳನ್ನು ಸಹ ಇವು ಅತಿ ಸುಲಭದಲ್ಲಿ ಒದಗಿಸಿ ಕೊಡುತ್ತವೆ. ಲೇಖನಗಳೂ ಇದಕ್ಕೆ ಅಪವಾದವಲ್ಲ ಇಂಗ್ಲೀಷಿನಲ್ಲಿ ಟೈಪ್ ರೈಟಿಂಗ್, ಪ್ರಿಂಟಿಂಗ್ ಇತ್ಯಾದಿಗಳು ಈಗಾಗಲೇ ಪರಿಪೂರ್ಣವಾಸ್ಥೆಯನ್ನು ಮುಟ್ಟಿರುತ್ತವೆ, ಹಿಂದಿ ಅಥವಾ ದೇಶ ಭಾಷೆಗಳಲ್ಲಿ ಇವುಗಳ್ಯೋಗಿಕಾವಸ್ಥೆಯನ್ನು ಇನ್ನೂ ದಾಟಿಲ್ಲ

ಬೇರೆ ದೇಶಗಳು ಇಂಗ್ಲೀಷಿನ ಸಹಾಯವಿಲ್ಲದೆ ವೈಜ್ಞಾನಿಕ ವಿಷಯಗಳನ್ನು ಕಲಿಯುತ್ತಿಲ್ಲವೆ ಎಂದು ಕೇಳಲಾಗುತ್ತದೆ ಇದರಲ್ಲಿ ತಥ್ಯಾಂಶವಿಲ್ಲ—ಉದಾಹರಣೆಗೆ, ಫ್ರಾನ್ಸಿನಲ್ಲಿ ಪ್ರತಿಯೊಂದೂ ಪ್ರೌಢ ಮಾಧ್ಯಮಿಕ ಶಾಲೆಯಲ್ಲಿ ಇಂಗ್ಲೀಷನ್ನು ಕಡ್ಡಾಯವಾಗಿಯಲ್ಲವಾದರೂ ಗಾನೇ ವರ್ಷದಿಂದ ಕಲಿಯುವ ಅವಕಾಶವಿದೆ, ಜಪಾನಿನಲ್ಲಿ ಪ್ರೌಢ ಮಾಧ್ಯಮಿಕ ಶಾಲೆಗಳಲ್ಲಿ ಇಂಗ್ಲೀಷು ಕಡ್ಡಾಯವಾಗಿದೆ, ವಿಶ್ವವಿದ್ಯಾಲಯ ಮಟ್ಟದಲ್ಲಿ ಐಚ್ಛಿಕವಾಗಿದೆ; ಪಶ್ಚಿಮ ಜರ್ಮನಿಯಲ್ಲಿ ಇಂಗ್ಲೀಷು ಕಲಿಸಲ್ಪಡುತ್ತದೆ,ಇಜಿಪ್ತಿನಲ್ಲಿ ಇಂಗ್ಲೀಷನ್ನೂ ಫ್ರೆಂಚನ್ನೂ ಕಡ್ಡಾಯವಾಗಿ ಕಲಿಸಲಾಗುತ್ತದೆ, ರಶ್ಯದಲ್ಲಿ ಸಹ ಕಡ್ಡಾಯವಾಗಿ ಮಾಧ್ಯಮಿಕ ಹಾಗು ಪ್ರೌಢ ಮಾಧ್ಯಮಿಕ ಶಾಲೆಗಳಲ್ಲಿ ಕಲಿಸುವ ಭಾಷೆಗಳಲ್ಲಿ ಇಂಗ್ಲೀಷು ಒಂದು. ಆದುದರಿಂದ ನಮ್ಮಲ್ಲಿ ಇಂಗ್ಲೀಷನ್ನು ಬಳಸಿದರೆ ತಪ್ಪೇನೂ ಆಗುವುದಿಲ್ಲ ಇಂಗ್ಲೀಷು ಇತಿಹಾಸದ ದೃಷ್ಟಿಯಿಂದಾಗಿ ಈಗಾಗಲೇ ಭಾರತದ ಪಾಲಿಗೆ ಬಂದಿದೆ; ಅದನ್ನು ದೂರೀಕರಿಸುವುದು ಅಗತ್ಯವಿಲ್ಲ. ಪ್ರೌಢ ಮಾಧ್ಯಮಿಕ ಶಿಕ್ಷಣದ ವರೆಗೆ ಇಂಗ್ಲೀಷನ್ನು ದ್ವಿತೀಯ ಭಾಷೆಯಾಗಿಟ್ಟು ವೈಜ್ಞಾನಿಕ ವಿಷಯಗಳಲ್ಲಿ ಇಂಗ್ಲೀಷಿನ ಪಾರಿಭಾಷಿಕ ಶಬ್ದಗಳನ್ನೆ ಉಪಯೋಗಿಸುತ್ತಿದ್ದರೆ, ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷಿನಲ್ಲಿ ಅಭ್ಯಾಸ ಮುಂದರಿಸಲು ಯಾವ ಕಷ್ಟವೂ ಆಗಲಾರದು. ಎಂದು ಡಾ. ರಂಗಪ್ಪನವರ ವಿಶ್ವಾಸ.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ॥ ಶ್ರೀ. ಕೊಡಪ್ಪಳ್ ಶ್ರೀನಿವಾಸರಾಯರಿಂದ ವಿರಚಿತವಾದ—



[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ಕರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ.
ಬೆಲೆ:- ಸಾಧಾರಣ ಪ್ರತಿ- ರೂ. ೧-೪-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಮುಖ್ಯ ಸ್ಥಳ
ನವಭಾರತ ಪುಸ್ತಕ ಭಂಡಾರ, ಉಡುಪಿ

ಮಕ್ಕಳ ಮಗ್ಗಿ ಪುಸ್ತಕ
ಬೆಲೆ ೦—೧—೦
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ನವಯುಗ ಪ್ರೆಸ್, ಉಡುಪಿ.

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಪುಂಟೆ ೩೫
VOL. 35

ಉಡುಪಿ, 27—10—1955

ಸಂಚಿಕೆ ೯
NO. 9

ಬದಲಾವಣೆಯ ಬೆಲೆ

ಇತ್ತೀಚೆಯ ವರ್ಷಗಳಲ್ಲಿ ಬದಲಾದ ನೆಯ ಗತಿಯು ಬಹಿಳ ವೇಗವಾಗಿರುವು ದರಿಂದ ಮತ್ತು ಪರಿಣಾಮಕಾರಿಯಾ ಗಿರುವುದರಿಂದ ರಾಜ್ಯಗಳ ಪುನರ್ಘಟನೆ ಯ ಆರ್ಥಿಕ ಹಾಗು ಆಡಳಿತಾತ್ಮಕ ಪರಿ ಣಾಮಗಳು ಗಂಭೀರವಾಗಲಿಕ್ಕಿಲ್ಲವೆಂದು ಭಾವಿಸುವವರು ಕೆಲವರಿದ್ದಾರೆ ಆದರೆ, ಪಜಲ ಅಲಿ ಆಯೋಗದ ಅಭಿಪ್ರಾಯ ದಲ್ಲಿ ಇದು ತೀರ ಅನಾಪ್ತವಾದ ದೃಷ್ಟಿ ಕೋಣವಾಗಿದೆ. ಹಳೆಯ ಬಂಧನಗಳ ನ್ನು ಕಡಿದೊಗೆಯುವ ಮತ್ತು ಹೊಸ ಸಂಬಂಧಗಳೊಡನೆ ಸ್ನೇಹ ಬೆಳೆಸಬೇ ಕಾಗಿ ಬರುವ ರೀತಿಯ ಪರಿವರ್ತನೆಯು ಆಡಳಿತ ಯಂತ್ರದ ಮೇಲೂ ಜನ ಜೀವ ನದ ಮೇಲೂ ಮಧ್ಯಂತರ ಕಾಲದಲ್ಲಿ ಯಾದರೂ ಅವ್ಯವಸ್ಥೆಯನ್ನುಂಟು ಮಾ ದವುದು ಖಂಡಿತ ಎಂದವರು ತನ್ನ ವರದಿಯ ದ್ವಿತೀಯ ಭಾಗದಲ್ಲಿ ನಿರೂ ಪಿಸಿದ್ದಾರೆ

ಜೆ. ವಿ ಪಿ ಸಮಿತಿಯವರು ಹೇಳಿ ರುವಂತೆ ಈಗಿನ ಘಟಕಗಳ ಮೂಲನೇ ನೇ ಇರಲಿ, ಇವುಗಳ ರಚನೆಯು ಎಷ್ಟೇ ಕೃತಕವಾಗಿ ಕಂಡುಬರಲಿ, ಈಗಿನ ಪ್ರತಿ ಯೊಂದೂ ರಾಜ್ಯದಲ್ಲಿ ಒಂದು ಶತಮಾನ ದಿಂದಲೂ ಹೆಚ್ಚು ಸಮಯದ ವರೆಗೆ ನಡೆದುಕೊಂಡು ಬಂದಿರುವ, ರಾಜಕೀಯ ಮನೋಭಾವ, ಆಡಳಿತದ ರೀತಿ ಮತ್ತು ಆರ್ಥಿಕ ಸಂಬಂಧಗಳು ಒಂದು ಬಗೆಯ ಸಂಪ್ರದಾಯವನ್ನೂ ಸ್ಥೈರ್ಯ ವನ್ನೂ ತಂದಿವೆ ಇವನ್ನು ಬದಲಾಯಿ ಸುವ ಕ್ರಮವು ಸಹಜವಾಗಿಯೇ ಬಾಡ ಮೇಲಾಗುವಂಥ ಪರಿಣಾಮವನ್ನು ತ ರುತ್ತದೆ.

ಮೊದಲಿಗೆ, ಸಂವಿಧಾನದ ೩ ಮತ್ತು ೪ನೇ ಸೂಕ್ರಗಳಿಗನು ಸಾರವಾಗಿ, ಪುನರ್ಘಟನೆಯ ಯೋಜನೆ ಯನ್ನು ಕಾಯ್ದೆ ಗತ ಗೊಳಿಸಲು ಸಂಸ ತ್ತಿನಲ್ಲಿ ನಡೆಯಬೇಕಾದ ಕ್ರಮಗಳು ಬಹಳ ಪ್ರಯತ್ನವನ್ನೂ ಸಮಯವನ್ನೂ ತೆಗೆ ದು ಕೊಳ್ಳುತ್ತವೆ ಸಂಸತ್ತು ಈ ಸಂಬಂ ಧದಲ್ಲಿ ಶಾಸನವನ್ನ ಮಾತ್ರವಾದರೆ ಮುಂ ಜಿ ೧ ಜ್ಯಗಳ ಶಾಸನಾಂಗಗಳಲ್ಲಿ ನಡೆಯ ಬೇಕಾದ ಚರ್ಚೆಗಳು ಕಟುವಾದ ಭಾವ ನೆಗಳಿಗೆ ಎಡೆಕೊಡ ವ ಭಯವಿದೆ ಕರ್ತ ಬದ್ಧನಾದ ರೀತಿಯಲ್ಲಿ ಪುನರ್ಘಟನೆಗೆ ಕೈಯಿಕ್ಕಿವಾಗ ಸಂವಿಧಾನಕ್ಕೆ ಅನೇಕ ತಿದ್ದುಪಡಿಗಳನ್ನು ಮಾಡಬೇಕಾಗಿ ಬರ ಬಹುದು, ಶಾಸನಾಂಗದ ಭಾರವನ್ನು ಇದು ಬಹಳವಾಗಿ ಹೆಚ್ಚಿಸುತ್ತದೆ

ಅಗತ್ಯದ ಶಾಸನವನ್ನು ರೂಪಿಸಿದ ಮಾತ್ರಕ್ಕೆ ಸಮಸ್ಯೆ ಪರಿಹಾರ ಗೊಳ್ಳುವು ದಿಲ್ಲ ಹೊಸ ರಾಜ್ಯಗಳಲ್ಲಿ ಈಗಿನ ಬೇ ರೆ ಬೇರೆ ರಾಜ್ಯಗಳ ಕೆಲವು ಪ್ರದೇಶಗಳ ನ್ನು ಸೇರಿಸುವುದರಿಂದ ಈ ರಾಜ್ಯಗಳಲ್ಲಿದ್ದ ಶಾಸನ ಕ್ರಮವನ್ನೆಲ್ಲ ಸೂಕ್ಷ್ಮವಾಗಿ ವಿ ಮರ್ಶಿಸಿ, ಅವುಗಳೆಲ್ಲದಕ್ಕೂ ಏಕರೂಪ ತೆಯನ್ನು ಕೊಡುವ ಜಟಿಲ ಪ್ರಶ್ನೆ ಇದಿ ರಿಗುತ್ತದೆ ಈಗಿನ ರಾಜ್ಯಗಳಲ್ಲಿ ಕೆಲ ವುಭೌಗೋಲಿಕವಾಗಿಒಮ್ಮಟ್ಟಿನಲ್ಲಿದ್ದರೂ ಭೂಸುಧಾರಣೆ, ಒಕ್ಕಲುಗಳಿಗೆ ಭದ್ರತೆ, ಮದ್ಯಪಾನ ಪ್ರತಿಬಂಧ ಇತ್ಯಾದಿ ಪ್ರಾ ಮುಖ್ಯ ವಿಷಯಗಳಿಗೆ ಸಂಬಂಧಿಸಿದ ಶಾ ಸನಗಳು ಒಂದೇ ರೀತಿಯವಾಗಿಲ್ಲ

ಆಶ್ರಿತ ಸಂಸ್ಥಾನಗಳನ್ನ ರಾಜ್ಯಗಳಲ್ಲಿ ವಿಲೀನಗೊಳಿಸುವಾಗ ಯಾವ ರಾಜ್ಯಕ್ಕೆ ಇವುಗಳನ್ನು ಸೇರಿಸಲಾಯಿತೊ ಅದರ ಕಾನೂನು ಮತ್ತು ನಿಯಮಾವಳಿಗಳನ್ನು ವಿ ಲೀನ ಹೊಂದಿದ ಪ್ರದೇಶಗಳಿಗೆ ಏಕ ಪ್ರ ಕಾರವಾಗಿ ಅನ್ವಯಿಸುವ ಪ್ರಯತ್ನವೂ ನಡೆದಿಲ್ಲ ಸ್ಥಳೀಯ ಸಂಪ್ರದಾಯ ಮತ್ತು ಸಾಮಾಜಿಕ ಹಾಗು ಆರ್ಥಿಕ ಪರಿ ಸ್ಥಿತಿಗಳು ಇದಕ್ಕೆ ಅನುಕೂಲವಾಗಿಲ್ಲ ವೆಂಬುದೇ ಇದು ಕಾರಣ ಇನ್ನು ಕೆಲ ನಡೆ ಏಕ ರೂಪತೆಗಾಗಿ ನಡೆಯುವ ಪ್ರಯತ್ನದಲ್ಲಿ ವೇಗವಿಲ್ಲದೆ ವಿಳಂಬವಾಗಿರು ವುದೇ ಹಿಂದಿನ ಕಾನೂನು ಮತ್ತು ನಿಯಮಗಳೇ ಈಗಲೂ ಮುಂದೆರಿಯುತ್ತಿರುವು ದರ ಹೇತು

ಇಷ್ಟರ ವರೆಗೆ ಹೀಗೆ ನಡೆದು ಬಂದಿದ್ದರೂ ಇನ್ನು ಮುಂದೆ ಎರಡು ಅಥವಾ ಅದಕ್ಕಿಂತ ಹೆಚ್ಚು ಒಗೆಯ ಆಡಳಿತ ಘಟಕವಲ್ಲಿ ಸರಸುಗಿ, ಏಕ ರೂಪತೆಯನ್ನು ಕಾನೂನು ಮತ್ತು ನಿಯಮಗಳಲ್ಲಿ ಸಾಧಿಸುವ ಪ್ರಯತ್ನವನ್ನು ಬಹಳ ದೊರದ ವರೆಗೆ ಮುಂದೂಡುವುದು ಸಾಧ್ಯವಿಲ್ಲ. ತೀರಿಕೆಗೆ ವ್ಯಕ್ತವಾಗುವ ಅಕ್ಸ್ಪೋಸಾರ್ಹ ರೂಪಕ್ಕಿಂತಲೂ ಹೆಚ್ಚಾಗಿ, ಈ ವಿಳಂಬವು ಆಡಳಿತಾತ್ಮಕ ಆತಂಕಗಳಿಗೆ ಎಡೆಮಾಡಿ ಕೊಡುವುದೆಂಬುದಕ್ಕೆ ಮಹತ್ವ ಬರು ತ್ತದೆ

ತಿರಿಗೆಯ ಧೋರಣೆಯು ಹೊಸ ಘಟಕಗಳ ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯಾಗಿದ್ದರೆ, ಮುಂ ಗಡ ಪತ್ರವನ್ನು ತೂಂದಿಸಿ ಕೊಳ್ಳುವುದು ಕಷ್ಟವಾದೀತೆಯಲ್ಲ, ಕಾನೂನಿನ ದೃಷ್ಟಿಯಲ್ಲಿ ರಾಜ್ಯದ ಪ್ರಜೆ ಗಳಲ್ಲಿ ಭೇದಭಾವನ್ನು ಆದು ಮಾಡುವು ದೆಂಬ ಕಾರಣದಿಂದ ನ್ಯಾಯ ಪಾಠರವಾ ಪ ಕ್ರಮವೇನಿಸೀತು ಈ ಕಾರಣಗಳಿಗಾಗಿ ಪ್ರತಿಯೊಂದೂ ಪುನರ್ಘಟಕ ರಾಜ್ಯವು ಸ್ವಾರಂಭದ ವರ್ಷಗಳಲ್ಲಿ ಪ್ರಜಲಿತ ಶಾಸ ನಗತ ಸೂಕ್ಷ್ಮ ವಿಮರ್ಶೆಯನ್ನು ಪರಿಶ್ರ ಮ ಪೂರ್ವಕ ಮಾಡಿ, ಏಕರೂಪತೆಯ ನ್ನು ಸಾಧಿಸಬೇಕಾಗಿರುತ್ತದೆ

ಸಾರ್ವಜನಿಕ ಆಡಳಿತ ಯಂತ್ರದ ಒಂ ದೊಂದು ಕೀಲುಗಳನ್ನು ಈ ಪುನರ್ಘಟನೆ ಯು ಒಂದೊಂದು ಕಡೆಗೆ ಜಿಕ್ಕಿಸುತ್ತದೆ ಇಷ್ಟರ ವರೆಗೆ ಬೇರೆ ಬೇರೆ ರಾಜ್ಯಗಳಲ್ಲಿ ದ್ದ ನೌಕರರು ಹೊಸ ರಾಜ್ಯದಲ್ಲಿ ಯಾವ ಜ್ಯೇಷ್ಠತ್ವ ಕ್ರಮವನ್ನು ಅನುಸರಿಸಬೇಕಾ ಗುವುದೆಂದು ನಿಶ್ಚಯಿಸುವುದು ಸುಲಭವ ಲ್ಲ ಇವೆಲ್ಲವನ್ನು ಸುಸಂಬದ್ಧ ರೀತಿ ಯಲ್ಲಿ ಒಂದು ಗೂಡಿಸುವುದು ಸಹ ಲಘು ವಾದ ಸಮಸ್ಯೆಯಲ್ಲ ಹೆಚ್ಚಾಗಹಿಹು ದೆಂದು ತೋರಿದರೆ ಅಧವಾ ಅನಾವಶ್ಯಕ ವೆನಿಸಿದರೆ, ನೌಕರರನ್ನು ಕೆಲಸದಿಂದ ವ ಜಾ ಮಾಡುವ ಪ್ರಸಂಗವೇ ಬಾದೀತು

ನೌಕರರ ಸಂಬಳ ಪ್ರಮಾಣವೂ ಒಂ ದೊಂದು ರಾಜ್ಯದಲ್ಲಿ ಈಗ ಒಂದೊಂದು ಬಗೆಯಾಗಿರುವುದರಿಂದ,ಅದರಲ್ಲಿ ಏಕರೂ ಪತೆಯನ್ನು ಸಾಧಿಸುವುದು ಅವಶ್ಯವೆನಿ ಸೀತು. ಜಿಲ್ಲೆಯಲ್ಲಿ ಆಡ ಳಿತ ನಡೆಸುವ ಕ್ರಮ, ರಾಜ್ಯದಲ್ಲಿ ಇರಬೇಕಾದ ಜಿಲ್ಲೆಗಳ ಸಂಖ್ಯೆ ಮತ್ತು ಜಿಲ್ಲೆಯ ಆಡಳಿತ ಘಟಕಗಳ ಮತ್ತು ಉಪ ಘಟಕಗಳ ಪ್ರಮಾಣ ಇತ್ಯಾದಿಗಳ ಲ್ಲಿಯೂ ಹೊಂದಿಕೆಯಾಗಬೇಕಾಗುತ್ತದೆ.

ಈಗಿನ 'ಬ" ಮತ್ತು "ಕ" ವರ್ಗದ ರಾಜ್ಯಗಳಲ್ಲಿ ಈಗಲೂ ಇದೊಂದು ಜಟಿಲ ಸಮಸ್ಯೆಯಾಗಿಯೇ ಉಳಿದಿದೆ.ಜಿಲ್ಲಾ ಶಕ್ತ್ಯಂತಪ್ಪು ಶಕ್ತ್ಯವನ್ನು ಈ ಸಮಸ್ಯೆಯ ಪರಿಹಾರಕ್ಕೆ ಕೊಟ್ಟಿದ್ದರೂ ಹೊಸ ಪರಿಸ್ಥಿತಿಗೆ ತೊಂದಿ ಕೊಳ್ಳುವ ಕೆಲಸ ಇನ್ನೂ ಕಲವು ರಾಜ್ಯ ಗಳಲ್ಲಿ ಪೂರ್ಣವಾಗಿಲ್ಲ ಹೊಸ ರಾಜ್ಯ ಗಳ ಅನುಭವವು ಇದಕ್ಕಿಂತ ಭಿನ್ನವಾದೀ ತೆಂದು ಹೇಳುವುದು ಕಷ್ಟ.

ಆಂಧ್ರದ ಮಟ್ಟಿಗೆ ಉಳಿಕೆಯ ನೌಕರ ರನ್ನು ಉದ್ಯಾಸೇ ಇಟ್ಟುಕೊಂಡಿತು; ಜ್ಯೇಷ್ಠತ್ವ ಕ್ರಮದಲ್ಲಿ ಬದಲಾವಣೆಯ ನ್ನೇನೂ ಮಾಡದೆಪೂರ್ವಾನುಕ್ರಮವನ್ನೆ ಮುಂದರಿಸಿಕೊಂಡು ಹೋಗಲಾಯಿತು, ಆದ ದರಿಂದ ಹೆಚ್ಚಿನ ಶ್ರಮ ಕಾಣಲಿಲ್ಲ ಆದಾಗ್ಯೂ ಕಾರ್ಯಾಲಯಗಳನ್ನು ಬೇರೆ ಬೇರೆ ಕಡೆ ಇಡಬೇಕಾಗಿ ಬಂದುದರಿಂದ ಲೂ ಸರಕಾರದ ದಾಖಲೆ ಪುಸ್ತಕಗಳ ಪ್ರತಿಗಳಿಲ್ಲದೆ ಕಲಸ ಮಾಡಬೇಕಾದ ಪರಿಸ್ಥಿತಿಯೊದಗಿದುದರಿಂದಲೂ ತುಂಬ ತೊಂದರೆಗಳಿಗ ಅದು ಗುರಿಯಾಯಿತು

ಸರಕಾರಿ ನೌಕರರ ಸಂಬಂಧ ಮನ ಸ್ಸಿಮರ್ಶೆಯು ಸಾಮಾನ್ಯ ಸ್ಪೈರ್ಯವನ್ನೆ ತೆಗೆದುಕೊಳ್ಳಿಲಿ— ಇಂದ ಪುನರ್ವಿ ನರ್ಮಯ ಕತಿಮೆ ಸಂಬಳ ವಿದ್ದವರಿಗೆ ಪ್ರಮ್ಖ ಸಂಬಳ ವನ್ನು ಕೊಡುವುದನ್ನೆ ಉದ್ದೇಶವಾಗಿಟ್ಟು ಕೊಂಡು ವೇತನಗಳನ್ನು ಏರಿಸುವುದು ಸಾಮಾನ್ಯ ಅಂದಾಜಿನಂತೆ ಇ ದಕ್ಕಾಗಿ ೧೦ ಕೋಟಿ ರೂಪಯಿಗಳ ವೆ ಚ್ಚ ಒಂದೀತ ರಾಜ್ಯಗಳ ಮೇಲೆ ಇದು ವಿಶೇಷವಾದ ಭಾರವಾಗಿ ಬೀಳುತ್ತದೆ.

ಸರಕಾರಗಳು ನೌಕರರನ್ನು ಕಡಿಮೆ ಮಾಡಿಯೂ ಆಡಳಿತ ವಿಧಾನವನ್ನು ಪರಿ ಷ್ಕರಿಸಿಯೂ ಈ ಹೆಚ್ಚಿನ ವೆಚ್ಚವನ್ನು ಆ ಲ್ಲಂದಲ್ಲಿಗೆ ಬಾಯಿಗೂಡಿಸಬಹುದೆಂದು ಹೇಳಲಾಗುತ್ತದೆ ಆದರೆ 'ಬ" ವರ್ಗದ ರಾಜ್ಯಗಳಲ್ಲಿ ಈ ವರೆಗೆ ಸಂವಾದಿಸಿದ

(ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ
ಪ್ರಧಾನ ಕಾರ್ಯಾಲಯ ಉಡುಪಿ] [ಸ್ಥಾಪನೆ ೧೯೨೦

ಸುಖಸಂತೋಷನನ್ನು ಬರಮಾಡಿಕೊಳ್ಳುವುದು ಹೇಗೆ?

ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಆಕಸ್ಮಿಕ ಘಟನೆಯಲ್ಲ ಅದನ್ನು ನಡುವಾರಿಯ ನರೆಗೆ ಹೋಗಿ, ಸಂಧಿಸಿ, ನುನೆಗೆ ಸ್ವಾಗತಿಸಬೇಕಾಗುತ್ತದೆ ಕೆಲವು ವರ್ಷಗಳಪ್ಪು ಮುಂಚಾಗಿಯೇ ತಕ್ಕ ಯೋಜನೆಯನ್ನು ಮಾಡಿರಬೇಕು ನಿಮ ಇದರ ಅರ್ಥ ನಿಮ್ಮ ಗುರಿಯನ್ನು ಗೊತ್ತುಪಡಿಸುವುದು ಸುತ್ತು ಅನ್ನು ಮುಲು ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ನೆನಪಲನೆಯು ಕೆಲಸ ಈ ಬಗೆಯ ಕಾರ್ಯಕ್ರಮಗಳಲ್ಲಿ ನಿಮಗೆಷ್ಟು ಸಾಧ್ಯವೋ ಅಷ್ಟು ಧನವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ಮುಖ್ಯವಾದೊಂದು ವಿಷಯ ನಾವು ಇದಕ್ಕೆ ಪ್ರತಿ ಆರ್ಥ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಳಿತಾಯವು ಬೇಗನೆ ಬೆಳವಣಿಗೆಯನ್ನು ಹೊಂದುವಂತೆ ನೆರವಾಗುತ್ತೇವೆ

ಚಿಲಾವಣೆ ಭಂಡವಾಳ ರೂ. 7,50,00,000 ಕ್ಕೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD
Head Office UDIPI, S India] [Estd 1925

ಪ್ರಚಾರ ಕ್ಷೇತ್ರದಲ್ಲಿ ಪ್ರದರ್ಶನಗಳ ಪಾತ್ರ

ಪ್ರಾಚೀನ ಕಾಲದಿಂದ ಅನುಸರಿಸಲಾದ ತಂತ್ರ

ಇಬ್ಬರು ಮಿತ್ರರು ಮಾತನಾಡಿಕೊಳ್ಳುತ್ತಿದ್ದರು. ಒಬ್ಬ ಹೇಳಿದ: "ನಿನ್ನೆ ನನ್ನ ಕಣ್ಣಿಗೆ ಕಸ ಬಿದ್ದದ್ದಕ್ಕೆ ಎರಡು ರೂಪಾಯಿ ದಂಡ ತೆರಬೇಕಾಯಿತು. ಅದಕ್ಕಿಂತ ಕಡಿಮೆ ಹಣಕ್ಕೆ ಡಾಕ್ಟರರು ಅದನ್ನು ತೆಗೆಯಲು ಒಪ್ಪಲೇ ಇಲ್ಲ!"

ಅದಕ್ಕೆ ಇನ್ನೊಬ್ಬ ಕೂಡಲೇ ಉತ್ತರವಿತ್ತ—"ಅಯ್ಯೋ! ಇದೇನು ದೊಡ್ಡ ವಿಷಯ? ನಿನ್ನೆ ನನ್ನ ಹೆಂಡತಿಯ ಕಣ್ಣಿಗೆ ಆ ಸೇಠಜಿಯ ಅಂಗಡಿಯಲ್ಲಿ ಪ್ರದರ್ಶನಕ್ಕಿಟ್ಟಿದ್ದ ಸೀರೆ ಬಿದ್ದುದರಿಂದ ನಾನು ನೂರಾ ಎರಡು ರೂಪಾಯಿ ಸಾಲ ಮಾಡಬೇಕಾಯಿತು. ನಿನ್ನ ಕಷ್ಟ ಇದಕ್ಕಿಂತಲೂ ಹೆಚ್ಚಿನದೆ!"

— ಯಾವುದೇ ಪ್ರದರ್ಶನದಲ್ಲಿ ಈ ತೆರನಾದ ವಿಶೇಷ ಶಕ್ತಿಯಿದೆ. ನಮ್ಮ ಮನಸ್ಸನ್ನು ಸೆರೆ ಹಿಡಿದು, ಸೂರೆಗೊಳ್ಳುವಂಥ ಓರಣ, ಅಚ್ಚುಕಟ್ಟು ಮತ್ತು ವಿಶೇಷತೆಗಳಿಂದ ಕೂಡಿದ್ದರೆ ಪ್ರದರ್ಶನ ಎಂದಿಗೂ ಏರ್ಪಡಿಸಿದವರಿಗೆ ನಷ್ಟವನ್ನು ಮಾಡುವುದಿಲ್ಲ.

ಏಶ್ಯದಲ್ಲಿಯೇ ದೊಡ್ಡದು

ಮುಂದಿನ ಶನಿವಾರದಿಂದ (ದಿನಾಂಕ ೨೯) ದಶಂಬರ ತಿಂಗಳ ೧೫ನೇ ತಾರೀಕಿನ ವರೆಗೆ ಹೊಸದೆಹಲಿಯಲ್ಲಿ ಭಾರತದ ಔದ್ಯೋಗಿಕ ಪ್ರಗತಿಯ ವಂಚಿಯವನ್ನು ಮಾಡಿಕೊಡುವ ದೊಡ್ಡ ಪ್ರದರ್ಶನ ಆ ಥವಾ "ಮೇಳ" ಜರಗಲಿದೆ. ಈ ಪ್ರದರ್ಶನಕ್ಕಾಗಿ ೭೫ ಎಕ್ರೆಗಳಷ್ಟು ವಿಶಾಲವಾದ ಸ್ಥಳವನ್ನು ಸಜ್ಜುಗೊಳಿಸಲಾಗಿದೆ. ಏಶ್ಯದಲ್ಲಿ ಹಿಂದೆಂದೂ ನಡೆದಿರದಷ್ಟು ದೊಡ್ಡ ಪ್ರದರ್ಶನ ಇದಾಗುತ್ತದೆ.

ಭಾರತದಲ್ಲಿ ಕೈಗಾರಿಕೆಗಳು ಹೇಗೆ ನಿಕಾಸವನ್ನು ಹೊಂದುತ್ತಾ ಬಂದಿವೆ, ಈ ಅಭಿವೃದ್ಧಿಯ ವೇಗ ಮತ್ತು ವಿಸ್ತಾರಗಳೆಷ್ಟು ಎಂಬುದನ್ನು ಪ್ರದರ್ಶನದ ಭಾರತೀಯ ವಿಭಾಗ ಸಂದರ್ಶಕರಿಗೆ ಮನವರಿಕೆ ಮಾಡಿಕೊಡುತ್ತದೆ. ಗೃಹೋದ್ಯಮಗಳಿಗೂ ಮಹೋದ್ಯಮಗಳೊಡನೆ ಪ್ರದರ್ಶನ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ. ಸರಕಾರದ ಹೊಣೆಗಾರಿಕೆಯಿಂದ ನಡೆಸಲ್ಪಡುವ ಉದ್ಯಮಗಳ ಜೊತೆಗೆ ಖಾಸಗಿರಂಗದ ಚಟುವಟಿಕೆಗಳನ್ನು ಪ್ರತಿನಿಧಿಸುವುದಕ್ಕೂ ವ್ಯವಸ್ಥೆ ಏರ್ಪಟ್ಟಿದೆ.

ವಿದೇಶ ವಿಭಾಗ

ಪ್ರದರ್ಶನವು ವಿದೇಶ ವಿಭಾಗದಿಂದಲೂ ಕೂಡಿದೆ. ಸುಮಾರು ೨೦ ಮಂಟಪಗಳನ್ನು ವಿದೇಶೀಯರಬಳಕೆಗಾಗಿಟ್ಟುಕೊಡಲಾಗಿದೆ. ಹೊರ ದೇಶಗಳಲ್ಲಿ ತಯಾರಿಸಲ್ಪಡುವ ಅತ್ಯಾಧುನಿಕ ಮಾದರಿಯ ಯಂತ್ರೋಪಕರಣಗಳು ಇಲ್ಲಿ ಪ್ರದರ್ಶನಕ್ಕಾಗಿ ಇಡಲ್ಪಡುತ್ತವೆ. ಪರದೇಶಗಳಲ್ಲಿ ಉತ್ಪಾದಿಸಲ್ಪಡುವ ನಾವಿಧಾರಿ ಬಗೆಯ ಸರಕುಗಳ ಏಜಂಟರೇ ಮುಂತಾದವರು ಪ್ರತ್ಯೇಕ ಪ್ರದರ್ಶನ ಗೃಹಗಳನ್ನು ತೆರೆದು, ಅಲ್ಲಿ ತಮ್ಮ ವಸ್ತುಗಳನ್ನು ಸಂದರ್ಶಕರಿಗೆ ನೋಡಲಾಗುವಂತೆ ಒಪ್ಪವಾಗಿ ಇಡುತ್ತಾರೆ.

'ಮನೋರಂಜನೆಯ ವಿಭಾಗವೂ ಒಂದಿಹೆ ಇಹೆ; ಅಲ್ಲದೆ, ಪ್ರದರ್ಶನದ ಮುಖ್ಯ ವೈಶಿಷ್ಟ್ಯಗಳಲ್ಲಿ ಒಂದಾಗಿ, ಸರಕುಗಳ ವಾರಾಟ ವಿಭಾಗವಿದೆ. ಸಂದರ್ಶಕರು ತಮಗೆ ಬೇಕೆನಿಸಿದ ವಸ್ತುಗಳನ್ನು ಇಲ್ಲಿ ದುಡ್ಡು ಕೊಟ್ಟು ಪಡೆಯಬಲ್ಲರು; ಆ ಸರಕುಗಳನ್ನು ದೊಡ್ಡ ಪ್ರಮಾಣದಲ್ಲಿ ತರಿಸಿಕೊಳ್ಳಲು ವ್ಯಾಪಾರಸ್ಥರು ಮಾತುಕತೆಯನ್ನು ಸಹ ನಡೆಸಬಹುದು. ರಶ್ಯವನ್ನೊಳಗೊಂಡು ಔದ್ಯೋಗಿಕ ಕ್ಷೇತ್ರದಲ್ಲಿ ಮುಂದರಿದ ಪ್ರಸಿದ್ಧ ಪಾಶ್ಚಾತ್ಯ ರಾಷ್ಟ್ರಗಳು ಇಲ್ಲಿ ಭಾಗ ವಹಿಸುವುದರಿಂದ ವ್ಯಾಪಾರಿಗಳಿಗೆ ಇದು ಅತ್ಯಂತ ಮಹತ್ವದ ಸಂದರ್ಭ.

ಪ್ರದರ್ಶನ ಪ್ರಿಯ ಮನುಷ್ಯ

ಮನುಷ್ಯನಾದವನು ಪ್ರದರ್ಶನ ಪ್ರಿಯನೆಂಬುದನ್ನು ವಿಜ್ಞಾನಿಗಳು ಸಹ ಒಪ್ಪುತ್ತಾರೆ ಇತರರನ್ನು ಮೆಚ್ಚಿಸುವುದಕ್ಕೆ ಪ್ರದರ್ಶನಪ್ರವೃತ್ತಿಯು ಆತ್ಯವಶ್ಯವಾಗಿದೆ. ಆಂಗಾಂಗಗಳ ಕಾಂಚಿಯನ್ನೂ ಸೋಷಾತಿನ ಆಡಂಬರವನ್ನೂ ಪ್ರದರ್ಶಿಸಿ ಎಲ್ಲರನ್ನೂ ಆಕರ್ಷಿಸುವ ಶಕ್ತಿ ಪಡೆದವರೆಲ್ಲ ಸುಂದರರೆಂದು ಲೋಕ ಒಪ್ಪುತ್ತದೆ. ಹಿಂದಿನ ಕಾಲದಲ್ಲಿ ಮೃಗಗಳನ್ನು ಕೊಂದು ತಂದು ತಮ್ಮವರ ಮುಂದೆ ಆ ಕೊಲೆಯನ್ನು ಇಟ್ಟು ಜೆಮ್ಮೆಯಿಂದ ನಿಂತ ಗಂಡಸರನ್ನು ಹೆಂಗಸರು ವೀರರೆಂದು ಸಂದೇಹದ ಲವಲೇಶವಿಲ್ಲದೆ ಗೌರವಿಸುತ್ತಿದ್ದರು.

ಬೇಟೆಗಾರರು ತಾವು ಈ ಕೊಲೆಯನ್ನು ಹಿಡಿಯಲು ಉಪಯೋಗಿಸಿದ ಹೊಸಬಗೆಯ ಕೊಡಲಿ, ಬಿಲ್ಲುಬಾಣ, ಈಟಿ ಇತ್ಯಾದಿಗಳನ್ನು ಅಭಿಮಾನದಿಂದ ಎಲ್ಲರ ಕಣ್ಣಿಗೆ ಬೀಳುವಂತೆ ಎತ್ತಿಹಿಡಿಯುತ್ತಿದ್ದರು. ಪ್ರದರ್ಶನಕ್ಕಿಡಲ್ಪಟ್ಟ ಕೊಲೆ ಮತ್ತು ಈ ಪತ್ಯಾರುಗಳು ಸಂತೋಷಾತಿರೇಕದಿಂದ ಎಲ್ಲರೂ ಹಾಡಿ ಕುಣಿಯುವಂತೆ ಕಳ ಮಾಡುತ್ತಿದ್ದವು. ಪ್ರಾಚೀನ ಪಮ್ಯಾಟರಲ್ಲಿ ಪ್ರತಿಯೊಬ್ಬನೂ ತನ್ನ ಶಕ್ತಿ ಸಾಮರ್ಥ್ಯಗಳನ್ನು ಪ್ರಜೆಗಳಿಗೆ ಮತ್ತು ಪರರಾಜ್ಯಗಳಿಗೆ ವಿದಿತಪಡಿಸಲು ತನ್ನ ಸೈನ್ಯ, ತನ್ನ ಭಂಡಾರ, ತನ್ನ ಅಂತಃಪುರದ ಸುಂದರಿಯರತಂಡ—ಇವುಗಳಮೆರವಣಿಗೆಯನ್ನು ತೆಗೆಸುತ್ತಿದ್ದನು. ಒಂದು ರೀತಿಯಿಂದ ಆತ್ಮನೋಧಯಾಗ ಇತ್ಯಾದಿಗಳೂ ಜೈತ್ರಯಾತ್ರೆ, ತೀರ್ಥಯಾತ್ರೆಗಳೂ ಪ್ರದರ್ಶನ ಪ್ರವೃತ್ತಿಯಿಂದಲೇ ಹುಟ್ಟಿಕೊಂಡವೆಂದು ಹೇಳಬಹುದು.

ಸಂತೆಯ ನೆರೆಯುವಿಕೆ

ಕೌಟಿಲ್ಯನ "ಅರ್ಥ ಶಾಸ್ತ್ರ"ದಲ್ಲಿ ರಾಜನು ಯಾತ್ರೆ, ಪ್ರದರ್ಶನ ಇತ್ಯಾದಿಗಳಲ್ಲಿ ಭಾಗವಹಿಸುವ ಪದ್ಧತಿಯು ಉಲ್ಲೇಖಿಸಲ್ಪಟ್ಟಿದೆ. ಇಂಥ ಉತ್ಸವಗಳಲ್ಲಿ ಕಲಾವಿದರಿಗೆ ಉತ್ತಮವಾದ ಪ್ರೋತ್ಸಾಹ ಸಿಗುತ್ತಿತ್ತೆಂದು ತಿಳಿದು ಬರುತ್ತದೆ. ದೊಂಬರಾಟದವರು, ಜಾದೂಗಾರರು, ನರ್ತಕರು, ಸಂಗೀತಗಾರರು, ವ್ಯಾಯೂವು ಪಟುಗಳು, ನಾಟಕಕಾರರು ಇತ್ಯಾದಿ ವರ್ಗಗಳವರು ಪ್ರದರ್ಶನ ಅಥವಾ ಜಾತ್ರೆಗಳಲ್ಲಿ ತಪ್ಪದೆ ಉಪಸ್ಥಿತರಿದ್ದು, ಮನೋರಂಜನೆಯನ್ನೊದಗಿಸುತ್ತಿದ್ದರು.

ಆದರೆ ಇಂಥ ಪ್ರದರ್ಶನಗಳನ್ನು ಹೆಚ್ಚಾಗಿ ವ್ಯಾಪಾರದ ಕೇಂದ್ರಗಳಾಗಿಯೇ ಜನರು ಭಾವಿಸುತ್ತಿದ್ದರು. ಹಳ್ಳಿಯಲ್ಲಿ ಉತ್ಪಾದಿತವಾದ ಸರಕುಗಳನ್ನು ಎಲ್ಲರಿಗೂ ತಿಳಿಯುವಂತೆ ಸಂತೆಯಲ್ಲಿಟ್ಟು ಮಾರುವ ಸಾಮಾನ್ಯ ಸಂಗತಿಯನ್ನು ಸಹ ಪ್ರದರ್ಶನ ಪ್ರವೃತ್ತಿಯು ವ್ಯಕ್ತವಾಗುವ ವಿಧಾನವೆಂದು ಕರೆಯಬಹುದು. ಎಲ್ಲೆಲ್ಲಿ ಸಂತೆಗಳು ನಡೆಯುತ್ತವೆಯೊ ಅಲ್ಲಿ ಒಂದಲ್ಲ ಒಂದು ಬಗೆಯ ಮನೋರಂಜನೆಯ ಕಾರ್ಯಕ್ರಮವಿರುವುದು ಇಂದು ಸಹ ಕಣ್ಣಿಗೆ ಬೀಳುತ್ತದೆ.

ಐರೋಪ್ಯ ರಾಷ್ಟ್ರಗಳಲ್ಲಿ

ಪಾಶ್ಚಾತ್ಯ ದೇಶಗಳ ಪಾಲಿನ ಅಂಧಕಾರ ಯುಗವೆಂದು ಕರೆಯಲ್ಪಡುವ ಐದನೇ ಶತಮಾನದಲ್ಲಿ ಸಣ್ಣ ಪ್ರದರ್ಶನಗಳನ್ನು ಜನರು ಅಲ್ಲಿಏರ್ಪಡಿಸುತ್ತಿದ್ದರೆಂದುತಿಳಿದಿದೆ. ಆಧುನಿಕ ಕಾಲದಲ್ಲಿ ಪಾಶ್ಚಾತ್ಯರಷ್ಟು ಸೊಗಸಾಗಿ ಪ್ರದರ್ಶನಗಳನ್ನು ನಡೆಸುವ ಕಲೆಯು ಭಾರತೀಯರಿಗಾಗಲೀ ಬೇರಾವುದೇ ಪೌರಸ್ತ್ಯ ದೇಶಗಳವರಿಗಾಗಲೀ ಕರಗತವಾಗಿಲ್ಲ.

ಎಲ್ಲರ ಸ್ಮೃತಿ ಪಟಲದಲ್ಲಿ ಈಗಲೂ ಇರುವಪ್ರಸಿದ್ಧಜಾತ್ರೆ ಅಥವಾ ಪ್ರದರ್ಶನವು ೧೮೫೧ನೇ ಇಸವಿಯಲ್ಲಿ ಇಂಗ್ಲೆಂಡಿನಲ್ಲಿ ನಡೆಯಿತು. ಇದರಲ್ಲಿ ಒಂದು ಲಕ್ಷ ವಸ್ತುಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು; ಆಂಗ್ಲ ಸಾಮ್ರಾಜ್ಯದಿಂದ ಒಳಗೂ ಮತ್ತು ಜಗತ್ತಿನ ಉಳಿದ ಭಾಗಗಳಿಂದ ಒಟ್ಟು ೭೩೦೭ ಪ್ರದರ್ಶಕರು ಇದರಲ್ಲಿ ಭಾಗ ವಹಿಸಿದ್ದರು. ಮೇ ೧ನೇ ತಾರೀಕಿನಿಂದ ಅಕ್ಟೋಬರ ೧೫ನೇ ತಾರೀಕಿನ ವರೆಗೆ ನಡೆದ ಈ ಪ್ರದರ್ಶನಕ್ಕೆ ೬೦೪೨೫೧೫ ಸಂದರ್ಶಕರು ಬಂದಿದ್ದರು.

ಪ್ರದರ್ಶನಕ್ಕಿಟ್ಟ ವಸ್ತುಗಳಲ್ಲಿ ೧೦ ಲಕ್ಷ ಪೌಂಡು ಬೆಲೆಯ "ಕೊಹಿನೂರು" ವಜ್ರವನ್ನು ಬಿಟ್ಟು ಉಳಿದವುಗಳ ಬೆಲೆ ೩೦ ಲಕ್ಷ ಪೌಂಡುಗಳಾಗಿದ್ದಿತು. ಪ್ರದರ್ಶನವನ್ನು ಏರ್ಪಡಿಸಲು ೩೫೫೭೪೪ ಪೌಂಡು ವೆಚ್ಚ ಬಂದಿದ್ದರೂ ೧೮೬೪೬೬ ಪೌಂಡುಗಳ ಲಾಭವನ್ನು ಆದು ಸಂಪಾದಿಸಿಕೊಟ್ಟಿತು.

ಇದರಿಂದ ೮೭ ಎಕ್ರೆ ವಿಶಾಲ ಜಾಗವನ್ನು ಲಂಡನ್ನಿನಲ್ಲಿ ಪ್ರದರ್ಶನ ಸಮಿತಿಯವರು ಕೊಂಡು ಕೊಂಡರು. ಅಲ್ಲೀಗ ಪ್ರಸಿದ್ಧ ಸಾಂಸ್ಕೃತಿಕ ಕೇಂದ್ರಗಳು ತಲೆ ಎತ್ತಿವೆ; ಮತ್ತು ೯ ಲಕ್ಷ ಪೌಂಡುಗಳ ಬೆಲೆ ಬಾಳುವ ಹಾಗು ಪ್ರತಿವರ್ಷ ೪೦೦೦ ಪೌಂಡುಗಳಷ್ಟು ಆದಾಯವನ್ನು ಸಂಪಾದಿಸಿ ಕೊಡುವ ಜಾಗ ಇದಾಗಿದೆ. ಈ ಆದಾಯವನ್ನು ವಿದ್ಯಾರ್ಥಿ ವೇತನ ರೂಪದಲ್ಲಿ ವೆಚ್ಚ ಮಾಡಲಾಗುತ್ತದೆ.

ಔದ್ಯೋಗಿಕ ಪ್ರಗತಿಯ ಮೈಲುಗಲ್ಲುಗಳು

ನುಂದೆ ಯುರೋಪು ಮತ್ತು ಅಮೇರಿಕಗಳಲ್ಲಿ ಜಾತ್ರೆಗಳ ಪರಂಪರೆ ವೇಗದಿಂದ ಮುಂದೊತ್ತಲ್ಪಟ್ಟಿತು. ಪ್ಯಾರಿಸಿನಲ್ಲಿ ೧೮೫೫ ಮತ್ತು ೧೯೦೦ರಲ್ಲಿ ಪ್ರದರ್ಶನಗಳನ್ನು ಏರ್ಪಡಿಸಲಾಯಿತು; ಚಿಕಾಗೋದಲ್ಲಿ ೧೮೯೩ನೇ ಇಸವಿಯಂದು ವೈಭವ ಪೂರ್ಣ ಪ್ರದರ್ಶನ ನಡೆಯಿತು. ವಿಯೆನ್ನ, ಬ್ರುಸ್ಸೆಲ್ಸ್‌ಗಳಿಂದ ಹಿಡಿದು ಅಸ್ಟ್ರೇಲಿಯದಲ್ಲಿರುವ ಮೆಲ್ಬೋರ್ನ್, ಸಿಡ್ನಿಗಳ ವರೆಗೂ ಪ್ರದರ್ಶನ ಪ್ರವೃತ್ತಿ ತೀವ್ರವಾಗಿ ವ್ಯಾಪಿಸಿತು.

ಅಮೇರಿಕನ ಕೈಗಾರಿಕೆಗಳ ಪ್ರಗತಿಯನ್ನು ಸೂಚಿಸುವ ಮೈಲುಗಲ್ಲಾಗಿ ೧೮೩೩-೩೪ರಲ್ಲಿ ನಡೆದ ಚಿಕಾಗೊ ಪ್ರದರ್ಶನ ಪರಿಣಮಿಸಿತು; ಬೆಂಕಿ ಹೆಚ್ಚುವ ಸ್ಫೋವನ್ನು ಮಾರಿಯಾದರೂ ಈ ಪ್ರದರ್ಶನವನ್ನು ನೋಡಲೇ ಬೇಕೆನ್ನುವಷ್ಟು ಇದರ ಆಕರ್ಷಣೆಯು ಪಸರಿಸಿತು. ಪ್ರದರ್ಶನವನ್ನು ನೋಡಿದವರು ಹೆಳೆಯು ಸ್ಟೋವನ್ನು ಮಾರಿ ಪ್ರದರ್ಶನಕ್ಕಿಟ್ಟಿದ್ದ ಹೊಸಬಗೆಯ ಸ್ಟೋವನ್ನು ಕೊಂಡುಕೊಳ್ಳುವುದೇ ಲಾಭದಾಯಕವೆಂದು ಮನಗಂಡರು. ತಮ್ಮ ಸರಕುಗಳನ್ನು ಸಾರ್ವಜನಿಕರ ಕಣ್ಣಿಗೆ ಹಾಕಲು ತೀರ ಕಾತರವಿಂದಿದ್ದ ಉತ್ಸಾಹದಿಂದರು ಸಾನಾಡಿಯಾಗೊ ಜ್ರೇಜಿಲ್, ಸಾನ್‌ಫ್ರಾನ್ಸಿಸ್ಕೊ ಪ್ಯಾರಿಸ್ ನ್ಯೂ

(೧೦ನೇ ಪುಟ ನೋಡಿರಿ)

ಭವ್ಯ ಶುದ್ಧ ಸೌಭಾಗ್ಯ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.

ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸವ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಪೂರ್ವ ಆಫ್ರಿಕದ ವನ್ಯ ಜೀವನ

ಮೈಸೂರಿನ ರಾಜಪ್ರಮುಖರ ಅಭಿಪ್ರಾಯ

ಪೂರ್ವ ಆಫ್ರಿಕದಲ್ಲಿ ಜನರು ವಾಸಿಸದೇ ಇರುವ ಅಥವಾ ವಿರಳವಾಗಿ ವಾಸಿಸುವ ಪ್ರದೇಶಗಳು ಹೆಚ್ಚಾಗಿ ದೊರೆತಿರುವುದರಿಂದ ರಾಷ್ಟ್ರೀಯ ಉದ್ಯಾನವನಗಳನ್ನು ನಿರ್ಮಿಸಲು ಆಡಳಿತ ವರ್ಗಗಳಿಗೆ ಸಾಧ್ಯವಾಗಿದೆ. ಆಫ್ರಿಕದ ಶಿಕಾರಿ ಸಂಬಂಧದ ಕಾನೂನುಗಳನ್ನು ಸ್ಥಳೀಯ ಸ್ಥಿತಿಗತಿಗಳಿಗನುಸಾರವಾಗಿ ಸಮನ್ವಯಗೊಳಿಸಲಾಗಿದೆ ವನ್ಯ ಜೀವನವನ್ನು ಸಂರಕ್ಷಿಸುವ ನೀತಿಯು ನವ್ಯರಿಗೆ ಹಾಗೆಯೇ ಇದೆ. ರಾಷ್ಟ್ರೀಯ ಉದ್ಯಾನವನಗಳಲ್ಲಿನ ವನ್ಯ ಪ್ರಾಣಿಗಳಿಗೆ ಮಾನವರಿಗಿಂತಲೂ ಹೆಚ್ಚಿನ ಗೌರವವನ್ನು ಕೊಡಲಾಗಿದೆ. ಪ್ರಾಣಿಗಳನ್ನು ಅತ್ಯಲ್ಪ ಸಂಖ್ಯೆಗಾಗಿ ಕೊಲ್ಲಲು ಕೂಡ ಅನುಮತಿ ಇಲ್ಲ.

ಪ್ರಾಣಿಗಳಿಂದ ಅಪಾಯವಿಲ್ಲ

ಮನುಷ್ಯರಿಗೆ ಪ್ರಾಣಿಗಳಿಂದಾವ ಅಪಾಯವೂ ಇಲ್ಲ ರಾಷ್ಟ್ರೀಯ ಉದ್ಯಾನವನಗಳಲ್ಲಿ ವಾಸಿಸುವ ಈ ಪ್ರಾಣಿಗಳು ಮನುಷ್ಯನ ಸ್ವಭಾವಕ್ಕೆ ಹೊಂದಿಕೊಂಡಿದ್ದು ಚಿತ್ರಗ್ರಾಹಕರು ಹತ್ತಿರದಲ್ಲಿಯೇ ಚಿತ್ರಗಳನ್ನು ತೆಗೆದುಕೊಳ್ಳುವಾಗಲೂ ಸಮ್ಮನಿರುತ್ತವೆ.

ಪೂರ್ವ ಆಫ್ರಿಕದಲ್ಲಿರುವ ಎಲ್ಲ ಪ್ರಸಿದ್ಧ ರಾಷ್ಟ್ರೀಯ ಉದ್ಯಾನ ವನಗಳ ಪೈಕಿ ಸೆರೆಂಗೆಟಿಯ ಉದ್ಯಾನ ವನವು ಅತ್ಯಂತ ಮುಖ್ಯವಾದುದಾಗಿದೆ. ಈ ಉದ್ಯಾನ ವನದಲ್ಲಿರುವ ನೋರೊಂ—ಗೋರೊಂ ಗುಂಡಿಯು ಭೂಗರ್ಭಶಾಸ್ತ್ರಾನುಸಾರವಾಗಿ ಅತ್ಯಂತ ಆಸಕ್ತಿ ಹುಟ್ಟಿಸುವ ಪ್ರದೇಶವಾಗಿದೆ. ಜ್ವಾಲಾಮುಖಿಯಿಂದುಂಟಾದ ವಿಶಾಲವಾದ ಹಳ್ಳ ಇಲ್ಲಿದೆ; ಮತ್ತು ಲಕ್ಷಾಂತರ ವನ್ಯಮೃಗಗಳು ಈ ಪ್ರದೇಶದಲ್ಲಿ ನೆಲೆಮಾಡಿಕೊಂಡಿವೆ. ಇದಕ್ಕೆ ಹೊಂದಿರುವ ಸೆರೆಂಗೆಟಿ ಉದ್ಯಾನವನವು ಸಂಪದ್ಭರಿತ ಸಸ್ಯ ಜೀವನವನ್ನು ಪಡೆದಿದ್ದು ವೈಸೂರಿನ ಮಲೆನಾಡು ಪ್ರದೇಶಗಳನ್ನು ನೆನಪಿಗೆ ತರುತ್ತದೆ. ಸಿಂಹ, ಬಿಳಿ ಸೈಗ, ಜೀಬ್ರಾ, ಕತ್ತೆಕಿರುಬ, ನರಿ, ಸೀಳುನಾಯಿ, ಕೋಣ, ಆನೆ, ವಿವಿಧ ಜಾತಿಯ ಜಿಂಕೆಗಳೇ ಮುಂತಾದ ಮೃಗಗಳ ವಿಪುಲ ಭಾಗವೂ ಚಿತ್ರಗಳನ್ನು ಇಲ್ಲಿ ತೆಗೆಯಬಹುದು. ಲಕ್ಷಾಂತರ ದನಕರುಗಳೊಂದಿಗೆ ವಾಸಿಸುವ ಮಾರಾ ೧೦,೦೦೦ ಮಂದಿ ಮಸಾಯ್ ಬುಡಕಟ್ಟಿನ ಆಫ್ರಿಕನ್ ಜನರು ಇಲ್ಲಿದ್ದಾರೆ. ಇವರು ಆಫ್ರಿಕದ ಮೂಲ ನಿವಾಸಿಗಳಲ್ಲಿ ಅತ್ಯಂತ ಪ್ರಸಿದ್ಧ ಸಮರ ಪ್ರಿಯರಾಗಿದ್ದಾರೆ. ಈಗ ಇವರು ಅಲೆಮಾರಿಗಳಾಗಿ ಸಂಚರಿಸುತ್ತಾ ಜೀವಿಸುತ್ತಿದ್ದಾರೆ. ಇವರ ಮುಖ್ಯ ಆಹಾರವೆಂದರೆ ರಕ್ತ ಮತ್ತು ಹಾಲು.

ವನ್ಯಪ್ರಾಣಿಗಳ ವೈವಿಧ್ಯ

ನೋರೊಂ ಗೋರೊಮಿನಿಂದಗಳಿಂದ ಆಡಿಗಳ ಎತ್ತರದಲ್ಲಿ ಮೇರು ಶಿಖರದ ತಪ್ಪಲಿನಲ್ಲಿ ಆಮಾಶಾವಿದೆ. ಇಲ್ಲಿಯ "ಟ್ಯಾಂಗನೀಕ ಗೇಮ್ ಲಿಮಿಟೆಡ್" ಪ್ರದೇಶದಲ್ಲಿ ಮೈಸೂರು ಪ್ರಾಣಿ ಸಂಗ್ರಹಾಲಯಕ್ಕೆಂದು ಖಡ್ಗ ಮೃಗಗಳನ್ನು ತರಲಾಗಿದೆ. ಶ್ವೇತ ವರ್ಣದ ಖಡ್ಗ ಮೃಗಗಳನ್ನೂ ಮತ್ತು ಕೆಲವು ವಿಶ್ರತಳಿಯ ಮೃಗಗಳನ್ನೂ ಇಲ್ಲಿ ಕಾಣಬಹುದು. ಕೆನ್ಯಾದಲ್ಲಿ ಹಿಮಾಚ್ಛಾದಿತ ಕಿಲಿಮಾಂಜಾರೋ ಪರ್ವತದ ತಪ್ಪಲಿನಲ್ಲಿರುವ ಅಂಬೆಸೆಲಿ ರಾಷ್ಟ್ರೀಯ ಉದ್ಯಾನವನದಲ್ಲಿ ಆನೆಗಳನ್ನೂ, ಬೆಲೂನ್‌ಗಳೆಂಬ ದೊಡ್ಡ ಕೋಣಗಳನ್ನೂ, ಸಿಂಹಗಳನ್ನೂ ಖಡ್ಗ ಮೃಗಗಳನ್ನೂ ನೋಡಬಹುದು. ರಾತ್ರಿಯಲ್ಲಿ ಸಿಂಹಗಳ ಘರ್ಜನೆಯನ್ನು ಸಹ ಇಲ್ಲಿ ಕೇಳಬಹುದಾಗಿದೆ. ಆನೆ ಇದ್ದಕ್ಕಿದಂತೆಯೇ ಸಿಂಹಗಳು ಸೃಷ್ಟಿಸೂಚಕವಾಗಿ ಘರ್ಜಿಸಿ ಮನುಷ್ಯರನ್ನು ಚಿಕಿತಗೊಳಿಸುತ್ತವೆ. ಪೂರ್ವ ಆಫ್ರಿಕದ ಈ ಪ್ರದೇಶದಲ್ಲಿ ಕೊಂಬುಳ್ಳ ಹೆಣ್ಣಾಖಡ್ಗಮೃಗಗಳು ಹೆಚ್ಚಿನಸಂಖ್ಯೆಯಲ್ಲಿರುವಹಾಗೆಕಾಣುತ್ತದೆ. ಇವುಗಳನ್ನು ಪ್ರೀತಿಯಿಂದ 'ಹೇಡಿಸ್' ಎಂದು ಕರೆಯುತ್ತಿರುವರು. ಈ ಮೃಗದ ಚರ್ಯೆ ಅಧಿಕಾರ ಮುಖ ಭಾವ ಮಾತ್ರ ಪ್ರೀತಿ ಪೂರ್ವಕದ ಈ ಹೆಸರಿಗೆ ಕದ್ದಿರುದ್ಧವಾಗಿದೆ.

ಉಗಾಂಡಾದಲ್ಲಿರುವ ಮುರ್ಚಿಸ್ವಾನ್ ರಾಷ್ಟ್ರೀಯ ಉದ್ಯಾನವನ ಪ್ರದೇಶದಲ್ಲಿ ನೈಲ ನದಿಯಿಂದ ರೂಪಗೊಂಡಿರುವ ಮುರ್ಚಿಸ್ವಾನ್ ಜಲಪಾತವಿದೆ. ಇದು ಅತ್ಯಂತ ಆಕರ್ಷಣೀಯವಾಗಿದೆ. ನೈಲ್ ನದಿಯು ೫೦ ಅಡಿಗಳ ಅಂತರದ ಜಾಗದಲ್ಲಿ ನುಗ್ಗಿ ಈ ಜಲಪಾತವನ್ನುಂಟು ಮಾಡಿದೆ ಈ ಉದ್ಯಾನವನದಲ್ಲಿ ನೂರಾರು ಆನೆಗಳಿವೆ. ಈ ಆನೆಗಳ ದಂತವು ಆಫ್ರಿಕದ ಎಲ್ಲೆಲ್ಲಾ ಅತ್ಯಂತ ಸೊಗಸಾದುದಾಗಿದೆ ಆಫ್ರಿಕದ ಆನೆಗಳಲ್ಲಿ ಗಂಡು ಮತ್ತು ಹೆಣ್ಣಾನೆಗಳೆರಡಕ್ಕೂ ಕೊಂಬುಗಳಿರುವುದೊಂದು ಗಮನಾರ್ಹವಾದ ವಿಷಯ. ಈ ಪ್ರದೇಶದಲ್ಲಿ ಹರಿಯುವ ನೈಲ್ ನದಿಯಲ್ಲಿ ನೀರಾನೆಗಳು ಮತ್ತು ಮೊಸಳೆಗಳು ಹೇರಳವಾಗಿವೆ

ಬೇಟೆಯ ವಿನೋದ

ಬೆಲ್ಜಿಯನ್ ಕಾಂಗೋವಿನ ಪೂರ್ವದ ಗಡಿಯಲ್ಲಿ ಜಾರ್ಜ್ ಮತ್ತು ಎಡ್ವರ್ಡ್ ಸರೋವರಗಳ ಪ್ರದೇಶದಲ್ಲಿ ಎಲಿಜಬೆತ್ ರಾಷ್ಟ್ರೀಯ ಉದ್ಯಾನವನವಿದೆ. ಕೇಂದ್ರ ಆಫ್ರಿಕದಲ್ಲಿನ ಕೆಲವು ಪ್ರತ್ಯೇಕಿಸಲ್ಪಟ್ಟ ಕ್ಷೇತ್ರಗಳನ್ನು ಈ ಉದ್ಯಾನವನ ಒಳಗೊಂಡಿದೆ. ಆನೆಗಳಿಗೂ, ಕಾಡೆಮ್ಮೆಗಳಿಗೂ, ಉಗಾಂಡದ ಕಪಿಲ ವರ್ಣದ ಗೋವುಗಳಿಗೂ, ನೀರಾನೆಗಳಿಗೂ ಈ ಉದ್ಯಾನವನವು ಅವಾಸಸ್ಥಾನವಾಗಿದೆ ಈ ಉದ್ಯಾನವನದಲ್ಲಿ ಎಳೂವರೆ ಅಡಿಗಳ ಎತ್ತರವನ್ನು ಮೀರಿದ ಗಿಡ್ಡ ಆನೆಗಳಿರುವುದೊಂದು ಸ್ವಾರಸ್ಯವಾದ ವಿಷಯ.

ಶಿಕಾರಿ ಮಾಡುವ ಬಗ್ಗೆ ಪೂರ್ವ ಆಫ್ರಿಕದಲ್ಲಿ ಪೂರ್ವ ಸಿದ್ಧತೆಯಾಗಲಿ ಕ್ರಮವರಿತ ಯೋಜನೆಯಾಗಲಿ ಇಲ್ಲ. ಸಫಾರಿ ಎಂದು ಕರೆಯಲ್ಪಡುವ ಕ್ರಮಕ್ಕನುಸಾರವಾಗಿ ಶಿಕಾರಿಗಾಗಿ ಬಳಸುವ ಕಾರುಗಳಲ್ಲಿ ಸಂಚರಿಸಿ ಆಡ್ಡ ಬರುವ ಪ್ರಾಣಿಗಳನ್ನು ಗುಂಡಿಕ್ಕಿ ಕೊಲ್ಲಲಾಗುತ್ತದೆ. ನಿಯೋಜಿತ ಕಾರ್ಯಾಚರಣೆಗಿಂತ ಈ ರೀತಿಯ ಶಿಕಾರಿಯು ಉಪಾಯಕರವಾದುದೆಂದು ಕಂಡುಬಂದಿದೆ. ಬೇಟೆಗಾರರುಪ್ರತಿವರ್ಷವೂ ಹುಲ್ಲುಗೆಬ್ಬಿಸಿ ಇಡುವುದರಿಂದ ವನ್ಯ ಸಂಪತ್ತಿಗೆ ಗಣನೀಯ ಪ್ರಮಾಣದಲ್ಲಿ ನಷ್ಟ ಸಂಭವಿಸುತ್ತಿದೆ ಎನ್ನಬಹುದು ಹೀಗೆ ಬೆಂಕಿ ಹಾಕುವುದರಿಂದ ಸಹಸ್ರಾರು ಮರಗಿಡಗಳು ಭಸ್ಮವಾಗುತ್ತವೆ. ಬೆಂಕಿ ಹಾಕಿದ ಪ್ರತಿ ಸಲವೂ ಹುಲ್ಲು ಮಾತ್ರ ಹುಲುಸಾಗಿ ಬೆಳೆಯುತ್ತದೆ. ಈ ರೀತಿಯಲ್ಲಿ ಹುಲ್ಲು ಹುಲುಸಾಗಿಯೂ ಸೊಂಪಿನಿಂದಲೂ ಬೆಳೆಯುವುದರಿಂದ ಪ್ರಾಣಿಗಳು ಮೇವಿನಾಗಿ ಈ ಸ್ಥಳಗಳಿಗೆ ಬರುವುದೆಂದು ಬೇಟೆಗಾರರು ಹೇಳುತ್ತಾರೆ. ಹೀಗೆ ಧ್ವಂಸಗೊಂಡ ಅರಣ್ಯ ಪ್ರದೇಶದಲ್ಲಿ ಪುನಃ ಸಸಿಗಳನ್ನು ನೆಡುವ ಪ್ರಯತ್ನ ಮಾಡಿದಂತೆ ಕಾಣುವುದಿಲ್ಲ.

ದಕ್ಷಿಣ ತ್ಯಾಂಗನೀಕಾದಲ್ಲಿ ೧೧,೦೦೦ ಚದರ ಮೈಲುಗಳ ವಿಸ್ತೀರ್ಣದ ಉಗಲ್ಲು ನದಿ ಪ್ರದೇಶವು ನೂರಾರು ಚದರ ಮೈಲಿಗಳ ವರೆವಿಗೂ ಜನರಹಿತ ಪ್ರದೇಶವೆಂಬುದಾಗಿ ಕಂಡು ಬಂದರೂ ಬೇಟೆಗೆ ಹೇರಳವಾದ ಸ್ಥಳ, ಅಲ್ಲಲ್ಲಿ ಬೇಟೆಗಾರರೂ ಪ್ರಾಚೀನ ಬೆಪ್ಪರೂ ಇತ್ತಲೆಯಿಂ ಭರ್ಚಿಗಳು ಅಥವಾ ಗಾಳಗಳೊಂದಿಗಿರುವುದನ್ನು ಇಲ್ಲಿ ಕಾಣಬಹುದು. ಅಪೂರ್ವವಾದ ಟೋಪಿ ಮೃಗ, ಕೃಷ್ಣ ಮೃಗ, ಸಿಂಹ, ಸಿಂಬಿಣಿ, ಕಾಡು ಕೋಣ, ಜರಾಫೆ, ಕಪಿಲ ವರ್ಣದ ಗೋವುಗಳು ನೀರಾನೆ ಮುಂತಾದ ಪ್ರಾಣಿಗಳು ಇಲ್ಲಿ ಕಾಣಲಿಸುತ್ತವೆ.

ರಾತ್ರಿಯ ಕತ್ತಲಲ್ಲಿ

ಬಸ್ ಟೋ ಸರೋವರದ ಬಳಿಯೂ ಬೇಟೆಗಾರರು ಬಿಡಾರ ಹಾಕುತ್ತಾರೆ. ಈ ಸರೋವರಕ್ಕೆ ಹೋಗುವಾಗ ಫ್ಲೆಮಿಂಗೋ ಪಕ್ಷಿಗಳಿಂದ ತುಂಬಿದ್ದ ಸಂಗಡ ಸರೋವರ ಸಿಗುತ್ತದೆ. ಈ ಪಕ್ಷಿಗಳಿಂದ ಸರೋವರಕ್ಕೆ ನಸುಗೆಂಪು ಬಣ್ಣ ಬಂದಿರುವುದು. ಆಗ ಕಣ್ಣಿಗೆ ಬೀಳುತ್ತದೆ. ಇಲ್ಲಿ ಹಾಕುವ ಶಿಬಿರಗಳಲ್ಲಿ ಕುಳಿತಾಗ ಬೇಟೆಗಾರರಿಗೆ ರಾತ್ರಿ ಕಾಲದಲ್ಲಿ ಕೇಳಿಬರುವ ವಿಲಕ್ಷಣ ಧ್ವನಿ ವೈವಿಧ್ಯವನ್ನು ಯಾರೂ ಮರೆಯುವಂತಿಲ್ಲ; ಸರೋವರಗಳ ಸುತ್ತಾ ತುಬಿದ್ದ ನೀರಾನೆಗಳ ಗುಟುರು ಮತ್ತು ಘೋಂಕಾರ, ರಾತ್ರಿಯಿಲ್ಲಾ ಶಿಬಿರದ ಸುತ್ತ ಮುತ್ತ ಸಂಚರಿಸುತ್ತಿದ್ದ ಕಿರುಬಗಳ ಕೇಕೆ ಇತ್ಯಾದಿಗಳು ಹೆದರಿಕೆಯನ್ನೂ ಬರಿಸುತ್ತವೆ. ಈ ಪ್ರದೇಶದಲ್ಲಿ ವಿಶೇಷ ಪ್ರಾಣಿಗಳಾದ ಥಾಂಸನ್ಸ್ ಗಾಜ್ಜೆಲ್ಲೆಗಳೂ (ಒಂದು ಜಾತಿಯ ಜಿಂಕೆಗಳು) ಗ್ರಾಂಟ್ಸ್ ಗಾಜೆಲ್ಲೆಗಳೂ, ವೈಲ್ಡ್ ಬೀಸ್ಟೇಗಳೂ, ಉಷ್ಟ್ರಪಕ್ಷಿಗಳೂ ಇಂಪಾಲಗಳೂ ಮತ್ತು ಧೀ ಧೀ ಗಳೂ ನೋಡಿಸಿಗುತ್ತವೆ ಈ ಪ್ರದೇಶದಲ್ಲಿ ವನ್ಯಕರುಗಳನ್ನು ನೋಡಿಕೊಂಡು ಕಾಲ ಕಳೆಯುವ ಮೂಲ ಬುಡ ಕಟ್ಟುನನ್ನು ಕೂಡಾ ಇದ್ದಾರೆ ಹಾಲು ರಕ್ತ ಮತ್ತು ಹೆಚ್ಚು ನೂಂಷ ಇವರ ಮುಖ್ಯ ಆಹಾರಗಳೆಂದು ತಿಳಿದು ಬರುತ್ತದೆ.

ಹೆಸರೇ ಸೂಚಿಸುವಂತೆ ಜಾಗಿನಿಂದ ಕೂಡಿರುವ ವೈಡಾ ಸ್ಯಾಂಪ್ ಕೇಂದ್ರದ ಬಗ್ಗೆ ಮುಂದಿನ ಸಂಚಿಕೆಯಲ್ಲಿ ಓದಿರಿ

ಉಡುಪಿ ಡಿ. ಮುಂ. ಕೋರ್ಟಿನಲ್ಲಿ

ಕ್ರಮಸಂಖ್ಯೆ 404/1955.

ಕಿನ್ನಿಮೂಲ್ಕಿ ಗೋಪಾಲಕೃಷ್ಣ ಭಟ್ಟ—ವಾದಿ ಮತ್ತು

ಪಮ್ಮಾಪ್ಪಿ ಅಮ್ಮ ಕೂಡಾ ೩ಜನರು—

ಪ್ರತಿವಾದಿರು

೩ನೇ ಪ್ರತಿವಾದಿ ರಾಮಚಂದ್ರ ಆಚಾರ್ಯ—ವೆಂಕಟಕೃಷ್ಣಾಚಾರ್ಯರ ಮಗ—ಕಡೆಕಾರು ಗ್ರಾಮದ ಕಿನ್ನಿಮೂಲ್ಕಿಯಲ್ಲಿರುವವರು —ಇವರಿಗೆ.

ನೀವು ಕೂಡಾ ೩ಜನ ಪ್ರತಿವಾದಿರು ವಾದಿರಿಗೆ ತಾ. 1-5-46ರಲ್ಲಿ ರೂ. 1500/- ಕೈ ೦ ನಿಖಿ ಬರೆಕೊಟ್ಟ ಸ್ಥಿರಸೊತ್ತು ಈಡು ದಸ್ತಾವೇಜು ಬಾಬ್ತು ಪೂರಾ ಅಸ್ಸಲು ಮತ್ತು 30-4-47 ನೇ ತಾರೀಕ್ಕಿನ ಬಡ್ಡಿ ವ ಶರ್ತಬದ್ಧಿ ಕೂಡ ಕೇಳಿ ವಾದಿರು ಐಷಾಡಿದ ಮೇಲ್ಕಂಡ ದಾವೆಯು ಈ ಕೋರ್ಟಿನಲ್ಲಿ ತಾ. 12—11—55ರಲ್ಲಿ ಅಪೈರು ತಪ್ಪಿಗೆ ಇಟ್ಟು ಆಜ್ಞೆ ಆಗಿರುತ್ತದೆಂತಲೂ, ಸದರಿ ತಾರೀಕಿಗೆ ನೀವು ಹಾಜರಾಗಿ, ಉದಾಹರಣೆ ಇರುವ ಸಂಗ್ತಿಯಲ್ಲಿ ಉದಸುರು ಬೇಕೆಂತಲೂ, ತಪ್ಪಿದ್ರೆ ನಿಮ್ಮನ್ನು ಶಿಪ್ಪಾಮಾಡಿ ಸದ್ರಿ ದಾವೆಯನ್ನು ಕೀವಾಗಿ ನಿಲಾದೇಶಂತಲೂ ಈ ಮೂಲಕ ತಿಳಿಸೋಣಾಗುತ್ತದೆ—

(By order of court)

K Vittal Nayak

Vakil for Plaintiff

ಉಡುಪಿ ತಾ. 19.10.55.

THE BOMBAY LIFE ASSURANCE Co., Ltd.

Excellent Bonuses!

1954 VALUATION.

Whole Life .... Rs. 19/- per 1000/-per year

Endowment .... Rs. 15/- per 1000/- per year.

Record Business: Over Rs. 5 Crores.

It pays you to consult for Representation or Insurance:-

KOCHIKAR BROTHERS, LTD.,

CHIEF AGENTS, UDIPI.

or any of their offices at:-

Bangalore, Coimbatore, Kozhikode, Madura, Mangalore and Trivandrum



ಮುಂಬಯಿ ನಗರದ ಕುರಿತಾಗಿ ಹಗರಣ

ಮರಾಠಿಗರಿಗೂ ಗುಜರಾತಿಗಳಿಗೂ ನಡುವೆ ಎಳೆದಾಟ

ಮಹಾರಾಷ್ಟ್ರೀಯರನ್ನು ಕೆಣಕಿದ ಪ್ಪ ತೀವ್ರವಾಗಿ ಫಜಲ ಅಲಿ ಆಯೋಗ ದ ವರದಿಯು ಬೇಂಬಯಿಯೇ ಭಾಷಾವಾದಿ ಗಳನ್ನು ನೋಯಿಸಿಲ್ಲ ಎಂದು ಹೇಳ ಬಹುದು. ಆಕಾಲಿಗಳು ಪಂಜಾಬಿ ಮಾತ ನಾಡುವ ಪ್ರತ್ಯೇಕ ರಾಜ್ಯದ ರಚನೆಗಾಗಿ ಆಗ್ರಹವನ್ನು ವ್ಯಕ್ತಪಡಿಸಿದ್ದರೂ ಜಾ ತೀಯ ತಳಹದಿಯು ಈ ಬೇಡಿಕೆಯಲ್ಲಿ ರುವುದರಿಂದ ಅತ್ತ ಸಾಕಷ್ಟು ಗಮನವ ನ್ನು ಯಾರೂ ಹರಿಸಿದಂತಿಲ್ಲ. ಆದರೆ ಸಂಯುಕ್ತ ಮಹಾರಾಷ್ಟ್ರದ ಬೇಡಿಕೆ ಯನ್ನು ಮನ್ನಿಸದೆ, ಮುಂಬಯಿ ರಾಜ್ಯ ವನ್ನು ದ್ವಿಭಾಷಾ ಪ್ರದೇಶವಾಗಿಯೇ ಉಳಿಯಗೊಟ್ಟುದಕ್ಕೆ ಮಹಾರಾಷ್ಟ್ರದ ಕಾಂಗ್ರೆಸು ಪಕ್ಷವು ತನ್ನ ಕಠಿಣ ನಿಷೇಧ ವನ್ನು ಸೂಚಿಸಿದೆ. ಅಲ್ಲದೆ ವರಿಷ್ಠರು ಮುಂದಿಟ್ಟ ಸೂಚನೆಗೆ ತನ್ನ ಪ್ರತಿ ಸೂಚ ನೆಗಳನ್ನು ಒಂದಾ ಗೊತ್ತುವಳಿಯ ಮೂ ಲಕ ಮೊನ್ನೆ ಮಂಡಿಸಿದೆ.

ಆಯೋಗದ ಹೇಳಿಕೆ

ಮುಂಬಯಿ ರಾಜ್ಯದ ಕುರಿತು ಆ ಯೋಗವು ಹೇಳಿರುವುದೇನು? ಬಹು ಭಾಷಾ ಪ್ರದೇಶಗಳಲ್ಲಿ ಆಂತರಿಕ ಕಲಹ ದಿಂದ ಆಡಳಿತೆಯು ದುರ್ಬಲವಾಗುವು ದೆಂದು ಹೇಳಲಾಗುತ್ತಿದ್ದರೂ ಈಗಿನ ಮುಂಬಯಿ ರಾಜ್ಯವು ಭಾರತದ ಅತ್ಯು ತ್ತಮ ರಾಜ್ಯಗಳಲ್ಲಿ ಒಂದಾಗಿದೆ ಎಂದು ಆಯೋಗದ ಅಭಿಪ್ರಾಯ. ಸಾಕ್ಷರತೆಯ ಪ್ರಮಾಣವು ಉಳಿದೆಲ್ಲ "ಆ" ವರ್ಗದ ರಾಜ್ಯಗಳಿಗಿಂತ ಇಲ್ಲಿ ಹೆಚ್ಚಾಗಿದೆ; ಭೂಸುಧಾರಣೆ ಮತ್ತಿತರ ಪ್ರಗತಿಪರ ಶಾ ಸನೋಪಾಯಗಳನ್ನು ಅನುಸರಿಸುವಲ್ಲಿ ಇದು ಭಾರತದಲ್ಲಿಯೇ ಅಗ್ರಗಾಮಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಭಾರವಾದ ಅಭಿ ವೃದ್ಧಿ ಕ್ರಮಗಳನ್ನು ಕೈಗೊಂಡಿದ್ದರೂ ಆ ರ್ಥಿಕ ಪರಿಸ್ಥಿತಿಯು ಭದ್ರ ಮತ್ತು ತೃಪ್ತಿ ದಾಯಕವಾಗಿದೆ. ಸದ್ಯದ ಮುಂಬಯಿ ರಾಜ್ಯದಲ್ಲಿನ ಸಹಿಷ್ಣುತೆಯ ಪರಂಪರೆಯ ನ್ನು ಮುಂದರಿಸಿಕೊಂಡು ಹೋದರೆ, ಗು ಜರಾತಿಗಳನ್ನೂ ಮರಾಠಿಗರನ್ನೂ ಸ್ನೇಹ ಸೌಹಾರ್ದದ ಹಿನ್ನೆಲೆಯಲ್ಲಿ ಕಾರ್ಯಾಚ ರಣೆಗೆ ತರಬಹುದು ಎಂದು ಆಯೋಗ ಮನಗಾಣಿಸಲು ಪ್ರಯತ್ನಿಸಿದೆ.

ಎರಡು ಹೆಳಕ

ಇದಕ್ಕಾಗಿ ಅದು ಸಂಯುಕ್ತ ಮಹಾ ರಾಷ್ಟ್ರದ ಚಳವಳವು ಆಂಧ್ರ ಅಥವಾ ಕರ್ನಾಟಕದಷ್ಟು ಅಥವಾ ಮಹಾ ವಿದ ರ್ಭದ ಆಂದೋಲನದಷ್ಟು ಸಹ ಹಳೆಯ ದಲ್ಲ ಎನ್ನಲಿಕ್ಕೂ ಹಿಂಜರಿದಿಲ್ಲ. ಮಧ್ಯ ಪ್ರದೇಶ, ಹೈದರಾಬಾದು ಹಾಗು ಮುಂ ಬಯಿಗಳಲ್ಲಿರುವ ಮಹಾರಾಷ್ಟ್ರ ಪ್ರದೇ ಶಗಳನ್ನು ಮುಂಬಯಿ ನಗರವು ರಾಜ ಧಾನಿಯಾಗುಳ್ಳ ಸಂಯುಕ್ತ ಮಹಾರಾ ಷ್ಟ್ರ ರಾಜ್ಯವಾಗಿ ಒಂದು ಗೂಡಿಸಬೇಕೆಂ ದು ಅನೇಕ ವರ್ಷಗಳಿಂದ ಮರಾಠಿಗರು ಪ್ರ ಯತ್ನಿಸುತ್ತಿದ್ದಾರೆಂಬುದನ್ನು ಆಯೋಗ ಮರೆತಿಲ್ಲ. ಆದರೆ, ಇದರೊಡನೆ ಕಚ್ಛ, ಸೌರಾಷ್ಟ್ರ ಮತ್ತು ಮುಂಬಯಿ ರಾಜ್ಯ ದಲ್ಲಿರುವ ಗುಜರಾತಿ ಭಾಷಾ ಪ್ರದೇಶಗ ಳನ್ನೊಳಗೊಂಡ ಮಹಾ ಗುಜರಾತ ಪ್ರದೇಶವೂ ಬೆಳೆದು ಬಂದಿದೆ ಎಂದು ಗಮನಿಸಬೇಕಾಗಿ ಆಯೋಗ ಹೇಳುತ್ತದೆ. ಆದರೆ ಈ ಬೇ ಡಿಕೆಗೆ ಅಷ್ಟು ಒತ್ತಾಯವಿಲ್ಲ; ಆ ಭಾಷೆ ಯನ್ನಾಡುವವರಲ್ಲಿ ಮುಖ್ಯವಾದ ಗುಂಪು ಗಳು— ಇದರಲ್ಲಿ ಗುಜರಾತ ಪ್ರದೇಶ ಕಾಂಗ್ರೆಸು ಸಹ ಸೇರಿದೆ— ದೇಶದ ವಿಶಾ ಲ ದೃಷ್ಟಿಯಿಂದ ಹಾಗು ತಮ್ಮ ಜೀವಾ ಳವಾದ ಮುಂಬಯಿ ನಗರದ ದೃಷ್ಟಿಯಿಂ ದ, ಮಹಾ ರಾಷ್ಟ್ರೀಯರೊಂದಿಗೆ ಕೂಡಿ ಕೊಂಡು ದುಡಿಯಲು ಸಿದ್ಧರಿರುವುದಾಗಿ ಹೇಳಿವೆ ಎಂಬುದಕ್ಕೆ ಆಯೋಗ ಪ್ರಾಮು ಖ್ಯತೆಯನ್ನು ಕೊಟ್ಟಿದೆ.

ಗುಜರಾತಿಗಳ ಭಯ

ಇದಂದ ಧ್ವನಿಸುವ ಒಂದೇ ಮು ಖ್ಯ ವಿಷಯವೆಂದರೆ ಮುಂಬಯಿ ನಗರದ ಭವಿಷ್ಯ. ಇದರ ಮುಂದೆ ಸೌರಾಷ್ಟ್ರ ಮ ತ್ತು ಕಚ್ಛದ ಆರ್ಥಿಕ ನಾಶವಾಗುವ ಸಂ ಗತಿಯು ಗೌಣವಾಗಿದೆ. ಸೌರಾಷ್ಟ್ರವು ಚಿ ಕ್ಕ "ಬಿ" ವರ್ಗದ ರಾಜ್ಯ; ಆರ್ಥಿಯ ಜ ನಾಭಿಪ್ರಾಯವು, ಆಯೋಗದ ಹೇಳಿಕೆ ಯಂತೆ, ಮುಂಬಯಿ ರಾಜ್ಯದಲ್ಲಿರುವ ಇ ತರ ಗುಜರಾತಿ ಬಂಧುಗಳೊಡನೆ ನೂ ತನ ದ್ವಿಭಾಷಾ ರಾಜ್ಯವಾದ ಮುಂಬಯಿ ಯಲ್ಲಿ ಸೇರಲು ಅನುಕೂಲವಾಗಿದೆ. ಕಚ್ಛ ವು "ಸಿ" ವರ್ಗದ ಚಿಕ್ಕ ಪ್ರದೇಶವಾಗಿ ದ್ದು, ಇತರ ಕೇಂದ್ರ ನಿಯಂತ್ರಿತ ಭಾಗ ಗಳಿಗೆ ಅನ್ವಯವಾಗುವ ಅಭಿವೃದ್ಧಿ ಮಂ ಡಳವೊಂದು ಏರ್ಪಟ್ಟರೆ, ಅಲ್ಲಿಯ ಜನ ತೆಗೆ ತೃಪ್ತಿಯಾಗುತ್ತದೆ. ಭಾಷೆಗಾ ಗಿ ಗುಜರಾತಿಗಳಲ್ಲಿ ಯಾರೂ ಹೆಚ್ಚಿನ ಆಗ್ರಹವನ್ನು ವ್ಯಕ್ತಪಡಿಸುತ್ತಿಲ್ಲ. ಮುಂಬಯಿ ನಗರದ ಮೇಲೆ ಮಾತ್ರ ಅನರಿಗೆ ಬಹಳವಾದ ಆಶೆ ಇದೆ. ಏಕೆಂದರೆ ಗುಜರಾತವು ಎರಡೂವರೆ ಕೋಟಿ ರೂಪಾಯಿಗಳ ಕೊರತೆಯ ವಲ ಯವಾಗಿದೆ. ಮುಂಬಯಿ ನಗರವು ೧೨ ಕೋಟಿ ರೂಪಾಯಿಗಳಷ್ಟು ಉಳಿತಾ ಯವನ್ನು ರೂಪಾಯಿಸಿ ಕೊಡುವುದರಿಂದ ಅದರಲ್ಲಿ ಒಂದಾಂಶ ತಮಗೆ ಸಿಗಬೇಕೆಂಬು ದಕ್ಕಾಗಿ ಅವರು ಮುಂಬಯಿ ನಗರದ ಸಂಪರ್ಕವನ್ನು ಕಡಿದುಕೊಳ್ಳಲು ಹಿಂಜ ರಿಯುತ್ತಾರೆ. ಮರಾಠರು ಮುಂಬಯಿ ತಮಗೆ ಸೇರಬೇಕಾದ ನಗರ ಎಂದು ಕೇ ಳುತ್ತಿರುವಾಗ ಗುಜರಾತಿಗಳು ಅದನ್ನು ವಿರೋಧಿಸುತ್ತಿರುವುದಕ್ಕೆ ಇದು ಬಲವಾ ದ ಕಾರಣ. ಇದರೊಂದಿಗೆ, ಮುಂಬಯಿ ನಗರವು ಮಹಾರಾಷ್ಟ್ರದ ಭಾಗವಾದರೆ ಅಲ್ಲಿಯ ಔದ್ಯೋಗಿಕ ಹಾಗು ವಾಣಿಜ್ಯ ಕ್ಷೇತ್ರದಲ್ಲಿ ನಿರಕರಾದ ಗುಜರಾತಿಗಳ ಜೀವನದಲ್ಲಿ ಅಸಂತೃಷ್ಟಿ ಕಾಣಿಸಿಕೊಳ್ಳಬ ಹುದೆಂಬ ಹೆದರಿಕೆಯೂ ಸೇದೆ.

ಮರಾಠರ ಹೊಂಚು

ಮುಂಬಯಿ ನಗರದ ಕುರಿತಾದ ಅಧಿ ಕಾರವನ್ನು ಬಿಟ್ಟುಕೊಡಲು ಮರಾಠಿಗರು ಒಪ್ಪದಿರುವುದಕ್ಕೆ ಅದು ಮಹಾರಾಷ್ಟ್ರದ ಭೌಗೋಲಿಕ ಅಂಗವೆಂಬ ಕಾರಣಕ್ಕಿಂತ ಲೂ, ಮುಂಬಯಿ ವಿಹೀನ ಸಂಯುಕ್ತ ಮಹಾರಾಷ್ಟ್ರವು ಆರು ಕೋಟಿ ರೂಪಾ ಯಿಗಳ ಕೊರತೆಯ ಪ್ರದೇಶವಾಗುವುದೆಂ ಬುದೇ ಮುಖ್ಯ ಹೇತು. ಇದರ ಜೊ ತೆಗೆ ಮರಾಠಿಗರನ್ನು ಬಾಧಿಸುವ ಭಯ ವೆಂದರೆ ಸೂಚಿತ ಮುಂಬಯಿ ರಾಜ್ಯದಲ್ಲಿ ತಮ್ಮ ಸಂಖ್ಯಾ ಪ್ರಮಾಣವು ಉಳಿ ಗುವುದಾದರೂ ಗುಜರಾತಿಗಳೊಡನೆಯ ಶಸ್ವಿ ಸ್ಪರ್ಧೆ ಹೂಡುವಷ್ಟು ಇದು ಬಲ ವಾಗಲಾರದು ಎಂಬುದಾಗಿದೆ. ಆದುದರಿಂದ ಮುಂಬಯಿ ನಗರವನ್ನು ಮಹಾರಾಷ್ಟ್ರಕ್ಕೆ ಕೊಡುವುದು ಸಾಧ್ಯ ವಿಲ್ಲವಾದರೆ, ಮರಾಠಿ ಭಾಷೆಯ ಗುಂಪು ೬೫%ದಷ್ಟು ಪ್ರಧಾನವಾಗುಳ್ಳ ಸೂಚಿತ ವಿದರ್ಭವನ್ನು ಸೇರಿಸಿಕೊಂಡು ಹೊಸ ದ್ವಿಭಾಷಾರಾಜ್ಯವಾಗಿ ಮುಂಬಯಿಯ ನ್ನು ರಚಿಸಬೇಕೆಂದು ಮರಾಠರ ಬೇಡಿಕೆ ಯಾಗಿದೆ. ಇದರಿಂದ ನೂತನ ರಾಜ್ಯದಲ್ಲಿ ಮರಾಠರ ಸಂಖ್ಯಾ ಬಲವು ೬೦% ಆಗು ತ್ತದೆ; ವಿದರ್ಭವು ಒಂದೂವರೆ ಕೋಟಿ ರೂಪಾಯಿಗಳ ಉಳಿಕೆಯ ಪ್ರದೇಶವಾ ದುದರಿಂದ ಅದರ ಪ್ರಯೋಜನವನ್ನೂ ಪ ಡೆಯಬಹುದು—ಎಂದು ಮಹಾ ರಾಷ್ಟ್ರ ದ ಧುರೀಣರ ಹೊಂಚು.

ಪ್ರತ್ಯೇಕ ಘಟಕ ಹಿತವಲ್ಲ

ಆಯೋಗದವರು ಯಾವುದೇ ಭಾಷೆ ಯ ತಳಹದಿಯ ಮೇಲೆ ಮುಂಬಯಿ ನ ಗರದ ಭವಿಷ್ಯವನ್ನು ನಿರ್ಣಾಯಿಸಲು ಸಾ ಧ್ಯವಿಲ್ಲ ಎಂದಿದ್ದಾರೆ. ಮುಂಬಯಿ ನಗರ ವು ಭಾಷಾ ಪ್ರೇಮಿಗಳ ಛಿದ್ರಣೆಯ ಕೇಂದ್ರವಾಗುವುದೆಂಬ ವಿರೋಧವನ್ನು ಅ ವರು ಮೂಲೆಗೆ ತಳ್ಳಿದ್ದಾರೆ. ಮಹಾರಾ ಷ್ಟ್ರದ ಭೌಗೋಲಿಕ ಅಂಗವಾಗಿ ಈ ನ ಗರ ಇರಬಹುದಾದರೂ ಇಲ್ಲಿರುವ ಮಹಾ ರಾಷ್ಟ್ರೀಯರ ಪ್ರಮಾಣ ಳಳ್ಳಿ ಕೂಡಿಇಲ್ಲ; ಕಲ್ಕತ್ತ ಮತ್ತು ಮದ್ರಾಸು ನಗರಗಳಲ್ಲಿ ಯಾದರೆ ಅಲ್ಲಿ ಒಂದು ವಿಶಿಷ್ಟ ಭಾಷೆಯಾ ಡುವ ಜನರೇ ಮೂರರಲ್ಲಿ ಎರಡಂಶಕ್ಕಿಂತ ಲೂ ಹೆಚ್ಚಿದ್ದಾರೆ. ಮುಂಬಯಿ ನಗರದ ಲ್ಲಿ ಮರಾಠರ ಬಲವು ಹೀಗಿರುವುದಿಲ್ಲ. ಕಾರಣ, "ಭಾಷೆಯ ತಳಹದಿಯ ಮೇಲೆ ಮುಂಬಯಿ ನಗರದ ಭವಿಷ್ಯವನ್ನು ನಿರ್ಣಾ ಯಿಸುವುದು ಸಾಧ್ಯವಿಲ್ಲ.' ಎಂಬ ಜೆ. ವಿ. ಪಿ. ಸಮಿತಿಯ ತೀರ್ಮಾನವನ್ನು ಆಯೋ ಗವು ತನ್ನ ನಿರ್ಣಯದ ಸಮರ್ಥನೆಗಾಗಿ ಉದ್ಧರಿಸಿದೆ. ಈ ಸಮಿತಿಯೂ ದರ್ ಸಮಿತಿಯೂ ಮುಂಬಯಿಯನ್ನು ಪ್ರತ್ಯೇಕ ಘಟಕವಾಗಿ ಇಡಬಹುದು ಎಂದು ಹೇ ಳಿರುವುದಕ್ಕೆ ಮಾತ್ರ ಆಯೋಗ ಸಮ್ಮತಿ ಯನ್ನು ವ್ಯಕ್ತಪಡಿಸಿಲ್ಲ. ಮುಂಬಯಿ ನಗರದ ವಿಸ್ತಾರ್ಕಮತ್ತು ಜನಸಂಖ್ಯೆ ಇದ ಕ್ಕೆ ಪೋಷಕವಾಗಿಲ್ಲ; ಮತ್ತು ಬೃಹನ್ಮುಂ ಬಯಿಯ ವಿಮ್ಯಚ್ಛಕ್ತಿ ಹಾಗು ನೀರಿನ ಸೂರೈಕೆಗೆ ಮತ್ತು ನಗರದ ವಿಸ್ತರಣೆಗೆ ಮಹಾರಾಷ್ಟ್ರದ ಭಾಗಗಳನ್ನೆ ಅನಲಂ ಬಿಸಬೇಕಾಗುವುದರಿಂದ ಪ್ರತ್ಯೇಕ ಘಟಕ ವಾಗಿ ನಗರಸನ್ನಿಡುವುದು ಪ್ರಕಶ್ತವಲ್ಲ ಎಂದು ಆಯೋಗ ಭಾವಿಸಿದೆ.

"ವಿಶ್ವಪ್ರಜಾಲಕ್ಷಣ"

ಜೆ. ವಿ. ಪಿ. ಮತ್ತು ದರ್ ಸಮಿತಿಯವರು ಮುಂಬಯಿ ನಗರವನ್ನು ಭಾರತದ ಔದ್ಯೋಗಿಕ ಹಾಗು ವಾಣಿ ಜ್ಯ ಚಟುವಟಿಕೆಗಳ "ಕೀಲು" ಮತ್ತು "ಜೀವನಾಡಿ" ಎಂದು ಕರೆದಿದ್ದಾರೆ; ಹೊರ ಜಗತ್ತಿನೊಡನೆ ಸಂಪರ್ಕವಿರಿಸಿ ಕೊಳ್ಳಲು ಉಪಯುಕ್ತವಾದ ಮಹಾ ದ್ವಾರವೆಂದು ಭಾವಿಸಿದ್ದಾರೆ. ಈ ನಗರದ ಆಡಳಿತೆ ಒಮ್ಮೆಲೆ ಬದಲಾವಣೆ ಹೊಂ ದಿದರೆ, ಭಾರತದ ಸಾಮೂಹಿಕ ಪ್ರಗತಿ ಯ ಮೇಲೆ ಅನಿಷ್ಟ ಪರಿಣಾಮವಾದೀತೆಂಬ ಹೆದರಿಕೆಗೆ ಆಧಾರವಿದೆ ಎಂದಿದ್ದಾರೆ. ಇದರ ಹಿನ್ನೆಲೆಯಲ್ಲಿ ಫಜಲ ಅಲಿ ಆಯೋಗವು ಬೃಹನ್ಮುಂಬಯಿಯ ಮಹತ್ವವು ವಿಶೇಷವಾಗಿದೆ; ಅದನ್ನು ಪ್ರತ್ಯೇಕಿಸುವುದರಿಂದ ಭಾರತದ ಉನ್ನತಿಗೂ ಗುಜರಾತ ಮತ್ತು ಮಹಾರಾಷ್ಟ್ರ ಪ್ರದೇ ಶಗಳಿಗೂ ಕೂಡಿಯೇ ಹಾನಿಯಾಗುತ್ತದೆ ಎಂದಿದೆ. ಹೀಗೆ ಅದು ಸಮ್ಮಿಶ್ರ ಜನ ಸಂಖ್ಯೆಯಿಂದ ಕೂಡಿದ ಮುಂಬಯಿಯ ವಿಶ್ವ ಪ್ರಜಾ ಲಕ್ಷಣವನ್ನು ಕಾಯ್ದು ಕೊಂಡು ಹೋಗುವುದರಿಂದಲೇ ಶ್ರೀಮು ಸ್ಸೆಂದು ಒಪ್ಪಿರುತ್ತದೆ.

ವಿದರ್ಭ ಸೇರಲಾರದು

ಸಂಯುಕ್ತ ಮಹಾ ರಾಷ್ಟ್ರದ ಪ್ರತಿ ಪಾದಕರು ವಿದರ್ಭವ ಮೇಲೆ ತಮ್ಮ ದೃಷ್ಟಿಯನ್ನು ಚೆಲ್ಲಿದ್ದಾರೆ. ಆದರೆ ಆಯೋಗ ದವರು ವಿದರ್ಭದ ಮರಾಠಿಗರು ಸಂಯು ಕ್ತ ಮಹಾ ರಾಷ್ಟ್ರದ ರಚನೆಗೆ ಅನುಕೂ

ರಾಮತೀರ್ಥ ಬ್ರಾಹ್ಮೀ ತೈಲ

ಪೈಶ್ಚಲ್ ನಂ ೧] [ಪೇಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚು ತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನು ಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಸಕ್ಕೆಯಃ ದೊಡ್ಡ ಬಾಟ್ಲಿಗೆ ರೂ. ೫—೮—೦
ಸಣ್ಣ ಬಾಟ್ಲಿಗೆ ರೂ. ೩—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಅಕ್ಟೋಬರ್, ೧೯ರಲ್ಲಿ ಹೊಸ ರಾಜ್ಯಗಳ ಉದಯ

ದಿಲ್ಲಿಯ ಮುಖ್ಯ ಮಂತ್ರಿಗಳ ಪರಿಷತ್ತಿನ ನಿರ್ಣಯ

ಪೂರ್ವ ನಿರ್ಣಯದಂತೆ ಹೊಸ ದೆಹಲಿಯಲ್ಲಿ ಇದೇ ೨೬ನೇ ಮತ್ತು ೨೭ನೇ ದಿನಾಂಕ ರಾಜ್ಯಗಳ ಮುಖ್ಯ ಮಂತ್ರಿಗಳ ಪರಿಷತ್ತು ಜರಗಿತು. ಕೇಂದ್ರ ಮಂತ್ರಿ ಮಂಡಲದ ಸದಸ್ಯರೂ ವಿಶೇಷ ಆಹ್ವಾನದ ಮೇಲೆ ಕಾಂಗ್ರೆಸಾಧ್ಯಕ್ಷ ಶ್ರೀ. ಢೇಬರ್‌ರೂ ಈ ಪರಿಷತ್ತಿನಲ್ಲಿ ಭಾಗವಹಿಸಿ, ಫಜಲ ಅಲಿ ಆಯೋಗದ ವರದಿಯಿಂದ ಉದ್ಭವವಾದ ಪ್ರಶ್ನೆಗಳ ಕುರಿತು ಸಮಾಲೋಚನೆಗಳನ್ನು ನಡೆಸಿದರು.

ಕಾಸರಗೋಡು ತಾಲೂಕು

ರಾಜ್ಯಗಳ ಮುಖ್ಯ ಮಂತ್ರಿಗಳೆಲ್ಲ ತಂತಮ್ಮ ಅಧಿಕಾರ ಕ್ಷೇತ್ರದಲ್ಲಿ ವ್ಯಕ್ತವಾದ ಸಾಮಾನ್ಯ ಪ್ರತಿಕ್ರಿಯೆಗಳನ್ನು ವಿವರಿಸಿದರು. ಮದ್ರಾಸು ಸರಕಾರದ ಪರವಾಗಿ ಮುಖ್ಯ ಮಂತ್ರಿ ಶ್ರೀ ನಾಡಿರೊಡನೆ ತೆರಳಿದ್ದ ಕೃಷಿ ಮಂತ್ರಿ ಶ್ರೀ. ಭಕ್ತವತ್ಸಲು ಮರು ದಕ್ಷಿಣ ಕನ್ನಡ ಜಿಲ್ಲೆಯಿಂದ ಕಾಸರಗೋಡು ತಾಲೂಕನ್ನು ಇಡಿಯಾಗಿ ಕೇರಳಕ್ಕೆ ಸೇರಿಸಬಾರದೆಂಬ ನಿವೇದಿಸಿದರು. ಮಲಬಾರಿನ ಕಾಂಗ್ರೆಸಿಗರು ಕೇರಳ ದೊಡನೆ ಸೇರಲು ಉತ್ಸುಕರಾಗಿಲ್ಲವೆಂದೂ ಅವರು ತಿಳಿಸಿದರು.

ಕರ್ನಾಟಕ ಏಕೀಕರಣ

ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಸಂಯುಕ್ತ ಕರ್ನಾಟಕ ರಾಜ್ಯವನ್ನು ರಚಿಸುವ ಕುರಿತು ಭಿನ್ನಾಭಿಪ್ರಾಯ ವ್ಯಕ್ತವಾಗುತ್ತಿದ್ದರೂ ಆಯೋಗದ ಸೂಚನೆಯಂತೆಯೇ ಹೊಸ ರಾಜ್ಯ ತಲೆ ಎತ್ತುವ ಆಶಯವನ್ನು ವ್ಯಕ್ತಪಡಿಸಿದರು. ಬಳ್ಳಾರಿಯ ಮುಖ್ಯ ಪ್ರಶ್ನೆಯ ಕುರಿತು ಅವರೇನಾದರೂ ಹೇಳಿದರೆ ಎಂಬ ವಿಷಯವು ಪ್ರಕಟವಾಗಿಲ್ಲ. ಆದರೆ "ಎರಡು ಕರ್ನಾಟಕ"ಗಳ ಪ್ರತಿಪಾದಕರಾದ ಶ್ರೀ ಕಡಿದಾಳ ಮಂಜಪ್ಪನವರನ್ನು ಏಕೀಕರಣದ ಟೆಂಬಲಿಗರಾದ ಶ್ರೀ ಸಿದ್ಧ ವೀರಪ್ಪನವರನ್ನೂ ಅವರು ಅವಸರದಿಂದ ಹೊಸದಿಲ್ಲಿಗೆ ಫೋನಿನ ಕರೆಯನ್ನಿತ್ತು ಬರಮಾಡಿಕೊಂಡಿದ್ದರು.

ವಿಶಾಲಾಂಧ್ರದ ನಿರ್ಮಾಣ

ಹೈದರಾಬಾದನ್ನು ಒಡೆಯುವ ಸೂಚನೆಯನ್ನು ಆಯೋಗ ಮಾಡಿರುವುದಕ್ಕೆ ಸಾಮಾನ್ಯ ಸ್ವಾಗತ ದೊರಕಿದೆ ಎಂದು ಆ ರಾಜ್ಯದ ಮುಖ್ಯ ಮಂತ್ರಿಗಳು ಹೇಳಿದರು. ಆದರೆ ತೆಲಂಗಾಣವನ್ನು ರಚಿಸಿ ನೇ ಇಷ್ಟವಿಲ್ಲ ವರೆಗೆ ಪ್ರತ್ಯೇಕವಾಗಿಡಬೇಕೆಂಬ ಆಯೋಗದ ಸೂಚನೆಗೆ ಸಾಕಷ್ಟು ವಿರೋಧವಿದೆ ಎಂದರು. ಆಂಧ್ರದ ಮುಖ್ಯ ಮಂತ್ರಿ ಶ್ರೀ. ಗೋಪಾಲರೆಡ್ಡಿಯವರು ವಿಶಾಲಾಂಧ್ರದ ರಚನೆ ಕೂಡಲೇ ಆಗಬೇಕೆಂದು ಪ್ರತಿಪಾದಿಸಿದರು. ಈ ಬಗ್ಗೆ ಒಮ್ಮತದ ಅಭಿಪ್ರಾಯವಿದೆ ಎಂದವರು ನುಡಿದರು.

ಇತರರ ಅಭಿಮತ

ನಿಮಾಚಲ ಪ್ರದೇಶವನ್ನು ಪಂಜಾಬಿಗೆ ಸೇರಿಸಬಾರದು; ಮಧ್ಯ ಭಾರತವನ್ನೂ ಭೋಪಾಳವನ್ನೂ ವಿಂಧ್ಯ ಪ್ರದೇಶವನ್ನೂ ಮಧ್ಯಪ್ರದೇಶದೊಂದಿಗೆ ಸೇರಿಸಬಾರದು ಎಂದು ಹೇಳಲಾಯಿತು. ಆದರೆ ಮಧ್ಯ ಪ್ರದೇಶ ಹಾಗು ಪಂಜಾಬಿನ ಮುಖ್ಯ ಮಂತ್ರಿಗಳು ಇದಕ್ಕೆ ವಿರುದ್ಧವಾಗಿ ವಾಕ್ಚಾತುರ್ಯವನ್ನು ಪ್ರದರ್ಶಿಸಿದರು. ಆಯೋಗದ ಸೂಚನೆಯನ್ನೆ ಸಮರ್ಥಿಸಿದರು. ಉತ್ತರ ಪ್ರದೇಶವನ್ನು ವಿಭಜಿಸಬಾರದೆಂದು ಅಲ್ಲಿಯ ಮುಖ್ಯ ಮಂತ್ರಿ ಡಾ ಸಂಪೂರ್ಣಾನಂದರು ಹೇಳಿದರು. ಮುಂಬಯಿಯ ಮುಖ್ಯ ಮಂತ್ರಿಗಳು ಮಹಾರಾಷ್ಟ್ರದ ನಾಯಕರು ಪುಣೆಯಲ್ಲಿ ಮೊನ್ನೆ ಸ್ವೀಕರಿಸಿದ ಗೊತ್ತುವಳಿಯ ಕಡೆಗೆ ಗಮನವನ್ನು ಸೆಳೆದರು.

ಮಾಡಲಾದ ನಿರ್ಣಯ

ಪರಿಷತ್ತಿನಲ್ಲಿ ಮುಂದಿನ ಕೆಲಸಗಳ ಪರ್ಯಾಲೋಚನೆಯು ನಡೆದು ಸಾಮಾನ್ಯವಾಗಿ ಕೆಳಗಿನ ನಿರ್ಧಾರವಾಯಿತು—(೧) ಸಂಬಂಧಿಸಿದ ಪಕ್ಷಗಳ ಪರಸ್ಪರ ಸಮ್ಮತಿಯಿಂದ ಆಯೋಗದ ಸೂಚನೆಗಳಲ್ಲಿ ತಿದ್ದುಪಡಿಯನ್ನು ಮಾಡಬಹುದು; ಇದಕ್ಕೆಳಪಟ್ಟು ವರದಿಯನ್ನು ಅಂಗೀಕರಿಸಬೇಕು (೨) ಮುಂದಿನ ಅಕ್ಟೋಬರದಲ್ಲಿ ಹೊಸರಾಜ್ಯಗಳನ್ನು ಅಸ್ತಿತ್ವದಲ್ಲಿ ತರಬೇಕು ಮತ್ತು ಚುನಾವಣೆಯನ್ನು ಗಣನೀಯ ವಾರ್ಷಿಕ—ಏಪ್ರಿಲ್‌ಗಳಲ್ಲಿ ನಡೆಸಬೇಕು. ಇದರಿಂದ, ರಾಜ ಪ್ರಮುಖರ ಸ್ಥಾನವನ್ನು ರದ್ದುಪಡಿಸಲು ಎಲ್ಲ ಮುಖ್ಯ ಮಂತ್ರಿಗಳೂ ಒಪ್ಪಿದಂತಾಗಿದೆ. ವಿವಿಧ ರಾಜ್ಯಗಳ ಶಾಸನಾಂಗದ ಅಭಿಪ್ರಾಯವನ್ನು ಗಣನೀಯ ಪ್ರಮಾಣದಲ್ಲಿ ಪಡೆಯಬಹುದೆಂಬ ಮತ್ತೆ ಮೂರು ತಿಂಗಳೊಳಗಾಗಿ ಸಂಪತ್ತಿನಲ್ಲಿ ರಾಜ್ಯಗಳ ಸುನಗಳ್ಳಿಟನೆಯ ಶಾಸನವನ್ನು ಮಂಜೂರು ಮಾಡಿಸಿಕೊಳ್ಳಬಹುದೆಂದೂ ಭಾವಿಸಲಾಗಿದೆ.

ವೆಂಬ ಆಯೋಗದ ತೀರ್ಮಾನಕ್ಕೆ ಸಂಗತವಾಗಿಲ್ಲ. ಈ ಕಾರಣದಿಂದಲೂ ಮರಾಠರು ತಮ್ಮ ಹೊಸ ಗೊತ್ತುವಳಿಯ ಮೂಲಕ ಮೊನ್ನೆ ದ್ವಿಭಾಷಾ ತತ್ವಕ್ಕೆ ಸಮ್ಮತಿ ವ್ಯಕ್ತಪಡಿಸಿ, ತಮ್ಮ ವಾದದ ಬೇರನ್ನೆ ಸ್ವಂತ ಕೈಯಿಂದ ಕಿತ್ತು ತೆಗೆದಂತಾಗಿರುವುದರಿಂದಲೂ ಗುಜರಾತಿಗಳೂ ಮಂತ್ರಿಗಳೂ ಪರಸ್ಪರ ತಿಳಿವಳಿಕೆಗೆ ಬಾರದೆ ಹೋದರೆ, ಆಯೋಗದ ಸೂಚನೆಯೇ ಅಂಗೀಕಾರವಾಗುವ ಸಂಭವ ಹೆಚ್ಚು

ಲರಾಗಿಲ್ಲವೆಂದು ನಿರ್ಣಯಕ್ಕೆ ಬಂದಿದ್ದಾರೆ. ಈಗಿನ ಮಧ್ಯ ಪ್ರದೇಶದ ಸರಕಾರವು ಮರಾಠಿ ಮಾತನಾಡುವ ಸೂಚಿತ ವಿದರ್ಭ ರಾಜ್ಯದ ಜಿಲ್ಲೆಗಳ ಅಭಿವೃದ್ಧಿಗೆ ಸಾಕಷ್ಟು ಗಮನ ಹರಿಸುತ್ತಿಲ್ಲ ಎಂಬುದರಿಂದ ಉಂಟಾದ ರಾಜಕೀಯ ಘರ್ಷಣೆಯು ಸಂಯುಕ್ತ ಮಹಾರಾಷ್ಟ್ರದಲ್ಲಿ ಸೇರಿ ಹೋದರೆ, ಅಥವಾ ಸೂಚಿತ ದ್ವಿಭಾಷಾ ರಾಜ್ಯ ಮುಂಬಯಿಯಲ್ಲಿ ಸೇರಿ ಹೋದರೆ ವಿದರ್ಭದ ಪಾಲಿಗೆ ನಿವಾರಣೆಯಾಗದು ಏಕೆಂದರೆ ವಿದರ್ಭದ ಉಳಿಕೆಯ ಹಣವು ಸ್ಥಳೀಯ ಅಭಿವೃದ್ಧಿಗೆ ವಿನಿಯೋಗವಾಗದೆ, ಮಹಾರಾಷ್ಟ್ರದ ಕೊರತೆಯನ್ನು ತುಂಬಿಸಲು ವಿನಿಯೋಗವಾಗುವ ಸಂಭವವೇ ಹೆಚ್ಚು. ವಿದರ್ಭವನ್ನು ಪ್ರತ್ಯೇಕ ರಾಜ್ಯವಾಗಿಡದಿದ್ದರೆ, ಮುಂಬಯಿ ನಗರದ ಮುಂದೆ ನಾಗಪುರದ ಪ್ರಭಾವವೇ ಇಲ್ಲವಾಗುತ್ತದೆ! ಅದಲ್ಲದೆ, ವಿದರ್ಭದ ಜನರಿಗೆ ಮುಂಬಯಿಯು ಭೂಸುಧಾರಣೆ ಇತ್ಯಾದಿ ಕ್ರಮಗಳೊಡನೆ ಬೇಗನೆ ಹೊಂದಿಕೊಳ್ಳುವುದು ಸಹ ಕಷ್ಟವಾಗುತ್ತದೆ. ಸ್ಥಳೀಯರ ಈ ನಿಷೇಧ ಭಾವನೆಯು ಸ್ವತಃ ಸಂಯುಕ್ತ ಮಹಾರಾಷ್ಟ್ರದ ಪ್ರತಿಪಾದಕರ ಮನಸ್ಸಿಗೂ ನಾಟಿದ್ದು, ಅಕೋಲ ಮತ್ತು ನಾಗಪುರ-ಒಪ್ಪಂದಗಳನ್ವಯ ವಿದರ್ಭಕ್ಕೆ ಅನೇಕ ರಿಯಾಯಿತಿಗಳನ್ನೂ ಆಶ್ವಾಸನೆಗಳನ್ನೂ ಇವರು ಕೊಡಮಾಡಿದ್ದಾರೆ. ಆದರೆ ಅಯೋಗವು ಇವುಗಳ ವ್ಯಾವಹಾರಿಕತೆಯ ಕುರಿತು ಸಂದೇಹ ಸೂಚಿಸಿ, ವಿದರ್ಭವನ್ನು ಪ್ರತ್ಯೇಕ ರಾಜ್ಯವಾಗಿಡುವುದೇ ಲೇಸೆಂದು ತೀರ್ಮಾನಿಸಿರುತ್ತದೆ

ಭವಿಷ್ಯತ್ತಿನ ಚಿತ್ರ

ಪುಣೆಯಲ್ಲಿ ಸೇರಿದ ಮಹಾರಾಷ್ಟ್ರ ಪ್ರದೇಶಕಾಂಗ್ರೆಸು ವಿದರ್ಭವನ್ನೊಳಗೊಂಡು ಎಲ್ಲ ಮಹಾರಾಷ್ಟ್ರ ಪ್ರದೇಶಗಳನ್ನೂ ಗುಜರಾತಿ ಪ್ರದೇಶಗಳನ್ನೂ ಮುಂಬಯಿ ನಗರವು ರಾಜಧಾನಿಯಾಗಿರುವ ದ್ವಿಭಾಷಾ ರಾಜ್ಯದಲ್ಲಿ ಸೇರಿಸಬೇಕು; ಐದು ವರ್ಷಗಳ ಬಳಿಕ ಗುಜರಾತಿಗಳು ಬೇಕಾದರೆ ಪ್ರತ್ಯೇಕ ರಾಜ್ಯ ರಚಿಸಿಕೊಳ್ಳಬಹುದು—ಎಂಬ ಪ್ರತಿ ಸೂಚನೆಯನ್ನು ಮುಂದಿಟ್ಟಿದೆ. ಇದಕ್ಕೆ ವಿದರ್ಭದ ಮರಾಠರು ಒಪ್ಪುವ ಪ್ರಶ್ನೆಯಲ್ಲ, ಗುಜರಾತಿಗಳು ಸಹ ಸಮ್ಮತಿ ವ್ಯಕ್ತಪಡಿಸಿಲ್ಲ. ಏಕೆಂದರೆ, ವಿದರ್ಭದ ಸೇರ್ಪಡೆಯಿಂದ ಮರಾಠರ ಸಂಖ್ಯಾಬಲ ಹೆಚ್ಚುತ್ತದೆ; ಅಲ್ಲದೆ, ಮುಂಬಯಿ ನಗರವನ್ನು ಪ್ರತ್ಯೇಕವಾಗಿಡಬೇಕೆಂಬ ನಿಲುಮೆಯನ್ನೂ ಇದು ಮೂಲೆಗುಂಪಾಗಿಸುತ್ತದೆ. ಗುಜರಾತಿಗಳ ಭಯವು ವಿದರ್ಭದವರ ಸಂಶಯತ್ಕೆಂತಲೂ ಹೆಚ್ಚು ಮಕ್ಕತ್ವದ್ದೆಂದು ಕಾಂಗ್ರೆಸು ವರಿಷ್ಠರ ಅಭಿಮತವಾಗಿದೆ. ಇದಲ್ಲದೆ ಮುಂಬಯಿ ರಾಜ್ಯದ ವಿಸ್ತಾರವು ಸುಗಮ ಆಡಳಿತಕ್ಕೆ ಅನುಕೂಲವಾದ ವಿಸ್ತಿಗಿಂತಲೂ ಮಿಕ್ಕಿ ಹೋಗುತ್ತದೆ. ಆ ಮೂದರಿಂದ ಮುಂಬಯಿ ನಗರದ ಮೇಲಿನ ಅಧಿಕಾರವನ್ನು ತ್ಯಜಿಸಿದರೆ ಮಾತ್ರ ಸಂಯುಕ್ತ ಮಹಾರಾಷ್ಟ್ರವನ್ನು ರಚಿಸಬಹುದು; ಮತ್ತಿದರಲ್ಲಿ ಸೇರಿಕೊಳ್ಳುವಂತೆ, ವಿದರ್ಭದ ಮನವೊಲಿಸಬಹುದು ಎಂದು ಅವರು ಹೇಳಿದ್ದಾರೆ. ಆದರೆ ಇದು ಮುಂಬಯಿ ನಗರವನ್ನು ಪ್ರತ್ಯೇಕ ಘಟಕವಾಗಿಡಲು ಸಾಧ್ಯವಿಲ್ಲ

ಕರ್ನಾಟಕದ ವಲಯಗಳು

ಅನ್ಯಾಯವನ್ನು ತಿದ್ದಲು ಒತ್ತಾಯ

ನಿಯೋಜಿತ ಕರ್ನಾಟಕ ರಾಜ್ಯದಲ್ಲಿ ಈಗ ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧಿಕಾರದಲ್ಲಿರುವ ಭೂಭಾಗವಾದರೂ ಇರಬೇಕು ಎಂದು ಅಧ್ಯಕ್ಷ ಶ್ರೀ ಅಂಬಲಿಯವರು ಒತ್ತಾಯಿಸಿದ್ದಾರೆ. ಕರ್ನಾಟಕದ ಭಾಗವನ್ನು ಬೇರೆ ಬೇರೆ ಕಾರಣಗಳನ್ನು ಮುಂದಿಟ್ಟು, ಸುತ್ತು ಮುತ್ತಲಿನ ರಾಜ್ಯಗಳಲ್ಲಿ ಸೇರಿಸಿರುವುದು ಸರಿಯಲ್ಲ ಎಂದವರು ವಾದಿಸಿದ್ದಾರೆ.

ಬಸವಣ್ಣನವರ ಕಲ್ಯಾಣ

ಉತ್ತರದಲ್ಲಿ ಬೀದರ ಜಿಲ್ಲೆಯ ಒಂದಂಶವಾದರೂ ಕನ್ನಡದ ನೆಲವಾಗಿ ಗಣಿಸಲ್ಪಡಿಬೇಕಾಗಿದೆ; ಅನುಭವಿ ಬಸವಣ್ಣನವರ ಕಲ್ಯಾಣ ನಗರವಿರುವ ಬೀದರದ ಭಾಗವು ಕನ್ನಡಿಗರ ಪಾಲಿನ ಪುಣ್ಯಕ್ಷೇತ್ರಗಳಲ್ಲಿ ಒಂದಾಗಿದೆ. ಬೀದರ ಜಿಲ್ಲೆಯ ಈ ಪಾರ್ಶ್ವವನ್ನು ಕರ್ನಾಟಕದಲ್ಲಿ ಸೇರಿಸಲು ಸಾರ್ವಜನಿಕಾಭಿಪ್ರಾಯವು ಅನುಕೂಲವಾಗಿದೆ. ನಿಜ ಹೇಳಬೇಕೆಂದರೆ ಆ ಇಡೀ ಜಿಲ್ಲೆಯನ್ನು ಭಾಷಾನುಗುಣವಾಗಿ ಒಡೆದು ತೆಲುಗು, ಕನ್ನಡ ಹಾಗು ಮರಾಠಿ ಪ್ರದೇಶಗಳಿಗೆ ಸೇರಿಸಬೇಕೆಂದು ಜಿಲ್ಲಾ ಕಾಂಗ್ರೆಸು ಸೂಚಿಸಿದೆ.

ವಿಜಯ ನಗರದ ಹಂಪೆ

ವಿದ್ಯಾರಣ್ಯರ ಕೃಪೆಯಿಂದ ರೂಪುಗೊಂಡ ಕನ್ನಡಿಗರ ಚಿರಸ್ಮರಣೀಯ ರಾಜ್ಯವಾದ ವಿಜಯ ನಗರದ ರಾಜಧಾನಿ ಹಂಪೆಯನ್ನು ಆಂಧ್ರದ ಪಾಲಿಗೆ ಕೊಡಮಾಡಿದ ಆಯೋಗದ ವರದಿಯು ಬಳ್ಳಾರಿಯ ಕನ್ನಡಿಗರಲ್ಲಿ ತೀವ್ರ ಅಂತಃಸ್ಫೋಟವನ್ನು ಹುಟ್ಟಿಸಿದೆ. ತುಂಗಭದ್ರೆಯ ಆಣೆಕಟ್ಟಿನ ನೆಪವನ್ನು ಆಯೋಗ ಮುಂದಿಟ್ಟಿದ್ದರೂ ಈ ಸಂಬಂಧದ ಆಂಕೆ ಸಂ

(ಆನೇ ಸುದ್ದಿ ನೋಡಿರಿ)

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:— (1) ಉಡುಪಿ (2) ಮುನಾತ ಗಲ್ಲಿ, ಹುಬ್ಬಳ್ಳಿ.

Tel: "MENONCO." Phone: No. 671. **T. N. MENON & COMPANY**
Wholesale & retail merchants in:- Sole-crepe, Plastic-Sheets, All kinds of Leathers, Leather goods, Leather-cloth, Wax, Thread, Twine, Panel Pins, Paper, Straw-board, Students' Note-Book, Zip Fasteners, Batteries, Photo-Frames, Tarpaulin, Ply-wood, Wire Mesh & All items of Fittings & Making materials for Foot-wears, Suit-cases, Hand bags, Money-purses, Steel-Trunks, Etc. Etc.
POST BAG No. 1, BEACH ROAD, QUILON.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೭-೧೦-೧೯೩೮	೯

ಪ್ರಾಥಮಿಕ ಶಿಕ್ಷಣ

ವಿದ್ಯಾಸು ಸರಕಾರದವರು ೧೯೩೫ ನೇ ನವಂಬರದಲ್ಲಿ ರಾಜ್ಯದಲ್ಲಿರುವ ಪ್ರಾಥಮಿಕ ಶಿಕ್ಷಣ ಪದ್ಧತಿಯ ಪ್ರಶ್ನೆಯನ್ನು ವಿಮರ್ಶಿಸಿ, ಸಂವಿಧಾನದ ಆದೇಶದ ಮೇರೆಗೆ ಎಲ್ಲ ಮಕ್ಕಳಿಗೂ ಧರ್ಮಾರ್ಥವಾಗೂ ಒತ್ತಾಯದ ಶಿಕ್ಷಣವನ್ನು ಸಿಗುವಂತೆ ಮಾಡಲು ಶ್ರೀ| ಅಳಗಪ್ಪ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದರು. ಈ ಸಮಿತಿಯು ವರದಿಯ ಪೂರ್ತಿ ಪಾಠವು ಕಳೆದ ವಾರ ಪ್ರಕಟವಾಗಿದೆ. ವರದಿಯನ್ನು ನೋಡಿದರೆ, ಅದು ಯಾವುದೇ ನಿರ್ದಿಷ್ಟ ವಿಷಯದ ಕುರಿತು ಕ್ರಾಂತಿಕಾರಿಯಾದ ಸೂಚನೆಗಳನ್ನು ಮಾಡಿಲ್ಲವೆಂದೆನಿಸುತ್ತದೆ; ಆಲ್ಲದೆ, ಮಾಡಿದ ಸೂಚನೆಗಳ ಉಪಯುಕ್ತತೆಯು ಸಹ ಸಂಶಯಾಸ್ಪದವಾಗಿದೆ. ಹಿಂದೆ ರಾಜ್ಯದಲ್ಲಿ ಶ್ರೀ ಸಿ. ರಾಜಗೋಪಾಲಾಚಾರ್ಯರು ಮುಖ್ಯ ಮಂತ್ರಿಗಳಾಗಿದ್ದಾಗ ತಂದಿದ್ದ ಪರಿಶ್ಕೃತ ವಿದ್ಯಾಭ್ಯಾಸ ಪದ್ಧತಿಯನ್ನು ಹಿನ್ನೆಲೆಯಲ್ಲಿಟ್ಟು ನೋಡಿದರೆ, ಆ ಪದ್ಧತಿಗೆ ಚೆಟ್ಟಿಯಾರರ ಸಮಿತಿಯು ತಿಲಾಂಜಲಿಯನ್ನು ಕೊಟ್ಟಿದೆ ಎಂದೇ ಹೇಳಬೇಕಾಗುತ್ತದೆ. ಮಂತ್ರಿ ಶ್ರೀ ಸುಬ್ಬರಾಯ್ಯನವರು ರಾಜಾಜಿಯ ಪದ್ಧತಿಯಲ್ಲಿ ಕೆಲವಂಶವನ್ನು ಈ ಸಮಿತಿ ಉಸಯುಕ್ತವಾಗಿ ಗ್ರಹಿಸಲೂ ಬಹುದೆಂಬ ಆಶಯದ ಮಾತನ್ನಾಡಿದ್ದರು. ಇಂದು ಅದಕ್ಕೆ ಬೆಲೆಯೇ ಇಲ್ಲವೆಂದು ಸ್ಪಷ್ಟವಾಗಿದೆ. ಮೂರು ತಾಸುಗಳ ಪುಸ್ತಕೀಯ ವಿದ್ಯಾಭ್ಯಾಸವನ್ನು ನೀಡಿ, ಉಳಿದ ಸಮಯ ಮಕ್ಕಳಿಗೆ ಸ್ವೇಚ್ಛೆಯಿಂದ ವೃತ್ತಿ ಶಿಕ್ಷಣ ಪಡೆಯಲು ಬಿಡುವುದೇ ರಾಜಾಜಿಯು ತಂದಿದ್ದ ಪದ್ಧತಿಯ ವೈಶಿಷ್ಟ್ಯ. ಇದರಿಂದ ಎರಡು ಪಾಳಿಗಳನ್ನು ಶಾಲೆಗಳಲ್ಲಿ ನಡೆಸಬಹುದು; ಮತ್ತು ಈಗ ಶಾಲೆಗೆ ಹೋಗುತ್ತಿರುವ ೫೦% ಮಕ್ಕಳಿಗೆ ಹೊಸ ಶಾಲೆಗಳಿಲ್ಲದೆಯೇ ವಿದ್ಯಾಭ್ಯಾಸವನ್ನು ಕೊಡಿಸಬಹುದು—ಎಂದವರು ಅಭಿಪ್ರಾಯಪಟ್ಟಿದ್ದರು. ಹೊಸ ಸಮಿತಿಯು ಮೂರು ತಾಸುಗಳ ವರೆಗೆ ಕೇವಲ ಪುಸ್ತಕೀಯ ವಿದ್ಯಾಭ್ಯಾಸ ಕೊಡುವುದರಿಂದ ಮಕ್ಕಳ ಮಾನಸಿಕ ಪರಿಶ್ರಮ ಹೆಚ್ಚುವುದೆಂದೂ ಪುಸ್ತಕೀಯ ವಿದ್ಯಾಭ್ಯಾಸವು ಎಷ್ಟು ಪಟ್ಟಯಂತೆ ಎರಡೂವರೆ ತಾಸುಗಳಷ್ಟು ಮಾತ್ರವಿದ್ದರೂ ಇದನ್ನು ಇತರ ಚಟುವಟಿಕೆಗಳ ಸಡಿಲವಾದ ಐದು ತಾಸಿನ ಅವಧಿಯಲ್ಲಿ ಸ್ವಲ್ಪ ಸ್ವಲ್ಪವೇ ನೀಡುತ್ತಿರುವ ಕ್ರಮವೇ ಹಿತಕರವೆಂದೂ ಹೇಳಿದೆ. ಇದನ್ನು ಒಪ್ಪಿಕೊಳ್ಳಲೇನೊಬಹುದು-ಆದರೆ ಎಲ್ಲ ಮಕ್ಕಳಿಗೂ ಶಿಕ್ಷಣ ಕೊಡುವುದಕ್ಕೆ ಅ ದೇನು ವ್ಯವಸ್ಥೆ ಮಾಡಿದೆ? ೩೦೦ ಜನ ವಸತಿಯುಳ್ಳ ಪ್ರತಿಯೊಂದು ಹಳ್ಳಿಗೆ ಶಾಲೆ ಇರಬೇಕೆಂದು ಸಮಿತಿ ಹೇಳಿದೆ; ಈ ಶಾಲೆಗಳಲ್ಲಿ ಧರ್ಮಾರ್ಥವಾಗಿ ಶಿಕ್ಷಣವನ್ನು ನೀಡಬೇಕಲ್ಲದೆ ಮಕ್ಕಳಿಗೆ ಬೇಕಾದ ಸ್ಲೇಟು, ಕಡ್ಡಿ, ಪುಸ್ತಕಾದಿಗಳನ್ನೂ ಮಧ್ಯಾಹ್ನದ ಊಟವನ್ನೂ ಪುಕ್ಕಟೆಯಾಗಿ ಒದಗಿಸಬೇಕೆಂದು ಸಮಿತಿ ಸೂಚಿಸಿದೆ. ಇದು ಸರಕಾರದ ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಎಷ್ಟರ ಮಟ್ಟಿಗೆ ವ್ಯವಹಾರ್ಯವಾಗಿದೆಯೋ ಸಂಶಯಾಸ್ಪದವಾದ ವಿಷಯ; ಹೊರತು ವಿಶೇಷವಾದ ಆತಿಯನ್ನೇನೂ ಕಟ್ಟಿಕೊಳ್ಳುವಂತಿಲ್ಲ. ಶಾಲೆಗಳ ಆಡಳಿತದ ವಿಷಯದಲ್ಲಿ ಸಮಿತಿಯು ಮಾಡಿದ ಸಿಫಾರಸ್ಸನ್ನು ನೋಡಿದರೆ ಹೊಸ ಶಾಲೆಗಳನ್ನು ತೆರೆಯುವುದು ಈಗಿನಷ್ಟು ಸುಲಭದ ಕೆಲಸವೆಂದು ಹೇಳಲಿಕ್ಕಾಗುವುದಿಲ್ಲ. ಇನ್ನು ಮುಂದೆ ಗ್ರಾಮ ಪಂಚಾಯತುಗಳೂ ಜಿಲ್ಲಾ ಬೋರ್ಡುಗಳೂ ಶಾಲೆಗಳನ್ನು ನಡೆಸಕೂಡದು; ನಗರ ಸಭೆಗಳೂ ಪ್ರಾದೇಶಿಕ ಮಂಡಳಗಳೂ ಈ ಹೊಣೆಯನ್ನು ಹೊರಬೇಕು ಎಂದು ಮಾಡಿದ ಸೂಚನೆ ಸಬಲ ಕಾರಣಗಳನ್ನೇನೂ ಹೊಂದಿಲ್ಲ; ಅದು ತರ್ಕಬದ್ಧವಾದ ಸೂಚನೆಯೂ ಅಲ್ಲ. ಖಾಸಗಿ ಆಡಳಿತದಿರುವ ಶಾಲೆಗಳಿಗೆ ಇಲ್ಲ "ಆಡಳಿತ ಮಂಡಳಿ" ರಚಿಸಬೇಕೆಂದು ಹೇಳಿರುವುದೆಂತೂ ಉತ್ಸಾಹಿಗಳನ್ನು ನಿರುತ್ತೇಜಿಸುವಂತಿದೆ; ಏಕೆಂದರೆ ಎಲ್ಲೋ ಒಬ್ಬ ಉತ್ಸಾಹಿಯ ಫಲವಾಗಿಯೇ ಇಂದು ಹಳ್ಳಿಗಳಲ್ಲಿ ಶಾಲೆಗಳು ಹೊಸದಾಗಿ ತೆರೆಯಲ್ಪಡುತ್ತಿವೆಯೇ ಹೊರತು, ಗ್ರಾಮಸ್ಥರಲ್ಲಿ ಪ್ರಮುಖರಾದವರು ಒಗ್ಗಟ್ಟಿನಿಂದ ಬೆಂಬಲ ನೀಡುವರೆಂಬ ಭೀತಿಯಿಲ್ಲ. ವಿಕೋವಾಧ್ಯಾಯ ಶಾಲೆಗಳ ಹುಟ್ಟಂತೂ ಇದೇ ರೀತಿಯಲ್ಲಿದೆ ಎಂದರೆ ತಪ್ಪಾಗದು. ಆದುದರಿಂದ ಶಾಲಾ ಮಂಡಳದಲ್ಲಿ ಸದುದ್ದೇಶದಿಂದ ಸೇರುವ ಜನರು ವಿರಳವಾಗುತ್ತಾರೆ; ಸರಕಾರದ ಒಬ್ಬಿಬ್ಬರು ಸದಸ್ಯರು ಈ ಮಂಡಳದಲ್ಲಿರಬೇಕೆನ್ನುವುದಂತೂ ತೀರ ಹಾಸ್ಯಾಸ್ಪದವಾಗಿದೆ. ಸರಕಾರವು ಎಷ್ಟು ಮಂದಿಯನ್ನು ಹೀಗೆ ನೇಮಿಸುತ್ತಾ ಹೋದೀತು? ಈ ನೇಮಕದ ಅಹಂತೆಯನ್ನು ತೀರ್ಮಾನಿಸುವಲ್ಲಿ ಸರಕಾರ ಎಷ್ಟು ದಕ್ಷತೆಯನ್ನು ತೋರಿಸೀತು? ಸರಕಾರದ ಕೈವಾಡ ಇನ್ನು ದೂರ ಹೋಗುವುದರ ಅವಶ್ಯಕತೆ ನಮಗೇನೂ ತೋರುತ್ತಿಲ್ಲ; ಈ ಕೈವಾಡದಿಂದ ಪ್ರಯೋಜನವಿದೆ ಎಂದೂ ನಂಬಗಸಿಸುತ್ತಿಲ್ಲ. ವ್ಯಕ್ತಿಯ ಪ್ರಯತ್ನದ ಹೊಸ ಶಾಲೆಗಳನ್ನು ತೆರೆಯುವ ಅಥವಾ ಈಗಿನ ಶಾಲೆಗಳನ್ನು ನಡೆಸಿಕೊಂಡು ಹೋಗುವ ವಿಷಯದಲ್ಲಿ ಪ್ರಧಾನ ಪಾತ್ರ ವಹಿಸುವುದರಿಂದ, ಈ ಶಾಲಾ ಮಂಡಳಗಳು ಭಿನ್ನಾಭಿಪ್ರಾಯದ ಕೇಂದ್ರಗಳಾಗಿ ಪರಿಣಮಿಸಿಯಾನೇ ಹೊರತು, ಶಾಲೆಯ ಶ್ರೇಯಸ್ಸನ್ನು ಸಾಧಿಸಲ್ಪಡುವುದು ಅಸಂಭವವೆಂದೇ ತೋರುತ್ತದೆ. ಎಲ್ಲ ಶಾಲೆಗಳನ್ನೂ ಕ್ರಮವಾಗಿ ಮೂಲ ಶಿಕ್ಷಣ ಕೇಂದ್ರಗಳಾಗಿ ಪರಿವರ್ತಿಸಬೇಕೆಂದು ಸಮಿತಿ ಸಲಹೆ ನೀಡಿದೆ; ಆದರೆ ಈ ವಿಷಯದಲ್ಲಿ ಸಹ ತೀವ್ರ ಹೆಜ್ಜೆಯನ್ನಿಡಬೇಕೆಂದೇನು ಅದು ಹೇಳಲು ಹೋಗಿಲ್ಲ. ಕೇವಲ ನೂಲುವಿಕೆಯೊಂದೇ ವೃತ್ತಿ ಶಿಕ್ಷಣದ ಸಾಧನವಾಗಬಾರದು; ತೋಟಗಾರಿಕೆ, ಕುಂಬಾರಿಕೆ ಇತ್ಯಾದಿಗಳನ್ನೂ ಬಳಸುವುದು ಲೇಸು ಎಂಬುದೊಂದೇ ಅದು ನೀಡಿರುವ ಉತ್ತಮ ಸೂಚನೆಯಾಗಿದೆ. ನಿರ್ದಿಷ್ಟ ಅವಧಿಯನ್ನೇನೂ ಹೇಳದೆ, ಅಥವಾ ಹೆಜ್ಜೆಯನ್ನು ಕ್ರಮಿಕಗತಿಯಿಂದ ಮುಂದಿಡಬೇಕೆಂದಾದರೂ ಹೇಳದೆ, ನಿಧಾನವಾಗಿ ಹೋದರೆ ಸಾಳು ಎಂಬ ಭಾವನೆಯನ್ನೆ ಸಮಿತಿ ಪುಸ್ಕೀಕರಿಸಿರುವುದರಿಂದ, ಶಿಕ್ಷಣ ಕ್ಷೇತ್ರದಲ್ಲಿ ಈಗಿರುವ ಅಭಿಪ್ರಿತ ಪರಿಸ್ಥಿತಿಯನ್ನೆ ಮುಂದರಿಯಲು ಬಿಟ್ಟಂತಾಗಿದೆ. ಇದು ರಾಷ್ಟ್ರದ ಭವಿಷ್ಯದ ದೃಷ್ಟಿಯಿಂದ ಘಾತಕವಾದ ವಿಚಾರ; ದೂರಗಾಮಿಯಾದ ದುಷ್ಪರಿಣಾಮ ಇದರಿಂದಾಗದಿರದೆಂಬ ಎಚ್ಚರಿಕೆಗಳು ತಜ್ಞರಿಂದ ಬರುತ್ತಿರುವುದನ್ನು ದುರ್ಲಕ್ಷಿಸುವಂತಿಲ್ಲ. ವಾಕ್ಯ ಶ್ರೇಯವಿಷಯದಲ್ಲಿ ಸಹ ಸಮಿತಿಯ ಸೂಚನೆಗಳು ಹಿತಕರವಾಗಿಲ್ಲ—ಇಂಗ್ಲೀಷನ್ನು ೬ರಿಂದ ಏನೇ ತರಗತಿಯ ವರೆಗೆ ಪ್ರಾಥಮಿಕ ಶಾಲೆಗಳಲ್ಲಿ ಕಡ್ಡಾಯವಾಗಿ ಕಲಿಸಬೇಕೆಂದೂ ಪ್ರಾದೇಶಿಕ (ಪ್ರಥನಾ ಮಾತೃ) ಭಾಷೆಯ ಜೊರತು ಹಿಂದಿಯೇ ಮುಂತಾದ ಬೇರಾವುದೇ ಭಾಷೆಯನ್ನು ಇಲ್ಲಿ ಕಲಿಸಬೇಕಾಗಿಲ್ಲವೆಂದೂ ಸಮಿತಿ ಹೇಳಿದೆ. ಹಿಂದಿಯನ್ನು ಕೇಂದ್ರ ಸರಕಾರವು ಅಧಿಕೃತ ಉದ್ದೇಶಗಳಿಗಾಗಿ ಬಳಸಲು ಸರ್ವಸನ್ನಾಹಗಳನ್ನು ನಡೆಸಿರುವಾಗ, ಸಮಿತಿಯು ಹಿಂದಿಯ ಕಲಿಸುವಿಕೆಯು ಎಂಟನೇ ತರಗತಿಯ ವರೆಗೆ ಬೇಡವೇ ಬೇಡ ಎಂದು ಹೇಳುವುದು ತೀರ ಆಶ್ಚರ್ಯಕರವಾಗಿದೆ! ಇಂಗ್ಲೀಷನ್ನು ಕಡ್ಡಾಯವಾಗಿ ಕಲಿಸಲು ಅದು ಒತ್ತಾಯಿಸಿರುವುದರ ಹಿನ್ನೆಲೆಯಲ್ಲಿ ನೋಡಿದರೆ ಈ ಆಶ್ಚರ್ಯ ಇನ್ನುಷ್ಟು ಹೆಚ್ಚುತ್ತದೆ. ಮಾಧ್ಯಮಿಕ ಶಾಲೆಯ ಉಚ್ಚ ತರಗತಿಗಳಲ್ಲಿ ಇಂಗ್ಲೀಷು ಕಡ್ಡಾಯವಾಗಿದೆಯೆಂದೂ ಹಿಂದಿಯು ಐಚ್ಛಿಕವಾಗಿದೆಯೆಂದೂ ಕಾರಣವನ್ನು ಕೊಟ್ಟು ಸಮಿತಿ ತನ್ನ ಸೂಚನೆಯನ್ನು ಸಮರ್ಥಿಸಿಕೊಂಡಿದೆ. ಆದರೆ ಹೆಚ್ಚಿನವರ ಶಿಕ್ಷಣವು ಪ್ರಾಥಮಿಕ ಶಾಲೆಯಲ್ಲಿಯೇ ಮುಗಿಯುವುದೆಂದೂ ಆಗ ಅವರ ನಾಗರಿಕ ಭಾವನೆಯು ಸ್ವಯಂಪೂರ್ಣವಾಗುವಂಥ ಶಿಕ್ಷಣವನ್ನು ನೀಡುವ ಅವಶ್ಯಕತೆ ಇದೆಯೆಂದೂ ಸಮಿತಿಯು ಹೇಳಿದ ಮಾತಿಗೆ ಹಿಂದಿಯ ವಿಷಯದಲ್ಲಿ ವಿದ್ಯಾರ್ಥಿಗಳನ್ನು ಅಜ್ಞಾನಿಗಳಾಗಿಯೇ ಇರಗೊಳಿಸುವ ಸೂಚನೆ ಪೋಷಕವಾಗಿಲ್ಲ. ಹೈಸ್ಕೂಲಿನಲ್ಲಿ ಶಿಕ್ಷಣ ಮುಂದರಿಸುವವರ ಹಿತವನ್ನೆ ಸಮಿತಿ ನೋಡಿದಂತಾಯಿತಲ್ಲದೆ, ಶಿಕ್ಷಣವನ್ನು ಎಂಟನೇ ತರಗತಿಯಲ್ಲಿ ಮುಗಿಸುವವರ ಪ್ರಯೋಜನವನ್ನು ಗಮನಿಸಿಲ್ಲ ಎಂಬುದಂತೂ ಇಲ್ಲಿ ಸ್ಪಷ್ಟವಾಗಿದೆ. ಇಂಗ್ಲೀಷಿನ ಅವಶ್ಯಕತೆಯುಳ್ಳವರ ಸಂಖ್ಯಾ ಪ್ರಮಾಣ ಕಡಿಮೆಯಾಗುತ್ತಾ ಹಿಂದಿಗೆ ಪ್ರಾಮುಖ್ಯತೆ ಹೆಚ್ಚುತ್ತಾ ಹೋಗುತ್ತಿರುವ ಈ ದಿನಮಾನದಲ್ಲಿ ಹಿಂದಿಯ ಶಿಕ್ಷಣವನ್ನು ಕಡೆಗಡೆಸುವುದು ತೀರ ಅಪಾಯಕರವಾಗಿದೆ. ಶಿಕ್ಷಣದ ವಿಕಾಸ ಕ್ರಮವನ್ನು ಸಮಗ್ರ ದೃಷ್ಟಿಯಿಂದ ಪರಿಶೀಲಿಸದೆ ಹೋದರೆ ಮತ್ತು ಒಂದೊಂದು ತುಣುಕಿಗಾಗಿಯು ಪ್ರೇ ಸಮಿತಿಗಳನ್ನು ನೇಮಿಸಿದರೆ ಆಗುವ ಅನಾಹುತಕ್ಕೆ ಇದೊಂದು ನಿದರ್ಶನ. ಹೈಸ್ಕೂಲಿನ ಶಿಕ್ಷಣಕ್ಕಾಗಿ ಪ್ರಾಥಮಿಕ ಶಿಕ್ಷಣವನ್ನು ಬಲಿಗೊಡುವುದಲ್ಲ; ಪ್ರಾಥಮಿಕ ಶಿಕ್ಷಣದ ವಿಸ್ತರಣೆಯಾಗುವಂತೆ ಹೈಸ್ಕೂಲಿನ ಶಿಕ್ಷಣ ರೂಪಿಸಲ್ಪಡಬೇಕಾದುದೇ —ಬುಡದಿಂದ ಮೇಲೆ ಕಟ್ಟುತ್ತಾ ಹೋಗುವುದೇ—ನ್ಯಾಯ.

ನಗರಸಭೆಗಳಿಗೆ ಚುನಾವಣೆ

ಇನೇ ದಿನಾಂಕ ೩೭ರಂದು (ಸೋಮವಾರ) ಉಡುಪಿ ಪುತ್ತೂ ಮಂಗಳೂರು ನಗರ ಸಭೆಗಳಿಗೆ ಚುನಾವಣೆಯು ನಡೆಯಲಿದೆ. ಅದೇ ದಿನ ರಾಜ್ಯದ ಬೇರೆ ೨೨ ನಗರಸಭೆಗಳಿಗೂ ಚುನಾವಣೆಯಾಗುತ್ತದೆ.

ಮದ್ರಾಸಿನಲ್ಲಿರುವ ಬೇರೆ ೨೮ ನಗರಸಭೆಗಳಿಗೆ ಇದಕ್ಕೆ ಮುಂಚೆಯೇ ಚುನಾವಣೆಗಳನ್ನು ನಡೆಸಿದ್ದರು. ಆದರ ಫಲಿತಾಂಶವೂ ಈಗ ವ್ಯಕ್ತವಾಗಿದೆ ಕಾಂಗ್ರೆಸಿನಲ್ಲಿ ಜನರ ನಿಷ್ಠೆ ಕಡಿಮೆಯಾಗಿಲ್ಲವೆಂಬುದನ್ನು ಈ ಫಲಿತಾಂಶ ಪ್ರಕಟಿಸುತ್ತದೆ ಸ್ಪರ್ಧೆಯ ಕಣಕ್ಕೆ ಕಾಂಗ್ರೆಸು ಇಳಿದಿದ್ದ ೨೮ ನಗರಸಭೆಗಳಲ್ಲಿ ಸುಮಾರು ೨೦ ನಗರಸಭೆಗಳಲ್ಲಿ ಕಾಂಗ್ರೆಸಿನ ತತ್ವಾನುಸಾರ ಆಡಳಿತ ನಡೆಯುವ ಲಕ್ಷಣವನ್ನೂ ಈ ಫಲಿತಾಂಶ ನಿಶ್ಚಯಪಡಿಸಿರುತ್ತದೆ.

ಮಂಗಳೂರಿನಲ್ಲಿ ಕಾಂಗ್ರೆಸ್ಸೂಂದೇ ಪಕ್ಷವಾಗಿ ಸ್ಪರ್ಧಿಸಿ, ಪ್ರತಿಪಕ್ಷಿಗಳಾಗಿ ನಿಂತಿರುವ ಸ್ವತಂತ್ರರೊಡನೆ ಹೋರಾಟ ಕೊಡುತ್ತಿದೆ. ಉಡುಪಿಯಲ್ಲಿ ಅನಾವಶ್ಯಕವಾದ ಚುನಾವಣಾ ಘೋಷಣೆಯನ್ನು ತಗ್ಗಿಸಲು ಕಾಂಗ್ರೆಸು, ಪ್ರಜಾ ಸಮಾಜವಾದಿ ಹಾಗು ಜನಸಂಘಗಳು ತಂತಮ್ಮಲ್ಲಿ ವಿರೋಧವಿಲ್ಲದೆ, ಪ್ರತಿಪಕ್ಷಿಗಳಾಗಿ ಸ್ಪರ್ಧಿಸುತ್ತಿರುವ ಸ್ವತಂತ್ರರೊಡನೆಯೂ ಪಕ್ಷದ ನೆಲೆಯಿಂದ ನಿಂತಿರುವ ಕಮ್ಯೂನಿಸ್ಟರೊಡನೆಯೂ ಸೆಣಸಾಡುತ್ತಿವೆ.

ಪಕ್ಷನಿಷ್ಠವಾದ ಪ್ರಜಾಪ್ರಭುತ್ವದಲ್ಲಿ ಸ್ವತಂತ್ರ ಬುರಿಯಾಳುಗಳಿಗಿರುವ ಸ್ಥಾನಮಾನವು ತೀರಗಣ್ಣಾ—ಆದುದರಿಂದ ಅವರನ್ನು ಬೆಂಬಲಿಸುವುದರಿಂದ ಮತದಾರರಿಗೆ ಪ್ರಯೋಜನ ಸಿಗುವುದು ಅಪ್ಪೇ ವಿರಳ ಸಂದರ್ಭಗಳಲ್ಲಿ ಮಾತ್ರ. ಇನ್ನು ಕಮ್ಯೂನಿಸ್ಟರ ಕುರಿತು "ಅಪಾಯ ಸೂಚಕ ಫಲಕ"ವನ್ನು ಎಸ್ಸು ಸಲ ಬಾರಿಸಿದರೂ ಸಾಲದು—ಏಕೆಂದರೆ, ಇವರ ತತ್ವಗಳು "ದೂರದ ಬೆಟ್ಟ ನುಣ್ಣಗೆ" ಎಂಬ ರೀತಿಯಲ್ಲಿವೆ; ವಿರೋಧಾಭಾಸದ ಮೂಟೆಳಾಗಿವೆ; ಪ್ರಜಾ ಪ್ರಭುತ್ವದಲ್ಲಿ ಆನರಿಗಿರುವವಿಶ್ವಾಸ ಕಮ್ಯೂನಿಸ್ಟರ ಮೂಲ ಸಿದ್ಧಾಂತಕ್ಕೆಯೇ ಕೊಡಲಿಯೇಟು! ಹಾಗೂವ ಆಶ್ಚರ್ಯವಾಗಿದೆ!

ಕಾರಣ ಕಮ್ಯೂನಿಸ್ಟರೆನ್ನೂ ಸ್ವತಂತ್ರರನ್ನೂ ಸೋಲಿಸುವುದೇ ಪ್ರಜಾಸತ್ತೆಯಲ್ಲಿ ವಿಶ್ವಾಸವಿಟ್ಟು ಮತದಾರರ ಕರ್ತವ್ಯ ನಮ್ಮ ಮತದಾರರು ಇವನ್ನು ಮನಗೆಂಡು ತಮ್ಮ ಅಮೂಲ್ಯ ಮತದಾನಾಧಿಕಾರವನ್ನು ಸದುಪಯೋಗಗೊಳಿಸಲೆಂದು ಪ್ರಾರ್ಥಿಸುತ್ತೇವೆ.

ಕೊಲೊಂಬೋ ಯೋಜನೆ

ಸಿಂಗಾಪುರದಲ್ಲಿ ಸೇರಿದ್ದ ಕೊಲೊಂಬೋ ಯೋಜನೆಯ ಸಮಿತಿಯು ೧೯೫೧ ನೇ ಇಸವಿಯ ವರೆಗೆ ಯೋಜನಾ ಕಾರ್ಯಕ್ರಮಗಳನ್ನು ಮುಂದರಿಸಿಕೊಂಡು ಹೋಗಲು ನಿರ್ಧರಿಸಿದೆ. ಇಷ್ಟರ ವರೆಗಿನ ಕೆಲಸದಿಂದ ಆಗ್ನೇಯ ಏಶ್ಯದ ಅಭಿವೃದ್ಧಿಯಲ್ಲಿ ಹುಂಬ ಸಹಾಯವಾಗಿದೆ ಎಂಬುದನ್ನು ಸರ್ವಾನುಮತದಿಂದ ಒಪ್ಪಲಾಗಿದೆ. ಭಾರತದ ಪರವಾಗಿ ಭಾಗವಹಿಸಿದ ಯೋಜನಾ ಮಂತ್ರಿ ಶ್ರೀ ಗುಲಜಾರಿ ನಂದಾರು ಅಭಿವೃದ್ಧಿಯ ವೇಗವನ್ನು ಹೆಚ್ಚಿಸುವ ಅವಶ್ಯಕತೆಯ ಕುರಿತು ಸಮಿತಿಯ ಗಮನವನ್ನು ಸೆಳೆದು ಮಾತನಾಡಿದರೆಂದು ತಿಳಿದಿದೆ.

ರಾಷ್ಟ್ರದಾದ್ಯಂತ ಮದ್ಯಪಾನ ಪ್ರತಿಬಂಧ

೧೯೫೬ನೇ ಎಪ್ರೀಲಿನ ೧ನೇ ದಿನದಿಂದ

ಭಾರತದಲ್ಲಿ ೧೯೫೬ನೇ ಎಪ್ರೀಲಿನ ೧ನೇ ತಾರೀಕಿನಿಂದು ಸಂಪೂರ್ಣ ಮದ್ಯಪಾನ ಪ್ರತಿಬಂಧ ಶಾಸನವು ಜಾರಿಯಲ್ಲಿ ಬರಬೇಕೆಂದು ಯೋಜನಾ ಆಯೋಗವು ನೇಮಿಸಿದ್ದ ಶ್ರೀ ಮನ್ನಾರಾಯಣ ಸಮಿತಿಯು ಸೂಚಿಸಿದೆ. ಈ ನಡುವೆ ಶಾಸನ ದೊಡನೆ ಜನರು ಸಹಕರಿಸುವಂತೆ ಯೋಗ್ಯ ಶಿಕ್ಷಣವನ್ನು ನೀಡಬೇಕು, ಮದ್ಯಪಾನವನ್ನು ನಿರುತ್ತೇಜಿಸುವ ಕ್ರಮಗಳನ್ನು ಒಂದೊಂದೇ ಹೆಜ್ಜೆಯಲ್ಲಿ ಮುಂದೊತ್ತುತ್ತಾ ಹೋಗಬೇಕು, ಔಷಧದ ನೆಪದಲ್ಲಿ ಧಾರಾಳವಾಗಿ ಕೊಡಲಾಗುವ ಪರ್ಮಿಟುಗಳ ಯಥಾರ್ಥತೆಯ ಕುರಿತು ಎಚ್ಚರಿಕೆ ವಹಿಸಬೇಕು ಎಂದು ಮುಂತಾಗಿ ಅದು ಸಲಹೆ ಮಾಡಿದೆ

ಪರಿಷತ್ತಿನ ಬಿನ್ನಹ

ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತ ಕರ್ನಾಟಕ ರಾಜ್ಯವನ್ನು ರಚಿಸಬೇಕೆನ್ನುವ ಫಜಲ ಅಲಿ ಆಯೋಗದ ಸಿಫಾರಸನ್ನು ಹೃತ್ಪೂರ್ವಕ ಸ್ವಾಗತಿಸಿ, ಎಲ್ಲ ಕನ್ನಡಿಗರೂ ಇದನ್ನು ಬೆಂಬಲಿಸಬೇಕೆಂದು ಕೇಳಿಕೊಂಡಿದೆ. ಒಂದೇ ಆಡಳಿತದ ನೆಲೆಯಲ್ಲಿ ಸೇರಬೇಕೆನ್ನುವ ಬಹು ಸಂಖ್ಯಾಕ ಕನ್ನಡಿಗರ ಆಶೆಯು ಆಯೋಗದ ವರದಿಯಿಂದ ಕೈಗೊಡುವಂತಾಗಿದೆ ಎಂದು ಕೃತಜ್ಞತೆಯನ್ನು ಸೂಚಿಸಿದೆ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ. ಕೋಟ ಶಿವರಾಮ ಕಾರಂತರು ಅಂತಾರಾಷ್ಟ್ರೀಯ ಹಾಗು ರಾಷ್ಟ್ರೀಯ ಭಾವನೆಯ ಹೆಸರಿನಲ್ಲಿ ಭಾಷೆಯ ಮಹತ್ವವನ್ನು ಕಡೆಗಣಿಸುವ ಧೋರಣವನ್ನು ಕಟುವಾಗಿ ಟೀಕಿಸಿ, ಮನೆ, ಗ್ರಾಮ, ಸಂಸ್ಕೃತಿ ಮತ್ತು ಪುದೇಶಗಳ ಹಿನ್ನೆಲೆಯಲ್ಲಿಯೇ ಮನುಷ್ಯ ವಿಕಾಸವನ್ನು ಸಾಧಿಸುತ್ತಾನೆ; ಅಭ್ಯುದಯ ಹೊಂದುತ್ತಾನೆ ಎಂದು ಪ್ರತಿಪಾದಿಸಿದ್ದಾರೆ. ಅದುದರಿಂದ ಕನ್ನಡದ್ವೇಷಿಸುವ ಪ್ರತಿಯೊಂದು ತುಂಡು ನೆಲವೂ ಕನ್ನಡಿಗರಿಗೆ ದೊಡ್ಡ ದೆಂದು ಸಾರಿದ್ದಾರೆ.

ಧೇಬರರು ಬೆಂಗಳೂರಿಗೆ

ಮೈಸೂರಿನ ಮುಂತ್ರಿ ಮಂಡಳದಲ್ಲಿರುವ ಭಿನ್ನಾಭಿಪ್ರಾಯದ ಕಾರಿತು ವಿಶೇಷ ಸಮಾಲೋಚನೆ ನಡೆಸಲು ಇಪ್ಪರಲ್ಲೇ ಕಾಂಗ್ರೆಸ್ಸಾಧ್ಯಕ್ಷ ಶ್ರೀ. ಧೇಬರರು ಆ ರಾಜ್ಯದಲ್ಲಿ ಸಂಚರಿಸಲಿದ್ದಾರೆ. ಮಂತ್ರಿ ಸಂಪುಟದ ಸಚಿವತ್ಯಯರು ಭಿನ್ನಾಭಿಪ್ರಾಯದ ಪ್ರಕಟನೆಯನ್ನು ಬಹಿರಂಗವಾಗಿ ಪ್ರಕಟಿಸಿರುವುದರಿಂದ ಧೇಬರರು ಅಸಂತುಷ್ಟರಾಗಿರುವರೆಂಬಾ ಪಶ್ನೆದ ಶಿಸ್ತಿನ ಕುತು ಅವರು ಗಮನ ಸೆಳೆದಿರುವರೆಂದೂ ಶ್ರೀ. ಹನುಮಂತಯ್ಯನವರ ಹೇಳಿಕೆಯೊಂದು ತಿಳಿಸುತ್ತದೆ. ಅವರೇ ಕೊಟ್ಟ ಇನ್ನೊಂದು ಹೇಳಿಕೆಯಿಂದ, ಬಳ್ಳಾರಿಯ ಪ್ರಶ್ನೆಯನ್ನು ತುಂಗಭದ್ರ ಆಣೆಕಟ್ಟಿನ ನೆಪದಲ್ಲಿ ಪುನಃ ಎತ್ತಲಾಗದೆಂದು ಅವರು ಅಗೋಸ್ತಿನ ಪೂರ್ವಾರ್ಧದಲ್ಲಿ ಆಯೋಗಕ್ಕೆ ಸ್ಪಷ್ಟಗೊಳಿಸಿದ್ದರೆಂದೂ ಗೊತ್ತಾಗುತ್ತದೆ.

ಗೋವೆಯ ಕುರಿತು ಹೋಂ

ಬ್ರಿಟಿಸಿನ ಕಾಮನ್‌ವೆಲ್ತ್ ಮಂತ್ರಿಗಳಾದ ಲಾರ್ಡ್ ಹೋಮ್ ಭಾರತದಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆ. ನೆಹರುಗಳ ನಾಯಕತ್ವದಲ್ಲಿ ನಮ್ಮ ದೇಶವು ಹೊಂದಿರುವ ಅಭಿವೃದ್ಧಿಯನ್ನು ಅವರು ಮುಕ್ತ ಕಂಠದಿಂದ ಪ್ರಶಂಸಿಸಿ ಮಾತನಾಡಿದ್ದಾರೆ. ಗೋವೆಯ ಕುರಿತು ಕಮ್ಯೂನಿಸ್ಟರಾದ ಧೋರಣೆಯನ್ನು ನಿರೂಪಿಸುತ್ತಾ ಬ್ರಿಟನು ಮಧ್ಯಸ್ಥಿಕೆ ವಹಿಸುವುದಿಲ್ಲ; ಪೋರ್ಚುಗಾಲವೂ ಭಾರತವೂ ಪರಸ್ಪರ ಸಂಬಂಧ ಬೆಳೆಸಿಕೊಂಡು ಬಿಡಿಸಬೇಕಾದ ಸಮಸ್ಯೆ ಇದು ಎಂದಿದ್ದಾರೆ. 'ನ್ಯಾಟೊ'ವಿಷ್ಟಾದರೆ ಕಕ್ಷೆಯಲ್ಲಿ ಗೋವೆಯನ್ನು ಸೇರಿಸುವುದೆಂದರೆ ಒಡಂಬಡಿಕೆಯ ವ್ಯಾಪ್ತಿಯನ್ನು ಬಹಳವಾಗಿ ವಿಸ್ತರಿಸಿದಂತಾಗುತ್ತದೆ; ನ್ಯಾಟೊ ರಾಷ್ಟ್ರಗಳ ಸಭೆಯಲ್ಲಿ ಗೋವೆಯ ಕುರಿತು ಸಾಮಾನ್ಯ ಮಾತುಕತೆಯಷ್ಟೇ ನಡೆಯುತ್ತದೆ ಎಂದೂ ಅವರು ತಿಳಿಸಿದ್ದಾರೆ.

ಗ್ರಂಥಾಲಯಗಳ ಅಭಿವೃದ್ಧಿ

ಹೊಸ ದೆಹಲಿಯಲ್ಲಿ "ಯುನೆಸ್ಕೊ" ನೆರೆಯಿಸಿದ್ದ ಏಶ್ಯದಲ್ಲಿ ಗ್ರಂಥಾಲಯಗಳ ಅಭಿವೃದ್ಧಿಯನ್ನು ಕುರಿತಾದ ವಿಚಾರ ಗೋಷ್ಠಿಯಲ್ಲಿ ನೆಹರುಗಳು ಭಾಷಣ ಮಾಡುತ್ತಾ ಜನರು ಹೆಚ್ಚು ಪುಸ್ತಕಗಳನ್ನು ಓದಬೇಕೆಂದಿಷ್ಟು; ಆದರೆ ಓದವ ಪುಸ್ತಕಗಳೂ ಪತ್ರಿಕೆಗಳೂ ಉತ್ತಮ ಮಟ್ಟದವಾಗಿರಬೇಕು ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಒಳ್ಳೆಯ ಪುಸ್ತಕಗಳು ಳೆ ಗ್ರಂಥಾಲಯಗಳು ಗ್ರಾಮಕ್ಕೆ ಒಂದೆರಂತೆಯಾದರೂ ಇರಬೇಕಾಗಿವೆಎಂದರು. ಓದುವ ಅಭ್ಯಾಸವು ವಿಚಾರವನ್ನು ಪ್ರಚೋದಿಸುತ್ತದೆಎಂದೆವು ಗ್ರಂಥಾಲಯಗಳ ಅನಿವಾರ್ಯತೆಯನ್ನು ಒತ್ತಿ ಹೇಳಿದರು.

ದ. ಕ. ಜಿಲ್ಲಾ ವಿದ್ಯಾ ಪರಿಷತ್ತು

ದ. ಕ. ಜಿಲ್ಲಾ ವಿದ್ಯಾ ಪರಿಷತ್ತನ್ನು ಕುಂದಾಪುರದಲ್ಲಿ ದಿನಾಂಕ ೨೪ರಂದು ಮದರಾಸಿನ ಆರೋಗ್ಯ ಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು ಉದ್ಘಾಟಿಸಿದರು. ಶ್ರೀ ಶೆಟ್ಟರು ತಮ್ಮ ಉದ್ಘಾಟನಾ ಭಾಷಣದಲ್ಲಿ "ನಮ್ಮ ಶಿಕ್ಷಣವನ್ನು ಪುನರ್ಸಂಘಟಿಸಿಕೊಳಿಸಬೇಕು. ಪ್ರಾಥಮಿಕ ಶಿಕ್ಷಣವನ್ನು ಬುನಾದಿ ಶಿಕ್ಷಣದ ಹೇರಿಗೆ ರೂಪಿಸಬೇಕು, ಬುನಾದಿ ಶಿಕ್ಷಣವು ಯಶಸ್ವಿಯಾಗಬೇಕಾದರೆ, ಶ್ರೀಸ್ಥ ದರ್ಜೆಯ ಶಿಕ್ಷಣ ಕೌಶಲ್ಯದ ಅಗತ್ಯವಿದೆ"ಎಂದರಲ್ಲದೆ, ಇಂದಿನ ಬುನಾದಿ ಶಾಲೆಗಳ ನ್ಯೂನತೆಗಳನ್ನು ಎತ್ತಿ ತೋರಿಸಿದರು. ಪರಿಷತ್ತು ಸ್ಥಳೀಯ ಬೋರ್ಡ್‌ಹೈಸ್ಕೂಲಿನ ಪರಾರದಲ್ಲಿ ಜರಗಿತು. ಶ್ರೀ ಬಿ. ವೈಕುಂಠ ಬಾಳಿಗ, ಎಂ. ಎಲ್. ಎ., ಇವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಶೆಟ್ಟರು ನಿಷ್ಠೆಯ ಮಹತ್ವವನ್ನು ವಿವರಿಸಿ ಸ್ವಾತಂತ್ರ್ಯಪ್ರಾಪ್ತನಂತರ ವಿದ್ಯಾಕ್ಷೇತ್ರದಲ್ಲಿ ಆದ ಪ್ರಗತಿಯನ್ನು ಅಂಕಿ, ಸಂಖ್ಯೆಗಳ ಮೂಲಕ ವಿಶದಪಡಿಸಿದರೆಲ್ಲದೆ, ಈ ವರ್ಷ ಇನ್ನೂ ೧೦೦೦ ಹೊಸ ಏಕ ಅಧ್ಯಾಪಕ ಶಾಲೆಯನ್ನು ತೆರೆಯಲು ಸಾಧ್ಯವಾಗಬಹುದು ಎಂದು ಸೂಚಿಸಿದರು. ಮದರಾಸು ಸರಕಾರವು ವಿದ್ಯಾರಂಗದಲ್ಲಿ ತಂದಿರುವ ಸುಧಾರಣೆಗಳನ್ನು ವಿವರಿಸುತ್ತಾ ಶ್ರೀ ಶೆಟ್ಟರು ವರ್ಷಕ್ಕೆ ೧೫೦ಕ್ಕಿಂತ ಕಡಿಮೆ ಆದಾಯವಿರುವ ಮಕ್ಕಳಿಗೆ ಧನಸಾಧ್ಯ ಆಶೀ ತರಗತಿಯ ತನಕ ನಿರ್ವಾಹ್ಯಾಸಕೊಡುವುದು, ಅಧ್ಯಾಪಕರ ಹಿತದೃಷ್ಟಿಯಿಂದ ಸ್ಥಾಪಿಕವಾಗಲಿರುವಪ್ರೊವಿಡೆಂಟ್ ಫಂಡ್, ಇನ್ಸೂರೆನ್ಸ್, ಪೆನ್ಷನ್ ಮೊದಲಾದ ಯೋಜನೆಗಳನ್ನು ತಿಳಿಸಿದರು. "ನಮ್ಮ ದೇಶದಲ್ಲಿ ಮಹತ್ವದ ಬದಲಾವಣೆಗಳಾಗುತ್ತಿವೆ. ಪ್ರಾಂತ ಪುನರ್ಘಟನೆಯು ನಮ್ಮ ನೇರದ ರೂಪನ್ನೇ ಬದಲಿಸುತ್ತಿದೆ. ಇಂತಹ ಸಂದಿಗ್ಧಕಾಲದಲ್ಲಿ ಇಂದಿನ ಧಾರ್ಮಿಕ ಪ್ರಾಗೂ ಭಾಷಾ ಮನೋಭಾವನೆಯು ಮಕ್ಕಳ ತಾರದೆ, ರಾಷ್ಟ್ರೀಯ ಏಕತೆ ಮತ್ತು ಅಂತಾರಾಷ್ಟ್ರೀಯ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು" ಎಂದು ಶ್ರೀ ಶೆಟ್ಟರು ಸೂಚಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹಲವಾರು ಸೂಚನೆಗಳನ್ನಿತ್ತು, ನಮ್ಮ ದೇಶದಲ್ಲಿ ಬಾಲಕರಿಗೆ ಶಿಕ್ಷಣವನ್ನೊದಗಿಸುವ 'ಬಾಲ ವಿಹಾರ'ಗಳ ಅಗತ್ಯವಿದೆಯೆಂದು ಹೇಳಿದರು. ಪರಿಷತ್ತಿನ ಸ್ವಾಗತಾಧ್ಯಕ್ಷ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಂ. ಎಲ್. ಎ., ಇವರು ಸಂದೇಶಗಳನ್ನೋದಿ, ವಿದ್ಯಾಭ್ಯಾಸಪದ್ಧತಿಯ ಕೊರತೆ, ಇಂತಹ ಸಮ್ಮೇಳನಗಳಿಗೆ ಉದ್ದೇಶದ ಕುರಿತು ಮಾತನಾಡಿದರು. ದ. ಕ. ಜಿಲ್ಲಾ ಶಿಕ್ಷಣ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ. ಎಸ್. ವೆಂಕಟಕೃಷ್ಣರಾಯರು ಕೆಲವು ಠರಾವುಗಳನ್ನು ಮುಂದಿಟ್ಟರು. ಇವರಲ್ಲಿ ದಿ| ಮಂಜಯ್ಯ ಹೆಗ್ಡೆ, ಕರ್ನಲ್ ಸಿಂಗರೇ ಮೊದಲಾದವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಗಿತ್ತು.

ಬಸ್ಸೂರಿನಲ್ಲಿ ಹೆರಿಗೆ ಮನೆ—

ಬಸ್ಸೂರು ಸ್ಥಳೀಯ ಪಂಚಾಯಿತ್ ಬೋರ್ಡಿನ ವರ ಮತ್ತು ಸಾರ್ವಜನಿಕರ ವಂತಿಗೆಯಿಂದ ಕಟ್ಟಲ್ಪಟ್ಟ ಪ್ರಸೂತಿಕಾ ಗೃಹದ ಉದ್ಘಾಟನಾ ಸಮಾರಂಭನನ್ನು ಶ್ರೀ ವೈ.ಮಂಜಯ್ಯ ಶೆಟ್ಟಿ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಮದರಾಸಿನ ಆರೋಗ್ಯಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು ನೆರವೇರಿಸುತ್ತ "ನಮ್ಮ ದೇಶದಲ್ಲಿ ಜನನ, ಮರಣಗಳೆರಡೂ ಹೆಚ್ಚಿವೆ. ಆದರೆ ಉಳ್ಳಾ ಶಿಶು ಮರಣ ಅತ್ಯಧಿಕವಾಗಿದೆ. ಇಂತಹ ಹೆರಿಗೆ ಕೇಂದ್ರಗಳಲ್ಲಿ ಸುಖಪ್ರಸವವಾಗುವಂತೆ ಪರೀಕ್ಷೆ ನಡೆಸಿ ಸಲಹೆ ಸಹಕಾರಗಳು ನೀಡಲ್ಪಡುತ್ತವೆ ದೇಶದ ಹಿತದೃಷ್ಟಿಯಿಂದ ನಮ್ಮ ದೇಶದಲ್ಲಿ ಹುಟ್ಟುವ ಮಕ್ಕಳು ಕಡಿಮೆಯಾಗಿ, ಹುಟ್ಟಿದ ಮಕ್ಕಳು ದೃಢಕಾಯರೂ, ಆರೋಗ್ಯವಂತರೂ, ದೀರ್ಘಾಯುಷಿಗಳೂ ಆಗಲಿ" ಎಂದು ಆಶಿಸಿದರು.

ಮೇಲಿನ ಸಮಾರಂಭದ ಮೊದಲು ಶ್ರೀ ಶೆಟ್ಟರು ಸ್ಥಳೀಯ ಹಿಂದೂ ಹಾ. ಎ. ಶಾಲಾ ವಠಾರದಲ್ಲಿ ದಿವಂಗತ ಬಸ್ಸೂರು ಶಂಕ್ರಯ್ಯ ಶೆಟ್ಟರ ಭಾವಚಿತ್ರ ಅನಾವರಣ ಕಾರ್ಯವನ್ನು ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತ್ ಗಂಗೊಳ್ಳಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಉಡುಪಿ

ಕಾದಂಬರಿಯ ಉದ್ಘಾಟನೆ—ಪ್ರಸಿದ್ಧ ಬರಹಗಾರರಲ್ಲೊಬ್ಬರಾದ ಶ್ರೀ ಎಸ್. ವೆಂಕಟರಾಯರು ಬರೆದ 'ಅಂಬುಜಾಕ್ಷಿ' ಎಂಬ ಕಾದಂಬರಿಯ ಉದ್ಘಾಟನೆಯು ತಾ. ೩೧ರಂದು ಮಜೆಸ್ಟಿಕ್ ಪ್ರೆಸ್ಸಿನಲ್ಲಿ ಪ್ರಿನ್ಸಿಪಾಲ್ ಕಾಲಿಗಿ ಶೇಷಾಚಾರ್ಯರಿಂದ ನೆರವೇರಿತು. ಉದ್ಘಾಟಕರು ಕಾದಂಬರಿಯ ಮೇಲ್ಪುಟ್ಟನ್ನು ಸೂಚಿಸಿ ಶ್ರೀ ರಾಜರ ಬರವಣಿಗೆಯ ಶಕ್ತಿಯನ್ನು ಕೊಂಡಾಡಿದರು. ಆರಂಭದಲ್ಲಿ ಶ್ರೀ ರಾಜರು ಸ್ವಾಗತ ಭಾಷಣಮಾಡಿದರು. ಪ್ರಕಾಶಕ ಶ್ರೀ ರಾಘವೇಂದ್ರ ರಾಯರ ಉಪಹಾರದೊಂದಿಗೆ ಸಭಾಂತ್ಯವಾಯಿತು.

ವಾರ್ಷಿಕ ಮಹಾಧಿವೇಶನ:— ಸ್ಥಳೀಯ ರಾಷ್ಟ್ರಭಾಷಾ ಶಿಕ್ಷಣ ಶಿಬಿರದ ಎಂಟನೇ ವಾರ್ಷಿಕ ಸುಹಾಧಿವೇಶನವು ನಗರಸಭೆಯ ಕೌಮಿಸನರರಾದ ಶ್ರೀ ಪಿ. ಯು. ಕೆ. ನಂಬೀಶನರ ಅಧ್ಯಕ್ಷತೆಯಲ್ಲಿ ತಾ. ೨೨ರಂದು ಜರಗಿತು. ಕಾರ್ಯದರ್ಶಿ ಶ್ರೀ ಸಿ. ಪುಷಾಬಲ ನಾಯಕರು ವರದಿಯನ್ನೋದಿದ ಬಳಿಕ ಶ್ರೀ ಉ. ಕೆ. ಕಿಣಿಯವರು ಹಿಂದಿ ಸ್ರಾಜರದ ಕುರಿತು ಭಾಷಣನಿತ್ತರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಟಿ. ಮಾಧವ ಪೈಗಳು ಶಿಬಿರದ ಚಟುವಟಿಕೆಗಳನ್ನು ಪ್ರಶಂಸಿಸಿ ವಿದ್ಯಾರ್ಥಿಗಳನ್ನು ಹರಸಿದರು. ಅಧ್ಯಕ್ಷರ ಸಮಯೋಚಿತ ಮಾತುಗಳ ಬಳಿಕ, ಶ್ರೀ ಭಕ್ತ ಪ್ರಿಯ "ವೇದಾಲಂಕಾರ" ಇವರು ಧನ್ಯವಾದ ಸಮರ್ಪಿಸಿದರು.

"ವಿಶಾರದ" ವರ್ಗ :— ಇದೇ ನವಂಬರ್ ೧ನೇ ತಾರೀಕಿನಿಂದ ಸ್ಥಳೀಯ ರಾಷ್ಟ್ರಭಾಷಾ ಶಿಕ್ಷಣ ಶಿಬಿರದಲ್ಲಿ ಹಿಂದಿಯ "ರಾಷ್ಟ್ರಭಾಷಾ ವಿಶಾರದ" (ಪೂರ್ವಾರ್ಧ) ಪರೀಕ್ಷೆಗಾಗಿ ತರಬೇತಿಕೊಡುವ ವರ್ಗವನ್ನು ತೆರೆಯಲಾಗುವುದೆಂದು ಶಿಬಿರದ ಸಂಚಾಲಕರಿಂದ ತಿಳಿದು ಬರುತ್ತದೆ.

ಮದ್ರಾಸಿನ ಮುಖ್ಯ ಮಂತ್ರಿಗಳು ಬರುವರು: ದಿನಾಂಕ ೩೮ರಂದು ಬೆಂಗಳೂರಿಗೆ ಬರಲಿರುವ ಮದರಾಸಿನ ಮುಖ್ಯ ಮಂತ್ರಿಗಳಾದ ಶ್ರೀ ಕಾಮರಾಜ ನಾಡರವರು ಅಲ್ಲಿಂದ ಮಂಗಳೂರಿಗೂ ಬರಲಿರುವರೆಂಬ ತಿಳಿದು ಬರುತ್ತದೆ. ಅಲ್ಲದೆ ಅವರು ದಿನಾಂಕ ೭ನೇ ಮತ್ತು ೭ರಂದು ಜಿಲ್ಲಾ ಪ್ರವಾಸವನ್ನು ಕೈಗೊಂಡು ೭ರಂದು ಬೆಂಗಳೂರು ಮಾರ್ಗವಾಗಿಯೇ ಮರಳುವರೆಂದೂ ತಿಳಿದು ಬಂದಿರುತ್ತದೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 414/1955.

ಯು. ಗೋಪಾಲ ಪ್ರಭು— ವಾದಿ

ಫ್ರಾಂಶಿಸ್ಕ ಫ್ಲೇವಿಯರ್ ಫೆರ್ನಾಂದೀಸ ಕಾಪಿಲಳಬಸ್ತಿನ್ ಫೆರ್ನಾಂದೀಸರ ಮಗ, ಕೊಡವೂರು ಗ್ರಾಮದ ಕಲ್ಯಾಣಿ— ಪ್ರತಿವಾದಿ ಸದರಿ ಪ್ರತಿವಾದಿಗೆ—

ವಾದಿಯು ಅಭಿಭಕ್ತ ಕುಟುಂಬದ ಮೊದ್ಲಿನ ಯಜಮಾನರಾಗಿದ್ದ ವಾದಿಯ ತಂದೆಯಾದ ರಾಮಪ್ರಭುಗಳಿಗೆ ಪ್ರತಿವಾದಿಯು ತಾರೀಕು 31—1—1952ರಲ್ಲಿ ರೂಪಾ 2000/- ಕ್ಕೆ ಬರೆಕೊಟ್ಟ ದಿಸ್ಕಾರ್ಡ್ ನೋಟಿನ ಬಾಬ್ತು ಬಹಾ ಅಸಲು ಬಡ್ಡಿ ಕೂಡಾ ರೂ. 2393—11—8ರ ಬಗ್ಗೆ ಈಗಿನ ವಾದಿಯಾದ ಯಜಮಾನನಾದ ವಾದಿಯು ಪ್ರತಿವಾದಿಯ ಮೇಲೆ ನಮೂದಿಸಿದ ಸದರಿ ದಾವೆಯನ್ನು ತಾರೀಕು 12—11—1955ಕ್ಕೆ ತನಪಿ ಬಗ್ಗೆ ಇಜೋಡಾಗಿಯದೆ. ಆ ದಿನ್ಸ ಸದ್ರಿ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಕಾಂತ್ರ ಕೋರ್ಟಿಗೆ ಹಾಜರಾಗಿ ಉದಪರಿಸದಿದ್ದಲ್ಲಿ ಆತನ ಗೈರಹಾಜರಿಯಿಂದ ಸದರಿ ದಾವೆಯು ತೀರ್ಮಾನಿಸಲ್ಪಡುವುದೆಂದು ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಣವಾಗಿದೆ...

M. Damoder Kamath,
Advocate for Plaintiff.

ಉಡುಪಿ, ತಾ. 24—10—55.

The Moolky Bank, Ltd., Mulki.

Share Certificates No. 620 to 629 standing in the name of late Sri Srinivasa Talithaya, Kasargod are reported to have been lost. The legal representative Dr. V. S. Talithaya has applied for the issue of fresh Share Certificates in the place of lost ones. Any objection to such issue should be filed with the Bank by 19—11—1955 failing which fresh Share Certificates in the place of original ones will be issued.

(Sd.) M. R. H. Punja,
Manager.

'ಮೂಲ್ಕಿ ಸಮಾಜ ಭವನ'ದ ಸಮಾರಂಭಾರ್ಥವಾಗಿ, ಮೂಲ್ಕಿ ಮಹೋತ್ಸವ ಮಾ ಹೊಸಲಿನಲ್ಲಿ ತಾ. ೬—11—55 ನೇ ಭಾನುವಾರ ರಾತ್ರಿ ೨ಗಂಟೆಗೆ ಜೆಟ್ಟಿಯ ವಿಖ್ಯಾತ ಕಲಾವಿದರ ಕೂಡುವಿಕೆಯಿಂದ ನಿಶ್ಚಿತ ತರವೆ ಯಕ್ಷಗಾನ ಕೂಟವೊಂದು ಶ್ರೀ ಯನ್. ಯನ್. ಸುವರ್ಣ, ಯಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಲಿದೆ.

ರಾಷ್ಟ್ರದಾದ್ಯಂತ ಮದ್ಯಪಾನ ಪ್ರತಿಬಂಧ

೧೯೫೬ನೇ ಎಪ್ರೀಲಿನ ೧ನೇ ದಿನದಿಂದ

ಭಾರತದಲ್ಲಿ ೧೯೫೬ನೇ ಎಪ್ರೀಲಿನ ೧ನೇ ತಾರೀಕಿನಿಂದು ಸಂಪೂರ್ಣ ಮದ್ಯಪಾನ ಪ್ರತಿಬಂಧ ಶಾಸನವು ಜ್ಯಾರಿಯಲ್ಲಿ ಬರಬೇಕೆಂದು ಯೋಜನಾ ಆಯೋಗವು ನೇಮಿಸಿದ್ದ ಶ್ರೀ ಮನ್ನಾರಾಯಣ ಸಮಿತಿಯು ಸೂಚಿಸಿದೆ. ಈ ನಡುವೆ ಶಾಸನ ದೊಡನೆ ಜನರು ಸಹಕರಿಸುವಂತೆ ಯೋಗ್ಯ ಶಿಕ್ಷಣವನ್ನು ಏಡಬೇಕು, ಮದ್ಯಪಾನವನ್ನು ನಿರುತ್ತೇಜಿಸುವ ಕ್ರಮಗಳನ್ನು ಒಂದೊಂದೇ ಹೆಜ್ಜೆಯಲ್ಲಿ ಮುಂದೊತ್ತುತ್ತಾ ಹೋಗಬೇಕು, ಔಷಧದ ನೆಪದಲ್ಲಿ ಧಾರಾಳವಾಗಿ ಕೊಡಲಾಗುವ ಪರ್ಮಿಟುಗಳ ಯಥಾರ್ಥತೆಯ ಕುರಿತು ಎಚ್ಚರಿಕೆ ವಹಿಸಬೇಕು ಎಂದು ಮಂತ್ರಿಗಳು ಆದು ಸಲಹೆ ಮಾಡಿದೆ

ಪರಿಷತ್ತಿನ ಬಿನ್ನಹ

ಕನ್ನಡ ಸಾಹಿತ್ಯ ಪರಿಷತ್ತು ಸಂಯುಕ್ತ ಕರ್ನಾಟಕ ರಾಜ್ಯವನ್ನು ರಚಿಸಬೇಕೆನ್ನುವ ಫಲಲ ಅಲಿ ಆಯೋಗದ ನಿಷ್ಠರನ್ನು ಹೃತ್ಪೂರ್ವಕ ಸ್ವಾಗತಿಸಿ, ಎಲ್ಲ ಕನ್ನಡಿಗರೂ ಇದನ್ನು ಬೆಂಬಲಿಸಬೇಕೆಂದು ಕೇಳಿಕೊಂಡಿದೆ. ಒಂದೇ ಆಡಳಿತದ ನೆಲೆಯಲ್ಲಿ ಸೇರಬೇಕೆನ್ನುವ ಬಹು ಸಂಖ್ಯಾಕ ಕನ್ನಡಿಗರ ಆಶೆಯು ಆಯೋಗದ ವರದಿಯಿಂದ ಕೈಗೊಡುವಂತಾಗಿದೆ ಎಂದು ಕೃತಜ್ಞತೆಯನ್ನು ಸೂಚಿಸಿದೆ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ. ಕೋಟ ಶಿವರಾಮ ಕಾರಂತರು ಅಂತಾರಾಷ್ಟ್ರೀಯ ಹಾಗು ರಾಷ್ಟ್ರೀಯ ಭಾವನೆಯ ಹೆಸರಿನಲ್ಲಿ ಭಾಷೆಯ ಮಹತ್ವವನ್ನು ಕಡೆಗಣಿಸುವ ಧೋರಣರನ್ನು ಕಟುವಾಗಿ ಟೀಕಿಸಿ, ಮನೆ, ಗ್ರಾಮ, ಸಂಸ್ಕೃತಿ ಮತ್ತು ಪುದೇಶಗಳ ಹಿನ್ನೆಲೆಯಲ್ಲಿಯೇ ಮನುಷ್ಯ ವಿಕಾಸವನ್ನು ಸಾಧಿಸುತ್ತಾನೆ; ಅಭ್ಯುದಯ ಹೊಂದುತ್ತಾನೆ ಎಂದು ಪ್ರತಿಪಾದಿಸಿದ್ದಾರೆ. ಅದುದರಿಂದ ಕನ್ನಡಪ್ರೇಮಿಯು ತುಂಡು ನೆಲವೂ ಕನ್ನಡಿಗರಿಗೆ ದೊಡ್ಡದೆಂದು ಸಾರಿದ್ದಾರೆ.

ಫೇಬರರು ಬೆಂಗಳೂರಿಗೆ

ಮೈಸೂರಿನ ಮಂತ್ರಿ ಮಂಡಳಿದಲ್ಲರುವ ಭಿನ್ನಾಭಿಪ್ರಾಯದ ಕಾರಿತು ವಿಶೇಷ ಸಮಾಲೋಚನೆ ನಡೆಸಲು ಇಪ್ಪರಲ್ಲೇ ಕಾಂಗ್ರೆಸಾಧ್ಯಕ್ಷ ಶ್ರೀ. ಫೇಬರರು ಆ ರಾಜ್ಯದಲ್ಲಿ ಸಂಚರಿಸಲಿದ್ದಾರೆ. ಮಂತ್ರಿ ಸಂಪುಟದ ಸಚಿವತ್ಯಯರು ಭಿನ್ನಾಭಿಪ್ರಾಯದ ಪ್ರಕಟಣೆಯನ್ನು ಬಹಿರಂಗವಾಗಿ ಪ್ರಕಟಿಸಿರುವುದರಿಂದ ಫೇಬರರು ಅಸಂತುಷ್ಟರಾಗಿರುವರೆಂಬ ಹಕ್ಕಪ್ಪದ ಶಿಸ್ತಿನ ಕುತು ಅವರು ಗಮನಿಸಿಳಿದಿರುವರೆಂದೂ ಶ್ರೀ. ಹನುಮಂತಯ್ಯನವರ ಹೇಳಿಕೆಯೊಂದು ತಿಳಿಸುತ್ತದೆ. ಅವರೇ ಕೊಟ್ಟ ಇನ್ನೊಂದು ಹೇಳಿಕೆಯಿಂದ, ಒಳ್ಳಾರಿಯ ಪ್ರಶ್ನೆಯನ್ನು ತುಂಗಭದ್ರ ಆಣೆಕಟ್ಟಿನ ನೆಪದಲ್ಲಿ ಮುನಃ ಎತ್ತಲಾಗದೆಂದು ತಿಳಿದು ಅಗೋಸ್ತಿನ ಹೂವಾರ್ಥದಲ್ಲಿ ಆಯೋಗಕ್ಕೆ ಸ್ಪಷ್ಟಗೊಳಿಸಿದ್ದರೆಂದೂ ಗೊತ್ತಾಗುತ್ತಿದೆ.

ಗೋವೆಯ ಕುರಿತು ಹೋಂ

ಬ್ರಿಟಿನ ಕಾಮನ್‌ವೆಲ್ತ್ ವ್ಯವಹಾರ ಮಂತ್ರಿ ಗಳಾದ ಲಾರ್ಡ್ ಹೋಮ್ ಭಾರತದಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡಿದ್ದಾರೆ. ನೆಹರುಗಳ ನಾಯಕತ್ವದಲ್ಲಿ ನಮ್ಮ ದೇಶವು ಹೊಂದಿರುವ ಅಭಿವೃದ್ಧಿಯನ್ನು ಅವರು ಮುಕ್ತ ಕಂಠದಿಂದ ಪ್ರಶಂಸಿಸಿ ಮಾತನಾಡಿದ್ದಾರೆ. ಗೋವೆಯ ಕುರಿತು ಕಮ್ಯೂನಿಸ್ಟರಾದವ ಭೋಂಜೆಯನ್ನು ನಿರೂಪಿಸುತ್ತಾ ಬ್ರಿಟಿನು ಮಧ್ಯಸ್ಥಿಕೆ ವಹಿಸುವುದಿಲ್ಲ; ಪೋರ್ಚುಗಾಲವೂ ಭಾರತವೂ ಸರಪ್ಪರ ಸಂಬಂಧ ಬೆಳೆಸಿಕೊಂಡು ಬಿಡಿಸಿ ಬೇಕಾದ ಸಮಸ್ಯೆ ಇದು ಎಂದಿದ್ದಾರೆ. 'ನ್ಯಾಟೊ'ಒಪ್ಪಂದವ ಕಕ್ಷೆಯಲ್ಲಿ ಗೋವೆಯನ್ನು ಸೇರಿಸುವುದೆಂದರೆ ಒಡಂಬಡಿಕೆಯ ವ್ಯಾಪ್ತಿಯನ್ನು ಬಹಳವಾಗಿ ವಿಸ್ತರಿಸಿದಂತಾಗುತ್ತದೆ; ನ್ಯಾಟೊ ರಾಷ್ಟ್ರಗಳ ಸಭೆಯಲ್ಲಿ ಗೋವೆಯ ಕುರಿತು ಸಾಮಾನ್ಯ ಮಾತುಕತೆಯಷ್ಟೇ ನಡೆಯುತ್ತದೆ ಎಂದೂ ಅವರು ತಿಳಿಸಿದ್ದಾರೆ.

ಗ್ರಂಥಾಲಯಗಳ ಅಭಿವೃದ್ಧಿ

ಹೊಸ ದೆಹಲಿಯಲ್ಲಿ 'ಯುನೆಸ್ಕೋ" ನೆರೆಯಿಸಿದ್ದ ಏಶ್ಯದಲ್ಲಿ ಗ್ರಂಥಾಲಯಗಳ ಅಭಿವೃದ್ಧಿಯನ್ನು ಕುರಿತಾದ ವಿಚಾರ ಗೋಷ್ಠಿಯಲ್ಲಿ ನೆಹರುಗಳು ಭಾಷಣ ಮಾಡುತ್ತಾ ಜನರು ಹೆಚ್ಚು ಪುಸ್ತಕಗಳನ್ನು ಓದಬೇಕೆಂದಿದ್ದಾ; ಆದರೆ ಓದವ ಪುಸ್ತಕಗಳೂ ಪತ್ರಿಕೆಗಳೂ ಉತ್ತಮ ಮಟ್ಟದವಾಗಿರಬೇಕು ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಒಳ್ಳೆಯ ಪುಸ್ತಕಗಳು ಳೆ ಗ್ರಂಥಾಲಯಗಳು ಗ್ರಾಮಕ್ಕೆ ಒಂದರಂತೆಯಾದರೂ ಇರಬೇಕಾಗಿವೆಎಂದರು. ಓದುವ ಅಭ್ಯಾಸವು ವಿಚಾರವನ್ನು ಪ್ರಚೋದಿಸುತ್ತದೆಎಂದವರು ಗ್ರಂಥಾಲಯಗಳ ಅವಶ್ಯಕತೆಯನ್ನು ಒತ್ತಿ ಹೇಳಿದರು.

ದ. ಕ. ಜಿಲ್ಲಾ ವಿದ್ಯಾ ಪರಿಷತ್ತು

ದ. ಕ. ಜಿಲ್ಲಾ ವಿದ್ಯಾ ಪರಿಷತ್ತನ್ನು ಕುಂದಾಪುರದಲ್ಲಿ ದಿನಾಂಕ ೨೪ರಂದು ಮದರಾಸಿನ ಆರೋಗ್ಯ ಮಂತ್ರಿಗಳಾದ ಶ್ರೀ ಎ ಬಿ. ಶೆಟ್ಟರು ಉದ್ಘಾಟಿಸಿದರು. ಶ್ರೀ ಶೆಟ್ಟರು ತಮ್ಮ ಉದ್ಘಾಟನಾ ಭಾಷಣದಲ್ಲಿ "ನಮ್ಮ ಶಿಕ್ಷಣವನ್ನು ಸುಸಂಸ್ಥವಸ್ಥೆಗೊಳಿಸಬೇಕು. ಪ್ರಾಥಮಿಕ ಶಿಕ್ಷಣವನ್ನು ಬುನಾದಿ ಶಿಕ್ಷಣದ ಮೇರೆಗೆ ರೂಪಿಸಬೇಕು, ಬುನಾದಿ ಶಿಕ್ಷಣವು ಯಶಸ್ವಿಯಾಗಬೇಕಾದರೆ, ಶ್ರೇಷ್ಠ ದರ್ಜೆಯ ಶಿಕ್ಷಣ ಕೌಶಲ್ಯದ ಅಗತ್ಯವಿದೆ"ಎಂದರಲ್ಲದೆ, ಇಂದಿನ ಬುನಾದಿ ಶಾಲೆಗಳ ನ್ಯೂನತೆಗಳನ್ನು ಎತ್ತಿ ತೋರಿಸಿದರು. ಪರಿಷತ್ತು ಸ್ಥಳೀಯ ಬೋರ್ಡ್‌ಹೈಸ್ಕೂಲಿನ ಆವರಣದಲ್ಲಿ ಜರಗಿತು. ಶ್ರೀ ಬಿ. ವೈಕುಂಠ ಬಾಳಿಗ, ಎಂ. ಎಲ್. ಎ., ಇವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಶೆಟ್ಟರು ನಿಡ್ಡೆಯ ಮಹತ್ವವನ್ನು ವಿವರಿಸಿ ಸ್ವಾತಂತ್ರ್ಯಪೂರ್ವದ ವಿದ್ಯಾಕ್ಷೇತ್ರದಲ್ಲಿ ಆದ ಪ್ರಗತಿಯನ್ನು ಅಂಕಿ, ಸಂಖ್ಯೆಗಳ ಮೂಲಕ ವಿಶದಪಡಿಸಿದರಲ್ಲದೆ, ಈ ವರ್ಷ ಇನ್ನೂ ೧೦೦೦ ಹೊಸ ಏಕ ಅಧ್ಯಾಪಕ ಶಾಲೆಯನ್ನು ತೆರೆಯಲು ಸಾಧ್ಯವಾಗಬಹುದೆಂದು ಸೂಚಿಸಿದರು. ಮದರಾಸು ಸರಕಾರವು ವಿದ್ಯಾರಂಗದಲ್ಲಿ ತಂದಿರುವ ಸುಧಾರಣೆಗಳನ್ನು ವಿವರಿಸುತ್ತಾ ಶ್ರೀ ಶೆಟ್ಟರು ವಾರ್ಷಿಕ ೧೫೦ಕ್ಕಿಂತ ಕಡಿಮೆ ಆದಾಯವಿರುವ ಮಕ್ಕಳಿಗೆ ಧರ್ಮಾರ್ಜಿ ಆಗಿ ತರಗತಿಯ ತನಕ ವಿದ್ಯಾಭ್ಯಾಸಕೊಡುವುದು, ಅಧ್ಯಾಪಕರ ಹಿತ ದೃಷ್ಟಿಯಿಂದ ಸ್ಥಾಪಿತವಾಗಲಿರುವ ಪ್ರೊವಿಡೆಂಟ್ ಫಂಡ್, ಪೆನ್ಷನ್ ಮೊದಲಾದ ಯೋಜನೆಗಳನ್ನು ತಿಳಿಸಿದರು "ನಮ್ಮ ದೇಶದಲ್ಲಿ ಮಹತ್ವದ ಬದಲಾವಣೆಗಳಾಗುತ್ತಿವೆ. ಪ್ರಾಂತ ಪುನರ್ವಿಂಗಡಣೆಯು ನಮ್ಮ ದೇಶದ ಏಕತೆಗೆ ತೊಡಕಿಲ್ಲ, ಇನ್ನೂ ಹೆಚ್ಚಾಗಿ ಸಹಾಯಕವಾಗಲಿದೆ. ಇಂತಹ ಸಂದಿಗ್ಧ ಕಾಲದಲ್ಲಿ ಇಂದಿನ ಧಾರ್ಮಿಕ ಹಾಗೂ ಭಾಷಾ ಮನೋಭಾವನೆಯನ್ನು ಮೆಚ್ಚಿ ತಾರದೆ, ರಾಷ್ಟ್ರೀಯ ಐಕ್ಯತೆ ಪುತ್ತು ಅಂತಾರಾಷ್ಟ್ರೀಯ ದೃಷ್ಟಿಯನ್ನು ಬೆಳೆಸಿಕೊಳ್ಳಬೇಕು" ಎಂದು ಶ್ರೀ ಶೆಟ್ಟರು ಸೂಚಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹಲವಾರು ಸೂಚನೆಗಳನ್ನಿತ್ತು, ನಮ್ಮ ದೇಶದಲ್ಲಿ ಜಾಲಕ ರಿಗೆ ಶಿಕ್ಷಣವನ್ನೊದಗಿಸುವ 'ಜಾಲ ವಿಹಾರ' ಗಳ ಅಗತ್ಯವಿದೆಯೆಂದು ಹೇಳಿದರು. ಪರಿಷತ್ತಿನ ಸ್ವಾಗತಾಧ್ಯಕ್ಷ ಶ್ರೀ ವೈ. ಮಂಜಯ್ಯ ಶೆಟ್ಟಿ, ಎಂ. ಎಲ್. ಎ, ಇವರು ಸಂದೇಶಗಳನ್ನೊದಿ, ವಿದ್ಯಾಭ್ಯಾಸವಲ್ಲಿರುವ ಕೊರತೆ, ಇಂತಹ ಸಮ್ಮೇಳನಗಳ ಉದ್ದೇಶದ ಕುರಿತು ಮಾತನಾಡಿದರು. ದ. ಕ. ಜಿಲ್ಲಾ ಶಿಕ್ಷಣ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಿ. ಎನ್. ವೆಂಕಟ್ರಕೃಷ್ಣರಾಯರು ಕೆಲವು ವರಾವುಗಳನ್ನು ಮುಂದಿಟ್ಟರು. ಇದರಲ್ಲಿ ದಿ! ಮಂಜಯ್ಯ ಹೆಗ್ಡೆ, ಕರ್ನಲ್ ಸಿಂಗರೆ ಮೊದಲಾದವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಗಿತ್ತು.

ಬಸ್ಸೂರಿನಲ್ಲಿ ಹೆರಿಗೆ ಮನೆ—

ಬಸ್ಸೂರು ಸ್ಥಳೀಯ ಪಂಚಾಯತ್ ಜೋರ್ನಿನವರ ಸುತ್ತು ಸಾನಜನಿಕರಿಂದ ಸಂಗ್ರಹಿಸಲ್ಪಟ್ಟ ಸ್ವಲ್ಪ ಹಣವನ್ನು ಉಪಯೋಗಿಸಿ ಹೆರಿಗೆ ಮನೆಯೊಂದನ್ನು ಕಟ್ಟಿಸಲು ನಿರ್ಧರಿಸಿದೆ. ಈ ಕಾರ್ಯಕ್ಕೆ ಸಹಾಯಾರ್ಥವಾಗಿ ಸಂಗ್ರಹಿಸಲ್ಪಟ್ಟ ಹಣವನ್ನು ಸಂಗ್ರಹಿಸಿಡಲು ಬಸ್ಸೂರಿನಲ್ಲಿ ಒಂದು ಅಂಚೆ ಕಛೇರಿಯನ್ನು ತೆರೆಯಲಾಗಿದೆ. ಈ ಕಾರ್ಯಕ್ಕೆ ಸಹಾಯ ಮಾಡಲಿಚ್ಛಿಸುವವರು ಬಸ್ಸೂರು ಅಂಚೆ ಕಛೇರಿಯಲ್ಲಿ ಹಣ ಸಂದಾಯ ಮಾಡಬಹುದು.

ಮೇದ್ರಾಸಿನ ಮುಖ್ಯ ಮಂತ್ರಿಗಳು ಬರುವರೆ:

ದಿನಾಂಕ ೩೦ರಂದು ಬೆಂಗಳೂರಿಗೆ ಬರಲಿರುವ ಮದರಾಸಿನ ಮುಖ್ಯ ಮಂತ್ರಿಗಳಾದ ಶ್ರೀ ಕಾಮರಾಜ ನಾಡರವರು ಆ ದಿನವೆ ಮಂಗಳೂರಿಗೂ ಬರಲಿದ್ದಾರೆಂದು ತಿಳಿದು ಬರುತ್ತದೆ. ಆಪ್ಪಜೆ ಅವರು ದಿನಾಂಕ ೨೯ ಮತ್ತು ೩೦ರಂದು ಜಿಲ್ಲಾ ಪ್ರವಾಸವನ್ನು ಕೈಗೊಂಡು ೩೧ರಂದು ಬೆಂಗಳೂರು ಸೇರ್ಪಡುವರೆಂಬುದೇ ಮೊದಲಿನವರೆಂಬೂ ತಿಳಿದು ಬಂದಿರುತ್ತದೆ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 414/1955.

ಯು. ಗೋಪಾಲ ಪ್ರಭು— ವಾದಿ

ಫ್ರಾಂಶಿಸ್ಕ ಕ್ಲೇವಿಯರ್ ಫೆರ್ನಾಂದೀಸ ಕಾಮಿಲಲಬಿಸ್ತಿನ್ ಫೆರ್ನಾಂದೀಸರ ಮಗ, ಕೊಡವೂರು ಗ್ರಾಮದ ಕೆಲ್ಲಾಡಿ— ಪ್ರತಿವಾದಿ

ಸದರಿ ಪ್ರತಿವಾದಿಗೆ—

ವಾದಿಯ ಅನಿಭಕ್ತ ಕುಟುಂಬದ ಪೊದ್ದಿನ ಎಜಮಾನರಾಗಿದ್ದ ವಾದಿಯ ತಂದೆಯಾದ ರಾಮಪ್ರಭುಗಳಿಗೆ ಪ್ರತಿವಾದಿಯು ತಾರೀಕು 31—1—1952ರಲ್ಲಿ ರೂಪಾ 2000/- ಕ್ಕೆ ಬರೆಕೊಟ್ಟ ಡಿನೂಂಡ್ ನೋಟಿನ ಬಾಬ್ತು ಬಹಾ ಅಸಲು ಬಡ್ಡಿ ಕೂಡಾ ರೂ. 2391—11—೪೪ ಬಗ್ಗೆ ಈಗಿನ ಎಜಮಾನನಾದ ವಾದಿಯು ಪ್ರತಿವಾದಿಯ ಮೇಲೆ ನೂಡಿದ ಸದರಿ ದಾವೆಯು ತಾರೀಕು 12—11—1955ಕ್ಕೆ ತನಿಖೆ ಬಗ್ಗೆ ಇಡೋಡಾಗಿಯದೆ. ಆ ದಿನ ಸದ್ರಿ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಕಾಂತ್ರ ಕೋರ್ಟಿಗೆ ಹಾಜರಾಗಿ ಉದಪರಿಸಿದಿದ್ದಲ್ಲಿ ಆತನ ಗೈರುಹಾಜರಿಯಿಂದ ಸದರಿ ದಾವೆಯು ತೀರ್ಮಾನಿಸಲ್ಪಡುವದೆಂದು ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋಡಾಗಿಯದೆ ..

M. Damoder Kamath,
Advocate for Plaintiff.

ಉಡುಪಿ, ತಾ. 24—10—55.

The Moolky Bank, Ltd., Mulki.

Share Certificates No. 620 to 629 standing in the name of late Sri Srinivasa Talithaya, Kasargod are reported to have been lost. The legal representative Dr V. S. Talithaya has applied for the issue of fresh Share Certificates in the place of lost ones. Any objection to such issue should be filed with the Bank by 19—11—1955 failing which fresh Share Certificates in the place of original ones will be issued.

(Sd.) M. R. H Punja,
Manager.

ಉಡುಪಿ

ಕಾದಂಬರಿಯ ಉದ್ಘಾಟನೆ— ಪ್ರಸಿದ್ಧ ಬರಹಗಾರರೆಲ್ಲೊಬ್ಬರಾದ ಶ್ರೀ ಎಸ್. ವೆಂಕಟರಾಜರು ಬರೆದ 'ಆಂಬುಜಾಕ್ಷಿ' ಎಂಬ ಕಾದಂಬರಿಯ ಉದ್ಘಾಟನೆಯು ತಾ. 21 ರಂದು ಪಾಜಿಟ್ಟಿಕ್ ಪ್ರೆಸ್ಸಿನಲ್ಲಿ ಪ್ರಿನ್ಸಿಪಾಲ್ ಕಾಲಿಗಿ ಕೇಪಾಜಾರ್ಯರಿಂದ ನೆರವೇರಿತು. ಉದ್ಘಾಟಕರು ಕಾದಂಬರಿಯ ಮೇಲ್ಪಟ್ಟವನ್ನು ಸೂಚಿಸಿ ಶ್ರೀ ರಾಜರ ಬರವಣಿಗೆಯ ಶಕ್ತಿಯನ್ನು ಕೊಂಡಾಡಿದರು. ಆರಂಭದಲ್ಲಿ ಶ್ರೀ ರಾಜರು ಸ್ವಾಗತ ಭಾಷಣಮಾಡಿದರು. ಪ್ರಕಾಶಕ ಶ್ರೀ ರಂಗಿಪೇಂದ್ರ ರಾಯರ ಉಪಾಹಾರದೊಂದಿಗೆ ಸಭಾಂತ್ಯವಾಯಿತು.

ವಾರ್ಷಿಕ ಮಹಾಧಿವೇಶನ:— ಸ್ಥಳೀಯ ರಾಷ್ಟ್ರಭಾಷಾ ಶಿಕ್ಷಣ ಶಿಬಿರದ ಎಂಟನೇ ವಾರ್ಷಿಕ ಮಹಾಧಿವೇಶನವು ನಗರಸಭೆಯ ಕಮಿಶನರರಾದ ಶ್ರೀ ವಿ. ಕೆ. ನಂಬೀಸರ ಅಧ್ಯಕ್ಷತೆಯಲ್ಲಿ ತಾ. ೨೪ರಂದು ಜರಗಿತು. ಕಾರ್ಯದರ್ಶಿ ಶ್ರೀ ಸಿ. ಮಹಾಬಲ ನಾಯಕರು ವರದಿಯನ್ನೋದಿದ ಬಳಿಕ ಶ್ರೀ ಉ ಲ. ಕಿಣಿಯವರು ಹಿಂದೀ ಪ್ರಚಾರದ ಕುರಿತು ಭಾಷಣಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಟಿ. ಎಂ.ಎ ಪೈಗಳು ಶಿಬಿರದ ಚಟುವಟಿಕೆಗಳನ್ನು ಪ್ರಶಂಸಿಸಿ ವಿದ್ಯಾರ್ಥಿಗಳನ್ನು ಪರಿಷದರು ಅಧ್ಯಕ್ಷರಿಗೆ ಮೆಯೋಚಿತ ಮಾತುಗಳ ಬಳಿಕ, ಶ್ರೀ ಭಕ್ತ ಪ್ರಿಯ "ವೇದಾಲಂಕಾರ" ಇವರು ಧನ್ಯವಾದ ಸಮರ್ಪಿಸಿದರು.

"ವಿಶಾರದ" ವೆರ್ಗ :— ಇದೇ ನವಂಬರ 1ನೇ ತಾರೀಕಿನಿಂದ ಸ್ಥಳೀಯ ರಾಷ್ಟ್ರಭಾಷಾ ಶಿಕ್ಷಣ ಶಿಬಿರದಲ್ಲಿ ಹಿಂದಿಯ "ರಾಷ್ಟ್ರಭಾಷಾ ವಿಶಾರದ" (ಪೂರ್ವಾರ್ಧ) ಪರೀಕ್ಷೆಗಾಗಿ ತರಬೇತಿಕೊಡುವ ವರ್ಗವನ್ನು ತೆರೆಯಲಾಗುವುದೆಂದು ಶಿಬಿರದ ಸಂಚಾಲಕರಿಂದ ತಿಳಿದು ಬರುತ್ತದೆ.

'ಮೂಲ್ಕಿ ಸಮಾಜ ಭವನ'ದ

ಸಹಾಯಾರ್ಥವಾಗಿ, ಮೂಲ್ಕಿ ಮಹಿಳೆಯರ ಮಾ ಹೋಲಿನಲ್ಲಿ ತಾ. 5—11—55ನೇ ಶನಿವಾರ ರಾತ್ರಿ 9ಗಂಟೆಗೆ ಜೆಸ್ಸಿಯ ನಿಷ್ಣಾತ ಕಲಾವಿದರ ಕೂಡುವಿಕೆಯಿಂದ ವಿಶಿಷ್ಟ ತರದ ಯಕ್ಷಗಾನ ಕೂಟವೊಂದು ಶ್ರೀ ಯಸ್. ಯಸ್. ಸುವರ್ಣ, ಬಿ.ಎ, ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಲಿದೆ.

ಬೊಂಬಾಯಿ ಪಿ. ವಿ. ಪ್ರಭುಗಳಿಗೆ ಸತ್ಕಾರ– ಶ್ರೀ ಪಿಲಾರ್ ಪೊಸರ್ಮ ಗೋವಿಂದ ಪ್ರಭುಗಳ ಪುತ್ರ ಶ್ರೀ ಪಿ. ವಾಸುದೇವ ಪ್ರಭುಗಳು ಸ್ಕಾಟ್ ಲೆಂಡಿನ 'ರೋಯಲ್ ಕಾಲೇಜ್ ಒಫ್ ಎಡಿನ್‌ಬರ್ಗ್' ನ ಫೆಲ್ಲಿ ವೈದ್ಯಕೀಯ ಶಾಸ್ತ್ರದಲ್ಲಿ ಉನ್ನತ ಶಿಕ್ಷಣವನ್ನು ಪಡೆದು ಇದೇ ತಾ. 14ರಲ್ಲಿ ನಿಮಾನ ಮಾರ್ಗವಾಗಿ ಮುಂಬಯಿಗೆ ಬಂದಿಳಿದಾಗ ರಾಜಾಪುರ ಸಾರಸ್ವತ ಸಂಘದವರು ಸ್ವಾಗತಿಸಿ ನುರುದಿನ ಸತ್ಕಾರಕೂಟವನ್ನೇರ್ಪಡಿಸಿ ಗೌರವಿಸಿದರು. ಸಂಘದ ಅಧ್ಯಕ್ಷ ಶ್ರೀ ಬಿ. ಎ. ನಾಯಕರು ಸ್ವಾಗತಭಾಷಣ ಮಾಡಿದ ಬಳಿಕ ಸಭಿಕರ ಪರವಾಗಿ ಹಲವರು ಮುಖ್ಯ ಅತಿಥಿಯ ಗುಣಗಾನಗೈದರು. ಶ್ರೀ ಪ್ರಭುಗಳು ತನ್ನ ಭಾಷಣದಲ್ಲಿ ಸಂಘದ ಅಭಿವೃದ್ಧಿಗೆ ಯೋಗ್ಯ ಸಲಹೆಗಳನ್ನು ಕೊಟ್ಟರು. ಗೌರವ ಕಾರ್ಯದರ್ಶಿ ಶ್ರೀ ದಿ. ವಿ. ಪ್ರಭುಗಳು ಧನ್ಯವಾದಗಳನ್ನರ್ಪಿಸಿದರು. ಉಪಾಹಾರವಾಗಿ ಸಭಾಂತ್ಯವಾಯಿತು.

ಯಕ್ಷಗಾನ– ಶ್ರೀ ಗಜಾನನ ಆಪಿಲ ಕರ್ನಾಟಕ ಯಕ್ಷಗಾನ ಮಂಡಳಿಯ ಸಹಾಯಾರ್ಥವಾಗಿ ಇದೇ ತಾ. 18ರಲ್ಲಿ ಪೀಲ್ಸ್ ಜಿನ್ನಾಯಿನಲ್ಲಿ ಶ್ರೀ ಮ. ಪ ಸಾಮುಗ ಹರಿದಾಸ, ಉಡುಪಿ ಭಾಗವತ ಶ್ರೀ ನಾರಾಯಣ ಸೆಟ್ಟಿ, ಉಡುಪಿ ಶ್ರೀ ಯು. ಬಸವ ನವರ ಕೂಡುವಿಕೆಯಿಂದ 'ಶ್ರೀ ಕೃಷ್ಣ ಪರಿಣಯ' ವೆಂಬ ಯಕ್ಷಗಾನ ಸನೂರಂಭ ಜರಗಿತು. ಮುಂಬಯಿ ಸರಕಾರದ ಮಂತ್ರಿ ಮಾನ್ಯ ಡಾ. ಟಿ. ಆರ್. ಸರ್ವಾಣಿ, ಅವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ವಿಠಲ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಹಿರಿಯಡಕ— ಇದೇ ತಾ. 19ರಿಂದ ಹಿರಿಯಡಕ ಟಿಸ್ಸಾಲು ಕಟ್ಟೆಯಲ್ಲಿ ತಂಡಿ ಆಫೀಸು ಪ್ರಾರಂಭವಾಗಿದೆ.

ಗಿರಿಕೇನುಂಡ ಉಡುಪಿ ತಾಲೂಕು ಶಿರಿಯಾರ ಗ್ರಾಮದ ಪ್ರಸಿದ್ಧ ಮನೆತನಕ್ಕೆ ಸೇರಿದ ಹೆಸರಾಂತ ಜ್ಯೋತಿಷ ವೈದಿಕ ಪಂಡಿತ ಶ್ರೀ ಗಿರಿಕೇನುಂಡ ಶ್ರೀನಿವಾಸ ಅಡಿಗರು ತಾ. 17ರಲ್ಲಿ ಪರಲೋಕವಾಸಿಗಳಾದರು. ಇವರ ಮರಣಕಾಲದ ವಯಸ್ಸು 76.

ಸುರತ್ಕಲ್– ವಿದ್ಯಾವಾಯನೀ ಹ್ಯಾಸ್ಕೂಲ್ ಹೆಡ್‌ಮಾಸ್ಟರ್ ಶ್ರೀ ಎಮ್. ವಾಸುದೇವ ರಾಯರಿಗೆ ಮದ್ರಾಸು ನಿಶ್ವವಿದ್ಯಾನಿಲಯವು ಬಹುಮಾನವಿತ್ತ ಪ್ರಯುಕ್ತ ಹ್ಯಾಸ್ಕೂಲಿನ ಉಪಾಧ್ಯಾಯ ವೃಂದದವರು ಶಾಲಾ ಮೆನೆಜರ್ ಶ್ರೀ ಬಿ. ನಿ. ಕೃಷ್ಣಯ್ಯ ಆಜ್ಜೋಕೇಟ್ ಅವರ ಅಧ್ಯಕ್ಷತೆಯಲ್ಲಿ ತಾ. 17ರಲ್ಲಿ ಸತ್ಕಾರ ಕೂಟವಿತ್ತು. ಗೌರವಿಸಿದರು. ಶ್ರೀಗಳಾದ ಎಸ್. ಸುಬ್ಬರಾಯ, ಬಿ ಪಿ. ಸೋಮಯಾಜಿ, ಎಸ್. ಶಂಕರನಾರಾಯಣಯ್ಯ, ಬಿ. ವೆಂಕಟ್ರಾವ್, ಕೆ. ವೆಂಕಟ್ರಾಪೂಜಾರ್, ಪಿ ಸಿ. ವಾಸುದೇವ ರಾವ್ ಮೊದಲಾದವರು ಭಾಷಣಗೈದರು. ಮುಖ್ಯ ಅತಿಥಿಗಳು ತಮಗಿತ್ತ ಸತ್ಕಾರಕ್ಕೆ ಆಭಾರಗೊಚಿಸಿದರು. ಅವ್ಯಕ್ತಿ ರಥಾಷಣ, ವಂದನಾಪತ್ರವೊಂದಿಗೆ ಸೆನಾರಂಭ ಕೊನೆಗೊಂಡಿತು.

ಮುನಿಯಾಲು– ಊರವರಿಂದ ಕಟ್ಟಿಸಲಾದ ಹಾ. ಎ. ಶಾಲಾ ಕಟ್ಟಡದ ಪ್ರವೇಶೋತ್ಸವವನ್ನು ದ. ಕ. ಜಿಲ್ಲಾ ಜೋರ್ಡು ಅಸ್ಸಾಕ್ಟ್ ಡಾ. ಕೆ ಕೆ. ಹೆಗ್ಡೆಯವರು ತಾ. 16 ರಲ್ಲಿ ನೆರವೇರಿಸಿದರು. ಕಾರ್ಕಳ ರೇಂಜಿನ ಶಾಲಾ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಶ್ರೀಯುತ ಕೃಷ್ಣ ರಾಯರು ಧ್ವಜಾರೋಹಣವನ್ನು ಮಾಡಿದರು. ಶಾಲಾಕಮಿಟಿ ಅಸ್ಸಾಕ್ಟ್ ಶ್ರೀ ಎಸ್. ನಾಗರಾಜ ಅತಿಕಾರಿಗಳು ಸ್ವಾಗತಭಾಷಣ ಮಾಡಿದರು.

ಡಾ. ಯು. ಕೃಷ್ಣನವರು ವರದಿವಾಚನ ಮಾಡಿದರು. ಕಮ್ಯುನಿಟಿ ಪ್ರೊಜಕ್ಟ್ ಎಕ್ಸಿಕೂಟಿವ್ ಆಫೀಸರ್ ಶ್ರೀ ಎಚ್. ನರಸಿಂಹನವರು ಶಾಲಾಕಟ್ಟಡದ ಉದ್ಘಾಟನೆಯನ್ನು ಮಾಡುತ್ತಾ ಸಮಾಜಜನಿಕರು ಯೋಜನೆಯ ಕಡೆಯಿಂದ ಮಾಡ್ರಾದಿಯಲ್ಲಿ ಬಿತ್ತಿದ ಕೈಗಾರಿಕಾ ಕೇಂದ್ರವನ್ನು ಸದ್ಬಳಸಿ ತಿರೆಯಲಾಗುವುದೆಂದು ತಿಳಿಸಿದರು. ಡಾ ಲಕ್ಷ್ಮಿನಾರಾಯಣರಾವ್ ಮೊದಲಾದವರು ಕಾಲೋಚಿತ ಸೂಕ್ತಗಳನ್ನಾಡಿದರು. ಮಕ್ಕಳ ವಿನೋದಾವಳಿಗಳಾದ ನಂತರ ಶ್ರೀ ಎಸ್. ಡಿ. ಅಧಿಕಾರಿಗಳು ಧನ್ಯವಾದಗಳನ್ನರ್ಪಿಸಿದರು. ರಾತ್ರಿ ಯಕ್ಷಗಾನ ನಡೆಯಿತು.

ಬೆಳ್ಳಾರೆ— ಸ್ಥಳೀಯ ಗ್ರಾಮಸೇವಾ ಸಂಘದ ಆಶ್ರಯದಲ್ಲಿ ಬೆಳ್ಳಾರೆಯ ಹ್ಯಾಸ್ಕೂಲಿ ನವರಿದಲ್ಲಿ ತಾ. 16 ಮತ್ತು 17 ಭಜು ನಾಡಿ ಹಲ್ಬದ ಅಂಗವಾಗಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಉತ್ಸವ ಜರಗಿತು. ಮೊದಲ ದಿನ ಜಿಲ್ಲಾ ಜೋರ್ಡು ಸದಸ್ಯ ಶ್ರೀ ಕೆ. ಕೆ ಸೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಬಿ ಕಿಟ್ಟಣ್ಣ ರೈಗಳು ಸ್ವಾಗತಿಸಿದರು, ಶ್ರೀ ಕೆ. ಪುಟ್ಟಣ್ಣ ಗೌಡ, ಶ್ರೀ ರಾಮಯ್ಯ ಸೆಟ್ಟರ ಉಸನ್ಯಾಸಗಳಾದವು. ಎರಡನೆ ದಿನದ ಸಮಾರಂಭಕ್ಕೆ ಮಂಗಳೂರು ಸರಕಾರೀ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಎಸ್. ಆನಂದ ರಾಯರು ಅಧ್ಯಕ್ಷರಾಗಿದ್ದರು. ಶ್ರೀ ಸೀತಾರಾಮಯ್ಯ ನವರು ಸ್ವಾಗತ ಸೂಚಿಗಳನ್ನಾಡಿದರು. ಶ್ರೀ ಕೆ. ಶಾಂತ ರೈಗಳಿಂದ ಭಾಷಣವೂ ಬಿ. ಎಸ್. ಇದಿನಬ್ಬ ನವರಿಂದ 'ಕವಿತಾಸಾಹಿತ' ನಡೆದವು. ಎರಡೂದಿನ ವಿವಿಧ ಸ್ಪರ್ಧೆಗಳಲ್ಲಿದ್ದವು. ಶ್ರೀ ಬಿ. ಕಿಟ್ಟಣ್ಣ ರೈಗಳಿಂದ ವಂದನಾರ್ಪಣೆಯಾಯಿತು.

ಕಾಸರಗೋಡು– ಸರ್ವಪಕ್ಷೀಯ ಸಮಿತಿಯ ಆದೇಶದ ಮೇರೆಗೆ ಕಾಸರಗೋಡು ದಿನಾಚರಣೆಯು ತಾ. 21ರಲ್ಲಿ ಶ್ರೀ ಎಸ್. ಲಕ್ಷ್ಮಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಕೆ. ಸೆಟ್ಟಿ, ಡಾ. ಪಿ. ಎಸ್. ಬಟ್ ಮೊದಲಾದವರು ಸುಪ್ರಾಸಿನ ಮಾಜಿ ಮಂತ್ರಿ ಶ್ರೀ ಕೆ ಮಾಧವ ಮೆನೋನರು 'ಕಾಸರಗೋಡನ್ನು ಕೇಳುವ ಹಕ್ಕು ಕನ್ನಡಿಗರಿಗಿಲ್ಲ' ವೆಂದು ಕೊಟ್ಟ ಹೇಳಿಕೆಯನ್ನು ಪ್ರತಿಭಟಿಸಿ, ಕಾಸರಗೋಡು, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ದೃಷ್ಟಿಯಿಂದ ಕನ್ನಡಿಗರದ್ದಾಗಿದ್ದು ನಿರ್ಣಯಿಸಿತು. ಕರ್ನಾಟಕ ಪಾಂತದ ಒಂದು ಅಂಗವಾಗಿಯೇ ಉಳಿಯಬೇಕೆಂದೂ, ಆ ದಕ್ಕಾಗಿ ಪ್ರತಿಯೊಬ್ಬನೂ ತನ್ನ ಬೆಂಬಲ ಪೀಡಿ ಚಳವಳಿಸಬೇಕೆಂದೂ, ಕಾಸರಗೋಡನ್ನು ಕೇರಳದಲ್ಲಿ ಸೇರಿಸಬಂತೆ ಕಾರ್ಯಸೂಕ್ತ ಜಾರಿಬೇಕೆಂದೂ ನಿರ್ಣಯಿಸಿತ್ತರು. ಕಾಸರಗೋಡಿನ ಶ್ರೇಯಸ್ಸಿಗಾಗಿ ಕೆಲವೆಡೆ ದೇವಸ್ಥಾನ, ಮಸೀದಿಗಳಲ್ಲಿ ಪ್ರಾರ್ಥನೆಗಳಾದವು ಹಲವು ಸ್ಥಳಗಳಲ್ಲಿ ಸಭಾ ಸಭೆಗಳು ಜರಗಿದವು. ಮರುದಿವಸ ಶ್ರೀ ನುಲ್ಲಿಕಾರ್ಜುನ ದೇವಸ್ಥಾನದ ಇದಿರು ಸೈದಾಪಿನಲ್ಲಿ ಶ್ರೀ ಪೆಲೋತ್ತ ನಾರಾಯಣನ್ ನಂಬಿಯಾರ್, ಎಸ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿಯೂ ಒಂದು ಸಭೆ ಜರಗಿತು. ಪ್ರಾರಂತಪುನರ್ರಚನಾ ಆಯೋಗದ ವರದಿಯನ್ನು ಸ್ವಾಗತಿಸಿ, ಅಬಾಧಿತ ಕಾಸರಗೋಡು ತಾಲೂಕನ್ನು ಕೇರಳದಲ್ಲಿ ಇರಗೊಡಿಸಬೇಕೆಂಬ ನಿರ್ಣಯವು ಬಹುಮತದಿಂದ ಪಾಸಾಯಿತು. ಸಭೆಯಲ್ಲಿ ಘರ್ಷಣೆಯುಂಟಾದುದರಿ ಪರಿಣಾಮವಾಗಿ ಮೂವರ ದಸ್ತಗಿರಿಯೂಡಾ ಆಗಿರುವುದಾಗಿ ತಿಳಿದುಬರುತ್ತವೆ. ಈ ಘರ್ಷಣೆ ಮತ್ತು ಕಲ್ಲೆಸೆತವನ್ನು ನಿಷೇಧಿಸಿಯೂ ಜನತೆಯಲ್ಲಿ ಶಾಂತ ವಾತಾವರಣ ಉಂಟಾಗುವಂತೆಯೂ ಶ್ರೀ ಎಸ್. ಉಮೇಶ ರಾಯರು ನೂರು ದಿವಸಗಳ ಉಪವಾಸ ಕೈಕೊಂಡಿರುವರು ಎನ್ನಲಾಗಿದೆ.

ಶಿಷ್ಟ ಮಂಡಲ: ದಕ್ಷಿಣ ಕನ್ನಡದ ಶಿಷ್ಟ ಮಂಡಲ ದಿನಾಂಕ ೨೧ ರಿಂದು ಕಾಸರಗೋಡಿನ ಚಂದ್ರಗಿರಿ ಹೊಳೆಯ ಉತ್ತರ ಭಾಗವು ಕರ್ನಾಟಕದ ಅವಿಭಾಜ್ಯ ಅಂಗವಾಗಿದ್ದೆ ಅದನ್ನು ಕೇರಳಕ್ಕೆ ಸೇರಿಸಬಾರದು ಮುಂತಾಗಿ ಸೂಚಿಸಿರುವ ಒಂದು ಮನವಿಯನ್ನು ಮದ್ರಾಸು ಮುಖ್ಯ ಮಂತ್ರಿಗಳಾದ ಶ್ರೀ ಕಾಮರಾಜ ನಾದರರಿಗೆ ಒಪ್ಪಿಸಿರುತ್ತಾರೆ. ಈ ಶಿಷ್ಟ ಮಂಡಲದಲ್ಲಿ ಶ್ರೀಗಳಾದ ಕೆ. ಯಳ್. ಹೆಗ್ಡೆ, ಎಂ. ಪಿ., ಕೆ ಇರ್. ಕಾರಂತ, ಬಿ. ವಿ. ಬಾಳಿಗ, ಎಂ. ಎಲ್. ಎ., ಎಂ. ಎಸ್. ಮೊಗ್ರಾಲ್, ಎಂ, ಎಲ್. ಎ, ಎಂ. ಉಮೇಶ ರಾವ್, ಡಾ| ಪಿ. ಯನ್. ಶಾಸ್ತ್ರಿಗಳು ಇದ್ದರೆಂದು ತಿಳಿದು ಬಂದಿದೆ.

ಶಿರೂರು-ಸ್ಥಳೀಯ ವಿಲಮೆಂಟರಿ ಶಾಲೆಯಲ್ಲಿ ಇದೇ ತಾ. 21ರಂದು ಶ್ರೀ. ಎಸ್. ಶಿವರಾಮ ಸೆಟ್ಟರ ಅಧ್ಯಕ್ಷತೆಯಲ್ಲಿ 'ಶಾರದಾ ಪೂಜಾ' ಸಮಾರಂಭವು ವಿವಿಧ ಕಾರ್ಯಕ್ರಮಗಳಿಂದ ಸಾಂಗವಾಗಿ ಜರಗಿತು. ಶಾಲಾ ಮೆನೇಜರ್ ಶ್ರೀ. ಎಚ್. ಮಹಾಬಲ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಕುಲುಗುಂದ ಜಾತ್ರೆ— ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಜರಗುವ ಜಾತ್ರೆಯು ಸಂತೆಯು ತಾ. ೨೦-11-೫೫ರಿಂದ 13.12-೫೫ರ ತನಕ ಜರಗುವುದೆಂದೂ, ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ನಾಲ್ಕಾಣೆ ಮೇರೆಗೆ ಫೀಸು ಜಸೂಲು ಮಾಡಲಾಗುವುದೂ ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ. ಟಿ. ವಿ. ಪಿ. ಕುದುಪ್, ಅವರು ತಿಳಿಸುತ್ತಾರೆ.

(ಜನೇ ಪುಟದಿಂದ)

ಪೈಗಳು ಆಯೋಗದ ಸಂಚಾಲನೆಯನ್ನು ಸಮರ್ಥಿಸುವುದಿಲ್ಲ. ಆಣೆಕಟ್ಟಿನ ಪ್ರಯೋಜನ ಹೊಂದುವ ಪ್ರದೇಶಗಳಲ್ಲಿ ಕನಿಷ್ಟ ೬೦% ಕನ್ನಡ ಪ್ರದೇಶಗಳಾಗಿವೆ; ಆಗಾಗಲೇ ಆಂಧ್ರಕ್ಕೆ ಕೊಡಲಾದ ಆಲೂರು, ಆದವಾನಿ ಮತ್ತು ರಾಯದುರ್ಗಗಳ ಮೇಲಿನ ಕನ್ನಡಿಗರ ಹಕ್ಕನ್ನು ಮನ್ನಿಸಿದರೆ ಆಂಧ್ರರಿಗೆ ಆಣೆಕಟ್ಟಿನ ಪ್ರಯೋಜನವು ಏನೇನೂ ಉಳಿಯುವುದಿಲ್ಲ. ಆದುದರಿಂದ ಸರಕಾರದ ಹಿಂದಿನ ವಾಗ್ದಾನಗಳ ಪಾವಿತ್ರ್ಯ ರಕ್ಷಣೆಗಾಗಿಯಾದರೂ ಬಳ್ಳಾರಿಯನ್ನು ಮರಳಿ ಎತ್ತಲು ಯಾವ ಸಬಲ ಕಾರಣವೂ ಇಲ್ಲ

ಕುಳುವರ ಕಾಸರಗೋಡು

ಕಾಸರಗೋಡನ್ನು ಕೇವಲ ಭಾಷೆಯ ತಳಪಡಿಯ ಮೇಲೆ ಮಾತ್ರ ಆಯೋಗ ಕೇರಳಕ್ಕೆ ಕೊಡಲು ನೋಡಿದೆ. ಈ ಅಂಕೆ ಸಂಖ್ಯೆಗಳನ್ನು ನಂಬುವಂತಿಲ್ಲವೆಂದೂ ಅದು ಹೇಗೆದೆ ಹೀಗಿರುವಾಗ, ಕನಿಷ್ಟ ಪಕ್ಷ ಜಿಲ್ಲೆಗಾರಿ ಜೊಳೆಯು ಉತ್ತರ ಭಾಗವನ್ನಾವರೂ ಕನ್ನಡದ ನೆಲವಾಗಿ ಮನ್ನಿಸದೆ ಹೋಗುವುದಕ್ಕೆ ಯಾವದೇ ತಾರಿತ್ಯಿಕ ಅಥವಾ ಪ್ರಚಲಿತ ಸ್ಥಿತಿಗತಿಯ ಆಧಾರವುಳ್ಳ ಕಾರಣ ಕಾಣುವುದಿಲ್ಲ.ಭಾರತದ ಘಟಕಗಳಲ್ಲಿಯೇ ಚಿಕ್ಕದಾದ ಕೇರಳವನ್ನು ಸ್ವಲ್ಪ ಮಟ್ಟಗಾದರೂ ದೊಡ್ಡ ಘಟಕವಾಗಿ ರೂಪಿಸುವ ಉದ್ದೇಶವೊಂದೇ ಕನ್ನಡಿಗರಿಗೆ ಹೀಗೆ ಅನ್ಯಾಯ ಬಗೆಯುವಂತೆ ಮಾಡುತ್ತದೆ.

ಧುರೀಣರ ಹೊಣೆಗಾರಿಕೆ

ಮೈಸೂರಿನಿಂದಿಗೆಯೇ ಸಂಪರ್ಕವಿರುವ ಮಡಕಶಿರೆ ತಾಲೂಕಾ, ಕನ್ನಡ ಸಂಖ್ಯೆಯಿ ಸಂಪನ್ನರಾದ ತೊದವೂ ಇತರ ನಾಗರಿಕರೂ ಉಳ್ಳ ಸೀಲಗಿರಿಯು ಪ್ರದೇಶ, ಅಕ್ಕಲಕೋಟೆ, ಜತ್ತ, ಶೋಲಾಪುರ, ಹೆಸೆಸೊರು ಮುಂತಾದ ತಾಲೂಕುಗಳು ಕರ್ನಾಟಕದಲ್ಲಿಯೇ ಸೇರಬೇಕೆಂದು ಕನ್ನಡಿಗರ ಅಭಿಪ್ರಾಯವಾಗಿದೆ. ಕರ್ನಾಟಕ ಪ್ರದೇಶ ಕಾಂಗ್ರೆಸು ಮರಾಠಿಗರೊಡನೆ, ಆಂಧ್ರರೊಡನೆ, ತಮಿಳರೊಡನೆ ಮತ್ತು ಮಲೆಯಾಳಿಗಳೊಡನೆ, ಸಣ್ಣ ನಾಡುಗಳನ್ನು ಶಕ್ತಿ ಸಂಪನ್ನವಾಗಿಸಲೆಂಬುದು ಲಾಭವನ್ನು ಪಡೆದು ನ್ಯಾಯವನ್ನು ಶಿಲುಬೆಗೇರಿಸಲಾಗದು. ಕಾಂಗ್ರೆಸಿಗರಿಗೇ ಚಳವಳದ ವಾರ್ಗ ವನ್ನು ವಿಚ್ಚಿ ಬಿಟ್ಟರುವುದರಿಂದಂತೂ ವಿಶ್ವರು ಕನ್ನಡಿಗರ ಕುರಿತು ಹೆಚ್ಚಿನ ಸಹಾನುಭೂತಿಯನ್ನು ತೋರಿಸಲೇ ಬೇಕಾಗಿದೆ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡನ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸನಿಹದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಷರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಜೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಹಿಡುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಶ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಸಾಲ ಸ್ವಂತ ಜನಾಬ್ದಾರಿಯ ಮೇಲೆ ದೊರೆಯುತ್ತದೆ ಸುಲಭ ಕಂತಿನ ಸುರುಪಾನತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿ ಕೊಳ್ಳುವುದು.

P. O. Box No. 3219, BOMBAY 3-

ಮಂಗಳೂರು

ಸುಸ್ವಾಗತವನ್ನೆ—ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ॥ ಯು. ಪಿ. ಮಲ್ಯರು ಇಂಗ್ಲಾಂಡು, ಫ್ರಾನ್ಸ್, ಜರ್ಮನಿ, ಸ್ವಿಟ್ಸುರ್‌ಲಾಂಡ್, ಇಟೆಲಿ ನೆಹರೂಲಾದ ವಿದೇಶ ದೇಶಗಳಲ್ಲಿ ಸಂಚರಿಸಿ ತಾ. ೨೦ರಲ್ಲು ಮಂಗಳೂರಿಗೆ ಬಂದಿರುವರು.

ಕಲೆಕ್ಟರರ ಪತ್ರಿಕಾ ಪರಿಷತ್ತು—ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಜಿ. ರಾಜಾರಾಯರು ತಾ. ೧೪ರಲ್ಲಿ ಜಿಲ್ಲೆಯ ಅಭಿವೃದ್ಧಿ ಯೋಜನೆಗಳ ಕುರಿತು ಪತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಈ ರೀತಿ ಹೇಳಿದರು. 1948ರಲ್ಲಿ ಪುತ್ತೂರು ತಾಲೂಕಿನ 32 ಗ್ರಾಮಗಳಲ್ಲಿ ಆರಂಭವಾಗಿ, ಈಗ ದ. ಕ. ಜಿಲ್ಲೆಯ ಪುತ್ತೂರು ಕಾರ್ಕಳ, ಕುಂದಾಪುರ ಮತ್ತು ಕಾಸರಗೋಡು ತಾಲೂಕುಗಳ 204 ಗ್ರಾಮಗಳಿಗೆ ವಿಸ್ತರಿಸಲಾದ ಮಲೇರಿಯಾ ನಿರೋಧ ಕಾರ್ಯಕ್ರಮದಿಂದಾಗಿ ಈ ಕ್ಷೇತ್ರದಲ್ಲಿ ಮಲೇರಿಯಾ ರೋಗವು ಸಂಪೂರ್ಣ ಹತೋಟಿಗೆ ಬಂದಿರುವುದು. ಈಗ ಮಲೇರಿಯಾದಿಂದ ಆಗುವ ಮರಣ ಸಂಖ್ಯೆಯು ಸೇಕಡಾ 05ರಿಂದ 01 ಕ್ಕೆ ಇಳಿದಿದೆ.

ಮಂಜೇಶ್ವರ, ಸುಳ್ಯ ಮತ್ತು ಬೈಂದೂರು ರಾ. ವಿ. ಯೋಜನಾ ಕ್ಷೇತ್ರಗಳಲ್ಲಿ ಕಳೆದ ಎರಡು ತಿಂಗಳುಗಳಲ್ಲಿ 19 ರಸ್ತೆ, ಕಾಮಗಾರಿಗಳು, 1 ಕಾಲು ಸಂಕ, 1 ಬಾವಿ, 4 ಶಾಲಾ ಕಟ್ಟಡಗಳ ಕಾರ್ಯಗಳು ಸಂಪೂರ್ಣವಾಗಿವೆ. ನೀಲೇಶ್ವರದಲ್ಲಿ ಪ್ರತ್ಯೇಕ ರಾಷ್ಟ್ರೀಯ ವಿಸ್ತರಣಾ ಯೋಜನಾ ಬ್ಲಾಕ್ ಆರಂಭವಾಗಿದೆ. ಸಮಾಜ ವಿಕಾಸ ಯೋಜನಾ ಕ್ಷೇತ್ರದಲ್ಲಿ ಕಳೆದ ಎರಡು ತಿಂಗಳುಗಳಲ್ಲಿ 25 ಸೈಲುಗಳಷ್ಟು ರಸ್ತೆ 20 ಪೋರಿ, 3 ಕಾಲುಸಂಕ, 8 ಬಾವಿ ಮತ್ತು 26 ಇತರ ಕಾಮಗಾರಿಗಳು ಸಂಪೂರ್ಣವಾಗಿವೆ. ರಾ. ವಿ. ಯೋಜನಾ ಕ್ಷೇತ್ರದಲ್ಲಿ ಈ ವರ್ಷಕ್ಕೆ ರೂಪಾಯಿ 19,88,694 ವೆಚ್ಚವಾಗಿದೆ. ಕಿನ್ನಿಗೋಳಿಯಲ್ಲಿ ಜನವರಿಗಳಿಗೆ ಕೃತಕ ಗರ್ಭಧಾರಣೆ ಮಾಡುವ ಸಿಂದು ಉಪಕೇಂದ್ರ ತೆರೆಯುವ ಮತ್ತು ಆ ಕೇಂದ್ರಕ್ಕೆ ಹೊಂದಿಕೊಂಡಿರುವ ಇತರ ನಾಲ್ಕು ಸಣ್ಣ ಕೇಂದ್ರಗಳನ್ನು ತೆರೆಯುವ ಯೋಜನೆಯನ್ನು ಮಂಜೂರಾತಿಗಾಗಿ ಸರಕಾರಕ್ಕೆ ಕಳುಹಿಸಲಾಗಿದೆ.

ಮಾಜಿ ಸೈನಿಕರ ಸಭೆಯು—ತಾ. 16ರಲ್ಲು ಶ್ರೀ ಡಿ. ಮೋಹನ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಜಿಲ್ಲಾ ಮಾಜಿ ಸೈನಿಕರ ಸಂಸ್ಥೆಯೊಂದನ್ನು ರಚಿಸಬೇಕೆಂದು ನಿರ್ಧರಿಸಲಾಯಿತು.

ನಗರ ಸಭಾಧಿಪತಿಗಳ ವಿನಂತಿ—ಮಂಗಳೂರು ಸಿಟಿ, ಕಾಸರಗೋಡು ಟೌನ್ ಮತ್ತು ಕಲ್ಲಿಕೋಟೆಯ ಆಸಕಾಲು ರೋಗ ನಿಯಂತ್ರಣಾ ನಿಧಿಗಳ ಪೊಂದು ಸ್ಥಾಪಿಸಲ್ಪಡಲಿದೆ. ಡಾ॥ ಆರ್. ಸುಬ್ರಮಣ್ಯಂ ಆವರು ಆಸಕಾಲು ರೋಗ ಪ್ರತಿಬಂಧಕಾಧಿಕಾರಿಗಳಾಗಿ ತನ್ನ ಕೆಲಸವನ್ನು ಸಿದ್ಧವೇ ನಿರ್ವಹಿಸಲಿದ್ದಾರೆ. ನಗರ ವಾಸಿಗಳು ಆವರೊಡನೆ ಸಹಕರಿಸಿ ಆವರ ಕಾರ್ಯವು ಜಯಶೀಲವಾಗುವಂತೆ ನೋಡಬೇಕಾಗಿ ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಆಡಿಗರು ವಿನಂತಿಯಿನೆ.

ಶ್ರೀ. ಎಫ್. ಎಕ್ಸ್. ಡಿ. ಪಿಂಟೋರ ಜಪ್ತಿನಾಮೆ ರದ್ದು—ಜಪ್ತಿನಾಮೆ ಕಮಿಶನರ್ ಮತ್ತು ಮಂಗಳೂರಿನ ಪ್ರಿನ್ಸಿಪಾಲ್ ಸಬೋರ್ಡಿನೇಟ್ ಜಡ್ಜ್‌ರಾದ ಶ್ರೀ. ಯು. ನಾರಾಯಣ ರಾಯರು, ಕಳೆದ ಜಪ್ತಿನಾಮೆಯಲ್ಲಿ ಮಂಗಳೂರು ಹೊರ ವಲಯದಿಂದ ಜಿಲ್ಲಾ ಜೋರ್ಡಿಗೆ ಅರಿಸಿ ಬಂದ ಕಾಂಗ್ರೆಸ್ ಸದಸ್ಯ ಶ್ರೀ. ಎಫ್. ಎಕ್ಸ್. ಡಿ. ಪಿಂಟೋರ ವಿರುದ್ಧ ಆವರ ಪ್ರತಿಸ್ಪರ್ಧಿಯಾಗಿದ್ದ ಕಮ್ಯುನಿಸ್ಟ್ ಸದಸ್ಯ ಶ್ರೀ. ಬಿ. ವಿ. ಕಕ್ಕಿಲ್ಲಾಯರು ಸಲ್ಲಿಸಿದ ಚುನಾವಣಾ ಅಕ್ಷೇಪ ಅರ್ಜಿಯನ್ನು ತನ್ನ ನೆಡಿಸಿ, ಈ ಚುನಾವಣೆಯು ಲಂಚ ಕೋರ ನಡವಳಿಗಳಿಂದ ಕಲುಷಿತವಾಗಿದೆಯೆಂದು ಹೇಳಿ ಚುನಾವಣೆಯನ್ನು ರದ್ದುಗೊಳಿಸಿ, ಮರು ಚುನಾವಣೆ ನಡೆಸಬೇಕೆಂದು ಆಜ್ಞಾಪಿಸಿ, ಅರ್ಜಿದಾರರ ಖರ್ಚನ್ನು ತೆರಬೇಕೆಂದು ಸೂಚಿಸಿರುವರು.

ಸಾರ್ವಜನಿಕ ಸಭೆ—ದ. ಕ. ಜಿಲ್ಲಾ ಸೋಶಿಯಲಿಸ್ಟ್ ಪಕ್ಷದ ನೇತೃತ್ವದಲ್ಲಿ ತಾ. 18ರಲ್ಲು ಸಂಜೆ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆಯೊಂದು ಶ್ರೀ ಎನ್. ರಾಮಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡು ತಾಲೂಕನ್ನು ಕೇರಳಕ್ಕೆ ಸೇರಿಸುವ ದನ್ನು ಖಂಡಿಸಿ, ಉತ್ತರ ಭಾಗವನ್ನು ಕರ್ನಾಟಕಕ್ಕೆ ಸೇರಿಸಬೇಕೆಂಬ ನಿರ್ಣಯ ಗಳಾದುವು. ಶ್ರೀ ವೈ. ಹರಿಶ್ಚಂದ್ರ ರಾಯರು ಧನ್ಯವಾದಗಳನ್ನರ್ಪಿಸಿದರು.

ಬಿ. ಸಿ. ಜಿ. ದಾಕು ಹಾಕುವಿಕೆ ಪ್ರಾರಂಭ—ಪ. ಕ. ಜಿಲ್ಲೆಯ ಗ್ರಾಮಾಂತರ ಬಿ. ಸಿ. ಜಿ. ದಾಕು ಹಾಕುವ ಕಾರ್ಯಕ್ರಮವನ್ನು ತಾ. 17ರಲ್ಲು ಬೆಳಿಗ್ಗೆ ಬಜ್ಪೆಯ ಸನಾಜ ಮಂದಿರದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಜಿ. ರಾಜಾರಾಮರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಜೋರ್ಡು ಅಧ್ಯಕ್ಷರಾದ ಡಾ. ಕೆ. ಕೆ. ಹೆಗ್ಡೆ ಯವರು ವಹಿಸಿದ್ದರು. ಡಾ. ಹರಿಪರನ್, ಡಾಕ್ಟರ್ ನಾಗಪ್ಪ ಆಳ್ವ ಹಾಗೂ ಕಮ್ಯೂನಿಟಿ ಪ್ರಜೆಕ್ಟ್ ಆಫೀಸರ್ ಶ್ರೀ. ಎಚ್. ನರಸಿಂಹ ನವರು ಮಾತನಾಡಿದರು. ರೆ॥ ಫಾ. ಕರ್ವಾಲೋರವರು ಧನ್ಯವಾದಗಳರ್ಪಿಸಿದರು.

ಜಿಲ್ಲಾ ಜೋರ್ಡು ಸಭೆಯು—ತಾ. 18ರಲ್ಲು ಡಾ॥ ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ಮಂಜುನಾಥ್ ಹೆಗ್ಡೆಯವರು ಈ ಸಭೆಯು ಸಾಮಾನ್ಯವಾಗಿ ಕರ್ನಾಟಕ ಸ್ವಾಂತ್ಯ ರಜೆನೆಯಾಗಬೇಕೆಂಬ ಪ್ರಾಂ. ಮು. ಸಮಿತಿಯ ಸೂಚನೆಯನ್ನು ಸ್ವಾಗತಿಸುತ್ತದೆ. ಆದರೆ ಬಳ್ಳಾರಿ, ಹೊಸಪೇಟೆ, ಸಿರಗುಪ್ಪಗಳನ್ನು ಪ್ರತ್ಯೇಕವಾಗಿ ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಉತ್ತರ ಭಾಗವನ್ನು ಕರ್ನಾಟಕದಲ್ಲೇ ಸೇರಿಸಬೇಕೆಂದು ವಿನಂತಿಸುತ್ತದೆ. ಎಂಬ ನಿರ್ಣಯವನ್ನು ತಂದು, ಚಂದ್ರಗಿರಿ ಹೊಳೆಯ ದಕ್ಷಿಣ ಭಾಗವು ಮಲೆಯಾಳ ಭಾಷೆಯನ್ನಾಡುವ ಪ್ರದೇಶವಾಗಿದ್ದು ಕೇರಳಕ್ಕೆ ಸೇರಿಯೇ ಸರಿಯೆಂದೂ ಮತ್ತು ಉತ್ತರ ಭಾಗವು ಜಾರಿತ್ಯಕ, ಸಾಂಸ್ಕೃತಿಕವಾಗಿ ಕರ್ನಾಟಕಕ್ಕೆ ಸೇರಬೇಕೆಂದೂ ಹೇಳಿದರು. ಶ್ರೀ ಕೆ. ಕೆ. ಶೆಟ್ಟರು ಅನುಮೋದಿಸಿದರು. ಶ್ರೀ ಎಸ್. ಎಸ್. ಪರಮೇಶ್ವರಯ್ಯನವರು ಪುಷ್ಟೀಕರಿಸಿದರು. ಶ್ರೀ ಕೆ. ಎನ್. ಕೃಷ್ಣಸ್ ಸಂಬಿಯಾರ್ ಮೊದಲಾದವರು ವಿರೋಧಿಸಿ ಮಾತನಾಡಿದರು. ಮತಕ್ಕೆ ಹಾಕಲಾಗಿ ನಿರ್ಣಯವು ಬಹುಮತದಿಂದ ಪಾಸಾಯಿತು.

ಜಿಲ್ಲಾ ಜೋರ್ಡಿನ 1951-55ನೇ ವರ್ಷದ ಆಡಳಿತ ವರದಿ ಮೇಲೆ ಜಿಲ್ಲಾ ಕಲೆಕ್ಟರರು ಕೊಟ್ಟ ಅಭಿಪ್ರಾಯಗಳನ್ನು ಪರಿಶೀಲಿಸಿ ರಿಕಾರ್ಡು ಮಾಡಲಾಯಿತು. ಅವುಗಳ ಮುಖ್ಯಾಂಶ ಇಲ್ಲಿದೆ "ಜೋರ್ಡು ಮತ್ತು ಅಧ್ಯಕ್ಷರೊಳಗೆ ಸಾಹಾರ್ದ ಸಂಬಂಧವಿದೆ. ಜೋರ್ಡಿನ ಆರ್ಥಿಕ ಪರಿಸ್ಥಿತಿಯು ಚಿಂತಾಜನಕ ಸ್ಥಿತಿಯಲ್ಲಿರುವುದು. ಬಜೆಟಿನಲ್ಲಿ ನರ್ಮಿಸಿದ್ದಕ್ಕಿಂತಲೂ ಕೊರತೆಯು ಸುಮಾರು ರೂ. 1954-55ನೇ ವರ್ಷದಲ್ಲಿ ರೂ. 85,560ರ ಕೊರತೆಯಿಂದಲೂ, ರಸಾಯನು 1,04,560ರ ಸಂದಾಯವಾಗಿತ್ತು. ಕೃಷಿಯಿಂದಲೂ ಆರಂಭವಾಗಿ, ಈ ವರ್ಷದಲ್ಲಿ ರೂ. 110,000ರ ಸಹಾಯಧನ ಮಂಜೂರಾಗಿದ್ದರೂ. ವರಮಿಯ ವರ್ಷಾಂತ್ಯದ ಬಿಟ್ಟ ಅಂತ್ಯವಾಗುವಾಗ ರೂ. 1,01,9300ರ ಕೊರತೆಯಿದೆ. ಪರಿಸ್ಥಿತಿ ಹೀಗಿರುವುದರಿಂದ ಜಿಲ್ಲಾ ಜೋರ್ಡಿನ ಆಡಳಿತೆಯಲ್ಲಿ ಉತ್ತಮ ಫಲಸಿಲು ಜೋರ್ಡಿಗೆ ಹೆಚ್ಚು ಋಣ ಬಡಿಸುವ ಅಗತ್ಯವಿದೆ.

ಹೆಚ್ಚಿನ ಕೃಷಿಗಳಲ್ಲಿ ವಾಸನ ಸಂಚಾರ ತುಂಬಾಯಿದ್ದು ಸುಳಿಗಾಲದಲ್ಲಿ ರಸ್ತೆಗಳಲ್ಲಿ ಹೊಂಡಗಳು ಬೀಳುತ್ತವೆ. ಸುಳಿಗಾಲದಲ್ಲಿ ರಸ್ತೆಹಾಳಾಗುವುದನ್ನು ತಡೆಯಲು ಎಲ್ಲಾ ರಸ್ತೆಗಳಿಗೂ ಶಿಲೆಯ ಜಲ್ಲಿಹಾಕುವುದು ಉತ್ತಮ. ಜೋರ್ಡಿನ ಅಧೀನದಲ್ಲಿ ಸಾರ್ವಜನಿಕ ವಿಹಾರೋದ್ಯಾನ ಮತ್ತು ಹೂದೋಟಗಳನ್ನು ಸಾಧ್ಯವಿದ್ದಲ್ಲಿ ರಚಿಸಲು ಯತ್ನಿಸಬೇಕು. ವರ ದಿನಸ್ಸರ್ವಲ್ಲಿ ಆಡಳಿತ ತೃಪ್ತಿಕರವಿದೆ.

ಸ್ಕೌಂ. ಹು. ಸಮಿತಿಯ ನರಡಿಯ ಚರ್ಚೆ—ಸ್ಥಳೀಯ ಎಸ್. ಬಿ. ಸಿ. ಬ್ಯಾಂಕಿನ ಮೊಳೆಗೆಯಲ್ಲಿ ಇದೇ ತಾ.೨೦ರಂದು ಶ್ರೀ ಕೆ ಆರ್. ಆಚಾರ್ ರವರ ಅಧ್ಯಕ್ಷತೆಯಲ್ಲಿ ಒಂದು ಜಿಲ್ಲಾಕೂಟವು ಸೇರಿ ಪ್ರಾಂ. ಸ. ಸ ವರದಿಯ ಮೇಲೆ ಚರ್ಚೆ ನಡೆಯಿಸಿತು ಶ್ರೀ ಎಸ್. ಶ್ರೀನಿವಾಸರಾಯರ ಸ್ವಾಗತದ ಬಳಿಕ ಶ್ರೀ ಎಂ. ವಾಧವ ರಾಯರು ಚರ್ಚೆಯನ್ನು ಆರಂಭಿಸಿ...ಸುಧಾರಾವೈದ್ಯರ ಈಗಿನ ನಿಲುಮೆಯನ್ನು ರೀತಿಸಿ, ಆಯೋಗದವರು ತಮ್ಮಿಂದ ಸಾಧ್ಯವಾದಷ್ಟು ನ್ಯಾಯವನ್ನು ಸಾಧಿಸಿದ್ದಾರೆ, ಆವರ ವರದಿ ಸ್ವಾಗತಾರ್ಹವೆಂದರು. ಡಾ. ನಾಗಪ್ಪ ಆಳ್ವರು ಕರ್ನಾಟಕದ ಏಕೀಕರಣ ಚಳವಳಿ ಹಿನ್ನೆಲೆಯ ಚರಿತ್ರೆಯನ್ನು ಹೇಳುತ್ತಾ—ಭಾಷಾವಾರು ಪ್ರಾಂತಗಳಿಂದಾಗಿ ನೀಡದ ಒಗ್ಗಟ್ಟಿಗೆ ಇಂದಿನಿಂದ ಬಾರದು ಎಂದು ಆತಿಸಿದರಲ್ಲದೆ, ಕರ್ನಾಟಕದ ಕಾಸರಗೊಡು, ಬಳ್ಳಾರಿ ಮೊದಲಾದ ಭಾಗಗಳನ್ನು ಕೇರಳ, ಆಂಧ್ರಗಳಿಗೆ ಸೇರಿಸಬೇಕೆಂಬ ಆಯೋಗದ ವರದಿಯನ್ನು ಖಂಡಿಸಿದರು. ಬಳಿಕ ಶ್ರೀಗಳಾದ ಆರ್ ಬಿ ಬ್ರಹ್ಮಾವರ, ರನ್ನಾಡ, ಡಾ. ಬಿ. ಸೀತಾರಾಮ ರಾಯರೇ ಮೊದಲಾದವರು ತಮ್ಮ ಭಾಷಣದಲ್ಲಿ—ಸಮಿತಿಯು ಇಷ್ಟಿಸಿದ ಕಾರ್ಯಸನ್ನಿಯ ಪ್ರಶಂಸಿಸಿದರಲ್ಲದೆ, ಕನ್ನಡ ಸಂಸ್ಕೃತಿಯಲ್ಲೇ ಬೆಳೆದ ಕಾಸರಗೋಡಿನವರಿಗೆ ಆಗುವ ಅನ್ಯಾಯವನ್ನು ಎತ್ತಿರಿಸಿ, ಕಾಸರಗೋಡನ್ನು ಕರ್ನಾಟಕದಲ್ಲೇ ಉಳಿಸಬೇಕೆಂದು ವಿನಂತಿಸಿದರು.

ಅಧ್ಯಕ್ಷರು ತಮ್ಮ ಅಧ್ಯಕ್ಷಭಾಷಣದಲ್ಲಿ ಆಯೋಗದ ವರದಿಯು ಆನಿಶಿಯ ಮೇಲೆ ದೃಷ್ಟಿಯನ್ನಿಡದೆ, ಭಾಷಾವಾರುತಳಹದಿಯಲ್ಲಿ ಸೂಚನೆಯನ್ನಿತ್ತಿದೆ ಎಂದರಲ್ಲದೆ ಬಳ್ಳಾರಿ, ಕಾಸರಗೋಡು, ಬಿದರ ಇತ್ಯಾದಿ ಕನ್ನಡ ಪ್ರದೇಶಗಳು ಕರ್ನಾಟಕಕ್ಕೆ ಜೊರಕುವಂತೆಮಾಡಿ, ಕನ್ನಡಿಗರಿಗೆ ನ್ಯಾಯವನ್ನು ದೊರಕಿಸಬೇಕೆಂದರು. ಕೊನೆಗೆ ಶ್ರೀ ದೇವಾಳ್ಕರು ಧನ್ಯವಾದಗಳನ್ನಿತ್ತರು.

ಕಾಸರಗೋಡು ಡಿ. ಮುನ್ಸೀಫ್ ಕೋರ್ಟಿನಲ್ಲಿ

O. S. No. 44/1955

ಸಂಕಪ್ಪ ರೈ ವಗೈರೆರು— ವಾದಿರು.
ಮತ್ತು
ಆಕ್ಕಮ್ಮ ವಗೈರೆರು— ಪ್ರತಿವಾದಿರು.

3ನೇ ಪ್ರತಿವಾದಿ ಪೂನಚ್ಚೆ ಶೆಟ್ಟಿ, ದೇಯಿಂಛಾ ಮನೆ, ತಲೆಕಳ ಗ್ರಾಮನಿವಾಸಿಯವ.

26ನೇ ಪ್ರತಿವಾದಿ ಶಂಕರ, ಛಾಯಿ ಮನೆ, ಶಿರಿಯಗ್ರಾಮವಾಸಿಯವನ.

ಈ ಮೇಲ್ಕಂಡ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ವಾದಿರು ಪ್ರತಿವಾದಿರ ಮೇಲೆ ಆವರಿಗೆ ಕುಟುಂಬದ ಆಸ್ತಿಗಳಿಂದ ಬರತಕ್ಕ ಜೀವನಾಂಶಕ್ಕೆ ದಾಕ್ಲು ಮಾಡಿದ ವ್ಯಾಜ್ಯವು 3, ಮತ್ತು 26ನೇ ಪ್ರತಿವಾದಿರಿಗೆ ನೋಟೀಸು ಬಗ್ಗೆ ತಾ. 2—11—1955ಕ್ಕೆ ಇಟ್ಟಿರುತ್ತದೆ. ಆ ದಿವ್ಯ ಜೋಲ್ಯಂಡ ಪ್ರತಿವಾದಿರು ಕೋರ್ಟಿಗೆ ಸ್ವತಹಾ ಯಾ ನಕೀಲರ ಮುಖಾಂತ್ರ ಹಾಜರು ಆಗಲುತ್ತ ಪಕ್ಷದಲ್ಲಿ ಆವರನ್ನು exparte ಮಾಡಲಾಗುವುದೆಂದು.

(By order of Court)

K. Narayana Nayak.
Advocate for Plaintiff

ಕಾಸರಗೋಡು 19—10—1955

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: ಡಾಕ್ಟರ್ ಕೊರಡ್ಡಲ್ ವೆಂಕಟ್ರಾವ್, ಎಲ್. ಐ. ಎಮ್.
"Ably written—Quite up-to-date valuable service"
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆ ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವನ್ನು ವಿವರಿಸಲ್ಪಟ್ಟಿದೆ. ಹೆಚ್ಚಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿಲ್ಲ.

ಬೆಲೆ: ರೂ. ೨—೦—೦ (ಟು ಮಿರ್ಜಾ ನೇರೆ).

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

(೧ನೇ ಪುಟದಿಂದ)

ಅನುಭವದ ಹಿನ್ನೆಲೆಯಲ್ಲಿ ವೀಕ್ಷಿಸಿದರೆ, ಆಡಳಿತ ದೃಷ್ಟಿಯಿಂದ ಎಷ್ಟೋ ನ್ಯಾಯುಬದ್ಧವಾಗಿದ್ದರೂ ನೌಕರನ್ನು ಮನೆಗೆ ಕಳಿಸುವುದೇ ಮುಂತಾದ ಯಾವುದೇ ಕ್ರಮವನ್ನು ಅನುಸರಿಸುವ ಸಾಧ್ಯತೆ ತೋರುತ್ತಿಲ್ಲ. ಎನಿದ್ದರೂ ಈ ಕೂಡಲೇ ಈ ವಿಧಾನವನ್ನು ಅನುಸರಿಸುವಂತಿಲ್ಲ — ದೀರ್ಘಾವಧಿಯ ಕಾರ್ಯಕ್ರಮವನ್ನು ಹಾಕಿಕೊಂಡು ಪ್ರತಿ ವರ್ಷ ಸ್ವಲ್ಪ ಸ್ವಲ್ಪವೇ ನೌಕರರನ್ನು ಮನೆಗೆ ಕಳಿಸಿದರೆ ಕಳಿಸಬಹುದು.

ಮತದಾರ ಕ್ಷೇತ್ರಗಳನ್ನು ಪುನರ್ಘಟನೆಯಾಗುವುದು ಇನ್ನೊಂದು ಮಹತ್ವದ ಸ್ಪರ್ಧೆಯಾಗಿದೆ; ಇದಕ್ಕೆ ಜನತಾ ಪ್ರಾತಿನಿಧ್ಯ ಶಾಸನಕ್ಕೆ ತಿದ್ದುಪಡಿಯನ್ನು ಸಹ ಮಂಡಿಸಬೇಕಾಗುತ್ತದೆ. ಸಾಲ ಮತ್ತು ಮೂಲ ಗಳನ್ನು ಪಾಲುಮಾಡಿಕೊಳ್ಳುವುದು, ಈಗಿನ ರಾಜ್ಯಗಳ ಆವಶ್ಯಕತೆಯನ್ನು ಪೂರೈಸುವ ಸಂಸ್ಥೆಗಳ ಭವಿಷ್ಯವನ್ನು ನಿರ್ಣಯಿಸುವುದು, ದಾಖಲೆ ಪುಸ್ತಕಗಳ ನಕಲು ತೆಗೆದಿಟ್ಟುಕೊಳ್ಳುವುದು, ನ್ಯಾಯಾಂಗದ ಸ್ಥೇತ್ರದಲ್ಲಿ ಆವಶ್ಯಕತೆ ಬದಲಾವಣೆಗಳನ್ನು ಮೂಡುವುದು ಇತ್ಯಾದಿ ಪ್ರಶ್ನೆಗಳನ್ನು ಬಿಡಿಸುವುದಕ್ಕೆ ಹೆಚ್ಚಿನ ಚಾತುರ್ಯವೇ ಬೇಕು.

೫೬೦೦೦ ಚದರ ಮೈಲು ವಿಸ್ತಾರದ ಸಾಗು ೪೯೦ ಲಕ್ಷ ಜನಸಂಖ್ಯೆಯ ಆಶ್ರಿತ ಸಂಸ್ಥಾನಗಳನ್ನು ಭಾರತಕ್ಕೆ ವಿಲೀನಗೊಳಿಸಿದ ಬಳಿಕ, ಸಾರ್ವಜನಿಕ ಆಡಳಿತದಲ್ಲಿ ಹೊಸ ಸಂಪ್ರದಾಯವನ್ನು ರೂಢಿಸಿಕೊಳ್ಳುವವೇಗ ತೀವ್ರವಾಗಿದ್ದರೂ ಕಳೆದ ಏಳೆಂಟು ವರ್ಷಗಳಲ್ಲಿ ಈ ಕಾರ್ಯ ಸಂಪೂರ್ಣ ಮುಗಿದಿಲ್ಲವೆಂಬುದನ್ನು ನೆನೆದರೆ, ಆಯೋಗದ ವರದಿಯಂತೆ ರೂಪಿಸುವ ಹೊಸ ರಾಜ್ಯಗಳಲ್ಲಿ ನಾಕಷ್ಟು ದೀರ್ಘಕಾಲದ ನರೆಗೆ ಜನರು ಹೊಂದಿಕೆಗಾಗಿ ಪ್ರಯತ್ನಿಸಬೇಕಾದೀತೆಂಬುದು ಸ್ಪಷ್ಟ. ಇದನ್ನೆ ಸಮಸ್ಯೆಯು ಮಾನವೀಯ ಮುಖ ಎಂದು ಹೇಳಬಹುದು.

ಅಖಿಲ ಭಾರತ ಭಾಷೆಯು ಬೆಳವಣಿಗೆ

ಅನುದಿನದ ಬಳಕೆಯೇ ಜೀವನಾಡಿ

'ಎಲ್ಲಾ ಪ್ರಮುಖ ಭಾಷೆಗಳನ್ನೂ ಆದರೆಲ್ಲೂ ಸಮಬ್ಬಾಗಿ ಭಾರತದ ಸಂವಿಧಾನದಲ್ಲಿ ಅಂಗೀಕರಿಸಿರುವ ಭಾಷೆಗಳೆಲ್ಲವನ್ನೂ ಗ್ರಹಿಸಿ ಅಭಿವೃದ್ಧಿಗೆ ಗಮನಿಸಬೇಕು' ಎಂದು ಭಾರತದ ಸರಕಾರಿ ಬ್ಯಾಂಕ್ ಆಯೋಗದ ಅಧ್ಯಕ್ಷರಾದ ಶ್ರೀ ಬಿ ಜಿ ಖೇರರು ಮಣಿಯ ದಿಷ್ಟಿನ್ ಕಾಲೇಜಿನಲ್ಲಿ ಭಾಷೆಗಳ ಶಿಕ್ಷಣಾಲಯ ಶಾಲೆಯ ಉದ್ಘಾಟನೆಯನ್ನು ನೆರವೇರಿಸುತ್ತಾ ಇದೇ ರೀತಿಯ ಜನತೆಗೆ ಮನನಿಸಾದಿತೊಂದರು. ಭಾಷಾ ಸಮಸ್ಯೆಯನ್ನು ಕಾರ್ಯಾತೀತ ರಾಷ್ಟ್ರೀಯ ಹಾಗೂ ರಾಷ್ಟ್ರವ್ಯವಹಾರದ ದೃಷ್ಟಿಕೋಣದಿಂದ ಬಗೆಹರಿಸಬೇಕು, ಪುನರುಜ್ಜೀವನ, ಸ್ವಾರ್ಥಿಯತೆ ಅದವಾ ಧೋರಣಾದಿ ದೃಷ್ಟಿಕೋಣದಿಂದ ನೋಡಬಾರದು— ಎಂದು ಅವರು ನುಡಿದರು.

ಗೌರವದ ಮನೋಭಾವ

ತಮ್ಮ ಅಭಿಪ್ರಾಯಗಳನ್ನು ಸಲಹೆಗಾಗಿ ತಜ್ಞರ ಸಮಿತಿಯ ಮುಂದಿಡುತ್ತಿರುವೆನೇ ಹೊರತು, ಅವು ಸ್ವಂತ ಪರಿತೀಲನೆ ಫಲವಾಗಿ ಬಂದ ಅಂತಿಮ ನಿರ್ಧಾರಗಳಲ್ಲವೆಂದು ಅವರು ತಿಳಿಸಿದರು. ಭಾರತದ ಸಂವಿಧಾನವು ಅಂಗೀಕರಿಸಿರುವಂತೆ ಭಾರತದ ಅಧಿಕೃತ ಭಾಷೆಗೂ ಪ್ರಾದೇಶಿಕ ಭಾಷೆಗೂ ಯಾವ ಭೇದವೂ ಇಲ್ಲವೆಂದು ಶ್ರೀ ಖೇರರು ತಿಳಿಸಿದರು. ಭಾರತದ ಪರಂಪರೆಯು, 'ವಿಭಿನ್ನ ಸಾಂಸ್ಕೃತಿಕ ಪ್ರತಿಪಾದನೆಗಳನ್ನು ಏಕೀಕರಿಸಿ ಒಂದು ಗೂಡಿಸುವುದು' ಎಂಬುದೇ ಕೇಂದ್ರದ ಅಭಿಪ್ರಾಯವೆಂದು ಅವರು ನುಡಿದರು "ಅಮರಿಂದ ಜನರು ಸಂಸ್ಕರ ಭಾಷೆಯನ್ನು ಸುನವೀಯತೆ ಮತ್ತು ಗೌರವ ದೃಷ್ಟಿಯಿಂದ ಸುರಿಸ್ಕರಿಸಬೇಕು ಅದು ಸುದ್ದಿಗೂಡಿನ ಜನರ ಆಲಿಬಿತ ಸಿರಬೊಬಾಷೆಯೇ ಆಗಿದ್ದರೂ ಅದು ಆ ಭಾಷೆಯನ್ನು ಬಳಸುವ ಜನ ಸಮುದಾಯದ ವಿಶಿಷ್ಟ ಸಂಸ್ಕೃತಿಯ ಏಕತ್ರ ನಿರೂಪಣೆಯಾಗಿರುವುದೆ" ಎಂದು ಅವರು ಹೇಳಿದರು "ಪ್ರತಿಯೊಂದು ಭಾಷೆಯು. ಆ ಭಾಷೆಯನ್ನು ಬಳಸುವ ಜನರ ವಿಚಾರ ನಿರೂಪಣಾ ವಾಹಕವಾದ ಭಾಷೆಯಾಗಿದೆ. ಭಾರತದ ಸಮಗ್ರ ಸಂಸ್ಕೃತಿಗೆ ಜೀವನದಲ್ಲಿನ ಅಂಗಾಂಗ ಭೂತವಾದ ಆ ಭಾಷೆಯನ್ನು ಉತ್ತೇಜನ ಪಡಿಸುವುದಕ್ಕೆ ಪ್ರತಿಯೊಬ್ಬರೂ ಸಹಾಯನೀಡಬೇಕಾದುದು ಅದರ ಕರ್ತವ್ಯವಾಗುತ್ತದೆ" ಎಂದು ಅವರು ಒತ್ತಿ ಹೇಳಿದರು

ಈ ಗುರಿಯನ್ನು ಸಾಧಿಸುವುದೂ ಅದರ ಜೊತೆಯಲ್ಲಿ ಅಂತಾರಾಷ್ಟ್ರೀಯ ಸಂಬಂಧ ಸಮತ್ವ ನ್ಯಾಯಾರಕ್ಕೆ ಸೂಕ್ಷ್ಮವಾದ ಮಟ್ಟದಲ್ಲಿ ಉಗತ್ಯವಾದ ಸಂಪರ್ಕ ಸಾಧ್ಯಮಸವನ್ನು ಕಂಡು ಹಿಡಿಯುವುದೂ ತೆನ್ಮೂಲಕ ಭರತದ ಸಮಸ್ತತೆಯನ್ನೂ, ವಿಭಿನ್ನ ಸಂಸ್ಕೃತಿಯಂಶ್ನು ಪರಿಪಾಲಿಸಿಕೊಂಡು ಒರುವುದೂ ಭಾಷಾ ಸಮಸ್ಯೆಯಲ್ಲಿರುವ ಅಂಶಗಳಾಗಿವೆ. ಎಂದು ಅವರು ತಿಳಿಸಿದರು.

ಜೀವಂತ ಭಾಷೆ

ನಮ್ಮ ಬಾಷೆಗಳನ್ನು ಕೇವಲ ನಮ್ಮ ಪಾಂಡಿತ್ಯದ ಸ್ಮಾರಕಗಳನ್ನಾಗಿ ಅಭಿವೃದ್ಧಿಗೊಳಿಸಬೇಕೆನ್ನುವ ಶುದ್ಧ ಭಾಷಾಶ್ರೇಸರರ ಪ್ರಯತ್ನವು ಉಪಯುಕ್ತವಾದುದೇ? ಎಂದು ಶ್ರೀ ಖೇರರು ಜನತೆಯನ್ನು ಕೇಳಿದರು ಜೀವಂತ ಭಾಷೆಯು, ಆ ಭಾಷೆಯನ್ನು ಬಳಸುವ ಲಕ್ಷಾಂತರ ಜನರಿಗೆ ಅನುಕೂಲವಾಗಿರಬೇಕಾಗಿದೆ ಎಂಬ ಆದರ್ಶವನ್ನು ಆ ಸಂಧದ ನಾಯಕರು ಗಮನಿಸಬೇಕೆಂದು ಅವರು ನುಡಿದರು ಜೀವಂತ ಭಾಷೆಯಿರುವುದು ಒನಜೀವನದಲ್ಲಿ ಮತ್ತು ಅವರ ಅನುದಿನದ ವ್ಯವಹಾರಗಳಲ್ಲಿಯೇ ಹೊರತು, ಭಾಷಾ ಶಾಸ್ತ್ರಜ್ಞರ ಪ್ರಯೋಗಶಾಲೆಯಲ್ಲಲ್ಲ ಎಂದು ಅವರು ಸಾರಿದರು

ಜೀವಂತ ಬಾಷೆಯು ಸಂತತವಾಗಿ ನಿತ್ಯ ಜೀವನದ ಬಳಕೆಗಾಗಿ ಅನೇಕ ವಿದೇಶಿ ಶಬ್ದಗಳನ್ನೂ, ನಿರೂಪಣೆಗಳನ್ನೂ ಗ್ರಹಿಸುತ್ತಿರುತ್ತವೆ ಇಂಗ್ಲಿಷ್ ಭಾಷೆಯಲ್ಲಿ ಸುಮಾರು ಅರ್ಧದಷ್ಟು ಶಬ್ದಗಳು ಹೀಗೆ ಅನ್ಯಭಾಷೆಗಳಿಂದ ಬಂದಿವೆ. ಭಾಷಾ ಬುದ್ಧಿಯನ್ನುಪಾಡಿ ಹೊರಟ ಅನೇಕ ಪ್ರಯತ್ನಗಳು ವಿಫಲವಾಗಿರುವುದು ಇತಿಹಾಸದಲ್ಲಿ ಕಂಡುಬಂದಿತ್ತು— ಎಂದು ಅವರು ತಿಳಿಸಿದರು. ಒಂದು ಭಾಷೆಯು ಗ್ರಹಿಸಿದ ಪ್ರತಿಯೊಂದು ಶಬ್ದವೂ ಆ ಭಾಷೆಯು ಸಾಧಿಸಿದ ವಿಜಯವೇ ಹೊರತು ಅದು ಅಭಾಷೆಯ ಮೂಲಕ್ರಮಣವಲ್ಲ ನಮ್ಮ ಭಾಷೆ ಳನ್ನು ಹೊಸ ಹೊಸ ಶಬ್ದಗಳಿಂದ ತುಂಬಿವಾಗ ನಾವು ಆ ಶಬ್ದಗಳ ಸರಳತೆ, ಉಪಯೋಗ ಸಾಧ್ಯತೆ ಇತ್ಯಾದಿಗಳನ್ನು ಗಮನಿಸಬೇಕಲ್ಲದೆ ಆ ಶಬ್ದಗಳ ಪಂಕಿಯೂ ಆಥವಾ ಪುನರುಜ್ಜೀವನ ತತ್ವಗಳನ್ನು ಗಮನಿಸಬೇಕೆ? ಎಂದು ಶ್ರೀ ಖೇರರು ಪ್ರಶ್ನಿಸಿದರು

ಜನತೆಯ ಸಹಕಾರ

ಭಾಷಾ ಸಮಸ್ಯೆಯ ಪರಿಹಾರ ವಿಧಾನಗಳನ್ನು ಪ್ರಸ್ತಾಪಿಸುತ್ತಾ ಶ್ರೀ ಖೇರರು ಈ ಸಮಸ್ಯೆಯ ಇತ್ಯರ್ಥಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ವಿಶ್ವವಿದ್ಯಾನಿಲಯಗಳು, ಲೇಖಕರು, ಪಂಡಿತರು, ಪತ್ರಿಕೆಗಳು ಇತ್ಯಾದಿ ಅನೇಕ ಪ್ರಾತಿನಿಧಿಕ ಸಂಸ್ಥೆಗಳವೆಂದು ತಿಳಿಸಿದರು. ಈ ಸಮಸ್ಯೆಯ ಅಂತಿಮ ಇತ್ಯರ್ಥವು ಕಾನೂನು ಮತ್ತು ಸರ್ಕಾರದ ಮೇಲಿಲ್ಲವೆಂದೂ ಜನತೆಯ ರಾಷ್ಟ್ರೀಯ ಭಾವನೆ, ಸದ್ಬುದ್ಧಿಯ ನೆರವು ಪಡೆದ ಕಾರ್ಯಕ್ರಮ ಮತ್ತು ವಿದಾನಗಳನ್ನು ಅನುಸರಿಸಿರುವುದೆಂದೂ ಅವರು ನುಡಿದರು ಅತ್ಯಂತ ತೀವ್ರಕಿನ ಹಾಗೂ ವಿಸ್ತರವಾದ ಭಾಷಾ ಪರಿವರ್ತನೆಯನ್ನು ರಾಜ್ಯಗಳ ಆಡಳಿತಾಧಿಕಾರಿಗಳಿಂದ ತರಲು ಸಾಧ್ಯವಿಲ್ಲ, ರಾಷ್ಟ್ರೀಯ ಜೀವನದಲ್ಲಿ ಪ್ರಮುಖವಾಗಿ ಅಂಶವೆನಿಸಿದ ಜನತೆಯ ಸಹಕಾರದಿಂದಲೇ ಸಾಧ್ಯವೆಂದು ಅವರು ನುಡಿದರು

ಭಾಷಾ ಸಮಸ್ಯೆಯ ಕೊಂದರೆ ಇಂದಿನ ಜನಾಂಗಕ್ಕೆ ಮಾತ್ರ ತಟ್ಟುವುದು, ಏಕೆಂದರೆ ಮುಂದಿನ ಪೀಳಿಗೆಯು ದೇಶವು ಅಂಗೀಕರಿಸಿದ ಯೋಜನೆಗನುಸಾರವಾಗಿ ಶಿಕ್ಷಣ ಪದ್ಧತಿಯನ್ನು ಶ್ಲಾಘಿಸಿದಲ್ಲಿ ಭಾಷಾ ಶಾಸ್ತ್ರಜ್ಞರು ನಮ್ಮ ದೇಶದ ಮುಂದಿರುವ ಭಾಷಾ ಸಮಸ್ಯೆಯನ್ನು ನಿಸ್ಸಂಕ್ಷಿಪ್ತ ವೈಜ್ಞಾನಿಕ ಅಧ್ಯಾಸ ಮಾಡಬೇಕೆಂದು ಅವರು ಕೇಳಿಕೊಂಡರು.

ಸೂಕ್ತವಾಗಿ ಬಗೆಹರಿಸಬೇಕೆಂದು ಶ್ರೀ ಖೇರರು ನುಡಿದರು

ಇಂಗ್ಲಿಷಿನ ಸ್ಥಾನ

ನಮ್ಮ ಸಮಾಜದಲ್ಲಿ ಅವಾಸ್ತವಿಕ ಸ್ಥಾನವನ್ನು ಸಮರ್ಥಿಸಿರುವ ಇಂಗ್ಲಿಷ್ ಭಾಷೆಯು ಬದಲ್ಯುತಿಯಾಗಬೇಕಾದದ್ದು ಅನಿವಾರ್ಯವೆಂದು ಶ್ರೀ ಖೇರರು ತಿಳಿಸಿದರು ಅದರ ಜೊತೆಗೆ ಈ ಭಾಷೆಯ ಆಮೂಲ್ಯ ಬೆಲೆ, ಅಂತಾರಾಷ್ಟ್ರೀಯ ವ್ಯಾಪ್ತಿ, ಮತ್ತು ಉಪಯೋಗಗಳನ್ನು ಅಲ್ಲಗಳೆಯಲಾಗದೆಂದೂ ಅವರು ಸ್ಪಷ್ಟಪಡಿಸಿದರು ಭಾಷೆಯು ಯಾವುದೇ ವಿಶಿಷ್ಟ ರಾಷ್ಟ್ರದ ಸೊತ್ತಲ್ಲ ಭಾಷೆಯು ಅದನ್ನು ಬಳಸಬಲ್ಲವರೆಲ್ಲರ ಸೊತ್ತಾಗುತ್ತದೆ. ವಿದೇಶೀ ಭಾಷೆಯೊಂದನ್ನು ನಾವು ಅದು ನಿಜದೇಶಿ ಭಾಷೆಯೊಂದಿಗೂ ಕಾರಣದಿಂದಲೇ ತಿರಸ್ಕರಿಸುವುದು ಉಚಿತವಲ್ಲ ಎಂದು ಶ್ರೀ ಖೇರರು ಹೇಳಿದರು

ಮುಂದೆ ಕೆಲವು ಕಾಲದ ವರೆಗೆ ನಮ್ಮ ಸದವೀಧರರಿಗೆ ವಿಜ್ಞಾನ ಮತ್ತು ಇತರ ಸಾರಿ ಶ್ರಮಿಕ ವಿಭಾಗಗಳಲ್ಲಿ ಇಂಗ್ಲೀಷಿನ ಬಳಕೆ ಅನಿವಾರ್ಯವಾಗುತ್ತವೆ ಏಕೆಂದರೆ ಭಾರತೀಯ ಭಾಷೆಗಳಲ್ಲಿ ವಿಜ್ಞಾನ ಮತ್ತು ಪಾರಿಶ್ರಮಿಕ ಕ್ಷೇತ್ರದಲ್ಲಿ ಸಾಕಷ್ಟು ಶಬ್ದಗಳ ಅಭಿವೃದ್ಧಿಯನ್ನು ಆಗಬೇಕಾಗಿದೆ ಆದುದರಿಂದ ಇಂಗ್ಲೀಷಿನ ಪಾರ್ಶ್ವ ಕ್ರಮವಲ್ಲಿ ಎರಡನೆಯ ಸ್ಥಾನ ಕೊಡಬಹುದೆಂದು ಅವರು ತಿಳಿಸಿದರು.

ನಮ್ಮ ರಾಷ್ಟ್ರ ಜೀವನದಲ್ಲಿ ಅಗಾಧ ಕ್ರಮಾಣದ ಪುನರುತ್ಥಾನವಾಗ ಬೇಕಾಗಿದೆ ಉಚಿತ ಮತ್ತು ಒತ್ತಾಯ ಶಿಕ್ಷಣ, ಸಾಮಾಜಿಕ ನ್ಯಾಯ ಮತ್ತು ಸಮಾನ ಅನಕಾರ ಇತ್ಯಾದಿ ಅನೇಕ ವಿಧಾಯಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಭಾರತದ ಸಂವಿಧಾನವು ಈಗಾಗಲೇ ಈ ಬಗೆಗೆ ಇತ್ಯರ್ಥವಿತ್ತಿದೆ, ಅದರ ಸುಸರಾವರ್ತನೆ ಅನಿಗತ್ಯ ಎಂದು ಅವರು ನುಡಿದರು

ಕೊನೆಯದಾಗಿ ಶ್ರೀ ಖೇರರು ಮಣಿಯ ದಿಷ್ಟಿನ್ ಕಾಲೇಜಿನವರು ಭಾರತೀಯ ಭಾಷೆಗಳ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಅಸಕ್ತಿಗಳನ್ನು ಉತ್ತೇಜನಗೊಳಿಸಲು ಸ್ನಾತಕೋತ್ತರ ಸಂಶೋಧನ ಸಂಸ್ಥೆಯನ್ನು ಸ್ಥಾಪಿಸುವುದನ್ನು ಶ್ಲಾಘಿಸಿದರು ಭಾಷಾ ಶಾಸ್ತ್ರಜ್ಞರು ನಮ್ಮ ದೇಶದ ಮುಂದಿರುವ ಭಾಷಾ ಸಮಸ್ಯೆಯನ್ನು ನಿಸ್ಸಂಕ್ಷಿಪ್ತ ವೈಜ್ಞಾನಿಕ ಅಧ್ಯಾಸ ಮಾಡಬೇಕೆಂದು ಅವರು ಕೇಳಿಕೊಂಡರು.

ಕನೇ ಪುಟದಿಂದ

ಟ್ಟಿನ್ಲಿ ನೋಣಗಳ ಹಾವಳಿ ನಿಷರೀತವಾಗಿದೆ ಈ ನೋಣಗಳಿಂದ ನಿದ್ರಾವಿಹೀನತೋಗ ಬರುತ್ತದೆ ಈ ರೋಗದ ಹಾವಳಿಯೇ ತ್ಯಾಂಗಸೀಕರವಾದ ಅನೇಕ ಭಾಗಗಳು ನಿರ್ಜನವಾಗಿರುವುದರ ಕಾರಣ. ಅದೃಷ್ಟವಶಾತ್ ಈ ವಿಚಿತ್ರ ಪ್ರದೇಶದಲ್ಲಿರುವ ಟ್ಸೆ ಟ್ಸೆ ನೊಣಗಳು ಸಾಂಕ್ರಾಮಿಕ ಜಾತಿಯವಲ್ಲ ಮರದ ತುಂಡುಗಳಿಂದ ನಿರ್ಮಿಸಿದ ಗುಡಿಸಲುಗಳಲ್ಲಿ ಈ ಪ್ರದೇಶದ ಬುಡಕಟ್ಟಿನ ಜನರು ವಾಸಿಸುತ್ತಾರೆ. ಯಾವ ಗಾಳಿಯೂ ದೊಡ್ಡ ದೊಡ್ಡ ವ್ಯಾಪಾರಿಗಳನ್ನು ಬೇಟೆಗಾರರು ಕೊಂದರೆ ಈ ಬುಡಕಟ್ಟಿನ ಹುರುಪುರೂ ಮಹಿಳೆಯರೂ ಬೇಟೆಗಾರರ ಶಿಬಿರದಲ್ಲಿ ಕಿಕ್ಕಿರಿದು ನೆರೆದು ಹೆಸೀ ಮಾಂಸಕ್ಕಾಗಿ ಕಜ್ಜಾಟ್ಟಡುತ್ತಾರೆ

ಪೂರ್ವ ಆಫ್ರಿಕದೊಡನೆ ಹೋಲಿಸಿದರೆ ನಮ್ಮ ದೇಶದ ವನ್ಯ ಜೀವನವೇ ಪೆಚ್ಚು ರೋಮಾಂಚಕವಾಗಿದೆ ಕಾಡು ವನ್ಯಗಳ ರಕ್ಷಣೆಯ ವಿಷಯದಲ್ಲಿ ನಾವು ಹೆಚ್ಚಾಗಿ ಅವರಿಂದ ಕಲಿತು ಕೊಳ್ಳುವುದೇನೂ ಇಲ್ಲವೆಂದು ಹೇಳಬಹುದು ಈಗ ಅವರು ಕಾರ್ಯರೂಪಕ್ಕೆ ತರಬೇಕಾದುದ್ದೇನೂ ಇಲ್ಲವೆಂದೆ ಹೇಳಬಹುದು ಈಗ ಅವರು ಕಾರ್ಯರೂಪಕ್ಕೆ ತರುವುದರಲ್ಲಿ ಮುಂದಿರುವುದನ್ನು ನಾವು ಈಗಾಗಲೇ ನೋಡಿದ್ದೇವೆ ಎಂದರೆ ತಪ್ಪಾಗದು

ವಿ. ಕಥೋಲಿಕ್ ಬೇಂಕ್ ಲಿಮಿಟೆಡ್, ಕಲ್ಯಾಣಪುರ.

ವಿಶೇಷ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹಾನುಭಾವರು ಸದ್ರಿ ಬ್ಯಾಂಕಿನಲ್ಲಿ ನಗದು ಉಡಿತ ಮೇತಿ ಸಾರಿ ಪಡಕೊಂಡು ಕ್ಷೇಮ ನಾಯಿದೆಗೆ ಆಸಲು, ಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವುದರಿಂದಲೂ ಆಲ್ಲದೆ ಕ್ರಮಪ್ರಕಾರ ರಿಜಿಸ್ಟರ್ಡ್ ನೋಟೀಸು ಕೊಟ್ಟಲ್ಲಿ ಸದ್ರಿ ಕೆಲವರಿಗೆ ರಿಜಿಸ್ಟ್ರಿ ನೋಟೀಸು ಸಿಕ್ಕದೆ ಹಿಂದೆ ಬಂದಿರುವುದರಿಂದಲೂ, ಸದ್ರಿ ಕೆಲವರಿಗೆ ನೋಟೀಸು ಸಿಕ್ಕಿದ್ದೂ ಸದ್ರಿಯವುಗಳನ್ನು ವಿಚಿಸಿಕೊಂಡು ಹೋಗದುವರೆ ತಪ್ಪಿಸಿ ಕಾರಣ್ ಸದ್ರಿಯವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಸದ್ರಿಗುವರು ಈಡಿಟ್ಟ ನಗದುಗಳನ್ನು ಇವೇ ಅಕ್ಟೋಬರ್ ತಿಂಗಳ 31ನೇ ತಾರೀಕಿನ ಒಳಗೆ ಬ್ಯಾಂಕಿಗೆ ಸಲ್ಲತಕ್ಕ ಆಸಲು, ಬಡ್ಡಿ, ನೋಟೀಸು ಖರ್ಚು, ಇತ್ಯಾದಿಗಳನ್ನು ಲಂಚಾಯಿಸಿ ವಿಚಿಸಿಕೊಂಡು ಹೋಗಿ ಇತ್ತ ಪಕ್ಷದಲ್ಲಿ ಬರುವ ನವಂಬರ ತಿಂಗಳ ತಾರೀಕಿ ೩ನೇ ಗುರುವಾರ ಪೂರ್ವಾಹ್ನ ೧೦ ಗಂಟೆ 11ಕ್ಕೆ ಯಾ ಆನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಪುನ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು.
29/129	ಫೆಟರ್ ಪಿಂಟೋ, ಎಲಾಯಿಸ್ ಪಿಂಟೋರ ಮಗ, ಪುತ್ತೂರು ಗ್ರಾಮ, ಪುತ್ತೂರು P o	10 0 0
29/1036	ಶ್ರೀಮತಿ ಇಸ್ ಮಿತಾ ವಿನೋಜ, ಪತ್ತು ವಿನೋಜರ ಹೆಂಡತಿ, ಅಮುಂಜೆ ಗ್ರಾಮ, ಕೊಲಲ್ಗಾರಿ P o.	14 0 0
30/85	ಉಗ್ಗ ಪೂಜಾರಿ, ಬಾಬು ಪೂಜಾರಿಯ ಆಳಿಯ, ಉಗ್ಗೆಲ್ ಬೆಟ್ಟು ಉಪ್ಪೂರು P o	25 0 0
30/176	ಅನಂತ ಪೂಜಾರಿ, ಸಣ್ಣಂಕ್ರ ಪೂಜಾರಿಯ ಆಳಿಯ, ಪಾಯಾಡಿ, ಉಪ್ಪೂರು P o	30 0 0
30/216	ಯು ಸಂಜೀವ ಸೇರಿಗಾರ, ರಾಮಣ್ಣ ಸೇರಿಗಾರನ ಮಗ, ಪೇರಬೆಟ್ಟು, ಉಪ್ಪೂರು P o	22 0 0
30/1012	ಆನಂಯ್ಯ ಸಾಜಾರಿ, ಮತ್ತ ಪೂಜಾರಿಯ ಆಳಿಯ ಉಪ್ಪೂರು ಗ್ರಾಮ, ಉಪ್ಪೂರು P o	15 0 0

Kallianpur
20—10—1955

S Rebello
Agent

ಕೆಲವು ಉತ್ತಮ ಪುಸ್ತಕಗಳು.

ಬದುಕು ಬಂಗಾರ	(ಕುಮಾರಸ್ವಾಮಿ)	1 8
ಯುಗಯಾಣ	(ಕು ಶಿ ಹರಿದಾಸಭಟ್ಟ)	0 8
ಘಂಟೆನಾದ	(,,)	2 0
ವಿಶಿಯದ ಸಂಪತ್ತು	(,,)	2 0
ಪ್ರಣಾಪ್ರಭುತ್ವವನ್ನು ಕುರಿತು	(ಶಿವರಾಮ ಕಾರಂತ)	0 8
ಅಂತರಂಗದ ಕತೆಗಳು	(ಸಂಕಲನ)	1 4
ಸ್ವಪ್ನಲೋಕ	(ಕಾರ್ತಿಕೇಯ)	0 8
ನೀತಿವಿನೋದ ಕತೆಗಳು		0 12
ಸೇವಾಪಥ	(ಸೇಜ್ ಗೊವಿಂದಾಸ್)	0 8
ಸರಸ್ವತಿಡಾಲಿಎ ಮಾಧವಾಚಾರ್ಯರ		0 12
ಗೀತೆಯ ಕೈಗನ್ನಡಿ	(ಬಿದಂಬರಯ್ಯ)	0 8
ಭಾರತದ ಕರ್ಣ	(ಎನ್ ಎಸ್. ಕೆ.)	0 6
ಪ್ರಾಚೀನ ತುಳುನಾಡು	(,,)	1 0
ಮುರಲಿ	(,,)	0 12
ಮಧುವನ	(ಸಂಕಲನ)	3 0
ಕಾವ್ಯಸಾಮ್ರಾಜ್ಯ	(,,)	1 8
ಕವಿಗಳ ಸಾಗಾಟ	(ಕೆಳ ಪೇಟಿ)	0 10
ಕವಿತಾಕಾಮಿನಿ	(ಎಸ್. ವೆಂಕಟರಾಜ)	2 0
ಆಕಾಶಗಂಗೆ		1 12
ಜೀವನ ಸಂಗ್ರಾಮ	(ಪಿ ಶಿನ ಶೆಟ್ಟಿ)	1 8
ದೇಶಭಕ್ತ	(ಕೆ ಕೆ ಶೆಟ್ಟಿ)	1 4
ಪ್ರೇಮವಿಜಯ	,,)	1 0

ಪಜಂಟರು ವೇಕು ಶತಃಗಳಿಗೂ ನಮ್ಮಲ್ಲಿ

ಮೊರೆಯುಸ ಎಲ್ಲಾ ಕತೆಗಳ ಪುಸ್ತಕಗಳ

ಕೆಟಲಾಗಿಗೂ ಬರೆಯಿರಿ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಮೂವರು ಹೆಂಗಸರು

ಬರೆದವರು - ಶ್ರೀ ಕೆ. ನಾರಾಯಣ ರೈ.

"ಮೂವರು ಹೆಣ್ಣು ಸಂಕ್ಯಳು ರೈಲು ದಾರಿಯಲ್ಲಿ ನಡೆದುಕೊಂಡು ಹೋಗುತಿದ್ದರು. ಅವರ ಜಾತಿ, ಮತ, ರೈಲು ದಾರಿಯ ಊರು ಈ ಕತೆಗೆ ಅಸಂಗತ.

ಅವರು ಮೂವರು ಸ್ತ್ರೀಯರು—ಇದೇ ಮುಖ್ಯ.

ಒಬ್ಬಳು ಭಿಕ್ಷುಕಿ. ಕೊಳಕು ಬಟ್ಟೆಯನ್ನು ಬೈದ್ದಳು. ಅವಳ ಮುಖವು ಧೂಳು ಮುಚ್ಚಿ ಮಲಿನವಾಗಿತ್ತು. ತಲೆಗೂದಲು ಜಾಪೆಯಂತೆ ಹೆಡೆದಿತ್ತು. ಪಾದಗಳು ಊದಿ ಕೊಂಡಿದ್ದುವು. ಹಿಂಗಾಲುಗಳು ಚೂಪಾದ ಕಲ್ಲುಗಳಿಂದ ಘಾಸಿಗೊಂಡಿದ್ದುವು.

ಸುಮಾರು ಇಪ್ಪತ್ತು ವರುಷ ಪ್ರಾಯದ ತರುಣಿ ಇನ್ನೊಬ್ಬಳು. ಅಕೆಯ ಕಣ್ಣಾಗಳಲ್ಲಿ ಹೊಳಪಿತ್ತು. ಕುಚದ್ವಯಂಗಳ ಬಾಗಿನಲ್ಲಿ ತಾರುಣ್ಯವಿತ್ತು. ನಡೆಯಲ್ಲಿ ಅಸಡ್ಡೆಯಿತ್ತು. ಸಿಂಹಕಟಿ.

ಇನ್ನೊಬ್ಬಳು ಏಳು ದಿನಸಗಳ ಹುಟ್ಟ ಮಗುವೊಂದನ್ನು ಕೈಗಳಲ್ಲಿ ಎತ್ತಿಕೊಂಡಿರುವ ತಾಯಿಯಾಗಿದ್ದಳು. ನಿಮಿಷ ನಿಮಿಷಕ್ಕೂ ಬಂದಿ ಬಟ್ಟೆಗಳ ಎಡೆಯಿಂದ ಇಣುಕುತ್ತಿದ್ದ ಸುಟ್ಟ ಕೆಂಪು ಮುಖವನ್ನ ಎನಯಿಕ್ಕದೆ ನೋಡುತ್ತಿದ್ದಳು.

ಮೂವರೂ ನೂನದಿಂದ ಸುನ್ನಡೆಯುತ್ತಿದ್ದರು. ಬಹುದೂರದಿಂದ ಬರುತ್ತಿದ್ದ ಉಗಿ ಬಂಡಿಯ ಶಬ್ದವು ಅವರ ಕಿವಿಗಳಿಗೆ ಬಿದ್ದ ಒಡನೆಯೇ ಆ ಕಡೆ ಮೇಲೆ ಅವರು ನೋಡ ತೊಡಗಿದರು. ದೂರದಲ್ಲಿ ಕಪ್ಪು ಹೊಗೆಯು ಕಾಣುತ್ತಿದ್ದು ತೆಳ್ಳನೆಯ ಉದ್ದದ ಬೆಲ್ಲನೋಪಾದಿಯಲ್ಲಿ ಮೂಡಲ್ಪಟ್ಟು ನುಗಿಲಿನಲ್ಲಿ ಲೀನವಾಗುತ್ತಿತ್ತು.

"ಇನ್ನೆರಡು ನಿಮಿಷಗಳಲ್ಲಿ ಉಗಿ ಬಂಡಿಯು ಇಲ್ಲಿ ಬರುವುದು"

ಭಿಕ್ಷುಕಿಯು ಗುಣುಗುಟ್ಟುತ್ತಿದ್ದಳು.

ಉಳಿದಿಬ್ಬರು ಈ ಮಾತುಗಳಲ್ಲಿ ತೀವ್ರವಾದ ಅವಾಯದ ಚಟ್ಟೆಯನ್ನು ಬನಗಂಡರು

"ನಿನ್ನು? ಏನಂದಿ?" ಒಮ್ಮೆಲೆ ಇಬ್ಬರೂ ಕೂಗಿದರು.

"ನಾನು ಹೇಳಿದ್ದು ನಿನಗೆ ತಿಳಿಯದೆ? ತಿಳಿದಿದೆ." ಭಿಕ್ಷುಕಿಯು ಉತ್ತರವನ್ನಿತ್ತಳು. ಅವಳ ದೃಷ್ಟಿಯು ಬಾನಂಚಿನಲ್ಲಿ ಕಪ್ಪು ಚುಕ್ಕೆಯಂತಿದ್ದು ಕ್ಷಣ ಕ್ಷಣಕ್ಕೂ ಬೆಳೆಯುತ್ತಿದ್ದ ಉಗಿ ಬಂಡಿಯ ಇಂಜನಿನ ಮೇಲೆ ನಟ್ಟಿತ್ತು. "ನಮ್ಮ ಸಮಸ್ಯೆಗಳನ್ನು ಈ ಉಗಿ ಬಂಡಿಯು ಪರಿಹರಿಸುವುದು. ಇದು ನಿಮಗೆ ತಿಳಿದಿದೆ" ಎಂದಳು.

ಆಗ ತರುಣಿಯೆಂದಳು "ಆದರೆ ನನಗೆ ಸಾಯಲು ಮನವಿಲ್ಲ. ನನಗೆ ಎಳೆಯ ವಯಸ್ಸು. ಜೀವನದ ಸವಿಯನ್ನು ಇನ್ನೂ ಉಣ್ಣಬೇಕೆಂದಿರುವೆನು."

"ನಿನ್ನ ತಾರುಣ್ಯದ ಉಪಯೋಗವೇ ನಮ್ಮ? ಒಬ್ಬ ನೀಚ ಕುದುಷನ ಆಟದ ಸೊಂಬೆಯಾಗಿದ್ದು ಉಪಯುಕ್ತತೆಯು ತೀರಿದೊಡನೆ ಬಿಸುಡುವ ಮೋಬ್ಬಿಡಿಕೆಯೇ ನೀನು?"

"ಇಲ್ಲ. ಛೆ ಅವನ ವಿಚಾರವಾಗಿ ಹಾಗೇನೂ ಹೇಳ ಬೇಡ. ನನ್ನನ್ನು ನಿಜವಾಗಿಯೂ ಅತ ಪ್ರೀತಿಸುತ್ತಿದ್ದ. ಆದರೆ ಅತನ ಹಿರಿಯರ ಮಾತು ಎಂದೂ ಅವನಿಗೆ ಅಗಲಿಲ್ಲ."

"ಹಾಗಿದ್ದರೆ ನೀನಿನ್ನೂ ಪ್ರೇಮವನ್ನು ನಂಬುವೆಯಾ? ಹೆಣ್ಣನ್ನು ಬಲೆಯಲ್ಲಿ ಹಾಕಲು ಮನುಷ್ಯನು ನಿರ್ಮಿಸಿದ ಪಾಶ—ಆ ಶಬ್ದದಲ್ಲಿನವನ್ನೂ ವಿಶ್ವಾಸವಿಡುವೆಯೆ? ನಿನ್ನ ತಾರುಣ್ಯವು ಒಂದೆರಡು ವರುಷ ನಿನ್ನ ದೇಸವನ್ನು ಮೂರು ಕಾಸುಗಳನ್ನು ಗಳಿಸಲು ಉಪಯೋಗ್ಯವಾಗಿಬಹುದು. ಆದರೆ-ಆನಂತರ?" ಭಿಕ್ಷುಕಿಯ ಕಣ್ಣುಗಳು ಕೋಪದಿಂದ ಕೆಂಡವಾಗಿದ್ದವು. "ಆನಂತರ ನೀನೊಂದು ಮುದಿ ಗೂಬೆಯಾಗಿ ದಾನಧರ್ಮವೂ ನಿನಗೆ ಸಿಗ ಬಾರದು".

"ಆದರೆ ಅಂತಹ ಜೀವನವಾದರೂ ತಾರುಣ್ಯವಿರುವಾಗಲೇ ಬೀಸುವುದುತ್ತಮ" ತರುಣಿಯು ಕಷ್ಟದಿಂದ ತರ್ಕಿಸಿದಳು. ಆದರೆ ಭಿಕ್ಷುಕಿಯು ಕ್ರೋಧಪೂರಿತ ಮಾತುಗಳಿಂದವಳ ಅವಳ ಧೈರ್ಯದ ಬುಗ್ಗೆಯು ಆಗಲೇ ಬತ್ತಿ ಹೋಗಿತ್ತು.

ಈಗ ತಾಯಿಯ ಸರದಿ ಬಂದಿದೆ. "ಅಮ್ಮಾ ನೀನೇನು ಹೇಳುವಿ?" ಭಿಕ್ಷುಕಿಯೆಂದಳು "ನೀನು ಕೂಡಾ ಸಾಯಲು ಹೆದರುವೆಯೆ?"

ತನ್ನ ಮಗುವನ್ನು ಎದಿಗೆ ಅವಚಿಕೊಳ್ಳುತ್ತಾ ತಾಯಿಯೆಂದಳು. "ಹಾಗನ್ನಬೇಡ, ಸಾಯಲು ನನಗೆ ಇಚ್ಛೆಯಿಲ್ಲ ಈ ಕಂದನಿಗೋಸ್ಕರ ನಾನು ಬದುಕಬೇಕಾಗಿದೆ."

"ಥೂ, ಆ ಮಾತಾಡದೆ ಸುಮ್ಮೆ! "ತಾತ್ಸಾರದಿಂದ ಭಿಕ್ಷುಕಿಯೆಂದಳು. "ನಿನ್ನ ದೌರ್ಬಲ್ಯದ, ನಿನ್ನ ಸ್ವೈಕ ಪತನದ, ಮತ್ತು ಜಗತ್ತಿನ ದೌರ್ಜನ್ಯದ ನೆನಪನ್ನು ಪುಟ್ಟಿಸುವ ಮಾಂಸದ ಮುದ್ದೆ ಅದು!"

"ನನಗೆ ಗೊತ್ತು. ಜೆನ್ನಾಗಿ ತಿಳಿದೇ ಇದ್ದೇನೆ. ಆದರೆ ಹೇಗಿದ್ದರೂ ನನ್ನದಲ್ಲವು, ನನ್ನ ಕಂದ, ನನ್ನ ರಕ್ತ ಮಾಂಸ-----"

"ಥೂ!" ಭಿಕ್ಷುಕಿಯು ಉದ್ರೇಕದಿಂದ ತಾಯಿಯ ಮಾತುಗಳನ್ನು ತಡೆದು ನುಡಿದಳು. "ನಿನ್ನ ಭಾವೋದ್ರೇಕದ ಮಾತುಗಳಿಂದ ನನಗೆ ನೋವುಂಟುಮಾಡುತ್ತಿ. ನಿನ್ನ ತಂದೆತಾಯಿ ಆಂದು ಕಾಳರಾತ್ರಿಯಲ್ಲಿ ಅವರ ಮನೆಯಿಂದ ನಿನ್ನನ್ನು ಹೊರಗೆ ಅಟ್ಟುವಾಗ ಅವರು ಈ ವಿಚಾರಗಳನ್ನು ಆರಿತಿದ್ದರೆ? —ನಿನ್ನ ರಕ್ತ ಮಾಂಸ!"

"ನನಗೆ ಸಾಯಲು ಯಾವ ಆತಂಕವೂ ಇಲ್ಲ —ನಿನಗೆ ಭರವಸೆ ಕೊಡುವೆನು. ಪ್ರಾಯಶ: ನನಗೆ ಸಾವೇಬರಬೇಕು ಹೇಗಿದ್ದರೂ ನನ್ನ ಜೀವನದ ಕಹಿಯನ್ನು ಸಾವು ಕೊನೆಗೊಳಿಸುವುದು. ಆದರೆ ಈ ಮಾನವಿನ ಗತಿಯೇನಾಗುವುದು? ನನ್ನ ಸಾವಿನ ನಂತರ ಈ ಕಂದನನ್ನು ಯಾರು ಸಾಕುವರು?"

"ಅವನು ಕೂಡಾ ಸಾಯಲಿ! ಅಂದರೆ ಜಗತ್ತಿನಲ್ಲಿ ಒಬ್ಬ ಭಿಕ್ಷುಕನು ಕಡಿಮೆಯಾಗುವನು. ಅವನು ಬಮುಕ ಬಾಳಬೇಕೆಂಮ ನಿನಗೆ ಆಸೆಯೇ? ಆವನನ್ನು ಯಾವ ಭವಿಷ್ಯ ಕಾದಿದೆ?"

ತಾಯಿಯು ತನ್ನ ಮಗುವಿನೋಸ್ಕರ ತರ್ಕಿಸಿದಳು. ಆಂಗಲಾಚಿ ಬೇಡಿದಳು. ಆದರೆ ಭಿಕ್ಷುಕಿಯು ತನ್ನ ಮನೋ ನಿರ್ಧಾರವನ್ನು ಆಗಲೇ ಮಾಡಿದ್ದಳು. ಕ್ಷೀಣದ ಮುಂಜೆ ದೂರದಲ್ಲಿ ಚುಕ್ಕೆಯಂತಿದ್ದ ಉಗಿ ಬಂಡಿಯ ಇಂಜನು ಈಗ ಭಯಂಕರವಾದ ರಕ್ತಸನಂತೆ ಭುಸುಗುಟ್ಟುತ್ತಾ ಹತ್ತಿರ ಹತ್ತಿರ ಸವಿಾಪಿಸಿತು.

"ಸರಿ—ನಾನು ಮಾತ್ರ ಸಾಯಲು ಹೊರಟ್ಟಿದ್ದೇನೆ. ಯಕಕಾಗಿ ಬದುಕಬೇಕು?" ಭಿಕ್ಷುಕಿಯೆಂದಳು.

ಉಳಿದಿಬ್ಬರು "ನಿನಗೆ ಹುಚ್ಚು ಹಿಡಿದಿದೆ!' ಎಂದರು.

"ಹ್ಹೆ! ಹ್ಹೆ!" ಭಿಕ್ಷುಕಿಯು ಹುಚ್ಚರಂತೆ ನಗುತ್ತಿದ್ದಳು "ನನಗೆ ಹುಚ್ಚೆಂದು ನೀವು ತಿಳಿದಿರುವಿರಿ. ಪಾಗಿದ್ದರೆ ನಿಮ್ಮ ವಿಚಾರವಾಗಿ ನನ್ನ ಅಭಿಪ್ರಾಯ ಗೊತ್ತೇ? ನೀವಿಬ್ಬರೂ ನಿಮ್ಮ ತಾರುಣ್ಯದ ಮತ್ತು ತಾಯ್ತನದ ಪರವಶಗಳ ಹಿಂದೆ ನಿಮ್ಮ ಹಿಡಿತನವನ್ನು ಮರೆಮಾಚಿಕೊಳ್ಳುವ ಹೇಡಿಗಳು. ನಿಮಗೆ ನನುನ್ನ."

"ಆದರೆ ನೀನಲ್ಲದೆ ನಾವು ಜೀವಿಸಲಾರೆವು ನಿನಗೆ ಆಮ ಗೊತ್ತು. ನೀನು ಸತ್ತರೆ ನಾವೂ ಸಾಯಬೇಕು." ತರುಣಿಯೂ ತಾಯಿಯೂ ಆವರ ಸಂಗಾತಿಯನ್ನು ತಡೆಯಲು ಪ್ರಯತ್ನಿಸಿದರು...ಕಾಡಿಬೇಡಿದರು.

ಉಗಿಬಂಡಿಯು ಈಗ ಕೆಲವೇ ನೂರುಗಳ ಅಂತರದಲ್ಲಿದೆ. ಭಿಕ್ಷುಕಿಯು ಪಟ್ಟಿಗಳ ಮೇಲೆ ತನ್ನ ಶರೀರವನ್ನು ಎಸೆದಳು. ಉಗಿ ಬಂಡಿಯು ಕಿರಿಚಿತು: ತ್ರೈನರನು ಬ್ರೇಕುಗಳನ್ನು ಒತ್ತಿ ಹಿಡಿದನು. ಆದರೆ.....ತಡವಾಗಿತ್ತು. ಹಾಲು ಚೆಲ್ಲಿಹೋಗಿತ್ತು.

ಭುಸುಗುಟ್ಟುತ್ತಿದ್ದ ಇಂಜಿನು ಸ್ತಬ್ಧವಾಯಿತು. ಚಕ್ರಗಳ ಎಡೆಯಿಂದ ಮನುಷ್ಯ ಮಾಂಸದ ಮತ್ತು ಎಲುಬುಗಳ ರಾಶಿಯನ್ನು ಹೊರಗೆ ಎಳೆದು ತೆಗೆದರು. ಅಗಲೇ ಗಾಬರಿಗೊಂಡ ಪ್ರಯಾಣಿಕರ ಗುಂಪು ಅಲ್ಲಿ ಸೇರಿತು.

ಯಾರೋ ಆಾದರು "ಅದೊಬ್ಬ ಭಿಕ್ಷುಕಿ ಇನ್ನೊಬ್ಬ ವನ ಗೂಡಿಸಿದ "ಅದೊಬ್ಬ ರೆಯನೆ. "ಚಿ—ಸುಂದರಿಯೂನಿದ್ದಳು."

ಪೂರಾನೆಯೊಬ್ಬನಂದ "ಅಯ್ಯೋ ಅದೊಬ್ಬ ತಾಯಿ ಮತ್ತು ಮಗು".

ಅವಾಗಲೇ ಬಂದ ಪ್ರಯಾಣಿಕನೊಬ್ಬನನ್ನು ಉದ್ದೇಶಿಸಿ ಇನ್ನೊಬ್ಬ ವಿನಂಸಿದ "ಒಬ್ಬ ಹೆಂಗಸು ಕೊಲ್ಲಲ್ಪಟ್ಟಳಂತೆ."

ಆದರೆ ಆ ಗುಂಪಿನಲ್ಲವ್ವ ತಾತ್ಕಿಕನೊಬ್ಬನು ಮಿಕ್ಕವರಿಗಿಂ ತ ಜೆಚ್ಚಿನವನ್ನು ಕಂಡಿದ್ದನು. ಅವನು "ಅಲ್ಲ. ಒಬ್ಬ ಹೆಂಗಸಲ್ಲ—ಮೂವರು." ಎಂದ.

(ಇಂಗ್ಲೀಷಿನಿಂದ)

ಪ್ರಚಾರ ಕ್ಷೇತ್ರದಲ್ಲಿ ಪ್ರದರ್ಶನಗಳ ಸಾತ್ರ

(೨ನೇ ಪುಟದಿಂದ)

ಯಾರ್ಕ್, ಮುಂತಾದ ಕೇಂದ್ರಗಳ ಪ್ರದರ್ಶನಗಳಲ್ಲಿಯೂ ಉತ್ಸಾಹದಿಂಭಾಗವಹಿಸಿದರು.

ಸಾಹಸ ರಂಗದ ಮೇಲೆ ಬೆಳಕು

ನಮಗೆ ಸ್ವಾತಂತ್ರ್ಯ ಸಿಕ್ಕಬಳಿಕ, ೧೯೫೫ರಲ್ಲಿ, ಬ್ರಿಟನಿನಲ್ಲಿ ಬಿಡಿಸಿಕೊಡ್ಡ ಪ್ರದರ್ಶನ ನಡೆಯಿತು ಅಂಗ್ಲರ ಅಭಿವೃದ್ಧಿಯ ಮೆಟ್ಟಿಲುಗಳನ್ನು ಸ್ಪಷ್ಟವಾಗಿ ಗುರುತಿಸಲಾಗುವಂತೆ ವಿಶೇಷ ಶ್ರಮವನ್ನು ಇಲ್ಲಿ ವಹಿಸಲಾಯಿತು. ವಿಜ್ಞಾನ, ತಾಂತ್ರಿಕ ಕೌಶಲ್ಯ, ಸರಕುಗಳ ರಚನೆಯ ನಿಧಾನ, ಶಿಲ್ಪ, ನಗರ ನಿರ್ಮಾಣಯೋಜನೆ, ಸಂಗೀತ, ಕುಂಚಲೇಖನ, ಸಾಹಿತ್ಯ, ಮುದ್ರಣ, ಚಲಚ್ಚಿತ್ರ ಮುತ್ತಿತರ ಮನೋರಂಜನೆಯು ಸಾಧನ—ಮುಂತಾಗಿ ಮನುಷ್ಯನ ಉದ್ಯಮ ಶೀಲತೆಯ, ಪ್ರತಿಯೊಂದೂ ಸಾಹಸರಂಗದ ಮೇಲೆ ಈ ಪ್ರದರ್ಶನ ಪ್ರಕಾಶವನ್ನು ಚೆಲ್ಲಿತು.

ಬೆಲ್ಜಿಯಮಿನ ಬ್ರುಸ್ಸೆಲ್ಸಿನಲ್ಲಿ ೧೯೫೫ನೇ ಇಸವಿಯಿಂದು ಜಗತ್ತಿನ ೬೫ ರಾಷ್ಟ್ರಗಳ ಸಹಕಾರದಿಂದ ಮಹಾ ಪ್ರದರ್ಶನ ಏರ್ಪಡಿಸಲು ಈ ವರ್ಷದ ಪ್ರಾರಂಭದಿಂದಲೇ ಸಿದ್ಧತೆ ನಡೆದಿದೆ. ಈ ಪ್ರದರ್ಶನಕ್ಕೆ ಜಗತ್ತಿನ ಪ್ರತಿಯೊಂದೂ ಮೂಲೆಯಿಂದ ೩ ಕೋಟಿ ಸಂದರ್ಶಕರು ಬರುವರೆಂಬ ಅಂದಾಜು. ಇಷ್ಟು ಹೆಚ್ಚು ಜನರು ವರ್ಷದ ಕಲವೇ ತಿಂಗಳ ಅವಧಿಯಲ್ಲಿ ಬೆಲ್ಜಿಯಮಿಗೆ ಬಂದು ಹೋಗುವುದರಿಂದ ಊಟೋಪಚಾರಗಳ ಮತ್ತು ವಸತಿಯ ಸೌಕರ್ಯಗಳನ್ನು ಅವರಿಗೆ ನೀಡಿ ಬೆಲ್ಜಿಯಮಿನ ಜನರು ಹಣ ಸಂಪಾದಿಸುವುದು ನಿಶ್ಚಿತ. ಪ್ರದರ್ಶನಗಳಿಂದಾಗುವ ಅಪ್ರತ್ಯಕ್ಷ ಪ್ರಯೋಜನಗಳಲ್ಲಿ ಇದೂ ಒಂದು.

ನಮ್ಮ ದೇಶದಲ್ಲಿ

ಬ್ರಿಟಿಷರು ಭಾರತವನ್ನು ಆಳುತ್ತಿದ್ದಾಗ ಈ ಧ್ಯೇಯದಲ್ಲಿ ಪ್ರದರ್ಶನಗಳಿಗೆ ಸಾಕಷ್ಟು ಪ್ರೋತ್ಸಾಹ ಸಿಗಲಿಲ್ಲ. ಸ್ವಾತಂತ್ರ್ಯೋತ್ತರದಲ್ಲಿ ನಾಲ್ಕೈದು ವರ್ಷಗಳಲ್ಲಿ ನಮ್ಮ ದೇಶದಲ್ಲಿ ನಾಲ್ಕೈದು ಪ್ರದರ್ಶನಗಳು ನಡೆದವು. ೧೯೫೫ನೇ ವರ್ಷದಲ್ಲಿ ಮುಂಬಯಿಯಲ್ಲಿ ನಡೆಸಿದ ಅಂತಾರಾಷ್ಟ್ರೀಯ ಸ್ವರೂಪದ ಔದ್ಯೋಗಿಕ ಪ್ರದರ್ಶನವು ವಿದೇಶೀಯರಿಗೆ ಭಾರತೀಯರ ಸರಕುಗಳ ಮೇಲೆ ಮೋಹ ಹುಟ್ಟುವಂತೆಯೂ ವಿದೇಶಗಳ ಯಂತ್ರ ವಿಜ್ಞಾನ ಕೌಶಲ್ಯವನ್ನು ಭಾರತೀಯರು ಅಭ್ಯಸಿಸುವಂತೆಯೂ ಮಾಡುವಲ್ಲಿ ತುಂಬ ನೆರವಾಯಿತು.

ದೊಡ್ಡ ಭೂಖಂಡವಾಗಿರುವ ಭಾರತದಲ್ಲಿ ಅನೇಕ ಬಗೆಯ ಪ್ರದರ್ಶನಗಳನ್ನು ಏರ್ಪಡಿಸುವುದು ಸಾಧ್ಯವಿದೆ. ಪ್ರದರ್ಶನಗಳು ಆಕರ್ಷಕವೂ ಬೋಧಪ್ರದವೂ ಆಗಿರುವಂತೆ ನೋಡಿಕೊಳ್ಳಬಲ್ಲವರಿದ್ದರೆ-ಲಾಭದ ದೃಷ್ಟಿಯಿಂದಲೂ ಇದು ಪ್ರಯೋಜಕವಾದ ವ್ಯವಸಾಯವಾಗಿದೆ. ಹಳ್ಳಿಯ ಮಟ್ಟದಲ್ಲಿ ಸಹ ಪ್ರದರ್ಶನಗಳನ್ನು ಏರ್ಪಡಿಸುವುದು ಅಸೇಕ್ಷಣೀಯವಾಗಿದೆ. ತರಕಾರಿ ಪ್ರದರ್ಶನದಿಂದ ಹಿಡಿದ. ಕುಶಲ ಕಲೆಗಳ ಪ್ರದರ್ಶನದ ವರೆಗೆ ಎಲ್ಲ ಬಗೆಯವುಗಳನ್ನೂ ನಮ್ಮ ಹಳ್ಳಿಗಳಲ್ಲಿ ಏರ್ಪಡಿಸುವುದರಿಂದ, ಜನರ ಸೌಂದರ್ಯಾಭಿರುಚಿಯನ್ನೂ ಪೋಷಿಸುವುದರೊಂದಿಗೆ ಜ್ಞಾನವಿಕಸನದ ಕಾರ್ಯವನ್ನು ಸಾಧಿಸುವಲ್ಲಿ ಪ್ರಯತ್ನಿಸಬಹುದು. ಹೀಗಿರುವಲ್ಲಿ "ಅಖಿಲ ಭಾರತ" ಸ್ವರೂಪದ್ದಾಗುವ ನಮ್ಮ ಈಗಿನ ಹಾಸ್ಯಾಸ್ಪದ ಪ್ರದರ್ಶನಗಳಿಗೆ ಹಳ್ಳಿಯ ಪ್ರದರ್ಶನ ವ್ಯವಸ್ಥೆಯೇ ಯೋಗ್ಯ ಉತ್ತರವೆನಿಸೀತು.

ಮೂಲ್ಕಿ ಬೇಂಕ್ ಲಿಮಿಟೆಡ್,

ಮೂಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ದರಗಳನ್ನು ಹೊತ್ತವೆ.

ನಮ್ಮ ಬಡ್ಡಿ ದರಗಳು.

ನಿಯಮಿತ ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಮಕ್ಕಳ ಮಗ್ಗಿ ಪುಸ್ತಕ

ಬೆಲೆ ೦—೧—೦

ನ್ಯಾಷನಾರಿಗಳಿಗೆ ಧಾರಾಳ ಕಮಿಶನ್.

ನವಯುಗ ಪ್ರೆಸ್, ಉಡುಪಿ.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಪದತಪ್ಪಿವ ಮತ್ತು ನಿಂತುಹೋದ ಮುಟ್ಟು ಮೋಷಗೆಗಳನ್ನು ಪತೋಟಗೆ ತರುವವು.

ಈ ಔಷಧ ಸೇವನೆಯಿಂವ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಪೊಂವಬಹುದು. ಬೆಲೆ: ರೂ. ೫/- ಸ್ಪೆಶಲ್ ರೂ 8/-

Mrs. P. DEVEE, F. Ds. (N. J.) (ವಿ.ಪಿ.ಪಿ. ಪ್ರತ್ಯೇಕ)

CALCUTTA—40 ಸ್ಥಾನಿಕರು: ರಹಾಕಂಪೆನಿ, ಮಂಗಳೂರು

ಅಮೇರಿಕದ ಬಿಳಿಯರ ಹೋರಾಟ

ನೀಗ್ರೊಗಳಿಗೆ ನ್ಯಾಯಸ್ಥಾನದ ಬೆಂಬಲ

ಅಮೇರಿಕದ ದಕ್ಷಿಣ ರಾಜ್ಯಗಳಲ್ಲಿ ಹೊಸ ಶಾಲಾ ವರ್ಷವು ಇದೀಗ ತೊಡಗಿದೆ. ಇದರೊಂದಿಗೆ ಯಾವುದು ಕಲಹದ ಬಳಿಕ ಅತ್ಯಂತ ಮಹತ್ವೆದ್ದೆನಿಸಿದ ರಣಾಹ್ವಾನವನ್ನು ಈರಾಜ್ಯಗಳು ಎದುರಿಸಬೇಕಾಗಿ ಬಂದಿದೆ. ಕಪ್ಪು ನೀಗ್ರೋಗಳನ್ನು ಬಿಳಿ ಅಮೇರಿಕನ್ನರಿಂದ ಪ್ರತ್ಯೇಕಿಸಿಡುವ ತಮ್ಮ ಸಂಪ್ರದಾಯವನ್ನು ಬಿಟ್ಟುಕೊಡುವ ಸಮಸ್ಯೆ ಈ ರಾಜ್ಯಗಳ ಪ್ರಭೃತಿಗಳನ್ನು ಪೀಡಿಸುತ್ತಿದೆ.

ಅಮೇರಿಕದ ಶ್ರೇಷ್ಠ ನ್ಯಾಯಸ್ಥಾನವು ತೆರಿಗೆಗಳಿಂದ ಬೆಂಬಲಿಸಲ್ಪಡುತ್ತಿರುವ ಸಾರ್ವಜನಿಕ ಶಾಲೆಗಳಲ್ಲಿ ನೀಗ್ರೋಗಳಿಗೆ ಪ್ರವೇಶನವನ್ನು ಕೊಡದಿರುವ್ಯಕ್ತಿಯಾವನ್ನು ಪ್ರತ್ಯೇಕವಾಗಿಡುವ ಧೋರಣೆಯು ನ್ಯಾಯ ಸಮ್ಮತವಾದುದಲ್ಲ ಎಂದು ೧೯೫೪ರಲ್ಲಿ ಮೈ ನುತ್ತು ೧೯೫೫ರಲ್ಲಿ ಇನ್ನೊಮ್ಮೆ ಸಾರಿದ ಬಳಿಕ ಪ್ರಾರಂಭವಾದ ಶಾಲಾ ವರ್ಷ ಈಗಿನದಾಗಿದೆ. ನ್ಯಾಯ ಸ್ಥಾನದ ತೀರ್ಪಿನಂತೆ ಈ ಧೋರಣೆಯನ್ನು ಸಾಧ್ಯವಿದ್ದಷ್ಟು ಬೇಗನೆ ತ್ಯಜಿಸಬೇಕಾಗಿದೆ.

ಪ್ರತ್ಯೇಕವಾಗಿ ನೀಗ್ರೋಗಳನ್ನಿಡುವ ಈಗಿನ ಧೋರಣೆಯನ್ನು ಬಿಟ್ಟುಗೊಟ್ಟ ಪಕ್ಷದಲ್ಲಿ ಅಮೇರಿಕದ ದಕ್ಷಿಣ ರಾಜ್ಯಗಳಲ್ಲಿ ಬೇರೆ ಅನೇಕ ಬಗೆಯ ಸಾಮಾಜಿಕ ಸುಧಾರಣೆಗಳ ಬೇಡಿಕೆ ಮುಂದೊತ್ತಲ್ಪಡುವ ಸಂಭವವಿವೆ. ಹೀಗಾಗಿ ನ್ಯಾಯ ಸ್ಥಾನಗಳ ತೀರ್ಮಾನವನ್ನು ಧಿಕ್ಕರಿಸುವ ಪ್ರಯತ್ನಗಳು ನಡೆದು ಕ್ಲೇಶದಾಯಕವಾದ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದೆ. ತಾಳ್ಮೆ, ಜಾಣ್ಮೆ ಮತ್ತು ನ್ಯಾಯಬದ್ಧ ಆಚರಣೆಯ ಅಗ್ನಿ ಪರೀಕ್ಷೆ ಇಲ್ಲೀಗ ನಡೆದಿದೆ. ಹಿಂದಿನ ರೀತಿಯೇ ಮುಂದರಿಯಲಿ ಎನ್ನುವವರ ಮತ್ತು ತೀವ್ರ ಪರಿವರ್ತನೆಯನ್ನು ಆವೇಕ್ಷಿಸುತ್ತಿರುವವರ ನಡುವೆ ಸ್ಪರ್ಧೆ ಎದ್ದಿರುವಂತೆ ಕಾಣುತ್ತದೆ.

ಹೀಗಿದ್ದರೂ ನ್ಯಾಯ ಸ್ಥಾನದ ತೀರ್ಮಾನದಿಂದ ಆತಂಕಕ್ಕೊಳಗಾಗಿರುವ ೨೧ ರಾಜ್ಯಗಳಲ್ಲಿ ೯ ರಾಜ್ಯಗಳ ಶಾಲೆಗಳು ಹೊಸ್ಸೆ ತೆರೆಯಲ್ಪಟ್ಟಾಗ ಅಲ್ಲಿ ಒಬ್ಬನೇ ಒಬ್ಬ ನೀಗ್ರೊ ವಿದ್ಯಾರ್ಥಿಯೂ ಇರಲಿಲ್ಲ. ನೀಗ್ರೋಗಳನ್ನು ಪ್ರತ್ಯೇಕವಾಗಿಡುವುದರಲ್ಲಿ ಅಗ್ರೇಸರವೆನಿಸಿದ ಈ ರಾಜ್ಯಗಳು ವರ್ಜಿನಿಯಾದಿಂದ ಅಟ್ಲಾಂಟಿಕ್ ಸಾಗರದ ದಕ್ಷಿಣಕ್ಕೆ ಸಾಗುತ್ತಾ ಪಶ್ಚಿಮದ ಲೂಸಿಯಾನ ಮತ್ತು ಒಳನಾಡಿನ ಟೆನ್ನೆಸಿಯ ವರೆಗೆ ವ್ಯಾಪಿಸಿವೆ. ಇದು ನಾಡ್ಯದ ಒಂದು ಮುಖ.

ಇನ್ನೊಂದು ಮುಖವು ನ್ಯಾಯ ಸ್ಥಾನದ ತೀರ್ಪಿನಂತೆ ನಡೆಯುವುದರಲ್ಲಿ ಆಗಿರುವ ಪ್ರಗತಿಯನ್ನು ವ್ಯಕ್ತಪಡಿಸುತ್ತದೆ. ಉಳಿದ ಹನ್ನೆರಡೂ ರಾಜ್ಯಗಳ ಎಲ್ಲ ಶಾಲೆಗಳಲ್ಲಿ ಬಿಳಿಯರಾದ ಅಮೇರಿಕನ್ನರೂ ಕರಿಯ ನೀಗ್ರೋಗಳೂ ಬೆರೆತ ತರಗತಿಗಳನ್ನು ಈ ಸಲ ತೆರೆಯಲಾಗಿದೆ. ಈ ಕನ್ನೆರಡರಲ್ಲಿ ಎಂಟು ರಾಜ್ಯಗಳು ನಿಜಕ್ಕೂ ದಕ್ಷಿಣದವೆನಿಸಿವೆ; ಉಳಿದ ನಾಲ್ಕು ರಾಜ್ಯಗಳಲ್ಲಿ ದಕ್ಷಿಣದಲ್ಲಿದ್ದಷ್ಟು ಕಠಿಣ ನಿಯಮಗಳನ್ನು ಉಭಯ ಜನಾಂಗಗಳ ವ್ಯವಹಾರದಲ್ಲಿ ಹಿಂದೆಯೂ ತಂದಿರಲಿಲ್ಲ.

ಅಮೇರಿಕದ ರಾಜಧಾನಿಯಾದ ವಾಶಿಂಗ್‌ಟನ್ ಮತ್ತು ಮಿಸ್ಸೂರಿಗಳು ಪ್ರತ್ಯೇಕತೆಯ ಧೋರಣೆಯನ್ನು ತ್ಯಜಿಸುವಲ್ಲಿ ಮೇಲ್ಪಂಕ್ತಿ ಹಾಕಿವೆ; ವಾಶಿಂಗ್‌ಟನ್ನಿನ ೧೫ ಸಾರ್ವಜನಿಕ ಶಾಲೆಗಳಲ್ಲಿ ೬೦% ಮಿಶ್ರ ತರಗತಿಗಳನ್ನು ನಡೆಸುತ್ತಿವೆ; ಇನ್ನಿ ೬೫% ನೀಗ್ರೊ ವಿದ್ಯಾರ್ಥಿಗಳಿದ್ದಾರೆ. ಮಿಸ್ಸೂರಿಯ ೬೩ ಸಾವಿರ ನೀಗ್ರೊ ವಿದ್ಯಾರ್ಥಿಗಳಲ್ಲಿ ೫೫ ಸಾವಿರ ದಷ್ಟು ಮಿಶ್ರ ತರಗತಿಗಳಿಗೆ ಹೋಗುತ್ತಿದ್ದಾರೆ.

ಒಕ್ಲಹಾಮದಲ್ಲಿ ೩೫ ಪಶ್ಚಿಮ ವರ್ಜಿನಿಯಾದಲ್ಲಿ ೪೫ ಶಾಲೆಗಳು ಮಾತ್ರ ನೀಗ್ರೋಗಳಿಗೆ ಅಮೇರಿಕನ್ನರೊಬ್ಬಗೆ ಶಿಕ್ಷಣ ನೀಡುತ್ತವೆ. ಡೆಲ್ಯಾರೆಯ ೧೦೫೦೦ ನೀಗ್ರೊ ವಿದ್ಯಾರ್ಥಿಗಳಲ್ಲಿ ಕೇವಲ ೧೩೫೦ ಮತ್ತು ಮೇರಿಲ್ಯಾಂಡಿನ ೧೩೦೦೦ ನೀಗ್ರೊ ವಿದ್ಯಾರ್ಥಿಗಳಲ್ಲಿ ಕೇವಲ ೪೦೦೦ ಮಿಶ್ರ ತರಗತಿಗಳಲ್ಲಿ ಕಲಿಯುತ್ತಿದ್ದಾರೆ. ಟೆಕ್ಸಾಸಿನಲ್ಲಿ ಎಲ್ಲೋ ಕೆಲವು ಪಟ್ಟಣಗಳಲ್ಲಿ ಮಾತ್ರ ಮಿಶ್ರ ತರಗತಿಯನ್ನು ಶಾಲೆಗಳಲ್ಲಿ ಪ್ರಾರಂಭಿಸಲಾಗಿದೆ.

ಒಟ್ಟಾರೆ ಹೇಳುವುದಾದರೆ, ಇವತ್ತು ದಕ್ಷಿಣದ ೨೧ ರಾಜ್ಯಗಳಲ್ಲಿ ೧೫ ನೀಗ್ರೋಗಳಿಗೆ ಮುಕ್ತ ದ್ವಾರವೀಯಲು ಸಿದ್ಧವಾಗಿವೆ; ಮತ್ತು ೧೫೮೦೦ ನೀಗ್ರೋಗಳು ಬಿಳಿಯರ ಸಹಪಾಠಿಗಳಾಗಿದ್ದಾರೆ. ಇದು ಪ್ರತ್ಯೇಕತೆಯ ಭಾವನೆ ದುರ್ಬಲಗೊಂಡುತ್ತಾ ಸಾಗುತ್ತಿರುವುದನ್ನು ಸಾಮಾನ್ಯವಾಗಿ ಎತ್ತಿ ತೋರಿಸುತ್ತದೆ.

ಆದರೆ, ಬಿಳಿಯರಿಗಿಂತಲೂ ಹೆಚ್ಚು ಜನಸಂಖ್ಯೆಯಲ್ಲಿ ನೀಗ್ರೋಗಳಿರುವ ತೀರ ದಕ್ಷಿಣದ ರಾಜ್ಯಗಳಲ್ಲಿ ವಿರೋಧ ಏನೇನೂ ಕಡಿಮೆಯಾಗಿಲ್ಲ. ನಾಗರಿಕರ ಸುಂಡಳಗಳೇ ಮುಂತಾದುವುಗಳಲ್ಲಿ ಬಹುಮತ ಪಡೆದಿರುವ ಬಿಳಿಯರು ಸ್ವಯಂ ಪ್ರೇರಣೆಯಿಂದ ಪ್ರತ್ಯೇಕತೆಯನ್ನು ತೊಡೆಯಿಸುವ ಯೋಜನೆಯನ್ನೂ ರಾಜ್ಯದ ಶಾಸನವನ್ನು, ಬದಲಾಯಿಸುವ ವಿಧಾನವನ್ನೂ ನ್ಯಾಯ ಸ್ಥಾನದಲ್ಲಿ ಹೋರಾಡಲು ಹಣವನ್ನು ಸಂಗ್ರಹಿಸುವ ಕಾರ್ಯಕ್ರಮವನ್ನೂ ರೂಪಿಸುವುದರಲ್ಲಿ ತತ್ಪರವಾಗಿವೆ.

ಮಿಸಿಸಿಪ್ಪಿ, ಅಲಬಾಮ, ಜೋರ್ಜಿಯ ನುತ್ತು ದಕ್ಷಿಣ ಕೆರೊಲೀನಗಳಲ್ಲಿ ಪ್ರತ್ಯೇಕತೆಯ ವಿರುದ್ಧ ಸ್ವರವೆತ್ತಿದ ನೀಗ್ರೊಗಳ ಮೇಲೆ ಆರ್ಥಿಕ ಒತ್ತಾಯವನ್ನು ಹೇರಿದ ನಿದರ್ಶನಗಳಿವೆ. ಬಹಿಷ್ಕಾರದ ಬೆದರಿಕೆಯು ಇತ್ತಂಡದವರಿಂದಲೂ ಹಾಕಲ್ಪಡುತ್ತಿವೆ.

ಇವೆಲ್ಲ ಯೋಜನೆಗಳನ್ನೂ ನ್ಯಾಯ ಸ್ಥಾನದಲ್ಲಿ ಮತ್ತಿತರ ಕ್ಷೇತ್ರಗಳಲ್ಲಿ ಅಹ್ವಾನಿಸಲಾಗುತ್ತಿದೆ. ಕ್ರೈಸ್ತರ ಧರ್ಮ ಸಂಸ್ಥೆಗಳೂ ಇಗರ್ಜಿಗಳೂ ಈಗ ಪ್ರತ್ಯೇಕತೆಯ ವಿರುದ್ಧ ದೂರಿಡುತ್ತಿವೆ. ದಕ್ಷಿಣ ಕೆರೊಲಿನದ ಒಬ್ಬ ರೋಮನ್ ಕಥೊಲಿಕ್ ಬಿರಪರು ಒಬ್ಬ ಮನುಷ್ಯನನ್ನು ಕೆಲಸದಿಂದ ವಂಚಿತನಾಗಿ ಮಾಡಿದುದು ಮತ್ತು ಅವನ ವ್ಯಾಪಾರಕ್ಕೆ ಬಹಿಷ್ಕಾರ ಹಾಕುವುದು ಶುದ್ಧ ತಪ್ಪು ಮತ್ತು ಪಾಪ ಎಂದಿದ್ದಾರೆ. ಶಾಲೆಗಳಲ್ಲಿ ಪ್ರತ್ಯೇಕತೆಯ ನಿರ್ಮೂಲವಾಗಬೇಕೆಂದು ನೀಗ್ರೊ ಕೇಳುವನೆಂಬುದು ಇಂಥ ಹೇಯ ವರ್ತನೆಗೆ ಕಾರಣವಾಗಲಾರದು ಎಂದವರು ಅಭಿಪ್ರಾಯ. ವರ್ಜಿನಿಯದ ಇನ್ನೊಬ್ಬ ಪಾದ್ರಿಯು ಪ್ರತ್ಯೇಕತೆಯನ್ನು ಕ್ರೈಸ್ತಧರ್ಮಕ್ಕೆ ವಿರುದ್ಧವಾದ ತತ್ವವೆಂದು ಕರೆದಿದ್ದಾರೆ.

ತಪ್ಪು ಶಕ್ತಿಯನ್ನು ಇಪ್ಪರ ವರೆಗೆ ನ್ಯಾಯ ಸ್ಥಾನವೂ ಕಳೆದು ಕೊಂಡಿಲ್ಲ. ಮೊಸ್ಸೆ ತಾನೆ ಅಮೇರಿಕದ ಶ್ರೇಷ್ಠ ನ್ಯಾಯ ಸ್ಥಾನವು ಅಲಬಾಮದ ವಿಶ್ವವಿದ್ಯಾಲಯಕ್ಕೆ ಕಾಲೇಜು ತರಗತಿಗಳಲ್ಲಿ ನೀಗ್ರೊಗಳಿಗೂ ಪ್ರವೇಶಕೊಡಬೇಕೆಂದು ಆಜ್ಞೆ ವಿಧಿಸಿತು. ಈಗಾಗಲೇ ವರ್ಜಿನಿಯ, ಉತ್ತರ ಕೆರೊಲಿನಾ, ಆರ್ಕನ್‌ಸಾಸ್, ಲೂಸಿಯಾನ ಮತ್ತು ಟೆಕ್ಸಾಸುಗಳಲ್ಲಿ ನೀಗ್ರೊಗಳು ಬಿಳಿಯರ ಕಾಲೇಜುಗಳಿಗೆ ಪ್ರವೇಶ ಪಡೆದಿದ್ದಾರೆ.

ಈ ಸಮಸ್ಯೆಯ ಉಲ್ಲೇಖನೀಯಾಂಶವೆಂದರೆ ಬೀದಿಗಳಲ್ಲಿ ಹರಟೆಯ ಮತ್ತು ಶಾಲೆಗಳಲ್ಲಿ ಪ್ರತಿಭಟನೆಯ ವಿಷಯವಾಗಿ ಇಪ್ಪರ ವರೆಗಿದ್ದ ಪ್ರಶ್ನೆಯು ಈಗ ನ್ಯಾಯ ಸ್ಥಾನಗಳಲ್ಲಿ ಇತ್ಯರ್ಥದ ವಿಷಯವಾಗಿದೆ. ಮೂವತ್ತರಷ್ಟು ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಇನ್ನೂ ಇನ್ನೆಷ್ಟೊ ದಾಖಲಾಗುವ ಸಿದ್ಧತೆಯಲ್ಲಿವೆ.

ಇದು ಶುಭಕರವಾದ ವಿಷಯ— ಮಹತ್ವದ ಸಾಮಾಜಿಕ ಸಮಸ್ಯೆಯನ್ನು ಬಿಡಿಸುವಲ್ಲಿ ಹಿಂಸೆ, ಬಲಪ್ರಯೋಗ, ಭೀದ್ರ ಸ್ಥಾನಗಳಲ್ಲಿದ್ದವರ ನಿಂದೆ ಮತ್ತು ತಿರಸ್ಕಾರಗಳೇನೂ ಇಲ್ಲದೆ, ನ್ಯಾಯಸ್ಥಾನಗಳಲ್ಲಿಯೇ ಪರಿಹಾರವನ್ನು ಕಂಡುಕೊಳ್ಳುವ ಪ್ರವೃತ್ತಿಯು ಪ್ರಶಂಸಾರ್ಹವಾಗಿದೆ. ನ್ಯಾಯಸ್ಥಾನಗಳ ತೀರ್ಮಾನವನ್ನು ಗಮನಿಸಿದರೆ, ಬೇರೆ ಯಾವುದೇ ರೀತಿಯಿಂದ ನೆರವೇರಲಾರದಷ್ಟು ಕ್ಷೇಪ್ರದಲ್ಲಿ ನೀಗ್ರೋ ಸಮಾನತೆಯ ತತ್ವ ಕಾರ್ಯರೂಪಕ್ಕೆ ಜಾರಿಗೆ ಬರುವುದು ನಿಶ್ಚಯ ಎಂಬ ಭರವಸೆ ಮೂಡುತ್ತದೆ.

—U. S. I. S.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಸುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ವಿದ್ಯಾ—

ಬರೆದವರು: ಎಸ್ಕೆ ಕುಲಕರ್ಣಿ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೦—೧೫—೦.

ಇದೇ ಲೇಖಕರ "ಎರಡನೆಯ ಸಂಬಂಧ" ಎಂಬ ಉದಂಬರಿಯ ನಾಟಕ. ರೂಪವೇ "ವಿದ್ಯಾ" ಎಂಬ ಈ ಸುಸ್ತಕ ನಾಟಕದಲ್ಲಿ ನವೀನವಾದ ತಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ—ಇವುಗಳು ಶ್ರೇಷ್ಠಕರ ದೃಷ್ಟಿಯಲ್ಲಿ ಹೊಸಬಗೆಯ ಆಕರ್ಷಣೆ ಎನಿಸಬಲ್ಲಸಾಮರ್ಥ್ಯವನ್ನು ಪಡೆದಿವೆ. ನಾಟಕವು ಸಹ ಸ್ವಾರಸ್ಯವಾಗಿದೆ— ಮುಕ್ತಾಯವು ತುಸು ಆಸರವಿದಂದೆ ಕೊಡಿಸಂತೆ ಕಂಡರೂ ಸಾಮಾಜಿಕ ಧರ್ಮ ನೀತಿಯನ್ನು ಎತ್ತಿ ಹಿಡಿಯುವಂತೆಯೂ ಗೃಹ ಸೌಖ್ಯವನ್ನು ಹೆಚ್ಚಿಸುವಂತೆಯೂ ಸುಖಾಂತವಾಗಿ ಆದು ಜೋಡಿಯಲ್ಪಟ್ಟಿರುತ್ತದೆ. ಸಂಭಾಷಣೆಗಳು ವಿಸೋಪಾತ್ಮಕವಿವೆ; ಸರಸತೆ ಪ್ರತಿಯೊಂದು ವಾಕ್ಯದಲ್ಲಿಎದ್ದು ಕಾಣುತ್ತದೆ. ಪಾತ್ರಪುಷ್ಟಿಯೂ ಸಾಕಷ್ಟು ಚೆನ್ನಾಗಿದೆ. ರಾಮನಾಥನ "ಸೇಜಾಲ" ಛಲೆಯ ಚಿತ್ರಣವು ಉಪಾತ್ತವೀತಿಯಲ್ಲಿದ್ದು ಗಾಢವಾದ ಪರಿಣಾಮವನ್ನು ಸೂಡುತ್ತದೆ. ಒಟ್ಟಿನಲ್ಲಿ ಇದೊಂದು ಒಳ್ಳೆಯನಾಟಕ.

ಲಕ್ಷ್ಯಯ ಸಂಸಾರ—

ಬರೆದವರು: ವೀರಕೇಸರಿ ಸೀತಾರಾಮ ಶಾಸ್ತ್ರಿ. ಪ್ರಕಾಶಕರು: ನೇತ್ರಜ್ಯೋತಿ ಪ್ರಕಾಶನ, ಬಳೇ ಪೇಟೆ, ಬೆಂಗಳೂರು ೨. ಬೆಲೆ: ರೂ. ೦—೧೪—೦.

ವೀರಕೇಸರಿಯವರೆ ಈ ಪುಸ್ತಕ "ಬೃಂದಾವನ" ದ ಮುಂದಿನ ಭಾಗವಂತೆ; ಈ "ಮುಂದಿನ "ಭಾಗದ "ಪೊವಲನೆ" ಭಾಗ ಮಾತ್ರ ನಮ್ಮ ಕೈ ಸೇರಿರುವುದರಿಂದ ಇನ್ನು ನುಂದಿನ ಭಾಗ (ಗಳು?) ಪ್ರಕಟವಾದ ಬಳಿಕವೇ ವಿಮರ್ಶನಾಡಲು ಸಾಧ್ಯ. ಈ ನಂದರ್ಭದಲ್ಲಿ ಇಷ್ಟು ಮಾತ್ರ ಹೇಳಬಯಸುವುದು—ಕಾದಂಬರಿಯನ್ನು ಪ್ರಕಟಿಸುವವರು ಒಂದೇ ಪುಸ್ತಕದ ರೂಪದಲ್ಲಿ ಅವನ್ನು ಕೊಡಬೇಕು; ಆಥವಾ ಸುಸ್ತಕ ಕೊಂಡವನು ನಷ್ಟಕ್ಕೆ ಗುರಿಯಾಗದಂತೆ ಪ್ರಕಟಿತ ಭಾಗವು ತನ್ನಷ್ಟಕ್ಕೆ ಒಂದು ಬಗೆಯ ಪೂರ್ಣತೆಯಿಂದ ಕೂಡಿರುವಂತೆಯಾದರೂ ಲೇಖಕರು ನೋಡಬೇಕು.

—ಕು.

ಪೊಸಕೆರೆ
ಚಿದಂಬರಯ್ಯನವರು
ಅನುವಾದಿಸಿದ
ಭಗವದ್ಗೀತೆಯು
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್.
ಸುಮಾರು 450 ಪುಟಗಳು
ಕ್ರಯ 0—12—0
●
ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ.

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 3—11—1955

ಸಂಚಿಕೆ ೧೦
NO. 10

ಲೋಕ ಖಂಡಿಸುವ ಧೋರಣೆ

ಸಂಯುಕ್ತ ರಾಷ್ಟ್ರ ಸಂಘದ ರಾಜಕೀಯ ಸಮಿತಿಯ ಮುಂದೆ ಕಳೆದ ವಾರ ದಕ್ಷಿಣ ಆಫ್ರಿಕದಲ್ಲಿ ವರ್ಣ ಭೇದ ಧೋರಣೆಯನ್ನು ಅನುಸರಿಸುತ್ತಿರುವ ವಿಷಯ ಚರ್ಚಿಸಲ್ಪಟ್ಟಿತು. ಗಮನಾರ್ಹವೇ ಇಸವಿಯಲ್ಲಿ ರಾಷ್ಟ್ರ ಸಂಘವು ಡಾ. ಹೆರ್ಮನ್ ಸಾಂತಾ ಕ್ರೂಜ್ ಎಂಬ ಚಿಲಿ ದೇಶದ ಮಹನೀಯರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಿಸಿ, ವರ್ಣ ಭೇದ ಧೋರಣೆಯ ಕುರಿತು ವರದಿ ಮಾಡಲು ಹೇಳಿದ್ದಿತು. ಇದೀಗ ತನ್ನ ಮೂರನೇ ವರದಿಯನ್ನು ಆಯೋಗ ಒಪ್ಪಿಸಿದೆ— ಆದರೆ, ದಕ್ಷಿಣ ಆಫ್ರಿಕದ ಪ್ರತಿನಿಧಿಗಳು ತನ್ನ ದೇಶದ ಆಂತರಿಕ ಪ್ರಶ್ನೆಯಲ್ಲಿ ಕೈ ಹಾಕಬಾರದೆಂಬ ನಿಯಮವನ್ನು ಮುಂದಿಟ್ಟು, ಕಳೆದ ಹಲವು ವರ್ಷಗಳಿಂದ ಸಂಯುಕ್ತ ರಾಷ್ಟ್ರ ಸಂಘವು ಈ ಪ್ರಶ್ನೆಯನ್ನೆತ್ತುತ್ತಿರುವುದೆಯೆಂದೂ ಜನರಲ್ ಸ್ಮಟ್ಸ್‌ರ ಕಾಲದಿಂದ ಹಿಡಿದು ಈಗಿನ ಸ್ಟ್ರೈ ಜೋಮರವರೆಗೆ ಯಾರೊಬ್ಬರೂ ಇದನ್ನು ಒಪ್ಪಿಲ್ಲವೆಂದೂ ಮನುಷ್ಯನ ಸಹನೆಯನ್ನು ಕೆಡಿಸುವ ಹಟವಿದೆಂದೂ ಹೇಳಿ, ತಾವು ಕಾರ್ಯಕಲಾಪಗಳನ್ನು ಬಹಿಷ್ಕರಿಸುವ ಉದ್ದೇಶದಿಂದ ಹೊರನಡೆದರು.

ದಕ್ಷಿಣ ಆಫ್ರಿಕದ ಈ ನಿಲುಮೆಯನ್ನು ಲೋಕದ ಯಾವ ರಾಷ್ಟ್ರವೂ ಮೆಚ್ಚಿಲ್ಲ ನೆಂದು ಹೇಳಬಹುದು. ಸಂಯುಕ್ತ ರಾಷ್ಟ್ರ ಸಂಘ ನೇಮಿಸಿರುವ ಆಯೋಗವಂತೂ ತನ್ನ ಮೂರನೇ ವರದಿಯಲ್ಲಿ ವರ್ಣ ಭೇದ ಧೋರಣೆಯು ದಕ್ಷಿಣ ಆಫ್ರಿಕದ ರಾಷ್ಟ್ರೀಯ ಜೀವನಕ್ಕೆ ಇನ್ನೂ ಅವಾಯಕಾರಿಯಾಗಿಯೇ ಮುಂದುವರಿಯುತ್ತಿದೆಯೆಂದೂ ಅಂತಾರಾಷ್ಟ್ರೀಯ ಸಂಬಂಧವನ್ನು ಹದಗೆಡಿಸುವ ಗಂಭೀರ ವಿಷಯವಾಗಿದೆಯೆಂದೂ ಹೇಳಿರುತ್ತದೆ. ಕಳೆದ ವರ್ಷ ಆಯೋಗವು ತನ್ನ ಎರಡನೇ ವರದಿಯಲ್ಲಿ ಇದೇ ಬಗೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಗ ದಕ್ಷಿಣ ಆಫ್ರಿಕದ ಪ್ರತಿನಿಧಿಯು ಪಕ್ಷಪಾತತನದಿಂದ ಕೂಡಿರುವ ಮೂಲಗಳಿಂದ ವರ್ಣಭೇದದ ಕುರಿತಾದ ಮಾಹಿತಿಯನ್ನು ಆಯೋಗ ಸಂಗ್ರಹಿಸಿತೆಂದು ದೂರಿದ್ದರು; ಆಯೋಗದೊಡನೆ ಸಹಕರಿಸಲು ನಿರಾಕರಿಸಿಯೂ ಮಾಡಿದ್ದ ಆರೋಪ ಇದಾಗಿದ್ದಿತು. ಆಯೋಗದ ಪರವಾಗಿ ಪಕ್ಷಪಾತ ತನದ ಆರೋಪವನ್ನು ಕೂಡಲೇ ಖಂಡಿಸಿದ್ದರೂ ಈ ಸೆಲ ಅಂಥಆರೋಪಗಳಿಗೆ ಎಡೆಯನ್ನೆಕೊಡಬಾರದೆಂದು ದಕ್ಷಿಣ ಆಫ್ರಿಕದಲ್ಲಿ ಪ್ರಕಟವಾಗುವ ಎಲ್ಲ ರಾಜಕೀಯಾಭಿಪ್ರಾಯಗಳ ಪತ್ರಿಕೆಗಳನ್ನು ತರಿಸಿಕೊಂಡು, ಪರಿಶೀಲಿಸಿ ವರ್ಣಭೇದ ಧೋರಣೆಯ ಕುರಿತು ಸಮಂಜಸವಾದ ತೀರ್ಮಾನಕ್ಕೆ ಬರಲು ಪ್ರಯತ್ನಿಸಲಾಯಿತು.

ಮೇಲಿನ ವಿಷಯವನ್ನು ಮೊನ್ನೆ ಹೊರಗೆ ಡವಿದ ಆಯೋಗದ ಅಧ್ಯಕ್ಷೆ ಡಾ. ಸಾಂತಾ ಕ್ರೂಜರು ಜಗತ್ತಿನ ಎಲ್ಲ ಭಾಗಗಳಿಂದ ಲೂ ವರ್ಣಭೇದ ಧೋರಣೆಯ ಕುರಿತು ಖಂಡನೆಯಿಂದ ಕೂಡಿದಪ್ರತಿಕ್ರಿಯೆಗಳೇ ಬರುತ್ತಿರುವುದಾಗಿ ಹೇಳಿದ್ದಾರೆ. ಈ ಧೋರಣೆಯ ಕುರಿತು ವ್ಯಕ್ತವಾದ ಪ್ರತಿಕ್ರಿಯೆಯು ಬಹಳ ಬಲಶಾಲಿಯಾಗಿದೆಯೆಂದೂ ತಿಳಿಸಿದ್ದಾರೆ. ಉದಾಹರಣೆಗಾಗಿ ಅವರು ಬಾಂಡುಂಗಿನಲ್ಲಿ ಆಫ್ರೇಸ್ಯ ರಾಷ್ಟ್ರಗಳ ಪರಿಷತ್ತು ಕೈಗೊಂಡ ನಿರ್ಣಯದತ್ತ ಗಮನವನ್ನು ಸೆಳೆದಿದ್ದಾರೆ. ಏಶೋಸ್ಯ ಮೂಲದವರಲ್ಲದ ಆಫ್ರಿಕ ಮತ್ತು ನಿಶ್ಯಬ್ದ ಸ್ವತಂತ್ರ ಜನಾಂಗಗಳ ಭಾವಜೀವನದ ಮೇಲೆ ವರ್ಣಭೇದವು ಶಂಬ ಕೆಡುಕುಂಟು ಮಾಡಿದೆ; ತಾವು ಜಗತ್ತಿನ ಬೇರೆ ಯಾವುದೇ ಪ್ರದೇಶದ ಜನರಿಗೆ ಸಮಾನರೆಂಬ ಭಾವನೆಯುಳ್ಳವರ ಸ್ವಾಭಿಮಾನವನ್ನು ಮೇಲೆ ದಕ್ಷಿಣ ಆಫ್ರಿಕ ಸರಕಾರದ ವರ್ಣಭೇದ ಧೋರಣೆಯು ಆಘಾತವನ್ನುಮಾಡಿದೆ. ಇದು ರಾಜಕೀಯ ರಂಗದ ಸಮಸ್ಯೆಯಾಗಿ ಪರಿಣಮಿಸಿರುತ್ತದೆ. ಆದರೆ, ರಾಜಕೀಯ ದೃಷ್ಟಿಗಿಂತಲೂ ಸಮಸ್ಯೆಯನ್ನು ಲಕ್ಷಾಂತರ ಮನುಷ್ಯರ ನೊಂದ ಹೃದಯಕ್ಕೆ ಸಾಂತ್ವನ ನೀಡುವ ಮನೋಭಾವದಿಂದ ನೋಡಬೇಕಾಗಿದೆ-ಎಂದು ಡಾ|| ಸಾಂತಾಕ್ರೂಜರ ಅಭಿಪ್ರಾಯ.

ವರ್ಣಭೇದ ಧೋರಣೆಯನ್ನು ನಿಧಾನವಾಗಿಯೇ ಆಗಲಿ, ಮುಂದೊತ್ತುವುದೇ ದಕ್ಷಿಣ ಆಫ್ರಿಕ ಸರಕಾರದ ಧೋರಣೆಯಾಗಿದೆ ಎಂಬ ಕುರಿತು ಯಾರಿಗೂ ಭಿನ್ನಾಭಿಪ್ರಾಯವುಳಿದಿಲ್ಲ. ಹೊಸತಾಗಿ ಅಧಿಕಾರಕ್ಕೆ ಬಂದಿರುವ ಸ್ಟ್ರೈ ಜೋಮರ ಸರಕಾರದ ಧೋರಣೆಯು ಕೆಲವು ವಿಷಯಗಳಲ್ಲಿ ಹಿಂದಿನ ಪ್ರಧಾನಿಗಳ ನಿಲುಮೆಗಿಂತಲೂ ಉಗ್ರವೇ ಆಗಿದೆ. ಉದಾಹರಣೆಗೆ, ಕರಿ ಬಣ್ಣದವರನ್ನು ಬೇರೆಯೇ ನಿವೇಶ ವಲಯಗಳಲ್ಲಿಡುವುದು, ಬಿಳಿಯರ ಹೆಸರಿರುವ ಮತದಾರ ಪಟ್ಟಿಗಳಿಂದ ಕರಿಯರ ಹೆಸರನ್ನು ಹೊಡೆದು ಹಾಕುವುದು ಇತ್ಯಾದಿ ಶಾಸನ ಕ್ರಮಗಳನ್ನು ತೆಗೆದು ಕೊಳ್ಳುವ ಆತುರವನ್ನು ಹೊಸ ಸರಕಾರ ವ್ಯಕ್ತಪಡಿಸಿದೆ. ಇದರಿಂದ ಲಕ್ಷಾಂತರ ಜನರಿಗೆ ಅನಾನುಕೂಲತೆಯಾಗುತ್ತದೆ; ಅವರ ಕಷ್ಟ ಹೆಚ್ಚುತ್ತದೆ. ಸ್ವತಃ ಬಿಳಿಯರಿಗೆ ಸಹ ನಷ್ಟವೇ ಹೆಚ್ಚು. ಎದಿರ್ಕನ್ನ ಕ್ಕಾಗಿ ವರ್ಣ ಭೇದ ಧೋರಣೆಯಿಂದಾಗಿ ಬಿಳಿಯರ ಬಸ್ಸುಗಳಲ್ಲಿ ಕರಿಯರು ಪ್ರಯಾಣಿಸುವಂತಿಲ್ಲ— ಇದರಿಂದ ಬಸ್ಸು ಕಂಪೆನಿಗಳಿಗೆ ಸಿಗಬಹುದಾದ ಲಾಭವು ೫೦ ಲಕ್ಷ ಪೌಂಡುಗಳಷ್ಟು ಪ್ರತಿ ವರ್ಷ ಕಡಿಮೆಯಾಗುತ್ತಿದೆ. ಹೀಗಿದ್ದರೂ ಬಿಳಿಯರನ್ನು ಕರಿಯರ ಕೈಯಿಂದ ಉಳಿಸುವುದಕ್ಕೋಸ್ಕರ ವರ್ಣ ಭೇದ ಅಗತ್ಯವಾಗಿದೆ ಎಂದು ದಕ್ಷಿಣ ಆಫ್ರಿಕದ ಸರಕಾರ ಹೇಳುತ್ತದೆ.

ಲೋಕದ ಸಾರ್ವಜನಿಕಾಭಿಪ್ರಾಯವನ್ನು ದಕ್ಷಿಣ ಆಫ್ರಿಕ ಸರಕಾರದ ನಿಲುವು ಯು—ಅದಕ್ಕೂ ಹೆಚ್ಚಾಗಿ ಹಟಮಾರಿತನವು—ಹೊಡೆದೆಬ್ಬಿಸಿದೆ ವರ್ಣಭೇದ ಧೋರಣೆಯು ಉಚಿತವಾದುದಲ್ಲ; ರಾಷ್ಟ್ರಗಳ ಪರಸ್ಪರ ಸ್ನೇಹ ಸೌಹಾರ್ದಕ್ಕೆ ಪೋಷಕವಾದ ನೀತಿ ಅದಾಗಿಲ್ಲ; ಅನುಪಾಯದ ಬೀಜವೇ ನಿಜ—ಎಂಬ ಕುರಿತು ಜನರು ಹೆಚ್ಚು ಹೆಚ್ಚು ಸಮ್ಮತಿಯನ್ನು ತೋರ್ಪಡಿಸುತ್ತಾ ಬಂದಿದ್ದಾರೆ; ಈ ಸಮ್ಮತಿಯು ವರ್ಣಭೇದ ಧೋರಣೆಯನ್ನು ಟೀಕಿಸಿ, ವಿರೋಧಿಸುವವರ ನೈತಿಕ ಶಕ್ತಿಯನ್ನು ಪೆಚ್ಚಿಸಿದೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಈ ಪ್ರಶ್ನೆಯು ಎತ್ತಲ್ಪಟ್ಟು, ಸಮಸ್ಯೆಯನ್ನು ವಿಚಾರಿಸಲು ಆಯೋಗದ ನೇಮಕವಾಗಿರುವ ಒಂದೇ ಒಂದು ಸಂಗತಿಯಿಂದ ಲೋಕದ ಖಂಡನೆಯು ಎಷ್ಟು ಉಗ್ರವಾಗಿದೆ ಎಂಬುದನ್ನು ತಿಳಿಯಬಹುದು. ಪ್ರತಿ ವರ್ಷ ದಕ್ಷಿಣ ಆಫ್ರಿಕ ಸರಕಾರದ ಪ್ರತಿಭಟನೆಯನ್ನು ಲೆಕ್ಕಿಸದೆ ರಾಷ್ಟ್ರ ಸಂಘದಲ್ಲಿ ನಡೆಯುತ್ತ ಬಂದಿರುವ ಚರ್ಚೆಗಳು ಸಹ ಲೋಕದ ಬೇರೆ ಬೇರೆ ಸರಕಾರಗಳು ಸಂಯುಕ್ತ ರಾಷ್ಟ್ರಸಂಘದ ಮೂಲ ಸೂತ್ರಗಳಿಗೆ ವ್ಯತಿರಿಕ್ತವಾಗಿರುವ ವರ್ಣಭೇದ ಧೋರಣೆಯಿಂದ ಎಷ್ಟು ಅಸಂತುಷ್ಟವಾಗಿವೆ ಎಂಬುದನ್ನು ತೋರಿಸಿರುತ್ತವೆ.

ಏಶೋಸ್ಯರು ಅಲ್ಪ ಸಂಖ್ಯಾಕರಾಗಿರುವುದರಿಂದ ಅವರ ಹಿತಾಸಕ್ತಿಗಳಿಗೆ, ವರ್ಣಭೇದ ಧೋರಣೆಯನ್ನು ಬಟ್ಟೆಗೊಟ್ಟನೆ, ಧಕ್ಕೆ ತಗಲೀತೆಂದು ಹೇಳಲಾಗುತ್ತದೆ. ಆದರೆ ಡಾ. ಸಾಂತಾಕ್ರೂಜರು ಇದನ್ನು ಅಲ್ಲಗಳೆಯುತ್ತಾರೆ. ಸಂಯುಕ್ತ ರಾಷ್ಟ್ರ ಸಂಘದ ಮೂಲ ಸೂತ್ರಗಳನ್ನು ಅನುಸರಿಸಿಕೊಂಡು ಹೋದರೆ ಅಲ್ಪ ಸಂಖ್ಯಾಕರಿಗೆ ಬೇಕಾದಷ್ಟು ರಕ್ಷಣೆ ದೊರೆಯುವುದೆಂದೂ ಅವರು ಶಾಂತಿಯಿಂದ ತುಂಬಿದ ಭವಿಷ್ಯವನ್ನು ಇದಿರು ನೋಡಬಲ್ಲರೆಂದೂ ಡಾ. ಸಾಂತಾಕ್ರೂಜರು ಸಾರಿದ್ದಾರೆ. ರಾಷ್ಟ್ರ ಸಂಘದ ಸೂತ್ರಗಳಂತೆ ನಡೆಯುವುದೇ ಇಂದಿನ ಅವಶ್ಯಕತೆಯಾಗಿದೆ; ಇದಕ್ಕೆ ತಪ್ಪು ನಡೆದು, ರಾಷ್ಟ್ರ ಸಂಘವನ್ನು ದುರ್ಬಲಗೊಳಿಸಲು ಯಾರೂ ನೋಡಬಾರದು. ಖಂಡಿಸುವ ಬೆದರಿಕೆ ಇತ್ಯಾದಿಗಳಿಂದ ರಾಷ್ಟ್ರ ಸಂಘದಲ್ಲಿ ಪ್ರಕಟವಾದ ಸಾರ್ವಜನಿಕಾಭಿಪ್ರಾಯದ ಒತ್ತಡವನ್ನು ಹತ್ತಿಕ್ಕಬಹುದೆಂದು ಯಾರೂ ತಿಳಿಯಬಾರದು—ಎಂದು ರಾಷ್ಟ್ರ ಸಂಘದ ಸಮಸ್ತ ರಾಷ್ಟ್ರವಾಗಿರುವ ದಕ್ಷಿಣ ಆಫ್ರಿಕ ಸಂಸತ್ತಿನ ನಿಮ್ಮೇಕ್ಕೆ ನಾಟುವಂತೆ ಡಾ. ಸಾಂತಾಕ್ರೂಜರು ಎಚ್ಚರಿಕೆ ನೀಡಿದ್ದಾರೆ.

ತಮ್ಮ ಭಾಷಣವನ್ನು ಮುಗಿಸುವಾಗ ಡಾ. ಸಾಂತಾ ಕ್ರೂಜರು ಇನ್ನೂ ಗಂಭೀರವಾದ ಎಚ್ಚರಿಕೆಯನ್ನು ದಕ್ಷಿಣ ಆಫ್ರಿಕಕ್ಕೆ ನೀಡಿದರು. ದಕ್ಷಿಣ ಆಫ್ರಿಕ

(ಇನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಪ್ರಧಾನ ಕಾರ್ಯಾಲಯ: ಉಡುಪಿ.] [ಸ್ಥಾಪನೆ: 1945.

ಸುಖಸಂತೋಷವನ್ನು ಬರಮಾಡಿಕೊಳ್ಳುವುದು ಹೇಗೆ?

ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಆಕಸ್ಮಿಕ ಘಟನೆಯಲ್ಲ. ಅದನ್ನು ನಡುದಾರಿಯ ವರೆಗೆ ಹೋಗಿ, ಸಂಧಿಸಿ, ಮನೆಗೆ ಸ್ವಾಗತಿಸಬೇಕಾಗುತ್ತದೆ. ಕೆಲವು ವರ್ಷಗಳಷ್ಟು ಮುಂದಾಗಿಯೇ ತಕ್ಕ ಯೋಜನೆಯನ್ನು ಮಾಡತಬೇಕೆಂದು ಇವರ ಅರ್ಥ. ನಿಮ್ಮ ಗುರಿಯನ್ನು ಗೊತ್ತುಪಡಿಸುವುದು ಮತ್ತು ಅದನ್ನು ಸುಟ್ಟಲು ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ಮೊದಲನೆಯ ಕೆಲಸ. ಈ ಬಗೆಯ ಕಾರ್ಯಕ್ರಮಗಳಲ್ಲಿ ನಿಮಗೆಷ್ಟು ಸಾಧ್ಯವೋ ಅಷ್ಟು ಧನವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ಮುಖ್ಯವಾದೊಂದು ವಿಷಯ. ನಾವು ಇತ್ತೀಚೆಗೆ ಪ್ರತಿ ಅರ್ಧ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಳಿತಾಯತ್ತ ನೀಗನೆ ಬೆಳವಣಿಗೆಯನ್ನು ಹೊಂದುವಂತೆ ನೆರವಾಗುತ್ತೇವೆ.

ಚಲಾವಣೆ ಭಂಡವಾಳ ರೂ. 7,50,00,000ಕ್ಕೂ ಮಿಕ್ಕಿದೆ.
THE CANARA INDUSTRIAL & BANKING SYNDICATE LTD.
Head Office: UDIPI, S. India.] [Estd: 1925

ವಾರ್ಷಿಕ ಚಂದಾ: ರೂ. ೫—೧೨—೦

NAVAYUGA WEEKLY, UDIPI.

ಬಿಡಿ ಸಂಚಿಕೆ ಎರಡಾಣೆ

ರಾಜ್ಯಗಳ ಪುನರ್ಘಟನೆಯಲ್ಲಿ ಭಾಷೆ ಮತ್ತು ಸಂಸ್ಕೃತಿ

ಫಜಲಾಲಿ ಆಯೋಗದ ಮುಂದೆ ಮಂಡಿಸಲಾದ ವಿಚಾರ

ರಾಜ್ಯಗಳ ಪುನರ್ಘಟನೆಯನ್ನು ಎಂತಹುದಾಗ ಭಾಷೆಗೆ ಯಾವ ಸ್ಥಾನವನ್ನು ಕೊಡಬೇಕೆಂಬುದು ತುಂಬ ಜಿಜ್ಞಾಸೆಯನ್ನು ಹುಟ್ಟಿಸಿದೆ; ಪರಸ್ಪರ ವಿರುದ್ಧ ಅಭಿಪ್ರಾಯಗಳನ್ನು ಈ ವಿಷಯದಲ್ಲಿ ವ್ಯಕ್ತಪಡಿಸಲಾಗಿದೆ—ಎಂದು ಫಜಲಾಲಿ ಆಯೋಗವು ತನ್ನ ವರದಿಯ ದ್ವಿತೀಯ ಭಾಗದ ತೃತೀಯಾಧ್ಯಾಯದಲ್ಲಿ ಹೇಳಿ; ಪ್ರಶ್ನೆಯನ್ನು ಬಹಳ ವಿವರವಾಗಿ ಚರ್ಚಿಸಿದೆ. ಆದರ ಹೇಳಿಕೆಗನುಸಾರವಾಗಿ, ಕಳೆದ ನೂರು ವರ್ಷಗಳ ರಾಜಕೀಯ ಜೀವನದಲ್ಲಿ ಉಂಟಾದ ಉತ್ಕ್ರಾಂತಿಯ ಮುಖ್ಯ ವಿಷಯಗಳಲ್ಲಿ ಪ್ರಾದೇಶಿಕ ಭಾಷೆಗಳ ಬೆಳವಣಿಗೆಯೂ ಒಂದು. ಈ ಅವಧಿಯಲ್ಲಿ ಇವೆಲ್ಲವೂ ಸಮೃದ್ಧವಾಗಿಯೂ ವಿಚಾರವನ್ನು ಸಮರ್ಥ ರೀತಿಯಲ್ಲಿ ವ್ಯಕ್ತಪಡಿಸಬಲ್ಲಷ್ಟು ಶಕ್ತಿಯುತವಾಗಿಯೂ ತಮ್ಮ ನ್ನಾಡುವ ಜನರೆಲ್ಲರಲ್ಲಿ ಒಂದು ಬಗೆಯ ಒಗ್ಗಟ್ಟಿನ ಮನೋಭಾವವನ್ನು ರೂಪಿಸಬಲ್ಲ ಸಾಧನವಾಗಿಯೂ ಅಭಿವೃದ್ಧಿಯನ್ನು ಹೊಂದಿವೆ

ಬೇಡಿಕೆಯ ವಿಮರ್ಶೆ

ಪ್ರಾದೇಶಿಕ ಭಾಷೆಗಳು ಹೆಚ್ಚಾಗಿಯೋಗ್ಯ ಚಾರಿತ್ರಿಕ ಹಿನ್ನೆಲೆಯುಳ್ಳ ನಿರ್ದಿಷ್ಟ ಹಾಗು ಒಮ್ಮಟ್ಟಿನ ಪ್ರದೇಶಗಳಲ್ಲಿ ಬಳಕೆಯಲ್ಲಿರುವುದರಿಂದ, ಈ ಬಲಯಿಗಳನ್ನು ಪ್ರತ್ಯೇಕ ರಾಜ್ಯಗಳಾಗಿಯೇ ವಿಂಗಡಿಸಬೇಕೆಂಬ ಬೇಡಿಕೆಯು ಬಲವತ್ತರವಾಗಿದೆ; ಮತ್ತು ಕೆಲವು ಸಂದರ್ಭಗಳಲ್ಲಿ ಅದು ತಾತ್ಕಾಲಿಕ ರಾಜಕೀಯ ಚಳವಳಿದ ರೂಪವನ್ನೂ ಧರಿಸಿದೆ. ಆಯೋಗವನ್ನು ನೇಮಿಸಿದ ಗೊಶ್ತು ವಳೆಯು ಭಾಷೆಯ ಪ್ರಾಮುಖ್ಯತೆಯನ್ನು ಕುರಿತು ನಿರ್ದಿಷ್ಟವಾದ ಉಲ್ಲೇಖವನ್ನೆಸಗಿದೆ. ಅದರಿಂದ ಸಮಸ್ಯೆಯ ಪರಿಹಾರಾಗು ವಿರೋಧವಾದ ವಿಷಯಗಳೆಲ್ಲದರ ಕೂಲಂಕಷ ವಿವೇಚನೆಯು ಅಗತ್ಯವಾಗಿದೆ; ರಾಜ್ಯಗಳ ಪುನರ್ಘಟನೆಯ ಪ್ರಶ್ನೆಗೆ ಇದು ಪೂರ್ವಭಾವಿಯಾದ ಕ್ರಮವಾಗಲೇ ಬೇಕೆಂದು ಆಯೋಗ ಮನಗಂಡಿದೆ.

ಭಾಷೆಯ ತತ್ವವನ್ನೆ ಸೂತನ ರಾಜ್ಯಗಳ ಮೇರೆಗಳನ್ನು ನಿರ್ಣಯಿಸುವಲ್ಲಿ ಚಾಲೂ ಪಡೆದೆ ಅನುಸರಿಸಬೇಕೆಂಬವರು ತಮ್ಮಿಲ ಮೆಯ ಸಮರ್ಥನೆಗಾಗಿ ಮುಂದಿಡುವ ವಿಷಯಗಳೇನು? ಮೊದಲನೆಯದಾಗಿ, ನಮ್ಮ ದೇಶದಲ್ಲಿರುವಂಥ ಒಳಾಡಳಿತದಲ್ಲಿ ಸ್ವಾತಂತ್ರ್ಯವಿರುವ ರಾಜ್ಯಗಳ ಒಕ್ಕೂಟವುಳ್ಳ ರಾಷ್ಟ್ರದಲ್ಲಿ ಆಡಳಿತದ ಅನುಕೂಲತೆಗಾಗಿಯಷ್ಟೇ ರಾಜ್ಯಗಳು ಇರುವುದಿಲ್ಲ ಎನ್ನಲಾಗಿದೆ. ಪ್ರಜಾ ಪ್ರಭುತ್ವದ ಕಾರ್ಯನಿರ್ವಹಣೆಗೆ ಅಗತ್ಯವಿರುವ ಭಾವನಾತ್ಮಕ ಪ್ರತಿಕ್ರಿಯೆಯನ್ನು ಹುಟ್ಟಿಸಲು ಸಮರ್ಥವಾಗುವ ರೀತಿಯಲ್ಲಿ ರಾಜ್ಯಗಳು ಸೌಷ್ಠವ ಯುಕ್ತವಾಗಿರಬೇಕಾದುದು ಅಗತ್ಯವಾಗಿದೆ

ಏಕಭಾಷೆಯ ತಳಹದಿ

ಭಾರತದ ಒಕ್ಕೂಟದ ರಾಜ್ಯಗಳು ಇದನ್ನು ಸಾಧಿಸಬೇಕಾದರೆ, ಅವುಗಳನ್ನು ಏಕ ಭಾಷೆಯ ತಳಹದಿಯ ಮೇಲೆಯೇ ರಚಿಸುವುದು ಅವಶ್ಯವಾಗಿದೆ; ಏಕೆಂದರೆ, ಭಾಷೆಯು ವಿಚಾರ ಮತ್ತು ಭಾವನೆಗಳನ್ನು ವ್ಯಕ್ತಪಡಿಸುವ ಮಾಧ್ಯಮವಾಗಿರುವುದರಿಂದ ಜನರನ್ನು ಐಕ್ಯಮತದ ಸೂತ್ರದಲ್ಲಿ ಪೋಣಿಸುತ್ತದೆ. ಭಾಷೆಯ ಮಾನದಂಡದಿಂದ ನಿರ್ಮಿತವಾದ ಘಟಕವು ದೇಶದ ನಿರ್ದಿಷ್ಟ ಪ್ರದೇಶದಲ್ಲಿ ವ್ಯಕ್ತವಾಗುವ ಸಾಮಾಜಿಕ ಹಾಗು ಸಾಂಸ್ಕೃತಿಕ ಜೀವನಕ್ಕೆ ಕನ್ನಡಿ ಹಿಡಿಯುತ್ತದೆ.

ಪ್ರಬುದ್ಧ ಮತದಾನ ಪದ್ಧತಿಯ ರೂಢಿಯಲ್ಲಿರುವ ನಮ್ಮ ಪ್ರಜಾಸತ್ತೆಯಲ್ಲಿ ಒಂದು ರಾಜ್ಯದ ರಾಜಕೀಯ ಹಾಗು ಆಡಳಿತ ಕಾರ್ಯಗಳನ್ನು ಪ್ರಾದೇಶಿಕ ಭಾಷೆಯಲ್ಲಿಯೇ ನಡೆಸಿಕೊಂಡು ಹೋಗುವುದು ಅತ್ಯಗತ್ಯವಾಗಿದೆ. ಭಾಷಾ ಬಾಹುಲ್ಯವಿದ್ದರೆ, ಆಡಳಿತದಲ್ಲಿ ದಕ್ಷತೆಯು ಕ್ಷೀಣಿಸುವುದೂ ದೌರ್ಬಲ್ಯವು ತಲೆದೋರುವುದೂ ನಿಶ್ಚಯ; ರಾಜಕೀಯ ಕ್ಷೇತ್ರದಲ್ಲಿ ಸ್ಪರ್ಧೆ ಹಾಗು ವೈರದ ಭಾವನೆಯು ತಲೆದೋರುವುದು ಖಂಡಿತ.

ಈಗಾಗಲೇ ಕೆಲವು ರಾಜ್ಯಗಳಲ್ಲಿ ಶಾಸನಾಂಗದ ಸದಸ್ಯರಲ್ಲಿ ಹೆಚ್ಚಿನವರಿಗೆ ಕೇವಲ ಒಂದೇ ಭಾಷೆ ತಿಳಿದಿದೆ; ಮತ್ತು ಈ ವಿಷಯಕ್ಕೆಯೇ ಒತ್ತಾಯ ಮತ್ತು ಮಹತ್ವ ಕೊಡಲಾಗುವ ಸಂಭವವಿದೆ. ಕೆಲವು ರಾಜ್ಯಗಳಲ್ಲಿ ಮಂತ್ರಿಗಳಿಗೆ ಸಹ ಒಂದು ಭಾಷೆಯ ಜ್ಞೇಗೊತ್ತಿರುತ್ತದೆ. ಸಾಕಷ್ಟು ಹೆಚ್ಚು ಸಂಖ್ಯೆಯ ಸದಸ್ಯರಿಗೆ ಶಾಸನಾಂಗದ ಕಾರ್ಯಕಲಾಪಗಳನ್ನು ಅನುಸರಿಸಿಕೊಂಡು ಹೋಗುವುದು ಕಠಿಣವಾದರೆ, ಚರ್ಚೆಗಳು ಕಷ್ಟವೆನಿಸುತ್ತವೆ.

ಜನತೆಯ ಬೆಂಬಲ

ಸರಕೀಯ ಪ್ರಭುತ್ವದಲ್ಲಿ ಆಳುವವರ ಮತ್ತು ಆಳಲ್ಪಡುವವರ ಮನೋಭಾವದಲ್ಲಿರಬೇಕಾದ ಸಂಬಂಧವನ್ನು ರಾಜಸತ್ತೆ ಮತ್ತಿತರ ವಿಷಯಗಳ ಅಧೀನಕ್ಕೆ ಒಳಪಡಿಸಿದ್ದರು. ಆದರೆ, ಪ್ರಬುದ್ಧ ಮತದಾನ ಪದ್ಧತಿಯು ಮೇಲೆ ನಿಂತಿರುವ ಪ್ರಜಾಸತ್ತಾತ್ಮಕ ಸರಕಾರದ ಆಡಳಿತ ಕಾಲದಲ್ಲಿ ಜನರಿಗೂ ಸರಕಾರಕ್ಕೂ ಉದ್ದೇಶದಲ್ಲಿ ಸಾಮಾನ್ಯ ಆಸ್ಥೆಯುಳ್ಳಸ್ಪ ಜಾಗೃತಿಯು ಅವಶ್ಯವಾಗಿದೆ; ಮತ್ತು ಜನರೂ ಸರಕಾರವೂ ಕೂಡಿಯೇ ಪರಸ್ಪರ ಸಹಕಾರ ಮತ್ತು ತಿಳಿವಳಿಕೆಯ ಭಾವನೆಯಿಂದ ಕಾರ್ಯನಿರತರಾಗಬೇಕಾಗಿದೆ.

ಕಲ್ಯಾಣ ರಾಷ್ಟ್ರವನ್ನು ಕಟ್ಟುವಧ್ಯೇಯದ ಯಶಸ್ಸು ಜನತೆಯ ವಿಶಾಲವಾದ ಬೆಂಬಲವನ್ನೆ ಬಹಳಷ್ಟು ಅವಲಂಬಿಸಿದೆ. ಸರಕಾರದ ಕಾರ್ಯಕಲಾಪಗಳ ವಿಧಾನವು ಜನರ ಗಮನಕ್ಕೆ ಬಾರದಷ್ಟು ಜಟಿಲವಾಗಿದ್ದರೆ, ಈ ಬಗೆಯ ಬೆಂಬಲ ದೊರೆಯುವುದು ಲಾರದು. ಸಂಪರ್ಕ ಸಾಧನಗಳನ್ನೊದಗಿಸುವ ವಿಷಯದಲ್ಲಿ ಬಹು ಭಾಷಾ ರಾಜ್ಯಗಳು ರೂಪಿಸಿದ ವಿವಿಧ ವಿಧಾನಗಳು ಶಕ್ತಿಯ ಅನಾವ್ಯಯ ಮತ್ತು ರಾಷ್ಟ್ರೀಯ ಸಂಪತ್ತಿನ ದುರುಪಯೋಗವೆಂದೇ ಜನರಿಂದ ತಿಳಿಯಲ್ಪಟ್ಟಿವೆ; ಹೊರತು ಪತ್ಯಪರಿಣಾಮವೇನೂ ಆಗಿಲ್ಲ.

ಪ್ರಾದೇಶಿಕ ಭಾಷೆಗಳಿಗೆ ಸಲ್ಲತಕ್ಕ ಮಾರ್ಯಾದೆಯ ಸ್ಥಾನವನ್ನು ಕೊಟ್ಟರೆ ಮಾತ್ರ ಶೈಕ್ಷಣಿಕ ಕ್ಷೇತ್ರದ ಚಟುವಟಿಕೆಗೆ ಪ್ರೋತ್ಸಾಹ ದೊರಕೀತ. ಅಲ್ಪ ಸಂಖ್ಯೆಯ ಸುಶಿಕ್ಷಿತರು ಜನಸಮುದಾಯದಿಂದ ಬೇರೆಯೇ ಉಳಿಯಬಾರದೆಂದಿದ್ದರೆ ಜನತೆಯ ಶಿಕ್ಷಣವನ್ನು ಪಾತೃ ಭಾಷೆಯಲ್ಲಿ ನೀಡುವುದು ಅನಿವಾರ್ಯವಾಗಿದೆ.

ಆರ್ಥಿಕ ಮುಖ

ಭಾಷಾನುಗುಣವಾಗಿ ರಾಜ್ಯಗಳನ್ನು ವಿಂಗಡಿಸಬೇಕೆನ್ನುವ ಬೇಡಿಕೆಯು ಕೇವಲ ಸಾಂಸ್ಕೃತಿಕ ಪುನರುತ್ಥಾನವನ್ನಷ್ಟೇ ಪ್ರತಿನಿಧಿಸುತ್ತಿಲ್ಲ. ಅದು ಬೇರೆ ಬೇರೆ ಭಾಷೆಯ ಗುಂಪುಗಳಿಗೆ ಆರ್ಥಿಕ ಹಾಗು ರಾಜಕೀಯ ನ್ಯಾಯವನ್ನು ಸಂಪಾದಿಸುವ ವಿಶಾಲ ದೃಷ್ಟಿಯನ್ನೂ ಇಟ್ಟುಕೊಂಡಿದೆ. ಬಹು ಭಾಷೆಯ ರಾಜ್ಯಗಳಲ್ಲಿ ಪ್ರಬಲ ಭಾಷೆಯ ಗುಂಪಿನ ಕೈಯಲ್ಲಿಯೇ ರಾಜಕೀಯ ಧುರೀಣತ್ವವೂ ಆಡಳಿತದ ಸೂತ್ರವೂ ಉಳಿಯುತ್ತವೆ; ಭಾಷೆಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರಾದ ರಾಜ್ಯದ ಆಡಳಿತದಲ್ಲಿ ಸಾಕಷ್ಟು ಪರಿಣಾಮಕಾರಿಯಾದ ರೀತಿಯಲ್ಲಿ ಸ್ವರವೆತ್ತಲು ಬಿಡಲಾಗುವುದಿಲ್ಲ.

ಮಂತ್ರಿ ಮಂಡಳದಲ್ಲಿ ಸ್ಥಾನವನ್ನು ಪಡೆಯುವಷ್ಟು ಹೆಚ್ಚು ಪ್ರಮಾಣದಲ್ಲಿದ್ದಾಗಲೂ ಸಹ ಭಾಷಾ ದೃಷ್ಟಿಯಿಂದ ಅಲ್ಪ ಸಂಖ್ಯಾಕರಾದವರ ಪ್ರತಿನಿಧಿಗಳು ಪಕ್ಷವ ತಿಸ್ಸು ಮತ್ತಿತರ ಪ್ರಭಾವಗಳಿಗೆ ಬಲಿಬಿದ್ದು ತಾವು ಪ್ರತಿನಿಧಿಸುವ ವರ್ಗದ ಹಿತಾಸಕ್ತಿಯನ್ನೂ ಭದ್ರತೆಯನ್ನೂ ಕಾಯ್ದುಕೊಂಡು ಹೋಗಲು ಅಸಮರ್ಥರಾಗುತ್ತಾರೆ.

ಬಹು ಭಾಷೆಯನ್ನಾಡುವ ರಾಜ್ಯದಲ್ಲಿ ಸಾಮಾಜಿಕ ಕಲ್ಯಾಣದ ಚಟುವಟಿಕೆಗಳೂ ಅಭಿವೃದ್ಧಿ ಪ್ರಯತ್ನಗಳೂ ನ್ಯಾಯೋಚಿತವಲ್ಲದ ರೀತಿಯಲ್ಲಿ ಹಂಚಲ್ಪಡುತ್ತವೆ. ಆಂದರೆ, ಪ್ರಬಲ ಭಾಷೆಯನ್ನಾಡುವ ಪ್ರತಿನಿಧಿಗಳ ವಲಯವು ಇತರ ಪ್ರದೇಶಗಳನ್ನ ಕಡೆಗಣಿಸಿ ಹೆಚ್ಚಿನ ಪ್ರಯೋಜನವನ್ನು ದೊರಕಿಸಿ ಕೊಳ್ಳುತ್ತದೆ. ಹೀಗೆ ವಂಚಿತರಾಗಿರುವ ಅಲ್ಪ ಸಂಖ್ಯಾಕರಿಗೆ ಸಕ ಪ್ರಯೋಜನಸಿಗಬೇಕಾದರೆ ಏಕ ಭಾಷೆಯ ರಾಜ್ಯಗಳನ್ನೇ ರೂಪಿಸಬೇಕು. ಆಗ ಸಾಂಸ್ಕೃತಿಕ ಹಾಗು ಸಾಮಾಜಿಕ ಮಟ್ಟದಲ್ಲಿಯಷ್ಟೇಯಲ್ಲ, ರಾಜಕೀಯ ಮತ್ತು ಆರ್ಥಿಕ ರಂಗದಲ್ಲಿಯೂ ನ್ಯಾಯ ಲಭಿಸುತ್ತದೆ.

ಒತ್ತಾಯ ನಿಷ್ಪ್ರಯೋಜಕ

ವಿರುದ್ಧ ದಿಕ್ಕಿಗೆ ಎಳೆದಾಡುವ ಶಕ್ತಿಗಳನ್ನು ಬಲಾತ್ಕಾರವಾಗಿ ಒಂದೆಡೆ ನಿಲ್ಲಿಸಿರುವೆಲ್ಲಲ್ಲ ಘರ್ಷಣೆ ಮತ್ತು ಮನಸ್ತಾಪಗಳು ತಪ್ಪಿದ್ದಲ್ಲ. ಐಕ್ಯಮತದ ಭಾವನೆಯು ವಾಯವಾಗಿರುವಲ್ಲಿ ಒಲ್ಲದ ಸಹಜೀವನವಾಗಲೀ ಒತ್ತಾಯದ ಸೇರಿಕೆಯಾಗಲೀ ಎಷ್ಟೇ ದೀರ್ಘ ಕಾಲದ ಇತಿಹಾಸವಿದ್ದರೂ ಪರಸ್ಪರ ತಿಳಿವಳಿಕೆ ಮತ್ತು ಸದ್ಭಾವನೆಯುವ ಮತ್ತು ಪ್ರಜಾಸತ್ತೆಗೆ ತುಂಬ ಪೋಷಕವಾದ ವಾತಾವರಣವನ್ನುಂಟು ಮಾಡುವಂತಿಲ್ಲ.

ಸ್ವಂತ ಅಭ್ಯುದಯದ ಮಾರ್ಗವನ್ನು ಏಕಪ್ರಕಾರವಾಗಿ ಸರ್ವರಿಗೂ ನಿರಾಕರಿಸಿದ ಪರಕೀಯ ಆಡಳಿತ ಕಾಲದಲ್ಲಿ ಬೇರೆ ಬೇರೆ ಭಾಷೆಯ ಗುಂಪುಗಳು ಪ್ರಕಟವಾ

THE CANARA MUTUAL
Assurance Company Limited
Managing Director: **T. R. A. PAI**
Head Office: **UDIPI**, S. India.] [Estd: 1935.

ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ | ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ

(31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)

ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪ್ಯಾಗಳನ್ನು ಮೀರಿರುತ್ತದೆ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA LTD.,
"Mukund Navis" UDIPI, S. India.

ದ ಘರ್ಷಣೆಯಿಲ್ಲದೆ ಒಟ್ಟಿಗೆ ಬಾಳಿದೆವೇ ಮೊ ನಿಜ. ಆದರೆ ಈಗ ಭಾರತದ ಜನರು ತಮ್ಮ ಭವಿಷ್ಯವನ್ನು ತಾವೇ ರೂಪಿಸ ಬೇಕಾಗಿರುವುದರಿಂದ ತಾತಮ್ಯ ಅರ್ಥಿಕ ಹಾಗು ಇತರ ಆವಶ್ಯಕತೆಗಳ ಜ್ಞಾನವು ಜಾಗೃತವಾದಂತೆಲ್ಲ ಬೇರೆ ಬೇರೆ ಭಾಷೆಗಳ ಗುಂಪುಗಳಲ್ಲಿ ತಮ್ಮಲ್ಲಿ ಪರಸ್ಪರ ಐಕ್ಯ ಮತವಿಲ್ಲವೆಂಬ ತಿಳಿವಳಿಕೆಯು ದಿನ ಕಳೆದಂತೆ ಇಳವಾಗಿ ಬೇರು ಬಿಡುತ್ತಾ ಹೋಗುತ್ತದೆ.

ಸಂಕಯದ ವಾತಾವರಣ

ಸರಕಾರಗಳ ಕೃಯಲ್ಲಿನ ಸಾಧನ ಸಂಪತ್ತು ಬಹಳ ಮಿತವಾಗಿರುವುದರಿಂದ ಬೇರೆ ಬೇರೆ ವಿರುದ್ಧ ಗುಂಪುಗಳ ಬೇಡಿಕೆಯನ್ನು ಮನ್ನಿಸುವುದು ಸಾಧ್ಯವಾಗುವುದಿಲ್ಲ; ಮತ್ತು ಆಗ ಪ್ರಾತಸ್ಪರ್ಧೆಯು ಕ್ರಮಣಿಕೆಯನ್ನೆ ಸಿದ್ಧಗೊಳಿಸಬೇಕಾಗುತ್ತದೆ. ಸಾಮಾನ್ಯರು ಈ ಸತ್ಯವನ್ನು ತಿಳಿಯಲು ಪ್ರಯತ್ನ ಪಡದಿದ್ದರೂ ಬಹು ಭಾಷೆಗಳುಳ್ಳ ರಾಜ್ಯದಲ್ಲಿ ಒಂದು ಭಾಷೆಯ ಗುಂಪಿನವರು ಇನ್ನೊಂದರ ಕುರಿತು ಸರಕಾರ ಪಕ್ಷಪಾತನನ್ನು ತೋರಿಸಿದೆಯೆಂದೂ ತಮ್ಮನ್ನು ಕಡೆಗಣಿಸಿದೆಯೆಂದೂ ಸಂಶಯದ ಮೇಲಿಂದ ಆರೋಪಿಸಲು ಹಿಂಜರಿಯುತ್ತಿಲ್ಲ. ಭಾಷೆಯ ದೃಷ್ಟಿಯಿಂದ ತಾವು ಅಲ್ಪ ಸಂಖ್ಯಾಕರೆಂಬ ಭಾವನೆಯನ್ನು ನಿರ್ಮೂಲಗೊಳಿಸಿದರೆ ಮಾತ್ರ ಇಂಥ ಅಪನಂಬಿಕೆ ನಿವಾರಣೆಗೊಳ್ಳಬಲ್ಲುದು. ಇದಕ್ಕಾಗಿ ಏಕ ಭಾಷೆಯ ತಳಹದಿಯ ಮೇಲೆ ರಾಜ್ಯಗಳ ಪುನರ್ಘಟನೆಯಾಗ ಬೇಕಾಗಿದೆ.

ಬೇರೆ ಬೇರೆ ಭಾಷೆಗಳ ಜನತೆ ಒಂದೇ ರಾಜ್ಯದಲ್ಲಿದ್ದರೆ ಪರಸ್ಪರರು ಸಹನೆಯಿಂದಲೂ ತಿಳಿವಳಿಕೆಯಿಂದಲೂ ಸೌಹಾರ್ದದಿಂದಲೂ ಜೀವನ ನಡೆಸುವ ಭಾವನೆಯನ್ನು ಬೆಳೆಸಲು ಸಹಾಯಕವಾಗುತ್ತದೆ ಎಂಬ ವಾದವನ್ನು ಬೇರೆ ಬೇರೆ ಭಾಷೆಯ ಗುಂಪುಗಳು ರಾಜ್ಯದಲ್ಲೆಲ್ಲ ಹಂಚಿ ಬಿದ್ದಿದ್ದರೆ ಮಾತ್ರ ಸ್ವಲ್ಪ ಮಟ್ಟಿಗೆ ಒಪ್ಪಬಹುದು. ಆದರೆ ಸತ್ಯವು ಇದಕ್ಕೆ ದೂರವಾಗಿದೆ — ಬೇರೆ ಬೇರೆ ಭಾಷೆಯನ್ನಾಡುವ ವಲಯಗಳು ತಮ್ಮಷ್ಟಕ್ಕೆ ಒಮ್ಮಷ್ಟಿನಲ್ಲಿವೆಯೇ ಹೊರತು, ಒಂದು ಇನ್ನೊಂದರ ನಡುವೆ ಸೇರಿಕೊಂಡು ಅಲ್ಲಲ್ಲಿ ಹಂಚಿ ಬಿದ್ದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಬೇರೆ ಬೇರೆ ಭಾಷೆಗಳನ್ನಾಡುವವರು ಒಂದೇ ರಾಜ್ಯದಲ್ಲಿ ಸುಖ ಜೀವನ ನಡೆಸಬಹುದೆಂದು ಹೇಳುವುದು ಸತ್ಯವನ್ನಿಸಲಾರದು.

ದೂಷಿತ ಆಡಳಿತ

ಭಾಷೆಯ ತಳಹದಿಯು ಮೇಲಿನ ಭೇದ ಭಾವದಿಂದ ದೂಷಿತವಾದ ರಾಜಕೀಯ ವಾತಾವರಣವು ಈಗ ಆಡಳಿತ ರಂಗಕ್ಕೂ ವ್ಯಾಪಿಸತೊಡಗಿದೆ ಸ್ಪಮುಖಿ ಅಧಿಕಾರ ಸ್ಥಾನಗಳೆಲ್ಲ ಪ್ರಬಲ ಭಾಷೆಯವರ ಸೊತ್ತಾಗುತ್ತಾ ಹೋಗುತ್ತಿವೆ; ನೇಮಕಗಳೂ ಭಡ್ತಿಗಳೂ ನಿರ್ವಾಲ ಆಡಳಿತ ಕಾರ್ಯದರ್ಶತೆ, ನ್ಯಾಯ, ಇತ್ಯಾದಿಗಳನ್ನು ಅವಲಂಬಿಸಿಲ್ಲವೆಂದೇ ತೋರುತ್ತದೆ.

ಒಕ್ಕೂಟದ ರಾಜ್ಯಗಳಲ್ಲಿ ಹೆಚ್ಚಿನವು ಈ ಗಾಗಲೇ ಏಕ ಭಾಷೆಯ ತಳಹದಿಯನ್ನು ಹೊಂದಿವೆ. ಪಶ್ಚಿಮ ಬಂಗಾಳ, ರಾಜಸ್ಥಾನ, ಮಧ್ಯ ಭಾರತ, ಸೌರಾಷ್ಟ್ರ, ಮೈಸೂರು ಮತ್ತು ತಿರುಕೊಚ್ಚಿ ರಾಜ್ಯಗಳು ಸಂಪೂರ್ಣ ವಾಗಿ ಏಕಭಾಷೆಯ ರಾಜ್ಯಗಳಾಗಿವೆ; ಅಥವಾ ಸಿಲ್ಪ ಬದಲಾವಣೆಯೊಮ್ಮೆ ಮೇರೆಗಳಲ್ಲಿ ಸಾಧಿಸಿದರೆ ಹಾಗಾಗುತ್ತವೆ. ಆಂಧ್ರವೆಂಬ ಹೊಸ ರಾಜ್ಯವನ್ನು ಭಾಷಾತಳಹದಿಯ ಮೇಲೆ ಮಾಡಿರುವುದರಿಂದ ಶೀಘ್ರ ಮದ್ರಾಸು ರಾಜ್ಯವು ತಮಿಳರ ಬಾಹುಲ್ಯವಿರುವ ಪ್ರದೇಶವಾಗಿ ಪರಿಣಮಿಸಿದೆ. ಹೀಗಿರುವಾಗ ಉಳಿದ ಬಹು ಭಾಷಾರಾಜ್ಯಗಳನ್ನು ಭಾಷೆಯ ತಳಹದಿಯ ಮೇಲೆ ಪುನರ್ಘಟಿಸುವುದರಿಂದ ಹೊಸ ಸಮಸ್ಯೆಗಳು ಏಳುತ್ತವೆಂಬ ವಾದವಾಗಲೀ ರಾಷ್ಟ್ರದ ಐಕ್ಯಕ್ಕೆ ಇದು ಗಂಡಾಂತರವೆಂಬ ಭಾವನೆಯಾಗಲೀ ನ್ಯಾಯೋಚಿತವೆನಿಸಲಾರದು.

ರಾಷ್ಟ್ರೀಯ ಚಳವಳಿಯಲ್ಲಿ ಭಾಷಾನುಗುಣವಾಗಿ ಭಾರತವನ್ನು ವಿಂಗಡಿಸಿದುದರಿಂದಲೇ ಹೊಸ ಹುಮ್ಮಸ ಉಂಟಾಯಿತು. ನಲ್ವತ್ತು ವರ್ಷಗಳಿಗಿಂತಲೂ ಹೆಚ್ಚು ಸಮಯದ ವರೆಗೆ ಭಾಷಾನುಗುಣ ರಾಜ್ಯ ರಚನೆಯ ತತ್ವವನ್ನು ಎತ್ತಿ ಹಿಡಿದ ಬಳಿಕ, ಈಗ ರಾಜಕೀಯ ಗತಿಯನ್ನು ಆದಕ್ಕೆ ವಿರುದ್ಧವಾಗಿ ತಿರುಗಿಸಲು ನಾಯಕ ವರ್ಗಕ್ಕೆ ಸಾಧ್ಯವೆನಿಸುತ್ತಿಲ್ಲ. ಜನ ಸಮುದಾಯ ಸಹ ಭಾಷಾನುಗುಣವಾಗಿ ರಾಜ್ಯಗಳ ರಚನೆಯನ್ನು ಮಾಡಬೇಕೆಂಬ ಮನೋಭಾವನೆಯನ್ನೆ ಬೆಳೆಸಿಕೊಂಡಿದ್ದು, ಆದರ ನಿರಾಕರಣೆಯು ಕ್ಲೇಶವನ್ನು ಹುಟ್ಟಿಸಬಹುದು; ಅಲ್ಲದೆ ಗಂಭೀರ ಪರಿಣಾಮವನ್ನು ಮಾಡಬಹುದು.

—ಹೀಗೆ ತಮ್ಮ ನುಂದೆ ಹೇಳಲಾಯಿತೆಂದು ಆಯೋಗ ತಿಳಿಸಿರುತ್ತದೆ.

ಪೋರ್ಚುಗೀಜರ ವಸಾಹತು--ಮಕಾವೊ

ಕೆಂಪು ಚೀನದ ಪಾಲಿನ ಗೋವೆ

ದಕ್ಷಿಣ ಭಾರತದ ಸಂಚಾರವನ್ನು ಪ್ರಧಾನಿ ನೆಹರುಗಳು ಕಳೆದ ತಿಂಗಳ ಆದಿಯಲ್ಲಿ ಕೈಗೊಂಡಾಗ ಬೆಂಗಳೂರಿನ ಸಾರ್ವಜನಿಕರು ಅವರನ್ನು ಗೋವೆಯ ಕುರಿತಾಗಿ ಪ್ರಶ್ನಿಸಿದ್ದರು ನೆಹರು ಜನರಿಗೆ ತಿಳಿಸಿ ಹೇಳುತ್ತಾ ಕೆಂಪು ಚೀನದ ಮೂಲ ಭೂಮಿಗೆ ತಾಗಿಕೊಂಡಿರುವ ಮಕಾವೊ ಎಂಬ ಪೋರ್ಚುಗೀಜರ ವಸಾಹತಿನ ಸಾನ್ನಿಧ್ಯವನ್ನು ಕೊಟ್ಟು, ಗೋವೆಯ ಬಿಡುಗಡೆಗಾಗಿ ದುಡುಕಬಾರದು ಎಂದಿದ್ದರು.

ನೆಹರುಗಳ ಹೇಳಿಕೆ

"ಚೀನರು ಮನಸ್ಸು ಮಾಡಿದರೆ ಒಂದೆರಡು ದಿನಗಳಲ್ಲೆ ಮಕಾವೊವನ್ನು ವಶಪಡಿಸಿಕೊಳ್ಳಬಲ್ಲರು; ಆದರೆ ಪಣ್ಣಿ ವಿಷಯಕ್ಕಾಗಿ ಉದ್ರೇಕಗೊಳ್ಳುವರೆದು, ಉದ್ರೇಕದ ಕೆಲಸವನ್ನು ಮಾಡಿ ಜಗತ್ತಿನ ಮುಂದೆ ಅಪವಾದಕ್ಕೆ ಗುರಿಯಾಗ ಬಾರದು ಎಂದು ಭಾವಿಸಿ ಚೀನರು ಸುಮ್ಮನಿದ್ದಾರೆ ಮಕಾವೊ ಹೇಗೆ ಎಲ್ಲಿಗೂ ಹೋಗುವುದಿಲ್ಲವೊ ಗೋವೆ ಸಹ ಭಾರತದಿಂದ ಬೇರ್ಪಟ್ಟು ಹೋಗುವುದಿಲ್ಲ— ಆದುದರಿಂದ ನಾವು ಶಾಂತರಾಗಿ ಸಮಸ್ಯೆಯನ್ನು ವಿಚಾರಿಸೋಣ" ಎಂದು ನೆಹರುಗಳು ಜನರನ್ನು ಸಮಾಧಾನ ಪಡಿಸಿದ್ದರು.

ಮಕಾವೊ ಕಳೆದ ೪೦೦ ವರ್ಷಗಳಿಂದ ಪೋರ್ಚುಗೀಜರ ಕೈಯಲ್ಲಿ ಉಳಿದಿದೆ; ಅದು ಪರ್ಲ್ ಹೊಳೆಯ ದಕ್ಷಿಣ ದ್ವಾರದ ಬಲ್ಲಿರುವ ಚಿಕ್ಕ ಅರ್ಧ ದ್ವೀಪವಾಗಿದೆ. ಅಲ್ಲಿಯ ಜನಸಂಖ್ಯೆ ೧೯೦೦೦ ಮಾತ್ರ; ಇದರಲ್ಲಿ ಪೋರ್ಚುಗೀಜರ ಪ್ರತ್ತು ಐರೋಪ್ಯರ ಸಂಖ್ಯೆ ಕೇವಲ ೩೦೦; ಉಳಿದೆಲ್ಲರೂ ಚೀನರು. ಇವರಿಗೆ ಪರಕೀಯರ ಪ್ರಭುತ್ವ ಮನಸ್ಸಿಗೆ ಬಂದಿಲ್ಲ. ಮೂಲ ಭೂಮಿಯ ಕಡೆಗೆ ಇವರ ಒಲವು ಹರಿದಿದೆ. ದಕ್ಷಿಣ ಚೀನದ ಕೆಂಪುನಿನಲ್ಲಿ ಜರಿಗುವ ರಕ್ತದ ಸಾಂಸ್ಕೃತಿಕ ಮತ್ತು ವ್ಯಾಪಾರ ಪ್ರದರ್ಶನದಲ್ಲಿ ಭಾಗವಹಿಸಲು ಏವತ್ತಕ್ಕೂ ಹೆಚ್ಚು ಚೀನರು ಮಕಾವೊದಿಂದ ತೆರಳಿರುವುದು ಇದಕ್ಕೆ ಇತ್ತೀಚೆಯ ನಿದರ್ಶನ.

ಜನತೆಯ ಒಲವು

ಇನ್ನೂ ಹೆಚ್ಚು ಪ್ರತ್ಯಕ್ಷವಾದ ಉದಾಹರಣೆಯು ಬೇಕಾದರೆ ಮೊನ್ನೆ ತಾನೆ ಬೇಜಿಂಗಿನ ಆಕಾಶವಾಣಿಯು ಮಾಡಿದ ಘೋಷಣೆಯ ಸಂದರ್ಭವನ್ನು ನೆನಪು ಮಾಡಿಕೊಳ್ಳಬಹುದು. ಲಂಡನ್ನಿಗೆ ಪೋರ್ಚುಗಾಲಿನ ಅಧ್ಯಕ್ಷರಾದ ಕ್ಯಾವೀರೊ ಲೋಪ್ಸರು ಸಂದರ್ಶನವಿತ್ತ ಗಳಿಗೆಯನ್ನು ನೋಡಿ ಕೆಂಪು ಚೀನವು ಮಕಾವೊ ವಸಾಹತಿನಿಂದ ಪೋರ್ಚುಗೀಜರು ಹೊರಡಬೇಕೆಂದು ಕೇಳುವ ಅಧಿಕಾರ ತನಗಿದೆ ಎಂದು ಜಾಹೀರುಮಾಡಿದೆ. ಈ ಸುದ್ದಿಯನ್ನು ಪ್ರಕಟಿಸಿದ ಪತ್ರಿಕೆಗಳನ್ನು ಮಕಾವೊದ ಜನರು ಇದು ಪಾಲಿನಷ್ಟು ಹೆಚ್ಚು ಬೆಲೆಯನ್ನು ಕೊಟ್ಟಾದರೂ ಕೊಂಡುಕೊಳ್ಳಲು ಹಾತೊರೆದರೆಂದು ತಿಳಿದು ಬರುತ್ತದೆ.

ಇದೇ ನವೆಂಬರದಲ್ಲಿ ಮಕಾವೊವನ್ನು ಸ್ವಾಧೀನ ಪಡಿಸಿ ನಾಲ್ಕು ಶತಮಾನಗಳಾದ ನೆನಪಿಗಾಗಿ ದೊಡ್ಡ ಮಟ್ಟದಲ್ಲಿ ವೈಭವ ಯುಕ್ತ ಸಮಾರಂಭನನ್ನು ನಡೆಸಲೇಕೆಂದು ಪೋರ್ಚುಗೀಜರು ಆಲೋಚಿಸಿದ್ದರು. ಪೋರ್ಚುಗಾಲಿನಿಂದ ರಾಜಕೀಯ ಧುರೀಣರನ್ನು ಮಕಾವೊಗೆ ಕರೆಸಿ, ಅವರ ಸಮ್ಮುಖದಲ್ಲಿ ಪ್ರಚಂಡ ಕಾರ್ಯಕ್ರಮಗಳನ್ನು ಸಾಂಗಗೊಳಿಸಿ ಮಕಾವೊದಲ್ಲಿ ತಮ್ಮ ಆಧಿಕಾರದ ದರ್ಪ ತೋರಿಸಬೇಕೆಂದು ಅವರು ನಿರ್ಧರಿಸಿದ್ದರು.

ಪೋರ್ಚುಗಾಲಿಗೆ ಸಲಹೆ

ಮಕಾವೊಗೆ ೪೦ ಮೈಲು ಈಶಾನ್ಯದಲ್ಲಿ ಬ್ರಿಟಿಷರ ವಶದಲ್ಲಿ ಹೊಂಗ್‌ಕೊಂಗ್ ಎಂಬ ವಸಾಹತು ಇದೆ. ಇಲ್ಲಿ ಸಹ ಚೀನರ ಪ್ರಾಬಲ್ಯವೇ ಇದೆ. ಈಚೆಗೆ ಹೊಂಗ್‌ಕೊಂಗ್ ದ್ವೀಪದ ಆಂಗ್ಲ ಗವರ್ನರರು ಪೇಕಿಂಗಿಗೆ ತೆರಳಿದ್ದಾಗ ಚೀನದ ಪ್ರಧಾನಿಗಳು ಮಕಾವೊದಲ್ಲಿ ವಸಾಹತು ದಿನಾಚರಣೆಗೆ ಪೋರ್ಚುಗೀಜರು ನಡೆಸುವ ಸಿದ್ಧತೆಯು ಚೀನರ ಭಾವನೆಯನ್ನು ಉದ್ರೇಕಿಸಿರುವುದೆಂದು ಹೇಳಿ, ಇದರ ವಿರುದ್ಧ ಎಚ್ಚರಿಕೆಯನ್ನು ಕೊಟ್ಟರೆಂದು ಪ್ರಕಟನವಾಗಿದೆ. ಇದನ್ನು ಪೋರ್ಚುಗಾಲಿಗೆ ಬ್ರಿಟಿಷರು ತಿಳಿಸಿದರೆಂದೂ ಪರಿಣಾಮವಾಗಿ ಕೇಂಬ್ರಲ ಒಂದುದಿನದ ರಜೆಯನ್ನು ನಾಸ್ತ್ರ ಕೊಡುವ ಮೂಲಕ ಪೋರ್ಚುಗೀಜರು ಕೃಪ್ತರಾಗಬೇಕಾಗಿದೆಯೆಂದೂ ವರದಿಯಾಗಿದೆ.

ಚೀನಕ್ಕೂ ಮಕಾವೊದ ಪೋರ್ಚುಗೀಜ ಆಡಳಿತಕ್ಕೂ ಸೌಹಾರ್ದ ಬಂಬಂಧವೇನೂ ಇಲ್ಲ. ೧೯೫೨ರಷ್ಟು ಈಚೆಗೆ, ಉಭಯ ಸೈನ್ಯಗಳು ಪರಸ್ಪರ ಗುಂಡು ಹಾರಿಸಿದ್ದವೆಂಬುದನ್ನಿಲ್ಲಿ ನೆನೆಯಬಹುದು. ಪೋರ್ಚುಗೀಜ ವ್ಯಾಪಾರಿಗಳು ಮಾತ್ರ ಕಳೆದ ನಾಲ್ಕೂರು ವರ್ಷಗಳಿಂದ ತಾವು ಮಕಾವೊದಲ್ಲಿ ತಳವೂರಿದ್ದೇವೆಂಬುದನ್ನು ಹೆಮ್ಮೆಯಿಂದ ಆತಿಕೆಳ್ಳುತ್ತಾ, ಚೀನದ ಎಚ್ಚರಿಕೆಯನ್ನೂ ಚೀನರ ನಾನಸೊಲವನ್ನೂ ಕಡೆಗಣಿಸಿ ಕುಳಿತಿರುವಂತೆ ಕಾಣುತ್ತವೆ. ಆದರೆ, ಹೊಂಗ್‌ಕೊಂಗ್ ವ್ಯಾಪಾರಿಗಳಲ್ಲಿ ಭವಿಷ್ಯದ ಬಗ್ಗೆ ಶಾತರವು ಹೆಚ್ಚಿದೆ ಏಕೆಂದರೆ ಮಕಾವೊದಲ್ಲಾಗಬಹುದಾದ ಯಾವುದೇ ಘಟನೆಯ ಮೊಳವು ಹೊಂಗ್‌ಕೊಂಗ್ ವರೆಗೆ ವ್ಯಾಪಿಸುವುದು ನಿಶ್ಚಯ.

ಗೋವೆ, ದಮಣ ಮತ್ತು ದೀವುಗಳಲ್ಲಿಯೂ ಮಕಾವೊ ಮತ್ತಿತರ ಏಶ್ಯದ ಪ್ರದೇಶಗಳಲ್ಲಿಯೂ ಪೋರ್ಚುಗೀಜರು ಇನ್ನೂ ವಸಾಹತು ಆಳಿಕೆಯನ್ನು ಮುಂದರಿಯುತ್ತಿರುವುದು ಎಚ್ಚೆತ್ತ ಜನತೆಯ ಅಪಮಾನ ಮಾಡಿದಂತೆ— ಎಂದು ಎಲ್ಲ ಏಶ್ಯದ ರಾಷ್ಟ್ರಗಳೂ ಈಗ ಹೇಳುತ್ತಿವೆ. ಏಶ್ಯದಲ್ಲಿ ವಸಾಹತು ಆಳಿಕೆಗೆ ಬೆಂಬಲ ಕೊಡುತ್ತಿರುವ ಒಂದೇ ಒಂದು ರಾಷ್ಟ್ರವೆಂದರೆ ಪಾಕಿಸ್ತಾನ!

ಝುಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಆಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಸ್ವಯೋಜನಕಾರಿಯಾಗಿದೆ. ೧ ರಾತಲಿಗೆ ರೂ 6/8; ½ ರಾತಲಿಗೆ ರೂ. 1/13.
ವ. ಕನ್ನಡದ ಕೆಳಗಿನ ಸಜಂಟರಲ್ಲಿ ಲಭಿಸುವುದು.
1. ಶಾ ಕಂಪೆನ್ಸಿ, ಮಂಗಳೂರು.
2. ವಿ. ವಿ. ಲೈಬ್ರೆ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲಾಗು ಬೇಕಾದವರಿಗೆ ಇವರಿಗೆ ಬರೆಯಿರಿ.
ZANDU ದಾವೋದರ & ಕೊ,
ಮುಂಬಾಸ್—3.

ಒಳಿತು ಕೆಡುಕುಗಳ ನಡುವೆ ಸಮತೂಕ

ಯಂತ್ರ ವಿಜ್ಞಾನದ ಪ್ರಗತಿಯ ಬಗ್ಗೆ ಪ್ರಧಾನಿಗಳ ಅಭಿಪ್ರಾಯ

ಏಶ್ಯದ ಚರಿತ್ರೆಯಲ್ಲಿಯೇ ಅತಿ ದೊಡ್ಡದೆನಿಸಿದ ಮತ್ತು ದ್ವಿತೀಯ ಮಹಾಯುದ್ಧದ ಬಳಿಕ ಜಗತ್ತಿನಲ್ಲಿಯೇ ಏರಿಯದಾದ ಔದ್ಯಮಿಕ, ಜಾತ್ರೆಯು ಇದೇ ತಿಂಗಳೇ ಆಕ್ಟೋಬರಿಂದು ಹೊಸ ದೆಹಲಿಯಲ್ಲಿ ಪ್ರಧಾನಿ ನೆಹರುಗಳಿಂದ ಉದ್ಘಾಟಿಸಲ್ಪಟ್ಟಿತು. ನಗರದ ಪೂರ್ವ ದಿಕ್ಕಿಗೆ ಮಥುರಾ ರೋಡಿನ ಪುರಾಣಾಕೀಲಾದ ಬಳಿ ಸುಮಾರು ೨೫ ಎಕ್ರೆಯಷ್ಟು ವಿಸ್ತಾರವಾದ ಮೈದಾನದಲ್ಲಿ ಈ ಜಾತ್ರೆಯು ಸೇರಿರುತ್ತದೆ. ಭಾರತದ ವಾಣಿಜ್ಯ ಹಾಗು ಔದ್ಯಮಿಕ ಮಂಡಳವು ಜಾತ್ರೆಯನ್ನು ಸಂಘಟಿಸಿದ್ದು, ಕಮ್ಯೂನಿಸಂ ಗುಂಪಿನ ಎಂಟು ರಾಷ್ಟ್ರಗಳೂ ಬೇರೆ ೧೪ ರಾಷ್ಟ್ರಗಳೂ ಇದರಲ್ಲಿ ಭಾಗ ವಹಿಸಿರುತ್ತವೆ.

ನೆಹರುಗಳ ಭಾಷಣ

ತಮ್ಮ ಉದ್ಘಾಟನಾ ಭಾಷಣದಲ್ಲಿ ಪ್ರಧಾನಿ ನೆಹರುಗಳು ಯಂತ್ರಗಳಿಂದ ಸಮೃದ್ಧಿಯನ್ನು ಸಾಧಿಸಲು ಬರುಪುದರಿಂದ ಹೋರಾಡುತ್ತಾ ಸಮಯ ಕಳೆಯಬೇಕಾದ ಆವಶ್ಯಕತೆ ಈಗ ಉಳಿದಿಲ್ಲ ಎಂದರು. ಒಂದು ವೇಳೆ ಹೋರಾಟವನ್ನೂ ಸ್ಪರ್ಧೆಯನ್ನೂ ನಡೆಸಲೇ ಬೇಕೆಂದಿದ್ದರೆ ಮನುಷ್ಯನ ಕಲ್ಯಾಣವನ್ನು ಹೆಚ್ಚಾಗಿ ಮಾಡುವ ಧ್ಯೇಯವನ್ನಿಟ್ಟುಕೊಂಡು ಮುಂದುವರಿಯಬೇಕು ಎಂದು ಹೇಳಿದರು. ಶಸ್ತ್ರಗಳ ಉತ್ಪಾದನೆ ಮುಂತಾದ ಶ್ರೇಷ್ಠ ಹೆಚ್ಚಿಸುವ ಕೆಲಸಗಳಲ್ಲಿ ಸ್ಪರ್ಧೆಯನ್ನು ನಡೆಸದೆ ಎಲ್ಲ ಸಂಪತ್ತನ್ನೂ ಸಾಧನವನ್ನೂ ಶಾಂತಿ ಕಾಲದ ಬಳಕೆಗಾಗಿ ಉಪಯೋಗಿಸುವುದರಿಂದ ಶಂಟಿಯ ಮೂಲಕಾರಣಗಳೇ ಇಲ್ಲವಾಗುತ್ತವೆ ಎಂದು ಸಾರಿದರು.

ಸಮತೂಕ ಸಾಧಿಸಿರಿ

ದೊಡ್ಡ ಯಂತ್ರಗಳು ಮಾಡುವ ಒಳ್ಳೆಯ ಹಾಗು ಕೆಟ್ಟ ಪರಿಣಾಮಗಳ ಮೇಲೆ ಸದಾ ಜಾಗರೂಕತೆಯುಳ್ಳ ದೃಷ್ಟಿಯನ್ನಿಟ್ಟಿರಬೇಕೆಂದು ಅವರು ಸೂಚಿಸಿದರು. ಒಳಿತು—ಕೆಡುಕುಗಳ ಸಮತೂಕವನ್ನು ಸಾಧಿಸಿಕೊಳ್ಳಲು ಶಕ್ತರಾಗದಿದ್ದರೆ ಔದ್ಯಮಿಕ ಪ್ರಗತಿಯು ಅರ್ಥಹೀನವಾಗುವುದೆಂದು ಅವರು ಅಭಿಪ್ರಾಯ ಪಟ್ಟರು. ಯಂತ್ರಗಳಿಂದ ಒಳ್ಳೆಯದೇನನ್ನು ಸಾಧಿಸಬಹುದೊ ಅದರತ್ತ ನಾವು ಅವಶ್ಯವಾಗಿ ಗಮನ ಕೊಡೋಣ; ಅದೇ ಸಮಯದಲ್ಲಿ ಯಂತ್ರ ಜನ್ಯ ದುಷ್ಪವೃತ್ತಿಗಳಿಂದ ನಮ್ಮ ಮೇಲೆ ಶ್ರಭಾವವಾಗದಂತೆಯೂ ಎಚ್ಚರಿಕೆಯನ್ನು ತೋರಿಸೋಣ ಎಂದು ನೆಹರು ಉಪದೇಶಿಸಿದರು. ಪ್ರತಿಯೊಬ್ಬನ ಕಣ್ಣಾಗಳಲ್ಲಿಯೂ ಅಶ್ರು ಬಿಂದುಗಳನ್ನು ಉಜ್ಜತೆಗೆಯುವುದೇ ತನ್ನ ಜೀವನದ ಧ್ಯೇಯವೆಂದು ಮಹಾತ್ಮಾಜೀಯವರು ಹೇಳಿದ್ದರು. ಇಂಥ ಆದರ್ಶವನ್ನು ನಾವು ಕಣ್ಣಾ ಮುಂದಿಟ್ಟು ಕೊಂಡರೆ, ಬೇರೆಯವರಿಗೆ ಕೆಡುಕಾಗುವಂತೆಯೂ ಅನಾವಶ್ಯಕವಾಗಿ ಅವರೊತನೆ ಸ್ಪರ್ಧೆ ನಡೆಸುವಂತೆಯೂ ನಮ್ಮ ಉತ್ಸಾಹವು ತಪ್ಪು ದಾರಿಯಲ್ಲಿ ಹರಿಯುವುದಕ್ಕೆ ತಡೆ ಬೀಳುತ್ತದೆ ಎಂದರು.

ವಿಚಾರ ವಿನಿಮಯದ ಲಾಭ

ಉತ್ಸವ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ. ಎಂ. ಬಿರ್ಲಾರು ಸುಮಾರು ಆರು ವಾರಗಳ ವರೆಗೆ ನಡೆಯುವ ಈ ಜಾತ್ರೆಯು ದೇಶದ ಹಾಗು ಜಗತ್ತಿನ ಮೂಲೆ ಮೂಲೆಗಳಿಂದ ಬರುವ ವ್ಯಾಪಾರಿಗಳ ಮತ್ತು ಉತ್ಪಾದಕರ ಕೇಂದ್ರವಾಗುತ್ತದೆ ಎಂದರು. ರಾಷ್ಟ್ರಗಳ ನಡುವೆ ವ್ಯಾಪಾರ ಸಂಪರ್ಕಗಳು ಹೆಚ್ಚುವುದಕ್ಕೆ ಇದು ನೆರವಾಗುವುದು ಮಾತ್ರವಲ್ಲ ವಿಚಾರಗಳು ಪರಸ್ಪರ ವಿನಿಮಯಗೊಳ್ಳುವುದಕ್ಕೂ ಈ ಜಾತ್ರೆಯು ನೆರವಾಗುವುದು ನಿಶ್ಚಯ ಎಂಬ ಭರವಸೆಯನ್ನು ಅವರು ವ್ಯಕ್ತಪಡಿಸಿದರು. ನಮ್ಮ ದಕ್ಕಿಂತ ವಿಸ್ತಾರದಲ್ಲಿ ಮತ್ತು ಸಾಧನ ಸಂಪತ್ತಿನಲ್ಲಿ ಅಲ್ಪವೆನಿಸಿರುವ ಚಿಕ್ಕ ರಾಷ್ಟ್ರಗಳು ಸಹ ತಮ್ಮ ಔದ್ಯಮಿಕ ಕ್ಷೇತ್ರವನ್ನು ಎಷ್ಟರ ಮಟ್ಟಿಗೆ ಬೆಳೆಸಿಕೊಂಡಿವೆ ಎಂಬುದನ್ನು ಈ ಜಾತ್ರೆಯಲ್ಲಿ ಕಂಡು ಭಾರತದ ಉತ್ಪಾದಕರು ಪಾಠ ಕಲಿಯಬಲ್ಲರು ಎಂದರು. ಜಾತ್ರೆಯು ನೂತನ ವಿಚಾರಗಳನ್ನು ಪ್ರಯೋಗಿಸಲಿಕ್ಕೂ ಹೊಸ ಕ್ಷೇತ್ರಗಳಲ್ಲಿ ಕಾಲಿಡಲು ಭಾರತೀಯ ಉತ್ಪಾದಕರನ್ನು ಪ್ರೋತ್ಸಾಹಿಸಲಿಕ್ಕೂ ಶಕ್ತವಾದರೆ ಇದನ್ನು ನೆರೆಯಿಸಿದ ಉದ್ದೇಶ ಸಫಲವೆನಿಸುತ್ತದೆ ಎಂದು ಬಿರ್ಲಾ ಸಾರಿದರು.

ವಿಶೇಷ ಆಕರ್ಷಣೆ

ಭಾರತೀಯರ ಪಾಲಿಗೆ ಅಭೂತ ಪೂರ್ವವಾದ ಈ ಜಾತ್ರೆಯು ಅನೇಕ ಆಕರ್ಷಣೆಗಳಿಂದ ಕೂಡಿದೆ. ಔದ್ಯಮಿಕ ಪ್ರದಂಚದ ದೊಡ್ಡ ಪ್ರದರ್ಶನ ಗೃಹವಾಗಿ ಜಾತ್ರೆಯ ಕ್ಷೇತ್ರವನ್ನು ಒಟ್ಟೆನೆಲ್ಲಿ ಕರೆಯಬಹುದು. ತಾಂತ್ರಿಕ ಕ್ಲಿಷ್ಟತೆಯಿಂದ ಕೂಡಿದ ವಾಣಿಜ್ಯ ಕ್ಷೇತ್ರದಲ್ಲಿ ಅಸಕ್ತಿಯನ್ನು ಕೆರಳಿಸುವ, ಜನಪ್ರಿಯ ಸಾಧನಗಳನ್ನು ಒದಗಿಸಿ ಕೊಡುವ ನಾನಾ ಬಗೆಯ ಯಂತ್ರ ಸಾಮಗ್ರಿಗಳೂ ದಿನ ಬಳಕೆಯ ವಸ್ತುಗಳೂ ಇಲ್ಲಿ ಸಂಗ್ರಹಗೊಂಡಿರುತ್ತವೆ. ಇವುಗಳಲ್ಲದೆ ಅನೇಕ ಮಾದರಿಗಳ ಮತ್ತು ನಕಾಶೆಗಳ ಮೂಲಕ ಜನರಿಗೆ ಔದ್ಯಮಿಕ ಶಿಕ್ಷಣವನ್ನು ಕೊಡುವ ಪ್ರಯತ್ನವನ್ನೂ ಇಲ್ಲಿ ಕಾಣುತ್ತೇವೆ. ಮುನ್ನಡೆಯ ಮಾರ್ಗದಲ್ಲಿ ದೃಢವಾಗಿ ಹೆಜ್ಜೆಯಿಡುತ್ತಿರುವ ಭಾರತದ ಸಂಕೇತವೊ ಎಂಬಂತೆ ದಂಪತಿಗಳ ಶಿಲ್ಪ ಕೃತಿಯುಳ್ಳ ೫೫ ಅಡಿ ಎತ್ತರದ ಗೋಪುರ ಪ್ರವೇಶ ದ್ವಾರದಲ್ಲಿ ಕಂಗೊಳಿಸುತ್ತದೆ. ಬಗೆಬಗೆಯ ಬಣ್ಣದ ಚಿತ್ರಗಳಿಂದ ಅಲಂಕರಿಸಲ್ಪಟ್ಟ ಈ ಗೋಪುರದ ಸೌಂದರ್ಯವನ್ನು ಸವಿದು ಒಳ ನಡೆದರೆ, ಅಲ್ಲಿ ಕಣ್ಣಿಗೆ ಹಬ್ಬವನ್ನುಂಟುಮಾಡುವ ದೃಶ್ಯಗಳು ನಮಗಾಗಿ ಕಾದಿರುತ್ತವೆ.

ಕಣ್ಣಿಗೆ ಕಟ್ಟುವ ವೈವಿಧ್ಯ

ಒಮ್ಮೈ ಪ್ರದರ್ಶನ ಗೃಹದೊಳಗೆ ಸುತ್ತಾಡಿ ಬರುವುದೆಂದರೆ ಹನ್ನೆರಡು ಮೈಲು ನಡೆದಂತಾಗುತ್ತದೆ. ಕನಿಷ್ಠ ಮೂರು ಸಂದರ್ಶನಗಳನ್ನಾದರೂ ಕೊಟ್ಟರೆ ಸಾಮಾನ್ಯ ಪ್ರಜೆಯೊಬ್ಬನಿಗೆ ಜಾತ್ರೆಯ ವಸ್ತುಗಳನ್ನು ಮೇಲಿಂದ ಮೇಲೆ ನೋಡಿ ಕೊಳ್ಳಲು ಸಾಧ್ಯವಾದೀತೆಂದು ಆಂದಾಜು. ಪ್ರವೇಶ ಶುಲ್ಕವಾಗಿ ನಾಲ್ಕಣೆಯನ್ನು ತೆರಬೇಕಾಗುತ್ತದೆ ಆದರೆ ಇಲ್ಲಿಯ ವೈವಿಧ್ಯ ಮತ್ತು ಆಕರ್ಷಣೆಗೆ ಈ ಹಾಸಲು ಎಷ್ಟಕ್ಕೂ ಹೆಚ್ಚಾಗದು ಭಾರತದ ಕೈಗಾರಿಕೆಗಳ ಪ್ರಗತಿಯನ್ನು ಸೂಚಿಸುವ ಪ್ರತ್ಯೇಕ ವಿಭಾಗವು ಏರ್ಪಡಿಸಲ್ಪಟ್ಟಿದೆ — ಇಲ್ಲಿ ಕೈಲು ಯಂತ್ರಗಳಿಂದ ಹಿಡಿದು ಏನ್ನುಗಳನ್ನು ಏಕ್ಕಿಸಿಡುವ ಬಟ್ಟಲುಗಳ ವರೆಗೆ ಎಲ್ಲವೂ ನೋಡಸಿಗುತ್ತವೆ. ಆದರೆ ಬೇರೆ ದೇಶಗಳವರ ವಸ್ತುಗಳನ್ನು ಕಂಡು ಬಂದಮೇಲೆ ನಮ್ಮ ದೇಶವು ಉತ್ಪಾದಪೆಯ ವೈವಿಧ್ಯವನ್ನು ಹೆಚ್ಚಿಸುವುದರಲ್ಲಿ ಬಹಳಷ್ಟು ಕೆಲಸವನ್ನು ಸಾಧಿಸಬೇಕಾಗಿರುವುದಷ್ಟೇಯಲ್ಲ— ಉತ್ಪಾದನೆಯ ಕ್ರಮದಲ್ಲಿ ಸಹ ಹೆಚ್ಚು ಬುದ್ಧಿವಂತಿಕೆ ಮತ್ತು ಕೌಶಲ್ಯವನ್ನು ತೋರಿಸಬೇಕಾಗಿದೆಯೆಂದೂ ಸಾಮಗ್ರಿಗಳ ಅಂದ ಚಂದ ಮತ್ತು ತಾಳಿಕೆ ಬಾಳಿಕೆಗಳ ಕಡೆಗೆ ವಿಶೇಷ ಗಮನ ಹೂರೈಸಬೇಕಾಗಿದೆ ಯೆಂದೂ ನಮಸ್ಸಿಗೆ ತೋರುತ್ತದೆ.

ಟೆಲಿವಿಜನಿನ ಪರದೆ

ಹಸ್ತ ಕೌಶಲ್ಯದ ಸಾಮಗ್ರಿಗಳ ಔತಣವನ್ನೆ ಭಾರತೀಯ ವಿಭಾಗದಲ್ಲಿ ಏರ್ಪಡಿಸಿದ್ದಾರೆ. ಇವುಗಳ ಮುಂದೆ ವಿದೇಶದ ಭಾರವಾದ ಯಂತ್ರಗಳ ಸ್ಪರ್ಧೆ ಕಣ್ಣಿಗೆ ಕಟ್ಟುವಂತಿದೆ ಎಂದರೆ ತಪ್ಪಾಗದು. ಅಣುಶಕ್ತಿಯನ್ನು ಉತ್ಪಾದಿಸುವ ಓಕ್‌ರಿಜ್ ಘಟಕದ ಮಾದರಿಯು ಅಮೇರಿಕದ ವೈಶಿಷ್ಟ್ಯವಾಗಿದೆ; ರುಮೇನಿಯವು ಎಣ್ಣೆಯನ್ನೆತ್ತುವ ಯಂತ್ರದ ರಚನೆ ಮಾಡಿದೆ; ಬ್ರಿಟನು ಜೆಟ್ ವಿಮಾನಗಳ ನಮೂನೆಗಳನ್ನು ರಚಿಸಿದೆ; ಪಶ್ಚಿಮ ಜರ್ಮನಿಯು ಸೊಗಸಾದ ವಿದ್ಯುದುಪಕರಣಗಳನ್ನು ರಾಶಿ ಹಾಕಿದೆ; ರಶ್ಯವು ಕೃಷಿ ಯಂತ್ರಗಳ ವೈವಿಧ್ಯ ದರ್ಶನಕ್ಕೆ ಅವಕಾಶ ನೀಡಿದೆ; ಕೈಕೆಲಸದ ಆಕರ್ಷಕ ಒಡವೆಗಳನ್ನು ಜೈನ ಪ್ರದರ್ಶಿಸಿದೆ. ಇವೆಲ್ಲದರ ಜೊತೆಗೆ ಫಿಲಿಪ್ಸ್ ಇಲೆಕ್ಟ್ರಿಕಲ್ ಕಂಪೆನಿಯವರೂ ಇನ್ನೊಬ್ಬರೂ ಟೆಲಿವಿಜನ್ ಯಂತ್ರಗಳನ್ನು ಜೋಡಿಸಿ, ಪ್ರೇಕ್ಷಕರ ಸಂದರ್ಶನಕ್ಕೆ ಪೂರ್ಣ ತೃಪ್ತಿಯನ್ನೊದಗಿಸಿದ್ದಾರೆ. ಈ ಟೆಲಿವಿಜನುಗಳಲ್ಲಿ ಭಾರತದ ಹಸ್ತ ಕೌಶಲ್ಯದ ಸಾಮಗ್ರಿಗಳ ರಚನೆಯು ಪ್ರಸಾರವಾಗುವುದಲ್ಲದೆ ಶಾಸ್ತ್ರೀಯ ನೃತ್ಯ, ಔದ್ಯಮಿಕ ಕ್ಷೇತ್ರದ ಪ್ರಗತಿಯ ಕುರಿತು ವಿಚಾರ ಗೋಷ್ಠಿ ಇತ್ಯಾದಿ ಸಹ ಬಿತ್ತರಿಸಲ್ಪಡುತ್ತವೆ.

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.
ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,
ಮೈಸೂರು.

ಮೈಸೂರಿನಲ್ಲಿ ಕಾಂಗ್ರೆಸಾಧ್ಯಕ್ಷರ ಪ್ರವಾಸ

ಭಿನ್ನಾಭಿಪ್ರಾಯಗಳನ್ನು ಹೊಂದಿಸಿಕೊಳ್ಳುವ ಪ್ರಯತ್ನ

ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರು ಮೈಸೂರು ರಾಜ್ಯದಲ್ಲಿ ಕೆಲವು ದಿನಗಳ ಸಂಚಾರ ಕಾರ್ಯಕ್ರಮವನ್ನು ಕಳೆದ ವಾರ ಇಟ್ಟುಕೆಂಡಿದ್ದರು. ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯು ಕುರಿತು ಮೈಸೂರು ರಾಜ್ಯದಲ್ಲಿ ವ್ಯಕ್ತವಾಗುತ್ತಿರುವ ಪ್ರತಿಕ್ರಿಯೆಗಳನ್ನು ಅಭ್ಯಸಿಸುವುದೇ ಅವರ ಉದ್ದೇಶವಾಗಿತ್ತೆಂದು ಹೇಳಬಹುದು. ಮೈಸೂರಿನಲ್ಲಿ ಒಂದು ಗುಂಪು ಕರ್ನಾಟಕ ವಿಶೇಷಕರಣಕ್ಕೆ ಅನುಕೂಲಾಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದರೆ ಇನ್ನೊಂದು ಗುಂಪು ಎರಡು ಕರ್ನಾಟಕ ರಾಜ್ಯಗಳಾಗದೇಕೆಂಬ ಪಲ್ಲವಿಯನ್ನು ಹಾಡುತ್ತಲಿದೆ ಎಂಬುದು ನಮಗೆಲ್ಲರಿಗೂ ಗೊತ್ತಿರುವ ವಿಚಾರ. ಕಾಂಗ್ರೆಸಾಧ್ಯಕ್ಷರು ಈ ಗುಂಪುಗಳ ಬಲಾಬಲವನ್ನು ತೂಗಿ ನೋಡಲು ಸ್ವಲ್ಪ ಮಟ್ಟಿಗೆ ಪ್ರಯತ್ನಿಸಿದರು.

ಸಂಧಾನದ ಪೂರ್ವಾರ್ಧ

ತಮ್ಮ ಸಂಚಾರ ಕಾಲದಲ್ಲಿ ಕಾಂಗ್ರೆಸಾಧ್ಯಕ್ಷರು ಎರಡು ಕರ್ನಾಟಕಗಳ ಕುರಿತು ಆಸಕ್ತಿಯುಳ್ಳ ಗುಂಪುಗಳ ಮತ ಪ್ರದರ್ಶನವನ್ನು ನೋಡಬೇಕಾಯಿತು. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಒಂದೇ ಕರ್ನಾಟಕ ರಾಜ್ಯವನ್ನು ರಚಿಸಬೇಕೆಂದು ಅವರಿಗೆ ಮನವಿಗಳನ್ನು ಅರ್ಪಿಸಲಾಯಿತು. ಶ್ರೀ. ಢೇಬರರು ಮತ ಪ್ರದರ್ಶನ ಮುಂತಾದ ಚಳವಳಿ ಮಾರ್ಗಗಳನ್ನು ಮೆಟ್ಟಿಕೊಳ್ಳದೆ, ಯುವಕರು ಶಾಂತ ಹಾಗು ನಿರ್ವಿಕಾರ ಭಾವನೆಯಿಂದಲೂ ವಿಶಾಲವಾದ ಅಂತಃಕರಣದಿಂದಲೂ ಸಮಸ್ಯೆಗಳನ್ನು ನಿವರ್ಶಿಸಬೇಕೆಂದು ಕೇಳಿಕೊಂಡರು. ಮೈಸೂರಿನ ಮಂತ್ರಿಗಳೊಡನೆಯೂ ಕಾಂಗ್ರೆಸು ಕಾರ್ಯಕಾರಿ ಸಮಿತಿಯೊಡನೆಯೂ ಅವರು ಸಮಾಲೋಚನೆಗಳನ್ನು ನಡೆಸಿದರು. ಇವುಗಳ ಪರಿಣಾಮವಾಗಿ ತನ್ನ ತಿಳಿವಳಿಕೆಯು ಸಾಕಷ್ಟು ವಿಸ್ತೃತವಾಗಿದೆಯೆಂದೂ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ, ಸಂಧಾನದ ಮಾರ್ಗವೊಂದನ್ನು ಹುಡುಕಲು ಹೆಚ್ಚು ಕಷ್ಟವಾಗದೆಂದು ತೋರುವುದಾಗಿಯೂ ಅವರು ಪತ್ರಕೋದ್ಯಮಿಗಳ ಮುಂದೆ ನುಡಿದರು.

ವರಿಷ್ಠರ ಸಭೆಯಲ್ಲಿ

ಇದೇ ನವೆಂಬರ ೮ ಮತ್ತು ೯ನೇ ದಿನಾಂಕಗಳಲ್ಲಿ ಸೇರಲಿರುವ ಅಖಿಲ ಭಾರತ ಕಾಂಗ್ರೆಸಿನ ಸಭೆಯಲ್ಲಿ ಯೋಗ್ಯ ವಾತಾವರಣವನ್ನು ಉಂಟು ಮಾಡುವುದೂ ಶ್ರೀ ಢೇಬರರ ಸಂಚಾರದ ಉದ್ದೇಶ. ದೇಶದಲ್ಲಿ ವ್ಯಕ್ತವಾಗುವ ಎಲ್ಲ ಅಭಿಪ್ರಾಯಗಳನ್ನೂ ಸಂಗ್ರಹಿಸಿಕೊಂಡು ಅವುಗಳ ಯೋಗ್ಯತೆಯನ್ನು ಒರೆಗಲ್ಲಿಗೆ ಹಚ್ಚಿ ಉಚಿತ ಮಾರ್ಗದರ್ಶನವನ್ನು ಮಾಡಲು ಶ್ರೀ ಢೇಬರರೂ ಇತರ ವರಿಷ್ಠರೂ ಉತ್ಸುಕರಾಗಿರುವಂತೆ ತೋರುತ್ತದೆ. ಮುಂಬರುವ ಎರಡೇ ದಿನಗಳ ಸಭೆಯಲ್ಲಿ ರಾಜ್ಯಗಳ ಪುನರ್ಘಟನೆಯು ಕುರಿತು ಸರ್ವಸಮ್ಮತವಾದ ಒಂದು ತೀರ್ಮಾನಕ್ಕೆ ಬರಲು ಸಾಧ್ಯನೇ ಎಂಬ ವಿಷಯದಲ್ಲಿ ಕಾಂಗ್ರೆಸಾಧ್ಯಕ್ಷರು ಸಂಶಯವನ್ನು ವ್ಯಕ್ತಪಡಿಸಿದರು ಆದರೆ, ಈ ಚರ್ಚೆಯು ಉಪಯುಕ್ತವಾಗುವ ವಿಷಯದಲ್ಲಿ ಅವರಿಗೆ ತುಂಬ ಭರವಸೆ ಇದೆ, ಈ ಕುರಿತು ದೇಶದ ಇತರ ಧುರೀಣರು ಸಹ ಒಳ್ಳೆಯ ನೂತನಗಳನ್ನೆ ಆಡಿದ್ದಾರೆಂದು ಹೇಳಲು ಅಡ್ಡಿಯಿಲ್ಲ.

'ಒಂದೇ ಕರ್ನಾಟಕ'

ಗಡಿಪ್ರದೇಶಗಳ ಕುರಿತಾಗಿಯೇ ಸರ್ವ ಶಕ್ತಿಯನ್ನು ಪ್ರಜಾಸತ್ತಾತ್ಮಕ ರೀತಿಯಲ್ಲಿ ವಿನಿಯೋಗಿಸುವ ಅವಶ್ಯಕತೆ ಕನ್ನಡಿಗರ ಮುಂದೆ ಕಾಣಿಸಿರುವಾಗ, "ಎರಡು ಕರ್ನಾಟಕ'ಗಳ ಅನಿಷ್ಟಪಲ್ಲವಿಯೊಂದು ಶಕ್ತಿಯ ವ್ಯರ್ಥಹಾಸವನ್ನು ಮಾಡತೊಡಗಿರುತ್ತದೆ. ಸುದೈವದಿಂದ ಶ್ರೀ. ಢೇಬರರ ಸಂಚಾರದ ಬಳಿಕ ಈ ಅಪಸ್ವರವು ತನ್ನ ತೀವ್ರತೆಯನ್ನು ಕಳೆದುಕೊಂಡಿರುವಂತೆ ಭಾಸವಾಗುತ್ತದೆ ಮೈಸೂರಿನ ಜನತೆಯು ಹೆಚ್ಚಿನಂಶ ಹಾಗು ಕನ್ನಡ ಸಾಹಿತ್ಯ ಪರಿಷತ್ತೇ ಮುಂತಾದ ಪ್ರಾತಿನಿಧಿಕ ಸಂಸ್ಥೆಗಳು ಎಲ್ಲ ಕನ್ನಡ ಪ್ರದೇಶಗಳನ್ನು ಒಂದುಗೂಡಿಸಿ ವಿಶೇಕರಣವನ್ನು ಸಾಧಿಸುವುದಕ್ಕೆ ಬೆಂಬಲ ನೀಡುತ್ತಿನೆಯೇ ಹೊರತು, ಎರಡು ಕರ್ನಾಟಕಗಳ ಕುರಿತು, ಆತುರವನ್ನು ತೋರಿಸುತ್ತಿಲ್ಲ. ರಾಜಪ್ರಮುಖ ಹುದ್ದೆಯನ್ನು ರದ್ದು ಪಡಿಸಲು ಕೇಂದ್ರ ಸರಕಾರ ಹೆಜ್ಜೆ ಕಡಿಮೆ ನಿರ್ಧಾರವನ್ನೆ ಮಾಡಿರುವುದರಿಂದ ಮೈಸೂರಿನ ಪ್ರತ್ಯೇಕ ಅಸ್ತಿತ್ವದ ಅಡಿಗಲ್ಲು ಅಲ್ಲಾಡುತ್ತಿದೆ ಎಂದೂಹಿಸಿದರೂ ತಪ್ಪಲ್ಲ. ಅಂತೂ ವಿಶೇಕರಣವಾದಿಗಳ ಕೈಯನ್ನು ಬಲಪಡಿಸುವ ಕೆಲಸಗಳು ಕಾಂಗ್ರೆಸಾಧ್ಯಕ್ಷರ ಪ್ರವಾಸ ಕಾಲದಲ್ಲಿ ಸಾಕಷ್ಟು ತತ್ಪರತೆಯಿಂದಲೇ ನಡೆದವೆಂದು ಸಾಮಾನ್ಯ ಅಭಿಪ್ರಾಯ

ಗಡಿವಲಯದ ಕುರಿತು

ನಾವು ಈ ಕುರಿತು ಸಂತೋಷವನ್ನು ವ್ಯಕ್ತಪಡಿಸಬಹುದು. ಎರಡು ಕರ್ನಾಟಕಗಳಾಗಲಿ ಎನ್ನುವ ಶಕ್ತಿಗಳನ್ನು ಹಿಡಿಗಟ್ಟಿದ ಬಳಿಕ, ನಮಗೆ ಗಡಿ ಪ್ರದೇಶಗಳ ವಿಚಾರವನ್ನು ಸಮರ್ಥವಾಗಿ ಮಂಡಿಸಲು ಹೆಚ್ಚಿನ ಬಲವು ಬರುತ್ತದೆ. ಈಗಾಗಲೇ ಸಾಕಷ್ಟು ವಿಶೇಕದಿಂದ ಕನ್ನಡಿಗರು ತಮ್ಮ ಪಕ್ಷವನ್ನು ಢೇಬರರಿಗೆ ಮುಂದಿಟ್ಟುಪಡಿಸಿದ್ದಾರೆ. ಬಳ್ಳಾರಿ ಮತ್ತಿತರ ವಿಷಯಗಳ ಕುರಿತು ಶ್ರೀ ಅಂಬಲಿಯವರೂ ಇತರ ಕರ್ನಾಟಕದ ಧುರೀಣರೂ ಕಾಂಗ್ರೆಸಾಧ್ಯಕ್ಷರಿಗೆ ಸತ್ಯಸಂಗತಿಗಳನ್ನೆ ಒಪ್ಪಿಸಿದ್ದಾರೆ. ಕೇಂದ್ರದಲ್ಲಿ ವಾಣಿಜ್ಯ ಮಂತ್ರಿ ಶ್ರೀ. ಕರಮರಕರರೇ ಮುಂತಾದವರು ಈ ಬಗ್ಗೆ ತಮ್ಮ ವರ್ಚಸ್ಸನ್ನು ಉಪಯೋಗಿಸಿದ್ದಾರೆ. ಕಾಸರಗೋಡು ತಾಲೂಕಿನ ಕುರಿತಾಗಿ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗದ ಎಂ. ಪಿ.ಗಳಾದ ಶ್ರೀ. ಶಿವರಾಯರು ಗೃಹ ಮಂತ್ರಿಗಳನ್ನು ಕಂಡು ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಕಾಸರಗೋಡು ತಾಲೂಕಿನ ಪ್ರದೇಶವನ್ನು ಕೇರಳಕ್ಕೆ ಸೇರಿಸುವುದರಿಂದ ಜನತೆಗೆ ಪರಮ ಅನ್ಯಾಯವಾಗುವುದೆಂದು ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ್ದಾರೆ. ಮೊನ್ನೆ ಮದ್ರಾಸಿನ ಮುಖ್ಯ ಮಂತ್ರಿಗಳು ನಂಗಳೂರಿಗೆ ಆಗಮಿಸಿದ್ದಾಗ ಕಾಸರಗೋಡಿನ ಜನತೆಯೂ ಸ್ಥಳೀಯ ಮುಖಂಡರೂ ಕನ್ನಡಿಗರಿಗೆ ಆಹಿತವನ್ನು ಮಾಡಬಾರದೆಂದು ವಿನಂತಿಸಿಕೊಂಡಿದ್ದಾರೆ. ಇವುಗಳ ಫಲವಾಗಿ ಕನ್ನಡಿಗರಕೂಗು ಕೇಂದ್ರಸರಕಾರದ ವರೆಗೆ ಮತ್ತು ಕಾಂಗ್ರೆಸಿನ ವರಿಷ್ಠರ ವರೆಗೆ ಕೇಳಿದಿರಬೆಂದು ನಂಬೋಣ.

ಮರಾಕರ ಉಪಟಳ

ಕಾಸರಗೋಡು ತಾಲೂಕು, ಬೀದರ್,ಮಡಕಶಿರ, ಬಳ್ಳಾರಿ ಜಿಲ್ಲೆಯ ಎಲ್ಲ ಪ್ರದೇಶ–ಕನಿಷ್ಠ ಇಪ್ಪರ ಮೇಲಾದರೂ ಕನ್ನಡಿಗರಿಗೆ ಗಿರುವ ಅಧಿಕಾರವನ್ನು ಮನ್ನಿಸಿ, ಸೂಚಿತ ಕರ್ನಾಟಕ ರಾಜ್ಯದಲ್ಲಿ ಅವನ್ನು ಸೇರಿಸಬೇಕೆಂದು ಕನ್ನಡಿಗರ ಒಕ್ಕೂರಲಿನ ಅಭಿಪ್ರಾಯ. ಆದರೆ ಈಚೆಗೆ ಬಳ್ಳಾರಿ ಮತ್ತು ಕಾಸರಗೋಡುಗಳ ಚಿಂತೆ ಕನ್ನಡಿಗರಿಗೆ ಸಾಲದೋ ಎಂಬಂತೆ; ಮಹಾರಾಷ್ಟ್ರೀಯರು ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಹಳಿಯಾಳ ಮತ್ತು ಸುಪಾ ವಿಭಾಗಗಳ ಮೇಲೆ ತಮ್ಮ ಆಧಿಕಾರವಿಪೆ ಎಂದು ಹೇಳತೊಡಗಿದ್ದಾರೆ ಈಚೆಗೆ ಕಾರವಾರ ನಗರಕ್ಕೆ ಶ್ರೀ ಶಂಕರರಾವ ದೇವರು ಆಗಮಿಸಿ ಮಹಾರಾಷ್ಟ್ರೀಯರ ವಾದಕ್ಕೆ ಬೆಂಬಲವನ್ನು ದೊರಕಿಸಿಕೊಳ್ಳಲು ನೋಡಿದರು. ಆದರೆ ಅವರ ವಾದವು ಸಮರ್ಥನೀಯವಾಗಿಲ್ಲವೆಂಬುವನ್ನು ಕನ್ನಡದ ಮೇರಿನ ಅಭಿಮಾನಿಗಳು ತೋರಿಸಿರುವರೆಂದು ತಿಳಿದು ಬರುತ್ತದೆ. ಈ ಉತ್ತರ ಕನ್ನಡದಲ್ಲಿರುವ ಕೊಂಕಣಿಗರು ದಕ್ಷಿಣ ಕನ್ನಡಿಗ ತುಳುವರಂತೆ ಕನ್ನಡವನ್ನೆ ವ್ಯವಹಾರ ಭಾಷೆಯಾಗಿ ನುನ್ನಿಸಿರುವರೆಂದೂ ಕನ್ನಡ ಪ್ರದೇಶಗಳೊಡನೆಯೆ ಅವರ ಎಲ್ಲ ಸಂಬಂಧಗಳೂ ವಿಶೇಸವಾಗಿವೆಯೆಂದೂ ಗಮನಿಸುವುದವಶ್ಯ. ಕಾಂಗ್ರೆಸಿನ ಮುಂಬರುವ ಸಭೆಯು ಬೇಕೆಂದೇ ಹೂಲಿ ಎಬ್ಬಿಸುವವರ ಕುರಿತು ಜಾಗರೂಕತೆಯಿಂದಿರುವುದೆಂದು ಖಾರೈಸೋಣ

ಪ್ರಕಟಣೆ

ರೂಪಾಯಿ 1000 ತನಕ ಸಾಲಗಳು ಆಸ್ತಿ ಜವಾಬ್ದಾರಿ ಅಥವಾ ಜ್ಯಾಮೀನುಗಳಲ್ಲಿ ದಿನ ನಿತ್ಯ ಪೈಸೆ ತಿಂಗಳಿಗೆ ಬಡ್ಡಿಯನ್ನು ಪಡೆದು ಕೊಡಲಾಗುವುದು. ಹಲವರು ಈಗಾಗಲೇ ಪಡೆದಿರುತ್ತಾರೆ. ವಿವರಗಳಿಗೆ ಇಂಗ್ಲಿಷಿನಲ್ಲಿ ಬರೆಯಿರಿ:—

Bombay Mercantile Co
Bombay--23.

ಹೊಸಕೆರೆ ಚಿದಂಬರಯ್ಯನವರ

ಗೀತೆಯಕ್ಕೆ ಗನ್ನಡಿ

ಯು ಸನ್ನೂಲ ಭಾಷಾಂತರ

ನವಯುಗ ಪ್ರೆಸ್, ಉಡುಪಿ.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ



ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ನುಲಬದ್ಧತೆ, ಹೆಜ್ಜಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಸುತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವುದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ವಾಕಿಸ್ಟರು:

(1) ಸುದರ್ಶನ ಆಯುರ್ವೇದ ಔಷಧಶಾಲಾ—ಬೆಂಗಳೂರು 2.
(2) ಪೈ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

THE CANARA BANKING CORPORATION LTD.
50 YEARS of BANKING SERVICE ESTD. 1906

Popular. Progressive. Prosperous.

A branch of the Bank will shortly be opened at MADURAI.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೩-೧೧-'೫೬	೧೦

ವರಿಷ್ಠರಲ್ಲಿ ಬಿನ್ನಹ

ನಮ್ಮ ಬರುವ ಸಂಚಿಕೆಯು ಹೊರ ಬೀಳುವಷ್ಟರಲ್ಲಿ ಹೊಸ ದೆಹಲಿಯಲ್ಲಿ ಸೇರಲಿರುವ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಕಾರ್ಯಕಲಾಪಗಳು ಮುಗಿದಿರುತ್ತವೆ; ರಾಜ್ಯಗಳ ಪುನರ್ಘಟನೆಯ ಶರಿತು ಅದು ಒಂದು ತೀರ್ಮಾನವನ್ನು ಕೈಗೊಂಡಿರುವ ಸಾಧ್ಯತೆಯುಂಟು. ಜಲ್ಲೆಯ ಖಾಲಿನ ಸಮಸ್ಯೆಯಾಗಿ ಪರಿಣಮಿಸಿರುವ ಕಾಸರಗೋಡು ತಾಲೂಕಿನ ಭವಿಷ್ಯದ ಪ್ರಶ್ನೆಯು ಕಾಂಗ್ರೆಸು ಸಮಿತಿಯ ಈ ಸಭೆಯಲ್ಲಿ ಎತ್ತಲ್ಪಟ್ಟು ಕನ್ನಡಿಗರಿಗೆ ಆಗಿರುವ ಅನ್ಯಾಯ ದೂರವಾಗುವಂತೆ ವರಿಷ್ಠರು ಪ್ರಯತ್ನಿಸಬೇಕೆಂಬುದಕ್ಕಾಗಿ ಕಾಸರಗೋಡು ತಾಲೂಕಿನಲ್ಲಿ ಕನ್ನಡಿಗರಿಗಿರುವ ಹಿತಾಸಕ್ತಿಯ ಕುರಿತು ಮಗದೊಮ್ಮೆ ಪ್ರಸ್ತಾಪಿಸಲು ನಾವು ಇಚ್ಛಿಸುತ್ತೇವೆ. ಚಳವಳದ ಮಾರ್ಗವನ್ನು ಮತ್ತು ಇತರ ಪಕ್ಷಗಳೊಡನೆ ಸೇರಿಕೊಂಡು ನಡೆಯುವ ದಾರಿಯನ್ನು ಕಾಂಗ್ರೆಸಿಗರಿಗೆ ಹೊರತುಪಡಿಸಿರುವುದರಿಂದ ಸಂಸ್ಥೆಯ ವರಿಷ್ಠರಲ್ಲಿ ಬಿನ್ನಹವನ್ನು ಮಾಡಿಕೊಳ್ಳುವ ಬಾಗಿಲೊಂದೇ ಕನ್ನಡ ನಾಡಿನ ಕಾಂಗ್ರೆಸಿಗರಿಗೆ ಈಗ ತೆರೆದಿರುತ್ತದೆ. ವರಿಷ್ಠರು ಹೀಗೆ ಶಿಸ್ತು ಜ್ಯಾರಿಮಾಡಿರುವುದರಿಂದ, ಅವರು ತನ್ನು ಮೇಲಿನ ಹೊಣೆಗಾರಿಕೆಯನ್ನೆ ಹೆಚ್ಚಿಸಿಕೊಂಡಿದ್ದಾರೆಂದು ಇಲ್ಲಿ ಸೂಚಿಸುವುದುತ್ತಮ. ಏಕೆಂದರೆ, ಜನಾಭಿಪ್ರಾಯಕ್ಕೆ ಸಮ್ಮತವಲ್ಲದ ರೀತಿಯಲ್ಲಿ ಸರಕಾರವು ನಾಳೆ ನಿರ್ಣಯಗಳನ್ನು ಕೈಗೊಂಡರೆ, ಅದಕ್ಕೆ ಸ್ಥಳೀಯ ಧುರೀಣರು ಉದಾಸೀನತೆ ಕಾರಣವೆನಿಸದೆ, ಕೇಂದ್ರದ ಪ್ರಭುತಿಗಳ ಕಠೋರ ವರ್ತನೆಯೇ ಹೇತುವಾದೀತು. ಅದುದರಿಂದ ಕಾಂಗ್ರೆಸಿನ ಮಾರ್ಗದರ್ಶಕರಿಗೂ ಅವರೊಡನೆ ನಿಕಟ ಸಂಬಂಧ ಮತ್ತು ಸಂಪರ್ಕವನ್ನು ಇರಿಸಿಕೊಂಡಿರುವವರಿಗೂ ತಾಸರಗೋಡು ತಾಲೂಕಿನ ಬಗ್ಗೆ ಕನ್ನಡಿಗರು ವಹಿಸಿರುವ ನಿಲುಮೆ ಎಷ್ಟರ ಮಟ್ಟಿಗೆ ನ್ಯಾಯವಾಗಿದೆ ಎಂಬುದನ್ನು ವಿದಿತಪಡಿಸಲು ನಾವು ಈ ಸಂದರ್ಭವನ್ನು ಉಪಯೋಗಿಸುತ್ತೇವೆ. ರಾಜ್ಯಗಳ ಪುನರ್ಘಟನೆಯ ಉದ್ದೇಶದ ಹಿನ್ನೆಲೆಯಲ್ಲಿ ಕನ್ನಡಿಗರ ನಿಲುಮೆಯನ್ನು ಅವಲೋಕಿಸುವುದೇ ಉತ್ತಮವಾದ ವಿಧಾನವೆಂದು ನಮ್ಮ ಅಭಿಪ್ರಾಯ. ಇದರಂತೆ ನೋಡಿದರೆ, ಕೇಂದ್ರ ಸರಕಾರವು "ಒಕ್ಕೂಟದ ಪ್ರತಿಯೊಂದು ಘಟಕದ ಜನರ ಮತ್ತು ರಾಷ್ಟ್ರದ ಕ್ಷೇಮಾಭ್ಯುದಯವಾಗುವಂತೆ" ಸಿಫಾರಸುಗಳನ್ನು ಮಾಡಲು ಆಯೋಗವನ್ನು ನೇಮಿಸಿತು. ಸಮಸ್ಯೆಯನ್ನು ಆಯೋಗವು ಆಳವಾಗಿ ವಿಚಾರಿಸಬೇಕೆಂದೂ ಚಾರಿತ್ರಿಕ ಹಿನ್ನೆಲೆ, ಸದ್ಯದ ಪರಿಸ್ಥಿತಿ ಮತ್ತಿತರ ಸಂಬಂಧಿಸಿದ ಎಲ್ಲ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದೂ ಸರಕಾರ ಸೂಚಿಸಿತು. ಸರಕಾರವು ಮತ್ತೂ ಹೀಗೆಂದಿತು— "ಆಯಾ ಪ್ರದೇಶದ ಜನಜೀವನದ ಕ್ರಮವನ್ನು ವ್ಯಕ್ತಪಡಿಸುತ್ತಿರುವೆಂಬ ಕಾರಣದಿಂದ ಭಾಷೆ ಮತ್ತು ಸಂಸ್ಕೃತಿಗಳಿಗೆ ನಿಸ್ಸಂಶಯವಾಗಿಯೂ ಪ್ರಾಮುಖ್ಯತೆ ಸಲ್ಲುತ್ತದೆ. ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸುವಾಗ ಬೇರೆ ಕೆಲವು ಮುಖ್ಯ ವಿಷಯಗಳನ್ನು ಸಹ ಗಮನದಲ್ಲಿಟ್ಟುಕೊಳ್ಳುವುದು ಅಗತ್ಯವಾಗಿದೆ— ಭಾರತದ ಭದ್ರತೆ ಮತ್ತು ಐಕ್ಯವನ್ನು ಕಡೆಗಣಿಸಬಾರದು; ವಾಣಿಜ್ಯ, ಆರ್ಥಿಕ ಹಾಗು ಆಡಳಿತ ಸಂಬಂಧದ ವಿಚಾರಗಳೂ ಅಷ್ಟೇ ಮಹತ್ವದ್ದಾಗಿವೆ; ಭಾರತವು ಆರ್ಥಿಕ, ಸಾಂಸ್ಕೃತಿಕ ಹಾಗು ನೈತಿಕ ಅಭಿವೃದ್ಧಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದು, ಅದಕ್ಕೆ ಆತಂಕ ಹೊಸ ಘಟಕಗಳಿಂದ ಬರಬಾರದು." ಆಯೋಗವು ನೀಡಿರುವ ನಿರ್ದೇಶಕತತ್ವವನ್ನು ಸಾಮಾನ್ಯವಾಗಿ ಸ್ವೀಕರಿಸಿ ತಮ್ಮ ವರದಿಯಲ್ಲಿ ತೀರ್ಮಾನೇ ಪರಿಶ್ಚೇದದಲ್ಲಿ ಆಡಳಿತದ ದೃಷ್ಟಿಯಿಂದ ಭಾಷೆ ಪ್ರಾಮುಖ್ಯವಾದ ವಿಷಯವಾಗುತ್ತದೆಂಬ ಅಪರಿ ಆದರೊಡನೆ ಆರ್ಥಿಕ ಮುಂತಾದ ಇತರ ವಿಷಯಗಳನ್ನೂ ಪರಿಗಣಿಸಬೇಕೆಂಬ ತೀರ್ಮಾನಕ್ಕೆ ಬಂದಿದ್ದಾರೆ; ಅಲ್ಲದೆ, ಬೇರೆ ಬೇರೆ ಭಾಷಾವಲಯದ ಪೈಕ್ಷ ಜೆಕಹಾಗು ಸಾಂಸ್ಕೃತಿಕ ಆವಶ್ಯಕತೆಗಳನ್ನೂ ಸಂಸರ್ಕಾನುಕೂಲತೆಗಳನ್ನೂ ಲೆಕ್ಕಕ್ಕೆ ಹಿಡಿಯಬೇಕೆಂಬ ನಿರ್ಧಾರವನ್ನು ಮಾಡಿದ್ದಾರೆ, 'ಆಗ್ನಿ ಪರೀಕ್ಷೆ'ಯನ್ನೆ ಹೋಲುವ ಇವೆಲ್ಲ ಕರಾರುಗಳಿಗೆ ಕಾಸರಗೋಡಿನ ಮುಖ್ಯ ತಾಲೂಕು ಕರ್ನಾಟಕದ ಭಾಗವೆನ್ನುವ ಕನ್ನಡಿಗರ ಪ್ರತಿಪಾದನೆ ಹೊಂದಿಕೊಂಡಿದೆಯೆ ಎಂಬುದೇ ವಿಮರ್ಶಿಸಬೇಕಾದ ವಿಷಯ — ನಾವು ಒಂದೇ ಮಾತಿನಲ್ಲಿ ಉತ್ತರಿಸುವುದಾದರೆ, ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಭೂಭಾಗದ ಮಟ್ಟಿಗೆ ಮೇಲಿನ ಎಲ್ಲ ಶರ್ತಗಳನ್ನೂ ಕನ್ನಡಿಗರ ನಿಲುಮೆಯು ನಿಸ್ಸಂದಿಗ್ಧವಾಗಿ ಸೂಚಿಸುತ್ತದೆ. ಭಾಷೆಯನ್ನು ತೆಗೆದುಕೊಂಡರೆ, ತುಳು ಮಾತನಾಡುವ ಜನರ ಪ್ರಾಬಲ್ಯವೇ ಇಲ್ಲಿದೆ; ಮಲೆಯಾಳಂ ಎಂಬ ಮಾತನ್ನಾಡುವ ಮುಸ್ಲಿಮರು ಇಲ್ಲಿರುವರಾದರೂ ಅವರ ಮಲೆಯಾಳಂ ಭಾಷೆಯು ದೂರದ ತಿರು-ಕೊಚ್ಚಿಯ ಅಥವಾ ಹತ್ತಿರದ ಮಲಬಾರಿನ ಮಲೆಯಾಳಂ ಭಾಷೆಗಿಂತ ಎಷ್ಟೋ ಭಿನ್ನವಾಗಿದೆ—ಮತ್ತು ತುಳು ಹಾಗು ಕನ್ನಡ ಶಬ್ದಗಳ ಬೆರಕೆಯಿಂದ ಕೂಡಿದೆ. ಸಾಮಾನ್ಯ ಮಾತಿನಲ್ಲಿ ಇದು ಮಾಪಿಳ್ಳೆ ಬ್ಯಾರಿಗಳ ಭಾಷೆಯೇ ಹೊರತು ಮಲೆಯಾಳಂ ನುಡಿಯಲ್ಲ. ಈ ಮಿಶ್ರ ಭಾಷೆಯಾಡುವವರೂ ತುಳುವರೂ ಕೊಂಕಣಿಗರೂ ಕಾಸರಗೋಡಿನಲ್ಲಿ ಕನ್ನಡವನ್ನೆ ಮಾತೃ ಭಾಷೆಯಾಗುಳ್ಳ ಜನರೊಡನೆ ತಾವು ಸಹ ಕನ್ನಡವನ್ನು ವ್ಯವಹಾರ ಕ್ಷೇತ್ರದಲ್ಲಿ ಬಳಸಿಕೊಂಡಿರುತ್ತಾರೆ. ಇಂಗ್ಲಿಷನ್ನು ಬಿಟ್ಟರೆ ಎಲ್ಲ ಕಾಗದ ಪತ್ರಗಳೂ ದಾಖಲೆಗಳೂ ಕನ್ನಡದಲ್ಲಿಯೇ ನಡೆಯುತ್ತಿರುತ್ತವೆ. ಉದಾಹರಣೆಗಾಗಿ ಪ್ರತಿವರ್ಷ ದಾಖಲಾಗುವ ೪೦೦೦ ದಸ್ತಾವೇಜುಗಳಲ್ಲಿ ೯೯% ಕನ್ನಡದಲ್ಲಿಯೇ ಬರೆಯಲ್ಪಡುತ್ತವೆ. ಚಿರಶ್ರೀಯ ದೃಷ್ಟಿಯಿಂದ ನೋಡಿದರೆ ಈ ತುಳುನಾಡನ್ನು ಕನ್ನಡದ ನೆಲವೆಂದೇ ಪರಿಗಣಿಸಬೇಕಾಗುತ್ತದೆ – ಕ್ರಿಸ್ತ ಪೂರ್ವ ಕಾಲದ ವರೆಗೆ ಹೋಗುವ ಅಲೂಪರಾಜ ಮನೆತನದ ಆಳಿಕೆಯು ದಿನಗಳಲ್ಲಿಯಾಗಲೀ ಬ್ರಿಟಿಷರ ಆಳಿಕೆಯು ತೊಡಗುವುದಕ್ಕೆ ಮೊದಲಿನ ಟಿಪ್ಪುಸುಲ್ತಾನನ ಕಾಲದಲ್ಲಾಗಲೀ ಕಾಸರಗೋಡು ತಾಲೂಕಿನ ಮುಖ್ಯ ಭಾಗ ಕನ್ನಡದ ನೆಲವಾಗಿತ್ತೆಂಬುದಕ್ಕೆ ಬೇಕಾದಷ್ಟು ನಿದರ್ಶನಗಳು ಸಿಗುತ್ತವೆ. ಸಾಂಸ್ಕೃತಿಕ ವೈಶಿಷ್ಟ್ಯವನ್ನು ಪರಿಶೀಲಿಸಿದರೆ ಹೊಸದುರ್ಗ ಉಪತಾಲೂಕಿಗೂ ಕಾಸರಗೋಡು ಮುಖ್ಯ ತಾಲೂಕಿಗೂ ಎದ್ದು ತೋರುವ ವ್ಯತ್ಯಾಸಗಳು ಕಣ್ಣಿಗೆ ಬೀಳುತ್ತವೆ—ಉದಾಹರಣೆಗೆ, ದಕ್ಷಿಣದ ಹೆಂಗಸರು ಬಿಳಿ ಮುಂಡು ಉಟ್ಟು, ಬಿಳಿ ವಸ್ತ್ರವನ್ನು ಹೊದ್ದುಕೊಳ್ಳುತ್ತಾರೆ; ಉತ್ತರದಲ್ಲಿ ಹೆಂಗಸರು ಬಣ್ಣದ ಸೀರೆಯುಟ್ಟು ರವಿಕೆ ತೊಟ್ಟುಕೊಳ್ಳುತ್ತಾರೆ. ತಲೆಗೆ ಜುಟ್ಟು ಬಿಡುವ ಸಂಪ್ರದಾಯವುಳ್ಳವರು ತೆಂಕಲಾಗಿ ತಲೆಯ ಮುಂದೆ ಜುಟ್ಟು ಕಟ್ಟಿದರೆ ಬಡಗಿನವರು ಹಿಂಬದಿಗೆ ಜುಟ್ಟೆಹಾಕುತ್ತಾರೆ. ಚಂದ್ರಗಿರಿ ಹೊಳೆಯನ್ನು ದಾಟಿ ಬಡಗಲಿಗೆ ತೆಂಕಲಿನ ಹೆಂಗಸರು ಹೋದರೆ ಆವರಿಗೆ ಬಹಿಷ್ಕಾರ ಹಾಕುವ ಸಂಪ್ರದಾಯವೊಂದು ಇತ್ತೆಂದು ಕೋರ್ಟಿನ ತೀರ್ಮಾನಗಳು ಹೇಳುತ್ತವೆ ಕೊಲ್ಲೂರಿನ ಮೂಕಾಂಬಿಕೆಯ ದರ್ಶನ ಮಾಡಿ ಪ್ರಾಯಶ್ಚಿತ್ತ ವಿಧಿಯನ್ನು ನೆರವೇರಿಸಿದ ಬಳಿಕವೇ ಈ ಮಹಿಳೆಯರಿಗೆ ಸಮಾಜದಲ್ಲಿ ಪ್ರವೇಶ ದೊರಕುತ್ತಿತ್ತೆನ್ನಲಾಗಿದೆ. ಮದುವೆ ಮುಂತಾದ ಸಾಮಾಜಿಕ ವಿಧಿಗಳಾಗಲೀ ವಂಶಪರಂಪರೆಯಾಗಿ ಬರುವ ಅಧಿಕಾರದ ಬಗೆಯಾಗಲೀಕಕ ವ್ಯಾವಾದಿಗಳನ್ನು ಎಣಿಸುವ ರೀತಿಯಾಗಲೀ ಆಟ ವಿನೋದಗಳ ಮಾದರಿಯಾಗಲೀ ಚಂದ್ರಗಿರಿ ಹೊಳೆಯ ಉತ್ತರದ ಭಾಗದಲ್ಲಿ ಪಕ್ಕೆಣದಕ್ಕಿಂತ ಬೇರೆಯೇ ಸ್ವರೂಪವನ್ನು ಹೊಂದಿರುತ್ತವೆ ಯಕ್ಷಗಾನ ಪದ್ಧತಿಯ ಜಾನಪದ ಕಲೆಯೂ ಕೇರಳದ ಕಥಕ್ಕಳಿಗಿಂತ ಅನೇಕ ಬಗೆಯಲ್ಲಿವ್ಯತ್ಯಾಸವನ್ನು ಹೊಂದಿದೆ; ಅಲ್ಲದೆ ಕನ್ನಡದವ್ಞಯೇ ಈ ಆಟಗಳಿಗೆ ಸಂಬಂಧಿಸಿದ ಪ್ರಸಂಗಗಳಿವೆ ಎಂಬುದನ್ನು ಇಲ್ಲಿ ನೆನೆಯುವುದೊಳಿತು. ಶಿಕ್ಷಣ ರಂಗದಲ್ಲಿ, ಸುಮಾರು ೨೦೦೦ ವಿದ್ಯಾರ್ಥಿಗಳು ಈಗ ಕನ್ನಡವನ್ನು ಕಲಿಯುತ್ತಿದ್ದಾರೆ ಮಲೆಯಾಳಂ ಕಲಿಯುವ ವಿದ್ಯಾರ್ಥಿಗಳು ೩೦೦೦ ಸಹ ಇಲ್ಲ! ಕೇರಳಕ್ಕೊಡನೆ ಈ ಪ್ರದೇಶವನ್ನು ಸೇರಿಸಿದರೆ, ಕನ್ನಡದಲ್ಲಿ ಕಲಿಯುತ್ತಿರುವ ಈ ಮಕ್ಕಳಿಗೆ, ಆಯೋಗದ ವರದಿಯಂತೆ, ಹೆಚ್ಚೆಂದರೆ ಪ್ರಾಥಮಿಕ ಶಿಕ್ಷಣವಷ್ಟೇ ಕನ್ನಡದಲ್ಲಿ ದೊರೆತೀತು; ಮಾಧ್ಯಮಿಕ ಶಿಕ್ಷಣ ಮತ್ತು ಉಚ್ಚ ಶಿಕ್ಷಣಗಳು ಪ್ರಾದೇಶಿಕ ಭಾಷೆಯು ಮಲೆಯಾಳಂದಲ್ಲಿ ನಡೆಸಲ್ಪಡುತ್ತವೆ ಎನ್ನುವ ಸಂಶಯಕ್ಕೆ ಆದೋಗದ ವರದಿಯಲ್ಲಿ ಎಡೆಯುಂಟು. ಆದುದರಿಂದ ಕಾಸರಗೋಡು ತಾಲೂಕಿನ ಶೈಕ್ಷಣಿಕ ರಂಗಕ್ಕೆ ಕೇರಳಪೊಡನೆ ಸೇರುವುದರಿಂದ ಬಲವಾದ ಆಘಾತವಾಗುವುದು ತಪ್ಪದು. ಆಡಳಿತದ ಅನುಕೂಲತೆಗೆ ಗಮನವೀಯುವುದಾದರೆ, ಹೊಸದುರ್ಗ ಉಪತಾಲೂಕು ಕೋರ್ಟು ವ್ಯವಹಾರ, ಕಂದಾಯ ವಿಭಾಗದ ಚಟುವಟಿಕೆ, ವ್ಯವಸಾಯ ಪದ್ಧತಿ ಇತ್ಯಾದಿಗಳಲ್ಲಿ ಮುಖ್ಯ ಕಾಸರಗೋಡು ತಾಲೂಕಿಗಿಂತ ಭಿನ್ನವಾದ ರೀತಿಯನ್ನು ತೋರಿಸುತ್ತಿದೆಯೇ ಹೊರತು ಸಾಮ್ಯವ ಸ್ವಲ್ಪ. ಮದ್ರಾಸು ಸರಕಾರದವರು ಅನೇಕ ದಶಕಗಳ ತಮ್ಮ ಆಡಳಿತ ಕಾಲದಲ್ಲಿ ಹೊಸದುರ್ಗ ಉಪ ತಾಲೂಕು ಕಾಸರಗೋಡು ಮುಖ್ಯ ತಾಲೂಕಿಗಿಂತ ಪ್ರತ್ಯೇಕ ಅಸ್ತಿತ್ವವನ್ನು ಹೊಂದಲು ಯೋಗ್ಯವಾಗಿದೆ ಎಂದು ಮನಗಂಡು, ಶಾಸನಗಳನ್ನು ರಚಿಸುವಾಗ, ಮತ್ತು ಅನ್ವಯಿಸುವಾಗ ಇದಕ್ಕೆ ಮಹತ್ವವನ್ನಿತ್ತಿದ್ದರು; ಮತ್ತು ಹೊಸದುರ್ಗ ಉಪತಾಲೂಕನ್ನು ಮಲಬಾರಿನೊಡನೆ ಅನೇಕ ವಿಷಯಗಳಲ್ಲಿ ಜೋಡಿಸಿದ್ದರು. ಸುಲಬಾರು ವ್ಯವಸಾಯ ಶಾಸನವೊಂದು ಇದಕ್ಕೆ ಮೂರು ದಶಕಗಳ ಹಿಂದಿನ ಉದಾಹರಣೆಯಾದರೆ ಕಣ್ಣಾನೂರು ಮುತದಾರ ಕ್ರೋಢೀಕರಣದೊಡನೆ ಹೊಸದುರ್ಗ ಉಪ ತಾಲೂಕನ್ನು ಸೇರಿಸಿದುದು ಇತ್ತೀಚೆಯ ಉದಾಹರಣೆ ಎನ್ನಬಹುದು. ಮದ್ರಾಸು ಸರಕಾರವು ಆಡಳಿತ ವಿಷಯದಲ್ಲಿ ತೋರಿಸುತ್ತಾ ಬಂದಿರುವ ಈ ಕ್ರಮವನ್ನು ಬುಡ ಮೇಲು ಮಾಡುವುದಾಗಲೀ ಡೆಗಣಿಸುವುದಾಗಲೀ ಇಷ್ಟವಲ್ಲ. ಭೌಗೋಲಿಕವಾಗಿ, ಚಂದ್ರಗಿರಿ ಹೊಳೆಯು, ಕೇರಳ ಮತ್ತು ಕರ್ನಾಟಕ್ಕೆ ಯೋಗ್ಯ ಮೇರೆಯಾಗಬಲ್ಲುದು. ವ್ಯವಸಾಯ ಕ್ರಮದಲ್ಲಿ ನದಿಯ ತೆಂಕು ಮತ್ತು ಬಡಗಲಿಗೆ ವ್ಯತ್ಯಾಸವಿರುವ ದೆಸೆಯಿಂದಂತೂ ಇದು ಉತ್ತಮ ಗಡಿ ಎನ್ನಲು ಯಾವ ಆಕ್ಷೇಪವೂ ಇರದು. ಆರ್ಥಿಕ ಹಾಗು ವಾಣಿಜ್ಯ ಹಿತಾಸಕ್ತಿಯನ್ನು ಗಮನಿಸಿದರೆ, ಮಂಗಳೂರು ಬಂದರೊಡನೆಯೇ ಕಾಸರಗೋಡು ಮುಖ್ಯ ತಾಲೂಕು ನೂರಾರು ವರ್ಷಗಳ ಸಂಬಂಧವನ್ನು ಹೊಂದಿದೆ. ಅಡಿಕೆ, ಕರಿಮೆಣಸು, ಗೇರುಬೀಜ ಮುಂತಾದ ಪ್ರಾಮುಖ್ಯ ರಫ್ತು ಉತ್ಪನ್ನಗಳಿಗೆ ಮಂಗಳೂರೇ ನಿರ್ಯಾತ ಕೇಂದ್ರ. ಕಾಸರಗೋಡು ಮುಖ್ಯ ತಾಲೂಕಿನೊಡನೆ ಕರ್ನಾಟಕದಲ್ಲಿ ಸೇರಬೇಕೆಂದು ಆಯೋಗ ಹೇಳಿರುವ ಪುತ್ತೂರು ತಾಲೂಕಿನ ಸಂಬಂಧವೂ ಅತಿ ನಿಕಟವಾಗಿರುತ್ತದೆ. ಸಂಪರ್ಕಾನುಕೂಲತೆಗಳು ಸಹ ಕರ್ನಾಟಕದೊಡನೆಯೇ ಕಾಸರಗೋಡು ಮುಖ್ಯ ತಾಲೂಕಿಗೆ ಹೆಚ್ಚು. ಮಡಿಕೇರಿ, ಮೈಸೂರು, ಪುತ್ತೂರು, ಮಂಗಳೂರು ಇತ್ಯಾದಿ ಉತ್ತರ ಹಾಗು ಪೂರ್ವದ ಕೇಂದ್ರಗಳಿಗೆ ಕಾಸರಗೋಡು ತಾಲೂಕಿನ ಎಲ್ಲೆಡೆಯಿಂದಲೂ ಧಾರಳ ಮಾರ್ಗಗಳು ಇವೆ; ಆದರೆ ಕೇರಳದೊಡನೆ ಇರುವ ಪ್ರಮುಖ ಸಂಪರ್ಕ ಸಾಧನವೆಂದರೆ ರೈಲು ಮಾರ್ಗ ಮಾತ್ರ. ನಾವ್ಞಾಚೀನ ಚರಿತ್ರೆಯ ಸಂಗತಿಗಳಿಗಿಂತಲೂ ಸದ್ಯದ ಪರಿಸ್ಥಿತಿಗೆ ಮಹತ್ವ ಕೊಡುವ ಆಯೋಗ ಇವೆಲ್ಲ ಸತ್ಯ ಸಂಗತಿಗಳನ್ನು ಗಮನಿಸದೆ ಹೋಗಿರುವುದು ಆಶ್ಚರ್ಯ! ಈಗ ವರಿಷ್ಠರಾದರೂ ಇತ್ತ ಮನಸ್ಸು ಕೊಡಬೇಕು; ನಮ್ಮ ಪ್ರತಿನಿಧಿಗಳು ಇದಕ್ಕಾಗಿ ಒತ್ತಾಯಿಸಬೇಕು. ಕಾಸರಗೋಡು ಮುಖ್ಯ ತಾಲೂಕು ಈಗ ಸಂಪತ್ತಿನಿಂದ ಕೂಡಿದೆ; ಇದನ್ನು ಕೊರತೆಯ ವಲಯವಾದ ಕೇರಳದೊಡನೆ ಒತ್ತಾಯವಾಗಿ ಸೇರಿಸುವುದರಿಂದ ಸ್ಥಳೀಯ ಜನತೆಗೆ ಸಂಪತ್ತಿನ ಪ್ರಯೋಜನ ಪಡೆಯುವ ವಿಷಯದಲ್ಲಿಯೂ ದ್ರೋಹ ಬಗೆದಂತಾಗುತ್ತದೆ. ಆದುದ

ರಿಂದ ಅನ್ಯಾಯವಾಗಿ ಕನ್ನಡಿಗರ ಮತ್ತು ಜನರ ಮನಸ್ಸನ್ನು ಕೆರಳಿಸಬಾರದು; ಅವರ ಕ್ಷೇಮಾಭ್ಯುದಯಕ್ಕೆ ತಡೆ ಹಾಕಕೂಡದು ಎಂದು ಕಳಕಳಿಯಿಂದ ವಿನಂತಿಸ ತ್ತೇವೆ. ಜಿಲ್ಲೆಯನ್ನು ವಿಭಜಿಸ ಬಾರದೆಂಬ ಸಾವಧಾನ್ಯ ಸೂತ್ರವನ್ನು ಆಯೋಗ ಸ್ವೇಚ್ಛೆಯಿಂದ ಎಷ್ಟೋ ಕಡೆ ಗಳಲ್ಲಿ ಮುರಿದಿದೆ, ತಾಲೂಕನ್ನು ಸಹ ತುಂಡರಿಸಲು ಅದು ಒಂದುಕಡೆ ಹಿಂಜ ರಿದಿಲ್ಲ, ಕಾರಣ, ಮೊದಲೇ ಉಪತಾ ಲೂಕಾಗಿ ಪರಿಗಣಿಸಲ್ಪಟ್ಟ ಹೊಸದುರ್ಗ ನ್ನಷ್ಟೇ ಬೇಕಾದರೆ ಕೇರಳದೊಡನೆ ಸಂ ಯೋಜಿಸಿ ಕಾಸರಗೋಡು ತಾಲೂಕಿನ ಮುಖ್ಯ ಭಾಗವನ್ನು ಕನ್ನಡದ ನೆಲವಾ ಗಿಯೇ ಉಳಿಸುಗೊಡಬೇಕಾದದ್ದು ನ್ಯಾ ಯ ಈ ದಿಸೆಯಲ್ಲಿ ಕನ್ನಡಿಗರು ನಡೆ ಸಿದ ಪ್ರಯತ್ನ ಫಲವೀಯುವಂತೆ ವರಿ ಷ್ಠರು ನಡೆದುಕೊಂಡರೆ ಎಲ್ಲರಿಗೂ ಕ್ಷೇಮ

ಉಡುಪಿ

ಕಲಾನೈಂದವ ವಾರ್ಷಿಕೋತ್ಸವ

ಪು— ತಾ 28 ಮತ್ತು 29ರಲ್ಲಿ, ಅವರ ಅಂಬಲಪಾಡಿ ಶಾಖೆಯ ವಾರ್ಷಿಕೋತ್ಸವವು ತಾ. 30ರಲ್ಲು ಶ್ರೀ ಕೃಷ್ಣ ಮಂದಿರ ವಸಂತ ಮಹಲಿನಲ್ಲಿ ಪರ್ಯಾಯ ಫಲಿಮಾರು ಮಠದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಿಗಿತು ಆಧಮಾರು ಸಾರದ ಸ್ವಾಮಿಗಳವರು ಉತ್ಸವ ವನ್ನ ಉದ್ಘಾಟಿಸಿದರು ಶ್ರೀಗಳಾದ ಎನ್ ಪ್ರಹ್ಲಾದ ರಾವ್, ಕು ಶಿ ಹರಿದಾಸ ಭಟ್ ಡಾ ಪಿ ಎಸ್ ಕೃಷ್ಣ ರಾವ್, ಕೆ ಎಸ್ ಉರಾಳ್, ಪ್ರಿನ್ಸಿಪಲ್ ಕಾಲಾಗಿ ಶೇಷಾಚಾ ರ್ಯರೇ ಮೊದಲಾದವರು ಪ್ರಮುಖ ಉಪ ನ್ಯಾಸಕರಿದ್ದರು ವಿ. ಕಲ್ಕೂರ ವ್ಯಾಸಾಚಾ ರ್ಯರ ಸ್ಮಾರಕ ಕವಿತಾ ಸ್ಪರ್ಧೆ, ವಿ ಪಂ ಚಂತಪರಾಮಾಚಾರ್ಯರ ಸ್ಮಾರಕ ಭಾಷಣ ಸ್ಪರ್ಧೆ, ಸಂಗೀತ ಸ್ಪರ್ಧೆಗಳಲ್ಲಿ ಉತ್ತೀರ್ಣರಾ ದವರಿಗೆ ಪಾರಿತೋಷ ಹಂಚಲಾಯಿತು ಮ ರುದಿವಸ ರಾತ್ರಿ ಯಕ್ಷಗಾನ ತಾಳ ಕ್ಷೇಪ, ನಾಟಕಗಳಿದ್ದವು

ಉಡುಪಿ ನಗರ ಸಭೆ ಚುನಾವಣೆಯಲ್ಲಿ ಕಾಂಗ್ರೆಸಿಗೆ 20 ಸ್ಥಾನಗಳಲ್ಲಿ 10 ಸ್ಥಾನಗಳು–

ಉಡುಪಿ ನಗರ ಸಭೆಯ 20 ಸ್ಥಾನಗಳಲ್ಲಿ ಕಾಂಗ್ರೆಸಿಗೆ 10 ಸ್ಥಾನಗಳು, ಕಮ್ಯೂನಿಸ್ಟರಿಗೆ 1, ಸ್ವತಂತ್ರರಿಗೆ 8, ಸಂಯುಕ್ತ ರಂಗದವರಿ ಗೆ 0 ಸ್ಥಾನಗಳು ದೊರೆತಿವೆ. ಹತ್ತು ಸ್ಥಾನಗ ಳಿಗೆ ಈ ಮೊದಲೇ ಅವಿರೋಧ ಆಯ್ಕೆ ಹೋ ಗಿವೆ ಉಳಿದ ಹತ್ತು ಸ್ಥಾನಗಳ ಚುನಾವಣೆ ಫಲಿತಾಂಶ ಹೀಗಿದೆ

ಗುಂಡಿಬೈಲು ಕೆ ದಾಸ ನೇರಿಗಾರ (ಕಮ್ಯೂ) 359, ಎಸ್ ವೆಂಕಟ್ರಮಣ ರಾ ವ್, (ಕೊಂ) 139, ಕೆ ಆರ್ ಕಂಜೂ ರು (ಸ್ವ) 135.

ಕುಂಜಿಬೆಟ್ಟು ಪಿ ವಿ. ಆಚಾರ್ಯ (ಕೊಂ) 327, ಕೆ ಮಹಮ್ಮದರಿ (ಕಮ್ಯೂ) 187

ಶೆಂಕಪೇಟೆ ಕೆ ಕೆ ಪೈ (ಕೊಂ) 258, ಅನಂತ ಆಚಾರ್ಯ (ಸ್ವ) 119.

ಶಿರಿಬೀಡು ಯು ಎಸ್ ಇನಾ ಮ್ ಸಾಹೇಬ್ (ಕೊಂ) 213, ಭಾವಜಾ ನ್ ಸಾಹೇಬ್ (ಸ್ವ) 203.

ಮೂಡನಿಡಂಬೂರು ನಿರಲ ಸೆಟ್ಟಿ (ಕೊಂ) 293, ಪಿ ತೀನ ನ್ಯಾಕ್ (ಕಮ್ಯೂ) 185.

ಬನ್ನಂಜೆ ಡಾ ಪಿ ವಿ ವ್ಯಾಸ ರಾ ವ್ (ಕೊಂ) 306, ಗುರುವ ಮರಕಾಲ (ಕಮ್ಯೂ) 164.

ಕನ್ನಿಮೂಲ್ಕಿ ಓ. ಮೈಕಾ (ಸ್ವ) 112, ಬಿ.ಸ್ಸ ಎಸ್ ಎಸ್ (ಸಂ ಕ್ತ) 187.

ಬೈಲೂರು ಎಚ್ ನೆಂಕಟೇಶ ನಾ ಯ್ಕ (ಸ್ವ) 205, ಎ ಮೊಬುನಾಥ ರಾವ್ (ಸಂ.ಕ್ತ) 97

ಕಾಡಬೆಟ್ಟು ಟಿ ಎ ವಾಸುದೇವನ್ (ಕೊಂ 229, ಎನ್ ಸೀತಾರಾಮ ಕಾಮ ತ್ (ಸ್ವ) 128

ಅಜ್ಜರಕಾಡು ಎನ್. ಸೀತಾರಾಮ ಕಾಮತ್ (ಸ್ವ) 171 ಎಸ್ ವಿಠಲ ಶೆಣೈ (ಸಂ ಕ್ತ) 124

ಕಾಂಗ್ರೆಸ್ ಕಮಿಟಿಯ ಅವಿರೋಧ ಆಯ್ಕೆಗಳು—

ಉಡುಪಿ ನಗರಸಭೆ ಕಾಂಗ್ರೆಸ್ ಕಮಿಟಿಗೆ ಈ ಕೆಳಗಿನ ಗಣ್ಯ ರು ಅವಿರೋಧವಾಗಿ ಆಯ್ಕೆ ಹೊಂದಿರುವ ರು ಶ್ರೀಗಳಾದ ಯು ಪದ್ಮನಾಭ ಶೆಟ್ಟಿ, ಕೆ ಪ್ರಭಾಕರ ಶೆ, ಕೆ ರಾಘವೇಂದ್ರ ಪಾಳಿ ಗ, ಕೆ ಗೋವಿಂದರಾಯ ಕಾಮತ, ಕೆ ಹೊನ್ನಯ್ಯ ಶೆಟ್ಟಿ, ಕೊಚ್ಚರ್ಕಾರ್ ಮಂಜುನಾ ಥ ಶೆ, ಎ ಜೆ ಅಲ್ಬುಯು ರಾಮಚಂದ್ರ, ಕೆ ಆನಂದ ಹೆಗ್ಡೆ, ಬಾಳ್ಕಟ್ಟ ಬೀಡು ಕೃಷ್ಣ ಯ್ಯ ಹೆಗ್ಡೆ, ಬಿ ನೂಥಪ ಹೆಗ್ಡೆ, ಕೆ ರಾಮ ಚಂದ್ರ ನಾಯಕ್, ಯು ರಾಘವೇಂದ್ರ ಭಟ್, ಕೆ ನರಸರಿ ಕಾಮತ್, ಟಿ ಜಿ ಎಸ್ ಶೆ, ಯು ಎಸ್ ಇನಾಮ್ ಸಾ ಹೇಬ್, ಟಿ ಆನಂತ ಶೆ, ಎಸ್ ಎಲ್ ಎ, ನಾರಾಯಣ ಸೆಟ್ಟಿ, ಎಸ್ ಅನಂತನಾ ಥ ಹೆಗ್ಡೆ ಬಿಯೋದಿ ರಂಜನಾಸ ಶೆ ಮತ್ತು ಶ್ರೀಮತಿ ಟಿ ಸುಸಿತಾಬ್ರಾ ಆರ್ ಶೆ

ಜಿಲ್ಲಾ ಕಾಂಗ್ರೆಸ್ ಕಮಿಟಿಗೆ—

ಶ್ರೀಗಳಾದ ಕೆ ಆನಂದ ಹೆಗ್ಡೆ ಕೆ ಹೊನ್ನ ಯ್ಯ ಶೆಟ್ಟಿ, ಎ ಜೆ ಅಲ್ಬು ಬಿ ಕೃಷ್ಣಯ್ಯ ಹೆಗ್ಡೆ, ಕೆ ನರಸರಿ ಕಾಮತ್, ಎ ಮಹಾ ನಾಥ ಹೆಗ್ಡೆ ಮತ್ತು ಬಿ ಎ ಸೈ, ಎಸ್ ಎಲ್ ಎ, ಆಯ್ಕೆಯಾಗಿ ತಿಳಿಸಿದ್ದಾರೆ

ಪ್ರಜಾಪ್ರಭುತ್ವದ ಶಿಕ್ಷಣ

ಧೇಬರರಿಂದ ಕಾಂಗ್ರೆಸಿಗರ ಕರ್ತವ್ಯದ ನಿರೂಪಣೆ

ಮೈಸೂರಿನಲ್ಲಿ ಕಾಂಗ್ರೆಸ ಧ್ಯಕ್ಷ ಶ್ರೀ ಧೇಬರರು ಸಂಚರಿಸಿದಾಗ, ಪ್ರಜಾಪ್ರಭು ತ್ವ ಪದ್ಧತಿಯ ಬಗ್ಗೆ ಜನತೆಗೆ ಕಾಂಗ್ರೆಸಿಗ ರು ಶಿಕ್ಷಣವನ್ನು ನೀಡಬೇಕು ಎಂದು ಹೇ ಳಿದರು ರಾಷ್ಟ್ರದ ಸಮಸ್ಯೆಯ ನಿವಾರಣೆ ಯಲ್ಲಿ ಸಾವು ಈಗಾಗಲೇ ಅನೇಕ ಕಠಿಣ ಪರೀಕ್ಷೆಗಳನ್ನು ಗೆದ್ದು ಪ್ರಗತಿಯನ್ನು ಸಾಧಿಸಿದ್ದೇವೆ ಆದರೆ ಸರಕಾರದ ಸಾಧಿ ನೆ ಗಳಿಂದಲೇ ಕೃಷ್ಣಯ್ಯನನ್ನು ಹೊಂದ ಬಾರದು —ಜನತೆಯ ಶಕ್ತ ಹಚ್ಚಬೇಕು ಎಂದು ಒಗೆಯ ಜನತೆಯು ಕಾರ್ಯ ನಿರತವಾಗಬೇಕು— (೧) ಕಾಂಗ್ರೆಸು ಧೇಯವಾಗಿಟ್ಟ ಗಾಂಧಿರವ ವಿದಾಯ ಕ ಕಾರ್ಯಕ್ರಮ, (೨) ಕಮ್ಯೂನಿಸ್ಟ್ ಅನುಸರಿಸುವ ಪರ್ಯಾಯ ಸಂವಿಧಾನ ತ ನಾವು ಜನತೆಯ ರಕ್ಷಣಾ ಕ್ಕಿ ಪ್ರವೃತ್ತಿ ಯನ್ನು ಜಾಗ್ರತಗೊಳಿಸಬೇಕಲ್ಲದೆ, ವಿ ನಾಶಕಾರ್ಯಗಳಿಗೆಮ್ಮೋತ್ಸಾಹಕೊಡಬಾ ರದು ಎಂದು ಶ್ರೀ ಧೇಬರರು ಉಪದೇಶಿ ಸಿದರು

ಆಂಗ್ಲರ ಸಭ್ಯತೆ

ಜನತೆಗೆ ಯೋಗ್ಯ ಶಿಕ್ಷಣ ಕೊಟ್ಟರೆ ಪ್ರಜಾ ಪ್ರಭುತ್ವವು ಎಷ್ಟರ ಮಟ್ಟಿಗೆಯು ಸ್ಸನ್ನು ಸಂಪಾದಿಸುವುದೆಂಬ ಕುರಿತು ಆ ವರು ಬ್ರಿಟನಿನ ಉದಾಹರಣೆಯನ್ನು ಕೊಟ್ಟರು ಜಗತ್ತಿನ ಐದರಲ್ಲಿ ಒಂದಂತೆ ಜನರಿರುವ ಮತ್ತು ಅಂಗ್ಲ ಸಾಮ್ರಾಜ್ಯ ಕ್ಕೆ ರಕ್ಷಾಪ್ರಾಯವಾದ ಭೂಬಲಕ್ಕೆ ಸ್ವಾ ತಂತ್ರ್ಯ ನೀಡಬೇಕೆಂದು ಕೂಲಿಕಾರ ಸರ ಕಾರ ನಿರ್ಧರಿಸಿದಾಗ, ಪಾರ್ಲಿಮೆಂಟಿನಲ್ಲಿ ಬ್ರಿಟಿಸಿನಜನರ ಪ್ರತಿನಿಧಿಗಳುವಿದಾಯಕ ರೀತಿಯಿಂದ ಚರ್ಚೆ ನಡೆಸಿ ತಮ್ಮ ಅಭಿ ಪ್ರಾಯಗಳನ್ನು ಹೊಂಗೆಡವಿದರೆ ಹೊರ ತು, ಮತ ಪ್ರದರ್ಶನ, ಮೇಜಣಿಗೆ, ಕರಿ ಪತಾಕೆ ಹಿಡಿಯುವುದು ಉಪವಾಸದ ಬೆ ದರಿಕೆ ಹಾಕುವುದು, ಭಾಷಣಗಳ ಮೂಲ ಕ ಸಾರ್ವಜನಿಕರನ್ನು ಉದ್ರೇಕಿಸುವುದು —ಇತ್ಯಾದಿ ದಾರಿಗಳನ್ನು ಅವಲಂಬಿಸಿ ಲಿಲ್ಲ ಕೆಲ್ಸ ಕೈಯಿಂದ ಬಾರಕಡಂಥ ದೊಡ್ಡ ಭೂ ಒಗವು ಕೈಜಾರೋಗುತ್ತಿ ರುವುದರ ಚಿಂತೆಗಿಂತಲೂ ಪ್ರಜಾಪ್ರಭು ತ್ವದ ಪರಂಪರೆಯನ್ನ ಕಾಯ್ದುಕೊಂಡು ಹೋಗುವ ಜಾತೆಯೇ ಬ್ರಿಟಿಷರನ್ನು ಕಾ ಡುತ್ತಿತ್ತೆಂದು ಇದರಿಂದ ತಿಳಿಯಬಹುದು ರಾಜ್ಯಗಳ ಪುನರ್ವಿಂಗಡಣೆಯ ಸಮ ಸ್ಯೆ ವಿಚಾರಿಸುವುದಕ್ಕಾಗಿ ನಾವು ಬ್ರಿಟನಿಗೆ ಪಾರ್ಲಿಮೆಂಟಿನ ನಿಯೋಗವನ್ನು ಕಳಿಸಿಕೊಡುವುದಿಲ್ಲ ನಡೆಯುವುದು ಸಪ್ಪಳ ಗಿದ್ದೇವೆಂದು ಶ್ರೀಧೇಬರರು ತಿಳಿಸಿದರು

ಹಿಂದಿಯ ಬೆಳವಣಿಗೆ

ಮೊನ್ನೆ ದೆಹಲಿಯಲ್ಲಿ ಈಚೆಗೆ ಪ್ರಾರಂಭವಾದ ಸಾ ಹಿತ್ಯ ಪ್ರದರ್ಶನವು ಭಿನ್ನ ಭಾಷೆ ಯು ಸಹಿತ ಪ್ರಾಯೋಗಿಕ ಕಲ್ಪನೆಯನ್ನು ನಕಾಶೆಯನ್ನು ಸಾದಿಸಿದ ಪ್ರತಿಯ ಚಿತ್ರ ಗಳನ್ನು ಕೆಲ್ಲಾ ಮುಂದಿಡುವ ಸ್ಪರ್ಧಾನವೊಂದ ನ್ನು ಉದ್ಘಾಟಿಸಿದರು ಅಸಾಕ ಪುಸ್ತಕಗಳ, ನಕಾಶೆಗಳು ಇತ್ಯಾದಿಗಳನ್ನು ಪ್ರದರ್ಶನಕ್ಕಾಗಿ ಮುಂಡಿಸಿದ್ದರು ಹಿಂದಿಯನ್ನ ಶಿಕ್ಷಣ ಮಾ ಧ್ಯಮವಾಗಿ ವಿಶ್ವವಿದ್ಯಾಲಯಗಳು ಬಳಸಬೇ ಕೆಂಬಾ ಹಿಂದಿ ತಿಳಿಯಾತನು ತನ್ನ ಏಕೈ ದೇಶಿಕ ಭಾಷೆಯ ನಲಯದ ಜೊರಗೆ ಇನ್ನ ಹಾರ ನಡೆಸುವುದೇ ಅಸಾಧ್ಯವಾದೀತೆಂದೂ ಉತ್ತರ ಪ್ರದೇಶದ ಗವರ್ನರಾಗಿ ಶ್ರೀ ಮುನ್ಶಿಯವರು ಗುಜರಾತಿ ಸಾಹಿತಿಗಳ ನುಂಗೆ ನೊನ್ನೆ ಹೇಳಿರುವುದನ್ನು ನೋಡಿದರೆ ಹಿಂದಿಯ ನುತ್ತ ಸುವಚಿಕೆಯೊದೀತು. ಚಿತ್ರದಲ್ಲಿ (ಆ ಮೇಜಿ) ರಾಷ್ಟ್ರಪ್ರಸ್ತರು ಭಾಷಣಮಾಡುತ್ತಿರುವುದನ್ನೂ (ಅವರ ಕೆಳಗಿ ನಿಂದ ೫ ಸಾಲಿರ ಮೂಸಾಮಿಗಳ ವತಿಗಿನ ವೀರಿವೀರಿ ಬಹುಮಾನಗಳನ್ನು ಪಡೆದ ಹಿಂದಿ ಗ್ರಂಥಗಳ ವಿಶೇಷ ನೃತ್ಯವನ್ನೂ ನೋಡಲುಮುಮ್ಮ.

ಮದ್ರಾಸ್ ಮುಖ್ಯಮಂತ್ರಿ ಶ್ರೀ ಕಾಮರಾಜನಾಡರರು— ಮದ್ರಾಸಿನ ಮುಖ್ಯಮಂತ್ರಿ ಶ್ರೀ ಕಾಮರಾಜನಾಡರರು ತಾ. 28ರಲ್ಲಿ ಶ್ರೀ ಯು. ಶ್ರೀನಿವಾಸ ಮಲ್ಯ, ಎಮ್. ಪಿ. ಯವರೊಡನೆ ಮಂಗಳೂರಿಗೆ ಆಗಮಿಸಿದರು.

ತಾ. 29ರಲ್ಲಿ ಬೆಳಿಗ್ಗೆ ಮುಖ್ಯ ಮಂತ್ರಿಗಳು ಜ್ಯೋಗೆಯಲ್ಲಿರುವ ಸರಕಾರಿ ಕ್ವಿಕ್ ಫ್ರೀಜಿಂಗ್ ಎಂಡ್ ಕೋಲ್ಡ್ ಸ್ಟೋರೇಜ್ ಪ್ಲಾಂಟ್ (ಹಿಮಗಡ್ಡೆ ತಯಾರಿ ಮತ್ತು ಮೀನು ಸುರಕ್ಷಿತವಾಗಿಡುವ ಕಾರ್ಖಾನೆ)ನ್ನು ಸಂದರ್ಶಿಸಿದರು. ಕರ್ನಾಟಕ ಖೊಲಿಟೆಕ್ನಿಕ್‌ನ್ನು ಭೇಟ್ಟಿಯಾದರು. ಮಧ್ಯಾಹ್ನ ಸೈಂಟ್ ಎಲೋಸಿಯಸ್ ಕಾಲೇಜನ್ನು ಸಂದರ್ಶಿಸಿ, ಅಲ್ಲಿ ಪ್ರಾಣಿಶಾಸ್ತ್ರಲು ವಿಭಾಗದವರು ಏರ್ಪಡಿಸಿದ ಶೈಕ್ಷಣಿಕ ಪ್ರದರ್ಶನವನ್ನು ಪರಿಶೀಲಿಸಿ ತಮ್ಮ ಮೆಚ್ಚುಗೆಯನ್ನು ಪ್ರದರ್ಶಿಸಿದರು.

ಅಂಚೆ ಮತ್ತು ತಂತಿ ಇಲಾಖಾ ಕ್ರೀಡಾ ನುತ್ತು ಸಾಂಸ್ಕೃತಿಕ ಉತ್ಸವದಲ್ಲಿ— ಶ್ರೀ ನಾಡಾರರು ಸಂಜೆ ದಕ್ಷಿಣ ಕನ್ನಡ ಅಂಚೆ ಮತ್ತು ತಂತಿ ಇಲಾಖೆಯವರ ಮೂರನೇ ಕ್ರೀಡಾ ಮತ್ತು ಸಾಂಸ್ಕೃತಿಕ ಉತ್ಸವದ ಉದ್ಘಾಟನೆಯನ್ನು ಮಾಡುತ್ತಾ, ಇಂತಹ ಉತ್ಸವಗಳನ್ನು ಎಲ್ಲಾ ಇಲಾಖೆಯವರೂ ಆಚರಿಸುವುದು ಉಚಿತವೆಂದರು. ಸಮಾರಂಭದ ಅಧ್ಯಕ್ಷತೆಯನ್ನು ಮುನಿಸಿಪಲ್ ಚೇರ್‌ಮೆನ್ ಶ್ರೀ ಕೆ ಸೂರ್ಯನಾರಾಯಣ ಅಡಿಗರು ವಹಿಸಿದ್ದರು. ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ವಿ. ಪಿ. ನಾಯಕರು ಸ್ವಾಗತಮಾತುಗಳನ್ನಾಡಿದರು ಶ್ರೀ ಕೆ. ಆರ್. ಸೆಟ್ಟರು ಶುಭ ಸಂದೇಶಗಳನ್ನೀದಿದರು. ಸಂಗೀತ, ನಾಟಕ ಇತ್ಯಾದಿ ಕಲಾಸಾಂಸ್ಕೃತಿಕ ಕಾರ್ಯಕ್ರಮಗಳಾದ ಬಳಿಕ ಶ್ರೀ ಎಸ್. ಎಸ್. ರಾಯರು ಪಂದನೆಗಳನ್ನಿತ್ತರು. ಸಂಜೆ ಮುಖ್ಯ ಮಂತ್ರಿಗಳು ನೇತ್ರಾವತಿ ಲಾಂಚಿನಲ್ಲಿ ಕುಳಿತು ವಿಹರಿಸಿ, ಬಂದರದ ಪರಿಶೀಲನೆ ಮಾಡಿದರು.

ಪುತ್ತೂರಲ್ಲಿ — ಶ್ರೀ ಕಾಮರಾಜ ನಾಡರರು ಪುಂಗಳೂರಿಗೆ ಬರುವ ಮೊದಲು ಪುತ್ತೂರಿಗೆಆಗಮಿಸಿ ಅಲ್ಲಿಯ ಸ್ಕೌಟ್ಸ್ ವಿಕ್ಟರ್ ಮಯಿಗಿಯರ್.ಹ್ಯಾಸ್ಕೂಲಿನ ನಿ ವರ್ಪಡಿಸಲಾದ ಸಭೆಯಲ್ಲಿ ಪುತ್ತೂರಲ್ಲಿ ಕಾರ್ಮೇಲ ಆಗತ್ಯವಾಗಿ ಸ್ಥಾಪಿಸಬೇಕೆಂದು ಶ್ರೀ ಪ್ರಾ. ಎ. ಪತ್ರಿಪ್ಪೋ,ರೆಸರು ಆರ್ಪಿಸಿದ ಮನವಿಯನ್ನು ಸ್ವೀಕರಿಸಿದರು. ಪುತ್ತೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಪರವಾಗಿ ಶ್ರೀ ಎ ಭೀಮ ಭಟ್ಟರೂ, ಪುತ್ತೂರು ಪಂಚಾಯತದ ಪರವಾಗಿ ಶ್ರೀ ಬಿ. ಚಿದಾನಂದ ರಾಯರೂ ಮನವಿಗಳನ್ನರ್ಪಿಸಿದರು ಮಾನಪತ್ರಗಳಿಗೆ ಉತ್ತರವಿಯತ್ತಾ, ಕಾಲೇಜು ಸ್ಥಾಪಿಸುವರೆ ಆಗತ್ಯವುಳ್ಳ ಕಟ್ಟೋಣ ಮೊದಲಾದ ಸಾಕಾರ್ಯಗಳನ್ನು ಒದಗಿಸಿಕೊಂಡು ಜಾಣ ಸಂಗ್ರಹ ನಾಡಿದಲ್ಲಿ ಸರಕಾರವು ಮುಂಜೂರಾತಿಯನ್ನು ಕೊಡಬಹುದಾಗಿ ಭರವಸೆಯಿತ್ತರು.

ಕನ್ನಡಿಗರ ಮನವಿ:— ಕಾಸರಗೋಡು ತಾಲೂಕಿನ ಚಂದ್ರಗಿರಿಯ ಉತ್ತರ ಪ್ರದೇಶಗಳ ಹಲವು ಸಂಘ ಸಂಸ್ಥೆಗಳ ಪ್ರತಿನಿಧಿಗಳೂ, ಶಾಸನ ಸಭಾ, ಜಿಲ್ಲಾ ಬೋರ್ಡು ಸದಸ್ಯರೂ ಕಾಸರಗೋಡಿನ ಈ ಪ್ರದೇಶವನ್ನು ಕರ್ನಾಟಕದಲ್ಲಿ ಉಳಿಸಬೇಕೆಂದು ವಿನಂತಿಸಿ ಏಳತ್ತಕ್ಕೂ ಮಿಕ್ಕಿ ಮನವಿಗಳನ್ನು ಸ್ವೀಕರಿಸಿದರು. ಇದೂ ಅಲ್ಲದೆ ಕಾಸರಗೋಡಿನ ವಿದ್ಯಾರ್ಥಿ ವಿದ್ಯಾರ್ಥಿನಿಯರೂ, ಜನ ಪ್ರತಿನಿಧಿಗಳೂ ಸೇರಿ ಸುಮಾರು 500 ನಂದಿ ರೈಲಿನಲ್ಲಿ ಮಂಗಳೂರಿಗೆ ಬಂದು ರೈಲ್ವೆ ನಿಲ್ದಾಣದಿಂದ ಒಂದು ಬೃಹತ್ ಜಾಥಾ ಹೊರಡಿಸಿ, 'ಕಾಸರಗೋಡು ಕನ್ನಡ ನಾಡು' ಇತ್ಯಾದಿ ಘೋಷಣೆಗಳನ್ನು ಮಾಡುತ್ತಾ ಮೆರವಣಿಗೆಯಿಂದ ಕಲ್ಪಿಗುಡ್ಡೆಯ ಬಳಿಯಲ್ಲಿರುವ ಮಿರಾಜ್‌ಕಾರರ ಬಂಗ್ಲೆಗೆ ಹೋಗಿ ಮುಖ್ಯಮಂತ್ರಿ ಶ್ರೀ ನಾಡರರನ್ನು ಕಂಡು ತಮ್ಮ ಸುಸಮಯಿಗಳನ್ನು ಆಸಿಸಿದರು ಪುನಮನಿಗಳಿಗೆ ಉತ್ತರವಿಯತ್ತಾ, ತಾನು ತನ್ನಿಂದಾದ ಪ್ರಯತ್ನವನ್ನು ಖಂಡಿತ ಮಾಡುತ್ತೇನೆಂದೂ, ಜನತೆ ಉದ್ರೇಕ ಗೊಳ್ಳದೆ ಶಾಂತ ರೀತಿಯಿಂದ ವರ್ತಿಸಬೇಕೆಂದೂ ಹೇಳಿದರು.

ಶ್ರೀ ಭೇಬಾರರಿಗೆ ಕಾಸರಗೋಡಿನ ಪರವಾಗಿ ಮನವಿ— ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಭೇಬಾರರಿಗೆ ಕಾಸರಗೋಡಿನ ಉತ್ತರ ಭಾಗವನ್ನು ಕರ್ನಾಟಕದಲ್ಲೇ ಉಳಿಯಗೊಡಿಸಬೇಕೆಂದು ವಿನಂತಿಸುವ ಮನವಿಯನ್ನು ತಾ. 29ರಲ್ಲಿ ಭದ್ರಾವತಿಯಲ್ಲಿ ತಾ. 29ರಲ್ಲಿ ಬೆಳಿಗ್ಗೆ ಡಾ. ಯು. ಪಿ. ಮಲ್ಯ, ಶ್ರೀಗಳಾದ ಎಮ್. ಉಮೇಶ ರಾವ್, ಕೆ. ಕೆ. ಸೆಟ್ಟಿ ಮತ್ತು ಗಂಗಾಧರ ರೈಗಳವರು ಅರ್ಪಿಸಿದರು. ಶ್ರೀ ದೇಬಾರರು ಆ ಬಗ್ಗೆ ತಾನು ಪರಿಶೀಲಿಸುವುದಾಗಿ ತಿಳಿಸಿದರಂತೆ.

ಶ್ರೀಮತಿ ಜಿ. ಭಾನುಮತಿ ಕಾರಾಟ್:— ದ. ಕ. ಜಿಲ್ಲೆಯ ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ ಮಹಿಳೆಯರಲ್ಲಿ ತೀಸಿಸ್ ಬರೆದು ಎಸ್. ಎ, ಪರೀಕ್ಷೆಯಲ್ಲಿ ಮೊದಲನೆಯ ತರಗತಿಯಲ್ಲಿ ಮೊದಲಿ 10ನಿ ಪಾಸಾದವರಲ್ಲಿ **ಶ್ರೀಮತಿ ಜಿ. ಭಾನುಮತಿ ಕಾರಾಟ್,** ಎಮ್. ಎ. ಎಲ್. ಟಿ., ಆವರೇ ಮೊದಲನೆಯವರು.

ಜಿಲ್ಲೆಯಲ್ಲಿ ಶಾರದಾಪೂಜೆ ಸಮಾರಂಭಗಳು

ಕೆಂಜೂರು— ಸ್ಥಳೀಯ ವಿಶೇಷರ ಹಾ. ಎ. ಶಾಲೆಯ ಶಾರದಾಪೂಜಾ ಸಮಾರಂಭವು ಕಳದ ತಾ. 21ರಲ್ಲಿ ಶ್ರೀ ಮೋನಪ್ಪ ಸಿಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾಮಕ್ಕಳು ತಮ್ಮ ಕುಶಲ ಚಟುವಟಿಕೆಗಳನ್ನು ಪ್ರದರ್ಶಿಸಿದರು.

ನೀಲಾವರ— ಕಳದ ತಾ. 21ನಲ್ಲಿ ನೀಲಾವರ ಶ್ರೀ ಮಹಿಷ ಮರ್ದಿನೀ ಹಾ. ಎ ಶಾಲೆಯಲ್ಲಿ ಹೆತ್ತವರೆ ಕೂಟವನ್ನೊಳಗೊಂಡ ಶಾರದಾಪೂಜಾ ಸಮಾರಂಭವು ಕುಂಜಾಲು ಪಂಚಾಯತ ಬೋರ್ಡು ಅಧ್ಯಕ್ಷ ಡಾ. ಎ. ಸುಬ್ಬ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲಾ ಬಾಲಕಿಯರು ಶಾರದಾ ಸ್ತುತಿ ಗೀತೆಯನ್ನು ಹಾಡಿದರು. ಶಾಲಾ ಸಂಚಾಲಕ ಶ್ರೀ ಎನ್. ಅಣ್ಣಪ್ಪ ಭಟ್ಟರ ಸೂಚನಾನುಗಳಾಗಿ ಶಾಲಾ ಮುಖ್ಯೋಧ್ಯಾಪಕ ಶ್ರೀ ವಾರಿಂಬಳ್ಳಿ ಯವರಿಂದ ಬಾಲಾ ಪರಿಚಿ ಓದಲ್ಪಟ್ಟತು. ಲೇಜಿಂ ಮೊದಲಾದ ಆಟಗಳಾಗಿ 'ಸ್ವಯಂಗಾರಿ ಸ್ವಯಂವರ' ಎಂಬ ಯಕ್ಷಗಾನ ನಾಟಕ ಅಭಿನಯಿಸಲ್ಪಟ್ಟತು. ಶ್ರೀಗಳಾದ ಕೆ. ವಿ. ಕಲ್ಯಾರ್ ಮತ್ತು ಕೆ. ಎಸ್. ಕಲ್ಯಾರರು ಕಾಲೋಚಿತ ಮಾತುಗಳನ್ನಾಡಿದರು.

ನಿಂಜೂರು:— ಸ್ಥಳೀಯ ಶ್ರೀ ವಿನೇಕಾನಂದ ಸೇವಾ ಸಂಘದ ಕಡೆಯಿಂದ ದಸರಾ ಸಮಾರಂಭವು ತಾ. 21ರಲ್ಲಿ ಕೆ. ಪ್ರೊವಿಡೇಜ್ ಗ್ಯಾಹ್ ಶ್ರೀ ರಾಘವೇಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಭಜನೆ ಹರಿಕಥೆ ಮೊದಲಾದ ಕಾರ್ಯಕ್ರಮಗಳಾದುವು. ಮರುದಿನ ತಾ. 22ರಲ್ಲಿ ಶ್ರೀ ಶ್ರೀಕಾಂತ ಆಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿದ ಸಾಮಾಜಿಕ ಸಭೆಯಲ್ಲಿ ಶ್ರೀಗಳಾದ ಕೆ. ಕೆ. ಪೈ ಮತ್ತು ಎಸ್. ಗಣಪಯ್ಯ ಸೆಟ್ಟರು ಪ್ರಾಚೀನ ಕಾವ್ಯ ವಿಮರ್ಶೆಯನ್ನು ಮಾಡಿದರು. ಶ್ರೀ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ 'ಪಂಚವಟಿ ಮತ್ತು ಸಾಲಿವಧೆ' ಯಕ್ಷಗಾನಕೂಟ ಜರಗಿತು.

ಸೂಡ:— ಸ್ಥಳೀಯ ಬೋರ್ಡು ಶಾರೆಯಲ್ಲಿ ತಾ. 26ರಲ್ಲಿ ಶಾರದಾ ಪೂಜಾ ಸಮಾರಂಭವು ಸಾಂಗವಾಯಿತು. ಪೋಸ್ಟ್ಮಾ ಮಾಸ್ತರ್ ವಿಠಲ ಶಾನುಭೋಗರು ಮಕ್ಕಳಿಗೆ ತಿಂಡಿ ಹಂಚಿದರು.

ಕಾರ್ಕಳ— ದಸರಾ ಮಹೋತ್ಸವದ ಅಂಗವಾಗಿ ತಾ. 26ರಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಉಮೆಸಿಯ ಶ್ರೀ. ಟಿ. ಎ. ಪೈ, ಎಮ್ ಎಲ್. ಎ, ಆವರು ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ, ಭಾಷಾವಾರು ಪ್ರಾಂತ ವಿನರ್ನಾಡಿಂದ ನಮ್ಮ ನೆಲವು ಕ್ಷಗ್ರ ಭೂಮಿಯಾಗುವುದೆಂದು ಯಾರಾದರೂ ಅಶಿಸುವಾದರೆ ಅವರು ಬಹಳ ಮೋಸ ಹೊಂದಬೇಕಾದೀತೆಂದೂ ಪ್ರಚಲಿತ ಸಮಸ್ಯೆಗಳು ಸುಲಭವಾಗಿ ಬಿಡಿಸಲ್ಪಡುವುದರ ಬಪಲಿಗೆ ಅವು-ಳ ಜತೆಯಲ್ಲಿ ಯೊಸ ಸಮಸ್ಯೆಗಳು ಸೇರಿಕೊಳ್ಳುವ ಭಯವೂ ಇದೆಯೆಂದರು. ಶ್ರೀ. ಕೆ. ರಾಮಯ್ಯ ಪುರಾಣಿಕರು ಅಧ್ಯಕ್ಷರ ಪರಿಚಯ ಮಾಡಿದರು. ಉತ್ಸವ ಸಮಿತಿ ಕಾರ್ಯದರ್ಶಿ ಶ್ರೀ. ಕೆ. ರಾಘವೇಂದ್ರರಾಯರು ಧನ್ಯವಾದಗಳನ್ನಿತ್ತರು.

ಪೆರಂಪಳ್ಳಿ— ಶ್ರೀ. ಪಿ. ಎಸ್. ರಾಮರಾಯರ ಮನೆಯಲ್ಲಿ ತಾ. 14ರಲ್ಲು ದಸರಾ ಆಚರಣೆಯ ಅಂಗವಾಗಿ ಶ್ರೀ. ಕೆನ್ನಮೊಲ್ಲಿ ಅನಂತಪದ್ಮನಾಭ ಭಟ್ಟರಿಂದ 'ಭೀಷ್ಮ ಪ್ರತಿಜ್ಞೆ' ಎಂಬ ಹರಿಕಥಾ ಕಾಲಕ್ಷೇಪವು ಯಶಸ್ವಿಯಾಗಿ ಜರಗಿತು. ಕೊನೆಯಲ್ಲಿ ಶ್ರೀಪಡಿ ಭಟ್ಟರಿಂದ ದೈತ್ಯ ಜನ್ಮವೆಂಬ ಪರಿಕತೆಯೂ ಜರಗಿತು.

ಬಡಾನಿಡಿಯೂರು — ತಾ. 23ರಲ್ಲಿ ಬಡಾನಿಡಿಯೂರು ಕರ್ನಾಟಕ ಸಂಘದ ನಾಡ ಪಬ್ಬವ ಶ್ರೀ ಗೋವಿಂದ ಉಡುಪರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಬಾಬು ರಾಯರು ಸ್ವಾಗತಭಾಷಣ ಮಾಡಿದರು. ಶ್ರೀಗಳಾದ ಬನ್ನಂಜೆ ರಾಮಾಚಾರ್ಯ, ದಿವಾಕರಾಂತ ತಂತ್ರಿ ಮತ್ತು ಶ್ರೀಪತಿ ರಾಯರು ಭಾಷಣವಿತ್ತರು. ಬಳ್ಳಾರಿ, ಹಂಪೆ, ಶಿರಗುಪ್ಪ ಪ್ರದೇಶಗಳನ್ನು ಕರ್ನಾಟಕದಲ್ಲೇ ಇರಗೊಡಿಬೇಕೆನ್ನುವ, ಆಂತೆಯೇ ಕಾಸರಗೋಡು ಕರ್ನಾಟಕದಲ್ಲೆ ಉಳಿಯಬೇಕೆನ್ನುವ ಕುರಿತು ನಿರ್ಣಯಗಳಾದುವು. ಶ್ರೀ ಪದ್ಮನಾಭ ಆಚಾರ್ಯರಿಂದ ಹರಿಕಥಾ ಕಾಲಕ್ಷೇಪನಾಗಿ ಮಂಗಲ ಗೀತೆಯೊಂದಿಗೆ ಸಭಾಂತ್ಯವಾಯಿತು.

ಕಾಪು ಶಿಶು ವಿಹಾರ ಉದ್ಘಾಟನೆ

ಸ್ಥಳೀಯ ಅಭಿವೃದ್ಧಿ ಯೋಜನೆ ಮತ್ತು ಕಾಪು ಪಂಚಾಯತ ಬೋರ್ಡು ವತಿಯಿಂದ ರಚಿಸಲಾದ ಶಿಶು ವಿಹಾರನನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ತಾ. 26ರಲ್ಲು ಉದ್ಘಾಟಿಸುತ್ತಾ, ಚಿಕ್ಕ ಮಕ್ಕಳು ಇದರ ಸಮುಪಯೋಗವನ್ನು ಪಡೆದು ದೃಢಕಾಯರಾಗಿ ಬೆಳೆದು ಬರಬೇಕೆಂದು ಆಶಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಟಿ. ಎ ಪೈ, ಎಮ್. ಎಲ್. ಎ. ಅವರು ಸರಕಾರವು ಜನಹಿತಕ್ಕಾಗಿ ಕೈಕೊಂಡ ಅನೇಕ ಅಭಿವೃದ್ಧಿ ಯೋಜನೆಗಳ ಕುರಿತು ಪ್ರಸ್ತಾಪಿಸಿ, ಸ್ಥಳೀಯ ಪುಟ್ಟಕ್ಕಳು ಈ ವಿಹಾರ ಕೇಂದ್ರದ ಉಪಯೋಗವನ್ನು ಹೆಚ್ಚು ಹೆಚ್ಚಾಗಿ ಪಡೆದು ಆರೋಗ್ಯವಂತರಾಗಬೇಕೆಂದು ಅಪೇಕ್ಷಿಸಿದರು. ಕಾಪು ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಕೆ. ಮುಕುಂದ್ರಾಯ ಶೆಣ್ಯೆಯವರು ಧನ್ಯವಾದಗಳನ್ನಿತ್ತರು.

ಕಡೆಕಾರು— ಸ್ಥಳೀಯ ಶ್ರೀ ಮಹಾಗಣಪತಿ ಪ್ರಾಥಮಿಕ ಶಾಲೆಯಲ್ಲಿ ಹಳೆವಿದ್ಯಾರ್ಥಿ ಸಂಘದ ವತಿಯಿಂದ ತಾ 29ರಲ್ಲು ಡಾ. ಕೆ. ಮೋಹನ್ ದಾಸ್ ಸೈಗಳ ಅಧ್ಯಕ್ಷತೆಯಲ್ಲಿ ಸಂಘದ ಕಾರ್ಯದರ್ಶಿ ಶ್ರೀ ಕೆ. ಆನಂದ ಗಾಣಿಗರ ಪರಿಚಯ ಭಾಷಣ ಹಾಗು ಶ್ರೀಳಾವಿ ಕೆ. ಪದ್ಮನಾಭ ಭಟ್ಟ್, ಎಸ್. ಎಸ್. ಸರ್ಕಾಳ್ ಮತ್ತು ಉಡುಪಿ ಉತ್ತರ ಶ್ರೇಣಿಯ ಪರೀಕ್ಷಾಧಿಕಾರಿಗಳಾದ ಶ್ರೀ ಬಿ. ವಿಂಟೋ ಇವರ ಸಮಯೋಚಿತ ಮಾತುಗಳಿಂದಲೂ ಮನೋರಂಜನೆಯ ವಿವಿಧ ಕಾರ್ಯಕ್ರಮಗಳಿಂದಲೂ ದಸರಾ ಪೂಜೆಯನ್ನು ಸಾಂಗವಾಗಿ ನೆರವೇರಿಸಲಾಯಿತು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives At whatever stage we welcome your association with the POPULAR.

THE POPULAR INSURANCE CO.,LTD.

"POPULAR BUILDINGS" **MANGALORE-1**

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ಪತ್ರಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:— (1) ಉಡುಪಿ (2) ಮರಾತ ಗಲ್ಲಿ, ಹುಬ್ಬಳ್ಳಿ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಪದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕತೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ. ರೂ. 5/- ಸ್ಪೆಶಲ್ ರೂ.8/-

Mrs. **P. DEVEE,** F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ಯಾಕ್ಸರು: ಶಹಾಕಂಪೆನಿ, ಮಂಗಳೂರು

ಮಂಗಳೂರು

ವಿಜಯಾ ಬೇಂಕಿನ 'ಸೇಫ್ ಡಿಪೋಜಿಟ್ ವಾಲ್ಟ್' ಮತ್ತು ಹೊಸ ಕಟ್ಟಡ ಉದ್ಘಾಟನೆ— ಕೊಡಗು ಮತ್ತು ಮದ್ರಾಸು ಮಂತ್ರಿಗಳಿಂದ

ಮಂಗಳೂರು ವಿಜಯಾ ಬೇಂಕಿನ 'ಸೇಫ್ ಡಿಪೋಜಿಟ್ ವಾಲ್ಟ್' (ಅಮೂಲ್ಯ ವಸ್ತು-ಳ ಜೋಪಾಸನಾಲಯ) ನ್ನು ಕೊಡಗಿನ ಗೃಸ ಮಂತ್ರಿ ಶ್ರೀ. ಕೆ. ಮಲ್ಲಪ್ಪನವರೂ, ಬ್ಯಾಂಕಿನ ಪ್ರಧಾನ ಕಚೇರಿಯಾಗಿ ಬಾಡಿಗೆಯ ರಸ್ತೆಯ ಬಳಿ ಕಟ್ಟಿಸಿರುವ ಹೊಸ ಕಟ್ಟಡವನ್ನು ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟರು ತಾ. 26ರಂದು ಸಂಜೆ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ. ಬಿ. ನಂಜಯ್ಯ ಹೆಗ್ಡೆಯವರ ತೈಲಚಿತ್ರವನ್ನು ಶ್ರೀ. ಮಲ್ಲಪ್ಪನವರೂ, ಶ್ರೀ. ಎಸ್. ಎಮ್. ಅಡ್ಯಂತಾಯರ ತೈಲಚಿತ್ರವನ್ನು ಶ್ರೀ. ಎ. ಬಿ. ಶೆಟ್ಟರೂ ಅನಾವರಣ ಮಾಡಿದರು.

ಆರಂಭದಲ್ಲಿ ಚೀರ್‌ಮೇನರಾದ ಶ್ರೀ ಕೆ. ಸುಂದರರಾಮಶೆಟ್ಟರು ಸ್ವಾಗತಭಾಷಣಮಾಡುತ್ತಾ ಮುಖ್ಯ ಅತಿಥಿಗಳಾದ ಮಂತ್ರಿಗಳಿಬ್ಬರು ಮತ್ತು ಶ್ರೀಗಳಾದ ಬಿ. ಮಂಜಯ್ಯ ಹೆಗ್ಡೆ ಮತ್ತು ಎಸ್. ಎಮ್. ಅಡ್ಯಂತಾಯರು ಬೇಂಕಿಗೆ ಸಲ್ಲಿಸಿದ ಸೇವೆಗಳನ್ನು ಪ್ರಸ್ತಾಪಿಸಿದರು. ಬೇಂಕಿನ ಸುಪರಿಂಟೆಂಡೆಂಟ್ ಶ್ರೀ ಪಿ. ಜಯರಾಮ ಶೆಟ್ಟರು ಸವಗಾರಂಭಕ್ಕೆ ಶುಭವನ್ನು ಕೋರಿಬಂದ ಸಂದೇಶಗಳನ್ನೊಪ್ಪಿಸಿದರು. ಮಾನ್ಯ ಶ್ರೀ ಮಲ್ಲಿಕ್ಕನವರು ತಮ್ಮ ಉದ್ಘಾಟನಾ ಭಾಷಣದಲ್ಲಿ 'ದರೋಡೆಕೋರರು ಮತ್ತು ದರೋಡೆಗಳು ಹೆಚ್ಚುತ್ತಲಿರುವ ಈ ಕಾಲದಲ್ಲಿ ಬೇಂಕುಗಳಲ್ಲಿ 'ಸೇಫ್ ಡಿಪೋಜಿಟ್ ವಾಲ್ಟ್'ಗಳು ಇರುವುದರಿಂದ ಜನರ ಅಮೂಲ್ಯ ವಸ್ತುಗಳನ್ನು ಭದ್ರತೆಯಲ್ಲಿಡಲು ಸಾಧ್ಯವಾಗುವುದು ನಮ್ಮ ದೇಶದಲ್ಲಿ ಇಂತಹ ವ್ಯವಸ್ಥೆಯು ಇನ್ನೂ ಹೆಚ್ಚಾಗಿ ಆಗತ್ಯವಿದೆ. ರಾಷ್ಟ್ರೀಯ ಜೀವನ ಮಟ್ಟವನ್ನು ಏರಿಸುವ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲಿರುವ ಅಭಿವೃದ್ಧಿ ಯೋಜನೆಗಳಲ್ಲಿ ಬೇಂಕುಗಳು ವಹಿಸಬೇಕಾದ ಪಾತ್ರ ಮಹತ್ವದ್ದಿದೆ. ಸ್ಟೇಟ್ ಬೇಂಕಿನವರು ಗ್ರಾಮಾಂತರಗಳಲ್ಲಿ ಶಾಖೆಗಳನ್ನು ತೆರೆಯಿ ವಿಸ್ತರಿಸುವುದರಿಂದಾಗಿ ಇತರ ವಾಣಿಜ್ಯ ಬೇಂಕುಗಳ ವ್ಯವಹಾರಗಳಿಗೆ ಧಕ್ಕೆ ಬರುವ ಸಂಭವವಿಲ್ಲ ಎಂದು ಹೇಳಿದರು. ಶ್ರೀ ಮಂಜಯ್ಯ ಹೆಗ್ಡೆಯವರ ಕುರಿತಾ ಮಾತನಾಡುತ್ತಾ, ಅವರು ಬೇಂಕಿನ ಅಭಿವೃದ್ಧಿಗಾಗಿ ತುಂಬಾ ದುಡಿದಿದ್ದಾರೆ ಎಂದರು.

ಶ್ರೀ ಎ. ಬಿ. ಶೆಟ್ಟರು ತಮ್ಮ ಭಾಷಣದಲ್ಲಿ ಈ ರೀತಿಯಾಗಿ ಹೇಳಿದರು. 'ಭಾರತದಂತ ಬಡ ನುತ್ತು ಹಿಂದುಳಿದ ದೇಶದಲ್ಲಿ ಆರ್ಥಿಕಾಭಿವೃದ್ಧಿ ಯೋಜನೆಯು ಜನರ ಜೀವನ ಮಟ್ಟವನ್ನು ಏರಿಸುವ ಕಾರ್ಯದ ಜೀವಾಳವಾಗಿದೆ. ದೇಶದ ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿ ಮತ್ತು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಸರಕಾರವು ಮಾಡುತ್ತಿರುವ ಪ್ರಯತ್ನ ಗೂಡುತ್ತಲಿದೆ, ವ್ಯವಸ್ಥಿತ ಅಭಿವೃದ್ಧಿ ಯೋಜನೆಗಳಿಗೆ ಬೇಕಾದ ಹಣವು ಜನತೆಯ ಉಳಿತಾಯದಿಂದಲೇ ಒದಗಬೇಕಾಗಿದೆ. ಈ ರೀತಿಯ ಉಳಿತಾಯಗಳನ್ನು ಗೂಡುವರೆ ಪ್ರೋತ್ಸಾಹ ನೀಡುವುದರಲ್ಲಿ ನುತ್ತು ಆವುಗಳನ್ನು ದೇಶದ ಕೃಷಿ ಮತ್ತು ಕೈಗಾರಿಕಾ ಅಭಿವೃದ್ಧಿ ಯೋಜನೆಗಳಲ್ಲಿ ಉಪಯೋಗಿಸುವಂತೆ ಮಾಡುವುದರಲ್ಲಿ ಭದ್ರವಾದ ನುತ್ತು ದಕ್ಷ ಕಾರ್ಯ ನಿರ್ವಹಣೆ ನೀಡುತ್ತಿರುವಲ್ಲಿ ಬೇಂಕುಗಳು ಮಹತ್ವದ ಪಾತ್ರ ವಹಿಸುತ್ತಿವೆ. ಜಿಲ್ಲೆಯೊಳಗೂ ಹೊರಗೂ ಬ್ಯಾಂಕಿಂಗ್ ವ್ಯವಹಾರ ವಿಸ್ತರಿಕೆಯಲ್ಲಿ ವಿ. ಕೆ. ಜಿಲ್ಲೆಯು ತುಂಬಾ ಪ್ರಗತಿ ಸಾಧಿಸಿದೆ. ಇಲ್ಲಿ ಮೂರು ಶೆಡ್ಯೂಲ್ಡ್ ಮತ್ತು ಒಂಭತ್ತು ನೋನ್ ಶೆಡ್ಯೂಲ್ಡ್ ಜಾಯಿಂಟ್ ಸ್ಟಾಕು ಬೇಂಕುಗಳಿವೆ. ಈ ಎಲ್ಲಾ ಬೇಂಕುಗಳೂ ಕಳೆದ ಮಹಾ ಯುದ್ಧದ ಮೊದಲೇ ಸ್ಥಾಪಿತವಾಗಿದ್ದು, ಕಾಲ ಪರೀಕ್ಷೆಯಲ್ಲಿ ದೃಢ ಎಂ ಗಿ ಬೆಳೆದು ಬಂದಿವೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಬೇಂಕುಗಳಿಗೆ ಯಾವುದೂ ರಾಷ್ಟ್ರದಲ್ಲಿ ಮಾತ್ರ ಅವು ಅಪೇಕ್ಷಿತ ಸಂಖ್ಯೆಯಲ್ಲಿರುವುದಿಲ್ಲ. ಹಿಂದೂಸ್ಥಾನದಲ್ಲಿ 70,000 ಜನತೆಗೆ-ಒಂದರಂತೆಯೂ ಬ್ರಿಟಿಸಿನಲ್ಲಿ 4500 ಜನ ಸಂಖ್ಯೆಗೊಂದರಂತೆಯೂ ಬೇಂಕುಗಳಿವೆ. ವಿಸ್ತೀರ್ಣದ ಸರಾಸರಿ ಸಂಖ್ಯೆ ಕೂಡಾ ಹಿಂದೂಸ್ಥಾನದಲ್ಲಿರುವುದಕ್ಕಿಂತ ತಲಾ ಹನ್ನೆರಡು ಪಾಲು ಜಾಸ್ತಿ ಜನಸಾನಲ್ಲಿ ಇದೆ. ಬ್ರಿಟಿಸಿನಲ್ಲಿ 60ಕ್ಕೂ ಅ ಮೇರಿಕಾವಲ್ಲಿ 900 ಪಾಲಷ್ಟು ಇರುವುದು. ಆದುದರಿಂದ ಹಿಂದೂಸ್ಥಾನದಲ್ಲಿ ಬೇಂಕಿಂಗ್ ವಿಸ್ತರಣೆಯ ಆವಶ್ಯಕತೆ ತುಂಬಾ ಇದೆ.

ಚಿಕ್ಕ ಸ್ವರೂಪಿನ ಬೇಂಕುಗಳನ್ನು ಒಟ್ಟು ಗೂಡಿಸಿ ಪ್ರಾದೇಶಿಕ ಬೇಂಕುಗಳನ್ನಾಗಿ ಮಾಡಿ ತನ್ಮೂಲಕ ಬೇಂಕುಗಳ ಭದ್ರತೆಯನ್ನು ರೂಪುಗೊಳಿಸಿ ಬೇಂಕಿಂಗ್ ಅಭಿವೃದ್ಧಿಯ ಕಡೆಗೆ ಗಮನಕೊಡಬೇಕೆಂದು ಅನೇಕ ಜನ ಬ್ಯಾಂಕರಿ ಮನುಷ್ಯರು ಅಭಿಪ್ರಾಯಪಡುತ್ತಾರೆ. ಈ ಬಗ್ಗೆಯೂ ಏನಾ ಕೊಡಬೇಕಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಬೇಂಕಿಂಗ್ ನುತ್ತು ಸಾಲದ ಸಾಕಯ್ಯಗಳಲ್ಲಿದ್ದಿರುವುದು ಭಾರತದ ಆರ್ಥಿಕ ರಚನೆಯಲ್ಲಿನ ಒಂದು ದೊಡ್ಡ ಕೊರತೆಯೆಂದು ರಿಜರ್ವ್ ಬೇಂಕಿನ ಗವರ್ನರ್ ಶ್ರೀ ಬಿ. ರಾಮರಾಯರು ಹೇಳಿರುವರು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮಗಳಲ್ಲಿ ಜನರಿಗೆ ಸಾಲ ಮತ್ತಿತರ ಕೌಕಯ್ಯಗಳನ್ನು ಒದಗಿಸಲು ಹಲವು ಹೊಸ ಸಹಕಾರಿಯೋಜನೆಗಳು ರೂಪುಗೊಳ್ಳುತ್ತಿವೆ. ಆದರೆ ಸಹಕಾರಿ ಪದ್ಧತಿಗಿಂತಲು ಮಿಕ್ಕಿಯಾಗಿರುವುದರಿಂದ, ಸ್ಟೇಟ್ ಬೇಂಕನ್ನು ಸರಕಾರ ಸ್ವಾಧೀನಪಿಸಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಖೆಗಳನ್ನು ತೆರೆಯುವ ಬ್ರಹತ್ ಯೋಜನೆಯಿಂದು ಸ್ಟೇಟ್ ಬೇಂಕಿನ ಮುಂದಿದೆ. ಈ ಯೋಜನೆಗಳಲ್ಲಿ ವಾಣಿಜ್ಯ ಬೇಂಕುಗಳೂ ಬಯಸುಮೃವಾದ ಪಾತ್ರವನ್ನು ವಹಿಸಬೇಕಾಗಿದೆ. ಗ್ರಾಮಾಂತರಗಳಿಗೆ ಸಾಲ ಒದಗಿಸಿ, ಆಲ್ಲಿನ ಅಭಿವೃದ್ಧಿ ಸಾಧಿಸಿರುವ ಕಾರ್ಯದಲ್ಲಿ ಸಹಕಾರಿಯುಕ್ತ ನೆರವು ನೀಡಬೇಕಾಗಿದೆ.ಗ್ರಾಮಾಂತರ ಬೇಂಕಿಂಗ್ ವ್ಯವಸ್ಥೆಯ ಮೂಲಸೂರುಪರ ಲ್ಲೂಬ್ಬರಾದ ಡಾ. ಟಿ. ಎಸ್. ಎ. ಪೈಗಳ ತಮ್ಮ ಸಂದೇಶದಲ್ಲಿ ಒತ್ತಿ ಹೇಳಿರುವಂತೆ ಬೇಂಕಿಂಗ್ ನ್ಯವಸಾರದಲ್ಲಿಅ ಸಂಸ್ಥೆಗಳಆಡಳಿತಾಧಿ ಕಾರಿಗಳಲ್ಲಿ ಕಾರ್ಯದಕ್ಷತೆ ಮತ್ತು ವಿಶ್ವಾಸಾರ್ಹತೆ ಆತ್ಯಗತ್ಯವಾಗಿದೆ' ಎಂದರು. ಶ್ರೀ ಎಸ್ ಎಮ್. ಅಡ್ಯಂತಾಯರ ಕಾರ್ಯ ಕುಶಲತೆಯನ್ನು ಪ್ರಶಂಸಿಸಿದರು. ಬೇಂಕಿನ ಡೈರೆಕ್ಟರ್ ಶ್ರೀ ಕೆ. ಎಮ್. ಹೆಗ್ಡೆ ಯವರು ಧನ್ಯವಾದಗಳನ್ನರ್ಪಿಸಿದರು.

ಮಂಗಳೂರು ನಗರಸಭಾ ಚುನಾವಣೆ— ಮಂಗಳೂರು ನಗರಸಭೆಯ 31 ಮತದಾರ ಕ್ಷೇತ್ರಗಳಿಂದ ಆರಿಸಬೇಕಾದ 33 ಸ್ಥಾನಗಳಿಗೆ ದಿನಾಂಕ 27ರಂದು ಮತದಾನ ನಡೆಯಿತು. ಸೇಕಡಾ 65ರಷ್ಟು ಮತದಾರರು ಮತವಿನ್ನಿತರ ಬಹುದಾಗಿದೆ. ಸಾಮಾನ್ಯವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಬಿರುಸಿನ ಸ್ಪರ್ಧೆ ಯತ್ತಾ.

ಫಲಿತಾಂಶ:—

ದೇರೆಬೈಲು ಉತ್ತರ: ಸಿಂಪ್ಸನ್ ಸೋನ್ಸ 748, ಸಾಲ್ ಡಿ' ಸೋಜ (ಕೊಂ) 665, ಡಿ. ಮೋಹನರಾವ್ 204.

ದೇರೆಬೈಲು ದಕ್ಷಿಣ: ವಿಂಗಪ್ಪ. ಸುವರ್ಣ 859 ಬಿ ಹರಿಶ್ಚಂದ್ರಾಚಾರ್ (ಕೊಂ) 630, ಸುಂದರೀಕ ರೈ 177.

ಬಜ್ಪೆ: ಆರ್. ಕೆ. ಗುರ್ಜರ್ 1038, ಡಾ. ಬಿ. ಪಿ. ಮತಾಯಸ್ ಕೊಂ) 829.

ಕದ್ರಿ ಸೆಂಟ್ರಲ್: ಕೆ. ಸೂರ್ಯನಾರಾಯಣ ಅಡಿಗ (ಕೊಮು) 692. ಡಾ. ಎಮ್. ಎಸ್. ರಾಜ್ಯೆ 548.

ಕದ್ರಿ ಪೂರ್ವ: ಬಿ. ಜಿ ಡಾಯಸ್ (ಕೊಂ) 510, ಆಲ್ಫೊನ್ಸ್ ಪಿಸೆಜಸ್ 388.

ಕೊಡಿಯೊಲ ಬೈಲು: ಕೆ. ನಾರಾಯಣ ರೈ ಕೊಂ 685. ಕೆ. ಪ್ರಭಾಕರ ರೈ 399.

ಕಂಬಳ ದಕ್ಷಿಣ: ಶ್ರೀಮತಿ ಕಲ್ಯಾಣಿ ಸೆಟ್ಟಿ (ಕೊಂ) 517, ಪ್ರಭಾಕರ ಫಾಟೆ 294, ಪಿ. ಎಮ್. ನಾರಾಯಣ ಮೂರ್ತಿ 284.

ಕಂಬಳ ಉತ್ತರ: ಬಿ ಎಸ್ ಭಾಸ್ಕರ ರೈ (ಕೊಂ) 509, ಎ. ಕೆ. ಸೇವರ್ 268.

ಮಣ್ಣಗುಡ್ಡೆ: ಮಜೇಲ್ ಶ್ರೀನಿವಾಸ ನಾಯ್ಕ್ (ಕೊಂ) 940, ದಾಮೋದರ ಶೆಣೈ 225, ಪಿ. ಎಸ್. ಫಕ್ಕಾ 2.

ಬೋಳೂರು: ಕೆ. ರಾಮಚಂದ್ರ ಪಜಿಕ್ಕರ್ 681, ನರೇಂದ್ರ ಮೆಂಡನ್ (ಕೊಂ) 668, ಅಮ್ಮೆಂಬಳ ಬಾಳಪ್ಪ 441

ಕುದ್ರೋಳಿ ಉತ್ತರ: ಕೆ. ಕೋನಪ್ಪ ಸೆಟ್ಟಿ 681, ಎಮ್. ಸಿ. ಅಸ್ಮಾ (ಕೊಂ) 402, ಎಮ್. ಮರ್ತಪ್ಪ ಶ್ರಭು 206, ಕೆ. ಎಮ್. ಮೂಸ 197.

ಕುದ್ರೋಳಿ ದಕ್ಷಿಣ: ಅಬ್ದುಲ್ ಖಾದರ್ (ಕೊಂ) 669, ರಘುನಾಥ ಕೋಟೆಂಕರ 294, ವಾಮನ ರಾವ್ 96.

ನೆಲ್ಲಾಯತ್ತ ವಾರ್ಡು: ಅಮಿರ್ ಮುಸ್ಸಾ 629, ಪಿ. ಜನಾರ್ಧನ ಭಂಡಾರಿ 387.

ಬಂದರ್: ಮುಸ್ತೆಸ್ ಎ. ಮಿಯಾ 491, ಎಮ್. ಡಿ. ಮುಸ್ತೆಸ್ 384, ಕೆ. ಉಮೇಶ್ರೆ ಶೈ (ಕೊಂ) 66.

ಸೆಂಟ್ರಲ್ ವಾರ್ಡು: ಕೆ. ವಿಶ್ವನಾಥ ಕಾಮತ್ (ಕೊಂ, 802 ಡಿ. ಮೋಹನ ರಾವ್ 418, ಪದ್ಮನಾಭ ಭಂಡಾರಕರ್ 318, ಎಮ್. ರಾಮಣ್ಣ ಶೆಟ್ಟಿ 230.

ಜೊಂಗರ ಕೇರಿ: ಎಮ್. ರಾಮರಾಯ ಶಿಣೈ (ಕೊಂ) 515, ಪದ್ಮನಾಭ ಕಾಮತ್ 199, ತುಕಾರಾಮ್ ಎಸ್. ಪೈ 198.

ಮಾರ್ಕೆಟ್ ವಾರ್ಡು: ಪಿ. ಆಚ್ಯುತ ಪ್ರಭು (ಕೊಂ) 549, ಕೆ. ಶಶಿಧರ ರಾವ್ 526, ಕೇಶವ ನಾಯ್ಕ 270, ಖಾಂಡುರಂಗಪ್ಪ 51.

ಕೋರ್ಟು ವಾರ್ಡು: (ಜನರಲ್) ಸಿ ಗೊನ್ಸಾಲ್ವಿಸ್ (ಕೊಂ) 836, ಶ್ರೀಮತಿ ರೋರಾ ಫ್ಯಾಸ್ (ರಿಜರ್ವ್) (ಕೊಂ) 809, ಎಲ್. ಸಿ. ಸೋನ್ಸ್ 419.

ಬೆಂದೂರು ಪಶ್ಚಿಮ: ಜೆ.ಬಿ. ಸುಚಾದೊ (ಕೊಂ) 599, ಇ. ಎ. ಫ್ಯಾಸ್ 375.

ಬೆಂದೂರು ಪೂರ್ವ: ಜೆ. ಬಿ. ಡಿ'ಸೋಜ (ಕೊಂ) 483, ಕ್ರಿಶ್ಚಿಯನ್ ಕಾರ್ಯಪ್ಪ 295.

ಸಲ್ಲೀರು ಪಶ್ಚಿಮ: ಕೆ. ಮಾಧವ ಶಾಮು ತಾ (ಕೊಂ) 650 ತಿಮ್ಮಪ್ಪ ಪಂಡಿತ 369.

ಮಿಲಾಗ್ರಿಸ್: ಡಾ. ಕೆ. ನಾಗಪ್ಪ ಆಳ್ವ 605 ಬುಡಾನ್ ಸಾಹೇಬ್ 122.

ಕೆಂಟೋನ್‌ಮೆಂಟ್: ರಾಮಕೃಷ್ಣ ರಾವ್ ಹೊಸ್ಪಿಟಾಕರ್ 597 ಎ. ಶ್ರೀಧರ 538.

ಫೋರ್ಟು: ಗಜಾನನ ರಾವ್ ಪಂಡಿತ್ (ಕೊಂ) 898, ಎಮ್. ಎಚ್. ಕೃಷ್ಣಪ್ಪ 448,

ಹ್ಯೊಗೆಟ ಜಾರ್: ಎಫ್. ಎಕ್ಸ್. ಡಿ. ಪಿಂಟೋ (ಕೊಂ) 1102 ಎಚ್. ಉಮಾನಾಥ 591.

ಬೋಳೂರ ಪಶ್ಚಿಮ: ಬಿ ಮೋನಪ್ಪ 693, ಬಿ. ಕೊರಗಪ್ಪ ರೈ 658.

ಜೋಳಾರೆ ಪೂರ್ವ: ಎ. ಶಾಂತಾರಾಮ ಪೈ. 904, ಬಿ. ಕೇಶಪ್ಪ 555.

ಅತ್ತಾವರ ಉತ್ತರ: ಬಿ. ಮಾಧವ ಸುವರ್ಣ (ಕೊಂ) 750 ನಾ ರಾ ಯ ಣ. ಎ. ಕೆ. 488.

ಅತ್ತಾವರ ದಕ್ಷಿಣ: ಜೋಸೆಫ್ ಪ್ರಿಟೊ (ಕೊಂ) 461, ಎ. ಸದಾಶಿವ 326.

ಜಪ್ಪು ಉತ್ತರ: ದಬ್ಲು ಕ್ರಿ. ಜಿ. ಡಿ' ಸೋಜ (ಕೊಂ) 794 (ಜನರಲ್) ಶ್ರೀಮತಿ ಇ. ಜೆ. ಅಂಬ್ರೋಜೆ 542 (ಶೆಡ್ಯೂಲ್ ರಿಜರ್ವ್) ಎಸ್. ಜೆ. ಸಾವಿನ್ನ (ಕೊಂ) 608, ಎ. ಕಮಲಾಕ್ಷ 466.

ಜಪ್ಪು ದಕ್ಷಿಣ: ವಾಮನ ಕೊಡಿಯಾಲ ಬೈಲು 755, ರಘುರಾಮ ಶೆಟ್ಟಿ 497.

(೧ನೇ ಪುಟದಿಂದ)

ದಲ್ಲಿ ಈಗ ಇರುವ ಪರಿಸ್ಥಿತಿಯೇ ಮುಂದರಿದರೆ, ಮನುಷ್ಯನು ಹಿಂಸೆಯಲ್ಲಿ ಪರ್ಯವಸಾನ ಹೊಂದುವುದು ನಿಶ್ಚಯ; ಆಗ ವಿರೋಸ್ಯ ಅಲ್ಪ ಸಂಖ್ಯಾಕರ ಹಕ್ಕು ಬಾಧ್ಯತೆಗಳಿಗೆ ಘಾತವಾಗುವುದು ಖಂಡಿತ ಎಂಬ ಆವರ ಮಾತು ದೂರದರ್ಶಿಗಳ ಗಮನವನ್ನು ಆಕರ್ಷಿಸಿನೆ; "ಇದು ನಾಟಕೀಯ ಉಪಸಂಹಾರವಾಗಿ ಕೋರಬಹುದು: ಈ ಕ್ಷಣದಲ್ಲಿ ವರ್ಣಭೇದ ಧೋರಣೆಯನ್ನು ಬಿಟ್ಟುಗೊಡಲು ನಾವೇನೂ ಪ್ರಯತ್ನಿಸದಿದ್ದರೆ ಹೀಗಾಗುವುದರಲ್ಲಿ ಆಯೋಗಕ್ಕೆ ಯಾವ ಸಂಶಯವೂ ಉಳಿದಿಲ್ಲ. ಬೇರೆ ಬೇರೆ ವಂಶ ಮೂಲಗಳ ಸ್ಥಳೀಯ ಜನರ ಸಂಖ್ಯೆಯೇ ಬಹಳ ಹೆಚ್ಚಾಗಿದ್ದು, ವಿರೋಸ್ಯರ ಪ್ರಮಾಣವು ತೀರ ಅಲ್ಪವಿರುವ ದಕ್ಷಿಣ ಆಫ್ರಿಕದಲ್ಲಿ ಹಿಂಸೆ, ಯುದ್ಧ ಮತ್ತು ಅತ್ಯಾಚಾರಗಳು ನಡೆಯಬಾರದೆಂದಿದ್ದರೆ ಸಂಯುಕ್ತ ರಾಷ್ಟ್ರಸಂಘಿ ತನ್ನ ಸಂಪೂರ್ಣ ವರ್ಚಸ್ಸನ್ನು ಉಪಯೋಗಿಸಬೇಕು" ಎಂಬ ಮಾತನ್ನು ಲೋಕದ ನಯವಿದನೆಂತೆರೂ ಅನುಮೋದಿಸುವರೆಂಬ ನಂಬಬಹುದು.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½.

ಬಡವ ನಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸನಿಹದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ನೀಲ ಗಿರಿ ಮತ್ತು ಅನಾಮಲೆಯ ಉತ್ತಮ ಟೀ

ಸುವಾಸನೆಯುಳ್ಳದಾಗಿನ್ನು ಮನೋಲ್ಲಾಸ ಯುಕ್ತವಾದುದು.

ಪ್ರಾಮಾಣಿಕ ರಬ್ಬರ್ ವ್ಯಾಪಾರಿಗಳು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

Post Box No 233.
Coimbatore.

ಕಾಸರಗೋಡು ತುಳುನಾಡು

ಚಂದ್ರಗಿರಿಯ ಉತ್ತರಕ್ಕೆ ಮಲೆಯಾಳಿಗಳ ಅಧಿಕಾರವಿಲ್ಲ

ಬರೆದವರು: ಶ್ರೀ ಎನ್. ಎ. ಶೀನಪ್ಪ ಹೆಗ್ಡೆ, ಪೊಳಲಿ.

ಈಗ ದಕ್ಷಿಣ ಕನ್ನಡ ಜಿಲ್ಲೆ ಎಂದು ನಾಮಕರಣವಾಗಿರುವ ಪ್ರಾಚೀನ ತುಳುನಾಡಿನ ಕುಂಬಳೆ ರಾಜ್ಯವೇ ಕಾಸರಗೋಡು ತಾಲೂಕು. ತುಳುನಾಡಿನ ಅಳಿಯ ಸಂತಾನ ಕಟ್ಟು ಕುಂಬಳೆ ರಾಜ ಮನೆತನಕ್ಕೆ ಅನ್ವಯವಾಗುತ್ತದೆ. ಕುಂಬಳೆ ರಾಜರ ಅಧೀನದಲ್ಲಿ ಪಯಸ್ವಿನಿ ಅಥವಾ ಪೆರುಂಬುಳಾ ಎಂಬ ಚಂದ್ರಗಿರಿ ಹೊಳೆಯ ಉತ್ತರ ಭಾಗದ ಅಡೂರು ೭ ಗ್ರಾಮ, ಪೆರ್ಡಾಲ ೨ ಗ್ರಾಮ, ಆಂಗಡಿಮೊಗರು ೧೦ ಗ್ರಾಮ, ಒಕ್ಕಾಡಿ ೨ ಗ್ರಾಮ, ಕಾಸರಗೋಡು ೨ ಗ್ರಾಮ, ಮಂಜೇಶ್ವರ ೩೭ ಗ್ರಾಮ, ಕುಂಬಳೆ ೯ ಗ್ರಾಮ ಮತ್ತು ಮೊಗ್ರಾಲು ೮ ಗ್ರಾಮ- ಇವಿಷ್ಟು ಪ್ರದೇಶಗಳಿದ್ದವೆಂದು ಚಾರಿತ್ರಿಯಿಂದ ತಿಳಿದು ಬರುತ್ತದೆ.

ಗ್ರಂಥಾದಾರದ ಪ್ರಕಾರ

"ಗ್ರಾಮ ಪದ್ಧತಿ" ಎಂಬ ಗ್ರಂಥದಲ್ಲಿ ಕಾಸರಗೋಡು, ಕಾಂಗೋಡು ಎಂಬುದಾಗಿ ಎರಡು ಕೋಡಿಗಳೆಂದೂ ತಂತ್ರಿ ಸ್ಥಾನಕ್ಕೆ ಈಟಿಲಿತ್ತಾಯ, ನೇತ್ರತಿತ್ತಾಯ ಮತ್ತು ಪಾಂಗಣ್ಣಾಯ ಎಂಬ ಮನೆತನಗಳೂ ತಲವಾಡಿತ್ತಾಯ, ಮದವೂರು ತ್ತಾಯ ಇತ್ಯಾದಿ ಸಭಾಪತಿಗಳೂ ಎಂದು ಬರೆದಿರುವುದರಿಂದ ಕುಂಬಳೆ ಸೀಮೆಯು ತುಳುನಾಡು ಎಂದು ನಿರ್ವಿವಾದವಾಗಿ ಹೇಳಬಹುದು.

ಪರಶುರಾಮ ಸೃಷ್ಟಿಯ ಕುರಿತು ಕೆಲವು ವಿಚಾರಗಳನ್ನು ತಿಳಿಸುವ "ತಾಳಮೋತ್ಪತ್ತಿ" ಎಂಬ ಗ್ರಂಥದಲ್ಲಿ

ಕರ್ಪಟಂಚ ವರಟಂಚ
ಮಹಾರಾಷ್ಟ್ರಂಚ ಕೊಂಕಣಂ।
ಹನಿಗಂ ತೌಳವಂಚೈವ
ಕೇರಳಂಚೇತಿ ಸಪ್ತಕ ॥

ಎಂಬುದಾಗಿ ತುಳುನಾಡಿನ ಉಲ್ಲೇಖವು ಸ್ಪಷ್ಟವಾಗಿದೆ. "ಪ್ರಶಂಜ್' ಹೃದಯ" ಎಂಬ ಸಂಸ್ಕೃತ ಗ್ರಂಥದಲ್ಲಿ

ಸಹ್ಯಾದ್ರೇ ಪರಶುರಾಮ ಭೂಮಿಂ।
ಸಾಸಪ್ತ ಕೊಂಕಣಾಖ್ಯಾ ॥ ಕೂಪಕ, ಕೇರಳ, ಮೂಷಿಕ, ಆಲುವ, ಹೈಗ, ಕೊಂಕಣ, ಪರಕೊಂಕಣ ಭೇದೇನ ದಕ್ಷಿಣೋತ್ತರಾಯಮೇನ ಚ ನ್ಯವಸ್ಥಿತಾ ॥

ಎಂಬುದಾಗಿ ಬರೆದಿರುತ್ತದೆ. ಇಲ್ಲಿ ಹೇಳಿದ ಸಪ್ತ ಕೊಂಕಣಗಳಲ್ಲಿ ಕೂಪಕವು ಈಗಿನ ತಿರುವಾಂಕೂರು ಸಂಸ್ಥಾನ; ಕೇರಳವು ಕೊಚ್ಚಿ; ಮೂಷಿಕವು ಮಲಬಾರು; ಆಲುವವೇ ತುಳುನಾಡಿನ ದಕ್ಷಿಣ ಕನ್ನಡ; ಹೈಗವು ಉತ್ತರ ಕನ್ನಡ; ಕೊಂಕಣವೆಂದರೆ ಗೋವೆ ಮತ್ತು ರತ್ನಗಿರಿ; ಮತ್ತು ಪರಕೊಂಕಣವು ರಾಣ ಮತ್ತು ಕೊಲಾಬಾ ಪ್ರದೇಶ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

ಪಾಡ್ದನಗಳಲ್ಲಿ ಉಲ್ಲೇಖ

ತುಳುನಾಡನ್ನು ಅಲೂಪ ರಾಜರು (ಇವರನ್ನೆ ಅಲುವರು, ಅಲುವ ಬೇಡರು ಎಂದೂ ಕರೆಯುತ್ತಿದ್ದರು) ಕ್ರಿಸ್ತಪೂರ್ವದಿಂದ ಕೆಲವು ಶತಮಾನಗಳ ವರೆಗೆ ಆಳುತ್ತಿದ್ದರು ಅವರ ರಾಜ್ಯಕ್ಕೆ ಉತ್ತರದಲ್ಲಿ ಗಂಗೊಳ್ಳಿ-ಹೊಳೆಯೂ ದಕ್ಷಿಣದಲ್ಲಿ ಪೆರಂಬುಳಾ' ಎಂಬ ಚಂದ್ರಗಿರಿ ಹೊಳೆಯೂ ಪೂರ್ವದಲ್ಲಿ ಪಶ್ಚಿಮ ಘಟ್ಟವೂ ಪಶ್ಚಿಮದಲ್ಲಿ ಅರಬಿ ಸಮುದ್ರವೂ ಗಡಿಯಾಗಿತ್ತೆಂದು ಹೇಳಬಹುದು.

ಮೇಲಿನ ಗಡಿಯು ತುಳುವರಲ್ಲಿ ಮನ್ನಣೆಯನ್ನು ಪಡೆಯಿತ್ತೆಂಬುದಕ್ಕೆ ತುಳುನಾಡಿನಲ್ಲೆಲ್ಲ ಆರಾಧಿಸಲ್ಪಡುವ ಮೂಲ ದೈವಗಳಾವ "ಏವೆಲ್ ಬೂತೊಳು" ಎಂಬುದನ್ನು ಕುರಿತಾದ ಪಾಡ್ದನದ ಒಂದಂಶವನ್ನು ಉದಾಹರಿಸಬಹುದು. ಸುಂದರವಾದ ತುಳು ಭಾಷೆಯಲ್ಲಿರುವ ಈ ಪದ್ಯದ ಕನ್ನಡ ರೂಪ ಹೀಗಿದೆ—"ನಾವು ಏಳು ವರು ಭೂತಗಳು ಮೇಲಿನ ಈಶ್ವರ ದೇವರ ಆಜ್ಞೆಯನ್ನು ಪಡೆದು ಕೆಳಗಿನ ನಾಗಲೋಕಕ್ಕೆ ಯಾನಕ್ಕಾಗಿ ಬಂದಿರುವೆವೆಂಬ ವಿಚಾರ ನಿಮಗೆ ತಿಳಿಯದು. ನಾನ್ ಬಡಗು ಗಂಗೊಳ್ಳಿಯಿಂದ ತೆಂಕು ಪೆರುಂಬುಳಾನ (ಚಂದ್ರಗಿರಿ) ಹೊಳೆಯ ವರೆಗೆ, ಮೂಡು ಗಟ್ಟಿದಿಂದ ಪಡುವಣ ಹೈಗೆಗೆ ರಾಶಿಯ (ಸಮುದ್ರದ) ವರೆಗೆ ಕಟ್ಟಿದ ಮನೆ, ತೆರೆದ ಬಾಗಿಲು, ಗಡಿಸ್ಥಳ, ನಾಗ ಪ್ರತಿಷ್ಠೆ ಮಾಡಿದ ಬನ, ಬ್ರಹ್ಮಸ್ಥಾನ, ದೇವಾಲಯ, ಅರಮನೆ ಇಲ್ಲೆಲ್ಲ ನೆಲೆಯಾಗಿ ನಿಂತಿದ್ದು ನಿಮ್ಮ ಬಲಗೈಯ ಕತ್ತಿಗೆ ಮತ್ತು ಎಡಗೈಯ ಗುರಾಣಿಗೆ ಜಯವನ್ನು ನೀಡುತ್ತಾ ನೀವು ಹೋದಲ್ಲಿ ಬಂದಲ್ಲಿ ನಿಮ್ಮನ್ನು ಗೆಲ್ಲಿಸಿ ಕಾಪಾಡುತ್ತೇವೆ" ತುಳು ನಾಡಿನ ತೆಂಕು ಗಡಿಯು ಚಂದ್ರಗಿರಿ ಹೊಳೆ ಎಂಬುದನ್ನು ಮೇಲಿನ ಅಂಶ ಚೆನ್ನಾಗಿ ಪುಷ್ಟೀಕರಿಸುತ್ತದೆ.

ಶಾಸನಗಳ ಆಧಾರ

ಅಲೂಪ ರಾಜರು ತುಳುವರಾಗಿದ್ದರೂ ಕನ್ನಡ ರಾಜರೊಡನೆ ವ್ಯವಹಾರವನ್ನು ಇಟ್ಟುಕೊಂಡಿದ್ದರು; ಮತ್ತು ಕನ್ನಡ ಭಾಷೆಯನ್ನು ರಾಜಕಾರ್ಯಗಳಿಗೆ ಬಳಸುತ್ತಿದ್ದರು ಎಂದು ಹೇಳಲು ಆಧಾರವುಂಟು. ಸುಮಾರು ಕ್ರಿ. ಶ. ೬೫೦ನೇ ವರ್ಷದ ಹೊತ್ತಿಗೆ ಕನ್ನಡ ಪ್ರದೇಶಗಳನ್ನು ಆಳಿದ ಬಾದಾಮಿಯ ಚಾಲುಕ್ಯ ರಾಜನಾದ ಇಮ್ಮಡಿ ಕೀರ್ತಿ ವರ್ಮನು ನೆಡಿಸಿದ ಶಿಲಾಶಾಸನವೊಂದು ಅಡಗೂರಿನಲ್ಲಿ ಸೋಮಸಿಗುತ್ತದೆ. ವಿಜಯನಗರದ ಅರಸರು ಚಂದ್ರಗಿರಿ ಹೊಳೆಯ ದಕ್ಷಿಣ ಕ್ಕಿರುವ ಪಡುನ್ನಾಡು ೪ ಗ್ರಾಮ, ಅಲ್ಪತ್ತನಾಡು ೭ ಗ್ರಾಮ, ನೀಲೇಶ್ವರ ೬೬ ಗ್ರಾಮ ಮತ್ತು ತಾಯಿಕಾಟು ೧೫ ಗ್ರಾಮ— ಇವನ್ನು ಸೇರಿಸಿ ಕವಾಯಿ ಹೊಳೆಯ ವರೆಗೆ, ಅಂದರೆ ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ತೆಂಕು ಗಡಿಯ ತನಕ, ತುಳುನಾಡನ್ನು ವಿಸ್ತರಿಸಿದರು. ವಿಜಯನಗರದ ಅರಸರ ಕೈಕೆಳಗೆ ತುಳುನಾಡನ್ನು ಆಳುತ್ತಿದ್ದ ಕೆಳದಿಯ ನಾಯಕರು ಕಾಸರಗೋಡು ತಾಲೂಕಿನ ಹಲವು ಪ್ರಾಚೀನ ದೇವಸ್ಥಾನಗಳಲ್ಲಿ ನಿಲ್ಲಿಸಿದ್ದ ಶಿಲಾಶಾಸನಗಳು ಕನ್ನಡ ಭಾಷೆಯಲ್ಲಿವೆ ಎಂಬುದು ಎಲ್ಲರಿಗೂ ತಿಳಿದಿರಬಹುದಾದ ವಿಷಯ.

ಕ್ರಿ.ಶ.೧೬೫೩-೬೬ನೇ ಆವಧಿಯಲ್ಲಿದ್ದಂದು ಭಾವಿಸಲಾಗಿರುವ 'ಕೆಳದಿ ನೃಪ ವಿಜಯ" ಎಂಬ ಕನ್ನಡ ಗ್ರಂಥದಲ್ಲಿ ತುಳುನಾಡಿನ ಹಲವು ಗ್ರಾಮಗಳ ಹೆಸರುಗಳು ನೋಡಸಿಗುತ್ತವೆ. ಸಿದರ್ಶನಕ್ಕಾಗಿ ಕುಂಬಳೆ, ಮಂಗಳೂರು, ಕೊಡಿಯಾಲ ಮೂಡಬಿದರೆ, ಉಳ್ಳಾಲ ಮದುವೆಟ್ಟು, ಕಾಂತಮಂಗಲ, ಬದ್ಯಡ್ಕ, ಶಿಶಿಲ, ಚಂದ್ರಗಿರಿ, ಬೇಕಲ, ಚಿತ್ತಾರಿ, ನೀಲೇಶ್ವರ, ಸುಬ್ರಹ್ಮಣ್ಯ, ಸುರತ್ಕಲ್ (ಪೊಳಲಿ), ಮಲಸು (ಮಲ್ಪೆ), ಉಡುಪು (ಉಡುಪಿ), ಕಾನು ಇತ್ಯಾದಿ.

ನಾಯಕರ ಸಾಹಸ

ಅದೇ ಗ್ರಂಥದ ದ್ವಿತೀಯಾಶ್ವಾಸದಲ್ಲಿ ನೇ ಪದ್ಯವು ಕೆಳದಿಯ ಅರಸನಾದ ಸದಾಶಿವ ನಾಯಕನು ಕಾಸರಗೋಡಿನಲ್ಲಿ ತೊಲಗದ ಕಂಬವನ್ನು ನಿಲ್ಲಿಸಿದುದನ್ನು ಕೆಳಗಿನ ಮಾತುಗಳಲ್ಲಿ ವರ್ಣಿಸುತ್ತದೆ—

ತುಳುವ ರಾಜರ್ಕಳೆಲ್ಲರ್
ಮಲೆತಿರೆ ನಿಗ್ರಹಿಸಿ ಮೆರೆವ ಕಾಸರ
ಗೋಡೆಡೆಯಲ್ ॥
ತೊಲಗದ ಕಂಬವನಾನೈಸ
ತಿಲಕಂತಾನಿಲಿಸಿ ಮೆರೆದನತಿ
ಸಾಹಸಮಂಗಿ

ಅನೇಲೊಮ್ಮೆ ಮಲೆಯಾಳಿಗಳು ತುಳುನಾಡಿನ ಗಡಿಯನ್ನು ಅತಿಕ್ರಮಿಸಿ ಬಂದು ಆಗಾಗ್ಗೆ ಉಪದ್ರ ಕೊಡುತ್ತಿದ್ದುದನ್ನು ನಿಲ್ಲಿಸಲು ಶಿವಪ್ಪ ನಾಯಕನೆಂಬ ಕೆಳದಿಯ ಅರಸನು ಸಾಹಸ ಮಾಡಿದನೆಂದೂ ನೀಲೇಶ್ವರದಲ್ಲಿ ಇನ್ನೊಂದು ತೊಲಗದ ಕಂಬವನ್ನು ನೆಡಿಸಿದನೆಂದೂ ಅದೇ ಗ್ರಂಥದ ಸಪ್ತಮಾಶ್ವಾಸದ ೧೧ನೇ ಪದ್ಯವು ಹೇಳುತ್ತದೆ –

ಬಳಿಕುರು ನೀಲೇಶ್ವರದು
ಜ್ವಲಿಪಿಳಿಯಂ ಕೊಂಡು ನಾಯಿ
ಮಾರರ ನೆಲದೊಳ್।
ತೊಲಗದ ಕಂಬವನುಂ ಪೆ
ನಿಲಿಸಿ ಮಹಾದ್ಭುತ ಪರಾಕ್ರಮ
ವನುರೆ ಮೆರೆದಂ॥

ಇದೇ ಶಿವಪ್ಪ ನಾಯಕನು ಅಲ್ಪತ್ತನಾಡು, ಪಡುವನ್ನಾಡು, ತಾಯಿ ಕಾಟು ನೀಲೇಶ್ವರ ಎಂಬ ನಾಲ್ಕು ನಾಡುಗಳನ್ನು ಒಂದುಗೂಡಿಸಿ ಬೇಕಲ ಸಂಸ್ಥಾನವೆಂದು ಹೆಸರಿಟ್ಟು ಅಲ್ಪತ್ತ ನಾಡಿನಲ್ಲಿ ಹೊಸ ಕೋಟೆ (ಈಗಿನ ಹೊಸದುರ್ಗ) ಯನ್ನು ಕಟ್ಟಿಸಿ, ಅಲ್ಲಿ ಬಲವಾದ ರಾಮರಾಜ ಕ್ಷತ್ರಿಯರ ಸೈನ್ಯವನ್ನು ಕಾವಲಿಗೆ ನಿಲ್ಲಿಸಿ ಕವಾಯಿ ಗಡಿಯ ಬಡಗಲಿಗೆ ವಲಿಯರಾಜನ ನಾಯಮನೂರು ತಲೆಹಾಕದಂತೆ ಮಾಡಿದನು.

ಹಿಂದಿನೊಂದು ಒಡಂಬಡಿಕೆ

ಮುಂದೆ ಕ್ರಿ. ಶ. ೧೭೬೬ನೇ ಇಸವಿಯ ಆಗೋಸ್ತು ೩೬ನೇ ತಾರೀಕಿನಂದು ಕೋಲತ್ತಿರಿ ಅರಸನಿಗೂ ಬಿದನೂರಿನ ಅರಸನ ವಂಗಳೂರು ಕೇಂದ್ರದ ಗವರ್ನರ ಹಾಗು ಕನ್ನಡ ಸೈನ್ಯದ ದಂಡನಾಯಕನಾದ ಸೂರಪ್ಪಯ್ಯನಿಗೂ ಒಂದು ಒಪ್ಪಂದವಾದದ್ದು ಕಂಡುಬರುತ್ತದೆ. ಅದರ ವಿವರವನ್ನು ನೋಡಿದರೆ, ಮಾಡಾಯಿಕ್ಕೋಟೆಯಿಂದ ಪಟ್ಟುವಕ್ಕೆ, ಊರುಬಳ್ಳವರೆಗೆ ದಕ್ಷಿಣಕ್ಕೆ, ತಳಿಪಂಬಾನದಿ ಗುಡ್ಡದಿಂದ ಹೇಗೆ ಹರಿದು ಬಂದಿದೆಯೋ ಅಲ್ಲಿಯ ವರೆಗೆ ಪೂರ್ವಕ್ಕೆ ಇರುವ ರಾಜ್ಯ ಬಿದನೂರಿನ ಅರಸರಿಗೂ ಇದರ ದಕ್ಷಿಣ್ಯ ಉಳಿದ ರಾಜ್ಯವು ಕೋಲತ್ತಿರಿನ ಅರಸರಿಗೂ ಇರತಕ್ಕದ್ದೆಂದು ನಿರ್ಣಯವಾದುದು ಮನದಟ್ಟಾಗುತ್ತದೆ. ತಲಚೇರಿಯ ಆಂಗ್ಲ ಅಧಿಕಾರಿಯಾದ ವಿಲಿಯಂ ಜೇಸನ ವಶಕ್ಕೆ ಸೂರಪ್ಪಯ್ಯನು ಒಪ್ಪಿಸಿದ ಈ ಕರಾರಿಗೆ ಬಿದನೂರಿನ ರಾಜ ಸೋಮಶೇಖರನ ದಸ್ಕತು ಮೊಹರಾಗಿರುತ್ತದೆ ಇದರ ಪ್ರಕಾರ ಕನ್ನಡ ಜಿಲ್ಲೆಯಗಡಿಯು ಊರುಂಬಳ್ಳಿ-ತಳಿಪಂಬಾ ನದಿಯೆಂದು ಸಿದ್ಧವಾಗುತ್ತದೆ.

ಇದನ್ನೆಲ್ಲ ವಿಮರ್ಶಿಸಿದರೆ, ಯಾವ ಕಾಲದಲ್ಲಯೂ ಮಲೆಯಾಳದ ಗಡಿಯು ಚಂದ್ರಗಿರಿ ಹೊಳೆಯನ್ನು ದಾಟಿರಲಿಲ್ಲ. ಕ್ರಿಸ್ತ ಪೂರ್ವಕಾಲದಿಂದ ರಾಜ್ಯವಾಳಿದ ಅಲೂಪರಿಂದ ಹಿಡಿದು, ಕದಂಬ, ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರ ಇತ್ಯಾದಿ ಕನ್ನಡ ಅರಸು ಮನೆತನಗಳ ತನಕವೂ ಚಂದ್ರಗಿರಿ ಹೊಳೆಯನ್ನು ತುಳುನಾಡಿನ ಅಬಾಧಿತ ಗಡಿ ಎಂದು ಎಲ್ಲರೂ ಮಾನ್ಯಮಾಡಿದ್ದರು. ಮಂಗಳೂರಿಗೆ ರೈಲು ಸೂರ್ಗ ರಚಿಸಲ್ಪಡುವ ವರೆಗೆ ಚಂದ್ರಗಿರಿ ಹೊಳೆಯನ್ನು ನಾಟಿ ಕೇರಳದ ಸ್ತ್ರೀಯರು ಬಂದರೆ, ಅವರಿಗೆ ಜಾತಿಯುವರು ಬಹಿಷ್ಕಾರವನ್ನು ಹಾಕುತ್ತಿದ್ದರು;

(೧೨ನೇ ಪುಟ ನೋಡಿರಿ)



ಭಾರತದಲ್ಲಿ ಮದ್ಯಪಾನ ಪ್ರತಿಬಂಧ

ಶ್ರೀಮನ್ನಾರಾಯಣ ಸಮಿತಿಯ ಸಿಫಾರಸುಗಳ ಸಂಗ್ರಹ

'1958ರ ಏಪ್ರಿಲ್ 1ನೇ ತಾರೀಕಿನಿಂದ ರಾಷ್ಟ್ರವ್ಯಾಪ್ತಿ ಪಾನ ನಿರೋಧವು ಜಾರಿಗೆ ಬರಬೇಕೆಂದು ನಾವು ಶಿಫಾರಸು ಮಾಡುತ್ತೇವೆ'— ಎಂದು, ಯೋಜನಾ ಆಯೋಗದಿಂದ ನೇಮಕಗೊಂಡಿದ್ದ, ಪಾನನಿರೋಧ ವಿಚಾರಣಾ ಸಮಿತಿಯು ತನ್ನ ವರದಿಯಲ್ಲಿ ತಿಳಿಸಿದೆ.

ಜನತೆಯ ಬೇಡಿಕೆ

ತಾವು ಭೇಟಿಕೊಟ್ಟ ಎಲ್ಲಾ ರಾಜ್ಯಗಳಲ್ಲಿ ಯೂ ರಾಷ್ಟ್ರವ್ಯಾಪ್ತಿಯ ಪಾನನಿರೋಧಕ್ಕೆ ಬಲ ನಾದ ಬೆಂಬಲ ವ್ಯಕ್ತವಾಯಿತೆಂದೂ ಈ ನೀತಿಯನ್ನು ಆದಷ್ಟುಬೇಗ ಕಾರ್ಯರೂಪಕ್ಕೆ ತರಬೇಕೆಂಬ ಬೇಡಿಕೆಯಿದೆಯೆಂದು ಅವು ಅಭಿಪ್ರಾಯ ಪಟ್ಟಿವೆಯೆಂದು ವಿಚಾರಣಾ ಸಮಿತಿಯ ಸದಸ್ಯರು ತಿಳಿಸಿರುವರು.

'ಈ ಅಭಿಪ್ರಾಯದ ಕಡೆಗೆ ಎಲ್ಲಾ ರಾಜ್ಯಗಳ ಗಮನವನ್ನು ಕೇಂದ್ರೀಕರಿಸುವುದಕ್ಕೂ, ಪಾನನಿರೋಧದ ಬಗೆಗೆ ಜನಪ್ರಿಯ ಸಹಾನುಭೂತಿಯನ್ನು ಸಜ್ಜುಗೊಳಿಸುವುದಕ್ಕೂ, ರಾಷ್ಟ್ರವ್ಯಾಪ್ತಿಯ ಪೂರ್ಣ ಪಾನನಿರೋಧವನ್ನು ಆಚರಣೆಗೆ ತರುವುದಕ್ಕಾಗಿ ಒಂದು ನಿರ್ದಿಷ್ಟ ವಾದ ದಿನವನ್ನು ಗೊತ್ತುಮಾಡುವುದು ಅಗತ್ಯ ವೆಂದೂ ನಾವು ಅಭಿಪ್ರಾಯ ಪಡುತ್ತೇವೆ'— ಎಂದು ಈ ವರದಿಯು ತಿಳಿಸುತ್ತದೆ.

ಮುಂಬೈ, ಮದರಾಸ್‌ಗಳಂಥ ರಾಜ್ಯಗಳಲ್ಲಿ ಪಾನನಿರೋಧ ಆಚರಣೆಯಿಂದ ದೊರೆಯು ತ್ತಿರುವ ಅನುಭವದಿಂದ 'ಪಾನನಿರೋಧವು, ಸುಭದ್ರವಾದ ನೀತಿಯಷ್ಟೇ ಆಲ್ಲ, ಅದು ಪ್ರಯೋಗಕ್ಕೆತರಲುಯಾವಾದಂತಹತತ್ವವೆಂದು' ದೃಢವಾಗಿ ಹೇಳಬಹುದೆಂದು ಈ ಸಮಿತಿ ತಿಳಿಸಿದೆ.

ತೊಂಬರೆಗಳ ಗಣನೆ

1958ರ ಏಪ್ರಿಲ್ 1ನೆಯ ತಾರೀಖನ್ನು ರಾಷ್ಟ್ರವ್ಯಾಪ್ತಿಯ ಪಾನನಿರೋಧ ಆಚರಣೆಯ ನ್ನು ಆರಂಭಿಸುವ ದಿನವನ್ನಾಗಿ ನಿರ್ಧರಿಸಬೇ ಕೆಂದು ಶಿಫಾರಸು ಮಾಡುವಾಗ, ಈ ಸಮಿತಿ ಯು, 'ಈ ರೀತಿ ಮಾಡುವುದರಲ್ಲಿ ಸಂಬಂಧ ಪಟ್ಟ ರಾಜ್ಯಗಳು ಎದುರಿಸಬೇಕಾದ ಪರಿಸ್ಥಿತಿ ಯ ತೀವ್ರತೆ ಹಾಗೂ ಪ್ರಾಯೋಗಿಕ ತೊಂದರೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ' ಎಂದು ವಿವರಿಸಿದೆ.

ಪ್ರಜೆಗಳ ಪಕ್ಷದ ಕೊರತೆಯ ವೇಳೆಗೆ ರಾಜ್ಯ ಸರ್ಕಾರಗಳು ತಮ್ಮ ಈ ಕಾರ್ಯನೀತಿಯ ಅಂಗೀಕಾರವನ್ನೂ ಗುರಿಯದಿನಾಂಕವ ನ್ನೂ ಕುರಿತು ಘೋಷಣೆಮಾಡಬಹುದು; ತನ್ಮೂಲಕ ಪಾನನಿರೋಧ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಪೂರ್ಣ ಸಹಕಾರ ನೀಡು ವಂತೆ ಸಾರ್ವಜನಿಕರನ್ನು ಸಿದ್ಧಗೊಳಿಸಬಹು ದು'— ಎಂದು ಈ ಸಮಿತಿಯು ಶಿಫಾರಸು ಮಾಡಿದೆ.

ಕೇಂದ್ರದ ಕ್ರಮ

ಪಾನನಿರೋಧವು ಸರಕಾರದ ಕಾರ್ಯನೀ ತಿಯಾಗಿವೆಯೆಂಬ ಬಗೆಗೆ ಕೇಂದ್ರಸರಕಾರವು ನಿಬಿರವಾದ ಹೇಳಿಕೆಯೊಂದನ್ನು ಪ್ರಕಟಿಸಬೇ ಕು. ಶಿಕ್ಷಣ ನಿಧಾನ, ಪಾನನಿರ್ಬಂಧ ಮತ್ತು ಕಾನೂನುಗಳನ್ನು ಬಲಪಡಿಸುವುದು, ಔಷಧಿ ಗಾಗಿ ಅಲ್ಪವೆ ಬೇರೆ ಉದ್ದೇಶದಿಂದ ಮದ್ಯ ಸೇವಿಸದಂತೆ ಮಾಡುವುದು, ಇತ್ಯಾದಿ ಕ್ರಮೇ ಣವಾದ ನಿಧಾನ ವಿಧಾನಗಳಿಂದ ಪಾನನಿರೋ ಧನವನ್ನು ಸಾಧಿಸುತ್ತಾ, 1958ರ ಏಪ್ರಿಲ್ 1ರ ಹೊತ್ತಿಗೆ ಪೂರ್ಣಪಾನನಿರೋಧವು ರಾಷ್ಟ್ರೀಯ ಕಾನೂನಾಗಿ ರಾಜ್ಯಗಳ ಶಾಸನಸಭೆಯ ನೂಲಕ ಅನುಷ್ಠಾನಕ್ಕೆ ಬರುವಂತೆ ಕ್ರಮ ಕೈಗೊಳ್ಳಬೇಕು'— ಎಂದು ಈ ಸಮಿತಿಯು ಸಲಹೆನೀಡಿದೆ.

ರಾಜ್ಯಸರ್ಕಾರಗಳು ಈ ಕಾರ್ಯನೀತಿಯ ನ್ನು ಘೋಷಣೆಮಾಡಿದ ದಿನದಿಂದ ಹಿಡಿದು ರಾಷ್ಟ್ರವ್ಯಾಪ್ತಿಯ ಪೂರ್ಣಪಾನನಿರೋಧ ಜಾ ರಿಗೆ ಬರುವವರೆಗೆ ಅಂದರೆ 1958ರ ಏಪ್ರಿಲ್ 1ರ ವರೆಗೆ ಇರುವ ಅಂತರವನ್ನು, ಪೂರ್ಣ ಪಾನನಿರೋಧ ಕ್ರಮದ ಹಾದಿಯಲ್ಲಿ ಪ್ರಾರಂ ಭದ ಸಿದ್ಧತೆಗಳನ್ನು ಕೈಗೊಳ್ಳುವುದಕ್ಕೂ ಅಗ ತ್ಯ ಆದಶಿತ ಯಂತ್ರವನ್ನು ಕೂಡಿಸಿಕೊಳ್ಳುವು ದಕ್ಕೂ ಉಪಯೋಗಿಸಿಕೊಳ್ಳಬೇಕೆಂದು ಸಮಿ ತಿಯು ಶಿಫಾರಸುಮಾಡಿದೆ. ಈಗಾಗಲೆ ಪಾನ ನಿರೋಧವು ಜಾರಿಯಲ್ಲಿರುವ ರಾಜ್ಯಗಳಲ್ಲಿ ಈಗಿನ ಕಾರ್ಯಕ್ರಮವೇ ಮುಂದರಿಯುವುದು. ಆವು ಉತ್ತಮವಾದ ಹಾಗೂ ಹೆಚ್ಚು ಪರಿಣಾಮಕಾರಿಯಾದ ಫಲಿತಾಂಶಗಳನ್ನು ಪ ಡೆಯುವ ಬಗೆಗೆ ಸಮಿತಿಯು ಮಾಡಿರುವ ಕಾ ರ್ಯಕ್ರಮಗಳೊಂದಿಗೆ ಇನ್ನೂ ಹೆಚ್ಚಿನ ಎಚ್ಚ ರಿಕೆಯಿಂದ ಪಾನನಿರೋಧ ಕಾರ್ಯಕ್ರಮವ ನ್ನು ನಿರ್ವಹಿಸಬೇಕು. ಪೂರ್ಣ ಪಾನನಿರೋ ಧ ವಿಲ್ಲದ ರಾಜ್ಯಗಳಲ್ಲಿ ಈ ಕಾರ್ಯಕ್ರಮವ ನ್ನು ಇಡೀ ರಾಜ್ಯದಲ್ಲೆಲ್ಲಾ ಪಾನನಿರೋಧವು ಪರಿಣಾಮಕಾರಿಯಾಗಿ ಅನ್ವಯವಾಗುವಂತೆ ವಿಸ್ತರಿಸುತ್ತ ಹೋಗಬೇಕು—ಎಂದು ಈ ಸಮಿ ತಿಯು ಶಿಫಾರಸು ಮಾಡಿದೆ.

ಸಮಿತಿಯ ಪರಿಚಯ

ಪಾನನಿರೋಧ ವಿಚಾರಣಾ ಸಮಿತಿಯನ್ನು 1954ರ ದಿನೆಂಬರ್ 16ರಂದು ರಚಿಸಲಾಯ ತು. ಶ್ರೀ ಶ್ರೀಮನ್ನಾರಾಯಣರವರು ಈ ಸ ಮಿತಿಯ ಅಧ್ಯಕ್ಷರು. ಶ್ರೀಮತಿ ಸುಚೇತಾ ಕೃಪಲಾನಿ, ಶ್ರೀಗಳಾದ ಎಸ್. ಆರ್. ಪಾಸೆ ಪತ್ತ್ಯಣ್ಣಿ, ಜಗಲ್ ಚಾಂದ್ರಿಬಿ. ರಾಮಚಂದ್ರನ್ ಮತ್ತು ಡಾಗಿ ಭಾಸ್ಕರ್ ಪಟೇಲ್ ಈ ಸಮಿತಿ ಯ ಸದಸ್ಯರು. ಶ್ರೀ ಎನ್. ಎಸ್. ವರದಾ ಚಾರಿಯವರು ಈ ಸಮಿತಿಯ ಸದಸ್ಯ-ಕಾರ್ಯ ದರ್ಶಿಗಳು. ಡಾ! ಸಿ. ಜೆ. ಥಾಮಸ್ ಮತ್ತು ಶ್ರೀ ಆರ್. ಎನ್. ಸಮರ್ಥ್ ಇವರನ್ನು ಸ ಮಿತಿಯ ಸದಸ್ಯರನ್ನಾಗಿ ಹಿಂದಿನಿಂದ ನೇಮಿ ಸಲಾಯಿತು ಸದಸ್ಯರೇ ಆರಿಸಿಕೊಂಡಿದ್ದ ಮ ತ್ತೊಬ್ಬ ಸದಸ್ಯರಾದ ಶ್ರೀ ಪಿ. ಕೋದಂಡ ರಾಯರೆ ಕೊರತೆಗಾಗಿ ಉಳಿದವೆಲ್ಲಾ ಸದಸ್ಯರೂ ಈ ವರದಿಗೆ ಪೂರ್ಣಾನುಮತಿಯನ್ನಿತ್ತಿರುವ ರು. ಈ ಸಮಿತಿಯನ್ನು ರಚಿಸಿದ್ದರ ಉದ್ದೇಶ ಗಳವು—

1) ರಾಜ್ಯಸರ್ಕಾರಿಗಳು ಪಾನನಿರೋಧ ಉತ್ತೇಜನಕ್ಕೆ ಅಂಗೀಕರಿಸುವ ಕಾರ್ಯಕ್ರಮಗಳ ಸಂಬಂಧವಾಗಿ ಪಡೆದುಕೊಂಡಿರುವ ಪ್ರಾಯೋಗಿಕ ಆನುಭವ ಗಳ ಪರಿಶೀಲನೆ. ತನ್ಮೂಲಕ ಆ ರಾಜ್ಯಗಳು ತಮ್ಮ ಈ ಕಾರ್ಯದಲ್ಲಿ ಎಸ್ಟರ ಮಟ್ಟಿಗೆ ಯಶಸ್ಸನ್ನು ಗಳಿಸಿವೆ. ಅವುಗಳು ಎದುರಿಸಿ ಬೇಕಾದ ಪ್ರಾಯೋಗಿಕ ತೊಂದರೆಗಳೇನು ಎಂಬುದನ್ನು ಪರಿಶೀಲಿಸುವುದು.

2) ರಾಷ್ಟ್ರೀಯ ತಳಹದಿಯ ಮೇಲೆ ಪಾನ ನಿರೋಧವನ್ನು ಆಚರಣೆಗೆ ತರುವ ಕಾರ್ಯ ಕ್ರಮದ ಕುರಿತು ಶಿಫಾರಸುಗಳನ್ನು ನೀಡುವುದು

3) ಈ ಕಾರ್ಯ ಕ್ರಮವನ್ನು ಆಚರಣೆಗೆ ತರುವಲ್ಲಿ ಈ ಸಂಬಂಧವಾದ ಆಡಳಿತ ವರ್ಗ ವು ಅನುಸರಿಸಬೇಕಾದ ವಿಧಾನಗಳು.

4) ಈ ವಿಷಯದ ನೇರೆ ಈ ಸಮಿತಿಯು ಮಾಡಬಹುದಾದ ಇತರ ಅಗತ್ಯವಾದ ಸಿಫಾ ರಸುಗಳು.

ಪ್ರಶ್ನಾವಳಿಯ ಪ್ರಕಟಣೆ

ಈ ಸಮಿತಿಯು ಎರೆಡು ಪ್ರಶ್ನಾವಳಿಗಳ ನ್ನು ಪ್ರಕಟಿಸಿತು ಒಂದು ಪ್ರಶ್ನಾವಳಿಯ ನ್ನು ಎಲ್ಲಾ ರಾಜ್ಯ ಸರ್ಕಾರಗಳಿಗೂ, ಮ ತ್ತೊಂದು ಪ್ರಶ್ನಾವಳಿಯನ್ನು ಸಾರ್ವಜನಿಕರಿ ಗೂ ಮತ್ತಿತರ ಕೈಗಾರಿಕಾ ಸಂಸ್ಥೆಗಳಿಗೂ ಸಂಚಲಾಯಿತು. ಸಾರ್ವಜನಿಕರು ಮತ್ತು ಸಂಸ್ಥೆಗಳು ನುತ್ತು ಆವರ ಅಭಿಪ್ರಾಯಗಳ ಸಂಗ್ರಹಿಸಿ ಸಮಿತಿಯ ಮುಂದೆ ಒಟ್ಟು 300 ಮನವಿ ಪತ್ರಗಳು ಮತ್ತು ಉತ್ತರಗಳು ಬಂದಿವೆ. ಈ ಸಮಿತಿ ಯಾಗೂ ಅದರ ಉಪ-ಸಮಿತಿಗಳು 18 ರಾಜ್ಯಗಳಿಗೆ ಭೇಟಿಯಿತ್ತು ಅಲ್ಲಿನ ಮುಖ್ಯ ಮಂತ್ರಿಗಳು ಮತ್ತು ಆವರ ಸಹೋದ್ಯೋಗಿಗ ಳೊಂದಿಗೆ ಈ ವಿಷಯದ ಕುರಿತು ಸಮಾಲೋ ಚನೆ ನಡೆಸಿದವು. 263 ಜನರ ಸಾಕ್ಷ್ಯಗ ಳನ್ನು ಈ ಸಮಿತಿಯು ಸಂಗ್ರಹಿಸಿತು. ಅವ ರಲ್ಲಿ 99 ಮಂದಿ ಅಧಿಕಾರಿಗಳ ಮತ್ತು 163 ಮಂದಿ ಖಾಸಗೀ ಪ್ರಮುಖರ ಸಾಕ್ಷ್ಯಗಳವೆ. ಶ್ರೀ ಸಿ. ರಾಜಗೋಪಾಲಾಚಾರಿ, ಆಚಾರ್ಯ ನಿರೋಬಾ ಭಾವೆ, ಶ್ರೀ ಯು. ಎನ್. ಧೇಬರ್ ಇಂತಹ ಮುಖಂಡರ ಅಭಿಪ್ರಾಯಗಳೂ ಈ ಸಾಕ್ಷ್ಯಗಳಲ್ಲಿವೆ.

ಕಾರ್ಯನೀತಿಯ ಅನುಷ್ಠಾನ

ರಾಜ್ಯಗಳಲ್ಲಿ, ಸಂಂಕ ನೀತಿಯ ನಿಲ್ಲೆಲೆ ಯಲ್ಲಿ ಪಾನನಿರೋಧ ಪ್ರಗತಿಯ ಸ್ಥಕ್ಕ ಪರಿ ಸ್ಥಿತಿಯನ್ನು, ಅದರಲ್ಲಿರುವ ನುಬ್ಬ ಕುಂದು ಕೊರತೆಗಳನ್ನು, ಅವುಗಳ ಕಟ್ಟುಕಡೆಯು ರೂಪವನ್ನೂ ಈ ವರದಿಯು ತಿಳಿಸುತ್ತದೆ. ಆಂಧ್ರ, ಮುಂಬೈ, ಮದರಾಸ್ ಮತ್ತು ಪಾ ರಾಷ್ಟ್ರ ಈ ನಾಲ್ಕು ರಾಜ್ಯಗಳಲ್ಲಿ ಪಾನನಿರೋ ಧವಿದೆ. ಅಸ್ಸಾಂ, ಮಧ್ಯ ಪ್ರದೇಶ, ಮಧ್ಯ ಭಾರತ, ಮೈಸೂರು, ಒರಿಸ್ಸಾ, ತಿರುವಾಂಕೂ ರು—ಕೊಚಿನ್, ಪಂಜಾಬ್, ಉತ್ತರ ಪ್ರದೇ ಶ ಮತ್ತು ಹಿಮಾಚಲ ಪ್ರದೇಶ ಈ ಏಳು ರಾಜ್ಯಗಳಲ್ಲಿ ಕೆಲವು ಭಾಗಗಳಲ್ಲಿ ಪಾನ ನಿರೋಧವಿದೆ. ಈಗ ಸುಮಾರು 3,52,396 ಚದುರ ಮೈಲುಗಳಲ್ಲಿ ಅಥವಾ ಭಾರತ ದ ಒಟ್ಟು ವಿಸ್ತೀರ್ಣದಲ್ಲಿ ನೂರಕ್ಕೆ 29ರಷ್ಟು ಭಾಗದಲ್ಲಿ ಪಾನನಿರೋಧವಿದೆ. ಸುಮಾರು 18 ಕೋಟಿ ಜನರು ಅಂದರೆ ಒಟ್ಟು ಜನ ಸಂಖ್ಯೆಯಲ್ಲಿ ನೂರಕ್ಕೆ 86ರಷ್ಟು ಜನರು ಪಾ ನನಿರೋಧದ ವ್ಯಾಪ್ತಿಗೆಳಗಾಗಿರುವರು.

ಪಾನನಿರೋಧವ ಆಚರಣೆಯಲ್ಲಿರುವ ರಾ ಜ್ಯಗಳಲ್ಲಿ ಈ ಜಾರಿಯಲ್ಲಿ ಆನಿಯಮ ಪ್ರಗತಿ ಯನ್ನು ಈ ಸ್ವಾರಣೆಯಿಂದ ಅರ್ಥಿಕ ಮ ತ್ತು ಸಾಮಾಜಿಕ ಕ್ಷೇತ್ರಗಳಲ್ಲಾವ ಕಲಿಣಾಮ ಇತ್ಯಾದಿಗಳನ್ನು ಈ ವರದಿಯಲ್ಲಿ ಸಂಗ್ರಹಿಸ ಲಾಗಿದೆ. ಪಾನನಿರೋಧದಂತಹ ಸುಧಾರಣೆ ಗೆ 5 ಅಥವಾ 6 ವರ್ಷಗಳು ಬಹಳ ಕಡಿಮೆ ಯೆಂದೂ, ಈ ದೃಷ್ಟಿಯಿಂದ ನೋಡಿದಲ್ಲಿ ಈಗ ಹಲವು ರಾಜ್ಯಗಳು ಈ ಹಾದಿಯಲ್ಲಿ ಸಾಧಿಸಿರುವ ಪ್ರಗತಿಯು ಗಮನಾರ್ಹವಾದು ದೆಂದೂ ಈ ಸಮಿತಿಯು ಅಭಿಪ್ರಾಯಪಟ್ಟಿದೆ.

ಗಣನೀಯ ಪರಿಣಾಮ

ಪಾನನಿರೋಧವಿರುವ ಕ್ಷೇತ್ರಗಳಲ್ಲಿ ಮುಮ್ಮ ದ ಸೇವನೆಯು ಪ್ರಮಾಣ ಬಹಳ ಕಡಿಮೆಯಾ ಗಿದೆ. ಅಕ್ರಮ ಮುಮ್ಮದ ಸೇವನೆ ಪ್ರಮಾಣವ ನ್ನು, ಪಾನನಿರೋಧವಿರದ ದಿಸಗಳಲ್ಲಿ ಮುದ್ಯ ಸೇವನೆಯು ಪ್ರಮಾಣಾದೊಂದಿಗೆ ಹೋಲಿಸಿದರೆ ಪಾನನಿರೋಧ ಕಾರ್ಯಕ್ರಮದ ಪ್ರಗತಿಯು ಪ್ರತ್ಯಕ್ಷವಾ ಗಿ ತೀವ್ರತೆಯನ್ನು ಗಳಿಸಿವೆ. ಅವುಗಳು ಎದುರಿಸಿ ಬೇಕಾದ ಪ್ರಾಯೋಗಿಕ ತೊಂದರೆಗಳೇನು ಎಂಬುದನ್ನು ಪರಿಶೀಲಿಸುವುದು.

ಪಾನನಿರೋಧವಿರದ ರಾಜ್ಯಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ನುನ್ಯಪಾನ ಸೇವನೆಯ ಅಭ್ಯಾಸ 'ಯುವಕರಿಗೆ' ಮತ್ತು 'ಉನ್ನತ ವರ್ಗ' ಕ್ಕೆ ಸೇರಿದ ಮಹಿಳೆಯರಿಗೆ ಸಹ ಈಗ ಅಂಟಿಕೊ ಳ್ಳುತ್ತಿದೆ. ದೊಡ್ಡ ಮೊಡ್ಡ ಕೈಕಾರಿಕಾ ಕ್ಷೇ ತ್ರಗಳಲ್ಲಿ, ನದಿ ಮತ್ತು ಕಣಿವೆ ಅಭಿವೃದ್ಧಿ ಇ ತ್ಯಾದಿ ಕ್ಷೇತ್ರಗಳಲ್ಲಿ ಮದ್ಯಪಾನ ಸೇವನೆಯು ಕೆಲಸಗಾರರ ಆರ್ಥಿಕ ಜೀವನವನ್ನು ಹಾಳು ಮಾಡಿದೆ. ಈ ಬಗೆಗೆ ತೀವ್ರ ಪರಿಶೀಲನೆಯಾ ಗಬೇಕೆಂದು ಈ ಸಮಿತಿ ಸಲಹೆಯಿತ್ತಿದೆ.

ಪೂರ್ಣ ಪಾನನಿರೋಧ

ಈ ಸಮಿತಿಯು ಭಾರತ ಸಂವಿಧಾನದ 47ನೆಯ ಸೂತ್ರದ ಆಶಯವನ್ನು ಪ್ರಸ್ತಾಪಿ ಸುತ್ತ, ಈ ಸೂತ್ರದ ಪ್ರಕಾರ ಪ್ರತಿಯೊಂದು ರಾಜ್ಯಸರ್ಕಾರವೂ ಪಾನನಿರೋಧವನ್ನು ಜಾರಿ ಗೆ ತರಬೇಕಾದುದು ಕರ್ತವ್ಯವಾಗುತ್ತದೆಯೆಂ ದು ತಿಳಿಸಿದೆ.

ಈನ್ನಿತ್ಯಯಿಂದ ಹಾಗೂ ಇತರ ಪರಿಸ್ಥಿತಿ ಗಳಿಂದ, ಪಾನನಿರೋಧವನ್ನು ಏಕತ್ರವಾಗಿ ರಾ ಷ್ಟ್ರೀಯ ಕಾರ್ಯನೀತಿಯನ್ನಾಗಿ ಅಂಗೀಕರಿ ಸಬೇಕಾಗುವುದೆಂದು ರಾಷ್ಟ್ರವ್ಯಾಪ್ತಿಯ ಪಾನನಿ ರೋಧವನ್ನು ಆಚರಣೆಗೆ ತರಲು 1958ನೆಯ ಏಪ್ರಿಲ್ 1ನೇ ತಾರೀಕು ಕೊನೆಯ ದಿನವೆಂ ದು ಗೊತ್ತುಮಾಡಬೇಕೆಂದು ಈ ಸಮಿತಿಯು ಅಭಿಪ್ರಾಯ ಪಡುತ್ತದೆ. ಆನುವರಿಗಿನ ಅಂತ ರವಲ್ಲಿ ರಾಜ್ಯ ಸರ್ಕಾರಗಳು ಈ ಕಾರ್ಯನೀ ತಿಯ ಅನುಷ್ಠಾನಕ್ಕೆ ಅಗತ್ಯವಾದ ಪೂರ್ವ ಭಾವಿ ಸಿದ್ಧತೆಗಳನ್ನು ನಡೆಸಿಕೊಳ್ಳಬೇಕು.

ಪರಿಣಾಮಕಾರಿಯಾದ ಪಾನನಿರೋಧಕ್ಕೆ ನ್ಯಕಿರಿಕ್ತವಾಗಿ ಕೆಲಸಮಾಡುವುದಕ್ಕೆ ಅನಕಾ ಶಯದಾರರೆಂಬ ದೃಷ್ಟಿಯಿಂದ ಈ ಗುರಿ ಯ ದಿನವನ್ನು ಆಂಗೀಕರಿಸಲಾಗಿದೆ

ಮುಮ್ಮ ಸಂಸ್ಥೆಯ ಅಗತ್ಯ

ಪಾನನಿರೋಧದ ಬಗೆಗೆ ಕೇಂದ್ರ ಸಮಿತಿ ಯೊಂದು ರಚಿತವಾಗಿ ಆದು, ರಾಜ್ಯಗಳಲ್ಲಿ ಪೂರ್ಣ ಪಾನನಿರೋಧವನ್ನು ಆಚರಣೆಗೆ ತರ ಲು ಆಗತ್ಯವೆನಿಸಿದ ಸಮರ್ಪಕ ಆಡಳಿತಗಳಾ ಗುವ ಬಗೆಗೆ ಪರಿಶೀಲನೆ ನಡೆಸುವುದು. ಯಾ ವುದೇ ರಾಜ್ಯ ಆ ಬಗೆಗೆ ಸಿದ್ಧನೊಂದಿರದಿದ್ದ ಲ್ಲಿ, ಈ ಸಮಿತಿಯು ಆ ಬಗೆಗೆ ಆ ರಾಜ್ಯದ ಗಮನ ಸೆಳೆದು, ಪರಿಣಾಮಕಾರಿಯಾದ ರೀತಿ ಯಲ್ಲಿ ಸಿದ್ಧತೆಯನ್ನು ನಾಡಿಕೊಳ್ಳಬೇಕೆಂದು ಸೂಚಿಸುವುದು.

ಪಾನನಿರೋಧ ಕಾರ್ಯದ ಸರ್ವಂಪ್ರತಿ ಪ್ರಗತಿಯನ್ನು ಕುರಿತು ಈ ಕೇಂದ್ರ ಸಮಿತಿ ಯು ವರದಿಮಾಡಬಹುದು. ಈ ಸಮಿತಿಯ ವರದಿಯನ್ನು ಅಭಿವೃದ್ಧಿ ಮಂಡಳಿಯ ಮುಂದೆ ಅವಗಾಹನೆಗಾಗಿ ಇಡಬಹುದು. ಇದರಿಂದ ರಾಷ್ಟ್ರವ್ಯಾಪ್ತಿಯ ಪಾನನಿರೋಧ ಕಾರ್ಯನೀ ತಿಯನ್ನು ಗುರಿಯ ವೇಳೆಯೊಳಗಾಗಿ ಆಚರಣೆ ಗೆ ತರಲು ಸಹಾಯವಾಗುವುದು. ಪ್ರಜೆಗಳಿತ ಪ ಕ್ಷವು ಕೊನೆಗೊಳ್ಳುವ ಮುಂಚೆಯೇ ರಾಜ್ಯ-ಸರ್ಕಾರಿಗಳು ಈ ಕಾರ್ಯ ನೀತಿಯನ್ನು ಅಂ ಗೀಕರಿಸಿ ಪೂರ್ಣ ಪಾನನಿರೋಧ ಜಾರಿಗೆ ಗೊತ್ತು ಮಾಡಿದ ನಿರ್ದಿಷ್ಟ ದಿನವನ್ನು ಘೋ ಷಿಸಬೇಕೆಂದು ಸಮಿತಿಯುಸಿಫಾರಸುಮಾಡಿದೆ.

ಕಾರ್ಯಕ್ರಮಗಳ ವಿವರ

ಕಾರ್ಯ ನೀತಿಯನ್ನು ಅಂಗೀಕರಿಸಿದ ದಿ ನಕ್ಕೂ ಆದುಜಾರಿಗೆ ಬರುವ ದಿನಕ್ಕೂ ಇರುವ ಅಂತರದಲ್ಲಿ ರಾಜ್ಯ ಸರ್ಕಾರಗಳು ಕೈಗೊಳ್ಳ ಬೇಕಾದ ಕ್ರಮಗಳನ್ನು ಸಮಿತಿಯು ಸಿಫಾರ ಸು ಮಾಡಿದೆ. ಆವುಗಳಲ್ಲಿ ಮೊದಲನೆಯ ದು ಇದುವರೆಗೂ ಪಾನನಿರೋಧವನ್ನು ಆಚ ರಣೆಗೆ ತರದಿರುವ ರಾಜ್ಯಗಳಲ್ಲಿ ಮತ್ತು ಪಾನ ನಿರೋಧ ಜಾರಿಯಲ್ಲಿಲ್ಲದ ಕ್ಷೇತ್ರಗಳಲ್ಲಿ ಹೋ ಟೆಲುಗಳು, ಬಾರುಗಳು, ರೆಸ್ಟುರಾಗಳು, ಭೋಜನ ಗೃಹಗಳು, ಕ್ಲಬ್‌ಗಳು, ಸಿನಿಮಾ ಗಳು ಮತ್ತು ಸಾರ್ವಜನಿಕ ಮತೀಯ ಮತ್ತಿತ ರೆ ನಾಟಕಗಳಲ್ಲಿ ಮದ್ಯಪಾನ ಸೇವನೆ ಪೂರ್ಣ ವಾಗಿ ನಿಂತುಹೋಗಬೇಕು.

ಪ್ರತ್ಯಕ್ಷ ಮದ್ಯಪಾನ ಸೇವನೆ ನಿಂತರೆ, ಆವರಿಂದ ಸಾರ್ವಜನಿಕ ಅಭಿಪ್ರಾಯವಲ್ಲಿ ಮ ದ್ಯಪಾನದ ಬಗೆಗೆ ಅಗಾಧವಾದ ಪಾಪಸಿಕ ಪರಿವರ್ತನೆಯೊಮ್ಮಾಗುವುದೆಂಬ ಸಮಿತಿಯು ಅಭಿ ಪ್ರಾಯಪಟ್ಟಿದೆ. ವಿದೇಶಿಯರು ಮತ್ತು ವಿ ದೇಶಗಳಿಂದ ಬಂದ ಪ್ರವಾಸಿಕರಿಗೆ ಮದ್ಯ ದೊರೆಯುವುದಕ್ಕೆ ಅಗತ್ಯವಾದ ಅನುಕೂಲತೆ ಗಳನ್ನು ಕೆಲವು ವಿಶಿಷ್ಟ ಹೋಟೆಲುಗಳಲ್ಲಿ ಮಾತ್ರ ಮಾಡಿಕೊಡಬೇಕು. ಅನರಿಗಾಗಿ ಪ್ರತ್ಯೇಕ ಕೋಷ್ಠಗಳನ್ನು ವಿಶದಪಡಿಸಬೇಕು. ಈ ಮಧ್ಯಂತರ ಕಾಲದಲ್ಲಿ ಸಂರಕ್ಷಣಾ ದಳದ ಪಾಕ ಶಾಲೆಗಳಲ್ಲಿ ಹೊರಗಿನವರು ಆತಿಥಿಗಳಾ ಗಿ ಬಂದಿದ್ದಾಗ ಮದ್ಯವನ್ನು ಮೇಜುಗಳ ಬ ಳಿಗೆ ತಂದು ಕೊಡಕೂಡದು. 1956ರ ಏಪ್ರಿಲ್ 1ರಿಂದ ಮದ್ಯ ಸಂಬಂಧವಾದ ಎ ಲ್ಲಾ ಜಾಹೀರಾತುಗಳನ್ನು ಜನತೆಯನ್ನು ಪ್ರೋ ರೇಪಿಸುವ ಇತರ ಸಾಧನಗಳನ್ನು ನಿಷೇಧಿಸಬೇ ಕುಎಂದು ಸಮಿತಿಯು ಸೂಚಿಸಿದೆ.

ಸರ್ಕಾರಿನೌಕರರನುಮ್ಮಾನ ನಿಷೇಧವನ್ನು ಅವರ ನಡವಳಿಕೆಗಳಲ್ಲಿನ ನಿಯಮವನ್ನಾಗಿ ವಿಧಿಸಿ ಅವನ್ನು ಅದರ ಸೇವಾ ನಿಯಮಾಗಳಲ್ಲಿ ಅಳವಡಿಸಬೇಕೆಂದು ಸಮಿತಿಯು ಸಿಫಾರಸು ಮಾಡಿದೆ.

(ಸಶೇಷ)

ಮಕ್ಕಳ ಮಗ್ಗಿ ಪುಸ್ತಕ
ಬೆಲೆ ೦—೧—೦
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ನವಯುಗ ಪ್ರೆಸ್, ಉಡುಪಿ.
ಸಾಹಸ ರಂಗದ ಮೇಲೆ ಬೆಳಕು

ಜನಮತ

ಜಿಲ್ಲೆಯ ಒಳನೀರು ದಾರಿಗಳ ನಿರ್ಮಾಣ ಕಾರ್ಯಕ್ರಮ

ಮಾನ್ಯ ಸಂಪಾದಕರೆ,

ನಿಮ್ಮ ಇದೇ ೨೦ನೇ ತಾರೀಕಿನ (20—10—1955) ಸಂಚಿಕೆಯಲ್ಲಿ ಜಿಲ್ಲೆಯ ಒಳ ನಾಡಿನ ನೀರು ದಾರಿ ಯೋಜನೆಯ ಕುರಿತು ಪ್ರಕಟಿತವಾದ ಸುದ್ದಿಯನ್ನೋದಿ ರೋಮಾಂಚಿತನಾದೆನು! ಸೌರ್ಯನಗೆ ಸೊಡರನ್ನು ತೋರಿ ಭಕ್ತ—ಗೌರವ ಸೂಚಿಸುವ ಭಕ್ತನಂತೆ, ಜಿಲ್ಲೆಯ ನುಹಾ ವ್ಯಕ್ತಿಗಳ ಲ್ಲೊಬ್ಬರಾದ ಡಾ॥ ಮಾಧವ ಪೈಗಳವರ ಶ್ರದ್ಧಾಶಕ್ತಿಗೆ ಇದೋ, ನನ್ನ ಮನಃಪೂರ್ವಕ ಪ್ರಣಾಮದ ಸೊಡರಿನಾರತಿ!

ದಕ್ಷಿಣ ಕನ್ನಡವು ಬ್ಯಾಂಕಿಂಗ್ ವೈವ ಹಾರದಲ್ಲಿಯೂ, ವಿಮಾ ಯೋಜನೆಯಲ್ಲಿಯೂ ಕರ್ನಾಟಕಕ್ಕೆ ಮಾತ್ರವಲ್ಲದೆ ಕರ್ನಾಟಕೇತರ ಪ್ರದೇಶಗಳಿಗೂ ದೊಡ್ಡ ಮಾದರಿ ಹಾಕಿ ಕೊಟ್ಟಿರುತ್ತದೆ. ಹಾಗೆಯೆ ಆ ಜಿಲ್ಲೆಯ ಮಕ್ಕಳು ಭಾರತದ ವಿವಿಧ ಸ್ಥಾನಿಕ—ನಗರಗಳ ಲ್ಲಿಯ ವಿವಿಧ ಕಾರ್ಯಕ್ಷೇತ್ರಗಳಲ್ಲಿ ತಮ್ಮ ವಿಶಿಷ್ಟ ವಿಧಾಯಕ ವರ್ಚಸ್ಸನ್ನು ಬೀರಿದ್ದಾರೆ. ಈಗ ಡಾ॥ ಪೈಯವರು ಒಳನಾಡಿನ ಜನತೆಗೆ ಒಂದು ಕಾಮಧೇನುವನ್ನೇ ತಂದು ಕೊಡುವಂತೆ ಈ ಯೋಜನೆಯ ರೂಪರೇಷೆ ತಯಾರಿಸಿರುವುದನ್ನು ಎಷ್ಟು ಹೊಗಳಿದರೂ ಸಾಲದು.

ಉಪ್ಪುಂದದ ಹೊಳೆಯೇ ಜಿಲ್ಲೆಯ ಆತ್ಯುತ್ತರದ ನದಿ. ಅಲ್ಲಿಂದ ಆತಿ ತೆಂಕಣದ ಪಯಸ್ವಿನಿಯ ವರೆಗೂ ಸಾಕಷ್ಟು ಒಳನಾಲ್ಕು ಒಳಕಾಲುವೆಗಳನ್ನು ತೋಡಿಸಬರುವುದು. ಗಂಗೊಳ್ಳಿ ಹೊಳೆಯಲ್ಲಿ ಪೂರ್ವಕ್ಕೆ ಸುಮಾರು ೧೫ ಮೈಲಿನ ವರೆಗೂ ಕರಾವಳಿಯಿಂದ ದೋಣಿಗಳಲ್ಲೇ ಮಾಲುಗಳನ್ನೊಯ್ಯುತ್ತಾರೆ; ಹಾಗೆಯೇ ಬಾರಕೂರು ಹೊಳೆ, ಕಲ್ಯಾಣಪುರ ಹೊಳೆಗಳಲ್ಲಿಯೂ ಪೂರ್ವಕ್ಕೆ ಬಸ್ರೂರಿನ ವರೆಗೆ ಮಾಲು ದೋಣಿಗಳ ಸಂಚಾರವಿದೆ. ಇದೇ ರೀತಿ, ಬಹುತೇಕ ಎಲ್ಲ ಹೊಳೆಗಳಲ್ಲಿಯೂ ವಿಹಾರವಿದೆ.

ಆಯಾ ಹೊಳೆಗಳ ಆತಿಪೂರ್ವದ 'ಬಂದರು'ಗಳು ಈಗೆಲೂ ಗಟ್ಟಿದ ಮೇಲಿನ ಮಾಲುಗಳ ಸಾಗಾಟದ ರಭ್ಸ ಕೇಂದ್ರಗಳಾಗಿವೆ. ಉದಾ:- ಗಂಗೊಳ್ಳಿ ಹೊಳೆಗೆ ಎಂಡಸಿ; ಬಾರಕೂರು ಹೊಳೆಗೆ ಕೊಕ್ಕರ್ಣೆ; ಕಲ್ಯಾಣಪುರ ಹೊಳೆಗೆ ಬಜೆ. ಇದಿಷ್ಟು ನನಗೆ ಗೊತ್ತಿರುವ ಆಂಶ. ಆ ಒಳನಾಡಿನ ಬಂದರುಗಳು ದೊಡ್ಡ ಊರುಗಳಾಗಿ ಬೆಳೆಯಲಿಕ್ಕೂ, ನದಿಗಳ ಇಕ್ಕೆಲದ ಹಳ್ಳಿಗಳ ಆರ್ಥಿಕ ಮತ್ತು ಔದ್ಯಮಿಕ ಅಭಿವೃದ್ಧಿಗೂ ಈ ಒಳ ಕಾಲುವೆಗಳಿಂದ ಬಹಳ ಸಹಾಯವಾಗುವುದೇ ಸರಿ.

ಮಾನ್ಯ ಡಾ॥ ಪೈಗಳವರು ಈ ಕುರಿತು ವಿವರವಾದ ಸಮಗ್ರ ಮಾಹಿತಿಯನ್ನು ಕೂಡಿಸಿರುವರೆಂಬಲ್ಲಿ ಸಂದೇಹವಿಲ್ಲ. ಆಪ್ಪೇ ಅಲ್ಲದೆ, ಈ ಕಾಲುವೆಗಳ ಕಷಿತಕ್ಕೆ ಒಟ್ಟು ೫೦ ಲಕ್ಷ ರೂಪಾಯಿಗಿಂತ ಹೆಚ್ಚು ವೆಚ್ಚ ಬರಲಾರದೆಂದು ಅವರೇ ಅಂದಾಜು ಮಾಡಿದ್ದಾರೆ. ಬಹು ಸುಂದರವೂ ಜನಸಾಂದ್ರವೂ ಆದ ದಕ್ಷಿಣ ಕನ್ನಡ ಜಿಲ್ಲೆಗೆ ಈ ಯೋಜನೆಯಿಂದ ಆನೇಕ ರೀತಿಯ ಲಾಭವಾಗುವುದು. ದೊಡ್ಡ ದೊಡ್ಡ ಕಾರ್ಯಗಳನ್ನು ಲೀಲಾಜಾಲವಾಗಿ ನಾಡಿ ತೋರಿದ ಡಾ॥ ಪೈಗಳವರಿಗೆ ಈ ಕಾರ್ಯವು ಅಸ್ಪೃಸನೂ ಕಸ್ಪಕರವಲ್ಲ. ಅವರ ಮನೆತನವು ಸ್ವರಾಜ್ಯ ಸ್ವಾಪ್ತಿಯ ಚಳವಳಿಯ ಆರಂಭಕಾಲದಿಂದ ಲೂ ಗದ್ದಲವಿಲ್ಲದೆ ತ್ಯಾಗಪೂರ್ವಕವಾಗಿ ಯೂ, ಉತ್ಪಾಪನಂದಲೂ ಸೇವೆಸಲ್ಲಿಸುತ್ತ ಬಂದಿರುವುದು ಜಿಲ್ಲೆಯ ಎಲ್ಲ ವಿಚಾರವಂತ ಜನರಿಗೂ ಗೊತ್ತೇ ಇದೆ. ಆಪದು ಆಪ್ಪೇ ಉತ್ಸಾಹ ಚುತ್ತು ಜನಸೇವಾ ಭಾವದಿಂದ ತಮ್ಮ ಕಾರ್ಯಗಳನ್ನು ಮುಂದೊತ್ತುತ್ತಿರುವುದನ್ನು ನೋಡಿ ಯಾರಿಗೆ ತಾನೇ ಆನಂದವಾಗದು?

—ಜಿ. ಆರ್. ಹಾಂಡೇಶ್ವರ.

ಧಾರವಾಡ, 24.10.55.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಜನಪದ ಜೀವನ—

ಬರೆದವರು: ಬೆಟಗೇರಿ ಕೃಷ್ಣ ಶರ್ಮ. ಪ್ರಕಾಶಕರು: ಕಾರ್ಯದರ್ಶಿ, ಕರ್ನಾಟಕ ಸಹಕಾರಿ ಸಾಹಿತ್ಯ ಸಂಘ, ಲಿ; ಮು. ನಂ. ೯೭೩, ಧಾರವಾಡ. ಬೆಲೆ: ರೂ. ೧-೮-೦.

ಪುಸ್ತಕ ಪ್ರಕಾಶನ ಕಾರ್ಯವನ್ನು ಸಹಕಾರ ತತ್ವದ ಮೇಲೆ ನೆರವೇರಿಸಿ, ಜನರಿಗೆ ಆಗ್ಗ ಕ್ರಯದಲ್ಲಿ ಉತ್ತಮ ಸಾಹಿತ್ಯ ಸಿಗುವಂತೆಯೂ ಲೇಖಕರಿಗೆ ಒಳ್ಳೆಯ ಪ್ರತಿಫಲ ದೊರಕುವಂತೆಯೂ ಕೆಲವು ಮಹಾನೀಯರು ಹಾಕಿಕೊಂಡ ಕಾರ್ಯಕ್ರಮದಂತೆ ಪ್ರಕಟವಾದ ಮೊದಲನೆಯ ಗ್ರಂಥವೇ "ಜನಪದ ಜೀವನ" ಎಂಬ ಏಳು ಸಣ್ಣ ಕತೆಗಳ ಸಂಕಲನ. ಇದನ್ನು ಬರೆದವರು ಈಗಾಗಲೇ ಒಳ್ಳೆಯ ಕತೆಗಾರರೆಂಬ ಖ್ಯಾತನಾಮರಾಗಿದ್ದಾರೆ. ಉತ್ತಮ ಅಭಿರುಚಿಯನ್ನು ಹೊಸಿಸಿಕೊಂಡು ಬರುವುದರಲ್ಲಿ ಈ ಲೇಖಕರು ತಮ್ಮ "ಜಯಂತಿ" ಮಾಸಿಕದ ಮೂಲಕವೂ ನೆರವಾಗಿದಾರೆ. ಆವರ ಸಣ್ಣ ಕತೆಗಳು ಹೆಸರಿಗೆ ತಕ್ಕಂತೆ ಸಾಮಾನ್ಯ ಜನತೆಯನ್ನೆ ಕುರಿತಾಗಿವೆ. "ಆರಳಿದ ಜೀವ" "ದಲ್ಲಿ ಕ್ಷಾಮಕಾಲದ ರುದ್ರ ಚಿತ್ರಣವಿದೆ; "ನಂದ ನೂರಿನ ಜಾತ್ರೆ" ಯು ಆಟೋಕಾರ್ ನಗರಾಸಾಯಿಯಲ್ಲಿ ವಿನೇಕ ಮತ್ತು ಬೆದಾರ್ಯ ವಿರುವುದನ್ನು ತೋರಿಸುತ್ತದೆ; "ಬೀದಿಯ ಪಾಡುಗಾರರು" ಸಾಯುತ್ತಿರುವ ತಾಯಿಯು ಹೊಟ್ಟೆಗೆ ಗಂಜಿ ತೋರಿಸಲು ಹಾಡಬೇಕಾಗಿ ಬರುವ ಹಾಡುಗಿಯ ಕರುಣ ಕತೆಯಾಗಿದೆ; "ಸೂರಕೆಯ ವರ್ಗದ ಪ್ರಯಾಣ" ಜೀವನದ ನಿವಿಧ ವರ್ಣಗಳನ್ನು ಕಣ್ಣಿಗೆ ಕಟ್ಟುತ್ತದೆ ತನ್ನನ್ನು ನಂಬಿಹೊಟ್ಟು ಹೆಣ್ಣು ಮಗಳ ಬಾಳನ್ನು ಹೋಳಿಸಾಡಿದಮೇಲೆ ಆಕೆ ಕಂಡವರ ಕಣ್ಣಿಗೆ ಯಾಗಿಯೇ ಬದುಕಬೇಕಾದುದನ್ನು ನೋಡಬೇಕಾಗಿ ಬಂದೊಬ್ಬ ಬೆಂದ ಜೀವಿಯ ಪರಿಚಯವಿಲ್ಲಿ ನಮಗಾಗುತ್ತದೆ; "ನೆತ್ತರೆ ಕೊಡುಗೆ"ಯು ಪ್ರಾಚೀನ ವೀರನೊಬ್ಬನ ಸಾಹಸದ ಮೇಲೆ ಪ್ರಕಾಶವನ್ನು ಬೀರುತ್ತದೆ; "ಬೆನ್ನದ ಸಂಸಾರ" ಈ ತೊಹಲವನ್ನು ಕೆರಳಿಸಿಕೊಂಡು ಓದಿಸುತ್ತದೆ; "ಹುಳು ಬಿತ್ತಿದ ಪಳ್ಳಿ" ಶಾಲಪ್ಪನ ಸಂಸಾರವನ್ನು ಮುಳುಗಿಸಿದ ಟಿನ್ಸೈಪ್ಪನ ಮನುಷ್ಯತ್ವಗಳ ವಿಪರವಿಯಾಯುತ್ತದೆ. ಎಲ್ಲ ಕತೆಗಳೂ ಜೀವ್ಯಾಗಿ ಬರೆಯಲ್ಪಟ್ಟಿವೆ; ಶೈಲಿ ಲಲಿತವಾಗಿದೆ; ನಿರೂಪಣೆ ಸೊಗಸಾಗಿದೆ; ಪ್ರತಿಯೊಂದು ಕತೆಯೂ ಜೀವುನಾದ ಆಪರ್ಕವನ್ನು ಕಣ್ಣಮುಂದಿಡುವಷ್ಟು ಪರಿಣಾಮಕಾರಿಯಾಗಿದೆ. ಮುದ್ರಣ ಕಾರ್ಯವೂ ಆಕರ್ಷಕವಾಗಿದೆ. ಹೊಸ ಬಗೆಯ ಈ ಉದ್ಯಮಕ್ಕೆ ಯಶಸ್ಸನ್ನು ಕೋರುತ್ತೇವೆ.

ಲಘು ಪರಿಚಯ

❖ ಕನ್ನಿಗೋಳಿಯಿಂದ ಶ್ರೀ ಕೊಡಪ್ಪಾರು ಅನಂತಪದ್ಮನಾಭ ಉಡುಪರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ಯುಗಪುರುಷ' ಮಾಸಿಕದ ದಸರಾ ಸಂಚಿಕೆಯು ತಿಳಿಹಾಸ್ಯದ ಪ್ರಬಂಧಗಳಿಂದಲೂ ಸಾಹಿತ್ಯ, ನವರಾತ್ರಿಯ ಉತ್ಸವ, ಶಿಕ್ಷಣ, ಆರೋಗ್ಯ ಇತ್ಯಾದಿ ಉಪಯುಕ್ತ ವಿಷಯಗಳನ್ನು ಕುರಿತ ಲೇಖನಗಳಿಂದಲೂ ಕೂಡಿ ಪ್ರಕಟವಾಗಿದೆ. ಕವಿತೆಗಳ ವಿಪುಲ ರಾಶಿಯೂ ಈ ಸಂಚಿಕೆಯಲ್ಲಿದೆ. ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳ "ಮರುಬ್ಬಿರೆನ್ನೆ ಅಗಹಿ" ಎಂಬ ಖಚ್ಚಿತವಿದ ಕೆಲವು ಸುಂದರ ಸಾಲುಗಳ ಆನುವಾದವು ವಿಮ್ಶಾಸಕ ಪ್ರಕಂಠಿಸಿಗೆ ಪಾತ್ರ ವೆನಿಸುವ ಪೊಸಸಾಹಸ ನಾಗಿದೆ. ಮೇಲಿನೆಲ್ಲವನ್ನು ಶ್ರಮವಹಿಸಿ ಸಂಗ್ರಹಿಸಿ, ಪ್ರಕಟಿಸಿದ ಸಂಪಾದಕರ ಪ್ರಯತ್ನ ಅಭಿನಂದನೀಯ.

❖ ಮುಂಬಯಿ ಕರ್ನಾಟಕ ಸಂಘದ ಐವತ್ತೇ ವಾರ್ಷಿಕ ನವರಿ ಇತ್ಯಾದಿಗಳನ್ನು ಪರಿಶೀಲಿಸಿ, ತೃಪ್ತಿಯನ್ನು ವ್ಯಕ್ತಪಡಿಸಲು ನಮಗೆ ಆನಂದವಾಗುತ್ತದೆ. ಹೊರನಾಡಿನಲ್ಲಿರಿ ಬೇಕಾಗಿ ಬಂದ ಕನ್ನಡಿಗರು ಸಾಂಸ್ಕೃತಿಕ ಪರಂಪರೆಯನ್ನು ಕಾಯ್ದುಕೊಂಡು ಹೋಗಲು ಉತ್ಸುಕತೆಯಿಂದ ಸಂಘಟಿತರಾಗಿ ಕೆಲಸಮಾಡುತ್ತಿರುವುದು ಮೆಚ್ಚುಕೆಯ ವಿಚಾರ. ಕನ್ನಡ ನ್ಮಾನ ಮಕ್ಕಳ ವಿಮಲ ನೆರವು ಸಂಬಂಧಿಸಿದ ಕಾರ್ಯಕರ್ತರಿಗೆ ಧೊರೆಯುತ್ತಿರಲೆಂದು ನಾವು ಕೋರುತ್ತೇವೆ.

❖ ಆರನಟಗಿಯಲ್ಲಿ ಕೇಂದ್ರವನ್ನು ಸ್ಥಾಪಿಸಿರುವ ಧಾರವಾಡ ಜಿಲ್ಲೆಯ ಸರ್ವೋದಯ ಯೋಜನೆಯ ಸಂಚಾಲಕರಾದ ಶ್ರೀ. ನರಸಿಂಪ ಪಾಬಡೆಯವರು ಗಾಂಧೀಜಿಯವರು ನಿತ್ಯ ಮಾಡುತ್ತಿದ್ದ ಪ್ರಾರ್ಥನೆಗಳಿಂದ ಕೂಡಿದ ಪುಸ್ತಕವನ್ನು ಎರಡಾಣೆಯಷ್ಟುಸುಲಭ ಬೆಲೆಗೆ ಪ್ರಕಟಿಸಿದ್ದಾರೆ. ಸಂಸ್ಕೃತ, ಗುಜರಾತಿ ಇತ್ಯಾದಿ ಭಾಷೆಗಳಲ್ಲಿರುವ ಈ ಪ್ರಾರ್ಥನೆಗಳ ಕನ್ನಡ ಆನುವಾದವನ್ನು ಪದ್ಯ ರೂಪದಲ್ಲಿಯೇ ಮೂಲದೊಡನೆ ಕೊಟ್ಟಿರುವುದು ಈ ಪುಸ್ತಕದ ವೈಶಿಷ್ಟ್ಯ. ಪ್ರಾರ್ಥನೆಗೆ ಯೋಗ್ಯವಾದ ಕೆಲವು ಕನ್ನಡ ಪದ್ಯಗಳನ್ನೂ ಈ ಪುಸ್ತಕದಲ್ಲಿ ಸೇರಿಸಿದ್ದಾರೆ. ಚಿತ್ತಪುದ್ಧಿಯನ್ನು ನಾಡಿಸತ್ಸಂಕಲ್ಪ ಸಾಧನೆಗೆ ಮಡಿಯುವಂತಿ ಪ್ರೇರೇಪಿಸುವುದರಲ್ಲಿ ಪ್ರಾರ್ಥನೆಯಿಂದ ಧಾರಾಳ ಸಹಾಯವಾಗುವುದರಿಂದ, ಈ ಪ್ರಕಟಣೆಯು ಸಾಮುಯಿಕವೂ ಸ್ವಾಗತಾರ್ಹವೂ ಆಗಿವೆ ಎನ್ನಲು ಸಂತೋಷಿಸುತ್ತೇವೆ.

❖ ಶ್ರೀಮತಿ ಆರ್. ಕಲ್ಯಾಣಮ್ಮ ನವರ ಸಂಪಾದಕತ್ವದಲ್ಲಿ ಆರಕೇ ಪೇಟೆ, ಬೆಂಗಳೂರು ೨- ಇಲ್ಲಿಂದ ಪ್ರಕಟವಾಗುವ "ಸರಸ್ವತಿ" ಮಾಸ ಪತ್ರಿಕೆಯು ಹಲವರ ಮುಖ ಯ ಗ ಳ ಹೊ ರ ಬೊ ಡ ನೆ ದ ಸ ವಿಶೇಷ ಸಂಚಿಕೆಯನ್ನು ಹೊರಡಿಸಿದೆ. ರಾತ್ರಿಯ ಹಬ್ಬ, ಸ್ತ್ರೀ ಸಾಧಕ ಸಂಬಂ ಇತ್ಯಾದಿ ವಿಷಯಗಳ ಮೇಲೆ ಕೆಲವು ಲೇಖ ಗಳನ್ನಿದರಲ್ಲಿ ಕಾಣಬಹುದು.

❖ ನವನಾಜ ವಿಕಾಸ ಯೋಜನೆಯ ಕೆ ಪ್ರ ಮುಂಡಕಿದವರು "ಕಾರುಣ್ಯೇತ್ರ" ಎಂ ಹೆಸರಿನ ಸ್ತ್ರಕಟಣೆಯ ಮೂಲಕ ತಮ್ಮ ಚಟ ವಟಿಕೆಗಳ ಪರಿಚಯವನ್ನು ಮಾಡಿಕೊಡುತ್ತ ಬಂದಿದ್ದಾರೆ. ಇದು ಆಜ್ಞಾನ, ರೋಗರುಜೆ ಮತ್ತು ದಾರಿದ್ರ್ಯಗಳ ಮೇಲೆ ಪೂಡಿದ ಯುದ್ಧ ರಂಗದ ಸಂದೇಶವನ್ನು ತರುತ್ತಿರುತ್ತದೆ. ಇದು ಗಾಂಧೀ ಜಯಂತಿಯಂದು ಪ್ರಕಟವಾದ ಕೇಪ ಸಂಚಿಕೆಯು ಕಳೆದ ಸುಮಾರು ವರ್ಷಗಳಲ್ಲಿ ಹಳ್ಳಿಗಳ ಆಭಿವೃದ್ಧಿಯನ್ನು ಸಾಧಿಸಲು ರಾಪ್ಯೋದ್ಧಾರಕ್ಕಂತ ನಡೆಸಿದ ಪ್ರಯತ್ನಗಳ ನವರನ್ನು ಆನೇಕ ಭಾವಾ ಚಿತ್ರಗಳಿಂದಲೂ ಕಲಾವಿದರ ಸೊಗಸಾದ ಸ್ಫೂರ್ತಿದಾಯಕ ರೇಖಾಚಿತ್ರಗಳಿಂದಲೂ ಮನಗಾಣಿಸಿ ಕೊಡ ಕ್ಕದೆ.

—ಕು

(ನಂನೇ ಪುಟದಿಂದ)

ಮಾತ್ರವಲ್ಲ ತುಳುನಾಡಿನಲ್ಲಿ ಮಾಧ್ವ ಬ್ರಾಹ್ಮಣರು ಪೂಜೆ ಮಾಡುವ ಹೆಚ್ಚಿನ ದೇವಸ್ಥಾನಗಳಿಗೆ ಕೇರಳದ ಮಹಿಳೆಯರಿಗೆ ಪ್ರವೇಶವೇ ಇರಲಿಲ್ಲ. ಇಕ್ಕೇರಿಯು ರಾಜರ ಕಾಲದಲ್ಲಿಯೂ ಹೈದರಾಲಿ ಮತ್ತು ಟಿಪ್ಪುವಿನ ಕಾಲದಲ್ಲಿಯೂ ಬೇಕಲವೇ ಹುಜೂರು ಕಚೇರಿಯ ಕೇಂದ್ರವಾಗಿತ್ತಲ್ಲದೆ ಇಂಗ್ಲೀಷರು ಆಳಿಕೆ ನಡೆಸಿ ತೊಡಗಿದಾಗಲೂ ಸದರ್ ಅಮೀನ್ ಕಚೇರಿಯನ್ನು ಅಲ್ಲೆನೆಲೆಗೊಳಿಸಿದ್ದರು. ಚಂದ್ರಗಿರಿ ಹೊಳೆಯಿಂದ ಕವಾಯಿ ಗೆಡಿಯ ತನಕದ ಪ್ರದೇಶ ಸಕ ಕನ್ನಡಿಗರ ಸಾಮ್ರಾಜ್ಯದಲ್ಲಿದ್ದ ನಿರ್ದಯನಗಳಿಯವಾಗ ಕಾಸರಗೋಡು ತಾಲೂಕನ್ನು ಇಡಿಯಾಗಿ ಮಲೆಯಾಳಕ್ಕೆ ಸೇರಿಸುವ ಫಜಲಾಲಿ ಆಯೋಗದ ತ್ರಿಮೂರ್ತಿಗಳ ಸಿಫಾರಸನ್ನು ಯಾವ ವಿಚಾರವಂತನೂ ಮೆಚ್ಚುವುದು ಸಾಧ್ಯವಿಲ್ಲ. ಇಂಥ ಆನ್ಯಾಯವನ್ನು ತುಳುವರು ಸಹಿಸಲಾರರೆಂದೂ ಚಂದ್ರಗಿರಿ ಹೊಳೆಯ ಉತ್ತರದ ಒಂದೆಂಗಲ ಸ್ಥಳದ ಮೇಲಾದರೂ ಮಲೆಯಾಳಿಗಳ ಆಧಿಕಾರವಿಲ್ಲವೆಂದೂ ಈಚೆಗೆ ತುಳುವರ ಮಹಾ ಸಭೆ ನಿರ್ಣಯಿಸಿರುತ್ತದೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

"Ably written—Quite up-to-date valuable service"
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಬಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೊರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟಿ. ಖರ್ಚು ಬೇರೆ).

ಪ್ರತಿಗಳು ಸಿಗುವ ಮುಖ್ಯ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೂಲ್ಕಿ ಬ್ಯಾಂಕ್ ಲಿಮಿಟೆಡ್
ಮುಲ್ಕಿ. ೨

ಹಳ್ಳಿಗರ ಹಿತಸಾಧನೆಗಾಗಿ 1925ನೆಯ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ನೂರಿನ ವರಯುತ್ತಿರುವ ಬ್ಯಾಂಕಿಂಗ್ ಸೊಸ
ನಮ್ಮ ಮೂರು ವರ್ಷದ್ದನ್ನ ಡ ಜಿ
ಕೇಟುಗಳು 4½% ಬಡ್ಡಿ ಗಳನ್ನು ತಳಿಪಂ

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬ್ಯಾಂಕ್ ಲೆಕ್ಕ 2%
ಕರೆಟ್ ಎಕೌಂಟು ½%

THE MOOLKY BANK LTD., MULKI.

ಸ್ವಂತ ಜವಾಬ್ದಾರಿಯ ಮೇಲೆ
ನಾಲ ಕಂಕಿನ ಮರುಬಾನತಿ. ಇಂ
ದೊರೆಯತ್ತದೆ. ಸುಲಭ
ಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಆರ್ಡರ್‌ಮಾಡಿ ಕೊಳ್ಳುವುದು.

P. O. Box No. 3219, BOMBAY 3-

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 10—11—1955

ಸಂಚಿಕೆ ೧೧
NO. 11

ಗ್ರಾಮೋದ್ಯೋಗಕ್ಕೆ ಪ್ರೋತ್ಸಾಹ

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮೋದ್ಯೋಗಗಳ ಅಭಿವೃದ್ಧಿಯನ್ನು ಸಾಧಿಸಿ, ಸಾಧ್ಯವಾದಷ್ಟು ಹೆಚ್ಚು ಪ್ರಮಾಣದಲ್ಲಿ ನಿತ್ಯೋಪಯೋಗದ ವಸ್ತುಗಳನ್ನು ಅವು ಉತ್ಪಾದಿಸಿ ಪೂರೈಸುವಂತೆ ಮಾಡಲು ಮತ್ತು ಇದೇ ಸಮಯದಲ್ಲಿ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಲು ತಕ್ಕ ಸೂಚನೆಗಳನ್ನು ಮಾಡಬೇಕೆಂಬ ಉದ್ದೇಶವನ್ನು ನಿರೂಪಿಸಿ ಭಾರತ ಸರಕಾರದವರು ಇದೇ ಮೇ ತಿಂಗಳಲ್ಲಿ ನೇಮಿಸಿದ್ದ ಸಮಿತಿಯು ಇದೀಗ ತನ್ನ ವರದಿಯನ್ನು ಸರಕಾರಕ್ಕೆ ಒಪ್ಪಿಸಿದೆ. ಈ ಸಮಿತಿಯಲ್ಲಿ ಪ್ರೊ. ಡಿ ಜಿ. ಕರ್ವೆ ಅಧ್ಯಕ್ಷರಾಗಿಯೂ ಪ್ರೊ. ಡಿ. ಆರ್. ಗಾಡ್ಗೀಳ್, ಶ್ರೀ. ವಿ. ಎಲ್. ಮೆಹತ, ಶ್ರೀ. ಪಿ. ಗೋವಿಂದನ್ ನಾಯರ್, ಶ್ರೀ. ವಿ. ಸಂಜಪ್ಪ ಇವರು ಸದಸ್ಯರಾಗಿಯೂ ಡಾ. ಡಿ. ಕ. ಮಲ್ಹೋತ್ರರು ಕಾರ್ಯದರ್ಶಿಯಾಗಿಯೂ ದುಡಿದಿದ್ದರು.

ಕರ್ವೆ ಸಮಿತಿಯು ಅನೇಕ ವಿಷಯಗಳಿಂದ ಮಹತ್ವಪೂರ್ಣವಾಗಿದೆ. ಅದು ತನಗೆ ಒಪ್ಪಿಸಿದ್ದ ಕೆಲಸವನ್ನು ಅತ್ಯಂತ ದಕ್ಷತೆಯಿಂದ ಅತ್ಯಲ್ಪಾವಧಿಯಲ್ಲಿ ಪೂರೈಸಿದೆ. ಅದರ ನಿಲುಮೆಯು ಮತ್ತು ಸಮಸ್ಯೆಯನ್ನು ಸಮೂಹಿಸುವ ಅದರ ದೃಷ್ಟಿಕೋಣವು ಪ್ರಶಂಸಾರ್ಹವಾಗಿದೆ. ಈಗ ಇರುವ ಯಾವುದೇ ಉದ್ಯೋಗ ಕ್ಷೇತ್ರದಲ್ಲಿ ನಿರುದ್ಯೋಗವಾಗಲಿ ಅರ್ಧ ಉದ್ಯೋಗವಾಗಲಿ ಹುಟ್ಟಿಕೊಳ್ಳದಂತೆ ಅದು ನೋಡಿದೆ ಅಲ್ಲದೆ, ಉದ್ಯೋಗದಾವಕಾಶಗಳು ಅತ್ಯಧಿಕ ಪ್ರಮಾಣದಲ್ಲಿಯೇ ಈ ಕ್ಷೇತ್ರದಲ್ಲಿ ದೊರೆಯುವಂತಾಗಿ ಹೋಗುವಂತೆ ಸೂಚನೆಗಳನ್ನು ಸೇರಿಸಲಾಗಿದೆ. ಎಲ್ಲಕ್ಕಿಂತ ಹೆಚ್ಚಾಗಿ, ಜವಾಬ್ದಾರಿದ ಆರ್ಥಿಕ ಅಭಿವೃದ್ಧಿಯ ಕಟ್ಟಿಡ ಧನವನ್ನು ಹೆಯು ವಿಕೇಂದ್ರೀಕೃತ ತರ್ಕಹೆದಿಯ ಹೊತ್ತಿಗೆ ನಡೆಯುವಂತೆ ಎಚ್ಚರಿಕೆಯನ್ನು ಯ ಕಾ ನೂಸಿದೆ; ಹೀಗೆ ಮಾಡುವಾಗ ಆರ್ಥಿಕ ರಂಗದ ಬೆಳವಣಿಗೆ ಮತ್ತು ವಿಕಾಸವು ಕುಂಠಿತವಾಗದೆ ಈನೇಗವು ಹೆಚ್ಚಿಕೊಳ್ಳುತ್ತಾ ಹೋಗುವ ಘೋರನೆಯನ್ನೂ ಅದು ಮರೆತಿಲ್ಲ.

ಸಮಿತಿಯು ದ್ವಿತೀಯ ಯೋಜನೆಯಲ್ಲಿಸುವಾರು ೩೬೦ ಕೋಟಿ ರೂಪಾಯಿಗಳ ವೆಚ್ಚದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳಿದೆ. ಇದರಲ್ಲಿ ಕೇಂದ್ರದ ಪಾಲು ೨೫೦೦ ಲಕ್ಷ ರೂಪಾಯಿ; ಉಳಿದ ಭಾರ ರಾಜ್ಯಸರಕಾರಗಳ ಮೇಲೆ ಬೀಳುತ್ತದೆ. ಒಟ್ಟಾರೆ ಹತ್ತಿಯ ಬಟ್ಟೆಯನ್ನು ಮಾಡುವ ಕೈಮಗ್ಗಗಳ ವಿಭಾಗಕ್ಕೆ ೬೦ ಕೋಟಿ, ಖಾದಿ ಪ್ರಚಾರ ಮತ್ತು ಹತ್ತಿಯ ನೂಲುವಿಕೆಯನ್ನು ವಿಕೇಂದ್ರೀಕರಿಸುವುದಕ್ಕೆ ೨೫ ಕೋಟಿ, ರೇಶ್ಮೆ ಮತ್ತು ಉಣ್ಣೆಯ ಕೈ ಮಗ್ಗಗಳ ನೇಯಿಗೆ ಒಟ್ಟು ೧೦ ಕೋಟಿ, ಕೈಯಿಂದ ಕಾಟ್ಪ ಆಕ್ಕಿ ಮಾಡುವುದಕ್ಕೆ ೮೫ ಲಕ್ಷ, ಹಳ್ಳಿಗಳಲ್ಲಿ ಸಾಮಾನ್ಯ ಗಾಣದಿಂದ ಎಣ್ಣೆ ತೆಗೆಯುವುದಕ್ಕೆ ೧೫ ಕೋಟಿ, ಬೇರೆ ಗ್ರಾಮೋದ್ಯೋಗಗಳಿಗೆ ಸುವಾರು ೩೬ ಕೋಟಿ, ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ೬೫ ಕೋಟಿ, ಹಸ್ತ ಕೌಶಲ್ಯದ ಕೆಲಸಗಳಿಗೆ ೧೧ ಕೋಟಿ, ಕತ್ತ ವ್ಯವಸಾಯಕ್ಕೆ ೨ ಕೋಟಿ, ರೇಶ್ಮೆ ಹುಳ ಸಾಕುವ ವ್ಯವಸಾಯಕ್ಕೆ ೬ ಕೋಟಿ ಮತ್ತು ಸಂಶೋಧನೆ, ತರಬೇತಿ ಮತ್ತು ಆಡಳಿತ ಸೌಕರ್ಯ ಇತ್ಯಾದಿಗಳಿಗೆ ೧೫ ಕೋಟಿ—ರೂಪಾಯಿಗಳು ಹಂಚಲ್ಪಡಬೇಕೆಂದು ಸಮಿತಿಯ ಅಭಿಪ್ರಾಯ.

ಇಷ್ಟು ಹಣವನ್ನು ವ್ಯಯಿಸುವುದರಿಂದ ಯೋಜನೆಯ ಅವಧಿಯಲ್ಲಿ ಒಟ್ಟು ೪೫ ಲಕ್ಷ ಜನರಿಗೆ ಉದ್ಯೋಗದ ಅವಕಾಶ ದೊರಕುವುದೆಂದು ಸಮಿತಿ ಲೆಕ್ಕ ಹಾಕಿದೆ. ಇದರಲ್ಲಿ ಪೂರ್ಣ ಉದ್ಯೋಗ ಪಡೆಯುವವರು ೫ ಲಕ್ಷ, ಹೆಚ್ಚಿನ ಕೆಲಸ ಪಡೆಯುವವರು ೫ ಲಕ್ಷ, ಕೆಲವು ಋತುಗಳಲ್ಲಿ ಮಾತ್ರ ಕೆಲಸ ಪಡೆಯುವವರು ೧೦ ಲಕ್ಷ ಎಂದು ಸಮಿತಿಯು ಅಂದಾಜು. ಅಖಿಲ ಭಾರತ ಸ್ವರೂಪದ ಗ್ರಾಮೋದ್ಯೋಗ ಮಂಡಳಗಳು ಹೆಚ್ಚು ಕಾರ್ಯಕ್ಷಮತೆಯಿಂದ ಕೆಲಸ ಮಾಡುವ ಉದ್ದೇಶದಿಂದ ಕೇಂದ್ರದಲ್ಲಿ ಇವುಗಳ ಮೇಲ್ವಿಚಾರಣೆಯನ್ನು ನೋಡಬಲ್ಲ ಪ್ರತ್ಯೇಕ ಸಚಿವಾಲಯವನ್ನು ತೆರೆಯಬೆ ಕೆಂದು ಬಹುಮತದಿಂದ ಸಿಫಾರಸು ಮಾಡಿದೆ. ಇದರಿಂದ ದೊಡ್ಡ ಸ್ವರೂಪದ ಕೈಗಾರಿಕೆಗಳಿಗೆ ಕೊಡುವಷ್ಟೇ ಹೆಚ್ಚು ಗಮನವನ್ನು ಗ್ರಾಮೋದ್ಯೋಗಗಳ ಅಭಿವೃದ್ಧಿಗೆ ಸಹ ಕೊಡಲು ಸಾಧ್ಯವಾಗುವುದೆಂದು ಸಮಿತಿ ಹೇಳಿದೆ. ಇಬ್ಬರು ಸದಸ್ಯರು ಮಾತ್ರ ಈ ಸೂಚನೆಗೆ ಸಮ್ಮತಿಯನ್ನು ಸೂಚಿಸಿಲ್ಲ.

ಗ್ರಾಮೋದ್ಯೋಗಗಳ ಕ್ಷೇತ್ರವನ್ನು ಚಿರಕಾಲ ಈಗಿನ ಆಸ್ಥಿತಾವಸ್ಥೆಯಲ್ಲಿಯೇ ಉಳಿಯಬೇಕೆಂಬುದಾಗಲಿ, ಅಲ್ಲಿ ಉದ್ಯೋಗಿಗಳ ಸಂಖ್ಯೆಯು ಬಹಳಷ್ಟು ಹೆಚ್ಚುತ್ತಿರುವ ಇಂದಿನ ಕಾಲದಲ್ಲಿ ಗ್ರಾಮೋದ್ಯೋಗಗಳ ವಿಕಾಸಕ್ಕೆಯೇ ಪ್ರಯತ್ನಿಸಬೇಕಾದದ್ದು ಸೂಕ್ತವೆಂದು ಸಮಿತಿಯು ವಿಶ್ವಾಸಪೂರ್ವಕ ಹೇಳಿದೆ. ಹೊಸ ಕೈಗಾರಿಕೆಗಳನ್ನು ಸೃಷ್ಟಿಸುವುದಾದರೆ ಅದರ ಬಂಡವಾಳ ವೆಚ್ಚವನ್ನು ಸಹಿಸಬೇಕಾಗುತ್ತದೆ; ಅಪರಿಚಿತ ಕೆಲಸ ಮಾಡಲು ಜನರಿಗೆ ಯೋಗ್ಯ ತರಬೇತಿಯನ್ನು ಕೊಡಬೇಕಾಗುತ್ತದೆ. ಇಷ್ಟು ಮಾಡಿದರೂ ಹೆಚ್ಚು ಪ್ರಮಾಣದಲ್ಲಿ ಉದ್ಯೋಗದ ಅವಕಾಶ ದೊರಕುವುದೆಂದು ಭಾವಿಸುವುದು ಕಷ್ಟ. ಗ್ರಾಮೋದ್ಯೋಗಗಳ ಅಭಿವೃದ್ಧಿಯನ್ನು ಸಾಧಿಸಿದರೆ ಇಂಥ ಯಾವ ತೊಂದರೆಗಳೂ ಇಷ್ಟದೆ ನಮ್ಮ ಗುರಿಯನ್ನು ಮುಟ್ಟಬಹುದು. ನಿದರ್ಶನಕ್ಕಾಗಿ ಹೊಸತಾಗಿ ಸಲಕರಣೆ ಇತ್ಯಾದಿಗಳನ್ನು ಕ್ರಯಕ್ಕೆ ಪಡೆಯಬೇಕಾದ ಆವಶ್ಯಕತೆ ಗ್ರಾಮೋದ್ಯೋಗಗಳಿಗಿಲ್ಲ; ಪರಂಪರಾಗತವಾಗಿ ಅನುಭವವನ್ನು ಗ್ರಾಮೋದ್ಯೋಗಗಳಲ್ಲಿರುವವರು ಸಂಪಾದಿಸಿರುವುದರಿಂದ ಅವರಿಗೆ ತರಬೇತಿ ಕೊಡುವ ಅಗತ್ಯವೂ ಇಲ್ಲ. ಉದ್ಯೋಗದ ಪ್ರಮಾಣವನ್ನು ಹೆಚ್ಚಿಸುವುದರಲ್ಲಿಯೂ ಗ್ರಾಮೋದ್ಯೋಗಗಳು ಹಿಂದುಳಿಯುವುದಿಲ್ಲ ಎಂಬುದನ್ನು ಸಮಿತಿ ಸ್ಪಷ್ಟಪಡಿಸಿರುತ್ತದೆ.

ಪಿರಿಯಾಡಿಗಳಾಗಿರುವಲ್ಲಿ ಭಾರತದ ಆರ್ಥಿಕ ವಿಕಾಸ ರೂಪುಗೊಳ್ಳಬೇಕೆನ್ನುತ್ತಾ ವಿಕೇಂದ್ರೀಕೃತ, ಅಂದರೆ ಗಾಮೋದ್ಯೋಗಗಳು ಮನ್ನಣೆಯನ್ನು ಹೊಂದಿದ ಆರ್ಥಿಕ ವ್ಯವಸ್ಥೆಯೇ ಆತ್ಯುತ್ತಮವಾದುದೆಂದು ಸಮಿತಿ ಅಲಹೆ ಮಾಡಿದೆ. ದೊಡ್ಡ ಕೈಗಾರಿಕೆಗಳು ಸಣ್ಣ ಕೈಗಾರಿಕೆಗಳಗೂ ಗ್ರಾಮೋದ್ಯೋಗಕ್ಕೂ ಪೂರಕವಾಗಿರುವಂತೆ ನೋಡಿಕೊಳ್ಳಬೇಕೆಂಬ ಮಹತ್ವದ ಅಂಶವನ್ನು ಸಮಿತಿಯು ತನ್ನ ವರದಿಯಲ್ಲಿ ನಿರೂಪಿಸಿದೆ. ದೊಡ್ಡ ಕೈಗಾರಿಕೆಗಳೇ ಬೇಡವೆನ್ನಲು ಅದು ಹೋಗಿಲ್ಲ—ಆದರೆ ಅವುಗಳು ಭಾರತದ ಪ್ರಗತಿಗೆ ತೊಂದರೆ ಕೊಡದಂತೆ ಮತ್ತು ಜನರನ್ನು ನಿರುದ್ಯೋಗಿಗಳಾಗಿ ಮಾಡುವಂತೆ ಮಹಸಬೇಕಾದ ನಿಲುಮೆಯನ್ನು ಸಮಿತಿಯು ಸೂಚಿಸಿದೆ. ದೇಶದ ಎಲ್ಲೆಡೆಯಲ್ಲೂ ಸಣ್ಣ ಸಣ್ಣ ಪ್ರಮಾಣದಲ್ಲಿ ಹಂಚಿಬಿದ್ದ ಆರ್ಥಿಕ ಚಟುವಟಿಕೆಯೇ ವಿಕೇಂದ್ರೀಕರಣದ ಮೂಲತತ್ವವೆಂದು ಸಮಿತಿಯು ವಿವರಿಸಿದೆ ಇಂಥ ಸಾಮಾನ್ಯ ಔದ್ಯಮಿಕ ಕೇಂದ್ರಗಳು ಈಗಿನ ದೊಡ್ಡ ನಗರಗಳಂತೆ ಅಥವಾ ಕಾರ್ಖಾನೆಗಳಂತೆ ಶೋಷಣೆ ಮಾಡದೆ, ಕ್ಷೇಮಾಭ್ಯುದಯವನ್ನೆ ಸಾಧಿಸುತ್ತವೆ ಎಂದು ವರದಿಯು ಜೆನ್ಮಾಗಿ ಮಂಡಿಸಿದ್ದ ಪಡಿಸುತ್ತದೆ.

ಹಳ್ಳಿಗಳಿಗೆ ವಿದ್ಯುಚ್ಛಕ್ತಿಯ ಸೂರೈಕೆಯಂತೆ ಸಾಲ ಸೌಕರ್ಯದ ವಿಸ್ತರಣೆಯಾಗುವುದೂ ಮಾಂತರದ ಯೋಗ್ಯ ವ್ಯವಸ್ಥೆಯಾಗುವುದೂ ಅತ್ಯಾವಶ್ಯವೆಂದು ಸಮಿತಿ ಹೇಳಿದೆ. ಈ ದಿಶೆಯಲ್ಲಿ ಸ್ಟೇಟ್ ಬ್ಯಾಂಕ್ ಮತ್ತು ರಿಜರ್ವ್ ಬ್ಯಾಂಕ್ ಮಾಡಬಹುದಾದ ಕೆಲಸಗಳ ಕುರಿತು ಅದು ಗಮನವನ್ನು ಸೆಳೆದಿದೆ. ಸಹಕಾರಿ ತತ್ವದ ಮೇಲೆ ಗ್ರಾಮೋದ್ಯೋಗಗಳನ್ನು ಸಂಘಟಿಸಿ, ಉತ್ಪಾದಕರಿಗೆ ಕನಿಷ್ಠ ಬೆಲೆಯ ಭರವಸೆಯನ್ನಿತ್ತು, ಪ್ರೋತ್ಸಾಹ ನೀಡುವ ಬಗೆಯ ಮೇಲೆ ಅದು ಅತ್ಯಮೂಲ್ಯವಾದ ಸಲಹೆಗಳನ್ನು ನೀಡಿದೆ. ಸರಕಾರವು ಎಲ್ಲ ವಿಧದಿಂದಲೂ ಶಕ್ತಿಯನ್ನು ವ್ಯಯಿಸಿ, ಈ ಉದ್ದೇಶದ

(ಇನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ.ಕೊರೆತ.

ದೀಪಾವಳಿಯ ಶುಭದಿನ ನಿಮ್ಮ ನಿರ್ಧಾರವೇನು?

ದೀಪಾವಳಿಯೆಂದರೆ— ನಿಮ್ಮ ಶೇಕ್ಯ ಪತ್ರಗಳನ್ನು ಪರಿಶೀಲಿಸಿ ವಾರ್ಷಿಕ ಪ್ರಗತಿಯನ್ನು ವಿಮರ್ಶಿಸುವ ಶುಭ ಪ್ರಸಂಗವಾಗಿದೆ. ನಿಮ್ಮ ಸಂಪಾದನೆಯಲ್ಲಿ ನಿಮಗೆ ಉಳಿಯುವ ಭಾಗವೇ ನಿಮಸ್ತ ದ್ದೆಂದು ನಿಮ್ಮ ಜ್ಞಾಪಕಕ್ಕೆ ಆಗ್ಗೆ ಬರುವಂತೆ. ಸಂಪಾದನೆಯ ಕಾಲವೇ ಉಳಿಸಿ ಸೆಂಚಯಿಸಲು ಯೋಗ್ಯ ಕಾಲ. ನಿಮ್ಮ ಕ್ಷೇಮಕ್ಕಾಗಿ ಮತ್ತು ಅಭ್ಯುದಯದ ನಿಶ್ಚಿತತೆಗಾಗಿ ನಿಮ್ಮ ಸಂಪಾದನೆಯಲ್ಲಿ ೧೦೦ಕ್ಕೆ ೧೦೦ವನ್ನು ಕಾಯ್ದಿಟ್ಟುಕೊಳ್ಳುವುದು ಬಹಳವೇನಿಸದು. ಇವತ್ತಿಗೆ ಇಂದೇ, ನಿಮಗೆ ಸಮೀಪ ವಿರುವ, ಮವ್ವಾಸು, ಮುಂಬಯಿ, ಅಂಧ್ರ, ಮೈಸೂರು, ಹೈದರಾಬಾದ ಮತ್ತು ತಿರು-ಕೊಚ್ಚಿ ಸಂಸ್ಥಾನಗಳಲ್ಲಿರುವ ನಮ್ಮ 93 ಶಾಖೆಗಳ ಪೈಕಿ ಯಾವುದಾದರೊಂದು ಶಾಖೆಯಲ್ಲಿ 'ಸೇವಿಂಗ್ಸ್ ಬ್ಯಾಂಕ್' ಖಾತೆಯನ್ನು ತೆರೆದು ಅವಕ್ಕೆ ಜಮಾನಾಡಿರಿ.

ಚಲಾವಣೆ ಭಂಡವಾಳ ರೂ. 7,50,00,000ಗೂ ನಿುಕ್ಕಿವೆ.

THE CANARA INDUSTRIAL & BANKING SYNDICATE LTD.
Estd: 1925] [Head Office: UDIPI, S. India.

ನಮ್ಮ ದೇಶವು ಅನೇಕ ವಿಷಯಗಳಲ್ಲಿ ಅದ್ವಿತೀಯವಾಗಿದೆ–ಪ್ರಾಣಿಗಳಿಗೂ ಪಕ್ಷಿಗಳಿಗೂ ದಯೆಯನ್ನು ತೋರಿಸುವ ಗುಣವು ಇವುಗಳಲ್ಲಿ ಒಂದೆಂದು ಹೇಳಬಹುದು. ಹಿಂದು ಧರ್ಮೀಯರು ಮನುಷ್ಯನ ಶ್ರೇಷ್ಠತ್ವವನ್ನು ಜೆನ್ನಾಗಿ ಪ್ರತಿಪಾದಿಸಿದರೂ ಪ್ರಾಣಿ, ಪಕ್ಷಿ ಮತ್ತು ಉರಗಗಳ ಕುರಿತು ತಿರಸ್ಕಾರವನ್ನೇನುತೋರಿಬುತ್ತಿರಲಿಲ್ಲ ಮದ್ರಾಸಿನಲ್ಲಿ ಮೊನ್ನೆ ೩೧ನೇ ದಿನಾಂಕದಿಂದ ನಡೆದ ಮೃಗಾಲಯದ ಶತಾಬ್ದಿಯ ಸಂದರ್ಭವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕುರಿತು ಕೆಲವು ವಿಷಯಗಳನ್ನು ಮನವರಿಕೆ ಮಾಡಿಕೊಳ್ಳಲು ಈಗ ಪ್ರಯತ್ನಿಸೋಣ.

ಮಧುರ ಸಂಪರ್ಕ

ಬೇರೆ ದೇಶಗಳಲ್ಲಿ ಮೃಗಾದಿಗಳನ್ನು ಮನುಷ್ಯನಿಗೆ ಅವು ಎಷ್ಟು ಉಪಯುಕ್ತವಾಗಿವೆ, ಅವುಗಳಿಂದ ಎಷ್ಟು ಪ್ರಯೋಜನ ಸಿಗುತ್ತದೆ ಎಂಬ ಭಾವನೆಯಿಂದ ನೋಡಲಾಗುತ್ತದೆ; ಸ್ವಲ್ಪ ಮಟ್ಟಿಗೆ ಪ್ರೀತಿಯ ಕೇಂದ್ರಗಳಾಗಿಯೂ ಕೆಲವು ವಿಶಿಷ್ಟ ವರ್ಗವನ್ನು (ಉದಾ: ನಾಯಿ) ಪರಿಗಣಿಸಲಾಗುತ್ತದೆ. ಭಾರತದಲ್ಲಿ ಇವೆರಡೂ ಅಂಶಗಳಲ್ಲದೆ ಗೌರವ ದೃಷ್ಟಿ ವ್ಯಕ್ತವಾಗುತ್ತಿರುವುದೊಂದು ವಿಶೇಷ. ಆದಾರವುಳ್ಳ ನುನೋಭಾವ ಉಂಟಾಗಿರುವುದಕ್ಕೆ ಭಾರತದ "ದೇವತೆ" ಗಳೊಡನೆ ಮೃಗಾದಿಗಳಿಗೆ ಗಾಢವಾದ ಸಂಬಂಧವಿರುವುದೇ ಕಾರಣವೆಂದು ಹೇಳಬಹುದು. ನಮ್ಮ ದೇವತೆಗಳ ವಾಹನಗಳಾಗಿ ಆನೆ, ಕೋಣ, ಎತ್ತು, ಇಲಿ, ಗರುಡ, ನವಿಲು, ಪೊಸಳೆ, ನಾಗರ ಹಾವು ಇತ್ಯಾದಿಗಳನ್ನೆ; ಉರಗಗಳು ಶಿವನ ಅಲಂಕಾರ ಸಾಮಗ್ರಿಗಳಲ್ಲಿ ಒಂದಾಗಿವೆ. ಸಿಂಹವನ್ನು ಮೃಗರಾಜನೆಂದು ಗೌರವಿಸಲಾಗುತ್ತದೆ; ಜಿಂಕೆಯ ವೇಲಿನ ಮೋಹ ರಾವಣನ ವಧೆಗೆ ಹೇಗೆ ಹೇತುವಾಯಿತೆಂದು ರಾಮಾಯಣ ವಿವರಿಸುತ್ತದೆ ಋಷ್ಯಾಶ್ರಮಗಳಲ್ಲಿ ಸಿಂಹ ಶಾರ್ದೂಲಾದಿಗಳು ಹರಿಣಗಳೊಡನೆ ''ಸಹಜೀವನ'' ವನ್ನು ನಡೆಸುತ್ತಿದ್ದ ಪವಾಡವನ್ನು ಕೇಳಿ ಈಗಲೂ ಮೈರೋಮಾಂಚನಗೊಳ್ಳುತ್ತದೆ. ಒಂದು ಪಾರಿವಾಳದ ಜೀವವನ್ನುಳಿಸಲು ತನ್ನ ಮಾಂಸವನ್ನು ಕತ್ತರಿಸಿಕೊಟ್ಟ ಕರ್ನಾಟಕದ ಶಿಬಿ ರಾಜನ ಕತೆಯಾಗಲೀ ಮಾರ್ಗದರ್ಶಕನಂತೆ ಪರಿಸಿದ ನಾಯಿಗೆ ತನ್ನೊಡನೆ ದೇವ ವಿಮಾನದ ಮೂಲಕ ಸ್ವರ್ಗಕ್ಕೆ ಬರಗೊಡಬೇಕೆಂದು ವಾದಿಸಿದ ಧರ್ಮರಾಯನ ನಿದರ್ಶನವಾಗಲೀ ಕಪಿ ಸೈನ್ಯದೊಡನೆ ಸಂಪರ್ಕವಿಟ್ಟು ಕೊಂಡ ಮಾತ್ರ ಅಳಲನ್ನು ವೈತಡ ಹೆರಿಸಿದ ರಾಮನ ಉದಾಹರಣೆಯಾಗಲೀ ಕರಡಿಯಾದ ಜಾಂಬವಂತನನ್ನು ಮಾವನಾಗಿ ಮಾಡಿಕೊಂಡ ಶ್ರೀ ಕೃಷ್ಣನ ಮಾದರಿಯಾಗಲೀ ಭಾರತೀಯರಿಗೆ ಪ್ರಾಣಿ ಲೋಕದ ಇತರ ಜೀವಿಗಳೊಡನಿದ್ದ ಮಧುರ ಸಂಪರ್ಕವನ್ನು ಸೂಚಿಸುತ್ತವೆ.

ಅಶೋಕನ ಉದಾಹರಣೆ

ದೇವನಾಮ ಪ್ರಿಯನಾದ ಅಶೋಕನ ದೃಷ್ಟಿಯಲ್ಲಂತೂ ಮನುಷ್ಯರಷ್ಟೇ ಮೃಗಾದಿಗಳೂ ಸುಖಜೀವನಕ್ಕೆ ಅರ್ಹವಾಗಿದ್ದವೆಂದು ಇತಿಹಾಸವು ಸಾರಿ ಹೇಳುತ್ತದೆ. ಆತನು ನೆಡಿಸಿರುವ ಶಿಲಾಶಾಸನಗಳು ಆಹಾರವಾಗಿ ಉಪಯೋಗಿಸಲು ಬಾರದ ಮೃಗ ಪಕ್ಷಿಗಳನ್ನು ಕೊಲ್ಲಲಾಗದೆಂದು ವಿಧಿಸುತ್ತವೆ. ಮಂಗಗಳನ್ನು ಸಹ ಬೇಟೆಯಾಡ ಕೂಡದೆಂದು ಅವು ಹೇಳುತ್ತವೆ. ಆನಾವಶ್ಯಕವಾಗಿ ಕಾಡಿಗೆ ಬೆಂಕಿ ಹಚ್ಚಬಾರದು; ಒಂದು ಪ್ರಾಣಿಗೆ ಇನ್ನೊಂದು ಪ್ರಾಣಿಯನ್ನು ಆಹಾರವಾಗಿ ನಾವು ಕೊಡಬಾರದು ಎಂದು ಮುಂತಾಗಿ ಅಶೋಕನು ಹೇಳುತ್ತಿದ್ದನು. ಈ ರಾಜನು ಮನುಷ್ಯರಿಗೆ ತಗಲುವ ರೋಗರುಜಿನಾದಿಗಳ ಉಪಶಮನಕ್ಕಾಗಿ ಹೇಗೆ ಔಷಾಧಾಲಯಗಳನ್ನು ತೆರೆದನೋ ಪ್ರಾಣಿಗಳ ಪ್ರಯೋಜನಕ್ಕಾಗಿಯೂ ಚಿಕಿತ್ಸೆಯ ಕೇಂದ್ರಗಳನ್ನು ನೆಲೆಗೊಳಿಸಿದ್ದನು. ದಾರಿಯ ಇಕ್ಕೆಲಗಳಲ್ಲಿಯೂ ಮರಗಿಡಗಳನ್ನು ನೆಡಿಸಿ ಪ್ರಯಾಣಿಕರಿಗೂ ಪ್ರಾಣಿ ವರ್ಗಕ್ಕೂ ನೆರಳಿನಲ್ಲಿ ವಿಶ್ರಮಿಸಲು ಅನುಕೂಲ ಮಾಡಿಕೊಟ್ಟಿದ್ದನು. ಮದ್ಯಪಾನ ನಿರೋಧಕ್ಕೆ ಪ್ರೋತ್ಸಾಹವನ್ನು ಕೊಟ್ಟಂತೆಯೆ ಸಸ್ಯಾಹಾರಕ್ಕೂ ಆತನು ಬೆಂಬಲವಿತ್ತನು. ಇವತ್ತಿಗೂ ಜಗತ್ತಿನ ಬೇರೆ ಯಾವುದೇ ಭಾಗಕ್ಕಿಂತ ಹೆಚ್ಚಾಗಿ ಭಾರತದಲ್ಲಿಯೇ ಸಸ್ಯಾಹಾರ ಕ್ರಮವು ರೂಢಿಯಲ್ಲಿದೆ; ಮತ್ತು ಭಾರತೀಯರಷ್ಟು ಮಾಂಸಹಾರದ ಕುರಿತು ಜುಗುಪ್ಸೆ ತೋರಿಸುವವರು ಬೇರೆಲ್ಲೂ ಇಲ್ಲ. ಪ್ರಾಣಿ ವರ್ಗಕ್ಕೆ ಸೇರಿದ ಯಾವುದೇ ಜೀವವನ್ನು ಆದರಿಂದ ಹಿಂಸೆಯಾಗದೆ, ಕೇವಲ ವಿನೋದಕ್ಕಾಗಿ ಆ ಹಾರ ಕಾಕ್ಕಾಗಿ ಕೊಲ್ಲುವುದನ್ನು ಭಾರತೀಯ ಸಂಸ್ಕೃತಿಯು ಪುರಸ್ಕರಿಸುವುದಿಲ್ಲ. ಹಿಂದೆ ರಾಜ ಮಹಾರಾಜಾದಿಗಳು ಬೇಟೆಯಾಡುವಾಗ ಈ ಪರಂಪರೆಯನ್ನು ಸಂಪೂರ್ಣವಾಗಿ ಪಾಲಿಸುತ್ತಿದ್ದರು. ಇಂದು ಅಶೋಕ ಸ್ತಂಭದ ಸಿಂಹ ಮುದ್ರೆಯನ್ನು ತನ್ನ ರಾಜ್ಯ ಚಿಹ್ನವಾಗಿ ಅಂಗೀಕರಿಸಿರುವ ಸ್ವತಂತ್ರ ಭಾರತದ ಸರಕಾರವು ಇವೇ ಆದರ್ಶವನ್ನು ಎತ್ತಿ ಹಿಡಿಯಲು ನೋಡುತ್ತಿರುವುದು ಸ್ತುತ್ಯ. ಉತ್ತರ ಪ್ರದೇಶದಲ್ಲಿ ಗೋವಧೆ ನಿರೋಧ ಶಾಸನದಿಂದಾಗಿರುವ ಶುಭಾರಂಭವು ಕ್ರಮೇಣ ಭಾರತದಲ್ಲೆಲ್ಲ ನಾನಾ ಕ್ಷೇತ್ರದಲ್ಲಿ ವಿಸ್ತರಿಸುವುದು ಅಪೇಕ್ಷಣೀಯ.

ಋಷ್ಯಾಶ್ರಮ ಸದೃಶ ಮೃಗಾಲಯ

ಪುರಾತನ ಪರಂಪರೆಯ ಹೊಸತಾದ ಮುಖ

ಮದ್ರಾಸಿನ ಮೃಗಾಲಯ

ಸೃಷ್ಟಿಯು ವಿಕಸ್ವನ್ನು ಪ್ರತಿಪಾದಿಸುವ ಭಾರತೀಯ ಸಂಸ್ಕೃತಿಯ ಅಭಿಮಾನಿಗಳಿಗೆ ಮೃಗಾಲಯಗಳು ಯೋಗ್ಯ ಶಿಕ್ಷಣ ಕೇಂದ್ರಗಳೆನಿಸುತ್ತವೆ. ಬೇರೆ ಬೇರೆ ಪಶು, ಪಕ್ಷಿ ಮತ್ತು ಉರಗಗಳ ಜೀವನ ಕ್ರಮ, ಅವುಗಳ ಹಾವಭಾವ, ಬುದ್ಧಿ ವಿಚಕ್ಷಣತೆ — ಇತ್ಯಾದಿಗಳ ಪರಿಚಯವನ್ನು ಮಾಡಿಕೊಡಬಲ್ಲ ವಿಕಾಸದ ಸ್ಥಾನವಾಗಿ ಅಧುನಿಕ ಮೃಗಾಲಯವಿದೆ ಎಂದು ಹೇಳಬಹುದು. ಪ್ರಾಚೀನ ಋಷಿ ಮುನಿಗಳ ಆಶ್ರಮದಲ್ಲಿ ಕಂಡು ಬಂದ ಅದ್ಭುತವು ಸ್ವಲ್ಪ ಮಟ್ಟಿಗಾದರೂ ಇಲ್ಲಿ ಗೋಚರಿಸುತ್ತದೆ. ಪಂಜರ ಆಥವಾ ಆವರಣದೊಳಗೆಯೇ ಆಗಲಿ, ಎಲ್ಲ ಬಗೆಯ ಜೀವಿಗಳನ್ನು ಇಲ್ಲಿ ಸಮೀಪ ವರ್ತಿಗಳಾಗಿಯೇ ಇರಗೊಳಿಸಿರುವುದರಿಂದ ಹೀಗೆನಿಸುತ್ತದೆ. ಭಾರತದಲ್ಲಿ ಅತಿಹಳೆಯದಾದ ಮೃಗಾಲಯವೆಂದರೆ ಮದ್ರಾಸಿನದು. ೧೮೫೬ನೇ ಇಸವಿಯಲ್ಲಿ ಒಂದು ಚಿರತೆ ಮತ್ತೊಂದು ಹುಲಿ ಇಷ್ಟೇ ಪ್ರಾಣಿಗಳ ಪ್ರದರ್ಶನಕ್ಕೆ ಸಾರ್ವಜನಿಕರಿಂದ ದೊರಕಿವ ಪ್ರೋತ್ಸಾಹವು ೧೮೮೫ನೇ ನವೆಂಬರದಲ್ಲಿ ಮೃಗಾಲಯದ ಅಡಿಗಲ್ಲನ್ನಿಟ್ಟಿತು. ಅಧುನಿಕ ಜಗತ್ತಿನ ಮೊದಲನೆಯ ಮೃಗಾಲಯವೆಂದರೆ ಲಂಡನ್ನಿನದು–ಇದನ್ನು ೧೮೨೮ನೇ ಇಸವಿಗೆ ಸ್ಥಾಪಿಸಿದ್ದರು. ಆನಂತರದ ಪ್ರಯತ್ನವೇ ಮದ್ರಾಸಿನದೆಂದು ತಿಳಿದು ಬರುತ್ತದೆ. ೧೮೮೬ನೇ ಇಸವಿಯಲ್ಲಿ ಮದ್ರಾಸಿನ ಮೃಗಾಲಯದ ಆಡಳಿತಾಧಿಕಾರವನ್ನು ನಗರ ಸಭೆಗೆ ವರ್ಗಾಯಿಸಿದರು. ೧೯೪೧ನೇ ಇಸವಿಯ ಹೊತ್ತಿಗೆ ಈ ಕೇಂದ್ರವು ಬಹಳ ವಿಸ್ತಾರಗೊಂಡಿತು. ಆದರೆ ಜಪಾನೀಯರು ಮದ್ರಾಸಿನ ಮೇಲೆ ದ್ವಿತೀಯ ಮಹಾ ಯುದ್ಧಕಾಲದಲ್ಲಿ ಬಾಂಬು ದಾಳಿ ನಡೆಸುವ ಸಂಶಯವೆದ್ದುದರಿಂದ ಅನೇಕ ಹಿಂಸ್ರ ಪ್ರಾಣಿಗಳನ್ನು ಗುಂಡಿಟ್ಟು ಕೊಲ್ಲಲಾಯಿತು; ಕೆಲವನ್ನು ಬೇರೆಡೆಗೆ ಸಾಗ ಹಾಕಲಾಯಿತು. ಯುದ್ಧಾನಂತರ ಹೊಸತಾಗಿ ಬೇರೆ ಬೇರೆ ಕಡೆಗಳಿಂದ ಮೃಗಾಲಯಕ್ಕೆ ಸದಸ್ಯರನ್ನು ಬರಮಾಡಿ ಕೊಳ್ಳಲಾಗುತ್ತದೆ.

ಪ್ರಾಣಿ ಲೋಕದ ವೈವಿಧ್ಯ

ಸಾಮಾನ್ಯವಾಗಿ ಭಾರತದಲ್ಲಿ ಪ್ರತಿ ರಾಜ್ಯಕ್ಕೊಂದು ಮೃಗಾಲಯವಿದೆ. ತಿರುಕೊಚ್ಚಿ ಮತ್ತು ಮುಂಬಯಿಗಳಲ್ಲಿ ಎರಡೆರಡು ಮೃಗಾಲಯಗಳಿವೆ. ಭಾರತದಲ್ಲಿ ಒಟ್ಟು ಮೃಗಾಲಯಗಳಿರುವುದು ೨೦. ಮದ್ರಾಸಿನ ಮೃಗಾಲಯದಲ್ಲಿ ಸಸ್ತನಿ ವರ್ಗದ ೪೬ ಜಾತಿಯ ೨೦೩ ಪ್ರಾಣಿಗಳೂ ಉರಗ ವರ್ಗದ ೧೭ ಜಾತಿಯ ೪೨ ಪ್ರಾಣಿಗಳೂ ಮತ್ಸ್ಯವರ್ಗದ ೪೧ ಜಾತಿಯ ೧೫೬ ಪ್ರಾಣಿಗಳೂ ಕಪಿ ವರ್ಗದ ೪೫ ಜಾತಿಯ ೪೫೯ ಪ್ರಾಣಿಗಳೂ—ಒಟ್ಟು ೧೪೯ ಜಾತಿಯ ೯೬೦ ಪ್ರಾಣಿಗಳು ಇದ್ದು ನಿತ್ಯವೂ ಸರಾಸರಿ ೧೫೦೦ ಪ್ರೇಕ್ಷಕರನ್ನು ಆಕರ್ಷಿಸುತ್ತವೆ. ಮೃಗಾಲಯವು ೨೦ ಎಕ್ರೆ ಸ್ಥಳದಲ್ಲಿ ವ್ಯಾಪಿಸಿದ್ದು ಇದನ್ನು ಇನ್ನೂ ವಿಸ್ತರಿಸುವ ಹಂಚಿಕೆ ನಡೆದಿದೆ. ಶತಾಬ್ದಿಯ ಉತ್ಸವಕ್ಕೋಸ್ಕರ ಎರಡು ಲಕ್ಷ ರೂಪಾಯಿಗಳ ವಿಶೇಷ ನೆರವಿನಿಂದ ಆನೇಕ ವ್ಯವಸ್ಥೆಗಳನ್ನು ಮೊನ್ನೆಯಷ್ಟೇ ಏರ್ಪಡಿಸಿದ್ದರು. ಕರಡಿಯಂತೆ ಸಾಧು ಮಾಡಬಹುದಾದ ಕಾಡು ಪ್ರಾಣಿಗಳನ್ನೂ ನಾಯಿ, ಜಿಂಕೆ ಮುಂತಾದ ಸ್ವಾಭಾವಿಕವಾಗಿ ಸಾಧುವಾಗಿರುವ ಪ್ರಾಣಿಗಳನ್ನು ಆನಿರ್ಬಂಧವಾಗಿ ತಿರುಗಾಡಗೊಟ್ಟು ವ್ಯಗ್ರಾಲಯಕ್ಕೆ ಬರುವ ಮಕ್ಕಳ ನಡುವೆ ಅವು ಓಡಾಡುತ್ತಿರುವಂತೆ ಮಾಡುವ ಯೋಜನೆಯೊಂದು ಈಗ ರೂಪುಗೊಳ್ಳುತ್ತಲಿದೆಯೆಂಬಾ ತಿಳಿದು ಬರುತ್ತದೆ. ಮದ್ರಾಸಿನ ಮೃಗಾಲಯದಲ್ಲಿ ಎದ್ದು ತೋರುವ ಕೊರತೆಯೆಂದರೆ ಯಾತ್ರಿ ಕೋಣವನ್ನು ಇನ್ನೂ ತರಿಸದಿರುವುದೆಂದು ಹೇಳಬಹುದು. ಹಿಮಾಲಯದ ಈ ಪ್ರಾಣಿಯನ್ನು ತರಿಸಿ, ಅದರ ಸಹಜ ವಾತಾವರಣದ ಅನುಭವವಾಗುವಂತೆ ವ್ಯವಸ್ಥಿತ ರೀತಿಯಲ್ಲಿ ಇರಗೊಳಿಸುವುದುತ್ತಮ. ಇತರ ಪ್ರಾಣಿಗಳನ್ನು ಸಹ ಪಂಜರದ ಬದಲು ಸಹಜ ವಾತಾವರಣವನ್ನು ಸೃಷ್ಟಿಸಿ ಅಲ್ಲಿಗೆ ವರ್ಗಾಯಿಸುವುದು ಯೋಗ್ಯ. ಆದೇನೇ ಇರಲಿ–ಲೋಕದ ಇತಿಹಾಸದಲ್ಲಿ ಕ್ರಿಸ್ತ ಪೂರ್ವ ೧೩೦೦ರಲ್ಲಿ ಚೀನದರು ಪ್ರಥಮ ಮೃಗಾಲಯವನ್ನು ಸ್ಥಾಪಿಸಿದ್ದರೆಂದು ಹೇಳಲಾಗುತ್ತಿದ್ದರೂ ಆ ಮೃಗಾಲಯವು ಮದ್ರಾಸಿನಲ್ಲಿರುವ ಅಧುನಿಕ ಮಾದರಿಯೊಡನೆ ಹೋಲಿಸುವಷ್ಟು ಯೋಗ್ಯತೆಯಿಂದ ಕೂಡಿದ್ದಿರಲಾರದೆಂದು ಹೇಳಬಹುದು. ಇದಕ್ಕಾಗಿ ನಾವು ಹೆಮ್ಮೆಪಡೋಣ–ನೂತ್ತು ಆದೇ ಸಮಯದಲ್ಲಿ ಕೌಟಿಲ್ಯನು ತನ್ನ ಅರ್ಥ ಶಾಸ್ತ್ರದಲ್ಲಿ ಎರಡೂವರೆ ಸಾವಿರ ವರ್ಷ ಹಿಂದೆ ಹೇಳಿದ್ದ ಮಾತನ್ನು ಮರೆಯದೆ ಪ್ರಾಣಿ ಲೋಕದ ಕ್ಷೇಮಕ್ಕಾಗಿಯೂ ದುಡಿಯೋಣ! ದಯೆಯೇ ಧರ್ಮದ ಮೂಲವೆಂಬ ಅನುಭಾವಿ ಬಸವಣ್ಣನವರ ಮಾತು ನಮಗೆ ಕೈದೀವಿಗೆಯಾಗಲಿ!

THE BOMBAY LIFE ASSURANCE Co., Ltd.
Excellent Bonuses !
1954 VALUATION.
Whole Life .... Rs. 19/- per 1000/-per year
Endowment .... Rs. 15/- per 1000/- per year.
Record Business: Over Rs, 5 Crores.
It pays you to consult for Representation or Insurance:-
KOCHIKAR BROTHERS, LTD.,
CHIEF AGENTS. **UDIPI.**
or any of their offices at:-
Bangalore, Coimbatore, Kozhikode, Madura, Mangalore and Trivandrum.

ಮಕ್ಕಳ ಮಗಿ ಪುಸ್ತಕ
ಬೆಲೆ ೦—೧—೦
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ನವಯುಗ ಪ್ರೆಸ್, ಉಡುಪಿ.

ಭಾಷೆಯ ಕುರಿತು ಫಜಲಾಲಿ ಆಯೋಗದ ನಿಲುಮೆ

ಪರ ಹಾಗು ವಿರೋಧ ಭಾವನೆಗಳ ತಿರುಳರಿಯುವ ಸಾಹಸ

ಭಾಷೆಯ ತತ್ವವನ್ನು ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯ ತಳಹದಿಯಾಗಿ ಪರಿಗಣಿಸಬೇಕೆಂಬುವರು (ಕಳೆದ ಸಂಚಿಕೆಯಲ್ಲಿ ವಿವರಿಸಿದಂತೆ) ಮುಂದಿಟ್ಟ ವಾದದಲ್ಲಿ ಹೆಚ್ಚಿನವು ತೂಕ ಭಂಡವಿಯೊದ ರೂ ಭಾಷೆಯ ತತ್ವಕ್ಕೆ ಮಾತ್ರ ಮಹತ್ವ ಕೊಡಬಾರದೆಂದು ಹೇಳುವವರೂ ಇದ್ದಾರೆ—ಎಂದು ಫಜಲಾಲಿ ಆಯೋಗವು ನೆನಪುಮಾಡಿಕೊಟ್ಟಿದೆ; ಮತ್ತು ಇವರ ವಾದವನ್ನು ಸಹ ತೂಗಿ ನೋಡಲು ಪ್ರಯತ್ನಿಸಿದೆ.

ವಿರೋಧಕರ ಹೇಳಿಕೆ

ಹೀಗೆ ವಿರೋಧಿಸುವವರ ಅಭಿಪ್ರಾಯಾನುಸಾರವಾಗಿ ನೋಡಿದರೆ, ಒಂದೇ ಭಾಷೆಯ ಗುಂಪಿನ ಆಡಳಿತಾಕಾಂಕ್ಷೆಯು ಪ್ರಾತಿನಿಧಿಕ ಸ್ವರೂಪವೆನಿಸುವ ಒಕ್ಕೂಟದ ಘಟಕವು ಪ್ರತ್ಯೇಕತೆಯ ಭಾವನೆಯನ್ನು ನಿಶ್ಚಯವಾಗಿಯೂ ಪ್ರೋತ್ಸಾಹಿಸುತ್ತದೆ. ಸ್ಥಳೀಯ ಸಂಸ್ಕೃತಿ, ಭಾಷೆ ಮತ್ತು ಚರಿತ್ರೆಯ ಕುರಿತು ಅದು ಕೊಡುವ ಮಹತ್ವದ ದೆಸೆಯಿಂದ ರಾಷ್ಟ್ರೀಯ ಏಕ್ಯದ ಭಾವನೆಯು ಸಂಪೂರ್ಣ ಮಾಯವಾಗಿಲ್ಲವಾದರೂ ಮಸುಕಾಗಿ ಹೋದೀತು. ತನ್ನ ಅಸ್ತಿತ್ವದ ಬಗ್ಗೆ ಅದು ರೂಪಿಸುವ ಕಾರ್ಯಗಳು ಬೇರೆ ಭಾಷೆಯ ಘಟಕಗಳಿಗಿಂತ ತಾನು ನೇರವೆಂಬ ನೀತಿಯನ್ನೆ ಬಿಂಬಿಸುವುದು ನಿಶ್ಚಯ. ಇದರ ಪ್ರತಿಫಲವು ಆ ರಾಜ್ಯದ (ಅಥವಾ ಆಯಾ ರಾಜ್ಯಗಳ) ಶೈಕ್ಷಣಿಕ ಮತ್ತು ಸಾಂಸ್ಕೃತಿಕ ರಂಗದ ಚಟುವಟಿಕೆಗಳ ಮೇಲಾಗದಿರದು. ನಿಜ ಹೇಳುವುದಾದರೆ, ಕೇವಲ ಭಾಷೆಯ ತಳಹದಿಯ ಮೇಲೆ ರೂಪಿತವಾದ ರಾಜ್ಯಗಳು ಅಸಹನೆಯನ್ನೂ ಆಕ್ರಮಣ ಬುದ್ಧಿಯನ್ನೂ ಸೀಮಾ ವಿಸ್ತರಣೆಯ ಭಾವನೆಯನ್ನೂ ತೋರಿಸಿರುವುದು ಅನುಭವ ಸಿದ್ಧವಾದ ವಿಷಯ.

ಒಗ್ಗಟ್ಟಿಗೆ ಪೆಟ್ಟು

ಭಾರತದ ಭಾಷೆಗಳೆಲ್ಲದರ ಬೆಳವಣಿಗೆಯು ಒಂದೇ ರೀತಿಯಲ್ಲಾಗಿಲ್ಲವಾದುದರಿಂದ, ಶಿಕ್ಷಣದ ಪ್ರಗತಿಯು ಬಹಳ ಕುಂಠಿತವಾಗಬಹುದು; ಮತ್ತು ತನ್ನ ರಾಷ್ಟ್ರೀಯ ಸ್ವರೂಪವನ್ನೆದು ಳಿದುಕೊಳ್ಳಬಹುದು. ರಾಷ್ಟ್ರದ ಸಮಗ್ರ ಅವಶ್ಯಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳದೆ ತಮ್ಮವೇ ಆದ ಧೋರಣೆಗಳನ್ನು ರಾಜ್ಯಗಳು ಅನುಸರಿಸುತ್ತಾ ಹೋದರೆ ಪರಸ್ಪರ ಹೊಂದಿಕೊಳ್ಳುವುದಕ್ಕಾಗಲೀ ವಿಶೇಷವಾದ ಶಿಕ್ಷಣವನ್ನು ಇಟ್ಟುಕೊಳ್ಳುವುದಕ್ಕಾಗಲೀ ತೃಪ್ತಿಕರ ಕ್ಷೇತ್ರದಲ್ಲಿ ಸಾಧ್ಯವಾಗದು. ಪ್ರಾದೇಶಿಕ ವೈಶಿಷ್ಟ್ಯ ರಕ್ಷಣೆಗೂ ಪುನರುಜ್ಜೀವನಕ್ಕೂ ಮಹತ್ವ ಕೊಡುವ ಭಾವನೆಗೆ ಬಲಬರುವುದೂ ಅಸಂಭವವಲ್ಲ. ಹೀಗಾದರೆ ರಾಜ್ಯಗಳಲ್ಲಿ ಪರಸ್ಪರ ಘರ್ಷಣೆಯು ತಪ್ಪಿದ್ದಲ್ಲ—ಮತ್ತು ರಾಷ್ಟ್ರೀಯ ಐಕ್ಯಾಭಿವೃದ್ಧಿಯ ಸೂತ್ರವು ಅಸ್ಪುಟಗೊಳ್ಳುವುದು ಖಂಡಿತ. ಈಗಾಗಲೇ ಕೆಲವು ರಾಜ್ಯಗಳ ಶಾಲೆಗಳಲ್ಲಿ ಪ್ರಾದೇಶಿಕ ಭಾವನೆಯನ್ನು ಉತ್ತೇಜಿಸುವ ಪದ್ಯಗಳನ್ನು ಪಠ್ಯ ಪುಸ್ತಕದಲ್ಲಿ ಸೇರಿಸಿರುವುದು ಕಂಡುಬರುತ್ತದೆ.

ಆರ್ಥಿಕ ರಂಗದ ದೂರು

ರಾಜಕೀಯ ಹಾಗು ಆರ್ಥಿಕ ಕ್ಷೇತ್ರಗಳ ದೂರು ಮತ್ತು ತಕರಾರುಗಳಂಗಲೀ ಮಾನಸಿಕ ಕ್ಲೇಭಿಯಾಗಲೀ ಬಹು ಭಾಷಾ ಘಟಕಗಳಿಗೆ ಮಾತ್ರ ಅಂಟಿಕೊಂಡ ರೋಗವೇನಲ್ಲ. ಭಾಷೆಯ ತಳಹದಿಯ ಮೇಲೆ ಪುನರ್ಘಟಿತವಾದ ಬಳಿಕವೂ ಒಂದು ರಾಜ್ಯದ ಎಲ್ಲ ಪ್ರದೇಶಗಳಲ್ಲೂ ಗಮನ ಪೂರೈಸಲ್ಪಡುವುದೆಂದು ಭಾವಿಸಲು ಕಾರಣವಿರುವುದಿಲ್ಲ. ಆಗ ತಮ್ಮ ಪ್ರದೇಶಗಳನ್ನು ಕಡೆಗಣಿಸಲಾಗಿದೆ ಎಂಬ ನೆಪದಿಂದ ಅಲ್ಲಲ್ಲಿಯ ಜನರು ಮನಃಕ್ಲೇಶ ಹೊಂದುವುದಿಲ್ಲವೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ಇಂಥ ತೊಂದರೆ ಮತ್ತು ತಕರಾರುಗಳನ್ನು ನಿವಾರಿಸಲು ಬೇರೆ ಬೇರೆ ಗುಂಪಗಳಲ್ಲಿ ಪ್ರತಿಯೊಂದರ ಜೀರ್ಣಾಗ್ನಿತೆಯನ್ನು ಆಧರಿಸಿದ ನೇರವಾದ ವರ್ಗೀಕರಣವನ್ನು ಇನ್ನೆ ಸರಿಸಬೇಕಲ್ಲದೆ ಕೇವಲ ಭಾಷೆಯ ತಳಹದಿಯೊಂದನ್ನೆ ಪರಿಗಣಿಸಿ ರಾಜ್ಯಗಳನ್ನು ಪುನರ್ಘಟಿಸುವುದರಿಂದ ಕೆಲಸವಾಗದು.

ಅಭಿವೃದ್ಧಿಗೆ ಅಡ್ಡಿ

ರಾಷ್ಟ್ರೀಯ ತಳಹದಿಯಲ್ಲಿ ಯೋಜನೆಯನ್ನು ಕಾರ್ಯಗತ ಗೊಳಿಸುವಾಗ ಭಾಷಾಭಿವೃದ್ಧಿಕ್ಕೆ ಸ್ಥಾನವಿಲ್ಲವಾಗುತ್ತದೆ ಖಂಡವಾಳ ಮತ್ತು ಆದಾಯದಲ್ಲಿನ ದಾವಾಶಯ, ಹೆಚ್ಚು ಪ್ರತಿಫಲ ಬರುವ ಕಾರ್ಯಕ್ರಮ ಗಳಿಗೆ ಕಡಿಮೆ ಪ್ರತಿಫಲ ಕೊಡುವವುಗಳಿಗಿಂತ ಅಧಿಕ ವ್ಯಾಕ್ಯಕ್ಕೆ ಬೇರೆ ಬೇರೆ ಯೋಜನೆಗಳಿಂದ ದೊರಕುವ ಉದ್ಯೋಗ ಪ್ರಮಾಣ, ನೈಸರ್ಗಿಕ ಸಾಧನ ಸಂಪತ್ತಿನ ಅನುಕೂಲತೆ, ಇತ್ಯಾದಿ ಸಂಗತಿಗಳ ಮೇಲೆಯೇ ಆರ್ಥಿಕ ಅಭಿವೃದ್ಧಿಯನ್ನು ಆಧರಿಸಬೇಕಲ್ಲದೆ ಭಾಷೆಯ ಸ್ಪರ್ಶಕ್ಕೆ ಇಲ್ಲಿ ಸ್ಥಾನವಿಲ್ಲ. ಭಾಷಾನುಗುಣವಾಗಿ ರಾಜ್ಯಗಳನ್ನು ಪುನರ್ಘಟಿಸಿದರೆ ಆರ್ಥಿಕ ಅಭಿವೃದ್ಧಿಯ ವೇಗವು ಹೆಚ್ಚುವುದಕ್ಕೆಂತ ಕಡಿಮೆಯೇ ಆದೀತು—ಏಕೆಂದರೆ, ಸ್ಥಳೀಯ ಹಿತಾಸಕ್ತಿಯುಳ್ಳ ವರ್ಗಗಳು ಒಂದು ರಾಜ್ಯದ ಸಾಧನ ಸಂಪತ್ತನ್ನು ಇನ್ನೊಂದರ ಏಳಿಗೆಗಾಗಿ ವಿನಿಯೋಗಿಸುವುದನ್ನು ವಿರೋಧಿಸಬಹುದು. ಇದಲ್ಲದೆ, ದೊಡ್ಡ ಮಟ್ಟದಲ್ಲಿ ರಾಜ್ಯಗಳ ಪುನರ್ಘಟನೆಯನ್ನು ನಡೆಸಿದರೆ, ರಾಷ್ಟ್ರೀಯ ಶಕ್ತಿಯು ಅನುತ್ಪಾದಕ ಕಾರ್ಯಗಳಲ್ಲಿ ವ್ಯಯವಾಗಿ ಹೋಗಿ ಅಷ್ಟು ಮಟ್ಟಿಗೆ ಬೇರೆ ಬೇರೆ ಅಭಿವೃದ್ಧಿ ಪ್ರಯತ್ನಗಳು ಕುಂಠಿತವಾಗಬಹುದು.

ಆಯೋಗದ ಹೇಳಿಕೆ

ಮೇಲಿನ ವಿರೋಧಕ ವಾದವನ್ನೂ ಭಾಷಾನುಗುಣ ರಾಜ್ಯ ರಚನೆಯ ಪುರಸ್ಕರ್ತರಿ ನಿಲುಮೆಯನ್ನೂ ಪರಾಮರ್ಶಿಸುತ್ತಾ ಆಯೋಗವು ಕೆಲವು ಸಂಗತಿಗಳನ್ನು ತನ್ನ ವರದಿಯಲ್ಲಿ ನಿರೂಪಿಸಿದೆ. ಆದರೆ ಸಾರಾಂಶವನ್ನು ಹೀಗೆ ಸಂಗ್ರಹಿಸಬಹುದು—ಒಕ್ಕೂಟದ ಘಟಕಗಳಲ್ಲಿ ಒಂದು ಕನಿಷ್ಠ ಮಿತಿಯಲ್ಲಾದರೂ ಅಂತರಿಕ ಒಗ್ಗಟ್ಟು ಮತ್ತು ತಿಳಿವಳಿಕೆ ಇರಬೇಕೆಂಬುದರಲ್ಲಿ ಲಾಭವು ನಿಜಕ್ಕೂ ಬಹಳವಾಗಿದೆ. ಆದರಂತೆ, ಶೋಷಣೆ ಮತ್ತು ತಿರಸ್ಕಾರಕ್ಕೆ ಎಡೆ ಇಲ್ಲವೆಂಬ ತಿಳಿವಳಿಕೆ ಯೊಡನೆ ತಮ್ಮ ಪ್ರದೇಶಕ್ಕೆ ಮತ್ತು ಜನತೆಯ ಸಾಮೂಹಿಕ ವ್ಯಕ್ತಿತ್ವಕ್ಕೆ ಗೌರವ ದೊರಕಿದೆ ಎಂಬ ಭಾವನೆಯಿಂದಲೂ ಒಂದು ಬಗೆಯ ತೃಪ್ತಿಯುಂಟಾಗಿ, ಸಮಾಜದ ಕ್ಷೇಮಾಭ್ಯುದಯವಾಗುವುದೆಂಬುದೂ ನಿಜವಾಗಿದೆ. ಎಲ್ಲರಿಗೂ ಸಾಮಾನ್ಯವಾದ ಭಾಷೆಯು ಪ್ರಾದೇಶಿಕ ಜಾಗೃತಿಯ ಬೆಳವಣಿಗೆಯನ್ನಷ್ಟೇ ಸಾಧಿಸದೆ, ಆಡಳಿತದ ಅನುಕೂಲತೆಯನ್ನೂ ಜನತೆಗೆ ಸರಕಾರದ ಶಾಸನ ಕ್ರಮದ ಪರಿಜ್ಞಾನವನ್ನೂ ಹೆಚ್ಚಿಸಲು ಸನುರ್ಥವಾಗುವುದೆಂಬುದರಲ್ಲಿ ಅನುಮಾನವಿಲ್ಲ. ಪ್ರಜಾ ಪ್ರಭುತ್ವದಲ್ಲಿ ಸರಕಾರವು ಜನರಿಗೆ ತಿಳಿಯುವ ಭಾಷೆಯಲ್ಲಿ ಆಡಳಿತವನ್ನು ನಡೆಸಿಕೊಂಡು ಹೋಗಬೇಕೆಂದು ಬೇಡಿಕೆಯನ್ನು ಮುಂದಿಡಲು ಜನರಿಗೆ ಅಧಿಕಾರವಿದ್ದೇ ಇದೆ.

ಆದುದರಿಂದ ಸರಕಾರ ಮತ್ತು ಜನತೆಯ ನಡುವೆ ಸಾಮಾನ್ಯ ಭಾಷೆಯು ಸಂಪರ್ಕವಿರಬೇಕೆಂಬ ಉದ್ದೇಶವು ನಿರಾಕರಿಸಲ್ಪಡುವಂಥದೆಂದು ಒಮ್ಮೆಲೆ ಹೇಳಿಬಿಡುವುದು ಸಾಧ್ಯವಿಲ್ಲ; ಬದಲಿಗೆ ಅದು ಯೋಗ್ಯವೆಂದೇ ಹೇಳಬೇಕಾದೀತು. ಆದರೆ ಇಲ್ಲಿ ಮುಖ್ಯವಾಗಿ ನೆನಪಿಡಬೇಕಾದ ವಿಷಯವೊಂದಿದೆ—ಅದೆಂದರೆ ನಾವು ಭಾಷೆಯ ಮಾಧ್ಯಮವನ್ನು ತಾತ್ವಿಕ ಮೋಹಕ್ಕೊಳಗಾಗಿ ಅಶ್ರಯಿಸಬಾರದು; ಅತಿರೇಕ ಅಭಿಮಾನವನ್ನು ಹೊಂದದೆ, ಕೇವಲ ಆಡಳಿತದ ಅನುಕೂಲತೆಗೆ ವ್ಯವಹಾರವಾಮದೆಂದಿಷ್ಟೇ ಭಾವಿಸಬೇಕು. ಹಾಗಲ್ಲದಿದ್ದರೆ ನಾವು ಯೋಗ್ಯ ದೃಷ್ಟಿಕೋಣದಿಂದಲೂ ಕೇಂದ್ರ ಸ್ಥಾನದಿಂದಲೂ ವಿಷಯವನ್ನು ವಿಮರ್ಶಿಸಲು ಹೋಗಿಲ್ಲವೆಂದಾಗುತ್ತದೆ.

ಕೇಂದ್ರದ ನಿಯಂತ್ರಣ

ಭಾಷೆಯ ಸವ ಸ್ಯೆಯನ್ನು ರಾಷ್ಟ್ರನ ಒಗ್ಗಟ್ಟು ಮತ್ತು ಏಕ್ಯದ ಹಿನ್ನೆಲೆಯಲ್ಲಿ ಯೂ ಕೇಂದ್ರದೊಡನೆ ಘಟಕಗಳಿಗಿರುವ ಸಂಬಂಧದ ನೆಲೆಯಿಂದಲೂ ವಿಚಾರಿಸಲು ಮರೆಯಬಾರದು. ಭಾರತದ ರಾಜಕೀಯ ಏಕ್ಯವು ಇತ್ತೀಚೆಯಷ್ಟೇ ಉದಯವಾದ ವಿಷಯ. ಬ್ರಿಟಿಷರು ಆಡಳಿತ ಕ್ಷೇತ್ರದಲ್ಲಿ ಸಾಧಿಸಿದ ಒಗ್ಗಟ್ಟಿನ ಫಲವಿದೆಂದು ಭಾವಿಸುವುದು ಸರಿಯಲ್ಲ, ಈಗಿನ ಭಾರತದಲ್ಲಿ ಹಿಂದೆ ಬ್ರಿಟಿಷರು ನೇರವಾಗಿ ಆಡಳಿತ ನಡೆಸುತ್ತಿದ್ದ ಭಾಗವು ಒಟ್ಟಿನ ಐದರಲ್ಲಿಮೂರಂಶದಷ್ಟೂ ವಿಸ್ತಾರವಾಗಿರಲಿಲ್ಲ; ಅಲ್ಲದೆ ಬ್ರಿಟಿಷರ ಆಡಳಿತವು ಈ ಪ್ರದೇಶವಲ್ಲವೆಯೂ ಒಗ್ಗಟ್ಟಿನ ಭಾವನೆ ಇರಬೇಕೆಂದೇನು ಪ್ರಯತ್ನಿಸಲಿಲ್ಲ. ಪರಕೀಯರ ದಾಸ್ಯದ ನೊಗವನ್ನು ಕೊಡವಿಬಿಡಬೇಕೆಂಬ ಮತ್ತು ಸ್ವತಂತ್ರ ರಾಷ್ಟ್ರನನ್ನು ಕಟ್ಟಬೇಕೆಂಬ ಭಾವನೆಯು ಭಾರತೀಯರಲ್ಲಿ ಮೂಡಿಯದರಿಂದಲೇ ಬ್ರಿಟಿಷರ ಆಡಳಿತವನ್ನಷ್ಟೇಯಲ್ಲ, ವೈರೀಯು ರಾಜರ ಆಡಳಿತವನ್ನು ಸಹ ದೂರಗೊಳಿಸಿ ರಾಷ್ಟ್ರದ ಒಗ್ಗಟ್ಟಿನ ಆಕಂಕನನ್ನು ದೂರಗೊಳಿಸಲಾಯಿತು.

(೪ ನೇ ಪುಟ ನೋಡಿ)

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ. ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಸೌಲ ಸ್ವಂತ ಜವಾಬ್ದಾರಿಯ ಜೀವಿತ ವಿಮೆ ದೊರೆಯತ್ತವೆ ಸುಲಭ ಕಂತಿನ ಮೊತ್ತಗಳಲ್ಲಿ. ಇದಕ್ಕಿನಲ್ಲಿ ಕೆಳಗಿನ ವಿಳಾಸಕ್ಕೆ ಆರ್ಡರ್ ಮಾಡಿಕೊಳ್ಳಿರಿ.

P. O. Box No. 3219, BOMBAY 3.

(ಹಿಂದಿನ ಪುಟದಿಂದ)

ಹೀಗೆ ಐಕ್ಯ ಮತವು ಇತ್ತೀಚಿಗಷ್ಟೇ ಭಾರತದಲ್ಲಿ ಹುಟ್ಟಿಕೊಂಡಿತು. ಅದನ್ನು ನೀರೆರೆದು ಪೋಷಿಸಬೇಕಾಗಿದೆಯಲ್ಲವೆ ಬಿರುಗಾಳಿ, ಸುಂಟರ ಗಾಳಿಗಳಿಂದ ಮತ್ತು ಸ್ನೇಹಪರವಲ್ಲದ ವಾತಾವರಣದಿಂದ ರಕ್ಷಿಸಲೂ ಬೇಕಾಗಿದೆ. ಇದನ್ನು ಭಾರತದ ರಾಜ್ಯ ಪುನರ್ರಚನೆಯ ತಯಾರಿಸಿದವರು ಸ್ವಲ್ಪ ಮಟ್ಟಿಗೆ ವಿಸಂಗಡಿದ್ದರು, ಮತ್ತು ಹಲವಾರು ಶಾಸನಿಕ ಕ್ರಮಗಳಿಂದ ಐಕ್ಯಮತವನ್ನು ಭಾರತದಲ್ಲೆಲ್ಲ ಉಳಿಸಿಕೊಳ್ಳಲು ಪ್ರಯತ್ನಿಸಿದರು ಇವುಗಳಲ್ಲಿ ಕೇಂದ್ರದ ಸಂಸತ್ತಿಗೂ ರಾಜ್ಯದ ಶಾಸನಾಂಗಗಳಿಗೂ ಕೊಡಿಯೇ ಅಧಿಕಾರವಿರುವ ವಿಷಯಗಳ ಪಟ್ಟಿಯನ್ನು (ಇಲ್ಲಿ ಕೇಂದ್ರದ ಸಂಸತ್ತಿನ ಅಧಿಕಾರಕ್ಕೆ ಎಂದೂ ಚ್ಯುತಿ ಬರಲಕ್ಕಿದ್ದಲ್ಲ) ಒಂದು ನಿರ್ದಶನವಾಗಿ ಕೊಡಬಹುದು. ಸಾಮಾನ್ಯ ಘಟನಾತ್ಮಕ ಯಂತ್ರಗಳು ಕೈ ಕೊಟ್ಟಾಗ ರಾಜ್ಯಗಳಲ್ಲಿ ಸರಕಾರ ನಿರ್ವಹಿಸುವ ಹೊಣೆಯನ್ನು ಕೇಂದ್ರದ ಸಂಸತ್ತಿಗೂ ರಾಷ್ಟ್ರಾಧ್ಯಕ್ಷರಿಗೂ ನೀಡುವ ಸೂತ್ರ, ಆರ್ಥಿಕ ಗಂಡಾಂತರದ ಕಾಲದಲ್ಲಿ ರಾಜ್ಯಗಳಿಗೆ ಸಲಹೆ ಕೊಡಲು ಕೇಂದ್ರಕ್ಕಿರುವ ಅಧಿಕಾರದ ಸೂತ್ರ, ಕೇಂದ್ರ ಸಂಸತ್ತು ರೂಪಿಸಿದ ಶಾಸನಗಳಿಗೆ ವ್ಯತಿರಿಕ್ತವಾಗಿ ಹೋಗದಂತೆ ರಾಜ್ಯಗಳಿಗೆ ನಿರ್ದೇಶನ ನೀಡಬಲ್ಲ ಕೇಂದ್ರದ ಸ್ಥಾನಪನಾನದ ಸೂತ್ರ ಇತ್ಯಾದಿಗಳು ಇತರ ಉದಾಹರಣೆಗಳಾಗಿವೆ

ರಾಜ್ಯಗಳ ಸ್ಥಾನ

ಪೆಟನೆಯಲ್ಲಿರುವ ಉಪರೋಕ್ತ ಸೂತ್ರಗಳು ಆತ್ಯಗತ್ಯದ ಸಂದರ್ಭದಲ್ಲಿಯಷ್ಟೇ ಅನುಸರಿಸಲ್ಪಡುವ ಸ್ವರೂಪವನ್ನು ಹೊಂದಿವೆ ಎಂಬುದನ್ನು ಇಲ್ಲಿ ಗಮನಿಸಬೇಕು. ರಾಜ್ಯಗಳಲ್ಲಿ ಆಡಳಿತ ಯಂತ್ರವು ಕುಸಿದು ಬೀಳಬಾರದು, ಅಲ್ಲಿ ಗಂಡಾಂತರವು ತಲೆದೋರಬಾರದು ಎಂಬ ಮತ್ತು ತನ್ನ ಕಾರ್ಯಕ್ಷೇತ್ರದಲ್ಲಿ ಸ್ವಂತಾಧಿಕಾರವನ್ನು ಕಾಯ್ದುಕೊಂಡು ಹೋಗಬೇಕು ಎಂಬ ಕೇಂದ್ರದ ಉದ್ದೇಶವನ್ನಷ್ಟೇ ಇವು ಪ್ರತಿ ಬಿಂಬಿಸುತ್ತವೆ ಎಂದೆನ್ನಬಹುದು. ಯಾವ ದೃಷ್ಟಿಯಿಂದಲೂ ಈ ಸೂತ್ರಗಳು ದೇಶದ ರಾಜಕೀಯ ಹಾಗು ಶಾಸನಿಕ ರಂಗದ ಆಡಿಗಲ್ಲುಗಳಂತೆಯೂ ಸ್ವಯಂಪ್ರಭ-ತ್ವವುಳ್ಳ ಘಟಕಗಳಂತೆಯೂ ಘಟನೆಯು ರಾಜ್ಯಗಳಿಗೆ ಸಾಮಾನ್ಯ ಸಮಯದಲ್ಲಿ ಕೆಲಸಮಾಡಗೊಟ್ಟಿದೆ ಎಂಬ ಸಂಗತಿಯನ್ನು ಅಲ್ಲಗಳೆಯುವುದಿಲ್ಲ ನಿಜ ಹೇಳಬೇಕೆಂದರೆ ಡೀನ್ ಅಚ್ಲೆಬಿ ಎಂಬ ನುರಿತ ಆಡಳಿತಗಾರರು ಈಚೆಗೆ ಇದನ್ನು ಪ್ರಸ್ತಾಪಿಸುತ್ತಾ "ಬೇರೆ ಯಾವುದೇ ವಿಶಾಲವಾದ ವಸ್ತು ಪ್ರಾಮುಖ್ಯವಾದ ರಾಷ್ಟ್ರಕ್ಕಿಂತ ಭಾರತದ ನೂತನ ರಾಷ್ಟ್ರೀಯ ಸರಕಾರಕ್ಕೆ ಅಧಿಕಾರದಲ್ಲಿ ಮೂಲ ಭೂತ ಸ್ಥೈರ್ಯವು ಕಡಿಮೆ ದೊರೆತಿದೆ, ಆದರೆ ಇದೇ ಸಮಯದಲ್ಲಿ ಈ ಸರಕಾರಕ್ಕೆ ಬೇಕಾದುದಕ್ಕಿಂತ ಹೆಚ್ಚಿನ್ನವನ್ನು ರಾಷ್ಟ್ರೀಯ ಹಿತಾಸಕ್ತಿಯ ವಿಷಯಗಳಿಗೆ ಸಂಬಂಧಿಸಿದ ಕಾರ್ಯಕ್ರಮದ ಆವಶ್ಯಕತೆಯನ್ನು ಕಂಡುಕೊಳ್ಳುವ ಮತ್ತು ನಿರ್ಧಾರಗಳನ್ನ ಕೈಗೊಳ್ಳುವ ಛಲವಿಕೆಯ ಭಾವನೆ ಇದೆ" ಎಂದು ಉದ್ಗರಿಸಿದ್ದರು ಭಾರತ ಸರಕಾರದ ಸ್ಥು ಹೆಚ್ಚು ಪ್ರಮಾಣದಲ್ಲಿ ಪೇರಿಲ್ಲಿಯೂ ತಾತ್ಕಾಲಿಕವಾಗಿ ಅಧಿಕವಿರುವ, ಆದರೆ ವಾಸ್ತವದಲ್ಲಿ ಪ್ರತ್ಯೇಕ ರಾಜಕೀಯ ನಿಯಂತ್ರಣವನ್ನೆ ಹೊಂದಿದ ಘಟಕಗಳ ಮೇಲೆ ಹೊಂದಿಕೊಂಡ ಸರಕಾರವಿಲ್ಲ ಎಂದಿವರ ಅಭಿಮತ. ಘಟನೆಯು ವ್ಯವಹಾರದಲ್ಲಿರುವ ಕಳೆದ ಕೆಲವು ವರ್ಷಗಳಲ್ಲಿ ರಾಜ್ಯಗಳು ಹೆಚ್ಚು ಹೆಚ್ಚು ಸ್ವಾಯತ್ತಾಧಿಕಾರದ ಕಡೆಗೆ ಒಲವನ್ನು ತೋರಿಸುವುದು ಸ್ಪಷ್ಟವಾಗಿದೆ ಭಾಷೆಯನ್ನೆ ತಳಹದಿಯಾಗಿಟ್ಟು ಕೊಂಡು ರಚಿಸುವ ಘಟಕವು ಈ ಪ್ರಾದೇಶಿಕ ಭಾವನೆಗೆ ಎಷ್ಟರ ಮಟ್ಟಿಗೆ ಉತ್ತೇಜನೆ ಕೊಡಬಹುದು ಎಂಬುದನ್ನು ಇಲ್ಲಿ ಪರ್ಯಾಲೋಚಿಸದಿರಲಾಗದು.

ಸಮನ್ವಯ ದೃಷ್ಟಿ

ಅದೇ ಸಮಯದಲ್ಲಿ ಇನ್ನೊಂದು ವಿಷಯವನ್ನೂ ಮರೆಯತಕ್ಕದ್ದಲ್ಲ ಭಾಷೆ ಮತ್ತಿತರ ಸಾಮೂಹಿಕ ವಿಧೇಯತೆಯ ಭಾವನೆಯು ಭಾರತದ ನೆಲದಲ್ಲಿಯೂ ಇತಿಹಾಸದಲ್ಲಿಯೂ ಬೇರು ಬಿಟ್ಟಿದೆ. ಸಂಸ್ಕೃತಿಯ ನೆಲಗಟ್ಟಿನ ಮೇಲೆ ನಿಂತ ಪ್ರಾದೇಶಿಕ ಭಾವನೆಯು ಏಕ ಭಾಷೆಯ ವಲಯದ ಕೇಂದ್ರದಲ್ಲಿ ನಿಂತು, ಸಾಮಾನ್ಯ ಭಾರತೀಯನ ಬುದ್ಧಿಗೆ ಹಿಡಿಸುವ ಮತ್ತು ಸುಲಭದಲ್ಲಿ ಅರ್ಥವಾಗುವ ಮೂಲ್ಯಗಳನ್ನು ಬಿತ್ತರಿಸುತ್ತದೆ, ಅಧಿವಾ ಪ್ರತಿನಿಧಿಸುತ್ತದೆ. ಆದರೆ, ರಾಷ್ಟ್ರದ ಒಗ್ಗಟ್ಟು ನುತ್ತು ಐಕ್ಯಮತದ ಬಾವನೆಯು ನೆಲಕ್ಕೆ ಆಳವಾಗಿ ಇನ್ನು ಇಳಿಯಬೇಕಾಗಿದೆ ಸಾಂಪ್ರದಾಯಿಕವಾದ ಸಂಕುಚಿತ ವಿಧೇಯತೆಯ ಗುರುತ್ವಾಕರ್ಷಣ ಶಕ್ತಿಯನ್ನು ನಿರೋಧಿಸಿ ನಿಲ್ಲುವಷ್ಟು ತಾತ್ವಿಕ ಬೆಳವಣಿಗೆಯನ್ನು ಅದು ಇನ್ನು ಹೊಂದಬೇಕಾಗಿದೆ ಇಂಥ ಪರಿಸ್ಥಿತಿಯಲ್ಲಿ ರಾಜಕೀಯ ಮತ್ತು ಆಡಳಿತ ಚಟುವಟಿಕೆಯ ವಲಯಗಳಿಗೆ ಮೀರಿ ಸೂಚಿಸುವಾಗ ಭಾಷಾ ಘಟಕಗಳೊಡನೆ ಸಮನ್ವಯ ಗೊಳಿಸಬಹುದಾದ ಸಂಕುಚಿತ ವಿಧೇಯತೆಯನ್ನೆತ್ತಿ ಹಿಡಿದರೆ, ದೇಶದ ಐಕ್ಯಮತದ ವಿಶಾಲ ಭಾವನೆಗೆ ಹಾನಿ ತಪ್ಪದು ಬಾಹ್ಯಕ್ಕೆ ಅತಿರೇಕ ಮಹತ್ವವಿತ್ತರೆ ಹೊಸತಾಗಿ ಭೂಮಿ ಸಾಗುವಳಿ ನಮಾಡಲು ಹಸನುಗೊಳಿಸಿದ ಅಭಿವೃದ್ಧಿ ಕ್ಷೇತ್ರಗಳ ಪ್ರಗತಿಯಾಗದೆ ಹೋದೀತು— ಏಕೆಂದರೆ ಒಂದು ಭಾಷೆಯ ವಲಯದಲ್ಲಿದ್ದವರಿಗೆ ಇನ್ನೊಂದು ಭಾಷೆಯ ವಲಯಕ್ಕೆ ಹೋಗಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ, ಭಾಷಾ ಪ್ರೇಮಿಗಳು ಇದನ್ನು ತಡೆಗಟ್ಟಬಹುದು. ಪಂಜಾಬು ಮತ್ತು ರಾಜಸ್ಥಾನಗಳಲ್ಲಿ ಹೀಗೆಯೆ ಆಗಿದೆ ಈಗಲೇ ಭಾಷಾಪ್ರೇಮಿಗಳು ತಮ್ಮ ತಾಯ್ನೆಲದ ಕಲ್ಪನೆಯೊಂದರಲ್ಲಿ

ಎರಡನೆಯ ಪಂಚವಾರ್ಷಿಕ ಯೋಜನೆ

ಹಣಕಾಸಿನ ಕುರಿತು ಅರ್ಥ ಸಚಿವರ ವಿಚಾರ

ದ್ವಿತೀಯ ಪಂಚವಾರ್ಷಿಕ ಯೋಜನೆಯ ಕುರಿತು ವಿಶೇಷವಾದ ಬೆಳಕನ್ನು ಮುಖ್ಯವಾಗಿ ಆದರ ಆರ್ಥಿಕ ಮುಖದ ಮೇಲೆ ಹೆಚ್ಚಿನ ಪ್ರಕಾಶನನ್ನು ಕೇಂದ್ರದ ಹಣಕಾಸಿನ ಮಂತ್ರಿ ಶ್ರೀ ದೇಶಮುಖರು ಮೊನ್ನೆ ಪತ್ರಿಕೋದ್ಯೋಗಿಗಳ ಮುಂದೆ ನಿವರಿಸಿದರು. ಅವರ ಮಾತಿನಂತೆ, ಮೊದಲು ಪಂಚವಾರ್ಷಿಕ ಯೋಜನೆಯ ಗಾತ್ರವನ್ನು ೪೫೦೦ ಕೋಟಿ ರೂಪಾಯಿ ಎಂದು ನಿಗದಿಮಾಡಿದ್ದರೂ ಈಗ ಮತ್ತೆ ೫೦೦ ಕೋಟಿಯನ್ನು ಹೆಚ್ಚಿಸಿ ಒಟ್ಟು ೪೯೦೦ ಕೋಟಿ ರೂಪಾಯಿ ವೆಚ್ಚವಾಗುವ ಕಾರ್ಯಕ್ರಮಗಳಿಗೆ ಅವಕಾಶ ನೀಡಲಾಗುತ್ತದೆ. ಬೇರೆ ಬೇರೆ ರಾಜ್ಯ ಸರಕಾರಗಳೂ ಕೇಂದ್ರವೂ ಯೋಜನಾ ಆಯೋಗವೂ ರೂಪಿಸಿದ ಕಾರ್ಯಕ್ರಮಗಳ ಕೂಲಂಕುಷ ಪರಿಶೀಲನೆ ಇದನ್ನು ಅಗತ್ಯವಾಗಿ ಮಾಡಿಕೆಂದು ಅವರು ಹೇಳಿದರು.

ಸಂಪತ್ತಿನ ಸ್ರೋತ

ಯೋಜನೆಯ ಅವಧಿಯಲ್ಲಿ ಭಾರತದಲ್ಲಿ ಸಾದನ ಸಂಪತ್ತು ೩೫೦೦ ಕೋಟಿ ರೂಪಾಯಿಗಳ ಮೊದಲಿನ ಅಂದಾಜಿನಲ್ಲಿ ಉಳಿಯುತ್ತದೆ ಕೊರತೆ ಬೀಳುವ ಹಣದಲ್ಲಿ ಸುಮಾರು ೧೫೦ ಕೋಟಿ ರೂಪಾಯಿಯನ್ನು ಹೊಸತಾಗಿ ತೆರಿಗೆ ಹೊರಿಸುವ ಮೂಲಕ ಸಂಪಾದಿಸಬಹುದ, ಉಳಿದುದನ್ನ ಸಾರ್ವಜನಿಕರಿಂದ ಸಾಲವಾಗಿಯೂ ಇತರ ರೂಪದಿಂದಲೂ ಸಂಪಾದಿಸಬೇಕಾಗುತ್ತದೆ ಸಾರ್ವಜನಿಕರಿಂದ ಸಾಲವನ್ನೊಗದಿಸುವ ರೂಪದಲ್ಲಿ ಸಾಕಷ್ಟು ಸಹಾಯ ದೊರಕಿರುತ್ತದು

ತೀಲುಕ್ತಿದ್ದಾರೆ ಅದರಂತೆ ಮಲೆಯಾಳಿ ಮಾತನಾಡ ವವನು ಎಲ್ಲೆದ್ದರೂ ಕೇರಳಕ್ಕೆಯೇ ನಿಷ್ಠೆ ತೋರಿಸಬೇಕಾಗುತ್ತದೆ! ಇದ ಭಾರತದ ಘಟನೆಯಂತೆ ನೀಡಲಾದ ನಾಗರಿಕಾಧಿಕಾರಕ್ಕೆ ವ್ಯತಿರಿಕ್ತವಾದ ವಾದವಾಗಿದೆ ಇದಕ್ಕೆಂದಿಗೂ ಅವಕಾಶ ಕೊಡುವಂತಿಲ್ಲ ಆದುದರಿಂದ ತುಂಬ ವಿಚಾರ ಮಾಡಿದ ಒಳಿಕ ನಾವು ಭಾಷೆಯೊಂದಕ್ಕೆಯೇ ಮಹತ್ವ ಕೊಡಬಾರದೆಂದೂ ರಾಷ್ಟ್ರದ ಐಕ್ಯಮತಕ್ಕೆ ಹಿತವಾಗುವಂತೆ ಇತರ ನೂನ ಪಂಡಗಳನ್ನೂ ಉಪಯೋಗಿಸಿ ಸಮನ್ವಯ ದೃಷ್ಟಿಯಿಂದ ಪ್ರಶ್ನೆಯನ್ನು ಬಿಡಿಸಬೇಕೆಂದೂ ತೀರ್ಮಾನಿಸಿದ್ದೇವೆ— ಎಂಬುದಾಗಿ ಆಯೋಗ ಅಂತ್ಯದಲ್ಲಿ ತನ್ನ ನಿಲುಮೆಯನ್ನು ಸ್ಪಷ್ಟಪಡಿಸಿರುತ್ತದೆ.

ನಿಜ. ಆದರೆ, ಜನರು ತಮ್ಮ ಉಳಿತಾಯವನ್ನು ಜೀವನ ಮಟ್ಟವನ್ನು ಎತ್ತರಿಸುವ ಉದ್ದೇಶದಿಂದ ನಿತ್ಯೋಪಯೋಗದ ವಸ್ತುಗಳಿಗಾಗಿ ವ್ಯಯಿಸಿದರೆ ಮಾತ್ರ ತೊಂದರೆ ತಪ್ಪದು ಎಂದು ಶ್ರೀ ದೇಶಮುಖರು ಹೇಳಿದರು. ಅಭಿವೃದ್ಧಿ ಪ್ರಯತ್ನಗಳನ್ನು ವಿಂಡೊತ್ತುವಾಗ ರಾಷ್ಟ್ರೀಯ ಆದಾಯದ ಶೇಕಡ ಎಂಟೂವರೆಯಷ್ಟನ್ನೇ ಸರಕಾರಗಳು ಆದಾಯವಾಗಿ ಬಳಸಬೇಕೆಂಬ ಹಟವಾಗಿರುವ ನಿಲುಮೆ ಪ್ರಯೋಜನವೆನಿಸದು. ಕೆಲವು ದೇಶಗಳು ರಾಷ್ಟ್ರೀಯ ಆದಾಯದ ೧೦%, ಮತ್ತೆ ಕೆಲವು ೧೫ರಿಂದ ೨೦% ಹಣವನ್ನು ಸಹ ಬಳಸಿರುತ್ತವೆ ಆದುದರಿಂದ ನಾವು ಸಹ ಗತಿಶೀಲ ಭಾವನೆಯನ್ನು ಹೊಂದಬೇಕು. ಇಪ್ಪರ ವರೆಗಿನ ಅಂದಾಜು ಕರಭಾರ ವಿಚಾರಣಾ ಮಂಡಳದ ಸಿಫಾರಸಿನ ವ್ಯಾಪ್ತಿಯನ್ನು ದಾಟಿ ಹೋಗಿಲ್ಲ ಹಾಗೆ ದಾಟುವುದು ಸಾಧ್ಯವಿಲ್ಲವೆಂದಾದರೆ ಕೊರತೆ ಧನ ವಿನಿಯೋಗ ಪದ್ಧತಿಯನ್ನೆ ಆಶ್ರಯಿಸಬೇಕಾಗುತ್ತದೆ—ಎಂಬವರು ಪ್ರಶ್ನೆಯನ್ನು ನಿವರಿಸಿದರು

ವಿದೇಶದ ನೆರವು

ಶ್ರೀ ದೇಶಮುಖರು ವಿದೇಶೀ ವಿನಿಮಯದ ಕ್ಷೇತ್ರದಲ್ಲಿ ೧೫೦೦ ಕೋಟಿ ರೂಪಾಯಿಗಳ ಅಗತ್ಯ ಬೀಳಬಹುದೆಂದು ತಿಳಿಸಿದರು ಇದರಲ್ಲಿ ೬೦೦ ಕೋಟಿಯಷ್ಟನ್ನು ಭಾರತದ ವಿದೇಶ ವಿನಿಮಯ ವ್ಯಾಪಾರದಲ್ಲಿ ಉಳಿಕೆ ಸಾಧಿಸುವುದರಿಂದ ಪರಿಶೀಲಿಸಬಹುದು, ಸುಮಾರು ೯೦೦ ಕೋಟಿ ರೂಪಾಯಿಯು ಜಾಗತಿಕ ಬೇಂಕೇ ಮುಂತಾದ ಸ್ರೋತಗಳಿಂದಲೂ ವಿದೇಶಗಳ ನೆರವಿನಿಂದಲೂ ದೊರಕಬಹುದು ಮತ್ತೂ ೪೦೦ ಕೋಟಿ ರೂಪಾಯಿಗಳ ಕೊರತೆ ಉಳಿಯುತ್ತದೆ ಎಂದರು ಅವೇರಿಕದ ರಾಯಭಾರಿಗಳು ಇತ್ತೀಚೆಗೆ ಇಷ್ಟು ಹಣವನ್ನು ತನ್ನ ಸರಕಾರ ನೀಡಬಲ್ಲುದೆಂದು ಹೇಳಿದ ಮಾತಿನ ಕಡೆಗೆ ಅವರ ಗಮನವನ್ನು ಸೆಳೆದಾಗ "ಹಾಗೆ ಸಹಾಯ ಪಡೆಯ ಬೆಯು ಉಚ್ಚ ಮಟ್ಟದ ಧೋರಣೆಗಳ ಸೇರಿದ ವಿಷಯವಾಗಿತ್ತದೆ ನಾನೀಗಲೇ ಏನನ್ನು ಹೇಳುವಂತಿಲ್ಲ" ಎಂದರು ಆದರೆ, ತಜ್ಞರು ಸ್ವಿಜರಲೇಂಡಿನಲ್ಲಿಯೂ ಲಂಡನಿನಲ್ಲಿಯೂ ಸಾಲಪತ್ರಗಳನ್ನೆತ್ತುವ ವಿಷಯವನ್ನೆ ವಿಚಾರಿಸಿದ್ದೇನೆ ಎಂದು ತಿಳಿಸಿದರು ಲಂಡನಿನ ಹಣಕಾಸಿನ ಪೇಟೆಯಲ್ಲಿ ಸಾಲಕ್ಕಾಗಿ ಈಗಾಗಲೇ ಬಹಳ ಬೇಡಿಕೆ ಬಿದ್ದಿದೆ, ನಾವೇನೂ ಅವಸರ ಮಾಡಬೇಕಾಗಿಲ್ಲ ಆಗತ್ಯ ಬಿದ್ದರೆ ಮಾತ್ರ ಸಾಲಕ್ಕಾಗಿ ವ್ಯಾವರ್ದನೆ ಸಲ್ಲಿಸುವ ಪ್ರಶ್ನೆ ಏಳುತ್ತದೆ ಎಂದರು. ಸ್ಟರ್ಲಿಂಗಿನ ಶಿಲ್ಕು ಧಾರಾಳವಾಗಿ ಉಳಿದಿರುವಾಗ ಹೊಸತಾಗಿ ಸಾಲ ಎತ್ತುವುದೇಕೆಂಬ ಪ್ರಶ್ನೆಯನ್ನು ಉತ್ತರಿಸುತ್ತಾ ನಮ್ಮ ನಾಣ್ಯ ಚಲಾವಣೆಯ ಬೆಂಬಲಕ್ಕೆ ಸ್ಟರ್ಲಿಂಗು ಅಗತ್ಯವಿದೆಯೆಂದೂ ಎರಡನೆಯ ಯೋಜನೆಯ ಕಾಲದಲ್ಲಿ ಕೊರತೆ ಧನವಿನಿಯೋಗವು ಹೆಚ್ಚುವುದರಿಂದ ಸ್ಟರ್ಲಿಂಗನ್ನು ಉಳಿಸಿಕೊಳ್ಳುವುದು ವಿವೇಕಾರ್ಯವೆಂದೂ ತಿಳಿಸಿದರು. ಇದಕ್ಕೆ ತಕ್ಕ

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ ಕಾಂತ)
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
(ಪಿಡಬ್ಲ್ಯೂಡಿ ಬ್ಯಾಂಕು)
ಪ್ರಕಟಣೆ
ಬ್ಯಾಂಕಿನ ಶಾಖೆಯೊಂದು ಮಧುರೆಯಲ್ಲಿ
ಸದ್ಯದಲ್ಲಿಯೇ ತೆರೆಯಲ್ಪಡಲಿದೆ.
THE CANARA BANKING CORPORATION LIMITED
Estd - 1906] [H O UDIPI (S India)

ಪ್ಪು ತೆಗೆದಿಟ್ಟ ಬಳಿಕ ಉಳಿಯುವ ಸ್ಟೆರ್ಲಿಂಗಿನ ಶಿಲ್ಕು ಕಡಿಮೆ ಎಂದರು.

ಜನರ ಸಹಕಾರ

ತಾನಿನಿರೋಧ ಧೋರಣೆಯಿಂದ ಸರಕಾರಕ್ಕೆ ಯೋಜನೆಯು ಅವಧಿಯಲ್ಲಿ ಸುಮಾರು ೧೫೫ ಕೋಟಿ ರೂಪಾಯಿಗಳ ಕೊರತೆಬೀಳಾಗುತ್ತದೆ. ಇದರಿಂದ ಜನರಲ್ಲಿ ಹಣ ಉಳಿಯುವುದೆಂಬುದು ನಿಜವಾದ ರೂ। ತಮ್ಮ ಕೌಟುಂಬಿಕ ಸೌಖ್ಯಕ್ಕಾಗಿ ವಸ್ತ್ರ ಮತ್ತಿತರ ವಸ್ತುಗಳಿಗೆ ಹೆಚ್ಚು ಹಣವನ್ನು ವ್ಯಯಿಸುವುದಕ್ಕೆ ಜನರು ಹೋಗದಿದ್ದರೆ ಮಾತ್ರ ಸಣ್ಣ ಉಳಿತಾಯ ಬೆಳೆದೀತು ಎಂದರು. ಜನರಲ್ಲಿ ಈಗ ಯೋಜನೆಯ ಕುರಿತಾಗಿ ಆಸಕ್ತಿ ಹೆಚ್ಚುತ್ತಿರುವುದು ಸಂತೋಷದ ವಿಷಯ. ಅವರಿಂದ ಯೋಜನೆಯ ಕಾರ್ಯಾಚರಣೆಗೆ ಈಗಾಗಲೇ ಸಾಕಷ್ಟು ಬೆಂಬಲವೂ ಸಹಕಾರವೂ ವ್ಯಕ್ತವಾಗಿದೆ. ಸಮಾಜ ವಿಕಾಸ ಯೋಜನೆಯಲ್ಲಿ ೧೫ ಕೋಟಿ, ರಾಷ್ಟ್ರೀಯ ವಿಸ್ತರಣಾ ಸೇವೆಯ ಕೇಂದ್ರಗಳಲ್ಲಿ ೧೦ ಕೋಟಿ, ಸ್ಥಳೀಯ ಅಭಿವೃದ್ಧಿ ಕ್ಷೇತ್ರದಲ್ಲಿ ೨೫ ಕೋಟಿ ಗ್ರಾಮ ಕಲ್ಯಾಣ ಕಾರ್ಯಗಳಲ್ಲಿ ಮತ್ತೆ ೧೫ ಕೋಟಿ—ಹೀಗೆ ಜನರು ಧಾರಾಳವಾಗಿ ಇಷ್ಟರ ವರೆಗೆ ಯೋಜನೆಗೆ ಬೇರೆ ಬೇರೆ ರೂಪದಲ್ಲಿ ಸಹಾಯವನ್ನು ಒದಗಿಸಿದ್ದಾರೆ. ಇಷ್ಟು ಮಾತ್ರವಲ್ಲದೆ, ಮೊದಲನೆಯ ಪಂಚವಾರ್ಷಿಕ ಯೋಜನೆಯು ಕೃಷಿಯ ಉತ್ಪನ್ನದಲ್ಲಿ ಹೆಚ್ಚಳವನ್ನು ಸಾಧಿಸಿಯೂ ಹೊಸ ರೈಲು ದಾರಿ ಮತ್ತು ವಿದ್ಯುದುತ್ಪಾದನೆಯ ಕೇಂದ್ರ ಮುಂತಾದವುಗಳ ಮೂಲಕ ಬೃಹದ್ ಸಾಮೂಹಿಕ ಆಸ್ತಿಪಾಸ್ತಿಯ ಬೆಲೆಯನ್ನು ಹೆಚ್ಚಿಸಿಯೂ ಜಯಪ್ರದವಾಗಿದೆ ಎಂದರು. ಈ ಯೋಜನೆಗಾಗಿ ಇಷ್ಟರ ವರೆಗೆ ೫೦೦ ಕೋಟಿ ರೂಪಾಯಿಗಳ ಕೊರತೆ ಧನ ವಿನಿಯೋಗ ಪದ್ಧತಿಯ ನ್ಯಾಯ ಒದಗಿಸಿದ್ದೇವೆ; ಮುಂದಿನ ಮಾರ್ಚಿಯಲ್ಲಿ ಯೋಜನೆಯ ಅವಧಿ ಮುಗಿಯುವ ಹೊತ್ತಿಗೆ ಇನ್ನೂ ೫೦೦ ಕೋಟಿ ರೂಪಾಯಿಗಳನ್ನು ಕೊರತೆ ಧನ ವಿನಿಯೋಗ ಪದ್ಧತಿಯಿಂದಲೇ ಹೊರೈಸಬೇಕಾದೀತು. ಹೀಗೆ ಒಟ್ಟಿಗೆ ೫೦೦ ಕೋಟಿ ರೂಪಾಯಿಗಳ ಕೊರತೆ ಬಂದರೂ ಸಹ ಹೆಚ್ಚಿದ ಉತ್ಪಾದನೆ ಮತ್ತಿತರ ಅಭಿವೃದ್ಧಿಯ ಪ್ರಮಾಣದೊಡನೆ ಇದು ಸಮನ್ವಯವನ್ನು ಚೆನ್ನಾಗಿ ಕಾಯ್ದು ಕೊಳ್ಳುತ್ತದೆ ಎಂದರು.

ನಿರುದ್ಯೋಗ ಸಮಸ್ಯೆ

ಮೊದಲನೆಯ ಯೋಜನೆಯು ನಿರುದ್ಯೋಗದ ಸಮಸ್ಯೆಯನ್ನು ಪರಿಹರಿಸುವಲ್ಲಿ ಎಷ್ಟರ ಮಟ್ಟಿಗೆ ಸಮರ್ಥವಾಗಿದೆ ಎಂಬುದನ್ನು ಪ್ರಸ್ತಾಪಿಸುತ್ತಾ ಅರ್ಥ ಸಚಿವರು ನಿರಾಶೆಯ ಮಾತುಗಳನ್ನಾಡಿದರು. ಒಬ್ಬನಿಗೆ ಕೆಲಸ ದೊರಕಿಸಿ ಕೊಡಲು ೫೦೦ ರಿಂದ ೬ ಸಾವಿರ ರೂಪಾಯಿಗಳ ವರೆಗಿನ ಬಂಡವಳ ನೆರವು ಅಗತ್ಯವಾಗುತ್ತದೆ. ಈ ಮಾನದಿಂದ ಪ್ರಥಮ ಯೋಜನೆಯು ಸುಮಾರು ೫೦ ಲಕ್ಷ ಹೊಸ ಉದ್ಯೋಗಗಳನ್ನು ಹುಟ್ಟಿಸಲು ಸಮರ್ಥವಾಗಿದೆ ಎಂದು ಕ್ಲುಪ್ತಿಕೊಳ್ಳಬಹುದು. ಆದರೆ ನಮ್ಮ ದೇಶದಲ್ಲಿ ಜನ ಸಂಖ್ಯೆಯು ಪ್ರತಿ ವರ್ಷ ೫೫ ಲಕ್ಷದಷ್ಟು ಹೆಚ್ಚುತ್ತಿರುವುದು ಇದರಲ್ಲಿ ೪೦% ಜನರು ಉದ್ಯೋಗವನ್ನು ಹುಡುಕುವವರಾಗಿರುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ಯೋಜನೆಯು ಪ್ರಾರಂಭವಾದ ವರ್ಷ (೧೯೫೧) ದಲ್ಲಿದ್ದದ್ದಕ್ಕಿಂತಲೂ ಈಗ ನಿರುದ್ಯೋಗದ ಪರಿಸ್ಥಿತಿಯು ಹೆಚ್ಚು ಕೆಟ್ಟಿದೆ ಮತ್ತು ದಾರುಣವಾಗಿದೆ ಎಂದು ಹೇಳಬೇಕಾಗುತ್ತದೆ. ಪೊನ್ನೆ ತನ್ನ ವರದಿಯನ್ನು ಒಪ್ಪಿಸಿದ ಕರ್ವೆ ಸಮಿತಿಯು ೪೫ ಲಕ್ಷದಷ್ಟು ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಸೂಚನೆಗಳನ್ನು ನೀಡಿದೆ. ನೇಯಿಗೆ ಮುಂತಾದ ಕೆಲವು ವಿಷಯುಗಳಲ್ಲಿ ಈ ಸಮಿತಿಯು ಕಟ್ಟುಕೊಂಡ ಅಂದಾಜು ಸರಿ ಹೋಗಬಹುದಾದರೂ ಎಲ್ಲ ವಿಷಯಗಳ ಮಟ್ಟಿಗೆ ಇದೇ ಬಗೆಯ ತೃಪ್ತಿಯನ್ನು ಹೊಂದುವಂತಿಲ್ಲ. ಆದರೆ, ವಿಕೇಂದ್ರೀಕೃತ ಆರ್ಥಿಕ ವ್ಯವಸ್ಥೆಯು ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಿ ನಿರುದ್ಯೋಗಸಮಸ್ಯೆಯ ಪರಿಹಾರಕ್ಕೆ ಸಹಾಯವಾದುದೆಂಬ ವಿಶ್ವಾಸವನ್ನು ಪವಿತ್ರ ಕರೆ ಸಮಿತಿ ಬಲಪಡಿಸಿದೆ ಎಂದು ಶ್ರೀ ದೇಶಮುಖರು ನುಡಿದರು.

ಸಂಯುಕ್ತ ಕರ್ನಾಟಕಕ್ಕೆ ಸ್ವಾಗತ

ಬೆಳಗಾಂವಿಯಲ್ಲಿ ಪ್ರದೇಶ ಕಾಂಗ್ರೆಸಿನ ಸಭೆ

ಇಂದೇ ತಿಂಗಳ ದಿನಾಂಕ ಬೆಳಗಾಂವಿಯಲ್ಲಿನೇರಿದ ಕರ್ನಾಟಕ ಪ್ರದೇಶ ಕಾಂಗ್ರೆಸು ಸಮಿತಿಯ ಅಧಿವೇಶನವು ಫಜಲಾಲಿ ಆಯೋಗವು ಸಂಯುಕ್ತ ಕರ್ನಾಟಕ ರಾಜ್ಯದ ರಚನೆಗೆ ಬೆಂಬಲವನ್ನು ವ್ಯಕ್ತಪಡಿಸಿರುವಕ್ಕೆ ಸಂತೋಷವನ್ನು ಸೂಚಿಸಿಯೂ —ಆದರೆ ಹೀಗೆ ಸೂಚಿಸುವಾಗ ಬಿಟ್ಟು ಗೊಟ್ಟ ಕನ್ನಡ ಪ್ರದೇಶಗಳನ್ನು ಕೇಂದ್ರ ಸರಕಾರವು ಕರ್ನಾಟಕದಲ್ಲಿ ಸೇರಿಸಬೇಕೆಂದು ಒತ್ತಾಯಿಸಿಯೂ ಒಂದು ಗೊತ್ತುವಳಿಯನ್ನು ಸ್ವೀಕರಿಸಿತು. ಏಕೀಕರಣವು ಕನ್ನಡಿಗರ ಸಾಮಾಜಿಕ ಹಾಗು ರಾಜಕೀಯ ಆಕಾಂಕ್ಷೆಯಾಗಿದೆ ಎಂಬ ವಿಷಯವನ್ನು ಗೊತ್ತುವಳಿಯು ಈ ಸಂದರ್ಭದಲ್ಲಿ ನೆನೆಪಿರುತ್ತದೆ; ಮತ್ತು ಈ ಆಶಯವನ್ನು ನೆರವೇರಿಸಿರುವ ಮಟ್ಟಿಗೆ ಫಜಲಾಲಿ ಆಯೋಗಕ್ಕೆ ಕೃತಜ್ಞತೆಯನ್ನು ಸೂಚಿಸಿರುತ್ತದೆ.

ಬಳ್ಳಾರಿಯ ಪ್ರಶ್ನೆ

ಕೆ. ಪಿ. ಸಿ. ಸಿ. ಸಭೆಯು ಬಳ್ಳಾರಿ, ಹೊಸ ಪೇಟೆ, ಸಿರಗುಪ್ಪ ಈ ಮೂರು ತಾಲೂಕುಗಳನ್ನು ಪಲ್ಲಾಮರಂ ಉಪ ತಾಲೂಕನ್ನೂ ಆಂಧ್ರಕ್ಕೆ ಕೊಡಮಾಡುವ ಶಿಫಾರಸನ್ನು ಸ್ಪಷ್ಟವಾಗಿ ವಿರೋಧಿಸಿದೆ. ಆಯೋಗದವರು ಈ ವರ್ಗಾವಣೆಗೆ ಕೊಟ್ಟಿರುವ ಕಾರಣಗಳು ಯೋಗ್ಯವಾದುವಲ್ಲ. ಇಬ್ಬಿಬ್ಬರು ನ್ಯಾಯ ಮೂರ್ತಿಗಳ ತೀರ್ಪಿನಿಂದಲೂ ಗೃಹ ಮಂತ್ರಿ, ಪ್ರಧಾನ ಮಂತ್ರಿ ಇವರ ಹೇಳಿಕೆಯಿಂದಲೂ ಪ್ರಕರಣವು ಮುಟ್ಟಿಲ್ಲಟ್ಟಿದೆಂದು ಭಾವಿಸಲಾಗಿದ್ದುದನ್ನು ಈಗ ಪುನಃ ಎತ್ತಿ ಕೊಂಡುದು ಸರಿಯಲ್ಲ ಎಂದು ಪ್ರದೇಶ ಕಾಂಗ್ರೆಸು ತಿಳಿಸಿದೆ. ರಾಯಚೂರು ಜಿಲ್ಲೆಯನ್ನೊಳಗೊಂಡ ಭಾವಿ ಕರ್ನಾಟಕ ರಾಜ್ಯಕ್ಕೆಯೇ ಆಂಧ್ರಕ್ಕಿಂತ ಹೆಚ್ಚಾಗಿ ತುಂಗಭದ್ರ ಅಣೆಕಟ್ಟಿನಿಂದ ಪ್ರಯೋಜನ ಸಿಗುವುದೆಂದೂ ಈ ದೃಷ್ಟಿಯಿಂದಂತೂ ಆಯೋಗದ ಸೂಚನೆ ತೀರ ಅಸಮಂಜಸವಾದುದೆಂದೂ ಅದು ಸಾರಿದೆ.

ಕಾಸರಗೋಡು ತಾಲೂಕು

ಉಲ್ಲಾಳ, ಅದವಾನಿ ಮತ್ತು ರಾಯದುರ್ಗ ತಾಲೂಕುಗಳ ಕುರಿತು ಗಡಿ ನಿರ್ಣಯ ಸಮಿತಿ ನೇಮಿಸುವ ಆಶ್ವಾಸನೆಯನ್ನು ಕೊಡಲಾಗಿದ್ದರೂ ಈ ಪ್ರದೇಶಗಳನ್ನು ಫಜಲಾಲಿ ಆಯೋಗವು ಕನ್ನಡ ರಾಜ್ಯದಿಂದ ಹೊರತು ಪಡಿಸಿರುವುದಕ್ಕೆ ಪ್ರದೇಶ ಕಾಂಗ್ರೆಸು ವಿರೋಧವನ್ನು ಸೂಚಿಸಿದೆ. ಈ ತಾಲೂಕುಗಳು ಕನ್ನಡ ಪ್ರದೇಶಗಳಷ್ಟೇಯಲ್ಲ, ತುಂಗಭದ್ರ ಅಣೆಕಟ್ಟಿನ ನೈಸರ್ಗಿಕ ಭಾಗಗಳೆಂದೂ ಅದು ಪೆನಸು ಮಾಡಿ ಕೊಟ್ಟಿದೆ. ಅದರಂತೆ ಕಾಸರಗೋಡು ತಾಲೂಕಿನಲ್ಲಿ ಚಂದ್ರಗಿರಿ ಹೊಳೆಯ ಉತ್ತರ ಕ್ಕಿರುವ ಭಾಗ, ಮಡಕಶಿರ ತಾಲೂಕು, ಬೀದರ ಜಿಲ್ಲೆಯ ನಾಲ್ಕು ತಾಲೂಕುಗಳು ಅಕ್ಕಲಕೋಟೆ ತಾಲೂಕು—ಇವನ್ನೆಲ್ಲ ಹೊಸ ಕನ್ನಡ ರಾಜ್ಯದಲ್ಲಿ ಸೇರಿಸಲು ಯಾವ ಆತಂಕವು ಇಲ್ಲವೆಂದು ಘೋಷಿಸಿದೆ. ಇಷ್ಟಲ್ಲದೆ ಮದ್ರಾಸು ಮತ್ತು ಮುಂಬಯಿ ರಾಜ್ಯಗಳ ಈಗಿರುವ ಬೇರೆ ಕೆಲವು ಪ್ರದೇಶಗಳು ಸಹ ಐತಿಹಾಸಿಕ, ಸಾಂಸ್ಕೃತಿಕ ಹಾಗು ಇನ್ನಿತರ ದೃಷ್ಟಿಯಿಂದ ಕನ್ನಡ ಪ್ರದೇಶಗಳಾಗಿವೆ ಎಂದೂ ಈ ಕುರಿತು ಸಹ ಸರಕಾರ ಗಮನ ಸೂರ್ಧೈಸಬೇಕೆಂದೂ ಪ್ರದೇಶ ಕಾಂಗ್ರೆಸು ಕೇಳಿಕೊಂಡಿದೆ. ಬೆಳಗಾಂವಿ ಮತ್ತು ಕಾರವಾರಗಳ ಕುರಿತು ಮರಾಠಿಗರು ಮುಂದಿಡುತ್ತಿರುವ ಬೇಡಿಕೆಯನ್ನು ಅದು ಖಂಡಿಸಲು ಈ ಸಂದರ್ಭದಲ್ಲಿ ಮರೆತಿಲ್ಲ.

ಎರಡು ಕರ್ನಾಟಕದ ನಾದ

ಮೇಲಿನಾಶಯದ ಗೊತ್ತುವಳಿಯನ್ನು ಶ್ರೀ ನಿಜಲಿಂಗಪ್ಪನವರು ಮಂಡಿಸಿದರು. ಕಾಸರಗೋಡಿನ ಕುರಿತು ಶ್ರೀ. ಎ. ಸಿ. ಗಂಗಾಧರಯ್ಯ, ಬೀದರದ ಕುರಿತು ಶ್ರೀ ಮಲ್ಲಪ್ಪ ಕೊಳೂರೆ ಮುಂತಾದವರು ವಾತನಾಡಿದರು. ಉತ್ತರ ಕರ್ನಾಟಕದಲ್ಲಿ ಏಕೀಕರಣದ ಮುಂದಾಳುಗಳೆನಿಸಿ, ಹಂ ವರ್ಷಗಳಿಂದ ಸಾರ್ವಜನಿಕ ರಂಗದಲ್ಲಿ ಮಿಡಿದ ಶ್ರೀಗಳಾದ ದತ್ತೋಪಂತ ಬೆಳವಿ ಮತ್ತು ಗಂಗಾಧರರಾವ ದೇಶಪಾಂಡೆಯವರು ಸ್ಫೂರ್ತಿಯಿಂದ ಮಾತನಾಡಿ, ಏಕೀಕರಣವನ್ನು ಸ್ವಾಗತಿಸಿದರು. ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ. ಜಂಬಲಿಯವರು ತಾವು ಈಚೆಗೆ ಬೆಂಗಳೂರಿನಲ್ಲಿ ಕಾಂಗ್ರೆಸಾಧ್ಯಕ್ಷ ಶ್ರೀ ಧೇಬರರನ್ನೂ ಮೈಸೂರಿನ ಮುಖಂಡರನ್ನೂ ಕಂಡು ನಡೆಸಿದ ಮಾತುಕತೆಗಳ ಸಾರವನ್ನು ವಿವರಿಸಿದರು. ಎರಡು ಕರ್ನಾಟಕಗಳ ಬೇಡಿಕೆಯನ್ನು ಮುಂದಿಡುತ್ತಿರುವವರು ಕೆಲವು ವಿಶಿಷ್ಟಹಿತಾಸಕ್ತಿಯುಳ್ಳ ವರ್ಗಗಳಾಗಿ ನೆಯೇ ಹೊರತು, ಜನಮತವು ಏಕೀಕರಣ ಕ್ಕೆಯೇ ಅನುಕೂಲವಾಗಿದೆಯೆಂದು ತಪ್ಪಿಗೆ ಮನವರಿಕೆಯಾಗುವಂತೆ ನೋಡಬೇಕೆಂಬ ಸಲಹೆಯನ್ನು ನೀಡಿದರು. ಸಂಯುಕ್ತ ಕರ್ನಾಟಕ ರಾಜ್ಯ ರಚನೆಯ ಕುರಿತು ಯಾವ ಭೀತಿಗೂ ಆಸ್ಪದವಿಲ್ಲ ಎಂಬ ತಮ್ಮ ವಿಶ್ವಾಸವನ್ನೂ ಅವರು ದೃಢಪಡಿಸಿದರು.

ಮುಖ್ಯ ಮಂತ್ರಿಗಳ ಅಭಿಪ್ರಾಯ

ಬೆಳಗಾಂವಿಯಲ್ಲಿ ಹೀಗೆ ನಿರ್ಣಯವಾದ ಮರುದಿನವೇ ಬೆಂಗಳೂರಿನಲ್ಲಿ ಮೈಸೂರಿನ ಮುಖ್ಯ ಮಂತ್ರಿ ಶ್ರೀ. ಜನುಸುಂತಮ್ಮನವರು ತಮ್ಮ ಕೆಲವು ಆಭಿಪ್ರಾಯಗಳನ್ನು ಕರ್ನಾಟಕದ ಭವಿಷ್ಯಕ್ಕೆ ಸಂಬಂಧಿಸಿ ತಿಳಿಸಿದರು. ಯೋಜನೆಯು ಆಡಳಿತದ ಎಲ್ಲ ಕ್ಷೇತ್ರವನ್ನೂ ವ್ಯಾಪಿಸಿರುವ ಈ ಕಾಲದಲ್ಲಿ ಮೈಸೂರು ರಾಜ್ಯವು ಏನಾದರೂ ಹೊಂದಿದರೆ ತೊಂದರೆಗೀಡಾಗುವುದೆಂಬ ಭಯಕ್ಕೇನೂ ಆಧಾರವಿಲ್ಲ ಎಂದವರು ಹೇಳಿದರು ಮೈಸೂರು ರಾಜ್ಯವು ೧೯೫೦ರಲ್ಲಿ ಕೇಂದ್ರದೊಡನೆ ಆರ್ಥಿಕ

(ಅನೇ ಸುದ್ದಿ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತಿ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ತೀಕ್ಷ್ಣವಾಗುತ್ತದೆ, ಕೂದಲು ಕಪ್ಪಾಗುತ್ತದೆ. ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲಾರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನಕ್ರಯ: ದೊಡ್ಡ ಬಾಟ್ಲಿಗೆ ರೂ. ೪—೪—೦
ಸಣ್ಣ ಬಾಟ್ಲಿಗೆ ರೂ. ೨—೦ -೦

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಪ್ರಕಟಣೆ

ಪೊಸಾಮಿ 1000 ತನಕ ಸಾಲಗಳು ಆಸ್ತಿ ಜವಾಬ್ದಾರಿ ಅಥವಾ ಜ್ಯಾಮೀನುಗಳಿಲ್ಲದೆ ನಮ್ಮ ಪಸ್ತಿಶಾಪತೇ ಮೂಲಕಯುವುವು. ಜಲವರು ಈಗಾಗಲೇ ಪಡೆದಿರುತ್ತಾರೆ. ನಿಮ ರಗಳಿಗೆ ಇಂದ್ಲಿಷಿನಲ್ಲಿ ಬರೆಯಿರಿ:—

Bombay Mercantile Co
Bombay--23.

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೬ಸಿ	೧೦-೧೧-೨೫೫	೧೧

ಕರ್ವೆ ಸಮಿತಿಯ ಸೂಚನೆ

ಗ್ರಾಮೋದ್ಯೋಗಗಳ ಅಭಿವೃದ್ಧಿಯ ಕುರಿತು ನಮ್ಮ ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ವಹಿಸಬೇಕಾದ ನಿಲುಮೆಯ ಬಗ್ಗೆ ಕರ್ವೆ ಸಮಿತಿಯು ಒಪ್ಪಿಸಿದ ವರದಿಯು ಭಾರತದಲ್ಲಿ ರೂಪುಗೊಳ್ಳಬೇಕಾದ ಆರ್ಥಿಕ ವ್ಯವಸ್ಥೆಯ ಹೇಗಿರಬೇಕೆಂಬುದನ್ನು ಒಂದೇ ಒಂದು ಮಾತಿನಲ್ಲಿ ವಿವರಿಸುತ್ತದೆ: ಕೈಗಾರಿಕೆಯ ರಂಗವು "ಪಿರಾಮಿಡು"ಗಳ ರಚನೆಯನ್ನು ಹೋಲಿ ಬೆಳೆಯಬೆ ಕೆಂಬುದೇ ಈ ಮಾತಿನ ಸಾರಾಂಶ. ರಾಷ್ಟ್ರದಲ್ಲಿ ಸಾಮಾನ್ಯ ಕೈಗಾರಿಕೆಗಳೆಲ್ಲ ವಿಕೇಂದ್ರೀಕೃತವಾಗಬೇಕು: ಅಂದರೆ, ಪ್ರತಿಯೊಂದೂ ಹಳ್ಳಿಯಲ್ಲಿ ಅಲ್ಲಿಯ ನಿತ್ಯೋಪಯೋಗದ ಸಾಮಾನ್ಯ ವಸ್ತುಗಳನ್ನು ಪೂರೈಸುವ ಮಟ್ಟಿಗೆ ಕೈಗಾರಿಕೆಗಳು ಬೆಳೆಯಬೇಕು; ಕೆಲವು ಹಳ್ಳಿಗಳ ಗುಂಪಿಗೊಂದರಂತೆ ಸಣ್ಣ ಪ್ರಮಾಣದ ಯಂತ್ರಗಳಿಂದ ಸರಕುಗಳನ್ನು ಉತ್ಪಾದಿಸಿ, ಪೂರೈಸುವ ಕೇಂದ್ರಗಳೂ ಬೆಳೆಯಬೇಕು: ಇದರಿಂದ ಸುತ್ತಣ ಹಳ್ಳಿಯವರಿಗೆ ಅವಶ್ಯಸೆನಿಸಿದ ಇತರ ವಸ್ತುಗಳು ದೊರೆಯುವಂತಾಗುತ್ತದೆ; ಇದರ ಮೇಲೆ ಕೆಲವು ದೊಡ್ಡ ಕಟ್ಟಣಗಳಲ್ಲಿ ಮೂಲೋದ್ಯಮಗಳನ್ನು ನೆಲೆಗೊಳಿಸಬೇಕು: ಇವು ಕೈಗಾರಿಕೆಯ ಪ್ರಗತಿಗೆ ಅನಿವಾರ್ಯವಾದ ಯಂತ್ರ ಸಾಧನಗಳನ್ನೂ ಇತರ ಮಹತ್ವದ ದ್ರವ್ಯಗಳನ್ನೂ ಪೂರೈಸುತ್ತವೆ. ಹೀಗೆ ಗೋಪುರದಂತೆ ಗ್ರಾಮೋದ್ಯೋಗದ ವಿಶಾಲವಾದ ರಂಗದ ಮೇಲೆ ಮೂಲೋದ್ಯಮದ ಕಳಶವು ಸೌಷ್ಮವಯುಕ್ತವಾಗಿ ನೆಲೆಗೊಳಿಸಿರಬೇಕು ಎಂದು ಕರ್ವೆ ಸಮಿತಿಯು ಸೂಚಿಸಿದೆ. ಈ ಮೂಲ ತತ್ವದ ಮಟ್ಟಿಗೆ ಯಾರೂ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವಂತಿಲ್ಲ— ಬದಲಿಗೆ, ಸರಕಾರವು ಇದನ್ನು ಮನಗಾಣುವಂತೆ ಒತ್ತಾಯಿಸುವವರೇ ಹೆಚ್ಚು. ಆದರೂ, ಉದ್ಯೋಗದ ಅವಕಾಶವನ್ನು ಹೆಚ್ಚಿಸುವ ದಕ್ಕೆ, ಭಾಂತಿದ ಮಟ್ಟಿಗೆ, ಗ್ರಾಮೋದ್ಯೋಗಗಳನ್ನು ಬಹಳವಾಗಿ ಪ್ರೋತ್ಸಾಹಿಸುವುದೇ ಏಕಮೇವ ಉಪಾಯವೆಂಬುದು ಎಲ್ಲರೂ ಒಪ್ಪಿರುವ ಮಾತು. ಬೃಹತ್ತ್ವಮಾಣದ ವೈದ್ಯಮಿಕ ಕೇಂದ್ರಗಳನ್ನು ನೆಲೆಗೊಳಿಸುವುದರಲ್ಲಿ ವಿಶ್ವಾಸವುಳ್ಳ ಸಂಗಡವೊಂದು ದೇಶದಲ್ಲಡೆಯೇನೊ ನಿಜ. ಆದರೆ ಈ ಪಂಗಡದ ವರ್ಗದರ್ಶನವನ್ನು ಸ್ವೀಕರಿಸಿದರೆ, ಪ್ರತಿಯೊಂದು ಉದ್ಯೋಗದ ಅವಕಾಶವು ಖರೀದಿಂದ ಕೋಟಿಗಳ ರೂಪಾಯಿಗಳ ಬಂಡವಾಳ ವೆಚ್ಚದ ಬೆಲೆಯನ್ನು ತೆಗೆದುಕೊಳ್ಳುತ್ತದೆ. ಭಾರತ ಭೂಖಂಡ ಬಡದೇಶವು ಇಷ್ಟು ಹೆಚ್ಚು ಬಂಡವಾಳವನ್ನು ಸೂರ್ಯೆಸಿ, ಉದ್ಯೋಗಕ್ಕೆ ಜನರನ್ನು ಹೆಚ್ಚುವ ಸ್ಥಿತಿಯಲ್ಲಿ ಈಗ ಇರುವುದಿಲ್ಲ. ಈ ವಾಸ್ತವಾಂಶವೊಂದನ್ನೆ ತುಲನೆ ಮಾಡಿದರೆ ೨೬೦ ಕೋಟಿ ರೂಪಾಯಿಗಳ ಅಲ್ಪ ವೆಚ್ಚದಲ್ಲಿ ಅಗ ಲಕ್ಷಪದಮ್ಮ ಹೆಚ್ಚು ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಿದ ಕರ್ವೆ ಸಮಿತಿಯ ಸೂಚನೆಗಳು ಬಹಳ ಹಿತಕರವಾಗಿ ಕಂಡು ಬರುತ್ತವೆ. ಗ್ರಾಮೋದ್ಯೋಗಗಳ ಅಭ್ಯುದಯವನ್ನು ಸಾಧಿಸಿದರೆ, ಎಷ್ಟರ ಮಟ್ಟಿಗೆ ಜನರು ಪ್ರಯೋಜನ ಹೊಂದಬಲ್ಲರೆಂಬುದನ್ನು ಉದ್ಯೋಗದ ಲಪಂಕಾಶಗಳ ಈ ಸಂಖ್ಯಾಪ್ರಮಾಣದಿಂದಲೇ ತಿಳಿದು ಸಂತೋಷಗೊಳ್ಳಬಹುದಾಗಿದೆ.ಗ್ರಾಮೋದ್ಯೋಗಗಳ ಪ್ರಶ್ನೆ ಎತ್ತಲ್ಪಟ್ಟಾಗಲೆಲ್ಲ ಎರಡು ಮುಖ್ಯ ಅಂಶಗಳು ಪ್ರಸ್ತಾಪಿಸಲ್ಪಡುತ್ತವೆ—(೧)ಗ್ರಾಮೋದ್ಯೋಗಗಳಲ್ಲಿ ಬಳಸುವ ಸಲಕರಣೆಗಳನ್ನು ಹೆಚ್ಚು ಸುಧಾರಿಸಬೇಡವೆ? (೨) ಗ್ರಾಮೋದ್ಯೋಗಗಳಿಂದ ಉತ್ಪಾದಿತವಾದ ಸರಕುಗಳು ದೊಡ್ಡ ಕಾರ್ಖಾನೆಗಳಲ್ಲಿ ತಯಾರಾದ ಯಾಂತ್ರಿಕ ಉತ್ಪಾದನೆಗಳಷ್ಟೇ ಅಗ್ಗ ದರದಲ್ಲಿ ದೊರೆಯಬೇಡವೆ? ಕರ್ವೆ ಸಮಿತಿಯು ಈ ಸಮಸ್ಯೆಗಳ ಪರಿಜಾರದ ಮಟ್ಟಿಗೆ ಮುಕ್ತ ಮನಸ್ಸಿನ ನೀತಿಯನ್ನನುಸರಿಸಿದೆ. ಮೇಲಿನೇಡೂ ಸಂಶಯಗಳಿಗೆ ಸಮಾಧಾನ ಅತ್ಯವಶ್ಯವಾಗಿದೆ—"ಹೌದು, ಹಾಗಾಗಬೇಕು" ಎಂಬ ಉತ್ತರದಿಂದ ಮಾತ್ರವೇ ಜನರಿಗೆ ತೃಪ್ತಿಯಾಗಬಲ್ಲುದು: ಮತ್ತು ಆಗಸ್ಪೇ ಗ್ರಾಮೋದ್ಯೋಗಗಳ ಅಭಿವೃದ್ಧಿಯು ರಭಸದಿಂದ ನೆರವೇರಬಲ್ಲುದು. ಗ್ರಾಮೋದ್ಯೋಗಗಳಲ್ಲಿ ಬಳಸುವ ಸಲಕರಣೆಗಳಲ್ಲಿ ತುಂಬ ಸುಧಾರಣೆಗಳಿಗೆಡೆಯಿದೆಯೆಂದರೆ ಈ ಸುಧಾರಣೆಗೆ ತನ್ನ ಸ್ವಾಗತವಿದೆಯೆಂದೂ ಕರ್ವೆ ಸಮಿತಿ ಹೇಳಿದೆ. ಆದರೆ ಇಂಥ ಸುಧಾರಣೆಗಳನ್ನು ಗ್ರಾಮೋದ್ಯೋಗಗಳಲ್ಲಿರುವವರು, ಇಷ್ಟರ ವರೆಗಿನ ಅನುಭವದ ಮೇಲಿಂದ ಹೇಳುವುದಾದರೆ, ತೆರೆದ ಹೃದಯದಿಂದ ಸ್ವಾಗತಿಸಿಲ್ಲ. ಸುಧಾರಣೆಯು ಸಲಕರಣೆಯ ಉತ್ಪನ್ನ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ನೋಡಿದಾಗ, ಅದರಲ್ಲಿ ಕೆಲಸ ಮಾಡುವ ಜನರ ಸಂಖ್ಯಾ ಪ್ರಮಾಣವನ್ನು ಕಡಿಮೆ ಮಾಡಲೂ ಹೋಗುತ್ತದೆ ಎಂಬ ಭಯವೇ ಸುಧಾರಣೆಯನ್ನು ಸ್ವೀಕರಿಸಲು ಹಿಂಜರಿಯುತ್ತಿರುವವರೆನ್ನು ಕಾಡುತ್ತಲಿದೆ. ಕೆಲಸ ಗೇಡಿಗಳಾಗಿ ಸುಧಾರಣೆಯು ಜನರನ್ನು ಮಾಡುವುದಾದರೆ ಅಂಥ ಸುಧಾರಣೆಗೆ ಧಿಕ್ಕಾರವಿರಲಿ— ಎಂದೆನ್ನ ಬೇಕಾಗುತ್ತದೆ. ಆದರೆ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಸುಧಾರಣೆಯು ಉದ್ದೇಶಿಸಿದ್ದರೆ, ಇದರಿಂದ ಪೇಟೆಯನ್ನು ವಿಸ್ತರಿಸಿಕೊಂಡು ಹೋಗಿ, ದೊಡ್ಡ ಉದ್ಯಮಗಳೊಡನೆ ಯಶಸ್ವಿ ಸ್ಪರ್ಧೆಯನ್ನು ಹೂಡಲು ಸಹಾಯವಾದೀತೆಂದು ನಮ್ಮ ವಿಶ್ವಾಸ. ಗ್ರಾಮೋದ್ಯೋಗಗಳ ಸರಕುಗಳ ಬೆಲೆಯು ಬಹಳ ಹೆಚ್ಚಾಗಿರುವುದಕ್ಕೆ ಒಬ್ಬ ಮನುಷ್ಯನು ಉತ್ಪಾದಿಸುವ ಸರಕಿನ ಪ್ರಮಾಣವು ಬಹಳ ಕಡಿಮೆಯಾಗಿರುವುದೇ ಕಾರಣ; ಸರಕಿನ ಬೆಲೆಯು ಸಾಮಾನ್ಯರ ಕೈಗೆ ಎಟಕುವುದಿಲ್ಲವಾದುದರಿಂದಲೇ ಪೇಟೆಯು ವಿಸ್ತರಿಸಿಕೊಳ್ಳುತ್ತಿಲ್ಲ; ಸರಕುಗಳು ಮಾರಿ ಹೋಗುವುದಿಲ್ಲ; ರಾಶಿ ರಾಶಿಯಾಗಿ ಸರಕು ಕೂಡಿ ಬಿದ್ದ ದೆಸೆಯಿಂದ ನಿತ್ಯದ ಉತ್ಪಾದನೆಯನ್ನು ಮಾಡುವುದು ಸಹ ಗ್ರಾಮೋದ್ಯೋಗಿಗೆ ಕಷ್ಟಕ್ಕೆಟ್ಟುಕೊಳ್ಳುತ್ತದೆ. ಈ ತೊಂದರೆಯನ್ನು ಅವಶ್ಯವಾಗಿ ನಿವಾರಿಸಬೇಕು—ಇಷ್ಟರ ವರೆಗೆ ಸರಕಾರವರು ಸಹಾಯಧನ ಇತ್ಯಾದಿಗಳನ್ನು ಧಾರಾಳವಾಗಿ ಕೊಡುತ್ತಾ ಬಂದು, ಬೆಲೆಯನ್ನು ತಗ್ಗಿಸಿ, ಪೇಟೆಯಲ್ಲಿ ಈ ಸರಕುಗಳು ಯಂತ್ರದಲ್ಲಿ ತಯಾರಾದ ಸರಕುಗಳೊಡನೆ ಸೈಪೋಟಿ ಮಾಡಲು ಜಟ್ಟಿದ್ದಾರೆ. ಆದರೆ ಇವನ್ನು ಚಿರಕಾಲ ನಡೆಯುಗೊಡುವಂತಿಲ್ಲ — ನಡೆಯಗೊಡುವುದೆಂದರೆ ಸರಕಾರದ ಮೇಲೆ ಬಹಳ ಭಾರವಾದ ಹೊರೆ ಹೇರಿದಂತೆಂಬುದು ಖಂಡಿತ. ಆದುದರಿಂದ ಗ್ರಾಮೋದ್ಯೋಗಗಳೇ ಕಮ್ಮ ಉತ್ಪಾದನೆಯ ಶಕ್ತಿಯನ್ನು ನಿರುದ್ಯೋಗಕ್ಕೆ ಎಡೆ ಕೊಡದಂತೆ ಸಂವರ್ಧಿಸಿ ಕೊಳ್ಳುವುದೂ ಸ್ವಾವಲಂಬಿಯಾಗುವುದೂ ಅನೇಕ್ಷಣೀಯ. ಈ ದಿಸೆಯಲ್ಲಿ ಸುಧಾರಣೆಯ ಕುರಿತಾಗಿ ಸಂಶೋಧನೆ ನಡೆಸುವುದಕ್ಕೂ ಗ್ರಾಮೋದ್ಯೋಗಿಗಳಿಗೆ ಸುಲಭ ಶರತ್ತುಗಳಲ್ಲಿ ಬಂಡವಾಳ ಮತ್ತು ಖಾಲವನ್ನು ಪೂರೈಸುವುದಕ್ಕೂ ಪೇಟೆಯನ್ನು ವ್ಯಾಪಕವಾಗಿ ವಿಸ್ತರಿಸುವುದಕ್ಕೂ ಸರಕಾರ ತನ್ನಿಂದಾದ ಸಹಾಯವನ್ನು ಸಲ್ಲಿಸಬೇಕು- ಕರ್ವೆ ಸಮಿತಿಯು ಈ ಅಂಶವನ್ನು ಒತ್ತಿ ಹೇಳಿರುವುದು ಸಂತೋಷ. ಹೀಗೆ ಸುಧಾರಿತ ಕ್ರಮವನ್ನನುಸರಿಸಿ, ಉತ್ಪಾದನೆಯನ್ನು ಹೆಚ್ಚಿಸಿದರೆ, ಸರಕುಗಳ ಕ್ರಯವು ತಗ್ಗಿಕೊಂಡು, ಗ್ರಾಹಕರು ಗ್ರಾಮೋದ್ಯೋಗಗಳ ಕಡೆಗೆ ಹೆಚ್ಚು ಆಕರ್ಷಣೆಯನ್ನು ಹೊಂದುವುದರಲ್ಲಿ ಸಂದೇಹವಿಲ್ಲ. ನಿರುದ್ಯೋಗದ ಸಮಸ್ಯೆಯು ಹೇಗೆ ತಾಂತ್ರಿಕ ಪ್ರಗತಿಯೊಡನೆ ಹೆಣೆದುಕೊಂಡಿದೆ ಎಂಬುದನ್ನಿಲ್ಲು ಚಿತ್ರಿಸುತ್ತದೆ. ಅಲ್ಲಿಯ ವರೆಗೆ ದೇಶಾಭಿಮಾನಿಗಳು ತಮಗೆ ಸ್ವಲ್ಪ ಮಟ್ಟಿಗೆ ಭಾರವೆನಿಸಿದ ಕೆಲಸವಾಗಿ ಕಂಡರೂ ಗ್ರಾಮೋದ್ಯೋಗಗಳನ್ನು ಪ್ರೋತ್ಸಾಹಿಸುತ್ತಾ ಹೋಗಬೇಕಾಗಿದೆ—ಈ ಕ್ಷೇತ್ರವು ಒಮ್ಮೆ ಫಲಪ್ರದವಾಗಿತ್ತೆಂಬುದನ್ನೂ ಯಂತ್ರ ರಾಕ್ಷಸನ ಹಾವಳಿಯಿಂದಾಗಿ ಬಂಜರು ಬೀಳುತ್ತಾ ಹೋಯಿತೆಂಬುದನ್ನು ನೆನೆದು, ನಿಧಾನವಾಗಿ ಪುನಃ ಸಾಗುವಳಿಗೆ ಕೈಯಿಕ್ಕಬೇಕಾಗಿದೆ. ಕರ್ವೆ ಸಮಿತಿಯು ಈ "ನಿಧಾನ" ಪ್ರಗತಿಗೆ ತುಸು ಹೆಚ್ಚಿನ ಗಮನವನ್ನು ಕೊಟ್ಟಿಂತಿದೆ — ಏಕೆಂದರೆ, ಅದು ಗಿರಣಿಗಳಲ್ಲಿ ಬಟ್ಟೆ ಉತ್ಪಾದನೆಯ ಮಿತಿ ಈಗಿಗೀಡ ಹೆಚ್ಚಾಗಬಾರದೆಂದೂ ಭತ್ತ ಕುಟ್ಟುವ ಯಂತ್ರಗಳನ್ನು ಹೊಸತಾಗಿ ಸ್ಥಾಪಿಸಬಾರದೆಂದೂ ಹೇಳಿ ಮುಂದಿನ ಯೋಜನೆಯ ಅವಧಿಯಲ್ಲಿ ಹೆಚ್ಚಿಕೊಳ್ಳುವ ಬೇಡಿಕೆಯನ್ನು ಮಾತ್ರ ಅನುಕ್ರಮವಾಗಿ ಕೈಮಗ್ಗಗಳಿಗೂ ಕೈಯಿಂದ ಭತ್ತ ಕುಟ್ಟುವ ಉದ್ದಿಮೆಗೂ ವಿಂಗಡಿಸಿಬೇಕು ಎಂದಿದೆ. ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಒಂದೇ ದೃಷ್ಟಿಯನ್ನಿಟ್ಟುಕೊಂಡರೆ—ಗಿರಣಿಗಳ ಕುರಿತು ಇನ್ನೂ ಕಠೋರವಾದ ನಿಲುಮೆ ಅಗತ್ಯವೆನಿಸುತ್ತದೆ. ಭತ್ತ ಕುಟ್ಟುವ ಉದ್ಯೋಗದ ಮಟ್ಟಗಂತೂ ಆಹಾರ ಸತ್ವಕ್ಕೆ ಸಂಬಂಧಿಸಿದ ವಿಚಾರವೂ ಅನ್ವಯಿಸುತ್ತಿರ್ದ್ದು, ಗಿರಣಿಗಳು ಭತ್ತ ಕುಟ್ಟುವುದಕ್ಕೆ ಬಿಡುವುದು ಗಂಭೀರವಾದ ತಪ್ಪೆನಿಸುತ್ತದೆ. ಆದರೆ ನಾವು ಒಮ್ಮೆಲೆ ಹಿನ್ನಡೆಯ ಬಲ್ಲೆವೆ? ಕಾರಣ—ಖಾಸಗಿ ರಂಗದ ಪ್ರಾಮುಖ್ಯತೆಯನ್ನು ಸಾರ್ವಜನಿಕ (ಸರಕಾರಿ) ರಂಗದಿದ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಮೂಲಕವೇ ಕಡಿಮೆ ಮಾಡುವುದು ಯೋಗ್ಯವೆಂಬ ಪ್ರಧಾನಿ ನೆಹರುಗಳಬೀಜಸೂತ್ರವನ್ನು ಗ್ರಾಮೋದ್ಯೋಗಗಳಿಗೆ ಸ್ಪೋತ್ಸಾಹ ಕೊಡುವ ವಿಷಯಕ್ಕೂ ಹೊಂದಿಸಲು ಕರ್ವೆ ಸಮಿತಿ ನೋಡಿದೆ ಎಂದೆನ್ನಲಡ್ಡಿಯಿಲ್ಲ. ಏನೇ ಆಗಲಿ—ಸಮಿತಿಯ ವರದಿಯು ಹಲವು ವಿಷಯಗಳಲ್ಲಿ ಸಮಾಧಾನಕರವಾಗಿದೆ ಎಂದು ನಾವು ಹೇಳಬಯಸುತ್ತೇವೆ.

ರಾಜ್ಯಗಳ ಪುನರ್ಘಟನೆಯ ಪ್ರಶ್ನೆ

ಕಾಂಗ್ರೆಸು ಕಾರ್ಯಕಾರಿ ಸಮಿತಿಯ ನಿಶ್ಚಯ

ನಮ್ಮ ಈ ಸಂಚಿಕೆಯ ಮುದ್ರಣ ನಡೆಯುತ್ತಿರುವಾಗ ಅತ್ತ ಹೊಸದೆಹಲಿಯಲ್ಲಿ ಕಾಂಗ್ರೆಸು ಕಾರ್ಯಕಾರಿ ಸಮಿತಿಯ ಸಭೆಯು ತೊಡಗಿದೆ—ಮುಗಿದಿಲ್ಲ. ಅದು ದಂದ ಅದರ ಸಂಪೂರ್ಣ ತೀರ್ಮಾನ ನೀನೆಂಬುದನ್ನು ವಿವರಿಸಲು ಸಾಧ್ಯವಾಗಿಲ್ಲ. ಮೊದಲನೆಯ ದಿನದ ಕಾರ್ಯಕಲಾಪಗಳ ಮಟ್ಟಿಗೆ ಹೇಳುವುದಾದರೆ, ಮಧ್ಯ ಭಾರತ, ಮಹಾಕೋಸಲ, ವಿಂಧ್ಯ ಪ್ರದೇಶ ಮತ್ತು ಭೋಪಾಲಗಳನ್ನು ಒಂದು ಗೂಡಿಸಿ ವಿಶಾಲವಾದ ಮಧ್ಯ ಭಾರತ ರಾಜ್ಯವನ್ನು ರಚಿಸಬೇಕೆಂಬ ಫಜಲಲಾಲಿ ಆಯೋಗದ ಸೂಚನೆಯನ್ನು ಕಾಂಗ್ರೆಸು ಕಾರ್ಯಕಾರಿ ಸಮಿತಿ ಅನುಮೋದಿಸಿದೆ. 'ಳ' ವರ್ಗದ ರಾಜ್ಯಗಳನ್ನು ಅಸ್ತಿತ್ವದಲ್ಲಿತಲಾಗದೆಂಬ ಆಯೋಗದ ನಿಧಾರಣೆಯನ್ನು ಕಾಂಗ್ರೆಸು ಕಾರ್ಯಕಾರಿ ಸಮಿತಿಯು ಒಪ್ಪಿಕೊಂಡಿದೆಯೆಂದೂ ತಿಳಿದು ಬರುತ್ತದೆ. ಉತ್ತರ ಪ್ರದೇಶವನ್ನು ಈಗಿರುವಂತೆ ಇರಗೊಳಿಸಲೂ ಕಾಂಗ್ರೆಸು ಸಮಿತಿ ಒಪ್ಪಿದೆಯಾಗಿ ಕೇಳುತ್ತೇವೆ.

ನೆಹರು ಹೇಳಿಕೆ

ಕಾಂಗ್ರೆಸು ಸಮಿತಿಯ ಸಭೆ ಸೇರುವ ಮುನ್ನ ಪ್ರದೇಶ ಕಾಂಗ್ರೆಸುಗಳ ಅಧ್ಯಕ್ಷರ ಸಭೆಯು ದಿನಾಂಕ ೭ರಂದು ಹೊಸ ದೆಹಲಿಯಲ್ಲಿ ನೆರೆಯಿತು. ಇಲ್ಲಿ ಮಾತನಾಡಿದ ಪ್ರಧಾನಿ ನೆಹರುಗಳು ಭಾಷೆಯು ಮುಖ್ಯವಾದ ಅಂಶವಾಗಿದ್ದರೂ ಜನರಲ್ಲಿ ಅದು ಪ್ರತ್ಯೇಕತೆಯ ಭಾವನೆಗೆ ಎಡೆ ಕೊಟ್ಟು ರಾಷ್ಟ್ರೀಯ ಏಕ್ಯವನ್ನು ಕೆಡಿಸಲು ಅದು ನೋಡಬಾರದು. ಒಡಕು ಹುಟ್ಟಿಸುವ ಎಲ್ಲ ಶಕ್ತಿಗಳನ್ನೂ ದಮನಿಸಬೇಕು ಎಂದು ಹೇಳಿದರು. ಬರುವ ೧೫ನೇ ದಿನಾಂಕಕ್ಕೆ ೬೬ ವಯಸ್ಸು ತುಂಬಿ ಹುಟ್ಟಿದ ಹಬ್ಬವನ್ನು ಆಚರಿಸಲಿರುವ ಪ್ರಧಾನಿಗಳು ತನ್ನ ಶೇಷಾಯುಷ್ಯದಲ್ಲಿ ಭಾರತವು ಆರ್ಥಿಕ ಪಾಗು ಸಾಮಾಜಿಕ ರಂಗದಲ್ಲಿ ಅಭಿವೃದ್ಧಿ ಹೊಂದುವುದನ್ನು ಕಾಣುವಂತಾಗಬೇಕೆಂಬುದೇ ತನ್ನ ಉದ್ದೇಶವೆಂದೂ ಕ್ಷುಲ್ಲಿಕ ಕಾರಣಗಳಿಗಾಗಿ ಸಮಯವನ್ನು ಹಾಳುಗೆಡಹುವುದು ತನಗೆ ಇಷ್ಟವಿಲ್ಲವೆಂದೂ ನುಡಿದರು.

ಪಂತರ ಮಾತು

ಇದೇ ಅಂಶವನ್ನು ಸಭಾನದರೆ ಮನಪ್ಪಿನ ಮೇಲೆ ಬಿಂಬಿಸಲು ಕೇಂದ್ರ ಸರಕಾರದ ಗೃಹ ಮಂತ್ರಿ ಪಂಡಿತ ಪಂತರು ಸಹ ಪ್ರಯತ್ನಿಸಿದರೆಂದು ವರದಿಯಾಗಿದೆ. ರಾಜ್ಯಗಳ ಪುನರ್ಘಟನೆಯೇ ಒಂದು ಧ್ಯೇಯವಾಗಿಲ್ಲ—ಅದು ರಾಷ್ಟ್ರದ ಅಭ್ಯುದಯಕ್ಕೆ ಸಾಧನ ಮಾತ್ರವಾಗಿದೆ ಎಂದು ಭಾವಿಸಬೇಕು ಎಂದವರು ಬೋಧಿಸಿದರು. ಭಾಷೆಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರೆನಿಸಿದವರಿಗೆ ವಿಶೇಷ ಬಗೆಯಿಂದ ರಕ್ಷಣೆಯನ್ನು ಕೊಡಲು ಫಜಲಾಲಿ ಆಯೋಗವು ಸೂಚಿಸಿದೆ. ಇದನ್ನು ಕಾರ್ಯಗತಗೊಳಿಸಿದರೆ, ಈಗ ತಲೆ ಎತ್ತಿರುವ ಎಷ್ಟೋ ಸಮಸ್ಯೆಗಳೂ ಜನರನ್ನು ಬಾಧಿಸುತ್ತಿರುವ ಭಯವೂ ನಿವಾರಣೆ ಹೊಂದುವ ಆಶೆ ಇದೆ ಎಂದವರು ತಿಳಿಸಿದರು

ಸಾಮಾನ್ಯ ನಿಶ್ಚಯ

ಹೊಸ ದೆಹಲಿಯು ಈಗ ಕೆಲದಿನಗಳಿಂದ ಶಿಷ್ಟಮಂಡಳಗಳ ನೆಲೆವೀಡಾಗಿದೆ. ದೇಶದ ಎಲ್ಲಾ ಕಡೆಯಿಂದಲೂ ಫಜಲಾಲಿ ಆಯೋಗದ ಸೂಚನೆಗಳಿಂದ ಅಸಮಾಧಾನಗೊಂಡವರು ಮತ್ತು ಸ್ಥಳೀಯ ಹಿತಾಸಕ್ತಿಯ ಕಡೆಗೆ ವಿಶೇಷ ಗಮನವಿತ್ತವರು ಮಾನವಿಗಳ ಹೊರೆಯೊಡನೆ ಕೇಂದ್ರದ ವರಿಷ್ಠರನ್ನು ಕಾಣುತ್ತಿದ್ದಾರೆ. ಕಾಂಗ್ರೆಸು ಕಾರ್ಯಕಾರಿ ಸಮಿತಿಯು ತ�ಂತಿಗಳು ಎದ್ದ ಸಂದರ್ಭಗಳಲ್ಲಿ ಉಭಯ ಸಮ್ಮತ ತೀರ್ಮಾನಗಳನ್ನು ಸಂಬಂಧಿಸಿದ ಪಕ್ಷಗಳೇ ಕೈಗೊಂಡಲ್ಲಿ ಅವನ್ನು ಸ್ವೀಕರಿಸಲು ಸಿದ್ಧವಿರುವುದಾಗಿ ಹೇಳಿದೆ. ಆದರೆ, ಈ ಶಿಷ್ಟಮಂಡಳಗಳು ವಿವಾದವನ್ನು ಇತ್ಯರ್ಥಮಾಡುವ ಗೊಡವೆಗೆ ಹೋಗದೆ, ವರಿಷ್ಠರಿಗೆ ತಮ್ಮ ನಿಲುಮೆಯನ್ನು ನಿವೇದಿತಪಡಿಸುವುದನ್ನೇ ಉದ್ದೇಶವಾಗಿಟ್ಟುಕೊಂಡಿವೆ. ವರಿಷ್ಠರು ಶಾಂತರೀತಿಯಿಂದ ವಿವಾದಗಳನ್ನು ತೀರ್ಮಾನಿಸುವುದಕ್ಕೆ ನೆರವಾಗುತ್ತಿದ್ದಾರೆಯೋ ನಿಜ. ಕಾಂಗ್ರೆಸು ಕಾರ್ಯಕಾರಿ ಸಮಿತಿಯು ನೆಹರು, ಢೇಬರ್, ಆಜಾದ್ ಮತ್ತು ಪಂತರಿಗೆ ಭಿನ್ನಾಭಿಪ್ರಾಯಗಳನ್ನು ನಿವಾರಿಸುವಲ್ಲಿ ಸಂಪೂರ್ಣ ವರ್ಚಸ್ಸನ್ನು ಉಪಯೋಗಿಸಲು ಅಧಿಕಾರವಿತ್ತಿರುವುದೂ ನಿಜ. ಆದರೆ ಇದರಿಂದ ಪ್ರಯೋಜನ ಎಷ್ಟರ ಮಟ್ಟಿಗೆ ಸಿಗುವುದೋ ಹೇಳಲು ಬರುವುದಿಲ್ಲ. ಹೀಗಾಗಿ—ಯಾವ ಒಡಂಬಡಿಕೆಯೂ ಸಾಧ್ಯವಾಗದೆ ಹೋದರೆ, ಆಯೋಗದ ಸಿಫಾರಸುಗಳು ಇದ್ದುದಿದ್ದಂತೆ ಕಾರ್ಯಗತಗೊಳಿಸಲ್ಪಡುವುದೆಂದು ಹೇಳಲಾಗುತ್ತದೆ.

ಜಿಲ್ಲೆಯ ಶಿಷ್ಟಮಂಡಳ

ದಕ್ಷಿಣ ಕನ್ನಡ ಜಿಲ್ಲೆಯಿಂದ ಕಾಸರಗೋಡು ತಾಲೂಕನ್ನು ಇಡಿಯಾಗಿ ಕೇರಳಕ್ಕೆ ಸೇರಿಸಬಾರದೆಂದು ಒಂದು ಶಿಷ್ಟ ಮಂಡಳವು ಕಾಂಗ್ರೆಸು ಸಂಸ್ಥೆಯ ವರಿಷ್ಠರೂ ಭಾರತ ಸರಕಾರದ ನ್ಯಾಯಕರೂ ಆಗಿರುವ ನೆಹರು, ಪಂತ ಮತ್ತು ಢೇಬರರನ್ನು ಕೇಳಿಕೊಂಡಿದೆ. ಕೇರಳದೊಡನೆ ಇಡಿ ಕಾಸರಗೋಡುತಾಲೂಕುಸೇರಿಸಲ್ಪಟ್ಟರೆ ಜಂದ್ರಗಿರಿ ಹೊಳೆಯ ಉತ್ತರ ಭಾಗದ ಜನರಿಗೆ ತೀರ್ಪು ಅನಾನುಕೂಲತೆಯಾಗುವುದೆಂದು ಈ ಶಿಷ್ಟ ಮಂಡಳವು ಸಮರ್ಥ ಕಾರಣಗಳಿಂದ ಪ್ರತಿಪಾದಿಸಿದೆ, ಇದರಂತೆ ಬೆಳಗಾಂವಿಯನ್ನು ಕನ್ನಡನಾಡಿನಲ್ಲಿಯೇ ಇರಗೊಳಿಸಬೇಕೆಂದೂ ಬಳ್ಳಾರಿ ಜಿಲ್ಲೆಯ ಕುರಿತು ಆಯೋಗ ಮಾಡಿದ ಸಿಫಾರಸುಗಳನ್ನು ಕಾರ್ಯಗತ ಮಾಡಕೂಡದೆಂದೂ ಬೀದರು, ಸೊಲ್ಲಾಪುರಗಳ ಕನ್ನಡ ಪ್ರದೇಶಗಳನ್ನು ಸೂಚಿತ ಕರ್ನಾಟಕ ರಾಜ್ಯದಲ್ಲಿ ಸೇರಿಸಬೇಕೆಂದೂ ಮುಂತಾಗಿ ಬೇರೆ ಬೇರೆ ಶಿಷ್ಟ ಮಂಡಳಗಳು ಕನ್ನಡಿಗರ ಪರವಾಗಿ ಮನವಿಗಳನ್ನು ಅರ್ಪಿಸಿರುತ್ತವೆ.

ಶೈಶಿಷ್ಟ್ಯ ರಕ್ಷಕರು

ಮೈಸೂರಿನಿಂದ ಅಲ್ಲಿಯ ವೈಶಿಷ್ಟ್ಯ ರಕ್ಷಣೆಯ ಕಂಕಣ ಕೊಟ್ಟಿರುವ ಗುಂಪಿನ ಧುರೀಣರು ಒಂದು ಶಿಷ್ಟ ಮಂಡಳವನ್ನು ಹೊಸ ದೆಹಲಿಗೆ ತೆಗೆದುಕೊಂಡು ಹೋಗಿದ್ದರು. ಈ ಶಿಷ್ಟ ಮಂಡಳದಲ್ಲಿ ಅಸ್ಸಾಸ್ಥ್ಯದ ದೆಸೆಯಿಂದ ಶ್ರೀ ಕಡಿದಾಳ್ ಮಂಜಪ್ಪನವರು ಸೇರಿಕೊಂಡಿರದಿದ್ದರೂ ಉಳಿದ ಇಬ್ಬರು ಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರ ರಾಯರೂ ಶ್ರೀ ಟಿ. ಚೆನ್ನಯ್ಯನವರೂ ಸದಸ್ಯರಾಗಿದ್ದರು. ಮೈಸೂರು ಪ್ರದೇಶ ಕಾಂಗ್ರೆಸಿನ ಹಿಂದಿನ ಅಧ್ಯಕ್ಷರಾದ ಶ್ರೀ ವೀರಣ್ಣ ಗೌಡರು ಶಿಷ್ಟ ಮಂಡಳದ ಪರವಾಗಿ ಹಲವಾರು ಸಂಗತಿಗಳನ್ನು ಪತ್ರಿಕೋದ್ಯೋಗಿಗಳಿಗೆ ತಿಳಿಸಿದರು. ನೆರೆಹೊರೆಯ ಪ್ರದೇಶಗಳಾದ ಕೊಡಗು, ಕೊಳ್ಳೆಗಾಲ ಮತ್ತು ದಕ್ಷಿಣ ಕನ್ನಡಗಳು ಮೈಸೂರಿನಲ್ಲಿ ಸೇರುವುದಕ್ಕೆ ಅವರ ಅಡ್ಡಿಯಿಲ್ಲ—ಆದರೆ, ಮುಂಬಯಿ ಮತ್ತು ಹೈದರಾಬಾದುಗಳಲ್ಲಿರುವ ಕನ್ನಡ ಪ್ರದೇಶಗಳು ಮೈಸೂರಿನೊಡನೆ ಸೇರುವುದು ಅವರಿಗೆ ಸಮ್ಮತವಿಲ್ಲ. ಇದಕ್ಕೆ ಅವರು ಕೊಟ್ಟಿರುವ ಕಾರಣಗಳು ಇಂತಿವೆ—೧) ಒಂದೇ ಕರ್ನಾಟಕವಾದರೆ ದಕ್ಷಿಣದಿಂದ ಉತ್ತರ ತುದಿಗೆ ೬೦೦ ಮೈಲುಗಳ ಸುದ್ದ ಅಂತರವಾಗಿ ರಾಜ್ಯದ ವಿಸ್ತಾರ ಹೆಚ್ಚಿ ಆಡಳಿತದಲ್ಲಿ ವೈಧಿಲ್ಯ ತಲೆದೋರುತ್ತದೆ; ೨) ಉತ್ತರ ಕರ್ನಾಟಕದ ಜನರಿಗೂ ಮೈಸೂರಿನವರಿಗೂ ಸಾಂಸ್ಕೃತಿಕ ಹಾಗು ಸಾಮಾಜಿಕ ಬಾಂಧವ್ಯವಿಲ್ಲ; ಮತ್ತು ೩) ಯಾವಾಗಲೂ ಒಂದೇ ಭಾಷೆಯ ನೋಕಕ್ಕೆ ಮೈಸೂರು ಕಟ್ಟು ಬಿದ್ದಿದ್ದಿಲ್ಲ.

ನೇರಾದ ಆಪಾದನೆ

ಮೈಸೂರಿನ ವೈಶಿಷ್ಟ್ಯವೆಂದರೆ ಏನು ಎಂಬ ಕುರಿತಾಗಿಯಾ ಸ್ವಲ್ಪ ಮಟ್ಟಿಗೆ ಈ ಶಿಷ್ಟ ಮಂಡಳ ಬೆಳಕು ಬೀರಿದೆ. ಮೈಸೂರಿನ ಶಾಸನ ಸಭೆಯಲ್ಲಿ ಈಗ ೭೭ ಸ್ಥಾನಗಳಿಗೆ ಮೈಸೂರೇತರ ಕನ್ನಡ ಪ್ರದೇಶಗಳ ಸದಸ್ಯರ ಸಂಖ್ಯೆ ೮೯ ಆಗುತ್ತದೆ. ಪರಿಣಾಮವಾಗಿ ಮೈಸೂರೇತರ ಪ್ರದೇಶದ ಕನ್ನಡಿಗರು ಮೈಸೂರನ್ನ ಆಳುವಂತಾಗುತ್ತದೆ. ಇದು ಮೈಸೂರಿನ ಜನರಿಗೆ ಪ್ರಿಯವೆನಿಸಿಲ್ಲ. ೫೦ ವರ್ಷಗಳಷ್ಟು ದೀರ್ಘ ಕಾಲ ಸುಸೂತ್ರವಾಗಿ ನಡೆದುಕೊಂಡು ಬಂದ ಆಡಳಿತಕ್ಕೂ ಇದು ಹಿತಕರವಾಗಿಲ್ಲ ಎಂದು ಶಿಷ್ಟ ಮಂಡಳದ ಅಭಿಪ್ರಾಯ. ಇದರೊಡನೆ ಮೈಸೂರಿನ ನಾಯಕರಾದ್ದು ಎರಡು ಕರ್ನಾಟಕದ ರಚನೆಯನ್ನು ವಿರೋಧಿಸಿ, ಸಂಯುಕ್ತ ಕರ್ನಾಟಕವನ್ನೆ ಪ್ರತಿಪಾದಿಸುವ ಶ್ರೀ ಶಿವಮೂರ್ತಿಸ್ವಾಮಿ ಎಂಬ ಕಾಂಗ್ರೆಸು ಧುರೀಣರು ಪ್ರಸ್ತಾಪಿಸಿದ ಒಂದು ಕಾರಣವನ್ನೂ ಸೇರಿಸಬಹುದು— ಈಗ ಒಕ್ಕಲಿಗರಿಗೆ ಮೈಸೂರಿನಲ್ಲಿರುವ ಹೆಗ್ಗಳಿಕೆಯು ಸಂಯುಕ್ತ ಕರ್ನಾಟಕದಲ್ಲಿ ಇಲ್ಲದೆ ಹೋಗುವುದೆಂಬುದೇ ಆದು. ಆಯೋಗದ ಸೂಚನೆಯಂತೆ ನಡೆದರೆ ಯಾವ ಜಾತಿಯವರಿಗೂ ಇನ್ನೊಬ್ಬರನ್ನು ಹಿಡ್ಡಿಕ್ಕುವ ಪ್ರಶ್ನೆ ಸಂಖ್ಯಾ ಬಾಹುಳ್ಯ ದೊರೆಯುವುದಿಲ್ಲ.

ಆಶೆಗೆ ಎಡೆಯಿಡೆ

ಇಷ್ಟರ ವರೆಗೆ ಯಾವ ಅಭಿಪ್ರಾಯವನ್ನೂ ನೇರಾಗಿ ಪ್ರಕಟಿಸದಿದ್ದ ಮೈಸೂರು ಪ್ರದೇಶ ಕಾಂಗ್ರೆಸಿನ ಈಗಿನ ಅಧ್ಯಕ್ಷ ಶ್ರೀ ನಾಹುಕಾರ ಚೆನ್ನಯ್ಯನವರು ಹೊಸ ದೆಹಲಿಯ ಸಭೆಯಲ್ಲಿ ಮೈಸೂರನ್ನು ಪ್ರತ್ಯೇಕ ಇಡಬೇಕೆಂದು ವಿನಂತಿಸಿದರೆಂದೂ ಇದನ್ನು ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ. ಅಂಬಲಿಯವರು ವಿರೋಧಿಸಿ, ಸಂಯುಕ್ತ ಕರ್ನಾಟಕ ರಾಜ್ಯವನ್ನೆ ಸ್ಥಾಪಿಸಬೇಕೆಂದು ಒತ್ತಾಯಿಸಿದರಾಗಿಯೂ ಗೊತ್ತಾಗಿದೆ. ಭಿನ್ನಾಭಿಪ್ರಾಯಗಳ ಸಂದರ್ಭದಲ್ಲಿ ಆಯೋಗದ ಸಿಫಾರಸನ್ನೆ ಜಾರಿಗೆ ತರಬೇಕೆಂದು ವರಿಷ್ಠರ ಅಭಿಪ್ರಾಯವಿರುವುದರಿಂದ ಮತ್ತು ಎರಡು ಕರ್ನಾಟಕಗಳ ಪ್ರತಿಪಾದಕರಿಗೂ ಸಂಯುಕ್ತ ಕರ್ನಾಟಕದ ಪುರಸ್ಕರ್ತರಿಗೂ ಒಪ್ಪಂದವಾಗುವ ಸಂಭವ ಇಲ್ಲವಾದುದರಿಂದ ಸಂಯುಕ್ತ ಕರ್ನಾಟಕ ರಾಜ್ಯ ರಚನೆಗೆ ಆಯೋಗ ಮಾಡಿದ ಸಿಫಾರಸು ಮನ್ನಿಸಲ್ಪಡುವುದೆಂದು ಖಚಿತವಾಗಿ ಹೇಳಬಹುದು. ಬಳ್ಳಾರಿ ಪ್ರಶ್ನೆಯಲ್ಲಿ ಆಯೋಗ ತಪ್ಪು ಗ್ರಹಿಕೆಯಾಡಿಕೆಯಿಂಡಿರುವುದರಿಂದ ಅದು ಪುನರ್ನಿರ್ಮರ್ಶಿಸಲ್ಪಡುವುದೆಂಬ ಆಶೆ ಕಾಣಿಸುತ್ತದೆ. ಅಲ್ಲದೆ, ಶ್ರೀ ಹನುಮಂತಯ್ಯನವರು ಹೇಳಿದಂತೆ ಪ್ರಧಾನ ಮಂತ್ರಿ, ಗೃಹ ಮಂತ್ರಿ ಹಾಗು ಅಜಾದ ರಂಥ ಜನನಾಯಕರು ಬಳ್ಳಾರಿ ಪ್ರಶ್ನೆಯನ್ನು ಇನ್ನು ಎತ್ತತಕ್ಕದ್ದಲ್ಲ ಎಂದು ಖಂಡತುಂಡವಾಗಿ ಹೇಳಿರುವುದು ಸಹ ಈ ಮಾತಿಗೆ ಪುಷ್ಟಿಯಾಗಿ ನಿಲ್ಲುತ್ತದೆ

ತುಂಗಭದ್ರ ಅಣೆಕಟ್ಟು
ಕರ್ನಾಟಕಕ್ಕೆ ಆಂಧ್ರಕ್ಕಿಂತ ಅಧಿಕ ಲಾಭ

ಫಜಲಾಲಿ ಆಯೋಗದವರು ತುಂಗಭದ್ರ ಅಣೆಕಟ್ಟಿನ ಪ್ರಯೋಜನವು ಕರ್ನಾಟಕಕ್ಕಿಂತ ಆಂಧ್ರಕ್ಕೆಯೇ ಹೆಚ್ಚು ದೊರಕುವುದೆಂಬ ಕಾರಣವನ್ನು ಹೇಳಿ, ಈಗಾಗಲೇ ಮೈಸೂರಿಗೆ ಸೇರಿಸಲಾಗಿರುವ ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳನ್ನು ಆಂಧ್ರಕ್ಕೆ ಕೊಡಬೇಕೆಂದಿದ್ದರು. ಆದರೆ ಹೀಗೆ ಮಾಡುವಾಗ, ತಮ್ಮ ಸಿಫಾರಸಿಗೆ ಯೋಗ್ಯ ಆಂಕಿಸಂಖ್ಯೆಗಳ ಹಿನ್ನೆಲೆಯನ್ನು ಒದಗಿಸಲು ಆವರೆಗೂ ಹೋಗಿರಲಿಲ್ಲ—ಕೇವಲ ವಾದವನ್ನಷ್ಟೇ ಮಾಡಿದ್ದರು. ಈ ವಾದವು ಮನವರಿಕೆಯಾಗದೆ ಬಗೆಯಲ್ಲವೆಯೆಂದೂ ವಾಸ್ತವಾಂಶವು ಕನ್ನಡಿಗರಿಗೆಯೇ ತುಂಗಭದ್ರ ಅಣೆಕಟ್ಟಿನಿಂದ ಹೆಚ್ಚಿನ ಪ್ರಯೋಜನ ದೊರಕುವುದೆಂಬ ನಿಲುಮೆಯನ್ನು ಸಮರ್ಥಿಸುತ್ತಿದೆಯೆಂದೂ ಈ ದೃಷ್ಟಿಯಿಂದ ಆಯೋಗದ ಸಿಫಾರಸು ಆಯೋಗ್ಯವೆನಿಸಿದೆ ಎಂದೂ ಕನ್ನಡನಾಡಿನ ಧುರೀಣರು ಪ್ರತಿಪಾದನೆಯನ್ನು ವ್ಯಕ್ತಪಡಿಸಿದ್ದರು.

ಗೋಖಲೆಯವರ ವಿವರಣೆ

ಇದೀಗ ತುಂಗಭದ್ರ ಅಣೆಕಟ್ಟಿನ ಅಡಳಿತವನ್ನು ಕೇಂದ್ರ ಸರಕಾರದ ಮೇಲ್ವಿಚಾರಣೆಯಲ್ಲಿ ನಡೆಸುತ್ತಿರುವ ಮಂಡಳದ ಅಧ್ಯಕ್ಷ ಶ್ರೀ ಗೋಖಲೆಯವರು ಅಣೆಕಟ್ಟಿನಿಂದ ಪ್ರಯೋಜನ ಹೊಂದುವ ಪ್ರದೇಶಗಳ ವಿವರವನ್ನು ಪತ್ರಿಕೋದ್ಯೋಗಿಗಳ ಸಭೆಯ ಮುಂದೆ ಮಂಡಿಸಿದ್ದಾರೆ. ಇದನ್ನು ನೋಡಿದರೆ ಆಂಧ್ರದ ನಿಲುಮೆಯಾಗಲೀ ಫಜಲಾಲಿ ಆಯೋಗದ ಸಿಫಾರಸುಗಳಲೀ ಏನೇನೂ ನ್ಯಾಯವನ್ನು ಹೊಂದಿಲ್ಲವೆಂದು ಸಿದ್ಧವಾಗುತ್ತದೆ. ತುಂಗಭದ್ರ ಅಣೆಕಟ್ಟಿನಿಂದ ಆಂಧ್ರದ ೧೫೧೦೦೦ ಎಕ್ರೆ ಭೂಮಿಗೂ ಮೈಸೂರಿನ ೯೩೦೦೦ ಎಕ್ರೆ ಭೂಮಿಗೂ ಹೈದರಾಬಾದಿನ ರಾಯಚೂರು ಜಿಲ್ಲೆಯ ೨೮೦೦೦ ಎಕ್ರೆ ಭೂಮಿಗೂ ನೀರು ಪೂರೈಕೆಯಾಗುತ್ತದೆ. ರಾಯಚೂರು ಜಿಲ್ಲೆಯು ಸೂಚಿತ ಕರ್ನಾಟಕ ರಾಜ್ಯದಲ್ಲಿ ಸೇರುವುದರಿಂದ ಕನ್ನಡ ನಾಡಿನ ಒಟ್ಟು ೨೭೦೦೦ ಎಕ್ರೆ ಭೂಮಿಯು ಅಣೆಕಟ್ಟಿನಿಂದ ಪ್ರಯೋಜನ ಹೊಂದುವುದೆಂದು ಸಿದ್ಧವಾಗುತ್ತದೆ. ಇದನ್ನು ಕೇಂದ್ರದ ಮಂತ್ರಿಗಳಲ್ಲಿರುವ ವರಿಷ್ಠರು ದಯವಾಡಿ ಗಮನಿಸುವರೆಂದೂ ಬಳ್ಳಾರಿಯ ವಿಷಯದಲ್ಲಿ ಕನ್ನಡಿಗರಿಗೆ ಅನ್ಯಾಯವಾಗದಂತೆ ಅವರು ವರ್ತಿಸುವರೆಂದೂ ನಂಬೋಣ.

ಉಡುಪಿ.

ಸ್ಕೌಟ್ಸ್ ಮತ್ತು ಗೈಡ್ಸ್ ದಿನಾಚರಣೆಯು— ತಾ. ೧೭ರಂದು ಸಂಜೆ ಉಡುಪಿ ಕ್ರಿಶ್ಚಿಯನ್ ಪ್ಯಾಸ್ಕೂಲ್ ಮಂದಿರದಲ್ಲಿ ಶ್ರೀ ಟಿ. ಎ. ಪೈ ಎಸ್ಸೆ. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಅಸಿಸ್ಟಾಂಟ್ ಕಮಿಶನರ್ ಶ್ರೀ ಟಿ. ರಮೇಶ ಯು. ಸ್ಕೌಟ್ ಮತ್ತು ಶ್ರೀ ಎ. ಜೆ. ಆಳ್ವ ಯವರು ಮತ್ತು ಸಭಾಧ್ಯಕ್ಷರು ಸ್ಕೌಟ್ ಚಳವಳಿಯ ಅವಶ್ಯಕತೆ ಕುರಿತು ಮಾತನಾಡಿದರು. ಸ್ಕೌಟಿಗ ವಿವಿಧ ವಿಸೋಪಾವಳಿಗಳಾಗಿ ಸಮಾರಂಭ ಕೊನೆಗೊಂಡಿತು.

ಸಹಕಾರಿ ಸಪ್ತಾಹವು— ಉಡುಪಿಯಲ್ಲಿ ತಾ. ೨ರಂದು ಬೆಳಿಗ್ಗೆ ಸ್ಥಳೀಯ ಯೂನಿಯನ್ ಆಫೀಸಿನಲ್ಲಿ ಸಹಕಾರಿ ಧ್ವಜಾರೋಹಣದಿಂದ ಪ್ರಾರಂಭವಾಯಿತು. ಸಂಜೆ ಹಾಲು ಸರಬರಾಜು ಸಂಘದಲ್ಲಿ ಮಕ್ಕಳಿಗೆ ತಿಂಡಿಯಂಡಿಲಾಯಿತು. ಬಳಿಕ ಸಹಕಾರಿಗಳ ಹಾಗೂ ಇತರರ ಕೂಡುವಿಕೆಯಿಂದ ಸಾರ್ವಜನಿಕ ಮೆರವಣಿಗೆಯೊಂದು ಹೊರಟು ರಥಬೀದಿಗೆ ಬಂದು ತಲ್ಪಿತು. ಆಲ್ಲಿ ಮಹಾಜನ ಸಭೆಯು ಸಂಘ ಕೂಟದ ಅಧ್ಯಕ್ಷ ಶ್ರೀ ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ ಯು. ರಾಮ ರಾವ್ ಮತ್ತು ಹನುಮಂತ ಸಪ್ಪಿಗಾರರು ಮಾತನಾಡಿದರು. ಅಧ್ಯಕ್ಷರು ಭಾಷಣಾನಂತರ ಸಂಘಕಾಯಿದೆ ಕಾರ್ಯದರ್ಶಿ ಶ್ರೀ ಪಿ. ವಿ. ಆಚಾರ್ಯರು ನಂದನೆಗಳನ್ನಿತ್ತರು. ಆಲ್ಲಿಗೆ ಸಭೆ ಕೊನೆಗೊಂಡಿತು. ತಾ. ೧೧ರ ತನಕ ಸಪ್ತಾಹದ ಅಂಗವಾಗಿ ವಿವಿಧ ಸಂಘಗಳಲ್ಲಿ ವಿವಿಧ ಕಾರ್ಯಕ್ರಮಗಳಾಗುವವು.

ಪ್ರಕಟಣೆ

ಮೊಕ್ತೇಸರ ಶ್ರೀ ಮಂಗಳಾದೇವಿಯಮ್ಮೇಶ್ವರಿ ಅಮ್ಮನವರ ದೇವಸ್ಥಾನದ ದೇವಸ್ಥಾನದ ಸೇವೆಯನ್ನು 1955–56ನೇ ಇಸವಿಗೆ ನವೆಶಕ್ತಿಯಕ್ಕನ್ನು ಮಾಡ್ಸಾಸ್ ಕಮಿಶನರರ ಹುಕುಮಿಗೆ ಒಳಪಟ್ಟು ಸ್ಥಿರಪಡಿಸುವರೆ ತಾರೀಕು ೩೦—11—55ನೇ ದಿವಸ ಅಪರಾಹ್ನ ಗಂಟೆ ೩ಕ್ಕೆ ಸುನಃ ಪಬ್ಲಿಕ್ ಏಲಂ ಕರೆಯಲಾಗುವುದು, ಕಾಯಂಬಳ್ಳಿಯವರು ಸದ್ರಿ ಸನುಯ ಹಾಜರಾಗಿ ಸೇವೆಯನ್ನು ಸವಕೊಳ್ಳಬಹುದು. ಏಲಂ ರತ್ನವನ್ನು ದೇವಸ್ಥಾನದ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(Sd) B. Umesha Rao
Executive officer.
ಮಂಗಳಾದೇವಿ ದೇವಸ್ಥಾನ ತಾ. 6–11–55.

(ಜನೇ ಪುಟದಿಂದ)

ನಮ್ಮೂರಿನ ಪ್ರಾಣಿಪ್ರಿಯರೂ ಸಂಘದವರು (ಎಸ್. ಪಿ. ಸಿ. ಎ.) ಕಾಲೇಜು ವಿದ್ಯಾರ್ಥಿ (ಬಿ. ಟಿ. ಕಾಲೇಜು ಸಹಿತ) ಗಳಿಗಾಗಿ ಇಂಗ್ಲಿಷಿನಲ್ಲಿಯೂ, ಹೈಸ್ಕೂಲ್ ವಿದ್ಯಾರ್ಥಿ (ತರಬೇತಿ ವಿದ್ಯಾರ್ಥಿಗಳು ಸಹಿತ) ಗಳಿಗಾಗಿ ಕನ್ನಡದಲ್ಲಿಯೂ ಹೀಗೆ ಎರಡು ಸ್ಪರ್ಧೆಗಳನ್ನು ಏರ್ಪಡಿಸಿರುವರು. 'ಪ್ರಾಣಿಗಳಿಗೆ ಯಾವ ಬಗೆಯ ಹಿಂಸೆಯನ್ನು ಮಾನವನು ಕೊಡುತ್ತಿದ್ದಾನೆ ಮತ್ತು ಅದನ್ನು ತಡೆಯಲು ಯಾವ ಕಾರ್ಯಕ್ರಮ ಕೈಕೊಳ್ಳಬಹುದು' ಎಂಬುದೇ ಸ್ಪರ್ಧೆಯ ವಿಷಯ. ಉತ್ತಮ ಸ್ಪರ್ಧೆಗೆ ಬಹುಮಾನವಿರುವುದು.

ನಗರಸಭೆ- 'ಜೊಸ ನಗರ ಸಭೆಯು ಇದೇ ತಾ. 21ರಂದು ಕೇರಿ, ಸಭಾಪತಿ ಮತ್ತು ಉಪಸಭಾಪತಿಗಳ ಚುನಾವಣೆ ನಡೆಯುವುದು.

ವೀರಾವರಿ ಪರಿಷತ್ತು— ದ. ಕ. ಜಿಲ್ಲೆಯ ಜಾಲ್ತಿ ವರ್ಷದ ದ್ವಿತೀಯ ಅರ್ಧವರುಷದ ವೀರಾವರಿ ಪರಿಷತ್ತು ಇದೇ ತಾ. 26 ರಲ್ಲಿ ಕಲೆಕ್ಟರರ ಕಚೇರಿಯಲ್ಲಿ ಜರಗಲಿರುವುದು. ಮಹಾಜನರು ಅಂದಿನ ಸಭೆಗೆ ಹಾಜರಾಗಿ ತಂತಮ್ಮ ಸೂಚನೆಗಳನ್ನು ಕೊಡಬಹುದು.

ರೋಡ್ ಗ್ಯಾಂಗ್ ಮಜೂರರ ಸಭೆಯು— ಕಳದ ತಾ. 30ರಲ್ಲಿ ಶ್ರೀ ಕೆ. ಈಶ್ವರ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿ, ಗ್ಯಾಂಗ್ ಮಜೂರರಿಗೆ ಸಂಬಂಧಿಸಿದ ಹಲವು ಸಮಸ್ಯೆಗಳ ಕುರಿತು ನಿರ್ಣಯಗಳಾದುವು.

ಗಾಯನ ಕಚೇರಿ— ಗಣಪತಿ ಹ್ಯಾಸ್ಕೂಲಿನ ಶಾರದಾ ಭವನದಲ್ಲಿ ತಾ. 5ರಲ್ಲಿ ಹಿಂದೂಸ್ಥಾನೀ ಸಂಗೀತ ರೇಡಿಯೋ ಗಾಯಕಿ ಶ್ರೀಮತಿ ಸುಶೀಲಾ ಟೇಂಬೆಯವರ ಗಾಯನ ಕಚೇರಿಯು ಮಂಗಳೂರಿನ ಸಂಗೀತ ಕಲಾ ಪ್ರಸಾರಕ ಸಂಘದ ಆಶ್ರಯದಲ್ಲಿ ಜರಗಿತು.

ಮಂಗಳೂರು

ನಿಧನ— ಮಂಗಳೂರು ಸಾರಸ್ವತ ಸಮಾಜದ ಗಣ್ಯ ವ್ಯಕ್ತಿಗಳೂ ಜಪಿಸ್ಥಾನ ರೂ ಆದ ಶ್ರೀ ಕೊಡಿಯಾಲ ಸಂಜೀವ-ರಾಯರು ತಮ್ಮ ನಿವಾಸದಲ್ಲಿ ಇದೇ ತಾ. 30ರಲ್ಲಿ ನಿಧನ ಹೊಂದಿದರೆನ್ನಲು ವಿಷಾದಿಸುತ್ತೇವೆ.

ಪ್ರಬಂಧ ಸ್ಪರ್ಧೆ- ಮಂಗಳೂರಿನ ಪ್ರಾಣಿಪ್ರಿಯರೂ ಸಂಘದವರು (ಎಸ್. ಪಿ. ಸಿ. ಎ.) ಕಾಲೇಜು ವಿದ್ಯಾರ್ಥಿ (ಬಿ. ಟಿ. ಕಾಲೇಜು ಸಹಿತ) ಗಳಿಗಾಗಿ ಇಂಗ್ಲಿಷಿನಲ್ಲಿಯೂ, ಹೈಸ್ಕೂಲ್ ವಿದ್ಯಾರ್ಥಿ (ತರಬೇತಿ ವಿದ್ಯಾರ್ಥಿಗಳು ಸಹಿತ) ಗಳಿಗಾಗಿ ಕನ್ನಡದಲ್ಲಿಯೂ ಹೀಗೆ ಎರಡು ಸ್ಪರ್ಧೆಗಳನ್ನು ಏರ್ಪಡಿಸಿರುವರು. 'ಪ್ರಾಣಿಗಳಿಗೆ ಯಾವ ಬಗೆಯ ಹಿಂಸೆಯನ್ನು ಮಾನವನು ಕೊಡುತ್ತಿದ್ದಾನೆ ಮತ್ತು ಅದನ್ನು ತಡೆಯಲು ಯಾವ ಕಾರ್ಯಕ್ರಮ ಕೈಕೊಳ್ಳಬಹುದು' ಎಂಬುದೇ ಸ್ಪರ್ಧೆಯ ವಿಷಯ. ಉತ್ತಮ ಸ್ಪರ್ಧೆಗೆ ಬಹುಮಾನವಿರುವುದು.

ನಗರಸಭೆ- 'ಜೊಸ ನಗರ ಸಭೆಯು ಇದೇ ತಾ. 21ರಂದು ಕೇರಿ, ಸಭಾಪತಿ ಮತ್ತು ಉಪಸಭಾಪತಿಗಳ ಚುನಾವಣೆ ನಡೆಯುವುದು.

ವೀರಾವರಿ ಪರಿಷತ್ತು— ದ. ಕ. ಜಿಲ್ಲೆಯ ಜಾಲ್ತಿ ವರ್ಷದ ದ್ವಿತೀಯ ಅರ್ಧವರುಷದ ವೀರಾವರಿ ಪರಿಷತ್ತು ಇದೇ ತಾ. 26 ರಲ್ಲಿ ಕಲೆಕ್ಟರರ ಕಚೇರಿಯಲ್ಲಿ ಜರಗಲಿರುವುದು. ಮಹಾಜನರು ಅಂದಿನ ಸಭೆಗೆ ಹಾಜರಾಗಿ ತಂತಮ್ಮ ಸೂಚನೆಗಳನ್ನು ಕೊಡಬಹುದು.

ರೋಡ್ ಗ್ಯಾಂಗ್ ಮಜೂರರ ಸಭೆಯು— ಕಳದ ತಾ. 30ರಲ್ಲಿ ಶ್ರೀ ಕೆ. ಈಶ್ವರ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿ, ಗ್ಯಾಂಗ್ ಮಜೂರರಿಗೆ ಸಂಬಂಧಿಸಿದ ಹಲವು ಸಮಸ್ಯೆಗಳ ಕುರಿತು ನಿರ್ಣಯಗಳಾದುವು.

ಗಾಯನ ಕಚೇರಿ— ಗಣಪತಿ ಹ್ಯಾಸ್ಕೂಲಿನ ಶಾರದಾ ಭವನದಲ್ಲಿ ತಾ. 5ರಲ್ಲಿ ಹಿಂದೂಸ್ಥಾನೀ ಸಂಗೀತ ರೇಡಿಯೋ ಗಾಯಕಿ ಶ್ರೀಮತಿ ಸುಶೀಲಾ ಟೇಂಬೆಯವರ ಗಾಯನ ಕಚೇರಿಯು ಮಂಗಳೂರಿನ ಸಂಗೀತ ಕಲಾ ಪ್ರಸಾರಕ ಸಂಘದ ಆಶ್ರಯದಲ್ಲಿ ಜರಗಿತು.

ಸ್ಕೌಟ್ ಸಪ್ತಾಹ- ದ. ಕ. ಜಿಲ್ಲಾ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ದಳಗಳ ಸಪ್ತಾಹವು ಇದೇ ತಾ. 1ರಲ್ಲಿ ಕೆನರಾ ಹೈಸ್ಕೂಲಿನ ಆವರಣ ಬಯಲಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಆರಂಭಿಸಲ್ಪಟ್ಟಿತು. ಡಾ. ಕೆ. ಕೆ. ಹೆಗ್ಡೆಯವರು ಸ್ವಾಗತಿಸಿದರು. ಕೃಷ್ಣಾ 'ಳಿಲೆ ಕ್ಕೆರರು ರಾಷ್ಟ್ರಧ್ವಜವನ್ನು, ಶ್ರೀ ಜಿ. ಸೋಮಶೇಖರ ರಾಯರು ಸ್ಕೌಟು ಧ್ವಜವನ್ನು ಆರೋಹಿಸಿದರು. ಜಿಲ್ಲಾ ಸ್ಕೌಟ್ ಕಮಿಶನರ್ ಡಾ. ಕೆ. ಗಿರಿಧರ ರಾವ್ ಮತ್ತು ಶ್ರೀ ಎಸ್. ಎಸ್. ಏಕಾಂಬರ ರಾಯರು ಕಾರ್ಯೋಚಿತ ಭಾಷಣಗಳನ್ನಾಡಿದರು. ಶ್ರೀ ಎಮ್. ಶ್ರೀನಿವಾಸ ನಾಯ್ಕರು ಧನ್ಯವಾದವಿತ್ತರು.

ದ. ಕ. ಜಿಲ್ಲಾ ಯೋಜನಾ ಸಮಿತಿ ಸಭೆಯು— ಕಳದ ತಾ. 31ರಲ್ಲಿ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜರಗಿತು. ಈ ವರ್ಷ ಜಿಲ್ಲೆಯಲ್ಲಿ ಕೈಕೊಳ್ಳುವ ಸ್ಥಳೀಕಾ ಭಿವೃದ್ಧಿ ಕಾರ್ಯಗಳ ಕುರಿತು ವಿಚಾರವಿನಿಮಯ ನಡೆಯಿತು.

ಅಖಿಲ ಭಾರತ ಸಹಕಾರಿ ಸಪ್ತಾಹಸಮಾರಂಭವು— ದ. ಕ. ಜಿಲ್ಲಾ ಅಭಿವೃದ್ಧಿ ಸಂಘದ ಆಶ್ರಯದಲ್ಲಿ ಇದೇ ತಾ. 5ರಂದು ಬೆಳಿಗ್ಗೆ ಧ್ವಜಾರೋಹಣ ಕಾರ್ಯದಿಂದ ಪ್ರಾರಂಭವಾಯಿತು. ಅಂದು ಸಂಜೆ ಸಾರ್ವಜನಿಕ ಸಭೆ ಜರಗಿತು. ಸಪ್ತಾಹ ದಿನಗಳಲ್ಲಿ ವಿವಿಧ ಕಾರ್ಯಕ್ರಮಗಳು ಜರಗಿ ಕೊನೆಯ ದಿನ ತಾ. 11ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಸಪ್ತಾಹ ಮುಕ್ತಾಯ ಸಭೆ ಜರಗುವುದು.

ಗೋವಾ ಕೈದಿಗಳ ದಿನಾಚರಣೆಯು— ತಾ. 6ರಲ್ಲಿ ಸಂಜೆ ಜನಸಂಘದ ಆಶ್ರಯದಲ್ಲಿ ಶ್ರೀ ಎಮ್. ಜನಾರ್ಧನ ಭಂಡಾರ್ ಕಾರರ ಅಧ್ಯಕ್ಷತೆಯಲ್ಲಿ ಜರಗಿತು.

ನವಂಬರ ಕ್ರಾಂತಿ ದಿನಾಚರಣೆಯು— ತಾ. 7ರಂದು ಸಂಜೆ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಶ್ರೀ ಎ. ಕೃಷ್ಣಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಬಿ. ವಿಠಲ್ ಕಿಲ್ಲಾಯ ಮೊದಲಾದವರ ಭಾಷಣಗಳಾದುವು.

ದ. ಕ. ಜಿಲ್ಲಾ ಡಿಸ್ಟ್ರಿಕ್ಟ್ ಕ್ಲಾಸಸ್ ಲೀಗಿನ ಮಹಾ ಸಭೆಯು— ತಾ. 6 ರಲ್ಲು ಶ್ರೀ. ಕೆ. ಈಶ್ವರ, ಎಮ್. ಎಲ್. ಎ., ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯಲ್ಲಿ ಸರ್ಕಾರ್ ಕಮಿಟಿ ರಚಿಸುವರೆ, ದಶಂಬರ ತಿಂಗಳಲ್ಲಿ ಹರಿಜನ ಪರಿಷತ್ತು ಜರಗಿಸುವ ನಿರ್ಣಯಗಳಾದುವು. ಪರಿಷತ್ತನ್ನು ಉದ್ಘಾಟಿಸಲು ಮದ್ರಾಸಿನ ಮಂತ್ರಿ ಶ್ರೀ. ಬಿ. ಪರಮೇಶ್ವರರನ್ನು ಆಮಂತ್ರಿಸಬೇಕೆಂದು ನಿರ್ಧಾರವಾಯಿತು. ಹೊಸ ವರ್ಷಕ್ಕೆ ಶ್ರೀಗಳಾದ ಕೆ. ಈಶ್ವರ ಮತ್ತು ಆನಂದ ಹಾಗೂ ವಿಠಲನವರು ಅಧ್ಯಕ್ಷ ಮತ್ತು ಜತೆ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ದ. ಕ. ಶಿಷ್ಟ ಮಂಡಳಿಯು— ತಾ. 6ರಲು ನವದೆಹಲಿಯಲ್ಲಿ ಪ್ರಧಾನ ಮಂತ್ರಿ ಶ್ರೀ. ನೆಹರೂರವರನ್ನು ಭೇಟಿಯಾಗಿ, ಕಾಶ್ಮೀರೋಡು ತಾಲೂಕನ್ನು ಕರ್ನಾಟಕ ಸ್ಟ್ರಾಂತದಲ್ಲೇ ಇರಗೊಡಿಸುವ ಅವಶ್ಯಕತೆಯನ್ನು ಸೂಚಿಸಿ ವಿಜ್ಞಪ್ತಿಯೊಂದನ್ನು ಒಪ್ಪಿಸಿತು.

ಉಡುಪಿ

ನಗರ ಸಭಾಪತಿ ಚುನಾವಣೆ ಸಭೆಯು—ಇದೇ ತಾ. 12ನೇ ಶನಿವಾರ ಅಪರಾಹ್ನ 3 ಗಂಟೆಗೆ ನಗರ ಸಭಾ ಭವನವಲ್ಲಿ ಕುಂದಾಪುರ ಸಬ್ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗುವುದು ಸದಸ್ಯರ ಪ್ರತಿಜ್ಞಾ ವಿಧಿಯು ಈ ಸಭೆಯಲ್ಲಿ ನಡೆಯಲಿರುವುದು.

ಉಡುಪಿ ಮುನಿಸಿಪಲ್ ಆಡಳಿತವರದಿ ವಿಮರ್ಶೆ—ಮದ್ರಾಸು ಸರಕಾರವು ಈ ನಗರ ಸಭೆಯ 1954-55ನೇ ವರ್ಷದ ಆಡಳಿತ ವರದಿಯನ್ನು ವಿಮರ್ಶಿಸಿ ಆಡಳಿತವು ಒಟ್ಟಾರೆ ತೃಪ್ತಿಕರವಾಗಿದೆ ಎಂದಭಿಪ್ರಾಯ ಪಟ್ಟಿದೆ. ವರದಿ ವರ್ಷದಲ್ಲಿ 49 ಸಭೆಗಳು ಜರಗಿದ್ದಾಗ್ಯೂ ಸಭಾಸದ್ಯರ ಹಾಜರಿಯು ಇಳಿಮುಖವಾಗಿತ್ತು. ಸಭಾಸದ್ಯರು ಪೈಜ್ಜು ಸಂಖ್ಯೆಯಲ್ಲಿ ಸಭೆಗಳಿಗೆ ಹಾಜರಾಗಿ ಆಡಳಿತದಲ್ಲಿ ಹೆಚ್ಚಿನ ಆಸಕ್ತಿ ತೋರಿಸಬೇಕಾಗಿದೆ. ಮುನಿಸಿಪಲ್ ಶಾಲೆಗಳಲ್ಲಿಯ ಮಕ್ಕಳ ಸಂಖ್ಯೆ ಏರಿರುವುದಾದರೂ, ಮಕ್ಕಳ ಸರಾಸರಿ ಹಾಜರಿಯು ಅದೇ ಪ್ರಮಾಣವಲ್ಲಿರುವುದಿಲ್ಲ. ವರದಿವರ್ಷಾಂತ್ಯದಲ್ಲಿ ರೂ. 1,80,233 ವಸೂಲಿಗೆ ಬಾಕಿ ನಿಂತಿತ್ತು. ಈ ವಿಷಯವನ್ನು ಬಾಲ್ತಿ ವರ್ಷದಲ್ಲಿ ವಸೂಲುನಾಡುವಂತೆ ಕಮಿಶನರರನ್ನು ವಿನಂತಿಸಲಾಗಿದೆ.

ರಕ್ಷಾ ಕ್ರಾಂತಿ ದಿನಾಚರಣೆಯು- ತಾ. 7ರಲ್ಲಿ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ, ಮೆರವಣಿಗೆ, ಸಭೆ, ಭಾಷಣಗಳಿಂದ ನಡೆಯಿತು. ಶ್ರೀ ಕೆ. ಐತಾಳರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಸ್. ಸೋಸ್ಸ್ ಕೆ. ಬಾಸ ಸೇರಿಗಾರ ಮೊದಲಾದವರು ಮಾತನಾಡಿದರು. ಶ್ರೀ ಸೀನ ನಾಯ್ಕರು ಧನ್ಯವಾದ ಗಳನ್ನಿತ್ತರು.

ಸಾಹಿತ್ಯೋತ್ಸವ—ಸ್ಥಳೀಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಮೂರನೆಯ ಸಾಹಿತ್ಯೋತ್ಸವವು ಇದೇ ತಾ. 4, 5 ಮತ್ತು 6ರಲ್ಲು ಶ್ರೀಗಳಾದ ಕೆ. ವಿಠಲ ಶೆಣೈ, ಮೂಲ್ಕಿ ಸರಕಾರಿ ಹ್ಯಾಸ್ಕೂಲಾ ಹೆಡ್ಮಾಸ್ಟರ್, ಬಿ. ಎ. ಪೈ, ಎಮ್. ಎಲ್., ಎ. ಮತ್ತು ಪ್ರಿನ್ಸಿಪಾಲ್ ಎಚ್. ಸುಂದರ ರಾಯರ ಅಧ್ಯಕ್ಷತೆಗಳಲ್ಲಿ ಅನುಕ್ರಮವಾಗಿ ಜರಗಿತು. ಮೊದಲದಿನ ಸಭಾಧ್ಯಕ್ಷರು ನವೋದಯ ಪ್ರಚಾರ ಪುಸ್ತಕ ಮಾಲೆಯ ಉದ್ಘಾಟನೆಯನ್ನು ಮುದ್ದಣ್ಣ ಜಯಂತಿ ಆಚರಣೆಯಾಚರಣೆಯಲ್ಲಿ ನಡೆಸಿದರು. ಎರಡನೆ ದಿನದ ಅಧ್ಯಕ್ಷರು "ಪರಾಗ"ಹಸ್ತ ಪತ್ರಿಕೆಯನ್ನು ಉದ್ಘಾಟಿಸಿದರು. ಶ್ರೀಗಳಾದ ಪೇಟಿಯಾಪು ಕೃಷ್ಣ ಭಟ್, ಬಿ ಎಚ್. ಶ್ರೀಧರ ಮತ್ತು ಕೆ. ನರಸಿಂಹ ಮೂರ್ತಿಗಳು ಪ್ರಮುಖ ಉಪನ್ಯಾಸಕರಿದ್ದರು. ಶ್ರೀಗಳಾದ ಕು. ಶಿ. ಹರಿದಾಸ ಭಟ್ ಮತ್ತು ಎಚ್. ಕೆ. ರಾಮಚಂದ್ರ ಮೂರ್ತಿಯವರ ಕಾವ್ಯ ವಾಚನವಿತ್ತು. ನಾಟಕ ಪ್ರದರ್ಶನಗಳೂ ಇದ್ದುವು.

The New Karnataka Provident Insurance Co., Ltd.
H. O. Mangalore-1. (S. I.)

NOTICE

Notice is hereby given that the Policy No. 0544., issued by the Company, on the life of Sri M. A. Rahimthulla Saheb, Retail Merchant, S/o Abdul Karim, Nittur, P.O. Kollur, S. K. is reported to be **Lost** or **Misplaced**. Any person having any claim in respect herof should lodge his claim with relevant proofs with the Registered Office of the Company at Mangalore within a month of the date hereof, failing which the Company shall proceed with the issue of the Duplicate Policy in favour of the Assured.

H D. MENDON
MANAGER.

Mangalore—1. Date 8—11—55.

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ

ಬಿಡುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಎಂಬ ಹೊಸ ನೂಡರಿಯ ಪುಸ್ತಕವು ಹೈಸ್ಕೂಲುಗಳ IV ಮತ್ತು V ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ನುಂಜೂರಾತಿ ಪಡೆದಿದೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಜೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಜೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿದುವುದರಿಂದ

ಈಗ ೧೦ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟಿ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಹೆಬ್ರಿ– ಡಾ. ಯು. ಕೇಶವಗಿರಿ ರಾಯರೆ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿದ ಯುವಕ ಸಂಘದ ಸಭೆಯಲ್ಲಿ ಶ್ರೀಗಳಾದ ಬಿ. ಮಂಜಪ್ಪ ಹೆಗ್ಡೆ ಮತ್ತು ನಾಗೇಶ ಶಿಕ್ಯೆಯವರು ಆಸುಕ್ಲನುವಾಗಿ ಅಧ್ಯಕ್ಷ ಮತ್ತು ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರು.

ಶಿರ್ವ– ಹಿಂದ್ ಕುಷ್ಠರೋಗ ನಿವಾರಣಾ ಸಮಿತಿಯ ಸಭೆಯು ಈಚೆಗೆ ತಾ. 30ರಲ್ಲಿ ಶ್ರೀ ಟಿ. ಎ ಪೈ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸೈಂಟ್ ಮೇರಿಸ್ ಹ್ಯಾಸ್ಕಾಲಿನ ಹೆಡ್ಮಾಸ್ಟರ್ ಶ್ರೀ ಎಲ್. ಮೆಂಡೋನ್ಸರು ಸ್ವಾಗತ ಭಾಷಣ ಬಿತ್ತರಿಸಿದರು. ಡಾ. ಎ. ಎಸ್. ಕೊಯಿಲೋ, ಡಾ. ಟಿ. ಮಾಧವ ಪೈ ಇವು ಸಮಯೋಚಿತವಾಗಿ ಮಾತುಗಳ ನ್ನಾಡಿದರು. ಶಿರ್ವ ಕೇಂದ್ರಕ್ಕೊಂದು ಕುಷ್ಠರೋಗಿಗಳ ಆಸ್ಪತ್ರೆಯ ಜರೂರಾತಿಯನ್ನು ಅಧ್ಯಕ್ಷರು ನಿಕ್ಕತಪಡಿಸಿದರು. ಶ್ರೀ ಟಿ. ಎ. ಪೈಗಳು ತಾ. 1ರಲ್ಲಿ ಶಿರ್ವ ಕೇಂದ್ರದಲ್ಲಿ ಜೊಸ ಜೋಲೀನ್ ಕಾಣ್ಕ ತೆರೆಯುವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಸಂಪಾಜೆ – ಸಂಪಾಜೆ ಆಸ್ಪತ್ರೆಯ ಕಟ್ಟಡದ ಶಂಕುಸ್ಥಾಪನಾ ಕಾರ್ಯವು ಈಚೆಗೆ ತಾ 30ರಲ್ಲಿ ಕೊಡಗಿನ ಚೀಫ್ ಕಮಿಷನರ್ ಶ್ರೀ. ಟಿ. ಜಿ. ಎನ್. ಅಯ್ಯರಿಂದ ನೆರವೇರಿಸಲ್ಪಟ್ಟಿತು. ಗೃಹ ಸಚಿವ ಶ್ರೀ. ಕೆ. ಮಲ್ಲಪ್ಪನವರು ತಮ್ಮ ಭಾಷಣದಲ್ಲಿ ಈ ಕಾರ್ಯಕ್ಕಾಗಿ ಸರಕಾರ ಬೆಂಬಲವನ್ನು ಅಪೇಕ್ಷಿಸಿದರು. ಪಟೇಲ್ ಶ್ರೀ. ಸಣ್ಣಪ್ಪ ಹಾಗೂ ಶ್ರೀ. ಸಿದ್ಧಿಗಣಪತಿ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಕೋಣಿ ಮತ್ತು ಬಸ್ರೂರು– ಕುಂದಾಪುರ ತಾಲೂಕಿನ ಕೋಣಿ ಮತ್ತು ಬಸ್ರೂರುಗಳಲ್ಲಿ ಕಳೆದ ತಾ. 30 ಮತ್ತು 31ರಲ್ಲು ಶ್ರೀಗಳಾದ ಎಸ್. ಎಂ. ಹೆಗ್ಡೆ, ಆರ್. ಕೆ. ಸಂಜೀವ ರಾವ್, ಕೆ. ತೀರ್ಥಪ್ಪ ಹೆಗ್ಡೆ, ಎ. ನಾರಾಯಣ ಸೆಟ್ಟಿ, ಎಸ್. ವಿಶ್ವೇಶ್ವರಯ್ಯ, ಎ. ನಾಗೇಂದ್ರ ಭಟ್ ಮೊದಲಾದ ಪ್ರಸಿದ್ಧ ಅರ್ಥದಾರಿಗಳ ಕೂಡುವಿಕೆಯಿಂದಲೂ ಶ್ರೀಗಳಾದ ಕೆ. ಶ್ರೀನಿವಾಸ ನಾಯಕ್ ಮತ್ತು ಎ. ಕೃಷ್ಣ ವೈದ್ಯರ ಹಾಡುಗಾರಿಕೆಯಿಂದಲೂ ಯಕ್ಷಗಾನ ಕೂಟಗಳು ಜರಗಿದವು.

ಕನ್ಯಾಡಿ– ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯ ಉದ್ಘಾಟನಾ ಸಮಾರಂಭವು ಈಚೆಗೆ ತಾ. 26ರಲ್ಲು ಕನ್ಯಾಡಿ ಗುತ್ತು ಶ್ರೀ ಸೋಮಪ್ಪ ರೈಗಳ ನೇತೃತ್ವದಲ್ಲಿ ವಿದ್ವಾನ್ ಶ್ರೀ ಕಯ್ಯಾರ ಕಿಂಞಣ್ಣ ರೈಗಳಿಂದ ನೆರವೇರಿಸಲ್ಪಟ್ಟಿತು. ಶ್ರೀ ಕೆ. ಜಿ. ವಿಶ್ವನಾಥ ರೈ ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು. ರಾಮಣ್ಣ ಭಂಡಾರಿಗಳು ಧನ್ಯವಾದಗಳನ್ನರ್ಪಿಸಿದರು.

ಕೊಕ್ಕರ್ಣೆ– ದ. ಕ. ಜಿಲ್ಲಾ ಯಕ್ಷಗಾನ ಕಲೆಯಲ್ಲಿ ಕಲಿಯುಗದ ಶುಕಬ್ರಹ್ಮರಾಮವೆಂದು ಹೆಸರ್ಪಡೆದ ಸಾಂತಾವರ ನಾಗಪ್ಪಯ್ಯನವರು ಕಳೆದ ತಾ. 29ರಲ್ಲು ಸ್ವರ್ಗಸ್ಥರಾದರು. ದಿವಂಗತರ ಆತ್ಮಕ್ಕೆ ಚಿರಶಾಂತಿಯಿರಲಿ.

ಮುಂಡ್ಕೂರು – ಇಲ್ಲಿಯ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ಕಳೆದ ತಾ 25ರಲ್ಲಿ ಮುಂಡ್ಕೂರು, ಇನ್ನ ಮತ್ತು ಪುಲ್ಲ ಗ್ರಾಮಸ್ಥರ ಸಭೆಯೊಂದು ಮುಂಡ್ಕೂರ್ ಪಟೇಲ್ ಶ್ರೀ ಎಮ್. ನಾರಾಯಣ ರಾಯರೆ ಅಧ್ಯಕ್ಷತೆಯಲ್ಲಿ ಜರಗಿತು. ದೇವಸ್ಥಾನದ ಜೀರ್ಣೋದ್ಧಾರ ಇತ್ಯಾದಿ ಕಾರ್ಯಗಳನ್ನು ಸಾಂಗಗೊಳಿಸುವರೆ ಮೂರು ಗ್ರಾಮಸ್ಥರ ಪ್ರತಿನಿಧಿಗಳಿರುವ ಕಮಿಟಿಯೊಂದು ರಚಿಸಲ್ಪಟ್ಟಿತು.

ಪಾಣಾಜೆ– ಸ್ಥಳೀಯ ಯಕ್ಷಗಾನ ಬಾಲಲೀಲಾ ಮಂಡಳಿಯ ಕಛೇರಿಯು ಕಳೆದ ತಾ 26ರಲ್ಲಿ ಶ್ರೀ ಕೆ. ಪಿ. ವೆಂಕಪ್ಪ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿ ಕೀರ್ತಿಶೇಷ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವಾಯಿತು.

ಕುರುಕಾಲು– ಗ್ರಾಮಾಭಿವೃದ್ಧಿ ಯೋಜನೆಯ ನೈಯ ಕಟ್ಟಲಾಗುವ ಶ್ರೀ ಕುಂಜಾರು ಗಿರಿಜಾ ಹಾ. ಏ. ಶಾಲಾ ಕಟ್ಟಡ ಮತ್ತು ಶಿಲಾ ವಿಗ್ರಹದ ಶಂಕು ಸ್ಥಾಪನೆಯನ್ನು ಇದೇ ತಾ. 4ರಲ್ಲು ಸಂಜೆ ಅಧಿಕಾರಿಯವರು ಮಠದ ಶ್ರೀ ಎಜುಫೀಶಕೀರ್ಥ ಶ್ರೀಪಾದಂಗಳವರು ನೆರವೇರಿಸಿದರು. ಶ್ರೀ ಟಿ. ಎ. ಪೈ, ಎಂ. ಎಲ್. ಎ., ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಪ್ರಾರ್ಥನೆಯಾಗಿ ಶಾಲಾ ಮೇನೇಜರ್ ಶ್ರೀ ಕೆ. ಗಣಪಯ್ಯ ಸೆಟ್ಟಿರು ಶ್ರೀ ಶ್ರೀಗಳವರ ಪಾದಪೂಜೆ ನೆರವೇರಿಸಿ ಗುರುಭಕ್ತಿಯನ್ನು ಪ್ರದರ್ಶಿಸಿ, ನೆರೆದ ಮಹನೀಯರಿಗೆ ಸುಸ್ವಾಗತವನ್ನು ಬಯಸಿದರು. ಸೋದೆ ಮಠದ ಆಡಳಿತೆದಾರ್ ಶ್ರೀ ಪಿ. ಶ್ರೀಪತಿ ಆಚಾರ್ಯ, ತಹಸೀಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯ ಮತ್ತು ಜಿಲ್ಲಾ ಹೆಲ್ತ್ ಆಫೀಸರ್ ಡಾ| ಎನ್. ವಿ. ರಾಮನ್ ಮತ್ತು ಸ್ಥಳಾಧ್ಯಕ್ಷರು ಸನ್ಮಾನೋಚಿತ ಮಾತುಗಳನ್ನಾಡಿದರು. ವಂದನಾರ್ಪಣೆ, ಫಲವಸ್ತು ವಿತರಣೆಗಳಾಗಿ ಸಮಾರಂಭ ಮುಗಿಯಿತು.

ಕಾರ್ಕಳ– ಇದೇ ತಾ. 23ರಿಂದ ಎರಡು ದಿವಸಗಳ ತನಕ ಸ್ಥಳೀಯ ಬೋರ್ಡು ಹೈಸ್ಕೂಲಿನ ಪಟಾರದಲ್ಲಿ ಜಾನುವಾರು ಪ್ರದರ್ಶನವೊಂದು ಜರಗಲಿರುವುದಾಗಿಯೂ ಉತ್ತಮ ಜಾನುವಾರುಗಳಿಗೆ ಬಹುಮಾನವಿರುವುದಾಗಿಯೂ ತಿಳಿದು ಬರುತ್ತದೆ.

ಮೂಲ್ಕಿ– ಇಲ್ಲಿಯ ಜುಮ್ಮಾ ಮಸೀದಿಯ ವಹಾರದಲ್ಲಿ ಕಳೆದ ತಾ. 29ರಲ್ಲು ಶ್ರೀ ಬಿ. ಹಸನ್ ಮುಸ್ಲಿಯಾರರ ಅಧ್ಯಕ್ಷತೆಯಲ್ಲಿ ಜೈಗಂಬರ ದಿನಾಚರಣೆ ನಡೆಯಿತು.

ಪಡುಬಿದ್ರಿ– ಡಾ|| ಕೆ. ಆರ್. ಜೋಯಿಶ್ಯರ ಅಧ್ಯಕ್ಷತೆಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಬಂಧುಗಳ ಕೂಡುವಿಕೆಯಿಂದ ಮಸೂದ್ ಜೈಗಂಬರ ಇನ್ನ ದಿನವು ಆಚರಿಸಲ್ಪಟ್ಟಿತು.

ಬೈಂದೂರು– ಸ್ಥಳೀಯ ಮಿಲಾದ್ ಕಮಿಟಿಯ ಕಡೆಯಿಂದ ಮಹಮ್ಮದ್ ಪೈಗಂಬರ ದಿನಾಚರಣೆ ಸಾಂಗವಾಯಿತು. ಮೌಲಾನಾ ಮೂಲವಿ ಹಾಜಿ ಮಹಮ್ಮದ್ ಇಸ್ಮಾಯಿಲ್ ರವರು ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಗ್ರಾಮ ಆಫೀಸರುಗಳ ನೌಕರಿಯ ಶರತ್ತುಗಳ ಕುರಿತು ಕೆಬಿನೆಟ್ ಸಬ್ ಕಮಿಟಿಯವರಿಂದ ತನಿಖೆ

—ಮದ್ರಾಸ್ ರಾಜ್ಯದ ಗ್ರಾಮ ಆಫೀಸರುಗಳ ಮತ್ತು ನೌಕರರ ನೌಕರಿಯ ಶರತ್ತುಗಳ ಬಗ್ಗೆ ತನಿಖೆ ಮಾಡಿಸಲು ಕೆಬಿನೆಟ್ ಸಬ್ ಕಮಿಟಿಯವರು ಪ್ರಾರಂಭಿಸಿರುವರು ಈ ಹಿಂದೆ ಬೇ ಈ ಕಮಿಟಿಯು ನೇಮಕ ಮಾಡಿಲ್ಪಡುವುದೆಂದು ಪ್ರಕಟಿಸಲ್ಪಟ್ಟಿತು. ಸಂಸ್ಥಾನದಲ್ಲಿಯ ಗ್ರಾಮ ಆಫೀಸುಗಳು ಮತ್ತು ಇತರ ಸರ್ಕಸ್ತು ಸಂಸ್ಥೆಗಳು ಮತ್ತು ಸಾರ್ವಜನಿಕರು, ಗ್ರಾಮ ಆಫೀಸುದಗಳ ಮತ್ತು ನೌಕರರ ನಾಕರಣ ಶರತ್ತುಗಳ ಸಂಬಂಧವಾಗಿ ಮತ್ತು ಗ್ರಾಮಗಳಲ್ಲಿಯ ಎಸ್ಟಾಬ್ಲಿಷ್‌ಮೆಂಟುಗಳ ಕುರಿತು ಅಭಿಪ್ರಾಯಗಳನ್ನು ಕೊಡಿಲು ಅಪೇಕ್ಷಿಸಿದ್ದಲ್ಲಿ ತಮ್ಮ ಅಭಿಪ್ರಾಯಗಳನ್ನು ಬರಪ ಮೂಲಕವಾಗಿ ಇನೇ ನವಂಬರ್ ತಾ. 20 ರೊಳಗಾಗಿ, ಕಾರ್ಯದರ್ಶಿ, ಕೆಬಿನೆಟ್ ಸಬ್ ಕಮಿಟಿ (ಸೀಲ್ಡ್ ಆಫೀಸರ್ಸ್) ರಿವೈನ್ಯೂ ಡಿಪಾರ್ಟ್‌ಮೆಂಟ್, ಹೋರ್ಟ್ ಸೈಂಟ್ ಜೋರ್ಜ್, ಮದ್ರಾಸ್, ಈ ವಿಳಾಸಕ್ಕೆ ಕಳುಹಿಸಿ ಕೊಡಬಹುದು.

ಮದ್ರಾಸು— ಸುದರಾಸಿನ ತ್ಯಾಗರಾಯ ನಗರದ ಪಬಿಲುಲ್ಲಾ ರಸ್ತೆಯಲ್ಲಿರುವ ಒಂದು ಎಕ್ರೆ ಸ್ಥಳದಲ್ಲಿ ಕಟ್ಟಲಿಕ್ಕಿರುವ ಕರ್ನಾಟಕ ಸಂಘದ ಹೊಸಕಟ್ಟಡದ ಶಂಕು ಸ್ಥಾಪನೆಯನ್ನು ಕಳೆದ ತಾ. 30ರಲ್ಲಿ ಡಾ. ಯು. ಕೃಷ್ಣ ರಾಯರು ನೆರವೇರಿಸಿದರು. ಸಂಘದ ಅಧ್ಯಕ್ಷ ಶ್ರೀ ವಿ. ಎನ್. ಕಡಮರು ತಮ್ಮ ಸ್ವಾಗತ ಭಾಷಣದಲ್ಲಿ, ಮದ್ರಾಸ್ ನಗರದಲ್ಲಿ ದಿವಂಗತ ಡಾ. ಯು ರಾಮರಾಯರ ನೇತೃತ್ವದಲ್ಲಿ ಎಷ್ಟೋ ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟ ಕರ್ನಾಟಕ ಸಂಘದ ಚಟುವಟಿಕೆಗಳನ್ನು ನಿವರಿಸಿದರು. ಡಾ. ಯು. ಕೃಷ್ಣರಾಯರು ತಮ್ಮ ಉದ್ಘಾಟನಾ ಭಾಷಣದಲ್ಲಿ ಕರ್ನಾಟಕ ಸಂಘಗಳ ಕಲೆ ಮತ್ತು ಸಾಹಿತ್ಯ ಬೆಳವಣಿಗೆಗಾಗಿ ಶ್ರಮಿಸುವಂತಾಗತೆಂಬ ಹಾರೈಕೆಯಿಂದ ಕಟ್ಟಡ ನಿಧಿಗೆ ರೂ. 1001 ದಾನ ವಿತ್ತರು.

ಬೆಂಗಳೂರು

ಕನ್ನಡ ಏಕಾಂಕ ನಾಟಕ ಸ್ಪರ್ಧೆ– ಕನ್ನಡ ನಾಡಿನ ಸುಪ್ರಸಿದ್ಧ ಸಾಹಿತಿಗಳೂ ನಾಟಕಕಾರರೂ ಆಗಿದ್ದ ಶ್ರೀ ಎಮ್. ಆರ್. ಶ್ರೀನಿವಾಸ ಮೂರ್ತಿಯವರ ಸ್ಮಾರಕಾರ್ಥವಾಗಿ ಕನ್ನಡ ಏಕಾಂಕ ನಾಟಕ ಸ್ಪರ್ಧೆಯನ್ನು ನೇಶನಲ್ ಕಾಲೇಜು ಸಂಘ ಬೆಂಗಳೂರು ಅನರು ಏರ್ಪಡಿಸಿರುವರು. ಈ ಸ್ಪರ್ಧೆಯಲ್ಲಿ ಕರ್ನಾಟಕ ಪ್ರಾಂತದ ಯಾವ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಾಗಲಿ ಭಾಗವಹಿಸಬಹುದು. ಸ್ಪರ್ಧೆಯಲ್ಲಿ ಭಾಗವಹಿಸಲು ಪ್ರವೇಶ ಧನವೇನೂ ಇಲ್ಲ. ಮೊದಲನೆ ಮತ್ತು ದ್ವಿತೀಯ ಬಹುಮಾನಗಳು ರೂಪಾಯಿ 50 ಮತ್ತು 30 ಇರುವುದು. ಡಿಸಂಬರ ತಿಂಗಳ ತಾ. 10ರ ತನಕ ನಾಟಕಗಳನ್ನು ಸ್ವೀಕರಿಸಲಾಗುವುದು. ಹೆಚ್ಚಿನ ವಿವರಗಳಿಗೆ "ಕಾರ್ಯದರ್ಶಿ, ನ್ಯಾಷನಲ್ ಕಾಲೇಜ್ ಸಂಘ, ಬಸವನಗುಡಿ, ಬೆಂಗಳೂರು–4" ಅವರಿಗೆ ಬರೆಯಬಹುದು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. No. 635/52.

ವಾದಿರು— 1. ಸುಬ್ರಾಯ ಕಾರಂತ.
2. ಪರಮೇಶ್ವರ ಕಾರಂತ – ಸ್ವತಃ ಮತ್ತು 1.2ನೇ ಪ್ರತಿವಾದಿರ ಇನ್ನಿತರ ಕ್ರೆಡಿಟರ್ ಕಡೆಯಿಂದ ಕೂಡಾ,

ಮತ್ತು

ಪ್ರತಿವಾದಿರು – 1. ಸದಾಶಿವ ಕಾರಂತ.
2. ಕೃಷ್ಣಪ್ಪ ಕಾರಂತ.
1– 2ನೆ ಪ್ರತಿವಾದಿರ ಕ್ರೆಡಿಟರ್.
1. ವೆಂಕಟರಮಣ ಕಾರಂತ.
2. ಶೇಷಗಿರಿ ಕಾರಂತ.
3. ಅಪ್ಪಣ್ಣ ಕಾರಂತ.
4. ವಾಸುದೇವ ಕಾರಂತ— ನರಸಿಂಹ ಕಾರಂತರ ಮಕ್ಕಳು.

ಕುಂದಾಪುರ ತಾಲ್ಲೂ ಸಣೇರ ಹೋಬಳಿ ಗ್ರಾಮ ಮಡಲ್ಲಿರುವವರು.

ಇವರಿಗೂ 1.2ನೆ ಪ್ರತಿವಾದಿರ ಇನ್ನಿತರ ಕ್ರೆಡಿಟರ್ರಿಗೂ ಈ ಮೂಲಕ ತಿಳಿಸುವದೇನೆಂದರೆ—

ವಾದಿರು ಮಂಗಳೂರು ಸಬ್ಬೋರ್ಡಿನೇಟ್ ಜಡ್ಜ್ ಕೋರ್ಟಿನ R. E. A. 234/51ನೆ ದಾವ್ಯತೆ ಅರ್ಜಿಯ ಮೇಲಾದ ಹುಕುಮನ್ನು ರದ್ದುಪಡಿಸಿ ತಾರೀಕು 29—7—1955ಲ್ಲು ಪ್ರತಿವಾದಿರು ಕೂಡಾ 2ನೆ ಪ್ರತಿವಾದಿಯ ತಂದೆ ದಿ. ನಿತಿ ಬರಕೊಟ್ಟ ಕ್ರಯ ದಸ್ತವೇಜು ಪ್ರತಿವಾದಿರ ಕ್ರೆಡಿಟರಾದ ವಾದಿರಿಗೂ ನ ಪ್ರತಿವಾದಿರ ಇನ್ನಿತರ ಕ್ರೆಡಿಟರಿಗೂ ಜಾರಿಸತಕ್ಕ ಕ್ರಮದಲ್ಲಲ್ಲವೆಂತಲೂ ಸಬ್ ಕೋರ್ಟು O. S. 71/1956ನೆ ದಿಕ್ರಿಯ ಸಾಲಕ್ಕೆ ದಾವಾ ಅಸ್ತಿಗಳು ಜಪ್ತಿ ಏಲಂ ಆಗಲಿಕ್ಕೆ ಯೋಗ್ಯವಾದವುಗಳೆಂತಲೂ ವಗೈರೆ ನಿಷ್ಕರ್ಷೆಗಳನ್ನು ಕೇಳಿ ವಾದಿರು ಸ್ವತಃ ಪ ಪ್ರತಿವಾದಿರ ಇನ್ನಿತರ ಕ್ರೆಡಿಟರ ಕಡೆಯಿಂದ ಕೂಡಾ ಪಾಡಿದ ಸೋಲ್ಟಂಡ ರಾಮೆಯು ಕಾ. 16—11—55ಕ್ಕೆ ತಪ್ಪಿಗೆ ಇಟ್ಟಿರುತ್ತದೆಂತ ಈ ಮೂಲಕ ತಿಳಿಸೋಣ ಗುತ್ತದೆ.

M Ananthaya
Advocate for Plaintiffs.

ನೋಟ್ಸಾ: ಕುಂದಾಪುರ.
ತಾರೀಕು 3—11—1955.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಜೆಲ್ಲೆಗರೆ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದೆ ಸಾಗುತ್ತಿರುವ ಬ್ಯಾಂಕಿಗ ಸಂಸ್ಥೆ.

ನಮ್ಮ ಮೂರು ವರ್ಷದ ವರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಮು ರೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MULKI.

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ಖೈಪ್ತಿ!! ವೈದ್ಯರಿಗೆ ಏಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೋ:– (1) ಉಡುಪಿ (2) ಮುಖ್ಯ ಪಟ್ಟಣಗಳಲ್ಲಿ.

(೧ನೇ ಪುಟದಿಂದ)

ಸಾಧನೆಗೆ ದುಡಿಯಬೇಕೆಂದೇ ಸಮಿತಿಯ ಒತ್ತಾಯ.

ಸಮಿತಿಯು ಕೈಮಗ್ಗದ ಬಟ್ಟೆಗಳ ಉತ್ಪಾದನೆಗೆ ಪ್ರೋತ್ಸಾಹವನ್ನು ನೀಡಲು ನಿರಣಿಗಳ ಉತ್ಪಾದನೆ ಈಗಿನ ೫೦೦ ಕೋಟಿ ಗಜಗಳ ಮಟ್ಟದಲ್ಲಿ ಉಳಿಯಬೇಕೆಂದೂ ಯೋಜನೆಯ ಅವಧಿಯಲ್ಲಿ ಹೆಚ್ಚು ಬೇಕೆನಿಸುವ ೧೫೦ ಕೋಟಿ ಗಜ ಬಟ್ಟೆಯನ್ನು ಕೈಮಗ್ಗಗಳಿಗೆ ತಯಾರಿಸಲು ಬಿಡಬೇಕೆಂದೂ ಬಹುಮತದ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಇದಕ್ಕೆ ಭಿನ್ನಾಭಿಪ್ರಾಯವನ್ನು ಜೋಡಿಸಿದ ಇಬ್ಬರು ಬಟ್ಟೆಯ ಅವಶ್ಯಕತೆಯು ಈಗಿನ ತಲಾ ೧೬ ಗಜದ ಪ್ರಮಾಣಕ್ಕಿಂತ ಯೋಜನೆಯ ಅವಧಿಯಲ್ಲಿ ೫೦ ಗಜಕ್ಕೆ ಏರಬಹುದೆಂದೂ ಈ ದೃಷ್ಟಿಯಿಂದ ೫೫೦ ಕೋಟಿ ಗಜ ಬಟ್ಟೆಯ ಅಗತ್ಯ ಬೀಳುವುದೆಂದೂ ಕೈಮಗ್ಗಗಳು ಇಷ್ಟು ಬಟ್ಟೆಯನ್ನು ತಯಾರಿಸಲಾರವೆಂದೂ ಹೇಳುತ್ತಾರೆ. ಕೈಯಿಂದ ಅಕ್ಕಿಯನ್ನು ಕುಟ್ಟುವುದಕ್ಕೆ ಸಂಬಂಧಿಸಿದ ನಿಘಾಸಿನಂತೆ, ಇನ್ನು ಮುಂದೆ ಜೊಸ ತಾಗಿ ಗಿರಣಿಗಳಿಗೆ ಅನುಮತಿ ನೀಡಲಾಗದು. ಕೈಯಿಂದ ಅಕ್ಕಿ ಕುಟ್ಟಿ ಹೊರೈಸುವುದು ಸಾಧ್ಯವೇ ಇಲ್ಲದಂಥ ಪ್ರಸಂಗದಲ್ಲಿ ಮಾತ್ರ ಈ ನಿರ್ಣಯದಿಂದ ವಿನಾಯಿತಿ ಹೊಂದಬಹುದು. ಹೀಗೆ ಮಾಡಿದರೆ ಯೋಜನೆಯ ಅವಧಿಯಲ್ಲಿ ಹೆಚ್ಚುವರಿ ೬೬ ಲಕ್ಷ ಟನ್ನು ಬತ್ತದ ಬೆಳೆಯನ್ನು ಕುಟ್ಟಿ ಅಕ್ಕಿ ಮಾಡುವ ಕೆಲಸವು ಗಿರಣಿಗಳ ಬಾಯಿಯಿಂದ ರೈತರ ಕೈಗೆ ಬೀಳುತ್ತದೆ. ಸುಮಾರು ೧೦ ಲಕ್ಷ ಜನರಿಗೆ ತಾತ್ಕಾಲಿಕ ಕೆಲಸ ದೊರಕುತ್ತದೆ. ಎಣ್ಣೆಯ ಗಾಣಗಳಿಗೆ ಸಂಗತಿಯಲ್ಲೂ ಹೀಗೆಯೇ ಮಾಡಬಹುದು – ಖಾದ್ಯ ಎಣ್ಣೆಯನ್ನೆಲ್ಲ ಹಳ್ಳಿಯ ಗಾಣಗಳಿಗೆ ತಯಾರಿಸಲು ಬಿಟ್ಟು ಬಿಡುವುದೊಳಿತೆಂದೂ ಗಿರಣಿಗಳಿಗೆ ಹತ್ತಿ ಕಾಳಿನ ಎಣ್ಣೆ ಇತ್ಯಾದಿ ಕೆಲವೇ ಜಾತಿಯ ಎಣ್ಣೆ ತಯಾರಿಸಗೊಡುವುದು ಹಿತಕರವೆಂದೂ ಸಮಿತಿ ತಿಳಿಸಿರುತ್ತದೆ.

ಕರ್ನಾಟಕದ ಜಾನಪದ ಗೀತೆಗಳು

ಶೋಕರಸದಿಂದ ನೀರರಸದ ವರೆಗಿನ ಬೆಳವಣಿಗೆ

ಪಳ್ಳಿಯ ಹಾಡು ಕವಿಯು ಹಾಡುಗಳನ್ನು ರಚಿಸಿ ಶ್ರಾವಕರಿಗೆ ಮನರಂಜನೆ ನೂಡುತ್ತಾನೆ. ಜನರು ಸರಳ ರೀತಿಯ ಲಯಬದ್ಧತೆಯು ಗೀತೆಯೊಂದಕ್ಕೆ ಭಾವೋದ್ರೇಕದಿಂದ ತಲೆದೂಗುತ್ತಾರೆ, ಹರ್ಷೋದ್ಗಾರ ನೂಡುತ್ತಾರೆ, ತಮ್ಮ ಕರವಸ್ತ್ರಗಳನ್ನು ಹಾರಿಸುತ್ತಾರೆ. ಸ್ತ್ರೀಯರು ತಮ್ಮ ಕೆಲಸಗಳನ್ನು ನೂಡುತ್ತಿರುವಾಗಲೇ ಹಾಡಿಕೊಳ್ಳುತ್ತಾರೆ. ಕರ್ನಾಟಕದಲ್ಲಿ ಎಲ್ಲಾ ಕಡೆಯಲ್ಲಿಯೂ ಸಂಧ್ಯಾಕಾಲವು ಗ್ರಾಮ ಕೀರ್ತನೆಯ ಬರವನ್ನು ಮುನ್ಸೂಚಿಸುತ್ತಿದೆ. ಸರ್ವಕರ ಗೀತೆಗಳಿಂದ ರಾತ್ರಿಯು ಜೀವಕಳೆ ತಾಳುತ್ತಿದೆ.

ಸಂಸ್ಕೃತಿಯ ಲಕ್ಷಣ

ಒಂದು ದೇಶದ ಜಾನಪದಗೀತೆಗಳು ಆ ದೇಶದ ಅಮೂಲ್ಯ ಸಂಸ್ಕೃತಿಯ ಭಾಂಡಾರವಾಗಿರುತ್ತವೆ. ಈ ಗೀತೆಗಳ ಗರ್ಭದಲ್ಲಿ ಜನತೆಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಇತಿಹಾಸವು ಅಡಗಿರುತ್ತದೆ. ಜನತೆಯು ಈ ಗೀತೆಗಳನ್ನು, ಅವುಗಳ ಆಸ್ತಿತ್ವಕ್ಕೆ ಸಂಬಂಧಿಸಿದ ವಾಸ್ತು ವಾಂಶ ಮತ್ತು ಸಾರಾಂಶದೊಂದಿಗೆ ನಿರ್ಲಕ್ಷ್ಯ ಭಾವ ತಾಳಿ ಆರಾಧಿಸುತ್ತಿದೆ. ಕರ್ನಾಟಕದಲ್ಲಿ ಮನೋಹರವಾದ, ಸ್ಪೈಷ್ಟ ಪೂರ್ಣವಾದ ಜಾನಪದಗೀತೆಗಳು ಹೇರಳವಾಗಿವೆ. ಈ ಗೀತೆಗಳಲ್ಲಿನ ಹಿಜಸ್ಸು, ಅವುಗಳಲ್ಲಿನ ಗಾನ ಮಾಧುರ್ಯ ಸಂಯಮ ಸಹಿತವಾದ ಆಧ್ಯಾತ್ಮಿಕ ಆಂತರ ಗಂಗೆ ಅವುಗಳಲ್ಲಿನ ಮನಸೆಳೆಯುವಂತಹ ವೈಶಿಷ್ಟ್ಯವೆನ್ನಬಹುದು.

ಈ ಜಾನಪದ ಗೀತೆಗಳಲ್ಲಿನ ವಸ್ತುವು ಅನಾದಿಂ ರವಾದ ಬೋಧನಾ ಪ್ರಧಾನ ತತ್ವದಿಂದ ಹಿಡಿದು ಸಾಮೂಹಿಕವಾದ ಯಕ್ಷಗಾನದವರೆಗೂ ವ್ಯಾಪಿಸಿರುವುದು. ಈ ಗೀತೆಗಳು ಕೆಲವು ವೇಳೆ ಒಡಪಾಗಿಯೂ, ಉತ್ತಮ ಸಾಹಿತ್ಯದ ಗುಣಾಂಶಗಳನ್ನು ಹೊಂದಿರಬೆಯೂ ಇರಬಹುದು. ಆದರೆ ಇವು ಕನ್ನಡ ಜನತೆಯ ಮನೋಧಾನವಾದ-ಬಾಳ್ ಹೋರಾಟದ ಅಂಗೀಕಾರಕ್ಕೆ ನುತ್ತು ಸ್ವಾತಂತ್ರ್ಯ ಪರಿಜ್ಞಾನವನ್ನು ಪ್ರತಿಪಾದಿಸುತ್ತವೆ ಎಂಬುದು ಸುಳ್ಳಲ್ಲ. ಅನೇಕ ವೇಳೆ ಈ ಗೀತೆಗಳಲ್ಲಿ ಅಲ್ಲಲ್ಲಿ ಸಾಹಿತ್ಯದ ಆಣಿ ಮುತ್ತುಗಳೂ ಮೊರೆಯುತ್ತವೆ.

ಆಧ್ಯಾತ್ಮಿಕ ತೇಜಸ್ಸು

ತತ್ವ, ಕಂಸಾರೆಪದ ಮತ್ತು ಮಂತೇ ದೇವರ ಪದಗಳು ಕಾಲ ಪರೀಕ್ಷೆಯಲ್ಲಿ ಉತ್ತೀರ್ಣ ಯಿದೆ ಉಳಿದ ಪರಂಪರಾಗತ ಪದ್ಧತಿಗಳಿಗಿನ ಸಾರವಾಗಿ ಬಾಳಿದ ಜನರ ಆಧ್ಯಾತ್ಮಿಕ ತೇಜಸ್ಸನ್ನು ಚಿತ್ರಿಸುತ್ತವೆ; ಅಂದನ್ನು ಸಾಂಕೇತಿಸುತ್ತವೆ. ತತ್ವಗಳನ್ನು ಸಾಮಾನ್ಯವಾಗಿ ವಿಕಸನಾವೆದೊಂದಿಗೆ ಅಥವಾ ವಿಕಸನಾರವೊಂಗೆ ಒಬ್ಬರು ಅಥವಾ ನೂರು ಜನರು ಗುಂಪಿನಲ್ಲಿ ಹಾಡುತ್ತಾರೆ. ನೂರು ಜನರು ಹಾಡುವಾಗ ಒಬ್ಬನು ನುಂಗಾನಿಯಾಗಿರುತ್ತಾನೆ ತತ್ವಗಳು ಮುಟ್ಟಾನಾಗಿ ಸುಗ್ಗಿಯ ಕಾಲದಲ್ಲಿ ಜನಪ್ರಿಯವಾಗಿರುವುವು. ಈ ತತ್ವಗಳಲ್ಲಿ ಗಹನವಾದ ವಿಚಾರವನ್ನು ಸರಳವಾದ ಮಾತುಗಳಿಂದ ನಿರೂಪಿಸಲಾಗಿರುವುದು

ಕಂಸಾಳೆ ಪದವನ್ನು ಸಾಮಾನ್ಯವಾಗಿ ಆಯಾಯ ಸ್ಥಳದ ತಾಡಿನ ವಾದ್ಯಗಳೊಂದಿಗೆ, ಮೂರು ಮಂದಿ ಒಟ್ಟಿಗೆ ಸೇರಿಕೊಂಡು ಹಾಡುವರು. ಈ ಪದ್ಯಗಳಲ್ಲಿ ವಸ್ತುವು ಪೌರಾಣಿಕವಾಗಿರುವುದು. ಮಂತೇ ದೇವರ ಪದವನ್ನು ಸಾಧಾರಣವಾಗಿ ಇಬ್ಬರು ಕೂಡಿಕೊಂಡು ಹಾಡುವರು ಈ ಪದಗಳಲ್ಲಿ ವಸ್ತುವು ತತ್ವಗಳಲ್ಲಿರುವಂತೆ ಇರಬಹುದು ಆಥವಾ ಕಂಸಾಳೆ ಪದಗಳಲ್ಲಿರುವಂತಾದರೂ ಇರಬಹುದು. ಈ ಪದಗಳನ್ನು ಹಾಡುವುದಕ್ಕೆ ಚಿಕ್ಕ ವೀಣೆ (ತಂತಿಗಳುಳ್ಳ ಚಿಕ್ಕ ವೀಣೆ), ತಾಳ ಮತ್ತು ಕಂಜಿರ ಎಂಬ ಮೂರು ವಾದ್ಯಗಳನ್ನು ಉಪಯೋಗಿಸಲಾಗುತ್ತದೆ.

ರಾಗಿ ಬೀಸುವ ಪದ

ಅನೇಕ ವೇಳೆ ಬರಿಯ ಬಿಸೋ ಪದವೆಂದು ಕರೆಯಲ್ಪಡುವ ರಾಗಿ ಬೀಸುವ ಪದವು ಕರ್ನಾಟಕ ಜಾನಪದ ಗೀತೆಗಳಲ್ಲಿ ಮತ್ತೊಂದು ಮನಾಕರ್ಷಕ ವಿಧವಾಗಿರುವುದು. ಈ ಹಾಡುಗಳನ್ನು ಹೆಂಗಸರು ಬೆಳಗಿನ ಜಾವದಲ್ಲಿ ನುನೆಗಳಲ್ಲಿ ರಾಗಿಯನ್ನು ಬೀಸುವಾಗ ಹಾಡುತ್ತಾರೆ. ಈ ಪದಗಳಲ್ಲಿ ವಸ್ತುವು ಸಾಮಾನ್ಯವಾಗಿ ಸ್ತ್ರೀಧರ್ಮಾ ಪ್ರಧಾನವಾಗಿರುವುದು; ಆಲ್ಲೊಮ್ಮೆ ಇಲ್ಲೊಮ್ಮೆ ಸಾಂಸಾರಿಕ ದೃಷ್ಟಿಕೋನವಿರಬಹುದು; ಗೃಹಿಣಿಯು ನಿರ್ವಹಿಸ ಬೇಕಾದ ಹಲವು ಸಮಸ್ಯೆ ಳೂ ನುನೆಗೆ ಗಂಧ, ಮತ್ತು ಅತ್ತಿಯಸ್ಸು ಕುರಿತ ವಿಷಯಗಳೂ ಅಲ್ಲಲ್ಲಿ ಬಂದಿರಬಹುದು.

ವಿಶಿಷ್ಟ ಹಾಡನ್ನು ರೈತರು ಬೆಳಗಿನ ಜಾವದಲ್ಲಿ ಭಾವಿಯಿಂದ ನೀರನ್ನು ಎತ್ತುವಾಗ ಎತ್ತರಗಳನ್ನು ಹೊಡೆಯುತ್ತ ಹಾಡುತ್ತಾರೆ. ಈ ಹಾಡುಗಳಲ್ಲಿ ಬೇಸಾಯಕ್ಕೆ ಸಂಬಂಧಪಟ್ಟ ವಿವಿಧ ವಿಷಯಗಳನ್ನು ವಸ್ತು ವನ್ನಾಗಿ ಬಳಸಲಾಗಿರುವುದು.

ಜನಪ್ರಿಯ ಲಾವಣಿ

ಲಾವಣಿ ಎಂಬ ಸಾಮಾನ್ಯ ಶೀರ್ಷಿಕೆಯಲ್ಲಿ ಅನೇಕ ನಾಡ ಪದಗಳನ್ನು ಸೇರಿಸಲಾಗಿದೆ. ಈ ನಾಡ ಪದಗಳನ್ನು ಅನೇಕ ವೇಳೆ ವಾಸ್ತವಿಕ ಘಟನೆಗಳನ್ನು ಬಳಸಿಕೊಂಡು ರಚಿಸಲಾಗಿರುವುದು. ಆದರೆ ಅವು ಯಾವಾಗಲೂ ಸುಪತ್ತರ ವಿಷಯಗಳನ್ನೇ ಹೊಂದಿರಬೇಕಾಗಿಲ್ಲ. ಅನೇಕ ವೇಳೆ ಅವುಗಳಲ್ಲಿ ದಿನ ಕಾಯುವವನ ಕತೆ ಮಾತ್ರವೇ ಇರಬಹುದು.

ನಾಡಪದಗಳಲ್ಲಿ ಲಾವಣಿಯೇ ಅತ್ಯಂತ ಜನಪ್ರಿಯವಾಗಿರುವುದು. ಇದು ಅತ್ಯಂತ ಪ್ರಾಚೀನವಾದ ಪ್ರಜಾರಾ ಸಾಧನವಾಗಿರುವುದು. ಲಾವಣಿ ಹಾಡುವನರು, ಪೌರಾಣಿಕ, ಪುರಾಕಾವ್ಯ, ಇತಿಹಾಸ ಮತ್ತು ಆನಂದಿನದ ಘಟನೆಗಳಿಂದ ವಸ್ತುಗಳನ್ನು ಆರಿಸಿಕೊಂಡು ಲಾವಣಿಗಳನ್ನು ಕಟ್ಟುವರು. ತಮಟೆಯ (ಚರ್ಮವಾದ್ಯ) ಸಹಾಯದಿಂದ ಅದನ್ನು ಹಾಡುತ್ತಾರೆ; ಲಾವಣಿ ಹಾಡುವವರಲ್ಲಿ ಎರಡು ವಿಧ ಒಂದು ಸಂಗಡದವರು (ಗಕ್ಕಿ) ಪೂಜಕರು, ಮತ್ತೊಂದು ಸಂಗಡವವರು ಪುರುಷನನ್ನು ಆರಾಧಿಸುವರು.

ಲಂಬಾಣಿ ಹಾಡು

ಲಂಬಾಣಿ ನುತ್ತು ಸೋಲಿಗರ ಹಾಡುಗಳಲ್ಲಿ ಅತ್ಯುತ್ತಮ ಜಾನಪದ ಗೀತಗಳನೇಕವು ಕಂಡು ಬಂದಿವೆ. ಲಂಬಾಣಿಗಳ ಪದಗಳಲ್ಲಿ ಗುಜರಾತಿನ ಗಾರ್ಬ ಮತ್ತು ಉತ್ತರ ಪ್ರದೇಶದ ಪುರಾಭಿ ಸಂಗೀತದ ಮಧುರ ಮಿಲನ ವಿರುವುದೆಂಬ ಭಾವನೆ ಬರುವುದು. ಜೀವನದ ಎಲ್ಲಾ ವಿಷಯಗಳನ್ನು ಕುರಿತು ಅವರಿ ಪದಗಳಿರುವುವು. ಲಂಬಾಣಿಯ ಮಗುವನ್ನು ಸಂಗೀತದೊಂದಿಗೆ ಸ್ವಾಗತಿಸುತ್ತಾರೆ. ಆ ಮಗು ಹಾಡುತ್ತಾ ಕುಣಿಯುತ್ತಾ ಬೆಳೆದು ಜೀವನವನ್ನು ಕಳೆಯುತ್ತದೆ. ಕಣ್ಣೀರಿನಿಂದ ಸಿಂಚಿತವಾದಂತಹ ಹಾಡುಗಳೊಂದಿಗೆ ಆದು ಗೋರಿಯೊಳಕ್ಕೆ ಹೋಗುತ್ತದೆ. ಲಂಬಾಣಿ ಪದಗಳು ಗುಜರಾತ್ ಮತ್ತು ರಾಜಾಸ್ಥಾನದ ಜಾನಪದಗಳೊಂದಿಗೆ ಕೆಲವಂಕ ಗಳಲ್ಲಿ ಹೋಲುತ್ತವೆ. ಆದರೆ ವಸ್ತುಗಳಲ್ಲಿಯೂ ಧಾಟಿಗಳಲ್ಲಿಯೂ ಕರ್ನಾಟಕದ ಪ್ರಭಾವ ಕಂಡು ಬರುತ್ತದೆ.

ಸೋಲಿಗರ ಸಂಗೀತ

ಸೋಲಿಗರಸಂಗೀತ ಶೋಕರಸದಿಂದ ಕೂಡಿರುತ್ತದೆ. ಸೋಲಿಗರು ಕಸ್ಟದ ದಿನಗಳನ್ನು ಆಂದರಲ್ಲಿ ತಮ್ಮ ವಸತಿಯಾದ ಅರಣ್ಯಗಳ ಕ್ಷೇತ್ರ ಸಂತತವಾಗಿ ಕಿರಿಮೆಯಾಗುತ್ತಾ ಹೋಗುವುದೆಂಬುದರ ಅರಿವು ಅವರಿಗಿರುವುದು. ಅವರ ಜೀವನವೇ ಕಸ್ಟಮಯವಾದುದು ಅವರು ಯಾವಾಗಲೂ ಹಸಾಮಾನ ಮತ್ತು ಕಾಡಿನಲ್ಲಿ ಎದುರಾಗುವ ವಿಶೂಲ ಕಂಟಕಗಳೊಂದಿಗೆ ಹೋರಾಡಬೇಕು. ಅವರ ಹಾಡುಗಳು ಉದ್ವೇಗ ಪೂರ್ಣವಾಗಿರುವುವು. ಉತ್ತರ ಸ್ಥಾಯಿಯಲ್ಲಿ ಕರ್ಕಶ ಧ್ವನಿಯಲ್ಲಿರುವುವೆ. ಅವರ ಹಾಡುಗಳಲ್ಲಿರುವ ನಿಧಾನ ಪ್ರಾಸ ಮತ್ತು ಲಯಗಳು ಶೋಕಮಯ ವಾತಾವರಣವನ್ನು ಕಲ್ಪಿಸುವುವು.

ವೀರೋಚಿತ ಸಂಗೀತ

ಕೊಡಗಿನ ಜಾನಪದ ಸಂಗೀತ ಅವುಗಳಲ್ಲಿರುವ ವೀರ ರಸಕ್ಕೆ ಪ್ರಾಧಾನ್ಯ ಪಡೆದಿದೆ. ಬೇಕಿ ಮತ್ತು ಕತ್ತಿಯ ವಿಷಮ ಪರಿಸ್ಥಿಯ ಮೂಲಕ ಹಾಡುಹೋ ಬೇಕಾಗಿದ್ದ ಈ ಜನರು ತಮ್ಮ ಕೌರ್ಯ ಪರಾಕ್ರಮ ಮತ್ತು ಉತ್ತಮ ಸಾಸ್ಕೃತಿಕ ಹಿಜ್ಞಿನ ಭಾಗವನ್ನು ಕಾಪಾಡಿಕೊಂಡು ಬರುವುದರಲ್ಲಿಯಶಸ್ವಿಯಾಗಿದ್ದಾರೆ ಆವರ ಈ ಗಾನ ಆವರ ಜಾನಪದ ಗೀತೆಗಳಲ್ಲಿ ಯಥೇಚ್ಛವಾಗಿ ಕಂಡು ಬರುತ್ತದೆ.

ಕೊಡಗಿನ ಜಾನಪದ ಗೀತೆಗಳು ಬಹು ಜೀವಕಳೆಯಿಂದಿಗೆ ಮಿಲನ ಗೊಂಡಿರುತ್ತವೆ. ಶಬ್ದಗಳೂ ಭಾವಗಳೂ ನರ್ತಕರ ಭಾವನೆಗಳನ್ನೆನ್ನು ನಿಖರವಾಗಿ ತಿಳಿಸುತ್ತವೆ. ಅವರು ಹೆಚ್ಚಾಗಿ "ದೇವ" ಭಗವಾನ್ ಶಿವ ಮತ್ತು ಅವರಿಗೆ "ನೂತೆ" ಯೆನಿಸಿದ ಕೊಡಗಿನ ಧಾತ್ರವಾದ ಕಾವೇರಿಯನ್ನು ಕುರಿತು ಹಾಡುತ್ತಾರೆ. ಕೋಲಾಟ, ಮತ್ತ ನೃತ್ಯ, ಸಮರ ನೃತ್ಯ ಮತ್ತು ಸುಗ್ಗಿಯ ಕುಣಿತ ಮುಂತಾದ ಕೆಲವು ಹಾಡುಗಳು, ಸರಳವಾದ ದೈಹಿಕ ಕಾಯರಾದ ಜನರ ಜೀವನದ ಅದ್ಭುತ ಅಂತರ್ಯಗಳನ್ನು ತೋರುವುವು.

ಯಕ್ಷಗಾನ

ಸಂಗೀತ, ನೃತ್ಯ, ನಾಟಕ ಇವಿಷ್ಟೂ ಅಂಶಗಳ ಮಿಲನವಿರುವ ಯಕ್ಷಗಾನವು ಭಾರತದ ಜಾನಪದದ ಸರಿಸಾಟಿಲ್ಲದ ಇತ್ತೀರುವೆ ವಿಶಿಷ್ಟ ಕಾಣಿಕೆ. ಅದನ್ನು ಗ್ರಾಮಾಂತರ ಗೀತಾ ನೃತ್ಯ ನಾಟಕವೆನ್ನಬಹುದು. ಯಕ್ಷಗಾನವು ಅಧುನಿಕ ರಂಗ ಸಜ್ಜಿಕೆಯಿಲ್ಲದೆಯೂ ಸಂಗೀತ ಮತ್ತು ನೃತ್ಯನನ್ನೊಳಗೊಂಡು ಆಯಿತ ಆಟ. ಅಲ್ಲಿ ಕೊಡುವ ವಿವರಣೆಯು ನುಮ್ಮ ಕತೆಗೆ ಟಿಸ್ಸನಿಯಂತೆ ಉಪಯೋಗವಾಗುವುದು. ಯಕ್ಷಗಾನದಲ್ಲಿ ಪಾತ್ರಧಾರಿಸುವ ಪರಿಲ್ಲಿ ಪುರುಷರು — ಇದರಲ್ಲಿ ವಸ್ತ್ರಾಲಂಕಾರಕ್ಕೆ ಪ್ರಾಮುಖ್ಯತೆ ಪ್ರಾಧಾನ್ಯತೆಯಲಾಗುವುದು. ಯಕ್ಷಗಾನಗಳ ಕಥಾವಸ್ತುಗಳನ್ನು ಮಹಾಕಾವ್ಯ, ಪುರಾಣ ಮತ್ತು ಇತಿಹಾಸಗಳಿಂದ ಆಯ್ದು ಕೊಳ್ಳಲಾಗಿರುವುದು. ಯಕ್ಷಗಾನ ಕಲಾವಿದರಿಗೆ ರಾಮಾಯಣ ಮಹಾ ಭಾರತ ಮತ್ತು ಭಾಗವತಗಳು ಅತ್ಯುತ್ತಮ ಫಲಪ್ರದವಾದ ಸೂಕ್ತಿಯ ಆಕರ. ಈ ಜಾನಪದ ನಾಟಕಗಳನ್ನು ಬಯಲಿನಲ್ಲಿ ಆಡಲಾಗುವುದು. ಬೆಳಗಿನ ಜಾವೆದವರೆಗೂ ಇದು ನಡೆಯುವುದು.

ಕರ್ನಾಟಕದ ಜಾನಪದ ಗೀತೆಗಳ ಪರಂಪರೆಯ ಸಂಪತ್ತು ಮತ್ತು ವೈಶಿಷ್ಟ್ಯವನ್ನು ಸಿವರವಾಗಿ ಇಂತಹ ವಿಷಯಗಳು ಸಮಿಕ್ಷೆಯಲ್ಲಿ ವಿವೇಚಿಸಲು ಸಾಧ್ಯವಿಲ್ಲ. ಆದರೆ ಗಾಡಿಪದ, ಲಾವಣಿ, ಕೋಲಾಟ, ತ್ರಿಪದಿಗಳು, ಚತುಷ್ಪದಿಗಳು ಇವುಗಳನ್ನು ಉಲ್ಲೇಖಿಸದೆ ಈ ಸಮಿಕ್ಷೆ ಪೂರ್ಣವಾಗುವುದಿಲ್ಲ. ಗಾಡಿಪದಗಳಲ್ಲಿ ವಿಕಾಂಗಿಯಾಗಿ ಪ್ರವಾಸ ನೂಡುವ ಪ್ರಯಾಣಿಕನಿಗೆ ಸಂಭವಿಸಬಹುದಾದ ತೊಂದರೆಗಳನ್ನು ಪ್ರತಿಪಾದಿಸಲಾಗಿರುವುದು. ಲಾವಣಿ ಪದಗಳಲ್ಲಿ ಜಾನಪದ ಮನುತಾಮಯ ಭಾವವ್ಯಕ್ತವಾಗುವುದು.

ಕೋಲಾಟದ ಪದ

ಕೋಲಾಟದ ಪದಗಳನ್ನು ಮುಖ್ಯವಾಗಿ ಸುಗ್ಗಿಯ ಕುಣಿತದ ಅಂಗವಾಗಿ ಹಾಡಲಾಗುವುದು. ಈ ನಗರದಲ್ಲಿ ತೋರಿ ಬರುವ ಭಿನ್ನ ತೆಯೊಂದರಿಂದಲೇ ಕರ್ನಾಟಕದ ಜಾನಪದ ಸಂಗೀತದ ಆಪಾರ ವೈವಿಧ್ಯ ನುತ್ತು ವಿಷಯ ವ್ಯಾಪ್ತಿಯನ್ನು ಅಳೆಯಬಹುದು.

ಭಕ್ತಿ ಗೀತೆ ಳು ನುತ್ತು ಮಾನವ ಜೀವನ ರಂಗದ ಪ್ರತಿಯೊಂದು ಅಂಶವನ್ನೂ ಸ್ಪೃಶಿಸುವ ಗೀತೆಗಳು ಕರ್ನಾಟಕದ ಜಾನಪದ ಸಂಗೀತದಲ್ಲಿವೆ. ಕನ್ನಡ ಜನತೆಯ ಜಾನಪದ ಸಂಗೀತವನ್ನು ಜೀವನದಷ್ಟೆ ಸಂಪದ್ಭರಿತವನ್ನಾಗಿಯೂ ರಸಮಯವನ್ನಾಗಿಯೂ ನಮಾಡಿವೆ. ತ್ರಿಪದಿ ಮತ್ತು ಚತುಷ್ಪದಿಗಳನ್ನು ದಸರ ಹಬ್ಬಗಳಲ್ಲಿ ಹಾಡುತ್ತಾರೆ. ದಸರೆಯಲ್ಲಿ ಜನರು ಸುಹಾಸುರ ಮರ್ದಿನಿಯಾದ ಚಾಮುಂಡಿಯನ್ನು ಭಕ್ತಿಯಿಂದ ಹಾಡುತ್ತಾ ಪೂಜಿಸುತ್ತಾರೆ.

ಈ ಗಾನ ಸೂಧಾರ್ಯವನ್ನು ಸೃಜಿಸುವ ಕರ್ನಾಟಕದ ರಾಗಗಳೇನು ಬಹಳವಿಲ್ಲ. ಯದುಕುಲ ಕಾಂಭೋಜಿ, ಆನಂದ ಭೈರವಿ, ನೌರೋಜು, ಮೋಹನ, ಮುಖಾರಿ, ನೌರಾಷ್ಟ್ರ, ಶಂಕರಾಭರಣ, ನಾಸಿ ನಾಮಕ್ರಿಯೆ ಇತ್ಯಾದಿ ರಾಗಗಳನ್ನು ಸಾಪೇಕ್ಷವಾಗಿ ಇವುಗಳಲ್ಲಿ ಗುರುತಿಸಬಹುದು.

ನೀಲ ಗಿರಿ ಮತ್ತು ಅನಾಮಲೆಯ ಉತ್ತಮ ಟೀ

ಸುವಾಸನೆಯುಳ್ಳವಾಗಿದ್ದು
ಮನೋಲ್ಲಾಸ ಯುಕ್ತವಾದುದು.
ಪ್ರಾಮಾಣಿಕ ರಬಂ ವ್ಯಾಪಾರಿಗಳು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು. ಪತ್ರ ವ್ಯವಹಾರ ಇಂಗ್ಲಿಷಿನಲ್ಲಿ.

Post Box No 233.
Coimbatore.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 416/1955.

ಉಡ್ಡಿ ಶ್ರೀಕೃಷ್ಣ ದೇವರು (ಯಕ್ಷಸ್ಕೂಟಿನ್ ಆಫೀಸರ್) ಕೆ. ಗುರುರಾಜ ರಾವ್, ವಾದಿರು.

ಮತ್ತು

1. ದಾಸಾಚಾರ್ಯ. 2. ಗೌರಮ್ಮ.
3. ಕಮಲಮ್ಮ. 4. ಪದ್ಮಾವತಿ ಅಮ್ಮ.

ಪ್ರತಿವಾದಿರು.

ಇವರೊಳಗೆ—

ಮೇಲ್ಕಂಡ ವ್ಯಾಜ್ಯವು ಪ್ರತಿವಾದಿರಿಂದ ವಾದಿ ಭೂಜಾರಿಕ್ಕೆ ಬರತಕ್ಕ ಕೊಡುವಿಕೆ ಬಗ್ಗೆ ಮಾಡಿದ್ದು ಸದ್ರಿ ವ್ಯಾಜ್ಯದಲ್ಲಿ ತೀರ್ಪು ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾ. 18—11—55ಕ್ಕೆ ಯಿಟ್ಟಿರುವುದರಿಂದ ಸದ್ರಿ ತೀರ್ಪು ಪ್ರತಿವಾದಿಯು ಆಕ್ಷೇಪಿಸಿ ಹೇಳುವದನ್ನು ಆ ದಿನ ಸದ್ರಿ ಕೋರ್ಟು ಮುಂದೆ ದಾಖಲಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao
Vakil for Plaintiff.

Udipi: Date 1—11—55.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಪದತಪ್ಪಿದ ಮತ್ತು ನಿಂತುಹೋದ ಮುಟ್ಟು ಮೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. ೫/- ಸ್ಪೆಶಲ್ ರೂ.8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಥಾನಿಕರು: ಶಹಾಕಂಪೆನಿ, ಮಂಗಳೂರು

1956ರ ಏಪ್ರಿಲ್ 1ರ ನಂತರ 1958ರ ಏಪ್ರಿಲ್ 1ರ ವರೆಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಪಾನನಿರೋಧ ಸಮಿತಿಯು ಸೂಚಿಸಿದೆ:—

1, ನಗರೆ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿರುವ ಮದ್ಯದ ಅಂಗಡಿಗಳ ಸಂಖ್ಯೆಯನ್ನು ಕ್ರಮೇಣ ಕಡಿಮೆಗೊಳಿಸಬೇಕು.

2, ವಾರದ ಹೆಚ್ಚು ದಿನಗಳಲ್ಲಿ ಮದ್ಯದ ಅಂಗಡಿಗಳು ಮುಚ್ಚಿರಬೇಕು.

3, ಈ ಮದ್ಯದ ಅಂಗಡಿಗಳಿಗೆ ಮದ್ಯದ ಹೂಡಿಕೆಯ ಪ್ರಮಾಣವನ್ನು ಸೂಕ್ತವಾಗಿ ಕಡಿಮೆಮಾಡಬೇಕು.

4, ಭಾರತದಲ್ಲಿರುವ ಭಟ್ಟಿ ಇಳಿಸುವ ಕೇಂದ್ರಗಳಲ್ಲಿ ಭಟ್ಟಿ ಇಳಿಸುವ ಮದ್ಯದ ಪ್ರಮಾಣವನ್ನು ಕಡಿಮೆ ಗೊಳಿಸಬೇಕು.

5, ಕೈಗಾರಿಕಾ ಕ್ಷೇತ್ರಗಳು, ಮತ್ತು ಯೋಜನಾ ಕ್ಷೇತ್ರಗಳಲ್ಲಿರುವ ಹಾಗೂ ಅವುಗಳಿಗೆ ಹತ್ತಿರದಲ್ಲಿರುವ ಮದ್ಯದ ಅಂಗಡಿಗಳನ್ನು ಮುಚ್ಚಬೇಕು.

6, ಗ್ರಾಮ ಮತ್ತು ನಗರಗಳಲ್ಲಿ ಜನರು ವಾಸವಾಗಿರುವ ಪ್ರದೇಶಗಳಲ್ಲಿರುವ ಮದ್ಯದ ಅಂಗಡಿಗಳನ್ನು ದೂರಕ್ಕೆ ಸಾಗಿಸಬೇಕು. ದೊಡ್ಡ ದೊಡ್ಡ ನಗರಗಳಲ್ಲಿ ಮದ್ಯದ ಅಂಗಡಿಗಳನ್ನು ಕೆಡಿಯುತ್ತಿರುವುದು ದಾರಿಯಲ್ಲಿ ಹೋಗುತ್ತಿರುವವರಿಗೆ ಕಾಣುವಂಥ ಪ್ರಧಾನ ರಸ್ತೆಗಳಲ್ಲಿರಲು ಅವಕಾಶವಿರದಿದ್ದಾರದು.

ಸೈನ್ಯಕ್ಕೂ ಅನ್ವಯ

ಭಾರತದ ಸೇನೆಯಲ್ಲಿ ಪಾನನಿರೋಧವನ್ನು ಕುರಿತು ಶಿಫಾರಸು ನೀಡುತ್ತ: ಸೈನ್ಯ ಶಾಖೆಯನ್ನು ರಾಷ್ಟ್ರೀಯ ಪಾನನಿರೋಧ ಕಾರ್ಯನೀತಿಗೆ ಬದ್ಧರಾಗಿರಲು ಇಚ್ಛೆಗಟ್ಟಿರುವರೆಂದೂ ಅವರಿಗೆ ವಿಶೇಷರೀತಿಯ ಸೌಲಭ್ಯವನ್ನೇನೂ ಒಪಗಿಸುವ ಅಗತ್ಯವಿಲ್ಲವೆಂದೂ ಸಮಿತಿಯು ತಿಳಿಸಿದೆ.

ಗುಡ್ಡಗಾಡಿನ ಜನರ ಬಗೆಗೆ ಪ್ರಸ್ತಾಪಿಸುತ್ತ ಈ ಸಮಿತಿಯು, ಈಶಾನ್ಯ ಭಾರತ, ಸಿಮ್ಲಾ ಪುರ, ಮತ್ತು ತ್ರಿಪುರೆಗಳನ್ನುಳಿದು ಉಳಿದ ಭಾಗಗಳೆಲ್ಲಾ ಪಾನನಿರೋಧ ಕಾನೂನು ಜಾರಿಗೆ ಬರಬೇಕು. ಆದರೆ ಅನುಷ್ಠಾನವನ್ನು ಮುಖ್ಯವಾಗಿ ಶಿಕ್ಷಣದ ಮೂಲಕ ಕೈಗೊಳ್ಳಬೇಕು. ಈಶಾನ್ಯ ಭಾರತ, ಮಣಿಪುರ, ಮತ್ತು ತ್ರಿಪುರಗಳಲ್ಲಿ ಪಾನನಿರೋಧವನ್ನು ಜಾರಿಗೆ ತರುವ ಮುನ್ನ ಅಲ್ಲಿನ ಸಮಸ್ಯೆಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಬೇಕು.

ವಿದೇಶೀ ರಾಯಭಾರ ಕಛೇರಿಗಳನ್ನು ಪ್ರಸ್ತಾಪಿಸುತ್ತ ಈ ಕಛೇರಿಗಳು ರಾಷ್ಟ್ರೀಯ ನಿಲುವಿನ ವಿಷಯವನ್ನು ಮನಗಂಡಿರುವುದೆಂದೂ, ಭಾರತೀಯ ಅತಿಥಿಗಳನ್ನು ಆಹ್ವಾನಿಸುವ ಸಾರ್ವಜನಿಕ ಸತ್ಕಾರ ಕೂಟಗಳಲ್ಲಿ ಮದ್ಯವನ್ನು ಇವು ಕೊಡುವುದಿಲ್ಲವೆಂದು ಆಶಿಸಲಾಗಿದೆಯೆಂದೂ ಸಮಿತಿ ತಿಳಿಸಿದೆ.

ಹೊಸದಾಗಿ ಭಾರತಕ್ಕೆ ಸೇರಿಕೊಂಡ ಪಾಂಡಿಚೇರಿಯಂತಹ ಪ್ರದೇಶಗಳಲ್ಲಿಯೂ ಪಾನನಿರೋಧ ಕಾರ್ಯಕ್ರಮವನ್ನು ಆದರಣೆಗೆ ತರಬೇಕೆಂದು ಈ ಸಮಿತಿ ಸಲಹೆಮಾಡಿದೆ.

ಪರ್ಮಿಟು ನೀಡಲಾಗದು

ಈ ಸಮಿತಿಯು ನಿರ್ದೇಶಿಸುವ ಪೂರ್ಣಪಾನನಿರೋಧ ಯೋಜನೆಯ ಪ್ರಕಾರ, ಅಲೋಗ್ಯದ ನೆಪವೊತ್ತಿದ ಮೇಲೆ ಯಾವ, 'ಪರ್ಮಿಟ್' ಗಳನ್ನೂ ಕೊಡಲಾಗುವುದಿಲ್ಲ. ಇಂತಹ 'ಪರ್ಮಿಟ್' ಗಳನ್ನೂ ಕೊಡುವುದು ಪಾನನಿರೋಧವಿರುವ ಕ್ಷೇತ್ರಗಳಲ್ಲಿ 1958ರ ಏಪ್ರಿಲ್ 1ರಿಂದ ಸಾವಮಾನ್ಯವಾಗಿ ನಿಂತುಹೋಗಬೇಕೆಂದು ಈ ಸಮಿತಿ ಸೂಚಿಸಿದೆ. ಈ ಇಮ್ಮೈ 'ಪರ್ಮಿಟ್'ಗಳನ್ನು ಪಡೆದಿರುವವರ ಸಂಖ್ಯೆಯನ್ನೂ ಅವರಿಗೆ ಕೊಡುತ್ತಿರುವ ಮದ್ಯದ ಪ್ರಮಾಣವನ್ನು ಕಡಿಮೆ ಮಾಡಬೇಕೆಂದೂ ಈ ಸಮಿತಿ ಶಿಫಾರಸುಮಾಡಿದೆ. ಅಪಾರ್ಟ್ಮೆಂಟ್ ಭಾರತದಲ್ಲಿರುವ ವಿದೇಶಿ ಪ್ರವಾಸಿಗಳು, ಪ್ರೌಢ್ಯಕರುಮತ್ತು ವಿದೇಶೀ ರೈಯಸ್ಥರೆ ಮತ್ತು ಧಾರ್ಮಿಕ ಕರ್ಮ ನೂಡುವವರಿಗೆ ವಿಶೇಷ ಪರ್ಮಿಟ್ಗಳನ್ನು ಕೊಡಬಯಸಬೇಕೆಂದೂ ಸಮಿತಿ ತಿಳಿಸಿದೆ. ವೈದ್ಯಕೀಯ ಚಿಕಿತ್ಸೆಗಳಿಗಾಗಿ ಸ್ವಲ್ಪ ಪ್ರಮಾಣದ ಮದ್ಯ ಮತ್ತು ಅಫೀಮುಗಳನ್ನು ಉತ್ಪಾದಕರಿಗೆ ಕೊಡಬಯಸಬಹುದು; ಆದಕ್ಕಾಗಿ ಒಂದು ಬೋರ್ಡನ್ನು ರಾಜ್ಯ ಹಾಗೂ ಕೇಂದ್ರ ಮಟ್ಟಗಳಲ್ಲಿ ರಚಿಸಬೇಕು—ಎಂದು ಸಮಿತಿ ತಿಳಿಸಿದೆ.

ಕೈಗಾರಿಕೆಗಳಿಗೆ ಉಪಯೋಗಿಸುವ ಮದ್ಯವನ್ನು (ಅಲ್ಕೋಹಾಲ್ ಪಾನಕ್ಕೆ ಯೋಗ್ಯವಾಗಿರದಂತೆ ತಯಾರಿಸಬೇಕು ಎಂದಿದೆ.

ಸಮನ್ವಯ ದೃಷ್ಟಿ

ಪಾನನಿರೋಧ ಕಾರ್ಯಕ್ರಮದ ಅನುಷ್ಠಾನದ ಧೋರಣೆಯ ಸ್ಥೂಲಾಂಶಗಳನ್ನು ಸಮಿತಿ ಸೂಚಿಸಿದೆ. ಪಾನನಿರೋಧ ನೀತಿಯ ಅನುಷ್ಠಾನದಲ್ಲಿ ರೀತಿ ಮತ್ತು ವಿಧಾನಕ್ಕೆ ಈ ಸಮಿತಿ ಹೆಚ್ಚಿನ ಮಹತ್ವವಿತ್ತಿದೆ. ಇದು ಯಶಸ್ವಿಯಾದ, ಪರಿಣಾಮಕಾರಿಯಾದ ಸಾರ್ವಜನಿಕ ಸಹಕಾರವನ್ನು ಗಳಿಸಬೇಕೆಂದೂ, ಆಡಳಿತಾಧಿಕಾರಿಗಳು, ಕಾನೂನು ಮತ್ತು ಸಾರ್ವಜನಿಕ ಮುಖಂಡರು ಇವರ ನಡುವೆ ಈ ನೀತಿಯ ಬಗ್ಗೆ ನಿಕಟವಾದ ಸಮನ್ವಯ ದೃಷ್ಟಿಯಿರಬೇಕೆಂದು ಈ ಸಮಿತಿ ಸೂಚಿಸಿದೆ.

ಎರಡು ನಿರ್ದಿಷ್ಟ ಮಾರ್ಗಗಳಲ್ಲಿ ಪಾನನಿರೋಧದ ಅನುಷ್ಠಾನವನ್ನು ಕೊಂಡೊಯ್ಯಬೇಕೆಂದು ಈ ಸಮಿತಿ ಅಭಿಪ್ರಾಯ ಪಟ್ಟಿದೆ. 1, ಶಿಕ್ಷಣ ಮತ್ತು ನಿರೋಧ, 2, ಕಾನೂನು ಮತ್ತು ಆಡಳಿತ. ಈ ಎರಡು ಹಾದಿಯಲ್ಲಿ ನಡೆಯುವ ಕೆಲಸಗಳ ನಡುವೆ ಸಮನ್ವಯವಿರಬೇಕೆಂದು ಸಮಿತಿ ಅಭಿಪ್ರಾಯ ಪಟ್ಟಿದೆ. ಆ ದಕ್ಕಾಗಿ ಪ್ರತಿಯೊಂದು ರಾಜ್ಯದಲ್ಲಿಯೂ 'ಪಾನನಿರೋಧ ಆಡಳಿತಗಾರರೊಬ್ಬರನ್ನು ನೇಮಿಸಬೇಕೆಂದು ಸಮಿತಿ ಶಿಫಾರಸುಮಾಡಿದೆ. ರಾಜ್ಯಗಳ ಮಟ್ಟದಲ್ಲಿ ಪಾನನಿರೋಧ ಬೋರ್ಡು ಸ್ಥಾಪನೆಯಾಗಬೇಕು; ಆದರಲ್ಲಿ ಆಡಳಿತ ವಿಭಾಗದ ಎರಡು ಶಾಖೆಯ ಪ್ರತಿನಿಧಿಗಳೂ, ಸಾರ್ವಜನಿಕರ ಪ್ರತಿನಿಧಿಗಳು ಇರಬೇಕು. ಜಿಲ್ಲಾ ಮತ್ತು ಗ್ರಾಮ ಮತ್ತು ಪೊಲಲ್ಲಾ ಮಟ್ಟದಲ್ಲಿಯೂ ಪಾನನಿರೋಧ ಸಮಿತಿಗಳನ್ನು ಸ್ಥಾಪಿಸಬೇಕು—ಎಂದು ಈ ಸಮಿತಿಯು ಶಿಫಾರಸುಮಾಡಿದೆ. ಮಹಿಳಾ ಸಂಸ್ಥೆಗಳು ಮತ್ತು ಕಾರ್ಮಿಕ ಸಂಘಗಳು ಪಾನನಿರೋಧವನ್ನು ಆಚರಣೆಗೆ ತರುವ ವಿಷಯದಲ್ಲಿ ಪೂರ್ಣ ಸಹಕಾರವನ್ನು ನೀಡಬೇಕೆಂದು ಸಮಿತಿಯು ತನ್ನ ವರದಿಯಲ್ಲಿ ವಿಶೇಷ ಮನವಿಯನ್ನು ಮಾಡಿಕೊಂಡಿದೆ.

ಪೋಲೀಸರ ಕೆಲಸ

ಪಾನನಿರೋಧ ಕಾರ್ಯಕ್ರಮದ ಆಡಳಿತೆಯ ಆಡಳಿತವನ್ನು ಪೋಲೀಸ್ ಶಾಖೆಯವರೇ ನಡೆಸಬೇಕು. ಅದಕ್ಕಾಗಿ ನುರಿತ ಕೆಲಸಗಾರರ ವಿಶೇಷ ವಿಭಾಗವನ್ನು ರಚಿಸಬೇಕು. ಅಕ್ರಮ ಸರಾಯಿ ಭಟ್ಟಿ ಇತ್ಯಾದಿಗಳನ್ನು ಪತ್ತೆ ಹಚ್ಚುವುದಕ್ಕಾಗಿ ವಿಶಿಷ್ಟ ವರ್ಗವನ್ನು ನೇಮಿಸಬೇಕು—ಎಂದು ಸಮಿತಿಯು ಶಿಫಾರಸು ಮಾಡಿದೆ.

ಕಾನೂನಿನ ಬಗೆಗೆ ಈ ಸಮಿತಿಯು, ಅನೇಕ ಸೆಲಹೆಗಳನ್ನು ನೀಡಿ ಪಾನನಿರೋಧದ ಬಗೆಗೆ ಇರುವ ಕಾನೂನುಗಳನ್ನು ಬಲಪಡಿಸಬೇಕೆಂದು ಸೂಚಿಸಿದೆ.

ಭಾರತದಲ್ಲೆಲ್ಲ ಮದ್ಯಪಾನ ಪ್ರತಿಬಂಧ

ಶ್ರೀಮನ್ನಾರಾಯಣ ಸಮಿತಿಯ ಶಿಫಾರಸುಗಳ ಸಂಗ್ರಹ

ಮದ್ಯಗಳಲ್ಲಿ ರಚಿಸಬೇಕು—ಎಂದು ಸಮಿತಿ ತಿಳಿಸಿದೆ.

ಮದ್ಯ ಮತ್ತು ಹಾನಿಕರ ಔಷಧಿಗಳ ಸೇವನೆಯ ವಿರುದ್ಧ ಸತತವಾದ ಹಾಗೂ ವ್ಯವಸ್ಥಿತವಾದ ಶೈಕ್ಷಣಿಕ ಪ್ರಚಾರವಿರಬೇಕೆಂಬ ಅಂಶವನ್ನು ಈ ಸಮಿತಿ ಒತ್ತಿ ಹೇಳಿದೆ. ಈ ಸಂಬಂಧದ ಸಾರ್ವಜನಿಕ ಶಿಕ್ಷಣದಲ್ಲಿ ಪತ್ರಿಕೆಗಳು ಪ್ರಮುಖ ಪಾತ್ರಗಳನ್ನು ವಹಿಸಬಯಸಬೇಕು ಎಂದು ಸಮಿತಿ ತಿಳಿಸಿದೆ. ಕಡಿಮೆ ದರದಲ್ಲಿ ಆಹಾರ ಮತ್ತು ಮದ್ಯೇತರ ಪಾನೀಯಗಳನ್ನು ಒದಗಿಸುವುದರ ಉಪಯೋಗವನ್ನೂ ಈ ಸಮಿತಿ ವಿವರಿಸಿದೆ.

ಅಕ್ರಮ ಭಟ್ಟಿ

ಅಕ್ರಮ ಭಟ್ಟಿಯ ಸಮಸ್ಯೆಯನ್ನು ಈ ಸಮಿತಿಯು ಪ್ರಸ್ತಾಪಿಸುತ್ತ; ಈ ಪದ್ಧತಿಯು ಹೊಸದೇನೂ ಅಲ್ಲ, ಈ ಹಿಂದಿನ ಕಾಲದಲ್ಲಿ ಸಹ ಇತ್ತು ಎಂದು ತಿಳಿಸಿದೆ. ಪಾನನಿರೋಧ ಕಾರ್ಯದಲ್ಲಿ ಅಕ್ರಮ ಸಾಗಾಣಿಕೆಯೊಂದು ಕಿರುಳುಳ ಎಂಬುದು ನಿಜ; ಆದರೆ ಆದರಿಂದಾಗಿ ಪಾನನಿರೋಧ ಕಾರ್ಯಕ್ರಮವನ್ನು ರಾಷ್ಟ್ರೀಯ ನೀತಿಯನ್ನಾಗಿ ಘೋಷಿಸಕೂಡದೆಂದು ವಾದಸಾಡುವುದು ಸರಿಯಲ್ಲವೆಂದು ಸಮಿತಿ ತಿಳಿಸಿದೆ. ಅಕ್ರಮ ಭಟ್ಟಿ ಇಳಿಸುವುದನ್ನು ಅಪರಾಧಗಳ ಸಂಖ್ಯೆಯಲ್ಲಿ ಸಾವಾನ್ಯ ಪಾಪ ಕೆಟ್ಟುಸರಿಯಂತೆ ಭಾವಿಸಬೇಕು. ವಿಷಾಯಕ ವಿಧಾನದ ಪ್ರಮುಖ್ಯತೆಯನ್ನು ಎಂದೂ ಕೈತಪ್ಪಿಹೋಗದಂತೆ ಎಂದು ಸಮಿತಿ ತಿಳಿಸಿದೆ.

ಪಾನ ನಿರೋಧದಿಂದ ನಿರ್ಜಡಬುದ್ಧಿಯಾದ ನಿರುದ್ಯೋಗ ಸಮಸ್ಯೆಯನ್ನು ಈ ಸಮಿತಿ ಪ್ರಸ್ತಾಪಿಸಿದೆ. ಹೆಂಡ ಕಟ್ಟುತ್ತಿದ್ದ ಜನರಿಗೆ ಗ್ರಾಮ ಅಥವಾ ಲಘು ಕೈಗಾರಿಕೆಗಳಲ್ಲಿ ಉದ್ಯೋಗಗಳನ್ನು ಒದಗಿಸಬೇಕೆಂದು ಶಿಫಾರಸು ಮಾಡಿದೆ.

ಕಲ್ಯಾಣ ರಾಜ್ಯ

ಆರ್ಥಿಕ ನೈತಿಕ ದೃಷ್ಟಿಯ ಬಗೆಗೆ ಈ ಸಮಿತಿಯು ವೈಷ್ಣವಿರುವಿಂಬ ಪಾದಕ ವಸ್ತುಗಳ ಮೇಲೆ ವಿಧಿಸುತ್ತಿರುವ ಸುಂಕ ಇತ್ಯಾದಿಯನ್ನು ಮನಸ್ಯ ಪರಾಮರ್ಶಿಸಬೇಕೆಂದು ಸೂಚಿಸಿದೆ ಈ ಸಂಬಂಧವಾದ ಅರ್ಥಿಕ ಸಮಸ್ಯೆಗೆ ಯಾವ ಹೊಸ ವಿಧಾನವೂ ಅಗತ್ಯವೂ ಇಲ್ಲವೆಂದು ಸಮಿತಿ ತಿಳಿಸಿದೆ. ಕೆಡಿತ ಮತ್ತು ಸಮಾಜ ಕಲ್ಯಾಣ ಬಂದೆಡೆ ಇರಲಾರವು; ಆದ್ದರಿಂದ ಪಾನನಿರೋಧವನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಸಮಗ್ರವಾದ ಭಾಗವೆಂದು ಭಾವಿಸಬೇಕೆಂದು ಸಮಿತಿಯು ತಿಳಿಸಿದೆ.

ಹಾಗೆ ಮಾಡಿದೆ ಜೋದರೆ ಜನತೆಯ, ಆದರಲ್ಲೂ ಅಲ್ಪ ವರಮಾನವಿರುವ ಜನರ, ಜೀವನದ ನುಟ್ಟವನ್ನು ಹೆಚ್ಚಿಸುವಂತಹ ಸಮಾಜ ಕಲ್ಯಾಣ ಯೋಜನೆಗಳು ಕೈಗೊಂಡಿರುವ ಈ ಸಮ್ಮುಖ ರಾಜ್ಯದ ರಾಷ್ಟ್ರೀಯ ಆಭಿವೃದ್ಧಿ ಕಾರ್ಯದಲ್ಲಿ ಒಂದು ದೊಡ್ಡ ಅಂತರವನ್ನು ಹಾಗೆಯೇ ದಿಟ್ಟಿಂತಾಗುವುದೆಂ ಎಂದು ಸಮಿತಿಯು ಒತ್ತಿ ಹೇಳಿದೆ. ಇದು ರಾಷ್ಟ್ರದ ಸಾಂಸ್ಕೃತಿಕ ಹಾಗೂ ನೈತಿಕ ಪರಂಪರೆಯನ್ನು ಉನ್ನತ ಮಟ್ಟದಲ್ಲಿರಿಸುವುದೆಂದೂ, ನಮ್ಮ ದೇಶದ ಲಕ್ಷಾಂತರ ಸಂಸಾರಗಳೂ ಈ ಕಾರ್ಯ ನೀತಿಯಿಂದ ಸುಖ ಜೀವನ ನಡೆಸುವಂತಾಗುವುದೆಂದೂ ಈ ಸಮಿತಿ ತಿಳಿಸಿದೆ. "ಸುಖೀ ರಾಜ್ಯದ ಸ್ಥಾಪನೆಗೆ ಚಾಂತರಾದ ಹಾಗೂ ದೃಢಕಾಯರಾದ ಜನತೆಯೇ ಉತ್ತಮ ಬುನಾದಿ"—ಎಂದು ಈ ಸಮಿತಿಯು ತಿಳಿಸಿದೆ.

ಸುಂಕದ ವರಮಾನ

ಇದನ್ನು ತತ್ಪಲ ಅಂಗೀಕರಿಸಿದರೆ ಪಾನನಿರೋಧದಿಂದ ಮಾಪಕ ವಸ್ತುಗಳ ಮೇಲಿನ ಸುಂಕದ ಬಾಬಿನಿಂದ ಬರುತ್ತಿದ್ದ ಆದಾಯದಲ್ಲಿ ಇಳುವರಿಯಾಗುವುದು. ಅದನ್ನು ಸ್ವತಃ ಯೋಂದು ರಾಜ್ಯದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಸಾಮಾನ್ಯ ವೆಚ್ಚಕಾಸಿನ ಖಾತೆಗೆನಗೊಂದಿಗೆ ಸೇರಿಸಬೇಕು; ಆದರೆ ಇದನ್ನು ತುಂಬಿಕೊಳ್ಳಲು ಪಾನನಿರೋಧಕ್ಕೆ "ನೀರೆ ಪಾದ" ಸಂಪರ್ಕವಳ್ಳ ಯಾವುದೇ ಹೊಸ ತೆರಿಗೆಯನ್ನು ವಿಧಿಸಬಾರದು. ಈ ಸಂದರ್ಭದಲ್ಲಿ ಸುಂಕ ನಿವಾರಣಾ ಸಮಿತಿಯ ಶಿಫಾರಸುಗಳಕಡೆಗೆ ವಿಶೇಷ ಗಮನವೀಯಬಹುದು ಎಂದು ಈ ಸಮಿತಿ ಸೂಚಿಸಿದೆ.

ಪಾನ ನಿರೋಧವು ರಾಜ್ಯಗಳಿಗೆ ಸೇರಿದ ವಾಜ್ಯಾರಿ. ಕೆಲವು ರಾಜ್ಯಗಳಲ್ಲಿ ಮಾದಕ ವಸ್ತುಗಳ ಮೇಲಿನ ಸುಂಕದಿಂದಲೇ ಹೆಚ್ಚಿನ ಆದಾಯವಿದೆ. ಅಂತಹ ರಾಜ್ಯಗಳಿಗೆ, ಕೇಂದ್ರವು ಸಮಾಯವಿಲ್ಲದೆ ಪಾನನಿರೋಧವನ್ನು ಆಚರಣೆಗೆ ತರಲು ಬಯಸಿ ಕಷ್ಟವಾಗುವುದು. ರಾಜ್ಯಗಳ ಈ ಸಂಬಂಧದ ಅನಕ್ಕೆಗಳಿಗೆ ಕೇಂದ್ರ ಸರ್ಕಾರವು ತನ್ನ ತೀಕ್ಷ್ಣ ಸಂಶೋಧನೆಯನ್ನು ಕೊಡುವುದೆಂದು ಈ ಸಮಿತಿಯು ಸಂಶುತ್ತೆ.

ಯಶಸ್ಸಿನಲ್ಲಿ ವಿಶ್ವಾಸ

ತನ್ನ ಶಿಫಾರಸುಗಳನ್ನು ಮಾಡುವಾಗ, ಈ ಸಮಿತಿಯು, ಪಾನನಿರೋಧದಿನಿಯ ರಾಜ್ಯಗಳಲ್ಲಿ ಹೊರತೆ ಅನುಭವವನ್ನಪ್ಪೇ ಅಲ್ಲವೆ, ಇದೇ ವಿಷಯದಲ್ಲಿ ನಿದೇಶಗಳಲ್ಲಿ ನಡೆದ ಪ್ರಯೋಗಗಳು, ಸಮಿಕ್ಷೆಗಳು ಇತ್ಯಾದಿಗಳನ್ನೆಲ್ಲ ಗಣನೆಗೆ ತೆಗೆದು ಕೊಂಡಿದೆ.

ಇತರ ದೇಶಗಳಲ್ಲಿ ಪಾನನಿರೋಧ ಕಾರ್ಯ ನೀತಿಗೆ ಅನೇಕ ವೆಚೆತನೆಗಳು ಬಂದಿವ್ಯರೂ, ಭಾರತದಲ್ಲಿ ಪಾನನಿರೋಧ ಕಾರ್ಯಕ್ರಮವು ಯಶಸ್ವಿಯಾಗುವುದಕ್ಕೆ ಅಗತ್ಯವಾದ ಉತ್ತಮ ಪರಿಸ್ಥಿತಿಯಿದೆ. ಇತರ ದೇಶಗಳೊಡನೆ ಹೋಲಿಸಿದರೆ, ಕುಡಿತದ ಪ್ರಮಾಣ ಇದ್ದಿಕಡಿಮೆ, ಇದ್ದಿನ ಜನವು ಕಾನೂನಿಗೆ ಸಾಮಾನ್ಯವಾಗಿ ಬದ್ಧರಾಗಿರುವ ಮನೋಭಾವ ದೊಂದಿವ್ಯಾರೆ. ಭಾರತದ ಮಹಿಳೆಯರಂತೂ ಪಾನನಿರೋಧಕ್ಕೆ ಪೂರ್ಣ ಬೆಂಬಲವನ್ನೀಯುತ್ತಾರೆ. ಪರಂಪರಾಗತ ಭಾರತೀಯ ಸಂಸ್ಕೃತಿ ಪಾನನಿರೋಧವನ್ನೆ ಎತ್ತಿಹಿಡಿಯುತ್ತದೆ. ಇವೆಲ್ಲವೂ ಭಾರತದಲ್ಲಿ ಪಾನನಿರೋಧ ಕಾರ್ಯಕ್ರಮವು ಸ್ಥಿರವಾರ್ಯವೆಂಬ ಆಂದವನ್ನು ಸೂಚಿಸುತ್ತವೆ—ಎಂದು ಈ ಸಮಿತಿಯು ಯೇಳಿದೆ.

ವಿಜಯ ದಶಮಿಯ ಶುಭ ದಿನದಂದು
ವಿಜಯ ಬೇಂಕಿನ
ಹೊಸ ಕಟ್ಟಡ ಮತ್ತು ಸೇಫ್ ಡೆಪೊಸಿಟ್ ವಾಲ್ಟಿನ
ಉದ್ಘಾಟನೆ

ಸಂದರ್ಭ ನಮ್ಮ ಮೇಲೆ ಪ್ರೀತಿಯಿಟ್ಟು ಸಂದೇಶಗಳನ್ನು ಕಳುಹಿಸಿದ
ಎಲ್ಲಾ ಮಹನೀಯರುಗಳಿಗೆ ಈ ಮೂಲಕ ನಮ್ಮ
ಹೃತ್ಪೂರ್ವಕ ವಂದನೆಗಳು.

ದಿ ವಿಜಯ ಬೇಂಕ್ ಲಿಮಿಟೆಡ್
ಪ್ರಧಾನ ಕಛೇರಿ: ಮಂಗಳೂರು 3.

ಉಡುಪಿ ಡಿ. ಮು. ಕೋರ್ಟಿನಲ್ಲಿ
ಕೈದು ನಂಬ್ರ 437/1955
ಉಡುಪಿ ಶ್ರೀಕೃಷ್ಣ ವೇನರು. ಯಕ್ಸಕ್ಯೂಟಿವ್ ಆಫೀಸರ್- ಕೆ ಸುಕುಂಜ ರಾವ್ ವಾದಿರು.

ಮತ್ತು

ಯು. ಎಂ. ಮಹೇಶ್ ಸಾಮೆಬ್. ಪ್ರತಿವಾದಿ. ಇವನೋಳನೆ—

ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗತ್ತಿರುವ ವ್ಯಾಜ್ಯದ ನೋಟೀಸು ತಾ. 19_11_55 ಕ್ಕೆ ಯಿಟ್ಟಿರುವುದರಿಂದ ಆ ದಿನ ಸದ್ರಿ ಪ್ರತಿವಾದಿಯು ಅಕ್ಷೇಪ ಜೇಖುವನ್ನು ಸದ್ರಿ ಕೋರ್ಟು ಮುಂದೆ ಸಾಜ್ಯಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao
Vakil for Plaintiff.
Udipi: Date 1—11—55.

ಬೆಂಕಿ ಬಿದ್ದಿದೆ ಮನೆಗೆ !

ಬೆಂಕಿ ಬಿದ್ದಿದೆ ಮನೆಗೆ! ಓ ಬೇಗ ಬನ್ನಿ!
ಎಲ್ಲರೂ ಎದ್ದೆದ್ದು ಓಡಿ ಬನ್ನಿ!
ಕನ್ನಡದ ಗಡಿಕಾಯೆ,
ಗುಡಿಕಾಯೆ, ನುಡಿಕಾಯೆ,
ಕಾಯಲಾರೆಯೆ? ಸಾಯೆ!
ಓ ಬನ್ನಿ! ಬನ್ನಿ!
ಬೆಂಕಿ ಬಿದ್ದಿದೆ ಮನೆಗೆ!

೨

ಹಾರಿ ಗುದ್ದಲಿ ಕೊಡಲಿ ನೊಗಗಳಿಗಿತ್ತು ತಲೆ
ನೆಲದಿಂದ ಹೊಲದಿಂದ ಹೊರಟು ಬನ್ನಿ!
ಕನ್ನಡದ ನಾಡಿಂದ,
ಕಾಡಿಂದ, ಗೂಡಿಂದ,
ಕಡಲಿಂದ, ಸಿಡಿಲಿಂದ,
ಗುಡುಗಿ ಬನ್ನಿ!
ಬೆಂಕಿ ಬಿದ್ದಿದೆ ಮನೆಗೆ

೩

ಅಕ್ಕದಿರೆ ಅಣ್ಣದಿರೆ ತಂಗಿಯರೆ ತಮ್ಮದಿರೆ
ಬೇಗೆಯನ್ನಾರಿಸಲು ಬೇಗ ಬನ್ನಿ!
ಕನ್ನಡದ ಬಲವೊಂದೆ,
ನೆಲವೊಕಾವೆ, ಛಲವೊಂದೆ,
ನಾಡ ನುಳಿಸುವೆವೆಂದೆ—
ಓಡಿ ಬನ್ನಿ!
ಬೆಂಕಿ ಬಿದ್ದಿದೆ ಮನೆಗೆ!

೪

ಕನ್ನಡದ ಕುಲಕೋಟಿಯೆದ್ದರೆಚ್ಚರ ವಿರಲಿ!
ಸಿಂಹ ಸ್ವಪ್ನವ ಬಿಟ್ಟು ಕೆರಳಿ ನಿಲಲಿ!
ಆನೆಯಕ್ಕಡೆಗೊಡದೆ,
ಆಂಗುಲ ನೆಲಂ ಬಿಡದೆ,
ಅನ್ಯರಂತಡೆ ಹಿಡಿದೆ—
ನಾಡುಳಿಸಲಿ!
ಬೆಂಕಿ ಬಿದ್ದಿದೆ ಮನೆಗೆ!

೫

ಕೋಟಿಕೊತ್ತಲಕಟ್ಟು ನುಂದಿಮಾರ್ಬಲವಿಟ್ಟು
ಗಡಿಯನ್ನು ಗುಡಿಯನ್ನು ಕಾವಳಿಟರು!
ಕನ್ನಡಿಗರೆದ್ದೆಗ್ಗಟ್ಟು,
ಧೀರ ದೀಕ್ಷೆಯ ತೊಟ್ಟು,
ಪ್ರಾಣವನೆ ಪಣವಿಟ್ಟು,
ಕಣಕಿಳಿದರು!
ಬೆಂಕಿ ಬಿದ್ದಿದೆ ಮನೆಗೆ

೬

ಜಯತು ಭುವನೇಶ್ವರಿ! ರಾಜ ರಾಜೇಶ್ವರಿ!
ಸಿರಿ ನಿನ್ನಡಿಂಗೆಲ್ಗೆ—ನಿಜ ಶಾಂಕರಿ!
ಎಳ್ಗೆ ಕರ್ನಾಟಕಂ!
ಬಾಳ್ಗೆ ಕರ್ನಾಟಕಂ!
ಅಳ್ಗೆ ಕರ್ನಾಟಕಂ!
ಜಗದೀಶ್ವರಿ!

—ಕಯ್ಯೂರ ತಿಮ್ಮಣ್ಣ ರೈ

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ ಸಂ. ನ.)

ಗೋಗ್ರಾಸ—

ಬರೆದವರು: ನಾರಾಯಣ ಸಂಗಮ. ಪ್ರಕಾಶಕರು: ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ ಬೆಲೆ. ರೂ ೧-೦-೦.

ಗೋಸಂರಕ್ಷಣೆಯು ಅಸ್ಖಲಿತ, ಶಾಶ್ವತವಾಗಿ ಸಂರಕ್ಷಿಸಲ್ಪಡಬೇಕಾದ ಪವಿತ್ರ ಕರ್ತವ್ಯವೆಂಬ ಭಾವನೆಯು ಭಾರತೀಯರಲ್ಲಿ ಸಹಜವಾಗಿ ಬೆಳೆದು ಬಂದಿದೆ. ಗೋಸಂರಕ್ಷಣೆಯ ಕುರಿತು ಅನೇಕ ಸಂಘ ಸಂಸ್ಥೆಗಳು ಕಾರ್ಯ ನಿರತವಾಗಿವೆ. ಗೋಸಂರಕ್ಷಣೆಯ ಕುರಿತು ಅನೇಕ ಪುಸ್ತಕಗಳು ಪ್ರಕಟವಾಗಿವೆ. ಆದರೆ ಗೋಸಂರಕ್ಷಣೆಯ ಕುರಿತು ಸಮಗ್ರವಾಗಿ ಚಿಂತಿಸಿ ಬರೆದ ಪುಸ್ತಕಗಳು ಕಡಿಮೆ. ಈ ಕೊರತೆಯನ್ನು ಈ ಪುಸ್ತಕವು ಸಾಕಷ್ಟು ಮಟ್ಟಿಗೆ ನೀಗಿಸಿದೆ. ಗೋಸಂರಕ್ಷಣೆಯ ಕುರಿತು ಸಮಗ್ರವಾಗಿ ಚಿಂತಿಸಿ ಬರೆದ ಪುಸ್ತಕಗಳು ಕಡಿಮೆ. ಈ ಕೊರತೆಯನ್ನು ಈ ಪುಸ್ತಕವು ಸಾಕಷ್ಟು ಮಟ್ಟಿಗೆ ನೀಗಿಸಿದೆ. ಗೋಸಂರಕ್ಷಣೆಯ ಕುರಿತು ಅನೇಕ ಪುಸ್ತಕಗಳು ಪ್ರಕಟವಾಗಿವೆ. ಆದರೆ

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ — ಉಡುಪಿ, 17—11—1955 — ಸಂಚಿಕೆ ೧೨

VOL. 35 — NO. 12

ಅಣು ವಿಸರಣದ ಪರಿಣಾಮ

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಭಾರತವು ಪಾಶ್ಚಾತ್ಯ ರಾಷ್ಟ್ರಗಳೆಲ್ಲವು ಪ್ರಬಲ ವೆನಿಸಿದ ಅಮೇರಿಕ ಹಾಗು ಬ್ರಿಟನುಗಳೆದುರು ತನ್ನ ಪ್ರತಿಷ್ಠೆಯನ್ನು ಸ್ಥಾಪಿಸಿ ಮೆರೆದ ಘಟನೆಯೊಂದು ಇದೇ ೭ನೇ ದಿನಾಂಕ ನಡೆಯಿತು. ರಾಜಕೀಯ ಸಮಿತಿಯ ಮುಂದೆ ಆಗ ಅಣು ವಿಸರಣ ಕ್ರಿಯೆಯ ಪರಿಣಾಮಗಳ ಅಧ್ಯಯನ ನಡೆಸುವುದಕ್ಕೋಸ್ಕರ ಅಂತಾರಾಷ್ಟ್ರೀಯ ಸ್ವರೂಪದ ವೈಜ್ಞಾನಿಕ ಸಮಿತಿಯೊಂದನ್ನು ನೇಮಿಸಬೇಕೆಂಬ ಸೂಚನೆ ಮಂಡಿಸಲ್ಪಟ್ಟಿದ್ದಿತು. ಇದನ್ನು ಮುಂದಿಟ್ಟ ರಾಷ್ಟ್ರಗಳೆಂದರೆ: ಅಮೆರಿಕ, ಬ್ರಿಟನ್, ಆಸ್ಟ್ರೇಲಿಯ, ಕೆನಡ, ಮತ್ತು ಸ್ಕಾಂಡಿನೇವಿಯದ ದೇಶಗಳು. ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವವನ್ನಾಗಲೀ ರಾಷ್ಟ್ರ ಸಂಘದ ವಿಜ್ಞಪ್ತಿಗಳಲ್ಲಿ ಪ್ರತಿನಿಧಿತ್ವವನ್ನಾಗಲೀ ಪಡೆದ ರಾಷ್ಟ್ರಗಳಿಂದ ಅಣು ವಿಸರಣ ಕ್ರಿಯೆಯ ಕುರಿತು ಮಾಹಿತಿಗಳನ್ನು ಸಂಗ್ರಹಿಸಬೇಕೆಂದೂ, ಹಾಗೆಯೇ ಉಪಯುಕ್ತ ಸಂಗತಿಗಳನ್ನು ಈ ರಾಷ್ಟ್ರಗಳಿಗೆ ತಿಳಿಯಪಡಿಸಬೇಕೆಂದೂ ಪಾಶ್ಚಾತ್ಯರ ಗೊತ್ತುವಳಿಯಲ್ಲಿದ್ದಿತು. ಭಾರತವು ಆಸಕ್ತಿಯುಳ್ಳ ಎಲ್ಲ ರಾಷ್ಟ್ರಗಳಿಗೂ ಸಮಿತಿಯ ಪ್ರಯೋಜನ ಪಡೆಯಲು ಅನುಕೂಲವಾಗುವಂತೆ ದ್ವಾರವನ್ನು ತೆರೆದಿಡಬೇಕೆಂದು ಒಂದು ತಿದ್ದುಪಡಿಯ ಮೂಲಕ ಪ್ರತಿಪಾದಿಸಿತು. ಇದು ರಾಜಕೀಯ ಪ್ರಶ್ನೆಯಲ್ಲ—ಮಾನವ ಜನಾಂಗದ ಉಳಿವಿಗೆ ಸಂಬಂಧಿಸಿದ ವಿಷಯ ಎಂದದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಿತು.

ಪಾಶ್ಚಾತ್ಯರ ಮೂಲ ಗೊತ್ತುವಳಿಯು ಅಸಮರ್ಪಕತೆಯನ್ನು ಭಾರತವು ಕೆಲವು ವಾರಗಳ ಹಿಂದೆಯೇ ವಿವರಿಸಿತ್ತು; ಅಮೇರಿಕದ ಪ್ರತಿನಿಧಿಗಳೇ ಮುಂತಾದವರು ಭಾರತದ ಶ್ರೀ ಕೃಷ್ಣ ಮೆನೊನರೊಡನೆ ಈಸಂಬಂಧದಲ್ಲಿ ವಿಶೇಷವಾದ ಚರ್ಚೆಯನ್ನು ನಡೆಸಿ, ತಮ್ಮ ಮೂಲಗೊತ್ತುವಳಿಯನ್ನು ಸ್ವಲ್ಪ ಮಟ್ಟಿಗೆ ತಿದ್ದುಪಡಿ ಮಾಡಿದರು. ಪರಿಣಾಮವಾಗಿ, ಮೂಲದಲ್ಲಿ ಎಂಟು ರಾಷ್ಟ್ರಗಳಿಗೆ ಮಾತ್ರ, ಪ್ರತಿನಿಧ್ಯವಿರಬೇಕೆಂದು ಹೇಳಿದ ಪಾಶ್ಚಾತ್ಯ ರಾಷ್ಟ್ರಗಳು ಈ ಸಂಖ್ಯೆಯನ್ನು ಹನ್ನೊಂದಕ್ಕೆ ಏರಿಸಲು ಮುಂದಾದವು. ಇದು ಎಲ್ಲರಿಗೆ ತೃಪ್ತಿಯನ್ನು ನೀಡಲಿಲ್ಲ; ಭಾರತಕ್ಕೂ ಇದರಿಂದ ಸವಾಧಾನವಾಗಲಿಲ್ಲ. ಅದು ಪಾಶ್ಚಾತ್ಯರು ಸೂಚಿಸಿದ ಭಾರತ, ಆಸ್ಟ್ರೇಲಿಯ, ಬ್ರೇಜಿಲ್, ಕೆನಡ, ಜೆಕೊಸ್ಲೊವಾಕಿಯ, ಫ್ರಾನ್ಸ್, ಜಪಾನ್, ಸ್ವೀಡನ್, ಬ್ರಿಟನ್, ಅಮೇರಿಕ, ಮತ್ತು ರಶ್ಯಗಳಲ್ಲದೆ ಈಜಿಪ್ಟ್ ಮತ್ತು ಮೆಕ್ಸಿಕೊಗಳಿಗೂ ಸಮಿತಿಯಲ್ಲಿ ಸ್ಥಾನ ಕೊಡಬೇಕೆಂದು ಹೇಳಿತು. ಲ್ಯಾಟಿನ್ ಅಮೇರಿಕನ್ ದೇಶಗಳ ಗುಂಪು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬೆಲ್ಜಿಯಂ ಮತ್ತು ಆರ್ಜೆಂಟೀನಗಳನ್ನು ಸಹ ಈ ಸಮಿತಿಯಲ್ಲಿ ಸೇರಿಸಬೇಕೆಂದು ಸೂಚಿಸಿತು. ಭಾರತವೂ ಇತರ ಅನೇಕ ರಾಷ್ಟ್ರಗಳೂ ಸಮಿತಿಯನ್ನು ಈ ಬಗೆಯಲ್ಲಿ ವಿಸ್ತರಿಸುವುದಕ್ಕೆ ಬೆಂಬಲ ವಿತ್ತವು. ಅಮೇರಿಕ ಮತ್ತು ಬ್ರಿಟನುಗಳೂ ಅವುಗಳ ಹಿಂಬಾಲಕ ರಾಷ್ಟ್ರಗಳೂ ಪ್ರಬಲ ವಿರೋಧವನ್ನು ಸೂಚಿಸಿದವು. ಆದರೆ ಈ ವಿರೋಧಕ್ಕೆ ಬೆಲೆ ಬರಲಿಲ್ಲ. ವೈಜ್ಞಾನಿಕ ಅಧ್ಯಯನ ಸಮಿತಿಯಲ್ಲಿ ಉಪರೋಕ್ತ ಹದಿನೈದೂ ರಾಷ್ಟ್ರಗಳಿರಬೇಕೆಂಬ ತಿದ್ದುಪಡಿಯೇ ಮಾನ್ಯವಾಯಿತು.

ಅಮೇರಿಕ ಮತ್ತು ಬ್ರಿಟನುಗಳ ಮುಖ ಭಂಗವು ಹಿಂದೆಂದೂ ನಡೆದಿದ್ದಿಲ್ಲವೆಂದು ನಿರೀಕ್ಷಕರ ಸ್ಪಷ್ಟ ಅಭಿಪ್ರಾಯವಾಗಿದೆ. ಸಂಯುಕ್ತ ರಾಷ್ಟ್ರ ಸಂಘವು ಪ್ರಬಲ ರಾಷ್ಟ್ರಗಳ ಆಟದ ಪೈದಾನವಾಗಿ ಹೆಚ್ಚು ಸಮಯದ ನರೆಗೆ ಉಳಿಯಲಾರದೆಂದೂ ಜಾಗತಿಕ ಅಭಿಪ್ರಾಯವನ್ನು ಸ್ಪಷ್ಟ ರೂಪದಲ್ಲಿ ಎತ್ತಿ ಹಿಡಿಯುವ ಸಂಸ್ಥೆ ಆದಾಗಬೇಕೆಂಬುದೇ ಹೆಚ್ಚಿನ ರಾಷ್ಟ್ರಗಳ ಇಚ್ಛೆಯೆಂದೂ ಮೇಲಿನ ನಿರಡು ಪ್ರಸಂಗಗಳು ತೋರಿಸಿ ಕೊಡುತ್ತವೆ. ವೈಜ್ಞಾನಿಕ ಸಮಿತಿಯು ನಿರ್ವಹಿಸಬೇಕೆಂದು ಭಾವಿಸಲಾದ ಕರ್ತವ್ಯಗಳು ಮಾನವ ಜನಾಂಗದ ಭವಿಷ್ಯತ್ತಿಗೆ ಬಹಳ ನಿಕಟ ಸಂಪರ್ಕವನ್ನು ಹೊಂದಿದೆ. ಉದಾಹರಣೆಗೆ, ಈ ಸಮಿತಿಯು ಅಣು ವಿಸರಣ ಕ್ರಿಯೆಯು ವಾತಾವರಣದ ಮೇಲೂ ಮನುಷ್ಯರ ಮೇಲೂ ಮಾಡುವ ಪರಿಣಾಮಗಳ ಕುರಿತು ತಜ್ಞರ ಅಭಿಪ್ರಾಯಗಳನ್ನು ಒಂಗ್ರಹಿಸಿ ಮಹತ್ವದ ನ್ನು ನಡೆಸುತ್ತದೆ. ಈ ಕುರಿತಾದ ಮಾದರಿಗಳನ್ನು ಕೂಡಿಸುವುದು, ಅಣು ವಿಸರಣ ಕ್ರಿಯೆಯ ಪ್ರಮಾಣವನ್ನು ಅಳೆಯಲು ತಕ್ಕ ಸಾಧನಗಳನ್ನು ಕಂಡು ಹಿಡಿಯುವುದು ಬೇರೆ ಬೇರೆ ಮಟ್ಟದಲ್ಲಿ ಈ ಕ್ರಿಯೆಯು ಪರಿಣಾಮಗಳನ್ನು ಏದಿತ ಪಡಿಸುವುದು, ಇತ್ಯಾದಿಕೆಲಸಗಳನ್ನೂ ಈ ಸಮಿತಿ ಮಾಡುತ್ತದೆ. ಈ ವಿಷಯದಲ್ಲಿ ಈಗ್ಗಾಗಲೇ ಅನೇಕ ರಾಷ್ಟ್ರಗಳು ತಂತಮ್ಮಷ್ಟಕ್ಕೆ ಅಧ್ಯಯನಗಳನ್ನು ನಡೆಸುತ್ತಿವೆ ಆದರೆ, ಜಗತ್ತಿನ ಎಲ್ಲರ ಪ್ರಯೋಜನಕ್ಕೆ ಬರುವಂತೆ ಈ ಅಧ್ಯಯನದಿಂದ ವ್ಯಕ್ತವಾದ ಸಂಗತಿಗಳ ಸಮೂಹಕ್ಕೆ ನಡೆಸುವುದು ಇಷ್ಟವಾಗಿದೆ ಎಂದು ಸಂಯುಕ್ತ ರಾಷ್ಟ್ರ ಸಂಘದ ಎಲ್ಲ ರಾಷ್ಟ್ರಗಳೂ ಒಮ್ಮತದಿಂದ ಹೇಳುತ್ತವೆ.

ರಶ್ಯವು ಅನೇಕ ತಿದ್ದುಪಡಿಗಳನ್ನು ಈ ಸಂಬಂಧದಲ್ಲಿ ಮಂಡಿಸಿತ್ತಾದರೂ ಆದಕ್ಕೆ ಬೆಂಬಲ ಸಿಗಲಿಲ್ಲ. ಈ ತಿದ್ದುಪಡಿಗಳಲ್ಲಿ ಕೆಂಪು ಚೀನ ಮತ್ತು ರುಮೇನಿಯಗಳಿಗೆ ಸಮಿತಿಯಲ್ಲಿ ಸ್ಥಾನ ಕೊಡುವುದು ಒಂದು; ಅಣುಶಸ್ತ್ರಗಳ ಸ್ಫೋಟನ ಪ್ರಯೋಗವನ್ನು ಪ್ರತಿಬಂಧಿಸುವುದು ಇನ್ನೊಂದು ಅಣುವಿಕಿರಣ ಕ್ರಿಯೆಯಿಂದ ರಕ್ಷಣೆಪಡೆಯುವ ಮತ್ತು ರೋಗ ಗ್ರಸ್ತವಾದ ಸಂದರ್ಭಗಳಲ್ಲಿ ಚಿಕಿತ್ಸೆ ಹೊಂದುವ ವಿಧಾನವನ್ನು ರೂಪಿಸುವುದು ಮೊದಲಾದ ತಿದ್ದುಪಡಿಯ ಆಶಯವಾಗಿದ್ದಿತು. ಇವುಗಳಿಗೆ ಭಾರತದ ನೈತಿಕ ಸಮರ್ಥನೆ ದೊರೆತರೂ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಬಹುಮತ ದೊರೆಯದೆ ಹೋಯಿತು. ಕೆನೆಡದ ಪ್ರತಿನಿಧಿಗಳು ರಶ್ಯದ ತಿದ್ದುಪಡಿಗಳನ್ನು ವಿರೋಧಿಸುತ್ತಾ ಅಣು ಬಾಂಬುಗಳ ಸ್ಫೋಟನೆ ಪ್ರಯೋಗವನ್ನು ಇನ್ನು ಮುಂದೆ ನಿಲ್ಲಿಸಲಿ ಬಿಡಲಿ, ಅಣುವಿಸರಣ ಕ್ರಿಯೆಯು ಈಗಾಗಲೇ ಪ್ರಬಲ ಪ್ರಮಾಣದಲ್ಲಿ ವ್ಯಕ್ತವಾಗಿರುವುದರಿಂದ ಈ ಕುರಿತು ಗಮನ ಕೊಡುವುದೇ ಸಂಯುಕ್ತ ರಾಷ್ಟ್ರ ಸಂಘದ ಕೆಲಸವಾಗಬೇಕಲ್ಲದೆ, ರಾಜಕೀಯ ಸ್ವರೂಪದ ತಿದ್ದುಪಡಿಗಳನ್ನು ಸ್ವಾಗತಿಸಲಾರದು ಎಂದರು. ಕೇವಲ ಅಣು ಶಸ್ತ್ರಗಳಿಗೆ ಬಹಿಷ್ಕಾರ ಹಾಕುವುದರಿಂದ ಜಗತ್ತಿನಲ್ಲಿ ಅಣು ವಿಸರಣ ಕ್ರಿಯೆಯನ್ನು ನಿಲ್ಲಿಸುವುದು ಸಾಧ್ಯವಿಲ್ಲ. ಶಾಂತಿ ಕಾಲದ ಬಳಕೆಗಾಗಿ ಅಣು ಶಕ್ತಿಯನ್ನು ಉತ್ಪಾದಿಸುವಾಗ ಸಹ ಅಣು ವಿಸರಣ ಕ್ರಿಯೆಯುಂಟಾಗುತ್ತದೆ—ಎಂಬುದನ್ನು ಅವರು ನೆನಸಿಗೆ ತಂದು ಕೊಟ್ಟರು.

ಚರ್ಚೆಯಲ್ಲಿ ಎದ್ದುಕಂಡಸಂತೋಷದ ವಿಷಯಗಳಲ್ಲಿ ಜಪಾನಿನ ತಜ್ಞರೊಬ್ಬರು ಅಣು ವಿಸರಣ ಕ್ರಿಯೆಯನ್ನು ಅಧ್ಯಯನ ನಡೆಸುವ ಸಮಿತಿಯಲ್ಲಿರಬೇಕೆಂದು ಮಾಡಿದ ಒಮ್ಮತದ ತೀರ್ಮಾನವು ಉಲ್ಲೇಖನೀಯವಾಗಿದೆ. ಸಂಯುಕ್ತ ರಾಷ್ಟ್ರ ಸಂಘವಲ್ಲಿ ಈ ದೇಶಕ್ಕೆ ಇನ್ನೂ ಪ್ರಾತಿನಿಧ್ಯ ದೊರೆತಿಲ್ಲ. ಆದರೆ ಅಣು ವಿಸರಣ ಕ್ರಿಯೆಯಲ್ಲಿ ಆ ದೇಶದಿಂದ ದೊರೆಯಬಹುದಾದಷ್ಟು ಮಾಹಿತಿ ಬೇರೆಲ್ಲಿಂದಲೂ ಸಿಗಲಾರದು. ಏಕೆಂದರೆ ಪ್ರಥಮ ಅಣು ಬಾಂಬಿಗೆ ಗುರಿಯಾಗಲ್ಲಿ ಅಹುತಿಯಾದ ಹಿರೋಶಿಮ ಮತ್ತು ನಾಗಸಾಕಿಗಳನ್ನು ಜಪಾನು ತನ್ನ ಉದರದಲ್ಲಿಟ್ಟುಕೊಂಡಿದೆ. ಯುದ್ಧಾನಂತರ ಬಳಿಕ,ಶಾಂತಿಕಾಲದಲ್ಲಿಸಹ ಗುರಿಯಾಗಿನೇ ಇಪಯಿಲ್ಲಿ ಬಿಸಿನಿದ್ರೀಪ ಸಮುದಾಯದ ಬಳಿ ಅಮೇರಿಕ ನಡೆಸಿದ ಅಣುಶಸ್ತ್ರ ಸ್ಫೋಟನಗಳಿಂದಾಗಿತನ್ನಜನೇಕ ಪ್ರಜೆಗಳ ನೋವನ್ನದು ಉಂಡಿದೆ. ರಶ್ಯವು ಸೈಬೀರಿಯದಲ್ಲಿ ನಡೆಸಿತೆನ್ನಲಾದ ಅಣುಶಸ್ತ್ರಗಳ ಸ್ಫೋಟನದ ಪೀಡೆಗೂ ಜಪಾನು ಗುರಿಯಾಗಿದೆ ಎಂದು ವರದಿಗಳು ಹೇಳುತ್ತವೆ. ಆದ್ದರಿಂದ ಜಪಾನಿನ ನಿರೀಕ್ಷಕರುತಮ್ಮ ದೇಶವು ಸಂಪೂರ್ಣ ಸಹಕಾರವನ್ನು ಈ ಕೆಲಸಕ್ಕೆ ಕೊಡುವುದೆಂದು ಹೇಳುವಂತೆ ಮಾಡಿರುವುದು ಶ್ಲಾಘನೀಯವಾದ ಸಾಧನೆ ಎನ್ನಬೇಕಾಗುತ್ತದೆ. ಇದರಂತೆ ಎಲ್ಲ ದೇಶಗಳೂ ಮುಕ್ತದ್ವಾರವಿರಬೇಕೆಂದ ಭಾರ

(ಅನೇ ಪುಟ ನೊಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ.ಕ.ಭಾರತ.

ಸುಖಸಂತೋಷವನ್ನು ಬರಮಾಡಿಕೊಳ್ಳುವುದು ಹೇಗೆ?

ನಿಮ್ಮ ಕುಟುಂಬದ ಸುಖಸಂತೋಷವು ಕೇವಲ ಅಕಸ್ಮಿಕ ಘಟನೆಯಲ್ಲ. ಅದನ್ನು ನಡುವಾರಿಯ ವರೆಗೆ ಹೋಗಿ, ಸಂಧಿಸಿ, ಮನೆಗೆ ಸ್ವಾಗತಿಸಬೇಕಾಗುತ್ತದೆ. ಕೆಲವು ವರ್ಷಗಳಷ್ಟು ಮುಂದಾಗಿಯೇ ತಕ್ಕ ಯೋಜನೆಯನ್ನು ಮಾಡಿರಬೇಕೆಂದು ಇದರ ಅರ್ಥ. ನಿಮ್ಮ ಗುರಿಯನ್ನು ಗೊತ್ತು ಪಡಿಸುವುದು ಮತ್ತು ಅದನ್ನು ಮುಟ್ಟಲು ಅನುಸರಿಸಬೇಕಾದ ಕಾರ್ಯಕ್ರಮಗಳನ್ನು ರೂಪಿಸುವುದು— ಇದೇ ಮೊದಲನೆಯ ಕೆಲಸ. ಈ ಬಗೆಯ ಕಾರ್ಯಕ್ರಮಗಳಲ್ಲಿ ಏನುಗೆಪ್ಪು ಸಾಧ್ಯವೋ ಅಷ್ಟು ಧನವನ್ನು ಕ್ರಮಪ್ರಕಾರವಾಗಿ ತೆಗೆದಿಡುವುದು ಮುಖ್ಯವಾದೊಂದು ನಿಯಮ. ನಾವು ಇವಕ್ಕೆ ಸ್ವತಃ ಆರ್ಥ ವರ್ಷಕ್ಕೆ ಸಲ್ಲುವ ಬಡ್ಡಿಯನ್ನು ಸೇರಿಸಿ, ನಿಮ್ಮ ಉಗಿತಾಯವು ಬೆಳೆದ ಬೆಳವಣಿಗೆಯನ್ನು ಕೊಂಡುಂಡಂತೆ ನೆರವಾಗುತ್ತೇವೆ.

ಚಲಾವಣೆ ಭಂಡವಾಳ ರೂ. 7,50,00,000ಗೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.
Estd: 1925] [Head Office: UDIPI, S. India

ವಿದೇಶಗಳಿಗೆ ಕುಶಲ ಕಲೆಯ ಸರಕುಗಳ ನಿರ್ಯಾತ

ಯೋಗ್ಯತೆ ಮತ್ತು ಪ್ರಚಾರಗಳನ್ನು ಹೆಚ್ಚಿಸುವ ಅವಶ್ಯಕತೆ

ಅಮೇರಿಕದ ಪೇಟೆಯಲ್ಲಿ ಭಾರತದ ಕೈಮಗ್ಗದ ಬಟ್ಟೆಗಳಿಗೆ ಬೇಡಿಕೆ ಇದೆಯೆಂದು ವರದಿಯಾಗಿದೆಯಲ್ಲವೆ? ಪರದೇಶಗಳಲ್ಲಿ ಭಾರತದ ಕುಶಲಕಲೆಯ ಸರಕುಗಳಿಗೂ ತುಂಬ ಬೇಡಿಕೆಯಿದೆ. ಚಾರಿತ್ರಿಕವಾಗಿ ಭಾರತದ ಕುಶಲ ಕಲಾ ಸಾಮಗ್ರಿಗಳು ಕಳೆದ ಇಪ್ಪತ್ತೈದು ಶತಮಾನಗಳಿಂದ ವಿದೇಶಗಳಿಗೆ ನಿರ್ಯಾತವಾಗುತ್ತಾ ಪ್ರಖ್ಯಾತಿಯನ್ನು ಹೊಂದಿವೆ. ನಮ್ಮ ಜರತಾರಿ ಸೀರೆಗಳು, ರೇಶ್ಮೆ ಪಟ್ಟೆಗಳು, ಮಸ್ಲಿನುಗಳು, ಜಮಖಾನೆ ಮತ್ತು ರತ್ನಗಂಬಳಿಗಳು, ಕುಂಬಾರಿಕೆಯ ಒಡವೆಗಳು, ತಾಮ್ರ, ಕಂಚು ಮತ್ತು ಹಿತ್ತಾಳೆಯ ಸರಕುಗಳು, ಚಿನ್ನ ಬೆಳ್ಳಿಯ ಆಭರಣಗಳು, ಗಂಧ ಮತ್ತು ದಂತದಲ್ಲಿ ಕೆತ್ತಿದ ರಚನೆಗಳು ಮತ್ತಿತರ ಹಲವಾರು ಬಗೆಯಲ್ಲಿ ಕುಶಲ ಕಲೆ ವ್ಯಕ್ತವಾವ ವಸ್ತುಗಳು ಯುರೋಪು ಅಫ್ರಿಕ ಮತ್ತು ಪೂರ್ವ ಏಶ್ಯದ ರಾಷ್ಟ್ರಗಳಿಗೆ ನಿರ್ಯಾತವಾಗುತ್ತಿದ್ದುವಷ್ಟೇಯಲ್ಲ—ಅತಿ ಹೆಚ್ಚು ಬೇಡಿಕೆಯಿದ್ದ ಭಾರತದ ಸಂಬಾರ ಜೀನಸುಗಳ ಜೊತೆ ಜನಪ್ರಿಯತೆಯನ್ನೂ ಮಹತ್ವವನ್ನೂ ಆ ದೇಶಗಳಲ್ಲಿ ಪಡೆದಿದ್ದವು. ಆದರೆ, ಭಾರತದಲ್ಲಿ ವ್ಯಾಪಾರ ನ್ಯಾಯಾರದ ಸ್ವರೂಪವು ಎಂದೂ ಸಂಘಟಿತ ರೀತಿಯನ್ನು ಹೊಂದಿರಲಿಲ್ಲ; ನಿರ್ಯಾತ ವ್ಯಾಪಾರದ ಬೆಳವಣಿಗೆಯಲ್ಲಿ ಸಂಘಟಿತ ಪ್ರಯತ್ನದ ಪಾತ್ರದ ಕುರಿತು ಯಾರೂ ಗಮನವನ್ನೆ ಹರಿಸಿರಲಿಲ್ಲ.

ವಿದೇಶಗಳ ಮೋಹ

ದೇಶದೊಳಗೆ ಸಹಜ ಹಸ್ತ ಕೌಶಲ್ಯದ ಸಾಮಗ್ರಿಗಳು ತಾವು ಉತ್ಪಾದಿಸಲ್ಪಡುವ ಕೇಂದ್ರದ ಸುತ್ತಮುತ್ತಲಿನ ಕೆಲವು ಹಳ್ಳಿ ಅಥವಾ ನೇಟೆಗಳ ಹೊರಗೆ ಹೋಗಿ ದೊರದ ಪೇಟೆಗಳನ್ನು ವ್ಯಾಪಿಸುವಂತೆ ಮಾಡಿದವರಿಲ್ಲ. ಹೆಚ್ಚಾಗಿ ಸಾಮಾನ್ಯ ಜನರು ಇಂಥ ಸರಕುಗಳು ತಮ್ಮ ಕೈಯಳವಿಗೆ ನಿಲುಕುವಂಥವಲ್ಲವೆಂದೇ ಭಾವಿಸುತ್ತಿದ್ದರು. ಹೀಗಾಗಿ ಶ್ರೀಸಾಮಾನ್ಯರಿಗೆ ಸ್ಥಳೀಯ ಮುಖಂಡರೆ ಮತ್ತು ರಾಜವಂಶಜರ ಕೃಪಾಶ್ರಯದಲ್ಲಿಯೇ ಈ ಕಲೆಗಳು ಬೆಳೆದು ಬಂದವು ಎನ್ನಬಹುದು.

ರಾಷ್ಟ್ರವು ಸ್ವತಂತ್ರಗೊಂಡು ರಾಜವಂಶಜರಿಗಿದ್ದ ನಿಶ್ಚಿತ ಸ್ಥಾನಮಾನವು ಇಲ್ಲದೆ ಹೋದ ಬಳಿಕ, ಹಸ್ತ ಕೌಶಲ್ಯದ ಸಾಮಗ್ರಿಗಳಿಗೆ ಹೊರ ದೇಶಗಳ ಪೇಟೆಯನ್ನು ದೊರಕಿಸಿಕೊಡುವ ಕಡೆಗೆ ಗಮನವನ್ನು ಸರ್ವ ಪ್ರಥಮವಾಗಿ ಹರಿಸಲಾಯಿತು. ಉತ್ತಮ ಜೀವನಮಟ್ಟವುಳ್ಳ ಮತ್ತು ರಾಜಕೀಯವಾಗಿ ವ್ಯಾಪಾರ ಸಂಬಂಧವನ್ನು ಬೆಳೆದುಕೊಳ್ಳಲು ಸಾಧ್ಯವಿರುವ ಅಮೇರಿಕ, ಪಶ್ಚಿಮ ಯುರೋಪು ಮತ್ತು ಬ್ರಿಟಿಷ್ ಸಾಮ್ರಾಜ್ಯದ ಕ್ಷೇತ್ರಗಳ ಕಡೆಗೆ ನಿರ್ಯಾತಕ್ಕಾಗಿ ದೃಷ್ಟಿಯನ್ನು ಹರಿಸಲಾಯಿತು. ಜಗತ್ತಿನ ಈ ಭಾಗದಲ್ಲಿ ಭಾರತದ ಹಸ್ತಕೌಶಲ್ಯದ ಸಾಮಾಗ್ರಿಗಳಿಗೆ ವಿಶೇಷವಾದ ಸ್ವಾಗತವು ದೊರೆತು. ಈ ಆಸಕ್ತಿಯು ಕೇವಲ ತಾತ್ಕಾಲಿಕ ಸ್ವರೂಪದ್ದೆಂದು ಹೇಳುವಂತಿಲ್ಲ. ಬದಲಿಗೆ ಪಾಶ್ಚಾತ್ಯರ ನಿತ್ಯ ಜೀವನವನ್ನೂ ಮನೆಯ ಆವರಣವನ್ನೂ ವ್ಯಾಪಿಸಿಸಿ ಯಾಂತ್ರಿಕ ಹಾವಳಿಯಿಂದುಂಟಾದ ಬೇಸರವೂ ಜುಗುಪ್ಸೆಯೂ ಭಾರತದ ಒಡವೆಗಳ ಮೇಲೆ ವ್ಯೋಹ ಹುಟ್ಟಿಸಿವೆ ಎಂದು ಭಾವಿಸಲು ಅಡ್ಡಿಯಿಲ್ಲ. ಯಾಂತ್ರಿಕ ಜೀವನದಿಂದ ರೋಸಿ ಹೋದವರು ಇಂದಲ್ಲ ನಾಳೆ ಮುಖತಿರುಗಿಸಿ ತೃಪ್ತಿಯನ್ನು ಕಂಡುಕೊಳ್ಳಲೇ ಬೇಕಾದ ವ್ಯಕ್ತಿತ್ವದ ಕೈವಾಡವು ಭಾರತೀಯ ಕುಶಲ, ಕಲೆಗಳ ವೈವಿಧ್ಯದಲ್ಲಿ, ಬಣ್ಣಗಳಲ್ಲಿ, ಹಾಸು ಹೊಕ್ಕುಗಳಲ್ಲಿ, ತಾಳಕೆ ಬಾಳಿಕೆಯಲ್ಲಿ ಹೊಳಪು ಮತ್ತು ಆಕರ್ಷಣೆಗಳಲ್ಲಿ ಇದೆ ಎಂಬುದು ಅನುಭವಸಿದ್ಧವಾದ ವಿಷಯ.

ನಿರ್ಯಾತದ ಸರಕುಗಳು

ನಮ್ಮಲ್ಲಿಂದ ಹೊರದೇಶಗಳಿಗೆ ಹೋಗುವ ಹಸ್ತಕೌಶಲ್ಯ ಸಾಮಗ್ರಿಗಳ ವೈವಿಧ್ಯವನ್ನು, ಪ್ರಮಾಣವನ್ನು ಎಂಬ ಬಗೆಗೆ ಏವರವಾದ ಮಾಹಿತಿಯು ಇನ್ನೂ ಸಂಗ್ರಹವಾಗಿಲ್ಲ. ಆದರೆ ಕೈಮಗ್ಗದ ಬಟ್ಟೆಗಳ ಬಳಿಕ ಅತಿ ಹೆಚ್ಚು ಪ್ರಮಾಣದಲ್ಲಿ ನಿರ್ಯಾತವಾಗುವ ಸರಕುಗಳೇ ಉಣ್ಣೆಯ ರತ್ನಗಂಬಳಿ ಮತ್ತು ಜಮಖಾನೆಗಳೆಂಬುದರಲ್ಲಿ ಸಂಶಯವಿಲ್ಲ. ಭಾರತದಲ್ಲಿ ಉತ್ಪಾದಿತವಾದ ಈ ಬಗೆಯ ಉಣ್ಣೆಯ ಸರಕುಗಳಲ್ಲಿ ೯೦% ವಿದೇಶಗಳ ಪೇಟೆಗೆಯೇ ಕಳಿಸಲ್ಪಡುತ್ತವೆ. ಶೀತ ಹಾಗು ಸಮಶೀತೋಷ್ಣ ವಲಯದ ಪ್ರದೇಶಗಳಿಗೆ ಉಣ್ಣೆಯು ಸಾಮಗ್ರಿಗಳ ಅವಶ್ಯಕತೆ ಹೆಚ್ಚು ಎಂಬುದು ಇದಕ್ಕೆ ಕಾರಣವಾಗಿರಬಹುದು ಅಂತೂ ಭಾರತದೊಳಗೆ ಉಣ್ಣೆಯ ಬಟ್ಟೆಗೆ ಹೆಚ್ಚು ಬೇಡಿಕೆ ಇಲ್ಲವೆಂಬುದು ನಿಜ.

ನಿರ್ಯಾತದ ಇತರ ಜನಪ್ರಿಯ ವಸ್ತುಗಳಲ್ಲಿ ಕೊಂಬು ಮತ್ತು ದಂತದ ಸರಕುಗಳು, ಆಭರಣ ಇತ್ಯಾದಿ ಅಲಂಕಾರ ಸಾಧನಗಳು, ಗಂಧ ಮತ್ತಿತರ ಪ್ರಸಾಧನದ್ರವ್ಯಗಳು, ಜರತಾರಿ ಸೀರೆಗಳು, ಪಾತ್ರೆ ಪರಡಿಗಳು, ಕಲಾವಿಶೇಷ ತುಂಬಿದ ಕೆತ್ತನೆಯ ಸಾಮಗ್ರಿಗಳು, ಜಾಪೆ ಮತ್ತು ಕೃತಿಯ ಮಾದರಿಗಳು ಉಲ್ಲೇಖನೀಯವಾಗಿವೆ. ೧೯೫೩ ಏಪ್ರಿಲ್‌ನಲ್ಲಿ ೬೩೦ ಲಕ್ಷ ಗಜದಷ್ಟು ಕೈಮಗ್ಗದ ಬಟ್ಟೆಯನ್ನು ಭಾರತದ ಹೊರಗೆ ಮಾರಾಟಕ್ಕೆ ಕಳಿಸಲಾಯಿತು. ಇದರಿಂದ ೩೬೮ ಲಕ್ಷ ರೂಪಾಯಿ ಬೆಲೆಯ ಉಣ್ಣೆಯ ರತ್ನಗಂಬಳಿ, ೬೮ ಲಕ್ಷ ರೂಪಾಯಿ ಬೆಲೆಯ ಆಭರಣ, ೬೪ ಲಕ್ಷ ರೂಪಾಯಿ ಬೆಲೆಯ ಕಲಾವಿಶೇಷದ ಸಲಕರಣೆಗಳು, ೩೭ ಲಕ್ಷ ರೂಪಾಯಿ ಬೆಲೆಯ ಪಾತ್ರೆ ಪರಡಿಗಳು, ೧೭ ಲಕ್ಷ ರೂಪಾಯಿ ಬೆಲೆಯ ಗೊಂಬೆ ಮತ್ತಿತರ ಆಟದ ಸಾಮಾನುಗಳು, ೨ ಲಕ್ಷ ರೂಪಾಯಿ ಬೆಲೆಯ ದಂತದ ಸರಕುಗಳು, ೧ ಲಕ್ಷ ರೂಪಾಯಿಗಿಂತ ಹಾಸು ಹೆಚ್ಚು ಬೆಲೆಯ ಚಾಪೆ ಇತ್ಯಾದಿಗಳನ್ನೂ ನಿರ್ಯಾತ ಮಾಡಲಾಯಿತು. ಈ ಅಂಕಿಸಂಖ್ಯೆಗಳು ೧೯೫೨—೫೩ನೇ ವರ್ಷದ ಬಳಿಕ ನಿರ್ಯಾತದಲ್ಲಿ ದೃಢವಾದ ಪ್ರಗತಿಯಾಗಿರುವುದನ್ನು ತೋರಿಸುತ್ತವೆ.

ಚಾತುರ್ಯ ಸಾಲದು

ಮೇಲಿನ ನಿದರ್ಶನಗಳು ಆಕರ್ಷಣೀಯವಾಗಿ ಕಂಡು ಬಂದರೂ ವಿಶ್ವದ ಇತರ ರಾಷ್ಟ್ರಗಳೊಡನೆ, ಮುಖ್ಯವಾಗಿ ಜಪಾನಿನೊಡನೆ, ಹೋಲಿಸಿದರೆ ಸಮಾಧಾನಕರವಾದ ಪ್ರಗತಿಯನ್ನು ಭಾರತೀಯರು ಸಾಧಿಸಿರುವರೆಂಬ ತೃಪ್ತಿಗೆ ಎಡೆಯಿರುವುದಿಲ್ಲ. ಕಳೆದುಕೊಂಡ ಪೇಟೆಯನ್ನು ಮರಳಿ ಸಂಪಾದಿಸಲು ಇತ್ತೀಚೆಯಷ್ಟೇ ಪ್ರಯತ್ನವನ್ನು ತೊಡಗಿರುವುದರಿಂದ ವ್ಯಾಪಾರ ಕಲೆಯು ನಮಗೆ ಸಂಪೂರ್ಣ ಕರಗತವಾಗಿಲ್ಲ. ಆದರೆ ಇತರ ದೇಶಗಳಷ್ಟೇ ನಮ್ಮ ದೇಶದ ವ್ಯವಹಾರ ಚಾತುರ್ಯವೂ ಬೆಳೆದರೆ ನಾವು ಬೇರೆಯವರಿಗಿಂತಲೂ ಹೆಚ್ಚು ಸರಕುಗಳನ್ನು ನಿರ್ಯಾತ ಮಾಡಿ ಲಾಭ ಸಂಪಾದಿಸಲು ಸಾಧ್ಯವಿದೆ ಎಂಬುದಕ್ಕೆ ಇಷ್ಟರ ವರೆಗಿನ ಅನುಭವ ಪುಷ್ಟಿ ನೀಡುತ್ತದೆ.

ವ್ಯಾಪಾರ ಸಂಬಂಧದಲ್ಲಿ ಬಂದಿರುವ ವರದಿಗಳನ್ನು ಪರಿಶೀಲಿಸಿದರೆ, ನಮ್ಮ ಸರಕುಗಳಿಗೆ ವಿದೇಶಗಳಲ್ಲಿ ಧಾರಾಳವಾದ ಬೇಡಿಕೆ ಇರುವುದು ವ್ಯಕ್ತವಾಗುತ್ತದೆ; ಸ್ಪರ್ಧೆಯು ನಮ್ಮನ್ನು ನಿರುತ್ಸಾಹಗೊಳಿಸುವಷ್ಟು ಪೇಟೆಯಲ್ಲಿ ಪ್ರಬಲವಾಗಿಲ್ಲ. ನಮಗಿರುವ ತೊಂದರೆಯು ಕೇವಲ ಎರಡು ಬಗೆಯಾಗಿದೆ—(೧) ಭಾರತದ ತಯಾರಕರು ಪರದೇಶಗಳ ಜನತೆಯ ಅಭಿರುಚಿಗೆ ಒಪ್ಪುವ ನಕಾಶೆ ಮತ್ತು ಯೋಗ್ಯತೆಗಳ ಕಡೆಗೆ ಸಾಕಷ್ಟು ಗಮನವನ್ನು ಈಗ ಕೊಡುತ್ತಿಲ್ಲ. (೨) ಭಾರತದಲ್ಲಿ ಏನು ತಯಾರಾಗುತ್ತಿದೆ ಎಂಬ ಕುರಿತು ವಿದೇಶಗಳವರಿಗೆ ಸರಿಯಾದ ಮಾಹಿತಿಯು ಸಿಗುತ್ತಿಲ್ಲ. ಭಾರತ ಸರಕಾರದವರು ಜಗತ್ತಿನ ಬೇರೆಬೇರೆ ಪ್ರಾಮುಖ್ಯ ಪಟ್ಟಣಗಳಲ್ಲಿ ಇಪ್ಪತ್ತರ ವರೆಗೆ ಸುಮಾರು ೧೪ ಪ್ರದರ್ಶನ ಗೃಹಗಳನ್ನು ತೆರೆದು ಭಾರತದ ಸರಕುಗಳ ವೈವಿಧ್ಯ ಮತ್ತು ಆಕರ್ಷಣೆಯನ್ನು ಆಯಾ ದೇಶಗಳ ಜನರಿಗೆ ಮನವರಿಕೆ ಮಾಡಿಸಿಕೊಡಲು ನೋಡಿದ್ದಾರೆ. ಇದಲ್ಲದೆ ೧೯೫೫ರಿಂದ ಈಚೆಗೆ ೨೫ ರಾಷ್ಟ್ರಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಭಾಗವಹಿಸಿ ಈ ಸರಕುಗಳನ್ನು ಜನರ ಅವಗಾಹನೆಗೆ ತಂದು ಕುಟ್ಟಿದ್ದಾರೆ. ಇಷ್ಟು ಸಾಲದೆಂಬುದೇ ಈಗಿನ ದೂರು.

ಯೋಗ್ಯತೆ ಹೆಚ್ಚಲಿ

ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಭಾರತ ಅನೇಕ ರಾಷ್ಟ್ರಗಳೊಡನೆ ವ್ಯಾಪಾರ ಒಪ್ಪಂದವನ್ನು ಮಾಡಿಕೊಂಡಿದೆ. ವಿನಿಮಯಕ್ಕೆ ಸಮ್ಮತಿಸಿದ ವಸ್ತುಗಳಲ್ಲಿ ಕುಶಲ ಕಲೆಯ ಸರಕುಗಳೂ ಸೇರಿವೆ. ಆದುದರಿಂದ ಇನ್ನಷ್ಟು ಹೆಚ್ಚು ಗಮನವನ್ನು ಕೈಗಾರಿಕೆಯು ಈ ರಂಗಕ್ಕೆ ನೀಡಬೇಕಾಗಿದೆ. ಹೆಚ್ಚು ಹೆಚ್ಚಾಗಿ ಅಂತಾರಾಷ್ಟ್ರೀಯ ಪ್ರದರ್ಶನಗಳಲ್ಲಿ ಭಾಗವಹಿಸುವುದು, ವ್ಯಾಪಾರ ಮಂಡಳಿಗಳನ್ನು ವಿದೇಶಗಳಿಗೆ ಕಳಿಸಿ ಹೊಸ ಪೇಟೆಗಳನ್ನು ಸಂಪಾದಿಸುವುದು, ಸಂಶೋಧನೆ ಮತ್ತು ಇತರ ರೀತಿಯಿಂದ ಸರಕುಗಳ ಗುಣ ಸಂವರ್ಧನೆಗೆ ಪೂರಣಗುವುದು, ಧಾರಾಳ ಪ್ರಚಾರ ಕಾರ್ಯಕ್ರಮವನ್ನೆಟ್ಟಿಕೊಂಡು ಜನರ ತಿಳುವಳಿಕೆಯನ್ನು ಅಧಿಕಗೊಳಿಸಿ, ಆಸಕ್ತಿಯನ್ನು ಹುಟ್ಟಿಸುವುದು ಅವಶ್ಯವಾಗಿದೆ. ರಾಂಚಿಯಲ್ಲಿ ೧೯೫೪ನೇ ಜನವರಿಯಲ್ಲಿ ಸಭೆ ಸೇರಿದ ಅಖಿಲ ಭಾರತ ಕರಕುಶಲ ಸರಕುಗಳ ಮಂಡಳವು ಈ ಕುರಿತು ಅನೇಕ ಸೂ

(೧೧ನೇ ಪುಟನೋಡಿರಿ)

THE CANARA MUTUAL
Assurance Company Limited
Managing Director: T. R. A. PAI
Head Office: UDIPI, S. India.] [Estd: 1935.
ಅತ್ಯುತ್ತಮ ಜೋನಸ್
ಲಾಭಸಹಿತ ಪೋಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18 ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15 ಎಂಡೋಮೆಂಟ್ ಎಶ್ಯೂರೆನ್ಸಿಗೆ
(31-12-1953ನೇ ತಾರೀಕಿನಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.)
ಕಂಪೆನಿಯ ಸೊತ್ತುಗಳ ಮೊತ್ತವು
ಒಂದು ಕೋಟಿ ರೂಪ್ಯಾಗಳನ್ನು ಮೀರಿರುತ್ತದೆ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಜೋನಸ್ ಹಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA LTD.,
"Mukund Navis" UDIPI, S. India.

ರಾಜ್ಯಗಳ ಸ್ವರೂಪ ನಿರ್ಣಯ ಸಮಸ್ಯೆಯ ಇತಿವೃತ್ತ

ಬ್ರಿಟಿಷರ ದೃಷ್ಟಿಕೋಣಕ್ಕೂ ರಾಷ್ಟ್ರೀಯರ ಅಭಿಪ್ರಾಯಕ್ಕೂ ಇದ್ದ ಸಾಮ್ಯ ಮತ್ತು ವ್ಯತ್ಯಾಸ

ಫಜಲಾಲಿ ಆಯೋಗದ ಶಿಫಾರಸಿನ ಪರಿಣಾಮವಾಗಿ ಭಾರತದ ರಾಜ್ಯಗಳ ಸ್ವರೂಪದಲ್ಲಿ ಮಹತ್ವದ ಪುನರ್ಘಟನೆಯು ನಡೆಯಲಿದೆ—ಎಂಬುದನ್ನು ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸಿನ ಸಭೆಯು ಮೊನ್ನೆ ಸ್ವೀಕರಿಸಿದ ಗೊತ್ತುವಳಿಯು ಸ್ಪಷ್ಟ ಪಡಿಸಿರುತ್ತದೆ. ಈ ಸಂದರ್ಭದಲ್ಲಿ ನವ್ಯ ರಾಜ್ಯಗಳು ಈಗಿರುವಂತೆ ರೂಪುಗೊಂಡ ಬಗೆ ಮತ್ತು ಅವುಗಳನ್ನು ಪುನರ್ಘಟಿಸುವ ಕುರಿತಾಗಿ ನಡೆದ ಚಳವಳಿಗಳ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಪಾದಿಸುವ ಕುತೂಹಲವಾಗುವುದು ಸಹಜ. ಫಜಲಾಲಿ ಆಯೋಗವು ತನ್ನ ವರದಿಯ ಪ್ರಥಮ ಭಾಗದ ಎರಡು ಅಧ್ಯಾಯಗಳಲ್ಲಿ ಇದನ್ನು ವಿಸ್ತಾರವಾಗಿ ವಿವರಿಸಿ, ಸವಿಸ್ತಯ ಚಾರಿತ್ರಿಕ ಹಿನ್ನೆಲೆಯ ಮೇಲೆ ಪ್ರಕಾಶವನ್ನು ಚೆಲ್ಲಿದೆ.

ಆಂಗ್ಲರ ಕಾಲದಲ್ಲಿ

ಬ್ರಿಟಿಷರು ಭಾರತದಲ್ಲಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುತ್ತಾ ಹೋದಂತೆ ಅಸ್ಮಿಕವಾಗಿಯೇ ಆಗಿನ ಪರಿಸ್ಥಿತಿಗೊಪ್ಪಬಹುದಾಗಿ ಕೆಲವು ರಾಜ್ಯಗಳು ರೂಪಿತವಾದರೆ, ಇನ್ನು ಕೆಲವು ಸ್ವಾತಂತ್ರ್ಯೋತ್ತರದಲ್ಲಿ ದೇಶೀಯ ಸಂಸ್ಥಾನಗಳ ವಿಲೀನೀಕರಣದಿಂದ ಹುಟ್ಟಿಕೊಂಡವು. ಹೀಗೆ ಈಗಿನ ರಾಜ್ಯಗಳ ಮೂಲ ಎರಡು ಬಗೆಯಾಗಿದೆ. ಬ್ರಿಟಿಷರ ಕಾಲದಲ್ಲಿ ಬ್ರಿಟಿಷ್ ಇಂಡಿಯ ಮತ್ತು ದೇಶೀಯ ಸಂಸ್ಥಾನಗಳೆಂಬುದಾಗಿ ಭಾರತವನ್ನು ವಿಭಜಿಸಿರುವುದಕ್ಕೆ ಚಾರಿತ್ರಿಕವಾದ ಸಮರ್ಥನೆಯಾಗಲೀ ಒಳ್ಳೆಯ ಕಾರಣಗಳಾಗಲೀ ಇಲ್ಲ. ಗಿಲಾಟ್ಸರಲ್ಲಿ ಭಾರತದಲ್ಲಿ ನಡೆದ ಕೋಲಾಹಲದಿಂದಾಗಿ ಬ್ರಿಟಿಷರು ಇನ್ನು ಮುಂದೆ ದೇಶೀಯ ಸಂಸ್ಥಾನಗಳನ್ನು ತಮ್ಮ ನೇರಾದ ಆಡಳಿತಕ್ಕೆ ಒಳಪಡಿಸುವ, ಅಂದರೆ ಆಂಗ್ಲ ಸಾಮ್ರಾಜ್ಯದ ವಿಸ್ತರಣೆ ಮಾಡುವ ಆಕಾಂಕ್ಷೆ ತಮಗಿಲ್ಲವೆಂದು ಘೋಷಿಸಿದುದರಿಂದ ಅಳಿಗುಳಿದ ದೇಶೀಯ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಕೆಡಿಸಿಕೊಳ್ಳದೆ ಇರುವಂತಾಯಿತು. ಹೀಗಾಗಿ ಇವುಗಳ ಸಂಘಟನೆಯಲ್ಲಿ ಯಾವ ಮುನ್ನೋಟವೂ ಇರಲಿಲ್ಲ. ನೇರಾಗಿ ಬ್ರಿಟಿಷರ ಕೈಯಲ್ಲಿದ್ದ ಪ್ರದೇಶಗಳ ಸ್ಥಿರೂಪವನ್ನಾದರೂ ಯಾವುದೇ ತರ್ಕಶುದ್ಧ ತಳಹದಿಯ ಮೇಲೆ ಕೈಗೊಂಡಿರಲಿಲ್ಲ; ಯೋಜನಾ ಬದ್ಧವಾಗಿಯೂ ಮಾಡಿರಲಿಲ್ಲ. "ಸೈನಿಕ, ರಾಜಕೀಯ ಹಾಗು ಆಡಳಿತ ಅನುಕೂಲತೆ ಮತ್ತು ಆ ಕಾಲದ ಆವಶ್ಯಕತೆಗಳಿಗನುಸಾರವಾಗಿ" ರಾಜ್ಯಗಳ ಸ್ವರೂಪ ನಿರ್ಣಯವಾಯಿತೆಂದು ಸಾಮಾನ್ಯವಾಗಿ ಹೇಳಬಹುದು.

ಇಬ್ಬಗೆಯ ಉದ್ದೇಶ

ಎರಡು ಮುಖ್ಯ ಉದ್ದೇಶಗಳನ್ನು ಸಾಧಿಸುವುದೇ ಬ್ರಿಟಿಷರು ರಾಜ್ಯಗಳ ಆಡಳಿತದ ಹೊಣೆಯೆಂದು ತಿಳಿದಿದ್ದರು:(೧)"ಆರ್ಥಿಕ ಹಾಗು ಸೈನಿಕ ದೃಷ್ಟಿಯಿಂದ ಪ್ರಾಮುಖ್ಯವೆನಿಸಿದ ಕ್ಷೇತ್ರಗಳಲ್ಲಿ ತಮ್ಮ ನೇರಾದ ಮತ್ತು ಅತ್ಯುಚ್ಚ ಮಟ್ಟದ ಅಧಿಕಾರವನ್ನು ಹೇರುವುದು; ಮತ್ತು (೨) ಹಿಂದಿನ ಆಡಳಿತಗಾರರ ಅಭಾವದಿಂದುಂಟಾದ ರಾಜಕೀಯ ರಂಗದ 'ಶೂನ್ಯ' ವನ್ನು ಹೇಗಾದರೂ ತುಂಬಿಸಿ ಕೊಡುವುದು. ಇವೆರಡರಲ್ಲಿಯೂ ಯಾವಾಗಲೂ ಮೊದಲಿನ ಉದ್ದೇಶವೇ ಹೆಚ್ಚಾಗಿ ಮಹತ್ವ ಪಡೆದಿತ್ತೆಂದು ಇತಿಹಾಸ ಶಾಸ್ತ್ರಿ ಹೇಳುತ್ತದೆ. ಈ ಉದ್ದೇಶವು ಸಾಂಪ್ರದಾಯಿಕವಾಗಿ ನಡೆದುಕೊಂಡು ಬಂದ ಪ್ರಾದೇಶಿಕ ವಿಧೇಯತೆ ಮತ್ತು ರಾಜ ವಂಶಜರಿಗೆ ತೋರಿಸುವ ನಿಷ್ಠೆಯನ್ನು ನಿರ್ಮೂಲಿಸುವುದರಿಂದ ಮಾತ್ರವೇ ಸೇರಿದೇರೀತೆಂದು ಬ್ರಿಟಿಷರು ಕಾಡುಕೊಂಡರು. ಇದನ್ನು ಸಾಧಿಸಲು ಅವರು ಪ್ರಾದೇಶಿಕ ವಲಯಗಳಿಗೆ ಇದ್ದ ಗಡಿಗಳನ್ನು ತೆಗೆದು ಹಾಕಿ ಸಾಮಾನ್ಯ ಆರ್ಥಿಕ ಸಂಬಂಧವನ್ನೂ ಸಾಂಸ್ಕೃತಿಕ ಐಕ್ಯವನ್ನು ಕಡೆಗಣಿಸಿ ಹೊಸ ಮೇರೆಗಳುಳ್ಳ ರಾಜ್ಯಗಳ ಘಟಕಗಳನ್ನು ತಯಾರಿಸಿದರು. ಲಂಡನಿನ ಸಾಮ್ರಾಜ್ಯ ಶಾಹಿತ್ವದ ವಿಜೆಂಟನಂತೆ ಜೆಲಸ ಮಾಡುತ್ತಿದ್ದ ಕೇಂದ್ರ ಸರಕಾರಕ್ಕೆ ಅಧೀನನಾಗಿ, ಅದರ ಮರ್ಜಿಯಂತೆ ನಡೆಯುವುದೇ ರಾಜ್ಯ ಸರಕಾರಗಳ ಕರ್ತವ್ಯವೆಂದು ಬ್ರಿಟಿಷರು ವಿಧಿಸಿದರು

ಪ್ರಾಂತ್ಯಗಳ ಚರಿತ್ರೆ

ವ್ಯಾಪಾರಕ್ಕೆಂದು ಬಂದು ಭಾರತದ ಕರಾವಳಿಯ ಕೆಲವೇ ನಗರಗಳಲ್ಲಿ ನೆಲೆ ನಿಂತಿದ್ದ ಬ್ರಿಟಿಷರು ನಿಧಾನವಾಗಿ ಳ್ಳೀಯ ರಾಜಕೀಯದಲ್ಲಿ ಕೈಯಾಡಿಸ ತೊಡಗಿ, ಒಳನಾಡಿನ ಪ್ರದೇಶಗಳ ಮೇಲೆ ಒಡೆತನವನ್ನು ಹೇರಿದರೆಂಬ ನಮಗೆ ಗೊತ್ತಿದೆ. ಬ್ರಿಟಿಷರ ಕುಹಕ ಚಾತುರ್ಯಗಳಿಂದಾಗಿ ಗಿಲಾಂಗರಲ್ಲಿ ಮದ್ರಾಸು ಪ್ರಾಂತ್ಯವೂ ಗಿಲಾಟಿಸರಲ್ಲಿ ಮುಂಬಯಿ ಪ್ರಾಂತ್ಯವೂ ರೂಪುಗೊಂಡವು. ಬಂಗಾಲ ಪ್ರಾಂತ್ಯವು ಗಿಲಾಟಿಸನೇ ಇಸವಿಯ ಹೊತ್ತಿಗೆ ಒಂದು ನಿಶ್ಚಿತ ಸ್ವರೂಪವನ್ನು ಹೊಂದಿತು. ಗಿಲಾಟಿಸರಲ್ಲಿ ಮಾಡಿದ್ದೊಂದು ಶಾಸನವು ವಿಶೇಷ ವಿಸ್ತಾರವನ್ನು ಹೊಂದಿದ್ದ ಬಂಗಾಳವನ್ನು ತುಂಡುಮಾಡಿ ಆಗ್ನ ಪ್ರಾಂತ್ಯವನ್ನು ರೂಪಿಸಬೇಕೆಂದು ಸೂಚಿಸಿತ್ತಾದರೂ ಹಿಂದಿನಿಂದ ಕಡಿಮೆ ವೆಚ್ಚದಲ್ಲಿ ಸೈನಿಕ ಮಹತ್ವದ ಹೊಸ ಕೊಂದು ರಾಜ್ಯವನ್ನು ರೂಪಿಸಬೇಕಾಗಿ ಬಂದುದರಿಂದ ಈ ವಿಚಾರವನ್ನು ತತ್ಕಾಲಕ್ಕೆ ನಿಶ್ಚಿಸಲಾಯಿತು. ಹೀಗೆ ವಾಯವ್ಯ ಪ್ರಾಂತ್ಯವು ಗಿಲಟಿಸರಲ್ಲಿ ರೂಪುಗೊಂಡಿತು. ಬಿಹಾರಿನ ಪಶ್ಚಿಮಕ್ಕಿದ್ದ ಬಂಗಾಳ ಪ್ರಾಂತ್ಯದ ಎಲ್ಲ ಭೂ ಭಾಗಗಳನ್ನೂ ಈ ಹೊಸ ಪ್ರಾಂತ್ಯಕ್ಕೆ ಕೂಡ ಮಾಡಲಾಯಿತು. ಮುಂದೆ ಗಿಲಗಿರಲ್ಲಿ ಪಂಜಾಬನ್ನು ರಚಿಸಲಾಯಿತು. ಗಿಲಾಟಿಸರಲ್ಲಿ ಸಂಪಾದಿಸಿದ ಔಧ್ ಪ್ರಾಂತ್ಯವನ್ನು ಗಿಲಟಿಸರಲ್ಲಿ ವಾಯವ್ಯ ಪ್ರಾಂತ್ಯಕ್ಕೆ ಸೇರಿಸಲಾಯಿತು. ಗಿಲಾಳರಲ್ಲಿ ಸಂಪಾದಿಸಿದ ನಾಗಪುರದ ರಾಜನ ಪ್ರಾಂತ್ಯವನ್ನು ವಾಯವ್ಯ ಸರಹದ್ದಿನ ಸೌಗೋರ್ ಮತ್ತು ನರ್ಬದ ಜಿಲ್ಲೆಗಳನ್ನೂ ಪ್ರತ್ಯೇಕಿಸಿ ಮಧ್ಯ ಪ್ರಾಂತ್ಯವನ್ನು ರಚಿಸಲಾಯಿತು. ಗಿಲಟಿಸರಲ್ಲಿ ಸಂಪಾದಿಸಿದ್ದ ಅಸ್ಸಾಮನ್ನು ಗಿಲಟಿಳನೇ ಇಸವಿಯ ವರೆಗೆ ಬಂಗಾಳದಲ್ಲಿಟ್ಟು ಮುಂದೆ ಪ್ರತ್ಯೇಕ ಪ್ರಾಂತ್ಯವನಾಗಿ ಮಾಡಲಾಯಿತು. ಗಿಲಾಂಗರಲ್ಲಿ ಪಂಜಾಬಿನಲ್ಲಿ ಸೈನಿಕ ಮಹತ್ವದ ಭಾಗವೆಂದು ಕಂಡು ಬಂದ ವಾಯವ್ಯ ಸರಹದ್ದಿನ ಪ್ರದೇಶಗಳನ್ನು ಪ್ರತ್ಯೇಕಿಸಿ ಬೇರೆಯೇ ರಾಜ್ಯವನ್ನು ರಚಿಸಿದರು. ಇಗ ಉಳಿದ ವಾಯವ್ಯ ಪ್ರಾಂತ್ಯವನ್ನೆ ಸಂಯುಕ್ತ ಪ್ರಾಂತ್ಯವೆಂದು ಕರೆದು ಹೊಸ ರಾಜ್ಯಕ್ಕೆ ವಾಯವ್ಯ ಸರಹದ್ದಿನ ಪ್ರಾಂತ್ಯವೆಂದು ನಾಮಕರಣ ಮಾಡಿದರು.

ಸಾಮ್ರಾಜ್ಯದ ಹಿತಾಸಕ್ತಿ

ಇದನ್ನು ನೋಡಿದರೆ, ಬ್ರಿಟಿಷರು ತಮ್ಮ ಮನಸ್ಸಿಗೆ ಬಂದಂತೆ, ಸೈನಿಕ ಹಾಗು ಆಡಳಿತ ದೃಷ್ಟಿಯಲ್ಲಿ ತಮಗೆ ಅವಶ್ಯವೆನಿಸಿ ತೋರಿದಂತೆ, ಮತ್ತು ಸಾಮ್ರಾಜ್ಯಶಾಹಿತ್ವದ ಹಿತಾಸಕ್ತಿಗೆ ಅನುಗುಣವಾಗುವಂತೆ ರಾಜ್ಯಗಳನ್ನು ರಚಿಸಿದರೇ ಹೊರತು ಜನತೆಯ ಇಚ್ಛೆಯನ್ನಾಗಲೀ ಅವರ ಬಾಂಧವ್ಯದ ಕಲ್ಪನೆಯನ್ನಾಗಲೀ ಪರಿಶ್ಯರಿಸಲು ಹೋಗಲಿಲ್ಲವೆಂದು ಸ್ಪಷ್ಟವಾಗುತ್ತದೆ. ಆದರೆ ೧೯ನೇ ಶತಮಾನದ ತೀರ ಉತ್ತರಾರ್ಧದಲ್ಲಿ ಜಾಗೃತವಾದ ರಾಷ್ಟ್ರೀಯ ಭಾವನೆಯು, ಪ್ರಾದೇಶಿಕ ವಲಯದ ಗಡಿ ಬದಲಾವಣೆ ಮಾಡುವ ಪ್ರಶ್ನೆ ಬಂದಾಗಲೆಲ್ಲ ಕೇವಲ ಆಡಳಿತದ ಅನುಕೂಲತೆಯೊಂದೇ ನಾಕೇ ಎಂಬುದನ್ನು ಇತರ ಸಂಗತಿಗಳೊಂದಿಗೆತಕ್ಕಡಿಯಲ್ಲಿಟ್ಟು ತೂಗಿ ನೋಡುವ ನೀತಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಆದರೆ ಬ್ರಿಟಿಷರು ರಾಷ್ಟ್ರೀಯ ಭಾವನೆಗೆ ಪ್ರೋತ್ಸಾಹ ಕೊಡುವ ಯಾವುದೇ ಸಂಗತಿಯನ್ನು ಸಹಿಸಲಿಲ್ಲ. ೧೯೦೫ರಲ್ಲಿ ಬಂಗಾಳದ ವಿಭಜನೆಯನ್ನು ಅವರು ಮಾಡಲು ಹೋದಾಗ ಬಿಹಾರ ಮತ್ತು ಒರಿಸ್ಸವನ್ನು ಕೂಡಿದ್ದ ಬಂಗಾಳವು ಸುಲಭ ಆಡಳಿತಕ್ಕೆ ಬಗ್ಗದಷ್ಟು ಕೈಮೀರಿದ ವಿಸ್ತಾರವನ್ನು ಹೊಂದಿದೆ ಎಂಬ ಪ್ರಕಟ ಕಾರಣಕ್ಕಿಂತಲೂ ಕ್ರಾಂತಿಕಾರಿ ಶಕ್ತಿಗಳನ್ನು ನಿರುತ್ತೇಜಿಸುವುದನ್ನೆ ಹಿನ್ನೆಲೆಯ ಉದ್ದೇಶವಾಗಿ ಇಟ್ಟುಕೊಂಡಿದ್ದರು. ಈ ವಿಭಜನೆಯ ಸೂತ್ರವು ಪೂರ್ವ ಬಂಗಾಲ ಮತ್ತು ಅಸ್ಸಾಮುಗಳು ಒಟ್ಟಿಗೆ ಒಂದು ಪ್ರಾಂತ್ಯ, ಮತ್ತು ಬಿಹಾರ, ಒರಿಸ್ಸಾ, ಛೋಟಾ ನಾಗಪುರ ಹಾಗು ಬಂಗಾಳದ ಉಳಿದ ಭಾಗಗಳು ಒಟ್ಟಿಗೆ ಇನ್ನೊಂದು ಪ್ರಾಂತ್ಯ ಆಗುವಂತೆ ಮಾಡಿತು.

ಕರ್ಜನ್ನರ ಗೊತ್ತುವಳಿ

ಬಂಗಾಳದ ವಿಭಜನೆಯು ಭಾರತದಲ್ಲಿ ಆಗತಾನೆ ಕಟ್ಟಿ ಎತ್ತತೊಡಗಿದ್ದ ರಾಷ್ಟ್ರೀಯ ಭಾವನೆಯನ್ನು ಎಸ್ಟರ ಮಟ್ಟಿಗೆ ಎಚ್ಚರಿಸಿತೋ ಘಾತಾನ-ಗುಣವಾಗಿ ಪ್ರಾಂತ್ಯಗಳನ್ನು ರಚಿಸುವ ಕುರಿತು ಜನತೆ ಅಷ್ಟೇ ವಿಶೇಷವಾದ ಗಮನವನ್ನು ಕೊಡುವಂತೆಯೂ ಆದು ಮಾಡಿತು. ಮೊದಲೇ ಸೂಚಿಸಿದಂತೆ ಬ್ರಿಟಿಷರು ಕುಹಕ ಕೈವಾಡವನ್ನೆ ಬಂಗಾಲದ ವಿಭಜನೆಯಲ್ಲಿ ನಡೆಸಿದ್ದುದರಿಂದ ರಾಷ್ಟ್ರೀಯ ಚಳವಳಿಯ ಶಕ್ತಿಯು ಹೆಚ್ಚಿತು. ಆಳುತ್ತಿದ್ದ ಪರಕೀಯರ ದೃಷ್ಟಿಕೋಣವು ಬಂಗಾಳದ ವಿಭಜನೆಯು ಸಂಗತಿಯ ಹೇಗಿತ್ತೆಂಬುದನ್ನೂ ಅದು ಹಿಂದಿನವರ ನೀತಿಗಿಂತ ಎಷ್ಟರಮಟ್ಟಿಗೆ ಭಿನ್ನವಾಗಿತ್ತೆಂಬುದನ್ನೂ ಆಗಿನ ವೈಸರಾಯಿಯಾಗಿದ್ದ ಲಾರ್ಡ್ ಕರ್ಜನ್ ದೊರೆಯು ಸ್ವೀಕರಿಸಿದ ೧೯೦೫ನೇ ಜುಲಾಯಿಯ ಗೊತ್ತುವಳಿಯು ವ್ಯಕ್ತಪಡಿಸುತ್ತದೆ. ಮದ್ರಾಸಿನಿಂದ ಗಂಜಾಂ ಮತ್ತು ವಿಶಾಖ ಪಟ್ಟಣ ಜಿಲ್ಲೆಯ ಪ್ರದೇಶಗಳನ್ನು ವರ್ಗಾಯಿಸಬಾರದೆಂಬುದಕ್ಕೆ ಈ ಗೊತ್ತುವಳಿಯಲ್ಲಿ ಆಡಳಿತದ ಸೌಕರ್ಯ, ಭೂಗೋಲಿಕ ಸ್ವರೂಪ ಮತ್ತು ಭಾಷಾನುಗುಣವೂ ವರ್ಣಾನುಗುಣವೂ ಆದ ವೈಶಿಷ್ಟ್ಯಗಳನ್ನು ಕಾರಣವಾಗಿ ಕೊಡಲಾಯಿತು. ಬಂಗಾಲ ಸರಕಾರದ ಆಡಳಿತ ಕ್ಷೇತ್ರದಲ್ಲಿಯೇ ಛೋಟಾ ನಾಗಪುರ ಪ್ರದೇಶವನ್ನು ಉಳಿಸುವುದಕ್ಕೆ ವಾಣಿಜ್ಯ ಪರಿಸ್ಥಿತಿಯ ನೆಪವನ್ನೂ ನೀತಲಾಯಿತು. ಮನ್ಯ

ರುಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ½ ರಾತಲಿಗೆ ರೂ. 1/13.
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಶಾ ಕಂಸೆಸ್ಸಿ, ಮಂಗಳೂರು.
2. ವಿ. ವಿ. ಶೆಣ್ಯೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,
ವಿವರವಾದ ಕಿಟಲಾಗು ಬೇಕಿದ್ದವರಿ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

ಮೈಸೂರು ಸಹಿತ ಕರ್ನಾಟಕ ರಾಜ್ಯ

ಇದೇ ಜನತೆಯ ಬಹು ದಿನಗಳ ಆಶೆ

ಹೊಸದೆಹಲಿಯಲ್ಲಿ ಸಭೆಗೂಡಿದ್ದ ಅಖಿಲ ಭಾರತ ಕಾಂಗ್ರೆಸು ಸಮಿತಿಯು ನಾಲ್ವರು ವರಿಷ್ಠರ ಉಪಸಮಿತಿಯೊಂದಕ್ಕೆ ಫಜಲಾಲಿ ಆಯೋಗವು ಸೂಚಿಸಿದ ಕರ್ನಾಟಕ ರಾಜ್ಯದ ಕುರಿತು ಹೆಚ್ಚಿನ ಪರಿಶೀಲನೆಗಳನ್ನು ನಡೆಸಿ, ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲು ಬಿಟ್ಟಿದೆ.

ಈ ಸಭೆಯಲ್ಲಿ ಕರ್ನಾಟಕದ ಕುರಿತು ಕೊನೆಯ ನಿರ್ಧಾರವಾಗದಿರುವುದಕ್ಕೆ ಬಳ್ಳಾರಿಯ ಭವಿಷ್ಯದ ಪ್ರಶ್ನೆಯು ಜಿಗುಟಿ ನಿಂತಿದ್ದೇ ಕಾರಣವೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಕೇಂದ್ರ ಸರಕಾರದ ಪ್ರಭೃತಿಗಳು ಬಳ್ಳಾರಿಯ ಕುರಿತು ಹಿಂದೆ ಕೆಲವು ನಿರ್ಧಾರದ ಮಾತುಗಳನ್ನಾಡಿದ್ದರು; ಅಲ್ಲದೆ ಫಜಲಾಲಿ ಆಯೋಗವು ಬಳ್ಳಾರಿಯನ್ನು ಆಂಧ್ರಕ್ಕೆ ವರ್ಗಾಯಿಸಲು ಕೊಟ್ಟ ಸೂಚನೆಗಳಲ್ಲಿ ಸುಹಜ್ಞದ್ದೆನಿಸಿದ ತುಂಗಭದ್ರ ಆಣೆಕಟ್ಟಿನ ಪ್ರಯೋಜನಾಂಶವು ಸತ್ಯ ಸಂಗತಿಗಳಿಗೆ ಹೊಂದಿಕೊಂಡಿಲ್ಲವೆನ್ನುವುದನ್ನು ಆಣೆಕಟ್ಟಿನ ಆತಳಿತ ಮಂಡಳದ ಅಧ್ಯಕ್ಷರು ಕಳೆದ ವಾರ ಪ್ರಕಟಪಡಿಸಿದರು. ಇದರಿಂದ ವಿವಂವಾದ ಪರಿಶೀಲನೆ ಅಗತ್ಯವೆನಿಸಿತೆಂದು ಊಹಿಸಬಹುದು.

ನೆಹರುಗಳ ಆಸೆ

ಇದರೊಂದಿಗೆ ಇನ್ನೊಂದು ಸಂಗತಿಯ ಕುರಿತೂ ಹೆಚ್ಚಿನ ಮಾಹಿತಿಯು ಅವಶ್ಯವೆಂದು ಕಾಂಗ್ರೆಸಿನ ಸೂತ್ರಧಾರರಿಗೆ ಕಂಡಿರಬೇಕು. ಮೈಸೂರಿನ ಮೂವರು ಮಂತ್ರಿಗಳೂ ಇತರ ಕೆಲವು ಧುರೀಣರೂ "ಎರಡು ಕರ್ನಾಟಕ"ಗಳ ಮಾತನ್ನಾಡುತ್ತಿದ್ದಾರೆ. ಇವರು ಜನಾಭಿಪ್ರಾಯವನ್ನು ಎಷ್ಟರ ಮಟ್ಟಿಗೆ ಪ್ರತಿಬಿಂಬಿಸುತ್ತಿರಬಹುದೆಂಬುದನ್ನು ನೆನೆಯದಿರಲಾಗದು. ೧೯೫೩ರಲ್ಲಿ ರಾಜಕೀಯ ಸುಧಾರಣೆಯ ವರದಿಯನ್ನು ಒಪ್ಪಿಸಿದ ನೆಹರೂ ಮತ್ತು ಆತಳಿತದ ಅಗತ್ಯಗಳೇ ಕಾರಣವೆಂದೂ ಸ್ಪಷ್ಟಪಡಿಸಲು ಬ್ರಿಟಿಷರು ತಪ್ಪಲಿಲ್ಲ.

ಪುನರ್ಘಟನೆಯ ಸೂಚನೆ

ಉಪರೋಕ್ತ ರೀತಿಯಲ್ಲಿ ರೂಪುಗೊಂಡ ರಾಜ್ಯಗಳ ಬಾಹ್ಯ ರೂಪನನ್ನಾಗಲೀ ಅವುಗಳ ರಚನೆಯಲ್ಲಿ ಅನುಸರಿಸಿದ ತತ್ವವನ್ನಾಗಲೀ ಬ್ರಿಟಿಷ ರಾಜಕಾರಣಿಗಳಲ್ಲಿಯೇ ಹಲವರು ಮೆಚ್ಚಲಿಲ್ಲವ

ಸಂಸ್ಕೃತಾಭ್ಯಾಸಕ್ಕೆ ಪ್ರೋತ್ಸಾಹ

ತಿರುಪತಿಯಲ್ಲಿ ವಿಶ್ವ ಪರಿಷತ್ತಿನ ಅಧಿವೇಶನ

ಹಿಂದುಗಳ ಪ್ರಸಿದ್ಧ ಪುಣ್ಯ ಕ್ಷೇತ್ರವಾದ ತಿರುಪತಿಯಲ್ಲಿ ಇದೇ ೧೧ನೇ ದಿನಾಂಕದಿಂದ ನೂರು ದಿನಗಳ ವರೆಗೆ "ಸಂಸ್ಕೃತ ವಿಶ್ವ ಪರಿಷತ್ತು" ತನ್ನ ನಾಲ್ಕನೇ ಅಧಿವೇಶನವನ್ನು ಜರಗಿಸಿತು. ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಅಧಿವೇಶನವನ್ನು ಉದ್ಘಾಟಿಸಿ, ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು.

ಸಂಸ್ಕೃತಾಭ್ಯಾಸದ ಅಗತ್ಯ

ಅವರು ಸಂಸ್ಕೃತದ ಮೇಲೆ ತನಗಿರುವ ಪ್ರೀತಿಯ ಕಾರಣವನ್ನು ವಿವರಿಸುತ್ತಾ ಭಾರತೀಯ ಸಂಸ್ಕೃತಿಯ ಮಹತ್ವ ಪೂರ್ಣವಾದ ಎಲ್ಲ ಅಂಶಗಳನ್ನೂ ಆಧ್ಯಾತ್ಮಿಕ ಉನ್ನತಿಗೆ ಸಾಧಕವಾದ ವಿಷಯಗಳೆಲ್ಲವನ್ನೂ ತನ್ನ ಉದರದಲ್ಲಿಟ್ಟುಕೊಂಡಿರುವ ಭಾಷೆ ಸಂಸ್ಕೃತವಾಗಿದೆ ಎಂದರು. ಸಾಳಿ ಮತ್ತು ಪ್ರಾಕೃತಗಳೆಂಬ ಬೇರೆ ಎರಡು ಭಾಷೆಗಳು ಸಂಸ್ಕೃತದಲ್ಲಿರುವ ಜ್ಞಾನಕ್ಕೆ ಹೊರಕ ಸಾಮಗ್ರಿಗಳನ್ನೊದಗಿಸುತ್ತವೆ. ಆದರೆ ಸಂಸ್ಕೃತದ ಅಳವಾದ ಪರಿಚಯವಿದ್ದರೆ ಮಾತ್ರ ಈ ಭಾಷೆಗಳ ತಿರುಳನ್ನು ಮನನ ಮಾಡುವುದು ಸಾಧ್ಯ. ಭಾರತೀಯ ತತ್ವ ಜ್ಞಾನದ ಬೇರೆ ಬೇರೆ ಮುಖಗಳ ಪರಿಚಯವಾಗಬೇಕೆಂದಿರುವವರೂ ಭಾರತೀಯ ಲಲಿತ ಕಲೆಗಳ ವಿಕಾಸ ಕ್ರಮದ ಅಧ್ಯಯನ ನಡೆಸಬೇಕೆಂದಿರುವವರೂ ನಮ್ಮ ಸಾಂಸ್ಕೃತಿಕ ವೈಶಿಷ್ಟ್ಯಗಳ ಪರಿಜ್ಞಾನಕ್ಕಾಗಿ ಹಾತೊರೆಯುವವರೂ ಸಂಸ್ಕೃತಾಭ್ಯಾಸವನ್ನೆ ಆಶ್ರಯಿಸಬೇಕಾಗಿದೆ ಎಂದು ರಾಷ್ಟ್ರಾಧ್ಯಕ್ಷರು ಹೇಳಿದರು

ಸ್ಫೂರ್ತಿಯ ಸ್ರೋತ

ಪರದೇಶಗಳ ಪಂಡಿತರು ಸಂಸ್ಕೃತಾಭ್ಯಾಸದ ಪ್ರಗತಿಗೆ ಬಹಳವಾಗಿ ಸಹಾಯ ಸಲ್ಲಿಸಿರುವುದನ್ನು ರಾಷ್ಟ್ರಾಧ್ಯಕ್ಷರೆ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು. ಸಂಸ್ಕೃತದ ಅನೇಕ ಅಭಿಜಾತ ಸಾಹಿತ್ಯ ಗ್ರಂಥಗಳ ಅಧ್ಯಯನವನ್ನು ಡಚ್, ಜರ್ಮನ್, ಫ್ರೆಂಚ್, ರಶ್ಯನ್ ಇತ್ಯಾದಿ ಭಾಷೆಗಳ ವಿದ್ವಾಂಸರು ೧೭ನೇ ಶತಮಾನದಿಂದ ಇಂದಿನ ವರೆಗೂ ಬಿಡದೆ ನಡೆಸುತ್ತಾ ಬಂದಿದ್ದಾರೆ. ನೂರು ವರ್ಷಗಳಿಂದೀಚೆಗೆ ಸಂಸ್ಕೃತ ಭಾಷಾ ಮಂಡಳಿಗಳೂಕೇವು ಪಾಶ್ಚಾತ್ಯ ದೇಶಗಳಲ್ಲಿ ಕೆಲಸ ನಡೆಸುತ್ತಿವೆ. ಕಾಂಬೋಲಿನ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತಾಭ್ಯಾಸವು ಕಡ್ಡಾಯವಾಗಿದೆ. ಇದನೆಲ್ಲ ತಿಳಿಯುವಾಗ ಭಾರತೀಯರ ಮನಸ್ಸಿನಲ್ಲಿ ತಾನಾಗಿಯೇ ಸಂಸ್ಕೃತಾಭ್ಯಾಸದ ಬಗ್ಗೆ ಗೌರವದ ಭಾವನೆಯೂ ಮೋಹವೂ ಉಂಟಾಗುತ್ತದೆ ಎಂದು ರಾಷ್ಟ್ರಾಧ್ಯಕ್ಷರು ನುಡಿದರು ಭಾರತದ ಎಲ್ಲ ಭಾಷೆಗಳಿಗೂ ಸಂಸ್ಕೃತವು ಸ್ಫೂರ್ತಿಯ ನೆಲೆಯಾಗಿದೆ, ದಕ್ಷಿಣದ ದ್ರಾವಿಡ ಭಾಷೆಗಳು ಸಹ ಧಾರ್ಮಿಕ ಹಾಗು ಸಾಂಸ್ಕೃತಿಕ ಕ್ಷೇತ್ರದಲ್ಲಿ ಪರಸ್ಪರ ಸಮನ್ವಯವನ್ನು ಸಾಧಿಸುವ ಮೂಲಕ ಸಂಸ್ಕೃತದ ಶಬ್ದ ಸಂಪತ್ತನ್ನು ಧಾರಾಳವಾಗಿ ಉಪಯೋಗಿಸಿಕೊಂಡಿವೆ ಎಂದವರು ತಿಳಿಸಿದರು.

ಒಗ್ಗಟ್ಟಿನ ಸೂತ್ರ

೨ ಸಾವಿರ ವರ್ಷಗಳ ಹಿಂದೆ ಭಾರತವು ಭೌಗೋಳಿಕವಾಗಿ ಇಂದಿಗಿಂತಲೂ ಹೆಚ್ಚು ವಿಸ್ತಾರವುಳ್ಳ ಪ್ರದೇಶವಾಗಿತ್ತೆಂದು ತಿಳಿದು ಬರುತ್ತದೆ. ಆ ಕಾಲದಲ್ಲಿ ಪರಸ್ಪರ ಸಂಪರ್ಕವನ್ನು ಹೆಚ್ಚಿಸುವ ಭೌತಿಕ ಸಾಧನಗಳು ಈಗಿಗಿಂತ ಎಷ್ಟೋ ಕಡಿಮೆಯಾಗಿದ್ದರೂ ಸಂಸ್ಕೃತ ಭಾಷೆಯೆಂದೇ ಭಾರತದಾದ್ಯಂತ ಸಾಮಾನ್ಯವಾಗಿ ಒಂದೇ ಬಗೆಯಾಗಿರುವ ಶಿಕ್ಷಣ ಕ್ರಮ, ಆಚಾರ ಪದ್ಧತಿ, ಧಾರ್ಮಿಕ ಸಂಪ್ರದಾಯ ಮತ್ತು ಮನೋಭಾವವನ್ನು ರೂಪಿಸಲು ಶಕ್ತವಾಯಿತು. ಅದು ಸಾಹಿತ್ಯ ಕ್ಷೇತ್ರದಲ್ಲಿ ಸಹ ತುಂಬ ಯಶಸ್ವಿಯಾದ ಕೃಷಿಯನ್ನು ಮಾಡಿತು. ನಮ್ಮ ದೇಶದ ಬೇರೆ ಬೇರೆ ಭಾಗಗಳಲ್ಲಿ ಪ್ರತ್ಯೇಕಿಕ ಭಾಷೆಗಳನ್ನು ಜನರು ಆಡುತ್ತಿದ್ದರೆಂಬುದು ಸುಳ್ಳಲ್ಲ. ಆದರೆ ಸುಸ್ಥ ಇಂದಿನ ರಾಷ್ಟ್ರ ಭಾಷೆಯ ಕಲ್ಪನೆಯನ್ನು ಹೋಲುವ ಸ್ಥಾನವನ್ನು ಸಂಸ್ಕೃತ ಪಡೆದಿತ್ತೆಂಬುದನ್ನು ಮರೆಯಲಾಗದು. ಈ ಭಾಷೆಯನ್ನು ಆಶ್ರಯಿಸಿಯೇ ಭಾರತದ ಎಲ್ಲ ಭಾಷೆಗಳೂ ವಿಕಾಸವನ್ನು ಹೊಂದಿದವು ಎಂದರು.

ಅವಕಾಶ ಅಧಿಕವಾಗಲಿ

ಇಷ್ಟರ ವೇಲಿಂದ ತಾನು ಸಂಸ್ಕೃತವನ್ನೆ ರಾಷ್ಟ್ರ ಭಾಷೆಯಾಗಿ ಇಂದು ಅಂಗೀಕರಿಸಬೇಕಾಗಿ ಜೋಳತ್ತಿದ್ದೇನೆಂದು ಭಾವಿಸಲಾಗದುಎಂದು ರಾಷ್ಟ್ರಾಧ್ಯಕ್ಷರೆ ಸ್ಪಷ್ಟ ಪಡಿಸಿದರು ಪರಿಸ್ಥಿತಿಗಳು ಇಂದ ಬಹಳ ಬದಲಾವಣೆ ಹೊಂದಿವೆ, ನಿಜ. ಆದರೆ, ಸಾಮಾನ್ಯವಾಗಿ ನಮ್ಮ ದೇಶಕ್ಕೆ ಸಂಸ್ಕೃತಾಭ್ಯಾಸದಿಂದ ಹೆಚ್ಚಿನ ಪ್ರಯೋಜನ ದೊರೆಯುವುದೆಂದು ನನ್ನ ಭಾವನೆಯಾಗಿದೆ ಸಂಸ್ಕೃತದ ಸ್ಥಾನ ಮಾನದ ಬಗ್ಗೆ ನಾವೇನೇ ಹೇಳಲಿ, ಆದರ ಅಭ್ಯಾಸದ ಮಹತ್ವವನ್ನು ಕಡೆಗಣಿಸುವಂತಿಲ್ಲ. ನನ್ನ ವಿಶಾಲವಾದ ಗೇಶದಲ್ಲಿ ಹೊಂದಾಣಿಕೆಯ ಹೊಂದಿಸಿರುವ, ನನ್ನ ಜನತೆಯ ಮನೋಭಾವವನ್ನು ವಿಕಸನುಖವಾಗಿ ರಚಿಸಿರುವ ಮತ್ತು ಉಜ್ವಲವಾದ ಪರಂಪರೆಯನ್ನು ರೂಪಿಸಿರುವ ಸಂಸ್ಕೃತ ಭಾಷೆಯ ಅಭ್ಯಾಸದ ಅವಕಾಶಗಳನ್ನು

(೭ನೇ ಪುಟ ನೋಡಿರಿ)


ಎಲ್ಲರಿಗೂ ಗೊತ್ತು —
ಬ್ರೂಕ್ ಬಾಂಡ್ ಅವರ ವೊಟ್ಟವನ್ನು ಸೀಲ್ ಮಾಡುವಿಕೆಯು ಬೆರಕೆ ಆಗುವುದನ್ನು ತಡೆಯುತ್ತದೆ — ಅತ್ಯಂತ ಶುದ್ಧವಾಗಿದೆ ಯೆಂಬುದನ್ನೂ ಖಂಡಿತ ಮಾಡುತ್ತದೆ
ಪ್ರತಿಯೊಂದು ಬ್ರೂಕ್ ಬಾಂಡ್ ವೊಟ್ಟದಿಂದಲೂ ನೀವು ಹೆಚ್ಚು ಬಟ್ಟಲು ಉತ್ತಮ ಚಹಾವನ್ನು ಪಡೆಯುತ್ತೀರಿ
ಬ್ರೂಕ್ ಬಾಂಡ್ ಚಹಾ ಮಾರಾಟದಲ್ಲಿ ಇತರ ಎಲ್ಲವುಗಳನ್ನು ಮೀರಿಸುತ್ತದೆ
Darjeeling
Brooke Bond Tea
Blend
Brooke Bond Tea
ಆದಕಾರಣವೇ ಇತರ ಯಾವದೇ ಚಹಾಗಿಂತಲೂ
ಬ್ರೂಕ್ ಬಾಂಡ್ ಚಹಾವನ್ನೇ
ಹೆಚ್ಚು ಜನರು ಕುಡಿಯುತ್ತಾರೆ!

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೬-೧೧-೧೯೫೫	೧೧

ಸಂಸ್ಕೃತದ ಪುನರುಜ್ಜೀವನ

ಮೊನ್ನೆ ಮೂರು ದಿನಗಳ ವರೆಗೆ ತಿರುಪತಿಯಲ್ಲಿ ನೇರಿದ ಸಂಸ್ಕೃತ ವಿಶ್ವ ಪರಿಷತ್ತಿನ ಅಧಿವೇಶನವು ಭಾರತದ ಸಾಂಸ್ಕೃತಿಕ ಪುನರುತ್ಥಾನ ಕಾರ್ಯ ಕ್ಯಾಗಿಯಷ್ಟೇಯಲ್ಲ, ರಾಷ್ಟ್ರದ ವೈಶಿಷ್ಟ್ಯ ರಕ್ಷಣೆಯ ದೃಷ್ಟಿಯಿಂದಲೂ ಸಂಸ್ಕೃತಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವ ಅಗತ್ಯವನ್ನು ಚೆನ್ನಾಗಿ ಮನವರಿಕೆ ಮಾಡಿಕೊಟ್ಟಿದೆ. ಸಂಸ್ಕೃತವು ಸದ್ಯಕ್ಕೆ "ಮೃತ" ಭಾಷೆಯಾಗಿದೆ ಎಂದು ಹೇಳುತ್ತಿದ್ದವರು ಶಪ್ತಿದ್ದಾರೆಂಬುದನ್ನು ಈ ಅಧಿವೇಶನ ತೋರಿಸಿ ಕೊಟ್ಟಿದೆ. ಸಂಸ್ಕೃತವು ಮೃತ ಭಾಷೆಯಲ್ಲ ವೆಂದೂ ಅದಿನ್ನೂ ಜೀವಂತವಾಗಿದ್ದು ಸಾವಿರಾರು ಅಭಿಮಾನಿಗಳನ್ನು ಇನ್ನೂ ಸಡೆದಿದೆಯೆಂದೂ ಪರಿಷತ್ತಿನ ಕಾರ್ಯ ಕಲಾಪಗಳನ್ನು ನೋಡಿದವ್ಯಕ್ಕೆಗೊತ್ತಾಗುತ್ತದೆ. ಸುಮಾರು ೧೬೦೦ ಪ್ರತಿನಿಧಿಗಳು ಈ ಅಧಿವೇಶನಕ್ಕೆ ಬಂದಿದ್ದರು; ಇವರಲ್ಲಿ ಮಹಿಳೆಯರೂ ಹೆಚ್ಚಿನವರಿದ್ದರು. ಸಂಸ್ಕೃತದಲ್ಲಿ ನಿರರ್ಗಳವಾಗಿ ಅನೇಕರು ಮಾತನಾಡಿದರು; ಆಗ ಶ್ರೋತೃಗಳು ಒಳ್ಳೆಯ ಆಸಕ್ತಿಯಿಂದ ಇದಕ್ಕೆ ತಲೆ ತೂಗುತ್ತಿದ್ದರು. ಶ್ರೀ ಮುನ್ಶಿಯವರ ಹೇಳಿಕೆಯಂತೆ ಸುಮಾರು ೫೫ ಸಾವಿರ ಭಾರತೀಯರಿಗೆ ಸಂಸ್ಕೃತದಲ್ಲಿ ಚೆನ್ನಾಗಿ ಉಪನ್ಯಾಸ ಕೊಡುವಷ್ಟು ಪಾಂಡಿತ್ಯವಿದೆ. ಸುಮಾರು ೩೦ ಕೋಟಿ ಭಾರತೀಯರು ಸಂಸ್ಕೃತ ಶ್ಲೋಕಗಳನ್ನು ಮದುವೆ, ಉಪನಯನ, ನಾಮಕರಣ ಇತ್ಯಾದಿ ಸಮಾರಂಭಗಳಲ್ಲಿ ಕೇಳುತ್ತಿರುತ್ತಾರೆ; ೫೫ ಕೋಟಿ ಭಾರತೀಯರು ಆಡುತ್ತಿರುವ ಪ್ರಾದೇಶಿಕ ಭಾಷೆಗಳು ಸಂಸ್ಕೃತದಿಂದ ವಿಪುಲ ಸಹಾಯವನ್ನು ಈಗಲೂ ಪಡೆಯುತ್ತಿವೆ. ಆದುದರಿಂದ ಸಂಸ್ಕೃತ ಭಾಷೆಯೊಡನೆ ಭಾರತೀಯ ಜೀವನದ ಸಂಪರ್ಕ ಈಗಲೂ ಬಹಳ ನಿಕಟವಾಗಿದೆ; ಅದನ್ನೆಂದೂ ಉಪೇಕ್ಷಿಸುವಂತಿಲ್ಲ ಎಂಬುದು ಸ್ಪಷ್ಟ. ಸಂಸ್ಕೃತ ಭಾಷೆಯನ್ನು ಉಪೇಕ್ಷಿಸುವವರು ಹಿಂದೂ ಧರ್ಮದೊಡನೆ ಅದನ್ನು ಥಳಕು ಹಾಕುತ್ತಾರೆ—ಅದು ಸರಿಯಲ್ಲ. ರಾಮಾಯಣವು ಮನುಷ್ಯನ ನೀತಿ ನಡವಳಿಕೆಗಳು ಹೇಗಿರಬೇಕೆಂದು ವಿವರಿಸುತ್ತವೆ; ಮಹಾಭಾರತದ ಶಾಂತಿ ಪರ್ವವು ಜೀವನದ ಅನೇಕ ಜಟಿಲ ಸಮಸ್ಯೆಗಳಿಗೆ ಪರಿಹಾರ ಮಾರ್ಗವನ್ನೇನೆಂದು ಸೂಚಿಸುತ್ತದೆ; ಉಪನಿಷತ್ತು, ಮತ್ತು ಭಗವದ್ಗೀತೆಗಳು ಸಹಸ್ರೈತಿಕ ಮೌಲ್ಯದ ಪಾಠವನ್ನು ಹೇಳಿ ಕೊಡುತ್ತವೆ. ಹಿಂದೂ ಧರ್ಮದೊಡನೆ ಈ ಗ್ರಂಥಗಳ ಸಂಬಂಧ ವಿಶೇಷವಾಗಿರಬಹುದು-ಆದರೆ ಅವುಗಳ ತಿರುಳು ಸರ್ವದೇಶಕ್ಕೂ ಸರ್ವ ಕಾಲಕ್ಕೂ ಸರ್ವ ಜನರಿಗೂ ಅನ್ವಯಿಸುವಷ್ಟು ವಿಶೇಷ ವೈಶಿಷ್ಟ್ಯದಿಂದ ಕೂಡಿದೆ ಎಂಬುದನ್ನು ಮರೆಯಲಾಗದು ರಾಷ್ಟ್ರೀಯ ಚಾರಿತ್ರ್ಯರವನ್ನು ಉಪಿಸುವಲ್ಲಿ ಇಂಥ ಗ್ರಂಥರತ್ನಗಳ ಪಾತ್ರವನ್ನು ವರ್ಣಿಸಿ ತೀರದು. ಶಾಸ್ತ್ರಾನುಸಾರವಾದ ಕೆಲವು ಆಚಾರಗಳು ಇಂದು ಅಸ್ಪೃ ವಿತವೆನಿಸಲಿಕ್ಕಿಲ್ಲ—ಆದರೆ ವಿಚಾರಗಳ ಕುರಿತು ಹಾಗೆ ಸಂಶಯಿಸುವುದು ಸಲ್ಲದು. ಅವು ಸದಾ ಭಾರತೀಯರನ್ನು ಉನ್ನತಿಯ ಮಾರ್ಗದಲ್ಲಿ ನಡೆಸುವ ಸಾಮರ್ಥ್ಯವನ್ನು ಹೊಂದಿವೆ. ನೆಹರುಗಳ ವಿದೇಶ ಧೋರಣೆಯು ಅತ್ಯಂತ ಯಶಸ್ವಿಯಾಗಿರುವುದಕ್ಕೆ ರಾಜಕೀಯಪಟುತ್ವಕ್ಕಿಂತಲೂ ಭಾರತದ ಉದಾತ್ತ ಪರಂಪರೆಯ ಹಿನ್ನೆಲೆಯನ್ನು ನೆಹರುಗಳು ಸರಿಯಾಗಿ ತಿಳಿದುಕೊಂಡುದೇ ಕಾರಣ ಎಂಬ ಮನ್ಸಿಯವರ ಅಭಿಪ್ರಾಯವನ್ನು ಪ್ರತಿಯೊಬ್ಬರೂ ಒಪ್ಪಬಹುದು. ಭಾರತವು ಜಗತ್ತಿನ ಪಾಲಿಗೆ "ಆಚಾರ್ಯ" ಸ್ಥಾನವನ್ನು ಅಲಂಕರಿಸುವ ರಾಷ್ಟ್ರವಾಗಿ ಉಳಿಯಬೇಕಾದರೆ ನೆಹರುಗಳೊಬ್ಬರು ನಮ್ಮ ಪರಂಪರೆಯನ್ನು ಗುರುತಿಸಿದರೆ ಸಾಲದು; ನೆಹರುಗಳು ಹೆಚ್ಚಿನ ಆಶೆ ತುಂಬಿದ ಕಣ್ಣಾಗಳಿಂದ ನೋಡುತ್ತಿರುವ ಮುಂದಿನ ಜನಾಂಗ — ಅಂದರೆ ಇಂದಿನ ಮಕ್ಕಳು ಹಾಗು ಯುವಕ ಯುವತಿಯರು—ಭಾರತದ ಹಿರಿಮೆಯನ್ನು ತಿಳಿಯಲು, ಪುತ್ತು ಸಾಂಸ್ಕೃತಿಕ ಪರಂಪರೆಯನ್ನು ಮನನ ಮಾಡಲು, ಯೋಗ್ಯವಾದ ಅವಕಾಶ ದೊರೆಯಬೇಕಾಗಿದೆ; ಶಿಕ್ಷಣ ಕ್ಷೇತ್ರದಲ್ಲಿ ಸಂಸ್ಕೃತವು ಮಹತ್ವದ ಭಾಗವನ್ನು ಪಹಿಸಬೇಕಾಗಿದೆ. ನಮ್ಮ ಶತ್ರುವನ್ನು ತೀರ ಮರ್ದಿಸಿ ಬಿಡಬಾರದೆಂದೂ ಅನಿಸಿಗೂ ಬದುಕಗೊಡಬೇಕೆಂದೂ ಹೇಳುವ "ಮುದ್ರಾ ರಾಕ್ಷಸ" ನಾಟಕದ ರಾಜಕೀಯ ಧೋರಣೆಯನ್ನೂ ಪಾಶ್ಚಾತ್ಯ ಜಗತ್ತಿನ ಈಸೋಪನ ಕತೆಗಳಿಗೆ ಯಾವ ದೃಷ್ಟಿಯಿಂದಲೂ ಕಡಿಮೆಯಿಲ್ಲದ "ಹಿತೋಪದೇಶ" ಮತ್ತು "ಪಂಚತಂತ್ರ"ಗಳ ನೀತಿ ಸೂತ್ರವನ್ನೂ "ಕಥಾ ಸರಿತ್ಸಾಗರ" ಇತ್ಯಾದಿಯಲ್ಲಿ ಅಡಕವಾಗಿರುವ ಸೂಲ ಭೂತವಾದ ವಿಷಯಸಂಪತ್ತಿನಿಂದ ಪರಿಸುಷ್ಟವಾದ ಜ್ಞಾನ ಭಂಡಾರವನ್ನೂ ಮುಂದಿನ ಜನತೆಗೆ ಪಾಲಿಗೆ ಧಾರಾಳವಾಗಿ ಉಪಯೋಗಿಸಿಕೊಳ್ಳಲು ಬಿಡಬೇಕು; ಇಂಥ ಉಪಯೋಗವನ್ನು ಹುರಿಮಂಚಿಸಬೇಕು. ಸಂಸ್ಕೃತಾಭ್ಯಾಸಕ್ಕೆ ಪ್ರೋತ್ಸಾಹ ಕೊಡುವುದರಿಂದ ಮಾತ್ರವೇ ಇದು ಸಾಧ್ಯವೆಂಬುದನ್ನು ಅಲ್ಲಗಳೆಯುವಂತಿಲ್ಲ. ಡಾ. ರಾಧಾಕೃಷ್ಣನ್ನರ ಅಧ್ಯಕ್ಷತೆಯಲ್ಲಿ ನೇಮಿಸಲಾದ ವಿಶ್ವವಿದ್ಯಾಲಯ ಆಯೋಗ ಇಂಥ ಪ್ರೋತ್ಸಾಹದ ಅವಶ್ಯಕತೆಯನ್ನು ಒತ್ತಿ ಹೇಳಿದೆ. ಈ ದೃಷ್ಟಿಯಿಂದ ವಿಶ್ವವಿದ್ಯಾಲಯಗಳು ಸಂಸ್ಕೃತಕ್ಕೆ ಹೆಚ್ಚು ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದೂ ಪ್ರೌಢ ಸ್ಕೂಲು ಮತ್ತು ಕಾಲೇಜುಗಳಲ್ಲಿ ಸಂಸ್ಕೃತದ ಶಿಕ್ಷಣಕ್ಕೆ ಅವಕಾಶ ನೀಡಬೇಕೆ ಹೊರತು, ಕಲಿಯುವ ವಿದ್ಯಾರ್ಥಿಗಳು ಕಡಿಮೆ ಎಂಬ ಕಾರಣದಿಂದ ಕಲಿಯಬಯಸುವ ಕೆಲವರ ಪಾಲಿನ ಅವಕಾಶವನ್ನು ಕಸಿದುಕೊಳ್ಳಬಾರದೆಂದೂ ಪರಿಷತ್ತು ಗೊತ್ತುವಳಿಯ ಮೂಲಕ ಕೇಳಿಕೊಂಡಿರುವುದು ಯೋಗ್ಯವಾಗಿದೆ. ದ್ವಿತೀಯ ಯೋಜನೆಯಲ್ಲಿ ಸಂಸ್ಕೃತ ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸುವಂತೆ ಒತ್ತಾಯಿಸುವ ಮತ್ತು ಪಾಠ ಶಾಲೆಗಳಿಗೆ ವಿಶೇಷವಾದ ಧನ ಸಹಾಯ ನೀಡಬೇಕೆಂದು ಕೇಳಿಕೊಳ್ಳುವ ನಿರ್ಣಯವೂ ಸಕಾಲಿಕವಾಗಿದೆ. ಸಂಸ್ಕೃತವು ಪಾಠ ಶಾಲೆಗಳ ದೆಸೆಯಿಂದಲೇ ಈಗ ಉಳಿಯುವಂತಾಗಿದೆ—ಸಂಸ್ಕೃತ ಕಲಿತವರು ಇಂಗ್ಲೀಷ್ ಮುಂತಾದ ಭಾಷೆಗಳಲ್ಲಿ ಪಾಂಡಿತ್ಯ ಸಂಪಾದಿಸಿದವರಂತೆ ಯೋಗ್ಯ ಹುದ್ದೆಗಳನ್ನೇರಿ ಕೈತುಂಬ ಹಣ ಸಂಪಾದಿಸಿ ಸುಖ ಜೀವನ ನಡೆಸುವ ಅನಿಕಾಶ ಕಡಿಮೆಯಾಗಿರುವುದೇ ಇದಕ್ಕೆ ಕಾರಣ. ನಮ್ಮ ದೇಶ ಭಾಷೆಗಳ ಉನ್ನತಿಗೆ ಪ್ರಯತ್ನಿಸುವಾಗ, ಸಂಸ್ಕೃತಾಭ್ಯಾಸಕ್ಕೂ ಯೋಗ್ಯ ಸ್ಥಾನವನ್ನು ಕಲ್ಪಿಸಿ ಕೊಟ್ಟು, ಒಳ್ಳೆಯ ಕೆಲಸಗಳಲ್ಲಿರುವವರಿಗೆ ಸಂಸ್ಕೃತದ ಸಾಕಸ್ಟು ಪರಿಜ್ಞಾನವನ್ನು ಅರ್ಹತೆಯ ನಿಯಮಗಳಲ್ಲಿ ಒಂದಾಗಿ ವಿಧಿಸಿದರೆ ಯೋಗ್ಯವಾದೀತು. ಇದಕ್ಕೆ ಹೊಂದಿಕೊಳ್ಳುವಂತೆ ಪಾಠ್ಯ ಕ್ರಮದಲ್ಲಿ ಸಂಸ್ಕೃತದ ಸ್ಥಾನಮಾನವನ್ನು ಆಳವಡಿಸುವುದಕ್ಕೆ ತಜ್ಞ ಸಮಿತಿಯೊಂದು ವಿಚಾರಿಸಲಿ. ಸರಕಾರ ಉದಾರವಾದ ನೀತಿಯನ್ನು ವಹಿಸುವುದೇ ಮುಂದಿನ ಕೆಲಸ.

ಉಡುಪಿ

ನಗರಸಭೆಯ ಕಾಂಗ್ರೆಸ್ ಪಕ್ಷ:—

ಉಡುಪಿ ಕೇಂದ್ರದ ಕಾಂಗ್ರೆಸು ಸಮಿತಿಯು ಆಶ್ರಯದಲ್ಲಿ ನೇರಿದ ಸಭೆಯು ನಗರಸಭೆಯ ಕಾಂಗ್ರೆಸು ಪಕ್ಷಕ್ಕೆ ಶ್ರೀ ಕೆ. ಕೆ. ಪೈಗಳು ಧುರಿಣರಾಗಿರಬೇಕೆಂದೂ ಮತ್ತು ಶ್ರೀ. ಪಿ. ವಿ. ಆಚಾರ್ಯರು ಉಪಧುರಿಣರಾಗಿಯೂ ಶ್ರೀ ಶ್ರಿಕೃಷ್ಣ ನಾಯಕರು ಕಾರ್ಯದರ್ಶಿಯಾಗಿಯೂ ಶ್ರೀ ಬಿ. ಮೈಕಾರು ಕೋಶಾಧಿಕಾರಿಯಾಗಿಯೂ ಶ್ರೀ ಟಿ. ಎ. ವಾಸುದೇವ ಅಧ್ಯಕ್ಷತೆಯಲ್ಲಿ ನೇಮಿಸಲಾದ ವಿಶ್ವವಿದ್ಯಾಲಯ ಆಯೋಗ ಇಂಥ ಪ್ರೋತ್ಸಾಹದ ಅವಶ್ಯಕತೆಯನ್ನು ಒತ್ತಿ ಹೇಳಿದೆ. ಈ ದೃಷ್ಟಿಯಿಂದ ವಿಶ್ವವಿದ್ಯಾಲಯಗಳು ಸಂಸ್ಕೃತಕ್ಕೆ ಹೆಚ್ಚು ಸೌಲಭ್ಯಗಳನ್ನು ಒದಗಿಸಿ ಕೊಡಬೇಕೆಂದೂ ಪ್ರೌಢ ಸ್ಕೂಲು ಮತ್ತು ಕಾಲೇಜುಗಳಲ್ಲಿ ಸಂಸ್ಕೃತದ ಶಿಕ್ಷಣಕ್ಕೆ ಅವಕಾಶ ನೀಡಬೇಕೆ ಹೊರತು, ಕಲಿಯುವ ವಿದ್ಯಾರ್ಥಿಗಳು ಕಡಿಮೆ ಎಂಬ ಕಾರಣದಿಂದ ಕಲಿಯಬಯಸುವ ಕೆಲವರ ಪಾಲಿನ ಅವಕಾಶವನ್ನು ಕಸಿದುಕೊಳ್ಳಬಾರದೆಂದೂ ಪರಿಷತ್ತು ಗೊತ್ತುವಳಿಯ ಮೂಲಕ ಕೇಳಿಕೊಂಡಿರುವುದು ಯೋಗ್ಯವಾಗಿದೆ. ದ್ವಿತೀಯ ಯೋಜನೆಯಲ್ಲಿ ಸಂಸ್ಕೃತ ವಿಶ್ವ ವಿದ್ಯಾಲಯಗಳನ್ನು ಸ್ಥಾಪಿಸುವಂತೆ ಒತ್ತಾಯಿಸುವ ಮತ್ತು ಪಾಠ ಶಾಲೆಗಳಿಗೆ ವಿಶೇಷವಾದ ಧನ ಸಹಾಯ ನೀಡಬೇಕೆಂದು ಕೇಳಿಕೊಳ್ಳುವ ನಿರ್ಣಯವೂ ಸಕಾಲಿಕವಾಗಿದೆ. ಸಂಸ್ಕೃತವು ಪಾಠ ಶಾಲೆಗಳ ದೆಸೆಯಿಂದಲೇ ಈಗ ಉಳಿಯುವಂತಾಗಿದೆ—ಸಂಸ್ಕೃತ ಕಲಿತವರು ಇಂಗ್ಲೀಷ್ ಮುಂತಾದ ಭಾಷೆಗಳಲ್ಲಿ ಪಾಂಡಿತ್ಯ ಸಂಪಾದಿಸಿದವರಂತೆ ಯೋಗ್ಯ ಹುದ್ದೆಗಳನ್ನೇರಿ ಕೈತುಂಬ ಹಣ ಸಂಪಾದಿಸಿ ಸುಖ ಜೀವನ ನಡೆಸುವ ಅನಿಕಾಶ ಕಡಿಮೆಯಾಗಿರುವುದೇ ಇದಕ್ಕೆ ಕಾರಣ. ನಮ್ಮ ದೇಶ ಭಾಷೆಗಳ ಉನ್ನತಿಗೆ ಪ್ರಯತ್ನಿಸುವಾಗ, ಸಂಸ್ಕೃತಾಭ್ಯಾಸಕ್ಕೂ ಯೋಗ್ಯ ಸ್ಥಾನವನ್ನು ಕಲ್ಪಿಸಿ ಕೊಟ್ಟು, ಒಳ್ಳೆಯ ಕೆಲಸಗಳಲ್ಲಿರುವವರಿಗೆ ಸಂಸ್ಕೃತದ ಸಾಕಸ್ಟು ಪರಿಜ್ಞಾನವನ್ನು ಅರ್ಹತೆಯ ನಿಯಮಗಳಲ್ಲಿ ಒಂದಾಗಿ ವಿಧಿಸಿದರೆ ಯೋಗ್ಯವಾದೀತು. ಇದಕ್ಕೆ ಹೊಂದಿಕೊಳ್ಳುವಂತೆ ಪಾಠ್ಯ ಕ್ರಮದಲ್ಲಿ ಸಂಸ್ಕೃತದ ಸ್ಥಾನಮಾನವನ್ನು ಆಳವಡಿಸುವುದಕ್ಕೆ ತಜ್ಞ ಸಮಿತಿಯೊಂದು ವಿಚಾರಿಸಲಿ. ಸರಕಾರ ಉದಾರವಾದ ನೀತಿಯನ್ನು ವಹಿಸುವುದೇ ಮುಂದಿನ ಕೆಲಸ.

ಹೊಸ ಪ್ರಯೋಗ

ಬಾಲ ವಾಚನಾಲಯಗಳ ಬೆಲೆ ಹೆಚ್ಚಿಸುವ ಗ್ರಂಥಗಳು.

ಕನ್ನಡ ಕಂದನು ಕಾದಿಡುವ ಅಮೂಲ್ಯ ಕೃತಿಗಳು.

ಪ್ರಾಥಮಿಕ ಶಿಕ್ಷಕರಿಂದ ನಡೆಸಲ್ಪಡುವ, ಒಂದೇ ಬಂದಾದ ಸ್ಕೂ. ಶಿಕ್ಷಕರ ಪ್ರೋತ್ಸಾಹ ನಾರ್ಥ ತೆರೆದ ಸಮಿತಿಯಿಂದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹಣೆದ

ಪುಟಚೆಂಡು-ಕವಿತಾ ಸಂಕಲನ. ಭಾಗ-೧. ೧೩೪. ಭಾಗ-೨.೧೩೪ ಜನರ ಕವಿತೆಗಳು

ಆನೆಕಲ್ಲು-ಕಥಾ ಸಂಕಲನ. ಭಾಗ-೧. ೪೧, ಭಾಗ-೨. ೪೬ ಜನರ ಕಥೆಗಳು.

ಭಾ-೧-೨ರಿಂದ ೪, ೫—ಚಿತ್ರಿಂದ ೬ ವರ್ಣಕ್ಕೆ. ಬೆಲೆ ೧೫ ಆಣೆಯಂತೆ. ಉತ್ತರದ ಶ್ರೀ ಬೇಂದ್ರೆಯರಿಂದ, ದಕ್ಷಿಣದ ಶ್ರೀ ಕುವೆಂಪು, ಪೂರ್ವದ ಶ್ರೀ ಕಾಪ್ಪಾನಂದರಿಂದ, ಪಶ್ಚಿಮದ್ರು ಶ್ರೀ ಗೋವಿಂದ ಪೈ ಅವರ ವರೆಗಿನ ೪೦೦ ಜನ ಲೇಖಕರ ವಿವಿಧ ಕೃತಿ, ನ ವೈಯಕ್ತಿ ಪರಿಚಯಗಳನ್ನೂ ಒಂದೇ ಕಡೆಗೆ ಕಾಣಬೇಕೆಂದಿದ್ದರೆ, ಶಿಕ್ಷಕರಿಗೆ ಬೆಂಬಲ ನೀಡಲು ಇಂದೇ ಬರೆಯಿರಿ. ವಿದ್ಯಾರ್ಥಿಗಳಿಗೆ ಆಂಚೆ ಪೆಟ್ಟಿ ಉಚಿತ.

ಶಿಕ್ಷಕರಲ್ಲಿ ಬೆಂಬಲನೀಡಿ ಸೇವೆ ತಕ್ಕೊಳ್ಳಬೇಕಾಗಿ ವಿನ್ನಹ.

ಭಾರತೀ ಸಾಹಿತ್ಯ ಭಂಡಾರ ಬೆಂಗಳೂರು.

ಅಂಚೆ:— **ಮನಗೋಳಿ.** ಜಿ:— **ವಿಜಾಪುರ.**

ಶ್ರೀ ಕೆ.ಕೆ.ಪೈಗಳ ಆವಿರೋಧಆಯ್ಕೆ— ಉಡುಪಿ ನಗರ ಸಭೆಗೆ ಹೊಸತಾಗಿ ಚುನಾಯಿತರಾದ ಇಪ್ಪತ್ತು ಸದಸ್ಯರ ಪ್ರತಿಜ್ಞಾ ವಿಧಿಯು ತಾ. 12ರಂದು ನಗರಸಭೆಯ ಕಾರ್ಯಾಲಯದಲ್ಲಿ ಕುಂದಾಪುರ ವಿಭಾಗದ ಕಂದಾಯಾಧಿಕಾರಿ ಶ್ರೀ ಸಿ. ಪಿ. ಭಾಸ್ಕರ ಮೆನೆನರ ಸಮ್ಮುಖದಲ್ಲಿ ನಡೆಯಿತು. ಬಳಿಕ ನಗರ ಸಭೆಯ ಅಧ್ಯಕ್ಷೆ ಸ್ಥಾನಕ್ಕೆ ಕಾಂಗ್ರೆಸಿನ ಶ್ರೀ. ಕೆ. ಕೆ. ಪೈಗಳು ಸರ್ವಾನುಮತದಿಂದ ಆರಿಸಲ್ಪಟ್ಟರು. ಅವರ ಹೆಸರನ್ನು ಶ್ರೀ ಶ್ರಿವಿಕ್ರಮ ನಾಯಕರು ಸೂಚಿಸಿ, ಶ್ರೀ ಪಿ. ವಿ. ಆಚಾರ್ಯರು ಅನುಮೋದಿಸಿದರು.

ನೂತನ ಅಧ್ಯಕ್ಷರು ಈ ಸಂದರ್ಭದಲ್ಲಿ ಮೂತನಾಡುತ್ತಾ ಜನಾನತೆಯು ಸರ್ವಾನುಮತದ್ದಾದುದಕ್ಕೆ ಸಂತೋಷವನ್ನು ಸೂಚಿಸಿ, ಎಲ್ಲರ ಆಭಾರವನ್ನು ಮುನ್ಸಿಸಿದರು. ನಗರದ ಅಭಿವೃದ್ಧಿಗಾಗಿ ದುಡಿಯುವಾಗ ಮುಂದೆ ಸಹ ಹೀಗೆಯೇ ಸದಸ್ಯರಿಂದ ಪೃತ್ಪೂರ್ವಕ ಸಹಾಯ ದೊರೆಯಬೇಕೆಂದು ಬಿನಂತಿಸಿದರು. ಸ್ವರೋಯು ಅಭಿವೃದ್ಧಿಯೋಜನೆಯು ಪ್ರಯೋಜನವನ್ನು ನಗರಸಭೆಯು ಧಾರಾಳವಾಗಿ ಪಡೆದುಕೊಳ್ಳುವಂತಾಗಬೇಕು ಎಂದರು. ಡಾ. ಪಿ. ಜಿ. ಆಚಾರ್ಯರು ತಮ್ಮ ಅಭಿನಂದನಾಪರ ಭಾಷಣದಲ್ಲಿ ಸಂತೆಯ ಸ್ಥಳ, ಅಜ್ಜರಕಾಡಿನ ಮೈದಾನ, ರಥಬೀದಿ ಇಲ್ಲಿಯ ಅಭಿವೃದ್ಧಿಗೆ ನಗರ ಸಭೆಯ ವಿಶೇಷ ಗಮನ ಹರಿಯಬೇಕಾಗಿದೆ ಎಂದರು. ಶ್ರೀಗಳಾದ ಪಿ. ನಿ. ಆಚಾರ್ಯ ಮತ್ತು ಎಸ್. ಸೀತಾರಾಮ ಕಾಮತರೂ ಆಧ್ಯಕ್ಷರಿಗೆ ಸಮಯೋಚಿತ ಅಭಿನಂದನೆಗಳನ್ನು ಸಲ್ಲಿಸಿದರು. ಶ್ರೀ ಕೆ. ಕೃಷ್ಣಯ್ಯ ವಂದಿಸಿದರು. ಶ್ರೀ ಕೆ. ಕೃಷ್ಣಯ್ಯನವರ ಸಹಕಾರದ ಭರವಸೆ ನೀಡಿ ಮಾತನಾಡಿದರು. ಶ್ರೀ ಕೆ. ಕೃಷ್ಣಯ್ಯನವರ ಪಹಕಾ

ಕರ್ನಾಟಕದ ಕುರಿತು ಹಿಂದಿನಿಂದ ನಿರ್ಣಯ

ಗಡಿ ಬದಲಾವಣೆಗಾಗಿ ಉಪಸಮಿತಿಯ ನೇಮಕ

ಹೊಸ ದೆಹಲಿಯಲ್ಲಿ ನೇರಿದ ಕಾಂಗ್ರೆಸು ಕಾರ್ಯಕಾರಿ ಸಮಿತಿಯು ರಾಜ್ಯಗಳ ಪುನರ್ಘಟನೆಯ ವರದಿಯ ಕುರಿತು ತನ್ನ ನಿಲುವೆ ಏನೆಂಬುದನ್ನು ಒಂದು ಗೊತ್ತು ವಳಯ ಮೂಲಕ ವಿವರಿಸಿದೆ. ದೇಶದ ಹಲವು ಕಡೆಗಳಿಂದ ಬಂದ ತಿಪ್ಪ ಮಂಡಳಗಳ ಅಭಿಪ್ರಾಯವನ್ನೂ ಪ್ರದೇಶ ಕಾಂಗ್ರೆಸುಗಳ ಅಧ್ಯಕ್ಷರೂ ರಾಜ್ಯಗಳ ಮುಖ್ಯ ಮಂತ್ರಿಗಳೂ ನೀಡಿದ ಸಲಹೆಯನ್ನೂ ಪತ್ರಿಕೆ ಮತ್ತಿತರ ರೀತಿಗಳಲ್ಲಿ ವ್ಯಕ್ತವಾದ ಪ್ರತಿಕ್ರಿಯೆಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ಈ ಗೊತ್ತುವಳಿಯನ್ನು ಸ್ವೀಕರಿಸಲಾಗಿದೆ.

ರಾಷ್ಟ್ರದ ಒಗ್ಗಟ್ಟು

ಇದರಂತೆ, ಗಡಿಯನ್ನು ಯೊಂದಿಸಿಕೊಳ್ಳುವ ಕೆಲವು ಪ್ರಸಂಗಗಳಲ್ಲಿಯೂ ಹೆಚ್ಚಿನ ಜನರಿಗೆ ಸಮ್ಮತವಾದ ಪ್ರತಿ ಸೂಚನೆಗಳಿಗೆ ಅವಕಾಶವಿರುವ ನಿಘಾರಿನುಗಳ ಮಟ್ಟಿಗೂ ಹೊರತುಪಡಿಸಿ, ಸಾಮಾನ್ಯವಾಗಿ ರಾಜ್ಯಗಳ ಪುನರ್ಘಟನೆಯು ಆಯೋಗ ಮಾಡಿದ ವರದಿಯನ್ನು ಅಂಗೀಕರಿಸಲಾಗುತ್ತದೆ. ಭಾರತದ ಭಿನ್ನಾತ್ಮಕ ಸ್ವರೂಪವನ್ನು ನಿರ್ಣಯಿಸುವಾಗ ರಾಷ್ಟ್ರದ ಒಗ್ಗಟ್ಟಿಗೆ ಅತ್ಯಂತ ಮಹತ್ವಕೊಡಬೇಕೆಂಬುದನ್ನು ಗೊತ್ತುವಳಿ ಒತ್ತಿ ಹೇಳುತ್ತದೆ. ಭಾಷೆಯೊಂದಿಗೆ ಇತರ ಅಂಶಗಳನ್ನೂ ಪರಿಗಣಿಸಬೇಕೆಂಬ ಹಿಂದಿನ ತನ್ನ ನಿಲುಮೆಯನ್ನು ಪುನರುಚ್ಚರಿಸಿದೆ. ಪುನರ್ಘಟನೆಯೇ ಧ್ಯೇಯವಲ್ಲ—ಅದು ಜನತೆಯ ಹಾಗು ರಾಷ್ಟ್ರದ ಕ್ಷೇಮಾಭ್ಯುದಯವನ್ನು ಸಾಧಿಸುವ ಮಾರ್ಗ ಮಾತ್ರ; ಈ ದೃಷ್ಟಿಯಿಂದ ಭಾರತದ ಪ್ರತಿಯೊಂದೂ ಪ್ರದೇಶಕ್ಕೆ ಬೆಳವಣಿಗೆಯ ಸಂಪೂರ್ಣ ಅವಕಾಶ ನೀಡಬೇಕು ಎಂದು ನಿರ್ಣಯ ತಿಳಿಸಿದೆ.

ಅಲ್ಪ ಸಂಖ್ಯಾಕರಿಗೆ ರಕ್ಷಣೆ

ಆಯೋಗದ ವರದಿಯು ನಾಲ್ಕನೇ ಭಾಗದಲ್ಲಿ ಭಾಷೆ ಮತ್ತಿತರ ದೃಷ್ಟಿಯಿಂದ ಅಲ್ಪ ಸಂಖ್ಯಾಕರಿಸಿದವರಿಗೆ ಆಡಳಿತ, ಶಿಕ್ಷಣ ಮತ್ತಿತರ ಕ್ಷೇತ್ರಗಳಲ್ಲಿ ರಕ್ಷಣೆ ಕೊಡಬೇಕೆಂಬ ನಿಘಾರಸನ್ನು ಈ ದೃಷ್ಟಿಯಿಂದ ಅಂಗೀಕರಿಸಲು ಮತ್ತು ಹಾಗೆ ರಾಷ್ಟ್ರದ ಒಗ್ಗಟ್ಟಿನ ಭಾವನೆಯನ್ನು ಪೋಷಿಸಲು ಕಾಂಗ್ರೆಸು ಸಮಿತಿ ನಿರ್ಧರಿಸಿದೆ. ಆದರೆ ಸಾರ್ವಜನಿಕ ಆಡಳಿತ ಮಂಡಳದ ರಚನೆ ಮತ್ತು ಅಖಿಲ ಭಾರತ ಸ್ವರೂಪದ ಬೇರೆ ಕೆಲವು ಮಂಡಳಗಳ ಕುರಿತಾದ ನಿಘಾರಸುಗಳ ವಿಷಯದಲ್ಲಿ ಹೆಚ್ಚಿನ ಪರಿಶೀಲನೆ ಆಗತ್ಯವೆಂದು ಅದು ಭಾವಿಸಿದೆ. ಕೇಂದ್ರದ ನೇರಾದ ಆಡಳಿತೆಗೊಳಪಟ್ಟ ಕೆಲವು ಪ್ರದೇಶಗಳ ಹೊರತು ಉಳಿದೆಲ್ಲ ರಾಜ್ಯಗಳೂ ಒಂದೇ ವರ್ಗದ ವಿರಬೇಕೆಂಬ ಆಯೋಗದ ಸೂಚನೆಯನ್ನು ಕಾಂಗ್ರೆಸು ಸಮಿತಿ ಅಂಗೀಕರಿಸಿದೆ. ಕೇಂದ್ರದ ಆಡಳಿತ ಪ್ರದೇಶಗಳಲ್ಲಿ ಸ್ಥಳೀಯ ಆಡಳಿತವನ್ನು ನಿರ್ವಹಿಸಿಕೊಂಡು ಹೋಗುವ ಅವಕಾಶವನ್ನು ಜನರಿಗೆ ಕೊಡಬೇಕೆಂದು ಅದು ತಿಳಿಸಿದೆ. ಈ ಮಟ್ಟಿಗೆ ಪ್ರತಿಯೊಂದೂ ವಲಯವನ್ನು ಪ್ರತ್ಯೇಕ ದೃಷ್ಟಿಕೋಣದಿಂದ ವಿಚಾರಿಸಲಾಗುತ್ತದೆ.

ಮೂರು ಭಾಗವಾಗಿ ಮುಂಬಯಿ

ಮುಂಬಯಿ ರಾಜ್ಯದ ಕುರಿತು ಗುಜರಾತ, ಮಹಾರಾಷ್ಟ್ರ ಕರ್ನಾಟಕ ಹಾಗು ಮುಂಬಯಿ ನಗರದ ಪ್ರದೇಶ ಕಾಂಗ್ರೆಸುಗಳ ಅಭಿಪ್ರಾಯವನ್ನು ಕೇಳಿಕೊಂಡ ಬಳಿಕ, ಮುಂಬಯಿಯ ಕುರಿತು ಆಯೋಗದವರು ಮಾಡಿದ ಸೂಚನೆಯನ್ನು ಸ್ವೀಕರಿಸುವಂತೆ ಒತ್ತಾಯಿಸಬಾರದೆಂದು ಸಮಿತಿ ಭಾವಿಸಿದೆ. ದೇಶದ ವಿಶಾಲವಾದ ಹಿತಕ್ಕೆ ಪೋಷಕವಾಗುವಂತೆಯೂ ಹೆಚ್ಚಿನ ಜನರಿಗೆ ಜನರಿಗೆ ಸಮ್ಮತವಾಗುವಂತೆಯೂ ಒದು ಹೊಸ ಸೂಚನೆಯೊಂದನ್ನು ಮಾಡಿದೆ ತದನುಸಾರವಾಗಿ ಈಗ ಮುಂಬಯಿ ಪ್ರದೇಶ ಕಾಂಗ್ರೆಸಿನ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶವನ್ನು ಮುಂಬಯಿ ನಗರ ಎಂಬ ಪ್ರತ್ಯೇಕ ರಾಜ್ಯವಾಗಿ ರಚಿಸಲಾಗುತ್ತದೆ; ಈಗಿನ ಮುಂಬಯಿ ರಾಜ್ಯದ ಗುಜರಾತಿ ಭಾಷೆಯಾಡುವ ಪ್ರದೇಶಗಳನ್ನೂ ಸೌರಾಷ್ಟ್ರ ಮತ್ತು ಕಚ್ಚಿಗಳನ್ನೂ ಸೇರಿಸಿ, ಮಹಾಗುಜರಾತ್ರನ್ನು ನಿರ್ಮಿಸಲಾಗುತ್ತದೆ; ಈಗಿನ ಮುಂಬಯಿ ರಾಜ್ಯದ ಉಳಿದ ಮರಾಠಿ ಭಾಷೆಯಾಡುವ ಜನರ ಪ್ರದೇಶವನ್ನೂ ಹೈದರಾಬಾದಿನ ಮರಾಠವಾಡ ಜಿಲ್ಲೆಗಳನ್ನೂ ಸೇರಿಸಿ ಸಂಯುಕ್ತ ಮಹಾರಾಷ್ಟ್ರ ರಾಜ್ಯವನ್ನು ನಿರ್ಮಿಸುವುದಿಲ್ಲದೆ ಈ ರಾಜ್ಯಗಳಲ್ಲಿ ಈಗಲೇ ನೇರುವಂತೆ ಸೂಚಿತ ವಿದರ್ಭ ರಾಜ್ಯದ ಜನತೆಗೆ ಆಮಂತ್ರಣ ನೀಯಲಾಗುತ್ತದೆ. ವಿದರ್ಭ ಜನತೆಯ ಇಚ್ಛೆ ನಿನಿದೆ ಎಂಬುದನ್ನು ಈ ವಿದರ್ಭ ದಲ್ಲಿ ತಿಳಿಯುವ ಪ್ರಯತ್ನ ನಡೆಯುತ್ತದೆ. ಮುಂಬಯಿ ನಗರವು ಮಹಾರಾಷ್ಟ್ರ ಮತ್ತು ಗುಜರಾತ ಪ್ರದೇಶಗಳೆರಡನೆ ಹೊಂದಿಕೊಂಡು ಹೋಗುವಂತೆ ವಿಶೇಷ ವ್ಯವಸ್ಥೆ ಏರ್ಪಡುತ್ತದೆ.

ವಿಶಾಲಾಂಧ್ರಕ್ಕೆ ಅವಕಾಶ

ಮಧ್ಯಪ್ರದೇಶವೆಂಬ ಹೊಸ ರಾಜ್ಯವನ್ನು ಆಯೋಗದವರು ಸೂಚಿಸಿದ ಮಾದರಿಯಲ್ಲಿ ರಚಿಸಲು ಕಾರ್ಯ ಸಮಿತಿಯು ಒಪ್ಪಿದೆ. ಆದರೆ ರಾಜಧಾನಿಯ ಕುರಿತು ವಿಶೇಷ ಪರಿಶೀಲನೆ ನಡೆಯಬೇಕೆಂದು ಅದು ಹೇಳಿದೆ. ಕೆಲವು ಚಿಕ್ಕ ಪುಟ್ಟ ಗಡಿ ಬದಲಾವಣೆಗಳು ಆಗತ್ಯಬೀಳಬಹುದೆಂದೂ ಅದು ಸೂಚಿಸಿದೆ. ಉತ್ತರ ಪ್ರದೇಶ ರಾಜ್ಯವನ್ನು ಒಡೆಯದೆ ಈಗನಂತೆಯೇ ಇಡಬೇಕೆಂದೂ ಗಡಿಯ ಮಟ್ಟಿಗೆ ಮಾತ್ರ ಆವಶ್ಯಬಿದ್ದಲ್ಲಿ ಚಿಕ್ಕ ಬದಲಾವಣೆಗೂ ಆಡಬಹುದೆಂದೂ ಅದು ತಿಳಿಸಿದೆ. ಹೈದರಾಬಾದನ್ನು ಒಡೆಯಬೇಕೆಂಬ ಆಯೋಗದ ಸೂಚನೆಗೆ ಕಾಂಗ್ರೆಸು ಸಮಿತಿ ಸೈಗುಟ್ಟಿದೆ. ಆದರೆ ತೆಲಂಗಾಣನೆಂಬ ಸೂಚಿತ ರಾಜ್ಯದ ಜನರಿಗೆ ಅವರು ಇಚ್ಛಿಸುವಾದರೆ, ಪ್ರಾರಂಭದಲ್ಲಿಯೇ ಆಂಧ್ರವೊಡನೆ ಸೇರಿ ಹೋಗಲು ಅವಕಾಶಕೊಡಬೇಕೆಂದು ಅದು ಹೇಳಿದೆ. ಕೇರಳ ರಾಜ್ಯದ ರಚನೆಯನ್ನು ಕಾಂಗ್ರೆಸು ಸಮಿತಿ ಒಪ್ಪಿದೆ. ಇಲ್ಲಿ ಕೆಲವು ಗಡಿ ಬದಲಾವಣೆಗಳಾಗಬೇಕಾದೀತೆಂದೂ ಅದು ಸೂಚಿಸಿದೆ. ಮಲಬಾರಿನ ಕಾನಾವಳಿಗೆ ಹೊಂದಿಕೊಂಡ ಲಕ್ಷದ್ವೀಪ ಸಮೂಹ ಮತ್ತು ಅಮಿನ್ ದೀವಿ ದ್ವೀಪಗಳು ಮಾತ್ರ ತೆಂಗಿನಕಾಯಿ, ಕೊಬ್ಬರಿ, ಹೆಂಚು, ಅಂತಾನ ಮತ್ತು ಸಿಗಡಿ ವ್ಯಾಪಾರಗಳಿಂತೀಂದ್ರನನ್ನೇ ಆವಲಂಬಿಸಿರುವುದರಿಂದ ಆ ದ್ವೀಪಗಳನ್ನು ಕೇರಳದೊಡನೆ ಸೇರಿಸಬೇಕೆಂದು ಸಮಿತಿ ನಿರ್ಧರಿಸಿದೆ.

ಸಮಿತಿಯ ಕೈಗೆ ಕರ್ನಾಟಕ

ಆಜಮೀರನ್ನು ರಾಜಸ್ಥಾನದಲ್ಲಿ ಸೇರಿಸಿ ಬಿಡಬೇಕೆಂಬ ಸೂಚನೆಯನ್ನು ಒಪ್ಪಿ ಈಗಿನ ರಾಜಸ್ಥಾನದ ಗಡಿಗಳಲ್ಲಿ ಕೆಲವು ಬದಲಾವಣೆ ನಡೆಯಬೇಕೆಂದು ಸಮಿತಿ ಹೇಳಿದೆ. ಪಂಜಾಬು, ಪೆಪ್ಸು ಮತ್ತು ಹಿಮಾಚಲ ಪ್ರದೇಶಗಳ ಕುರಿತು ಅಲ್ಲಿಯ ಜನರ ಅಭಿಮತವನ್ನು ವಿಷದವಾಗಿ ತಿಳಿದು ಸಮಂಜಸವಾದ ನಿರ್ಣಯವನ್ನು ಸ್ವೀಕರಿಸುವುದಕ್ಕೆ ಶ್ರೀಗಳಾದ ನೆಹರೂ, ಪಂತ, ಆಜಾದ್ ಮತ್ತು ಢೇಬರ ಉಪ ಸಮಿತಿಗೆ ಅಧಿಕಾರವಿತ್ತಿದೆ. ಈ ಉಪ ಸಮಿತಿಯವರು ಸೂಚಿತ ಕರ್ನಾಟಕ ರಾಜ್ಯದ ಕುರಿತಾಗಿಯೂ ವಿಚಾರಿಸಿ, ನಿರ್ಣಯ ಕೈಗೊಳ್ಳುತ್ತಾರೆ. ಅಲ್ಲದೆ, ವರದಿಯಿಂದ ಉದ್ಭೂತವಾದ ಹಲವಾರು ಗಡಿ ತಂಟೆಗಳನ್ನು ವಿಚಾರಿಸಿ, ತೀರ್ಮಾನಿಸುತ್ತಾರೆ. ಕಾಂಗ್ರೆಸಿನ ವೇಲಿನಾಶಯದ ಗೊತ್ತುವಳಿಯು ಭಿನ್ನಾಭಿಪ್ರಾಯಗಳ ನಡುವೆಯೂ ಬಹು ಜನ ಸಮ್ಮತವಾದ ನಿಲುಮೆಯೊಂದನ್ನು ರೂಪಿಸುವುದಕ್ಕೆ ನೋಡಿದೆ; ಅದುದರಿಂದ ಸಂಬಂಧಿಸಿದ ಎಲ್ಲರೂ ಸಹಕಾರ ಮನೋಭಾವದಿಂದ ಇದನ್ನು ಒಪ್ಪಿಕೊಳ್ಳಬೇಕು—ಎಂದು ಕಾರ್ಯ ಸಮಿತಿ ವಿನಂತಿಸಿದೆ. ಆದಾಗ್ಯೂ ಮಹಾರಾಷ್ಟ್ರೀಯರ ಬಹಳ ಉದ್ವೇಗದ ಭಾವನೆ ಒಳಿತಿದೆ. ಮುಂಬಯಿಯ ವೇಷನ ಅಧಿಕಾರವನ್ನು ತ್ಯಜಿಸಲು ಅವರು ಸಿದ್ಧರಿಲ್ಲ ಕನ್ನಡಿಗರ ಮಟ್ಟಿಗೆ ಗಡಿ ಬದಲಾವಣೆಗೆ ಅವಕಾಶ ನೀಡಿರುವುದರಿಂದ ಸಂತೋಷವಾಗಿದೆ. ಎಡಪಡಿ ಕರ್ನಾಟಕದ ಪ್ರತಿನಿಧಿಗಳಿಗೆ ಮುಖ್ಯಮಂತ್ರಿಯಾಗಿರುವ ಅವಕಾಶಕೊಡಲಿಂದೇ ಕೊನೆಯು ನಿರ್ಣಯವನ್ನು ಮುಂದೂಡಲಾಗಿದೆಯೆಂದೂ ಸಂಯುಕ್ತ ಕರ್ನಾಟಕ ರಾಜ್ಯ ತಲೆ ಎತ್ತುವುದರಲ್ಲಿ ಸಂಶಯವಿಲ್ಲವೆಂದೂ ನಿರೀಕ್ಷಕರು ಅಭಿಪ್ರಾಯ ಪಡುತ್ತಾರೆ.

(೫ನೇ ಪುಟದಿಂದ)

ಹೆಚ್ಚಿಸಿ, ಅದರ ಸ್ಥಾನಮಾನಗಳಿಗನುಗುಣವಾದ ಪ್ರಚಾರ ಕಾರ್ಯಕ್ರಮವನ್ನು ಈ ಪರಿಷತ್ತು ಸಿದ್ಧಪಡಿಸಲಿ—ಎಂದು ಅವರು ತಮ್ಮ ಭಾಷಣವನ್ನು ಮುಗಿಸಿದರು.

ಶಿಕ್ಷಣಕ್ಕೆ ಪ್ರೋತ್ಸಾಹ

ಪರಿಷತ್ತಿನ ಆಡಳಿತ ಮಂಡಳದ ಅಧ್ಯಕ್ಷರಾದ ಉತ್ತರ ಪ್ರದೇಶದ ಗವರ್ನರ ಮಾನ್ಯರವರು ಸಂಸ್ಕೃತ ಭಾಷೆಯ ಅಭ್ಯಾಸಕ್ಕಾಗಿ ಕೈಗೊಂಡಿರುವ ಅನೇಕ ಕ್ರಮಗಳನ್ನು ವಿವರಿಸಿದರು. ಲಕ್ನೊ ಮತ್ತು ಅಲಹಾಬಾದು ವಿಶ್ವ ವಿದ್ಯಾಲಯಗಳಲ್ಲಿ ಸಂಸ್ಕೃತಾಭ್ಯಾಸಿಗಳ ಸಂಖ್ಯೆ ಹೆಚ್ಚುತ್ತಿದೆಯೆಂದೂ ಆಮೇರಿಕ, ಜಪಾನುಗಳನ್ನೊಳಗೊಂಡು ಒಟ್ಟು ೨೦೦ ಕಡೆ ಕೇಂದ್ರಗಳನ್ನು ಪರಿಷತ್ತು ನಡೆಸುತ್ತಿದೆಯೆಂದೂ ಕಾತಿಯಲ್ಲಿ ಇಷ್ಟರಲ್ಲಿಯೇ ಸಂಸ್ಕೃತ ವಿಶ್ವ ವಿದ್ಯಾಲಯ ಸ್ಥಾಪಿಸಲ್ಪಡುವುದೆಂದೂ ಕಾರ್ಯಕ್ಷೇತ್ರದಲ್ಲಿ ಇಂಥ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ವಿಚಾರವಿದೆಯೆಂದೂ ಅವರು ಹೇಳಿದರು. ಸುಮಾರು ೧೫೦೦ ಪ್ರತಿನಿಧಿಗಳು ಈ ಪರಿಷತ್ತಿನಲ್ಲಿ ಭಾಗವಹಿಸಿದ್ದರು. ಹದಿನಾಲ್ಕು ವಿಶ್ವ ವಿದ್ಯಾಲಯಗಳು ಹಲವಾರು ಸಂಸ್ಕೃತಾಭ್ಯಾಸ ಮಂಡಳಗಳು ಶ್ರೀ ವೆಂಕಟೇಶ್ವರ ವಿಶ್ವ ವಿದ್ಯಾಲಯದ ಪತಾಕೆದಲ್ಲಿ ನೆರೆದ ಈ ಅಧಿವೇಶನದಲ್ಲಿ ಭಾಗವಹಿಸಿದ್ದವು. ಅನೇಕ ರಾಜಕೀಯ ಧುರೀಣರೂ ರಾಜ್ಯಗಳ ಮುಖ್ಯ ಮಂತ್ರಿಗಳೂ ಶಿಕ್ಷಣ ಸಚಿವರೂ ಅಧಿವೇಶನದಲ್ಲಿ ಹಾಜರಿದ್ದರು.



ಗೀತೆಯು ಕೈಗನಡ್ಡಿ

ನವಯುಗ ನೈಸ್, ಉಡುಪಿ

ಬೈಂದೂರು—ಬೈಂದೂರು ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಚ್. ಬಿ. ಕೆದಿಲಾಯ ಸುತ್ತು ಇತರ ವಿಸ್ತರಣಾಧಿಕಾರಿಗಳು ಐಂಡ್ಲೆ ಫಿಕ್ಕಾದಲ್ಲಿ ಸಂಚಾರ ಕೈಗೊಂಡು ಗ್ರಾಮಾಭಿವೃದ್ಧಿ ಕಾರ್ಯಗಳ ಪ್ರಚಾರ ಮಾಡಿದರು. ಶ್ರೀಗಳಾದ ವೈ. ಮಂಜಯ್ಯ ಶೆಟ್ಟಿ, ಎಮ್. ಎಲ್. ಎ, ಆರ್. ಕೆ. ಸಂಜೀವ ರಾವ್ ಮೊದಲಾದವರು ಅಲ್ಲಲ್ಲಿ ಜರಗಿದ ಸಭೆಗಳಲ್ಲಿ ಭಾಗವಹಿಸಿ ಜನಜಾಗೃತಿಯನ್ನುಂಟುಮಾಡಿದರು.

ಪುತ್ತೂರು—ತಾ ೩ರಲ್ಲಿ ಬೆಳ್ಳಿಪಾಡಿಯಲ್ಲಿ ಬೆಳ್ಳಿಪಾಡಿ ಯಜಮಾನ ಶ್ರೀ ಕೊರಗಪ್ಪ ಶೆಗೆಗಳನ್ನು ಹಾರೈಯಂದ ಹೊಡೆಮು ಕೊಡೆ ನುಡಿ ಪರಾರಿಯಾಗಿದ್ದನೆಂದು ಹೇಳಿಲಾದ ನೀರ ಕಂಯ ಎಂಬ ೨೨ ವರ್ಷ ಪ್ರಾಯದ ಕೆಲಸದಾಳನ್ನು ಆತನು ಬೆಳ್ಳಿಪಾಡಿಯಲ್ಲಿ ಹೀರ ಕೊರಗನ ಮನೆಗೆ ಹೋಗುತ್ತಿದ್ದ ವೇಳೆ ಗ್ರಾಮಸ್ಥರ ಸಹಾಯದಿಂದ ಬಂಧಿಸಿ ಪುತ್ತೂರಿಗೆ ತಂದಿಗುನರು. ಮುಂದಿನ ತನಿಖೆ ನಡೆಯುತ್ತಿದೆ.

ಶಿರ್ವ—ಸರ್ವೋದಯ ಹಾಗೂ ಭೂದಾನ ಯಜ್ಞ ಅಂದೋಲನದ ಜಾಹೀರು ಸಭೆ ಸುತ್ತು ಸಹಕಾರಿ ದಿನಾಚರಣೆ ಸಭೆಯು ತಾ. 7ರಲ್ಲಿ ಶಿರ್ವ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಅಂಕೋಲೆಯ ಕರನಿವಾರಣಾ ಖ್ಯಾತಿಯ ಶ್ರೀ ಕಿಮ್ಮಪ್ಪ ನಾಯಕ್ ಮತ್ತು ಉಡುಪಿಯ ಶ್ರೀ ಕೆ ಶ್ರೀನಿವಾಸ ಪೈಗಳು ಭೂದಾನ ಮತ್ತು ಸರ್ವೋದಯದ ಕುರಿತು ಭಾಷಣಮಾಡಿದರು. ಸಹಕಾರಿ ಸಂಘಗಳ ಇನ್ಸ್‌ಪೆಕ್ಟರ್ ಶ್ರೀ ಕಾಂತಪ್ಪನವರು ಸಹಕಾರಿ ಚಳವಳಿಯ ಕುರಿತು ಮಾತನಾಡಿದರು. ಗಣರಂಭ ಸೂರ್ಯದಲ್ಲಿ ನೂರನ

(ಗಿನೇ ಪುಟದಿಂದ)

ಕೆದೆ ನಿಂಮೆಯೂ ಸ್ವತ್ಯವಾಗಿದೆ. ಏಕೆಂದರೆ ಏಳು ಸಾವಿರ ಅಡಿ ಎತ್ತರದ ಮೆಕ್ಸಿಕೊದಂತೆ ಹದಿನಾಲ್ಕು ಸಾವಿರ ಅಡಿ ಎತ್ತರದ ಟಿಬೆಟ್‌ನಲ್ಲಿ ಸಹ ಅಣು ವಿಘಟಣ ಕ್ರಿಯೆಯು ವಿಶೇಷ ಪರಿಶೀಲನೆಗೆ ಧಾರಾಳವಾದ, ಮತ್ತು ಬಹುಶಃ ಚಿತ ಹೆಚ್ಚಿನ,ಅನುಕಾಶವಿದೆ. ವಿಶ್ವ ಕಿರಣಗಳ ಸಮೊಕ್ಷೆಗೆದ ಇದು ದಾರಿ ಮಾಡಿ ಕೊಡುತ್ತದೆ. ಜ್ಞಾನಾಜಿನೆಯ ವಿಷಯದಲ್ಲಿ ಸಂಯುಕ್ತ ರಾಷ್ಟ್ರಸಂಘದ ಸಂಪರ್ಕ ಪಡೆದ ಅಥವಾ ಪಡೆಯದ ರಾಷ್ಟ್ರಗಳೆಂಬ ಭೇದಭಾವಕ್ಕೆ ಎಡೆಯಿತ್ತರೆ, ಈ ಸಮಿತಿ ತನ್ನ ಉದ್ದೇಶದಲ್ಲಿ ಯಶಸ್ಸು ಪಡೆಯುವುದು ಕಷ್ಟ. ಹಾಗಾಗದಂತೆ ಭಾರತ ಮಾಡಿರುವುದು ಅಭಿನಂದನೀಯ.

ವರಿಗೆ, ಮಕ್ಕಳಿಗೆ ತಿಂಡಿಪಂಚೋಣ ಕಾರ್ಯಕ್ರಮಗಳಿದ್ದವು.

ಕಾಸರಗೋಡು— ಕಾಸರಗೋಡು, ತಳಂಗರೆ, ಅಡ್ಡತ್ತ ಬೈಲು ಸುತ್ತು ಕೊಡ್ಲು ಗ್ರಾಮಗಳಲ್ಲಿ ಶವ ಪೆರವಣಿಗೆಗೆ ವಿನಷಾ ಇತರ ಯಾವುದೇ ಸಭೆ ಪರವಣಿಗೆಗಳು ನಿಷೇಧಿಸಲಾದ ಕುರಿತು ಈ ಮೊದಲು ಜ್ಯಾರಿಮಾಡಲಾದ 144ನ ಸೆಕ್ಷನ್ ನಿಯಮವು ಮುನಹ ತಾ. 25ರ ತನಕ ಹದಿನೈದು ದಿನಸಗಳ ವರೆಗೆ ಮುಂದುನರಿಸಲಾಗಿದೆ.

ಸಹಕಾರಿ ಸಪ್ತಾಹ ವಿದ್ಯಾರ್ಥಿ ದಿನಾಚರಣೆ— ಕಾಸರಗೋಡು ಸಹಕಾರಿ ಯುನಿಯನ್ನಿನ ಆಶ್ರಯದಲ್ಲಿ ಬಿ. ಇ. ಎಮ್ ಹೈಸ್ಕೂಲ್ ನಲಾವಣೆಯಲ್ಲಿ ಶ್ರೀ ಸಿ. ಇ. ಸುಬ್ರಹ್ಮಣ್ಯ ರೆವರೆ ಅಧ್ಯಕ್ಷತೆಯಲ್ಲಿ ತಾ 8ರಲ್ಲಿ ವಿದ್ಯಾರ್ಥಿ ದಿನವು ಆಚರಿಸಲ್ಪಟ್ಟಿತು. ಸಭೆ ಕಾರೀ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಬಿ. ರಾಮಚಂದ್ರ ರಾಯರು ಸ್ವಾಗತಮಾತುಗಳ ನ್ನಾಡಿದರು. ಶ್ರೀಗಳಾದ ವೈ ಮಹಾಲಿಂಗ ಭಟ್, ಪಾನೋದರ ಅಗ್ನಿತ್ತಾಯ ಮೊದಲಾದವರು ಭಾಷಣಮಿತ್ತರು.

ಹಾಣಿ ಮುಂಗಳೂರು— ಹಾಣಿ ಮುಂಗಳೂರು ಕೊಂಬನ ಬಾಜೆಗೆ ಸಹಕಾರಿ ಸಂಘಕ್ಕೆ ಸರಕಾರದಿಂದ ರೂ. 16,000/- ಸಹಾಯಧನ ಮಂಜೂರಾಗಿದೆ ಎಂದು ತಿಳಿದು ಬಂದಿದೆ.

ಪುಂಜಾಲಕಟ್ಟೆ— ತಾ. 9ರಲ್ಲಿ ಪುಂಗಳೂರಿನಿಂದ ಹಾನಸಕ್ಕೆ ಹೊರಟ ಬಸ್ಸೂರು ಪುಂಜಾಲ ಕಟ್ಟೆಯಲ್ಲಿ ಸ್ಯಾಕಲಿನಲ್ಲಿ ಬರುತ್ತಿದ್ದ ಶ್ರೀ ಮೋಹನ ಬಾಳಿಗ ಎಂಬ ವ್ಯಾಧಿಗೆ ಢಿಕ್ಕಿ ಹೊಡೆಸುದರ ಪರಿಣಾಮವಾಗಿ ಆತನು ನುರಜೋಸ್ಮುಖನಾದನೆಂದು ತಿಳಿದು ಬರುತ್ತದೆ.

ಉಪ್ಪಿನಂಗಡಿ— ಕ್ಯೂಲ ಜಾನುವಾರು ಕೇಂದ ದಲ್ಲಿ ಕೆಲಸಮುದಿಂದ ಗನುಮಸ್ತರಾಗಿದ್ದ ಶ್ರೀ ಬ್ಯಾಲಕ್ಟಸ್ಟ ಎಂಬವರು ತಾ. 9ರಲ್ಲಿ ಉಪ್ಪಿನಂಗಡಿಯಲ್ಲಿ ನದಿಯಲ್ಲಿ ಸ್ನಾನಕ್ಕೆ ಹೋದಾಗ ಸುಳಿಗೆ ಸಿಕ್ಕಿ ಸಧನ ಹೊಂದಿ ಪರೆಸ್ತಲಾಗಿದೆ

ಕುಂದಾಪುರ— ಇಲ್ಲಿಯ 'ರೂ ಪರಂಗಿ' ದ ಚತುರ್ಥ ವಾರ್ಷಿಕೋತ್ಸವವು ಬೋರ್ಡು ಹ್ಯಾಸ್ಕೂಲ್ ಸಭಾಂಗಣದಲ್ಲಿ ಇದೇ ತಾ. 20ರಲ್ಲಿ ಕುಂಟಿನಿ ಕೆನರಾ ಕಾಲೇಜ್ ಪ್ರೊಫೆಸರ್ ಶ್ರೀ ಬಿ. ಎಚ್ ಶ್ರೀಧರ, ಅವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಲಿರುವುದು.

ಕುಮಟಾ—ಸ್ಥಳೀಯ ವಿಕ್ಟೋರಿಯಾ ಜುಬಿಲಿ ಲೈಬ್ರೆರಿಯ ನಜ್ರು ನುಹೋತ್ಸವವು ಇದೇ ತಾ 20ರಲ್ಲಿ ಕರ್ನಾಟಕದ ಕುಲಪುರೋಹಿತ ಶ್ರೀ ಆಲೂರು ವೆಂಕಟ್ರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಈ ಸಂದರ್ಭದಲ್ಲೇ ತೆರೆಯಲಾಗಿನ ವಾಚನಾಲಯದ 'ಬಾಲವಿಭಾಗ'ವನ್ನು ಗೋಕರ್ಣ ಮುಮಾರ್ಧಿಶ್ರೀ ಶ್ರೀ ವ್ಯಾಸರಾಜಾಧಿ ತೀರ್ಥ ಸ್ವಾಮಿಗಳವರು ಉದ್ಘಾಟಿಸುವರು.

ಜವಾಹರಲಾಲರು ದೀರ್ಘಾಯುವಾಗಲಿ!

ಜನತೆಯಿಂದ ವರ್ಧಂತಿಯ ಶುಭಕಾಮನೆ

ಇದೇ ನಳನೇ ದಿನಾಂಕ, ಅಂದರೆ ದೀಪಾವಳಿಯ ಶುಭದಿನ, ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟ ಕಾಲದಲ್ಲಿ ಅನುಪಮ ಪಾತ್ರ ವಹಿಸಿರುವ, ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಭಾರತದ ಭವಿಷ್ಯವನ್ನು ಉಜ್ವಲವಾಗಿಸಲು ಬದ್ಧಕಂಕಣರಾಗಿರುವ ಮಹಾನುಭಾವ ಪ್ರಧಾನ ಶ್ರೀ ಜವಾಹರಲಾಲ್ ನೆಹರು ೬೬ನೇ ವಯಸ್ಸಿಗೆ ಕಾಲಿಟ್ಟಿರುವರು.

ವಿಶ್ವವ್ಯಾಪ್ತಿಯ ಸೃಷ್ಟಿಯೊಂದು ಇಂದಿರುವುದಾದರೆ ಅದು ನಮ್ಮ ಜನಪ್ರಿಯ ಪ್ರಧಾನಿ ನೆಹರು—ದೇಶದೊಳಗೂ ಹೊರಗೂ ಅವರ ಘೋರಣೆಗಳು ದಮ ಜನರ ಪಾಲಿಗೆ ಸಮೃತ ನೆಸಿಸಿವೆ; ಅವರ ನೀತಿಯನ್ನು ಖಂಡಿಸುವ ಕೆಲವರು ಇರುವರಾದರೂ ವ್ಯಕ್ತಿಗತವಾಗಿ ನೆಹರುಗಳ ಬಗ್ಗೆ ಪ್ರೀತಿಯನ್ನು ತೋರಿಸದ ನಾಗರಿಕನೊಬ್ಬನು ಜಗತ್ತಿನಲ್ಲಿಯೇ ಸಿಗುವಂತಿಲ್ಲ.

ಮಕ್ಕಳ ಕ್ಷೇಮಾಭ್ಯುದಯ

ಭಾರತವು ಅನೇಕ ಕಾರ್ಯಕ್ರಮಗಳಿಂದ "ಜವಾಹರಲಾಲರು ದೀರ್ಘಾಯುವಾಗಲಿ" ಎಂಬ ಪೃತ್ಯುರ್ವಕವಾದ ಸಾರ್ಥನೆಯನ್ನು ಅವರ ಹುಟ್ಟು ಹಬ್ಬದ ದಿನ ಸಲ್ಲಿಸಿತು. ಜನತೆ "ನೆಹರುಗಳು ನೂರಾರು ವರ್ಷ ಬಾಳಿ ಬದುಕಲಿ" ಎಂದು ಶುಭ ಕೋರಿತು.

ಮಕ್ಕಳ ಮೇಲೆ ಅತ್ಯಂತ ವಾತ್ಸಲ್ಯವಿರುವ ನೆಹರುಗಳ ಜಯಂತ್ಯುತ್ಸವನನ್ನು ಅಖಿಲ ಭಾರತ ಮಕ್ಕಳ ದಿನದ ಲೂಪದಲ್ಲಿಯೂ ಆಚರಿಸಲಾಯಿತು ರಾಷ್ಟ್ರಾಧ್ಯಕ್ಷೆ ಡಾ. ರಾಜೇಂದ್ರ ಪ್ರಸಾದ್, ಉಪ್ರೋಗ್ಯ ಸಂಠಿತ್ರಿ ರಾಜಕುಮಾರಿ ಅಮೃತ ಕೌರರೇ ಮುಂತಾದವರು ನೆಹರುಗಳು ಹಲವಾರು ಸಲ ಒತ್ತಿ ಹೇಳಿರುವಂತೆ ಮಕ್ಕಳ ಕ್ಷೇಮಾಭ್ಯುದಯಕ್ಕಾಗಿ ದುಡಿಯಲು ಪರಿಯರು ದೀಕ್ಷೆ ವಹಿಸಲಿ ಎಂದು ಈ ಸಂದರ್ಭದಲ್ಲಿ ವಿನಂತಿಸಿದರು. ಈ ಸಲದ ದೀಪಾವಳಿಯು ನೆಹರುಗಳ ನೃಕ್ತಿತ್ವದಪ್ರಕಾಶವನ್ನು ಹೆಚ್ಚಿಸಿರುವಂತೆ ಸುಕ್ಕಳ ಕಲ್ಯಾಣ ಜೀವನದ ಮೇಲೆಯೂ ಬೆಳಕು ಬೀರುವಂತಾಗುವುದಕ್ಕೆ ನಾಗರಿಕರು ಬಲವು ಒಗೆಯುವಂತೆ ಸಂತೋಷ ಸೂಚಿಸಿದರು.

ಜನಸಂಖ್ಯೆಯ ಹೆಚ್ಚಳ

ಭಾರತದಲ್ಲಿ ಜನಸಂಖ್ಯೆಯು ಅಧ್ಯಯನದ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಮಂಡಳದ ದಿಗ್ದರ್ಶಕ ಡಾ! ಚಂದ್ರಶೇಖರರು ಆಸೇರಿಕ, ಜಪಾನು ಇತ್ಯಾದಿ ದೇಶಗಳಿಗೆ ಸಂದರ್ಶನವಿತ್ತು ಬಾರತಕ್ಕೆ ಮರಳಿದವರು ಏಕ್ಕದ ರಾಷ್ಟ್ರಗಳಲ್ಲಿ ಈ ಸಮಸ್ಯೆ ಎಷ್ಟು ಉಗ್ರವಾಗಿದೆ ಎಂಬುದನ್ನು ವರ್ಣಿಸಿದ್ದಾರೆ.

ಟೋಕಿಯೊದಲ್ಲಿ ಆಂತಾರಾಷ್ಟ್ರೀಯ ಕುಟುಂಬ ಯೋಜನಾ ಸಮ್ಮೇಳನದಲ್ಲಿ ಭಾಗವಹಿಸಿದ ಇವರು ಆಕ್ರಮಣಶೀಲವಾದ ಯುದ್ಧಕ್ಕೂ ಜನಸಂಖ್ಯೆಯ ಹೆಚ್ಚಳಕ್ಕೂ ಸಂಬಂಧವಿದೆ ಎಂಬುದಾಗಿ ಸಮ್ಮೇಳನದಲ್ಲಿ ಅಭಿಪ್ರಾಯ ಪಡಲಾಯಿತು ಎಂದರು ಜಪಾನನ್ನು ದ್ವಿತೀಯ ಮಹಾಯುದ್ಧಕ್ಕೆ ಪ್ರೇರೇಪಿಸಿದುದೇ ಜನಸಂಖ್ಯೆಯ ಒತ್ತಡ ಎಂಬ ಅಭಿಪ್ರಾಯವನ್ನು ಅವರು ಪ್ರಕಟಿಸಿದರು.

ಜಪಾನಿನಲ್ಲೀಗ ೯ ಕೋಟಿ ಜನರಿದ್ದಾರೆ; ಪ್ರತಿ ವರ್ಷ ೧೦ ಲಕ್ಷದಷ್ಟು ಜನಸಂಖ್ಯೆ ಅಲ್ಲಿ ಹೆಚ್ಚುತ್ತಲಿದೆ ಇಷ್ಟು ಮಂದಿಗೆ ಸುಖ ಜೀವನ ನಡೆಸುವಷ್ಟು ಭೂಭಾಗ ಜಪಾನಿನಲ್ಲಿಲ್ಲ. ಈ ದೃಷ್ಟಿಯ ಸಮುದಾಯಗಳ ಹೊರಗೆ ಜಪಾನಿನ ಜನರು ಬಲಸಿ ಹೋಗುವಂತೆ ಅಂತಾರಾಷ್ಟ್ರೀಯ ನೈವಸ್ಥೆಯಾದರೆ ಸಮಸ್ಯೆ ಸ್ವಲ್ಪ ಮಟ್ಟಿಗೆ ಬಗೆಹರಿದೀತು ಎಂದವರು ತಿಳಿಸಿದರು.

ಅಕಹಾಯ ಸರಕಾರ

ಜಪಾನಿನ ಸರಕಾರವು ಗರ್ಭಪಾತವನ್ನು ಶಾಸನ ಬದ್ಧವಾಗಿ ಮಾಡುವಷ್ಟು ಮುಂದಕ್ಕೆ ಈಗ ಹೋಗಿರುತ್ತದೆ. ಏಶ್ಯದ ಬೇರಾವುದೇ ರಾಷ್ಟ್ರದಲ್ಲಿ ಗರ್ಭಪಾತವು ಶಾಸನ ಸಮ್ಮತವೆನಿಸುವುದಿಲ್ಲ. ಪರಿಣಾಮದಲ್ಲಿ ಪ್ರತಿವರ್ಷ ೧೨ ಲಕ್ಷದಷ್ಟು ಗರ್ಭಪಿಳಿಸಿದ ಪ್ರಕರಣಗಳು ಬಹಿರಂಗವಾಗಿ ನಡೆಯುತ್ತವೆಂದೂ ಇನ್ನಲ್ಲದೆ ನರೆದಿಯೆಗಾದ ಬೇರೆ ೧೦ ಲಕ್ಷವಷ್ಟಾದರೂ ಗರ್ಭಪಾತದ ಪ್ರಕರಣಗಳಿರಬಹುದೆಂದೂ ಅಂದಾಜು

ತಾಯಂದಿರ ಮೇಲೆ ಈ ಗರ್ಭಪಾತಗಳಿಂದಾಗುವ ಮಾನಸಿಕ ಹಾಗೂ ಭಾವಾತ್ಮಕ ದುಷ್ಪರಿಣಾಮಗಳನ್ನು ವರ್ಣಿಸುವಂತಿಲ್ಲ. ಇದನ್ನು ತಡೆಗಟ್ಟಲು ಜನನ ನಿಯಂತ್ರಣ ಕ್ರಮಗಳನ್ನು ಮುಂದೊತ್ತಲಾಗುತ್ತಿದೆ. ಅಮೇರಿಕವು ಕೆಲವು ತಿಂಗಳುಗಳ ವರೆಗೆ ಹೆಂಗಸಿನಲ್ಲಿ ಬಂಜೆತನವನ್ನು ಪುಟ್ಟಿಸುವ ರಶ್ಮಿಯೊಳ್ಳ ಹೊಟ್ಟೆಗೆ ತೆಗೆದು ಕೊಳ್ಳುವ ಔಷಧವೊಂದರ ಕುರಿತು ವಿಶೇಷ ಸಂಶೋಧನೆ ನಡೆಸಿದೆ ಇದರ ಪ್ರಯೋಜನ ಬೇಗನೆ ಸಿಗುವಂತಾದರೆ ಕ್ಷೇಮ ಎಂದವರು ವಿವರಿಸಿದರು.

ಶ್ರೀ ವಿ. ಟಿ. ಹೆಗ್ಡೆಯವರು

ಇವರು ದ ಕ. ಜಿಲ್ಲೆಯ ಶಿರ್ವ ಮೂಡಬೆಟ್ಟು ಮಹಾಬಲ ಹೆಗ್ಡೆಯವರ ಪುತ್ರರಿದ್ದು ಇಂಗ್ಲಾಂಡಿನ ಪೇಲ್ಸಿನಲ್ಲಿ ಎರೋನ್ಯೋಮ್ ಫೈಯರ್ ಸರ್ವಿಸ್ ಟ್ರೈನಿಂಗ್ ಪಿಯಾಲಯದಲ್ಲಿ ವಿಮಾನ ನಿಲ್ದಾಣ ಫೈಯರ್ ಆಫೀಸರ್ ಕೆಲಸವಪಲ್ಲಿ ತರಬೇತಿ ಹೊಂದಿದ್ದಾರೆ. ಈಗ ಬೇರಿನ್‌ನಲ್ಲಿ ಆಫೀಸರರಾಗಿ ನೇಮಿಸಲ್ಪಟ್ಟಿರುವರು. ತರಬೇತಿ ಹೊಂದುವುದರಲ್ಲಿ ಇವರು ಪ್ರಥಮ ಭಾರತೀಯರಾಗಿರುವರು. ಶ್ರೀಯುತರು 'ಇಂಟರ್‌ನ್ಯಾಶನಲ್ ಏರ್ ರೇಡಿಯೋ ಲಿಮಿಟೆಡ್' ಕಂಪೆನಿಯ ಮುಖಾಂತರ ಸಿವಿಲ್ ಎವಿಯೇಶನ್ ರೆಗ್ಯುಲೇಶನ್ ಪ್ರಕಾರ 6 ತಿಂಗಳ ತರಬೇತಿ ಪಡೆದಿರುತ್ತಾರೆ

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ಗಿಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು-2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO.,LTD.
"POPULAR BUILDINGS" MANGALORE-1

ಮಂಗಳೂರು

ನಾಡಹಬ್ಬ — ಸ್ಥಳೀಯ ಪ. ಕ. ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ಭವನದಲ್ಲಿ ಇದೇ ತಾ. ೬ರಲ್ಲು ನಾಡಹಬ್ಬವು ಆಚರಿಸಲ್ಪಟ್ಟಿತು. ಶ್ರೀ ಪಿ. ಗೋಪಾಲಕೃಷ್ಣನವರು "ಆಕಾಶದ ಅಮೃತಗಳು" ಎಂಬ ವಿಷಯದಲ್ಲಿ ಉಪನ್ಯಾಸವನ್ನಿತ್ತರು. ಶ್ರೀ ಎಚ್. ಆನಂದ ರಾಮ ಉಡುಪರು ಭಕ್ತಿಪೂರ್ವಕ ವಾಚನ ಮಾಡಿದರು. ಅಧ್ಯಕ್ಷ ಶ್ರೀ ಯು. ತ್ರಿಧರ ಪುಣ್ಯಶ್ಲೋಕರ ಅಭಿಧಿಗಳನ್ನು ಸ್ಮಾರಿಸಿದರು. ಕಾರ್ಯದರ್ಶಿ ಶ್ರೀ ಎಚ್. ವೆಂಕಟರಮಣಯ್ಯನವರು ಧನ್ಯವಾದಗಳನ್ನರ್ಪಿಸಿದರು.

ಸಹಕಾರಿ ಸಪ್ತಾಹ ದಿನಾಚರಣೆ— ಸ್ಥಳೀಯ ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ ಸೆಂಟ್ರಲ್ ಬೇಂಕ್ ಡೈರೆಕ್ಟರ್ ಶ್ರೀ ಎಸ್. ಎಮ್. ಪಾಂಡುರಂಗ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎ. ಮಹಾಬಲ ಶೆಟ್ಟರಿಂದ ಪ್ರಾರ್ಥನಾ ಗೀತೆಯಾದ ಬಳಿಕ ಶ್ರೀ ಟಿ. ಮಹಾಲಿಂಗನವರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಶ್ರೀ ಕೆ. ರಘುರಾಮ ಶೆಟ್ಟಿಯವರು ವಂದನೆಗಳನ್ನರ್ಪಿಸಿದರು.

ವಿದ್ಯಾರ್ಥಿ ಸಂಘದ ಅಧ್ಯಕ್ಷ— ಮಂಗಳೂರು ಸರಕಾರಿ ತರಬೇತಿಕಲಾ ಕಾಲೇಜಿನ ಸೆಕೆಂಡರಿ ವಿಭಾಗದ ಯೂನಿಯನ್ನಿನ ಸೆಕೆಂಡ್ ಟರ್ಮಿನ ಅಧ್ಯಕ್ಷರಾಗಿ ಶ್ರೀ. ಕೆ. ಕೃಷ್ಣ ಶೆಟ್ಟರೂ ಕಾರ್ಯದರ್ಶಿಗಳಾಗಿ ಶ್ರೀ. ಇಬ್ರಾಹಿಮರೂ ಆರಿಸಲ್ಪಟ್ಟರುವರು.

ಪತ್ರಿಕೋದ್ಯಮಿ ಸಂಘದಲ್ಲಿ— ಮೈಸೂರು ಪತ್ರಿಕೋದ್ಯಮಿ ಸಂಘದ ಅಧ್ಯಕ್ಷ ಶ್ರೀಕುಮಾರ್ ಸ್ವಾಮಿಯವರು ಸ್ಥಳೀಯ ಪತ್ರಿಕೋದ್ಯಮಿ ಸಂಘದಲ್ಲಿ ಮಾತನಾಡುತ್ತಾ, ಮೈಸೂರಿನ ಪ್ರತ್ಯೇಕ ಪಾದದ ಗುಲ್ಲು ಕೆಲವೇ ಮಂದಿಯದ್ದೆಂದೂ ಕರ್ನಾಟಕವೆಲ್ಲ ಕೂಡಿ ಬಾಳುವುದು ಹಿತಕರವೆಂದೂ ಹೇಳಿದುವರು.

ಶ್ರೀ ಬೋಳ್ ವಿತಲರಾಯರಿಗೆ ಸತ್ಕಾರ— ದಿ ಮೊಯ್ಲರ್ ಇನ್ಯೂರೆನ್ಸ್ ಕಂಪೆನಿಯ ಮಂಗಳೂರಿನ ಪ್ರತಿನಿಧಿಗಳು ಇದೇ ತಾ. ೬ರಲ್ಲು ಕಂಪೆನಿಯ ಜನ್ಮದಾತ ಶ್ರೀ ಬೋಳ್ ವಿಠಲರಾಯರಿಗೆ ಸತ್ಕಾರ ಕೂಟವೊಂದನ್ನೇರ್ಪಡಿಸಿದರು. ಸಭಾರಂಭದಲ್ಲಿ ಗ್ರೂಪ್ ಫೊಟೊ ತೆಗೆಯಲಾಯಿತು. ಬಳಿಕ ಡಬ್ಲ್ಯು. ಆರ್. ಸುಸೀತರು ಬೆಳ್ಳಿ ಕಂಡಿಕೆಯಲ್ಲಿಟ್ಟು ನೂನಪತ್ರವನ್ನರ್ಪಿಸಿದರು. ಕಂಪೆನಿಯ ಸರ್ವತೋಮುಖ ಅಭಿವೃದ್ಧಿಗೆ ಕಾರಣೀಭೂತರಾದ ಶ್ರೀ ರಾಯರ ಸಾನುರ್ಧ್ಯ ಹಾಗು ವರ್ಷಾಸ್ಮು ಪಾನಪತ್ರದಲ್ಲಿ ವ್ಯಕ್ತ ಪಡಿಸಲಾಗಿತ್ತು. ಕಂಪೆನಿ ಪ್ರತಿನಿಧಿಗಳ ಕಡೆಯಿಂದ ಶ್ರೀಮತಿ ಎಮ್. ನೊರೋನ್ಹಾ, ಶ್ರೀಗಳಾದ ಐ. ವಿ. ರಾಮರಾವ್, ಎ. ಭೋಜ ರಾವ್, ನೌಕರ ನಾಗದಲ್ಲಿ ಆನರಿಗರ ತಕ್ಕ ಪ್ರೇರಣೆ ಇತ್ಯಾದಿ ವಿಷಯಗಳನ್ನೆತ್ತಿ ಭಾಷಣ ಮಾಡಿದರು.

ಶ್ರೀ ಬೋಳ್ ವಿಠಲರಾಯರು ತಮ್ಮ ಕಿರು ಆಡಿದ ಮಾತುಗಳಿಗೆಮನಸೋತು, ಕಂಪೆನಿಯ ಇತಿಹಾಸವನ್ನು ಸಂಕ್ಷೇಪವಾಗಿ ವಿವರಿಸಿ, ಕಂಪೆನಿಯು ಇಂದಿನ ಪ್ರಗತಿಗೆ ಹೇತುವಾದ ಕಾರಣಗಳೇನುಂಬುದನ್ನು ತಿಳಿಸಿದರು. ಕಂಪೆನಿಯ ಕೆಲಸಗಾರರು ಮುಂದೆಯೂ ಸರ್ವ ಸಹಕಾರವನ್ನಿತ್ತು 'ಪೋಲ್ಸಲರ್' ಜನಪ್ರೀತವಾಗಿ ಹೆಸರಿಗೆ ತಕ್ಕಂತೆ ಆನ್ವರ್ಥವಾಗಲೆಂದು ಆಶಿಸಿದರು. ಲಘುಪಾಹಾರ, ಸಂಗೀತ ಕಾರ್ಯಕ್ರಮಗಳಾದ ಬಳಿಕ ಶ್ರೀ. ಪಿ. ರಾಮರಾಯರು ವಂದನೆಗಳನ್ನಿತ್ತರು.

ವಿದ್ಯಾರ್ಥಿ ಮತ್ತು ನೈತ ದಿನಾಚರಣೆಗಳು— ತಾ. ೮ರಲ್ಲು ವಿದ್ಯಾರ್ಥಿ ದಿನವು ಗವರ್ನಮೆಂಟ್ ಕಲಾ ಕಾಲೆಯ ಸ್ಟೂಡೆಂಟ್ಸ್ ಸ್ಪೆಶಲರಿ ಕೊಪರೇಟಿವ್ ಸೊಸಾಯಿಟಿ ಆಶ್ರಯದಲ್ಲಿ ಕಾಲೇಜ್ ಲೆಕ್ಚರರ್ ಶ್ರೀ. ಕೆ. ಎ. ಜೋಸೆಫರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಎಸ್. ಭಾಸ್ಕರ ರೈ ಎಮ್. ಎಸ್. ಏಕಾಂಬರ ರಾವ್ ಮೊದಲಾದವರು ಕಾರ್ಯೋಚಿತ ಮಾತುಗಳನ್ನಾಡಿದರು.

ತಾ. ೨೮ರಲ್ಲು ಸಂಜೆ ಸೆಂಟ್ರಲ್ ಕೋಪರೇಟಿವ್ ಬೇಂಕಿನ ಸಭಾ ಭವನದಲ್ಲಿ ರೈತ ದಿನವು ಶ್ರೀ ಸಯಂಪಳ್ಳಿ ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಬಿ. ಜಿನರಾಜ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀ. ಪಿ. ದಾಮೋದರ ಬಾಳಿಗರಿಂದ ರಚಿಸಲ್ಪಟ್ಟ ಸಹಕಾರಿ ಧ್ವಜಗೀತೆ ಮೊದಲಾದುವು ಹಾಡಲ್ಪಟ್ಟವು. ಸಹಕಾರಿ ಕೃಷಿ ಪದ್ಧತಿ ಮತ್ತು ಆದರಿಂದಾಗುವ ಹಿತಾಹಿತಗಳ ಕುರಿತು ಭಾಷಣಗಳಾದುವು. ಶ್ರೀ. ಎಸ್. ನರಸಿಂಹಯ್ಯ ಎಮ್. ಎಲ್. ಸಿ.ಯವರಿಂದ ಧನ್ಯವಾದಗಳು.

ಮದ್ರಾಸು ಸಮಾಚಾರ

ಭಾಷೆಗೆ ಸಂಬಂಧಪಟ್ಟ ತಪಶೀಲುಗಳು: ಭಾರತ ಸರಕಾರದವರು ಮದ್ರಾಸು-ಆಂಧ್ರ ಗಡಿಗೆ ಹೊಂದಿ ಇರುವ ತಾಲೂಕುಗಳ ಬಗ್ಗೆ, 1951ನೇ ಇಸವಿಯ ಜನಗಣನೆಯ ಮೇರೆಗಿನ ಗ್ರಾಮವಾರು ಭಾಷಾ ಸಂಬಂಧವಾದ ತಪಶೀಲುಗಳನ್ನು ಸಂಗ್ರಹಿಸುವ ಕೆಲಸವನ್ನು ಮತ್ತು ಪಕ್ಕಿಣ ಕನ್ನಡ, ಕೊಯಂಬುತ್ತೂರು, ನೀಲಗಿರಿ ಮತ್ತು ಮಲಬಾರು ಜಿಲ್ಲೆಗಳ ದ್ವಿಭಾಷಾ ತಾಲೂಕುಗಳ ಬಗ್ಗೆ ಅದೇ ರೀತಿಯ ಪಿಪರವನ್ನು ಸಂಗ್ರಹಿಸುವ ಕೆಲಸವನ್ನು, ಸೂಪರಿಂಟೆಂಡೆಂಟ್ ಸೆನ್ಸಸ್ ಆಪರೇಶನ್ಸ್, ಮದ್ರಾಸು— ಇವರಿಗೆ ನಪಿಸಿ ಕೊಟ್ಟಿದ್ದರು. ಈಗ ಸೆನ್ಸಸ್ ಆಪರೇಶನ್ಸ್ ಸೂಪರಿಂಟೆಂಡೆಂಟಿರು, ಚೆಂಗಲ್‌ಪೇಟೆ, ಉತ್ತರ ಆರ್ಕಾಟು, ಸೇಲಂ, ಚಿತ್ತೂರು ಮತ್ತು ನೆಲ್ಲೂರುಜಿಲ್ಲೆಗಳಬಗ್ಗೆ ಪ್ರತ್ಯೇಕ ಪ್ರತ್ಯೇಕವಾಗಿ ಭಾಷೆಗೆ ಸಂಬಂಧಪಟ್ಟ ಸಿನರಗಳನ್ನೊಳಗೊಂಡ ಸಣ್ಣ ಪುಸ್ತಕವನ್ನೂ ಈ ಸಂಸ್ಥಾನದ ಇತರ ಸಮಸ್ತ ದ್ವಿಭಾಷಾ ತಾಲೂಕುಗಳಿಗೆ ಬಗ್ಗೆ ಒಟ್ಟು, ವಿವರಗಳುಳ್ಳ ಸಣ್ಣ ಪುಸ್ತಕವನ್ನೂ ತಯಾರಿಸಿ ಮುದ್ರಿಸಿರುತ್ತಾರೆ. ಈ ಪುಸ್ತಕಗಳನ್ನು ಸರ್ವರೂ, ಸೂಪರಿಂಟೆಂಡೆಂಟ್, ಗವರ್ನ್‌ಮೆಂಟ್ ಪ್ರೆಸ್ ಪಬ್ಲಿಕೇಶನ್ಸ್, ಬ್ರಾಂಚ್, ಮೌಂಟ್ ರೋಡ್ ಮದ್ರಾಸ್-2— ಇವರಿಂದ ಕೊಂಡುಕೊಳ್ಳಬಹುದಾಗಿದೆ.

ಗ್ರಾಮ ಪೈದ್ಯರಿಗೆ ತರಬೇತಿ— 1956ನೇ ಇಸವಿ ಅಕ್ಟೋಬರ್ 1ನೇ ತಾರೀಕಿನಿಂದ, ಗ್ರಾಮ ವೈದ್ಯರಿಗೆ ತರಬೇತಿ ಕೊಡುವ ಯೋಜನೆಯನ್ನು ಬಿಟ್ಟು ಕೊಡಿಲಾಗಿದೆ.

ದೀಪಾವಳಿಗಾಗಿ ಖಾದಿ— "ಪಟ್ಟಕ್ಕಾಗಿ ಹೊಸ ಬಟ್ಟೆ ಕೊಂಡುಕೊಳ್ಳುವ ಸಲಹೆಯನ್ನು ಮುಖ್ಯಮಂತ್ರಿ ಶ್ರೀ ಕಾಮರಾಜರು ಕೆಳಗಿನಂತೆ ವಿನಂತಿ ಮಾಡಿಕೊಂಡಿದ್ದಾರೆ. ಈ ವಿನಂತಿಯು ದೀಪಾವಳಿಗೆ ವಿಶೇಷವಾಗಿ ಸಂಬಂಧಿಸಿದ್ದರೂ ಯಾವ ಕಾಲಕ್ಕೂ ಮನ್ನಿಸಲ್ಪಡಲು ಯೋಗ್ಯವಾಗಿದೆ. ದೀಪಾವಳಿಯ ಕಾಲದ ಉಲ್ಲಾಸ ಮತ್ತು ಉತ್ಸಾಹವು ಇನ್ನು ಕೆಲವು ದಿನಗಳ ಬಳಿಕವೂ ಇರುವುದರಿಂದ ಜನತೆ ಮುಖ್ಯ ಮಂತ್ರಿಗಳ ಹಿತೋಕ್ತಿಗೆ ಗಮನ ಕೊಡುವುದೆಂದು ನಂಬಿದ್ದೇವೆ:—

1955ನೇ ಇಸವಿ ನವೆಂಬರ್ 1ನೇ ತಾರೀಕಿನಂದು ದೀಪಾವಳಿ ಉತ್ಸವವನ್ನು ಆಚರಿಸಲಾಗುವುದು ಸರ್ವರೂ ಈ ಸಂತೋಷದ ದಿನದಂದು ಹೊಸ ವಸ್ತ್ರಗಳನ್ನು ಕೊಳ್ಳುತ್ತಾರೆ. ಈ ಸಮುಯದಲ್ಲಿ ಉಪಕರಣದಿನ ಮೇಲೆ ತಮ್ಮ ಅವಾಯವನ್ನು ಹೆಚ್ಚಿಸಿಕೊಳ್ಳಲು ನಿರ್ಧರಿಸಾಗಿರುವ ಗ್ರಾಮೋದ್ಯೋಗ ಪ್ರದೇಶಗಳ ಬಡಕೃಷಿಕರ ಪರವಾಗಿ ನಾನು ಮುಂದೆ ಬಂದು ನಿಮ್ಮಲ್ಲಿ ವಿಶ್ವಾಸದಿಂದ ಕೇಳಿಕೊಳ್ಳುವುದೇನೆಂದರೆ, ತಾವು ಎಲ್ಲರೂ ಖಾದಿಯನ್ನು ಕೊಂಡು ನಲ್ಮೆಯ ಜನರ ಜೀವನವನ್ನು ಆನಂದಮಯವನ್ನಾಗಿ ಮಾಡಬೇಕು. "ಚಾಲ್ತಿಸಿತೆ" ಗಾಂಧೀಜಿಯವರು, ಸದಾ ಬಡವರ ಹಿತವನ್ನು ಚಿಂತಿಸುತ್ತಾ ಅವರ ಆವಾಯವನ್ನು ಹೆಚ್ಚಿಸುವುದಕ್ಕೆ ಚರಕ ಮತ್ತು ಖಾದಿಯೇ ಮುಖ್ಯವಾದ ಸುತ್ತು ಖಂಡಿತವಾದ ಸಾಧನಗಳೆಂದು ಭಾವಿಸಿ ಚರಕ ಮತ್ತು ಖಾದಿಯ ನುಂಕ್ಷವನ್ನು ದೇಶಕ್ಕೆ ಉಪದೇಶಿಸಿದರು. ನಮ್ಮ ಪ್ರೀತಿಪಾತ್ರರಾದ ಪ್ರಧಾನಿಗಳು ಖಾದಿಯನ್ನು ಸ್ವಾತಂತ್ರ್ಯ ದೇವಿಯ ಉಡುಪು ಎಂದು ಕರೆದುತ್ತಾರೆ. ಸಂಸ್ಥಾನದ ಸರಕಾರವರೂ ಸಹ, ಸಂಸ್ಥಾನದ ಪ್ರಗತಿಯ ಮತ್ತು ಗ್ರಾಮಾಂತರ ಪ್ರದೇಶಗಳ ಆರ್ಥಿಕೋನ್ನತಿಯ ಕುರಿತಾದ ಕಾರ್ಯಕ್ರಮಗಳ ಪೈಕಿ ಖಾದಿಯ ಅಭಿವೃದ್ಧಿ ಕಾರ್ಯಕ್ರಮಕ್ಕೆ ಅಗ್ರಸ್ಥಾನವನ್ನು ಕೊಟ್ಟಿರುತ್ತಾರೆ. ರಾಷ್ಟ್ರಪಿತನು ಖಾದಿಗೆ ಕೊಟ್ಟ ಸ್ಥಾನ ಮುಖ್ಯತೆಯಿಂದಾಗಿ ಮತ್ತು ಕೇಂದ್ರ ಮತ್ತು ರಾಜ್ಯ ಸರಕಾರಿಗಳವರು ಅವಕ್ಕೆ ಕೊಟ್ಟ ಮಹತ್ವದಿಂದಾಗಿ ಆದರೆ ವಿಷಯವಾಗಿ ನನ್ನೊಬ್ಬ ವ್ಯಕ್ತಿಯೇಳುವುದು ನನಗೆ ಅತ್ಯಗತ್ಯನಾಗಿದೆ. ಆದುದರಿಂದ, ದೀಪಾವಳಿಯ ಪ್ರಯುಕ್ತ ಸರ್ವರೂ ಖಾದಿಯನ್ನು ಕೊಂಡು, ಖಾದಿಯ ಉಗವುಸ್ಥಾನವಾದ ಖಡಕನರ ಮನೆಗಳೂ ಹಬ್ಬದ ದಿನಗಳಲ್ಲಿ ಪ್ರಕಾಶಮಾನವಾಗುವಂತೆ ಮಾಡಬೇಕಾಗಿ ನಾನು ಜನತೆಗೆ ವಿನಂತಿ ಮಾಡಿಕೊಳ್ಳುತ್ತೇನೆ."

(೪ನೇ ಪುಟದಿಂದ)

ಸ್ಯರು ಸಂಯುಕ್ತ ಕರ್ನಾಟಕ ರಾಜ್ಯದ ರಚನೆಯನ್ನು ಸ್ವಾಗತಿಸಿ ನೆಹರುಗಳಗೊಂದು ಮನವಿಯನ್ನು ಕಳಿಸಿದ್ದರು. ಇತ್ತೀಚೆಗೆ ಶೇಷಾದ್ರಿ ಸಮಿತಿಯ ವರದಿಯ ನೋಟೆ ಚರ್ಚೆ ನಡೆದಾಗಲೂ ಹೆಚ್ಚಿನ ಸದಸ್ಯರು ಏಕೀಕರಣದ ಆಕಾಂಕ್ಷೆಯನ್ನೆ ಪ್ರಕಟಿಸಿದ್ದರಲ್ಲದೆ, "ಮೈಸೂರು ಮೈಸೂರಾಗಿಯೇ ಉಳಿಯಲಿ" ಎನ್ನುವವರ ಧ್ವನಿ ಶಕ್ತಿಯುತವಾಗಿರಲಿಲ್ಲ. ಇದೇ ಅಭಿಪ್ರಾಯವನ್ನು ಈ ಸಲದ ಮಹತ್ವ ಪೂರ್ಣ ಅಧಿವೇಶನದ ಕಾಲದಲ್ಲಿಯೂ ಸದಸ್ಯರು ಹೊರ ಹೊಮ್ಮುವರೆಂಬುದರಲ್ಲಿ ಅನುಮಾನಕ್ಕೆ ಅವಕಾಶವಿಲ್ಲ. ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರು ಮೊನ್ನೆ ಮೈಸೂರಿನಲ್ಲಿ ಸಂಚರಿಸಿದಾಗ, ಅವರ ಮುಂದೆ ನಡೆದ ಏಕೀಕರಣ ವಿರೋಧಿ ಪ್ರದರ್ಶನವು ತೀರ ಕ್ಷುಲ್ಲಕವಾಗಿತ್ತೆ ಹೊರತು, ಅದ ಕ್ಕೆ ಮಹತ್ವ ಕೊಡುವುದು ಸಲ್ಲದು. ಏಕೆಂದರೆ ಶ್ರೀ ಢೇಬರರು ಎಲ್ಲಿ ವಿರೋಧವೆಂಬುದು ತಿಳಿಯಲಾಗಿತ್ತೊ ಅಲ್ಲಿ ಮಾತ್ರ— ಅಂದರೆ ಮೈಸೂರಿನ ೯ ಜಿಲ್ಲೆಗಳಲ್ಲಿ ಎರ ತರಲ್ಲಿ ಮಾತ್ರ— ಸಂಚರಿಸಿದ್ದರು. ಇಲ್ಲಿಯಾದರೂ ಹೆಚ್ಚಿನ ಸಂಸ್ಥೆಗಳವರು ಏಕೀಕರಣವನ್ನೆ ಬೇಡಿದ್ದರು.

ಏಕೀಕರಣವೇ ಹಿತಕರ

ಆರ್ಥಿಕ ದೃಷ್ಟಿಯಿಂದ ನೋಡಿದರೆ ಸಹ ಮೈಸೂರು ಉಳಿದಂತೆಯೆ ಉಳಿಯುವುದಕ್ಕಿಂತ ಇತರ ಕನ್ನಡ ಪ್ರದೇಶಗಳೊಡನೆ ಹೊಂದಿಕೊಂಡು ನಡೆವರೆ ಲಾಭ ಹೆಚ್ಚು—ಎಂದು ಸಾಮಾನ್ಯವಾಗಿ ಒಪ್ಪಲ್ಪಡುತ್ತಿದೆ. ಶ್ರೀ ಹನುಮಂತಯ್ಯನವರೇ ಏಕೀಕರಣಕ್ಕೆ ಆರ್ಥಿಕ ಅಡಚಣೆಗಳೇನೂ ಇರಲಾರವೆಂದು ಸತ್ಯಕೋಮ್ಯೋಗಿಗಳ ಮುಂದೆ ಈ ತಿಂಗಳ ಪ್ರಥಮ ವಾರದಲ್ಲಿ ಹೇಳಿದ್ದಾರೆ. ಇದು ಸುಳ್ಳಲ್ಲ— ಅವಿಲ ಭಾರತ ಸ್ವರೂಪದಲ್ಲಿ ಆರ್ಥಿಕ ಪ್ರಗತಿಯ ಯೋಜನೆಗಳು ನಡೆಯುತ್ತಿರುವಾಗ ಮೈಸೂರು ಹಾಳು ಬೀಳುವ ಸಂಭವವೇನೂ ಇಲ್ಲ. ಹಾಗೆ ನೋಡಿದರೆ ಹೆಚ್ಚಿನ ಸಮೃದ್ಧಿಯನ್ನೆ ಅದು ಹೊಂದೀತು. ಏಕೆಂದರೆ, ಮೈಸೂರಿನ ಈಗಿನ ಆರ್ಥಿಕ ಪರಿಸ್ಥಿತಿಯು ವರ್ಷಕ್ಕೆ ೨-೩ ಕೋಟಿ ರೂಪಾಯಿಗಳ ಕೊರತೆಯನ್ನೆ ತೋರಿಸುತ್ತವೆ. ಫಜಲಾಲಿ ಆಯೋಗವು ಕರ್ನಾಟಕ ರಾಜ್ಯಕ್ಕೆ ಒಟ್ಟಿಗೆ ೧೫ ಕೋಟಿ ರೂಪಾಯಿಗಳಷ್ಟೆ ಕೊರತೆಯಾದೀತೆನ್ನುತ್ತದೆ ಈ ಮೆಟ್ಟಿಗೆ ಶೇಷಾದ್ರಿ ಸಮಿತಿಯು ಸಂಗ್ರಹಿಸಿದ ಅಂಕಿಗಳನ್ನು ನಂಬುವಂತಿಲ್ಲವೆಂದೂ ಅದು ಸ್ಪಷ್ಟಪಡಿಸಿದೆ. ಮೈಸೂರಿನ ಜನರನ್ನು ಯಾವ ಬಗೆಯಿಂದಲೂ ಏಕೀಕರಣ ಪ್ರಾಪ್ತಿಗೆ ಗುರಿಪಡಿಸುವುದಿಲ್ಲ —ಬದಲು ಅವರ ಆಕಾಂಕ್ಷೆಯನ್ನು ಈಡೇರಿಸಲಿಕ್ಕೆಯೇ ಅದು ನೋಡುತ್ತುದೆ ಎಂಬುದು ಇವೆಲ್ಲ ಮಾತುಗಳಿಂದ ಸಿದ್ಧವಾಗುತ್ತದೆ.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ನ ಅನುಭವಸಿದ್ಧ ಔಷಧಿಗಳು ನನ್ನಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ನುವಾಕ ಗಲ್ಲಿ, ಹುಬ್ಬಳ್ಳಿ.

ಸಾಲ ಸ್ವಂತ ಜವಾಬ್ದಾರಿಯ ಮೇಲೆ ನೂರೆಯುತ್ತವೆ ಸುಲಭ ಕಂತಿನ ಮುಯಿದಾತ. ಇಂದಿನಿಂದಲೆ ಕೆಳಗಿನ ವಿಳಾಸಕ್ಕೆ ಅರ್ಜಿಹಾಕಿ ಕೊಳ್ಳಿರಿ.

P. O. Box No. 3219, BOMBAY 3.

ಕಾರ್ಕಳ ಶಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 378/1955.

ಶ್ರೀ ಸುಧೀಂದ್ರ ತೀರ್ಥ ಸ್ವಾಮಿರು—ಇವರ ಜನರಲ್ ಏಜಂಟರು ಶ್ರೀ ಸುಜ್ಞಾನೇಂದ್ರ ತೀರ್ಥ ಸ್ವಾಮಿಯವರು— ಪಾದಿರು.

ಮತ್ತು

ಹೊನ್ನಯ್ಯ ಹಾಂಡ ಯಾನೆ, ಕುಲಾಲ— ಬಾಬು ಹಾಂಡನ ಮಗ್ಗ ಕಾರ್ಕಳ ತಾಲೂಕು ಶಿವಪುರ ಗ್ರಾಮದವ್ವಲ್ಲಿರುವನಂ-ಪ್ರತಿವಾದಿ.

ಸದ್ರಿ ದಾವೆಯ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ: —

ವಾದಿರು ಪ್ರತಿವಾದಿಯ ಮೇಲೆ ಚಾಲಗೇಣಿ ಆಸ್ತಿ ಸ್ವಾಧೀನತೆ, ಗೇಣಿಬಾಕಿ, ಯಜಮಾನ್ಯ ವಗೈರೆ ಕೇಳಿ ಮಾಡಿದ ಮೇಲಿನ ದಾವೆಯು ಸದ್ರಿ ಕೋರ್ಟಿನಲ್ಲಿ ಪ್ರತಿವಾದಿಗೆ ನೋಟೀಸು ಜಾರಿ ತಾ. 29—11—1955ಕ್ಕೆ ಇಡಲ್ಪಟ್ಟಿದೆ. ಸದ್ರಿ ದಾವೆಗೆ ಪ್ರತಿವಾದಿಯು ಏನಾದರೂ ಉದಾಹರಣೆ ಕೊಡುವದಿದ್ದರೆ ಸದ್ರಿ ದಿವಸ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ತನ್ನ ಬರಿಮೂಲಕದ ಉದಾಹರಣೆಯನ್ನು ದಾಖಲು ಮಾಡಲಿಕ್ಕೆ ತಪ್ಪಿದಲ್ಲಿ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕುಂ ಪ್ರಕಾರ,

ಎಂ. ಎಸ್. ಅಧಿಕಾರಿ,
ವಾದಿರಪಡೆ ವಕೀಲ.

ಕಾರ್ಕಳ ತಾ. 11—11—1955.

ತುಳಸಿ ಜಾತಿಯ ಗಿಡಗಳು

ಬಗೆ ಬಗೆಯ ಗುಣಾಂಶಗಳ ಮೇಲೆ ಬೆಳಕು

ದೀಪಾವಳಿಯ ಸಡಗರದ ಸಂದರ್ಭದಲ್ಲಿ ಹಿಂದುಗಳ ಮನಸ್ಸು ಸಹಜವಾಗಿಯೇ ತುಳಸಿಯ ಪೂಜೆಯ ಕಡೆಗೆ ಹರಿಯುತ್ತದೆ. ಬರಿ ಪಾಡ್ಯದಿಂದ ಉತ್ಥಾನ ದ್ವಾದಶಿಯ ವರೆಗೆ ಹಿಂದುಗಳೆಲ್ಲರೂ ಪೂಜೆ ಮತ್ತು ಭಜನೆಗಳಿಂದ ತುಳಸಿಯನ್ನು ಆರಾಧಿಸುತ್ತಾರೆ. ಭಾರತದಲ್ಲಿ ತುಳಸಿಯ ಬಿರಪರಿಚಿತವಾದ ಗಿಡವಾಗಿದೆ; ಮತ್ತು ಹಿಂದುಗಳಲ್ಲರೂ ಮನೆ ಮನೆಯಲ್ಲಿಯೂ ಪೂಜಿಸುವಷ್ಟು ಪವಿತ್ರ ಭಾವನೆಯನ್ನು ಈ ಗಿಡದ ವಿಷಯದಲ್ಲಿ ಹೊಂದಿದ್ದಾರೆ: ತುಳಸಿಯಿಲ್ಲದ ಯಾವ ಧರ್ಮ ಕಾರ್ಯವೂ ನಡೆಯದು; ದೇವಪೂಜೆಯಾಗದು; ತೀರ್ಥ ಪ್ರಸಾದ ಲಭಿಸದು. ದೈವ ಭಕ್ತಿಯಾದ ಬ್ರಾಹ್ಮಣ ತರುಣಿಯೊಬ್ಬಳು ತುಳಸಿ ಗಿಡವಾಗಿ ಜನ್ಮ ತಳೆದಳೆಂದು ಪುರಾಣಗಳು ಹೇಳುತ್ತವೆ.

ವಿಸ್ತಾರ-ವೈವಿಧ್ಯ

ಏಶ್ಯ, ಆಫ್ರಿಕ ಮತ್ತು ಅಮೇರಿಕ ಖಂಡಗಳ ಉಷ್ಣ ವಲಯದ ಭಾಗಗಳಲ್ಲಿ ಸುಮಾರು ೬೦ ವಿಧದ ತುಳಸಿ ಜಾತಿಯ ಗಿಡಗಳು ಸಸ್ಯಶಾಸ್ತ್ರಜ್ಞರ ಕಣ್ಣಿಗೆ ಬಿದ್ದಿವೆ. ತುಟಿಯಾಕಾರದ ಎಲೆಗೆರೆಯುವುದು ಈ ಗಿಡಗಳ ಸಾಮಾನ್ಯ ವೈಶಿಷ್ಟ್ಯವಾಗಿದೆ. ಈ ಗಿಡಗಳಿಂದ ಎಣ್ಣೆಯನ್ನು ತೆಗೆಯಲಾಗುತ್ತದೆ. ರೂಪವೂ ದೇಯೂಗಿದ್ದರೂ, ಜಾತಿ ಬೇರೆಬೇರೆಯಾಗಿರುವ ಗಿಡಗಳ ಎಣ್ಣೆಯ ಗುಣಲಕ್ಷಣಗಳು ಭಿನ್ನವಾಗಿರುತ್ತವೆ ವಿವಿಧ ಜಾತಿಯ ಗಿಡಗಳ ಸಾಂಯರ್ಥವನ್ನು ಸಾಧಿಸಿ ಹುಟ್ಟಿಸಿದ ಹೊಸ ತಳಿಯ ಗಿಡಗಳೂ ಇವೆ—ಇವುಗಳ ಎಣ್ಣೆಯು ಜನಕ ಜನಕ ಗಿಡಗಳಿಂದ ತೆಗೆದ ಎಣ್ಣೆಯ ಮಿಶ್ರ ಲಕ್ಷಣಗಳನ್ನು ಹೋಲುತ್ತದೆ. ಸೈಸರ್ಗಿಕವಾಗಿಯೇ ಕ್ರಾಸ್‌ಪೇಣ ಜಾತಿಭೃಷ್ಟವಾದ ಗಿಡಗಳ ಸಮೂಹಗಳೂ ಇವೆ. ಎಣ್ಣೆಯನ್ನು ಉತ್ಪಾದಿಸುವ ಇವುಗಳ ಸಾಮರ್ಥ್ಯ ದಲ್ಲಿಯೂ ಬಹಳ ವ್ಯತ್ಯಾಸಗಳಿವೆ. ಈ ಎಣ್ಣೆಯ ರಾಸಾಯನಿಕ ರಚನೆಯಲ್ಲಿ ತುಂಬ ವೈವಿಧ್ಯವನ್ನು ಕಾಣಬಹುದಾಗಿದೆ. ಕೆಲವು ಜಾತಿಯ ಗಿಡಗಳ ಎಣ್ಣೆಯು ಕರ್ಪೂರದ ಪರಿಮಳವನ್ನು ಹೊಂದಿದೆ; ಕೆಲವಕ್ಕೆ ಲಿಂಬೆಯ ಪರಿಮಳವಿದೆ; ಬೇರೆ ಕೆಲವಕ್ಕೆ ಮರುಗದ ವಾಸನೆ ಮಿಶ್ರಿತವಾದ ಅವಂಗದ ಪರಿಮಳ ವಿದೆ; ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಈ ಎಣ್ಣೆಗಳ ಪ್ರಯೋಜನ ಬಹಳ. ಕೆಲವು ಗಿಡಗಳ ಎಣ್ಣೆಯನ್ನು ಔಷಧಿಗಾಗಿ ಸಹ ಬಳಸಲಾಗುತ್ತದೆ ವಿಷ ಧ್ವಂಸಕ ಗುಣವು ವಿಶೇಷವಾಗಿರುವ ತುಳಸಿ ಗಿಡದ ಜಾತಿಗಳೂ ಕೆಲವಿವೆ. ಅವಾಗ್ಯೂ ಎಣ್ಣೆ ಮತ್ತು ಕರ್ಪೂರ ಗಳಿಗಾಗಿಯೇ ತುಳಸಿಗೆ ಔದ್ಯಮಿಕ ರಂಗದಲ್ಲಿ ಹೆಚ್ಚಿನ ಮಹತ್ವ.

ಕಾಮಕಸ್ತೂರಿಯ ಲಾಭ

ಪೂಜೆಗೆ ಉಪಯೋಗಿಸುವ "ಪವಿತ್ರ" ತುಳಸಿಯ ಗಿಡದಿಂದ ತೆಗೆಯಲ್ಪಡುವ ಎಣ್ಣೆಯು ನೀರಿಗಿಂತ ಭಾರವಿರುತ್ತದೆ. ಬಿಳಿ ಜಾತಿ ಎಲೆಯಿಂದಸುವಾರು 0.3%ದಿಂದ 0.7% ಎಣ್ಣೆ ಲಭಿಸುತ್ತದೆ. ಆದರೆ ಕಪ್ಪು ಎಲೆಯ ತುಳಸಿಯು ಇಷ್ಟು ಹೆಚ್ಚು ಪ್ರತಿಫಲವನ್ನು ಕೊಡುವುದಿಲ್ಲ. "ಕಾಮಕಸ್ತೂರಿ" ಎಂಬ ಜಾತಿಯ ತುಳಸಿ ಗಿಡವು ತನ್ನಪೈಕ್ಕೆ ಕಾಡಿನಂತೆ ಬೆಳೆಯಬಲ್ಲುದು. ತೋಟಗಳಲ್ಲಿ ಇದರ ಕೃಷಿ ಮಾಡಲೂ ಬಹುದು. ಎಕ್ರೆ ವಿಸ್ತಾರದಲ್ಲಿ ಕಾಮಕಸ್ತೂರಿಯನ್ನು ನೆಟ್ಟು ಬೆಳೆಸಿದರೆ ಅದರಿಂದ ವರ್ಷಕ್ಕೆ ಸುಮಾರು ೬ ಸಾವಿರ ರಾತಲುಗಳಷ್ಟು ಎಲೆಯನ್ನು ಕಡೆಯಬಹುದು. ವರ್ಷಕ್ಕೆ ಎರಡು ಸಲ ಈ ಎಲೆಯನ್ನು ಕತ್ತರಿಸಬೇಕು. ಎಲೆಯಿಂದ ೦ 15% ದಿಂದ 0. 80% ಎಣ್ಣೆಯೂ ಹೂವಿನಿಂದ 0°95% ದಿಂದ 0°65% ಎಣ್ಣೆಯೂ ಇತರ ಭಾಗಗಳಿಂದ 0.20% ದಿಂದ 0·50% ಎಣ್ಣೆಯೂ ದೊರಕುತ್ತದೆ. ಈ ಲೆಕ್ಕದಂತೆ ಎಕ್ರೆಯೊಂದಕ್ಕೆ ಸರಸರಿ 30 ರಾತಲುಗಳಷ್ಟು ಎಣ್ಣೆ ಸಿಗಬಲ್ಲುದು. ಒಂದು ರಾತಲು ಎಣ್ಣೆಯು ಪೇಟೆಯಲ್ಲಿ 20 ರೂಪಾಯಿಗೆ ಮಾರಾಟವಾಗುತ್ತದೆ; ಹೀಗೆ ಎಕ್ರೆಗೆ 600 ರೂಪಾಯಿಗಳ ಹುಟ್ಟುವಳಿಯೂ ಗುತ್ತದೆ ಇದರಲ್ಲಿ ಕರ್ಚು ಕಳೆದು 400 ರೂಪಾಯಿಗಳ ನಿವ್ವಳ ಲಾಭವನ್ನು ಪಡೆಯ ಬಹುದು. ಈ ಎಣ್ಣೆಯ ಪರಿಮಳವು ಬಲಶ್ರೇಷ್ಠವಾಗಿದೆ, ಸಾಬೂನುಗಳ ತಯಾರಿಕೆಯಲ್ಲಿ ಬೆರಕೆಮಾಡಲು ಇದು ಅತ್ಯುತ್ತಮವಾಗಿದೆ. ಇತರ ಸುಗಂಧ ದ್ರವ್ಯಗಳಲ್ಲಿಯೂ ಇದು ಬಳಸಲ್ಪಡುತ್ತದೆ.

ಚಿಕಿತ್ಸೆಯಲ್ಲಿ ಪ್ರಯೋಜನ

ವಿಷಧ್ವಂಸಕ ಗುಣವುಳ್ಳ ತುಳಸಿಯ ಜಾತಿಯಲ್ಲಿ "ರಾಮ ತುಳಸಿ" ಉಲ್ಲೇಖನೀಯವಾಗಿದೆ. ಇದಕ್ಕೆ ಬಿಳ್ಳೆಯ ಪರಿಮಳವಿದೆ; ಆದರೆ ವಾಯುಸರ ಹಾಗು ವಿಷ ಧ್ವಂಸಕ ದ್ರವ್ಯವೆಂದೇ ಇದರ ಕೀರ್ತಿ ಹಬ್ಬಿದೆ. ರಾಮ ತುಳಸಿಯ ಎಲೆಗಳನ್ನು ನೀರಿನೊಡನೆ ಮಿಶ್ರವಾಗಿ, ಅರೆದು ಗಾಯಗಳಿಗೆ ಲೇಪಿಸಿದರೆ, ಅವು ಬೇಗನೆ ಗುಣಹೊಂದುತ್ತವೆ. ಚೈತನ್ಯವನ್ನು ನೀಡಬಲ್ಲ ಶಕ್ತಿ ರಾಮ ತುಳಸಿಗೆ ವಿಶೇಷವಾಗಿದೆ. ರಾಮತುಳಸಿಯು ಭಾರತದ ಎಲ್ಲೆಡೆಯಲ್ಲೂ ಹೆಚ್ಚುಸಾಗಿ ಬೆಳೆಯಬಲ್ಲುದು. ಇದರ ಎಣ್ಣೆ ಕಡುಪಾಗಿದೆ— ಅದರ ದೊರಕುವ ಎಣ್ಣೆಯ ಪ್ರಮಾಣ ಮಾತ್ರ 0.1% ಸಹ ಇಲ್ಲ! ಆದುದರಿಂದ ವ್ಯಾಪಾರದ ಉದ್ದೇಶದಿಂದ ಎಣ್ಣೆಗಾಗಿ ಇದನ್ನು ಬೆಳೆಸುವುದು ಲಾಭಕರವಲ್ಲ. ಎಣ್ಣೆಗೂ ಕರ್ಪೂರದ ತಯಾರಿಕೆ-ಗೂ ತುಂಬ ಉಪಯುಕ್ತವಾದ ತುಳಸಿಯ ಜಾತಿಯನ್ನು "ನಾಯಿ ತುಳಸಿ" ಎಂದು ಕರೆಯುತ್ತಾರೆ. ಇದರಲ್ಲಿ ಕೆಲವು ಒಳ ಜಾತಿಗಳಿವೆ ಎಂಬುದನ್ನಿಲ್ಲಿ ನೆನೆಯುವುದೊಳಿತು. ಒಂದು ಒಳಜಾತಿಯ ಅವಂದ ಅಂಶವುಳ್ಳ ಎಣ್ಣೆಯನ್ನು ಕೊಡುತ್ತದೆ; ಅದರ ಇಷ್ಟಕ್ಕಿಂತ ಅವಂಗದ ಎಣ್ಣೆಯೇ ಆಗ್ಗದಲ್ಲಿ ಸಿಗುತ್ತದೆ. ಲಿಂಬೆಯ ಪರಿಮಳದಿಂದ ಕೂಡಿದ ಎಣ್ಣೆಯು ಇನ್ನೊಂದು ಒಳಜಾತಿಯಿಂದ ಸಿಗುತ್ತದೆ; ಈ ಜಾತಿಯು ಕೊಡುವ ಎಣ್ಣೆಯ ಪ್ರಮಾಣ 0.7%. ಇದನ್ನು ಸಾಬೂನಿನ ಕೈಗಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಸಾವಾನ್ಯವಾಗಿ ನಾಯಿತುಳಸಿಯ ಎಣ್ಣೆಯು ನೀರಿಗಿಂತ ಪಗುರವಿರುತ್ತದೆ.

ಕರ್ಪೂರದ ಜನಕ

ದೆಹರಾಡೂನಿನ ಅರಣ್ಯ ಸಂಶೋಧನಾ ಲಯದಲ್ಲಿ "ಒಸಿಮಂ ಕಲಿಮಂದಶರೀಕಂ ಗುಳಿಕೆ" ಎಂಬ ಸೈಣ್ಣಾನಿಕ ಹೆಸರಿನ ನಾಯಿ ತುಳಸಿಯ ಒಳಜಾತಿಯೊಂದರ ಕೃಷಿಯಲ್ಲಿ ತುಂಬ ಪ್ರಯೋಗಗಳನ್ನೂ ನಡೆಸಿ, ಬಹಳ ತ್ವರಿತದಲ್ಲಿ ಬೆಳೆದು ಅತ್ಯಧಿಕ ಕರ್ಪೂರವನ್ನು ಒದಗಿಸಬಹುದಲ್ಲಿ ಎತ್ತಿದ ಕೈ ಎಂಬುದಾಗಿ ಇದನ್ನು ಪರಿಗಣಿಸಿದ್ದಾರೆ. ಈ ಗಿಡದ ಮೂಲವು ಅಫ್ರಿಕದ ಕೆನ್ಯಾ ದೇಶ. ಇದು ಬಯಲು ಪ್ರದೇಶಗಳಲ್ಲಿ, ಸರಾಸರಿ ಸಮುದ್ರ ಮಟ್ಟದಿಂದ 3000 ಅಡಿ ಎತ್ತರದ ವರೆಗೆ ಬೆಳೆಯುತ್ತದೆ. ವರ್ಷಕ್ಕೆ ಸುಮಾರು 60 ಇಂಚಿನಷ್ಟು ಮಳೆ ಬರುವ ಮತ್ತು ಜಿನುಗುವ ನುಣ್ಣಿನಿಂದ ಪ್ರದೇಶವು ಇದರ ಬೆಳೆಗೆ ಪ್ರಶಸ್ತವಾಗಿದೆ. ಬೀಡಗಳನ್ನು ಬಿತ್ತಿ ಈ ಗಿಡದ ತೋಟವನ್ನು ರಚಿಸಲಾಗುತ್ತದೆ. 10 ಅಡಿ ಉದ್ದ ಮತ್ತು 2 ಅಡಿ ಅಗಲದ 10 ಮಡಿಗಳಿಗೆ ಎರಡೊವರೆ ತೊಲೆಯಷ್ಟು ಬೀಜ ಸಾಕಾಗುತ್ತದೆ. ಎರಡೆರಡು ಅಡಿ ದೂರದಲ್ಲಿ ಸಸಿಗಳನ್ನು ಕಿತ್ತು ನಡುತ್ತಾ ಹೋಗುವ ಕಾಸ್ತ್ರೀಯ ಕ್ರಮವನ್ನು ಅನುಸರಿಸಿದರೆ, ಇಷ್ಟು ಬೀಜದ ಸಸಿಗಳು ಒಂದು ಎಕ್ರೆ ವಿಸ್ತೀರ್ಣದಲ್ಲಿ ಕೃಷಿ ಮಾಡಲು ಯಥೇಷ್ಟವಾಗುತ್ತವೆ. ಬೀಜ ಬಿತ್ತಿದ ನಾಲ್ಕೈದು ತಿಂಗಳುಗಳಲ್ಲಿ ಸಸಿಗಳು ಕೊಯ್ಲಿಗೆ ಸಿದ್ಧವಾಗುತ್ತವೆ. ಜಾನುವಾರುಗಳು ಈ ಸಸಿಗಳ ಗೋಜಿಗೆ ಬರುವುದಿಲ್ಲ. ಗಿಡಗಳು ಸುಮಾರು ಎರಡು ಅಡಿ ಎತ್ತರ ಬೆಳೆದಾಗ ಎಲೆಗಳನ್ನು ಕತ್ತರಿಸಿ ತೆಗೆಯಬಹುದು— ಎಳೆಂದರೆ ಮುಂದೆ ಗಿಡವು ಹಣ್ಣಾಗುತ್ತಾ ಹೋಗುತ್ತದೆ. ಎಕ್ರೆಗೆ ಸುಮಾರು 2000 ರಾತಲುಗಳಷ್ಟು ಎಲೆ ಸಿಗುತ್ತದೆ. 3000 ರಾತಲುಗಳಷ್ಟು ಎಲೆ ದೊರೆತರೆ ವ್ಯಾಪಾರ ದೃಷ್ಟಿಯಿಂದ ಈ ಕೃಷಿ ಅತ್ಯಂತ ಯಶಸ್ವಿಯಾಗುತ್ತದೆ.

ಸ್ವಾವಲಂಬನದ ಅಗತ್ಯ

ಇಪ್ಪರವರೆಗಿನ ಅಂದಾಜಿನಂತೆ ಒಣ ಎಲೆಯಲ್ಲಿ 4ರಿಂದ 6·5% ತನಕ ಎಣ್ಣೆಯ ಉತ್ಪಾದನೆಯಾಗುತ್ತದೆ; ಇದರಲ್ಲಿ ಕರ್ಪೂರದ ಅಂಶವು 60ರಿಂದ 70% ಇರಲಿ ಎಂದು ಸಿದ್ಧವಾಗಿದೆ. ಕರ್ಪೂರಕ್ಕೆ ರಾತಲಿಗೆ 5ರೂಪಾಯಿಯಂತೆ 276 ರಾತಲು ಕರ್ಪೂರದ ಉತ್ಪತ್ತಿಯಿಂದಲೂ ಎಣ್ಣೆಗೆ ರಾತಲಿಗೆ 2ರೂಪಾಯಿಯಂತೆ 184 ರಾತಲು ಎಣ್ಣೆಯಿಂದಲೂ ಎಕ್ರೆಯೊಂದಕ್ಕೆ ಕರ್ಚು ಕಳೆದು ಸುಮಾರು 100 ರೂಪಾಯಿಗಳ ನಿವ್ವಳಲಾಭ ಬರುವುದೆಂದು ಅಂದಾಜು. ಸಾಮಾನ್ಯವಾಗಿ 500 ಎಕ್ರೆಗಿಂತ ಕಡಿಮೆ ಸ್ಥಳದಲ್ಲಿ ಇದನ್ನು ಕೃಷಿಮಾಡಿದರೆ ಹೆಚ್ಚು ಲಾಭಸಿಗಲಿಕ್ಕಿಲ್ಲ. ಭಾರತದಲ್ಲಿ ಸುಮಾರು 30000 ಎಕ್ರೆಗಿಂತಲೂ ಹೆಚ್ಚು ಸ್ಥಳದಲ್ಲಿ ಕರ್ಪೂರದ ಉತ್ಪಾದನೆಗೆ ಹೆಸರಾದ ತುಳಸಿ ಜಾತಿಯ ಗಿಡಗಳ ಕೃಷಿಯನ್ನು ನಡೆಸುವುದು ಇಷ್ಟವಾಗಿದೆ. ಮೊದಲಾದರೆ ಕರ್ಪೂರದ ಮರದಿಂದ ಕರ್ಪೂರವನ್ನು ತಯಾರಿಸುತ್ತಿದ್ದರು. ಕೂನೂರಿನ ಪಳ್ಳಕೀರಿ ತೋಟದಲ್ಲಿ ಈ ಮರದ ಎಲೆಗಳಿಂದ ಭಟ್ಟಿ ಇಳಿಸಿ ಕರ್ಪೂರವನ್ನು ತೆಗೆಯುತ್ತಿದ್ದರು. ಈಗ ಈ ಮರಗಳು ಅಳಿಯುತ್ತಾ ಬಂದಿವೆ— ಮತ್ತು ಅವುಗಳಿಂದ ಕರ್ಪೂರ ಪಡೆಯುವುದು ಲಾಭಕರವಲ್ಲವೆಂದು ತೋರಿದೆ. ಆದರೆ ಕರ್ಪೂರದ ಬೇಡಿಕೆಯು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಸೆಲ್ಯುಲ್ಯಾಡ್ ಮತ್ತು ಪ್ಲಾಸ್ಟಿಕ್ ತಯಾರಿಕೆಯಲ್ಲಿ ಕರ್ಪೂರ ವಿಶೇಷ ಪಾತ್ರವನ್ನು ವಹಿಸುತ್ತಿದೆ. ಈ ಅವಶ್ಯಕತೆಗಳ ಪೂರೈಕೆಗಾಗಿ ಭಾರತವು ಪರದೇಶಗಳಿಂದ ಕರ್ಪೂರ ಮತ್ತು ಕರ್ಪೂರದ ಎಣ್ಣೆಯನ್ನು ತರಿಸುತ್ತಿದೆ. 1953-54ನೇ ವರ್ಷದಲ್ಲಿ 14,92,955 ರೂಪಾಯಿ ಬೆಲೆಯ 925679 ರಾತಲು ಕರ್ಪೂರವನ್ನೂ 7814 ರೂಪಾಯಿ ಬೆಲೆಯ 7000 ರಾತಲು ಎಣ್ಣೆಯನ್ನೂ ಆಮದು ಮಾಡಿಲಾಯಿತು. ತುಳಸಿ ಜಾತಿಯ ಗಿಡಗಳನ್ನು ಕೃಷಿ ಮಾಡಿ, ಕರ್ಪೂರದ ಉತ್ಪಾದನೆಯನ್ನು ಹೆಚ್ಚಿಸಿದರೆ, ಭಾರತವು ಇಷ್ಟೂ ಹಣವನ್ನು ದೇಶದೊಳಗೆ ಉಳಿಸಬಲ್ಲುದು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C No. 298/55.

ಬೀರಾ ತ್ಯೊದಿನ್ ಬ್ಯಾರಿ— ವಾದಿ.

ಜೆಗದ್ತಿ ಹೆಂಗ್ಸು-ಮೇಗಿನ ಮನೆ ನಂದಪ್ಪ ರೈ ಸೊನೆ-ಪ್ರಾಯ ಸುಮಾರು 40ವರ್ಷ -ಪುತ್ತೂರು ತಾಲೂಕು ನೆಟ್ಟಣಿಗೆ ಗೂಡಿನ್ನಾರು ಗ್ರಾಮದ ಮೈಲೋಳಿ ಎಂಬಲ್ಲಿರುತ್ತಾಳೆ —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಕೋರ್ಟು ಮಕಾಂ ಪ್ರಕಾರ ಈ ಮೂಲ್ಕ ತಿಳಿಯಪಡಿಸುವುದೇ ನೆಂದರೆ:—

ತಾ. 28—7—51 ರಲ್ಲು ವಾದಿಗೆ ಪ್ರತಿವಾದಿ ನ್ಯಾಯವಾದಿ ವ, ಕೂರ್ಣ ಪ್ರತಿಫಲ ಪಡೆದು, ರೂ. 100/-ಕ್ಕೆ ಬರಕೊಟ್ಟ ಡಿ. ಸ್ಟ್ಯಾ. ನೋಟು ಪ್ರಕಾರ ವಾದಿಗೆ ಪ್ರತಿವಾದಿಯಿಂದ ಬಹಾ ಆಸಲು-ಬಡ್ಡಿ ಕೂಡಾ ರೂ. 122—4—5, ಕೊರ್ಟು ಖರ್ಚು ಮುಂದಿನ ಬಡ್ಡಿ ಕೂಡಾ ಪ್ರತಿವಾದಿ, ವಾದಿಗೆ ತೆಗುವಂತೆ ತಿಡ್ತಿ ವಿಧಿಕೇಲೆ ಮಾಡಿದ ಮೇಲಿನ ದಾವೆ ತಾ. 28—11—55ಕ್ಕೆ ತನ್ನಿಗೆ ಇಟ್ಟುಕೊಳ್ತ ದೆಂತಲೂ, ಆ ಕುರಿತು ಆಕ್ಷೇಪ ಇದ್ದಲ್ಲಿ ಸದ್ರಿ ವ್ಯಾಜ್ಯದ ದಿನ ಸೂರ್ಯಾಸ್ತ ಘಂಟೆ 11ಕ್ಕೆ ನೀವು ಸ್ವತಹ ಯಾ ವಕೀಲ್ ದ್ವಾರಾ ಕೋರ್ಟು ಮುಂದೆ ಹಾಜ್ರಾಗಿ ಉದಪರಿಸತಕ್ತದ್ದೆಂತಲೂ, ತಪ್ಪಿದ್ರೆ ನಿಮ್ಮನ್ನು ಶಿವ್ಯವಾಗಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತೆಂತ ಸದಾ ಈ ಮೂಲಕ ತಿಳಿಯ ಪನ್ನಿಂದೆ.

M. Radhakrishna Rao.
Advocate for Plaintiff

Putiur 8—11—55.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಿರಿಯ ನೀವೂ ಭಾಗಿಗಳಾಗಿರಿ !!!

!!ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ!!

"ರಿಕರಿಂಗ್" ಠೇವಣಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬ್ಯಾಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬ್ಯಾಂಕ್ ಲಿಮಿಟೆಡ್.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀಪ್ಪ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/-

Mrs. P. DEVEE, F. Ds. (N. J.) (ವಿ.ಪಿ.ಪಿ. ಪ್ರತ್ಯೇಕ)

CALCUTTA—40 ಸ್ವಾಕಿಸ್ಕರು: ಶಹಾಕಂಪೆನಿ,ಮಂಗಳೂರು

ಮೂಲ್ಕಿ ಬ್ಯಾಂಕ್ ಲಿಮಿಟೆಡ್,

ಮೂಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನೋಟಿಸು ಠೇವಣಾತಿ.	
24 ತಿಂಗಳಿಗೆ	4%
12 ,,	3½%
6 ,,	3½%
3 ,,	3%
ಸೇವಿಂಗ್ಸ್ ಬ್ಯಾಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK LTD., MULKI.

ಕನ್ನಡ ನಾಟಕಗಳ ವಿಪುಲ ಕೃಷಿ

ಪುರಾಣ ಕತೆಗಳಿಂದ ಸಾಮಾಜಿಕ ರಂಗದೆಡೆಗೆ

ಕನ್ನಡ ಪದ್ಯ ಕಾವ್ಯಗಳಲ್ಲಿ ಸಾಮಾನ್ಯವಾಗಿ ನಾಟಕವು ಗುಣಾಂಶಗಳು ಇದ್ದೇ ಇರುವುವು. ಆದರೆಲ್ಲಿಯೂ ಪ್ರತ್ಯೇಕವಾಗಿ ರಚಿತವಾದ ಕಾವ್ಯಗಳಲ್ಲಿ ನಾಟಕಗಳಿಗೆ ಅವಶ್ಯಕವಾದ ಸಾಧನ ಸಾಮಗ್ರಿಗಳು ಹೆಚ್ಚಾಗಿರುವುವು. ೬ ಲವು ವರ್ಷಗಳ ಹಿಂದೆ, ಆಧುನಿಕ ಕನ್ನಡ ಲೇಖಕ—ವಿದ್ವಾಂಸರೊಬ್ಬರು ಹತ್ತನೆಯ ಶತಮಾನದ ಕಾವ್ಯವೊಂದನ್ನು ರಂಗಭೂಮಿಗೆ ತಕ್ಕಂತೆ ಆಳವಡಿಸಿದರು. ಕಾವ್ಯಮೂಲ ಪಾಠದಲ್ಲಿ ಕೆಲವು ಚಿಕ್ಕ ಪುಟ್ಟ ಬದಲಾವಣೆಗಳನ್ನು ಮಾಡಿ ಇಡೀ ಕೃತಿಯನ್ನು ಪರಿಣಾಮಕಾರಿಯಾದ ನಾಟಕವನ್ನಾಗಿ ಮಾಡಬಹುದು ಎಂದವರು ತೋರಿಸಿಕೊಟ್ಟರು.

ಭಾರತದ ಇತರ ಭಾಗಗಳಲ್ಲಿರುವಂತೆಯೇ ಕನ್ನಡದಲ್ಲಿ ಜಾನಪದ ನಾಟಕಗಳು (ಗ್ರಾಮಾಂತರ ಪ್ರದೇಶಗಳಲ್ಲಿ ಆಡುವ ನಾಟಕಗಳು) ಒಂದು ಸಂಘಟಿತ ಕಲೆಯಾಗಿವೆ; ಈ ಕಲೆಯಲ್ಲಿ ನೃತ್ಯ, ಸಂಗೀತ ಹಾಗೂ ಗದ್ಯ ನಾಟಕಗಳಿಂದ ಕಮ್ಮಿಲಸಗೊಂಡಿರುತ್ತದೆ. ಜಾನಪದ ನಾಟಕವನ್ನು ಪುರಾಣ ಮತ್ತು ಮಹಾ ಕಾವ್ಯಗಳಿಂದ ಆರಿಸಿದ ಕತೆಗಳ ಸುತ್ತ ಹೆಣೆಯಲಾಗಿರುವುದು; ಕೆಲವು ಸಂದರ್ಭಗಳಲ್ಲಿ ಸ್ಥಳೀಯ ವೀರರ ಕತೆಗಳ ಸುತ್ತಲೂ ಜಾನಪದ ನಾಟಕಗಳನ್ನು ಹೆಣೆಯಲಾಗಿದೆ. ಜಾನಪದ ನಾಟಕಗಳ ಬಗ್ಗೆ, ಕನ್ನಡಿಗರು ದೀರ್ಘಾವಧಿಯ ವಿಶಿಷ್ಟ ಪರಂಪರೆ ಹೊಂದಿರುವರು. ಈ ಪರಂಪರೆಯಲ್ಲಿ ಯಕ್ಷಗಾನವೂ ಬಯಲಾಟವೂ ಸೇರುತ್ತವೆ.

ಸಾಂಪ್ರದಾಯಿಕ ರಂಗಭೂಮಿ

ಸಾಂಪ್ರದಾಯಿಕ ರಂಗ ಭೂಮಿಯು ಸರಳವಾಗಿಯೂ ಸರಿಣಾಮಕಾರಿಯಾಗಿಯೂ ಇದ್ದಿತು. ಎತ್ತರಿಸಿದ ಜಾಗ ಅಥವಾ ಕಟ್ಟೆಯನ್ನು ರಂಗ ಮಂಟಪವನ್ನಾಗಿ ಕೆಲವೆಡೆ ಬಳಸಲಾಗುತ್ತಿತ್ತು. ಆದರೆ ಯಕ್ಷಗಾನದಲ್ಲಿ ಈಆನು ಕೂಲತೆಯು ಸಾರ್ವತ್ರಿಕವಾಗಿರಲಿಲ್ಲ ಆಗಮನ, ನಿರ್ಗಮನಗಳಿಗೆ ಪ್ರತ್ಯೇಕ ವ್ಯವಸ್ಥೆ ಇರಲಿಲ್ಲ. ಪರದೆಗಳೂ ಇರಲಿಲ್ಲ. ದೀಪಕೆರೆಗಳೂ ರಾಜ್ಞೆಸರೂ ಆಡಂಬರ ಪೂರ್ವಕವಾಗಿ ದೂರದಿಂದ ನಡೆದು ಬಂದು ರಂಗ ಮಂಟಪವನ್ನು ಪ್ರವೇಶಿಸುತ್ತಿದ್ದರು; ಅನೇಕ ಸಂದರ್ಭಗಳಲ್ಲಿ ಆವರು ಪ್ರೇಕ್ಷಕರ ಮಧ್ಯೆ ನಡೆದು ಬರುತ್ತಿದ್ದರು. ನಾಟಕದ ಪಸ್ತ್ರ ಪ್ರತಿಗಳೇನೂ ಇರುತ್ತಿರಲಿಲ್ಲ. ಹಳ್ಳಿಯ ಹಾಡು ಕವಿಯೊ ಕುಶಲ ಕಲಾವಿದನೊ ನಾಟಕದ ಹಸ್ತ ಪ್ರತಿಯನ್ನು ಒದಗಿಸುತ್ತಿದ್ದನು. "ಸಿತ್ರವಿಂದ ಗೋವಿಂದ" ಎಂಬ ನಾಟಕವೇ ಈಗಲೂ ಇರುವ ಆತಿ ಪ್ರಾಚೀನ ಕನ್ನಡ ನಾಟಕವಾಗಿದೆ.

ಹಳ್ಳಿಯ ನಾಟಕಗಳನ್ನು ವೃತ್ತಿಯ ನಾಟಕ ಮಂಡಳಿಗಳು ಆಡುತ್ತಿರಲಿಲ್ಲ. ಗ್ರಾಮಸ್ಥರೇ ಈ ನಾಟಕಗಳನ್ನು ಆಡುತ್ತಿದ್ದರು. ಕೇವಲ ನಾಟಕಗಳಿಂದಲೇ ಜೀವನ ಸಾಗಿಸುವಂತಹ ವೃತ್ತಿಯವರಾರೂ ಆಗ ಇರಲಿಲ್ಲ. ಆದರೆ ಕಳೆದ ಶತಮಾನದಲ್ಲಿ ವೃತ್ತಿಯ ನಾಟಕ ಮಂಡಳಿಯವರು ಕನ್ನಡ ರಂಗ ಭೂಮಿಯ ಮೇಲೆ ಕಾಣಿಸಿದರು. 1848ರಲ್ಲಿ ಸಾಂಗ್ಲಿಯಲ್ಲಿ ಕನ್ನಡ ನಾಟಕವೊಂದನ್ನು ಅಭಿನಯಿಸಲಾಯಿತು. ಆಗಿನಿಂದಲೇ ಆಧುನಿಕ ಮರಾಠಿ ರಂಗ ಭೂಮಿಯೂ ವೃದ್ಧಿಹೊಂದಿತೆಂದು ಹೇಳಬಹುದು.

ಅಭಿರುಚಿಯ ಹೊಸ ಬಗೆ

ವೃತ್ತಿಯ ನಾಟಕ ಮಂಡಲಿಗಳು ಪರಂಪರಾನುಗತವಾಗಿದ್ದು ಹಳ್ಳಿಯ ನಾಟಕದ ಮೇಲೆ ಹೆಚ್ಚು ಪ್ರಭಾವವೇರಲು ಸಾಧ್ಯವಾಗಿರಲಿಲ್ಲ. ನಗರಗಳಲ್ಲಿನ ನವ ವಿದ್ಯಾವಂತ ಸ-ಹದವರು 'ಹೊಸ' ನಾಟಕಗಳನ್ನು ಅಪೇಕ್ಷಿಸಿದಾಗ ಮೊತ್ತ ಮೊದಲು ವೃತ್ತಿಯ ನಾಟಕ ಮಂಡಲಿಯವರು ಇರುವ ನಾಟಕಗಳಿಗೆ ಹೊಸ ಹಾಡುಗಳನ್ನು ಜೋಡಿಸಿದರು; ಸುರುಳಿ ಸುತ್ತುವ ಪರದೆಗಳನ್ನೂ ವೇಷಭೂಷಣಗಳನ್ನೂ ರಂಗ ಮಂಟಪದ ಸಲಕರಣೆಗಳನ್ನೂ ಬಳಕೆಗೆ ತಂದರು. ಈ ನಾಟಕ ಮಂಡಲಿಯವರು ಊರಿಂದ ಊರಿಗೆ, ಜಾತ್ರೆಯಿಂದ ಜಾತ್ರೆಗೆ ಸಂಚರಿಸುತ್ತಿದ್ದರು. ಕನ್ನಡ ರಂಗ ಭೂಮಿಯನ್ನು ಜೀವಂತವಾಗಿಡಲು ಸಹಾಯ ಮಾಡಿದವರೆಂದರೆ ಇವರೇ ಎನ್ನಬಹುದು.

ಈಚೆಗೆ, ಕನ್ನಡ ನಾಟಕಗಳು ಅನೇಕ ಏಡಿದು-ತೊಡರುಗಳನ್ನು ಅನುಭವಿಸಿವೆ. ಕಳೆದ ಶತಮಾನದಿಂದೀಚೆಗೂ ಸಾಹಿತ್ಯ ಪ್ರಪಂಚದಲ್ಲಿ ಕಾಣಿಸಿಕೊಂಡ ಕ್ಷೋಭೆಯಿಂದ ನಾಟಕ ಕ್ಷೇತ್ರವಲ್ಲಿಯೂ ಅನೇಕ ಬೆಳವಣಿಗೆಗಳು ಉಂಟಾಗಿವೆ. ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ಆನೇಕ ವ್ಯಾಕ್ತಿತ್ವ ಹೆಸರುಗಳನ್ನು ಕಾಣಬಹುದು. ವರದಾಚಾರ್, ಗುಬ್ಬಿವೀರಣ್ಣ, ಗರೂಡ ಪ್ರಭಾಶಿವ ರಾವ್ ಮತ್ತು ಪಾಸ್ಕರ್ ವಾಮನ ರಾವ್ ರಂತಹ ಹೆಸರುಗಳು ಈಗ ಮನೆಮಾತಾಗಿವೆ. 'ಟೈಗರ್' ವರದಾಚಾರ್ ರವರು ವೃತ್ತಿಯ ರಂಗಭೂಮಿಯ ಆಂತರ್ಯವನ್ನು ವಿಶಿಷ್ಟವರೆಲ್ಲಿ ತೊರಿಸಿದರು. ಇವರು ರಂಗಭೂಮಿಗಾಗಿ ದುಡಿಯುವಂತೆ ವಿದ್ಯಾವಂತರಿಗೆ ಸ್ಫೂರ್ತಿ ಕೊಟ್ಟರಲ್ಲದೆ ಮಹಾಜನರೂ ನಾಟಕ ಕಲೆಯನ್ನು ಗೌರವಿಸುವಂತೆಯೂ ಮಾಡಿದರು.

ಆಂಗ್ಲ ಶಿಕ್ಷಣದ ಪ್ರಭಾವ

ಇಂಗ್ಲೀಷ್ ಶಿಕ್ಷಣವು ಪಸರಿಸಿದಂತೆಲ್ಲಾ, ಇಂಗ್ಲೀಷ್ ನಾಟಕಗಳು ಅನೇಕ ವಿದ್ಯಾವಂತ ಭಾರತೀಯರ ಗಮನವನ್ನು ಸೆಳೆದವು. ಇಂಗ್ಲೀಷ್ ನಾಟಕಗಳನ್ನು ಕನ್ನಡ ಭಾಷೆಗೆ ತರ್ಜುಮೆ ಮಾಡಲಾಯಿತು. ಆವರೆ ಇನ್ನೂ ಹೆಜ್ಜಾಗಿ ಅಭಿನಯಿಸಲಿಲ್ಲ; ಆದಾಗ್ಯೂ ಈ ಇಂಗ್ಲೀಷ್ ನಾಟಕಗಳು, ನಾಟಕಗಳನ್ನು ಬರೆಯುವ ಹೊಸ ಶೈಲಿಯನ್ನು ರೂಪಿಸುವುದರಲ್ಲಿ ನೆರವನ್ನಿತ್ತವೆ. ಇಷೇ ಕಾಲದಲ್ಲಿ ಕನ್ನಡದ ಲೇಖಕರು ಮೈಸೂರಿನ ರಾಜಾಸ್ಥಾನದ ಕೃಪಾಶ್ರಯದಲ್ಲಿ ಸಂಸ್ಕೃತದಿಂದ ನಾಟಕಗಳನ್ನು ತರ್ಜುಮೆ ಮಾಡುವ ಬಗ್ಗೆ ಪ್ರೋತ್ಸಾಹ ಪಡೆದರು. ಕಾಳಿದಾಸನ 'ಶಾಕುಂತಲ' ಮತ್ತು ಶ್ರೀ ಹರ್ಷನ 'ರತ್ನಾವಳೀ' ನಾಟಕಗಳನ್ನು ಭಾಷಾಂತರಿಸಲಾಯಿತು. ಅಂತಹ ಅನೇಕ ನಾಟಕಗಳನ್ನು ಬೆಂಗಳೂರಿನ ಕೆಲಾ ವಿಲಾಸಿ ನಾಟಕ ಸಂಘದವನು ಅಭಿನಯಿಸಿದರು.

ಕಳೆದ 30 ವರ್ಷಗಳಲ್ಲಿ ನೂತನ ನಾಮಧೇಯ ಕನ್ನಡ ನಾಟಕಗಳು ಅಸ್ತಿತ್ವಕ್ಕೆ ಬಂದಿವೆ. ಸಂಸ್ಕೃತದ ನಾಟಕಗಳನ್ನು ತರ್ಜುಮೆ ಮಾಡುವುದರ ಜೊತೆಗೆ ಸಾರ್ವತ್ರಿಕ ರಸ್ಪೆಗಳ ನಾಟಕಗಳನ್ನು ಕನ್ನಡಿಸಿ ಅಭಿನಯಿಸುವುದನ್ನೂ ಪ್ರಾರಂಭಿಸಲಾಯಿತು ಅಲಿವರ್ ಗೋಲ್ಡ್ ಸ್ಮಿತ್‌ನ ಷಿ ಸ್ಟೂಪ್ಸ್ ಟು ಕಾರ್ಕರ್" ಎಂಬ ನಾಟಕವನ್ನು ದಿವಂಗತ ಕೆರೂರು ವಾಸುದೇವಾಚಾರ್ಯರು ರೂಪಾಂತರಿಸಿ 'ಪತಿ ವಶೀಕರಣ' ವೆಂಬ ನಾಟಕವನ್ನು ರಚಿಸಿದರು. ಈ ನಾಟಕದ ಯಶಸ್ಸು ನೂತನ ವಿಧಾನದ ನಾಟಕದ ರಚನೆಗೆ ಮಾರ್ಗದಾಯಕವಾಯಿತು. ಸಮಕಾಲೀನ ಕನ್ನಡ ಸಮಾಜದ ಸಮಸ್ಯೆಗಳನ್ನು ಪ್ರತಿಬಿಂಬಿಸುವ ನಾಟಕಗಳನ್ನು ಬರೆಸಲು ಇಲ್ಲಿಂದ ಪ್ರಾರಂಭವಾಯಿತು. ಈ ನೂತನ ಚಳವಳಿಯ ಮಾರ್ಗದರ್ಶಕರಲ್ಲಿ 'ಸ್ತ್ರೀ ಧರ್ಮ ರಸಸ್ಯ'ವೆಂಬ ನಾಟಕವನ್ನು ರಚಿಸಿದ ಶ್ರೀ ನಾರಾಯಣ ರಾಯರೂ ಒಬ್ಬರು. 'ಟೊಳ್ಳು ಗಟ್ಟಿ'ಯನ್ನು ರಚಿಸಿದ ಕೈಲಾಸಂ ರವರು ಸ್ವತಂತ್ರ ಆದರ್ಶದ ಮೇಲೆ ಸ್ವಾರಂಭಿಸಿದ ಚಳವಳಿಯು ಮುಂಬರಿಯಲು ಶ್ರೀ ನಾರಾಯಣರಾಯರು ಸಹಾಯ ಮಾಡಿದರು.

ಮಹತ್ವದ ಪ್ರಯೋಗ

ಶ್ರೀ ಕೋಟ ಶಿವರಾಮ ಕಾರಂತರು ಸಾಮಾಜಿಕ ನಾಟಕಗಳನ್ನು ಬರೆಯುವುದರ ಜೊತೆಗೆ ಸಂಗೀತ ನಾಟಕಗಳನ್ನು ರಚಿಸಿ ಅಭಿನಯಿಸಿ ತೋರಿಸಿದರು. ಈ ಚಳವಳಿಯು ತೀವ್ರತೆಯನ್ನು ಗಳಿಸಿತು. ಈ ಶತಮಾನದ ಪೂರ್ವಾರ್ಧದ ಕೊನೆಯ ಭಾಗವನ್ನು ಕನ್ನಡ ನಾಟಕಗಳ "ಸುವರ್ಣ ಯುಗ"ವೆಂದು ಕರೆಯಬಹುದು. ನಾಟಕವನ್ನು ಸಮಕಾಲೀನ ಸಮಾಜದ ಕನ್ನಡಿಯೆಂದು ಪರಿಗಣಿಸಲಾಗಿದೆ. ಕಳೆದ 30 ವರ್ಷಗಳಲ್ಲಿ ಉತ್ತಮ ನಾಟಕಗಳನ್ನು ರಚಿಸಲಾಗಿದೆ. ಶ್ರೀಗಳಾದ ಬೇಂದ್ರೆ, ಆ. ನ.ಕೃ, ಕಾರಂತ, ಕೃಷ್ಣ ಕುಮಾರ್, "ಶ್ರೀರಂಗ', ಪಿ., ಕೆ. ವೆಂಕಟರಾಮಯ್ಯ ಸಮರಂತಹ ನಾಟಕಕಾರರು ಆಧುನಿಕ ಕನ್ನಡ ರಂಗಭೂಮಿಗೆ ಚೇತನ ಕುಡಿದಿದ್ದಾರೆ.

ಕನ್ನಡ ನಾಟಕಗಳ ರಚನೆಯಲ್ಲಿ ಕಂಡು ಬಂದಿರುವ ಪುರೋಗತಿ ಪ್ರಯೋಗಗಳಲ್ಲಿ ಗೀತ ನಾಟಕಗಳ ಬೆಳವಣಿಗೆಯೂ ಒಂದಾಗಿದೆ. ಶ್ರೀಗಳಾದ ಗೋವಿಂದ ಪೈ, ಕೆ. ವಿ. ಪುಟ್ಟಪ್ಪ, ವಿ.ಕೆ. ಗೋಕಾಕ, ರಂ. ಶ್ರೀ ಮುಗಳಿ, ಪು. ತಿ. ನರಸಿಂಹಾಚಾರ್ಯ, ಶಿವರಾಮ ಕಾರಂತ ಮೊದಲಾದವರು ಈ ಶೈಲಿಯ ಉತ್ತಮ ಸಾಧಕರಾಗಿದ್ದಾರೆ. ಗೀತ ನಾಟಕಗಳಲ್ಲಿ ಅನೇಕವನ್ನು ಯಶಸ್ವಿಯಾಗಿ ಪ್ರಯೋಗಿಸಲಾಗಿದೆ. ಲಘು ಸಂಗೀತ ನಾಟಕಗಳು ಕೂಡ ರಂಗ ಭೂಮಿಯ ಮೇಲೆ ಯಶಸ್ವಿಯಾಗಿವೆ. ಸಾಮಾಜಿಕ ನಾಟಕಗಳು ಕನ್ನಡ ನಾಟಕಗಳಲ್ಲಿ ಹೆಚ್ಚಾಗಿ ಸ್ಪತಿಫೆ ಪೀರುತ್ತಿವೆ. ಈ ಸಾಮಾಜಿಕ ನಾಟಕಗಳು ಓಲಲು ಹಾಗೂ ಅಭಿನಯಿಸಲು ಯೋಗ್ಯವಾಗಿವೆ. ಈ ನಾಟಕಗಳು ಸಾಮಾನ್ಯವಾಗಿ ಗದ್ಯ ರೂಪದಲ್ಲಿದ್ದು ಬಿದ್ದವಾಗಿಯೂ ಬಳಕೆಯ ಭಾಷೆಯಲ್ಲಿಯೂ ಇರುತ್ತವೆ.

ಸಾಮಾಜಿಕ ರೂಪ

ಕ್ಷೀರ ಸಾಗರ ಮತ್ತು ಪರ್ವತಪಾಣಯನವರ ನಾಟಕಗಳು ಕನ್ನಡದ ನೂತನ ಶೈಲಿಗೆ ದೃಷ್ಟಾಂತವಾಗಿವೆ. ಸುಸ್ಥಪಸ್ಥಿತವಾದ ಕಲಾ ವಿಲಾಸಿ ನಾಟಕ ಮಂಡಳಿಯವರು ಸಂಗೀತ, ನೃತ್ಯಗಳಲ್ಲದ ಇಂತಹ ನಾಟಕಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಯಶಸ್ವಿಯಾಗಿ ಅಭಿನಯಿಸಿದ್ದಾರೆ. ಇದರಿಂದ ವೃತ್ತಿಯ ನಾಟಕ ಮಂಡಲಿಯವರಿಗೆ ನೂತನ ಶೈಲಿಯೊಂದಿಗೆ ನಾಟಕಗಳ ಪ್ರಯೋಗ ನಡೆಸಲು ಉತ್ತೇಜನ ಸಿಕ್ಕಿತೆ. ಸಂಗೀತ ಮತ್ತು ನೃತ್ಯಗಳೂ ಇಂಥ ನಾಟಕಗಳಲ್ಲಿ ಗೀಗಲಿಹೆಚ್ಚಿನ ಸ್ಥಾನ ಪಡೆದಿವೆ. ಸಾಂಸ್ಕೃತಿಕ ಪುನರುಜ್ಜೀವನದಲ್ಲಿರುವ ಜನತೆಯ ಕೃಪಾಶ್ರಯದಲ್ಲಿ ನೃತ್ಯ ರಂಗ ಭೂಮಿಯು ಕನ್ನಡ ನಾಟಕಗಳಲ್ಲಿ ನೂತನ ಚಳವಳಿಯನ್ನು ನಡೆಸಲಬಹುದು.

ಕನ್ನಡ ರಂಗಭೂಮಿಯು ತನ್ನ ಜಾನಪದ ನಾಟಕದ ಪರಂಪರೆಯ ಬಗ್ಗೆಯೂ ಕೀರ್ತಿಯುತವಾದ ಆಧುನಿಕ ಚಳವಳಿಯ ಬಗ್ಗೆಯೂ ಹೆಮ್ಮೆಪಡಬಹುದು. ಬೆಂಗಳೂರಿನಲ್ಲಿ ಪ್ರಬಲವಾದ ಸೂಸಂ ಆಕಾಶವಾಣಿ ಏಲಯವನ್ನು ಇದೇ ಏನೇ ದಿನಾಂಕ ಸ್ಥಾಪಿಸಿದುವ ವೆಸೆಯಿಂದ ಕರ್ನಾಟಕದಲ್ಲಿ ನಾಟಕಗಳ ಪ್ರಸಾರಣ ಸೌಲಭ್ಯವು ವಿಸ್ತಾರಗೊಳ್ಳುವುದು ನಿಶ್ಚಯ. ನೂತನ ಆಕಾಶವಾಣಿ ಏಲಯವು ಕನ್ನಡ ನಾಟಕಗಳ ರಚನೆಗೆ ಪ್ರೋತ್ಸಾಹವನ್ನೀಯುವುದಲ್ಲದೆ 'ರೇಡಿಯೊ' ನಾಟಕಗಳ ರಚನೆಯನ್ನು ಪೋಷಿಸಲು ನೆರವನ್ನು ನೀಡುವುದರಲ್ಲಿ ಸಂಶಯವಿಲ್ಲ. ಈಗ "ಬೀಚ್", "ಎನ್ಕೌಂಟರ್" ಇತ್ಯಾದಿ ಕೆಲವೇ ನಾಟಕಕಾರರು ಈ ಹೊಸ ರಂಗದಲ್ಲಿ ಕೃಷಿ ಮಾಡಿದ್ದಾರೆ— ರೇಡಿಯೊ ನಾಟಕಗಳಿಗೆ ಪ್ರೋತ್ಸಾಹ ಹೆಚ್ಚಿದಂತೆ ಸೂಸ ನಾಟಕಕಾರರು ಕಾಣಿಸಿಕೊಳ್ಳುವರೆಂದು ನಂಬಬಹುದು.

(೨ ನೇ ಕುಟದಿಂದ)

ಜನೆಗಳನ್ನು ಮಾಡಿತ್ತಾದರೂ ಸಂಕಾರಕ್ಕೆ ಇಷ್ಟರ ವರೆಗೆ ಇವುಗಳ ಕುರಿತು ಪರ್ಯಾಲೋಚನೆಯನ್ನೆ ಮುಗಿಸಿಲ್ಲ!

ನಮ್ಮ ಔದ್ಯಮಿಕ ರಂಗದಲ್ಲಿ ಕುಶಲ ಕಲೆಗಳ ಚಟುವಟಿಕೆಯ ಬೇಕಾದರೆ ಯೋಗ್ಯತೆಯನ್ನು ಹೆಚ್ಚಿಸುವುದಕ್ಕೆ ಬಹಳ ಮಹತ್ವವನ್ನು ಕೊಡಲೇಬೇಕು. ಕಳೆದ ೨ ರಡು ದಶಕಗಳಲ್ಲಿ ನಮ್ಮ ಸಂಕುಗಳ ಗುಣಾಂಶವು ಏರುತ್ತಾ ಹೋಗುವ ಬದಲಿಗೆ ತಗ್ಗುತ್ತಾ ನಡೆದಿದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ನೊನ್ನೆ ಭಾರತಕ್ಕೆಕೈಗೆ ಗ್ಗದಟ್ಟೆಯು ನಿರ್ಯಾತ ವ್ಯಸಾರವನ್ನು ಕುದುರಿಸಲು ಬಂದ ಅಮೇರಿಕದ ಪ್ರತಿನಿಧಿಗಳು ಭಾರತದ ಕುಶಲ ಕಲಾಸಗಾರರು ಯೋಗ್ಯತೆಯ ಕಡೆಗೆ ವಿಶೇಷ ಗಮನಕೊಡಬೇಕಾಗಿದೆ ಎಂದು ಎಚ್ಚರಿಕೆ ನೀಡಿದ್ದಾರೆ. ಹೊರದೇಶಗಳ ಜನರಿಗೆ, ಮಾತಿಗೆ ಬೇಕಾದರೆ, ಯಾವನೇ ಗ್ರಾಹಕನಿಗೆ, ಸಂಕುಗಳು ಉತ್ತಮವಾಗಿಲ್ಲವೆಂಬ ಭಾವನೆಗೆ ಎಡೆಕೊಡಲೇ ಕೂಡದು. ಆಗ ನಮ್ಮ ಸರಕುಗಳಿಗಾಗಿ ಹೆಂಬಲಿಸುವ ನೇಟೆಯು ತುಂಬಿ ಬಂದೀತು; ಮತ್ತು ಪ್ರದರ್ಶನ ಗೃಹಗಳಲ್ಲಿ ಭಾರತದ ಸಂಕನ ಮೇಲೆ ಮೋಹಗೊಂಡ ಜನರಿಗೆ ಸಹ ತೃಪ್ತಿಯಾದೀತು. ಹೊರದೆಹಲಿಯ ಔದ್ಯಾಸುಕ ವ್ರದರ್ಶನದ ಅನುಭವ ಈ ಮಾತನ್ನೆ ಎತ್ತಿ ಹಿಡಿದೀತು.





(ಳನೇ ಪುಟದಿಂದ)

ಡ್ಡರು "ಈಗಿನ ಆಡಳಿತ ಘಟಕಗಳ ಕೃತಕ ಸ್ವರೂಪವೂ ಅವುಗಳಿಂದಾಗುತ್ತಿರುವ ತೊಂದರೆಯೂ ನಮ್ಮ ಗಮನವನ್ನು ಸೆಳೆದಿವೆ" ಎಂದು ಹೇಳಿದರು. ಆದುದರಿಂದ ವಿವೇಕ ಸಮ್ಮತವಾದ ರೀತಿಯಲ್ಲಿ ಪುನರ್ಘಟನೆಯಾಗಬೇಕೆಂದು ಅವರು ಸೂಚಿಸಿದರು. ಜಾತಿ ಮತ್ತು ಭಾಷೆಯ ತಳಹದಿಯ ಮೇಲೆ ಉಪ ರಾಜ್ಯಗಳನ್ನು ರಚಿಸಿ, ಆಡಳಿತದ ಅನುಕೂಲತೆಯನ್ನು ಹೆಚ್ಚಿಸಬೇಕೆಂಬ ಸೂಚನೆಯನ್ನು ಸಾಮಾನ್ಯವಾಗಿ ತಿರಸ್ಕರಿಸಿದರೂ ಸಣ್ಣ ಘಟಕಗಳ ಉಪಯುಕ್ತತೆಯನ್ನು ಅವರು ಮನಗಂಡಿದ್ದರು. "ಸಣ್ಣ ಘಟಕಗಳು ಸರಕಾರದ ಭಾರವನ್ನು ಕಡಿಮೆ ಮಾಡುತ್ತವೆ. ಆಡಳಿತ ಕ್ಷೇತ್ರದಲ್ಲಿ ನೈಪುಣ್ಯವನ್ನು ಸಂಪಾದಿಸಿಲ್ಲದ ಸ್ಥಳೀಯರ ಕೈಗೆ ಜವಾಬ್ದಾರಿಯನ್ನು ಒಪ್ಪಿಸಲು ನಾವು (ಆಂದರೆ ಬ್ರಿಟಿಷರು) ಈಗ ನೋಡುತ್ತಿರುವುದರಿಂದ ಈ ವಿಷಯಕ್ಕೆ ಹೆಚ್ಚಿನ ತೂಕ ಬರುತ್ತದೆ. ಇದರಿಂದ ಪರ್ಯಾಯವಾಗಿ ಇಂಗ್ಲೀಷನ್ನು ತಿಳಿಯದ ಜನರು ಸಹ ಆಡಳಿತ ರಂಗದಲ್ಲಿ ಕಾಲಿಡಲಾಗುವ ಭಾಷಾನುಗುಣ ಘಟಕದ ರಚನೆಯೂ ಸಾಧ್ಯವಾದೀತು" ಎಂದವರು ಹೇಳಿದ್ದರು. ಹನ್ನೆರಡು ವರ್ಷಗಳ ಬಳಿಕ (೧೯೩೦) ಬಂದ ಸೈಮನ್ಸ ಸಮಿತಿಯು ಪಾಂತ್ಯಗಳ ಮೇರೆಯು ಜನತೆಯ ನಿಕಟ ಸಂಪರ್ಕದ ಭಾವನೆಗೆ ಏನೇನೂ ಪೋಷಕವಾಗಿಲ್ಲ ವೆಂದು ಒತ್ತಿ ಹೇಳಿತು. ಗಡಿಗಳ ಬದಲಾವಣೆಯು ಬಹಳ ತ್ರಾಸದಾಯಕವಾದ ಕೆಲಸವಾಗುವುದಾದರೂ — ಇದರಿಂದ ಆರ್ಥಿಕ ಹಾಗು ಆಡಳಿತ ಸ್ವರೂಪದ ಕಗ್ಗಂಟುಗಳು ತಲೆ ಎತ್ತುವುವಾದರೂ— ಪ್ರಾಂತ್ಯಗಳ ಮೇರೆಗಳನ್ನು ಆದಷ್ಟು ಬೇಗನೆ ಪುನರ್ವಿಮರ್ಶೆಸಬೇಕೆಂದೂ ಸಾಧ್ಯವಾದಷ್ಟೆ ಪುನರ್ಘಟಿಸುವುದಕ್ಕೂ ನೋಡ ಬೇಕೆಂದೂ ಅದು ಸೂಚಿಸಿತು.

ಸರ್ವಾಂಶಗಳ ಮಥನ

ಒಕ್ಕೂಟದ ಕುರಿತು ಈ ಸಮಿತಿ ವಿಶೇಷವಾದ ಸೂಚನೆಯನ್ನು ಮಾಡಿತು "ಉರಿಯ ಭಾಷೆಯಾಡುವ ಜನರಲ್ಲಿ ಹೆಚ್ಚಿನವರು ಒರಿಸ್ಸದಲ್ಲಿದ್ದಾರೆ. ಅಂಥವರಿಗೆ ಪ್ರತ್ಯೇಕ ರಾಜ್ಯವನ್ನು ನೀಡದೆ ಬಿಹಾರಿನ ಜನರೊಡನೆ ಸೇರಿಕೊಂಡಿರಲು ಬಿಟ್ಟಿದ್ದು ಸೈಸರ್ಗಿಕವಾಗಿ ಒಮ್ಮುಟ್ಟಿನಲ್ಲಿಲ್ಲದ ಪ್ರದೇಶಗಳನ್ನು ಕೃತಕ ಉಪಾಯಗಳಿಂದ ಒಟ್ಟು ಸೇರಿಸಲು ನೋಡಿದ ಉದಾಹರಣೆಯಾಗಿದೆ" ಎಂದು ಸಮಿತಿ ಅಭಿಪ್ರಾಯಪಟ್ಟಿತು. ಸಮಿತಿಯು ಇಲ್ಲಿ ಭಾಷೆಗೆ ಮಹತ್ವ ಕೊಟ್ಟಂತೆ ಕಂಡು ಒಂದೂ ಅದು ಬೇರೆ ಸಂಗತಿಗಳನ್ನೂ ಪ್ರಸ್ತಾಪಿಸಿದ್ದಿತು. "ಒಂದೇ ಭಾಷೆಯನ್ನಾಡುವ ಜನರ ಪ್ರದೇಶಗಳು ಒಮ್ಮುಟ್ಟಿನಲ್ಲಿದ್ದು ಪ್ರತ್ಯೇಕ ಪ್ರಾಂತ್ಯವಾಗಿರುವಷ್ಟು ಶಕ್ತಿ ಮತ್ತು ಸಂಪತ್ತುಗಳಿಂದ ಕೂಡಿದ್ದರೆ ಸಾಮಾನ್ಯ ಭಾಷೆಯು ಉಪಯೋಗವು ಪ್ರಾಂತ್ಯದ ವ್ಯಕ್ತಿತ್ವಕ್ಕೆ ಬಲಯುತವಾದ ಮತ್ತು ಸಿಸರ್ಗ ಸಹಜವಾದ ತಳಹದಿಯೂಂಗಿ ಪರಿಣಮಿಸುತ್ತದೆ ಎಂದದು ಹೇಳುವಾಗಲೇ "ಇದೊಂದೇ ಪರೀಕ್ಷೆ ಸಾಲದು; ವರ್ಣ, ಮತ, ಆರ್ಥಿಕ ಹಿತಾಸಕ್ತಿ, ಭೌಗೋಲಿಕ ಸ್ಥಿತಿಗತಿ ಇತ್ಯಾದಿಗಳ ಸೆಪನ್ಸ್ವಯವೂ ಅವಶ್ಯ" ಎಂದಿತದು. "ಎಲ್ಲಕ್ಕಿಂತ ಹೆಚ್ಚಾಗಿ,ವ್ಯಾವಹಾರಿಕ ಉದ್ದೇಶದ ದೃಷ್ಟಿಯಿಂದ, ಸೂಚಿತ ಬದಲಾವಣೆಯ ವಿಷಯದಲ್ಲಿ ಲಾಭ ಹೊಂದಿದವರಷ್ಟೇ ನಷ್ಟಕ್ಕೆ ಗುರಿಯಾದ ಪ್ರದೇಶಗಳ ಜನರ ನಡುವೆ ಸಹ ಒಮ್ಮತ ಅತ್ಯವಶ್ಯ" ಎಂದು ಅದು ಭಾವಿಸಿದ್ದಿತು. ಇವುಗಳ ಅಗತ್ಯದ ಕುರಿತು ಬರೇ ಭಾಷೆಯೊಡುವನರಿಗಾಗಿ ಪ್ರತ್ಯೇಕ ಪ್ರಾಂತ್ಯರಚಿಸಲು ನೇಮಕಗೊಂಡ ಸಮಿತಿಯು ಸಹ ಮತವನ್ನುಸ್ಪಷ್ಟಪಡಿಸಿತು. ಜನತೆಯ ಅಭಿಮತವನ್ನು ತಿಳಿಯುವುದು ದೊಡ್ಡ ಹೊಣೆಗಾರಿಕೆ ಎಂದು ಹೇಳಲು ಈ ಸಮಿತಿ ಹೋಯಿತು. ಆಂತೂ ಎಲ್ಲ ಅಗ್ನಿ ಪರೀಕ್ಷೆಗಳಲ್ಲಿ ಉತ್ತೀರ್ಣಗೊಂಡು ಒರಿಸ್ಸ ಪ್ರಾಂತ್ಯವು ೧೯೩೬ರಲ್ಲಿ ಪ್ರತ್ಯೇಕವಾದ ಅಸ್ತಿತ್ವವನ್ನು ಪಡೆಯಿತು.

ಮುಸ್ಲಿಮರ ಆಗ್ರಹ

ಇದೇ ಹೊತ್ತಿಗೆ ಸಿಂಧವನ್ನು ಸಹ ಮುಂಬಯಿ ಪ್ರಾಂತ್ಯದಿಂದ ಪ್ರತ್ಯೇಕಿಸಲಾಯಿತು ಸೈಮನ್ಸ ಸಮಿತಿಯು ಸಿಂಧಿನ ಪ್ರತ್ಯೇಕತೆಯ ಬೇಡಿಕೆಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದರೂ ಒರಿಸ್ಸೆದ ಸಂಗತಿಯಲ್ಲಿಮಾಡಿದಂತೆ ಕೂಜನೆಗಳನ್ನೇನು ಕೊಡಿಲಿಲ್ಲ. ಸಿಂಧೂ ನದಿಗೆ ಹಾಕತ್ತಿದ್ದ ಸುಕ್ಕುರು ಅಣೆಕಟ್ಟಿನ ಭವಿಷ್ಯ. ಮತ್ತು ಆದರ ಪರ್ಯೋಜನದ ಪ್ರದೇಶಗಳ ನಿರ್ಣಯದ ಕುರಿತಾದ ನಿಶ್ಚಯವಾಗದೆ ಮುಂಬಯಿಯ ಶಕ್ತಯುತವಾದ ಬೆಂಬಲದಿಂದಸಿಂಧನ್ನು ವಂಚಿತಮಾಡಲಾಗದೆಂದು ಈ ಸಮಿತಿ ತಿಳಿಸಿತು. ಆದರೆ ಭಾರತಕ್ಕೆ ರಾಜಕೀಯ ಸುಧಾರಣೆಯನ್ನು ಮಾಡಲು ೧೯೩೫—ಇಳರಲ್ಲಿ ನೇಮಕವಾದ ಸಂಯುಕ್ತ ಸಮಿತಿಯು ಕೇವಲ ಸಿಂಧಿನ ಮುಸ್ಲಿಮರಿಂದಷ್ಟೇಯಲ್ಲ, ಭಾರತದ ಬೇರೆಡೆಯಲ್ಲಿ ಮುಸ್ಲಿಮರಿಂದಲೂ ಸಿಂಧನ್ನು ಪ್ರತ್ಯೇಕ ಪ್ರಾಂತ್ಯವಾಗಿ ಪುನರ್ಘಟಿಸುವ ಬೇಡಿಕೆ ಬಂದಿದೆಯೆಂದೂ ಮುಂಬಯಿಯನ್ನಿ ಸಿಂಧನ್ನು ಇರಗೊಳಿಸಿ ಜಾತೀಯ ತಳಹದಿಯ ಈ ತೊಂದರೆಯನ್ನು ಇದಿರಿಸುವ ಕಷ್ಟಕ್ಕಿಂತ ಪ್ರತ್ಯೇಕ ಅಸ್ತಿತ್ವವುಳ್ಳ ಸಿಂಧಕ್ಕೆ ಬರಬಹುದಾದ ತೊಂದರೆಗಳು ಕಡಿಮೆ ಎಂದೂ ಅಭಿಪ್ರಾಯ ಕೊಡಿಸಿತು. ಪುನರ್ಘಟನೆಯ ಕ್ಷೇತ್ರದಲ್ಲಿ ಬ್ರಿಟಿಷರಿಟ್ಟ ಕೊನೆಯ ಹೆಜ್ಜೆ ಇದೆನ್ನ ಬಹುದು. ಮುಂದೆ ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡುವ ವರೆಗೆ ಅವರು ಈ ದಿಸೆಯಲ್ಲಿ ಏನೂ ಕೆಲಸ ಮಾಡಲಿಲ್ಲ. ಸ್ವತಂತ್ರ ಭಾರತವು ಮಾತ್ರ ಅಲ್ಪಾವಧಿಯಲ್ಲಿಯೇ ಅದ್ಭುತ ಸಾಧನೆಯನ್ನು ಮಾಡಿ ತೋರಿಸಿತು. ದೇಶೀಯ ಸಂಸ್ಥಾನಗಳ ವಿಲೀನೀಕರಣವೇ ಅದು.

ಸ್ವಾತಂತ್ರ್ಯೋತ್ತರದಲ್ಲಿ

೧೯೪೭ನೇ ಆಗೋಸ್ಟು ೧೫ರಂದು ಭಾರತದಲ್ಲಿದ್ದ ೫೬೫ ತುಂಡರಸರನ್ನು ಒಕ್ಕೂಟದ ಸೂತ್ರದಲ್ಲಿ ನಾಟಕೀಯ ಚಾತುರ್ಯವೆನಿಸುವಷ್ಟು ಕ್ಷಿಪ್ರಗತಿಯಿಂದ ಪೋಣಿಸಲಾಯಿತು. ೧೯೦ ಲಕ್ಷ ಜನ ಸಂಖ್ಯೆಯುಳ್ಳ ೨೧೬ ಸಂಸ್ಥಾನಗಳನ್ನು ಇತರ ರಾಜ್ಯಗಳಲ್ಲಿ ವಿಲೀನ ಗೊಳಿಸಲಾಯಿತು; ೭೦ ಲಕ್ಷ ಜನಸಂಖ್ಯೆಯುಳ್ಳ ೬೧ ಸಂಸ್ಥಾನಗಳನ್ನು ಕೇಂದ್ರದ ನೇರಾದ ಆಡಳಿತೆಗೊಳಪಟ್ಟ ಕೆಲವು ಘಟಕಗಳಾಗಿ ರೂಪಿಸಲಾಯಿತು; ೭೫೦ ಲಕ್ಷ ಜನ ಸಂಖ್ಯೆಯುಳ್ಳ ೨೭೫ ರಾಜ್ಯಗಳಿಗೆ ರಾಜಸ್ಥಾನ, ಮಧ್ಯ ಭಾರತ, ತಿರು-ಕೊಚ್ಚಿ, ಸೌರಾಷ್ಟ್ರ ಮತ್ತು ಪೆಪ್ಸುಗಳೆಂಬ ಹೊಸ ರಾಜ್ಯಗಳ ರೂಪ ಕೊಡಲಾಯಿತು. ಮೈಸೂರು, ಹೈದರಾಬಾದು ಮತ್ತು ಜಮ್ಮು-ಕಾಶ್ಮೀರಗಳು ಮಾತ್ರ ಪ್ರತ್ಯೇಕ ಅಸ್ತಿತ್ವವನ್ನು ಪಡೆದ ರಾಜ್ಯಗಳಾಗಿ ಉಳಿದರೂ ಕೇಂದ್ರದ ಆಧೀನಕ್ಕೆ ಅವನ್ನು ತರಲು ಸರದಾರ ಪಟೇಲರು ತಪ್ಪಲಿಲ್ಲ. ಹೀಗೆ ವಿಲೀನೀಕರಣವನ್ನು ಸಾಧಿಸುವಾಗ ಭಾಷೆ ಮತ್ತು ಭೌಗೋಲಿಕ ಅಂಶ ಇತ್ಯಾದಿಗಳನ್ನು ವ್ಯವಹಾರ್ಯವೆನಿಸುವಷ್ಟು ಮಟ್ಟಿಗೆ ಗಮನಿಸಿದ್ದರೂ ಸರಿಯಾದ ವಿವೇಚನೆಯನ್ನು ಧಾರೀಣರು ಮಾಡಿದರೆನ್ನುವುದುಕಷ್ಟ. ಬಹಳ ಅವಸರದಿಂದ ನಿರ್ಣಯಗಳನ್ನು ಕೈಗೊಳ್ಳುವ ಪರಿಸ್ಥಿತಿಯಲ್ಲಿ ಕೇಂದ್ರ ಸರಕಾರವಿದ್ದುದರಿಂದ, ಎಷ್ಟೋ ವಿಷಯಗಳಲ್ಲಿ ಕೊರತೆ ಉಳಿಯಿತು. ಈದೇಶೀಯ ಸಂಸ್ಥಾನಗಳಾದರೂಒಂದೇಬಗೆಯಅಭಿವೃದ್ಧಿಯನ್ನೇನು ಕೊಂದಿರಲಿಲ್ಲ. ರಾಜಕೀಯ ಕ್ಷೇತ್ರದಲ್ಲಿ ಪ್ರಜಾಪ್ರಭುತ್ವದ ಹೆಪರಿರಲಿಲ್ಲ. ನಿರಂಕುಶಾಧಿಕಾರವಿದ್ದಿತು; ದೊಡ್ಡ ಸಂಸ್ಥಾನಗಳಲ್ಲಿ ಆಡಳಿತ ನಿರ್ವಹಿಸುವ ಅಧಿಕಾರಿಗಳ ಮಂಡಳ ಜೆನ್ನಾದ ಸ್ಥಿತಿಯಲ್ಲಿದ್ದರೂ ಎಷ್ಟೋ ಸಂಸ್ಥಾನಗಳಲ್ಲಿ ಆಡಳಿತವು ತೀರ ಶಿಥಿಲವಿದ್ದಿತು ಭಾರತದ ಉಳಿದ ಪ್ರದೇಶಗಳೊಡನೆ ಇವುಗಳು ಕ್ರಮೇಣ ಹೊಂದಿಕೆ ಸ್ಥಾಪಿಸುವಂತೆ ಮಾಡಲು ವಿಶೇಷ ಕ್ರಮಗಳ ಅವಶ್ಯಕತೆಯೇ ಕಂಡು ಬಂತು. ಇದೇ ರಾಜ್ಯ ಘಟನೆಯ ಕರ್ತರು ಅ, ಬ, ಕ, ಡ— ಎಂಬ ನಾಲ್ಕು ಬಗೆಯ ರಾಜ್ಯಗಳ ಸ್ವರೂಪ ನಿರ್ಣಯಿಸಿದುದರ ಹಿನ್ನೆಲೆಯಲ್ಲಿದ್ದ ಕಾರಣ ಘಟನೆಯು ಜಾರಿಗೆ ಬಂದ ಬಳಿಕ ಆಂಧ್ರ ರಾಜ್ಯವು ಹೊಸತಾಗಿ ತಲೆ ಎತ್ತಿದೆ— ಆದರ ಕತೆಗೆ ಇಲ್ಲಿ ವಿವರಣೆ ಅಗತ್ಯವಿಲ್ಲ. ಆದರಂತೆ ಬಿಲಾಸಪುರವೆಂಬ ರಾಜ್ಯವನ್ನು ಹಿಮಾಚಲ ಪ್ರದೇಶದೊಡನೆ ಸೇರಿಸಲಾಗಿದೆ. ಹಾಗೇಕೆ ಮಾಡಿದರೆಂಬುದೂ ನಮಗೆ ಚೆನ್ನಾಗಿ ಗೊತ್ತು.

(ಸಶೇಷ)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ.

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?



ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್**, ಎಲ್. ಏ. ಎಮ್.

"Ably written—Quite up-to-date valuable service"
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾರೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಡಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳ ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹಿರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨—೦—೦ (ಟಿ. ಖರ್ಚು ಬೇರೆ).
ಕೃತಿಕಾರ, ಕಿರಿಯ ಮುಸ್ಕಿ ಕ್ಲಿನಿಕ್
ನವಭಾರತ ಪುಸ್ತಕ ಭಂಡಾರ, ಉಡುಪಿ

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಕಂದನ ಕೊಳಲು-

ಬರೆದವರು ಮತ್ತು ಪ್ರಕಾಶಕರು: ಪಳಕಳ ಸೀತಾರಾಮ ಭಟ್ಟ, ಮಿತ್ತಪ್ಪೆಲ್, ಪಿ. ಕೆ. ಬೆಲೆ: ರೂ. ೦—೬—೦.

ಶ್ರೀ ಭಟ್ಟರ ಮೊದಲಿನ ಮೂರು ಕವನ ಸಂಕಲನಗಳಿಗೆ ಮದ್ರಾಸು ಸರಕಾರದಿಂದ ಪುರಸ್ಕಾರ ದೊರೆತಿರುವುದರಿಂದ ಅವರ ಹೆಸರು ಈಗಾಗಲೇ ಕನ್ನಡದ ಶಿಶುಸಾಹಿತ್ಯ ಲೋಕದಲ್ಲಿ ಪ್ರಸಿದ್ಧವಾಗಿದೆ. "ಕಂದನ ಕೊಳಲು" ಸಹ ಆವರ ಸಂಸಾದಿಸಿದ ಕೀರ್ತಿಯನ್ನು ಪೋಷಿಸಿಕೊಂಡು ಹೋಗುವಷ್ಟು ಉತ್ತಮ ಯೋಗ್ಯತೆಯಿಂದ ಕೂಡಿದೆ. ಕೆಲವೆಡೆ ಹಿಂದಿನ ಕವನಗಳಿಗಿಂತಲೂ ಇಲ್ಲಿಯ ಕವನಗಳಲ್ಲಿ ಹೆಚ್ಚು ಲಾಲಿತ್ಯವೂ ವಾಙ್ಮಾರ್ಯವೂ ವ್ಯಕ್ತವಾಗಿವೆ. (ಉದಾ: "ಜೋಗುಳ") ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸಲು ಈ ಪುಸ್ತಕವುಂಬ ಉಪಯುಕ್ತವಾಗಿದೆ. ಏಕೆಂದರೆ ಬೇರೆ ಬೇರೆ ಹಬ್ಬಗಳ ಸಂದರ್ಭಕ್ಕೆ ಸರಿಯಾದ ಪದ್ಯಗಳಿವೆ. ಸರ್ವ ಮಾತೀಯರಿಗೂ ಸೊಗಯಿಸುವ, ಮತ್ತು ರಾಷ್ಟ್ರೀಯ ಉದ್ವೇಗಗಳಿಗೂ ಮೇಳಿಸಿದ, ಪದ್ಯಗಳು ಇವುಗಿರುವುದು ಒಂದೆ. ವೈಶಿಷ್ಟ್ಯ: ಪದ್ಯಗಳಲ್ಲಿ ಸುಂದರ ಭಾವನೆಗಳಿವೆ; ಗುಣಶೀಲಗಳನ್ನು ಜೊಳ್ಳವಾಗಿಡುವಂತೆ ಮಕ್ಕಳಿಗೆ ಒತಪಾದ ರೀತಿಯಲ್ಲಿ ಇವು ಬೋಧನೆ ನೀಡುತ್ತವೆ. ಶ್ರೀ ಭಟ್ಟರ ಕಾವ್ಯಸೇವೆಗೆ ಇತೋತ್ಸಾಹವು ವಾಪ ಶ್ರೇಯಸ್ಸನ್ನು ಕೊರುತ್ತೇವೆ.

ಲಘು ಪರಿಚಯ

ಶ್ರೀ "ನವಜೀವನ" ಮುದ್ರಣಾಲಯವು "ಕಾಸರಗೋಡು ಕನ್ನಡನಾಡು" ಎಂಬುದನ್ನು ಬಲವಾಗಿ ಪ್ರತಿಪಾದಿಸುವ ಪಲವು ಲೇಖನಗಳಿಂದ ಕೂಡಿದ ಮತ್ತು ಕನ್ನಡಿಗರಿಗೆ ಕರ್ತವ್ಯದ ಕರಿಕೊಡುವ ವೀರ ಕನಿತೆಗಳಿಂದ ತುಂಬಿದ ವಿಶೇಷ ಸಂಚಿಕೆಯೊಂದನ್ನು ಪ್ರಕಟಿಸಿದೆ. ಕನ್ನಡಿಗರು ನ್ಯಾಯಕ್ಕಾಗಿ ಹೋರಾಡಬೇಕಾಗಿರುವ ಈ ಗಳಿಗೆಯಲ್ಲಿ ವಿಶೇಷ ಸಂಚಿಕೆಯು ಜನಜಾಗೃತಿಯನ್ನು ಹುಟ್ಟಿಸುವುದಕ್ಕೆ ಹೀಗೆ ತನ್ನಬಾಲಿನ ಸೇವೆಯನ್ನು ನೀಡಿದೆ. ಎಲ್ಲರೂ ಆದನ್ನು ಆದರಿಸಲಿ!

—ಕು.

ಪ್ರಕಟಣೆ

ರೂಪಾಯಿ 1000 ತನಕ ಸಾಲಗಳು ಆಸ್ತಿ ಜವಾಬ್ದಾರಿ ಅಥವಾ ಜ್ಯಾಮೀನುಗಳಲ್ಲದೆ ನಿಮ್ಮ ದಸ್ತಖತಿನಿಂದಲೇ ದೊರೆಯುವುವು. ಹಲವರು ಈಗಾಗಲೇ ಪಡೆದಿರುತ್ತಾರೆ. ವಿವರಗಳಿಗೆ ಇಂಗ್ಲಿಷಿನಲ್ಲಿ ಬರೆಯಿರಿ:—
Bombay Mercantile Co
Bombay--23.

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 24—11—1955

ಸಂಚಿಕೆ ೧೩
NO. 13

ರಶ್ಯದ ಧುರೀಣರಿಗೆ ಸ್ವಾಗತ

ಜಗತ್ತಿನ ಪ್ರಬಲ ರಾಷ್ಟ್ರಗಳಲ್ಲಿ ಹೆಸರಾದ ರಶ್ಯದ ಅಗ್ರಗಣ್ಯ ನಾಯಕರು ಇದೇ ಇನ್ನೇ ದಿನಾಂಕ ಅಪರಾಹ್ನ ೨-೩೦ ಕ್ಕೆ ಹೊತ್ತಿಗೆ ಸರಿಯಾಗಿ ಹೊಸ ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಕಾಲೂರಿದರು. ಭಾರತದೊಡನೆ ಸ್ನೇಹ ಸಂಪರ್ಕವನ್ನು ಇನ್ನಷ್ಟು ಗಾಢವಾಗಿ ಮಾಡುವ ಮತ್ತು ಈ ದೇಶದ ಮುನ್ನಡೆಯನ್ನು ಕಣ್ಣಾರೆ ನೋಡುವ ಸದುದ್ದೇಶವನ್ನು ಅವರು ಇಟ್ಟುಕೊಂಡಿದ್ದಾರೆಂದು. ಇತ್ತೀಚೆಗೆ ಸ್ವಧಾನಿ ನೆಹರುರಿಗಳು ರಶ್ಯದಲ್ಲಿ ಕೈಗೊಂಡಿದ್ದ ಪ್ರವಾಸದ ಋಣವನ್ನು ತೀರಿಸುವ ಸೌಹಾರ್ದ ಸಂದರ್ಶನವೆಂದೂ ಈ ಧುರೀಣರ ಆಗಮನವನ್ನು ಪರಿಗಣಿಸಬಹುದು.

ಸೋವಿಯೆಟ್ ರಶ್ಯದ ಪ್ರಧಾನ ಮಂತ್ರಿ ಮಿ. ನಿಕೊಲಾಯ್ ಎ. ಬುಲ್ಗಾನಿನ್, ರಶ್ಯದ ಸಾಮ್ಯವಾದಿ ಪಕ್ಷದ ಮುಖ್ಯ ಕಾರ್ಯದರ್ಶಿ ಮಿ. ನಿಕೀಟಾ ಎಸ್. ಶ್ರುಶ್ಚೇಫ್, ಆ ದೇಶದ ಸಾಂಸ್ಕೃತಿಕ ಮಂತ್ರಿ ಮಿ ಎನ್ ಎ. ಮಿಖೈಲೊವ, ವಿದೇಶ ವ್ಯಾಪಾರ ಖಾತೆಯ ಉಪಮಂತ್ರಿ ಮಿ. ಎ. ಎ. ಗ್ರೊಮಿಕೊ, ವಿದೇಶ ವ್ಯಾಪಾರ ಖಾತೆಯ ಉಪಮಂತ್ರಿ ಮಿ. ಪಿ. ಎನ್. ಕುಜ್ನೆಟಿನ್, ಕೃಷಿ ವಿಭಾಗದ ಉಪ ಮಂತ್ರಿ ಮಿ. ಡಿ. ಆರ್. ರಸುಲೊವ್, ಸೈನ್ಯಾಧಿಕಾರಿ ಜನರಲ್ ಐ. ಎ. ಸೆರೊವ್ ಮತ್ತು ರಶ್ಯದ ಉಜ್ಬೆಕಿಸ್ತಾನ್ ರಾಜ್ಯದ ಸಾಂಸ್ಕೃತಿಕ ಉಪ ಮಂತ್ರಿ ಮೆಡೇಮ್ ಝುಡಾ ರಫೀಂ ಖಾಜೈಯೇವಾ—ಇಷ್ಟು ಮಂದಿ ಪ್ರಮುಖರು ಭಾರತಕ್ಕೆ ವಿಶೇಷ ವಿಮಾನದ ಮೂಲಕ ನೇರವಾಗಿ ಹಿಮಾಲಯದ ಮೇಲಿಂದ ಹಾರುತ್ತಾ ದೆಹಲಿಗೆ ಬಂದರು.

ಭಾರತೀಯ ಜನತೆ ಮತ್ತು ಸರಕಾರದ ಪರವಾಗಿ ಇವರಿಗೆಲ್ಲ ಅತಿಶಯ ಪ್ರೇಮೋತ್ಸಾಹದಿಂದ ತುಂಬಿ ತುಳುಕುವ ಸಂಭ್ರಮದ ಸ್ವಾಗತವನ್ನು ಪ್ರಧಾನ ಮಂತ್ರಿ ನೆಹರು ಮತ್ತವರ ಸಂಗಾತಿಗಳೂ ಹೊಸ ದೆಹಲಿ ಮತ್ತು ಆಸುಪಾಸಿನ ಜನರೂ ನೀಡಿದರು. ಸುಮಾರು ೪೦ ಸಾವಿರ ವಾಹನಗಳಲ್ಲಿಯೂ ಮೂರು ಲಕ್ಷ ಸೈಕಲುಗಳಲ್ಲಿಯೂ ಬಂದ ಒಟ್ಟು ಹತ್ತು ಲಕ್ಷದಷ್ಟು ಜನರು ಪಾಲಂ ವಿಮಾನ ನಿಲ್ದಾಣದಿಂದ ಹೊಸ ದೆಹಲಿಯ ರಾಷ್ಟ್ರಪತಿ ಭವನದ ವರೆಗಿನ ೧೫ ಮೈಲುಗಳ ದಾರಿಯುದ್ದಕ್ಕೂ ಸಾಲಾಗಿ ನಿಂತು ರಶ್ಯದ ಮುತ್ಸದ್ದಿಗಳನ್ನು ಆನಂದದಿಂದ ಬರಮಾಡಿಕೊಂಡರು.

ಪುಷ್ಪಗಳಿಂದಲೂ ತಳಿರುಗಳಿಂದಲೂ ಅಲಂಕೃತವಾದ ತೋರಣಗಳು, ರಶ್ಯ ಮತ್ತು ಭಾರತಗಳ ಸ್ನೇಹ ಸಂಬಂಧ ಸಲಿಸುವ ಹಾರೈಸುವ ವಸ್ತ್ರಪಟಗಳು, ನಾಯಕರಿಗೆ ಶುಭ ಕೋರುವ ಘೋಷಣೆಗಳು ಭಾರತೀಯ ಜನತೆಯು ರಶ್ಯದ ಜನತೆಯ ಕಡೆಗೆ ತಳೆದಿರುವ ಮಾನವೀಯ ಸ್ನೇಹಭಾವದ ಸಂಕೇತವಾಗಿ ಕಂಡವು ಮನೆಗಳ ಮಾಡಿನ ಮೇಲೆ, ಮರಗಳ ಮೇಲೆ, ಒಂಟಿಗಳ ಮೇಲೆ ಕುಳಿತಿದ್ದವರೂ ಮಾರ್ಗದ ಇಕ್ಕೆಡೆಗಳಲ್ಲಿ ಸಿಸಿನಿಂದ ನಿಂತಿದ್ದವರೂ ಹೂಗಳೆ ಎಸಳುಗಳನ್ನು ಚೆಲ್ಲಿ ಅತಿಥಿಗಳನ್ನು ಹರ್ಷಪುಳಕಿತರಾಗಿ ಮಾಡಿದರು ರಶ್ಯ ಮತ್ತು ಭಾರತಗಳ ಧ್ವಜಗಳನ್ನು ಮಕ್ಕಳು ಕೈಯಲ್ಲೆತ್ತಿಕೊಂಡಿದ್ದರು; ವಿಮಾನದಿಂದ ಇಳಿಯುವ ಏಣಿಯಿಂದ ಹಿಡಿದು ಸ್ವಾಗತಕ್ಕಾಗಿ ಬಂದಿದ್ದ ಆನೆಯ ಮುಖದ ವರೆಗೆ ಅನೇಕ ಸ್ಥಾನಗಳಲ್ಲಿ ಈ ಧ್ವಜಗಳ ಚಿತ್ರವನ್ನು ಬರೆದಿದ್ದರು

ಅಚ್ಚ ಭಾರತೀಯ ಸಂಪ್ರದಾಯದಂತೆ ರಶ್ಯದ ಸ್ನೇಹಿತರಿಗೆ ಈ ಪಾಗಮನವನ್ನು ಕೋರಲಾಯಿತು ಭಾರತೀಯ ಗಡಿಯೊಳಕ್ಕೆ ರಶ್ಯದ ನಾಯಕರು ಪ್ರಯಾಣಿಸುತ್ತಿದ್ದ ವಿಮಾನ ಬಂದೊಡನೆಯೇ ಭಾರತೀಯ ವಿಮಾನ ದಳದ ಎಂಟು ಜೆಟ್ ಯುದ್ಧ ವಿಮಾನಗಳು ಆದರ ರಕ್ಷಣೆಗೆ ಇಕ್ಕೆಲದಲ್ಲೂ ನಿಂತು ೬೦ ಮೈಲುಗಳ ವರೆಗೆ ಕರೆದುಕೊಂಡು ಬಂದು ಪಾಲಂ ನಿಲ್ದಾಣದಲ್ಲಿ ಇಳಿಸಿದವು. ರಶ್ಯದ ಪ್ರಮುಖ ನಾಯಕರಾದ ಬುಲ್ಗಾನಿನ್ ಮತ್ತು ಶ್ರುಶ್ಚೇಫರು ವಿಮಾನದ ಬಾಗಿಲಲ್ಲಿ ನಿಂತೊಡನೆಯೇ ಜನತೆಯ ಉತ್ಸಾಹ ಧ್ವನಿಯನಡುವೆ ಪ್ರಧಾನಿ ನೆಹರು ಮುನ್ನುಗ್ಗಿ "ನಮಸ್ತೇಯಾರೇ" ನಿಮಗೆ ಹಾರ್ದಿಕ ಸ್ವಾಗತವನ್ನು ಬಯಸುತ್ತೇನೆ" ಎಂದು ಕೈಕುಲುಕಿದರು ರಶ್ಯದಲ್ಲಿ ಹಿಂದೆ ಭಾರತದ ರಾಯಭಾರಿಯಾಗಿದ್ದ ಉಪರಾಷ್ಟ್ರಪತ್ನಿಯವರಾದ ಡಾ ರಾಧಾಕೃಷ್ಣನ್ನರೂ ಅತಿಥಿಗಳನ್ನು ಕೈಕುಲುಕಿ ಸ್ವಾಗತಿಸಿದರು ಸುಮಧುರ ದೇಶಗಳ ರಾಷ್ಟ್ರ ಗೀತೆಯನ್ನು ನುಡಿಸಲಾಯಿತು ಶಾಲಾ ಹುಡುಗಿಯರು ಸ್ವಾಗತ ಗೀತೆಯನ್ನು ಹಾಡುತ್ತಿದ್ದಂತೆ, ಶಂಖಗಳನ್ನು ಮೊಳಗಿಸಲಾಯಿತು

ಸೈನ್ಯ ಶಾಪೆಯ ಗೌರವರಕ್ಷಣೆಯನ್ನು ಸ್ವೀಕರಿಸಿದ ಬಳಿಕ, ರಶ್ಯದ ಅಗ್ರಗಣ್ಯ ನಾಯಕರು ಎತ್ತರವಾದ ವೇದಿಕೆಯ ಮೇಲೆ ನಿಂತು ಜನರ ವಂದನೆಯನ್ನು ತಾವೂ ಕೈಜೋಡಿಸಿ 'ನಮಸ್ತೇ!" ಎನ್ನುತ್ತಾ ಸ್ವೀಕರಿಸಿದರು. ವಾಡಿಕೆಯ ಪರಿಚಯ ಕ್ರಮ ಮುಗಿಯಲು ನೆಹರೂರು ಚಿಕ್ಕ ಸ್ವಾಗತ ಭಾಷಣವನ್ನು ಮಾಡುತ್ತಾ ಹೀಗೆಂದರು— 'ಭಾರತದ ನೆಲದಲ್ಲಿ ನೀವು ಮೊದಲ ಬಾರಿಗೆ ಕಾಲಿಡುತ್ತಿರುವಾಗ ನನಗೆ ನಿಮ್ಮನ್ನು ಸ್ವಾಗತಿಸಲು ತುಂಬ ಸಂತೋಷವಾಗುತ್ತಿದೆ ಸುದೈವದಿಂದ ನಮ್ಮೆರಡು ದೇಶಗಳ ನಡುವೆ ಅನೇಕ ಕ್ಷೇತ್ರಗಳಲ್ಲಿ ಸಂಪರ್ಕವು ಹೆಚ್ಚುತ್ತಿದ್ದು, ನಾವು ಪರಸ್ಪರರನ್ನು ಚೆನ್ನಾಗಿ ತಿಳಿಯಿಕೊಡಗಿದ್ದೇವೆ ಈಚೆಗೆ ನಿಮ್ಮ ದೇಶದಲ್ಲಿ ಪ್ರವಾಸ ಮಾಡುವ ಸುಯೋಗ ನನಗೆ ದೊರಕಿದಾಗ ನೀವೆಲ್ಲರೂ ನೀಡಿದ ಸ್ವಾಗತವನ್ನೂ ತೋರಿಸಿದ ಸ್ನೇಹವನ್ನೂ ನಾವೆಲ್ಲ ಬಹುಕಾಲದ ವರೆಗೆ ನೆನಪಿಡುತ್ತೇವೆ. ನನ್ನ ಸಂದರ್ಶನವು ಉಭಯ ದೇಶಗಳನ್ನು ಹತ್ತಿರ ತರಲು ನೆರವಾಗಿದೆ, ಈಗ ನಿಮ್ಮ ಆಗಮನವು ನಮ್ಮ ಸ್ನೇಹ ಮತ್ತು ಸಹಕಾರವನ್ನು ಇನ್ನಷ್ಟು ಸಂವರ್ಧಿಸುವುದೆಂದು ನಂಬುತ್ತೇನೆ ಮತ್ತು ಲೋಕ ಶಾಂತಿಗೆದು ನೆರವಾಗುವುದೆಂದೂ ಆಶಿಸುತ್ತೇನೆ "

ಪಾಲಂ ನಿಲ್ದಾಣದಲ್ಲಿ ಇಳಿಯುವುದಕ್ಕೆ ಎಂಟು ನಿಮಿಷಗಳ ಪೂರ್ವದಲ್ಲಿ ವಿಮಾನದಿಂದಲೇ ಭಾರತೀಯ ಜನತೆಗೆ ತನ್ನ ಹಾಗು ತನ್ನ ದೇಶಬಾಂಧವರ ಸ್ನೇಹ ಸಂದೇಶವನ್ನು ಬೆತ್ತರಿಸಿದ್ದ ರಶ್ಯದ ಪ್ರಧಾನಿ ಬುಲ್ಗಾನಿನ್ನಿರು ನೆಹರೂ ಗಳ ಸ್ವಾಗತ ಭಾಷಣಕ್ಕೆ ಉತ್ತರವೀಯುತ್ತಾ ಹೀಗೆಂದರು— ನಾವು ಭಾರತದ ಮಹಾ ಜನರಿಗೆ ರಶ್ಯದ ಜನತೆಯ ಶುಭೇಚ್ಛೆಗಳನ್ನು ವಂದನೆಗಳನ್ನೂ ತಂದಿದ್ದೇವೆ ಈ ಪ್ರಾಚೀನ ಭೂಮಿಗೆ ಪರಿಶ್ರಮಿಗಳಾದ ಇಲ್ಲಿಯ ಜನರ ಸ್ನೇಹವಿಂದ ಅತಿಹರ್ಷಿತರಾಗಿ ನಾವು ಬಂದಿದ್ದೇವೆ. ಭಾರತವು ಪ್ರಜಾರಾಜ್ಯವಾಗಿ ರೂಪುಗೊಂಡಿರುವುದನ್ನು ರಶ್ಯದ ಜನರು ಸ್ವಾಗತಿಸಿದ್ದಾರೆ ಭಾರತೀಯರ ರಚನಾತ್ಮಕ ಪ್ರವೃತ್ತಿಯಲ್ಲಿ ನಮಗೆ ಅಪಾರವಾದ ವಿಶ್ವಾಸವಿದೆ. ಭಾರತವು ಜಗತ್ತಿನಲ್ಲಿ ಶಾಂತಿಯ ಬಲಗಳನ್ನು ಎತ್ತಿ ಹಿಡಿಯಲು ಎಡೆಬಿಡದೆ ಕೆಲಸ ಮಾಡಿದೆ ಅಂತಾರಾಷ್ಟ್ರೀಯ ಘರ್ಷಣೆಗಳನ್ನು ನಿವಾರಿಸಲು ಅದು ಸಹಾಯವಿತ್ತಿದೆ ಭಾರತದ ಆರ್ಥಿಕಾಭಿವೃದ್ಧಿಯ ಮಹಾ ಪ್ರಯತ್ನಗಳಿಗೆ ನಾವು ಯಾವಸ್ಸನ್ನು ಕೋಡುತ್ತೇವೆ, ಅಲ್ಲದೆ ಸೋವಿಯೆಟ್ ಯೂನಿಯನ್ ಮತ್ತು ಭಾರತಗಳ ನಡುವೆ ಹೆಚ್ಚಿನ ಸಹಕಾರವುಂಟಾಗಿ, ಅಂತಿಂದ ಅಂತಾರಾಷ್ಟ್ರೀಯ ಶಾಂತಿ ನೆಲೆಗೊಳ್ಳುವುದಕ್ಕೆ ಸಹಾಯದೊರಕಲೆಂದೂ ಆಶಿಸುತ್ತೇವೆ '

ಐತಿಹಾಸಿಕ ಸ್ವಾಮುಖ್ಯತೆಯ ಈ ಎರಡು ವಾರಗಳ ಸಂದರ್ಶನವನ್ನು ಭಾರತೀಯ ಪತ್ರಿಕೆಗಳು ಸ್ವಾಗತಿಸಿವೆ, ಅದರಂತೆ ರಶ್ಯದ ಪ್ರಸಿದ್ಧ ಪತ್ರಿಕೆಗಳೂ ವ್ಯಾಖ್ಯಾನಿಸಿವೆ. 'ಪ್ರಾವ್ದಾ' ಪತ್ರಿಕೆಯು 'ಶಾಂತಿಪ್ರಿಯರಾದ ಭಾರತೀಯ ಜನರಿಗೆ ರಶ್ಯದ ಜನರು ತಮ್ಮ ನಾಯಕರ ಮೂಲಕ ಶುಭಾಶಯಗಳನ್ನು ಕಳುಹಿಸುತ್ತಿದ್ದಾರೆ. ಆರ್ಥಿಕಾಭಿವೃದ್ಧಿಯ ಯೋಜನೆಗಳನ್ನು ಕಾರ್ಯಗತಗೊಳಿಸಲು ಅವಶ್ಯಕವಾದ ಶಾಂತವಾತಾವರಣವನ್ನು ಸೃಷ್ಟಿಕರ್ತವಲ್ಲಿ ನಿರ್ಮಿಸಿ, ತನ್ಮೂಲಕ ಜನತೆಯ ಉಜ್ವಲ ಭವಿಷ್ಯವನ್ನು ಸಾಧಿಸಲು ಉಭಯ ರಾಷ್ಟ್ರಗಳು ನೆರವಾಗುವಂತೆ

(ಇನ್ನೂ ಸುದ್ದಿಗಳಿವೆ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ
ಸ್ಥಾಪನೆ ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ ಕ ಭಾರತ

ಮನೆಯಂತಿರುವ ಸ್ಥಳ ಬೇರೊಂದಿಲ್ಲ.

ಸುಖ, ಸೌಕರ್ಯ, ಶಾಂತಿಗಳಿಗೆ ನಿಜವಾಗಿಯೂ ಮನೆಯೇ ಅತ್ಯುತ್ತಮ ಸ್ಥಾನ ಆದರೆ ತಮ್ಮ ಹಣವನ್ನು ಕಾಪಾಡಿಕೊಳ್ಳಲು ಅದು ಅತ್ಯುತ್ತಮ ಸ್ಥಳವಾಗದು. ನಮ್ಮ ಬ್ಯಾಂಕಿನಲ್ಲಿ ಒಂದು "ಸೇವಿಂಗ್ಸ್ ಬ್ಯಾಂಕ್" ಲೆಕ್ಕವನ್ನು ಆರಂಭಿಸುವುದು ಅವಿಶ್ಯ ಜಾಣ್ಮೆಯ ಕಾರ್ಯವಾಗದು! ಸ್ವಲ್ಪವೆ ಹಣವಿಂತೆ ನಮ್ಮಲ್ಲಿ ಲೆಕ್ಕ ಆರಂಭಿಸಬಹುದು. ನಮ್ಮ ನೌಕರರು, ನಾವು ನಿಮಗೆ ಸಹಕರಿಸಬಹುದಾದ ಅನೇಕ ರೀತಿಗಳನ್ನು ತೋರಿಸಲು ಸಿದ್ಧರಾಗಿರುವರು

ಜಿಲಾವಣಿ ಭಂಡವಾಳ ರೂ. ೭,೫೦,೦೦,೦೦೦ಗೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD
Estd 1925] [Head Office UDIPI, S India

ರಾಜ್ಯಗಳ ಸ್ವರೂಪ ನಿರ್ಣಯ ಸಮಸ್ಯೆಯ ಇತಿವೃತ್ತ

ಬ್ರಿಟಿಷರ ದೃಷ್ಟಿಕೋಣಕ್ಕೂ ರಾಷ್ಟ್ರೀಯರ ಅಭಿಪ್ರಾಯಕ್ಕೂ ಇದ್ದ ಸಾಮ್ಯ ಮತ್ತು ವ್ಯತ್ಯಾಸ

ಆಡಳಿತಗಾರರು ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ಹೇಗೆ ನೋಡುತ್ತಿದ್ದರೆಂಬುದನ್ನು ಕಳೆದ ಸಂಚಿಕೆಯಲ್ಲಿ ಫಜಲಾಲಿ ಆಯೋಗದ ವರದಿಯ ಆಂಶಗಳನ್ನೆತ್ತಿ ವಿವರಿಸಿದ್ದೇನೆ. ಈಗ ರಾಷ್ಟ್ರೀಯ ದೃಷ್ಟಿಕೋಣವು ಹೇಗೆ ಅಭಿವ್ಯಕ್ತವಾಯಿತೆಂಬುದನ್ನು ಆದೇ ವರದಿಯಲ್ಲಿ ಉಲ್ಲೇಖಿತವಾದ ಅಂಶಗಳ ಮೇಲಿಂದ ವಿಚಾರಿಸೋಣ!

ಹತ್ತೊಂಭತ್ತನೇ ಶತಮಾನದ ಕೊನೆಯಲ್ಲಿ ಪ್ರಾದೇಶಿಕ ಸಂಸ್ಕೃತಿ ಮತ್ತು ಭಾಷೆಗಳ ಬೆಳವಣಿಗೆ ನಡೆದ ಪರಿಣಾಮವಾಗಿ ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ಭಾಷಾನುಗುಣ ಪ್ರಾಂತ್ಯ ರಚನೆಯ ಚಳವಳಿಯೊಡನೆ ಥಳಕು ಹಾಕಲಾಯಿತೆಂದು ಹೇಳಬಹುದು. ರಾಷ್ಟ್ರೀಯ ಸ್ವಾತಂತ್ರ್ಯ ದೊರೆತ ಬಳಿಕವಷ್ಟೇ ಕೇವಲ ಭಾಷೆಗೆ ಮತ್ತು ಸಂಸ್ಕೃತಿಗೆ ಮಹತ್ವ ಕೊಡುವುದನ್ನು ಬಿಟ್ಟು,ಆಡಳಿತದ ಸೌಕರ್ಯ, ರಾಷ್ಟ್ರದ ಒಗ್ಗಟ್ಟು, ಆರ್ಥಿಕ ಸಮತೋಲ ಇತ್ಯಾದಿಗಳನ್ನು ಗಮನಿಸುವ ಪ್ರವೃತ್ತಿ ಹುಟ್ಟಿತು.

ಭಾಷೆಯ ತಳಹದಿ

ಭಾರತದ ಪ್ರಬಲ ರಾಜಕೀಯ ಸಕ್ಷವಾಗಿರುವ ರಾಷ್ಟ್ರೀಯ ಕಾಂಗ್ರೆಸು ಬಂಗಾಳದ ವಿಭಜನೆ (೧೯೦೫)ಯನ್ನು ವಿರೋಧಿಸಿದಾಗ, ಆಶ್ಚರ್ಯವ್ವವಾಗಿಯೇ ಅಗಲಿ, ಮೊದಲಬಾರಿಗೆ ಭಾಷಾನುಗುಣ ಪ್ರಾಂತ್ಯ ರಚನೆಯ ಕುರಿತು ಬೆಂಬಲವನ್ನು ವ್ಯಕ್ತಪಡಿಸಿದಂತಾಯಿತೆಂದು ಹೇಳಬಹುದು. ೧೯೨೦ರಲ್ಲಿ ಬಿಹಾರಕ್ಕೆ ಪ್ರತ್ಯೇಕ ಪ್ರದೇಶ ಕಾಂಗ್ರೆಸನ್ನು ರಚಿಸಿದುದರಿಂದ ಈ ಸಂಸ್ಥೆಯು ಭಾಷೆಯ ತಳಹದಿಯ ಮೇಲೆ ತನ್ನ ಆಡಳಿತ ಕ್ರಮವನ್ನು ರೂಪಿಸಿಕೊಳ್ಳಿಸುತ್ತಿದೆ ಎನ್ನುವ ನಂಬಿಕೆ ಬಲಿಯಿತು.

ಪಂಧಿಗೂ ಆಂಧ್ರಕ್ಕೂ ೧೯೧೯ರಲ್ಲಿ ಪ್ರದೇಶ ಕಾಂಗ್ರೆಸನ್ನು ರಚಿಸಲು ಹೋದಾಗ ಸರಿವರ್ತಿಕ ಮನೋಭಾವವು ಮತ್ತಷ್ಟು ಸ್ಪಷ್ಟವಾಯಿತು. ಆದರೆ, ಆ ಕಾಲದಲ್ಲಿ ಡಾ. ಜೆಸೆಂಟರ ಮುಂದಾಳುತ್ವದಲ್ಲಿದ್ದ ಗುಂಪೊಂದು ಈ ತತ್ವವನ್ನು ವಿರೋಧಿಸುತ್ತಿತ್ತೆಂಬುದನ್ನು ಮರೆಯಲಾಗದು.

ಕಾಂಗ್ರೆಸಿನಲ್ಲಿ ಗಾಂಧೀಜಿಯ ಪ್ರವೇಶವಾದಂದಿನಿಂದ, ಈ ಸಂಸ್ಥೆಯು ಭಾಷಾನುಗುಣ ಪ್ರಾಂತ್ಯ ರಚನೆಯು ನಿಜಕ್ಕೂ ಅಪೇಕ್ಷಣೀಯವೆಂಬ ಭಾವನೆಯನ್ನು ಪ್ರಕಟವಾಗಿ ಪುಷ್ಟೀಕರಿಸಿತು. ೧೯೨೦ರಲ್ಲಿ ನೇರಿದ್ದ ನಾಗಪುರ ಅಧಿವೇಶನದಲ್ಲಿ ಭಾಷಾನುಗುಣ ಪ್ರಾಂತ್ಯಗಳ ರಚನೆಯನ್ನು ಸ್ಪಷ್ಟವಾದ ರಾಜಕೀಯ ಧ್ಯೇಯವಾಗಿ ಅಂಗೀಕರಿಸಲಾಯಿತು; ಅಲ್ಲದೆ ಮರು ವರ್ಷವೇ ಕಾಂಗ್ರೆಸಿನ ಆಡಳಿತ ರಂಗದಲ್ಲಿ ಈ ತತ್ವಕ್ಕೆ ಮನ್ನಣೆ ಕೊಟ್ಟು ಅದಕ್ಕನುಗುಣವಾಗಿ ಪ್ರದೇಶ ಕಾಂಗ್ರೆಸುಗಳನ್ನು ರಚಿಸಲಾಯಿತು.

ಕಾಂಗ್ರೆಸಿನ ಮನ್ನಣೆ

ಬ್ರಿಟಿಷರು ಸೈಮನ್ಸ ಸಮಿತಿಯನ್ನು ೧೯೨೭ರಲ್ಲಿ ನೇಮಿಸಿದ ಬಳಿಕ ಕಾಂಗ್ರೆಸು ಒಂದು ಗೊತ್ತುವಳಿಯನ್ನು ಸ್ವೀಕರಿಸಿ ಭಾಷಾನುಗುಣವಾಗಿ ಪ್ರಾಂತ್ಯಗಳನ್ನು ಪುನಾರಚಿಸುವ ಸಮಯ ಸನ್ನಿಹಿತವಾಗಿದೆ ಎಂದು ಸಾರಿತ. ಈ ದಿಸೆಯಲ್ಲಿ ಪ್ರಾರಂಭದ ಹೆಜ್ಜೆಯಾಗಿ ಕರ್ನಾಟಕ, ಉತ್ಕಲ, ಆಂಧ್ರ ಮತ್ತು ಸಿಂಧಗಳನ್ನು ರಚಿಸಬೇಕೆಂದು ಅದು ಸೂಚಿಸಿತು. ಈ ಗೊತ್ತುವಳಿಯ ಅನುಮೋದಕರು ಒಂದೇ ಭಾಷೆಯನ್ನಾಡುವ ಹಾಗು ಸಾಮಾನ್ಯ ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ಅನುಸರಿಸುವ ಒಬ್ಬರಿಗೆ ಸ್ವಂತವಾಗಿ ಭವಿಷ್ಯವನ್ನು ರೂಪಿಸಿಕೊಳ್ಳುವ ಅಧಿಕಾರವಿದೆ ಎಂಬುದನ್ನು ಎತ್ತಿ ಹಿಡಿದು ಭಾಷಣವಿತ್ತರು.

ದಿವಂಗತ ಮೋತೀಲಾಲ ನೆಹರುಗಳ ಅಧ್ಯಕ್ಷತೆಯಲ್ಲಿ ನೇಮಕವಾದ ಸಮಿತಿ (೧೯೨೮)ಯೊಂದು ಈ ಕೆಳಗಿನ ಮಾತುಗಳಲ್ಲಿ ಭಾಷಾನುಗುಣ ಪ್ರಾಂತ್ಯ ರಚನೆಗೆ ವಿಶೇಷವಾದ ಮತ್ತು ಬಲವಾದ ಬೆಂಬಲವನ್ನು ನೀಡಿತು: "ಒಂದು ಪ್ರಾಂತ್ಯವು ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಸಾಧಿಸಿ ತನ್ನ ದೈನಂದಿನ ಆಡಳಿತೆಯನ್ನು ಸ್ವಂತ ಭಾಷೆಯಲ್ಲಿಯೇ ನಡೆಸಿಕೊಂಡು ಹೋಗಬೇಕಾದರೆ, ಅದು ಭಾಷಾನುಗುಣವಾಗಿ ರೂಪುಗೊಂಡ ವಲಯವೇ ಆಗಿರಬೇಕಾಗುತ್ತದೆ. ಬಹುಭಾಷಾ ಪ್ರದೇಶವಾಗಿ ಒಂದು ಪ್ರಾಂತ್ಯವಿದ್ದರೆ ಶಿಕ್ಷಣ ಮಾಧ್ಯಮ, ಆಡಳಿತ ಕಾರ್ಯಗಳಲ್ಲಿ ಎಂಡು ಅಥವಾ ಹೆಚ್ಚು ಭಾಷೆಗಳನ್ನಾಶ್ರಯಿಸುವ ತೊಂದರೆ ಎಳುತ್ತದೆ. ಭಾಷೆಯು ವಿಶೇಷ ರೂಪದ ಸಂಸ್ಕೃತಿ ಮತ್ತು ಸಾಹಿತ್ಯದ ಸಂಪ್ರದಾಯದೊಡನೆ ಸಂಬಂಧವಿಟ್ಟುಕೊಂಡಿದೆ ಎನ್ನುವುದನ್ನು ನಿಯಮವಾಗಿಯೇ ಪರಿಗಣಿಸಬಹುದು. ಪ್ರಾಂತ್ಯವು ಭಾಷಾನುಗುಣವಾಗಿದ್ದರೆ, ಆ ಪ್ರದೇಶದ ಸಾರ್ವಾಂಗಿಕ ಬೆಳವಣಿಗೆಗೆ ಸಹಾಯ ಲಭಿಸುತ್ತದೆ."

ಧೋರಣೆಯ ಬದಲಾವಣೆ

ಅಲ್ಲಿಂದ ಮುಂದೆ ೧೯೪೬ನೇ ಇಸವಿಯ ವರೆಗೆ ಮೂರು ಸಲ ಕಾಂಗ್ರೆಸು ತನ್ನ ನಿಲುಮೆಯನ್ನು ಪುನರುಚ್ಚರಿಸಿತು. ೧೯೩೬ನೇ ಅಕ್ಟೋಬರದಲ್ಲಿ ನೇರಿದ ಕಲ್ಕತ್ತ ಅಧಿವೇಶನದಲ್ಲಿ ಭಾಷಾನುಗುಣ ಪ್ರಾಂತ್ಯ ರಚನೆಯ ಅನುಕೂಲತೆಗಳನ್ನು ಒತ್ತಿ ಹೇಳಿ, ಕರ್ನಾಟಕ ಮತ್ತು ಆಂಧ್ರ ರಾಜ್ಯಗಳ ರಚನೆಯನ್ನು ಒತ್ತಾಯಿಸಿತು. ೧೯೩೭ನೇ ಜುಲಾಯಿಯಲ್ಲಿ ನೇರಿದ ಕಾಂಗ್ರೆಸು ಕಾರ್ಯಕಾರಿ ಸಮಿತಿಯ ವರ್ಧಾ ಅಧಿವೇಶನವು ಕಾಂಗ್ರೆಸಿಗೆ ಅಧಿಕಾರ ದೊರೆತೊಡನೆಯೇ ಕರ್ನಾಟಕ, ಆಂಧ್ರ ಮತ್ತು ಕೇರಳ ಪ್ರಾಂತ್ಯಗಳನ್ನು ರಚಿಸಲಾಗುವುದೆಂದು ಆಯಾ ಪ್ರದೇಶದ ಶಿಷ್ಟಮಂಡಳಿಗಳಿಗೆ ಭರವಸೆ ನೀಡಿತು.

ಯದ್ಧೋತ್ತರದಲ್ಲಿ, ಚುನಾವಣೆಯ ಘೋಷಣೆಯನ್ನು ಕಾಂಗ್ರೆಸು ಹೊರಡಿಸಿದಾಗ (೧೯೪೫-೪೬) ಸಾಧ್ಯವಾದಷ್ಟು ಮಟ್ಟಿಗೆ ಆಡಳಿತ ಘಟಕಗಳನ್ನು ಭಾಷೆ ಮತ್ತು ಸಂಸ್ಕೃತಿಯ ತಳಹದಿಯ ಮೇಲೆ ಪುನಾರಚಿಸಬೇಕು ಎಂದು ಒಪ್ಪಿತು. "ಪ್ರತಿಯೊಂದೂ ಸಂಗತಿಯಲ್ಲಲ್ಲ, ಅವುಗಳ ಪರಿಸ್ಥಿತಿಯನ್ನು ನೋಡಿ ಸಾಧ್ಯವಾದಷ್ಟು ಮಟ್ಟಿಗೆ" ಭಾಷಾನುಗುಣ ಪ್ರಾಂತ್ಯ ರಚನೆಮಾಡಬೇಕೆಂದು ಧ್ವನಿಸುವ ಈ ಘೋಷಣೆಯು ಕಾಂಗ್ರೆಸಿನ ಧೋರಣೆಯಲ್ಲಿ ಏನೋ ಬದಲಾವಣೆಯಾಗಿದೆ ಎಂಬುದನ್ನು ಪ್ರಥಮಾವರ್ತಿ—ಳಂ ವರ್ಷಗಳ ಬಳಿಕ ಸೂಚಿಸಿತೆಂದು ಭಾವಿಸಬಹುದು.

ನೆಹರುಗಳ ಹೇಳಿಕೆ

ದೇಶದ ವಿಭಜನೆಯು ನಡೆದು ಸ್ವಾತಂತ್ರ್ಯ ದೊರಕಿದ ಬಳಿಕ, ಕಾಂಗ್ರೆಸಿಗೆ ತಾನು ಹಿಂದೆ ನೀಡಿದ್ದ ಭರವಸೆಯು ಮಾತುಗಳನ್ನು ನಡೆಸಿಕೊಡುವುದು ಶಕ್ಯವೇ ಎಂಬ ವಿಚಾರವುಂಟಾಯಿತು. ೧೯೪೬ನೇ ನವಂಬರದಲ್ಲಿ ಘಟನಾ ಸಮಿತಿಯ ಮುಂದೆ ಮಾತನಾಡಿದ ಪ್ರಧಾನಿ ನೆಹರುಗಳು ಭಾಷೆಯ ತತ್ವವನ್ನು ಒಪ್ಪುತ್ತಿದ್ದಂತೆಯೆ "ಮೊದಲ ವಿಷಯಗಳು ಮೊದಲು ಬರಬೇಕು—ಆ ಮೊದಲ ವಿಷಯವೆಂದರೆ ಭಾರತದ ಭದ್ರತೆ ಮತ್ತು ಸ್ಥಿರತೆ" ಎಂದು ಹೇಳಿದರು.

ಇದರ ಬೆನ್ನಿಗೆ ಘಟನಾ ಸಮಿತಿಯು ದರ್ ಸಮಿತಿಯೆ ನ್ನು ನೇಮಿಸಿತು. ಆಮ್ಬ, ಕರ್ನಾಟಕ, ಕೇರಳ ಮತ್ತು ಮಹಾರಾಷ್ಟ್ರ ಪ್ರಾಂತ್ಯಗಳನ್ನು ರಚಿಸುವುದು ಅಪೇಕ್ಷಣೀಯವೆ ಆಲ್ಲವೆ, ಪುನಾರಚನೆಯೋಗ್ಯವಾಗಿದ್ದರೆ ರಾಜ್ಯಗಳ ಮೇಲೆ, ಆರ್ಥಿಕ, ಶಾಸನಿಕ ರಂಗಗಳಲ್ಲಿ ಅವುಗಳಿಂದಾಗುವ ಪರಿಣಾಮ ಇತ್ಯಾದಿಗಳ ಬಗ್ಗೆ ಸೂಚನೆಗಳನ್ನು ಕೊಡುವುದು ಈ ಸಮಿತಿಯ ಕೆಲಸವೆಂದು ಹೇಳಲಾಯಿತು. ಕೇವಲ ಭಾಷೆಯ ತಳಹದಿಯ ಮೇಲೆಯೇ ಪ್ರಾಂತ್ಯಗಳ ಪುನರ್ಘಟನೆ ನಡೆಸಬಹುದೆಂಬ ತತ್ವವನ್ನು ಕಣ್ಣು ಮುಚ್ಚಿ ಸ್ವೀಕರಿಸಲಿಲ್ಲವೆಂದು ಇದು ತೋರಿಸಿ ಕೊಡುತ್ತದೆ.

೧೯೪೮ನೇ ದಶಂಬರದಲ್ಲಿ ದರ್ ಸಮಿತಿ ಘಟನಾ ಸಮಿತಿಗೆ ತನ್ನ ವರದಿಯನ್ನೊಪ್ಪಿಸಿತು. ಅದು ಆಗಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಯಾವುದೇ ರಾಜ್ಯವನ್ನು ಪುನರ್ಘಟಿಸುವುದಕ್ಕೆ ವಿರೋಧ ಸೂಚಿಸಿತಲ್ಲದೆ, ಭಾಷೆಯೊಂದನ್ನೆ ಪ್ರಾಮುಖ್ಯ ಅಂಶವಾಗಿ ಈ ಪ್ರಶ್ನೆಯಲ್ಲಿ ಭಾವಿಸಬಾರದೆಂದು ಅಭಿಪ್ರಾಯಪಟ್ಟಿತು. ಆಡಳಿತದ ಅನುಕೂಲತೆಯೇ ಮಹತ್ವದ ವಿಷಯವೆಂದೂ ಭಾಷೆಯು ಆಡಳಿತಕ್ಕೆ ಪೋಷಕವಾಗಿ ಆನಂತರದ ಸ್ಥಾನ ಪಡೆಯಬೇಕೆಂದೂ ಅದು ಹೇಳಿತು.

ದರ್ ಸಮಿತಿಯ ವರದಿ

ರಾಷ್ಟ್ರೀಯ ಭಾವನೆಯನ್ನು ಬೆಳೆಸುವ ಯಾವುದೇ ಕೆಲಸವನ್ನು ಮಾಡಬೇಕಲ್ಲದೆ, ಅದಕ್ಕೆ ಹಾನಿಮಾಡುವ ಕಾರ್ಯವನ್ನೆಲ್ಲ. ಐತಿಹಾಸಿಕ, ಭೌಗೋಲಿಕ, ಆರ್ಥಿಕ ಹಾಗು ಸಾಂಸ್ಕೃತಿಕ ವಿಚಾರಗಳನ್ನು ಭಾಷೆಯೊಂದಿಗೆ ಸೌಹಾರ್ದಯ ದೃಷ್ಟಿಯಿಂದ ವಿಚಾರಿಸಬೇಕು—ಎಂದು ದರ್ ಸಮಿತಿ ಖಂಡ ತುಂಡವಾಗಿ ಘೋಷಿಸಿತು. ಇವೆಲ್ಲ ಸುಸಂಬದ್ಧವಾಗಿದ್ದರೆ ಮಾತೃ ಭಾಷೆಯನ್ನನುಸರಿಸಿ ಮಾಡಿದ ರಾಜ್ಯಗಳ ಭವಿಷ್ಯ ಜೀನ್ನಾದೀತು ಎಂದು ಹೇಳಿತು.

ಅದಕ್ಕನುಸಾರವಾದ ಪರೀಕ್ಷೆಗಳು ಈ ಬಗೆಯಲ್ಲಿವ್ವವೆನ್ನಬಹುದು—(೧) ಪ್ರಾಂತ್ಯದ ವ್ಯಾಪ್ತಿಯೊಳಗಡೆ ಬೇರೊಂದು ಶಾಸನಕ್ಕೆ ಒಳಪಟ್ಟ ಪ್ರದೇಶವಿರಲಾಗದೆಂಬ ಅಂಶಕ್ಕೆ ಸಹಿ ಮಹತ್ವಕೊಡುವ ಭೌಗೋಲಿಕ ಸ್ವರೂಪ, (೨)ಆರ್ಥಿಕ ಸ್ವಾವಲಂಬನ, (೩) ಆಡಳಿತದ ಅನುಕೂಲತೆ, (೪) ಭವಿಷ್ಯದ ಅಭಿವೃದ್ಧಿಗೆ ಧಾರಾಳವಾದ ಅವಕಾಶ, ಮತ್ತು (೫) ಹೊಸ ಮೇರೆಯೊಳಗಿನ ಪ್ರದೇಶಗಳ ಜನರಲ್ಲಿ ಯಾವ ಪ್ರಸಂಗವಶ್ಯವೂ ಬಹು ಸಂಖ್ಯಾಕರು ಭಿನ್ನಾಭಿಪ್ರಾಯವನ್ನು ಹೊಂದಿದ ನುತ್ತು ಅದೇ ಭಾಷೆಯಾಡುವ ಅಲ್ಪ ಸಂಖ್ಯಾಕರ ಮೇಲೆ ಒತ್ತಾಯ ಹೇರದಿರುವಷ್ಟು ವಿಶೇಷ ರೀತಿಯ ಒಮ್ಮತ.

ಕೆಲವೇ ದಿನಗಳಲ್ಲಿ ಕಾಂಗ್ರೆಸು ತನ್ನ ಜಯಪುರ ಅಧಿವೇಶನದ ನಿರ್ಣಯದಂತೆ ಧರ್ ಸಮಿತಿಯ ಸಿಫಾರಸಿನ ಬೆಳಕಿನಲ್ಲಿ ಭಾಷಾನುಗುಣ ಪ್ರಾಂತ್ಯ ರಚನೆಯ ಸಮಸ್ಯೆಯನ್ನು ವಿಚಾರಿಸಲು ಮತ್ತು ಸ್ವಾತಂತ್ರ್ಯ ಪ್ರಾಪ್ತಿಯಿಂದ ಉದ್ಭವಿತವಾದ ಜಟಿಲ ಸಂಗತಿಗಳ ನೆಲೆಯಲ್ಲಿ ಆದರ ಯೋಗ್ಯತೆಯನ್ನು ತೂಗಿ ನೋಡಲು "ಜೆವಿಪಿ" ಸಮಿತಿಯನ್ನು ನೇಮಿಸಿತು.

ವರಿಷ್ಠರ ಅಭಿಪ್ರಾಯ

ಶ್ರೀಗಳಾದ ಜವಾಹರಲಾಲ ನೆಹರು, ವಲ್ಲಭಭಾಯಿ ಪಟೇಲರುಮತ್ತು ಪಟ್ಟಾಭಿ ಸೀತಾರಾಮಯ್ಯನವರಿಂದ ಕೂಡಿದ್ದ ಈ ಸಮಿತಿಯು ಹೀಗೆಂದಿತು: "ಭಾಷಾನ್ನ

THE BOMBAY LIFE ASSURANCE Co., Ltd.
Excellent Bonuses !
1954 VALUATION.
Whole Life .... Rs. 19/- per 1000/-per year
Endowment .... Rs. 16/- per 1000/- per year.
Record Business: Over Rs, 5 Crores.
It pays you to consult for Representation or Insurance:-
KOCHIKAR BROTHERS, LTD.,
CHIEF AGENTS, UDIPI.
or any of their offices at:-
Bangalore, Coimbatore, Kozhikode, Madura, Mangalore and Trivandrum.

ಗುಣ ಪ್ರಾಂತ್ಯ ರಚನೆಯ ಸಾಮಾನ್ಯ ತತ್ವಕ್ಕೆ ಕಾಂಗ್ರೆಸು ತನ್ನ ಸಮ್ಮತಿಯನ್ನು ಕೊಟ್ಟಿದ್ದಾಗ ಅದು ಈ ತತ್ವದ ಅನುಷ್ಠಾನಕ್ಕೆ ಸಂಬಂಧಿಸಿದ ವಿಷಯಗಳನ್ನು ವಿವೇಚಿಸಿರಲಿಲ್ಲ; ಅನುಷ್ಠಾನದಲ್ಲಿ ಏನು ತೊಂದರೆಗಳಿವೆ ಮತ್ತು ಅದರ ಪರಿಣಾಮವೇನಾದೀತು ಎಂಬ ಕುರಿತು ಕಾಂಗ್ರೆಸು ಹೆಚ್ಚು ವಿಚಾರಿಸಿರಲಿಲ್ಲ. ಈಗಿನ ಬೆಳಕಿನಲ್ಲಿ ನೋಡಿದರೆ, ರಾಜ್ಯಗಳ ಪುನರ್ ಘಟನೆಯು ಭಾರತದ ಭದ್ರತೆ, ಒಗ್ಗಟ್ಟು ಮತ್ತು ಆರ್ಥಿಕ ಅಭ್ಯುದಯವನ್ನೆ ಉದ್ದೇಶವಾಗಿಟ್ಟು ಕೊಳ್ಳಬೇಕು; ಪ್ರತ್ಯೇಕತೆಯ ಮತ್ತು ವಿನಾಶಕಾರಕವಾದ ಪ್ರವೃತ್ತಿಗಳನ್ನು ಕಠಿಣವಾಗಿ ನಿರುತ್ತೇಜಿಸಬೇಕು. ಭಾಷೆಯು ಪರಸ್ಪರರನ್ನು ಬಂಧಿಸುವ ಶಕ್ತಿಯೊಂದೇ ಆಗಿಲ್ಲ. ಆದು ಬೇರ್ಪಡಿಸುವ ಸಾಮರ್ಥ್ಯವನ್ನೂ ಹೊಂದಿದೆ. ಆದುದರಿಂದ, ಭಾಷಾನುಗುಣ ಪ್ರಾಂತ್ಯ ರಚನೆಯ ಕುರಿತು ಕಾಂಗ್ರೆಸು ವಹಿಸಿದ ಹಳೆಯ ನಿಲುಮೆಯನ್ನು ಪ್ರತಿಯೊಂದೂ ಸಂಗತಿಯಲ್ಲಿ ಬೇರೆ ಬೇರೆಯಾಗಿ ವಿಚಾರಿಸಿ, ದೇಶದ ಆರ್ಥಿಕ ಹಾಗು ರಾಜಕೀಯ ಸ್ಥಿರತೆಗೆ ತೊಂದರೆಯಾಗದ ಮತ್ತು ಫೆಡರೇಶನ್‌ಗೆ ಕೊಡದ ರೀತಿಯಲ್ಲಿ ಕಾರ್ಯಗತಗೊಳಿಸಬೇಕು."

ಜೆ ವಿ ಪಿ ಸಮಿತಿಯು ಸಾರ್ವಜನಿಕ ಒತ್ತಾಯವು ತೀಕ್ಷ್ಣವಾಗಿದ್ದರೆ ಮತ್ತು ಭಾವನೆಯು ಬಲಯುತವಾಗಿದ್ದರೆ, ಆದರ ಪರಿಣಾಮಗಳ ಕುರಿತು ಪರಿಶೀಲನೆ ನಡೆಸಬೇಕು; ಮತ್ತು ಜನತೆಯನ್ನು ತೃಪ್ತಿಪಡಿಸುವ ಸಾಧ್ಯತೆಯನ್ನು ಕಂಡು ಹಿಡಿಯಬೇಕು ಎಂದೂ ಹೇಳಿತು. ಈ ತೃಪ್ತಿಯನ್ನು ಹುಟ್ಟಿಸಲು ಸಮರ್ಥವಾಗಬೇಕಿದ್ದರೆ ಜನತೆಯು ಬೇಡಿಕೆಯು "ಪ್ರಾರಂಭದಲ್ಲಿ ಪರಸ್ಪರ ಸಮ್ಮತವಿರುವ ನಿರ್ದಿಷ್ಟ ಭಾಷಾ ಪ್ರದೇಶಗಳ ಮಟ್ಟಿಗೆ ಮಾತ್ರ ಅನ್ವಯಿಸಬೇಕು" ಎಂಬ ನಿಯಮವನ್ನು ಹಾಕಿತು.

ಆಂಧ್ರದ ಕುರಿತು ವಿಶೇಷ ಪರಿಶೀಲನೆಯನ್ನು ನಡೆಸುವ ಮೂಲಕ ತನ್ನ ವರದಿ ಮೇಲೆ ಕ್ರಮ ತೆಗೆದುಕೊಳ್ಳಬಹುದೆಂದು ಜೆವಿಪಿ ಸಮಿತಿ ಸೂಚಿಸಿತು. ಸಮಿತಿಯ ಈ ವರದಿಯನ್ನು ೧೯೪೯ನೇ ಎಪ್ರೀಲಿನಲ್ಲಿ ಕಾಂಗ್ರೆಸು ಕಾರ್ಯಕಾರಿ ಸಮಿತಿ ಅಂಗೀಕರಿಸಿತು. ಅಂದಿನಿಂದ ಕಾಂಗ್ರೆಸು ಕಾಲಕಾಲಕ್ಕೆ ಸ್ವೀಕರಿಸಿದ ಗೊತ್ತುವಳಿಗಲ್ಲಿಯೂ ೧೯೫೩ನೇ ಇಸವಿಯಲ್ಲಿ ಹೊರಡಿಸಿದ ಚುನಾವಣೆಯ ಘೋಷಣೆಯಲ್ಲಿಯೂ ಇದೇ ಅಭಿಪ್ರಾಯವನ್ನು ಎತ್ತಿ ಹಿಡಿದಿದೆ. ಆಂಧ್ರ ಪ್ರದೇಶ ಕಾಂಗ್ರೆಸು, ಮತ್ತು ಮದ್ರಾಸು ರಾಜ್ಯಗಳು ಒಪ್ಪಿರುವುದರಿಂದ ಆಂಧ್ರ ರಾಜ್ಯವನ್ನು ರಚಿಸುವ ಕುರಿತು ಕಾಂಗ್ರೆಸಿನ ಚುನಾವಣಾ ಘೋಷಣೆಯು ಭರವಸೆ ನೀಡಿತಾದರೂ ಮೈಸೂರಿನೊಳಗಿನ ಜನರಿಗೂ ಹೊರಗಿನ ಕನ್ನಡಿಗರಿಗೂ ಒಳ್ಳೆತನಿಲ್ಲವೆಂಬ ಕಾರಣದಿಂದ ಕರ್ನಾಟಕದ ರಚನೆಯ ಪ್ರಶ್ನೆಯನ್ನು ಬಿಗಿ ಹಿಡಿಯಿತು.

ಪಂಚವಾರ್ಷಿಕ ಜೋಜನೆಯು ಕಾರ್ಯಗತಗೊಳ್ಳಹತ್ತಿದ ಗಳಿಗೆಯಿಂದ (೧೯೫೧) ಆದಕ್ಕೆ ವಿಘ್ನ ಬರಬಾರದೆಂದೂ ಕಾಂಗ್ರೆಸು ಭಾವಿಸಿತು. ಹೈದರಾಬಾದಿನಲ್ಲಿ ೧೯೫೨ನೇ ಜನವರಿ ತಿಂಗಳ ಅಧಿವೇ

(೧೨ನೇ ಪುಟ ನೋಡಿರಿ)

ವಿಶ್ವವಿದ್ಯಾನಿಲಯ ಮತ್ತು ತಾಂತ್ರಿಕ ಶಿಕ್ಷಣ

ಔದ್ಯಮಿಕ ಕ್ಷೇತ್ರದ ಆವಶ್ಯಕತೆಯೊಡನೆ ಸಮನ್ವಯ

ಈಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದಲ್ಲಿ ಭಾಷಣ ಮಾಡುತ್ತಾ ಭಾರತದ ನೈಜ್ಞಾನಿಕ ಹಾಗು ಔದ್ಯಮಿಕ ಸಂಶೋಧನ ಮಂಡಳದ ದಿಗ್ದರ್ಶಕರಾದ ಪ್ರೊ. ಥಕ್ಕರರು ವಿಶ್ವವಿದ್ಯಾನಿಲಯಗಳಿಗೂ ಔದ್ಯಮಿಕ ರಂಗಕ್ಕೂ ಯೋಗ್ಯ ಸಂಬಂಧ ಬೆಳೆದಿಲ್ಲವೆಂದು ವಿಷಾದದಿಂದ ನುಡಿದಿದ್ದರು. ಕೈಗಾರಿಕೆಗಳಿಗೆ ಯಾವ ಬಗೆಯ ಶಿಕ್ಷಣ ಬೇಕಾಗಿದೆ ಎಂಬುದನ್ನು ವಿಶ್ವವಿದ್ಯಾನಿಲಯಗಳು ಗಮನಿಸಿದಂತಿಲ್ಲ ಎಂದವರು ಧೃನಿಸಿದ್ದರು. ಜೆಂಗಳೂರಿನ ಭಾರತೀಯ ವಿಜ್ಞಾನ ಮಂಡಳದಲ್ಲಿ ಪ್ರಾಧ್ಯಾಪಕರಾಗಿರುವಶ್ರೀ.ಎಸ್.ಸಂಪತ್ ಎಂಬ ಮಹನೀಯರು ತಮ್ಮದೊಂದು ಲೇಖನದಲ್ಲಿ ಇದೇ ಅಂಶವನ್ನು ರಾಷ್ಟ್ರೀಯ ಅಭಿವೃದ್ಧಿಯ ದೃಷ್ಟಿಕೋಣದಿಂದ ವಿಷದವಾಗಿ ಚರ್ಚಿಸಿದ್ದಾರೆ.

ಅವರ ಅಭಿಪ್ರಾಯದಂತೆ, ಒಂದು ದೇಶದ ಆರ್ಥಿಕ ಅಭ್ಯುದಯಕ್ಕೆ ಅಲ್ಲಿರಬಹುದಾದ ನೈಸರ್ಗಿಕ ಸಂಪತ್ತಿನ ಪ್ರಮಾಣ ಮತ್ತು ಕಚ್ಚಾ ಸಾಮಗ್ರಿಗಳ ವೈಪುಲ್ಯಕ್ಕಿಂತಲೂ ಅಲ್ಲಿಯ ಉಪಕರಣಗಳನ್ನು ರಚಿಸಿರುವ ಬಗೆ ಮತ್ತು ಸಂಪತ್ತಿನ ಸದುಪಯೋಗ ಪಡೆಯಲು ಸಂಪಾದಿಸಿರುವ ನೈಪುಣ್ಯಗಳೇ ಹೆಚ್ಚಾಗಿ ನಿರ್ಣಾಯಕ ಅಂಶವಾಗುತ್ತವೆ. ಸುದೈವದಿಂದ ಭಾರತದ ದ್ವಿತೀಯ ಪಂಚವರ್ಷಿಕ ಯೋಜನೆಯು ರಾಷ್ಟ್ರದಲ್ಲಿ ಕೈಗಾರೀಕರಣವನ್ನು ವಿಸ್ತರಿಸುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದು ಇವಕ್ಕೆ ಪೋಷಕವಾಗುವಂತೆ ತಾಂತ್ರಿಕ ನೈಪುಣ್ಯವನ್ನು ಪ್ರತಿಯೊಂದೂ ಮಟ್ಟದಲ್ಲಿ ಪ್ರೋತ್ಸಾಹಿಸುವ ಸಂಕಲ್ಪ ಯೋಜನೆಗಿದೆ. ನಮ್ಮ ದೇಶವು ಕೈಗಾರೀಕರಣಕ್ಕೆ ಬಹಳ ತಡವಾಗಿ ನುಸುಳು ನುಗ್ಗಿರುವುದರಿಂದ. ಈ ಕ್ಷೇತ್ರದಲ್ಲಿ ಈಗಾಗಲೇ ಆಭಿವೃದ್ಧಿಯನ್ನು ಸಾಧಿಸಿರುವ ಪ್ರದೇಶಗಳ ಅನುಭವದ ಬಲವನ್ನು ಹೊಂದಬಹುದಾಗಿದೆ; ಆ ದೇಶಗಳು ಎದುರಿಸಿದ ಕಠಿಣ ಪ್ರಸಂಗಗಳನ್ನು ಮುಂದಾಗಿ ಊಹಿಸಿಕೊಂಡು ಹೆಜ್ಜೆ ತಪ್ಪದಂತೆ ಜಾಗರೂಕತೆ ವಹಿಸಬಹುದಾಗಿದೆ.

ನೈಪುಣ್ಯ ಮತ್ತು ಯೋಗ್ಯತೆ

ದೇಶವನ್ನು ಎದುರಿಸಿರುವ ಸಮಸ್ಯೆಗಳಲ್ಲಿ ನಿಷ್ಣಾತರ ಹೊಂದುತ್ತಿರುವ ಔದ್ಯಮಿಕ ಕ್ಷೇತ್ರಕ್ಕೆ ಉಪಯುಕ್ತರೆನಿಸಿದ ಯೋಗ್ಯತೆ ಮತ್ತು ನೈಪುಣ್ಯ ಸಂಪನ್ನರಾದ ಜನರನ್ನು — ಅಂದರೆ ವಿಜ್ಞಾನಿಗಳನ್ನು, ಯಂತ್ರ ವಿಜ್ಞಾನಿಗಳನ್ನು, ತಾಂತ್ರಿಕ ತಜ್ಞರನ್ನು, ಆವರಿಗೆ ನಿಪುಣರಾದ ಸಹಾಯಕರನ್ನು — ಒದಗಿಸಿ ಕೊಡಲಾಗುವಂತೆ ತಾಂತ್ರಿಕ ಶಿಕ್ಷಣದ ಪುನರ್ ಘಟನೆಯನ್ನು ಮಾಡಿ ಆದರ ಮಟ್ಟವನ್ನು ಎತ್ತರಿಸುವುದೇ ಮುಖ್ಯವಾದುದಾಗಿದೆ. ಔದ್ಯಮಿಕ ಯೋಜನೆಯ ಆಹ್ವಾನವನ್ನು ಮನ್ನಿಸುವುದಕ್ಕೆ ಇಂದಿನ ತಾಂತ್ರಿಕ ಶಿಕ್ಷಣವ್ಯವಸ್ಥೆ ತಂಬಾ ಹೊಂದುತ್ತಿರುವ ಜನರ ಸಂಖ್ಯಾ ಸ್ವರೂಪಾಣ ದೃಷ್ಟಿಯಿಂದಾಗಲೀ ಯೋಗ್ಯತೆಯ ದೃಷ್ಟಿಯಿಂದಾಗಲೀ ಬಹಳ ಕೊರತೆಯದೆ ನಿಸುತ್ತದೆ. ಇದನ್ನು ಸರಿದೂಗಿಸಲು ಕೈಗೊಳ್ಳಬಹುದಾದ ಯಾವುದೇ ಯೋಜನೆಯು ಯಶಸ್ಸು ಔದ್ಯಮಿಕ ಕ್ಷೇತ್ರಕ್ಕೂ ವಿಶ್ವವಿದ್ಯಾನಿಲಯ ಮತ್ತು ತಾಂತ್ರಿಕ ಶಿಕ್ಷಣ ಮಂಡಳಗಳಿಗೂ ನತುನೆ ಹುಂಬೆಂಬೂ ಇರುವ ದಪ್ಪು ಹೆಚ್ಚಿನ ಪ್ರಮಾಣವಲ್ಲಿ ಸಹಕಾರ ಭಾವನೆ ಮೊಳೆದೋರುವುದನ್ನೆ ಆವಲಂಬಿಸಿರುತ್ತದೆ.

ಇತ್ತೀಚೆಯ ವರೆಗೆ ಭಾರತದಲ್ಲಿ ಯಂತ್ರ ವಿಜ್ಞಾನ ಶಿಕ್ಷಣವು ದೈನಂದಿನ ಕೆಲಸಗಳನ್ನು ಮಾತ್ರ ನಡೆಸಿಕೊಂಡು ಹೋಗಬಲ್ಲ ಪದವೀಧರರನ್ನು ಹೊರತರುವುದನ್ನೆ ಉದ್ದೇಶವಾಗಿಟ್ಟು ಕೊಂಡಿತ್ತಲ್ಲದೆ ಸಂಶೋಧನೆ ಮತ್ತು ಅಭಿವೃದ್ಧಿಗೆ ಏನೇನೂ ಮಹತ್ವ ಕೊಟ್ಟಿರಲಿಲ್ಲ ಯಾವುದಾದರೂ ವಿಶೇಷ ಆಗತ್ಯದ ಪ್ರಸಂಗ ಬಂದಾಗ ಬ್ರಿಟನಿನ ಸಲಕರಣೆಯನ್ನೂ ಅಲ್ಲಿಯ ತಜ್ಞರನ್ನೂ ಬರಪಡಿಸಿಕೊಳ್ಳಲಾಗುತ್ತಿತ್ತು. ಯಂತ್ರ ವಿಜ್ಞಾನಿಗಳು ಉತ್ತಮ ಆಡಳಿತಗಾರರಲ್ಲವೆಂಬ ಕಲ್ಪನೆಯನ್ನೆ ವ್ಯವಹಾರದಲ್ಲಿ ಊರ್ಜಿತದಲ್ಲಡಲಾಯಿತು. ಪರಿಣಾಮದಲ್ಲಿ ಈ ದೇಶವು ಇತ್ತೀಚೆಯ ವರೆಗೆ ಹೊಸ ತಾದ ದೃಷ್ಟಿಕೋಣವಿಟ್ಟುಕೊಂಡು ವಿಚಾರಿಸುವ, ನೂತನ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳುವ, ಆಘುನಿಕ ಔದ್ಯಮಿಕ ಕಾರ್ಯಕ್ರಮಗಳಪ್ರಾಣಸ್ವರೂಪರಾಗಿರುವ ಮಟ್ಟಕ್ಕೆ ಹೋಗಬಲ್ಲ ಧಾರಣಶಕ್ತಿಯನ್ನು ಯಾವುದೇ ಯಂತ್ರ ವಿಜ್ಞಾನಿಯಲ್ಲಿ ನಾವು ಕಾಣಲೆ ಹೋಗುವಂತಾಯಿತು.

ಪ್ರಗತಿ ಪಥದಲ್ಲಿ

ಸ್ವಾತಂತ್ರ್ಯೋತ್ತರದಲ್ಲಿ ಪರಿಸ್ಥಿತಿಯು ಸ್ವಲ್ಪ ಮಟ್ಟಿಗೆ ಒಳ್ಳೆಯದಾಗಿದೆ. ದೇಶದ ಬೇರೆ ಬೇರೆ ಭಾಗಗಳಲ್ಲಿ ರಾಷ್ಟ್ರೀಯ ಸಂಶೋಧನಾಲಯಗಳನ್ನು ನೆಲೆಗೊಳಿಸಿರುವುದೂ ಖರಗಪುರದಲ್ಲಿ ತಾಂತ್ರಿಕ ಶಿಕ್ಷಣ ಕೇಂದ್ರವನ್ನು ಕೆರೆದಿರುವುದೂ ಬೆಂಗಳೂರಿನ ಭಾರತೀಯ ವಿಜ್ಞಾನ ಮಂಡಳದಲ್ಲಿ ಅನೇಕ ಹೊಸ ಯಂತ್ರ ವಿಜ್ಞಾನ ವಿಭಾಗಗಳನ್ನು ಪ್ರಾರಂಭಿಸಿರುವುದೂ ಸುಧಾರಣೆಯ ದಿಸೆಯಲ್ಲಿಟ್ಟ ನೊದಲ ಹೆಜ್ಜೆಗಳಾಗಿವೆ. ಉದ್ಯಮಗಳಲ್ಲಿ, ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ಅಥವಾ ಉತ್ಪಾದನೆ ಮತ್ತು ಯಂತ್ರ ಜೋಡಣೆಯಲ್ಲಿ, ಒಟ್ಟಾರೆ ಕೈಗಾರಿಕಾಭಿವೃದ್ಧಿಯ ಯಾವುದೇ ಕ್ಷೇತ್ರದಲ್ಲಿ, ಯೋಗ್ಯ ಸ್ಥಾನವನ್ನು ಅಲಂಕರಿಸಬಲ್ಲ ಮತ್ತು ಹೊಸ ವಿಧಾನಗಳನ್ನೂ ಉತ್ಪಾದನೆಯ ತಂತ್ರಗಳಲ್ಲಿ ಸುಧಾರಣೆಗಳನ್ನೂ ಅಳವಡಿಸಿ ಕಡಿಮೆ ಬೆಲೆಗೆ ಉತ್ತಮ ಗುಣ ಯೋಗ್ಯತೆಗಳುಳ್ಳ ಸರಕುಗಳ ನಿರ್ವಾಣವೇ ಧ್ಯೇಯವಾಗಿರುವ ತರಬೇತಿಹೊಂದಿದ ವಿಜ್ಞಾನಿಗಳನ್ನೂ ಯಂತ್ರ ಕುಶಲರನ್ನೂ ಈ ಸಂಸ್ಥೆಗಳು ನಿರಂತರವಾಗಿ ಹೊರ ತರುತ್ತವೆಂದು ಆಶಿಸಬಹುದು.

ಆವಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳವು ವೇರವಲ್ಲಿ ಇಂಥ ಉಪಯುಕ್ತ ಸಂಸ್ಥೆಗಳ ಸಂಖ್ಯೆಯು ಸಾಕಷ್ಟೇ, ಇಪ್ಪರುವ ಶಿಕ್ಷಣ ಮಟ್ಟವು ತೃಪ್ತಿಕರವಿವೆಯೆ ಎಂದು ಮುಂತಾಗಿ ಗಂಭೀರವಾಗಿ ಆಲೋಚಿಸುತ್ತಿದೆ. ಹೆಚ್ಚು ಹೆಚ್ಚಾಗಿ ಇಂಥ ಶಿಕ್ಷಣಾಲಯಗಳನ್ನು ಸ್ಥಾಪಿಸಬೇಕಾಗಿವೆಯೆ, ಈಗಿನ ವಿಶ್ವವಿದ್ಯಾನಿಲಯಗಳಿಗೆ ಸಾಕಾದಷ್ಟು ತಾಂತ್ರಿಕ ಸಹಾಯವನ್ನು

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.
ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,
ಮೈಸೂರು.

ಸಲ್ಲಿಸಿದರೆ ಅವುಗಳ ತಾಂತ್ರಿಕ ಪ್ರಗತಿಗೆ ಅನುಕೂಲವಾದ ಸಂಶೋಧನೆಗೆ ಕೇಂದ್ರ ಗಳಾಗಬಲ್ಲವೆ ಎಂಬ ಪ್ರಶ್ನೆಗಳನ್ನು ಬಿಡಿಸುವ ಆವಶ್ಯಕತೆಯಿದೆ. ಯಂತ್ರವಿಜ್ಞಾನ ಕ್ಷೇತ್ರದ ಪದವೀಧರರಿಗೂ ಸಂಶೋಧನೆಯಲ್ಲಿ ನಿರತರಾಗುವ ಮಹನೀಯರಿಗೂ ಸಲ್ಲಿಸುವ ಸಂಬಳ ಮತ್ತಿತರ ಸೌಕರ್ಯದ ಸುಸ್ಥಿರವ ಪರಿಶೀಲನೆಯೂ ಆಗತ್ಯವಿದೆ—ಅಭಿವೃದ್ಧಿ ಮತ್ತು ಪ್ರಗತಿಗೆ ಪೋಷಕವಾದ ಈ ಕ್ಷೇತ್ರಕ್ಕೆ ಮಹತ್ವಾಕಾಂಕ್ಷಿಗಳೂ ಸಮರ್ಥರೂ ಮೇಧಾವಿಗಳೂ ಆದ ತರುಣರನ್ನು ಆಕರ್ಷಿಸುವುದಕ್ಕೆ ಇದರಿಂದಲೇ ಸಾಧ್ಯ. ಇವೆಲ್ಲ ಸಂಗತಿಗಳನ್ನು ತೃಪ್ತಿಕರವಾಗಿ ಬಿಡಿಸುವ ವರೆಗೆ ಶಿಕ್ಷಣಾಲಯಗಳಿಗೂ ಔದ್ಯಮಿಕ ರಂಗಕ್ಕೂ ನಡುವೆ ಸಹಕಾರ ಮನೋಭಾವ ಮೂಡಿ ಬರುವ ಆಶೆ ಈಡೇರದು

ಪಾಶ್ಚಾತ್ಯ ಪದ್ಧತಿ

ಮುಂದರಿದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸಂಶೋಧನೆಯಲ್ಲಿ ಸಾಧಿಸಿದ ಪ್ರಗತಿಯನ್ನೆ ಔದ್ಯಮಿಕ ಅಭಿವೃದ್ಧಿಯು ಹೊಂದಿಕೊಂಡಿದೆ. ಇಂಗ್ಲೆಂಡಿನಲ್ಲಿ ತಾಂತ್ರಿಕ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸುವ ವಿಚಾರಕ್ಕೆ ಬೆಂಬಲವು ಸಿಗುತ್ತಿಲ್ಲ. ಆದರೆ, ಅಲ್ಲಿಯ ವಿಶ್ವವಿದ್ಯಾನಿಲಯಗಳಗೂಕೈಗಾರಿಕೆಗಳಿಗೂ ಸರಕಾರಕ್ಕೂ ನಡುವೆ ಬಹಳ ನಿಕಟವಾದ ಸಂಬಂಧವು ಔದ್ಯಮಿಕ ಸಂಶೋಧನೆಯ ವಿಷಯದಲ್ಲಿ ನೆಲೆಗೊಂಡಿದೆ. ಯುರೋಪಿನ ಹೆಚ್ಚಿನ ರಾಷ್ಟ್ರಗಳಲ್ಲಿ ಉನ್ನತ ಜೀವನದ ಮಟ್ಟವನ್ನು ಯೋಜನಾ ಬದ್ಧವಾದ ಮತ್ತು ಪರಸ್ಪರಪೂರಕ ಸ್ವರೂಪದ ವೈಜ್ಞಾನಿಕ ಹಾಗು ತಾಂತ್ರಿಕ ಸಂಶೋಧನೆಯ ಸಫಲವೆಂದೇ ಭಾವಿಸಲಾಗುತ್ತದೆ. ಅಮೇರಿಕದ ಜಗತ್ಪ್ರಸಿದ್ಧ ತಾಂತ್ರಿಕ ಶಿಕ್ಷಣ ಕೇಂದ್ರಗಳೂ ಮಹಾವಿಶ್ವವಿದ್ಯಾನಿಲಯಗಳೂ ಸಂಶೋಧನೆಯನ್ನೆ ಧ್ಯೇಯವಾಗಿಟ್ಟು ಕೊಂಡಿದ್ದು ಕೈಗಾರಿಕೆಗಳಿಗೆ ತರಬೇತಿ ಹೊಂದಿದ ನಿಪುಣರನ್ನು ನಿರಂತರವಾಗಿ ಸೂರೈಸುವ ಸ್ರೋತವಾಗಿ ಮೆರೆಯುತ್ತಿವೆ.

ಕಾರ್ನೆಗೀ, ರೊಕ್‌ಫೆಲರ್, ಫೋರ್ಡ್ ಮುಂತಾದ ಸೂರಾರು ದಾನಿಗಳ ದೆಸೆಯಿಂದ ಅಸ್ತಿತ್ವದಲ್ಲಿರುವ ಸಂಶೋಧನಾಲಯಗಳಲ್ಲದೆ ಸಾವಿರಾರು ಸಣ್ಣ ಹಾಗು ದೊಡ್ಡ ಔದ್ಯಮಿಕ ಪ್ರಯೋಗ ಶಾಲೆಗಳು ಅಮೇರಿಕದಲ್ಲಿವೆ. ಖ್ಯಾತನಾಮ ಪಾದ ಬೆಲ್ ಟೆಲಿಫೋನ್ ಪ್ರಯೋಗಾಲಯಗಳು, ಜನರಲ್ ಮೋಟಾರ್ಸ್, ದಿ ಜನರಲ್ ಇಲೆಕ್ಟ್ರಿಕ್ ಕಂಪೆನಿ, ದಿ ರೇಡಿಯೊ ಕೋರ್ಪರೇಶನ್ ಆಫ್ ಅಮೇರಿಕ, ದಿ ಸ್ಟೆಂಡರ್ಡ್ ಆಯಿಲ್ ಕಂಪೆನಿ ಮುಂತಾದವುಗಳು ತಮ್ಮ ಸಂಶೋಧನೆಯ ವಿಭಾಗದಲ್ಲಿ ವಿಶ್ವವಿದ್ಯಾನಿಲಯಗಳಿಂದಲೂ ತಾಂತ್ರಿಕ ಶಿಕ್ಷಣ ಕೇಂದ್ರಗಳಿಂದಲೂ ಹೊರ ಬಂದ ಮೇಧಾವಿಗಳಿಗೆ ಸ್ಥಳ ಕೊಡುತ್ತವೆ. ವಿಶ್ವವಿದ್ಯಾನಿಲಯಗಳಿಗೆ ಸಲಕರಣೆಗಳನ್ನು ಕೊಂಡು ಕೊಳ್ಳುವುದಕ್ಕೂ ವಿದ್ಯಾರ್ಥಿಗಳಿಗೆ ನೇತನವನ್ನು ನೀಡುವುದಕ್ಕೂ ಸಮರ್ಥರು. ನಿಶ್ಚಿಂತೆಯಿಂದ ಸಂಶೋಧನೆಯಲ್ಲಿ ನಿರತರಾಗುವುದಕ್ಕೂ ಅನುಕೂಲಿಸಲೆಂದು ಸರಕಾರದನರೂ ಸಾರ್ವಜನಿಕರೂ ಖಾಸಗಿ ಸಂಸ್ಥೆಗಳ ನ್ಯಾಯಕರೂ ಮುಕ್ತ ಹಸ್ತದ ಸಹಾಯವನ್ನು ಸಲ್ಲಿಸುತ್ತಿರುತ್ತಾರೆ. ಈ ಬಗೆಯ ಉದಾರವಾದ ಹಾಗು ಸಹಕಾರ ಭಾವನೆಯಿಂದ್ಪತುಂಬಿದ ಕೊಡುಗೆಯು ಬೆಲನ್ ಇನ್‌ಸ್ಟಿಟ್ಯೂಟ್, ಆರ್ಮರ್ ರಿಸರ್ಚ್ ಫೌಂಡೇಶನ್ ಮುಂತಾದ ವಿಶ್ವವಿದ್ಯಾನಿಲಯಗಳ ಅಧಿಕಾರಿಗಳಿಂದಲೂ ಔದ್ಯಮಿಕ ಕ್ಷೇತ್ರದ ಧುರೀಣರಿಂದಲೂ ನಡೆಸಲ್ಪಡುವ ಸಂಸ್ಥೆಗಳನ್ನು ಕಟ್ಟುವೆ. ಇಲ್ಲಿಂದ ಸಣ್ಣ ಪ್ರಮಾಣದ ಔದ್ಯಮಿಕ ಕೇಂದ್ರಗಳಿಗೆ ವಿಶೇಷವಾದ ಅನುಭವ ಮತ್ತು ಸಹಾಯ ರವಾನೆಯಾಗುತ್ತದೆ.

ಸಹಕಾರದ ವಿಧಾನ

ಭಾರತದ ವಿಶ್ವವಿದ್ಯಾನಿಲಯಗಳೂ ಕೈಗಾರಿಕೆಗಳೂ ಇನ್ನೂ ತಂತಮ್ಮ ಪ್ರತ್ಯೇಕ ವಾತಾವರಣದಲ್ಲಿಯೇ ಕೆಲಸ ಮಾಡುತ್ತಿವೆ. ಯಂತ್ರ ವಿಜ್ಞಾನ ಪದವೀಧರರಾಗುವಂತೆ ವಿದ್ಯಾರ್ಥಿಗಳಿಗೆ ಕೊಡುವ ಸಾಮಾನ್ಯ ಶಿಕ್ಷಣ ಮತ್ತು ತರಬೇತಿಯನ್ನು ಬಿಟ್ಟರೆ, ಕೈಗಾರಿಕೆಗಳಿಗೂ ತಾಂತ್ರಿಕ ಶಿಕ್ಷಣ ಮಂಡಳಿಗಳಿಗೂ ಯಾವದೇ ಬಗೆಯ ನಿಕಟ ಸಂಪರ್ಕ ನೆಲೆಗೊಂಡಿಲ್ಲ. ತಾಂತ್ರಿಕ ಪ್ರಗತಿಯು ವೈಜ್ಞಾನಿಕ ಸಂಶೋಧನೆಯನ್ನು ಔದ್ಯಮಿಕ ಸಮಸ್ಯೆಗಳಿಗೆ ಅನ್ವಯಿಸುವ ವ್ಯವಹಾರ್ಯ ಮಾರ್ಗದಿಂದ ಮಾತ್ರವೇ ಸಾಧ್ಯವಾದುದರಿಂದ ಕೈಗಾರಿಕೆಗಳು ವಿಶ್ವವಿದ್ಯಾನಿಲಯಗಳನ್ನು ಅಲಕ್ಷಿಸಿದರೆ, ಆ ಪಾಯವು ಕೈಗಾರಿಕೆಗಳಿಗೇ ತಗಲುತ್ತದೆ. ಅದರಂತೆ ರಾಷ್ಟ್ರದ ಅಭ್ಯುದಯದ ರೂಪದಲ್ಲಿ ಸಂಶೋಧನೆಯು ಫಲವನ್ನು ಕೊಡಬೇಕಾದರೆ, ವಿಶ್ವವಿದ್ಯಾನಿಲಯಗಳು ಕೈಗಾರಿಕೆಗಳ ಅಸ್ತಿತ್ವವನ್ನು ಮರೆತು ಕೆಲಸ ಮಾಡುವುದು ಸಲ್ಲದು. ಭಾರತದ ರಾಷ್ಟ್ರೀಯ ಪ್ರಯೋಗಶಾಲೆಗಳು ಈ ವಿಷಯವನ್ನು ಚೆನ್ನಾಗಿ ತಿಳಿದು, ಕೆಲಸ ಮಾಡುತ್ತಿರುವುದು ಸಂತೋಷ.

ಪರಸ್ಪರ ತಿಳಿವಳಿಕೆಯನ್ನು ಹೆಚ್ಚಿಸುವುದಕ್ಕಾಗಿ ತಾಂತ್ರಿಕ ಶಿಕ್ಷಣ ಕೇಂದ್ರಗಳ ಅಧ್ಯಾಪಕರನ್ನು ಔದ್ಯಮಿಕ ಸಂಶೋಧನಾ ಸಮಸ್ಯೆಯ ಸ್ಪಷ್ಟ ಪರಿಜ್ಞಾನವನ್ನು ಮಾಡಿಕೊಳ್ಳುವುದಕ್ಕಾಗಿ ಕೆಲವು ಕಾಲದ ವರೆಗೆ ಕೈಗಾರಿಕಾ ಕೇಂದ್ರಗಳಲ್ಲಿ ಸಂದರ್ಶನ ವೀಣಾಲು ಬಿಡುವುದೊಳಿತು ಇದರಂತೆ ಔದ್ಯಮಿಕ ಕ್ಷೇತ್ರದಲ್ಲಿ ಕೆಲಸಮಾಡುವ ಯಂತ್ರ ವಿಜ್ಞಾನಿಗಳನ್ನು ಶಿಕ್ಷಣ

(೨೩ನೇ ಪುಟಕ್ಕೋದಿರಿ)



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಸೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಕಾಂತಿ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮುಸ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕೆಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ವಾರದ ಮಹಾನುಭಾವರು

ರಶ್ಯದ ವರಿಷ್ಠರ ವ್ಯಕ್ತಿ ಚಿತ್ರ

ಮಿ. ಖ್ರುಶ್ಚೇಫ್

ಭಾರತಕ್ಕೆ ಕಾಲಿಟ್ಟೊಡನೆಯೇ ಇಲ್ಲಿಯ ವಾತಾವರಣದೊಡನೆ ಚೆನ್ನಾಗಿ ಬೆರೆತು ಹೋಗಿ ಬಿಚ್ಚು ಮನಸ್ಸಿನಿಂದ ಮಾತುಕತೆಯಾಡುತ್ತಾ ತನ್ನ ಹಿರಿತನವಾದ ನಾಲಿಗೆಯ ವ್ಯಂಗ್ಯೋಕ್ತಿಗಳಿಂದ ಶ್ರೋತೃಗಳನ್ನೆಲ್ಲ ದಿಙ್ಮೂಢರಾಗಿ ಮಾಡುತ್ತಿರುವ ಖ್ರುಶ್ಚೇಫರು ರಶ್ಯದ ಸಾಮ್ಯವಾದಿ ಪಕ್ಷದ ಪ್ರಥಮ ಕಾರ್ಯದರ್ಶಿ; ಆ ದೇಶದ ಸರಕಾರದ ನಾಡಿ ಬಡಿತವನ್ನು ಹಿಡಿತದಲ್ಲಿಟ್ಟುಕೊಳ್ಳಬಲ್ಲ ಶಕ್ತಿಯುಳ್ಳ ಬಿಗಿವ ನುಸ್ಯ. ರಶ್ಯದ ಭವಿಷ್ಯವನ್ನು ರೂಪಿಸುತ್ತಿರುವ ಇಂದಿನ ಕೈಗಳ ಹಿನ್ನೆಲೆಯಲ್ಲಿರುವವರೇ ಈ ಮಹಾನುಭಾವ ಎಂದೆನ್ನ ಬಹುದು.

ಇವರು ೧೮೯೪ನೇ ವರ್ಷದಲ್ಲಿ ಕಾರ್ಮಿಕ ಕುಟುಂಬವೊಂದರಲ್ಲಿ ಜನಿಸಿದರು. ಗಣಿಯಲ್ಲಿ ಕೂಲಿಯಾಗಿ, ಕುರಿ ಮೇಯಿಸುವ ಹುಡುಗನಾಗಿ ಇವರ ಬಾಲ್ಯ ಕಳೆಯಿತು. ೧೯೧೪ರಲ್ಲಿ ಸಾಮ್ಯವಾದಿ ಪಕ್ಷ ಸೇರಿದರು ಯಾವಿ ಯುದ್ಧದಲ್ಲಿ ಇವರು ಭಾಗವಹಿಸಿ ಹೋರಾಡಿದರು. ಮುಂದೆ ಕ್ರಾಂತಿಯ ಪ್ರಥಮ ದಿನಗಳಲ್ಲಿ ಸಂಘಟಿಸಿದ್ದ ಕಾರ್ಮಿಕ ಶಿಕ್ಷಣಾಲಯದಲ್ಲಿ ವಿದ್ಯಾಭ್ಯಾಸ ಹೊಂದಿದರು. ಇಲ್ಲಿಯೂ ಮೋಸ್ಕೋದ ಔದ್ಯಮಿಕ ಶಿಕ್ಷಣಾಲಯದಲ್ಲಿಯೂ ಕಲಿಯುವಾಗ ಪಕ್ಷದ ನೇತೃತ್ವವನ್ನು ವಹಿಸಿದರು.

ಹೀಗೆ ಪಕ್ಷದೊಡನೆ ಬೆಳೆದ ಸಂಬಂಧ ಮುನ್ನಡೆಯುತ್ತಲೇ ಹೋಯಿತು. ೧೯೩೨ನೇ ವರ್ಷದಿಂದ ಪ್ರಾರಂಭವಾದ ಅವರ ಉಜ್ವಲ ಸಂಘಟಕ ಜೀವನದಲ್ಲಿ ಅವರು ಉನ್ನತೋನ್ನತ ಪದವಿಗಳನ್ನು ಅಲಂಕರಿಸಿದರು. ಸಕ್ಷದ ಜಿಲ್ಲಾ ಸಮಿತಿ, ಪ್ರಾದೇಶಿಕ ಸಮಿತಿ, ರಾಜ್ಯ ಸಮಿತಿಗಳಲ್ಲಿ ಅವರು ಕಾರ್ಯದರ್ಶಿ ಸ್ಥಾನವನ್ನು ಹೊಂದಿದರು. ೧೯೩೭ನೇ ವರ್ಷದಲ್ಲಿ ಕೆಲವು ತಿಂಗಳು ಯುಕ್ರೇನ್ ರಾಜ್ಯದ ಸಚಿವ ಮಂಡಲದ ಅಧ್ಯಕ್ಷರಾಗಿಯೂ ಕೆಲಸ ಮಾಡಿದರು. ೧೯೩೮ರಿಂದಲೇ ಪಕ್ಷದ ಕೇಂದ್ರ ಸಮಿತಿಯ ಸದಸ್ಯತ್ವವನ್ನು ಪಡೆದಿದ್ದ ಇವರನ್ನು ೧೯೪೯ರಲ್ಲಿ ಕೇಂದ್ರ ಸಮಿತಿಯ ಕಾರ್ಯದರ್ಶಿಗಳಲ್ಲಿ ಒಬ್ಬರಾಗಿ ನೇಮಿಸಿದರು. ೧೯೫೩ರಲ್ಲಿ ಇವರನ್ನು ಪ್ರಥಮ ಕಾರ್ಯದರ್ಶಿ ಹುದ್ದೆಗೆ ಏರಿಸಲಾಯಿತು.

ಮಿ. ಖ್ರುಶ್ಚೇಫರು ಆರ್ಥಿಕ ಅಭಿವೃದ್ಧಿಗಾಗಿ ತುಂಬ ದುಡಿದರಲ್ಲದೆ, ದ್ವಿತೀಯ ಮಹಾಯುದ್ಧ ಕಾಲದಲ್ಲಿ ರಶ್ಯದ ನೈಋತ್ಯ ಭಾಗದ ರಕ್ಷಣೆಗೆ ಸೂತ್ರಧಾರರಾಗಿದ್ದುಕೊಂಡು ಸೆಣಿದರು. ಅವರ ಸೇನೆಯ ಗೌರವಾರ್ಥ ರಶ್ಯದ ಅತ್ಯುಚ್ಚ ಪ್ರಶಸ್ತಿಗಳನ್ನು ಕೊಡಲಾಗಿದೆ ಅವರು ಸಂಸಾರಿ—ಆದರೆ, ರಶ್ಯದ ಸಂಪ್ರದಾಯದಂತೆ ರಾಜಕೀಯ ಸಮಾರಂಭಗಳಲ್ಲಿ ಪ್ರಕಟವಾಗಿ ಅವರ ಹೆಂಡತಿ ಗಂಡನೊಡನೆ ಭಾಗವಹಿಸುತ್ತಿಲ್ಲ.

○

ಮಿ. ಬುಲ್ಗಾನಿನ್

ಪ್ರಧಾನಿ ನೆಹರುಗಳ ಪ್ರೇಮದ ಆಮಂತ್ರಣವನ್ನು ಮನ್ನಿಸಿ ಭಾರತ ಸಂಚಾರಕ್ಕೆ ಬಂದಿರುವ ರಶ್ಯದ ಸಚಿವ ಸಂಪುಟದ ಅಧ್ಯಕ್ಷ ಮಿ. ಬುಲ್ಗಾನಿನ್ ಗಂಭೀರ ವ್ಯಕ್ತಿತ್ವವುಳ್ಳ, ತೂಕ ತಪ್ಪದಂತೆ ನಡೆಯುವ, ಸ್ಪಷ್ಟವಾದಿಯಾದ ವ್ಯಕ್ತಿ; ಸರಕಾರದ ಜಟಿಲವಟ್ಟೆಗೆಗಳಲ್ಲಿ ಕೆಲವು ದಶಕಗಳಿಂದ ಮಹತ್ವದ ಪಾತ್ರವಹಿಸುತ್ತಿರುವ ಧುರೀಣ. ರಶ್ಯದ ಸಾಮ್ಯವಾದಿ ಪಕ್ಷದ ಮುಂದಾಳುಗಳಲ್ಲಿ ಒಬ್ಬರೆಂದೂ ಹೇಳಬಹುದು.

ಕಾರ್ಯಾಲಯವೊಂದರಲ್ಲಿ ಕಾರಕೂನರಾಗಿ ಕೆಲಸಮಾಡುತ್ತಿದ್ದ ಕುಟುಂಬದಲ್ಲಿ ಇವರು ೧೮೯೫ರಲ್ಲಿ ಹುಟ್ಟಿದರು. ೧೯೧೭ ರವರೆಗೆ ಅವರ ಜೀವನದಲ್ಲಿ ಉಲ್ಲೇಖನೀಯವಾದ ಘಟನೆ ನಡೆಯಲಿಲ್ಲ ಆ ವರ್ಷ ಫೆಬ್ರುವರಿ ಕ್ರಾಂತಿಯು ಹೊತ್ತಿಗೆ ಇವರು ಸಾಮ್ಯವಾದಿ ಪಕ್ಷದ ಸದಸ್ಯನಾಗಿ ಸೇರಿದರು. ಅಕ್ಟೋಬರದ ಮಹಾ ಕ್ರಾಂತಿಯು ಸಾಮ್ಯವಾದಿ ಪಕ್ಷಕ್ಕೆ ವಿಜಯ ಸಂಪಾದಿಸಿ ಕೊಟ್ಟಿತು; ಆದರೆ, ಅದು ಭದ್ರವಾದುದಾಗಿರಲಿಲ್ಲ. ಪ್ರತಿ ಕ್ರಾಂತಿಗಳು ನಡೆಯುತ್ತಿದ್ದುವಲ್ಲವೆ. ಭೂಗತ ಚಟುವಟಿಕೆಗಳೂ ವಿಶೇಷವಾಗಿದ್ದವು. ಇವುಗಳನ್ನು ದಮನಿಸುವುದಕ್ಕೆ ಕಳಿಹಿಸಲ್ಪಟ್ಟ ಬುಲ್ಗಾನಿನ್ನರು ಯಶಸ್ಸನ್ನು ಸಂಪಾದಿಸಿದರು.

ಮುಂದೆ ದೇಶದ ಆರ್ಥಿಕ ಅಭಿವೃದ್ಧಿ ಕ್ಷೇತ್ರದಲ್ಲಿ ಇವರಿಗೆ ತಮ್ಮ ಕೈವಾಡ ತೋರಿಸಲು ಅವಕಾಶ ಕೊಡಲ್ಪಟ್ಟಿತು. ೧೯೩೭ರಿಂದ ೧೯೩೯ನೇ ವರ್ಷದ ವರೆಗೆ ರಾಷ್ಟ್ರೀಯ ಆರ್ಥ ಮಂಡಳದ ಹೊಣೆಗಾರ ಸ್ಥಾನದಲ್ಲಿದ್ದರು. ವಿದ್ಯುಚ್ಛಕ್ತಿ ಉಪಕರಣಗಳ ಕಾರ್ಖಾನೆಯ ಮುಖ್ಯಸ್ಥರಾಗಿ ಇವರನ್ನು ೧೯೩೭ರಲ್ಲಿ ನೇಮಿಸಲು ಐದು ವರ್ಷಗಳ ಅವಧಿಯಲ್ಲಿ ಮುಟ್ಟಬೇಕಾಗಿದ್ದ ಗುರಿಯನ್ನು ಎರಡೂವರೆ ವರ್ಷಗಳಲ್ಲಿಯೇ ಸಾಧಿಸುವ ನೈಪುಣ್ಯವನ್ನು ಪ್ರದರ್ಶಿಸಿದರು. ಮೊಸ್ಕೊ ಸೋವಿಯೆಟ್‌ನಲ್ಲಿ ಇವರ ಖ್ಯಾತಿ ವಿಶೇಷವಾಗಿ ಹರಡಿ, ಅವರು ಆ ನಿಭಾಗದ ಅಧ್ಯಕ್ಷರಾಗಿ ಆಯ್ಕೆ ಹೊಂದಿ

ದರು. ೧೯೩೪ರಲ್ಲಿ ಸಾಮ್ಯವಾದಿ ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾದರು. ೧೯೩೫ರಲ್ಲಿ ರಶ್ಯದ ಸರಕಾರಿ ಬ್ಯಾಂಕಿನ ದಿಗ್ದರ್ಶಕ ಮಂತಳದ ವರಿಷ್ಠರಾಗಿ ದುಡಿದರು.

ದ್ವಿತೀಯ ಮಹಾಯುದ್ಧ ಕಾಲದಲ್ಲಿ ಇವರ ಕೌಶಲ್ಯದ ಸದ್ದಿ ನಾಲ್ದೆಸೆಗೆ ಹರಡಿತು. ಪಶ್ಚಿಮ ವಿಭಾಗದ ಯುದ್ಧ ಮುಖದ ಚಟುವಟಿಕೆ ರೂಪಿಸುವ ಮಂಡಳದಲ್ಲಿ ಇವಂಗೆ ಸ್ಥಾನ ದೊರೆತು ದಲ್ಲದೆ ೧೯೪೪ರಲ್ಲಿ ಸಂರಕ್ಷಣ ಖಾತೆಯಲ್ಲಿ ಉನ್ನತವಾದ ಹೊಣೆಗಾರಿಕೆಯ ಸ್ಥಾನಕೊಡಲ್ಪಟ್ಟತು. ಸ್ಟಾಲಿನ್ನರ ಮರಣಾನಂತರ, ೧೯೫೩ರಲ್ಲಿ, ರಶ್ಯದ ಸಂರಕ್ಷಣ ಮಂತ್ರಿಯಾಗಿಯೂ ಸಚಿವ ಸಂಪುಟದ ಉಪಾಧ್ಯಕ್ಷರಾಗಿಯೂ ಅವರು ನೇಮಕಗೊಂಡರು.

ಮಿ. ಮೆಲೆಂಕಾಫರ ಪತನದ ತರುವಾಯ ಮಿ. ಬುಲ್ಗಾನಿನ್ನರನ್ನು ಸಚಿವ ಸಂಪುಟದ ಅಧ್ಯಕ್ಷರಾಗಿ ೧೯೫೫ರಲ್ಲಿ ನೇಮಿಸಲಾಯಿತು. ಅವರು ರಾಷ್ಟ್ರದ ಭದ್ರತೆ ಮತ್ತು ಸಂರಕ್ಷಣೆಗಾಗಿಮಾಡಿದ ಸಾಹಸ ಪೂರ್ಣ ಕಾರ್ಯಗಳ ಸ್ತೋತ್ರರ್ಥ ಅನೇಕ ಶ್ರೀಸ್ಥೆ ವರ್ಗದ ಪ್ರಶಸ್ತಿಗಳನ್ನು ಕೊಡಲಾಗಿದೆ. ಇವರು ಸಾಂಸಾರಿಕ ಜೀವನವನ್ನು ಶಾಂತವಾಗಿ ನಡೆಸುತ್ತಿದ್ದಾರೆ. ಭಾರತ ಪ್ರವಾಸದ ಕಾಲದಲ್ಲಿ ತನ್ನ ಹೆಂಡತಿಯನ್ನು ಕಟ್ಟಿಕೊಂಡು ಬರದಿರುವ ಪ್ಪ ಕಂಪ್ರದಾಯ ಪ್ರಿಯತೆಯನ್ನು ತೋರಿಸಿದ್ದಾರೆ. ಆದರೆ, ಕಮ್ಯುನಿಸ್ಟೇತರ ರಾಷ್ಟ್ರಗಳಿಗೆ ಸೌಹಾರ್ದ ಸಂದರ್ಶನ ನೀಡುವ ಬಟ್ಟಿಗೆ ಹಿಂದಿನವರ ಪರಂಪರೆಯನ್ನು ಗಣಿಸದೆ ಮುನ್ನಡೆದ ಸಾಹಸಿ ಅವರೆನ್ನುವುದೂ ನಿಜ.

●

ಸಂಸತ್ತಿನಲ್ಲಿ ರಶ್ಯದ ವರಿಷ್ಠರು

ಸಂಸತ್ತಿನ ಉಭಯ ಸಭೆಗಳ ಅಧಿವೇಶನವು ಇದೇ ಸೋಮವಾರದಿಂದ ಪ್ರಾರಂಭವಾಗಿದೆ. ಇದರ ಕಾರ್ಯಕಲಾಪಗಳನ್ನು ಆಸಕ್ತಿಯಿಂದ ನಿರೀಕ್ಷಿಸುವುದರಲ್ಲಿ ರಶ್ಯದ ಧುರೀಣರು ಸ್ವಲ್ಪ ಸಮಯವನ್ನು ಕಳೆದರು; ಅಲ್ಲದೆ, ಸದಸ್ಯರನ್ನುದ್ದೇಶಿಸಿ ಸಂಯುಕ್ತ ಸಭೆಯಲ್ಲಿ ಭಾಷಣವನ್ನೂ ಮಾಡಿದರು.

ನಮ್ಮ ದೇಶದ ಆರ್ಥಿಕ ಹಾಗು ವೈಜ್ಞಾನಿಕ ಪ್ರಗತಿಗೆ ರಶ್ಯದ ಅನುಭವ ಮತ್ತು ಸಹಾಯ ಕೊಡುವ ಭರವಸೆಯನ್ನು ಮಿ. ಬುಲ್ಗಾನಿನ್ ನೀಡಿದರು. ಲೋಕ ಶಾಂತಿ ಮತ್ತು ಜನತೆಯ ಸುಖ ಸಂತೋಷ ಸಂವರ್ಧನೆಯ ಧ್ಯೇಯವು ಉಭಯ ರಾಷ್ಟ್ರಗಳಿಗೂ ಸಮಾನವೆನಿಸಿದೆ ಎಂದು ಸಾರಿ, ಪರಸ್ಪರ ಸ್ನೇಹ ಬೆಳೆಯಲಿ ಎಂದೆರು.

ಮಿ ಖ್ರುಶ್ಚೇಫರೂ ಈ ಸಂದರ್ಭದಲ್ಲಿ ಮಾತನಾಡಿ, "ರಶ್ಯದ ಜನತೆಯು ತಮ್ಮ ದೇಶದ ತತ್ವ ಮತ್ತು ಸಾರ್ವಜನಿಕ ಪಂಪ್ರದಾಯಗಳನ್ನು ಸ್ವೀಕರಿಸಬೇಕೆಂದು ಯಾರನ್ನೂ ಒತ್ತಾಯಿಸದು. ನಾವು ಮಾಡುವ ಸಹಾಯ ನಿಸ್ವಾರ್ಥ ಬುದ್ಧಿಯಿಂದ ಪ್ರೇರಿತವಾಗಿದೆ; ಅದು ಸ್ನೇಹದಿಂದ ಕೂಡಿದೆ" ಎಂದರು.

ಸಂಯುಕ್ತ ಕರ್ನಾಟಕ ರಾಜ್ಯದ ನಿರ್ಮಾಣ

ಕಾಂಗ್ರೆಸಿನ ಉಪಸಮಿತಿಯಿಂದ ಒಪ್ಪಿಗೆ

ಅಖಿಲ ಭಾರತ ಕಾಂಗ್ರೆಸು ಸಮಿತಿಯಿಂದ ನೇಮಕವಾಗಿರುವ ಶ್ರೀಗಳಾದ ನೆಹರು, ಪಂತ್, ಢೇಬರ್ ಮತ್ತು ಮೌಲನಾ ಆಝಾದರಿಂದ ಕೂಡಿದ ಉನ್ನತಾಧಿಕಾರ ಸಂಪನ್ನ ಉಪಸಮಿತಿಯು ಮೈಸೂರಿನ್ನೊಳಗೊಂಡ ಸಂಯುಕ್ತ ಕರ್ನಾಟಕ ರಾಜ್ಯದ ರಚನೆಯಾಗಬೇಕೆಂಬ ಫಜಲಾಲಿ ಆಯೋಗದ ಸೂಚನೆಯನ್ನು ಕೆಲವು ಉಚಿತ ಗಡಿಬದಲಾವಣೆಗಳೊಂದಿಗೆ ಸ್ವೀಕರಿಸಲು ತೀರ್ಮಾನಿಸಿದೆ. ಮೈಸೂರಿನ ಶಾಸನ ಸಭೆಯಲ್ಲಿ ಫಜಲಾಲಿ ಆಯೋಗದ ವರದಿಯ ಮೇಲೆ ಚರ್ಚೆ ನಡೆಯುತ್ತಿದ್ದಂತೆಯೆ ಕಾಂಗ್ರೆಸಿನ ವರಿಷ್ಠರು ಈ ಒಮ್ಮತದ ತೀರ್ಮಾನವನ್ನು ಕೈಗೊಂಡಿದ್ದಾರೆ.

ಹಿನ್ನೆಲೆಯ ವಿವರಣೆ

ಧುರೀಣರ ನಿರ್ಣಯವು ಹೀಗೆ ಹೇಳುತ್ತದೆ: "ಕಳೆದ ಅಕ್ಟೋಬರ ತಿಂಗಳ ೧೩ ಮತ್ತು ೧೪ನೇ ತಾರೀಕು ನಡೆದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಕರ್ನಾಟಕ ರಾಜ್ಯ ರಚನೆಯ ಕುರಿತು ಫಜಲಾಲಿ ಆಯೋಗ ಮಾಡಿದ ಸೂಚನೆಗಳನ್ನೂ ಇತರ ವಿಷಯಗಳೊಂದಿಗೆ ಆಲೋಚಿಸಲಾಯಿತು. ಈ ವಿಷಯವನ್ನು ಸಂಪೂರ್ಣವಾಗಿ ವಿವೇಚಿಸಿದ ಬಳಿಕ ಹಾಗು ಸಾರ್ವಜನಿಕ ಪ್ರತಿಕ್ರಿಯೆಗಳನ್ನು ನಿರೀಕ್ಷಿಸಿದ ತರುವಾಯ ಗಡಿ ಬದಲಾವಣೆಗಳಿಗೆ ಒಳಪಟ್ಟು ಆಯೋಗದ ವರದಿಯಲ್ಲಿ ಸೂಚಿಸಲಾದಂತೆ ಕರ್ನಾಟಕ ರಾಜ್ಯವನ್ನು ರಚಿಸಬೇಕೆಂದು ಕಾರ್ಯಕಾರಿ ಸಮಿತಿ ಒಪ್ಪಿತು. ಆದಾಗ್ಯೂ ಕಾಂಗ್ರೆಸ್ ಅಧ್ಯಕ್ಷರು ಮೈಸೂರಿನ ಧುರೀಣರೊಡನೆ ನಡೆಸಿದ ಸವಾಲೋಚನೆಗಳನ್ನು ಗಮನದಲ್ಲಿಟ್ಟುಕೊಂಡು ಈ ನಿಶ್ಚಯವನ್ನು ತುಸುತಡವಾಗಿ, ಮೈಸೂರು ಮತ್ತು ಕರ್ನಾಟಕದ ಕೆಲಸಗಾರರು ಸರ್ವಸಮ್ಮತವಾದ ತೀರ್ಮಾನಕ್ಕೆ ಬರಲು ನೆರವಾಗುವಂತೆ, ಸಾರಬೇಕೆಂದು ಈ ಉಪಸಮಿತಿಗೆ ಅಧಿಕಾರ ನೀಡಲ್ಪಟ್ಟತು.

ವರಿಷ್ಠರ ನಿಶ್ಚಯ

"ಕಾರ್ಯಕಾರಿ ಸಮಿತಿಯು ಸಭೆ ಸೇರಿದ ಬಳಿಕ ಕರ್ನಾಟಕದಿಂದಲೂ ಮೈಸೂರಿನಿಂದಲೂ ಕೆಲವು ಶಿಷ್ಟ ಮಂಡಳಗಳು ಉಪಸಮಿತಿಯ ಸದಸ್ಯರನ್ನು ಭೇಟಿ ಮಾಡಿವೆ. ಹೀಗೆ ಉಪಸಮಿತಿಗೆ ಅವರ ದೃಷ್ಟಿಕೋಣವನ್ನು ವಿವದವಾಗಿ ತಿಳಿಯುವ ಅವಕಾಶ ಲಭಿಸಿದೆ. ಈಗ ಆಯೋಗದ ಸೂಚನೆಗಳನ್ನು ಸ್ವೀಕರಿಸುವುದೇ ಮೈಸೂರಿನ ಜನತೆಯ ಮತ್ತು ಇಡಿಯಾಗಿ ದೇಶದ ಅಭ್ಯುದಯದ ದೃಷ್ಟಿಯಿಂದ ಉಚಿತವೆಂದು ಕಾರ್ಯಕಾರಿ ಸಮಿತಿಯು ಒಂದು ಉಪಸಮಿತಿಯನ್ನಿತ್ತಿರುವ ಉದ್ದೇಶವನ್ನು ಈಡೇರಿಸಿದೆ. ಉಪಸಮಿತಿಯು ಈ ನಿರ್ಣಯವನ್ನು ಒಮ್ಮತದಿಂದ ಕೈಗೊಂಡಿದೆ. ಈ ನಿರ್ಣಯವನ್ನು ಕಾರ್ಯಕಾರಿ ಸಮಿತಿಯ ಮುಂದಿಟ್ಟಾಗ ಅದು ಇದಕ್ಕೆ ಸಂಪೂರ್ಣ ಸಮ್ಮತಿಯನ್ನು ಕೊಡುವುದೆಂಬ ವಿಶ್ವಾಸ ನಮಗಿದೆ. ಮೈಸೂರಿನ ಶಾಸನ ಸಭೆಯು ಫಜಲಾಲಿ ಆಯೋಗದ ವರದಿಯ ಕುರಿತು ನಿರ್ಣಯವನ್ನು ಸ್ವೀಕರಿಸುವಾಗ ಕಾಂಗ್ರೆಸ್ ಸದಸ್ಯರು ಉಪಸಮಿತಿಯ ವರಿಷ್ಠರು ಕಾರ್ಯಕಾರಿ ಸಮಿತಿಯ ಪರವಾಗಿ ಸ್ವೀಕರಿಸಿರುವ ನಿರ್ಣಯದ ವಿರುದ್ಧ ಮತ ಕೊಡಲಾಗದೆಂದೂ ಆತ್ಮ ಸಾಕ್ಷಿಗೆ ಕಟ್ಟು ಬಿದ್ದು ಅನುಕೂಲ ಮತಕೊಡಲು ಸಾಧ್ಯವಿಲ್ಲದವರು ತಾಟಸ್ಥ್ಯವನ್ನು ವಹಿಸಬೇಕೆಂದೂ ಈ ಆದೇಶ ತಿಳಿಸುತ್ತದೆ.

ಆಕ್ಷೇಪ ಪ್ರಕಟಣೆ

ಎರಡು ಕರ್ನಾಟಕಗಳ ಪ್ರತಿನಿಧಿಗಳು ಈ ನಿರ್ಬಂಧವನ್ನು ಶಾಸನ ಸಭಾ ಸದಸ್ಯರಿಗೆ ಮತದಾನ ಮಾಡಲಿರುವ ಅಧಿಕಾರದ ಅವಹೇಳನೆ ಎಂದು ಕರೆದಿರುವಂತಿಲ್ಲದೆ, ಇದು ಶಾಸನಸಭೆಯು ಫಜಲಾಲಿ ಆಯೋಗದ ಚರ್ಚೆ ನಡೆಸಲು ಪ್ರಾರಂಭಿಸುವಾಗ ಮುಖ್ಯ ಮಂತ್ರಿಗಳು ನೀಡಿದ ಸುತದಾನ ಸ್ವಾತಂತ್ರ್ಯದ ಅತ್ಯಾವಶ್ಯಕತೆಗೆ ವಿರುದ್ಧವಾದ ಕ್ರಮವೆಂದೂ ಆಕ್ಷೇಪಿಸಿದ್ದಾರೆ. ಮಂತ್ರಿ ಶ್ರೀ ಕಡಿದಾಳ ಮಂಜಪ್ಪ ಮತ್ತು ಶ್ರೀ ಎ. ಜಿ. ರಾಮಚಂದ್ರರಾಯರೂ ಮೈಸೂರು ಪ್ರದೇಶ ಕಾಂಗ್ರೆಸಿನ ಸಾಜಿಕ ಅಧ್ಯಕ್ಷ ಶ್ರೀ ವೀರಣ್ಣ ಸೌಹಾರ್ದ ಕೇಳ್ಕೆಕ್ಕೆ ವಹಿಸಿ ಸದಾನಂದ ಪಿ ವಾಗಿ ಕಾಂಗ್ರೆಸ್ ಸದಸ್ಯರ ವಿಶಿಷ್ಟದೃಷ್ಟಿಕೋಣವನ್ನು ಈ ಆದೇಶದ ಕಾರಣ ಉಪಸಮಿತಿಯ ನಿರ್ಣಯದವಿರುದ್ಧಕೆಲಸಮಾಡಲಾರೆವೆಂದು ತಿಳಿಸುತ್ತಾರೆ.

ಪ್ರದೇಶ ಕಾಂಗ್ರೆಸಿನಲ್ಲಿ

ಉಪಸಮಿತಿಯ ಈ ನಿರ್ಣಯವು ಬಹುಮಂದಿಗೆ ಸ್ವೀಕಾರವಾಗುವುದಕ್ಕೆ ಕೆಲವು ದಿನಕ್ಕೆ ಮುಂಚೆ ಮೈಸೂರು ಪ್ರದೇಶ ಕಾಂಗ್ರೆಸಿನ ಈಗಿನ ಅಧ್ಯಕ್ಷ ಶ್ರೀ ಜೆನ್ನ ಮ್ಯಾಸವರು ವಿರುದ್ಧ ಮೈಸೂರು ಸಹಿತ ವಾದ ಕರ್ನಾಟಕ ರಾಜ್ಯ ರಚನೆಯನ್ನು ಮಾಡಾವ ದೈತ ನಿರ್ಣಾರ ಕೈಗೊಂಡಿರುವೆಂ. ಎಳಸಿ. ವಿಸ್ತಿರ್ಣ ಈ ಸಂದರ್ಭದಲ್ಲಿ ಕಾರ್ಯಕಾರಿಯಾಗಿಯೂ ಒಗ್ಗಟ್ಟಿನಿಂದಲಾ ಕಾರ್ಯ ಕೈಗೊಳ್ಳುವ ಮೇಲೆ ವಿಷಯ ತಾವು ಸಹೋದ್ಯೋಗಿಗಳೆಲ್ಲ ವಿಶ್ವಾಸಕ್ಕೆ ತೆಗೆದುಕೊಂಡಿದ್ದೆ. ಸಾಧ್ಯವಾದಷ್ಟು ಬೇಗ ಸಾಧಿಸಲು ಪ್ರಯತ್ನಿಸಬೇಕೆಂಬ ಮೇಲೆ ವಿಷಯವನ್ನು ಮಾಡಿದ್ದಾಗಿಯೂ ಇದು ಪ್ರಕಟಿಸಿದ್ದಾರೆ. ಮೈಸೂರಿನ ಪ್ರದೇಶ ಕಾಂಗ್ರೆಸಿನಲ್ಲಿ ಈಗಲೂ ಭಿನ್ನಾಭಿಪ್ರಾಯ ಮಾಯವಾಗಿಲ್ಲ. ಉಪಸಮಿತಿಯ ನಿರ್ಣಯವನ್ನು ಎಲ್ಲರೂ ಒಪ್ಪಿಕೊಳ್ಳುವಂತೆ ಸಮಯಾವಕಾಶ ಕೊಡಲು ಪ್ರದೇಶ ಕಾಂಗ್ರೆಸಿನ ಕಾರ್ಯಕಾರಿ ಸಮಿತಿ ನಿರ್ಣಯವನ್ನು ಇವೇ ೨೬ನೇ ತಾರೀಕಿನ ಮುಂದೂಡಲಾಗಿದೆ. ಮುಂದಿನ ಪ್ರದೇಶ ಕಾಂಗ್ರೆಸಿನ ವಿಶೇಷ ಸಭೆ ಜರಗುತ್ತದೆ.

ವಿರೋಧಕ್ಕೆ ಬೆಂಬಲ

ಮೈಸೂರಿನ ಶಾಸನ ಸಭೆಯ ಉಭಯ ಮನೆಗಳಲ್ಲಿಯೂ ೧೬ನೇ ತಾರೀಕಿನಿಂದ ಫಜಲಾಲಿ ಆಯೋಗದ ಕುರಿತು ಚರ್ಚೆ ನಡೆಯತೊಡಗಿ ೨೦ನೇ ತಾರೀಕಿನಂದು ಚರ್ಚೆಯನ್ನು ೨೨ನೇ ತಾರೀಕಿನ ವರೆಗೆ ಮುಂದು ಹಾಕಲಾಯಿತು. ದರಂಬರ ೧೯ನೇ ತಾರೀಕಿನಂದು ಶಾಸನ ಸಭೆಯು ತನ್ನ ಅಭಿಪ್ರಾಯವೇನೆಂದು ತಿಳಿಸಲಿದೆ. ಪ್ರದೇಶ ಕಾಂಗ್ರೆಸಿನ ಅಭಿಪ್ರಾಯವೇನೆಂಬುದನ್ನು ತಿಳಿದು, ತದನಂತರ ಗುಣಾವಗುಣ ನಿರ್ಣಯವನ್ನು ಶಾಸನಸಭೆಯು ಉಭಯ ಮನೆಗಳಲ್ಲಿ ಮಂಡಿಸಿ, ನೇರವಾದ ಮತದಾನ ನಡೆಸಬೇಕೆಂದು ಸಾಮಾನ್ಯವಾಗಿ ಅಭಿಪ್ರಾಯಪಟ್ಟಿದ್ದರೂ ಕಾಂಗ್ರೆಸಾಧ್ಯಕ್ಷರ ಆದೇಶವು ಸದಸ್ಯರ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅಂಕುಶವನ್ನು ಹಾಕಿರುವುದರಿಂದ ಈ ನಿರ್ಣಯ ಮೊರೆಗಾಮಿ ಯಾದ ಪ್ರಯೋಜನ ಅಧವಾ ಪರಿಣಾಮವೇನನ್ನೂ ಮಾಡಲಾರದೆನ್ನಬೇಕಾಗುತ್ತದೆ. ಆದೇನೇ ಇರಲಿ—ಇಷ್ಟರ ವರೆಗೆ ಮಾತನಾಡಿದ ಒಟ್ಟು ೩೪ ಮಂದಿಯಲ್ಲಿ ೧೧ ಮಂದಿ ಮಾತ್ರ ಸಂಯುಕ್ತ ಕರ್ನಾಟಕವನ್ನು ವಿರೋಧಿಸಿದ್ದಾರೆ ಎಂಬುದು ಸ್ಪಷ್ಟವಾಗಿದೆ.

ಮುಖ್ಯ ಮಂತ್ರಿಗಳ ವಿನ್ನಹ

ಶ್ರೀ. ಹನುಮಂತಯ್ಯನವರು ಫಜಲಾಲಿ ಆಯೋಗದ ಕುರಿತು ಚರ್ಚೆ ನಡೆಯಬೇಕೆಂಬ ಸೂಚನೆಯನ್ನು ಮಂಡಿಸುತ್ತಾ,

(ಅನೇಪುಟ ಕೋಡಿರಿ)

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
(ಶೆಡ್ಯೂಲ್ಡ್ ಬ್ಯಾಂಕು)
ಪ್ರಕಟಣೆ
ಬ್ಯಾಂಕಿನ ರಾಪೆಯೊಂದು ಮಧುರೆಯಲ್ಲಿ
ಸದ್ಯದಲ್ಲಿಯೇ ತೆರೆಯಲ್ಪಡಲಿದೆ.
THE CANARA BANKING CORPORATION LIMITED
Estd.- 1906] [H. O. UDIPI (S.India).

NAVAYUGA
Popular Kannada Weekly
Founder:—
Sri **A. B. SHETTY**, *M.L.A.*
Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೪-೧೧-'೫೫	೧೩

ರಶ್ಯದೊಡನೆ ಸ್ನೇಹ

ಎಲ್ಲವೂ ತಿರುವು-ಮುರುವಾಗಿರುವ ಇಂದಿನ ರಾಜಕೀಯ ಜಗತ್ತನ್ನು ಸರಿಯಾಗಿ ತಿಳಿದುಕೊಳ್ಳಲು ಪ್ರತಿದಿನ ವ್ಯಾಪಕಕಾಲ ಶೀರ್ಷಾಸನ ಮಾಡುತ್ತಿರುವ ಪ್ರಧಾನಿ ನೆಹರುಗಳಿಗಷ್ಟೇ ಸಾಧ್ಯವಾಗಿದೆ —ಎಂಬ ನಾಗಪುರದ ವಿದ್ವಾಂಸರೊಬ್ಬರ ಅಭಿಪ್ರಾಯದ ವಿನೋದಾಂಶಕ್ಕೆ ತಲೆ ತೂಗುವುದಕ್ಕಿಂತಲೂ ಆದರ ತಿರುಳನ್ನು ಮನನಮಾಡಿಕೊಂಡರೆ ನಮ್ಮ ಮುಂದಾಳುವಿನ ಯೋಗ್ಯತೆಯ ಬಗ್ಗೆ ಹೆಮ್ಮೆಯುಂಟಾಗುತ್ತದೆ. ಕೊರಿಯ ಯುದ್ಧ ಪ್ರಾರಂಭವಾದ (೧೯೫೦)ಗಳಿಗೆಯಲ್ಲಿ ಟ್ರೂಮನ್ ಮತ್ತು ಸ್ಟಾಲಿನ್ ಮಹಾಶಯರುಗಳಿಗೆ ನೈತಿಕ ಶಕ್ತಿಯ ಬಲದಿಂದ ಪತ್ರ ಬರೆದು, ಯುದ್ಧವಿರಾಮಕ್ಕೆ ವರ್ಚಸ್ಸನ್ನು ಪಯೋಗಿಸಬೇಕೆಂದ ಭಾರತದ ಪ್ರಧಾನಿಗಳ ಮುನ್ನೋಟವನ್ನು ಆಗ ಧಿಕ್ಕರಿಸಿದವರೇ ಇಂದು (೧೯೫೫) ಪೆಟ್ಟಿಕೊಳ್ಳುತ್ತಿದ್ದಾರೆ! ಕಳೆದ ಏದು ವರ್ಷಗಳಲ್ಲಿ ಭಾರತದ ಸ್ಥಾನಮಾನವು ಆಷ್ಟು ಉನ್ನತಿಯನ್ನು ಹೊಂದಿದೆ. ಪಂಚ ಶೀಲಗಳು ರಾಷ್ಟ್ರಗಳೊಳಗಿನ ಪರಸ್ಪರ ವ್ಯವಹಾರ ಸಂಬಂಧವನ್ನು ಸರ್ವಸಮ್ಮತವಾದ, ಗೌರವಾರ್ಹ ಮಟ್ಟದಲ್ಲಿಡುವುದಕ್ಕೆ ನೆರವಾಗಿವೆ ಎಂದು ಬೇರೆ ಬೇರೆ ದೇಶದ ಧುರೀಣರೇಗ ಒಬ್ಬೊಬ್ಬರೇ ಒಪ್ಪಿಕೊಳ್ಳುತ್ತಿದ್ದಾರೆ ಶಾಂತಿಗಾಗಿ ಆಶೆ ಹೊಂದಿದ ಜನರಿಗೆ ಜಲ ಜನಕ ಬಾಂಬು ಇತ್ಯಾದಿ ಯುದ್ಧ ಪ್ರಚೋದಕ ವಸ್ತುಗಳ ಕುರಿತಾಗಿಯೂ ಪೂರ್ವ-ಪಶ್ಚಿಮ ವಿರಸ ಇತ್ಯಾದಿ ವಿಷಯಗಳ ಕುರಿತಾಗಿಯೂ ಜಾಗುಸ್ಪೆ ಹುಟ್ಟಿದೆ. ಪ್ರತ್ಯಕ್ಷ ಯುದ್ಧದಷ್ಟೇ ಪ್ರಚ್ಛನ್ನ ಯುದ್ಧವೂ ಕೆಡುಕೆಂದು ತೋರಿದೆ. ನೈಜಿಜ್ಞಾನಿಕ ಸಂಶೋಧನೆಗಳ ಕೈನೆಯಿಂದ ಜಗತ್ತು ತೀರ ಹತ್ತಿರವಾಗುತ್ತಿರುವ ಈ ಶುಭ ದಿನಗಳಲ್ಲಿ ಒಟ್ಟಿಗೆ ಬೆರೆಯಲು ಜನರನ್ನು ಬಿಡದಿರುವಷ್ಟು ಪ್ರಬಲವಾದ ಮಾನಸಿಕ ಕ್ಲೇಶ ಭಾವನೆಯಿಂದಲೂ ಅವಾಯವಿದೆಯೆಂದು ಖಚಿತವಾಗಿದೆ ಕೇವಲ ಕ್ಷೋಭೆ ಅಸಹಾಯತೆ, ನಿರ್ವಿಣ್ಣತೆಗಳಿಂದ ಜರ್ಜರಿತವಾಗಿರುವ ರಾಜಕೀಯ ಜಗತ್ತಿನ ಪಾತ್ರಧಾರಿಗಳಲ್ಲಿ ಪ್ರತಿಯೊಬ್ಬರಿಗೂ ಮುಖವುಳಿಸಿಕೊಂಡು ಮಯಾದೆಯಿಂದ ಬದುಕುವ ಮಾರ್ಗ ತೋರಿಸಿ ಕೊಡುವವರಿದ್ದರೆ....?—ಎನ್ನುತ್ತಿದ್ದಾಗ ಭಾರತದ ಧುರೀಣ ಶ್ರೀ ನೆಹರು ಶಾಂತಿದೂತನಾಗಿ ಕಾಣಿಸಿಕೊಂಡಿದಾರೆ. ಯುದ್ಧ ಪ್ರಚೋದಕ ಶಕ್ತಿಗಳೊಡನೆ ಸಹಕರಿಸದೆ, ವಿಧಾಯಕ ಕಾರ್ಯಗಳಲ್ಲಿಯಷ್ಟೇ ಭಾಗವಹಿಸಿ ಶಾಂತಿ ಸಾಧಕ ಬಲಗಳನ್ನು ಸಂಘಟಿಸುವುದಕ್ಕೂ ಪೀಡಿತ ಮಾನವತೆಯ ಶುಭ ಸಾಧಿಸುವುದಕ್ಕೂ ಅವರು ಕಂಕಣ ತೊಟ್ಟು ಸಿದ್ಧರಾಗಿ ನಿಂತಿದ್ದಾರೆ. ಜಗತ್ತಿನಲ್ಲಿ ಯಾವ ದಾದರೊಂದು ಬಣ ಅಥವಾ ಗುಂಪಿಗೆ ಸೇರದೆ ರಾಷ್ಟ್ರವೊಂದು ಬದುಕಿರುವುದೇ ಅಧಿಹೀನವೆಂದಿದ್ದರೆ "ನಮ್ಮನ್ನು ಶಾಂತಿ ಶಿಬಿರದ ಸದಸ್ಯರೆಂದು ಬೇಕಾದರೆ ಭಾವಿಸಿರಿ" ಎಂದು ಶ್ರೀ ನೆಹರು ಮೊನ್ನೆ ರಶ್ಯದ ಧುರೀಣರ ಮುಂದೆ ಖಾಮಾಣಿಕತೆಯಿಂದ ಹೇಳಿದ್ದಾರೆ. ಪ್ರಬಲ ರಾಷ್ಟ್ರಗಳಲ್ಲಿ ಒಂದೆನಿಸಿದರ ಶೃವು ಸ್ಟಾಲಿನ್ನರಮರಣಾನಂತರ ಅನುಸರಿಸುತ್ತಿರುವ ಉದಾರ ನೀತಿಗೆ ಪ್ರಚೋದನೆಯೂ ಆ ನೀತಿಯ ಕಾರ್ಯಾಚರಣೆಗೆ ಅನುಕೂಲವಾದ ವಾತಾವರಣದ ನಿರ್ಮಾಣವೂ ಭಾರತದ ಸಹಾನು ಭೂತಿಯಿಂದಲೇ ದೊರಕಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಮಿ. ಖ್ರುಷ್ಚೆವ್ ರೇ ಇದನ್ನು ಒಪ್ಪಿದ್ದಾರೆ. "ನಾವು ಹತ್ತಿರದ,ನೆರೆಹೊರೆಯ ರಾಷ್ಟ್ರಗಳಾಗಿದ್ದರೂ ಇಪ್ಪತ್ತರ ವರೆಗೆ ದೂರವಿದ್ದೆವು; ಪ್ರಧಾನಿ ನೆಹರುಗಳೆ" ನಮ್ಮನ್ನು ಸವಿಾಪಕ್ಕೆ ಬರುವಂತೆ ಮಾಡಿದರು" ಎಂದು ಹೊಸ ದೆಹಲಿಯಲ್ಲಿ ಅವರು ಮೊನ್ನೆ ಹೇಳಿದರು. ಶಾಂತಿ ಪಾಲನೆಗಾಗಿಯೂ ಆರ್ಥಿಕೋನ್ನತಿಗಾಗಿಯೂ ಭಾರತ ಶೈಗೊಂಡಿರ ವ ಪ್ರಯತ್ನಗಳ ಕುರಿತು ರಶ್ಯದ ಪ್ರಧಾನಿ ಮಿ. ಬುಲ್ಗಾನಿನ್ ಹಾಗು ಆ ದೇಶದ ರಾಜಕೀಯ ಪಕ್ಷದ ಮುಂದಾಳು ಮಿ. ಖ್ರುಷ್ಚೆವ್ ಪ್ರಶಂಸೆಯ ಮಾತು-ಗಳನ್ನೆ ಆಡಿದ್ದಾರೆ; ಭಾಕ್ರಾ ನಂಗಲಿನ ಆಣೆಕಟ್ಟಿಗೆ ಭೇಟಿ ನೀಡಿದಾಗ "ಇದನ್ನು ಕಂಡು ರಶ್ಯದ ಕ್ರಾಂತಿಯು ಬಳಿಕದ ಮೊದಲ ದಿನಗಳಲ್ಲಿ ನಾವು ಕೈಗೊಂಡ ಯೋಜನೆಗಳ ನೆನಪಾಗುತ್ತಿದೆ" ಎಂದು ಬುಲ್ಗಾನಿನ್ನರೂ "ಹಾವು ಹೆಜ್ಜೆಗಳ ರಾಜ್ಯ ಭಾರತವೆಂದು ಹಿಂದೆ ಹೇಳುತ್ತಿದ್ದರು; ಆದರೆ ಇಲ್ಲೋ — ಈ ಆಣೆಕಟ್ಟೆಯಿಂದ ಪ್ರತಿಬಿಂಬಿತವಾಗುತ್ತಿರುವುದು ನವಭಾರತ!" ಎಂದು ಖ್ರುಷ್ಚೆವರೂ ಶ್ಲಾಘಿಸಿದರು. ಸಂಸ್ಕೃತಿ ಮತ್ತು ಸಂಪ್ರದಾಯಗಳ ಕುರಿತಾಗಿಯೂ ರಶ್ಯದ ಧುರೀಣದ್ವಯರಿಂದ ಮೆಚ್ಚಿಕೆಯ ಮಾತುಗಳೇ ಬಂದಿವೆ. ಈ ಮೆಚ್ಚಿಕೆ ಕೇವಲ ಔಪಚಾರಿಕ ಸ್ವರೂಪದ್ದಲ್ಲ— ಹೃದಯಾಂತರಾಳದ್ದಿರುವುದನ್ನು ಖ್ರುಷ್ಚೆವು ಕೆಲವು ಸಂದರ್ಭಗಳಲ್ಲಿ ನುಡಿದ ವ್ಯಂಗ್ಯೋಕ್ತಿಗಳ ಮೂಲಿಂದಲೇ ತರ್ಕಿಸಿಬಹುದು. ಸಾಮಾಜಿಕ ಸಂಪ್ರದಾಯ ಮತ್ತು ರಾಜಕೀಯ ಪದ್ಧತಿಗಳು ಬೇರೆ ಬೇರೆಯಾಗಿದ್ದರೂ ಪ್ರೇಕಿಯಿಂದ ಜೀವನ ನಡೆಸಲು ಸಾಧ್ಯವೆಂದವರು ಒಪ್ಪಿದ್ದಾರೆ. ಸಾಮ್ಯವಾದಿ ತತ್ವವನ್ನು ಬೇರೆ ದೇಶಗಳ ಮೇಲೆ ಒತ್ತಾಯದಿಂದ ಹೇರುವುದಕ್ಕೆ ಈಗ ಅವಕಾಶವಿಲ್ಲವೆಂದೂ ಅವರು ಮನಗಂಡಿದ್ದಾರೆ. ಜನರ ಪ್ರೀತಿ ಸಂಪಾದಿಸಲು ಅವರ ಅಂತಃಕರಣವನ್ನು ಗೆದ್ದುಕೊಳ್ಳುವುದೊಂದೇ ಮಾರ್ಗವೆಂದು ನಂಬತೊಡಗಿದ್ದಾರೆ. ಈ ನಂಬಿಕೆಯೇ ದೂರಗಾಮಿಯಾದ ಸತ್ಫರಿಣಾಮ ಮಾಡಬಲ್ಲುದೆಂದು ಒಪ್ಪದಿರುವುದು ಸಾಧ್ಯವಿಲ್ಲ. ಆದುದರಿಂದ ರಶ್ಯವು ವಿಶ್ವದ ರಾಷ್ಟ್ರಗಳಲ್ಲಿ ಚೀನಕ್ಕೆ ಎರಡನೆಯದಾಗಿ ವಿಸ್ತೀರ್ಣ ಮತ್ತು ಜನಸಂಖ್ಯೆಯಲ್ಲಿಯೂ ನೈತಿಕ ವರ್ಚಸ್ಸಿನ ನೈಷ್ಠಿಯಿಂದ ಜಗತ್ತಿನಲ್ಲಿಯೇ ಶ್ರೇಷ್ಠವಾದ ಸ್ಥಾನದಲ್ಲಿಯೂ ನಿಂತಿರುವ ಭಾರತದ ವಿಶ್ವಾಸ ಗಳಿಸಲು ಕವಣಿಸಿದೆ. ಕಮ್ಯುನಿಷ್ಟ್ ಪ್ರಚಾರದಲ್ಲಿ ಆಸಕ್ತಿಯನ್ನು ವಹಿಸದೆ ಭಾರತದ ಯೋಜನೆಗಳ ಯಶಸ್ಸಿಗೆ ಪೂರಕವಾಗುವ ಉದಾರ ದೃಷ್ಟಿಕೋನವನ್ನು ರಶ್ಯದ ನಾಯಕರು ಇಟ್ಟುಕೊಂಡಿದ್ದಾರೆ. ಏಶ್ಯದಲ್ಲಿ ಹೀಗೆ ಸ್ನೇಹಿತರನ್ನು ಮಾಡಿಕೊಳ್ಳಲು ಹೊರಟಿದ್ದಾರೆ. ಇದನ್ನು ಕಂಡು ಅಮೇರಿಕ ಕರುಬಬಹುದು; ವಾಕ್ಚಾತುರ್ಯ ಜಗತ್ತಿನ ಪ್ರಬಲ ರಾಷ್ಟ್ರಗಳು ತಮ್ಮ ಯೋಜನೆಗಳ ಮೇಲೆ ರಶ್ಯದ ಹೊಸ ನಡವಳಿಕೆಯಿಂದುಂಟಾಗುವ ಆಘಾತಕ್ಕಾಗಿ ಕಳವಳ ತೋರಿಸಬಹುದು. ಆದರೆ, ಅಮೇರಿಕ, ಬ್ರಿಟನ್ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳಂದ ನೆರವನ್ನು ರಾಜಕೀಯ ಆಧವಾ ಬೇರಾವುದೇ ವಿಷಮ ಸ್ವರೂಪದ ಕೊಂಡಿಗಳಲ್ಲದೆ, ಸ್ನೇಹಿ ಪರತೆಯೊಂದನ್ನೆ ಆಧರಿಸಿ ಸ್ವೀಕರಿಸಿದಂತೆ ರಶ್ಯ ಮತ್ತಿತರ ರಾಷ್ಟ್ರಗಳಿಂದಲೂ ಬರಮಾಡಿಕೊಳ್ಳಬಹುದೆಂದು ಭಾರತ ಭಾವಿಸಿದೆ; ಏಶ್ಯದ ಅನೇಕ ರಾಷ್ಟ್ರಗಳೂ ಹೀಗೆಯೇ ಆಲೋಚಿಸುತ್ತಿವೆ. ಯುದ್ಧ ರಂಗವನ್ನು ಬಿಟ್ಟು ವಿಧಾಯಕ ರಂಗದಲ್ಲಿ ನಡೆಯುವ ರಶ್ಯ ಹಾಗೂ ಪಾಶ್ಚಾತ್ಯಗುಂಪುಗಳಈ ಸ್ಪರ್ಧೆಯು ಹಿಂದುಳಿದ ರಾಷ್ಟ್ರಗಳ ಪಾಲಿಗಂತೂ ಹಿತಕರವೆನಿಸುತ್ತಿದೆ. ಸ್ಪರ್ಧೆಯಲ್ಲಿ ಯಾರಿಗಾದರೂ ಮೇಲ್ಗೈಯಾಗುವುದೋ ಆಧವಾ ನೆರವು ಪಡೆದ ರಾಷ್ಟ್ರಗಳ ಮಾತೇ ಕೊನೆಗೂ ನಡೆಯುವುದೋ—ಭವಿಷ್ಯವೇ ತೋರಿಸಿಕೊಡಬೇಕಾಗಿದೆ. ಅದೇ ನಿದ್ದರೂ ರಶ್ಯವು ರಚನಾತ್ಮಕ ವಿಧಾನವನ್ನು ಪಾಶ್ಚಾತ್ಯ ಕ್ರಮವನ್ನನುಸರಿಸಿ ಆಂಗೀಕರಿಸಲು ಮುಂದಾಗಿರುವುದು ಸ್ತುತ್ಯ. ರಶ್ಯದ ಧುರೀಣರ ಮನೋಭಾವದಲ್ಲಾಗಿರುವ ಈ ಬದಲಾವಣೆಯು ಭಾರತದಲ್ಲಿರುವ ಕಮ್ಯೂನಿಸ್ಟರ ಹೃದಯ ಪರಿವರ್ತನೆಗೂ ನೆರವಾದರೆ ತುಂಬ ಲಾಭವಿದೆ.

ಶುಭಾಶಯಗಳು!

ಇದೀಗ ಉಡುಪಿಯಂತೆ ಮಂಗಳೂರು ನಗರ ಸಭೆಯು ಅಧ್ಯಕ್ಷ ಸ್ಥಾನಕ್ಕಾಚಿನಾಣಿ ನಡೆದು, ಕಾಂಗ್ರೆಸಿನ ವಿಜಯದಲ್ಲಿ ನಿಂತಿರುವುದಾಗಿದೆ. ಉಡುಪಿ ನಗರ ಸಭೆಯ ಅಧ್ಯಕ್ಷ ಶ್ರೀ. ಕೆ. ಕಮಲಾಕ್ಷ ಪೈಗಳು ಒಳ್ಳೆಯ ಉತ್ಸಾಹವುಳ್ಳ ವ್ಯಕ್ತಿ; ನಗರ ಸಭೆಯ ಕ್ಷೇತ್ರದಲ್ಲಿ ಅವರಿಗೆ ವಿಶೇಷವಾದ ಅನುಭವವಿದೆ; ಕಾರ್ಯಪಟುತ್ವಕ್ಕೂ ದಕ್ಷತೆಗೂ ಅವರು ಹೆಸರಾಗಿದ್ದಾರೆ. ಮಂಗಳೂರು ನಗರ ಸಭೆಯ ಅಧ್ಯಕ್ಷ ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಲ್ಲೂ ಇವೇ ಗುಣಗಳನ್ನು ಕಾಣಬಹುದಾಗಿದೆ. ನೂತನ ಅಧ್ಯಕ್ಷರುಗಳಿಗೆ ನಾವು ಹೃತ್ಪೂರ್ವಕವಾಗಿ ಶುಭಾಶಯಗಳನ್ನು ಸಲ್ಲಿಸುತ್ತೇವೆ. ಇವರಿಬ್ಬರ ನೇತೃತ್ವದಲ್ಲಿ ಉಡುಪಿ ಮತ್ತು ಮಂಗಳೂರು ನಗರ ಸಭೆಗಳು ಮುಂದಿನ ಕೆಲವು ವರ್ಷಗಳಲ್ಲಿ ಈಗಿಂತ ಎಷ್ಟೋ ಹೆಚ್ಚಾದ್ದಬಿವೃದ್ಧಿಯನ್ನು ಹೊಂದಬೇಕೆಂಬುದೇ ನಮ್ಮ ಹಾರೈಕೆಯಾಗಿದೆ. ಅನೇಕ ಹೊಸ ಯೋಜನೆಗಳನ್ನು ಸರಕಾರ ಕೈಗೊಳ್ಳುತ್ತಿದ್ದು, ನಗರ ಸಭಾ ವಲಯಗಳಿಗೆ ಪ್ರಯೋಜಕವಾದ ಕಾರ್ಯಕ್ರಮಗಳೂ ಈ ಯೋಜನೆಗಳ ಕಕ್ಷೆಯಲ್ಲಿ ಬರುತ್ತವೆ. ಆರ್ಥಿಕ ಸ್ಥಿತಿಯು ಚಿಂತಾಜನಕವಾಗಿದ್ದರೂ ಸಂಕಾರದ ಮನವೊಲಿಸಿಕೊಂಡು ಆಭಿವೃದ್ಧಿ ಪ್ರಯತ್ನಗಳನ್ನು ನಡೆಸಿಕೊಂಡು ಹೋಗಬಲ್ಲ ಸ್ಫೂರ್ತಿಯಾದ ವ್ಯಕ್ತಿತ್ವ ಈ ಅಧ್ಯಕ್ಷರುಗಳಿಗಿದೆ—ಆವರಿಗೆ ಕಾಂಗ್ರೆಸಿನಲ್ಲಿರುವ ಜನಪ್ರಿಯ ಧುರೀಣರ ಬೆಂಬಲ ಮತ್ತು ಆಪೇಕ್ಷಾರ್ಹವಾದಗಳೂ ಇವೆ. ಇತರ ಪಕ್ಷಗಳವರೂ ಸ್ವತಂತ್ರರೂ ಸಹಕರಿಸಿ, ಅಧ್ಯಕ್ಷರುಗಳ ಕೈಯನ್ನು ಬಲಪಡಿಸಲಿ ಎಂಬುದೇ ಮತದಾರರ ಪರವಾಗಿ ನಾವು ಮಾಡುವ ವಿನ್ನಹ.

ಉಡುಪಿ

ವಿವಾಹ ಸಮಾರಂಭ— ಉಡುಪಿಯ ಸಾಸ್ರಸಿದ್ಧ ಡಾಕ್ಟರರೂ ಸ್ಥಳೀಯ ಸರಕಾರಿ ಆಸ್ಪತ್ರೆಯ ಗೌರವ ಸರ್ಜನರೂ ಆಗಿರುವ ಡಾ. ಪಿ. ರಾಘವೇಂದ್ರ ನಾಯ್ಕರ ಪುತ್ರಿ ಸೌ| ವಸಂತ ಮತ್ತು ಉಡುಪಿ ಮಾಜಿ ಕೌನ್ಸಿಲರ್ ಹಾಗೂ ಪ್ರಮುಖವ್ಯಾಪಾರಿ ಶ್ರೀ ಕಾಡಬೆಟ್ಟು ವಾಸುದೇವ ನಾಯ್ಕರ್ ಪುತ್ರ ಶ್ರೀ ವಿಠಲ ನಾಯಕ್, ಬಿ. ಎಸ್. ಸಿ. ಎಲ್. ಎಲ್. ಬಿ; ಅವರ ವಿವಾಹ ಸಮಾರಂಭವು ತಾ. ೨೦ರಬ್ಬಿ ಪೂರ್ವಾಹ್ನ ವಿಜೃಂಭಣೆಯಿಂದ ವಧುವಿನ ಗೃಹದಲ್ಲಿ ನೆರವೇರಿತು. ಈ ಸಮಾರಂಭಕ್ಕೆ ದ.ಕ. ಜಿಲ್ಲೆಯಿಂದಲೂ ಹೊರನಾಡಿನಿಂದಲೂ ಪ್ರತಿಷ್ಠಿತ ಮಹನೀಯರ ನೇಕರು ಬಂದಿದ್ದರು.

ಸತ್ಕಾರ ಕೂಟಗಳು. ಉಡುಪಿ ನಗರ ಸಭೆಯ ಚೇರ್‌ಮೆನ್ ಶ್ರೀ ಕೆ. ಕೆ. ಪೈ ಮತ್ತು ಕಾಂಗ್ರೆಸ್ ಪಕ್ಷದ ಇತರ ಸದಸ್ಯರನ್ನು ತಾ. 17ರಬ್ಬು ಕಾಡಬೆಟ್ಟು ತೆರಿಗಾರರು ಸತ್ಕಾರ ಕೂಟದಲ್ಲಿ ಗೌರವಿಸಿದರು. ಡಾ| ಎಸ್. ಆರ್. ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಪಾರ್ಲಿಮೆಂಟ್ ಸದಸ್ಯ ಶ್ರೀ ಟಿ. ಎ. ವಾಸುದೇವನ್ ಆವರು ಸ್ವಾಗತ ಮಾತುಗಳನ್ನಾಡಿದರು. ಶ್ರೀಗಳಾದ ಎ. ಜೆ. ಆಳ್ವ, ಕೆ. ಜಗನ್ನಾಥ ನಾಯಕ್, ಎಸ್. ಆರ್. ಪೈ, ಆರ್. ಎಸ್. ಎಸ್. ಅಂಬ್ರಾಜೆ, ಪಂಡಿತ ಟಿ. ಎಸ್ ಕೇಳು ನಂಬಿಯಾರ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಕೆ. ಕೆ. ಪೈಗಳು ನಗರಾಡಳಿತದಲ್ಲಿ ಪ್ರಗತಿಯನ್ನು ಸಾಧಿಸಲು ಯತ್ನಿಸುವೆನಾಗಿ ಹೇಳಿದರು.

ನಗರದ ಹಿತದೃಷ್ಟಿಯಿಂದ ಎಲ್ಲಾ ಸದಸ್ಯರೂ ಪಂಡಿಯಬೇಕಾಗಿ ಸಭಾಧ್ಯಕ್ಷರು ಹೇಳಿದರು. ಶ್ರೀ ಕೆ. ಕೆ ಪೈಗಳನ್ನು ತಾ. 18ರಬ್ಬಿ ಶ್ರೀ ಪರ್ಕಾಳ ರಾಮರಾಯ ಶೆಣೈಯವರು ಚಹಾಸತ್ಕಾರವಿತ್ತು ಗೌರವಿಸಿದರು. ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಿಲ್ಕ್ ಸಪ್ಲೈ ಸೊಸೈಟಿಯಲ್ಲಿಯೂ ಶ್ರೀ ಎಮ್. ವಾಮನ ಭಟ್ಟರ ನಾಯಕತ್ವದಲ್ಲಿ ಶ್ರೀ ಪೈಗಳಿಗೆ ಸತ್ಕಾರಕೂಟ ಜರಗಿತು.

ವರದೇಂದ್ರ ಕಲಾಮಂದಿರದಲ್ಲಿ— ಶ್ರೀ ವೆಂಕಟ್ರಮಣ ದೇವಸ್ಥಾನದ ವರದೇಂದ್ರ ಕಲಾಮಂದಿರದಲ್ಲಿ ತಾ. 19ರಬ್ಬಿ ರಾತ್ರಿ ಉಡುಪಿ ತರುಣ ಕೂಟದವರು ಶ್ರೀ ಕೃಷ್ಣಲೀಲಾ ನಾಟಕವನ್ನು ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಆವರ ಆಧ್ಯಕ್ಷತೆಯಲ್ಲಿ ಸೊಗಸಾಗಿ ಅಭಿನಯಿಸಿದರು.

ವಿದಾಯ ಸತ್ಕಾರ— ಸ್ಥಳೀಯ ಫಯರ್ ಸ್ಟೇಶನಿನ ಸಬ್ ಆಫೀಸರ್ ಶ್ರೀ ಡಿ. ಗೋನ್ಸಾಲ್ವಿಸ್, ಆವರು ಮದ್ರಾಸು ಫಯರ್ ಆಫೀಸರರಾಗಿ ಹೋಗುವ ನಿಮಿತ್ತ ಇಲ್ಲಿಯ ಆಫೀಸಿನ ಕೆಲಸಗಾರರು ಆವರಿಗೊಂದು ಸತ್ಕಾರಕೂಟವನ್ನು ತಾ 19ರಬ್ಬಿ ಶ್ರೀ ಯು. ಅನಂತಪದ್ಮನಾಭ ತಂತ್ರಿಗಳ ಅಧ್ಯಕ್ಷತೆಯಲ್ಲಿ ಜರಗಿಸಿದರು. ಶ್ರೀಗಳಾದ ಬಿ. ವಿಶ್ವನಾಥ್, ಬಾಬು ಬಂಗೇರ, ದೇವಪ್ಪ, ಟಿ. ವಿ. ಗೋಪಾಲ, ಚಂದಾವರ ನರಸಿಂಹ ಮೊದಲಾದವರು ಕಾಲೋಚಿತಮಾತುಗಳನ್ನಾಡಿದರು.

ರಶಿಯದಿಂದ ಸರ್ವ ರೀತಿಯ ಸಹಾಯ

ಭಾರತಕ್ಕೆ ಬುಲ್ಗಾನಿನ್ನರ ಆಶ್ವಾಸನ

ಹೊಸ ದೆಹಲಿಯ ರಾಮಲೀಲಾ ಮೈದಾನಿನಲ್ಲಿ ನೀಡಲಾದ ಪೌರಸ್ವಾಗತಕ್ಕೆ ಉತ್ತರವೀಯುತ್ತಾ ರಶ್ಯದ ಪ್ರಧಾನಿ ಮಾರ್ಶಲ್ ಬುಲ್ಗಾನಿನ್ ಮಾಡಿದ ಭಾಷಣವು ಅವರು ಹಾಕಿಕೊಂಡಿರುವ ಧ್ಯೇಯ ಧೋರಣೆಗಳ ಮೇಲೂ ರಶ್ಯ ಭಾರತ ಮೈತ್ರಿಯ ಸ್ವರೂಪದ ಮೇಲೂ ವಿಶೇಷವಾದ ಬೆಳಕನ್ನು ಬೀರುತ್ತದೆ. ರಶ್ಯದ ಎರಿಷ್ಯರು ಭಾರತ ಸಂಚಾರ ಕಾಲದಲ್ಲಿ ಅನೇಕ ಸ್ಥಳಗಳಲ್ಲಿ ಮಾತನಾಡುವ ಸಂದರ್ಭ ಬಂದಾಗ ಈ ಜಾಣ್ಮಟ್ಟಿನಲ್ಲಿಯೇ ಅಭಿಪ್ರಾಯಗಳನ್ನು ಹೊಂದಿಸಿಕೊಂಡು, ಅವನ್ನು ವ್ಯಕ್ತಪಡಿಸಿದ್ದಾರೆ. ಇದುದರಿಂದ ರಾಮಲೀಲಾ ಮೈದಾನಿನಲ್ಲಿತ್ತ ಭಾಷಣವು ಐತಿನಿಧಿಕ ಸ್ವರೂಪದ್ದೆಂದು ಪರಿಗಣಿಸಬಹುದು.

ರಶಿಯದ ಶುಭಾಶಯ

ಅವರು ತಮ್ಮ ಭಾಷಣದಲ್ಲಿ ಶ್ರದ್ಧಾನಿನೆಹರುಗಳೂ ಭಾರತದ ಜನರೂ ನೀಡಿದ ಸಂಭ್ರಮದ ಹಾಗು ಪ್ರೀತಿಯ ಸ್ವಾಗತಕ್ಕೆ ಕೃತಜ್ಞತೆಯನ್ನು ಸೂಚಿಸುತ್ತಾ ಹೀಗೆಂದರು — "ನಾವು ನಿಮಗೂ ನಿಮ್ಮ ಮೂಲಕ ಭಾರತದ ಮೂವತ್ತಾರು ಕೋಟಿ ಜನರಿಗೂ ಭಾರತೀಯರ ಕುರಿತು ಪ್ರಾಮಾಣಿಕವಾದ ಮತ್ತು ಸ್ವಾರ್ಥಾಭಿಲಾಷೆಯಿಲ್ಲದ ಸ್ನೇಹ ಭಾವನೆಗಳನ್ನಿಟ್ಟು ಕೊಂಡಿರುವ ರಶ್ಯದ ಜನರ ಶುಭಾಶಯಗಳನ್ನೂ ವಂದನೆಗಳನ್ನೂ ಅರ್ಪಿಸುತ್ತೇವೆ.

ನಮ್ಮೀರಡು ದೇಶಗಳ ನಡುವೆ ಸ್ನೇಹ ಸಂಬಂಧವು ಬಹಳ ಹಿಂದೆಯೇ ಹುಟ್ಟಿತ್ತು; ಅದು ದ್ವೇಷ ಅಥವಾ ಘರ್ಷಣೆಗಳಿಂದ ಎಂದೂ ತಪ್ಪಾಗಿರಲಿಲ್ಲ. ನಮ್ಮ ದೇಶದಲ್ಲಿ ಅಕ್ಟೋಬರ ಮಹಾಕ್ರಾಂತಿಯು ನಡೆದ ಬಳಿಕ ಈ ಸ್ನೇಹ ಭಾವನೆಯು ನಮ್ಮೀರಡು ದೇಶಗಳ ನಡುವಿನ ವಿಶೇಷವಾಗಿ ಬೆಳೆದು ಅಭಿವೃದ್ಧಿಯನ್ನು ಹೊಂದಿದೆ.

ಪರಂಪರಾಗತವಾದ ದಬ್ಬಾಳಿಕೆಯಿಂದ ಮುಕ್ತರಾದ ಸೋವಿಯೆಟ್ ಜನರು ನಮ್ಮ ದೇಶದಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಪುನಃ ಸ್ಥಾಪಿಸುವುದಕ್ಕಾಗಿ ನೀವು ಮಾಡಿದ ಆತ್ಮತ್ಯಾಗದ ಹೋರಾಟದ ಕುರಿತು ಆಳವಾದ ಸಹಾನುಭೂತಿಯನ್ನು ಹೊಂದಿದ್ದರು. ಯಾವುದೇ ಜನತಾಂತ್ರಿಕ ದೇಶಗಳಿಗೆ ಇನ್ನೊಂದರ ದಬ್ಬಾಳಿಕೆಗೆ ವಿರುದ್ಧವಿರುವ ನಾವು ನಿಮ್ಮ ಹೋರಾಟ ಜನಪ್ರಿಯವಾದುದನ್ನು ಕಂಡು ಸಂತೋಷಿಸಿದ್ದೇವೆ.

ಪಂಚಶೀಲಗಳ ಆಧಾರ

ನಮ್ಮ ಮಹಾನಾಯಕ ಹಾಗು ಶಿಕ್ಷಕರಾದ ಲೆನಿನ್ ರಾಷ್ಟ್ರಗಳ ಸಮಾನತೆ ಮತ್ತು ಪ್ರತಿಯೊಂದೂ ಜನತಾಂಗದ ಸ್ವಯಂ ನಿರ್ಣಯಾಧಿಕಾರ ಹಾಗು ಪ್ರತಿಯೊಂದು ದೇಶದ ಸ್ವತಂತ್ರ ಅಸ್ತಿತ್ವದ ತತ್ವಗಳನ್ನು ಸೋವಿಯೆಟ್ ವಿದೇಶ ಧೋರಣೆಯ ಮುಖ್ಯ ತತ್ವಗಳೆಲ್ಲ ಒಂದಾಗಿ ಪೋಣಿಸಿದರು.

ಭಾರತವು ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿ ರೂಪುಗೊಂಡ ಬಳಿಕ ನಮ್ಮೀರಡು ದೇಶಗಳ ಸ್ನೇಹ ಬಾಂಧವ್ಯವನ್ನು ಅಭಿವೃದ್ಧಿಗೊಳಿಸಲು ಹೊಸತಾದ ಹಾಗು ಅನುಕೂಲತೆಗಳುಳ್ಳ ವಾತಾವರಣ ಏರ್ಪಟ್ಟಿತು.

ಸದ್ಯಕ್ಕೆ ಸೋವಿಯೆಟ್ ಯೂನಿಯನ್ನುತ್ತು ಭಾರತ ಪ್ರಜಾ ರಾಜ್ಯಗಳು ತಮ್ಮ ಸಂಬಂಧವನ್ನು ದೃಢವಾದ ಮತ್ತು ನಂಬಿಕೆಗೆ ಅರ್ಹವಾದ ತಳಹದಿಯ ಮೇಲೆ ನಿಲ್ಲಿಸಿವೆ. ವ್ಯಾದೇತಿಕ ಐಕ್ಯತೆ ಮತ್ತು ಸಾರ್ವಭೌಮತ್ವ, ಪರಸ್ಪರ ಆಕ್ರಮಣ ವಿಲ್ಲದಿರುವುದು, ಆರ್ಥಿಕ, ರಾಜಕೀಯ ಅಧಿನಾ ತಾತ್ವಿಕ ಸ್ವರೂಪದ ಮುಖವಾದಗಳನ್ನು ಧರಿಸಿ ಪರಸ್ಪರರ ಆಂತರಿಕ ವ್ಯವಹಾರದಲ್ಲಿ ಕೈಹಾಕುವುದರಿಂದ ದೂರ ಉಳಿಯುವುದು, ಪರಸ್ಪರ ಸಮಾನತೆ ಮತ್ತು ಲಾಭದ ತಳಹದಿ ಮತ್ತು ಶಾಂತ ರೀತಿಯ ಸಹ ಜೀವನ— ಎಂಬೀ ತತ್ವಗಳೇ ಈ ಬಧ್ಧಾರ

ಭಾರತ ಮತ್ತು ಚೀನಗಳ ನಡುವೆ ನೊದಲ ಬಾರಿಗೆ ಘೋಷಿಸಿಲಾದ ಈ ಐದು ತತ್ವಗಳು ನೀವನವನ್ನು "ಪಂಚಶೀಲ" ಗಳೆಂದು ಕರೆಯುತ್ತೀರಿ- ಈಗ ಎಲ್ಲ ಶಾಂತಿ ಪ್ರಿಯ ಜಪರಿಂದಲೂ ಮಂಜೂರಾತಿಯನ್ನು ಪಡೆದಿವೆ ಮತ್ತು ಅನೇಕ ರಾಷ್ಟ್ರಗಳು ಅವನ್ನು ವ್ಯವಹಾರದಲ್ಲಿ ಫಲಪ್ರದವಾಗಿ ಅನುಷ್ಠಾನಕ್ಕೆ ತಂದಿವೆ.

ಶಾಂತಿಪ್ರಿಯ ಭಾರತ

ಭಾರತ ಸರಕಾರವು ರಾಂತಿಯನ್ನು ಬಲಗೊಳಿಸಲೂ ಅಂತಾರಾಷ್ಟ್ರೀಯ ಘರ್ಷಣೆಯನ್ನು ಕಡಿಮೆ ಮಾಡಲೂ ತುಂಬ ಕೆಲಸ ಮಾಡುತ್ತಿದೆ. ತಮ್ಮ ಮಾತೃ ಭೂಮಿಯನ್ನು ಒಂದಕ್ಕೊಂತ ಹೆಚ್ಚು ಸಲ ಕೈಯಲ್ಲಿ ಆಯುಧಗಳನ್ನು ತೆಗೆದುಕೊಂಡು ಪರಕೀಯ ಆಕ್ರಮಣ ಕಾರರ ವಿರುದ್ಧ ಹೋರಾಡಬೇಕಾಗಿ ಬಂದಿರುವ ಹಾಗು ಯುದ್ಧಗಳು ಜನರಿಗೆ ಲೆಕ್ಕವಿಲ್ಲದಷ್ಟು ಸಂಕಗಳನ್ನು ತಂದೊಡ್ಡುತ್ತವೆಂದು ವಿಶೇಷವಾಗಿ ಮನಗಂಡಿರುವ ಸೋವಿಯೆಟ್ ಜನರು ತಮ್ಮ ಹೃದಯದ ಆಳದಿಂದ ಭಾರತ ಸರಕಾರವೂ ಭಾರತೀಯರೂ ಶಾಂತಿಯನ್ನು ನೆಲೆಗೊಳಿಸಲೂ ಬಲಗೊಳಿಸಲೂ ಮಾಡುತ್ತಿರುವ ಪ್ರಯತ್ನಗಳನ್ನು ಸ್ವಾಗತಿಸುತ್ತಾರೆ.

ಅಂತಾರಾಷ್ಟ್ರೀಯ ಜಗತ್ತಿನಲ್ಲೆಲ್ಲ ಶಾಂತಿಯನ್ನು ನೆಲೆಗೊಳಿಸುವ ಧ್ಯೇಯದಿಂದ ನಮ್ಮೀರಡು ದೇಶಗಳು ಸ್ನೇಹಿತರಂತೆ ಸಹಕಾರದಿಂದ ನಡೆದುಕೊಳ್ಳುತ್ತಿವೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ಚೀನದ ಜನತಾ ರಾಜ್ಯಕ್ಕೆ ಪ್ರವೇಶಕೊಡುವ ವಿಷಯದಲ್ಲಿ ನಮ್ಮೀರಡು ದೇಶಗಳು ದೃಢವಾಗಿ ಒಟ್ಟಿಗೆ ನಿಲ್ಲುತ್ತಿರುವುದನ್ನು ಕಂಡು ನಮಗೆ ಅತಿಶಯವಾದ ಸಂತೋಷವಾಗಿದೆ.

ಭಾರತೀಯರು ಹಾಗು ಭಾರತ ಸರಕಾರದವರು ತಮ್ಮ ದೇಶದ ಆರ್ಥಿಕೋನ್ನತಿ ಗೋಸ್ಕರ ವಿಶೇಷವಾಗಿ ಕೈಗಾರಿಕಾ ಅಭಿವೃದ್ಧಿಗೋಸ್ಕರ ನಡೆಸುವ ಪ್ರಯತ್ನಗಳ ಕುರಿತು ನಮ್ಮ ದೇಶದ ಜನರಿಗೆ ಬಹಳ ಸಹಾನುಭೂತಿಯಿದೆ ನಮ್ಮ ಸ್ವಂತ ಅನುಭವದ ಬಲದಿಂದ ನಾವು ಅಂಥ ಧೋರಣೆಯೊಂದೇ ಸ್ವತಂತ್ರ ರಾಷ್ಟ್ರವನ್ನು ಕಟ್ಟಬೇಕೆಂಬ ಇಚ್ಛೆಯುದಾರಿಯ ಮೇಲೆನಡೆಯುತ್ತಿರುವ ದೇಶಕ್ಕೆ ಭದ್ರವಾದ ಸ್ವಾತಂತ್ರ್ಯ ಕೊಡಬಲ್ಲುದೆಂದು ಮನನರಿಕೆ ಮಾಡಿಕೊಂಡಿದ್ದೇವೆ.

ನೆರವಿನ ಭರವಸೆ

ನೀವು ಅನೇಕ ಕಷ್ಟಗಳನ್ನು ಎದುರಿಸಬೇಕಾಗುವುದೆಂದು ನಮಗೆ ಗೊತ್ತು. ಆದರೆ ಭಾರತದ ಪರಿಶ್ರಮಿಗಳಾದಹಾಗು ಯೋಗ್ಯತಾ ಸಂಪನ್ನರಾದ ಜನರು ತಮ್ಮ ಧ್ಯೇಯವನ್ನು ಮುಟ್ಟಲು ಸಮರ್ಥರಾಗುವರೆಂದು ವಿಶ್ವಾಸವಿದೆ. ನಮ್ಮ ಮಟ್ಟಿಗೆ ನಾವು ನಿಮಗೆ ಔದ್ಯಮಿಕ ಕೇಂದ್ರಗಳನ್ನು, ಜಲವಿದ್ಯುಚ್ಛಕ್ತಿ ಉತ್ಪಾದನೆಗೃಹಗಳನ್ನು ಜಾನಕಟ್ಟುಗಳನ್ನು ಕಟ್ಟುವ ಮತ್ತು ಶಾಂತಿ ಕಾರ್ಯಗಳಿಗೆ ಅಣುಶಕ್ತಿ ಬಳಸುವ ವಿಧಾನವೇ ಮುಂತಾದ ಕ್ಷೇತ್ರಗಳಲ್ಲಿ ನಮ್ಮ ಅನುಭವವನ್ನು ನೀಡಲು ಸಿದ್ಧರಿದ್ದೇವೆ.

ನಮ್ಮೀರಡು ದೇಶಗಳ ನಡುವೆ ಆರ್ಥಿಕ ಹಾಗು ವ್ಯಾಪಾರ ಸಂಬಂಧವನ್ನು ಅಭಿವೃದ್ಧಿಗೊಳಿಸಲು ಯೋಗ್ಯವಾದ ಪರಿಸ್ಥಿತಿಗಳು ಇವೆ. ಪರಸ್ಪರ ಪ್ರಯೋಜನ ಮತ್ತು ಸಮಾನತೆಯೇ ಇದರ ತಳಹದಿಯೂ ಆಗಿದೆ. ನಮ್ಮೀರಡು ದೇಶಗಳ ಸಂಬಂಧವು ಹೆಚ್ಚುತ್ತಿದೆ ಹಾಗು ವಿಶಾಲವಾದ ಸ್ವರೂಪವನ್ನು ಕೊಂಡುತ್ತಲಿದೆ. ಆರ್ಥಿಕ ಕ್ಷೇತ್ರವಲ್ಲದೆ ವೈಜ್ಞಾನಿಕ ಹಾಗು ಸಂಸ್ಕೃತಿಕ ಕ್ಷೇತ್ರಗಳಿಗೂ ಅ ದುವ್ಯಾಪಿಸಿದೆ. ಸಾಂಸ್ಕೃತಿಕ ವಿಚಾರ ವಿನಿಮಯವು ಜನರ ಪರಿಚಯಕ್ಕೆ ಪ್ರೋತ್ಸಾಹವಿತ್ತು ಅವರನ್ನು ಹತ್ತಿರ ತಂದು ಉನ್ನತ ಮನೋಭಾವವನ್ನು ಮೂಡಿಸಲು ನೆರವಾಗುವುದರಿಂದ ಇದು ವಿಶೇಷ ಸಂತೋಷದ ವಿಷಯವಾಗಿದೆ. ಕಲೆ ಮತ್ತು ಸಂಸ್ಕೃತಿಯ ಕ್ಷೇತ್ರಗಳಲ್ಲಿ ವಿಶಾಲ ವಿನಿಮಯವನ್ನು ನಾವು ಬಯಸುತ್ತೇವೆ.

ಭಾರತ ಮತ್ತು ಸೋವಿಯೆಟ್ ಯೂನಿಯನ್ನಿನ ಸಾಮಾಜಿಕ ಹಾಗು ರಾಜಕೀಯ ಪದ್ಧತಿಗಳು ಭಿನ್ನವಾಗಿವೆ.ಆದರೆ ನಮ್ಮೀ ಜನರ ನಡುವೆ ಹಲವು ವಿಷಯಗಳಲ್ಲಿ ಸಾಮ್ಯವೂ ಕಂಡು ಬರುತ್ತದೆ. ಇದು ಕೇವಲ ಉಭಯ ರಾಷ್ಟ್ರಗಳ ಮಟ್ಟಿಗಷ್ಟೇ ಅಲ್ಲ, ಜಗತ್ತಿಗೂ ಉಪಯುಕ್ತವಾಗುವಂತೆ ಸ್ನೇಹವನ್ನು ಬಿಗಿಗೊಳಿಸಲು ನೆರವಾಗುವುದೆಂದುನಾವು ನಂಬಿದ್ದೇವೆ

ಭಾರತ ಮತ್ತು ಸೋವಿಯೆಟ್ ಯೂನಿಯನ್ನುಗಳ ಮೈತ್ರಿ ಮತ್ತು ಸಹಕಾರ ಬಹುಕಾಲ ಬಾಳಲಿ! ಜೈ ಹಿಂದ್!"

ಉಡುಪಿ ಪೋಸ್ಟಾಫೀಸಿನ. ಪಿ. ಎಂಡ್ ಟಿ. ರಿಕ್ರಿಯೇಶನ್ ಕ್ಲಬ್ಬಿನ ಮಹಾಸಭೆಯು ತಾ. 19ರಲ್ಲಿ ಪೋಸ್ಟ್‌ಮಾಸ್ಟರ್ ಶ್ರೀ ಕೆ. ರಘುನಾಥ ಪೈಗಳ ಅಧ್ಯಕ್ಷತೆಯಲ್ಲಿ ಜರಗಿ 1955-56ನೇ ಸಾಲಿಗೆ ಶ್ರೀಗಳಾದ ಕೆ. ರಘುನಾಥ ಪೈ, ಅಧ್ಯಕ್ಷ; ವಿ. ಶಿವಾನಂದ, ಕಾರ್ಯದರ್ಶಿ; ಬಿ. ಗುಂಡು, ಸಹಾಯಕ ಕಾರ್ಯದರ್ಶಿ; ಕೆ. ಪ್ರಭಾಕರ ರಾವ್ ಖಜಾನ್ದಿ; ಬಿ. ಬಾಲಕೃಷ್ಣ, ಎಮ್. ಆನಂದ ಕಟ್ಟೆಗಾವ್, ಕೆ. ಸುಬ್ರಾಯಿಂಗ, ಆಡಿಟರ್ಸ್ ಆಗಿ ಆರಿಸಲ್ಪಟ್ಟರು. ಬೋಡ್ ಮಿಂಟನ್ ಮತ್ತು ಫೋಲಿಬಾಲ್ ಕೋರ್ಟುಗಳನ್ನು ತೆರೆಯಬೇಕಾಗಿ ನಿರ್ಣಯಿಸಲಾಯಿತು. ಶ್ರೀ ಬಿ. ಆರ್. ಕಾಮತರು ಧನ್ಯವಾದಗಳನ್ನರ್ಪಿಸಿದರು.

ಕಟಪಾಡಿ— ಸ್ಥಳೀಯ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಆಡಳಿತದಲ್ಲಿರುವ ಚೊಕ್ಕಾಡಿ ಶ್ರೀ ಮಹಲಿಂಗೇಶ್ವರ ಸ್ವಾಮಿ ಪ್ರಾಥಮಿಕ ಶಾಲೆಗಾಗಿ ಸ್ವಾತಂತ್ರ್ಯ ಅಭಿವೃದ್ಧಿ ಯೋಜನೆಯನ್ವಯ ಕಟ್ಟಿಸಲಾಗುವ ಹೊಸ ಕಟ್ಟಡದ ಶಂಕುಸ್ಥಾಪನಾ ಕಾರ್ಯವನ್ನು ಉಡುಪಿ ಅಧಿಸೂಚು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರು ಇದೇ ತಾ 17ರಂದು ನೆರವೇರಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಪಾಂಗಾಳ ರಾಮದಾಸ ನಾಯ್ಕರು ಸ್ವಾಗತಭಾಷಣಗೈದರು. ಸಾಜಿನ, ಸಭಿಕರ ಭಾಷಣಗಳಾದ ಮೇಲೆ ಅಧ್ಯಕ್ಷರು ವಿದ್ಯಾದಾನವು ಮಾನವನನ್ನು ವಿವರಿಸಿ ಕಟ್ಟಡ ನಿರ್ಮಾಣ ಕಾರ್ಯಕ್ಕೆ ಮುಕ್ತಹಜನರು ಸಹಾಯ ಮಾಡುವ ಆವಶ್ಯಕತೆಯನ್ನು ಸೂಚಿಸಿದರು. ಸಂಘದ ಅಧ್ಯಕ್ಷ ಶ್ರೀ ಯು. ಎಸ್. ನಾಯ್ಕರು ಧನ್ಯವಾದಗಳನ್ನರ್ಪಿಸಿದರು.

ಮುಂಬಯಿಯಲ್ಲಿ ಮತಪ್ರದರ್ಶನ

ನಗರವನ್ನು ಮಹಾರಾಷ್ಟ್ರದಲ್ಲಿ ಉಳಿಸಲು ಒತ್ತಾಯ

ಮುಂಬಯಿಯಿಂದಬಹಳ ಚಿಂತಾಜನಕವಾದ ವಾರ್ತೆಗಳು ಬಂದಿವೆ. ಇದೇ ಬುಧವಾರ ಆ ನಗರಕ್ಕೆ ರಶ್ಯದ ಧುರೀಣರು ಆಗಮಿಸುವ ಕಾರ್ಯಕ್ರಮವನಿಟ್ಟುಕೊಂಡಿದ್ದುದನ್ನು ತಿಳಿದೂ ಎಡಪಕ್ಷಗಳು ಇದರಲ್ಲಿ ಕೆಸ್ಯುನಿಸ್ಟರ ಪಾತ್ರವನೇ ಉಲ್ಲೇಖನೀಯ) ಮುಂಬಯಿ ನಗರವನ್ನು ಸಂಯುಕ್ತ ಮಹಾರಾಷ್ಟ್ರದಲ್ಲಿ ಸೇರಿಸಿದೆ ಪ್ರತ್ಯೇಕ ರಾಜ್ಯವಾಗಿಡುವ ನಿರ್ಣಯಕ್ಕೆ ನಿಷೇಧ ಸೂಚಿಸಲು ಇನೇ ದಿನಾಂಕ ಸಾಂಕೇತಿಕ ಮುಷ್ಕರವನ್ನು ಸಂಘಟಿಸಿದವು. ಈ ಸಂಚು ಶಾಂತಿ ರೀತಿಯಿಂದ ನಡೆಯುತ್ತಿದ್ದಿರೆ ಕೆಡುಕಿರಲಿಲ್ಲ; ಆದರೆ ಮುಷ್ಕರಕ್ಕಾಗಿ ಒತ್ತಾಯ ಮಾಡುವುಕಾರ್ಯಗಳಿಗೆ ಬೆಂಕಿ ಕೊಡುವುದಂತೂ ಹಿಡಿದು ಕಲ್ಲು ಬಿಸಾಡುವ ವರೆಗೆ ಮುಂತಾಟಿಕೆ ನಡೆಸಿದುದೂ ಅಸಿಷ್ಟ ಪರಿಣಾಮಗಳಿಗೆ ಕಾರಣವಾಯಿತು.

ಹೋಲೀಸರಿಂದ ಗೋಳೀಬಾರು

ಸರಕಾರದ ಯೋಚನೆಯಂತೆ ಅನಿವಾರ್ಯವಾಗಿಯೇ ಪೋಲೀಸರು ಫ್ಲೋರಾ ಫೌಂಟನ್ ಎಂಬ ಜನನಿಬಿಡವಾದ ವ್ಯವಹಾರ ಕೇಂದ್ರವನ್ನಲ್ಲಿ ಹಲವು ಸಲಜನ ಸ್ತೋಮದ ಮೇಲೆ ಗುಂಡು ಹಾರಿಸಬೇಕಾಯಿತು; ಪರಿಣಾಮವಾಗಿ ಕನಿಷ್ಠ ಹತ್ತು ವಂದಿಯಾದರೂ ಸತ್ತರಲ್ಲದೆ ಇನ್ನೂರೈವತ್ತಕ್ಕಿಂತಲೂ ಅಧಿಕ ಜನರು ಗಾಯಗೊಂಡರು ಇವತ್ತಿನ ಮುನಾ ದಿನ ಮುಖ್ಯಮಂತ್ರಿ ಶ್ರೀ ಮುರಾರ್ಜಿ ದೇಸಾಯಿ ಯವರೂ ಮುಂಬಯಿ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷೆ ಶ್ರೀ ಸಮೋಚಾವಾಟೀಲರೂ ಭಾಷಣಮಾತಾಡಿದ್ದ ಸಭೆಯಲ್ಲೂ ಕೆಲವು ಜನರು ಗೊಂದಲವೆಬ್ಬಿಸಿದರು. ಮುಖ್ಯಮಂತ್ರಿಗಳಿಗೂ ಒಂದು ಕಲ್ಲು ತಲೆಗೆತಾಗಿದ್ದಿತು.

ನವಯುಗ ಪ್ರಜಾರಾಜ್ಯ ವಿಶೇಷಾಂಕ

ಎಂದಿನಂತೆ 26-1-1956 ರಂದು ವಿಶಿಷ್ಟತರವಲ್ಲಿ ಪ್ರಕಟವಾಗುವುದು ಸಂದರ್ಭೋಚಿತ ಲೇಖನ, ಕವನಗಳಿಗೆ ಸ್ವಾಗತವಿದೆ.

ಜಾಹೀರಾತು ದಾರರ ಪ್ರೋತ್ಸಾಹವನ್ನು ನಿರೀಕ್ಷಿಸಲಾಗಿದೆ.

(ಜನೆ ಪುಟದಿಂದ)

ಶಾಸನ ಸಭೆಯು ಸದಸ್ಯರೆಲ್ಲರೂ ಸಂಯುಕ್ತ ಕರ್ನಾಟಕ ರಾಜ್ಯದ ರಚನೆಯನ್ನು ಸ್ವಾಗತಿಸಬೇಕೆಂದು ಬಹಳ ದೀರ್ಘವಾದ ವಿವರಣಾತ್ಮಕವಾದ ಮತ್ತು ಹೃದಯ ಸ್ಪರ್ಶಿಯಾದ ಭಾಷಣವನ್ನು ಮಾಡಿದರು. ಬಳ್ಳಾರಿ ಭಾಗಗಳನ್ನು ತುಂಗಭದ್ರ ಅಣೆಕಟ್ಟಿನ ನೆಪದಲ್ಲಿ ಆಂಧ್ರಕ್ಕೆ ಕೊಡ ಮಾಡಿದ ಆಯೋಗದ ಸಿಫಾರಸನ್ನು ಅವರು ಖಂಡ ತುಂಡವಾಗಿ ವಿರೋಧಿಸಿದರು. ಆದೇ ಸಮಯದಲ್ಲಿ ಎರಡು ಕರ್ನಾಟಕಗಳಾಗಲಿ ಎನ್ನುವವರ ವಿವೇಕಕ್ಕೂ ಬುದ್ಧಿ ಹೇಳಿದರು. ಮೈಸೂರಿನ ಶಾಸನ ಸಭೆಯೊಂದು ಎರಡು ಕರ್ನಾಟಕಗಳಾಗಲಿ ಎಂದು ನಿರ್ಣಯಿಸಿದಷ್ಟಕ್ಕೆ ಅದಕ್ಕೆ ಮನ್ನಣೆ ಸಿಗದು; ಮದ್ರಾಸು, ಹೈದರಾಬಾದು, ಮುಂಬಯಿ ಮತ್ತು ಕೇಂದ್ರ ಸರಕಾರಗಳು ಸಹ ಇದಕ್ಕೆ ಒಪ್ಪಬೇಕು. ಆ ಭರವಸೆ ಇಲ್ಲವಾದುದರಿಂದ ಮೈಸೂರಿನ ಪ್ರತಿನಿಧಿಗಳು ಜಾಣರಾಗಿ ವರ್ತಿಸಬೇಕು; ನಿಷ್ಕಾರಕ್ಕೂ ಮುನಃ ಕ್ಲೇಶಕ್ಕೂ ಕಾರಣವಾಗುವ ವಾದ ಹೂಡಬಾರದು ಎಂದವರು ಕೇಳಿಕೊಂಡರು.

ಆತ್ಮೀಯಂತೆಯೇ ಮುಖ್ಯ

"ನಾವು ಮನೆಯ ಮುಂಪೆ ಕುಳಿತಿರುವಾಗ ನಾಲ್ಕೈದು ಜನ ಸ್ನೇಹಿತರು ಬಂದು ತಮಗೆ ಬಾಯಾರಿಕೆಯಾಗುತ್ತದೆ, ಒಳಗೆ ಹೋಗಿ ನೀರು ಕುಡಿಯಲು ಅವಕಾಶ ಕೊಡಿ ಎಂದು ಕೇಳಿದರೆ, ನಾವು 'ಇಬ್ಬರು ಮಾತ್ರ ಒಳಗೆ ಬನ್ನಿ, ಇನ್ನಿಬ್ಬರು ಹೊರಗೆ ನಿಲ್ಲಿ' ಎಂದು ಹೇಗೆ ತಾನೇ ಹೇಳಬಹುದು? ಇಲ್ಲಿ ರಾಜಕೀಯವೇನೂ ಇಲ್ಲ, ಕೇವಲ ಆತ್ಮೀಯತೆ ಇದೆ" ಎಂದು ಶ್ರೀ ಹನುಮಂತಯ್ಯ ಕರ್ನಾಟಕ ಏಕೀಕರಣದ ಸಮಸ್ಯೆಯನ್ನು ವಿವರಿಸಿದರು. ಮೈಸೂರಿನ ವ್ಯಕ್ತಿತ್ವವು ಭಾರತ ಸರಕಾರದೊಡನೆ ಆರ್ಥಿಕ ಒಪ್ಪಂದವನ್ನು ಮಾಡಿಕೊಂಡ ಗಳಿಗೆಯಲ್ಲೇ ಹೋಗಿದೆ; ರಾಜಪ್ರಮುಖರ ಹುದ್ದೆಯು ಕುರಿತಾಗಿಯಾದರೂ ಸರ್ದಾರ್ ಪಟೇಲರು 'ಇದು ಪ್ರಜಾಪ್ರಭುತ್ವದ ಕಾಲ— ಆದುದರಿಂದ ನಾನು ರಾಜ ಮಹಾರಾಜರ ಸ್ಥಾನ ಮಾನಕ್ಕೆ ಭದ್ರತೆ ಕೊಡುವಂತಿಲ್ಲ' ಎಂದಿದ್ದರೆಂಬುದನ್ನು ಅವರು ನೆನಪಿಗೆ ತಂದುಕೊಟ್ಟರು. ಮೈಸೂರಿನ ಹೊರಗಿನ ಎಲ್ಲ ಕನ್ನಡಿಗರಲ್ಲದೆ ಮೈಸೂರಿನೊಳಗಿನ ಹೆಚ್ಚಿನ ಪ್ರಜೆಗಳು ಸಹ ಕರ್ನಾಟಕ ಏಕೀಕರಣಕ್ಕಾಗಿ ಒತ್ತಾಯಿಸುತ್ತಿರುವಾಗ ಪ್ರಜಾಪ್ರಭುತ್ವ ಪದ್ಧತಿಯಂತೆ ಅದಕ್ಕೆ ಮನ್ನಣೆ ಸಿಕ್ಕೆಯೇ ತೀರುವುದು ಎಂದರು.

ಕೇಂದ್ರದ ನೆರವು ನಿಶ್ಚಿತ

ಎಲ್ಲ ಕನ್ನಡ ಪ್ರದೇಶಗಳು ಒಂದಾದರೆ ಸರಕಾರ ಹೆಚ್ಚು ಭದ್ರವಾಗುತ್ತದೆ; ಆದರೆ ನೈಸೂರಿನಲ್ಲಿ ಬೇರೆ (ಉದಾಃ ತೆಲುಗು, ಮಾತನಾಡುವ ಜನರೂ ಸಾಕಷ್ಟು ಸಂಖ್ಯೆಯಲ್ಲಿರುವುದರಿಂದ ಸೂಚಿತ ಕರ್ನಾಟಕ ರಾಜ್ಯವನ್ನು ಭಾಷೆಯನ್ನು ಸೂಕ್ಷೀಕರಿಸುವ "ಕರ್ನಾಟಕ" ಎನ್ನದೆ ಮೈಸೂರೆಂದೇ ಕರೆಯುವುದು ಹಿತಕರ; ಅದರಂತೆ ಈಗಿನ ರಾಜಪ್ರಮುಖರನ್ನು ಹಾಗೆಂದು ಕರೆಯದೆ, ಘಟನಾತ್ಮಕ ರಾಜ್ಯಪಾಲ (ಗವರ್ನರ್) ರಾಗಿ ಉಳಿಸಬಹುದಾಗಿದ್ದರೆ ಅದೂ ಯೋಗ್ಯ. ಮೈಸೂರಿಗೆ ಮಿತವಾದ ಆದಾಯವಿದೆ; ಹೊರಗಿನ ಹಿಂದುಳಿದ ಪ್ರದೇಶಗಳ ಕುರಿತು ಹೆಚ್ಚು ಕರ್ತವ್ಯ ಮಾಡಬೇಕಾಗುವುದೂ ಸುಳ್ಳಲ್ಲ. ಆದರೆ ಆಕಾಶ ನೋಡಲೂ ಜಗಳಾದಬೇಕೆ? ಕೇಂದ್ರ ಸರಕಾರವು ಅಖಿಲ ಭಾರತದ ತಳಹದಿಯಲ್ಲಿ ಅಭಿವೃದ್ಧಿ ಪ್ರಯತ್ನಗಳ ಕಾರ್ಯಕ್ರಮ ರೂಪಿಸುವುದರಿಂದ ಹಿಂದುಳಿದ ಪ್ರದೇಶ ಯಾವ ರಾಜ್ಯದಲ್ಲಿದ್ದರೂ ಅದರ ಅಭಿವೃದ್ಧಿಗೆ ನೆರವು ಸಿಗುತ್ತದೆ; ನಾವು ಬುದ್ಧಿವಂತರಾದರೆ ೨೦ ಮೈಲು ಉದ್ದದ ಕರಾವಳಿಯಲ್ಲಿ ನಾಲ್ಕಾರು ಒಳ್ಳೆಯ ಬಂದರಗಳನ್ನೂ ಕಟ್ಟಿ ಕೊಳ್ಳಬಹುದು ಎಂದು ಶ್ರೀ ಹನುಮಂತಯ್ಯ ವಿವರಿಸಿದರು.

ಸದಸ್ಯರ ಅಭಿಪ್ರಾಯ

ಮುಖ್ಯ ಮಂತ್ರಿಗಳ ಅಭಿಪ್ರಾಯವನ್ನು ಶ್ರೀ. ನಾಗನ ಗೌಡ ಮತ್ತು ಶ್ರೀ. ಸಿದ್ದ ವೀರಪ್ಪ ಎಂಬ ಸಚಿವರಲ್ಲದೆ ಪ್ರತಿಪಕ್ಷದ ಧುರೀಣ ಶ್ರೀ. ಜೆ. ಎಂ. ಇಮಾಮರನ್ನೊಳಗೊಂಡು ಹಲವು ಸದಸ್ಯರು ಬೆಂಬಲಿಸಿ ಮಾತನಾಡಿದರು. ದಾವಣಗೆರೆಯು ಪರಿಷತ್ತಿನ ಹೊತ್ತಿಗೆ ಮೈಸೂರೇತರ ಕನ್ನಡ ಪ್ರದೇಶಗಳು ಪ್ರತ್ಯೇಕ ರಾಜ್ಯವನ್ನು ಹೊಂದುವ ಪರಿಸ್ಥಿತಿಯಲ್ಲಿದ್ದವು. ಆಗ ಇದಕ್ಕೆ ತಡೆಹಾಕಿ, ಮೈಸೂರು ಸಾಹಿತ ಕರ್ನಾಟಕವಾಗಲಿ ಎಂದು ಪ್ರತಿಪಾದಿಸಿದ ಮಹಾನುಭಾವರೇ ಇಂದು ಎರಡು ಕರ್ನಾಟಕಗಳಾಗಲಿ ಎನ್ನುವುದು ಹಾಸ್ಯಾಸ್ಪದ ಎಂಬುದಾಗಿ ಶ್ರೀ ಇಮಾಂ ಹೇಳಿದರು ಎರಡುಕರ್ನಾಟಕಗಳ ಪ್ರತಿಪಾದಕರಾದ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರೂ ಅವರ ಬೆಂಬಲಿಗರೂ ಏಕೀಕರಣದಿಂದ ಮೈಸೂರಿನ ನೆಮ್ಮದಿಗೆ ಭಂಗ ಬರುವುದೆಂದೂ ಅಡಳಿತದ ಬಿಗಿ ಕಡಿಮೆಯಾಗುವುದೆಂದೂ ಹೇಳಿದರು. ಬಳ್ಳಾರಿಯೊಡನೆ ಹೊಂದಿಕೊಳ್ಳುವುದಕ್ಕೆಯೇ ಇನ್ನೆಷ್ಟೋ ವರ್ಷಬೇಕಾದೀತು. ಹೀಗಿರುವಾಗ ನಾಲ್ಕು ಬೇರೆ ಬೇರೆ ಸರಕಾರಗಳ ಅಧೀನದಲ್ಲಿದ್ದ ಕನ್ನಡ ಪ್ರದೇಶಗಳನ್ನು ಒಂದುಗೂಡಿಸಿದರೆ ಕೆಲವು ದಿನಕಳೆಗೆ ಗೋಳು ತಪ್ಪದು ಎಂದರು. ಆದರೆ ಹೀಗೆನ್ನುವವರ ಬೆಂಬಲಕ್ಕೆ ಜನರು ಹೆಚ್ಚಿಲ್ಲ! ಕಾರಣ, ಅವರದೇನೂ ನಡೆಯಲಾರದು.

ಮುಂಡ್ಕೂರು— ಸ್ಥಳೀಯ ಶ್ರೀ ಮಹಿಷಮರ್ದಿನಿ ದುರ್ಗಾಪರಮೇಶ್ವರಿ ಸನ್ನಿಧಿಯಲ್ಲಿ ನಡೆಯಲಿರುವ ಅಪ್ಪಬಂಧ, ಜೀರ್ಣೋದ್ಧಾರಕ್ಕೆ ಮಹಾಪ್ರಭು ಕಲಾಶಾಭಿಶೇಕಾದಿ ಸತ್ಕಾರ್ಯಗಳಿಗೆ ಧರ್ಮಾಭಿಮಾನಿಗಳು ತಮ್ಮನುಮನಧನಗಳಿಂದ ಸಹಾಯನೀಡಿ ಶ್ರೀ ದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಶ್ರೀ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮುಂಡ್ಕೂರು ನಡಿಗುತ್ತು ಡಾ. ಎಮ್. ರಾಮಣ್ಣ ಸೆಟ್ಟಿರು ಅಪೇಕ್ಷಿಸುತ್ತಾರೆ.

ಪುತ್ತೂರು ಪಡ್ನೂರು:— ಸ್ಥಳೀಯ ಪಂಚಾಯತ ಶಾಲಾ ಕಟ್ಟಡವು ಸಿಡಿಲಿನ ಬಡಿತಕ್ಕೆ ತುತ್ತಾಗಿ ದೆಸೆಯಿಂದ ಶಾಲೆಯು ತಾತ್ಕಾಲಿಕ ಕಟ್ಟಡದ ಉದ್ಘಾಟನಾ ಸಮಾರಂಭವು ತಾ. 16ರಲ್ಲು ಸಕೇಲ್ ಶ್ರೀ ಸಾಂತಿಸ್ವಾರಿಗ ಜೈನ್, ಆವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು. ಅಂದು ರಾತ್ರಿ ಶಾಲಾ ಕಟ್ಟಡದಲ್ಲಿ "ನಿಧೀಪಣ ನೀತಿ ಮತ್ತು ಅಂಗದ ಸಂಧಾನ" ಎಂಬ ಯಕ್ಷಗಾನ ಕಾಲಕ್ಷೇಪವಿತ್ತು.

ನಿಟ್ಟೆ— ಸ್ಥಳೀಯ ಪಂಚಾಯತ ಪ್ರೌಢಶಾಲೆಗೆ ಒಳಪಟ್ಟ ದೂಸದ ಕಟ್ಟಿಯಲ್ಲಿ ತಾ. 17ರಲ್ಲು ರೆ. ಫಾ. ಎಫ್. ಎಕ್ಸ್. ಡಿಸೋಜರು ದಾನವಾಗಿ ಕೊಟ್ಟ ಸ್ಥಳದಲ್ಲಿ ನಿಟ್ಟೆ ಪಂಚಾಯತ ಬೋರ್ಡು ಕಟ್ಟಿಸಿದ ಪಂಗಾಮಿ ಶಿಬಿರವಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಆವರು ಸಂತೆಕಟ್ಟೆಯನ್ನು ಉದ್ಘಾಟಿಸುತ್ತಾ, ಸರಕಾರವು ಗ್ರಾಮಗಳ ಅಭಿವೃದ್ಧಿಗಾಗಿ ಹೆಣಗಾಡುವುದೆಂದರು. ಅರಂಭದಲ್ಲಿ ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಎನ್. ರಾಘವ ಆಡ್ಯಂತಾಯರು ಸ್ವಾಗತ ಭಾಷಣ ಮಾಡಿದರು. ಪಂಚಾಯತ ಬೋರ್ಡು ಸದಸ್ಯ ಶ್ರೀ ನಾರಾಯಣರಾವ್ ಕಲ್ಲೆಯವರು ಕಾಲೋಚಿತ ಮಾತುಗಳನ್ನಾಡಿದರು.

ಕುತ್ತೆತ್ತೂರು— ಇಲ್ಲಿ ಹೊಸತಾಗಿ ಕಟ್ಟಿಸಿದ 'ಸನಾಜಸೇವಾ ಭಜನಾಮಂದಿರ'ವನ್ನು ಇದೇ ತಾ. 25ರಲ್ಲಿ ಡಾ. ಕೆ. ನಾಗಪ್ಪ ಆಳ್ವರು ಉದ್ಘಾಟಿಸುವರು. ಮರುದಿನರಾತ್ರಿ ಶ್ರೀ ವಾಸುದೇವ ಕೃಪಾಪೋಷಿತ ಯಕ್ಷಗಾನ ಸಮಿತಿಯವರಿಂದ ಯಕ್ಷಗಾನ ಕಾಲಕ್ಷೇಪ ಜರಗುವುದು.

ಸುರತ್ಕಲ್— ಸುರತ್ಕಲ್ ಆಗ್ಗಿದ ಕರಿಹಾ. ಎ. ಶಾಲೆಯ 60ನೇ ವಾರ್ಷಿಕೋತ್ಸವವು ಈಗಿದ ತಾ. 21ರಲ್ಲಿ ಶ್ರೀ ಕೆ. ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕುಂಪಾಸು ರ ಬೋರ್ಡುಹೈಸ್ಕೂಲ್ ಹಿಂದೀ ಪಂಡಿತ್ ಶ್ರೀ ಚಂದಯ್ಯ ಸುವರ್ಣರು ಶಾಲಾ ಸ್ಥಿತಿ ವಾಚನಮಾಡಿದರು. ಸಂದೇಶ ವಾಚನ, ವರದಿ ವಾಚನ, ಪಾರಿತೋಷ ವಿತರಣೆ ಮೊದಲಾದ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ಕುಂಬಳೆ— ಸಹಕಾರಿ ದಿನಾಚರಣೆ ಸಂಬಂಧವಾಗಿ ತಾ. 9ರಂದು ಟೌನ್‌ಬೇಂಕ್ ಕಟ್ಟಡದಲ್ಲಿ ಶ್ರೀ. ಎ. ಸಿ. ಭಂಡಾರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಗಳಾದ ಬಿ. ಮಾಧವ ಪೈ, ಕೆ. ಕಣ್ಣಪ್ಪ ಮೊದಲಾದವರಿಂದ ಭಾಷಣಗಳಾದುವು.

ಕಿನ್ನಿಗೋಳಿ— ಕಿನ್ನಿಗೋಳಿ ಮತ್ತು ಸುತ್ತಮುತ್ತಿನ ಸಹಕಾರಿ ಸಂಘಗಳ ಸಮಿತಿಯಿಂದ ರೂರಲ್ ಬೇಂಕಿನಲ್ಲಿ ಸಹಕಾರಿ ದಿನಾಚರಣೆಯು ಡಾ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು.

ಡಾ ವಿ. ಪಿ ಅಸ್ರಣ್ಣರ ಪೌರೋಹಿತ್ಯ ಭಾಷಣಾ ನಂತರ ಶ್ರೀ ಕೆ. ಶ್ರೀಧರ ಸೆಟ್ಟರು ಸ್ವಾಗತಭಾಷಣವಿತ್ತರು. ಶ್ರೀಗಳಾದ ಸಿ. ರಾಮಮಣ್ಣ ಸೆಟ್ಟಿ, ಎಸ್. ಕಾಮತ್ ಮೊದಲಾದವರು ಕಾಲೋಚಿತವಾಮಾತುಗಳನ್ನಾಡಿದರು. ಶ್ರೀ ಕೆ. ಅನಂತಪದ್ಮನಾಭ ಉಡುಪರು ಧನ್ಯವಾದಗಳನ್ನರ್ಪಿಸಿದರು.

ಶಿವಳ್ಳಿ— ಸ್ಥಳೀಯ ಪಂಚಾಯತ ಬೋರ್ಡಿನ ಸಭೆಯು ತಾ. 15ರಲ್ಲಿ ಶ್ರೀ ಎಸ್. ಎ. ಹೆಗ್ಡೇರೆ ಅಧ್ಯಕ್ಷತೆಯಲ್ಲಿ ಸೇರಿ, ಲೋಕಲ್ ಫೆಂಡ್ ಮೆಂಟ್ ಸ್ಕೀಮಿನಿಂದ ತೆರೆಯಲ್ಪಡುವ ಶಿವಳ್ಳಿ ಶಿಶು ವಿಹಾರಕ್ಕೆ ರೂ 100/-, ಮಂಚಕಲ್ಲಿನಿಂದ ಮೈಲು ರಸ್ತೆಯನ್ನು ದಾಮರುರಸ್ತೆಯನ್ನಾಗಿ ಮಾರ್ಪಡಿಸುವಲ್ಲಿ ರೂ. 1500/- ಸಹಾಯಧನವೀಯುವ, ಮಂಚಕಲ್ಲು ಕೊಟ್ಟಗುರಿ ದಾರಿ ನಿರ್ಮಿಸುವರೆ ರೂ. 100/- ಸೆಂಕ್ಷನ್ ಮಾಡುವ, ಪಂಚಮಾತ ಕಡತವನ್ನು ಆಡಿಟ್ ಜಂಟಿ ಹೊಳೆಗೆ ವರ್ಗಾಯಿಸುವ ಮೊದಲಾದ ನಿರ್ಣಯಗಳಾದುವು.

ಉಪ್ಪುಂದ— ಸ್ಥಳೀಯ ವಿವಿಧೋದ್ದೇಶ ಸಹಕಾರಿ ಸಂಘದ ಆಶ್ರಯದಲ್ಲಿ 'ಸಹಕಾರಿ ಸಪ್ತಾಹ' ದಿನಾಚರಣೆಯು ಜರಗಿತು. ಅಂದು ಬೆಳಿಗ್ಗೆ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಕೆ. ಎಲ್. ತಂಬನ್, ಆವರು ಸಹಕಾರಿ ಧ್ವಜವನ್ನಾರೋಹಿಸಿದರು. ಸಂಜೆ ಡಾ. ಎಸ್. ಜಿ. ಹೊಸ್ಕೋಟೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಯು. ನರಸಿಂಹ ವೈಮರು ಸ್ವಾಗತಭಾಷಣಮಾಡಿದರು. ಶ್ರೀ ಪಿ. ಸಿ. ಹೊಳ್ಳರು 'ಅಮರತ್ವ ಸಹಕಾರ' ಎಂಬ ಗೀತೆಯನ್ನು ಹಾಡಿದೆವು. ಶ್ರೀಗಳಾದ ಬಿ. ಚಂದ್ರಶೇಖರ ಹೊಳ್ಳ, ಎಸ್. ಸೀತಾರಾಮ ಪುರಾಣಿಕ, ಬಿ. ಮೋನಪ್ಪ ಮೊಗಲಾದವರ ಭಾಷಣಗಳಾದುವು.

ಬೈಂದೂರು— ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಚ್. ಗಣಪತಿ ಕೆದಿಲಾಯರ ಅಧ್ಯಕ್ಷತೆಯಲ್ಲಿ 'ಸಹಕಾರಿ ಸಪ್ತಾಪವು' ಯಶ್ವಿಯಾಗಿ ಸಹಕಾರಿ ಸಂಘದ ಆಶ್ರಯದಲ್ಲಿ ಆಚರಿಸಲ್ಪಟ್ಟಿತು. ಶ್ರೀಗಳಾದ ಬಿ. ಸಿ. ಹೊಳ್ಳ, ಬಿ. ಚಂದ್ರಶೇಖರ ಹೊಳ್ಳ, ಎಮ್. ಗಣಪಯ್ಯ ಹೆಬ್ಬಾರ್ ಮೊದಲಾದವರು ಕಾರ್ಯೋಚಿತಮಾತುಗಳನ್ನಾಡಿದರು. ಶ್ರೀ ಸುಬ್ಬಣ್ಣ ಸೆಟ್ಟರು ಧನ್ಯವಾದಸಮರ್ಪಿಸಿದರು.

ತೆಕ್ಕಟ್ಟೆ—ಪಂಡಿತ ನೆಹರೂರವರ ಜನ್ಮದಿನಾಚರಣೆಯು ತಾ. 14ರಲ್ಲು ಶ್ರಾಂತಿಕ ಗಾಂಧೀಸ್ಮಾರಕ ನಿಧಿಯ ಸಂಚಾಲಕರಾದ ಶ್ರೀ. ನಾಯಕ ಮಾಸ್ತರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಸುಶೀಲಾ ಕಟೆಯಾಡಿ, ಶ್ರೀಗಳಾದ ಸುಂದರ ಸೆಟ್ಟಿ ಮತ್ತು ನಾರಾಯಣ ಸೆಟ್ಟರು ಭಾಷಣ ಮಾಡಿದರು. ಸಭಾಪತಿಗಳು ಭೂದಾನ ಯಜ್ಞದ ಸಂದೇಶವನ್ನು ವಿವೇಚಿಸಿದರು, ವಕ್ವಾಡಿ ಶಾಲಾ ಮಾಸ್ತರ್ ಶ್ರೀ. ವಿ. ವಿಠಲ ಸೆಟ್ಟರು ತನ್ನ ವೇತನದಲ್ಲಿಯ ರೂಪಾಯಿ ಒಂದಕ್ಕೆ ಒಂದು ಜುಡ್ತಿ ಸಂಪತ್ತಿದಾನ ಯಜ್ಞಕ್ಕೆ ಕಾಣಿಕೆ ಕೊಡುವ ಸಂಕಲ್ಪವನ್ನು ಜಾಹೀರುಮಾಡಿ ತನ್ನೆಲ್ಲ ಕಾಣಿಕೆಯನ್ನು ಅಧ್ಯಕ್ಷರು ಸ್ವೀಕರಿಸಬೇಕೆಂದು ಭಿನ್ನವಿಸಿದರು.

ವಕ್ವಾಡಿ—ಇಲ್ಲಿಯೂ ತಾ. 14ರಲ್ಲು ರಾತ್ರಿ ಗ್ರಾಮ ಸೇವಾ ಸಂಘದ ವತಿಯಿಂದ ನೆಹರೂ ಜಯಂತಿಯು ಶ್ರೀ. ನಾಯಕ ಮಾಸ್ತರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಶ್ರೀನಿವಾಸ ಪೈ, ಪಿ. ಶಾಮ ಸೆಟ್ಟಿ ಮೊದಲಾದವರು ಭಾಷಣವಿತ್ತರು. ಶ್ರೀ. ಶಿವರಾಯ ಸೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಅಲೂರು— ತಾ. 14ರಲ್ಲಿ ರಾತ್ರಿ ಜವುಳಿ ವ್ಯಾಪಾರಿ ಶ್ರೀ ಹರ್ಕೂರು ಹಿರಿಯಣ್ಣ ಸೆಟ್ಟರಲ್ಲಿ ಶ್ರೀ ಧನಲಕ್ಷ್ಮಿ ಪೂಜೆಯು ಅಂಗವಾಗಿ, "ಕೃಷ್ಣ ಸಂಧಾನ" ಎಂಬ ಯಕ್ಷಗಾನ ತಾಳಮದ್ದಳೆಯು ಸುರತಿ ಅರ್ಥಧಾರಿಗಳ ಕೂಡುವಿಕೆಯಿಂದ ಸಾಂಗವಾಗಿ ಜರಗಿತು.

ಸುಳ್ಯ— ತಾ. 6ರಲ್ಲು ಸುಳ್ಯ ಸಹಕಾರಿ ಯೂನಿಯನ್ ಆಶ್ರಯದಲ್ಲಿ ಸಹಕಾರಿ ದಿನಾಚರಣೆ ಆಚರಿಸಲ್ಪಟ್ಟಿತು. ಬೆಳಿಗ್ಗೆ ಸಹಕಾರಿ ಧ್ವಜಾರೋಹಣೆಯಾದಬಳಿಕ ಪುತ್ತೂರು ವಕೀಲ್ ಶ್ರೀ ಬಿ. ಪ್ರಭಾಕರ ರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಸುಳ್ಯ ಧಾನ್ಯದ ಬೇಂಕಿನ ಅಧ್ಯಕ್ಷ ಶ್ರೀ ಬಿ. ಜಿ. ರಾಮಣ್ಣ ರೈಗಳು ಸಹಕಾರ ಘೋಷಣೆಯನ್ನು ಓದಿದರು. ಸುಳ್ಯ ಸಹಕಾರಿ ಯೂನಿಯನ್ ಅಧ್ಯಕ್ಷ ಶ್ರೀ ಕೆ. ಎಮ್. ಗೌಡರು ಸಂದೇಶಗಳನ್ನೋದಿದರು. ಶ್ರೀಗಳಾದ ಕೆ. ಪುಟ್ಟಣ್ಣ ಗೌಡ, ವಿದ್ವಾನ್ ಜ್ಞೋಕ್ ಡೆವಲಪ್ ಮೆಂಟ್ ಎಕ್ಸ್‌ಟೆನ್ಷನ್ ಆಫೀಸರ್, ರಾಜಗೋಪಾಲನ್, ಎಸ್. ಎಮ್. ಪಾಂಡುರಂಗ ಕಾಮತ್ ಮೊದಲಾದವರ ಭಾಷಣಗಳಾದುವು.

ಹೊಸಕೆರೆ ಚಿದಂಬರಯ್ಯನವರ

ಯ ಸಮೂಲ ಭಾಷಾಂತರ
ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಮಂಗಳೂರು ಬಂದರವನ್ನು:— ಸರ್ವ ಋತು ಬಂದರಾಗಿ ಮಾರ್ಪಡಿಸುವ ಕೆಲಸವನ್ನು ಕೈಗೊಳ್ಳುವರೆ ದ್ವಿತೀಯ ಪಂಚ ವಾರ್ಷಿಕ ಯೋಜನೆಯು ಅವಧಿಯಲ್ಲಿ ಎರಡು ಕೋಟಿ ರೂಪಾಯಿಗಳ ವೆಚ್ಚದ ಏರ್ಪಾಡಾಗಿ ರುವುದೆಂದು ತಿಳಿಯಬರುತ್ತದೆ.

ಹಜೂರು ಟ್ರೆಜರಿ ನೋಸಪೈಕರಣ— ಮಂಗಳೂರಿನ ಹಜೂರು ಟ್ರೆಜರಿಯಲ್ಲಿ ನಡೆದ ಸಾಧಾರಣ 3 25 ಲಕ್ಷದಷ್ಟು ಸರಕಾರೀ ಧನದ ಪಂಚಣೆಯ ಸ್ಥಳಾಂತರದಲ್ಲಿ ಟ್ರೆಜರಿ ಕ್ಲಾರ್ಕ್ ಆಗಿದ್ದ ಡಿ. ಕೋಬರ್ಟರಿಗೆ ೭೦೦ ರೂ ಬಹುಮಾನ ಸಿಕ್ಕಿತು. ಈ ಸಂದರ್ಭದಲ್ಲಿ ಅವರಿಗೆ ಸಾರ್ವಜನಿಕ ಸಭೆಯೊಂದರಲ್ಲಿ ಸನ್ಮಾನ ಮಾಡಲಾಯಿತು.

ಪುಟಿಚೆಂಡು- ಕವಿತಾ ಸಂಕಲನ. ಭಾಗ-೧. ೧೩೪. ಭಾಗ-೨.೧೦೪ ಜನರ ಕವಿತೆಗಳು.

ಆನೆಕಲ್ಲು- ಕಥಾ ಸಂಕಲನ. ಭಾಗ-೧. ೪೦, ಭಾಗ-೨. ೪೬ ಜನರ ಕಥೆಗಳು. ಭಾ-೧-ರಿಂದ ೪, ೨—ರಿಂದ ೭ ಪಕ್ಷಗಳಿಗೆ. ಬೆಲೆ ೧೨ ಆಣೆಯಂತೆ. ಉತ್ತರದ ಶ್ರೀ ಬೇಂದ್ರೆಯರಿಂದ, ದಕ್ಷಿಣದ ಶ್ರೀ ಕುವೆಂಪು, ಪೂರ್ವದ ಶ್ರೀ ಕಾವ್ಯಾನಂದರಿಂದ, ಪಶ್ಚಿಮದ ಶ್ರೀ ಗೋವಿಂದ ಪೈ ಅವರ ವರೆಗಿನ ೪೦೦ ಜನ ಲೇಖಕರ ವಿವಿಧ ಕೃತಿ, ಪ ವೃತ್ತಿ ಪರಿಚಯಗಳನ್ನೂ ಒಂದೇ ಕಡೆಗೆ ಕಾಣಬೇಕೆಂದಿದ್ದರೆ, ಶಿಕ್ಷಕರಿಗೆ ಬೆಂಬಲ ನೀಡಲು ಇಂದೇ ಬರೆಯಿರಿ. ವಿದ್ಯಾರ್ಥಿಗಳಿಗೆ ಆಂಚಿ ವೆಚ್ಚ ಉಚಿತ.

ಶಿಕ್ಷಕರೆಲ್ಲ ಬೆಂಬಲಿಸಿದಿ ಸೇವೆ ತಕ್ಕೊಳ್ಳಬೇಕಾಗಿ ವಿನ್ನಹ.

ಭಾರತೀ ಸಾಹಿತ್ಯ ಭಂಡಾರ ಯರನಾಳ.

ಅಂಚೆ:— **ಮನಗೋಳಿ.** ಜಿ:— **ವಿಜಾಪುರ.**

ಮಂಗಳೂರು ಬಂದರವನ್ನು:— ಸರ್ವ ಋತು ಬಂದರಾಗಿ ಮಾರ್ಪಡಿಸುವ ಕೆಲಸವನ್ನು ಕೈಗೊಳ್ಳುವರೆ ದ್ವಿತೀಯ ಪಂಚ ವಾರ್ಷಿಕ ಯೋಜನೆಯು ಅವಧಿಯಲ್ಲಿ ಎರಡು ಕೋಟಿ ರೂಪಾಯಿಗಳ ವೆಚ್ಚದ ಏರ್ಪಾಡಾಗಿ ರುವುದೆಂದು ತಿಳಿಯಬರುತ್ತದೆ.

ಹಜೂರು ಟ್ರೆಜರಿ ನೋಸಪೈಕರಣ— ಮಂಗಳೂರಿನ ಹಜೂರು ಟ್ರೆಜರಿಯಲ್ಲಿ ನಡೆದ ಸಾಧಾರಣ 3 25 ಲಕ್ಷದಷ್ಟು ಸರಕಾರೀ ಧನದ ಪಂಚಣೆಯ ಸ್ಥಳಾಂತರದಲ್ಲಿ ಟ್ರೆಜರಿ ಕ್ಲಾರ್ಕ್ ಆಗಿದ್ದ ಡಿ. ಕೋಬರ್ಟರಿಗೆ ೭೦೦ ರೂ ಬಹುಮಾನ ಸಿಕ್ಕಿತು. ಈ ಸಂದರ್ಭದಲ್ಲಿ ಅವರಿಗೆ ಸಾರ್ವಜನಿಕ ಸಭೆಯೊಂದರಲ್ಲಿ ಸನ್ಮಾನ ಮಾಡಲಾಯಿತು.

ಧನ ಸಂಗ್ರಹ — ಮಂಗಳೂರಿನ ವಿವಿಧ ಸಮಾಜಸೇವಾ ಸಂಸ್ಥೆಗಳ ಕಾರ್ಯಕಲಾಪಗಳಿಗಾಗಿ ಧನ ಸಂಗ್ರಹಿಸಲು ಇದೇ ತಾ. ೧೨ ಮತ್ತು ೧೩ರಲ್ಲಿ ಸರಕಾರೀ ಕಲಾಶಾಲೆಯ ವಠಾರದಲ್ಲಿ ಸ್ವಯಂ ಸೇವಾ ಸಮಾಜದ ವತಿಯಿಂದ ಒಂದು ಮಾರಾಟ ಮತ್ತು ವಿನೋದಾವಳಿ ಕಾರ್ಯಕ್ರಮ ನಡೆಯಿತು. ಸಾಧಾರಣ ಮೂರು ಸಾವಿರ ರೂಪಾಯಿಗಳಷ್ಟು ಧನ ಸಂಗ್ರಹವಾಗಿದೆ ಎನ್ನಲಾಗಿದೆ.

ದ. ಕ. ಜಿಲ್ಲಾ ಬೋರ್ಡು ಸಭೆಯು ಇದೇ ತಾ ೨೮ನೆ ಶನಿವಾರ ಅಪರಾಹ್ನ 2ಗಂಟೆಗೆ ಜಿಲ್ಲಾ ಬೋರ್ಡು ಸಭಾಭವನದಲ್ಲಿ ಜರಗಲಿರುವುದು.

ಗ್ರಾಮ ನಾಯಕರ ಮೈಸೂರು ಪ್ರವಾಸ— ಮಂಗಳೂರು ಸಮಾಜಪಕಾಸ ಯೋಜನಾ ಕ್ಷೇತ್ರದ ಸುಲಭ ಗ್ರಾಮಗಳಿಂದ ಆರಿಸಲ್ಪಟ್ಟ 18 ಮಂದಿ ಗ್ರಾಮಪನಾಯಕರು ಮತ್ತು ತರುಣ ರೈತರು ಮೈಸೂರು ರಾಜ್ಯದ ಸಲವು ನೃಸಾಯ ಮತ್ತು ಕೈಗಾರಿಕಾ ಕ್ಷೇತ್ರಗಳನ್ನು ಕಾಣಲು, ಮಂಗಳೂರು ಸಮಾಜಶಿಕ್ಷಣ ಸಂಘಟಕರಾದ ಶ್ರೀ ಎಸ್ ಆರ್. ನಾರಾಯಣಸ್ವರ ನೇತೃತ್ವದಲ್ಲಿ ಒಂದು ವಾರ ಶಿಕ್ಷಣಪ್ರವಾಸವನ್ನು ಇದೇ ತಾ. ೧೪ರಲ್ಲು ಕೈಗೊಂಡರು.

ಸೈಗಂಬರ ದಿನಾಚರಣೆ— ಕೆನರಾ ಹೈಸ್ಕೂಲ್ (ಮೈನ) ನಲ್ಲಿ ತಾ. ೧೪ರಂದು ಸೈಗಂಬರ ದಿನಾಚರಣೆಯು ಶ್ರೀ ಅಮೀರ್ ಮೈಸೂರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎಸ್. ಎಸ್. ನಾಯಕ್, ಬಿ. ಎನ್. ಇವರಿಬ್ಬರು ಬೊದಲಾದವರು ಕಾರ್ಯೋಚಿತವಾಗಿ ತುಗಳನ್ನಾಡಿದರು. ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಮುಸ್ಲಿಂ ವಿದ್ಯಾರ್ಥಿಗಳು ಸಂಗ್ರಹಿಸಿದ ಧನವನ್ನು ವಿದ್ಯಾರ್ಥಿನೇತನ ನಿಧಿಗೆ ಶಾಲಾ ಹೆಡ್ಮಾಸ್ಟರ್ ಶ್ರೀ ಶ್ರೀನಿವಾಸ ಕಿಣಿಯವರ ವಶ ಕೊಡಲಾಯಿತು.

ಹುಣ್ಣಿ ದಿನಾಚರಣೆ— ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ತಾ. 17ರಲ್ಲಿ ಸಂಜೆ ಭಾವಟಿಗುಡ್ಡೆಯಲ್ಲಿರುವ ಕಾಂಗ್ರೆಸ್ ಕಾರ್ಯಾಲಯದಲ್ಲಿ ದಿವಂಗತ ಲಾಲಾ ಲಜಪತರಾಯರ ಪುಣ್ಯದಿನವು ಆಚರಿಸಲ್ಪಟ್ಟಿತು

ದೇರೆಬೈಲು— ಎರೆಡನೇ ತೇಂಕಣವಾದಿನ ಕಾಂಗ್ರೆಸ್ ಕಮಿಟಿ ಸಭೆಯು ಜರಗಿ ಹೊಸವರ್ಷಕ್ಕೆ ಶ್ರೀಗಳಾದ ಎ ಜೊಡಕ್ಕ, ಅಧ್ಯಕ್ಷ, ಲಾರೆನ್ಸ್ ಸಿಕೇರ, ಉಪಾಧ್ಯಕ್ಷ; ಬಿ. ಹರಿಶಂದ್ರಾಚಾರ್, ಕಾರ್ಯದರ್ಶಿ; ಟಿ. ಶ್ರೀನಿವಾಸ ರಾವ್, ಜತೆಕಾರ್ಯದರ್ಶಿ; ಕೆ. ತೀನ ಸಟ್ಟಿ, ಕೋಶಾಧಿಕಾರಿ ಮತ್ತು ಇತರ ಹತ್ತು ಮಂದಿಯುಳ್ಳ ಕಾರ್ಯಕಾರೀ ಸಮಿತಿಯು ರಚಿಸಲ್ಪಟ್ಟಿತು.

ಭಾಷಣ— ಸೆಂಟ್ ಆಗ್ನೇಸ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ 17ರಲ್ಲಿ ನಿದ್ವಾನ್ ಶ್ರೀ ಪಿ. ಕೃಷ್ಣಯ್ಯನವರು 'ಕನ್ನಡ ಸಾಹಿತ್ಯದಲ್ಲಿ ವೀರಶೈವ ಕವಿಗಳೆಂದಾದೊಕ್ಕಾಂತಿ' ಎಂಬ ವಿಷಯದಲ್ಲಿ ಭಾಷಣ ವಿತ್ತರು. ಕಾಸ್ಮರ್ಗೋಡು ತಾಲೂಕು ಕರ್ನಾಟಕದ ಅಂಶವೇ ಆಗಿರುವುದರಿಂದ ಪ್ರತಿಪಾದಿಸಿದರು.

ಸ್ಥಾಪನಾ ದಿನಾಚರಣೆ- ಪಬ್ಲಿಸಿಟ್ಟಿ ಮತ್ತು ಥಿಯೊಸಾಫಿಕಲ್ ಸೊಸೈಟಿ ಸ್ಥಾಪನಾ ದಿನವು ಮಂಗಳೂರು ಬೆಸೆಂಟ್ ಬಾಲಿಕಾ ನಿಲಯ ಶಾಲೆಯ ವೆಂಕಟೇಶ ಪೈ ಕಲಾ ಮಂಟಪದಲ್ಲಿ ತಾ. 17ರಲ್ಲು ಸಂಜೆ ಶ್ರೀಮತಿ ಶಾರದಾ ಬಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿಗಳಾದ ಮೀರಾ ಬಾಯಿ ಕಾಮತ್ ಎಮ್. ಲೀಲಾ ಬಾಯಿಯವರು ಪದ್ಮ ವಿಹಾರ ಮತ್ತು ಥಿಯೊಸಾಫಿ ಸೊಸ್ಯಾಟಿ ವಕ್ತಿಗಳನ್ನು ಆಸಕ್ತನುವಾಗಿ ಹಿಡಿದರು. ಡಾ! ಪಿ. ಗೊಲ್ಲರ ಕೇರಿಯವರು ನೂತನವಾಡಿದ ಬಳಿಕ ಪದ್ಮವಿಹಾರ ನಿವಾಸಿ ವಿದ್ಯಾರ್ಥಿನಿಯರಿಂದ ನರ್ತನಾದಿ ಕಾರ್ಯಕ್ರಮಗಳಾಮವು. ಕುಮಾರಿ ಡಿ. ಪ್ರೇಮಲತೆಯವರು ಧನ್ಯವಾದ ಗಳನ್ನರ್ಪಿಸಿದರು.

ದೀಪಾವಳಿ ಉತ್ಸವ- ಬೆಸೆಂಟ್ ಬಾಲಿಕಾ ಶಾಲೆ ಕಾಲೆಯ ಹೊಸ ಕಟ್ಟಡಕ್ಕೆ ಹಳೆ ವಿದ್ಯಾರ್ಥಿ ಸಂಘವಾದ ವಕಂತ ಪ್ರೇಮಿ ಮಂಡಳಿಯವರಿತ್ತ ವಿದ್ಯುದ್ದೀಪಗಳನ್ನು ಬೆಳಗುವ ಸಮಾರಂಭವು ತಾ 14ರಲ್ಲು ಸಂಜೆ ಡಾ! ಎಸ್. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ. ರಾಧಾ ಎಲ್. ರಾಯರು ವಂದನಗಳನ್ನರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ರಾಘವಾಂಕ ಕವಿಜಯಂತಿಯು ಸ್ಥಳೀಯ ಸರಕಾರೀ ಕಾಲೇಜಿನಲ್ಲಿ ತಾ. 12ರಲ್ಲಿ ಸಂಜೆ ಶ್ರೀ ಕಯ್ಯಾರ ಕಿಂಞಣ್ಣ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ವಿಮಲಾ ಅವರು ಸ್ವಾಗತ ಬಯಸಿದರು. ವೈಸೂರಿನ ಶ್ರೀ ಎಸ್. ಆನಂತ ನಾರಾಯಣ ರಾಯರು ರಾಘವಾಂಕನ ಇತರ ಕೃತಿಗಳ ವಿಚಾರವಾಗಿ ಮಾತನಾಡುತ್ತಾ ಹರಿಶ್ಚಂದ್ರ ಕಾವ್ಯದಲ್ಲಿ ಮಾನಾನುಭಾವರಿಬ್ಬರ ಮಧ್ಯೆ ಸಿಲುಕಿದ ಹರಿಶ್ಚಂದ್ರನೂ ಮಹಾನುಭಾವನಾದನೆಂಬುದನ್ನು ವಿವರಿಸಿದರು. ಜಯಂತಿ ಅಂಗವಾಗಿ ಅದೇ ದಿನ 'ಭಿಷ್ಮಾರ್ಜುನ' ಎಂಬ ಯಕ್ಷಗಾನವೊಂದು ಪ್ರದರ್ಶನವಾಯಿತು. ಶ್ರೀಗಳಾದ ಕೆ. ಜಗನ್ನಾಥ ಶೆಟ್ಟಿಯವರೆ ಡಾಡುಗಾರಿಕೆ ಮತ್ತು ರಾಮಕೃಷ್ಣಯ್ಯನವರೆ ಮೃದಂಗವಾದನದಿಂದ ಜರಗಿತ್ತು. ಶ್ರೀ ಗಳಾದ ಎಮ್. ಸೀತಾರಾಮಯ್ಯ, ಬೆಳ್ಳಾರೆ ಕಟ್ಟಣ್ಣ ರೈ, ಕೆ. ಕಾಂತ ರೈ, ಎಸ್. ಕೃಷ್ಣ ಭಟ್ ಇವರು ಅರ್ಥವಿಸಿದರು.

ನೆಹರೂ ಜಯಂತಿ— ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ನೆಹರೂ ಜಯಂತಿಯು ಬೆಳಿಗ್ಗೆ 7 ಗಂಟೆಗೆ ಕಾಂಗ್ರೆಸ್ ಕಚೇರಿಯಿಂದ ಪ್ರಭಾತ ಫೇರಿ ಹೊರಟು ಕೇಂದ್ರ ಮೈದಾನಿಗೆ ತಲ್ಪಿ 8 ಗಂಟೆಗೆ ಧ್ವಜ ವಂದನೆಯಾಗಿ 10 ತಾಸಿಗೆ ಕಾಂಗ್ರೆಸ್ ಮಹಿಳಾ ವಿಭಾಗದ ನೇತೃತ್ವದಿಂದ ಕಾಂಗ್ರೆಸ್ ಕಚೇರಿಯಲ್ಲಿ ಕುಮಾರಿ ಪ್ರೇಮಲತಾ ಹೆಡ್ಡೆಯರ ಸಂಜಾಲಕತ್ವದಲ್ಲಿ ಶಾಲಾ ಮಕ್ಕಳಿಂದ ನೂಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸಂಜೆ ಆರು ಗಂಟೆಗೆ ಕೇಂದ್ರ ಮೈದಾನದಲ್ಲಿ ಶ್ರೀ. ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಎ. ಶಂಕರ ಅಳ್ವ, ಬಿ. ಜಗನ್ನಾಥ ಶೆಟ್ಟಿ, ಬಿ. ಹರಿಶ್ಚಂದ್ರಾಚಾರ್ಯರುಗಳು ಮತ್ತು ಡಾ! ಯು. ಪಿ. ಪಾಲ್ಯರು ಭಾಷಣವಿತ್ತರು. ಶ್ರೀ. ಬಿ. ಆರ್. ಕರ್ಕೇರರು ಧನ್ಯವಾದ ವಿತ್ತರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಥಮ ಮಹಾಸಭೆಯು ತಾ. 4-12-55 ನೇ ಆದಿತ್ಯವಾರ ಅಪರಾಹ್ನ 3 ಗಂಟೆಗೆ ಅಧಿಕಾರಿ ವರ್ಗ ಮತ್ತು ಕಾರ್ಯಕಾರಿ ಸಮಿತಿಯ ಚುನಾವಣೆಗಾಗಿ ಜರಗಲಿರುವುದು.

ಮಂಗಳೂರು ನಗರ ಸಭಾಪತಿಗಳಾಗಿ ಶ್ರೀ. ಸೂರ್ಯನಾರಾಯಣ ಅಡಿಗರ ಆಯ್ಕೆ — ತಾ. 21ರಂದು ಮಂಗಳೂರು ನಗರ ಸಭೆಯ ಹೊಸ ಸದಸ್ಯರ ಮೊದಲ ಸಭೆಯು ಕುದ್ಮಲ್‌ರಂಗರಾವ್ ರೆ! ಡಿ! ಆ ಫೀಸರ್ ಶ್ರೀ. ಸಿ. ಪಿ. ಭಾಸ್ಕರ ಮೆನೋನರ ಅಧ್ಯಕ್ಷತೆಯಲ್ಲಿ ಜರಗಿತು. ಸದಸ್ಯರೆಲ್ಲರಿಗೆ ಪ್ರಮಾಣ ಸ್ವೀಕಾರವಾದ ಮೇಲೆ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಹೆಸರನ್ನು ನಗರಾಧ್ಯಕ್ಷ ಸ್ಥಾನಕ್ಕೆ ಶ್ರೀ. ಮಹೇಲ್ ಶ್ರೀನಿವಾಸ ನಾಯ್ಕರು ಸೂಚಿಸಿ, ಶ್ರೀ. ಕೆ ವಿಶ್ವನಾಥ ಕಾಮತರು ಅನುಮೋದಿಸಿದರು. ಶ್ರೀ ಎಂ. ಶಾಂತಾರಾಮ ಪೈಗಳ ಹೆಸರನ್ನು ಶ್ರೀ ವಾಮನ ಕೊಡಿಯಾಲ ಬೈಲರು ಸೂಚಿಸಿ ಶ್ರೀ ಸಿಂಪ್ಸನ್ ಸೋನ್ಸ್ ಅನುಮೋದಿಸಿದರು.

ಆಗ ಡಾ! ನಾಗಪ್ಪ ಅಳ್ವರು ಕಾಂಗ್ರೆಸ್ ಪಕ್ಷಕ್ಕೆ ಅತ್ಯಧಿಕ ಬಹುಮತವಿರುವುದರಿಂದ ಶ್ರೀ ಪೈಗಳು ಹಿಂತೆಗೆಯಬೇಕೆಂದೂ ಒಮ್ಮತದ ಆಯ್ಕೆ ಆಗುವುದು ಸೂಕ್ತವೆಂದೂ ವಿನಂತಿಸಿದರು. ಆದರೆ ಅದು ಸಫಲವಾಗದ್ದರಿಂದ ಮತದಾನ ನಡೆದು ಶ್ರೀ ಅಡಿಗರಿಗೆ 25, ಶ್ರೀ ಪೈಗಳಿಗೆ 6 ಮತಗಳು ಬೊರೆದು ಶ್ರೀ ಅಡಿಗರು ಪ್ರಚಂಡ ಬಹುಮತದಿಂದ ಚೆಯರ್‌ಮೆನರಾಗಿ ಆಯ್ಕೆ ಹೊಂದಿದರು. ಇಬ್ಬರು ಸದಸ್ಯರು ಮತದಾರರ್ಲಿ ಭಾಗವಹಿಸಲಿಲ್ಲ. ಒಂದು ಮತ ಅಸಿಂಧುವಾಯಿತು. ಬಳಿಕ ಶ್ರೀ ಎಂ. ಶಾಂತಾರಾಮ ಪೈ, ಡಾ! ಕೆ. ನಾಗಪ್ಪಾಳ್ವ, ಶ್ರೀಮತಿ ಮೇರಿ ಬ್ರಿಟ್ಟೊ, ಶ್ರೀಗಳಾದ ಕೆ. ವಿಶ್ವನಾಥ ಕಾಮತ್, ಎಫ್. ಎಕ್ಸ್ ಡಿ. ಪಿಂಟೊ ಮೊದಲಾದವರು ಶ್ರೀ ಅಡಿಗರನ್ನು ಅಭಿನಂದಿಸಿ ಭಾಷಣ ಮಾಡಿದರು. ಮಾ! ಕಾ ಶ್ರೀ. ಎ. ಕೆ. ರಾಘವನರು ಹೊಸ ಸಭಾಧ್ಯಕ್ಷರಿಗೆ ಶುಭಾಶಯ ವಿತ್ತರು. ಶ್ರೀ. ಅಡಿಗರು ತಮ್ಮ ಕುರಿತು ಮೆಚ್ಚಿಕೆ ವ್ಯಕ್ತಪಡಿಸಿದ ಬಗ್ಗೆ ವಿಶ್ವಾಸಿಗೂ ಆಧಾರ ಸೂಚಿಸಿ ನಗರಾಭಿವೃದ್ಧಿಗಾಗಿ ಸರ್ವರ ಸಹಕಾರ ಕೋರಿದರು.

ವೈಷ್ಣವ ತಿಖಾಮಣಿ
ಕನಕದಾಸ ವಿರಚಿತ

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ನೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ.

ಬೆಲೆ: ೦—೨—೦

ನವಯುಗ ಪ್ರೆಸ್ ಉಡುಪಿ

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ನ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೊ:— (1) ಉಡುಪಿ (2) ಮರಾತ ಗೆಲ್ಲಿ, ಹುಬ್ಬಳ್ಳಿ.

ಜನಪ್ರಿಯ ಪುಸ್ತಕದ ನೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: **ಡಾಕ್ಟರ್ ಕೊರಡ್ಡಿಲ್ ವೆಂಕಟ್ರಾವ್, ಎಲ್. ಐ. ಎಮ್.**

"Ably written—Quite up-to-date valuable service"
ಎಂದು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ವೈದ್ಯರತ್ನ ಕೇಪ್ಟನ್ ಜೆ. ಶ್ರೀನಿವಾಸ ಮೂರ್ತಿ, ಎಮ್. ಡಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿಯ್ದಾರೆ.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹಿರಿಗೆ ವಿಧಾನ ಕವಿಸಿತ್ತಾವಾರಗು ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟಿ. ಖರ್ಚು ಬೇರೆ.)

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಸರ್ಗವು ನಮಗೆ, ಮತ್ಸ್ಯನಿಧಿಯ ಆಕರವೆ ನಿಸಿದ ಸದಿಕ್ಕಿ ಕರಾವಳಿಯನ್ನು ಕೊಟ್ಟಿದೆ. ನಮ್ಮ ಜಿಲ್ಲೆಗಂತೂ ಸುಮಾರು ನೂರೈವತ್ತು ಮೈಲುಗಳ ಕರಾವಳಿಯಿದೆ. ಆವರೆ, ಇಲವು ಕಾರಣಗಳಿಂದ ನಾವಪದನ್ನು ಇನ್ನೂ ಪೂರ್ಣ ಉಪಯೋಗ ಮಾಡಿಕೊಳ್ಳಲು ಸಾಧ್ಯವಾಗಿಲ್ಲ.

ಮಲ್ಪೆಯು ಭಾರತದ ಅತಿ ದೊಡ್ಡ ಮತ್ಸ್ಯಿ ವ್ಯವಸಾಯ ಕೇಂದ್ರಗಳಲ್ಲೊಂದಾಗಿರುತ್ತದೆ. ನಮ್ಮ ಜಿಲ್ಲೆಯಲ್ಲಿ ವರ್ಷಕ್ಕೆ ದೊರೆವ ಮೀನು ಸರಾಸರಿ ೪೮,೦೦೦ ಟನ್ನುಗಳಷ್ಟಿರುತ್ತದೆ ಇವರ ಮೌಲ್ಯವನ್ನು ಸುಮಾರು ಎರಡು ಕೋಟಿ ರೂಪಾಯಿಗಳು ಎಂದು ನಿರ್ಧರಿಸಬಹುದು. ಇಷ್ಟು ಮೀನಿನಲ್ಲಿ ಬಹ್ವಂಶವು ಮಲ್ಪೆ ಮತ್ತು ಆಪರ ಸಮೀಪವಲ್ಲಿ ಹಿಡಿಯಲ್ಪಡುತ್ತದೆ

ರಂಪಣಿ ಬಲೆಗಾರರು

ಎರಡು ವರ್ಷಗಳ ಹಿಂದೆ ಬೈಗಿ ಮೀನು ಧಾರಳವಾಗಿ ದೊರೆತಾಗ, ಈ ಎಲ್ಲ ಮೀನನ್ನು ಜನರಿಗೊದಗಿಸಲಾಗಲಿಲ್ಲ. ಒಡಗಿಸುವ ಸಾಧನ ಸೌಕರ್ಯಗಳು ಇಲ್ಲದೆ, ಸೂಪತ್ತು ಸಾವಿರ ಟನ್ನುಗಳಿಗೂ ಮಿಕ್ಕಿದ ಮೀನು, ಗೊಬ್ಬರ ರಕ್ಷಾಗಿ ಹೋಗಬೇಕಾಯಿತು. ಹೀಗೆ ಪ್ರತಿ ಸ್ಥಿಕ ಆಹಾರವಸ್ತುವಿಗೆ ತಕ್ಕ ಸ್ಥಾಮುಖ್ಯತೆ ಪಡೆದಿರುವ ಮೀನು, ಅಂಥ ಉಪಾದೆಯ ಅತೀ ಅವಶ್ಯವಾಗಿರುವ ಜನತೆಗೆ ದೊರೆಯದೆ ಹೋಯಿತು. ಈ ಮೊದಲು ಇದೇ ರೀತಿಯಲ್ಲಿ, ಅಧಿಕಾಧಿಕ ಸಂಖ್ಯೆಯಲ್ಲಿ ಮೀನು ಹೊರತಾಗಿ ಜನರಿಗೆ ಒದಗದೆ,! ಗೊಬ್ಬರವಾಗಿಯೋ ಕೊಳೆತು ಹುಗಿಯಲ್ಪಟ್ಟೋ, ಎಷ್ಟೋ ಮೀನು ವ್ಯರ್ಥವಾಗಿ ಹೋಗಿದೆ.

"ರಂಪಣಿ ಬಲೆ" ಎಂಬುದು ದಕ್ಷಿಣ ಕನ್ನಡದ— ಆದರಲ್ಲೂ ಬಾರ್ಕೂರಿನ ಮೀನುಗಾರರೆ— ಒಂದು ವೈಶಿಷ್ಟ್ಯವೆನ್ನಬೇಕು. ಇದು ಇಂದು ನಿನ್ನೆಯ ರಚನೆಯಲ್ಲ. ಶತಮಾನದಿಂದಿದೆಯೆನ್ನಬಹುದು ಆಧುನಿಕ ಯಂತ್ರಾದಿಗಳ ಮತ್ತು ಮೀನು ಹಿಡಿವ ಉಗಿ ಪಡಗುಗಳ ಸಹಾಯವಿಲ್ಲದಿದ್ದೆನೇ ನಮ್ಮ ಜನರು, ಈ ರಂಪಣಿ ಬಲೆಯ ರಚನೆಯಿಂದ ಅದ್ಭುತಗಳನ್ನೇ ಮಾಡಿತೋರಿಸಿದ್ದಾರೆ.

ನಿನ್ನು ಆಧುನಾ ಆಯಿತ್ತು ಮೀನುಗಾರರು ಒಟ್ಟಾಗಿ ತಂತಮ್ಮ ಬಲೆಯ ತುಂಡುಗಳನ್ನು ಸೇರಿಸಿಕೊಟ್ಟು, ಒಂದು ಬಲೆಯ ತುಂಡು ಇನ್ನೊಂದಕ್ಕೆ ಜೋಡಿಸಲ್ಪಟ್ಟು, ರಾಕ್ಷಸಾಕಾರದ ಒಂದು ಬಲೆಯಾಗಿ ಇದೀ ರಂಪಣಿ ಬಲೆ ರಚಿಸಲ್ಪಡುತ್ತವೆ. ಈ ಬೃಹದಾಕಾರದ ಬಲೆಯು ಸಮುದ್ರದಲ್ಲಿ ಬೀಸಲ್ಪಟ್ಟು, ಮತ್ತೆ ಎಲ್ಲರೊಂದಾಗಿ ದಂಡೆಗೆ ಎಳೆದು ತರಲ್ಪಡುತ್ತದೆ. ಆದರೊಳಗೆ ದೊರೆತ ಮೀನು ಏಲಂನಿಂದಾಗಲಿ, ಅಂದಾಜು ಮೌಲ್ಯ ನಿರ್ಣಯಿಸಿಯಾಗಲಿ, ನಿಕ್ರಯಿಸಲ್ಪಡುತ್ತದೆ. ಲಬ್ಧವಾದ ಧನವು ಆ ಸಮಿಂಬಲೆಯ ರಚನೆ ಮತ್ತು ಬೀಸುನಿಕೆಯಲ್ಲೂ ಎಳೆತದಲ್ಲೂ ಸೇರಿರುವವರಿಗೆ,—ಆವರವರ ಬಲೆಯ ಪಾಲಿನ ದಾನಾಶಯ ನಿರ್ಣಯಿಸಿ—ಪಂಚಲ್ಪಡುತ್ತದೆ.

ಗೋವೆ ಮತ್ತು ಮಂಗಳೂರಿಗೆ ನಡುವಣ ಸಮುದ್ರದಲ್ಲಿ ಬಹುಕಾಲದಿಂದ ನಡೆದುಬಂದ ವಿಧಾನ ಇದಾಗಿದೆ. ಮತ್ತು, ಆಳವಾದ ಸಮುದ್ರದಲ್ಲಿನ ಮೀನುಗಾರಿಕೆಗಿಂತ ಕೆಲವೊಮ್ಮೆ ಸುಲಭ ನ್ಯಯವೆ ದೃಷ್ಟಿಯಿಂದ ಉತ್ತಮ ವಿಧಾನವೆನಾಗಿಯೂ ತೋರುತ್ತಿರಬಹುದು. ಆಂಥ ರಂಪಣಿ ಬಲೆಯಲ್ಲಿ ಒಸ್ಮೆ ಹಿಡಿಯಲ್ಪಟ್ಟ ಮೀನಿನ ಆತಿದೊಡ್ಡ ಪಾಪಡೆಯೊಂದೆ— ಸುಮಾರು ಇಪ್ಪತ್ತು ಲಕ್ಷಭೂತಾಯಿ ಮೀನು!

ಅಭ್ಯಾಸದಲ್ಲಿ ಪರಿಷ್ಕಾರ

ಆದರೆ, ನಮ್ಮ ಮೊಗವೀರರು ಮೀನು ಹಿಡಿಯುವ ಕ್ಷೇತ್ರವು, ಕಡಲ ದಂಡೆಗೇ ಪರಿಮಿತ ಗೊಂಡಿದೆ; ಇದರಿಂದಾಗಿ, ಒಮ್ಮೊಮ್ಮೆ ಇದು ಕೇವಲ ಜೂಜು ಆಥವಾ ಅದೃಷ್ಟವೆನಿಸಲ್ಪಡುವುದುಂಟು. ಒಂದು ಬಾರಿ ವಿಪುಲವಾಗಿ ಮೀನು ದೊರೆಯುವುದು; ಇನ್ನೊಮ್ಮೆ ಏನೂ ಇರುವುದಿಲ್ಲ.

ಕಳೆದೆರಡು ವರ್ಷಗಳಲ್ಲಿ ಮೀನುಗಾರಿಕೆಯಲ್ಲಿ ಕ್ಷಾಮವೇ ತಲೆದೋರಿದೆ. ಕಳೆದ ವರ್ಷದಲ್ಲಿ ದೊರೆತ ಮೀನು, ವರ್ಷಕ್ಕೆ ಈ ಮೊದಲು ದೊರೆತ ಮೀನಿನ ಹತ್ತನೇ ಒಂದರಂಶ ಮಾತ್ರ ಎನ್ನಬಹುದು ಇದರಿಂದ ಜನತೆಯ ಆರ್ಥಿಕ ಸ್ಥಿತಿಯೇ ತಿರುಗುಮುರುಗಾಗಿದೆ ಅಳವಾದ ಸಮುದ್ರದಲ್ಲಿನ ಮೀನುಗಾರಿಕೆಯು ಬೆಂಥಿಗೆ ತರಲ್ಪಡದಿದ್ದರೆ, ಮೀನುಗಾರಿಕೆಯಲ್ಲಿ ಕಂಡುಬರುವ ಅನಿಶ್ಚಿತತೆಯು ನಿವಾರಣೆಯಾಗಲಾರದು.

ನಮ್ಮ ಮೀನುಗಾರರಿಗೆ, ವರ್ಷದ ಐದಾರು ತಿಂಗಳುಗಳಲ್ಲಿ ಮಾತ್ರ ಉದ್ಯೋಗವು ಸಾಧ್ಯವಿದೆ. ಆಧುನಿಕ ವಿಧಾನಗಳಿಂದ ಅವರು, ವರ್ಷದ ಎಲ್ಲ ಕಾಲದಲ್ಲೂ ಸಮುದ್ರಕ್ಕೆ ಹೋಗಿ ಮೀನು ಹಿಡಿಯಂತೆ ಸಾಧ್ಯವಾಗುವುದಿಲ್ಲ ಬೇಕೆಂದಿದ್ದರೆ, ಆವರೆ ಬಾಡು ತೀರ ಕೆಡುವುದು. ಆದುದರಿಂದ ಆಳವಾದ ಸಮುದ್ರದಲ್ಲಿನ ಮತ್ಸ್ಯ ವ್ಯವಸಾಯದ ಅಭಿವೃದ್ಧಿ ಯೋಜನೆಯಲ್ಲಿ ಸರಕಾರವು ಮಲ್ಪೆಗೆ, ಪ್ರಾಮುಖ್ಯತೆ ಕೊಡಲೇ ಬೇಕು.

ಈ ವಿಷಯವಾಗಿ ಈ ಮೊದಲು ಸರಕಾರಕ್ಕೆ ಮಾಡಿದ ಮನವಿಗಳಿಗೆ ಉತ್ತರವಾಗಿ, ಮಲ್ಪೆಯಲ್ಲಿ ಬಂದರಿನ ಸಾಕಾರ್ಯವಿಲ್ಲದ ಕಾರಣ— ಈ ಕಡೆಯ ಆಗಾಧ ಸಮುದ್ರ ಮತ್ಸ್ಯ ವ್ಯವಸಾಯಾಭಿವೃದ್ಧಿಯ ವಿಷಯವು ಪರ್ಯಾಲೋಚಿಸಲ್ಪಡಲು ಸಾಧ್ಯವಿಲ್ಲವೆಂದು ಉತ್ತರದೊರೆತಿದೆ ಅದೇ ಕಾರಣದಿಂದ, ಮಲ್ಪೆಯಲ್ಲಿ ಅಖಿಲಭಾರತ ಮತ್ಸ್ಯ ವ್ಯವಸಾಯ ಮತ್ತು ಸಾಗರ ವಿಜ್ಞಾನ ಸಂಸ್ಥೆಯನ್ನು ಸ್ಥಾಪಿಸಲು ಮಾಡಿದ ವಿನಂತಿಯೂ ಕೇಂದ್ರ ಸರಕಾರದಿಂದ ತಿರಸ್ಕರಿಸಲ್ಪಡುವಂತಾಯಿತು.

ಮಲ್ಪೆಯಲ್ಲಿ ಬಂದರನ್ನು ರಚಿಸುವ ವಿಷಯವು ಜನತೆಯದಲ್ಲ – ಸರಕಾರದ್ದೇ; ಹೀಗಿರುವಾಗ, ಮತ್ಸ್ಯ ವ್ಯವಸಾಯಾಭಿವೃದ್ಧಿಯ ದೃಷ್ಟಿಯಿಂದ, ಅವಶ್ಯವಿರುವ ಬಂದರ ಸಾಕಾರ್ಯವನ್ನೊದಗಿಸುವುದು ಸರಕಾರದ ಕರ್ತವ್ಯ ವಿರುತ್ತದೆ ಪಶ್ಚಿಮ ಕರಾವಳಿಯಲ್ಲಿ ಪ್ರಬುದ್ಧ ಬಂದರನ್ನೊಂದನ್ನು ರಚಿಸಲು ನುಲ್ಲಿಯು ಈ ಮೊದಲೇ ಶಿಫಾರಸು ಮಾಡಲ್ಪಟ್ಟಿದೆ. ಫಜಲಾಲಿ ಆಯೋಗದವರು ಕೂಡ, ಕರ್ನಾಟಕ ರಾಜ್ಯ ನಿರ್ಮಾಣದಲ್ಲಿ, ಹೊಸ ರಾಜ್ಯಕ್ಕೆ ಮಲ್ಪೆಯು ಪ್ರಬುದ್ಧ ಬಂದರೆಂದಾಗಿ ರೂಪಿಸಿಬರುವ ಶಕ್ಯತೆಯ ಕಡೆಗೆ ಲಕ್ಷ್ಯ ಸೆಳೆದಿದ್ದಾರೆ ಹೇಗಿದ್ದರೂ, ಮಲ್ಪೆಗೆ ಮೀನುಗಾರಿಕೆಯ ಆ ಭವಿಷ್ಯದ್ದಿ ಬಗ್ಗೆ ಒಂದು ಯೋಗ್ಯ ಬಂದರಲ್ಲ ಅತೀ ಅವಶ್ಯವಿದೆ

ಸುರತ್ಕಲ್‌ನಲ್ಲಿ ತರಬೇತಿಗೆ ಮೀನುಗಾರಿಕೆಯಲ್ಲಿ ಶಿಕ್ಷಣಕೊಡುವ ಒಂದು ಸರಕಾರೀ ಶಾಲೆ ಇದೆ. ನಮ್ಮ ರಾಷ್ಟ್ರೀಯ ಸಂತೋಷಧನಾ ಸಂಸ್ಥೆಯ ಮಾದರಿಯಲ್ಲೆ ಇಲ್ಲಿಯೂ ಅಖಿಲಭಾರತ ಮಟ್ಟಕ್ಕೆ ವ್ಯವಸಾಯ ಮತ್ತು ಸಾಗರ ವಿಜ್ಞಾನ ಶಿಕ್ಷಣ ಸಂಸ್ಥೆಯನ್ನು ತೆರೆಯುವುದು ಅವಶ್ಯವಿದೆಯೆಂದು ಸರಕಾರನನ್ನು ನಾವು ಪದೇ ಪದೇ ಬತ್ತಾಯಿಸುತ್ತಿದ್ದೇವೆ. ಇಂಥ ಶಿಕ್ಷಣ ಸಂಸ್ಥೆಯು ದೂರಪ್ರಾಚ್ಯದ ದೇಶಗಳಲ್ಲಿ,ಜಪಾನಿನ ಟೋಕಿಯೋ ವಿನಾ ಮೆತ್ತೆಲ್ಲಿಯೂ ಇಲ್ಲ.

ಕೆಲವೊಮ್ಮೆ, ಬಹುಕಾಲದ ನಡೆಗೆ, ಸಮುದ್ರದ ಒಂದೊಂದು ಕಡೆಯಲ್ಲಿ ಮೀನು ಇರುವುದಿಲ್ಲ ಆಧುನಿಕ ವಿಧಾನಗಳಿಂದ, ಈ ಕೊರತೆಯ ಕಾರಣವನ್ನು ತಿಳಿದುಕೊಳ್ಳಬಹುದು; ಮೀನುಗಳ ಚಲನ ನಲನಗಳನ್ನು ಆಗಾಗ್ಗೆ, ಮತ್ಸ್ಯ ವ್ಯವಸಾಯಿಗಳಿಗೆ ತಿಳಿಸಬಹುದು. ಇದರಿಂದ, ಆವರ ಕಷ್ಟಗಳು ನೀಗುವುವು. ಈ ಬಗ್ಗೆ, ಸಾಗರವಿಜ್ಞಾನವಲ್ಲಿ ನುರಿತವರನ್ನು ನೇಮಿಸಿದ ಹಡಗೊಂದನ್ನು ಈ ಕರಾವಳಿಯ ಬಗ್ಗೆ ಇರಿಸುವುದು ಅತ್ಯಾವಶ್ಯಕವಿದೆ.

ಅನುಕೂಲಕೆ ಹಾಗು ಪೇಟೆ

ಹಿಡಿದ ಮೀನನ್ನು, ತಕ್ಕ ಕಾಲದಲ್ಲಿ ತಕ್ಕ ಮೌಲ್ಯಕ್ಕೆ ವಿಕ್ರಯಿಸುವುದು ಒಂದು ಅಸಾಧಾರಣ ಸಮಸ್ಯೆಯಾಗಿ ಉಳಿದಿದೆ ಅಧಿಕ ಶ್ರಮಾನಾದಲ್ಲಿ ದೊರೆತರೆ ಮೀನನ್ನು ಕೆಡುವ ಮೊದಲೇ, ಪಸಿಯಾಗಿಯೇ, ಕೂಡಲೇ ವಿಕ್ರಯಿಸುವುದು ಸಾಧ್ಯವಾಗುವುದಿಲ್ಲ ಇಣ ಮೀನಿನಂತೇ ಪಸಿ ಮೀನಿನ ವಿಕ್ರಯಂಪೆ ಹೆಚ್ಚಿನ ಲಬ್ಧವಿರಿ, ಮೀನು ಗಾರರ ಸಂತಾವನೆಯು ನಷ್ಟಕ್ಕೆ ಸುಮಾರು ಐವತ್ತು ಲಕ್ಷ ರೂಪಾಯಿಯಷ್ಟು ಅಧಿಕವಾಗುತ್ತದ.

ಮಂಗಳೂರಲ್ಲಿ, ಮೀನು ಕೆಡದಂತೆ ರಕ್ಷಿಸಿಡುವ ಸಂಗ್ರಹಾಲಯವಿದೆ. ಮಲ್ಪೆಯಲ್ಲಿ ಪ್ರಾಸಗಿಯಾಗಿ ಇಂಥ ಚಿಕ್ಕ ಸಂಗ್ರಹಾಲಯ ವಿದೆ. ಮಲ್ಪೆಯಲ್ಲೂ ದೊಡ್ಡ ಸರಕಾರಿ ಸಂಗ್ರಹಾಲಯಬೇಕು. ಮೀನನ್ನು ತಣ್ಣಗಿರಿಸುವ ಯಂತ್ರ ಸಹಿತವಾದ ಮೋಟಾರ್ ವಾಹನಗಳೂ ದೋಣಿಗಳೂ ಬೇಕು ಇವೆಲ್ಲವೂ ಇದ್ದರೆ, ಮಲ್ಪೆಯಲ್ಲಿ ದೊರೆತ ಮೀನಿನಲ್ಲಿ ಬಹ್ವಂಶವನ್ನು, ಪಸಿಯಾಗಿಯೇ ಕರಾವಳಿಯುದ್ದಕ್ಕೂ, ಒಳ ಪ್ರದೇಶಕ್ಕೂ, ಮೈಸೂರು ಪ್ರಾಂತ್ಯದ ತನಕವೂ ಒದಗಿಸಲು ಸಾಧ್ಯವಾಗುತ್ತದೆ.

ಇದಕ್ಕೆಲ್ಲ ಸರಕಾರದ ಸಹಾಯ ನೇ ಮುಖ್ಯ. ಪಸಿ ಮೀನು, ನರ್ವತ್ರ ಮಾರಾಟಕ್ಕೊಪ್ಪಿಸಲ್ಪಡುವ ಅನುಕೂಲತೆಗಳಿಲ್ಲದೆ ಹೋದರೆ ಅಧಿಕ ಸಂಖ್ಯೆಯಲ್ಲಿ ಮೀನು ದೊರೆತಾಗ ಹೆಚ್ಚಿನದನ್ನು ಗೊಬ್ಬರವಾಗಿ ಮಾಪರ್ತಿಸಬೇಕಾಗುತ್ತದೆ. ಸಸ್ಯಗೊಬ್ಬರವು ಉಪಯುಕ್ತವಿದ್ದರೂ, ಜನರ ಅವಶ್ಯ ಆಗು ಮೌಲ್ಯದ ಆಹಾರವಸ್ತುವೊಂದನ್ನು ಈ ತರದಲ್ಲಿ ನ್ಯರ್ಥಗೊಳಿಸುವುದು ಸರಿಯೇ? ಪ್ರಕೃತಿಯು ಉದಾರವಿದ್ದಾಗ, ಸಮುದ್ರದಿಂದ ವಿಪುಲ ಆಹಾರವೊದಗುತ್ತಿದ್ದಾಗ, ರಾಜ್ಯದ ಹಲವು ಕಡೆಗಳಲ್ಲಿನ ಜನರಿಗೆ ಈ ಆಹಾರವು ಒದಗಿಸಲ್ಪಡಲಾರದೆ ತತ್ತಿದಿಟ್ಟಂತಾಗಿದೆ! ಇದೊಂದು ದುರಂತವೆನ್ನಲೇ ಬೇಕಷ್ಟೆ? ಕೇಂದ್ರ ಸರಕಾರವು ಈ ಕಡೆಗೆ ಗಮನ ಕೊಡುವುದವಶ್ಯವಿದೆ.

ಹೆಸರು ಮೀನಿನ ವಿಷಯ ಹಾಗಿರುವಾಗ, ಇಣ ಮೀನಿನ ವಿಷಯವೂ ತುಸು ಕರಿನಿದ್ದೇ ಎನ್ನಬೇಕು. ಇಣ ಮೀನಿಗೆ ಕೂಡ ಇರುವ ಪೇಟೆಯು ತೃಪ್ತಿಕರವಾಗಿಲ್ಲ ಇಣಿಯ ಇಣ ಮೀನಿಗೆ ಎರಡು ಮುಖ್ಯ ಪೇಟೆಗಳೆಂದರೆ ತಿರು ಕೊಚ್ಚಿಯ ಚಿಂಗಸ್ಟೀರಿ ಮತ್ತು ಪಿಲೋನಿನ ಕೊಲೊಂಬೋ. ತಿರುಕೊಚ್ಚಿಯಲ್ಲಿ ನೊರ್ವೆಯವರ ಸಹಾಯದಿಂದ ಆಲ್ಲಿಯ ಮೀನು ವ್ಯವಸಾಯವು ಅಭಿವೃದ್ಧಿಗೆ ಬಂದಾಗ, ನಮಗಿರುವ ಆ ಪೇಟೆಗಳೆರಡೂ ನಮ್ಮ ಮಟ್ಟಿಗೆ ಪೂರ್ಣ ಮುಚ್ಚಲ್ಪಟ್ಟಂತೆಯೇ ಸೈ. ಆದುದರಿಂದ ನಾವು, ದೇಶದೊಳಗೆ ಇತರ ಪೇಟೆಗಳನ್ನು ಹುಡುಕಬೇಕಾಗಿದೆ.

ಮೀನು ಕೆಡದಂತೆ ಡಬ್ಬಿಯಲ್ಲಿ ತುಂಬಿರುವ ಉದ್ಯಮವಿಲ್ಲಿ ಇದ್ದರೆ ನಮ್ಮ ಸೈನ್ಯಕ್ಕೂ ಅಂಥ ಮೀನು ಒದಗಿಸಬಹುದು. ವಿಕ್ರಯವಾಗದೆ ಉಳಿದ ಮೀನನ್ನು, ಅಮೇರಿಕ, ಇಂಗ್ಲೆಂಡ್ ಮೊದಲಾದ ಕಡೆಗಳಿಗೆ ದಿನಗಳ ಮೇಲಾಗಿಯೂ ಕೊಳೆಯಿಗಳ ಆಹಾರವಾಗಿಯೂ ಉಪಯೋಗಿಸಲು ವಿಕ್ರಯಿಸಬಹುದು. ನಮ್ಮ ದೇಶದಲ್ಲೂ ಜಾನುವಾರುಗಳ ಬಗ್ಗೆ ಆವನ್ನೇಕೆ ಮೇಲಾಗಿ ಉಪಯೋಗಿಸಬಾರದು? ನಮ್ಮ ಜಾನುವಾರುಗಳು ಸಾಕಷ್ಟು ಪುಷ್ಟಿ ಹೊಂದಲೂ ಇದರಿಂದ ಸಹಾಯವಾಗುವುದು, ಈ ಬಗ್ಗೆ ಕೂಡ ಮೀನಿನ ಮೇವು ತಯಾರಿಸುವ ಯಂತ್ರಾದಿಗಳಿರುವ ಕಾರ್ಖಾನೆಯ ಸ್ಥಾಪಿಸುವುದು ಅವಶ್ಯವಿದೆ.

ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಇವೆರಡೇ ಜಿಲ್ಲೆಗಳು, ಮೀನಿನ ಮಟ್ಟಿಗೆ ಸ್ವಯಂಪೂರ್ಣವಿದ್ದು, ಕೇಂದ್ರ ಸರಕಾರವು ಇವ್ವಿಗೆ ಸಹಾಯವೀಯಬೇಕಾಗಿದೆ. ಮೀನುಗಾರರಿಗೆ ವಸತಿ ಸೌಕರ್ಯವೂ ತೃಪ್ತಿಕರವಿಲ್ಲ; ಕುಡಿಯ ನೀರಿನ ಸೌಕರ್ಯ ಬೆಸ್ತಾಗಿಲ್ಲ ಅವರ ಹಳ್ಳಿಗಳು ಒಳ್ಳೇ ರಸ್ತೆಗಳಿಂದ ಪಟ್ಟಾಂಗಗಳಿಗೆ ಜೋಡಿಸಲ್ಪಟ್ಟಿಲ್ಲ ಅವರಿಗೆ ಸರಕಾರವು ಸಾಲ ಮುಂತಾದುವನ್ನೆತ್ತು, ಸ್ಥಿತಿಗಳನ್ನು ಸುಧಾರಿಸಬೇಕಾಗಿದೆ. ಮೀನುಗಾರರ ಹಳ್ಳಿಗಳ ಆರ್ಥಿಕಸ್ಥಿತಿಯು ಇತರ ಕಡೆಗಳಿಂದ ಭಿನ್ನವಿರುತ್ತದೆ. ಸರಕಾರವು ಈ ಸಮಸ್ಯೆಗಳೆಲ್ಲವನ್ನೂ ಬಗೆ ಹರಿಸುವುದವಶ್ಯವಿದೆ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮೂಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಸ್ವಗತಿ ಪಥದಲ್ಲಿ ಮುಂದುವರೆಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಿಖು	ರೇವಣಾತಿ.	
24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಕುಮಾರಿ ಬಿಲ್ಲೆಗಳು (ಸರಕಾರ ರಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಚಕಿತೋಟಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಷಲ್ ರೂ.8/-

Mrs. P. DEVEE, F. Ds (N. J.) (ನಿ.ಪಿ.ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಶಾಳಂಪೆಪ್ಪೆ, ಮಂಗಳೂರು

ಕಾರ್ಕಳ ಡಿ. ಮು. ಕೋರ್ಟು ಸಲ್ಲಿ

O P. No. 103/1955

ಸರಸು ಶೆಡ್ತಿ ಕೂಡಾ ೩ಜನರು. ಅರ್ಜಿದಾರರು

ಮತ್ತು

ನಂಜಪ್ಪ ಶೆಟ್ಟ— ಎದ್ರಿ.

ಈ ಮೂಲಕ ಸಾರ್ವಜನರಿಗೂ ತಿಳಿಸುವ ದೇನಂದ್ರೆ—

ಉಡ್ಪಿ ತಾಲೂಕು ಪಿಲಾರು ಗ್ರಾಮದ ತಂಬಿಬಟ್ಟು ನಲ್ಲಿರುವ ಆಕ್ಕ ಕೆಡ್ತರ ಮಗ ಮೃತ ಮೊಣ್ಣ ಶೆಟ್ರ ಸೂತ್ತುಗಳಿಗೆ, 1ನೇ ಅರ್ಜಿದಾರಳಿಗೆ ವಾರಿಸ ಸರ್ಟಿಫಿಕೇಟು ಕೊಡಬೇಳಿ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 18—11—1955ಕ್ಕೆ ಇಟ್ಟಿದೆ.

ಆಕ್ಷೇಪವುಳ್ಳವರು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಮುಂಜಾಜರಾಗಿ ಉದಪದೇಶಕಕ್ಕೆದ್ದು ತಪ್ಪಿದ್ದಲ್ಲಿ ಸದ್ರಿ ಅರ್ಜಿಯು ತೀರ್ಮಾನಿಸಲಪಡೀತು.

(By order of the court)

N. M. Adyanthaya

Advocate for Petitioners

Karkala 17—11—55

ಪಂಚಾಂಗ ಸಮಿತಿಯ ಸಿಫಾರಸು

ತಪ್ಪುಗಳನ್ನು ತಿದ್ದುವುದಕ್ಕೆ ಪ್ರಾಶಸ್ತ್ಯ

ಭಾರತದಲ್ಲಿ ಸದ್ಯಕ್ಕೆ ಇರುವ ಅನೇಕ ಪಂಚಾಂಗ ಪದ್ಧತಿಗಳನ್ನು ಪರಿಶೀಲಿಸಿ ಶಾಸ್ತ್ರೀಯ ಅಭ್ಯಾಸದ ನಂತರ ಅಖಿಲ ಭಾರತಕ್ಕೆ ಅನ್ವಯಿಸುವ ಏಕರೂಪ ಪಂಚಾಂಗ ಕ್ರಮವೊಂದನ್ನು ಸೂಚಿಸುವುದಕ್ಕಾಗಿ ಭಾರತ ಸರ್ಕಾರದವರು ಒಂದು ಪಂಚಾಂಗ ಪರಿಶೋಧನ ಸಮಿತಿಯನ್ನು ನೇಮಿಸಿದ್ದರು. ಆರು ಈಗ ತನ್ನ ವರದಿಯನ್ನು ಒಪ್ಪಿಸಿದ್ದು ಈ ವರದಿಯನ್ನು ರಾಜ್ಯ ಸರಕಾರಗಳಿಗೆ ಕಳಿಸಲಾಗಿದೆಯೆಂದೂ ಅವು ಸಮಿತಿಯ ಶಿಫಾರಸುಗಳ ಬಗ್ಗೆ ಹಾಗು ಒದು ಸೂಚಿಸಿದ ಏಕರೂಪ ರಚಾದಿ ನ ಳ ವಿಚಾರದಲ್ಲಿ ಜನಾಭಿಪ್ರಾಯ ತಿಳಿದು ಕೊಳ್ಳಲು ಸಾರ್ವಜನಿಕ ಸಂಸ್ಥೆಗಳ ಮತವನ್ನು ಕೇಳುತ್ತಿವೆಯೆಂದೂ ತಿಳಿದು ಬರುತ್ತದೆ.

ಈ ಸಮಿತಿಯು ಸೂಚಿಸಿದ ಪಂಚಾಂಗವು ಶಾಸ್ತ್ರೀಯವೂ ಏಕರೂಪವೂ ಆಗಿದ್ದು ದೇಶದ ವಿವಿಧ ಪಂಚಾಂಗಕರ್ತರು ಅದನ್ನು ಆಧಾರ ಗ್ರಂಥವಾಗಿ ಉಪಯೋಗಿಸಬಹುದಾಗಿದೆಯೆಂದೂ ಭಾರತ ಸರಕಾರವು ನಂಬಿರುತ್ತದೆ.

ಪಂಚಾಂಗಗಳ ಗೊಂದಲ

ಸಮಿತಿಯ ವರದಿಗೆ ಸರಕಾರವು ಜೋಡಿಸಿದ ಪರಿಚಯ ಪತ್ರವು ಭಾರತದಲ್ಲಿ ಪಂಚಾಂಗ ಪದ್ಧತಿಗಳ ಗೊಂದಲವಿರುವುದರಿಂದ ಕೇಂದ್ರ ಹಾಗು ರಾಜ್ಯ ಸರಕಾರಗಳು ಎಷ್ಟೋ ಬೇಳೆ ಪೇಟಾಟ್ಗೆಳ್ಳ ಸಿಲುಕಬೇಕಾಗಿದೆಯೆಂದು ಹೇಳುತ್ತದೆ. ಭಾರತದಲ್ಲಿ ವ್ಯವಹಾರಕ್ಕಾಗಿ ೧೨೫೭ ರಿಂದಲೂ ಗ್ರಿಗೋರಿಯನ್ ಕೆಲೆಂಡರು (ಐರೋಪ್ಯ ಪದ್ಧತಿ) ಜಾರಿಯಲ್ಲಿದೆ. ಈ ಪದ್ಧತಿಯು ಐತಿಹಾಸಿಕ ಕಾರಣಗಳಿಂದ ಜಾಗತಿಕ ಪಂಚಾಂಗದ ಸ್ವರೂಪ ತಾಳಿ ಜಗತ್ತಿನ ಎಲ್ಲ ಬಳಕೆಯಲ್ಲಿದೆ. ಈಗ ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಪಂಚಾಂಗ ಸುಧಾರಣಾ ಸೂಚನೆಯನ್ನು ಭಾರತ ಮಂಡಿಸಿದೆ. ಗ್ರಿಗೋರಿಯನ್ ಪದ್ಧತಿಯು ಅನನುಕೂಲವೂ ಅಶಾಸ್ತ್ರೀಯವೂ ಆಗಿದ್ದು ಆದರೆ ಬದಲು ಹೊಸ ಜಾಗತಿಕ ಪಂಚಾಂಗವನ್ನು ಜಾರಿಯಲ್ಲಿ ತರಬೇಕೆಂಬುದು ಈ ಸೂಚನೆಯ ಸಾರ. ಆದರೆ ಅಂತಾರಾಷ್ಟ್ರೀಯ ಒಪ್ಪಂದವಿಲ್ಲದೆ ಇದು ಜಾರಿಯಲ್ಲಿ ಬರಲಾರದು.

ಭಾರತಪೇಕ್ಷೋ ಜಾತ್ಯಾತೀತರಾಜ್ಯ. ಆದರೆ ಕೇಂದ್ರ ಹಾಗು ರಾಜ್ಯ ಸರಕಾರಗಳು ಅನೇಕ ಹಬ್ಬ ಹುಣ್ಣಿಮೆಗಳ ರಜಾದಿನಗಳನ್ನು ಮುಂದಾಗಿ ಪ್ರಕಟಿಸಬೇಕಾಗುತ್ತದೆ. ಈ ರಜಾ ದಿನಗಳು ನಾಲ್ಕು ಬಗೆಯವಿರುತ್ತವೆ. (೧) ಗ್ರಿಗೋರಿಯನ್ ಕೆಲೆಂಡರಿನಮೇರೆಗೆ ಕೊಡುವ ರಜೆಗಳು (ಉದಾ: ಮಹಾತ್ಮಾ ಗಾಂಧಿ ಜನ್ಮ ದಿನ). (೨) ಕೆಲವು ರಜಾ ದಿನಗಳು ಸೂರ್ಯನ ಸ್ಥಾನದ ಮೇಲಿಂದ ಕೊಡಲ್ಪಡುತ್ತವೆ. (೩) ಬೇರೆ ಕೆಲವು ರಜೆಗಳನ್ನು ಸಾರಜಂದ್ರ ಸ್ಥಾನಗಳ ಮೇಲೆ ಕೊಡಲಾಗುತ್ತದೆ. (೪) ಮುಸ್ಲಿಂ ಹಾಗು ಕ್ರೈಸ್ತ ರಜೆಗಳೂ ಇರುತ್ತವೆ.

ಇವು ಳಲ್ಲಿ ೨ ಹಾಗು ೩ನೇ ವರ್ಗದ ರಜೆಗಳೇ ಎಲ್ಲಕ್ಕೂ ಹೆಚ್ಚಾಗಿರುತ್ತವೆ. ಆವುಗಳನ್ನು ಪ್ರತಿ ರಾಜ್ಯ ಸರಕಾರದ ಸಲಹೆಗಾರಾಗಿರುವ ಜ್ಯೋತಿಷಿಗಳ ಗಣತಿ ನಿರ್ಣಯದ ಮೇಲಿಂದ ಸಾರಲಾಗುತ್ತದೆ. ಇದಕ್ಕಾಗಿ ಸೂರ್ಯಚಂದ್ರರ ಸ್ಥಾನಗಳನ್ನು ಮುಂದಾಗಿ ಗೊತ್ತು ಪಡಿಸಲು ಪುರಾತನ ಹಾಗು ಪುಷ್ಕಳ ಯುಗೀನ ಜ್ಯೋತಿಶ್ಶಾಸ್ತ್ರ ಗ್ರಂಥಗಳಲ್ಲಿ ಹೇಳಿದ ಗ್ರಹಗಣಿತಪದ್ಧತಿಗಳನ್ನು ತಿದ್ದುಪಡಿಗಳ ಸಹಿತ ಉಪಯೋಗಿಸಲಾಗುತ್ತಿದೆ. ಈ ತಿದ್ದುಪಡಿಗಳಿದ್ದು ಸಹ ಈ ಗಣಿತ ಅಸಮರ್ಪಕವಾಗಿದೆ. ಆಲ್ಲದೆ ವಿವಿಧ ಸಿದ್ಧಾಂತಗಳ ಮೇರೆಗೆ ಗುಣಿಸಿದ ಪಂಚಾಂಗಗಳು ಒಂದೇ ಹಬ್ಬ ಆಥವಾ ಧಾರ್ಮಿಕ ಸಮಾರಂಭಕ್ಕೆ ಬೇರೆ ಬೇರೆ ದಿನ ಮತ್ತು ಮುಹೂರ್ತಗಳನ್ನು ಕೊಡುತ್ತಿವೆ. ಹೀಗಾಗಿ ಒಂದೇ ಹಬ್ಬವು ದೇಶದ ಬೇರೆ ಬೇರೆ ಪ್ರದೇಶಗಳ ಪಂಚಾಂಗಗಳಲ್ಲಿ ಬೇರೆ ಬೇರೆ ದಿನಗಳಲ್ಲಿ ಬೀಳುವದು ಮಾತ್ರವಲ್ಲದೆ ಒಂದೇ ಊರಿನಲ್ಲಿ ಕೂಡ ಬೇರೆ ಬೇರೆ ದಿನಗಳಲ್ಲಿ ಬರುವ ದುಂಟು! ಇದು ಪ್ರತಿಯೊಂದು ಸರಕಾರಕ್ಕೂ ಒಂದು ಸಮಸ್ಯೆಯೇ ಆಗಿದೆ.

ಇದನ್ನು ಸರಿಪಡಿಸಲು ಉಪಾಯ ಸೂಚಿಸಲಿಂದು ಮೇಲೆ ಹೇಳಿದ ಪಂಚಾಂಗ ಸಂಶೋಧನಾ ಸಮಿತಿಯನ್ನು ನೇಮಿಸಲಾಯಿತು.

ಈ ಸಮಿತಿಯು ದೇಶದಲ್ಲಿರುವ ಎಲ್ಲ ಹಿಂದೂ ಪಂಚಾಂಗ ಪದ್ಧತಿಗಳನ್ನು ಅಭ್ಯಸಿಸಿ ಭಾರತದ ಎಲ್ಲ ಭಾಗಗಳಲ್ಲಿಯೂ ಧಾರ್ಮಿಕ ಆಚರಣೆಗಳಿಗೂ ಸಾರ್ವಜನಿಕ ರಜೆಗಳಿಗೂ ಅನ್ವಯಿಸಬರುವಂಥ ಏಕರೂಪ ಪಂಚಾಂಗ ಪದ್ಧತಿಯನ್ನು ಸೂಚಿಸಿದೆ.

ಇಂದಿನ ಪಂಚಾಂಗಗಳ ದೋಷಗಳು

ಪಂಚಾಂಗಗಳು ಅಂಶತಃ ವೈಜ್ಞಾನಿಕ ಆಧಾರವೆ ಇದ್ದೇಯೂ ಅಂಶತ: ನೇಜಚಾರಾದಿ ಮನುಷ್ಯ ನಿರ್ಮಿತ ಸಂಪ್ರದಾಯಗಳ ನ್ನನುಸರಿಸಿಯೂ ರಚಿಸಲ್ಪಡುತ್ತವೆ. ಇದರಲ್ಲಿ ವೈಜ್ಞಾನಿಕ ಭಾಗವು ಅನುಲ್ಲಂಘ್ಯವಾಗಿದೆ. ಆದರೆ ಭಾರತದ ಪಂಚಾಂಗ ಕರ್ತರು ವಿಜ್ಞಾನದ ಉಲ್ಲಂಘನೆಯನ್ನು ಮಾಡುತ್ತಾರೆ.

ಅವರು ವರ್ಷಕ್ಕೆ ೩೬೫.೨೪೨೨೫೬ ದಿನಗಳೆಂದು ಪರಿಗಣಿಸುತ್ತಾರೆ. ಇದು ಸುಸೂರು ಕ್ರಿ. ಶ. ೫೦೦ರಲ್ಲಿ ಸೂರ್ಯ ಸಿದ್ಧಾಂತದಲ್ಲಿ ಕೊಟ್ಟ ವರ್ಷಮಾನವಾಗಿದೆ ಆದರೆ ಸೂರ್ಯ ಸಿದ್ಧಾಂತವೂ ಆಧುನಿಕ ಖಗೋಲಶಾಸ್ತ್ರವೂ ವಿಸುವದ್ವರ್ಷವೇ ನಿಜವಾದ ಹಾಗು ಶುದ್ಧವಾದ ವರ್ಷಗಣನೆಯೆಂದೊಪ್ಪುತ್ತವೆ. ಇದು ವಾಸ್ತವಿಕವಾಗಿ ೩೬೫ ೨೪೨೨೫೬ ದಿನ ಗಳಷ್ಟಾಗುತ್ತದೆ. ಆದರೆ ಸೂರ್ಯಸಿದ್ಧಾಂತವು ಕೊಟ್ಟ ವರ್ಷಮಾನವನ್ನೇ ನಮ್ಮ ಪಂಚಾಂಗ ಕರ್ತರು ಇಂದಿಗೂ ಉಪಯೋಗಿಸುವುದರಿಂದ ಕಳೆದ ೧೪೦೦ ವರ್ಷಗಳಲ್ಲಿ ಪ್ರತಿ ವರ್ಷಕ್ಕೆ ೦.೦೦೬೪೬ ದಿನದಂತೆ ಬೆಳೆಯುತ್ತ ಬಂದ ನಮ್ಮ ವರ್ಷವು ಈಗ ೩೬೫ ದಿನಗಳ ಷ್ಟು ಬೆಳೆದು ಇಂದಿನ ಸೌರ ವರ್ಷಾರಂಭವು ೩೬೫ ದಿನಗಳಷ್ಟು ಸುಂದಿ ಬಿದ್ದಿದೆ. ಇದರ ಫಲವಾಗಿ ಮಾರ್ಚ ೨೦ನೇ ದಿನ ನಮ್ಮ ಸೌರ ವರ್ಷಾರಂಭ ವಾಗುವ ಬದಲು ಏಪ್ರಿಲ ೧೪ ಇಲ್ಲಿಗೆ ೧೪ನೇ ದಿನ ಬರುತ್ತದೆ.

ಇದು ಭಾರತಕ್ಕೇ ವಿಶಿಷ್ಟವಾದ ಸಮಸ್ಯೆಯಲ್ಲ. ಯುರೋಪಿನಲ್ಲಿಯೂ ಹೀಗೇ ಆಗಿತ್ತು. ಜೂಲಿಯಸ್ ಸೀಜರನು ವರ್ಷ ಮಾನವನ್ನು ೩೬೫ ೨೪೨೨೫೦ ದಿನಗಳೆಂದು ಸ್ಥಿರ ಪಡಿಸಿದ್ದರಿಂದ ಕ್ರಿ. ಶ. ೧೫೮೨ ರಲ್ಲಿ ಹೊತ್ತಿಗೆ ಕ್ರಿಸ್ತ ಪೂಬ್ಬನ ಜನ್ಮಕಾಲಕ್ಕಿಂತ ಹತ್ತು ದಿನ ಹಿಂದೆ ಬಿದ್ದಿತ್ತು. ಆ ವರ್ಷ ಪೋಪ ಗುರುವಾದ ಪದಿಮೂರನೇ ಗ್ರೆಗರಿಯು ಈ ತಪ್ಪನ್ನು ತಿದ್ದಲು ಅಕ್ಟೋಬರ ೧೫ ಕ್ಕು ಕುಕ್ಕಸಾರವನ್ನು ಅಕ್ಟೋಬರ ೧೫ ಕ್ಕು ಕ್ರಮಾರವೆಂದು ಸಾರಿದ್ದಲ್ಲದೆ ಹೊಸ ಅಧಿಕ ವರ್ಷ ನಿಯಮವನ್ನೂ ವಿಧಿಸಿದನು.

ಸುಳ್ಳ ಯುಗೀನ ಯುರೋಪಿನಲ್ಲಿ ಕೆಥೋಲಿಕ ಕ್ರೈಸ್ತ ಜಗತ್ತಿಗೆ ಪೋಪನ ಆಜ್ಞೆ ವೇದವಾಕ್ಯವಾಗಿತ್ತು. ಭಾರತದಲ್ಲಿ ಹಾಗಿಲ್ಲ ಕ್ರಿ. ಶ. ೫೦೦ ರಿಂದ ೧೩೦೦ರ ವರೆಗಿನ ಇತಿಹಾಸದ ಫಲವಾಗಿ ಭಾರತದಲ್ಲಿ ಹಲವಾರು ಶಕಗಳು ಪ್ರಚಲಿತವಾಗಿವೆ. ಆದರೂ ಆರ್ಯಭಟ್ಟನ ಕಾಲದಿಂದ (ಕ್ರಿ. ಶ. ೫೦೦) ಭಾರತದ ಪಂಚಾಂಗಕರ್ತರೆಲ್ಲರೂ ಶಾಲಿವಾಹನ ಶಕ ವರ್ಷವನ್ನೇ ಉಪಯೋಗಿಸುತ್ತಾರೆ. ಸ್ಥಾನಿಕ ಪಂಚಾಂಗಗಳಲ್ಲಿ ಇತರ ಪ್ರಚಲಿತ ಶಕಗಳ ಉಲ್ಲೇಖ ಮಾತ್ರ ಮಾಡಲಾಗುತ್ತದೆ.

ಸೂಚಿತ ಸುಧಾರಣೆಗಳು

ಆದ್ದರಿಂದ ಪಂಚಾಂಗ ಸಮಿತಿಯು ಈ ಕೆಳಗಿನಂತೆ ಸೂಚಿಸಿದೆ:—

ಎಲ್ಲ ಸರಕಾರಿ ಕಾರ್ಯಗಳಲ್ಲಿ ಕೇಂದ್ರ ಹಾಗು ರಾಜ್ಯ ಸರಕಾರಗಳು ಶಕ ವರ್ಷವನ್ನು ಸಮಿತಿಯು ಸೂಚಿಸಿದ ಜಾರಿಕು ಪಂಚಾಂಗವನ್ನೂ ಉಪಯೋಗಿಸಬೇಕು. ಶಕ ವರ್ಷ ೧೮೭೮ ರಿಂದ ಈ ಬದಲಾವಣೆ ಆರಂಭಿಸಿ, ೧೯೫೬ ವಾರ್ಷಿಕ ತಿಂಗಳ್ನು ಸೌರ ಯುಗಾದಿ (ಮೇಷ ಸಂಕ್ರಮಣ) ವೆಂದು ಸಾರಬೇಕು.

ಸೂರ್ಯಸಿದ್ಧಾಂತ ಗಣಿತವನ್ನು ಬಿಟ್ಟು ಹೊಸ ಗಣಿತ ಉಪಯೋಗಿಸಬೇಕು ಮತ್ತು ಬೇರೆ ಬೇರೆ ಮಾಸಗಳು ತ್ರಿರಿಂದ ೩೨ ದಿನಗಳ ವರೆಗಿನವಾಗಿರುವುದನ್ನು ತ್ಯಜಿಸಬೇಕು. ಸೂರ್ಯಚಾರದ ಸ್ಪಷ್ಟಕಾರ ಸಿದ್ಧಪಾಗುವ ಪಬ್ಬಗಳಿಗಷ್ಟೇ ಈ ಅಂಶವು ಅನ್ವಯಿಸುತ್ತದೆ.

ಸಿದ್ಧಾಂತ ಜ್ಯೋತಿಷ ಕ್ರಿ. ಶ. ೪೮೦) ವು ಪ್ರಚಾರಕ್ಕೆ ಬರುವ ಮೊದಲು ಭಾರತದಲ್ಲಿ ಕೃಷ್ಣಾಪ್ಪೆಯ ಮೊದಲಾದ ಬುಧರು ಹಬ್ಬಗಳು ಚಾಂದ್ರಮಾನದಿಂದಲೇ ಆ ದಿನ ತಿಥಿ ನಕ್ಷತ್ರಗಳನ್ನು ಮಾತ್ರ ಅವಲಂಬಿಸಿ ಆಚರಿಸಲ್ಪಡುತ್ತಿದ್ದವು. ಧಾರ್ಮಿಕ ಕ್ರಾಂತಿಯಿಲ್ಲದೆ ಈ ಚಾಂದ್ರಮಾನ ಪದ್ಧತಿಯನ್ನು ಕಿತ್ತು ಹಾಕಲು ಸಾಧ್ಯವೇ ಇಲ್ಲ. ಆದ್ದರಿಂದ ಸೌರ ವರ್ಷಕ್ಕೆ ಚಾಂದ್ರ ವರ್ಷ ನನ್ನು ವಿವಿಧ ರೂಢಿಗಳಿಂದ ತಳಕು ಹಾಕುವುದು ಅನಿವಾರ್ಯವಾಗಿದೆ. ಸಮಿತಿಯು ಈ ವಿಷಯದಲ್ಲಿ (ಅಧಿಕಮಾಸ ಇತ್ಯಾದಿ) ಸುರಾತನ ರೂಢಿಯನ್ನೇ ಉಳಿಸಬೇಕೆನ್ನುತ್ತದೆ. ಆದರೆ ತಿಥಿ ನಕ್ಷತ್ರಗಳ ಗಣಿತದಲ್ಲಿ ಈಗಿರುವ ತಪ್ಪು ಕ್ರಮಗಳನ್ನು ಬಿಟ್ಟು ಆಧುನಿಕ ಜೆಡ ಮತ್ತು ನಾಸಿಕ ಪಂಚಾಂಗವನ್ನು ಅನುಸರಿಸಬೇಕು. ಧಾರ್ಮಿಕ ಹಬ್ಬಗಳನ್ನು ಭಾರತದ ಕೇಂದ್ರ ಭಾಗದ ನ್ರಹ ಸ್ಥಿತಿಗಳ ಮೇಲಿಂದ ನಿರ್ಧರಿಸಬೇಕು ಎಂದಿದೆ.

ಸದ್ಯಕ್ಕೆ ತಿಥಿಯನ್ನು ಆಯಾ ಪಂಚಾಂಗ ಕಾರರು ತಮ್ಮ ಸ್ಥಳದ ಅಕ್ಷಾಂಶ ರೇಖಾಂಶಾನುಸಾರವಾಗಿ ಸಿದ್ಧಾಂತ ನಿಯಮಗಳ ಪ್ರಕಾರ ಗುಣಿಸುವದು ರೂಢಿಯಲ್ಲಿದೆ. ಹೀಗಾಗಿ ಒಂದೇ ತಿಥಿಯು ಬೇರೆ ಬೇರೆ ಊರುಗಳಲ್ಲಿ ಬೇರೆ ಬೇರೆ ದಿನ ಬರುವ ಸಂಭವವಿದೆ. ಸಂಪರ್ಕ ಸೌಕರ್ಯಗಳು ಇಷ್ಟಿದ್ದ ಪುರಾತನ ಕಾಲದಲ್ಲಿ ಇದು ಅನಿವಾರ್ಯವಾಗಿದ್ದಿರಬಹುದು. ಆದರೆ ಇಂದು ಅದೇ ಪದ್ಧತಿಯನ್ನು ಅನುಸರಿಸಲು ಯಾವ ಕಾರಣವೂ ಇಲ್ಲ. ಆದ ಕ್ಕಾಗಿ ಹಬ್ಬ ಮತ್ತೆ ಮಿಗಳ ರಜಾದಿನಗಳ ನಿರ್ಣಯಕ್ಕೆ ಭಾರತದ ಮಧ್ಯ ಸ್ಥಾನವಾದ ಉತ್ತರಕ್ಕಿಂ ದಿನ್ರಿ ಪೂರ್ವ ಹಾಗು ತ್ರಿ.ಗಿಂ ದಿನ್ರಿ ಉತ್ತರ, ಈ ಸ್ಥಾನದ ಮೇಲಿ ತಿಥಿಯ ನ್ನು ಗಣಿಸಬೇಕು ಹಾಗು ಆದೇ ಆಧಾರದ ಮೇಲೆ ಹಿಂದು, ಪೌದ್ಧ ಹಾಗು ಜೈನ ಹಬ್ಬಗಳ ನಿರ್ಣಯವಾಗಬೇಕು.

ಈ ತತ್ವಗಳ ಮೇಲಿಂದ ಮುಂದಿನ ಏಪ್ರಿಲ ವರ್ಷಗಳ ಪಂಚಾಂಗವನ್ನು ಸಮಿತಿಯು ಗುಣಿಸಿಕೊಟ್ಟಿದೆ. ಆವುಗಳಲ್ಲಿ ಕೊಟ್ಟ ವಿವಿಧ ಪಬ್ಬಗಳ ದಿನಗಳನ್ನು ನೋಡಿ ಆವುಗಳಿಗೆ ವಿವಿಧ ರಾಜ್ಯಗಳು ಒಪ್ಪುವಲ್ಲೋ ಎಂದು ತಿಳಿಸಬೇಕಾಗಿದೆ.

ಪಂಚಾಂಗ ಸಮಿತಿಯು ಸ್ಥಾನಿಕ ಪಂಚಾಂಗ ಕರ್ತರು ಕೊಡುವ ಸಲಹೆಗಳ್ಲಾಗಲಿ ಅವುಗಳನ್ನ ವಲಂಬಿಸಿದ ಧಾರ್ಮಿಕ ಉಚಾರ ವಲ್ಲಾಗಲಿ ಕೈಹಾಕಬಯಸುವುದಿಲ್ಲ. ಆದರೂ ತಿಥಿ ನಕ್ಷತ್ರಗಳ ಗಣನೆಯಲ್ಲಿ ಆವರು ವರದಿಯಲ್ಲಿ ಕೊಡಲಾದ ವಿವರಗಳ ಆಧಾರವನ್ನು ಅವಲಂಬಿಸಿದರೆ ಒಳಿತೆಂದು ಸಮಿತಿ ಅಭಿಪ್ರಾಯಪಡುತ್ತದೆ.

ಪ್ರಕಟಣೆ

ರೂಪಾಯಿ 1000 ತನಕ ಸಾಲಗಳು ಆಸ್ತಿ ಜವಾಬ್ದಾರಿ ಆಥವಾ ಚಾಮಿನುಗಳಲ್ಲಿ ದಿನೇ ನಮ್ಮ ಬೆಸ್ತಕಿನಿಂದಲೇ ಹೊರೆಯುವುವು. ಹಲವರು ಈಗಾಗಲೇ ಪಡೆದಿರುತ್ತಾರೆ. ವಿವರಗಳಿಗೆ ಇಂಗ್ಲಿಷಿನಲ್ಲಿ ಬರೆಯಿರಿ:—

Bombay Mercantile Co
Bombay--23.

ನಿಮ್ಮ ಅಮೂಲ್ಯ ಒಡವೆ ನಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಆಹಾರ ಜನಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಪೆಚ್ಚಿನ ಮಾಟಂತಿಗೆ ನನ್ನೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

ಕುಂದಾಪುರ ಡಿ. ಮು. ಕೋರ್ಟನಲ್ಲಿ

O. S 593/55.

ಕೆಲ್ಲ ಜನಾರ್ದನ ಭಟ್ಟ.—ವಾದಿ

ಮತ್ತು

ಬಿ. ಆನಂದ ರಾವ್ ಸಜಾ— ಪ್ರತಿವಾದಿರು.

ಇವರೊಳಗೆ

ಉಡುಪಿ ತಾಲೂಕು ಕಜ್ಜೂರು ಗ್ರಾಮದ ಬಾರ್ಕೂರಿಲ್ಲಿಯಾಣ ಪಳ್ಳಿಗುಡ್ಡೆ ನಿವಾಸಿಯಾದ ಕೆಲ್ಲ ಜನಾರ್ದನ ಭಟ್ಟ ನಿಗೆ ೧ನೇ ಪ್ರತಿವಾದಿ ಬಿ. ಆನಂದ ರಾವ್ ಇವರಿಗೆ ತಿಳಿಸುವುದೇನೆಂದರೆ:—

ನೀವು ನಿಮ್ಮ ತಾಬೆಯಾದ ೭ನೆ. ಪ್ರತಿವಾದಿ ಮಣ್ಣಾಣತಿ ಆಸ್ತಿಗೆ ಸಂಬಂಧಿಸಿದಂತೆ ಮೇಲ್ಕಂಡ ನಾಡಿಗೆ ನ್ಯಾಯವಾದ ಪ್ರತಿಫಲ ರೂ. 1500-0-0ಕ್ಕೆ ಬದಲಾಯಿಸಿ ದಿನಾಂಕ: ನೋಟಿನ ಅಸಲು ಬಡ್ಡಿ ಬಾಬ್ತು ರೂ. 1542—14—8ನ್ನು ಬಡ್ಡಿ ೧ನೇತ ಬಗನಾಯಿಕೊಳ್ಳುವ ಬಗ್ಗೆ ಅನ್ಯಾ ಮಾಡಿದ ಸದ್ರಿ ವಾಜೆಯನ್ನು ಮೇಲ್ಕಂಡ ಕೋರ್ಟನಲ್ಲಿ ಆಯ್ಕೆನ ತಪ್ಪಿ ಬಗ್ಗೆ ತಾ. 9—13—55ಕ್ಕೆ ಇತೋಣಾಗಿಯಿದೆ. ಸದ್ರಿ ವಾಜೆಯಲ್ಲಿ ಉಪಾನರಣೆ ಕೊಡುವುದಿದ್ದರೆ ಸದ್ರಿ ದಿನಸ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳಬಹುದು.

A. V. N. Hebbar.
Pleader for Plaintiff
Coondapoor Dated 16—11—55.

ಉಪಕಾರ ಸ್ಮರಣೆ

ಸುಮಾರು 1 ತೊಲೆ ಭಾರದ ನನ್ನ ಚಿನ್ನದ ಉಂಗುರವನ್ನು ತಾ. 15—11—55ರಲ್ಲಿ ಕಳೆದು ಹೋದುದು ಅರಿವಾಗಿ ಜನಪ್ರೀತ ಆಯುರ್ವೇದ ಡಾ. ಯು. ರಘೋತ್ತಮ ಮೇಸ್ತ್ರರವರಿಗೆ ಉಡುಪಿ—ಕುಕ್ಕಿಕಟ್ಟೆ ರಸ್ತೆಯಲ್ಲಿ ಸಿಕ್ಕಲು ಪ್ರತಿಫಲವನ್ನು ವಡಕೊಳ್ಳಲೆ ವಾಜಾಸುಕೊಟ್ಟುದುದಕ್ಕಾಗಿ ಸದ್ರಿ ಡಾಕ್ಟರರವರಿಗೆ ನಾನು ಈ ಮೂಲಕ ಹೃತ್ಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಹಿರಿಯಣ್ಣ ಶೆಟ್ಟಿ.
ಚಿಟ್ಪಾಡಿ ತಾಡ ತೆಜ್ರ ಮೊಮ್ಮಗ.
ತಾ. 17—11—55 ಚಿಟ್ಪಾಡಿ.

(೪ನೇ ಪುಟದಿಂದ)

ಕೇಂದ್ರಗಳಿಗೆ ಬರಮಾಡಿಕೊಂಡು ಅವರಿಂದ ಉಪನ್ಯಾಸಗಳನ್ನು ಕೊಡಿಸುವ ಮತ್ತು ತರಬೇತಿಯನ್ನು ಅಚ್ಚುಕಟ್ಟಾಗಿ ಮಾಡಲು ಕಾರ್ಯಕ್ರಮ ರೂಪಿಸುವ ವಿಧಾನವನ್ನು ಅನುಸರಿಸುವುದು ಹಿತಕರ. ಇದರಿಂದ ತಾಂತ್ರಿಕ ಶಿಕ್ಷಣ ಮಂಡಳಗಳೊಡನೆ ಕೈಗಾರಿಕೆಗಳಿಗೆ ಸಂಬಂಧ ಬೆಳೆದು ತಮ್ಮ ವಿಸ್ತರಿಸುವ ಕಾರ್ಯಕ್ರಮಗಳಲ್ಲಿ ಅವು ಶಿಕ್ಷಣ ಮಂಡಳಗಳ ನೆರವನ್ನು ಪಡೆಯುವಂತಾಗುತ್ತದೆ; ಪದವೀಧರರಿಗೆ ಕೈಗಾರಿಕೆಗಳಲ್ಲಿ ಕೆಲಸವೂ ದೊರಕುತ್ತದೆ. ತಾಂತ್ರಿಕ ಶಿಕ್ಷಣ ಮಂಡಳಿಗಳಿಗೆ ಕೈಗಾರಿಕೆಗಳು ಸಾಕಷ್ಟು ಧನ ಸಹಾಯವಿತ್ತು, ಅಮೇರಿಕದಂತೆ, ಅವುಗಳ ಬೆಳವಣಿಗೆಗೆ ನೆರವಾಗುವ ದಿನ ಬರಲೆಂದೂ ಹಾರೈಸುವುದು ತಪ್ಪಲ್ಲ.

ಕರ್ತವ್ಯದ ದಿಗ್ದರ್ಶನ

ತಾಂತ್ರಿಕ ಕ್ಷೇತ್ರದಲ್ಲಿ ಕ್ಷಿಪ್ರ ಮುನ್ನಡೆ ನಡೆಯುತ್ತಿರುವುದರಿಂದ ಉತ್ತಮ ನೈಪುಣ್ಯ ಸಂಪಾದಿಸಿದಜನರು ಆವಶ್ಯಕತೆ ಇದೆ, ಅಲ್ಲದೆ ವೃವಹಾರ್ಯವಾದ ನಕಾಶೆ ಬರೆಯುವ ಉತ್ಪಾದನೆಯ ಕ್ರಮವನ್ನು ವ್ಯವಸ್ಥಿತಗೊಳಿಸುವ, ಯಂತ್ರ ವಿಜ್ಞಾನದ ವಿಶೇಷ ಆವಶ್ಯಕತೆಗಳ ಕಡೆಗೆ ಗಮನ ಕೊಡುವ ಪ್ರತಿಭಾವಂತರೂ ಬೇಕಾಗಿದ್ದಾರೆ. ವಿಶ್ವವಿದ್ಯಾನಿಲಯಗಳು ಮೂಲ ಭೂತವಾದ ಯಂತ್ರ ವಿಜ್ಞಾನದ ಸಮಸ್ಯೆಗಳಲ್ಲಿ ವಿದ್ಯಾರ್ಥಿಗಳನ್ನು ತರಬೇತಿಗೊಳಿಸಬಹುದಾದರೂಬಹಳ ಗಾಢವಾದ ವ್ಯಾವಹಾರಿಕ ತರಬೇತಿಯು ಕೈಗಾರಿಕೆಗಳಲ್ಲಿಯೆಷ್ಟೇ ಸಿಗಬಲ್ಲುದು ಈ ದೇಶದಲ್ಲಿ ಸರಕಾರದವರಾದರೂತಮ್ಮಔದ್ಯಮಿಕ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ವ್ಯವಹಾರ ಜ್ಞಾನವನ್ನು ಹೆಚ್ಚಿಸುವ ತರಬೇತಿಗೆ ಅವಕಾಶ ನೀಡಿ, ಔದ್ಯಮಿಕ ಸಂಸ್ಥೆಯಲ್ಲಿ ಹೊಣೆಗಾರ ಸ್ಥಾನಪಡೆಯುವುದಕ್ಕೆ ಸಿದ್ಧಪಡಿಸುವ ವ್ಯವಸ್ಥೆಯನ್ನು ಹಾಕಿ ಕೊಡಬೇಕು.

ಔದ್ಯಮಿಕ ಕ್ಷೇತ್ರದಲ್ಲಿ ನಿಷ್ಣಾತರಾದ ಯಂತ್ರ ವಿಜ್ಞಾನಿಗಳಲ್ಲದೆ, ಸಾಮಾನ್ಯವಾಗಿ ಯಂತ್ರಗಳನ್ನು ನಡೆಸಬಲ್ಲ ನುರಿತ ಕೆಲಸಗಾರರ ಅಗತ್ಯವೂ ಬೇಳುತ್ತದೆ, ಅವರಿಗೆ ಯೋಗ್ಯತರಬೇತಿಯ ಅವಕಾಶಗಳನ್ನೊದಗಿಸುವುದು ಕೈಗಾರಿಕೆಗಳ ಅಭ್ಯುದಯ ದೃಷ್ಟಿಯಿಂದ ಮುಖ್ಯವಾದ ವಿಷಯ ವ್ಯಾಪಾರ ಶಿಕ್ಷಣ ಕೇಂದ್ರಗಳಲ್ಲಿಯೂ ವೃತ್ತಿ ಶಿಕ್ಷಣಾಲಯಗಳಲ್ಲಿಯೂ ಈಗ ಇಂಥ ತರಬೇತಿ ನೀಡಲ್ಪಡುತ್ತಿದೆ. ಆವರಿ ಸಾಮಾನ್ಯವಾಗಿ ಈ ತರಬೇತಿಯ ಯೋಗ್ಯತೆ ಕೆಳತರಗತಿಯದಾಗಿದೆ. ದೇಶದ ಹಿತರಕ್ಷಣೆಗಾಗಿ ಅಖಿಲ ಭಾರತ ಮಟ್ಟದಲ್ಲಿ ಯೋಗ್ಯತೆಮನ್ನು ಹೆಚ್ಚಿಸುವುದು ಇಷ್ಟವಾಗಿದ್ದು ಔದ್ಯಮಿಕ ಸಂಸ್ಥೆಗಳು ಸ್ವತಃ ತರಬೇತಿ ಕೇಂದ್ರಗಳನ್ನು ತೆರೆಯುವುದೂ ವಿಶ್ವವಿದ್ಯಾ ನಿಲಯಗಳು ಇಲ್ಲಿ ಶಿಕ್ಷಣ ನೀತಬಲ್ಲ ಪ್ರಾಧ್ಯಾಪಕರನ್ನು ಸಿದ್ಧಗೊಳಿಸುವುದೂ ಅಪೇಕ್ಷಣೀಯ. ದೃಢವಾದ ಔದ್ಯಮಿಕ ನೆಲಗಟ್ಟನ್ನು ರಾಷ್ಟ್ರದಲ್ಲಿ ಹಾಕುವುದಕ್ಕೋಸ್ಕರ ಇಂಥಸಹಕಾರ ಅತ್ಯವಶ್ಯವಾಗಿದೆ ರಾಷ್ಟ್ರೀಯ ಪುನರುಜ್ಜೀವನದಲ್ಲಿ ಸರಕಾರದ ಧುರೀಣರೂ ಔದ್ಯಮಿಕ ಹಾಗು ವೈಜ್ಞಾನಿಕ ಸಂಸ್ಥೆಗಳ ವರಿಷ್ಠರೂ ತಮ್ಮೆಲ್ಲ ಶಕ್ತಿಗಳನ್ನು ಪರಸ್ಪರ ಪೂರಕ ದೃಷ್ಟಿಯಿಂದ ಉಪಯೋಗಿಸಿಕೊಳ್ಳಲು ಇನ್ನು ತಡವಾಡಬಾರದು. ತಾಂತ್ರಿಕ ಶಿಕ್ಷಣವು ಔದ್ಯಮಿಕ ಸಂಸ್ಥೆಗಳಲ್ಲಿ ಸ್ಥಾನ ಸಿಗುವಂತೆ ಸಂಕೋಚನಾತ್ಮಕವೂ ಕ್ರಿಯಾತ್ಮಕವೂ ಆಗಿ ನೋಡಿಕೊಳ್ಳಬೇಕು. ಕೈಗಾರಿಕೆಗಳು ವಿಶ್ವವಿದ್ಯಾನಿಲಯಗಳ ತರುಣರನ್ನು ಆಕರ್ಷಿಸುವಂತಾಗಬೇಕು. ಅಮೇರಿಕದ ಮಾದರಿ ಮತ್ತು ಅನುಭವ ಈ ಮಟ್ಟಿಗೆ ನಮ್ಮ ದಾರಿದೀಪ!

ದೀಪಾವಳಿ ಸಂಚಿಕೆಗಳು

ಮೊನ್ನೆ ತಾನೆ ಆಚರಿಸಿದ ದೀಪಾವಳಿಯ ಪರ್ವ ದಿನದಲ್ಲಿ ಆನೇಕ ಪತ್ರಿಕೆಗಳು ದೀಪಾವಳಿ ವಿಶೇಷಾಂಕವನ್ನು ಪ್ರಕಟಿಸಿವೆ ನಮಗೆ ವಿಮರ್ಶೆಗಾಗಿ ಬಂದಿರುವ ಕೆಳಗಿನ ಪತ್ರಿಕೆಗಳನ್ನು ಸಂತೋಷದಿಂದ ಸ್ವೀಕರಿಸಿದ್ದೇವೆ — ''ಪ್ರಜಾಮತ'', ''ಜಯಹಿಂದ್'', ''ಕರ್ನಾಟಕ ವೈಭವ'', ''ವೀಣಾ'', ''ವಿಕಾಸ'', ''ಕಲ್ಪನಾ'' ಮತ್ತು ''ಪ್ರಭಾತ''

ವಿಷಯ ವೈವಿಧ್ಯದಲ್ಲಿಯೂ ಗಾತ್ರದಲ್ಲಿಯೂ ''ಪ್ರಜಾಮತ''ದ ಸಂಚಿಕೆ ಹೆಮ್ಮೆಯ ಸ್ಥಾನವನ್ನು ಪಡೆದಿದೆ ರಜತೋತ್ಸವ ಸಂಚಿಕೆಯಾಗಿಯೂ ಇದನ್ನು ಕರೆದಿದ್ದಾರೆ. ಪತ್ರಿಕೆ ಪುಟ್ಟ ೨೫ ವರ್ಷಗಳನ್ನು ಕಳೆದ ಕತೆ ವಿಶೇಷ ಕಳೆಯನ್ನು ಈ ಸಂಚಿಕೆಗೆ ನೀಡಿದೆ ''ಕರ್ನಾಟಕ ವೈಭವ''ದಲ್ಲಿಯೂ ಪತ್ರಿಕೆಯು ಬೆಳೆದು ಬಂದ ರೀತಿಯನ್ನು ವಿವರಿಸಲಾಗಿದೆ. ಕತೆ, ಕವಿತೆ, ಲೇಖನಾದಿಗಳ ವ್ಯಾಪ್ತಿ ಮತ್ತು ಸೊಗಸಿನ ದೃಷ್ಟಿಯಿಂದ ''ಜಯಹಿಂದ್'', ''ವೀಣಾ'' ಮತ್ತು ''ಪ್ರಭಾತ''ದ ಸಂಚಿಕೆಗಳೂ ಚೆನ್ನಾಗಿವೆ ''ಕಲ್ಪನಾ'' ಮತ್ತು ''ವಿಕಾಸ'' ಎಂದಿವು ಹೆಸರಿಗಷ್ಟೇ ವಿಶೇಷ ಸಂಚಿಕೆಗಳಾಗಿದ್ದು ಸಾಮಾನ್ಯ ಸಂಚಿಕೆಗಿಂತ ಹೆಚ್ಚಿನದೇನೂ ಆಗಿಲ್ಲ

—ಕು.

(೩ನೇ ಪುಟದಿಂದ)

ತನದ ಸಮಯ ಸ್ವೀಕರಿಸಿದ ನಿರ್ಣಯ ಇದನ್ನು ಸಾರಿ ಹೇಳುತ್ತದೆ. ಕಲ್ಯಾಣಿಯಲ್ಲಿ (೧೯೫೪) ಸ್ವೀಕೃತವಾದ ಗೊತ್ತುವಳಿಯೂ ಇದಕ್ಕೆ ಅಪವಾದವಲ್ಲ. ೧೯೫೫ರಲ್ಲಿ ಅವಡಿಯ ಅಧಿವೇಶನದಲ್ಲಿ ಸೇರುವ ಹೊತ್ತಿಗೆ ಫಜಲಾಲಿ ಆಯೋಗ ತನ್ನ ಕೆಲಸವನ್ನು ನಡೆಸುತ್ತಿದ್ದುದರಿಂದ ಈ ಪ್ರಶ್ನೆ ಚರ್ಚೆಗೆ ಬರಲಿಲ್ಲ. ಆಯೋಗದ ವರದಿ ಈಗ ಪ್ರಕಟವಾಗಿದೆ— ಕಾಂಗ್ರೆಸಿನ ನಿಲುವೆ ಸಾಮಾನ್ಯವಾಗಿ ವರದಿಯನ್ನು ಸ್ವೀಕರಿಸ ಬೇಕೆನ್ನುತ್ತವೆ

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಅಂಬುಜಾಕ್ಷಿ—

ಬರೆದವರು: ಎಸ್ ವೆಂಕಟರಾಜ, ಪ್ರಕಾಶಕರು ಶ್ರೀಕೃಷ್ಣ ಪ್ರಕಾಶನ, ಯೋಗೀಂದ್ರ ಸದನ, ಉಡುಪಿ

ಬೆಲೆ: ರೂ. ೦—೧೪—೦

ದಕ್ಷಿಣ ಕನ್ನಡದ ಉತ್ತಮ ಕವಿಗಳಾದ ಶ್ರೀ ಎಸ್ ವೆಂಕಟರಾಜರು ಇದೀಗ ತಮ್ಮ ಪ್ರಥಮ ಸಾಮಾಜಿಕ ಕಾದಂಬರಿಯನ್ನು ಕನ್ನಡಿಗರಿಗೆ ನೀಡಿದ್ದಾರೆ. ಇದು ವೇಶ್ಯಾ ಸಮಸ್ಯೆಯ ಒಂದು ಮುಖವನ್ನು ಚಿತ್ರಿಸುತ್ತದೆ. ಕಾದಂಬರಿಯ ನಾಯಕಿ ಅಂಬುಜಾಕ್ಷಿಯು ಒಳ್ಳೆಯ ಜೀವನವನ್ನು ನಡೆಸುವ ಅಪೇಕ್ಷೆ ಪಟ್ಟವಳು, ತನ್ನ ಇನಿಯನಾಗಲಿಲ್ಲ ಯೋಗ್ಯತೆ ತೆಪವನ್ನು ಗುರುತಿಸಿ ಕೊಂಡವಳು ಆದರೆ ಶ್ರೀಧರನ ದೌರ್ಬಲ್ಯ ಮತ್ತು ಔದಾಸೀನ್ಯಗಳಿಂದಾಗಿ ಅವಳು ಅವನ ಪಂಡವನ್ನು ಹೊತ್ತು, ಕೆತ್ತು, ದೂರವಿದ್ದೇ ಜೀವನ ನಡೆಸಬೇಕಾಗುತ್ತದೆ ಹೊಟ್ಟೆಗಾಗಿ ಅನಾತಿಯ ಮಾರ್ಗವನ್ನೂ ಅವಲಂಬಿಸಬೇಕಾಗುತ್ತದೆ. ಆದರೆ ಎಂದೆಂದೂ ತನ್ನ ಪ್ರಣಯದ ಪ್ರಥಮ ದಿನಗಳ ಸಾಮಿಪ್ಯವನ್ನು ಆಕೆ ಮರೆಯುವುದಿಲ್ಲ. ಆದರ ರಕ್ಷಣೆಗೆಯೇ ಹೋರಾಡಿದಳು ಶ್ರೀಧರನ ಶ್ರೇಯಸ್ಸನ್ನೆ ಬಯಸಿದಳು ತನ್ನ ಮಗನನ್ನು ಅವನ ತಂದೆಯಾದ ಶ್ರೀಧರನೇ ಬಲಿಗೊಂಡ ಬಳಿಕ ಅಂಬುಜಾಕ್ಷಿಯ ಜೀವನದ ಬೆಳಕು ಆರಿದರೂ ಆಕೆ ಶ್ರೀಧರನ ಹಿತಚಿಂತನೆಗೆ ತಪ್ಪಲಿಲ್ಲ ಇಲ್ಲಿರುವುದು ಉದಾತ್ತ ಸಂಸ್ಕಾರವುಳ್ಳ ಸ್ತ್ರೀಯ ಚರಿತ್ರ ಚಿತ್ರಣ, ಕಾವ್ಯಮಯವಾದ ಶೈಲಿ, ಸಹಾನುಭೂತಿಯಿಂದ ತುಂಬಿದ ದೃಷ್ಟಿಕೋಣ ಶ್ರೀ ವೆಂಕಟರಾಜರ ಲೇಖನಿ ಹೃದಯ ಸ್ಪರ್ಶಿಯಾಗುವಂತೆ ಈ ಕಾದಂಬರಿಯನ್ನು ಬರೆದಿದೆ ಆದರೆ ಮಾಧ್ಯಮಿಕರ್ಕೆ ಮನಸೋತ ಓದುಗರು ಆವರಿಂದ ಹೊಸ ಕಾದಂಬರಿಗಳನ್ನು ನಿರೀಕ್ಷಿಸುತ್ತಾರೆಂದು ಹೇಳಬಹುದು

ಅಣಿಕಲ್ಲು — (೨ ಭಾಗಗಳಲ್ಲಿ) ಮತ್ತು ಪುಟಚೆಂಡು — (೨ ಭಾಗಗಳಲ್ಲಿ)—

ಪ್ರಕಾಶಕರು: ಭಾರತೀ ಸಾಹಿತ್ಯಭಂಡಾರ, ಯರನಾಳ, ಅಂಚೆ ಮನಗೋಳಿ (ವಿಜಾಪುರ ಜಿಲ್ಲೆ) ಬೆಲೆ ಪ್ರತಿಯೊಂದು ಭಾಗಕ್ಕೆ ರೂ ೦—೧೨—೦

ಪ್ರಾಥಮಿಕ ಶಿಕ್ಷಣ ಸಂಸ್ಥೆಗಳ ಪ್ರಯೋಜನಾರ್ಥವಾಗಿ ಶ್ರೀ 'ಸಿಸು' ಅವರಿಂದ ಸಂಪಾದಿಸಲ್ಪಟ್ಟ ಈ ಪುಸ್ತಕಗಳಲ್ಲಿ ಮೊದಲನೆಯದು ಪುಟ್ಟ ಕಥೆಗಳಿಂದಲೂ ಕೂಡಿದೆ. ಪ್ರತಿಯೊಂದರ ಪ್ರಥಮ ಭಾಗವು ೧ರಿಂದ ೪ನೇ ತರಗತಿಯ ವರೆಗಿನ ಮಕ್ಕಳಿಗೂ ದ್ವಿತೀಯ ಭಾಗವು ೪ ಮೇಲಿನ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತೆ ಶ್ರಮವಹಿಸಲಾಗಿದೆ. ಕರ್ನಾಟಕದ ನೂರಕ್ಕೂ ಹೆಚ್ಚು ಹಿರಿಯ ಹಾಗು ಕಿರಿಯ ಬರೆಹಗಾರರು ಈ ಕತೆಗಳನ್ನೂ ಪದ್ಯಗಳನ್ನೂ ಬರೆದಿದ್ದಾರೆ. ಹೀಗಾಗಿ ಇದೊಂದು ನೂತನ ಸಾಹಸವಾಗಿದೆ. ಪ್ರಾಥಮಿಕ ಶಿಕ್ಷಕರು ಪ್ರೋತ್ಸಾಹಿಸಲು ಯೋಗ್ಯವಾದ ಕೃತಿಗಳು ಇವಾಗಿವೆ.

ಲಘು ಪರಿಚಯ

○"ವಿಕ್ರಮ"ದ ವಿಜಯದಶಮಿ ವಿಶೇಷಾಂಕದಲ್ಲಿ ಆಚಾರ್ಯ ತ್ರಯರೆ ಮತ್ತು ಬಸವಣ್ಣ, ರಾಮಕೃಷ್ಣ ಪರಮಹಂಸ, ದಯಾನಂದ ಮುಂತಾದ ವಿಭೂತಿ ಪುರುಷರ ಜೀವನದ ವೈಶಿಷ್ಟ್ಯಗಳನ್ನು ವಿವರಿಸುವ ಉತ್ತಮ ರೇಖಾಚಿತ್ರಗಳಿವೆ, ಹಿಂದೂ ಧರ್ಮದ ಹಿರಿಮೆಯನ್ನು ಪ್ರತಿಪಾದಿಸುವ ಬರಹಗಳನ್ನು ಕಾಣುತ್ತೇವೆ ವಿಚಾರ ಪ್ರಚೋದಕವಾದ ಈ ಸಂಚಿಕೆಗೆ ಸ್ವಾಗತ.

○ಬೆಂಗಳೂರಿನ "ವಿಕಟ ವಿನೋದಿನಿ" ಮಾಸಿಕ ಪತ್ರಿಕೆಯು ಇದೀಗ ವಾರ್ಷಿಕ ಸಂಚಿಕೆಯು ಎಂದಿನಂತೆ ಸುಂದರವಾಗಿಯೂ ಆಕರ್ಷಕವಾಗಿಯೂ ತನ್ನ ದೀರ್ಘ ಪರಂಪರೆಗೆ ಉಚಿತವಾದ ಬಗೆಯಲ್ಲಿಯೂ ಪ್ರಕಟವಾಗಿದೆ ಅರಾಜಕಯಪ್ಪು ಸುಲಭ ಬೆಲೆಗೆ ಸಾಕಷ್ಟು ಹೆಚ್ಚು ಗಾತ್ರವುಳ್ಳ, ಈ ಸಂಚಿಕೆಯು ವ್ಯಂಗ ಲೇಖನ, ಕತೆ, ನಾಟಕ ಮುಂತಾದ ಸಾಹಿತ್ಯದ ಜನಪ್ರಿಯ ಮುಖಗಳಿಂದ ಮೆರಗು ಪಡೆದು ಓದುಗರಿಗೆ ದೊರೆತಿದೆ.

(೧ನೇ ಪುಟದಿಂದ)

ಈ ಸೇವೆಮಾಡಲಿ" ಎಂದು ಬರೆದಿದೆ. ''ಇಂಡೆಪೆಂಡೆನ್ಸಿಯ'' ಎಂಬ ರಶ್ಯದಇನ್ನೊಂದು ಪ್ರಮುಖ ಪತ್ರಿಕೆಯು "ಭಾರತದ ಮಹಾಜನರು ತಮ್ಮ ರಾಷ್ಟ್ರದ ಆರ್ಥಿಕ ಮತ್ತು ಸಾಂಸ್ಕೃತಿಕ ಉನ್ನತಿಗಾಗಿ ಶಕ್ತಿ ವ್ಯಯಿಸುವುದನ್ನೂ ಆಗ್ನೇಯ ಏಶ್ಯದಲ್ಲಿ ಮತ್ತು ತನ್ಮೂಲಕ ಜಗತ್ತಿನಲ್ಲಿ ಶಾಂತಿ ರಕ್ಷಣೆ ಮಾಡಲು ಹೋರಾಡುತ್ತಿರುವುದನ್ನೂ ರಶ್ಯದ ಜನತೆ ಹೆಚ್ಚಿನ ಕುತೂಹಲದಿಂದ ನಿರೀಕ್ಷಿಸುತ್ತಿದೆ ಪಂಚಶೀಲಗಳ ಮೇಲೆ ಆಧರಿತವಾಗಿರುವ ಉಭಯ ರಾಷ್ಟ್ರಗಳ ಸ್ನೇಹ ವೃದ್ಧಿಸಾದುದಾಗಿದೆ" ಎಂದು ಹೇಳಿದೆ

ಆನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಭಾರತದಾದ್ಯಂತ ನಡೆದಿರುವ ಪ್ರಗತಿಯ ಚಿತ್ರವನ್ನು ಕಣ್ಣಿಗೆ ಕಟ್ಟಬಲ್ಲ ಪ್ರವಾಸದ ಪ್ರಯೋಜಕತ್ವಕ್ಕೂ ರಶ್ಯದ ನಾಯಕರ ತಂಡ ಗುರಿಯಾಗಿದೆ. ರಾಜಕೀಯ ನುಟ್ಟಿದ ಮೂತುಕತೆಗಳು ನೆರೆಯ ಬರ್ಮಾದೇಶಕ್ಕೆ ಕೆಲವು ದಿನಗಳ ಸಂದರ್ಶನವನ್ನು ನೀಡಿ ದಕ್ಷಿಣಪೂರ್ವ ತೀರಕ್ಕೆನೆಂದು ಭಾರತಕ್ಕೆ ಮರಳಿದ ಬಳಿಕ ನಡೆಯುತ್ತವೆ. ರಶ್ಯವು ಭಾರತದ ಪ್ರಗತಿಯ ಸಂಪೂರ್ಣ ಚಿತ್ರವನ್ನು ಕಂಡುಕೊಳ್ಳಲು ಆತುರ ಪಟ್ಟಿರುವುದಕ್ಕೆ ಈ ರಾಜಕೀಯ ನಾಯಕರ ಕೂಟದಲ್ಲಿ ಬಧಿಕ ಹಾಗು ಸಾಂಸ್ಕೃತಿಕ ವಿಷಯಗಳಲ್ಲಿಯೂ ತಜ್ಞರಾದವರು ಸೇರಿರುವುದೇ ನಿದರ್ಶನ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಶ್ಯದ ಉದಾರ ಸಹಾಯವು ಭಾರತಕ್ಕೆ ಧಾರಾಳವಾಗಿ ಸಿಗಬಲ್ಲುದೆಂಬ ಆಶೆಯನ್ನು ಇದು ಕುಟ್ಟಿಸಿದೆ ಎಂದೂ ಸತ್ಯಕ್ಕೆ ವ್ಯತ್ಯಯವಾಗಲಾರದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—



[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ.
ಬೆಲೆ.- ಸಾಧಾರಣ ಪ್ರತಿ- ರೂ ೧-೪-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಮುಖ್ಯ ಸ್ಥಳ
ನವಭಾರತ ಪುಸ್ತಕ ಭಂಡಾರ, ಉಡುಪಿ

ಸ್ವಂತ ಜವಾಬ್ದಾರಿಯ ಮೇಲೆ ದೊರೆಯತ್ತಿದೆ ಸುಲಭ ಕಂತಿನ ಮರುವಾವತಿ. ಇಂಗ್ಲಿಸಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.

P. O. Box No. 3219, BOMBAY 3-

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 1—12—1955

ಸಂಚಿಕೆ ೧೪
NO. 14

ಇದೇ ದೇಶದ ಹಿರಿಮೆಯೆ?

ಪ್ರಜಾಪ್ರಭುತ್ವವೆಂದರೆ ಬಹುಮತದ ಹೆಸರಿನಲ್ಲಿ ಕಾಕಹೋಕರಿಂದಲೂ ಹುಂಡರಿಂದಲೂ ಕೂಡಿದ ಜನಸಮುದಾಯದ ಘೋಷಣೆ ಮತ್ತು ಪುಂಡಾಟಿಕೆಯ ಆಡಳಿತವೇ ಅಥವಾ ರಾಷ್ಟ್ರಬದ್ಧ ಸರಕಾರದ ವ್ಯವಸ್ಥಿತ ಆಳ್ವಿಕೆಯೆ—ಎಂಬುದನ್ನು ಭಾರತೀಯರೆಲ್ಲರೂ ಗಂಭೀರವಾಗಿ ವಿಚಾರಿಸಿ, ಸಮಂಜಸವಾದ ನಿರ್ಣಯವೊಂದಕ್ಕೆ ಕ್ಷಿಪ್ರಪ್ರದಲ್ಲಿಯೇ ಬರಬೇಕಾದ ಆವಶ್ಯಕತೆಯನ್ನು ಕಳೆದ ಕೆಲವು ದಿನಗಳಲ್ಲಿ ದೇಶದ ಕೆಲವೆಡೆ ನಡೆದ ಘಟನೆಗಳು ಒತ್ತಿ ಹೇಳುತ್ತವೆ. ರಾಜ್ಯಗಳ ಪುನರ್ಘಟನೆಯಂಥ ಎಷ್ಟು ಮುಖ್ಯತೆಯ ವಿಷಯಗಳನ್ನು ಪರ್ಯಾಲೋಚಿಸಬೇಕಾಗಿರುವ ಈ ಗಳಿಗೆಯಲ್ಲಿ ಜನರು ತಮ್ಮ ನಿಜವಾದ ಕರ್ತವ್ಯವೇನೆಂಬುದನ್ನು ತಿಳಿದುಕೊಳ್ಳದಿದ್ದರೆ ಆಪಾಯ ತಪ್ಪಿದ್ದಲ್ಲ ಪ್ರಜಾಪ್ರಭುತ್ವದ ಸಮಾಧಿಯಾಗುವ ಭಯವೇ ಹೆಚ್ಚು.

ಮುಂಬಯಿಯಲ್ಲಿ ೨೦, ೨೧ ಮತ್ತು ೨೭ನೇ ದಿನಾಂಕಗಳಲ್ಲಿ ನಡೆದ ದುರಂತಗಳೂ ನಿಂದ್ಯ ಪ್ರದೇಶದ ರಾಜಧಾನಿ ರೇವಾದಲ್ಲಿ ೩೦ನೇ ದಿನಾಂಕ ನಡೆದ ಘಟನೆಯೂ ನವ್ಯ ಕಣ್ಣನ್ನು ತೆರೆಯಲು ಸಮರ್ಥವಾಗದಿದ್ದರೆ, ನಾವು ಭಾರತದ ನಾಗರಿಕತೆಯನ್ನು ಹೊಂದಲಿಕ್ಕೆಯೇ ಅರ್ಹರಲ್ಲವೆನ್ನಬೇಕಾಗುತ್ತದೆ. ಮುಂಬಯಿಯಲ್ಲಿ ನಡೆದುದೇನು? ಫಜಲಾಲಿ ಆಯೋಗದ ಸೂಚನೆಗಳಿಗೂ ಆದಕ್ಕೆ ಕಾಂಗ್ರೆಸಿನ ಕಾರ್ಯಕಾರಿ ಸಮಿತಿ ಮಾಡಿದ ತಿದ್ದುಪಡಿಗಳಿಗೂ ಒಪ್ಪದ ಕೆಲವರು ಸಾರ್ವಜನಿಕ ಸಭೆಗಳಲ್ಲಿ ಕಲ್ಲುಗಳನ್ನೆಸೆದರು, ಪುಂಡರಕ್ಷಣೆಗಳನ್ನು ತೊರಿದರು, ಭಾಷಣಕಾರರಿಗೆ ಹೇಗೋ ನೆರೆದ ಜನರಲ್ಲಿಯೂ ಹೆಲವರಿಗೆ ಗಾಯಗಳನ್ನುಂಟು ಮಾಡಿದರು ಸಾರ್ವಜನಿಕ ಸೊತ್ತುಗಳನ್ನು ಸುಟ್ಟರು, ಲೂಟಿಯೂ ಹೇರಳವಾಗಿ ನಡೆಯಿತು, ರಾಜ್ಯಗಳ ಪುನರ್ಘಟನೆಯಂಥ ಘನೋದ್ದೇಶವನ್ನು ಸಾಧಿಸುವುದಕ್ಕೆ ಇದು ಉಚಿತವಾದ ಮಾರ್ಗವೆ?

ಪೋಲೀಸರು ಕಣ್ಣು ಬಿಟ್ಟು ನೋಡುತ್ತಾ ಕುಳಿತು ಇದನ್ನು ನಡೆಯಗೊಟ್ಟರೆಂದು ಹೇಳುವಂತಿಲ್ಲ ಅವರು ಗಲಭೆಗಳನ್ನು ಹತ್ತಿಕ್ಕಲು ಸಜ್ಜಾಗಿ ನಿಂತಿದ್ದರು ಬೆತ್ತಪ್ರಹಾರಕ್ಕೂ ಅಶ್ರುವಾಯು ಪ್ರಯೋಗಕ್ಕೂ ಅವರು ಮುಂದಾದುದಲ್ಲದೆ ಮುಂಬಯಿಯಲ್ಲಿ ೨೧ನೇ ದಿನಾಂಕ ಗೋಳೀಬಾರನ್ನೂ ನಡೆಸಿದರು ಉದ್ರಿಕ್ತ ಜನರನ್ನು ನಿಯಂತ್ರಣಕ್ಕೆ ತರುವುದಕ್ಕಾಗದಿದ್ದರೂ ಚದರಿಸಿ, ಶಾಂತಿರಕ್ಷಣೆ ಮಾಡಲು ಈ ಉಗ್ರ ಕ್ರಮವು ಅವಶ್ಯವೆಂದು ಅವರು ಭಾವಿಸಿದರು ರೇವಾದಲ್ಲಿ ಸ್ವಲ್ಪ ಮಟ್ಟಿನ ಸೌಮ್ಯ ವರ್ತನೆಯನ್ನು ಪೋಲೀಸರು ತೋರಿಸಿದ ದೆಸೆಯಿಂದ ಮತಪ್ರದರ್ಶಕರು ಸೋಗಿನಲ್ಲಿದ್ದ ಪುಂಡರು ೩ ದಿನಗಳಾದರೂ ಸಭೆಯನ್ನು ಪ್ರವೇಶಿಸಿ, ಅಲ್ಲಿಯ ಮಂತ್ರಿಗಳಿಗೆ ನೋವನ್ನುಂಟು ಮಾಡಿದುದಲ್ಲದೆ ಸಭಾಧ್ಯಕ್ಷರ ಕಡೆಗೂ ಕಲ್ಲು ತೂರಿಗೊಂದಲವನ್ಬೆಬಿಸಿದರು ಪೋಲೀಸರ ವರ್ತನೆಯನ್ನು ನಿಷೇಧಿಸಲು ಹೋಗುವವರು ಜನಸಮುದಾಯದ ಪುಂಡಾಟಿಕೆಯನ್ನು ಸಮರ್ಥಿಸಬಲ್ಲರೆ?

ವಿವೇಕಗಳು ಎಂದೂ ಜನಸಮುದಾಯದ ಅತ್ಯಾಚಾರಗಳನ್ನು ಎತ್ತಿ ಹಿಡಿಯುವಂತಿಲ್ಲವೆಂಬುದು ಸ್ಪಷ್ಟ ಆದರೆ ಗೂಂದಲಮಯ ನೀರಿನಲ್ಲಿ ಮೀನು ಹಿಡಿಯಲು ಉತ್ಸುಕರಾಗಿರುವ ಕಲವು ರಾಜಕೀಯ ಸಪ್ಷಗಳ ಸೃಷ್ಟಿಗಳಲ್ಲಾದರೆ ಇದರಲ್ಲಿ ಕಮ್ಯೂನಿಸ್ಟರು ಬಗ್ಗುಗಣ್ಣರು, ಪ್ರಜಾ ಸಮಾಜವಾದಿ, ರಾಮರಾಜ್ಯ ಪರಿಷತ್ತು ಇತ್ಯಾದಿ ಗುಂಪಿನವರೂ ಕಮ್ಯೂನಿಸ್ಟರನ್ನು ಈ ಮಟ್ಟಿಗೆ ಧಾರಾಳವಾಗಿ ಹಿಂಬಾಲಿಸುತ್ತಿದ್ದಾರೆ ಮುಂಬಯಿ ಹಾಗು ರೇವಾದ ಗಲಭೆಗಳ ಸಂಘಟಕರೇ 'ಎಡ' ಪಕ್ಷದವರೆಂಬುದನ್ನು ಮರೆಯಬಾರದು. ರಾಜ್ಯ ಸಭೆಯಲ್ಲಿ ಕಮ್ಯೂನಿಸ್ಟರ ಧುರೀಣ ಶ್ರೀ ಭೂಪೇಶ ಗುಪ್ತರೇ ಇದನ್ನು ಪರ್ಯಾಯವಾಗಿ ಹೇಳಿದ್ದಾರೆ "ಬಸ್ಸುಗಳನ್ನು ಸುಡದಿರುವ ಜವಾಬ್ದಾರಿ ನಮಗಿರಲಿ" ಎನ್ನುವ ಅವರ ಮಾತಿನ ಅರ್ಥವನ್ನರಿತೇ ಸಭಾಪತಿ ಡಾ. ರಾಧಾಕೃಷ್ಣನ್ನರು "ಹಾಗಾದರೆ ಗಲಭೆಗಳಿಗೆ ಹೊಣೆಗಾರರು ನೀನೆಯೋ?" ಎಂದು ನೇರವಾದ ಪ್ರಶ್ನೆಯನ್ನು ಹಾಕಿದ್ದರು. ಎಲ್ಲರೂ ಆಗ ಬಿದ್ದು ಬಿದ್ದು ನಕ್ಕಿದ್ದರು

ನಗದೇನು ಮಾಡಲು ಸಾಧ್ಯ? ಕಮ್ಯೂನಿಸ್ಟರು ತಾವಾಗಿ ಗಲಭೆಯನ್ನು ಪ್ರಚೋದಿಸುತ್ತಾರೆ, ಮತ್ತು ಆದರಿಂದ ಉದ್ಭವವಾದ "ಗಂಭೀರ" ಪರಿಸ್ಥಿತಿಯನ್ನು ವಿಚಾರಿಸಲು ಸಭಾ ಕಾರ್ಯಕಲಾಪಗಳನ್ನು ಮುಂದರಿಸಬೇಕೆಂದು ಲೋಕಸಭೆ ರಾಜ್ಯ ಸಭೆಗಳಲ್ಲಿ ನಿಲ ವಳಿ ಸೂಚನೆಯನ್ನೂ ಸ್ವತಃ ತರುತ್ತಾರೆ! ಇದಕ್ಕಿಂತ ಹಾಸ್ಯಾಸ್ಪದವಾದ ನಾಟಕೆಗೇಡಾದರು, ಏನೀ ಕಲೆಗಳೆಲ್ಲರೂ ನಗದೇ ಬೇಕಾದ ಸಂಗತಿ ಬೇರೆನಿದೆ? ಲೋಕಸಭೆಯಲ್ಲಿ ಶ್ರೀ ಎ. ಕೆ. ಗೋಪಾಲನ್ ಆಗಲೀ ರಾಜ್ಯ ಸಭೆಯಲ್ಲಿ ಶ್ರೀ ಭೂಪೇಶ ಗುಪ್ತ ಆಗಲೀ—ಗೋಳಿಬಾರಿನ ಕುರಿತು ತೀರಾ ವಿಷಾದವನ್ನು ಪ್ರಕಟಿಸುವುದಕ್ಕೆ ಪ್ರೇರಿಸಿದ ಉತ್ಸಾಹವನ್ನು ಮತ್ತ ಪ್ರದರ್ಶನ ನಡೆಯದಂತೆ ಮತ್ತು ಸಮಸ್ಯೆಯನ್ನು ಪ್ರಜಾ ಸ್ವಭುತ್ವದ ತತ್ವಂಪ್ರದ ಯುಕ್ತವಾಗಿ ಗಣನಾಗಿ ತೀರ್ಮಾನಿಸುವಂತೆ ಮಾಡಲುಏಕೆ ನವ ಸ್ಸು ಮಾಡಲಿಲ್ಲ? ರೇವಾದ ಘಟನೆಯಲ್ಲಿ ಪ್ರಜಾ ಸಮಾಜವಾದಿ ಧುರೀಣರೊಬ್ಬರ ಕೈವಾಡವಿತ್ತೆಂಬ ವದಂತಿಯನ್ನು ಪೋಲೀಸರು ಕಂಡು ಹಿಡಿದಿದ್ದಾರೆ ಹೀಗಿರುವಾಗ ಆಚಾರ್ಯ ಕೃಪಲಾನಿಯವರೂ ಶ್ರೀ ಜಯಪ್ರಕಾಶ ನಾರಾಯಣರೂ ಜನತೆಯ ಆಶಯಂತೆ ನಡವಳಿಕೆಗಾಗಿ ದನಿಯಿಸಿ, ಖಂಡನೆಯ ಮಾತುಗಳನ್ನಾಡುವ ಬದಲು ತಮ್ಮ ಅನುಯಾಯಿಗಳನ್ನೆ ನಿಯಂತ್ರಣದಲ್ಲಿಡಲಾಗದೆ?

ದೊಣ್ಣೆಯಿಂದ ಹೊಡೆಯುವ ಕೀರ್ತಿ ಯಾರಿಗೆ ಬೇಕು ಮಡಕೆ ಒಡೆದ ಮೇಲೆ "ಅಯ್ಯೋ, ಸೂತ್ತೊಂದು ಹಾಳಾಗಿ ಹೋಯಿತಲ್ಲಾ" ಎಂದ ಕನಿಕರದಿಂದ ಮರುಗುವ "ಭಾಗ್ಯ" ಯಾರಿಗೆ ಬೇಕು ಎಂಬುದು ಸಾಮಾನ್ಯವಾಗಿ ಎಡ ಪಕ್ಷಗಳವರ ನಿಲುವೆಯಾಗಿದೆ ಕಮ್ಯೂನಿಸ್ಟರ ಧುರೀಣ ಶ್ರೀ ಡಾಂಗೆಯವರು ಮುಂಬಯಿ ಘಟನೆಗಳ ಕುರಿತು ಮಾತನಾಡುತ್ತಾ ಮುಂಬಯಿ ನಗರವೂ ಜದಾನಿಜಾಗಿರುವ ಸಂಯುಕ್ತ ಮಹಾರಾಷ್ಟ್ರ ರಾಜ್ಯದ ಸ್ಥಾಪನೆಗೇ ದ್ರೋಹದಿಂದ ಕೈಗೊಂಡ ಜನತೆಯ ಶಾಂತ ಕೋರಾಟ" ಎಂದಿದ್ದನ್ನು ಕಂಡಿದ್ದಿರಿ! "ನಮ್ಮ ಮುದ್ದಾರೆ ಸಾದನೆಗೆ ನಾವು ಏನನ್ನು ಬೇಕಾದರೂ ತ್ಯಾಗ ಮಾಡಲು ಸಿದ್ಧರಾಗಿದ್ದೇವೆ, ಯಾರೇ ಪ್ರಹಾರಗಳನ್ನೂ ಗುಂಡೇಟುಗಳನ್ನೂ ನಮ್ಮ ಎದೆಗೆಡಿಸಲಾರವು" ಎಂದವರು ಜಂಭ ಕೊಚ್ಚಿಕೊಂಡಿದ್ದಾರೆ ಹೊಸ ಬಗೆಯ ಸಮಾಜವಾದವನ್ನು ಬಾರತದಲ್ಲಿ ನೆಲೆಗೊಳಿಸುವ ಉತ್ಸುಕತೆಯುಳ್ಳ ಶ್ರೀ ಲೋಹಿಯರು "ಜನರು ತಮ್ಮದೆ ದಾರಿಯಲ್ಲಿ ಸರಕಾರದ ವಿರುದ್ಧ ನಿಂತರೆ ಎಂಥವು ನಾಗರಿಕರನ್ನು ಕೊಲ್ಲ ತೊಡಗಿದರು ಮಾತ್ರ ಗಂಡು ಹಾರಿಸಬಹುದು ಇಲ್ಲದಿದ್ದರೆ ಪೋಲೀಸರು ಇಷ್ಟು ಉಗ್ರ ಪ್ರತಿ ಕೈಗೆತ್ತಿಕೊಳ್ಳುವುದಕ್ಕೆ ನ್ಯಾಯವಿಲ್ಲ" ಎಂದಿದ್ದಾರೆ ಎದ ವಣ ನೆ ಸಮರ್ಥನೆ ದಾಗಲು ಸಾಧ್ಯವೇ!

ಮುಂಬಯಿ ಮತ್ತು ರೇವಾದ ದುರಂತ ಘಟನೆಗಳನ್ನು ನೆನಪಿಗೆ ತಂದಿರುವರೆಂತೆ ಕೇಳಿದವರಾರೂ ಜನ ಸಮುದಾಯದ ಅತಿರೇಕ ವರ್ತನೆಯು ಸರಿಯಾಗಿ ಮಾತನಾಡುವಂತಿದೆಯೆ? ರಾಜಕೀಯ ಪಕ್ಷಗಳು ಕೊಚ್ಚಿಕೊಳ್ಳುವಂತೆ ಇದನ್ನು ಶಾಂತ ಹೋರಾಟವೆಂದು ಭಾವಿಸುವಂತಿದೆಯೆ? ಹೌದು ಎಂದಾದರೆ ನಾವು ಸ್ವಜಾಸ್ವಭುತ್ವ ರಾಜ್ಯದಲ್ಲಿ ಇರಲು ಯೋಗ್ಯರಾದವರಲ್ಲವೆ. ಅಲ್ಲ! ನವಿದನ್ನು ಸಮರ್ಥಿಸುವಂತಿಲ್ಲವಾದರೆ 'ಎಡ' ಪಕ್ಷಗಳ ಕಿವಿಹಿಂಡುವುದಕ್ಕೆ ಎಷ್ಟು ವಾಕ್ಯಕ್ಕೂ ಹಿಂದಿಯುಬಾರದು ಜನರನ್ನೆಕಲ್ಲೆತ್ತ ಇತ್ಯಾದಿಗಳಿಂದಲೂ ಸಾರ್ವಜನಿಕರ ಪರಕುಗಳಿಗೆ ಬೆಂಕಿ ಹಚ್ಚುವುದೇ ಮುಂತಾದ ಭಯಾನಕ ಕೃತ್ಯಗಳಂದಲೂ ನೈತಿಕ ಪುಂಡರ ತಂಡವನ್ನು ಗೋಳಿಬಾರಿನಿಂದಾದರೆ ಗಾಳೀಬಾರಿನಿಂದ ಚದರಿಸಿದರೆ ತಪ್ಪೇನೂ ಇಲ್ಲವೆನ್ನುವ ಬೇಕಾಗುತ್ತದೆ. ಅದಕ್ಕಿಂತ ಸುಲಭ ಕ್ರಮ ಮುಂದೆ ಬಗ್ಗದಿದ್ದರೆ, ಅಂತಿಮೋಪಾಯವಾಗಿ ಅದನ್ನು ಆಶ್ರಯಿಸುವುದು ಅನಿವಾರ್ಯವಾಗುತ್ತದೆ.

ಇದು ಸರಿಯಲ್ಲವೆಂದು ಭಾವಿಸುವ

(೧೩ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ
ಸ್ಥಾಪನೆ ೧೯೨೫] [ಪ್ರಧಾನ ಕಾರ್ಯಾಲಯ ಉಡುಪಿ, ದ. ಕನ್ನಡ

ನುನೆಯಂತಿರುವ ಸ್ಥಳ ಬೇರೊಂದಿಲ್ಲ.

ಸುಖ, ಸೌಕರ್ಯ, ಶಾಂತಿಗಳಿಗೆ ನಿಜವಾಗಿಯೂ ನುನೆಯೆ, ಅತ್ಯುತ್ತಮ ಸ್ಥಾನ ಆದರೆ ತಮ್ಮ ಹಣವನ್ನು ಕಾಪಾಡಿಕೊಳ್ಳಲು ಅತಿ ಅತ್ಯುತ್ತಮ ಸ್ಥಳವಾಗದು ನಮ್ಮ ಬ್ಯಾಂಕಿನಲ್ಲಿ ಒಂದು "ಸೇವಿಂಗ್ಸ್ ಬ್ಯಾಂಕ್" ಲೆಕ್ಕವನ್ನು ಆರಂಭಿಸುವುದು ಅದಷ್ಟು ಜಾಣ್ಮೆಯ ಕಾರ್ಯವಾಗದು! ಸ್ವಲ್ಪನೇ ಹಣವಿಂದ ನಮ್ಮಲ್ಲಿ ಲೆಕ್ಕ ಆರಂಭಿಸಬಹುದು ನಮ್ಮ ನೌಕರರು, ನಾವು ನಿಮಗೆ ಸಹಕರಿಸಲು ಬಹುವಾದ ಅನೇಕ ರೀತಿಗಳನ್ನ ಸೂಚಿಸಲು ಸಿದ್ಧರಾಗಿರುವರು

ಚಲಾವಣೆ ಭಂಡವಾಳ ರೂ. ೭,೫೦,೦೦,೦೦೦ಗೂ ಮಿಕ್ಕಿದೆ

THE CANARA INDUSTRIAL & BANKING SYNDICATE LTD
Estd 1925] [Head Office UDIPI, S India

ಅಲ್ಪಸಂಖ್ಯಾಕ ಭಾಷಾಗುಂಪಿನ ಹಿತರಕ್ಷಣೆ

ಫಜಲಾಲಿ ಆಯೋಗದ ಸೂಚನೆಗಳ ಆಧಾರ

ಲೋಕ ಸಭೆಯಲ್ಲಿ ಪ್ರಶ್ನೆಯೊಂದನ್ನು ಉತ್ತರಿಸುತ್ತಿದ್ದ ಗೃಹಮಂತ್ರಿ ಪಂಡಿತ ಪಂತರು ಫಜಲಾಲಿ ಆಯೋಗದ ವರದಿಯಲ್ಲಿ ಭಾಷೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರೆನಿಸುವ ಜನರ ಹಿತಾಸಕ್ತಿಗಳ ರಕ್ಷಣೆಯ ಕುರಿತು ಸರಕಾರ ತುಂಬ ವ್ಯಾಮುಖ್ಯತೆಯನ್ನು ಕೊಟ್ಟಿದೆಯೆಂದೂ ಪ್ರತಿಯೊಬ್ಬ ವ್ಯಕ್ತಿಯ ಹಾಗು ಸಮಾಜದ ಅಸಿರ್ಬಂಧಿತ ಬೆಳವಣಿಗೆಯಾಗುವುದಕ್ಕೆ ಅನುಕೂಲಿಸುವಂತೆ ರಕ್ಷಣಾ ಕ್ರಮಗಳನ್ನು ಅನುಷ್ಠಾನಕ್ಕೆ ತರುವ ಪರಿಣಾಮಕಾರಿಯಾದ ಪದ್ಧತಿಗಳನ್ನು ರೂಪಿಸಲಾಗುತ್ತಿದೆಯೆಂದೂ ಭಾರತ ಸರಕಾರದ ಪರವಾಗಿ ಹೇಳಿದ್ದಾರೆ. ಸ್ವಾತಂತ್ರ್ಯಾನಂತರದ ನಾಲ್ಕು ದಿನಗಳ ಚರ್ಚೆಯು ಫಜಲಾಲಿ ಆಯೋಗದ ವರದಿಯ ಸಂಬಂಧದಲ್ಲಿ ನಡೆದಾಗಲೂ ಅನೇಕ ಸದಸ್ಯರು ಅಲ್ಪ ಸಂಖ್ಯಾಕರಾದ ಭಾಷಾ ಗುಂಪಿನ ಹಿತಾಸಕ್ತಿಯ ಕುರಿತು ಗಮನ ಕೊಡಬೇಕೆಂದು ಪ್ರತಿಪಾದಿಸಿದ್ದಾರೆ. ಮಂತ್ರಿಗಳೂ ಇದಕ್ಕೆ ಮಹತ್ವವಿದೆ ಎಂದು ಒಪ್ಪಿದ್ದಾರೆ. ಅಲ್ಪ ಸಂಖ್ಯಾಕರಾದ ಭಾಷಾ ಗುಂಪಿನ ಕುರಿತು ಇಷ್ಟು ಆಸಕ್ತಿ ಇರುವುದೇಕೆ? ಫಜಲಾಲಿ ಆಯೋಗ ಈ ಕುರಿತು ಹೇಳಿರುವುದೇನು?—ನೋಡೋಣ.

ಸಾಮಾನ್ಯ ಸಮಸ್ಯೆ

ಕೇವಲ ಸಮ್ಮಿಶ್ರ ಸ್ವರೂಪದ ರಾಜ್ಯಗಳಲ್ಲಿಯಷ್ಟೇ ಭಾಷೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರಾದ ಜನರ ಹಿತಾಸಕ್ತಿಯನ್ನು ರಕ್ಷಿಸುವ ಪ್ರಶ್ನೆ ಏಳುತ್ತದೆ ಎಂದು ಭಾವಿಸುವುದು ತಪ್ಪು. ಏಕ ಭಾಷೆಯ ರಾಜ್ಯಗಳಲ್ಲಿಯೂ ಇಂಥ ಗುಂಪುಗಳಿರುತ್ತವೆ. ಫಜಲಾಲಿ ಆಯೋಗ ಸೂಚನೆಗಳಂತೆ ರೂಪಿಸಲ್ಪಡುವ ಹೊಸ ರಾಜ್ಯಗಳು ಸಾಮಾನ್ಯವಾಗಿ ಭಾಷೆ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಒಮ್ಮುಟ್ಟನಲ್ಲಿರುವ ಎಲ್ಲ ಪ್ರದೇಶಗಳನ್ನು ಒಳಗೊಳ್ಳುವುದರಿಂದ ಅಲ್ಪ ಸಂಖ್ಯಾಕರೆನಿಸುವವರ ಸಂಖ್ಯಾ ಪ್ರಮಾಣವನ್ನು ಈಗಿನ ಕೆಲವು ರಾಜ್ಯಗಳಲ್ಲಿರುವುದಕ್ಕಿಂತ ಎಷ್ಟೋ ಮಟ್ಟಿಗೆ ಕಡಿಮೆಯಾಗಿ ಮಾಡುತ್ತವೆ. ಆದರೆ ಒಂದು ಮಾತನ್ನು ಮಾತ್ರ ಮರೆಯಬಾರದು—ಭಾಷಾ ಗುಂಪಿನ ಬಾಹುಳ್ಯವೊಂದನ್ನೆ ಆಧಾರವಾಗಿ ಹಿಡಿದು ರಾಜ್ಯಗಳ ಸ್ವರೂಪವನ್ನು ನಿರ್ಣಯಿಸಿದರೂ ಅಲ್ಲಿಯೂ ಅಲ್ಪ ಸಂಖ್ಯಾಕರೆನಿಸುವವರು ಉಳಿದೇ ಉಳಿಯುತ್ತಾರೆ. ಇವಕ್ಕೆ ಕೆಳಗಿನ ಮೂರು ಕಾರಣಗಳನ್ನು ಕೊಡಬಹುದು—(೧) ಒಂದು ಭಾಷೆಯನ್ನಾಡುವ ಎಲ್ಲ ಜನರೂ ಒಂದೇ ರಾಜ್ಯದಲ್ಲಿ ಸೇರಲ್ಪಡುವಂತೆ ಒಮ್ಮುಟ್ಟನ ಪ್ರದೇಶವಲ್ಲಿ ಹಂಚಿ ಹೋಗಿಲ್ಲ; (೨) ಭಾಷಾ ವಲಯಗಳ ನಡುವೆ ಉಭಯ ಭಾಷಾ ಗುಂಪಿನ ನೆರೆಗುಗಳು ಪ್ರತಿಯೊಂದೂ ಕಡೆ ಚಾಚಿಕೊಂಡಿರುತ್ತವೆ; ಮತ್ತು (೩) ಏಕ ಭಾಷೆಯೇ ಪ್ರಧಾನವಾಗುಳ್ಳ ರಾಜ್ಯದೊಳಗೆಯೂ ಮಿಶ್ರ ಜನ ಸಂಖ್ಯೆ ನೆಲೆಗೊಂಡಿದೆ. ಇದಲ್ಲದೆ ಭಾರತದ ಸಂವಿಧಾನವು ಪ್ರತಿಯೊಬ್ಬ ಭಾರತೀಯ ನಾಗರಿಕನಿಗೆ ಸಂಚಾರಸ್ವಾತಂತ್ರ್ಯವನ್ನು ಕೊಟ್ಟಿದೆ. ಆದುದರಿಂದ ಭಾಷೆಯ ದೃಷ್ಟಿಯಿಂದ ಈಗ ಒಮ್ಮುಟ್ಟನಲ್ಲಿರುವ ಪ್ರದೇಶಗಳಾದರೂ ಸ್ಥಾಯಿ ಸ್ವರೂಪವನ್ನು ಹೊಂದಿದೆ ಎನ್ನಲು ಬರುವುದಿಲ್ಲ—ಯಾವ ಕಾಲಕ್ಕೂ ಬೇರೆ ಭಾಷೆಯ ಜನರ ಪ್ರವೇಶ ಮತ್ತು ನೆಲಸುವಿಕೆಯಿಂದ ಅವುಗಳ ಈಗಿನ ಸ್ವರೂಪ ಕೆಡಬಹುದು.

ಆಧಾರವಿರುವ ದೂರು

ಸಮ್ಮಿಶ್ರ ಸ್ವರೂಪದ ಅಥವಾ ಒಂದಕ್ಕಿಂತ ಹೆಚ್ಚು ಭಾಷೆಯ ಜನರಿರುವ ರಾಜ್ಯಗಳಲ್ಲಿ ಭಾಷೆಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರಾದವರನ್ನು ನಡೆಸಿಕೊಳ್ಳುತ್ತಿರುವ ರೀತಿಗೆ ಸಂಬಂಧಿಸಿದ ನೂರುಗಳು ಅತಿರಂಜಿತವಾಗಿರುವುದೇನೊ ನಿಜ. ಆದರೆ ಇಷ್ಟರಿಂದಲೇ ಈ ಗುಂಪುಗಳಿಗೆ ಪ್ರಧಾನ ಭಾಷಾಗುಂಪಿಗಿಂತ ತಾರತಮ್ಯವನ್ನು ತೋರಿಸಲಾಗಿಲ್ಲವೆನ್ನುವುದು ಸತ್ಯಕ್ಕೆ ಹೊಂದಿಕೆಯಾಗದು. ಉದಾಹರಣೆಗಾಗಿ ಆನೇಕ ರಾಜ್ಯಗಳಲ್ಲಿ ಇಂತಿಷ್ಟು ವರ್ಷದಿಂದ ತಾವು ಈ ರಾಜ್ಯದಲ್ಲಿ ವಾಸಿಸುತ್ತಾ ಬಂದಿದ್ದೇವೆಂದು ಸಮಾಧಾನ ಮಾಡಿಕೊಟ್ಟು ಅಥವಾ ಸ್ಥಳೀಯ ಭಾಷೆಗಳಲ್ಲಿ ಪರೀಕ್ಷೆಗಳನ್ನಿತ್ತು ಸರಕಾರದ ನೌಕರಿಗಳಲ್ಲಿ ಸೇರಬೇಕಾಗುತ್ತದೆ. ಅಲ್ಪ ಸಂಖ್ಯಾಕರಾದ ಭಾಷಾಗುಂಪಿನ ಮಟ್ಟಿಗೆ ಇದೊಂದು ಕಿರುಕುಳವೇ ಸೈ! ಆದುದರಿಂದ ಇಂಥ ಸಮಸ್ಯೆಯೇ ಇಲ್ಲವೆನ್ನಲಾಗದು. ಇದನ್ನು ತಿಳಿದೇ ಭಾರತದ ಸಂವಿಧಾನದಲ್ಲಿ ಅಲ್ಪ ಸಂಖ್ಯಾಕ ಗುಂಪುಗಳಿಗೆ ಕೆಲವು ವಿಶೇಷ ರಕ್ಷಣೆಗಳನ್ನು ನಾಗರಿಕರ ಮೂಲಭೂತ ಅಧಿಕಾರದ ಚೌಕಟ್ಟಿಗೊಳಪಟ್ಟುಕೊಡಲಾಗಿದೆ. ಪರಿಶಿಷ್ಟ ವರ್ಗ ಹಾಗು ಮೂಲ ನಿವಾಸಿಗಳ ಗುಂಪಿಗೆ ಸೇರಿದ ಜನರನ್ನು ಸರಕಾರದ ನೌಕರಿಗಳಿಗೆ ತೆಗೆದುಕೊಳ್ಳುವಾಗ ವಿಶೇಷ ರಿಯಾಯಿತಿ ತೋರಿಸಬೇಕೆನ್ನುವ ಸಂವಿಧಾನದ ೩೩೫ನೇ ಸೂತ್ರ, ಆಂಗ್ಲೊ ಇಂಡಿಯನ್ ಸಮಾಜದ ಹಿತರಕ್ಷಣೆಯನ್ನು ಕೆಲವು ವರ್ಷಗಳ ವರೆಗೆ ಮಾಡುವುದಕ್ಕೆ ಉದ್ದೇಶಿಸಿದ ಸಂವಿಧಾನದ ೩೩೬ ಮತ್ತು ೩೩೭ನೇ ಸೂತ್ರಗಳು ಮತ್ತು ಪರಿಶಿಷ್ಟ ವರ್ಗ ಹಾಗು ಮೂಲ ನಿವಾಸಿಗಳ ಗುಂಪಿಗೆ ಸೇರಿದ ಮತ್ತು ಇತರ ಬಲಹೀನ ಸಮಾಜದ ಶೈಕ್ಷಣಿಕ ಹಾಗು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಸಂವಿಧಾನದ ೪೬ನೇ ಸೂತ್ರ—ಇವೆಷ್ಟನ್ನು ಹೊರತು ಪಡಿಸಿದರೆ ಕೇವಲ ಅಲ್ಪ ಸಂಖ್ಯಾಕರಿಗಾಗಿಯೇ ರೂಪಿಸಲಾದ ರಕ್ಷಣಾ ಕ್ರಮಗಳು ಸಂವಿಧಾನದ ೨೯, ೩೦ ಮತ್ತು ೩೫೦ನೇ ಸೂತ್ರಗಳಲ್ಲಿ ಅಡಕವಾಗಿವೆ ಎಂದು ಹೇಳಬಹುದು.

ಘಟನಾತ್ಮಕ ಹಕ್ಕು

ಸಂವಿಧಾನದ ೨೯ನೇ ಸೂತ್ರವು ಅಲ್ಪ ಸಂಖ್ಯಾಕರ ಗುಂಪನ್ನೊಳಗೊಂಡು ಎಲ್ಲ ನಾಗರಿಕ ವರ್ಗಗಳಿಗೂ ತಂತಮ್ಮ ವಿಶಿಷ್ಟ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಉಳಿಸಿಕೊಂಡು, ಬೆಳೆಸಿಕೊಂಡು ಹೋಗುವ ಅಧಿಕಾರವನ್ನು ಕೊಡುತ್ತದೆ. ಸರಕಾರದಿಂದ ನಡೆಸಿಕೊಂಡು ಬರುವ ಅಥವಾ ಸಹಾಯ ಸಲ್ಲುತ್ತಿರುವ ಯಾವುದೇ ಶೈಕ್ಷಣಿಕ ಸಂಸ್ಥೆಯಲ್ಲಿ ಪ್ರವೇಶ ಪಡೆಯುವ ಮಟ್ಟಿಗೆ ನಾಗರಿಕರಲ್ಲಿ ಭೇದ ಭಾವ ಮಾಡಬಾರದೆಂದು ಆದು ವಿಧಿಸುತ್ತದೆ. ೩೦ನೇ ಸೂತ್ರವು ಧರ್ಮ ಅಥವಾ ಭಾಷೆಯಾವುದನ್ನೆ ಆಧರಿಸಿಯಾಗಲಿ—ಇಂಥ ಅಲ್ಪ ಸಂಖ್ಯಾಕರಿಗೆ ತಮಗೆ ಬೇಕೆನಿಸಿದ ರೀತಿಯ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಹೋಗಲು ಅಧಿಕಾರವಿದೆ ಎನ್ನುತ್ತದೆ. ಅಂಥ ಅಲ್ಪ ಸಂಖ್ಯಾಕರಿಗೆ ಸಹಾಯನೀಡುವ ಪ್ರಶ್ನೆ ಬಂದಾಗ ಸರಕಾರವು ಭೇದಭಾವ ತೋರಿದಬಾರದೆಂದೂ ಆದು ಸಾರುತ್ತದೆ. ೩೫೭ನೇ ಸೂತ್ರವು ರಾಷ್ಟ್ರಾಧ್ಯಕ್ಷರಿಗೆ ಉಚಿತ ಪ್ರಸಂಗಗಳಲ್ಲಿ ಅಡಳಿತದಲ್ಲಿ ಅಲ್ಪ ಸಂಖ್ಯಾಕರ ಭಾಷೆಯನ್ನು ಉಪಯೋಗಿಸುವಂತೆ ನಿರ್ದೇಶಿಸಲು ಜನಕಾಶಿವನ್ನು ಕಲ್ಪಿಸಿಕೊಡುತ್ತದೆ. ಇದ್ದನ್ನು ಬೇರೆ ಬೇರೆ ದೇಶಗಳಲ್ಲಿ ಅಲ್ಪಸಂಖ್ಯಾಕರ ಹಿತರಕ್ಷಣೆಗೆ ಕೈಗೊಂಡ ಕ್ರಮಗಳೊಡನೆ ಹೋಲಿಸಿದಾಗ ಅಲ್ಪಸಂಖ್ಯಾಕ ವರ್ಗಕ್ಕೆ ಸರಕಾರ ಅಥವಾ ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುವ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ತಮ್ಮ ಮಾತೃ ಭಾಷೆಯಲ್ಲಿಯೇ ಕಲಿಯುವ ಅಧಿಕಾರ ನಮ್ಮ ಸಂವಿಧಾನದಲ್ಲಿ ಕೊಡಲ್ಪಟ್ಟಿಲ್ಲವೆಂಬುದನ್ನು ಬಟ್ಟಬಯಲಿಗೆ ಉಳಿದೆಲ್ಲ ರೀತಿಯಿಂದಲೂ ಅಭಿವೃದ್ಧಿಗೆ ಅವಕಾಶ ಕೊಡುವ ಇಚ್ಛೆಯಿಂದಲೂ ಘಟನಾತ್ಮಕವಾಗಿ ಅಲ್ಪಸಂಖ್ಯಾಕರಿಗೆ ನೀಡಲಾದ ರಕ್ಷಣಾ ಕ್ರಮಗಳನ್ನು ಇನ್ನಷ್ಟು ಬಿಗಿಪಡಿಸುವುದೊಳ್ಳಿತೆಂದು ತೋರಿಬರುತ್ತವೆ.

ಸಿಫಾರಸಿನ ಮೂಲಾಧಾರ

ಮೇಲಿನ ಹಿನ್ನೆಲೆಯಲ್ಲಿ ಫಜಲಾಲಿ ಆಯೋಗವು ಪ್ರಶ್ನೆಯನ್ನು ವಿಚಾರಿಸುತ್ತಾ ಈ ಕೆಳಗಿನ ಅಭಿಪ್ರಾಯವನ್ನು ಅನುಷಂಗಿಕವಾಗಿ ವ್ಯಕ್ತಪಡಿಸಿದೆ—"ಅಲ್ಪ ಸಂಖ್ಯಾಕ ವರ್ಗಗಳಿಗೆವಿಶೇಷವಾದ ಮಹತ್ವವನ್ನಿತ್ತು ಅವರ ಹಿತಾಸಕ್ತಿಗಳ ರಕ್ಷಣೆಗೆ ವಿಶೇಷವಾದ ಕ್ರಮಗಳನ್ನು ರಚಿಸಲು ಒತ್ತಾಯಿಸುವುದರಿಂದ ಅಲ್ಪ ಸಂಖ್ಯಾಕ ಭಾವನೆಯನ್ನು ಊರ್ಜಿತವಾಗಿಡಲು ಪ್ರೋತ್ಸಾಹ ಕೊಟ್ಟಂತಾಗಿತೆಂದೂ ಇದರಿಂದ ಸಾಮಾನ್ಯ ರಾಷ್ಟ್ರೀಯ ಭಾವನೆಯ ಬೆಳವಣಿಗೆಗೆ ಆತಂಕವಾದೀತೆಂದೂ ನಾವರಿತಿದ್ದೇವೆ. ಆದರೆಂದಿಗೂ ಸಮಸ್ಯೆಯನ್ನು ಬಿಡಿಸುವ ಬದಲು ಇನ್ನಷ್ಟು ಜಿಡುಸಾಗಿಸುವ ಭೆಯದಿಂದ ಇಂಥ ಅಲ್ಪ ಸಂಖ್ಯಾಕರ ರಕ್ಷಣೆಗೆ ಬಹಳ ವಿವರವಾದ ಕ್ರಮಗಳನ್ನು ನಿರೂಪಿಸಲು ನಾವೇನೂ ಹೋಗುವುದಿಲ್ಲ. ಉದಾಸೀನತೆ ಅಥವಾ ಭೇದಭಾವದ ಪರಿಣಾಮವಾಗಿ ಭಾಷಾದೃಷ್ಟಿಯಿಂದ ಅಲ್ಪ ಸಂಖ್ಯಾಕರಾದವರಿಗೆ ಅಭಿವೃದ್ಧಿ ಹೊಂದಲು ಅವಕಾಶ ಕಡಿಮೆಯಾಗ ಕೂಡದು ಎಂಬ ಉದ್ದೇಶವನ್ನಷ್ಟೆ ನಾವಿಟ್ಟು ಕೊಂಡಿದ್ದೇವೆ." ಹೀ

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.

ಇದುನೇ ಪಾಲಿಸಿದಾರರಲ್ಲಿ ವಿಶ್ವಾಸವನ್ನು ಹುಟ್ಟಿಸುವ ಹೆಸರು.
ಅಲ್ಲದೆ ಸ್ಥಾಪಿತವಾದಂದಿನಿಂದಲೂ ಬೋನಸು ಹಂಚಿದ ಕಂಪೆನಿ.
ನಿಮ್ಮ ಇಳಿಸಲು ಅಥವಾ ಪ್ರತಿನಿಧಿಸಲು ಅಪೇಕ್ಷಿಸುವವರು
ವಿವರಕ್ಕಾಗಿ ಬರೆಯಿರಿ.

T. R. A. PAI, Managing Director,
THE CANARA MUTUAL
ASSURANCE COMPANY LTD.,
Head Office: UDIPI, S. India.

CHIEF AGENTS:
THE COMMERCIAL CORPORATION OF INDIA LTD.,
UDIPI, S. India.



ಮಹಿಳೆಯರ ಬಂಧವಿಮೋಚನೆ

ಪುರೋಗತಿಯ ಅವಕಾಶಗಳ ಸದುಪಯೋಗ

ರಾಜ್ಯ ಸಭೆಯಲ್ಲಿ ಮಗಳಿಗೆ ಮಗನಷ್ಟೇ ಪಾಲು ಕೊಡುವ ಮಸೂದೆ ಚರ್ಚೆಗೆ ಬಂದಿರುವಾಗ ನಮ್ಮ ಗಮನವು ಸಹಜವಾಗಿಯೇ ಭಾರತದ ಮಹಿಳೆಯರ ಕಡೆಗೆ ಹರಿಯುತ್ತಿದೆ. ಸ್ವಾತಂತ್ರ್ಯೋತ್ತರದ ಭಾರತದಲ್ಲಿ ಎದ್ದು ತೋರುವ ಅನೇಕ ಸಂಗತಿಗಳಲ್ಲಿ ಮಹಿಳೋದ್ಧಾರದ ವಿಷಯವೂ ಒಂದಾಗಿದೆ. ನಾವು ಸ್ತ್ರೀಯರಿಗೂ ಸ್ವಾತಂತ್ರ್ಯವಿತ್ತಿದ್ದೇವೆ; ಅವರಿಗೆ ಪುರುಷರಂತೆಯೇ ಶ್ರೇಯಸ್ಸನ್ನು ಹೊಂದಲು ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮುನ್ನಡೆಯಲು ಸಮಾನ ಅವಕಾಶಗಳನ್ನು ಕೊಟ್ಟಿದ್ದೇವೆ. ಇಪ್ಪತ್ತನೇ ಶತಮಾನದ ಪ್ರಾರಂಭ ಕಾಲದಿಂದ ಅನೇಕ ಮಹಿಳೆಯರನ್ನೊಳಗೊಂಡು ಸ್ತ್ರೀ ಭಾವಿಯಾದ ಹಲವಾರು ಧುರೀಣರು ಸ್ತ್ರೀ ಸಮಾಜಕ್ಕಾಗಿರುವ ತಪ್ಪುಗಳನ್ನು ತಿದ್ದಬೇಕೆಂದು ಆಗ್ರಹಪೂರ್ಣವಾಗಿ ಚಳವಳ ನಡೆಸುತ್ತಾ ಬಂದಿದ್ದಾರೆ; ಆದರೆ ವಿಕ್ಟೋರಿಯಾ ರಾಣಿಯು ಇದ್ದುದನ್ನು ಇದ್ದಂತೆ ಇರಗೊಡಿಸುವ ಮಂದಗಾಮಿಯಾದ ಧೋರಣೆಯಿಂದಾಗಿ, ಆಕೆಯ ಆಡಳಿತೆಯ ಬಳಿಕವೂ ಬ್ರಿಟಿಷರು ಸರಕಾರವನ್ನು ನಡೆಸಿಕೊಂಡು ಹೋಗುತ್ತಿರುವ ವರೆಗೂ ಸ್ತ್ರೀಯರ ಬಂಧ ವಿಮೋಚನೆಯಾಗಲಿಲ್ಲ.

ಅನರ್ಹತೆಗಳ ನಿವಾರಣೆ

ಸ್ವಾತಂತ್ರ್ಯ ಪ್ರಾಪ್ತಿಯ ಬೆನ್ನಿಗೆಯೇ ಸ್ತ್ರೀಯರ ಅನರ್ಹತೆಗಳನ್ನು ದೂರಮಾಡಲಾಯಿತು. ಲೇಖನಿಯ ಒಂದೇ ಒಂದು ಗೆರೆಯು ಬಲದಿಂದೆಂಬಂತೆ ಮಹಿಳೆಯರಿಗೆ ಪ್ರಬುದ್ಧ ಮತದಾನಾಧಿಕಾರವನ್ನು ನೀಡಲಾಯಿತು. ಮೂರು ದಶಕಗಳಿಂದ ನಡೆಸುತ್ತಿದ್ದ ಆಂದೋಲನವು ಹೀಗೆ ಹೆಂಗಸರ ಗೇಲಿನಲ್ಲಿ ಪರಿಣಮಿಸಿತು. ಸಾಮಾಜಿಕ ತಪ್ಪುಗಳನ್ನೆಲ್ಲ ಕಿತ್ತುವುದಕ್ಕೆ ಪ್ರಯತ್ನಗಳನ್ನೀಗ ಕೈಗೊಳ್ಳುತ್ತಿದ್ದು ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹವಿತ್ತಿರುವುದೂ ಹಿಂದು ಶಾಸನಗಳ ಕ್ರೋಢೀಕರಣಕ್ಕೆ ಕೈಹಾಕಿರುವುದೂ ಇದಕ್ಕೆ ಉಲ್ಲೇಖನೀಯವಾದ ನಿದರ್ಶನ. ಇದರಿಂದ ಜಗತ್ತಿನಲ್ಲಿ ಮುಂದುರಿದ ರಾಷ್ಟ್ರಗಳ ಸ್ತ್ರೀಯರ ಸಾಲಿನಲ್ಲಿಂದು ಭಾರತೀಯ ರಮಣಿಯರು ಮುಖನೆತ್ತಿ ನಿಲುತಿರಬಹುದಾಗಿದೆ. ಆರ್ಥಿಕ ಸ್ವಾವಲಂಬನವೇ ಸ್ವಾತಂತ್ರ್ಯವನ್ನು ನಿಜಾರ್ಥದಲ್ಲಿ ಹೊಸಿಸಿಕೊಂಡು ಹೋಗುವ ಅಂಶವೆಂಬುದನ್ನು ಮನಗಂಡ ನಮ್ಮ ಧುರೀಣರು ಮಹಿಳೆಯರಿಗೆ ಯಾವುದೇ ಉದ್ಯೋಗವನ್ನು ಕೈಗೊಳ್ಳಲೂ ಅವಕಾಶವಿದೆ ಎಂದು ಸಾರಿವ್ವಾರೆ. ತತ್ಪರಿಣಾಮವಾಗಿ ಸಂರಕ್ಷಣಾ ಇಲಾಖೆಯಲ್ಲಿಯೂ ಅನೇಕ ಸ್ತ್ರೀಯರನ್ನು ಕಾಣಬಹುದಾಗಿದೆ; ಕಾಲಾಳುಗಳ ದಳದಲ್ಲಿಯಷ್ಟೇ ಸ್ತ್ರೀಯರಿನ್ನೂ ಪ್ರವೇಶಿಸಿಲ್ಲ ಆದರೆ ಆ ದಿನ ಬಹಳ ದೂರವಿರಲಾರದೆಂದು ನಂಬಲೆಡೆಯಿದೆ. ಝಾನ್ಸಿಯ ಲಕ್ಷ್ಮೀ ಬಾಯಿ ಹಾಗು ಸುಭಾಸ್ ದಳದ ಕೇಪ್ಟನ್ ಲಕ್ಷ್ಮಿಯ ಹೆಸರನ್ನು ಕೇಳಿದಾಗ ರೋಮಾಂಚನಗೊಳ್ಳದಿರುವಷ್ಟು ಹೇಡಿಗಳಾಗಿ ಭಾರತೀಯ ರಮಣಿಯರು ಈಗ ಉಳಿದಿಲ್ಲವೆಂಬುದು ಸ್ಪಷ್ಟ.

ಸಾಧಿಸಿದ ಆದರ್ಶ

ಪರಕೀಯ ದಾಸ್ಯದಿಂದ ಮುಕ್ತಿಯನ್ನು ಪಡೆದ ಶುಭ ಗಳಿಗೆಯನ್ನು ಭಾರತವು ಮಹಿಳೋದ್ಧಾರ ಕ್ಷೇತ್ರದಲ್ಲಿ ಮುನ್ನಡಿ ಇಡುವುದರಿಂದಲೇ ಆಚರಿಸಿರುತ್ತದೆ. ರಾಜ್ಯಪಾಲರಾಗಿ, ರಾಯಭಾರಿಯಾಗಿ, ಮಂತ್ರಿಯಾಗಿ ಸಮರ್ಥ ಹಾಗು ಅನುಭವಶಾಲಿಯಾದ ಮಹಿಳೆಯರನ್ನು ನೇಮಿಸುವುದರಿಂದಲೇ ಸ್ವತಂತ್ರ ಭಾರತದ ಇತಿಹಾಸವು ಪ್ರಾರಂಭವಾಗಿದೆ. ಯಾವ ತತ್ಕಾಲಾಗಿ ಚಳವಳವನ್ನು ಹೂಡಲಾಯಿತೋ ಆದನ್ನೆ ಸಮಯ ಅನುಕೂಲವಾದಾಗ ಅನುಷ್ಠಾನಕ್ಕೆ ತಂದೂ ತೋರಿಸಲಾಗಿದೆ. ಮಹಿಳೆಯರಿಬದರೂ ತುಂಬ ಹೊಣಗಾರಿಕೆಯ ಸ್ಥಾನಗಳನ್ನು ಸಹ ಜೊಕ್ಯ ರೀತಿಯಲ್ಲಿ ನೆರವೇರಿಸಿಕೊಂಡು ಹೋಗಬಲ್ಲ ವಿವೇಕ ಅಬಲೆಯರಲ್ಲಿಯೂ ಇದೆ ಎಂದು ತಮ್ಮ ಕಾರ್ಯಪಟುತ್ವದಿಂದ ಮನಗಾಣಿಸಿದ್ದಾರೆ. ಆಡಳಿತ ದಕ್ಷತೆಯು ಮಹಿಳೆಯರ ಕೈಯಲ್ಲಿಯೂ ಚೆನ್ನಾಗಿ ಉಳಿಯಬಲ್ಲುದೆಂದು ಅವರು ತೋರಿಸಿ ಕೊಟ್ಟಿದ್ದಾರೆ. ಹೀಗೆ ಭಾರತವು ಹೆಂಗಸರನ್ನು ಸಹ ಉನ್ನತೋನ್ನತ ಸ್ಥಾನಗಳಲ್ಲಿ ಇಡಬಹುದು; ಅವರ ಸೇವೆಯನ್ನು ದೇಶಕ್ಕೆ ದೊರಕಿಸಿಕೊಡಬಹುದು ಎಂದು ಜಗತ್ತಿನ ಇತರ ರಾಷ್ಟ್ರಗಳಿಗೆ ಜೆನ್ನಾಗಿ ತೋರಿಸಿಕೊಟ್ಟಿರುವುದು ಅಭಿಮಾನಾಸ್ಪದವಾದ ವಿಷಯ.

ಉಜ್ವಲ ಸಂಪ್ರದಾಯ

ಮಹಾತ್ಮಾ ಗಾಂಧೀಯವರನ್ನು ಈ ದೇಶದ ಹೆಂಗಸರು ತಮ್ಮ ಜೀವನ ಮುಟ್ಟವನ್ನು ಹೇಗೆ ಎತ್ತರಿಸಿಕೊಳ್ಳಬಹುದು ಎಂದೊಬ್ಬರು ಕೇಳಿದಾಗ "ತಮ್ಮ ಮುಕ್ತಿಯು ಹೆಂಗಸರ ಕೈಯಲ್ಲಿಯೇ ಇದೆ" ಎಂಬ ವೈಶಿಷ್ಟ್ಯ ಪೂರ್ಣ ಆಮತ್ಕಾರ ವಾಕ್ಯಗಳಲ್ಲಿ ಅವರು ಉತ್ತರವಿತ್ತಿದ್ದರು. ಸರಕಾರದವರು ಕಾಗದ ಪತ್ರಗಳಲ್ಲಿ ಹೆಂಗಸರಿಗೆ ಮುಕ್ತವ್ವಾರಣವೆ ಸ್ವಾತಂತ್ರ್ಯವಿತೆ ಎಂದೇನೆ ಬರೆದು ಹಾಕಿದರೂ ನಿಜವಾಗಿ ಹೆಂಗಸರು ಈ ಅವಕಾಶಗಳ ಉಪಯೋಗವನ್ನು ಪಡೆದುಕೊಳ್ಳದಿದ್ದರೆ ಸ್ತ್ರೀ ಸ್ವಾತಂತ್ರ್ಯಕ್ಕೆ ಬೆಲೆಯುಂಟೆ? ಭಾರತದ ಮಹಿಳೆಯರು ತಮಗೆ ದೊರೆತ ಅವಕಾಶಗಳ ಪ್ರಯೋಜನ ಪಡೆಯುವುದರಲ್ಲಿ ಹಿಂದುಳಿದಿಲ್ಲವೆಂಬುದನ್ನು ಕಂಡು ಯಾರಿಗಾದರೂ ಸಮಾಧಾನವಾಗಲೇಬೇಕು. ಸಾವಿರಾರು ವರ್ಷಗಳ ಹಿಂದೆ ಸ್ತ್ರೀ ಧರ್ಮ ಸೂತ್ರವನ್ನು ರಚಿಸಿಕೊಂಡ ಮೇರೆಗೆ ಅವರು ಆಧುನಿಕ ರೀತಿನೀತಿಗೆ ಅಪ್ಯಾಚೀನ ಪದ್ಧತಿಯನ್ನು ಒಗ್ಗಿಸಿಕೊಂಡೇ ಇಂದೂ ನಡೆಯುತ್ತಿದ್ದಾರೆಂಬುದು ನಿಜ. ಅದರೊಡನೆ ವೀರಾಂಗನೆಯರಾಗಿ ಹೋರಾಡಿದ, ಗಾಂಧೀಜಯಪರ ಅಹಿಂಸಾತ್ಮಕ ಸತ್ಯಾಗ್ರಹದ ಕರೆಗೆ ಓಗೊಟ್ಟು ಪರಂಪರೆಯನ್ನೂ ಆವರು ಕಾಯ್ದುಕೊಂಡು ಹೋಗಲು ಪ್ರಯತ್ನಿಸುತ್ತಿದ್ದಾರೆಂದುದು ಸುಳ್ಳಲ್ಲ. ಉದ್ಯೋಗ ಸ್ಥಾನಗಳನ್ನೂ ಆಡಳಿತಾಧಿಕಾರವನ್ನೂ ಬಯಸುವುದಕ್ಕಿಂತ ಹೆಚ್ಚಾಗಿ ಮನೆಯೊಡತಿಯಾಗಿರುವುದೇ ಹೆಚ್ಚು. ಭೂಷಣಪ್ರಾಯವಾದ ಮತ್ತು ಮುಖ್ಯವಾದ ಕರ್ತವ್ಯವೆಂಬುದನ್ನು ಕಡೆಗಣಿಸದೆ, ನಮ್ಮ ಮಹಿಳೆಯರು ಸರಕಾರದವರು ತಮಗಾಗಿ ತೆರೆದಿರುವ ಸುಧಾರಿತ ಕ್ಷೇತ್ರಗಳಲ್ಲಿ ಸಮರ್ಪಣ ಮಾಡುತ್ತಿದ್ದಾರೆ. ಮಮತೆಯ ಮಡದಿಯಾಗಿಯೂ ಸ್ತ್ರೀತಿಯ ತಾಯಿಯಾಗಿಯೂ ತಾನು ಮಾಡಬೇಕಾಗಿರುವ ಕೆಲಸವನ್ನು ಮುತುವರ್ಜೆಯ ರಮಣಿಯು ಪುರೋಗತಿಯ ಮಾರ್ಗದಲ್ಲಿ ಮುನ್ನಡೆಯುತ್ತಿದ್ದಾಳೆ.

ಉದ್ಯೋಗ ಕ್ಷೇತ್ರದಲ್ಲಿ

ಸಂಯುಕ್ತ ರಾಷ್ಟ್ರ ಸಂಘ ಹಾಗು ಆರ್ಥಿಕಾಭಿವೃದ್ಧಿಯ ಕಾರ್ಮಿಕ ಮಂಡಳದ ಉದ್ದೇಶಗಳಿಗೆ ವ್ಯತಿರಿಕ್ತವಾಗಿ ನಡೆದು ಕೊಳ್ಳದೆ ಹೆಂಗಸರಿಗೆ ಸಮಾನತೆಯ ಅನುಭವವನ್ನು ಮಾಡಿಸಿಕೊಡುತ್ತಿರುವ ರಾಷ್ಟ್ರಗಳಲ್ಲಿ ಭಾರತವು ಒಂದಾಗಿದೆ. ಕೇಂದ್ರ ಸರಕಾರದೊಂದರಲ್ಲೇ ಇಪ್ಪತ್ತು ಸಾವಿರಕ್ಕಿಂತಲೂ ಹೆಚ್ಚು ಮಹಿಳೆಯರು ಉದ್ಯೋಗವನ್ನು ಪಡೆದಿದ್ದಾರೆ. ಅನೇಕ ಸಲಹೆಗಾರ ಮಂಡಳಗಳಲ್ಲಿ ಸ್ತ್ರೀಯರು ಸದಸ್ಯತ್ವವನ್ನು ಪಡೆದಿದ್ದಾರೆ. ಸಾರ್ವಜನಿಕ ಆಡಳಿತ ರಂಗದಲ್ಲಿಯೂ ಈಗ ಮಹಿಳೆಯರು ಪ್ರವೇಶ ಪಡೆಯುತ್ತಿದ್ದಾರೆ. ಯಂತ್ರ ವಿಜ್ಞಾನದಂಥ ಕಠಿಣ ಪರಿಶ್ರಮ ಅಗತ್ಯ ಪುಳ್ಳ ಕ್ಷೇತ್ರದಲ್ಲಿಯೂ ಮಹಿಳೆಯರು ಕಾಲಿಟ್ಟಿದ್ದಾರೆ. ಸಾಮಾನ್ಯವಾಗಿ ಸುಶಿಕ್ಷಿತ ಮಹಿಳೆಯರು ಪೀಸ್ಸ್ ಲೇಖನ, ಕಾರಿಕೂನಿಕೆ, ಹೊಲಿಗೆ, ಕಸೂತಿ, ವಸ್ತ್ರಕ್ಕೆ ಬಣ್ಣ ಹಾಕುವುದು, ಆಟದ ಸಾಮಾನುಗಳನ್ನು ತಯಾರಿಸುವುದು, ಹಣ್ಣು ಹಂಪಲುಗಳ ರಕ್ಷಣೆ, ಮಕ್ಕಳಕಾಲಯಗಳ ಮೇಲ್ವಿಚಾರಣೆ, ಪ್ರದರ್ಶನ ಗೃಹಗಳ ಮುಂದಾಳ್ತನ, ಉಪಾಹಾರ ಗೃಹಗಳಲ್ಲಿ ಆತಿಥ್ಯ ಸಲ್ಲಿಸುವಿಕೆ, ರೋಗಿಗಳ ಶುಶ್ರೂಷೆ, ವೈದ್ಯ ಕೀಯ ಸಹಕೀಲ, ಹಾಗು ಅಧ್ಯಾಪಕ ವೃತ್ತಿ—ಇತ್ಯಾದಿಗಳಲ್ಲಿ ವಿಶೇಷ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ವೋಲೀಸು ಇಲಾಖೆ ಹಾಗು ಸೈನ್ಯಕ್ಕೆ ಪೂರಕವಾಗಿರುವ ಜಾತಿಗಳಲ್ಲಿಯೂ ಹೆಂಗಸರು ನೇರಿಕೊಂಡಿದ್ದಾರೆ. ಗ್ರಾಮಗಳಲ್ಲಿ ಪ್ರತಿ ತಿಂಗಳಿಗೆ ಒಂದೊಂದರಂತೆ ಸಾವಿರ ಮಹಿಳೆಯರು ಉದ್ಯೋಗ ವಿಸ್ತರಣಾ ಕಛೇರಿಗಳ ಹೆಸರು ಬರೆಸಲು ಬರುತ್ತಿದ್ದರು; ಗ್ರಾಮಗಳಲ್ಲಿ ಇದು ಸಾಲ್ಯಾವರೆ ಸಾವಿರಕ್ಕೇರಿತು. ಈಗ ಇವರ ಇಮ್ಮಡಿಯಾದರೂ ಆಗಿರಬಹುದು.

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.
ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್ ನಲ್ಲಿ

O. S. No. 535/1955.

ಪಶ್ಚಿಮಕ್ಕೆ ನಾನಪ್ಪ... ವಾದಿ.

ಮತ್ತು

ನರಸಪ್ಪಯ್ಯ ನಾನಪ್ಪಯ್ಯ ನಾನಪ್ಪಯ್ಯ ಅನಂತ, ಉಡುಪಿ ತಾಲೂಕು— ಬಜಾರ್ಗುಮುವ ಉಚ್ಚಿಲವಲ್ಲಿರುವನ....

ಪ್ರತಿವಾದಿ.

ಇನಿತೊಳಗೆ—

ಸದರಿ ಪ್ರತಿವಾದಿಗೆ ಈ ಮೂಲಕ ತಿಳಿಸುವುದೇನಂದ್ರೆ:-

ವಾದಿಗೆ ಪ್ರತಿವಾದಿಯು ನಷ್ಟಾನಷ್ಟಿ ಕೊಡತಕ್ಕ ಕೊಡ್ತಿಕೆ ಬಾಬ್ತು ಅಸಲು ಬಡ್ಡಿ ಕೂಡಾ ರೂಪ್ಯಾ 103-5-4ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಪಾಕ್ಲು ಮಾಡಿರುವ ಮೇಲ್ಕಂಡ ವ್ಯಾಜ್ಯವು 12-12-1955ಕ್ಕೆ ಇಟ್ಟುಕೊಂಡಿರುತ್ತದೆ. ಆ ಕುರಿತು ಉವಾನಿಸಲೆಯೆಂದ್ದಕ್ಕೆ ಸದ್ರಿ ತಾ. 13-12-1955ನೇ ದಿನಕ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ನಾಮತಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಶಿವ್ಯ ಬುಡಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

P. V. Acharya,
Vakil for Plaintiff.

ಮೊತ್ಕಾಂ: ಉಡುಪಿ. ತಾ 24.11.1955.

ಕೇರಳ - ಕರ್ನಾಟಕಗಳ ಮೇರೆ

ಚಂದ್ರಗಿರಿ ಹೊಳೆಯಾಗಲೆಂಬ ಹಾರೈಕೆಗೆ ಮದ್ರಾಸು ಶಾಸನಾಂಗದ ಒಪ್ಪಿಗೆ

ಮದ್ರಾಸಿನ ಶಾಸನಾಂಗದ ಉಭಯ ಮನೆಗಳಲ್ಲೂ ಕಳೆದ ವಾರ ನಾಲ್ಕು ದಿನಗಳ ವರೆಗೆ ಫಜಲಾಲಿ ಆಯೋಗದ ವರದಿಯ ಕುರಿತು ವಿಸ್ತಾರವಾದ ಚರ್ಚೆ ನಡೆಯಿತು. ಶಾಸನಾಂಗವು ಅಂತ್ಯದಲ್ಲಿ ಹೀಗೆ ನಿರ್ಣಯಿಸಿತು:—"ಕೇರಳ ಮತ್ತು ಕರ್ನಾಟಕ ರಾಜ್ಯಗಳನ್ನು ರಚಿಸಬೇಕೆನ್ನುವ ಫಜಲಾಲಿ ಆಯೋಗದ ಸೂಚನೆಯನ್ನು ಸಾಮಾನ್ಯವಾಗಿ ಈ ಸಭೆಯು ಸ್ವಾಗತಿಸುತ್ತದೆ; ಆದರೆ ಚಿಕ್ಕ ಪುಟ್ಟ ಗಡಿ ಬದಲಾವಣೆಗಳಿಗೆ ಎಡೆಯಿರಬೇಕೆಂದೂ ಅದು ಭಾವಿಸುತ್ತದೆ. ಕೇರಳ ಮತ್ತು ಕರ್ನಾಟಕ ರಾಜ್ಯಗಳನ್ನು ರಚಿಸುವಾಗ ಉಭಯ ರಾಜ್ಯಗಳಿಗೆ ಚಂದ್ರಗಿರಿ ಹೊಳೆಯನ್ನು ಮೇರೆಯಾಗಿಸಿ, ಹೊಳೆಯ ಉತ್ತರ ಭಾಗದಲ್ಲಿರುವ ಪ್ರದೇಶವನ್ನು ಕರ್ನಾಟಕಕ್ಕೂ ದಕ್ಷಿಣವನ್ನು ಕೇರಳಕ್ಕೂ ಸೇರಿಸಬೇಕೆಂದು ಸಭೆಯು ಸಿಫಾರಸು ಮಾಡುತ್ತದೆ. ಲಕ್ಕದೀವು, ಅಮಿನ್ ದೀವಿ ಮತ್ತು ಮಿನಿಕಾಯ್ ದ್ವೀಪಗಳನ್ನು ಕೇಂದ್ರದ ನೇರಾದ ಆಡಳಿತಕ್ಕೆ ಒಳಪಡಿಸಬೇಕೆಂದು ಸಭೆಯು ಅಭಿಸ್ರಾಯಪಡುತ್ತದೆ. ಸೂತನೆ ಮದ್ರಾಸು ರಾಜ್ಯದಲ್ಲಿ ದೇವಿಕುಲಂ ಮತ್ತು ಪೀರ್ಮೇಡು ತಾಲೂಕುಗಳನ್ನೂ ಪಾಲ್ಘಾಟು ತಾಲೂಕಿನ ಪೂರ್ವ ಭಾಗವನ್ನೂ ಚಿತ್ತೂರನ್ನೂ ಕೊಳ್ಳೇಗಾಲದ ದಕ್ಷಿಣ ಪಾರ್ಶ್ವದಲ್ಲಿರುವ ಅರಣ್ಯ ಪ್ರದೇಶಗಳನ್ನೂ ಸೇರಿಸಬೇಕೆಂದು ಸಭೆಯು ಹೇಳುತ್ತದೆ."

ಕಾಸರಗೋಡು ತಾಲೂಕು

ದಕ್ಷಿಣ ಕನ್ನಡ ಜಿಲ್ಲೆಯ ಕಾಸರಗೋಡು ತಾಲೂಕನ್ನು ಇಡಿಯಾಗಿ ಕೇರಳಕ್ಕೆ ಸೇರಿಸುವ ಕುರಿತು ಫಜಲಾಲಿ ಆಯೋಗ ಮಾಡಿದ ಸಿಫಾರಸನ್ನು ಮಾನ್ಯ ಮಂತ್ರಿಗಳಾದ ಶ್ರೀ ಸುಬ್ರಹ್ಮಣ್ಯಂ ಮತ್ತು ಶ್ರೀ ಭಕ್ತವತ್ಸಲಂ ಇಬ್ಬರೂ ವಿರೋಧಿಸಿ ಮಾತನಾಡಿದರು. ಚಂದ್ರಗಿರಿ ಹೊಳೆಯನ್ನೆ ಕರ್ನಾಟಕ ಮತ್ತು ಕೇರಳ ರಾಜ್ಯಗಳ ಸ್ವಾಭಾವಿಕವಾದ ಮೇರೆಯೆಂದು ಪರಿಗ್ರಹಿಸಬೇಕೆಂಬುದನ್ನು ಅವರು ಸಮರ್ಥಿಸಿದರು. "ಚಂದ್ರಗಿರಿ ಹೊಳೆಯ ಉತ್ತರದ ಲ್ಲಿರುವ ೩೬ ಗ್ರಾಮ ಪಂಚಾಯತುಗಳಲ್ಲಿ ೩೪ ಈ ಪ್ರದೇಶ ಕರ್ನಾಟಕಕ್ಕೆ ಸೇರಬೇಕೆಂದು ಗೊತ್ತುವಳಿಯನ್ನು ಸ್ವೀಕರಿಸಿರುತ್ತವೆ. ಮಲಬಾರಿನ ಒಕ್ಕಲುತನದ ಶಾಸನವು ಚ್ಯಾರಿಯಟ್ಟಿಯಲ್ಲಿರುವ ಚಂದ್ರಗಿರಿ ಹೊಳೆಯ ದಕ್ಷಿಣ ಪಾರ್ಶ್ವದಲ್ಲಿರುವ ಭೂಧಾರಣಾ ಪದ್ಧತಿಗಿಂತ ಉತ್ತರ ಭಾಗದ ನಡವಳಿಕೆಯು ತೀರ ಬೇರೆಯಾಗಿದೆ. ಇಡಿಯಾಗಿ ಕಾಸರಗೋಡು ತಾಲೂಕಿನಲ್ಲಿ ಏದು ಫಿರ್ಕಾಗಳಿವೆ. ಇದರಲ್ಲಿ ಮೂರು ಫಿರ್ಕಾಗಳು ಹೆಚ್ಚಾಗಿ ಚಂದ್ರಗಿರಿ ಹೊಳೆಯ ಉತ್ತರಕ್ಕಿವೆ ಇವು ಭೌಗೋಲಿಕವಾಗಿ ಮಂಗಳೂರು ಮತ್ತು ಹುತ್ತೂರು ತಾಲೂಕಿನೊಡನೆ ಧಾರಾಳವಾಗಿ ಹೊಂದಿಕೊಂಡಿವೆ. ಹೊಸದುರ್ಗ ಉಪತಾಲೂಕು ಮಲಬಾರಿನೊಡನೆ ವಿಶೇಷ ಸಂಬಂಧವಿರಿಸಿಕೊಂಡಿದೆ. ಎಲ್ಲ ವ್ಯಾವಹಾರಿಕ ಉದ್ದೇಶಗಳಿಗೂ ಹೊಸದುರ್ಗ ಉಪತಾಲೂಕು ಪ್ರತ್ಯೇಕ ಆಡಳಿತದ ರಚನೆಯುಳ್ಳ ಸ್ವತಂತ್ರ ಘಟಕವಾಗಿದೆ. ಎಲ್ಲ ಕೋರ್ಟು ಕಚೇರಿಗಳ ಭಾಷೆಯು ಕಾಸರಗೋಡು ಮುಖ್ಯ ತಾಲೂಕಿನಲ್ಲಿ ಕನ್ನಡವಾಗಿದೆ; ಹೊಸದುರ್ಗ ಉಪತಾಲೂಕಿನಲ್ಲಿ ಮಲೆಯಾಳವಾಗಿದೆ. ಸಾಮಾಜಿಕ ಹಾಗು ಸಾಂಸ್ಕೃತಿಕ ಸಂಪ್ರದಾಯ ಮತ್ತು ವೈಶಿಷ್ಟ್ಯಗಳೂ ಈ ಭಾಗಗಳಲ್ಲಿ ಭಿನ್ನವಾಗಿವೆ. ಆದುದರಿಂದ ಆಡಳಿತದ ಅನುಕೂಲತೆಗಾಗಿ ಹೊಸದುರ್ಗ ಉಪತಾಲೂಕನ್ನೂ ಕಾಸರಗೋಡು ಮುಖ್ಯ ತಾಲೂಕನ್ನೂ ಪ್ರತ್ಯೇಕಿಸಿ ಮೊದಲಿನಂತೆ ಕೇರಳಕ್ಕೂ ಎರಡನೆಯದನ್ನು ಕರ್ನಾಟಕಕ್ಕೂ ಕೊಡುವುದೊಳಿತು" ಎಂದು ಸಚಿವದ್ವಯರು ಹೇಳಿದರು.

ಬಾಳಿಗರ ವಾದ

ನಮ್ಮ ಪ್ರತಿನಿಧಿಗಳು ಇದಕ್ಕೆ ಹೃತ್ಪೂರ್ವಕವಾದ ಬೆಂಬಲವನ್ನು ನೀಡಿದರು. ವಾಶ್ತವದಲ್ಲಿ ಶ್ರೀ ಬಿ. ವೈಕುಂಠ ಬಾಳಿಗರೇ ಚಂದ್ರಗಿರಿ ಹೊಳೆಯನ್ನು ಕರ್ನಾಟಕ ಮತ್ತು ಕೇರಳಗಳ ಮೇರೆಯಾಗಿ ಪರಿಗಣಿಸಬೇಕೆಂಬ ತಿದ್ದುಪಡಿಯನ್ನು ಕೆಳಮನೆಯಲ್ಲಿ ತಂದಿದ್ದರು. ಅವರಿಗೆ ಶ್ರೀ. ಎ. ಬಿ. ಶೆಟ್ಟಿರಾದಿಯಾಗಿ ಮಂತ್ರಿಗಳೂ ತಮಿಳುನಾಡು ಮತ್ತು ದಕ್ಷಿಣ ಕನ್ನಡದ ಸದಸ್ಯರೂ ಬೆಂಬಲ ವಿತ್ತರು. ಶ್ರೀ ಬಾಳಿಗರು ತನ್ನ ಅಭಿಪ್ರಾಯವನ್ನು ವಿವರಿಸುತ್ತಾ ಹೀಗೆಂದರು—"ಸಾಮಾಜಿಕ ಹಾಗು ಸಾಂಸ್ಕೃತಿಕ ದೃಷ್ಟಿಯಿಂದ ಭಾಷೆಗಳ ಆಧಾರದಿಂದಲೂ ಚಂದ್ರಗಿರಿ ಹೊಳೆಯ ಉತ್ತರ ಭಾಗ ಕರ್ನಾಟಕಕ್ಕೆ ಸೇರಬೇಕಾಗಿದೆ. ಚರಿತ್ರೆಯು ತುಳುವ ಮತ್ತು ಚೇರ ರಾಜ್ಯಗಳ ಸ್ವಾಭಾವಿಕ ಮೇರೆಯಾಗಿ ಚಂದ್ರಗಿರಿ ಹೊಳೆ ಇತ್ತೆನ್ನುತ್ತದೆ. ಇಂಪೀರಿಯಲ್ ಗಜೆಟ್ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಮ್ಯಾನುಯಲ್ ಸಹ ಚಂದ್ರಗಿರಿ ಹೊಳೆಯೇ ಕರ್ನಾಟಕ ಹಾಗು ಕೇರಳ ಪ್ರದೇಶಗಳ ಮೇರೆಗಳೆಂದು ಹೇಳುತ್ತವೆ. ಆದುದರಿಂದ ಆಡಳಿತದ ಅನುಕೂಲತೆಗಾಗಿ ತಾಲೂಕನ್ನು ಒಡೆಯಬಾರದೆಂಬ ವಾದದಲ್ಲಿ ಏನೂ ಹುರುಳಿಲ್ಲ. ಚಂದ್ರಗಿರಿ ಹೊಳೆಯ ಉತ್ತರ ಭಾಗದಲ್ಲಿ ಪ್ರತಿ ಚದರ ಮೈಲಿಗೆ ೭೦೦ ಮಂದಿಯಂತೆ ಜನ ಸಂಖ್ಯಾ ಪ್ರಮಾಣವಿದೆ; ದಕ್ಷಿಣದಲ್ಲಿರುವುದು ಳಿಳಿ ಮಾತ್ರ. ಕಾರಣ, ನಿಬಿಡ ಜನ ಸಂಖ್ಯೆಯುಳ್ಳ ಕೇರಳಕ್ಕೆ ತನ್ನ ಜನರನ್ನು ನೆಲೆಗೊಳಿಸುವ ಸಾಧ್ಯತೆಗಾಗಿ ವಿಸ್ತಾರ ಪ್ರದೇಶಬೇಕಾಗಿದೆ ಎನ್ನುವ ನೆಪವೂ ಇಲ್ಲಿಗೆ ಅನ್ವಯಿಸುವುದಿಲ್ಲ. ಮಂಗಳೂರು ನಗರ ಸಭೆಯು ದಿನೇ ದಿನೇ ವಿಸ್ತಾರ ಹೊಂದುತಿದ್ದು ಅಲ್ಲಿಯ ಬಂದರವನ್ನು ಅಭಿವೃದ್ಧಿಗೊಳಿಸುವ ಒಂದು ಸೂಚನೆಯೂ ಸರಕಾರದ ಮುಂದಿದೆ. ಕೇರಳ ರಾಜ್ಯವನ್ನು ಮಂಗಳೂರಿನ ಆರು ಮೈಲುಗಳ ಹತ್ತಿರದ ದಕ್ಷಿಣದ ವರೆಗೆ ವಿಸ್ತರಿಸಿದರೆ, ಈ ನಗರದ ಬೆಳವಣಿಗೆಯು ಸಾಧ್ಯವಾದೀತೇ?" ಎಂದವರು ಪ್ರಶ್ನಿಸಿದರು. ಹೊಸದು ತಾಲೂಕು ಮತ್ತು ಬಳ್ಳಾರಿ ಜಿಲ್ಲೆಯನ್ನು ಕರ್ನಾಟಕದಲ್ಲಿ ಉಳಿಸಬೇಕೆಂದೂ ಅವರು ಕೇಳಿಕೊಂಡರು.

ಜಿಲ್ಲಾ ಪ್ರತಿನಿಧಿಗಳ ಒತ್ತಾಯ

ಉಡುಪಿಯ ಶ್ರೀ ಟಿ. ಎ. ಪೈಗಳು "ಫಜಲಾಲಿ ಆಯೋಗವು ಸಾಮಾನ್ಯವಾಗಿ ಕರ್ನಾಟಕಕ್ಕೆ ನ್ಯಾಯವನ್ನು ಸಲ್ಲಿಸಿದ್ದರೂ ಬಳ್ಳಾರಿ ಮತ್ತು ಕಾಸರಗೋಡುಗಳ ಸಮಸ್ಯೆ ಉಳಿದಿದೆ. ವಿಷದವಾದ ನ್ಯಾಯ ವಿಚಾರಣೆಯ ಬಳಿಕ ತೀರ್ಮಾನಕ್ಕೆ ಬಂದಿರುವ ಬಳ್ಳಾರಿ ಪ್ರಶ್ನೆಯನ್ನು ಪುನಃ ಎತ್ತುವುದು ಬುದ್ಧಿವಂತಿಕೆಯೆಂದು ಗಲಾಟೆದು. ಕಾಸರಗೋಡು ತಾಲೂಕನ್ನು ಇಡಿಯಾಗಿಯೇ ಕರ್ನಾಟಕದಲ್ಲಿ ಇರಗೊಳಿಸಬೇಕು" ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಶ್ರೀ ಕೆ. ವೆಂಕಟರಮಣ ಗೌಡರೂ ಜನಾಬ್ ಎಂ. ಎಸ್. ಮೊಗ್ರಾಲರೂ ಶ್ರೀ ಎನ್. ಎನ್. ಸುವರ್ಣರೂ ಕಾಸರಗೋಡು ತಾಲೂಕನ್ನು ಕರ್ನಾಟಕದಲ್ಲಿ ಉಳಿಸಬೇಕೆಂದು ಪ್ರತಿವಾದಿಸಿದರು. ಶ್ರೀ ಎಸ್. ಎಫ್. ಕೊಳ್ಳೆಬೈಲು ನಗೆಗಡಲ ನಡುವೆ ಮದ್ರಾಸು ಸರಕಾರವು ಕನ್ನಡದಲ್ಲಿ ಅಸ್ಥಾನ ಕವಿ ಎಂದು ಮನ್ನಿಸಿರುವ ಶ್ರೀ ಗೋವಿಂದ ಪೈಗಳು ಕಾಸರಗೋಡು ತಾಲೂಕಿನಪರಾಗಿರುತ್ತಾ ಆ ತಾಲೂಕನ್ನು ಕೇರಳಕ್ಕೆ ಸೇರಿಸುವ ಮೂಲಕ ಅವರನ್ನು ಕೇರಳೀಯನನ್ನಾಗಿ ಮಾಡುವುದು ವಿರೋಧಾಭಾಸಪರವಾದ ವಿಷಯ ಎಂದರು. ಅವರು ಸಾರ್ವಜನಿಕ ಸೇವಾಮಂಡಳಗಳ ಕುರಿತಾಗಿಯೂ ಕೆಲವು ಸೂಚನೆಗಳನ್ನಿತ್ತರು. ಶ್ರೀ ಎಸ್. ನರ್ಸಪ್ಪಯ್ಯನವರು ನೇಲ್ಯಡಿಯಲ್ಲಿ ಕಾಸರಗೋಡು ಮುಖ್ಯ ತಾಲೂಕನ್ನು ಕರ್ನಾಟಕದಲ್ಲಿ ಉಳಿಸಬೇಕೆಂದು ವಾದಿಸಿದರು. ಕೇರಳವು ಚಿಕ್ಕ ರಾಜ್ಯವಾಗುವುದೆಂಬ ಕಾರಣದಿಂದ ಕಾಸರಗೋಡು ತಾಲೂಕನ್ನು ಅದಕ್ಕೆ ಸೇರಿಸುವುದರಲ್ಲಿ ನ್ಯಾಯವಿಲ್ಲ. ಚಂದ್ರಗಿರಿ ಹೊಳೆಯು ಉತ್ತರ ಪ್ರದೇಶದ ಕನ್ನಡ ಸಂಸ್ಕೃತಿಯು ನಾಶವಾಗುವಂತೆ ಮಾಡಬಾರದು ಎಂದರು. ಕೊಳ್ಳೆಗಾಲ ತಾಲೂಕಿನ ಅರಣ್ಯ ಪ್ರದೇಶಗಳನ್ನು ಮದ್ರಾಸು ರಾಜ್ಯಕ್ಕೆ ಕೊಡಲು ತನ್ನ ಆಕ್ಷೇಪವಿಲ್ಲ ಎಂದವರು ತಿಳಿಸಿದರು. ಬಳ್ಳಾರಿ, ಹೊಸಪೇಟೆ, ಸಿರಗುಪ್ಪ ಇವುಗಳು ಮಾತ್ರ ಸಂಪೂರ್ಣವಾಗಿ ಕರ್ನಾಟಕ ಪ್ರದೇಶಗಳೆಂದು ಇಬ್ಬಿಬ್ಬರು ನ್ಯಾಯಾಧೀಶರಿಂದ ನಿಶ್ಚಯಿಸಲ್ಪಟ್ಟಿದೆ. ಮದ್ರಾಸಿನ ಶಾಸನಾಂಗವೂ ಆಂಧ್ರ ರಾಜ್ಯ ರಚನೆಯ ಕಾಲದಲ್ಲಿ ಇದನ್ನು ಒಪ್ಪಿದೆ. ಭಾರತ ಸರಕಾರವೂ ಇದನ್ನು ಎತ್ತಿ ಹಿಡಿದಿದೆ. ಆದುದರಿಂದ ಪುನಃ ಈ ಪ್ರಶ್ನೆಯನ್ನೆತ್ತಿ ಹೊಡೆದಾಡಲು ಬಿಡಕೂಡದು" ಎಂದರು.

ಸದಸ್ಯರ ಸಾಮಾನ್ಯ ಅಭಿಪ್ರಾಯ

ಸದಸ್ಯರಲ್ಲಿ ಮಲೆಯಾಳಿಗಳೊಂದು ಕಡೆ, ತಮಿಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸಿಗರೊಂದು ಕಡೆ, ಪ್ರತಿಪಕ್ಷದವರೊಂದು ಕಡೆ—ಹೀಗೆ ಸಾಮಾನ್ಯವಾಗಿ ಮೂರು ಗುಂಪುಗಳು ಮೂರು ಬಗೆಯ ನಿಲುಮೆ ವಹಿಸಿದ್ದರು. ಕೇರಳ ರಾಜ್ಯದ ವಿಸ್ತಾರವಿರಲಿ, ಈಗ ತಿರು-ಕೊಚ್ಚಿಯಲ್ಲಿರುವ ಕೆಲವು ತಾಲೂಕುಗಳೂ ತಮಿಳು ನಾಡಿಗೆ ಸೇರಬೇಕೆಂದು ಆಗ್ರಹಪಡಲಾಯಿತು. ಕಮ್ಯುನಿಸ್ಟರು ಕೇರಳೀಯರೊತಮಿಳರೂಹೊಡೆದಾಡಬಾರದೆಂಬ ಜೆಲುವಾದ ನಿಲುಮೆಯನ್ನು (ಇದಕ್ಕೆ ಹೊಡೆದಾಡಬೇಕೆಂದು ಇತರ ಪಕ್ಷಗಳೂ ಹೇಳುತ್ತಿಲ್ಲವೆಂಬುದನ್ನು ಅವರು ಗಮನಿಸದ ಹಾಗೆ ತೋರುತ್ತದೆ!) ಅರ್ಥಪೂರ್ಣ ತಾತ್ಪರ್ಯವನ್ನು ವಹಿಸಿದ್ದರು. ಗ್ರಾಮವಾರಾಗಿ ವಿವಾದ ಪ್ರದೇಶಗಳ ಭವಿಷ್ಯ ನಿರ್ಣಯಿಸಬೇಕೆಂದು ಅವರು ಸೂಚಿಸಿದರೆ, ಪ್ರಜಾ ಸಮಾಜವಾದಿ ಧುರೀಣ ಶ್ರೀ. ಕೆ. ಬಿ. ಮೆನೋನರು ಫಜಲಾಲಿ ಆಯೋಗದ ವರದಿಯನ್ನೆ ಸಂಪೂರ್ಣವಾಗಿ ನಿರಾಕರಿಸಬೇಕೆಂದರು. ಅನೇಕ ಸದಸ್ಯರು ಅಲ್ಪ ಸಂಖ್ಯಾಕರ ಗುಂಪುಗಳ ಹಿತರಕ್ಷಣೆ, ಅಖಿಲ ಭಾರತ ಸೇವಾ ಮಂಡಳಗಳ ರಚನೆ, ಉಚ್ಚನ್ಯಾಯ ಸ್ಥಾನಗಳಿಗೆ ನ್ಯಾಯಾಧೀಶರ ನೇಮಕ ಇತ್ಯಾದಿ ಗಂಭೀರ ವಿಷಯಗಳನ್ನೂ ಪ್ರಸ್ತಾಪಿಸಿದರು. ನೀಲಗಿರಿ ಜಿಲ್ಲೆಯ ಶ್ರೀ. ಅರಿಗೌಡರು ಆ ಪ್ರದೇಶವನ್ನು ಕರ್ನಾಟಕಕ್ಕೆ ಸೇರಿಸುವುದರಿಂದ ತಮ್ಮ ಅಭ್ಯುದಯಕ್ಕೆ ಹೆಚ್ಚು ಅವಕಾಶ ಸಿಗುವುದೆಂದರು. ನೀಲ

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಪೀತ, ಅಸ್ತ್ಮ, ಗೊರಲು ಇತ್ಯಾದಿಗಳಿಗೆ ಅತ್ಯವಶ್ಯಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ½ ರಾತಲಿಗೆ ರೂ. 1/13
ಪ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಶಾ ಕಂಪೆನ್ಸಿ, ಮಂಗಳೂರು.
2. ವಿ. ವಿ. ಶೆಣೈ & ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,
ವಿವರವಾದ ಕಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

ರಾಷ್ಟ್ರೀಯ ಐಕ್ಯ ಮತ್ತು ಪ್ರಾದೇಶಿಕ ವೈಶಿಷ್ಟ್ಯ

ಪಣಿಕ್ಕರರಿಂದ ಆಯೋಗದ ಉದ್ದೇಶಗಳ ಮೇಲೆ ಪ್ರಕಾಶ

ಫಜಲಾಲಿ ಆಯೋಗದ ಸದಸ್ಯರಲ್ಲಿ ಒಬ್ಬರಾಗಿದ್ದ ಸರ್ದಾರ್ ಕೆ. ಎಂ. ಪಣಿಕ್ಕರರು ಮದ್ರಾಸಿನ ಸಾರ್ವಜನಿಕ ವ್ಯವಹಾರ ಮಂಡಳದ ಆಶ್ರಯದಲ್ಲಿ ನೆರೆದ ಸಭೆಯಲ್ಲಿ ಮಾತನಾಡುತ್ತಾ ರಾಜ್ಯಗಳ ಪುನರ್ಘಟನೆಯ ಕುರಿತು ಅನೇಕ ಅಮೂಲ್ಯ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ರಾಷ್ಟ್ರದ ಐಕ್ಯವು ಅತ್ಯಂತ ಅಗತ್ಯದ ಮತ್ತು ಮಹತ್ವದ ವಿಷಯ ಎಂಬುದನ್ನು ಅವರು ಒತ್ತಿ ಹೇಳಿದ್ದಾರೆ; ಆದುದರಿಂದ ಕೇಂದ್ರ ಸರಕಾರವನ್ನು ದುರ್ಬಲಗೊಳಿಸುವ ಯಾವದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲವೆಂದವರು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ಪ್ರಾದೇಶಿಕ ಘಟಕಗಳನ್ನು ಅಭಿವೃದ್ಧಿಗೊಳಿಸಲು ಬಿಡುವುದರಿಂದ ರಾಷ್ಟ್ರದ ಸಾರ್ವಾಂಗಿಕ ಉನ್ನತಿ ಸುಲಭ ಸಾಧ್ಯವಾಗುವುದೆಂಬ ಮಹಾತ್ಮಾ ಗಾಂಧೀಯವರ ನಿಲುಮೆಯನ್ನೂ ಅವರು ಇದೇ ಸಮಯದಲ್ಲಿ ಎತ್ತಿ ಹಿಡಿದಿದ್ದಾರೆ. ಈ ಹಿನ್ನೆಲೆಯಲ್ಲಿ ಫಜಲಾಲಿ ಆಯೋಗವು ರಾಷ್ಟ್ರೀಯ ಐಕ್ಯತ ಭಾವನೆ ಮತ್ತು ಪ್ರಾದೇಶಿಕ ಸ್ವಾಯತ್ತಾಧಿಕಾರದ ಹಂಬಲಗಳ ನಡುವೆ ಸಮನ್ವಯವನ್ನು ಸಾಧಿಸಲು ಪ್ರಯತ್ನಿಸಿವೆ ಎಂದವರು ತಿಳಿಸಿದ್ದಾರೆ.

ಬಲಾಢ್ಯ ಕೇಂದ್ರ

ರಾಜ್ಯಗಳ ಪುನರ್ಘಟನೆಗೆ ಕಾಲವು ಪಕ್ವವಾಗಿದೆ ಎಂದವರು ಪ್ರತಿಪಾದಿಸಿದ್ದಾರೆ. ಈಗ ಪ್ರಜಾಪ್ರಭುತ್ವ ಭಾರತದಲ್ಲಿನೆಲೆಗೊಂಡಿದೆ; ಮತ್ತು ಆಂಗ್ಲ ಭಾಷೆಗೆ ಇದ್ದ ಪ್ರಾಮುಖ್ಯತೆಯು ಹಿನ್ನೆಲೆಗೆ ಸರಿದಿದೆ. ಪ್ರಬುದ್ಧ ಮತದಾನ ಪದ್ಧತಿಯಂತೆ ಆರಿಸಿ ಬರುವ ಜನತಾ ಪ್ರತಿನಿಧಿಗಳಿಗೆ ಇಂಗ್ಲೀಷು ತಿಳಿದಿರಲೀ ಬೇಕೆಂಬುವ ಪ್ರಮೇಯ ಈಗ ಉಳಿದಿಲ್ಲ. ಪ್ರಾಂತೀಯ ಅಡಳಿತವನ್ನು ಅಲ್ಲಲ್ಲಿಯ ಭಾಷೆಗಳಲ್ಲಿಯೇ ನಡೆಸಿಕೊಂಡು ಹೋಗುವ ಉತ್ಸಾಹ ಈಗ ಹೆಚ್ಚುತ್ತಿರುವುದರಿಂದ ಏಕಭಾಷೆಯು ಪ್ರಧಾನವಾಗುಳ್ಳ ರಾಜ್ಯಗಳು ಏರ್ಪಟ್ಟರೆ ಅನುಕೂಲವಾಗುತ್ತದೆ ಎಂದವರು ವಿವರಿಸಿದ್ದಾರೆ. ಕೇಂದ್ರ ಸರಕಾರವು ಆರ್ಥಿಕ ಮತ್ತಿತರ ಮುಖ್ಯ ವಿಷಯಗಳಲ್ಲಿ ನಿಯಂತ್ರಣವನ್ನಿಟ್ಟುಕೊಂಡಿರುವಷ್ಟು ಕಾಲ ಪ್ರಾದೇಶಿಕ ವಲಯಗಳು ಇವಿರು ಬೀಳಬಹುದೆಂಬ ಭಯಕ್ಕೆ ಅವಕಾಶವಿಲ್ಲವೆಂದೂ ಬದಲಿಗೆ ಪ್ರಾದೇಶಿಕ ಸಂಸ್ಕೃತಿ ಮತ್ತಿತರ ವೈಶಿಷ್ಟ್ಯಗಳ ನೈಜಿನ ಉಭಿವಾನವು • ಆಪರಿಂದ ಒಳ್ಳೆಯ ಕೆಲಸಗಳಾಗುವಂತೆ ಪ್ರೇರಣೆಯೊದಗಿಸಬಹುದೆಂಯೂ ಅವರು ಹೊರ ಗೆಡಹಿದ್ದಾರೆ.

ಸೂಚನೆಗಳಲ್ಲಿಯ ವಿನೇಕ

ಭಾರತದ ಸಾರ್ವಾಂಗಿಕ ಏಳಿಗೆಗಾಗಿ ಸಮಗ್ರ ರಾಷ್ಟ್ರಕ್ಕೆ ಅನ್ವಯಿಸುವ ತಂತ್ರಿಕ ಮಂಡಳದ ರಚನೆಯಾಗಬೇಕು ಎಂದು ಮುಂತಾಗಿ ಆಯೋಗಸೂಚನೆಗಳನ್ನು ಮಾಡಿದೆ. ಅದರಂತೆ ಭಾರತದ ನಾಗರಿಕರಲ್ಲಿ ಪ್ರಾದೇಶಿಕ ರಾಜ್ಯಗಳು ಭೇದಭಾವವನ್ನು ಮಾಡಕೂಡದೆಂದೂ ಅದು ಒತ್ತಾಯಿಸಿದೆ. ಇದಕ್ಕೆ ಪೂರಕವಾಗಿಯೇ ಆದ ರಾಜ್ಯಗಳು ಈಗಿರುವಂತೆ ನಾಲ್ಕು ವರ್ಗಗಳಲ್ಲಿ ವಿಂಗಡಿಸುವ ಬದಲು ಎಂಡೆ ತರಗತಿಗಳಾಗಿ ಮಾಡಬೇಕೆಂದು ಹೇಳಿದೆ. ರಾಜಪ್ರಮುಖರ ಹುದ್ದೆಯನ್ನು ಇರಗೊಳಿಸುವುದು ಯೋಗ್ಯವಲ್ಲವೆಂದು ಆಯೋಗ ಭಾವಿಸಿರುವುದಕ್ಕೆ ಬಲವಾದ ಕಾರಣವಿದೆ; ಜನರೊಡನೆ ನೇರವಾಗಿ ಬೆರೆಯಬೇಬಲ್ಲ ಪ್ರಜಾಪ್ರಭುತ್ವದ ಸಲ್ಲಕ್ಷಣ-ಅನೇಕ ರಾಜ ಪ್ರಮುಖರ ಪರಂಪರೆಯಲ್ಲಿಪ್ಪಿದಿರುವುದುಇವುಗಳಲ್ಲಿ ಒಂದು. ಆಯೋಗದವರು ಸೂಚಿಸಿದ ಪ್ರಾದೇಶಿಕ ಘಟಕಗಳು ಆಡಳಿತ ದೃಷ್ಟಿಯಿಂದ ಸಣ್ಣದೆನಿಸುವುದಿಲ್ಲ—ಅತಿ ಸಣ್ಣ ಪ್ರಾಂತ್ಯವಾಗುವ ಕೇರಳ ಸಹ ಯು.ರೋಪಿನ ಯು.ಗೊ ಸ್ಲಾವಿಯದಷ್ಟು ಗಾತ್ರವನ್ನು ಹೊಂದುತ್ತದೆ—ಎಂದು ಮುಂತಾಗಿ ಅವರು ತಮ್ಮ ಭಾಷಣದಲ್ಲಿ ನುಡಿದರು.

ತೆಲುಗರ ನಿಲುಮೆ

ರಾಜ್ಯ ಸರಕಾರಗಳಿಗೆ ಒಂದೊಂದಾಗಿ ಫಜಲಾಲಿ ಆಯೋಗದ ಸೂಚನೆಗಳನ್ನು ಚರ್ಚಿಸಲು ತೊಡಗಿವೆ. ಕಾರಾಗೋಡು ತಾಲೂಕನ್ನು ಚಂದ್ರಗಿರಿ ಹೊಳೆಯ ವೇರಕ್ಕೆ ಒಡೆಯುವುದನ್ನು ತಿರು-ಕೊಚ್ಚಿಯ ಶಾಸನಾಂಗ ವಿರೋಧಿಸಿದೆ. ಆಂಧ್ರ ಶಾಸನಾಂಗವು ಬಳ್ಳಾರಿಯ ಮೇಲೆ ಕನ್ನಡಿಗರಿಗಿರುವ ಹಕ್ಕನ್ನು ಅಲ್ಲಗಳೆದಿದೆ. ಆಂಧ್ರದ ಆರೋಗ್ಯ ಮಂತ್ರಿ ಹಾಗು ರಾಷ್ಟ್ರೀಯ ಕಾಂಗ್ರೆಸಿನ ಮಾಜಿ ಕಾರ್ಯದರ್ಶಿ ಶ್ರೀ ಕಲಾವೆಂಕಟರಾಯರು ಮೈಸೂರನ್ನು ಕನ್ನಡ ರಾಜ್ಯವೆಂದು ಭಾವಿಸುವುದೆ ತಪ್ಪೆಂದುಹೇಳಿರುವುದಾಗಿಪತ್ರಿಕೆಯಾಗಿದೆ! ಹೈದರಾಲಿ ಮತ್ತು ಕಂಪೇ ಗೌಡರು ತೆಲುಗರೆಂದು ಅವರ ಅಂಬೋಣ! ಕೋಲಾರವನ್ನು ಮೈಸೂರು ಸರಕಾರ ಅಭಿವೃದ್ಧಿಪಡಿಸಿರುವುದರಿಂದ ಅದು ಮೈಸೂರಿನಲ್ಲಿ ಉಳಿಯಬೇಕೆಂಬುವುದು ನ್ಯಾಯವಾದರೆ, ರಾಯಲ ಸೀಮೆಯ ಹಿತದೃಷ್ಟಿಯಿಂದ ತುಂಗಭದ್ರ ಜಲಕಟ್ಟಿಯವ ಬಳ್ಳಾರಿಯ ತಾಲೂಕುಗಳು ಆಂಧ್ರಕ್ಕೆ ಸೇರಬೇಕೆನ್ನುವುದು ತಪ್ಪಲ್ಲ ಎಂದವರು ಹೇಳಿರುವರೆಂದು ತಿಳಿದು ಬರುತ್ತದೆ.

ಸಂಸತ್ಸದಸ್ಯರ ಬಿನ್ನಹ

ಲೋಕ ಸಭೆಯು ದಶಂಬರ ೫ನೇ ತಾರೀಕಿನಂದು ಸಜಲಾಲಿ ಆಯೋಗದ ಕರಿತು ಹಿಳ ತಾಸುಗಳ ಚರ್ಚೆಯನ್ನು ತೊಡಗಲಿಟ್ಟೆ. ಈ ನಡುವೆ ಕೆಲವು ಸಂಸತ್ಸದಸ್ಯರು ರೇವಾ ನುತ್ತು ಮುಂಬಯಿಗಳಲ್ಲಿ ನಡೆದಿರುವ ದುರಂತ ಮಯ ಘಟನೆಗಳನ್ನು ನಿವೇದಿಸಿ ಜನರು ಸಹನಶೀಲರಾಗಬೇಕೆಂದೂ ಸಂಸತ್ತಿನ ಮೇಲೆ ಭರವಸೆಯನ್ನಿಟ್ಟು ಸಂಯಮದಿಂದ ನಡೆದುಕೊಳ್ಳಬೇಕೆಂದೂ ವಿನಂತಿಸಿಕೊಂಡಿದ್ದಾರೆ ಪಂಡಿತ ಪಂತರು ಮುಂಬಯಿ ಘಟನೆಗಳ ಬಗ್ಗೆ ನಿಲುವಳಿ ಸೂಚನೆ ಬಂದಾಗ ಮಾತನಾಡುತ್ತಾ, ಭಾರತದ ಹೆಸರಿಗೆ ಮಸಿ ಬಳಿಯುವ ಹಾಗು ವಾತಾವರಣವನ್ನು ಕೆಡಿಸಿ ಬಿಡುವ ಈ ಹವ್ಯಾಸಕ್ಕೆ ವಿಷಾದಿಸಿ, ಜನರು ಹಿಂದೆಂದಿಗಿಂತಲೂ ಇದುಅಧಿಕವಾಗಿ ಜಾಗರೂಕರಾಗಬೇಕೆಂದು ಕೇಳಿಕೊಂಡಿದ್ದಾರೆ. ನೆಹರುಗಳೂ ಜನರ ವರ್ತನೆಯನ್ನು ಆಕ್ಷೇಪಿಸಿದ್ದಾರೆ. ನಾವಾವರೂ ರಕ್ತದ ಪ್ರವಾಹಗಳೇ ಮುಂತಾದ ಮಹನೀಯರ ಸಂದರ್ಭದ ಕಾಲದಲ್ಲಿ ಈ ರೀತಿ ಪ್ರಚೋದಕ್ಕಗಳು— ಅದರಲ್ಲೂ ಕಮ್ಯೂನಿಷ್ಟರೆ.— ಜನರನ್ನು ಬೇಕೆಂದೇ ತಪ್ಪುದಾರಿಗೆಳೆದಿದೆದನ್ನು ಖಂಡಿಸಲೇ ಬೇಕಾಗುತ್ತದೆ.



ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಮಕ್ಕಳಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೊಟ್ಟಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವಿಕೆ, ಈ ಎಲ್ಲಾ ವ್ಯಾಧಿಗಳಿಗೆ ನಜ್ರಾಯುಧವಾಗಿವೆ. ಇದಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಮೋಗ್ಯತಾ ಪತ್ರಗಳನ್ನು ಪಡೆದಿರುವವಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:
(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ನವಯುಗ ಪ್ರಜಾರಾಜ್ಯ ವಿಶೇಷಾಂಕ

ಎಂದಿನಂತೆ 26-1-1956 ರಂದು ವಿಶಿಷ್ಟ ತರದಲ್ಲಿ ಪ್ರಕಟವಾಗುವುದು ಸಂದರ್ಭೋಚಿತ ಲೇಖನ, ಕವನಗಳಿಗೆ ಸ್ವಾಗತವಿದೆ.

ಜಾಹೀರಾತು ದಾರರ ಪ್ರೋತ್ಸಾಹವನ್ನು ನಿರೀಕ್ಷಿಸಲಾಗಿದೆ.

NAVAYUGA
Popular Kannada Weekly
Founder:—
Sri **A B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧-೧೨-೧೯೫೯	೧೪

ಅಣುಶಸ್ತ್ರಗಳ ಪ್ರತಿಬಂಧ

ದಿಲ್ಲಿ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದ ಉಪನ್ಯಾಸವನ್ನು ಕೊಡುತ್ತಾ ಜಗತ್ಪ್ರಸಿದ್ಧ ಭಾರತೀಯ ಧುರೀಣ ಶ್ರೀ. ಸಿ. ರಾಜಗೋಪಾಲಾಚಾರಿಯವರು ಅಣುಶಸ್ತ್ರಾಸ್ತ್ರಗಳನ್ನು ಬಹಿಷ್ಕರಿಸಬೇಕೆಂದು ರಶ್ಯವು ಮಾಡಿರುವ ಸೂಚನೆಯನ್ನು ವಿಶ್ವಾಸದ ತಳಹದಿಯ ಮೇಲಿಂದ ಸ್ವೀಕರಿಸಬೇಕೆಂದು ಪುನಃ ವಿನಂತಿಸಿದರು. ನೈರತ್ವದಿಂದ ಮಿತ್ರತ್ವಕ್ಕೆ ಪರಿವರ್ತನೆಯನ್ನು ಹೊಂದುವುದಕ್ಕೆ ಸಂಬಂಧಿಸಿದ ಪ್ರತಿಯೊಂದೂ ಸಂಗತಿಯನ್ನು ದೌರ್ಬಲ್ಯದ ಲಕ್ಷಣವೆಂದು ಭಾವಿಸುವವರು ಇರಬಹುದು. ಆದರೆ ಹಾಗೆ ತಿಳಿದುಕೊಳ್ಳುವುದು ಜಾಣತನವಾಗಲಾರದು; ಕುತ್ಸಿತ ಹಾಸ್ಯ ಮತ್ತು ತಿರಸ್ಕಾರಗಳಿಂದ, ಮಿತ್ರತ್ವದ ಕಡೆಗೆ ತಡವಾಗಿಯಾದರೂ ನಡೆದಿರುವ ಸ್ವಯತ್ನವನ್ನು, ಬುಡದಲ್ಲಿಯೇ ಚಿವುಟಿ ಬಿಡಲಾಗದು—ಎಂದೂ ಅವರು ಉಪದೇಶಿಸಿದರು. ಪಾಶ್ಚಾತ್ಯರ ಮಿತ್ರನೆಂದು ತನ್ನನ್ನು ಕರೆದುಕೊಂಡು ರಾಜಾಜಿಯವರು ಅಮೆರಿಕ ಮತ್ತು ಬ್ರಿಟನುಗಳು ಏಕ ಪಕ್ಷೀಯವಾಗಿ ಅಣು ಶಸ್ತ್ರಾಸ್ತ್ರಗಳ ತಯಾರಿಕೆಯನ್ನು ನಿಲ್ಲಿಸಿ ಬಿಡಬೇಕೆಂದೂ ಹೀಗೆ ಮಾಡುವುದರಲ್ಲಿಯೇ ಅಂಥಶಸ್ತ್ರಾಸ್ತ್ರಗಳಿಗಿಂತಲೂ ಹೆಚ್ಚು ಶಕ್ತಿ ಇದೆಯೆಂದೂ ಸಾರಿದರು. ಈ ಶಸ್ತ್ರಾಸ್ತ್ರಗಳ ಬಹಿಷ್ಕಾರಕ್ಕೆ ಪಾಶ್ಚಾತ್ಯ ರಾಷ್ಟ್ರಗಳನ್ನು ಕೊಡಬೇಕೆಂಬ ರಶ್ಯದ ನಿಲುವಿನಲ್ಲಿ ಬಲಹೀನತೆಯ ಚಿಹ್ನೆಯಿಲ್ಲ; ಅಥವಾ ರಹಸ್ಯ ಪ್ರಯೋಜನವನ್ನು ಪಡೆಯುವ ಗತ್ತುಗಾರಿಕೆಯೂ ಅಲ್ಲ ಎಂದು ಪಾಶ್ಚಾತ್ಯ ರಾಷ್ಟ್ರಗಳು ನಂಬಬೇಕೆಂದು ಅವರು ಕೇಳಿಕೊಂಡರು. ಆದರೆ ಪಾಶ್ಚಾತ್ಯ ರಾಷ್ಟ್ರಗಳು ಈ ನಿಲುವೇ ಯುಕ್ತವಾದ ಎಂಬುದಕ್ಕೆ ಕೆನಿಗೊಡುವ ಸಾನ್ನಿಧ್ಯ ಎಳ್ಳಷ್ಟಾದರೂ ಇದೆಯೆ? ರಶ್ಯ ಕ್ಕಿಂತ ಹೆಚ್ಚು ನೈತಿಕ ಶಕ್ತಿಯನ್ನು ಪಾಶ್ಚಾತ್ಯ ರಾಷ್ಟ್ರಗಳು ಪಡೆದಿವೆ ಎಂದು ರಾಜಾ ಜಿ ಭಾವಿಸುತ್ತಾರೆ. ಆದರೆ ಅಮೇರಿಕವು ಗಲೀ ಬ್ರಿಟನ್ನಾಗಲೀ ನೈತಿಕ ಶಕ್ತಿಯ ಸಹಾದೃತ ಪ್ರದರ್ಶನವನ್ನು ಅಣುಶಸ್ತ್ರಾಸ್ತ್ರಗಳ ಬಹಿಷ್ಕಾರದ ಮೂಲಕ ನಡೆಸುವುದಕ್ಕೆ ಇಂದು ಎಷ್ಟಕ್ಕೂ ಒಪ್ಪಲಾರವೆಂದು ತೋರುತ್ತದೆ. ಅವು ಸುಮಾರಿನ ವರ್ಷದಲ್ಲಿ ಭಾರಿ ಪ್ರಾಯೋಗಿಕ ಸ್ಫೋಟನಗಳನ್ನು ನಡೆಸುವ ಹಂಚಿಕೆ ತಮ್ಮದೆಂದು ಈಗಾಗಲೇ ಜಾಹೀರುಮಾಡಿವೆ. ಇದರಿಂದ ಉತ್ಪಾದನೆಯನ್ನು ಹೊಂದಿಯೋ ಅಥವಾ ತನ್ನ ಶಕ್ತಿ ಪ್ರದರ್ಶನಕ್ಕೆ ಆಸೆಪಟ್ಟೋ ರಶ್ಯವು ನೊನ್ನೆಯಷ್ಟೇ ಇಪ್ಪರ ವರೆಗೆ ನಡೆದಿರದಷ್ಟು ಹೆಚ್ಚು ಸಾಮರ್ಥ್ಯದ ಜಲಜನಕ ಬಾಂಬನ್ನು ಸ್ಫೋಟನ ಗೊಳಿಸಿರುವುದಾಗಿ ಸಾರಿದೆ. ಇದು ವೈಜ್ಞಾನಿಕ ಹಾಗು ತಾಂತ್ರಿಕ ನಿರೀಕ್ಷೆಗಳನ್ನು ಸಫಲಗೊಳಿಸಿದೆಯೆಂದೂ ರಶ್ಯ ತಿಳಿಸಿದೆ. ಈ ಸ್ಫೋಟನದ ಸುದ್ದಿಯನ್ನು ಮೊದಲು ಅಮೇರಿಕವೇ ಜಗತ್ತಿಗೆ ತಿಳಿಸಲು ನೋಡಿತು; ರಶ್ಯ ನಡೆಸಿದ ಸ್ಫೋಟನ ಪ್ರಯೋಗದ ಪರಿಣಾಮವಾಗಿ ಅಣು ವಿಕಿರಣ ಶೀಲ ಕ್ರಿಯೆಯುಳ್ಳ ಮಳೆ ಜಪಾನಿನಲ್ಲಿ ಬಿದ್ದುದಾಗಿ ಹಿಂದಿನಿಂದ ವರದಿಯಾಯಿತು. ಆಗ ಬೆಂಗಳೂರಿಗೆ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡು ಬಂದಿದ್ದ ರಶ್ಯದ ಪ್ರಭೃತಿ ಮಿ. ಖ್ರುಶ್ಚೆಫ್ ಸ್ಫೋಟನ ನಡೆದುದನ್ನು ಪುಷ್ಟೀಕರಿಸಿದರು. ಆದರೆ "ಈ ಬಾಂಬುಗಳನ್ನು ಉಪಯೋಗಿಸುವುದರಲ್ಲಿ ರಶ್ಯವೆಂದಿಗೂ ಮೊದಲಿಗನಿಸದು—ತಾನಾಗಿಯೇ ಅದು. ಈ ಕೃತ್ಯಕ್ಕೆ ಕೈಹಾಕದು" ಎಂದವರು ಭಾರತೀಯರಿಗೆ ಭರವಸೆ ನೀಡಿದರು ಯುದ್ಧ ಪ್ರಚೋದಕರ ಎದೆಗೆಡಿಸಲೆಂದೇ ಈ ಶಸ್ತ್ರವನ್ನು ತಯಾರಿಸುತ್ತಿರುವುದಾಗಿ ಅವರು ವಿವರಣೆಯನ್ನಿತ್ತರು. ಪಾಶ್ಚಾತ್ಯ ರಾಷ್ಟ್ರಗಳು ಅಣು ಶಸ್ತ್ರಾಸ್ತ್ರಗಳ ಬಹಿಷ್ಕಾರಕ್ಕೆ ಸಮ್ಮತಿ ಕೊಟ್ಟಲ್ಲವಾದುದರಿಂದ ಈ ಅತ್ಯಾಧುನಿಕ ಆಯುಧಗಳನ್ನು ಬತ್ತಳಿಕೆಯಲ್ಲಿಟ್ಟುಕೊಳ್ಳಲು ರಶ್ಯ ನೋಡಿದೆ ಎಂದರು. ರಶ್ಯದ ಪರವಾಗಿ ಖ್ರುಶ್ಚೆಫ್ ಏನೇ ಹೇಳಲಿ—ಭಾರತ ಸರಕಾರವು ಇಂಥ ಸ್ಫೋಟನ ಪ್ರಯೋಗಗಳನ್ನು ಎಷ್ಟು ಮಾತ್ರಕ್ಕೂ ಬೆಂಬಲಿಸಲಾರದು; ಭಾರತೀಯರೂ ಅವನ್ನು ಸಮರ್ಥಿಸಲಾರರು. ರಶ್ಯವು ದುರ್ಬಲ ರಾಷ್ಟ್ರವಲ್ಲ, ತನಗೂ ಈ ಅತ್ಯಾಧುನಿಕ ಶಸ್ತ್ರಗಳನ್ನು ಸಿದ್ಧಪಡಿಸುವ ರಹಸ್ಯ ತಿಳಿದಿದ್ದರೂ ಅವುಗಳನ್ನು ಪ್ರತಿಬಂಧಿಸಬೇಕೆಂದು ಅದು ಕೇಳುತ್ತಿರುವುದೇ ಹೆಚ್ಚುಗಾರಿಕೆ ಎಂಬುದನ್ನು ಈ ಸ್ಫೋಟನ ಪ್ರಯೋಗ ಸ್ಪಷ್ಟಪಡಿಸುತ್ತದೆ; ಹಾಗೆ ಪಾಶ್ಚಾತ್ಯರ ಕಣ್ಣನ್ನು ತೆರೆಯಿಸಲು ನೋಡುತ್ತದ ಎಂಬುದು ನಿಜ. ಆದರೆ ಯುದ್ಧದಲ್ಲಿಯಲ್ಲ — ಪ್ರಯೋಗಕ್ಕಾಗಿಯೇ ನಡೆಸುವ ಸ್ಫೋಟನ ವಾದರೂ ಮಾನವ ಕುಲವನ್ನೊಳಗೊಂಡು ಸಕಲ ಪ್ರಾಣಿ ಹಾಗು ಸಸ್ಯ ಜೀವನದ ಮೇಲೂ ಲೋಕದ ವಾತಾವರಣದ ಮೇಲೂ ಮಾಡುವ ಗಂಭೀರವಾದ ದುಷ್ಪರಿಣಾಮಗಳನ್ನು ಗಮನಿಸಿದರೆ ಇನ್ನಾದರೂ ಶಕ್ತಿ ಸಂಪನ್ನ ರಾಷ್ಟ್ರಗಳು ಇಂಥ ಅವಾಯಕಾರಿ ಹೆಜ್ಜೆಯನ್ನಿಡಕೂಡದೆಂದು ಹಾರೈಸಬೇಕಾಗುತ್ತದೆ. ಶಾಂತಿ ಸಾಧನೆಗೆ ಎಳ್ಳಷ್ಟೂ ಪ್ರಯೋಜಕವಲ್ಲದ ವಿಷಯವೆಂದು ಸ್ಫೋಟನ ಪ್ರಯೋಗಗಳನ್ನು ಕರೆದ ಶ್ರೀ. ಕೃಷ್ಣ ಮೆನೊನ್ನರು ಜಗತ್ತಿನ ಬಹು ಸಂಖ್ಯಾಕ ನಾಗರಿಕರ ಇಚ್ಛೆಯನ್ನೇ ಪ್ರಕಟಿಸಿದ್ದಾರೆ. ರಾಜಾಜಿಯವರು ಹೇಳಿರುವಂತೆ ಪ್ರತಿಬೊಂದೂ ತಟಸ್ಥ ರಾಷ್ಟ್ರಕ್ಕೆ ಆರೋಗ್ಯಯುತವಾದ ವಾತಾವರಣವನ್ನು ಪಡೆದಿರುವ ಅಧಿಕಾರವಿದೆ. ಅಣುಶಸ್ತ್ರಗಳ ಪ್ರಾಯೋಗಿಕ ಸ್ಫೋಟನಗಳಂತೂ ಈ ಹಕ್ಕು ಭಂಗ ಹೊಂದುತ್ತದೆ. ಸಾಮಾನ್ಯ ಶಸ್ತ್ರಾಸ್ತ್ರ ಪ್ರಯೋಗವಲ್ಲಿಯಾದರೆ ಅದಕ್ಕೆ ಮನಸ್ಸುನಾಡಿದ ರಾಷ್ಟ್ರಗಳಷ್ಟೇ ಪರಿಣಾಮಗಳಿಗೆ ಗುರಿಯಾಗುತ್ತವೆ; ನೆರೆಹೊರೆಯ ರಾಷ್ಟ್ರಗಳ ಮೇಲೆ ಅನಹನೀಯವಾದ ಮಾರಕ ಪರಿಣಾಮಗಳನ್ನುಂಟುಮಾಡುವುದಿಲ್ಲ ಎನ್ನಬಹುದು. ಆದರೆ ಅಣುಶಸ್ತ್ರಗಳ ಸ್ಫೋಟನ ಕ್ರಿಯೆಯು ಇಡೀ ಜಗತ್ತಿನ ಹವಾಮಾನವನ್ನು ಕಲುಷಿತಗೊಳಿಸಿ, ಮಾನವ ಸಂತಾನದ ಭವಿಷ್ಯವನ್ನು ಮಣ್ಣಾಮಸಿಗೊಳಿಸುವುದು ಮುಂತಾದ ಹೋಗುತ್ತದೆ. ಇದನ್ನು ತಡೆಗಟ್ಟಲು ಇಂಥ ಪ್ರಯೋಗಗಳಿಗೆ ಕೈಯಿಕ್ಕದ ರಾಷ್ಟ್ರಗಳಿಗೆ ಅಧಿಕಾರವಿದೆಯೆಂದೂ ಅಂತಾರಾಷ್ಟ್ರೀಯ ನ್ಯಾಯಸ್ಥಾನದಲ್ಲಿ ಇದನ್ನೆತ್ತಿ ಅಕ್ಷೇಪಿಸಲು ಶಾಂತಿಪ್ರಿಯ ತಟಸ್ಥರಾಷ್ಟ್ರಗಳು ಪ್ರಯತ್ನಿಸಬೇಕೆಂದೂ ರಾಜಾಜಿ ಸಲಹೆಮಾಡಿದ್ದಾರೆ. ಅಷ್ಟು ಧೈರ್ಯದಹೆಜ್ಜೆಯನ್ನಿಡುವ ರಾಷ್ಟ್ರಗಳು ಇವೆಯೋ ಇಲ್ಲವೋ — ನಿರ್ವಿಕಾರ ಮನಸ್ಸಿನಿಂದ ವಿಚಾರಿಸಿದರೆ ಅಣುಶಸ್ತ್ರಗಳ ಬಹಿಷ್ಕಾರಕ್ಕೆ ಪ್ರಬಲ ರಾಷ್ಟ್ರಗಳೂ ಒಪ್ಪುವುದರಲ್ಲಿಯೇ ಜಗತ್ತಿನ ಕಲ್ಯಾಣವಿದೆ ಎಂಬುದಂತೂ ಸತ್ಯ ಶಾಂತಿ ಕಾಲದ ಬಳಿಕ ಗಾಗಿ ಅಣುಶಕ್ತಿಯನ್ನು ಉಪಯೋಗಿಸುವಾಗ ಉಂಟಾಗುವ ವಿಕಿರಣಶೀಲ ಕ್ರಿಯೆಯ ಅವಾಂತರಗಳೇ ವಿಜ್ಞಾನಿಗಳನ್ನು ದುಗುಡಬಡಿಸಿ, ಮಾನವ ಕುಲದ ಕ್ಷೇಮವನ್ನು ಸಂಶಯದಲ್ಲಿ ಕೆಡಹುವಷ್ಟು ಅನಾಹುತಕಾರಿಯಾಗಿರುವಾಗ, ಪ್ರಬಲ ರಾಷ್ಟ್ರಗಳಿಗೂ ಬೇಡವಾದ ಯುದ್ಧವನ್ನು ನಿಲ್ಲಿಸಲು ನಿಸ್ಸಂದಿಗ್ಧವಾಗಿ ಅವಾಯಕಾರಿಯಾದ ಪ್ರಾಯೋಗಿಕ ಸ್ಫೋಟನಗಳನ್ನು ನಡೆಸುವುದೇಕೊ ಅರ್ಥವಾಗದು. ಮನಸ್ಸಂಕಲ್ಪ ಸಾಧಿಸಿದೆ ಶಾಂತಿಯೇ ನಿಜವಾದುದೆಂದು ಇನ್ನಾದರೂ ಲೋಕದ ಪ್ರಬಲ ರಾಷ್ಟ್ರಗಳು ಮನಗಾಣಲಿ!

ಆರ್ಥಿಕ ಸಹಾಯದ ಕುರಿತು ವಿಚಾರವಿನಿಮಯ

ರಶ್ಯದ ವರಿಷ್ಠರ ಪ್ರವಾಸದ ಬಗ್ಗೆ ಪಾಶ್ಚಾತ್ಯರ ಪ್ರತಿಕ್ರಿಯೆ

ರಶ್ಯದ ಧುರೀಣರ ತಂಡವು ಭಾರತ ಸಂಚಾರದ ಪ್ರಥಮ ಘಟ್ಟವನ್ನು ಮುಗಿಸಿ, ಇದೇ ನೇ ದಿನಾಂಕ ಬರ್ಮದ ರಾಜಧಾನಿಯಾದ ರಂಗೂನಿಗೆ ತೆರಳಿದ್ದು. ಅಲ್ಲಿ ಒಂದು ವಾರಗಳ ವರೆಗೆ ಪ್ರವಾಸ ಗೈದು ಒನೇ ದಿನಾಂಕ ಕಲ್ಕತ್ತಕ್ಕೆ ಮರಳುತ್ತದೆ. ಕಾಶ್ಮೀರಕ್ಕೆ ಭೇಟಿಯನ್ನು ಕೊಡುವ ಮನಸ್ಸನ್ನಿದು ಮಾಡಿರುವುದರಿಂದ ಎರಡು ದಿನಗಳಷ್ಟು ಕಾಲ ಭಾರತ ಸಂಚಾರದ ಅವಧಿಯನ್ನು ಹೆಚ್ಚಿಸಿದೆ ಇದರ ಪ್ರಕಾರ ೧೪ನೇ ತಾರೀಕಿನ ವರೆಗೆ ಭಾರತದಲ್ಲಿದ್ದು ಮುಂದೆ ಅಫಘಾನಿಸ್ತಾನಕ್ಕೆ ಈ ತಂಡ ತೆರಳುತ್ತದೆ

ಮುಕ್ತ ಕಂಠದ ಪ್ರಶಂಸೆ

ಮಾರ್ಶಲ್ ಬುಲ್ಗಾನಿನ್ ಮತ್ತು ಮಿ. ಖ್ರುಶ್ಚೆಫ್ ಹೋದಲ್ಲೆಲ್ಲ ಆತ್ಮೀಯತ ಸಂಭ್ರಮದ ಸ್ವಾಗತವನ್ನು ಪಡೆದಿದ್ದಾರೆ; ಜನರೊಡನೆ ಹಾಗು ಭಾರತೀಯ ವಾತಾವರಣದೊಡನೆತಾದಾತ್ಮ್ಯವನ್ನು ಹೊಂದಲು ಪ್ರಯತ್ನಿಸಿದ್ದಾರೆ. ಗಂಭೀರ ವ್ಯಕ್ತಿತ್ವದ ಪ್ರಧಾನಿ ಬುಲ್ಗಾನಿನ್ ರಶ್ಯ ಮತ್ತು ಭಾರತಗಳ ನಡುವೆ ಆರ್ಥಿಕ, ಹಾಗು ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಚ್ಚಿನ ಸಹಕಾರ ಉಂಟಾಗಲೆಂದು ಪ್ರತಿಯೊಂದೂ ಭಾಷಣದಲ್ಲಿ ಹಾರೈಸಿದ್ದಾರೆ; ಭಾರತವು ಲೋಕ ಶಾಂತಿಗಾಗಿ ವಹಿಸಿರುವ ನಿಲುಮೆಯನ್ನು ಮುಕ್ತ ಕಂಠದಿಂದ ಶ್ಲಾಘಿಸಿದ್ದಾರೆ. ಮಾತಿನಮಲ್ಲ ಖ್ರುಶ್ಚೆಫ್ ತಮ್ಮ ಆವೇಶಪೂರಿತ ಭಾಷಣಗಳಿಂದ ಭಾರತೀಯರು ತಮ್ಮ ಧುರೀಣರ ಧೋರಣೆಯನ್ನು ಮೆಚ್ಚಿಕೊಳ್ಳುವಂತೆ ಮಾಡಿದ್ದಾರೆ, ವಿಶಾಕಪಟ್ಟಣದಲ್ಲಿ ಅನಿರ್ಮಾಣ, ಅಭಿವೃದ್ಧಿ ಪ್ರಯತ್ನ, ಆರ್ಥಿಕಸ್ವಾತಂತ್ರ್ಯ, ಶಾಂತಿ ಸ್ಥಾಪನಾಕಾರ್ಯ ಮುಂತಾದ ವಿಷಯಗಳ ಕುರಿತು ಭಾರತದ ಆತ್ಮ ವಿಶ್ವಾಸ ಹೆಚ್ಚುವಂತೆ ಅವರು ಮಾತನಾಡಿದ್ದಾರೆ.

ಆರ್ಥಿಕ ಸಹಕಾರ

ಈ ನಡುವೆ ಹೊಸ ದೆಹಲಿಯಲ್ಲಿ ಪರಸ್ಪರ ಸಹಕಾರದ ಕ್ಷೇತ್ರಗಳನ್ನು ಹೇಗೆ ವಿಸ್ತರಿಸಿಕೊಳ್ಳಬಹುದೆಂಬ ಕುರಿತಾಗಿ ರಶ್ಯದ ಉಪವಿದೇಶಮಂತ್ರಿ ಗ್ರೊಮಿಕೊ ಮತ್ತು ವ್ಯಾಪಾರಮಂತ್ರಿ ಕುಮೈಕಿನ್ ಇವರು ಭಾರತದ ವಿದೇಶ ಖಾತೆ, ವಾಣಿಜ್ಯಖಾತೆ ಮತ್ತು ವೈಜ್ಞಾನಿಕ ಸಂಶೋಧನೆ ಹಾಗು ಸೈಸರ್ಗಿಕ ಸಂಪತ್ತಿನ ಖಾತೆಯ ಮಂತ್ರಿ ಹಾಗು ಅಧಿಕಾರಿಗಳೊಡನೆ ಮಾತುಕತೆ ನಡೆಸಿದ್ದಾರೆ ನಿಶ್ಚಿತ ತೀರ್ಮಾನಗಳಿಗೇನೂ ಅವರು ಬಂದಿಲ್ಲ; ರಶ್ಯದ ಧುರೀಣರು ಬರ್ಮಾ ಸಂಚಾರದಿಂದ ಮರಳಿದ ಬಳಿಕವಾದರೂ ಇಂಥ ತೀರ್ಮಾನವಾದುದನ್ನು ಪ್ರಕಟಿಸುವರೋ ಏನೆಂದು ಗೊತ್ತಾಗಿಲ್ಲ. ಆದರೆ ಇಷ್ಟು ಏನೇ ವಿಚಾರವಿನಿಮಯ ನಡೆದಿರಲಿ—ರಾಯಭಾರಿ ಮಟ್ಟದಲ್ಲಿ ಅದನ್ನು ಮುಂದರಿಸಿಕೊಂಡು ಹೋಗುವುದೆಂದು ತಿಳಿದುಬರುತ್ತದೆ. ರಶ್ಯವು ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಕೊಟ್ಟ ನೆರವಿಗಿಂತ ಹೆಚ್ಚಿನ ಸಹಾಯ ಎರಡನೆಯ ಯೋಜನೆಯಲ್ಲಿ ನಿರುವುದೆಂದೂ ವಿಶ್ವಾಸದಿಂದ ಹೇಳಲಾಗುತ್ತದೆ

ಬ್ರಿಟನಿನಲ್ಲಿ ಕ್ಷೋಭೆ

ಪಾಶ್ಚಾತ್ಯ ರಾಷ್ಟ್ರಗಳು ಮಾತ್ರ ರಶ್ಯದ ಉನ್ನತಪದಾಧಿಕಾರಿಗಳು ಭಾರತಕ್ಕೆಕೊಡುತ್ತಿರುವ ಛೇಟಿಯನ್ನು ಯೋಗ್ಯ ಸ್ಥೈರ್ಯತರ ದೃಷ್ಟಿಯಿಂದ ನೋಡಲುಹೋಗಿಲ್ಲ. ಬ್ರಿಟನಿನ ವಿದೇಶ ಖಾತೆಯ ವಕ್ತಾರರೊಬ್ಬರು ಶ್ರೀಯುತ ಬುಲ್ಗಾನಿನ್ "ಕಪಟಾಚರಣೆ" ಮಾಡುತ್ತಿರುವರೆಂದು ದೂರಿದರು. ಇದೊಂದೇ ನಿದರ್ಶನದಿಂದ ಬ್ರಿಟನಿನ ವಿದೇಶಾಂಗ ವ್ಯವಹಾರದ ಮೇಲೆ ಟೀಕೆಯು ಸರಿಮಳೆ ಗರೆದಂತಾಗಿದೆ.

ಎಲ್ಲ ಪತ್ರಿಕೆಗಳೂ ಸಾಮಾನ್ಯ ವಕ್ತಾರನೊಬ್ಬನ ಬರು ನಡಿಯನ್ನು ಬಂಡಿಸಿ, ಪ್ರಧಾನಿ ಈಡನ್ ಅಥವಾ ವಿದೇಶ ಮಂತ್ರಿ ಮ್ಯಾಕ್‌ಮಿಲನ್ ವಕ್ತಾರನ ನಿಲುಮೆಯನ್ನು ಸಮರ್ಥಿಸುವರೇ? ಎಂದು ಕೇಳಿವೆ. ಮುಂದಿನ ಜನವರಿಯಲ್ಲಿ ರಶ್ಯದ ಪ್ರಧಾನಿಗಳು ಬ್ರಿಟನಿಗೆ ಭೇಟಿ ಕೊಡಲಿರುವಾಗ ಮತ್ತು ಜಿನೀವ ವಾತಾವರಣವನ್ನು ಕಾಯ್ದುಕೊಳ್ಳಬೇಕೆಂದು ಎಲ್ಲರೂ ಪ್ರಯತ್ನಶೀಲರಾಗಿರುವಾಗ ಬ್ರಿಟನು ಧೋರಣೆ ಬದಲಾಯಿಸುವ ಸೂಚನೆ ಕೊಟ್ಟಿದೆಯೆ ಎಂದು ಸಂದೇಹಿಸಲಾಗುತ್ತದೆ. ಈಡನ್ ಇದರಿಂದ ತುಂಬನೊಂದುಕೊಂಡಿರುವರೆಂದೂ ಆವಕ್ತಾರನು ಏಕೆ ಹೀಗೆ ಟೀಕಿಸಿದನೆಂದು "ತನಿಖೆ" ನಡೆಸುತ್ತಿರುವರೆಂದೂ ವರದಿಗಳು ಹೇಳುತ್ತವೆ.

ಅಮೇರಿಕದ ನಿಲುಮೆ

ಅಮೇರಿಕದಲ್ಲಿ ರಶ್ಯದ ವಿಷ್ಯರ ಭಾರತ ಪ್ರವಾಸಕ್ಕೆ ನಾಲ್ಕು ಬಗೆಯ ಪ್ರತಿಕ್ರಿಯೆಗಳು ಕಂಡು ಬಂದಿವೆ. ನೆಹರುಗಳಿಗೆ ರಶ್ಯವಿತ್ತ ಸ್ವಾಗತದ ಋಣ ಸಂದಾಯವನ್ನಷ್ಟೆ ಭಾರತವೀಗ ಮಾಡುತ್ತಿದೆ ಎಂಬುದೊಂದು; ನೆಹರುಗಳು ನಿಜಕ್ಕೂ ಕಮ್ಯೂನಿಸಮ್ಮಿನ ಕಡೆಗೆ ಒಲವುಳ್ಳವರಾಗಿದ್ದಾರೆ ಎಂಬದನ್ನೊಂದು; ರಶ್ಯದಿಂದ ಧಾರಾಳವಾದ ಆರ್ಥಿಕ ಹಾಗು ತಾಂತ್ರಿಕ ಸಹಾಯ ಸಿಗಬಹುದೆಂಬ ನಂಬಿಕೆ ಭಾರತಕ್ಕಿರುವುದೇ ಈ ಸಂಭ್ರಮದ ಸ್ವಾಗತದ ಹೇತು ಎಂಬುದು ಮೂರನೆಯ ಬಗೆ; ಪಾಶ್ಚಾತ್ಯ ರಾಷ್ಟ್ರಗಳನ್ನು ರಶ್ಯದ ಧೂರ್ತರ ಭೇಟಿಯು ನೆಪದಿಂದ ಹೆದರಿಸಿ, ಹೆಚ್ಚು ಸೌಲಭ್ಯಗಳನ್ನು ಸಂಪಾದಿಸುವುದೇ ಭಾರತದ ಉದ್ದೇಶವೆಂಬುದು ನಾಲ್ಕನೆಯ ಸ್ವರೂಪ. ಕೊನೆಯ ಎರಡು ನಿಲುಮೆಗಳಿಗೆಯೇ ಹೆಚ್ಚಾಗಿ ಅಮೇರಿಕದಲ್ಲಿ ಬೆಲೆಕೊಡಲಾಗುತ್ತದೆ. ಅಮೇರಿಕವು ಇಪ್ಪರ ವರೆಗೆ ಜಾ ಕೋಟಿ ಡಾಲರುಗಳಷ್ಟು ನೆರವಿತ್ತಿದೆ; ಭಾರತದ ಮೊದಲನೆಯ ಯೋಜನೆಯಲ್ಲಿ ಅದು ಹಾಗು ಕೊಲೊಂಬೋ ಯೋಜನೆಯಂತೆ-ಬ್ರಿಟನು ವಹಿಸಿದ ಪಾತ್ರ ಬಹಳ ದೊಡ್ಡದು. ಆದರೆ ಇನ್ನು ಮುಂದೆಯೂ ಹೀಗೆಯೇ ಸಹಾಯವನ್ನು ಮಾಡಲಾರದು — ಮುಂದಿನ ವರ್ಷ ಅಮೇರಿಕದಲ್ಲಿ ಚುನಾವಣೆ ನಡೆಯುವುದರಿಂದ ಸಹಾಯವನ್ನು ತಗ್ಗಿಸಲು ಅಸರಕಾರ ನೋಡಿದೆ; ಮತ್ತು ಭಾರತಕ್ಕೆ ೫ ಕೋಟಿ ಡಾಲರು ಕೊಡುವ ಬದಲು ೪ ಕೋಟಿಯಷ್ಟನ್ನೇ ನೀಡಲು ತೀರ್ಮಾನಿಸಿದೆ. ಇದೇ ಸಮಯದಲ್ಲಿ ರಶಿಯ ಇಪ್ಪರವರೆಗೆ ಸುಮ್ಮನಿದ್ದರೂ ೯ ಕೋಟಿ ಡಾಲರು ಸಹಾಯವಿತ್ತು ಜುಕ್ಕಿನ ಕಾರ್ಖಾನೆಯನ್ನು ಕಟ್ಟಿಕೊಡುವ ಒಪ್ಪಂದಕ್ಕೆ ಬಂದಿವೆ; ಅಲ್ಲದೆ ಇನ್ನೂ ಹೆಚ್ಚು ಸಹಾಯವನ್ನಾಡುವ ಲಕ್ಷಣ ತೋರಿಸುತ್ತಿದೆ. ಏಕರ ಸರಕಾರವು ಭಾರತದ ಕುರಿತು ವಹಿಸಿದ ನಿಲುಮೆ ನಿಸ್ವಯೋಜಕವೆಂದು ಟೀಕೆಗಳೇಗ ಅವೇರಿಕದಲ್ಲಿ ಕೇಳಿಬರುತ್ತಲಿವೆ; ರಶ್ಯದ ಗತ್ತುಗಾರಿಕೆಯನ್ನು ಅಮೇರಿಕಳು ಧಾರಾಳ ಧನ ಸಹಾಯದಿಂದ ಮಾತ್ರವೇ ಇದಿರಿಸಬಹುದೆಂದೂ ಕೆಲವು ರಾಜಕೀಯ ವರ್ತುಲಗಳು ಪ್ರತಿಪಾದಿಸುತ್ತವೆ.

ಉಡುಪಿ

ಡಿ ಮುನ್ಸೀಫರಾಗಿ ಆಯ್ಕೆ— ಉಡುಪಿಯಲ್ಲಿ ಎ. ಪಿ. ಪಿ. ಆಗಿದ್ದು ಈಗ ಮಂಗಳೂರಲ್ಲಿ ಸಮರ್ಥ ಹಾಗೂ ಜನಪ್ರಿಯ ಅಸಿಸ್ಟಾಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿರುವ ಶ್ರೀ. ವಿ. ಕೃಷ್ಣಜ್ಜ ಸೆಟ್ಟಿ, ಬಿ.ಎ., ಬಿ. ಎಲ್, ಆವರು ಡಿ ಮುನ್ಸಿಫ್ ಹುದ್ದೆಗೆ ಸರಕಾರದಿಂದ ಆರಿಸಲ್ಪಟ್ಟಿರುವರಾಗಿ ತಿಳಿದು ಬರುತ್ತದೆ.

ಎಮ್. ಜಿ. ಎಮ್. ಕಾಲೇಜಿನಲ್ಲಿ ತಾ. ೨೫ರಲ್ಲು ಪೂರ್ವಾಹ್ನ 'ವ್ಯಕ್ತಿತ್ವ ಮತ್ತು ಅಧಿಕಾರ' ಈ ವಿಷಯದಮೇಲೆ ಚರ್ಚಾ ಕೂಟವೊಂದು ಜರಗಿತು. ಮುಖ್ಯವಾಗಿ ಯುನಿವರ್ಸಿಟಿಯ ಪ್ರೊ। ಆರ್. ಭಾಸ್ಕರನ್, ಆವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಚ್. ಸುಂದರ ರಾವ್, ಕೆ. ಬಿ ರಾಮಕೃಷ್ಣ ರಾವ್, ವಿ ತ್ಯಾಗರಾಜನ್, ಟಿ. ಎನ್. ವಾಸುದೇವ ರಾವ್, ಕೆ. ಎಸ್. ಹರಿದಾಸ ಭಟ್ ಮತ್ತು ಮಿಸ್. ಯು. ಎಸ್. ಶಾಲಿನಿಯವರು ಮುಖ್ಯ ಪಾಚಕರಿದ್ದರು.

ಸ್ಕೌಟ್ಸ್ ಸಮ್ಮೇಳನ- ಭಾರತ ಗೈಡ್ಸ್ ಮತ್ತು ಗ್ಯಾಡ್ಸ್‌ಗಳ ಸ್ಪಾನೀಯ ಅಸಿಸ್ಟಾಂಟ್ ಕಮಿಶನರ್ ಶ್ರೀ ಎಸ್. ವಿ. ರಮಣಕಾರಿಕಾರ್ಯರವರು ತಾ ೨೪ರಲ್ಲು ಜರಗಿದ ಸ್ಥಳೀಯ ಸ್ಕೌಟ್ ಸಮ್ಮೇಳನದಲ್ಲಿ,ಸ್ಕೌಟ್ಸ್‌ತತ್ವವನ್ನು ವಿವರಿಸಿದರು. ಸ್ಥಳೀಯಎಸೋಸಿಯೇಶನ ಅಧ್ಯಕ್ಷೆ ಡಾ॥ ಎಸ್ ಆರ್. ಪೈಗಳು ಅಧ್ಯಕ್ಷತೆ ವಹಿಸಿದ್ದರು. ಡಾ॥ ಟಿ. ಎಂ.ಎ. ಪೈ ಮೊದಲಾದವರ ಭಾಷಣಗಳಾದ ಮೇಲೆ ರಮೇಷಪೈಗಳು ಧನ್ಯವಾದಗಳನ್ನರ್ಪಿಸಿದರು.

ಅಂದು ಸಂಜೆ ಬೋರ್ಡ್ ಹೈಸ್ಕೂಲ್ ವಠಾರದಲ್ಲಿ ಸ್ಕೌಟ್ ರ್ಯಾಲಿ ನಡೆಯಿತು.ಸಮ್ಮೇಳನದ ಮೊದಲ ದಿವಸ ರಾತ್ರಿ ಡಾ॥ ಟಿ. ಎಂ. ಎ. ಪೈಗಳು ನಮಾಸಿಸಿದ ಮುಖ್ಯ ಅತಿಥಿಗಳಿಗೆ ನಗರಪಾಲದಲ್ಲಿ ಸತ್ಕಾರವಿತ್ತು ಗೌರವಿಸಿದರು.

ನಗರ ಸಭೆಯು ತಾ. ೨೬ರಲ್ಲು ಸಭಾಧಿಪತಿ ಶ್ರೀ. ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಕೆಲವೊಂದು ಜೆ. ಓ.ಗಳನ್ನು ರಿಕಾರ್ಡು ಮಾಡಲಾಯಿತು. ಹೊಟೆಲು ಮಾಲಿಕರ ಅರ್ಜಿ ಮತ್ತು ನಗರದೊಳಗೆ ಅಗತ್ಯಕಾದ ಸೌಕರ್ಯಗಳ ಕುರಿತು ವರದಿಮಾಡಲು ಉಪ ಸಮಿತಿಗಳಾಮಿತು.

ಯಕ್ಷಗಾನ— ಗುಂಡಿಬೈಲು ಶ್ರೀ ಬ್ರಹ್ಮ ಬೈದರ್ಕಳ ಧರ್ಮಾಪತಿ ಯಕ್ಷಗಾನ ಸಂಘದಲ್ಲಿ ಕಳೆದ ತಾ. ೨೭ರಂದು ಯಕ್ಷಗಾನ ಕಾಲಕ್ಷೇಪವೊಂದು ಮುನಿಸಿಪಲ್ ಕೌನ್ಸಿಲರ್ ಶ್ರೀ ಎಚ್ ವೆಂಕಟೇಶ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ವರದಿವಾಚನ, ಪಲವರ ಭಾಷಣಗಳಿದ್ದವು.

ಲಕ್ಷದೀಪೋತ್ಸವ— ಶ್ರೀ ಕೃಷ್ಣ ಮಠದಲ್ಲಿ ತಾ. ೨೧ರಿಂದ ೨೫ರ ತನಕ ಮೂರು ದಿವಸಗಳಲ್ಲಿ ಪರ್ಯಾಯ ಪಲಿಮಾರು ಸ್ವಾಮಿಗಳವರ ನೇತೃತ್ವದಲ್ಲಿ ಲಕ್ಷದೀಪೋತ್ಸವವು ಯಥಾ ಸಾಂಗವಾಗಿ ಜರಗಿತು.

ವೈಸ್ ಚೇರ್‌ಮೆನರ ಆಯ್ಕೆ - ಉಡುಪಿ ನಗರ ಸಭೆಯ ವೈಸ್‌ಚೇರ್‌ಮೆನರ ಆಯ್ಕೆಯು ಇಮೇ ತಾ. ೩ನೇ ಶನಿವಾರ ಸಂಜೆ ೫ ಗಂಟೆಗೆ ನಗರ ಸಭಾ ಭವನದಲ್ಲಿ ಜರಗುವ ಸಭೆಯಲ್ಲಿ ನಡೆಯಲಿರುವುದು.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅಖಿಲಭಾರತ ಕಾಂಗ್ರೆಸಿನ ಕಾರ್ಯಸಮಿತಿಯು ಕರ್ನಾಟಕ ಪ್ರಾಂತವಚನೆಯ ವಿಚಾರದಲ್ಲಿ ಅಂತ್ಯ ನಿರ್ಣಾರನನ್ನು ಕೈಕೊಳ್ಳಲು ಉನ್ನತಾಧಿಕಾರವನ್ನಿತ್ತು ನೇಮಿಸಿನ ಹಿರಿಯರ ಉಪಸಮಿತಿಯು ಮೈಸೂರಿನೊಳಗಂಡ ಏಕ ಕನ್ನಡ ಪ್ರಾಂತವನ್ನು ರಚಿಸುವುದು ಯುಕ್ತವೆಂದು ತನ್ನ ಅಭಿಪ್ರಾಯವನ್ನೂ ವ್ಯಕ್ತಪಡಿಸಿ ಬಳ್ಳಾರಿ, ಸಿರಗುಪ್ಪ, ಹೊಸಪೇಟೆ ತಾಲೂಕುಗಳನ್ನೂ, ದ. ಕ. ಜಿಲ್ಲೆಯ ಕಾಸರಗೋಡು ತಾಲೂಕಿನ ಚಂದ್ರಗಿರಿನದಿಯ ಉತ್ತರತೀರ್ಥದ ಭಾಗವನ್ನೂ ಕರ್ನಾಟಕ ಪ್ರಾಂತ್ಯಕ್ಕೆ ಸೇರಿಸುವುದು ನ್ಯಾಯ ಸಮ್ಮತವಿದೆ ಮತ್ತು ಅಗತ್ಯವಿದೆ ಎಂದು ಪರಿಷತ್ತು ಬಿತ್ತಿ ಹೇಳುತ್ತದೆ.

ಕ್ಷಯರೋಗದ ಮೂಲವೆಲ್ಲಿ?

ಟ್ಯೂಬರ್‌ಕಲ್ ಬೆಸಿಲಸ್ ಎಂಬ ಕ್ರಿಮಿಯಿಂದ ಕ್ಷಯರೋಗವು ಉಂಟಾಗಲು ಮೂಲ ಕಾರಣ. ಈ ಕ್ರಿಮಿಗಳು ನಿಮ್ಮ ಶರೀರದೊಳಗೆ ಪ್ರವೇಶ ಮಾಡದಿದ್ದರೆ ನಿಮಗೆ ಕ್ಷಯರೋಗವು ಪ್ರಾಪ್ತಿಯಾಗಲಾರದು. ಹೆಚ್ಚಾಗಿ ಬಳಲಿದವರಿಗೆ, ಸಾಕಷ್ಟು ಪೌಷ್ಟಿಕ ಆಹಾರವಿಲ್ಲದವರಿಗೆ, ಜನನಿಬಿಡ ವಲಯದಲ್ಲಿ ವಾಸಿಸುವವರಿಗೆ ಈ ರೋಗವು ಪ್ರಬಲವಾಗಿ ಸೋಂಕುವುದು.

ನಿಮಗೆ ಈ ರೋಗದ ಸೋಂಕಣೆಯು ಎಲ್ಲಿಂದ, ಹೇಗೆ ಬಂತೆಂಬುದನ್ನು ಸುಲಭದಲ್ಲಿ ಪತ್ತೆ ಹಚ್ಚಲು ಸಾಧ್ಯವಿಲ್ಲ. ಕ್ರಿಮಿಗಳು ತಿಂಗಳು ಯಾ ವರುಷ ಗಟ್ಟಲೆಯಲ್ಲಿ ನಿಮ್ಮ ಶರೀರವನ್ನು ಅಂಟಿಕೊಂಡಿದ್ದು ನೀವು ನಿರಾಶರಾದಾಗ ಹತ್ತಿರದ ಕ್ಷಯರೋಗ ನಿವಾರಣಾ ಕ್ಲಿನಿಕಿನ ಸಹಾಯವನ್ನು ಪಡೆಯಿರಿ.

ಟಿ. ಬಿ. ಮೊಹರುಗಳು ಕ್ಷಯರೋಗ ನಿವಾರಣಾ ಚಳವಳಿಗೆ ನೆರವಾಗುವುವು.

ಬಹುಸಂಖ್ಯೆಯಲ್ಲಿ

ಟಿ. ಬಿ. ಮೊಹರುಗಳನ್ನು ಕೊಂಡುಕೊಂಡು

ನಿಮ್ಮ ರಾಜ್ಯದ ಟಿ. ಬಿ. ಎಸೋಸಿಯೇಶನಿಗೆ ಸಹಾಯಮಾಡಿರಿ.

ಒಂದು ಮೊಹರಿಗೆ ಬರೇ ಒಂದಾಣೆ ಬೆಲೆ.

ಅವುಗಳು ದೊರೆಯುವ ಸ್ಥಳಗಳು:

ದಿ ಒನೆರರಿ ಸೆಕ್ರಟರಿ, ಮದ್ರಾಸ್ ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್, ಚೀಫ್ ಹೆಲ್ತ್ ಆಫೀಸರರ ಆಫೀಸು, ರಿಪ್ಪನ್ ಬಿಲ್ಡಿಂಗ್ಸ್, ಮದ್ರಾಸು-3, ಮತ್ತಿತರ ರಾಜ್ಯದ ಏಜನ್ಸಿಗಳಲ್ಲಿ.

ಹಿಂದೂಸ್ಥಾನದ ಆನೆ ಟಿ. ಬಿ. ಮೊಹರು ವಿಕ್ರಯ ಚಳವಳಿ

ಈ ಸ್ಥಳ ದಾನ ನೂಡಿದವರು:

ನೇಶನಲ್ ಕಾರ್ಬನ್ ಕಂಪೆನಿ (ಇಂಡಿಯಾ) ಲಿಮಿಟೆಡ್, ಕಲ್ಕತ್ತ.

ದ. ಕ. ಜಿಲ್ಲಾ ಬೋರ್ಡು ಸಭೆ- ತಾ. ೨೮ರಲ್ಲಿ ಅಪರಾಹ್ನ ಅಧ್ಯಕ್ಷೆ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೋರ್ಡಿನ ಸಾಮಾನ್ಯ ಸುತ್ತು ಪ್ರಾಥಮಿಕ ಶಿಕ್ಷಣ ಖಾತೆಗಳ 1955-56ರ ತಿದ್ದಿದ ಮತ್ತು 1956-57ರ ಅಂದಾಜು ಪಟ್ಟಿಗಳು ಸರ್ವಾನುಮತದಿಂದ ಮಂಜೂರುಮಾಡಲ್ಪಟ್ಟವು.

ಸಾನಾನ್ನ ಖಾತೆಯ 1955-56ನೆ ತಿದ್ದಿದ ಮುಂಗಡ ಪತ್ರದ ಪೇರಿಗೆ ಸರ್ಚಾರ್ಜ್ಕ್ಕೆ ರೂಪಾಯಿ 2,00,600 ಕೊರತೆ ಉಳಿಯುಬುಹುದು. 1956-57ರ ಮುಂಗಡಪತ್ರದಂತೆ 1956-57ನೆ ವರ್ಷಾಂತ್ಯಕ್ಕೆ ರೂ. 3,95,700 ಕೊರತೆಯಾಗುವ ಸಂಭವವಿದೆ. ಈ ಮುಂಗಡ ಪತ್ರಗಳ ಅಂದಾಜುಮಾಡುವಾಗ ಈ ವರ್ಷನ ಮತ್ತು ಬಜೆಟ್ ವರ್ಷಗಳಲ್ಲಿ ಸರಕಾರದಿಂದ ಬರಬೇಕಾದ ರೂಪಾಯಿ 2.5 ಲಕ್ಷದಷ್ಟು ಭೂತೆರಿಗೆ ನೋಲಣ ಸರ್ಚಾರ್ಜು ಕೂಡಾ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಪ್ರಾಥಮಿಕ ಶಿಕ್ಷಣಖಾತೆಯ ತಿದ್ದಿದ ಮುಂಗಡಪತ್ರದಂತೆ ವರ್ಷಾಂತ್ಯಕ್ಕೆ ರೂ. 92,510 ಕೊರತೆ ಬೀಳುವ ಸಂಭವವಿದೆ. 1956-57ನೆ ಮುಂಗಡ ಪತ್ರದಂತೆ ವರ್ಷಾಂತ್ಯಕ್ಕೆ ರೂಪಾಯಿ 2,52,930 ಕೊರತೆ ಬೀಳುವ ನಿರೀಕ್ಷೆಯಿದೆ. ಮುಂಗಡ ಪತ್ರಗಳ ಚರ್ಚೆಯಲ್ಲಿ ಶ್ರೀಗಳಾದ ಕೆ. ಕೆ. ಶೆಟ್ಟ, ಎನ್. ಎಸ್. ಸರಮೇಶ್ವರಯ್ಯ, ಡಾ| ಕೆ. ನಾಗಪ್ಪ ಆಳ್ವ, ಎ. ಕೃಷ್ಣ ಶೆಟ್ಟಿ, ಡಾ| ಬಿ. ನಾರಾಯಣರಾವ್, ಬಿ. ಎಸ್. ಭಾಸ್ಕರ ರೈ, ಎನ್. ಕುಂ ಞಂಬು ನಂಬಿಯಾರೇ ಮೊದಲಾದವರು ಪ್ರಮುಖ ಭಾಗವಹಿಸಿದ್ದರು. ಅಧ್ಯಕ್ಷ ಹೆಗ್ಡೆಯವರು ಉತ್ತರವೀಯುತ್ತಾ, ಸೌಕರ್ಯಗಳನ್ನು ಒದಗಿಸುವಾಗ ಜಿಲ್ಲೆಯ ದೃಷ್ಟಿಯಿಂದ ಕಾರ್ಯಕ್ರಮ ಕೈಕೊಳ್ಳಬೇಕಾಗಿದೆ ಎಂದು ಸೂಚಿಸಿದರು. ಜಿಲ್ಲಾ ಬೋರ್ಡಿನ ಆದಾಯ ಹೆಚ್ಚಿಸುವ ಬಗ್ಗೆ ಮೋಟಾರು ವಾಹನ ತೆರಿಗೆ, ಮತ್ತಿತರ ರೀತಿಯಲ್ಲಿ ಸಹಾಯ ಯೆಚ್ಚು ಒದಗಿಸಬೇಕೆಂದು ದಕ್ಷಿಣ ಕನ್ನಡ, ಮಲಬಾರು, ನೀಲಗಿರಿ ಜಿಲ್ಲೆಗಳ ಪರವಾಗಿ ಸರಕಾರದ ಮುಂದೆ ವಾದಿಸಿದ್ದೇನೆ. ಉಪಾಧ್ಯಾಯರನ್ನು ಅವರ ವಾಸ್ತವ್ಯದ ಪಕ್ಕಿರವಾಗುವಂತೆ ವರ್ಗವಮಾಡಲು ಪ್ರಯತ್ನಿಸಲಾಗಿದೆ ಎಂದರು.

ನಂತರ ವಜಂಡದಲ್ಲಿ ಉಳಿದ ಇತರ ಕಾರ್ಯಕ್ರಮಗಳ ಪರಿಶೀಲನೆ ನಡೆಯಿತು. ಶ್ರೀ ಬಿ. ಎಸ್. ಭಾಸ್ಕರ ರೈಗಳ ಸೂಚನೆ ಮೇರೆಗೆ ಸ್ಥಳೀಯ ಗ್ರಾಮಸ್ಥರು ಕಟ್ಟಿದ ಸಲಕರಣೆ ಇತ್ಯಾದಿ ಒದಗಿಸಿ ಕೊಟ್ಟಲ್ಲಿ ಕಾರ್ಕಳ ತಾಲೂಕಿನ ಬೆಳ್ಮಣ್ಣು ಕೇಂದ್ರದಲ್ಲಿ ಹ್ಯಾಸ್ಟೂಲ್ ತೆರೆಯಬಹುದೆಂದಾಯಿತು. ಶ್ರೀ ಎನ್. ಎಸ್. ಹೆಗ್ಡೆಯವರ ಸೂಚನೆಯಂತೆ, ಗ್ರಾಮಸ್ಥರು ಕಟ್ಟಿಡ ಹಾಗೂ ಇತರ ಸಲಕರಣೆಗಳನ್ನು ಒದಗಿಸಿದ್ದಲ್ಲಿ ಸುಂದಾಪುರ ತಾಲೂಕಿನ ಶಂಕರನಾರಾಯಣದಲ್ಲಿ ಹ್ಯಾಸ್ಟೂಲ್ ತೆರೆಯವ ನಿರ್ಣಯವಾಯಿತು. ಬೆಳ್ತಂಗಡಿ, ಮಂಗಲಪಾಡಿ, ಕುಂಬಳೆ ಮತ್ತು ಪೈವಳಿಕ ಪಾ. ಎ. ಶಾಲೆಗಳನ್ನು ಹಿರಿಯ ಬುನಾದಿ ಶಾಲೆಯೊಗಿಪರಿವರ್ತಿಸಲು ನಿರ್ಧಾರವಾಯಿತು. ಕೊಳತ್ತೂರಲ್ಲಿ ಒಂದು ಹೆರಿಗೆ ಮತ್ತು ಶಿಶು ಸಂಗೋಪನಾ ಕೇಂದ್ರ ಮತ್ತು ಗ್ರಾಮೋಸ್ಪತ್ರೆ ತೆರೆಯಬೇಕೆಂಬ ಶ್ರೀ. ಕೆ. ಗಣ್ಯ ಶರಾಯರ ನಿರ್ಣಯ ಮಂಜೂರಾಯಿತು.

ಶ್ರೀಗಳಾದ ಫೆಲಿಕ್ಸ್ ಡಿ'ಸೋಜಾ, ಎಸ್. ಕಂಠಿಂಬಾ ನಂಬಿಯಾರ್, ಎಸ್. ಉಪೇಂದ್ರ ನಾಯಕ್, ಎ. ಪದ್ಮನಾಭ ಶೆಟ್ಟಿ, ಕೆ ವೇಣು ಗೋಪಾಲ ನಾಯಕ್ ಇವರ ನಿರ್ಣಯಗಳ ಮೇರೆಗೆ ಕೊಡಪೊರು—ತೊಟ್ಟಿಂ ರಸ್ತೆ ಮತ್ತು ಕೊಡಪೊರು-ಕೆಳಾರ್ಕಳಬೆಟ್ಟು ಬಡಾನಿಡಿಯ್ಯೂರು ರಸ್ತೆ, ಕುಂದಂಗೋಳಿ ಮತ್ತು ಆಲೆಬ್ಬಗಳ ನಡುವಿನ 4 ರಸ್ತೆಗಳು, ಆಯೆಂಬಾರ್ ಮತ್ತು ಕಳ್ಳಿಯೊಟು ಶಾಲಾ ಕಟ್ಟಡಗಳ ರಜನೆಗೆ ಮತ್ತು ಬಾರೆಗ್ರಾಮದ ಬೋರ್ಡು ಶಾಲೆಗೆ ಹೊಸ ಕಟ್ಟಡ ರಜನೆ, ನಂದಾವರ ಸಂಕ, ಪದುಬಿದ್ರಿ ಬೋರ್ಡು ಪಾ. ಎ ಶಾಲಾವ್ಯಾಸ್ತರಣಾ ಕಟ್ಟಡ ರಜನೆ ಮೊದಲಾದ ಅಭಿವೃದ್ಧಿ ಕಾರ್ಯಗಳಿಗೆ ಸೇಕ ಡಾ 15ರಂತೆ ಅಥವಾ ನಿರ್ಣಯಗಳಲ್ಲಿ ಹೇಳಲಾದ ಪರಿಮಿತಿಗಳೊಳಗೆ ಯಾವುದು ಕಡಿಮೆಯೋ ಆ ಪ್ರಮಾಣ ಧನ ಸಹಾಯವನ್ನೊದಗಿಸಲು ಶರಾವಾಯಿತು.

ಕಾರ್ಕಳ: ಸ್ಥಳೀಯ ಬೋರ್ಡು ಹ್ಯಾಸ್ಕೂಲಿನಲ್ಲಿ ತಾ. 28ರಲ್ಲು ಬೆಳಿಗ್ಗೆ ಸೇರಿದ ಗಾವಾಭ್ಯುದಯ ಮತ್ತು ರೈತ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ಭಾಷಣ ಮಾಡುತ್ತಾ, ಸ್ವತಂತ್ರ ಭಾರತದ ಶ್ರೇಯಸ್ಸಿಗೆ ಬಡವರು, ಬಲ್ಲಿದರು ಎಂದೆನ್ನದೆ ಸರ್ವರೂ ದುಡಿಯಬೇಕೆಂದರು. ಸಮ್ಮೇಳನದ ಆಂಗವಾದ ಪ್ರದರ್ಶನವನ್ನು ದ. ಕ. ಜಿಲ್ಲಾ ಬೋರ್ಡ್ ಅಧ್ಯಕ್ಷೆ ಡಾ| ಕೆ. ಕೆ. ಹೆಗ್ಡೆಯವರು ಉದ್ಘಾಟಿಸುತ್ತಾ, ಈ ಪ್ರದರ್ಶನವು ಸಂಪೂರ್ಣ ಪ್ರಯೋಜನವನ್ನು ಗ್ರಾಮಸ್ಥರು ಪಡೆದು ಸ್ವಹಿತ ಸಾಧನೆಯೊಂದಿಗೆ ದೇಶ ಕಲ್ಯಾಣ ಸಾಧಿಸಬೇಕೆಂದರು.

ಅರಂಭದಲ್ಲಿ ಪ್ರದರ್ಶನ ಸಮಿತಿ ಅಧ್ಯಕ್ಷೆ ಶ್ರೀ ಆರ್. ಪರಿ ಶೆಟ್ಟಿಯವರು ಸ್ವಾಗತ ಭಾಷಣ ಮಾಡಿದರು. ಪ್ರದರ್ಶನದಲ್ಲಿ ಕೃಷಿ, ಗ್ರಾಮ ಕೈಗಾರಿಕೆ, ಪಶುಪಾಲನೆ, ಸಿಮೆಗಾರಿಕೆ, ಕೈಕೆಲಸ, ಕಲಾಕೃತಿ ಮೊದಲಾದ ಪ್ರದರ್ಶಕೆಗಳಿದ್ದುವು. ಬೋರ್ಡು ಹ್ಯಾಸ್ಕೂಲಿನ ವಿಜಯಾ ಸ್ಕೌಟ್ ದಳದವರು ಮುಖ್ಯ ಅತಿಥಿಗಳಿಗೆ ಸಕಾರಂಭವ ಮೊದಲು ಗೌರವ ರಕ್ಷೆಯನ್ನಿತ್ತರು.

ಗ್ರಾಮಾಧಿನಾಯಕರ ಪರಿಷತ್ತು- ದ. ಕ. ಜಿಲ್ಲೆಯ ತೃತೀಯ ವಲಯದ ಗ್ರಾಮಾಧಿನಾಯಕರ ಪರಿಷತ್ತು ತಾ. 26ರಲ್ಲಿ ಸಂಜೆ ಶ್ರೀ ಬಿ. ವಿಂಠಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕೂಡಿದ್ದ ಸಾರ್ವಜನಿಕ ಸಭೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನದಿಂದ ಕೊನೆಗೊಂಡಿತು. ಶ್ರೀ ಆರ್. ಪರಿ ಶೆಟ್ಟಿಯವರು ಸ್ವಾಗತಭಾಷಣ ಮಾಡಿದ ಬಳಿಕ ಶ್ರೀ. ಪಿ. ಎ. ಜೈಬಯವರು ಸಂದೇಶವಾಚನ ನುಡಿದರು ಶ್ರೀ ಕೆ. ಶಿವರಾಮ ಕಾರಂತ ಮೊದಲಾದವರ ಭಾಷಣಗಳಾದುವು. ಡಾ. ಎ. ಕೆ. ಲಕ್ಷ್ಮೀನಾರಾಯಣ ರಾಯರು ಗ್ರಾಮಾನುನಾಯಕರ ಕಡೆಯಿಂದಲೂ ಶ್ರೀಗಳಾದ ಸದಾನಂದ ಕುಡುವ ಮತ್ತು ವಿ. ರಮಲಾನ ರವರು ಸ್ವಾಗತ ಸಮಿತಿ ಹಾಗೂ ಸಮಾಜ ವಿಕಾಸಯೋಜನೆಯ ಕಡೆಯಿಂದಲೂ ಧನ್ಯವಾದಗಳನ್ನಿತ್ತರು. ಸಾಂಸ್ಕೃತಿಕ ಚಟುವಟಿಕೆ ಪ್ರದರ್ಶನಗಳಲ್ಲಿ ವಿಜಯಿಗಳಾದವರಿಗೆ ಸಾಮಾಜಿಕ ಶಿಕ್ಷಣದ ಜಿಲ್ಲಾಧಿಕಾರಿ ಕುಮಾರಿ ವಿಶಾಲಾಕ್ಷಿಯವರು ಪ್ರಶಸ್ತಿ ಪತ್ರಗಳನ್ನಿತ್ತರು.

ಕನರ್ಾಟಕ ಸಂಘದ ಉದ್ಘಾಟನೆ: ಕಾರ್ಕಳ ಬೋರ್ಡು ಹ್ಯಾಸ್ಕೂಲಿನ ವಿದ್ಯಾರ್ಥಿಗಳ ಕರ್ನಾಟಕ ಸಂಘದ ಉದ್ಘಾಟನೆಯನ್ನು ಶ್ರೀ ಕೆ. ಶಿವರಾಮ ಕಾರಂತರು ನರವೇರಿಸಿದರು. ಶ್ರೀ ಉಗ್ರಾಣ ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್ ಆರ್. ಆಚಾರ್ಯರು ಸ್ವಾಗತ ಭಾಷಣಮಾಡಿದರು.

ಮಣಿಪಾಲ— ಇಲ್ಲಿಯ ಗ್ರಾಮಸೇವಾ ಪ್ರತಿಷ್ಠಾನ್ ಆಶ್ರಯದಲ್ಲಿ ತಾ. 15ರಲ್ಲಿ ಶ್ರೀಯು. ಎ. ಪೈಗಳವರ ನೇತೃತ್ವದಲ್ಲಿ ಕಟ್ಟಿಸಲಾದ ಪ್ರಾರ್ಥನಾ ಮಂದಿರವನ್ನು ಕಲಾಡಿಯ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಶ್ರೀ ಮತ್ ಸ್ವಾಮಿ ಅಗಮಾನಂದ ಜೀ ಮಹಾರಾಜರು ಉದ್ಘಾಟಿಸಿದರು. ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಸ್ವಾಗತ ಭಾಷಣಮಾಡಿದರು. ಸ್ವಾಮಿಗಳವರು ಶ್ರೀ ರಾಮಕೃಷ್ಣ ಭಾವ ಚಿತ್ರದ ಅನಾವರಣವನ್ನು ಕೂಡಾ ನೆರವೇರಿಸಿದರು. ಡಾ. ಟಿ. ಎಮ್. ಎ. ಪೈಗಳು ಧನ್ಯವಾದಗಳನ್ನರ್ಪಿಸಿದರು.

ಬೊಕ್ಕಾಡಿ- ಬೊಕ್ಕಾಡಿಗೆ ಸಮೀಪದ ಪೊಡ್ಡಿಹಿತ್ಲು ಕೃಷ್ಣಪ್ಪ ಗೌಡ ಎಂಬವರಿಗೆ ಬೊಮ್ಮಣ್ಣ ಗೌಡ ಎಂಬವರು ಚೂರಿಯಿಂದ ಕವಿದು ಜಖಂಗೊಳಿಸಿರುವರಾಗಿ ತಿಳಿದು ಬರುತ್ತದೆ.

ಪಾದೆಬೆಟ್ಟು- ಸಮಾಜ ವಿಕಾಸ ಯೋಜನೆಯಂತೆ ಈ ಕಾರ್ಯ ರಸ್ತೆಯಿಂದ ಪಾದೆಬೆಟ್ಟು ಶ್ರೀ. ಸುಬ್ರಹ್ಮಣ್ಯ ದೇವಸ್ಥಾನದ ವರೆಗೆ ರಚಿಸಲ್ಪಡುವ ರಸ್ತೆ ಕಾರ್ಯವನ್ನು ಈಚೆಗೆ ಶ್ರೀ. ನಡಿಗುತ್ತು ನಾರಾಯಣ ಶೆಟ್ಟರು ಉದ್ಘಾಟಿಸಿದರು. ರಸ್ತೆ ಕಾರ್ಯವೀಗ ರಚಿಸಲಂದ ಮುಂದೆ ಸಾಗುತ್ತಲಿದೆ.

ಫರಂಗಿಪೇಟೆ- ಸ್ಥಳೀಯ ಶ್ರೀ ರಾಮಾ ಡಾ. ಎ. ಶಾಲೆಯಲ್ಲಿ ಈಚೆಗೆ ಬಿ. ಸಿ. ಜಿ. ದಾಸಿಗೆ ಸಂಬಂಧಿಸಿದ ಚಲಚ್ಚಿತ್ರ ಪ್ರದರ್ಶನ ನಡೆಯಿತು. ಜಾಗತಿಕ ಆರೋಗ್ಯ ಸಂಸ್ಥೆಯ ಮಿಸ್. ಮುಂಟ್ ಸೀಟರ್‌ಸನ್ ಮತ್ತು ಸುಪರ್ ವೈಸಿಂಗ್ ಪಬ್ಲಿಕ್ ಹೆಲ್ತ್ ಆಫೀಸರ್ ಡಾ|| ವಿ. ಹರಿಪರನ್ ಮತ್ತು ಪಬ್ಲಿಸಿಟಿ ಆಫೀಸರ್ ಶ್ರೀ. ವೆಂಕಟೇಶರ್ನರವರು ಹಾಜರಿದ್ದು ಜನಜಾಗ್ರತಿಯನ್ನುಂಟು ಮಾಡಿದರು.

ಹಂಗಾರಕಟ್ಟೆ: ಸ್ಥಳೀಯ ಪ್ರೌಢ ಪ್ರಾಥಮಿಕ ಶಾಲಾ ಹಳೆವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಆ ಶಾಲಾ ನೂತನ ವಿದ್ಯುದ್ದೀಪ ಉದ್ಘಾಟನಾ ಸಮಾರಂಭವನ್ನು ಇದೇ ತಾ. 3ನೆ ಶನಿವಾರ ಸಂಜೆ 6-30 ಗಂಟೆಗೆ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಆ ವರು ನೆರವೇರಿಸುವರು. ಜಿಲ್ಲಾ ಬೋರ್ಡು ಅಧ್ಯಕ್ಷೆ ಡಾ| ಕೆ ಕೆ. ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಮೂಡುಬಿದ್ರೆ- ಇಲ್ಲಿಯ ಜೈನ ಪ್ರೌಢ ಶಾಲೆಯ ವರ್ಧಂತ್ಯುತ್ಸವವು ಇದೇ ತಾ. 17ನೆ ಶನಿವಾರ ಸಂಜೆ 5½ ಗಂಟೆಗೆ ಮೂಲ್ಕಿ ಸರಕಾರಿ ಹ್ಯಾಸ್ಕೂಲ್ ಹೆಡ್‌ಮಾಸ್ಟರ್ ಶ್ರೀ ಕೆ. ವಿಠಲ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಭಾಷಣ ಸ್ಪರ್ಧೆ— ಈ ಭಾರಿಯ ಮುದ್ರಾಸು ವಿಶ್ವವಿದ್ಯಾಲಯದ ಕನ್ನಡಭಾಷಣ ಸ್ಪರ್ಧೆಗೆ 56 ಕಾಲೇಜುಗಳಿಂದ 76 ಮಂದಿ ಭಾಗವಹಿಸಿದ್ದರು. ಅವರ ಫಲಿತಾಂಶ ಈ ರೀತಿ ಇದೆ: ಪ್ರಥಮ ಬಹುಮಾನ: ಶ್ರೀ ಜಿ. ಸುಬ್ಬರಾಯ, ಬಿ. ಎ; ಟ್ರೈನಿಂಗ್ ಕಾಲೇಜ್, ಮಂಗಳೂರು ದ್ವಿತೀಯ ಬಹುಮಾನ: ಶ್ರೀ ಲಿ. ಈಶ್ವರ ಭಟ್, ಸರಕಾರಿ ಕಲಾಶಾಲೆ, ಮಂಗಳೂರು. ತೃತೀಯ ಬಹುಮಾನ: ಕುಮಾರಿ ಬಿ. ನಿರೇದಾ, ಸರಕಾರಿ ಕಲಾಶಾಲೆ, ಮಂಗಳೂರು.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜನಾಬ್ಧಾರಿಯನ್ನು ಕಂಬಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

ಹೊಸ ಪ್ರಯೋಗ

ಬಾಲ ವಾಚನಾಲಯಗಳ ಬೆಲೆ ಹೆಚ್ಚಿಸುವ ಗ್ರಂಥಗಳು.

ಕನ್ನಡ ಕಂದನು ಕಾಡಿಡುವ ಅಮೂಲ್ಯ ಕೃತಿಗಳು.

ಪ್ರಾಥಮಿಕ ಶಿಕ್ಷಕರಿಂದ ನಡೆಸಲ್ಪಡುವ, ಬಂದೇ ಒಂದಾದ ಪ್ರಾ. ಶಿಕ್ಷಕರ ಪ್ರೋತ್ಸಾಹಕಾರ್ಥ ತೆರೆವೆ ಸಮಿತಿಯಿಂದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೆಣೆದ

ಪುಟಿಚೆಂಡು-ಕವಿತಾ ಸಂಕಲನ. ಭಾಗ-೧. ೧೩೪. ಭಾಗ-೨. ೧೦೪ ಜನರ ಕವಿತೆಗಳು

ಆನೆಕಲ್ಲು- ಕಥಾ ಸಂಕಲನ. ಭಾಗ-೧. ೪೦, ಭಾಗ-೨. ೩೬ ಜನರ ಕಥೆಗಳು.

ಭಾ-೧-೨ರಿಂದ ೪ ಪತ್ಯಕ್ಕೆ. ಬೆಲೆ ೧೨ ಆಣೆಯಂತೆ. ಉತ್ತರದಲ್ಲಿ ಈ ಚೆಂದ್ರಿಯಿಂದ, ದಕ್ಷಿಣದ ಈ ಕುವೆಂಪು, ಪೂರ್ವದ ಈ ಕಾಪ್ಯಾನಂದರಿಂದ, ಪಶ್ಚಿಮದ ಈ ಗೋವಿಂದ ಪೈ ಅವರ ವರೆಗಿನ ೧೦೦ ಜನ ಜೀವಿತರ ವಿವಿಧ ಕೃತಿ, ವ್ಯಕ್ತಿ ಪರಿಚಯಗಳನ್ನೂ ಒಂದೇ ಕಡೆಗೆ ಕಾಣಬೇಕೆಂದಿದ್ದರೆ, ಶಿಕ್ಷಕರಿಗೆ ಬೆಂಬಲ ನೀಡಲು ಇಂದೇ ಬರೆಯಿರಿ. ವಿದ್ಯಾರ್ಥಿಗಳಿಗೆ ಅಂಚೆ ವೆಚ್ಚ ಉಚಿತ.

ಶಿಕ್ಷಕರಿಲ್ಲ ಬೆಂಬಲವಿಲ್ಲ ನೀವೆ ತಕ್ಕೊಳ್ಳಬೇಕಾಗಿ ವಿನ್ನಹ.

ಭಾರತೀ ಸಾಹಿತ್ಯ ಭಂಡಾರ ಯರನಾಳ.

ಅಂಚೆ:— ಮುನಗೋಳಿ. ಜಿ:— ವಿಜಾಪುರ.

CONTRIBUTE LIBERALLY

ON

FLAG DAY

(DECEMBER 7)

FOR THE WELFARE OF EX-SERVICEMEN

AND THEIR FAMILIES

ಸೋಲ್ ಮೆನ್ಯುಫೆಕ್ಚರರ: ಡ್ರೋ. ಎಚ್. ಎಲ್. ಬಾಟಲೀವಾಲಾ ಸನ್ಸ್ ಎಂಡ್ ಕಂ. ಲಿ.

೨ ಬಾಟಲೀವಾಲಾ ಬಿಲ್ಡಿಂಗ್, ೪೩ ಬಿ. ಪೊರ್ತುಗೀಜ್ ಚರ್ಚ್ ಸ್ಟ್ರೀಟ್,

Tele. Add. "CALVASHABAD" ೦ ದಾದರ, ಬಾಂಬೆ ೨೮.

ಮಂಗಳೂರು

ಸ್ಕೌಟಿಂಗ್ ಮತ್ತು ರೋಟರಿ — ಮಂಗಳೂರು ರೋಟರಿ ಕ್ಲಬ್ಬಿನ ಸಭೆಯು ತಾ. 24ರಲ್ಲು ರಾತ್ರಿ ಸಿ. ಪಿ. ಸಿ. ಸಭಾ ಭವನದಲ್ಲಿ ಶ್ರೀ. ಪಿ ಆರ್. ರಂಗನಾಥ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ವಿಶ್ವನಾಥ ಕಾಮತರು ಗತಸಭೆಯ ವರದಿಯನ್ನೊಪ್ಪಿಸಿದರು. ಮುದ್ರಾಸು ಸ್ಕಾಯಿತೀಯ ಸ್ಕೌಟ್ ಓರ್ಗನೈಸಿಂಗ್ ಕಮಿಶನರ್ ಶ್ರೀ. ಜೆ. ವಿ. ಮುತ್ತಯ್ಯನವರು ಕಾಲೋಚಿತ ಮಾತುಗಳನ್ನಾಡುತ್ತಾ ಸ್ಕೌಟಿಂಗ್ ಮತ್ತು ರೋಟರಿ ಚಳವಳಿಗಳೆರಡೂ ಅಂತಾರಾಷ್ಟ್ರೀಯ ಜಳವಳಗಳಾಗಿದ್ದು ನಿಸ್ವಾರ್ಥ ಸೇವೆಯೇ ಇವುಗಳ ಧ್ಯೇಯವಾಗಿದೆ ಎಂದರು. ರೋಟರಿ ಕ್ಲಬ್ಬಿನವರೂ ತಮ್ಮ ನೇತೃತ್ವದಲ್ಲೊಂದು ಸ್ಕೌಟ್ ದಳವನ್ನು ಸ್ಥಾಪಿಸಬೇಕೆಂದರು.

ಪ್ರಾಂತೀಯ ಅಸಿಸ್ಟಂಟ್ ಕಮಿಶನರ್ ಶ್ರೀ. ಪಿ. ಎಸ್. ಪಿ. ರೆನುಣಿಕಾರಿಕಾರ್ರವರು ತಮ್ಮ ಭಾಷಣದಲ್ಲಿ ನಗು ಮುಖದಿಂದ ಜೀವನದ ಸಿಹಿಕಹಿಗಳನ್ನೆದುರಿಸುವುದೇ ಸ್ಕೌಟಿನ ಜೀವನವಾಗಿದೆ ಎಂದರು. ಬಳಿಕ ಜರಗಿದ ವಿಚಾರವಿನಿಮಯದಲ್ಲಿ ಶ್ರೀಸಗಳಾದ ಜಿ. ಸೋಮಶೇಖರ ರಾವ್, ಕೆ. ವಿಶ್ವನಾಥ ಕಾಮತರು ಭಾಗವಹಿಸಿದರು.

ಸಿ ಎಂಡ್. ಟಿ. ನೌಕರರ ರ್ಯಾಲಿ- ಆಂಜೆ ಮತ್ತು ತಂತಿ ನೌಕರರ ಕೆಡರೇಶನ ಸಭೆಯನು ಪರ್ಯಂತಿಯನ್ನಾಚರಿಸಲು ತಾ. 24ರಲ್ಲು ಸಾಯಂಜೆ ಮಂಗಳೂರು ಹೀಲ್ ಮೋರಿಸ್ಸ್ ಫೀಸಿನಲ್ಲಿ ಸ್ಥಳೀಯ ಆಂಜೆ ಮತ್ತು ತಂತಿ ಇಲಾಖಾ ನೌಕರರ ಸಾಮೂಹಿಕ ರ್ಯಾಲಿಯೊಂದು ಶ್ರೀ ಇ. ಎ. ಸಾಲ್ಡಾಂಹರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ತಾಲೂಕ್ಯಧರ್ಶಿ ಶ್ರೀ ಕೆ. ಪಿ. ಆಚಾರ್ಯ ರಂದ ಸ್ವಾಗತಭಾಷಣಗಳಾಗಿ ಸಭೆಯ ಕಾರ್ಯೋಚಿತ ಭಾಷಣಗಳಾದುವು. ಬಳಿಕ ಆಂಜೆ ತಂತಿ ನೌಕರರಿಗೆ ಸಂಬಂಧಿಸಿದ ಹಲವು ನಿರ್ಣಯಗಳಾದುವು.

ಹ್ರೊ. ಭಾಸ್ಕರನ್ನರ ಭಾಷಣ— ಮದ್ರಾಸು ವಿಶ್ವವಿದ್ಯಾನಿಲಯದ ರಾಜಕೀಯ ವಿಭಾಗದ ಪ್ರಧಾನ ಪ್ರಧ್ಯಾಪಕರಾದ ಹ್ರೊ ಪೆಸರ್ ಶ್ರೀ ಆರ್ ಭಾಸ್ಕರನ್, ಅವರು ತಾ. 25ರಲ್ಲಿ ಸರಕಾರೀ ಆರ್ಟ್ಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರನ್ನುದ್ದೇಶಿಸಿ ಭಾಷಣಮಾಡಿದರು. ಸಮಾಜವಾದವು ಇಂದಿನ ಜನಾಂಗದ ರಾಜಕೀಯದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಭಾರತದಲ್ಲಿ ಸಮಾಜವಾದಿ ಪಾಡರಿಯ ಸಮಾಜವನ್ನು ರಚಿಸಬೇಕೆಂಬ ಗುರಿಯನ್ನಿಟ್ಟುಕೊಳ್ಳಲಾಗಿದೆ. ಇಂತಹ ಸಮಾಜವ ರಚನೆಯನ್ನು ಯಾವ ರೀತಿಯಲ್ಲಿ ಸಾಧಿಸಬಹುದೆಂಬುದನ್ನು ವಿವಿಧ ದೃಷ್ಟಿಯ ಜನರು ಹಲವು ರೀತಿಯ ಸೂಚನೆಗಳನ್ನೀಯುತ್ತಾರೆ ಎಂದು ಉದಾಹರಣೆಗಳ ಸಹಿತ ವಿವರಿಸಿ, ಈ ಸಮಾಜವನ್ನು ವ್ಯಾವಹಾರಿಕವಾದ ರೀತಿಯಲ್ಲಿ ಬಗೆಹರಿಸಬೇಕಾಗಿದೆ ಎಂದರು. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಟಿ. ಕೆ. ಲಕ್ಷ್ಮಣನ್ ರವರು ಸ್ವಾಗತಭಾಷಣಮಾಡಿದರು. ಕಾಲೇಜ್ ಯೂನಿಯನ್ ಅಧ್ಯಕ್ಷ ಶ್ರೀ ರಾಮಚಂದ್ರ ಶೇಣರು ಧನ್ಯವಾದವಿತ್ತರು.

ನಗರ ಸಭಾಪತಿ ಶ್ರೀ ಅಡಿಗರಿಗೆ ಸತ್ಕಾರ ಕೂಟ — ದಿನಾಂಕ ೨೩ರಂದು ಮಂಗಳೂರು ನಗರಸಭಾಧಿಪತಿಗಳಾಗಿ ದ್ವಿತೀಯ ಬಾರಿ ಆಯ್ಕೆ ಹೊಂದಿರುವ ಶ್ರೀ ಕೆ. ಸೂರ್ಯನಾರಾಯಣ ಅಡಿಗರಿಗೆ ಎರಡು ಸತ್ಕಾರಕೂಟಗಳು ಏರ್ಪಡಿಸಲ್ಪಟ್ಟಿದ್ದವು. ಒಂದು ಕರ್ನಾಟಕ ಬ್ಯಾಂಕಿನ ಪ್ರಧಾನ ಕಚೇರಿಯಲ್ಲಿ ಜರಗಿದರೆ, ಇನ್ನೊಂದು ಬಿಜ್ಜೈಯಲ್ಲಿ ನಡೆಯಿತು.

ಬ್ಯಾಂಕಿನ ದೈರೆಕ್ಟರರೆಲ್ಲೂಬ್ಬರಾದ ಶ್ರೀ ಅಡಿಗರು ಎರಡನೇ ಬಾರಿ ನಗರ ಸಭಾಧಿಪತಿಗಳಾಗಿ ಆಯ್ಕೆ ಹೊಂದಿದುವಕ್ಕೆ ಶ್ರೀಸಗಳಾದ ಪಿ. ರಾಮಚಂದ್ರ ರಾವ್, ಎಸ್. ನರಸಪ್ಪಯ್ಯ ಎಂ. ಎಲ್. ಸಿ., ಮೊದಲಾದವರು ಅಭಿನಂದಿಸಿದರು.

ಬಿಜ್ಜೈಯಲ್ಲಿ ಡಾ. ಸಿ. ಮಹಾಸ್ಯರ ಔಷಧಾಲಯದಲ್ಲಿ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಾಮನರ ಸ್ವಾಗತಾ ನಂತರ ಶ್ರೀಗಳಾದ ಮಹಾಸ್ಯ, ಚಂದ್ರಶೇಖರ್, ನರಸಿಂಹ ರೈ ಮೊದಲಾದ ವರು ಶ್ರೀ ಅಡಿಗರು ಪುನಃ ನಗರಾಧಿಪತಿ ಗಳಾಗಿ ಆಯ್ಕೆಯಾಗಿರುವುದಕ್ಕೆ ತಮ್ಮ ಸಂತೋಷ ವನ್ನು ಸೂಚಿಸಿದರು.

ಶ್ರೀ ಅಡಿಗರು ತಾವು ಕಾಂಗ್ರೆಸು ಸೇರಲು ಕಾರಣ ವಿವರಿಸುತ್ತಾ ಒಂದು ಪಕ್ಷದ ಆಶ್ರಯದಲ್ಲಿ, ಸ್ವತಂತ್ರವಾಗಿರುವುದಕ್ಕಿಂತ ಹೆಚ್ಚು ಕಾರ್ಯಸಾಧಿಸಬಹುದೆಂದರಲ್ಲದೆ, ತಮಗೆ ತೋರಿಸಿದ ಗೌರವಾದರಗಳಿಗೆ ಕೃತಜ್ಞತೆಯನ್ನರ್ಪಿಸಿದರು. ಅಧ್ಯಕ್ಷರಭಾಷಣ, ಮತ್ತು ಶ್ರೀ ಕೆ. ವಾಮನರ ಧನ್ಯವಾದದೊಂದಿಗೆ ಸಭೆಯು ಕೃತಾಯಿತು.

ಬ. ಕ.ದಲ್ಲಿ ಮಕ್ಕಳ ಪ್ರೌಢಮ ಪುಸ್ತಕಾಲಯ— ದಿನಾಂಕ ೨೩ರಂದು ಮಂಗಳೂರು ಸೇವಾಸಮಾಜದ ಅಧ್ಯಕ್ಷೆಯ ರಾದ ಶ್ರೀಮತಿ ರಾಜಲಕ್ಷ್ಮಿ ರಾಜಾರಾಮ ರವರಿಂದ ದ. ಕ. ಜಿಲ್ಲೆಯಲ್ಲೇ ಪ್ರಥಮ ವಾದ ಮಕ್ಕಳ ಪುಸ್ತಕಾಲಯವೊಂದು ಮಂಗಳೂರಿನ ಬಾವಟೆ ಗುಡ್ಡೆಯಲ್ಲಿ ನಗರ ಸಭೆಯ ಕಟ್ಟಡದಲ್ಲಿ ಉದ್ಘಾಟಿಸಲ್ಪಟ್ಟಿತು.

೫೦೦ ರೂ. ಮೊತ್ತಕ್ಕಿಂತಿರುವ ಈ ಗ್ರಂಥಾಲಯದಲ್ಲಿ ೧೨ ವರುಷ ಪ್ರಾಯದ ಮಕ್ಕಳು ಓದುವರೇ ಪುಸ್ತಕಗಳು ಆಯೆಗೊಳ್ಳಲ್ಪಟ್ಟಿವೆ. ಪುಸ್ತಕಾಲಯವು ಹಿಂದಿ, ಇಂಗ್ಲೀಷ್ ಕನ್ನಡ ಈ ಮೂರು ಭಾಷೆಗಳ ಪುಸ್ತಕಗಳನ್ನೊಳಗೊಂಡಿದೆ. ಜಿಲ್ಲೆಯ ಬೇರೆ ಬೇರೆ ಕಡೆ ಇರು ಉಪ ಗ್ರಂಥಾಲಯ ಗಳಿಗೂ ಈ ಪ್ರಧಾನ ಪುಸ್ತಕಾಲಯವನ್ನು ಸಾಯಂಕಾಲ ಳಿರಿಂದ ೭ರ ತನಕ ತೆರೆದಿಡಲ್ಪಡುತ್ತಿದೆ. ಇದಕ್ಕೆ ಹೊಸ ಕಟ್ಟಡವನ್ನು ರಚಿಸುವ ಮತ್ತು ಗ್ರಂಥಾಲಯವನ್ನು ವಿಸ್ತರಿಸುವ ಯೋಜನೆಯಿದೆಯೆಂದೂ, ಅದಕ್ಕೆ ನಾಗರಿಕರೂ ಮಕ್ಕಳ ಹಿರಿಯರೂ ಧನಸಹಾಯವಿತ್ತು ಸಹಕರಿಸಬೇಕೆಂದೂ ಸ್ಥಳೀಯ ಗ್ರಂಥಾಲಯ ಸಮಿತಿಯ ಅಧ್ಯಕ್ಷ ರಾದ ಶ್ರೀ ಎಂ. ಎಸ್. ಏಕಾಂಬರರಾಯರು ತಮ್ಮ ಭಾಷಣದಲ್ಲಿ ತಿಳಿಸಿದರು.

ಮುಂದಿನ ಜನಾಂಗವಾದ ಇಂದಿನ ಮಕ್ಕಳು ಸತ್ಪ್ರಜೆಗಳಾಗಿ ಬೆಳೆಯಲು ಇಂತಹ ಪುಸ್ತಕಾಲಯಗಳು ಸಹಕಾರಿಗಳಾಗಿವೆ. ಭಾರತದಲ್ಲಿ ಸಮ ಇಂತಹ ಯೋಜನೆಗಳು ನಡೆಯು ತ್ತಿರುವುದು ಸಂತೋಷದಾಯಕವೆಂದು ಶ್ರೀಮತಿ ರಾಜಾರಾಮರು ತಮ್ಮ ಉದ್ಘಾಟನಾ ಭಾಷಣದಲ್ಲಿ ತಿಳಿಸಿದರು.

ಶ್ರೀಮತಿ ಶಾಂತೇರಿ ಪ್ರಭುಗಳು ಧನ್ಯವಾದವಿತ್ತರು.

ದ. ಕ. ಜಿಲ್ಲೆಗೆ ಆರು ನೀರಾವರಿ ಯೋಜನೆಗಳ ಮಂಜೂರಾತಿ:— ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಇದೇ ದಿನಾಂಕ ೨೭ರಂದು ನ. ಕ. ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜರಗಿತು. ಹಲವಾರು ಜನ ಪ್ರತಿನಿಧಿಗಳು ಆಗಮಿಸಿದ್ದ ಈ ಸಭೆಯು ದ. ಕ. ಜಿಲ್ಲೆಗೆ ಮಂಜೂರಾಗಿರುವ ಆರು ನೀರಾವರಿ ಯೋಜನೆಗಳ ಬಗ್ಗೆ ಚರ್ಚಿಸಿತು.

ಈ ಆರು ನೀರಾವರಿಗಳು ಸಾಧಾರಣ ಹದಿನೈದುವರೆ ಲಕ್ಷ ವೆಚ್ಚದಿಂದ ನಿರ್ಮಿಸಲ್ಪಡುತ್ತವೆಯೆಂದೂ, ಇದರಿಂದಾಗಿ ಸಾಧಾರಣ ೨೮೨೫ ಎಕ್ರೆ ಜಮೀನು ಸಾಗುವಳಿಗೆ ಯೋಗ್ಯವಾಗುವುದೆಂದೂ ತಿಳಿದುಬರುತ್ತವೆ. ಆರು ಯೋಜನೆಗಳು ಗುರಿಪುರ ನದಿಗೆ ಆಣೆಕಟ್ಟು ಮತ್ತು ನೀರಾವರಿಕಾಲುವೆಯೊಂದು, ಬಂಟ್ವಾಳದಲ್ಲೊಂದು, ಬಂಡಸ್ತ ಹುತ್ತೂರಿನ ಕೆಂದಡ್ಡ ಹೊಳೆಗೊಂದು ಆಣೆಕಟ್ಟು, ಕರ್ಕಾಲಿನ ಲ್ಲೊಂದು ಉಪ್ಪುನೀರು ತಡೆಯಲು ಕಟ್ಟು, ಉದ್ಯಾವರ ಹೊಳೆಗೊಂದ ಆಣೆಕಟ್ಟು ಮತ್ತು ಅಜಾಸಿರು ಗ್ರಾಮದ ಪರ್ಯೋತ್ತ ತೋಡಿಗೊಂದು ಕಟ್ಟು ಮತ್ತು ಕಾಲುವೆ ರಚನೆಯನ್ನು ಒಳಗೊಂಡಿದೆಯೆಂದು ಎಕ್ಸ್‌ಕ್ಯೂಟಿವ್ ಇಂಜಿನಿಯರ್ ಶ್ರೀ ಎ. ವಾಮನ ರಾಯರು ತಿಳಿಸಿದರು.

ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮರು ಈ ಏರಿನ ಸಮಾಲೋಚನೆಯನ್ನು ಪಡೆಯುವುದರ ಸರಕಾರಿ ದುಕುಂ ಮೇರೆಗೆ ತೆರಬೇಕಾದ ಸಮಸ್ತ ಶುಲ್ಕ ಹಾಗೂ ಧನಸಹಾಯವನ್ನು ತಿಳಿಸಿದರು. ಇವಕ್ಕಾಗಿ ಪಟ್ಟಾದಾರರೆ ಸಮಾಯ ಅವರ ಆಸ್ತಿಗೆ ಪರಿಯಬೇಕೆಂದೂ ಸೂಚಿಸಿದರು.

ಇನ್ನೂಗೊಡನೆ ಕೆಲವು ಚಿಕ್ಕ ಚಿಕ್ಕ ವಿಷಯಗಳು ಚರ್ಚಿಸಲ್ಪಟ್ಟು ಮಂಜೂರಾತಿಯನ್ನು ಪಡೆಯಿವು. ದ್ವಿ. ಪಂ. ಪ್ರಾಜೆಕ್ಟಿನಲ್ಲಿ ೧:9 ಕೋಟಿ ವೆಚ್ಚದ ಹಾಲಾಡಿ ಜಲಾಶಯ ಯೋಜನೆಯು ಸೇರಿಸಲ್ಪಡಬಹುದೆಂದೂ ತಿಳಿದು ಬರುತ್ತದೆ.

ಕೊನೆಗೆ ಕಲೆಕ್ಟರರು ತಮ್ಮ ಸಹಕಾರವನ್ನೀಯಬೇಕೆಂದು ವಿನಂತಿಸಿಕೊಂಡರು.

ಉಡ್ಪಿ ಡಿ. ಮುಂ. ಕೋರ್ಟಿನಲ್ಲಿ

O. S. No. 140/1955.

ಜಾನಕಿ ಅಮ್ಮ — ಅರ್ಜಿದಾರಳು

ಮತ್ತು

ಸೀತಾರಾಮ ಉಪಾಧ್ಯಾಯ. ದಾಸ ಉಪಾಧ್ಯಾಯರ ಮಗ, ಉಡ್ಪಿ ತಾಲೂಕು ಯೇಣಗುಡ್ಡೆ ಗ್ರಾಮ — ಎದ್ರಿ

ಎದ್ರಿಗೆ ವ, ಇತರೆ ಸಮಸ್ತರಿಗೆ ಸಹಾ.

ನೀವ್ಯಂಡ ಆರ್ಜಿಯ ಅರ್ಜಿದಾರಳ ಗಂಡ ವ, ಎದ್ರಿಯ ಸುಗೆ ತಾ೨೫—೧೦—೫೫ರಲ್ಲಿ ಹಾಲಿ ಬೆಳಗಾಂ ನಲ್ಲಿ ಮೃತಪಟ್ಟಿ ನೋಟಾಲ ಕೈಸ್ಥ ಉಪಾಧ್ಯಾಯರಿಗೆ ಅರ್ಜಿದೆಯಲ್ಲಿ ಕಾಣಿಸಿದಂತೆ ಬಹಾ ಋಣಗಳನ್ನು ವಸೂಲುಪಡೆಯಲು ವರೇ ಅತನ ಮಬ್ಬಿ ವಾರಸುದಾರಳಾದ ತನಗೆ ಸರ್ಟೀಫಿಕೇಟುಕೊಡಬೇಕಾಗಿ ಅರ್ಜಿದಾರಳು ಮಾಡಿದ ಮೇರಿಗೆ ಅರ್ಜಿಯು ತಾ. 7-12-55ಕ್ಕೆ ತನ್ನಿಗೆ ಇಡೋಣಾಗಿಯದೆ. ಅಕ್ಷೇಪವುಳ್ಳವರು ತಮ್ಮ ಅಕ್ಷೇಪಣೆಗಳನ್ನು ಸದ್ರಿ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಈ ಕೋರ್ಟಿನುಂದೆ ಹಾಜ್ರಾಗಿ ಜ್ಞಾಪಿಸಿರು ಮಾಡಿಕೊಳ್ಳಲು ತಪ್ಪಿದ್ರೆ ಸದ್ರಿ ಅರ್ಜಿಯು ಯೇಕಪಕ್ಷವಾಗಿ ವಿಚಾರಣೆಸಲ್ಪಡುವುದು—

B. Vasudeva Rao
Counsel for Petr.

UDIPI 26—11—55.

TENDER NOTICE

Sealed tenders are invited for two sets of repair works, at the Sri Mookambika Temple of Kollur, S. K., so as to reach the undersigned before 29—12—1955. Details of work and specifications of each set may be had, on application with a fee of Rs. 2/- per set. Earnest money of Rs 400/- per set.

Executive Officer,
Sri Mookambika Temple.
Kollur Post (S. Kanara),
Kollur, 24-11-'55.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE POPULAR INSURANCE CO.,LTD.
"POPULAR BUILDINGS" **MANGALORE-1**

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ಬರೆಯಿರಿ:—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ದ. ಕ. ಜಿಲ್ಲಾ ಬೋರ್ಡು ಸೆಬ್ಬೆ— ತಾ. ೨೬ರಲ್ಲಿ ಆಪಾಂಪ್ಟ ಅಧ್ಯಕ್ಷೆ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೋರ್ಡಿನ ಸಾಮಾನ್ಯ ಮತ್ತು ಸ್ಥಾಥಮಿಕ ಶಿಕ್ಷಣ ಖಾತೆಗಳ 1955-56ರ ತಿದ್ದಿದ ಮತ್ತು 1956-57ರ ಅಂದಾಜು ಪಟ್ಟಿಗಳು ಸರ್ವಾನುಮತದಿಂದ ಸುಂಜೂರುಮಾಡಲ್ಪಟ್ಟವು.

ಸಾಮಾನ್ಯ ಖಾತೆಯ 1956-56ನೆ ತಿದ್ದಿದ ಮುಂಗಡ ಪತ್ರದ ನೀರೆಗೆ ವರ್ಷಾಂತ್ಯಕ್ಕೆ ರೂಪಾಯಿ 2,00,600 ಕೊರತೆ ಉಳಿಯ ಬಹುದು. 1956-57ರ ಮುಂಗಡಪತ್ರದಂತೆ 1956-57ನೆ ವರ್ಷಾಂತ್ಯಕ್ಕೆ ರೂ. 3,95,700 ಕೊರತೆಯಾಗುವ ಸಂಭವವಿದೆ. ಈ ಮುಂಗಡ ಪತ್ರಗಳ ಆಂದಾಜುಸಮಾಯವಾಗ ಈ ವರ್ಷದ ಮತ್ತು ಬಜೆಟ್ ವರ್ಷಗಳ ಲ್ಲಿ ಸರಕಾರದಿಂದ ಬರಬೇಕಾದ ರೂಪಾಯಿ 2.5 ಲಕ್ಷ ಪಪ್ಪು ಭೂತೆರಿಗೆ ಮೇಲಣ ಸರ್ಚಾರ್ಜು ಕೂಡಾ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಸ್ಥಾಥಮಿಕ ಶಿಕ್ಷಣಖಾತೆಯ ತಿದ್ದಿದ ಮುಂಗಡಪತ್ರದಂತೆ ವರ್ಷಾಂತ್ಯಕ್ಕೆ ರೂ. 99,510 ಕೊರತೆ ಬೀಳುವ ಸಂಭವವಿದೆ. 1956-57ನೆ ಸುಂಗಡ ಪತ್ರದಂತೆ ವರ್ಷಾಂತ್ಯಕ್ಕೆ ರೂಪಾಯಿ 2,59,230 ಕೊರತೆ ಬೀಳುವ ನೀರೀಕ್ಷೆಯಿದೆ. ಮುಂಗಡ ಪತ್ರಗಳ ಚರ್ಚೆಯಲ್ಲಿ ಶ್ರೀಗಳಾದ ಕೆ. ಕೆ. ಸೆಟ್ಟಿ, ಎನ್. ಎಸ್. ಸರಮೇಶ್ವರಯ್ಯ, ಡಾ| ಕೆ. ನಾಗಪ್ಪ ಆಳ್ವ, ಎ. ಕೃಷ್ಣ ಸೆಟ್ಟಿ, ಡಾ| ಬಿ. ನಾರಾಯಣರಾವ್, ಬಿ. ಎಸ್. ಭಾಸ್ಕರ ರೈ, ಎನ್. ಕುಂಞಾಬು ಸಂಬಿಯಾರರೇ ಮೊದಲಾದವರು ಭಾಗವಹಿಸಿದ್ದರು. ಅಧ್ಯಕ್ಷ ಹೆಗ್ಡೆಯವರು ಉತ್ತರವೀಯುತ್ತಾ, ಸಾಕರ್ಯಗಳನ್ನು ಒದಗಿಸುವಾಗ ಜಿಲ್ಲೆಯ ದೃಷ್ಟಿಯಿಂದ ಕಾರ್ಯಕ್ರಮ ಕೈಕೊಳ್ಳಬೇಕಾಗಿದೆ ಎಂದು ಸೂಚಿಸಿದರು. ಜಿಲ್ಲಾ ಬೋರ್ಡಿನ ಆದಾಯ ಹೆಚ್ಚಿಸುವ ಬಗ್ಗೆ ಮೋಟಾರು ವಾಹನ ತೆರಿಗೆ, ಮತ್ತಿತರ ರೀತಿಯಲ್ಲಿ ಸಹಾಯ ಹೆಚ್ಚು ಒದಗಿಸಬೇಕೆಂದು ದಕ್ಷಿಣ ಕನ್ನಡ, ಉಲಟಾರು, ನೀಲಗಿರಿ ಜಿಲ್ಲೆಗಳ ಪರವಾಗಿ ಸರಕಾರದ ಮುಂದೆ ವಾದಿಸಿದ್ದೇನೆ. ಉಪಾಧ್ಯಾಯರನ್ನು ಅವರ ವಾಸ್ತವ್ಯದ ಪತ್ರಿರಣಾಸುವಂತೆ ವರ್ಗಮಾಡಲು ಪ್ರಯತ್ನಿಸಲಾಗಿದೆ ಎಂದರು.

ನಂತರ ವಿಜಂಡದಲ್ಲಿ ಉಂಡಿ ಇತರ ಕಾರ್ಯಕ್ರಮಗಳ ಪರಿಶೀಲನೆ ನಡೆಯಿತು. ಶ್ರೀ ಬಿ. ಎಸ್. ಭಾಸ್ಕರ ರೈಗಳ ಸೂಚನೆ ಮೇರೆಗೆ ಸ್ಥಳೀಯ ಗ್ರಾಮಸ್ಥರು ಕಟ್ಟಿಡ ಸಲಕರಣೆ ಇತ್ಯಾದಿ ಒದಗಿಸಿ ಕೊಟ್ಟಲ್ಲಿ ಕಾರ್ಕಳ ತಾಲೂಕಿನ ಬೆಳ್ಮಣ್ಣು ಕೇಂದ್ರದಲ್ಲಿ ಹ್ಯಾಸ್ಟೂಲ್ ತೆರೆಯಬಹುದೆಂದಾಯಿತು. ಶ್ರೀ ಎಮ್. ಎಸ್. ಹೆಗ್ಡೆಯವರ ಸೂಚನೆಯಂತೆ, ಗ್ರಾಮಸ್ಥರು ಕಟ್ಟಿಡ ಹಾಗೂ ಇತರ ಸಲಕರಣೆಗಳನ್ನು ಒದಗಿಸಿದ್ದಲ್ಲಿ ಸುಂಪಾಪುರ ತಾಲೂಕಿನ ಶಂಕರನಾರಾಯಣದಲ್ಲಿ ಹ್ಯಾಸ್ಟೂಲ್ ತೆರೆಯುವ ನಿರ್ಣಯವಾಯಿತು. ಬೆಳ್ಳೂರು, ಮಂಗಲಪಾಡಿ, ಕುಂಬಳೆ ಮತ್ತು ಪೈವಳಿಕ ಹಾ. ಎ. ಶಾಲೆಗಳನ್ನು ಹಿರಿಯ ಬುನಾದಿ ಶಾಲೆಯೂಗಿಪರಿವರ್ತಿಸಲು ನಿರ್ಧಾರವಾಯಿತು. ಕೊಳತ್ತೂರಲ್ಲಿ ಒಂದು ಹೆರಿಗೆ ಮತ್ತು ಶಿಶು ಸಂಗೋಪನಾ ಕೇಂದ್ರ ಮತ್ತು ಗ್ರಾಮಾಸ್ತ್ರೀತೆರೆಯಬೇಕೆಂಬ ಶ್ರೀ. ಕೆ. ಗಣ್ಪ ಶರಾಯರ ನಿರ್ಣಯ ಮಂಜೂರಾಯಿತು.

ಶ್ರೀಗಳಾದ ಫೆಲಿಕ್ಸ್ ಡಿಸೋಜಾ, ಎಸ್. ಕಂಳಾಂಬು ಸಂಬಿಯಾರ್, ಎಸ್. ಉಪೇಂದ್ರ ನಾಯಕ್, ಎ. ಪದ್ಮನಾಭ ಸೆಟ್ಟಿ, ಕೆ ವೇಣು ಗೋಪಾಲ ನಾಯಕ್ ಇವರ ನಿರ್ಣಯಗಳ ಮೇರೆಗೆ ಕೊಡಪೂರು—ತೊಟ್ಟಂ ರಸ್ತೆ ಮುಕ್ತು ಕೊಡಪೂರು-ಕೆಳಾರ್ಕಳಬೆಟ್ಟು ಬಡಾನಿಡಿಯೂರು ರಸ್ತೆ, ಕುಂಡಂಗೋಳಿ ಮತ್ತು ಆಲೆಬ್ಬಗಳ ನಡುವಿನ 4 ರಸ್ತೆಗಳು, ಆಯೆಲ್ಲಾರ್ ಮತ್ತು ಕಳ್ಳಿಯೆಟು ಶಾಲಾ ಕಟ್ಟಡಗಳ ರಚನೆಗೆ ಮತ್ತು ಬಾರೆಗ್ರಾಮದ ಬೋರ್ಡು ಶಾಲೆಗೆ ಹೊಸ ಕಟ್ಟಡ ರಚನೆ, ನಂದಾವರ ಸಂಕ, ಪಡುಬಿದ್ರಿ ಬೋರ್ಡು ಹಾ. ಎ ಶಾಲಾವಿಸ್ತರಣಾ ಕಟ್ಟಡ ರಚನೆ ಮೊದಲಾದ ಅಭಿವೃದ್ಧಿ ಕಾರ್ಯಗಳಿಗೆ ಸೇಕ ಶಾ 15ರಂತೆ ಅಥವಾ ನಿರ್ಣಯಗಳಲ್ಲಿ ಹೇಳಲಾದ ಪರಿಮಿತಿಗಳೊಳಗೆ ಯಾವುದು ಕಡಿಮೆಯೋ ಆ ಪ್ಪು ಧನ ಸಹಾಯವನ್ನೊದಗಿಸಲು ಶರಾವಾಯಿತು.

ಕಾರ್ಕಳ: ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ತಾ. ೨೫ರಲ್ಲಿ ಬೇಳ್ಗೆ ಸೇರಿದ ಗಾವಾಭ್ಯುದಯ ಮತ್ತು ರೈತ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ ಜಿಲ್ಲಾ ಕಲೆಕ್ಟರ ಶ್ರೀ ಎಮ್. ಜಿ. ರಾಜಾರಾಮರು ಭಾಷಣ ಮಾಡುತ್ತಾ ಸ್ವತಂತ್ರ ಭಾರತದ ಶ್ರೇಯಸ್ಸಿಗೆ ಬಡವರು, ಬಲ್ಲಿದರು ಎಂದೆನ್ನದೆ ಸರ್ವರೂ ಮುಡಿಯಬೇಕೆಂದರು. ಸಮ್ಮೇಳನದ ಅಂಗವಾಪ ಪ್ರದರ್ಶನವನ್ನು ದ. ಕ. ಜಿಲ್ಲಾ ಬೋರ್ಡು ಅಧ್ಯಕ್ಷೆ ಡಾ| ಕೆ. ಕೆ. ಹೆಗ್ಡೆಯವರು ಉದ್ಘಾಟಿಸುತ್ತಾ, ಈ ಪ್ರದರ್ಶನದ ಸಂಪೂರ್ಣ ಪ್ರಯೋಜನವನ್ನು ಗ್ರಾಮಸ್ಥರು ಪಡೆದು ಸ್ವಹಿತ ಸಾಧನೆಯೊಂದಿಗೆ ದೇಶ ಕಲ್ಯಾಣ ಸಾಧನೆಯಾಗಬೇಕೆಂದರು.

ಆರಂಭದಲ್ಲಿ ಪ್ರದರ್ಶನ ಸಮಿತಿ ಅಧ್ಯಕ್ಷೆ ಶ್ರೀ ಆರ್. ಹರಿ ಶೆಣೈಯವರು ಸ್ವಾಗತ ಭಾಷಣ ಮಾಡಿದರು. ಪ್ರದರ್ಶನದಲ್ಲಿ ಕೃಷಿ, ಗ್ರಾಮ ಕೈಗಾರಿಕೆ, ಪಶುಪಾಲನೆ, ಮೀನುಗಾರಿಕೆ, ಕೈಕೆಲಸ, ಕಲಾಕೃತಿ ಮೊದಲಾದ ಪ್ರದರ್ಶಿಕೆಗಳಿದ್ದುವು. ಬೋರ್ಡು ಹೈಸ್ಕೂಲಿನ ವಿಜಯಾ ಸ್ಕೌಟ್ ದಳದವರು ಮುಖ್ಯ ಅತಿಥಿಗಳಿಗೆ ಸಮಾರಂಭದ ಮೊದಲು ಗೌರವ ರಕ್ಷೆಯನ್ನಿತ್ತರು.

ಗ್ರಾಮಾಧಿನಾಯಕರ ಪರಿಷತ್ತು

ದ ಕ. ಜಿಲ್ಲೆಯ ತೃತೀಯ ವಲಯದ ಗ್ರಾಮಾಧಿನಾಯಕರ ಪರಿಷತ್ತು ತಾ. ೨೮ರಲ್ಲಿ ಸಂಜೆ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕೂಡಿದ್ದ ಸಾರ್ವಜನಿಕ ಸಭೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಪ್ರದರ್ಶನದಿಂದ ಕೊನೆಗೊಂಡಿತು. ಶ್ರೀ ಆರ್. ಹರಿ ಶೆಣೈಯವರು ಸ್ವಾಗತಭಾಷಣ ಮಾಡಿದ ಬಳಿಕ ಶ್ರೀ. ಪಿ. ಎ. ಜೈನಿಯವರು ಸಂದೇಶವಾಚನ ನುಡಿದರು. ಶ್ರೀ ಕೆ. ಶಿವರಾಮ ಕಾರಂತ ಮೊದಲಾದವರ ಭಾಷಣಗಳಾದುವು. ಹಾ. ಎ. ಕೆ. ಲಕ್ಷ್ಮೀನಾರಾಯಣ ರಾಯರು ಗ್ರಾಮನಾಯಕರ ಕಡೆಯಿಂದಲೂ ಶ್ರೀಗಳಾದ ಸದಾನಂದ ಕುಡುವ ಮತ್ತು ವಿ. ರಮಾಣ ರೆವರು ಸ್ವಾಗತ ಸಮಿತಿ ಹಾಗೂ ಸಮಾಜ ವಿಕಾಸಯೋಜನೆಯ ಕಡೆಯಿಂದಲೂ ಧನ್ಯವಾದಗಳನ್ನಿತ್ತರು. ಸಾಂಸ್ಕೃತಿಕ ಚಟುವಟಿಕೆ ಪ್ರದರ್ಶನಗಳಲ್ಲಿ ವಿಜಯಿಗಳಾವರಿಗೆ ಸಾಮಾಜಿಕ ಶಿಕ್ಷಣದ ಜಿಲ್ಲಾಧಿಕಾರಿ ಕುಮಾರಿ ವಿಶಾಲಾಕ್ಷಿಯನರು ಪ್ರಶಸ್ತಿ ಪತ್ರಗಳನ್ನಿತ್ತರು.

ಕನ್ನಡಿಕ ಸಂಘದ ಉದ್ಘಾಟನೆ: ಕಾರ್ಕಳ ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳ ಕರ್ನಾಟಕ ಸಂಘದ ಉದ್ಘಾಟನೆಯನ್ನು ಶ್ರೀ ಕೆ. ಶಿವರಾಮ ಕಾರಂತರು ನೆರವೇರಿಸಿದರು. ಶ್ರೀ ಉಗ್ರಾಣ ಕೃಷ್ಣರಾಯರು ಆಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್. ಆರ್. ಆಚಾರ್ಯರು ಸ್ವಾಗತ ಭಾಷಣಮಾಡಿದರು.

ಮಣಿಪಾಲ— ಇಲ್ಲಿಯ ಗ್ರಾಮಸೇವಾ ಪ್ರತಿಷ್ಠಾನ್ ಆಶ್ರಯದಲ್ಲಿ ತಾ. 15ರಲ್ಲಿ ಶ್ರೀಯು. ಎ. ಪೈಗಳವರ ನೇತೃತ್ವದಲ್ಲಿ ಕಟ್ಟಿಸಲಾದ ವಿದ್ಯಾರ್ಥಿನಿಲಯದ ಶ್ರೀ ರಾಮಕೃಷ್ಣ ಆದ್ವೈತ ಆಶ್ರಮದ ಅಧ್ಯಕ್ಷ ಶ್ರೀ ಮತ್ ಸ್ವಾಮಿ ಆನಂದಾನಂದ ಜೀ ಮಹಾರಾಜರು ಉದ್ಘಾಟಿಸಿದರು. ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಸ್ವಾಗತ ಭಾಷಣಮಾಡಿದರು. ಸ್ವಾಮಿಗಳವರು ಶ್ರೀ ರಾಮಕೃಷ್ಣರ ಭಾವ ಚಿತ್ರದ ಅನಾವರಣವನ್ನು ಕೂಡಾ ನೆರವೇರಿಸಿದರು. ಡಾ. ಟಿ. ಎಮ್. ಎ. ಪೈಗಳು ಧನ್ಯವಾದಗಳನ್ನರ್ಪಿಸಿದರು.

ಬೊಕ್ಕಾಡಿ—ಬೊಕ್ಕಾಡಿಗೆ ಸಮೀಪದ ದೊಡ್ಡಿಹಿತ್ಲು ಕೃಷ್ಣಪ್ಪ ಗೌಡ ಎಂಬವರಿಗೆ ಬೊಮ್ಮಣ್ಣ ಗೌಡ ಎಂಬವರು ಚೂರಿಯಿಂದ ಕವಿದು ಜಖಂಗೊಳಿಸಿರುವರಾಗಿ ತಿಳಿದು ಬರುತ್ತದೆ.

ಪಾದೆಬೆಟ್ಟು—ಸಮಾಜ ವಿಕಾಸ ಯೋಜನೆಯಂತೆ ಈಗಿನ ರಸ್ತೆಯಿಂದ ಪಾದೆಬೆಟ್ಟು ಶ್ರೀ. ಸುಬ್ರಹ್ಮಣ್ಯ ದೇವಸ್ಥಾನದ ವರೆಗೆ ರಚಿಸಲ್ಪಡುವ ರಸ್ತೆ ಕಾರ್ಯವನ್ನು ಈಚೆಗೆ ಶ್ರೀ. ನಡಿಗುತ್ತು ನಾರಾಯಣ ಸೆಟ್ಟರು ಉದ್ಘಾಟಿಸಿದರು. ರಸ್ತೆ ಕಾರ್ಯಾರಂಭಗೊಂಡ ಮುಂದೆ ಸಾಗುತ್ತಲಿದೆ.

ಫರಂಗಿಪೇಟೆ— ಸ್ಥಳೀಯ ಶ್ರೀ ರಾಮಾ ಹಾ. ಎ. ಶಾಲೆಯಲ್ಲಿ ಈಚೆಗೆ ದಿ. ಸಿ. ಜಿ. ದಾಸರಿಗೆ ಸಂಬಂಧಿಸಿದ ಚಲಚ್ಚಿತ್ರ ಪ್ರದರ್ಶನ ನಡೆಯಿತು. ಜಾಗತಿಕ ಆರೋಗ್ಯ ಸಂಸ್ಥೆಯ ಮಿಸ್. ಮಾರ್ಟ್ ಪೀಟರ್‌ಸನ್ ಮತ್ತು ಸುಪರ್ ವೈಸಿಂಗ್ ಪಬ್ಲಿಕ್ ಹೆಲ್ತ್ ಆಫೀಸರ್ ಡಾ|| ವಿ. ಹರಿಹರನ್ ಮತ್ತು ಪಬ್ಲಿಸಿಟಿ ಆಫೀಸರ್ ಶ್ರೀ. ವೆಂಕಟೇಶನ್‌ರವರು ಹಾಜರಿದ್ದು ಜನಜಾಗ್ರತಿಯನ್ನುಂಟು ಮಾಡಿದರು.

ಹಂಗಾರಕಟ್ಟೆ: ಸ್ಥಳೀಯ ಪ್ರೌಢ ಪ್ರಾಥಮಿಕ ಶಾಲಾ ಹಳೆವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಆ ಶಾಲಾ ನೂತನ ವಿದ್ಯಾರ್ಥಿಯ ಉದ್ಘಾಟನಾ ಸಮಾರಂಭವನ್ನು ಇದೇ ತಾ. 3ನೆ ಶನಿವಾರ ಸಂಜೆ 5-30 ಗಂಟೆಗೆ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಅವರು ನೆರವೇರಿಸುವರು. ಜಿಲ್ಲಾ ಬೋರ್ಡು ಅಧ್ಯಕ್ಷೆ ಡಾ| ಕೆ ಕೆ. ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

ಮೂಡುಬಿದ್ರೆ—ಇಲ್ಲಿಯ ಜೈನ ಪ್ರೌಢ ಶಾಲೆಯ ಸಥಾಂತ್ಯುತ್ಸವವು ಇದೇ ತಾ. 17ನೆ ಶನಿವಾರ ಸಂಜೆ 5½ ಗಂಟೆಗೆ ಮೂಲ್ಕಿ ಸರಕಾರಿ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಕೆ. ವಿಠಲ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಭಾಷಣ ಸ್ಪರ್ಧೆ— ಈ ಭಾರಿಯ ಮುದ್ರಾಸು ವಿಶ್ವವಿದ್ಯಾಲಯದ ಕನ್ನಡಭಾಷಣ ಸ್ಪರ್ಧೆಗೆ 36 ಕಾಲೇಜುಗಳಿಂದ 76 ಮಂದಿ ಭಾಗವಹಿಸಿದ್ದರು. ಅದರ ಫಲಿತಾಂಕ ಈ ರೀತಿ ಇದೆ: ಪ್ರಥಮ ಬಹುಮಾನ: ಶ್ರೀ ಜಿ. ಸುಬ್ಬರಾಯ, ಬಿ. ಎ; ಟ್ರೈನಿಂಗ್ ಕಾಲೇಜ್, ಮಂಗಳೂರು ದ್ವಿತೀಯ ಬಹುಮಾನ: ಶ್ರೀ ಲಿ. ಈಶ್ವರ ಭಟ್, ಸರಕಾರಿ ಕಲಾಶಾಲೆ, ಮಂಗಳೂರು. ತೃತೀಯ ಬಹುಮಾನ: ಕುಮಾರಿ ಬಿ. ನೀರದಾ, ಸರಕಾರಿ ಕಲಾಶಾಲೆ, ಮಂಗಳೂರು.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡಿಪೊಸಿಟ್ ವಾಲ್ಟ್

ಮಂಗಳೂರು—3.

ಹೊಸ ಪ್ರಯೋಗ

ಬಾಲ ವಾಚನಾಲಯಗಳಿಗೆ ಬೆಲೆ ಹೆಚ್ಚಿಸುವ ಗ್ರಂಥಗಳು.

ಕನ್ನಡ ಕಂದನು ಕಾಡಿಡುವ ಅಮೂಲ್ಯ ಕೃತಿಗಳು.

ಪ್ರಾಥಮಿಕ ಶಿಕ್ಷಕರಿಂದ ನಡೆಸಲ್ಪಡುವ, ಒಂದೇ ಒಂದಾದ ಸ್ವಾ. ಶಿಕ್ಷಕರ ಪ್ರೋತ್ಸಾಹ ನಾರ್ಥ ತೆರೆಪ ಸಮಿತಿಯಿಂದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೆಣೆದ

ಪುಟಚೆಂಡು-ನವಿತಾ ಸಂಕಲನ. ಭಾಗ-೧. ೧೩೪. ಭಾಗ-೨.೧೦೪ ಜನರ ಕವಿತೆಗಳು

ಆಟಕಲ್ಲು-ಕಥಾ ಸಂಕಲನ. ಭಾಗ-೧. ೪೦, ಭಾಗ-೨. ೪೭ ಜನರ ಕಥೆಗಳು.

ಭಾ-೧-೨ರಿಂದ ೪, ೨-೫ರಿಂದ ೭ ನಯೆ ಪೈಸೆ. ಬೆಲೆ ೧೫ ಆಣೆಯಂತೆ. ಉತ್ತರದಲ್ಲಿ ಬೇಂದ್ರೆ ಯರಿಂದ, ದಕ್ಷಿಣದ ಶ್ರೀ ಕುವೆಂಪು, ಪೂರ್ವದ ಶ್ರೀ ಕಾವ್ಯಾನಂದರಿಂದ, ಪಶ್ಚಿಮದ ಶ್ರೀ ಗೋವಿಂದ ಪೈ ಅವರ ವರೆಗಿನ ೪೦೦ ಜನ ಲೇಖಕರ ವಿವಿಧ ಕೃತಿ, ವ್ಯಕ್ತಿ ಪರಿಚಯಗಳನ್ನೂ ಒಂದೇ ಕಡೆಗೆ ಕಾಣಬೇಕೆಂದಿದ್ದರೆ, ಶಿಕ್ಷಕರಿಗೆ ಬೆಂಬಲ ನೀಡಲು ಇಂದೇ ಬರೆಯಿರಿ. ವಿದ್ಯಾರ್ಥಿಗಳಿಗೆ ಅಂಚೆ ವೆಚ್ಚ ಉಚಿತ.

ಶಿಕ್ಷಕರೆಲ್ಲ ಬೆಂಬಲನೀಡಿ ಸೇವೆ ತಕ್ಕೊಳ್ಳಬೇಕಾಗಿ ವಿನ್ನಪ.

ಭಾರತೀ ಸಾಹಿತ್ಯ ಭಂಡಾರ ಯರನಾಳ.

ಅಂಚೆ:— ಮನಗೋಳಿ. ಜಿ:— ವಿಜಾಪುರ.

CONTRIBUTE LIBERALLY

ON

FLAG DAY

(DECEMBER 7)

FOR THE WELFARE OF EX-SERVICEMEN

AND THEIR FAMILIES


೫೦ ವರ್ಷಗಳ ಜಗತ್ಪ್ರಸಿದ್ಧ ಶೀರ ವಿಚಲಿ ತೆ ಹೊನೆವಾಲಾ
ಪ್ರತಿಯೊಂದು ಸ್ಟೋರ್ ನಲ್ಲಿ ಶೀರ ಲಭ್ಯವಿರುವ ಸ್ಥಳದಲ್ಲಿ ದೊರಕುವುದು
ಬಾಟಲೀವಾಲಾ ಎಸ್ಟಾಮಿಚರ್
ಶೀರ ಗೋಲಿಯಾ
ಮಲೇರಿಯಾ
ಇನ್‌ಫ್ಲುಯೆಂಜಾ ಶೀರ ಪ್ರತಿಯೊಂದು ಪ್ರಕಾರಕ್ಕೆ ಜ್ವರಾ ಕೆ ಲಿಯೇ.
ಸೋಲ್ ಮ್ಯಾನುಫೆಕ್ಚರರ್: ಡಿ. ಎಚ್. ಎಲ್. ಬಾಟಲೀವಾಲಾ ಸನ್ಸ್ ಎಂಡ್ ಕಂ. ಲಿ.
ಬಾಟಲೀವಾಲಾ ಬಿಲ್ಡಿಂಗ್, ೬೩ ಬಿ. ಪೋರ್ಚುಗೀಜ್ ಚರ್ಚ್ ಸ್ಟ್ರೀಟ್,
Tele. Add. "CAWASHABAD" ದಾದರ, ಬಾಂಬೆ ೨೮.

ಮಂಗಳೂರು

ಸ್ಕೌಟಿಂಗ್ ಮತ್ತು ರೋಟರಿ— ಮಂಗಳೂರು ರೋಟರಿ ಕ್ಲಬ್ಬಿನ ಸಭೆಯು ತಾ. 24ರಲ್ಲು ರಾತ್ರಿ ಸಿ. ಪಿ. ಸಿ. ಸಭಾ ಭವನದಲ್ಲಿ ಶ್ರೀ. ಪಿ ಆರ್. ರಂಗನಾಥ ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ವಿಶ್ವನಾಥ ಕಾಮತರು ಗತಸಭೆಯ ವರದಿ ಯನ್ನೋದಿದರು. ಮದ್ರಾಸು ಸ್ಟ್ರಾಂತಿಯ ಸ್ಕೌಟ್ ಕಮಿಷನರ್ ಶ್ರೀ. ಜೆ. ಪಿ. ಸುತ್ಯನ್ನನವರು ಕಾರ್ಯೋಚಿತ ಮಾತುಗಳನ್ನಾಡುತ್ತಾ ಸ್ಕೌಟಿಂಗ್ ಮತ್ತು ರೋಟರಿ ಚಳವಳಗಳಿಗೆ ಅಂತಾರಾಷ್ಟ್ರೀಯ ಚಳವಳಗಳಾಗಿದ್ದು ನಿಸ್ವಾರ್ಥ ಸೇವೆಯೇ ಇವುಗಳ ಧ್ಯೇಯವಾಗಿದೆ ಎಂದರು. ರೋಟರಿ ಕ್ಲಬ್ಬಿನವರೂ ತಮ್ಮ ನೇತೃತ್ವದಲ್ಲಿ ಒಂದು ಸ್ಕೌಟ್ ದಳವನ್ನು ಸ್ಥಾಪಿಸಬೇಕೆಂದರು.

ಸ್ಟ್ರಾಂತಿಯ ಅಸಿಸ್ಟಾಂಟ್ ಕಮಿಶನರ್ ಶ್ರೀ. ಪಿ. ಎಸ್. ಪಿ. ರಮಣಿಕಾರಿಕಾರನರು ತಮ್ಮ ಭಾಷಣದಲ್ಲಿ ನಗು ಮುಖದಿಂದ ಜೀವನದ ಸಿಹಿಕಹಿಗಳನ್ನೆಮರಿಸುವುದೇ ಸ್ಕಾಟಿನ ಜೀವನವಾಗಿದೆ ಎಂದರು. ಬಳಿಕ ಜರಗಿದ ವಿಚಾರವಿನಿಮಯದಲ್ಲಿ ಶ್ರೀಗಳಾದ ಜಿ. ಸೋಮಶೇಖರ ರಾವ್, ಕೆ. ವಿಶ್ವನಾಥ ಕಾಮತರು ಭಾಗವಹಿಸಿದರು.

ಉಡ್ಪಿ ಡಿ. ಮುಂ. ಕೋರ್ಟಿನಲ್ಲಿ

O. S. No. 140/1955.

ಜಾನಕಿ ಅಮ್ಮ,— ಅರ್ಜಿದಾರಳು

ಮತ್ತು

ಸೀತಾರಾಮ ಉಪಾಧ್ಯಾಯ. ದಾ ಸ ಉಪಾಧ್ಯಾಯರ ಮಗ. ಉಪ್ಪಿ ತಾಲೂಕು ಯೇಣಗುಡ್ಡೆ ಗ್ರಾಮ— } ಎದ್ರಿ

ಎದ್ರಿಗೆ ನ, ಇತರ ಸಮಸ್ತರಿಗೆ ಸಹಾ.

ಮೇಲ್ಕಂಡ ಅರ್ಜಿಯ ಅರ್ಜಿದಾರಳ ಗಂಡ ನ, ಎದ್ರಿಯ ಮೇಗೆ ತಾ18—4—55ರಲ್ಲಿ ಹಾಲಿ ಬೆಳಗಾಂ ನಲ್ಲಿ ಮೃತಪಟ್ಟ ಗೋಪಾಲ ಕೃಷ್ಣ ಉಪಾಧ್ಯಾಯರಿಗೆ ಅರ್ಜಿಯಲ್ಲಿ ಕಾಣಿಸಿದಂತೆ ಬಹಾ ಹಣಗಳನ್ನು ವಸೂಲುಪಡೆಯು ವರೇ ಆತನ ಮಜ್ಜಿ ನಾರಿಸುವಾರಳಾದ ತನಗೆ ಸರ್ಟೇಶನ್ ಸರ್ಟಿಫಿಕೇಟುಕೊಡಬೇಕಾ ಗಿ ಅರ್ಜಿದಾರಳು ಮಾಡಿದ ಮೇಲಿನ ಅರ್ಜಿಯು ತಾ. 7-12-55ಕ್ಕೆ ತನ್ನಗೆ ಇಮೋಣಾ ಗಿಯಿದೆ. ಆಕ್ಷೇಪವುಳ್ಳವರು ತಮ್ಮ ಆಕ್ಷೇಪ ಗಳನ್ನು ಸದ್ರಿ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಈ ಕೋರ್ಟಿನುಂದೆ ಹಾಜ್ರಾಗಿ ಜ್ಞಾಹೀರು ಮಾಡಿಕೊಳ್ಳಲು ತಪ್ಪಿದ್ರೆ ಸದ್ರಿ ಅರ್ಜಿಯು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವುದು-

B. Vasudeva Rao
Counsel for Petr.

UDIPI 26—11—55.

ಪಿ ಎಂಡ್. ಟಿ. ನೌಕರರ ರ್ಯಾಲಿ- ಅಂಚೆ ಸುತ್ತು ತಂತಿ ನೌಕರರ ಫೆಡರೇಶನ್ ಸಭೆಯು ತಾ. 24ರಲ್ಲು ಸಂಜೆ ಮಂಗಳೂರು ಹೋಲ್ ಪೋಸ್ಟ್ ಆಫೀಸಿನಲ್ಲಿ ಸ್ಥಳೀಯ ಅಂಚೆ ಸುತ್ತು ತಂತಿ ಇಲಾಖಾ ನೌಕರರ ಸಾಮೂಹಿಕ ರ್ಯಾಲಿಯೊಂದು ಶ್ರೀ ಇ. ಎ. ಸಾಲ್ಡಾಂಞರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘಟನಾ ಕಾರ್ಯದರ್ಶಿ ಶ್ರೀ ಕೆ. ಪಿ. ಆಚಾರ್ಯರಿಂದ ಸ್ವಾಗತಭಾಷಣಗಳಾಗಿ ಸಭಿಕರ ಕಾಲೋಚಿತ ಭಾಷಣಗಳಾದುವು. ಬಳಿಕ ಅಂಚೆ ತಂತಿ ನೌಕರರಿಗೆ ಸಂಬಂಧಿಸಿದ ಹಲವು ನಿರ್ಣಯಗಳಾದುವು.

ಪ್ರೊ. ಭಾಸ್ಕರನ್ನರ ಭಾಷಣ— ಮದ್ರಾಸು ವಿಶ್ವವಿದ್ಯಾಲಯದ ರಾಜಕೀಯ ವಿಭಾಗದ ಪ್ರಧಾನ ಪ್ರಾಧ್ಯಾಪಕರಾದ ಪ್ರೊ. ಕೆಸರ್ ಶ್ರೀ ಆರ್ ಭಾಸ್ಕರನ್, ಅವರು ತಾ. 25ರಲ್ಲಿ ಸರಕಾರೀ ಆರ್ಟ್ಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರನ್ನುದ್ದೇಶಿಸಿ ಭಾಷಣವಾಡಿದರು. ಸಮಾಜವಾದವು ಇಂದಿನ ಜಗತ್ತಿನ ರಾಜಕೀಯದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಭಾರತದಲ್ಲಿ ಸಮಾಜವಾದಿ ಪಾದರಿಯ ಸಮಾಜವನ್ನು ರಚಿಸಬೇಕೆಂಬ ಗುರಿಯನ್ನಿಟ್ಟುಕೊಳ್ಳಲಾಗಿದೆ. ಇಂತಹ ಸಮಾಜವೆ ರಚನೆಯನ್ನು ಯಾವ ರೀತಿಯಲ್ಲಿ ಸಾಧಿಸಬಹುದೆಂಬುದನ್ನು ವಿವಿಧ ದೃಷ್ಟಿಯ ಜನರು ಹಲವುರೀತಿಯ ಸೂಚನೆಗಳನ್ನೀಯುತ್ತಾರೆ ಎಂದು ಉದಾಹರಣೆಗಳ ಸಹಿತ ನಿವರಿಸಿ, ಈ ಸಮಸ್ಯೆಯನ್ನು ವ್ಯಾವಹಾರಿಕವಾದ ರೀತಿಯಲ್ಲಿ ಬಗೆಹರಿಸಬೇಕಾಗಿದೆ ಎಂದರು. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಟಿ. ಕೆ. ಲಕ್ಷ್ಮಣ್ ರವರು ಸ್ವಾಗತಭಾಷಣಮಾಡಿದರು. ಕಾಲೇಜ್ ಯೂನಿಯನ್ ಅಧ್ಯಕ್ಷ ಶ್ರೀ ರಾಮುಚಂದ್ರ ಶೇನರು ಧನ್ಯವಾದವಿತ್ತರು.

ನಗರ ಸಭಾಪತಿ ಶ್ರೀ ಅಡಿಗರಿಗೆ ಸತ್ಕಾರ ಕೂಟ — ದಿನಾಂಕ ೨೭ರಂದು ಮಂಗಳೂರು ನಗರಸಭಾಧಿಪತಿಗಳಾಗಿ ದ್ವಿತೀಯ ಬಾರಿ ಆಯ್ಕೆ ಹೊಂದಿರುವ ಶ್ರೀ ಕೆ. ಸೂರ್ಯನಾರಾಯಣ ಅಡಿಗರಿಗೆ ಎರಡು ಸತ್ಕಾರಕೂಟಗಳು ಏರ್ಪಡಿಸಲ್ಪಟ್ಟಿದ್ದವು. ಒಂದು ಕರ್ನಾಟಕ ಬ್ಯಾಂಕಿನ ಪ್ರಧಾನ ಕಛೇರಿಯಲ್ಲಿ ಜರಗಿದರೆ, ಇನ್ನೊಂದು ಬಿಜೈಯಲ್ಲಿ ನಡೆಯಿತು.

ಬ್ಯಾಂಕಿನ ಡೈರೆಕ್ಟರರಜ್ಜೊಬ್ಬರಾದ ಶ್ರೀ ಅಡಿಗರು ಎರಡನೇ ಬಾರಿ ನಗರ ಸಭಾಧಿಪತಿಗಳಾಗಿ ಆಯ್ಕೆ ಹೊಂದಿದುದಕ್ಕೆ ಶ್ರೀಗಳಾದ ಪಿ. ರಾಮಚಂದ್ರ ರಾವ್, ಎಸ್. ನರಸಪ್ಪಯ್ಯ ಎಂ. ಎಲ್. ಸಿ., ನೊದಲಾದವರು ಅಭಿನಂದಿಸಿದರು.

ಬಿಜೈಯಲ್ಲಿ ಡಾ. ಸಿ. ಮುಕ್ಕಾಸರೆ ಔಷಧಾಲಯವಲ್ಲಿ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಾಮನರ ಸ್ವಾಗತಾ ನಂತರ ಶ್ರೀಗಳಾದ ಮಹಾಬ್ಯಾಸ್, ಚಂದ್ರಶೇಖರ್, ನರಸಿಂಹ ರೈ ಮೊದಲಾದ ವರು ಶ್ರೀ ಅಡಿಗರು ಮುನ್ನಡೆಸುತ್ತಿರುವ ನಗರಸಭಾಧಿಪತಿಗಳಾಗಿ ಅರಿತಲ್ಪಟ್ಟಿದ್ದಕ್ಕೆ ತಮ್ಮ ಸಂತೋಷವನ್ನು ಸೂಚಿಸಿದರು.

ಶ್ರೀ ಅಡಿಗರು ತಾವು ಕಾಂಗ್ರೆಸು ಸೇರಲು ಕಾರಣ ನಿವರಿಸುತ್ತಾ ಒಂದು ಪಕ್ಷದ ಅಶ್ರಯದಲ್ಲಿ, ಸ್ವತಂತ್ರನಾಗಿರುವುದಕ್ಕಿಂತ ಹೆಚ್ಚು ಕಾರ್ಯಸಾಧಿಸಬಹುದೆಂದರಲ್ಲದೆ, ತಮಗೆ ತೋರಿಸಿದ ಗೌರವಾದರಗಳಿಗೆ ಕೃತಜ್ಞತೆಯ ನ್ನರ್ಪಿಸಿದರು. ಅಧ್ಯಕ್ಷ ಭಾಷಣ, ಮತ್ತು ಶ್ರೀ ಕೆ. ವಾಮನರ ಧನ್ಯವಾದಗೊಂದಿಗೆ ಸಭಾಂ ತ್ಯವಾಯಿತು.

ದ. ಕ.ದಲ್ಲಿ ಮಕ್ಕಳ ಪ್ರಥಮ ಪುಸ್ತಕಾಲಯ— ದಿನಾಂಕ ೨೭ರಂದು ಮಂಗಳೂರು ಸೇವಾಸಮಾಜದ ಅಧ್ಯಕ್ಷೆಯರಾದ ಶ್ರೀಮತಿ ರಾಜಲಕ್ಷ್ಮಿ ರಾಜಾರಾಮ ರವರಿಂದ ದ. ಕ. ಬೆಲ್ಲೆಯಲ್ಲೇ ಪ್ರಥಮವಾದ ಮಕ್ಕಳ ಪುಸ್ತಕಾಲಯವೊಂದು ಮಂಗಳೂರಿನ ಬಾವಟೆ ಗುಡ್ಡೆಯಲ್ಲಿ ನಗರ ಸಭೆಯ ಕಟ್ಟಡದಲ್ಲಿ ಉದ್ಘಾಟಿಸಲ್ಪಟ್ಟಿತು.

ಖಂಂ ರೂ. ಮಿಸಿಲಾಗಿರುವ ಈ ಗ್ರಂಥಾಲಯದಲ್ಲಿ ೧೫ ವರುಷ ಪ್ರಾಯದ ಮಕ್ಕಳು ಓದುವರೇ ಪುಸ್ತಕಗಳು ಆಜೆಗೊಳಿಸಲ್ಪಟ್ಟಿವೆ. ಪುಸ್ತಕಾಲಯವು ಹಿಂದಿ, ಇಂಗ್ಲೀಷ್ ಕನ್ನಡ ಈ ಮೂರು ಭಾಷೆಗಳ ಪುಸ್ತಕಗಳನ್ನೊಳಗೊಂಡಿದೆ. ಜಿಲ್ಲೆಯ ಬೇರೆ ಬೇರೆ ಕಡೆ ಆರು ಉಪ ಗ್ರಂಥಾಲಯಗಳಿರುವ ಈ ಪ್ರಧಾನ ಪುಸ್ತಕಾಲಯವನ್ನು ಸಾಯಂಕಾಲ ಆರಿಂದ ೭ರ ತನಕ ತೆರೆದಿಡಲ್ಪಡುತ್ತಿದೆ. ಇದಕ್ಕೆ ಹೊಸ ಕಟ್ಟಡವನ್ನು ರಚಿಸುವ ಮತ್ತು ಗ್ರಂಥಾಲಯವನ್ನು ವಿಸ್ತರಿಸುವ ಯೋಜನೆಯಿದೆಯೆಂದೂ, ಅದಕ್ಕೆ ನಾಗರಿಕರೂ ಮಕ್ಕಳ ಹಿರಿಯರೂ ಧನಸಹಾಯವಿತ್ತು ಸಹಕರಿಸಬೇಕೆಂದೂ ಸ್ಥಳೀಯ ಗ್ರಂಥಾಲಯ ಸಮಿತಿಯ ಅಧ್ಯಕ್ಷರಾದ ಶ್ರೀ ಎಂ. ಎಸ್. ನಿಕಾಂಬರರಾಯರು ತಮ್ಮ ಭಾಷಣದಲ್ಲಿ ತಿಳಿಸಿದರು.

ಮುಂದಿನ ಜನವರಿಯಾದ ಇಂದಿನ ಮಕ್ಕಳು ಸಜ್ಜನರಾಗಿ ಬೆಳೆಯಲು ಇಂತಹ ಪುಸ್ತಕಾಲಯಗಳು ಸಹಕಾರಿಯಾಗಿವೆ. ಭಾರತದಲ್ಲಿ ಸಹ ಇಂತಹ ಯೋಜನೆಗಳು ನಡೆಯು ತ್ತಿರುವುದು ಸಂತೋಷದಸಂಗತಿಯೆಂದು ಶ್ರೀಮತಿ ರಾಜಾರಾಮರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದರು.

ಶ್ರೀಮತಿ ಶಾಂತೇರಿ ಪ್ರಭುಗಳು ಧನ್ಯವಾದವಿತ್ತರು.

ದ. ಕ. ಜಿಲ್ಲೆಗೆ ಆರು ನೀರಾವರಿ ಯೋಜನೆಗಳ ಮಂಜೂರಾತಿ:— ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಒಂದು ಸಭೆಯು ಇದೇ ದಿನಾಂಕ ೨೭ರಂದು ದ. ಕ. ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜರಗಿತು. ಹಲವಾರು ಜನ ಪ್ರತಿನಿಧಿಗಳು ಆಗಮಿಸಿದ್ದ ಈ ಸಭೆಯು ದ. ಕ. ಜಿಲ್ಲೆಗೆ ಮಂಜೂರಾಗಿರು ಆರು ನೀರಾವರಿ ಯೋಜನೆಗಳ ಬಗ್ಗೆ ಚರ್ಚಿಸಿತು.

ಈ ಆರು ನೀರಾವರಿಗಳು ಸಾಧಾರಣ ಪರಿಸ್ಥಿತಿಯಲ್ಲಿ ಲಕ್ಷ ವೆಚ್ಚದಿಂದ ನಿರ್ಮಿಸಲ್ಪಡುತ್ತದೆಯೆಂದೂ, ಇದರಿಂದಾಗಿ ಸಾಧಾರಣ ತಿಖಿತ ಎಕ್ರೆ ಜಮೀನು ಸಾಗುವಳಿಗೆ ಯೋಗ್ಯವಾಗುವುದೆಂದು ತಿಳಿಯಬರುತ್ತದೆ. ಆರು ಯೋಜನೆಗಳು ಗುರುಪುರ ನದಿಗೆ ಆಣೆಕಟ್ಟು ಮತ್ತು ನೀರಾವರಿಕಾಲುವೆಯೊಂದು, ಬಂಟ್ವಾಡದಲ್ಲೊಂದು, ಬಂಡಡ್ಕ ಸುತ್ತೂರಿನ ಕೆಂಡ್ಡ ಹೊಳೆಗೊಂದು ಆಣೆಕಟ್ಟು, ಕರ್ಗಾಲಿನ ಬ್ಲೊಂದು ಉಪ್ಪುನೀರು ತಡೆಯಲು ಕಟ್ಟು, ಉಡ್ಯಾವರ ಹೊಳೆಗೊಂದ ಆಣೆಕಟ್ಟು ಮತ್ತು ಆಜಾಸಾರು ಗ್ರಾಮದ ಪರ್ಲೋತ್ತ್ ತೋಡಿಗೊಂದು ಕಟ್ಟು ಮತ್ತು ಕಾಲುವೆ ರಚನೆಯನ್ನು ಒಳಗೊಂಡಿದೆಯೆಂದು ಎಕ್ಸಿಕ್ಯೂಟಿವ್ ಇಂಜೀನಿಯರ್ ಶ್ರೀ ಎ. ವಾಮನ ರಾಯರು ತಿಳಿಸಿದರು.

ಕಲೆಕ್ಟರ್ ಶ್ರೀ ಎಂ. ಜಿ ರಾಜಾರಾಮರು ಈ ನೀರಿನ ಸಹಾಯವನ್ನು ಪಡೆಯುವವರು ಸರಕಾರಿ ಪುಕ್ಕಟೆ ಪೀಕರೆಗೆ ತೆರಬೇಕಾಗುವ ಶುಲ್ಕ ಹಾಗೂ ಧನಸಹಾಯವನ್ನು ತಿಳಿಸಿದರು. ಇದಕ್ಕಾಗಿ ಪಟ್ಟಾವಾರರ ಸಹಾಯ ಅಗತ್ಯ ಅವರ ಒಪ್ಪಿಗೆ ಪಡೆಯಬೇಕೆಂದೂ ಸೂಚಿಸಿದರು.

ಇವುಗಳೊಡನೆ ಕೆಲವು ಚಿಕ್ಕ ಚಿಕ್ಕ ವಿಷಯಗಳು ಚರ್ಚಿಸಲ್ಪಟ್ಟು ಮಂಜೂರಾತಿಯನ್ನು ಪಡೆದುವು. ದ್ವಿ. ಪಂ. ಪಾ. ಯೋಜನೆಯಲ್ಲಿ 1:9 ಕೋಟಿ ವೆಚ್ಚದ ಪಾಲಾಡಿ ಜಲಾಶಯ ಯೋಜನೆಯು ಸೇರಿಸಲ್ಪಡಬಹುದೆಂದು ತಿಳಿದು ಬರುತ್ತದೆ.

ಕೊನೆಗೆ ಕಲೆಕ್ಟರರು ತಮ್ಮ ಸಹಕಾರವನ್ನೀ ಯಬೇಕೆಂದು ನಿವರಿಸಿಕೊಂಡರು.

TENDER NOTICE

Sealed tenders are invited for two sets of repair works, at the Sri Mookambika Temple of Kollur, S. K., so as to reach the undersigned before 29—12—1955. Details of work and specifications of each set may be had, on application with a fee of Rs. 2/- per set. Earnest money of Rs 400/- per set.

Executive Officer,
Sri Mookambika Temple,
Kollur Post (S. Kanara).
Kollur. 24-11-'55.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE POPULAR INSURANCE CO.,LTD.
"POPULAR BUILDINGS" **MANGALORE-1**

BHUVANENDRA PRODUCTS LTD., KATAPADI S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ಬೀಳಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.
ಡಿಪೋ:- (1) ಉಡುಪಿ (2) ಮಂಗಳೂರು ಗಲ್ಲಿ, ಹುಬ್ಬಳ್ಳಿ.

ಸೌದಿ ಅರೇಬಿಯದೊಡನೆ ಗೆಳೆತನ

ತೈಲ ಸಂಪತ್ತಿನ ರಾಷ್ಟ್ರ

ವಿದೇಶಗಳಿಂದ ವಿಶೇಷ ಆಮಂತ್ರಣದ ಮೇರೆಗೆ ಭಾರತಕ್ಕೆ ಈಚೆಗೆ ಕೆಲವು ವಾರಗಳಿಂದ ಅತಿಥಿಗಳು ಆಗಮಿಸಿದ್ದಾರೆ. ಮೊನ್ನೆ 27ನೇ ತಾರೀಕಿನಂದು ಹೀಗೆ ಹೊಸ ದೆಹಲಿಗೆ ಆಗಮಿಸಿದವರೇ ಸೌದಿ ಅರೇಬಿಯಾ ದೇಶದ ಆಸರಾದ ಸೌದ್ ಇಬ್ನ್ ಅಬ್ದುಲ್ ಜೀಜ್. ಇವರ ಜನನ 1902ರಲ್ಲಿ ಆಯಿತು. ಸೌದಿ ಅರೇಬಿಯಾ ರಾಜ್ಯ ಸ್ಥಾಪಕರಾದ ದಿವಂಗತ ಇಬ್ನ್ ಸೌದಿ ಜ್ಯೇಷ್ಠ ಪುತ್ರ ಇವರಾಗಿದ್ದಾರೆ. 1953ನೇ ನವಂಬರದಲ್ಲಿ ಪಟ್ಟಕ್ಕೆ ತಂದೆಯ ಮರಣಾನಂತರ ಏರಿದರು. ಅಡಳಿತದೊಡನೆ ಬಹಳ ನಿಕಟವಾದ ಸಂಪರ್ಕವನ್ನು ಇಟ್ಟುಕೊಂಡಿದ್ದು ಪ್ರತ್ಯೇಕತೆಯಿಂದ ರಾಜ್ಯಸೂತ್ರವನ್ನು ನಿರ್ವಹಿಸುತ್ತಿದ್ದಾರೆ. ತಂದೆ ಕಟ್ಟಿದ ರಾಜ್ಯದಲ್ಲಿ ಅನೇಕ ಜವಾಬ್ದಾರಿ ಸ್ಥಾನಗಳನ್ನೆಲ್ಲ ನಿರ್ವಹಿಸಿ ಅನುಭವ ಸಂಪನ್ನರಾಗಿರುವುದರಿಂದ ಅವರ ಕಾರ್ಯಸಾಮರ್ಥ್ಯದ ಕುರಿತು ವಿಶೇಷ ಪ್ರಕಾಶ ಮಾಡಲಾಗುತ್ತದೆ.

ನಾಡಿನ ಪರಿಚಯ

ನಮ್ಮ ಪಶ್ಚಿಮಕ್ಕಿರುವ ಸೌದಿ ಅರೇಬಿಯಾದ ವಿಸ್ತೀರ್ಣವು ಸುಮಾರು 10ಲಕ್ಷ ಚದರಮೈಲುಗಳನ್ನಿದೆ ಇದು ಉತ್ತರದಲ್ಲಿ ಇರಾಕ್ ಮತ್ತು ಸಿರಿಯಾ, ದಕ್ಷಿಣದಲ್ಲಿ ಯೆಮನ್, ಹಾದ್ರಮೌತ್ ಮತ್ತು ಒಮನ್, ಪೂರ್ವದಲ್ಲಿ ಪರ್ಷಿಯನ್ ಕೊಲ್ಲಿ, ಮತ್ತು ಪಶ್ಚಿಮದಲ್ಲಿ ಕೆಂಪು ಕಡಲನ್ನು ಹೀರೆಗಳಾಗಿ ಹೊಂದಿದೆ. ಇಲ್ಲಿಯ ಜನಸಂಖ್ಯೆ ಸುಮಾರು 70ಲಕ್ಷ. ಇವರ ರಾಜಧಾನಿ ಮೆಕ್ಕಾ. ಈ ನಗರದ ಜನಸಂಖ್ಯೆ 1,50,000. ರಿಯಾದ್ಹ್, ಜೆದ್ದಾ ಮತ್ತು ಹುಫೂಫ್‌ಗಳು ಇವರ ಇತರ ಮುಖ್ಯ ಪಟ್ಟಣಗಳು.

ಸೌದಿ ಅರೇಬಿಯಾದಲ್ಲಿ ಗೋಧಿ, ಬಾರ್ಲಿ, ದ್ವಿದಳ ಧಾನ್ಯಗಳು, ಮುಸುಕಿನ ಜೋಳ ಮತ್ತು ಭತ್ತ ಬೆಳೆಯುತ್ತಿವೆ. ಮೆಡೀನಾವಲ್ಲಿ ಒಳ್ಳೆಜಾತಿಯ ಖರ್ಜೂರ ಹೇರಳವಾಗಿ ದೊರೆಯುತ್ತದೆ. ದ್ರಾಕ್ಷಿ, ಆಂಜೂರ, ಸುಮ್ಮು ಕಲ್ಲಂಗಡಿಗಳಂತಹ ಅನೇಕ ಪ್ರಾದೇಶಿಯ ಹಣ್ಣುಗಳನ್ನು ಇಲ್ಲಿ ಬೆಳೆಯಲಾಗುತ್ತವೆ. ಉತ್ಪಾದನೆಯನ್ನು ಹೆಚ್ಚಿಸಲು ಸಂರಕ್ಷಿಸುವುದಕ್ಕಾಗಿ ಅನೇಕ ವಿದೇಶಿ ಪರಿಣತರು ಕೃಷಿಸಂತ್ರಿ ಶಾಲೆಯ ಆಶ್ರಯದಲ್ಲಿ ಕೆಲಸಮಾಡುತ್ತಿದ್ದಾರೆ

ಶಿಕ್ಷಣ ಸೌಲಭ್ಯ

ಇಲ್ಲಿನ ಶಿಕ್ಷಣ ಮಂತ್ರಿ ಶಾಲೆಯು ಅನಕ್ಷರತೆಯ ವಿರುದ್ಧ ಹೋರಾಟ ನಡೆಸುತ್ತಿದೆ ಇಂಗ್ಲಿಷ್, ಫ್ರೆಂಚ್, ವಿಜ್ಞಾನ ಮತ್ತು ಗಣಿತ ಗಳಂತಹ ವಿಷಯಗಳಲ್ಲಿ ಬೋಧನೆಯ ವಿವಿಧ ರಾಷ್ಟ್ರಗಳಿಂದ ಪ್ರತಿನಿಧಿಶಾಲಿ ಅಧ್ಯಾಪಕರನ್ನು ಶಾಲೆಗಳಲ್ಲಿ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ. ಬೇರೆ ವಿಶೇಷ ವಿಷಯಗಳನ್ನು ಈಜಿಪ್ಟ್‌ನ ಅಲ್-ಅಜಾರ್ ವಿಶ್ವವಿದ್ಯಾನಿಲಯದ ಅಧ್ಯಾಪಕರು ಇತರ ಅರಬ್ ರಾಜ್ಯಗಳ 250 ಮಂದಿ ಅಧ್ಯಾಪಕರಿಂದಲೂ ವ್ಯಾಧಮಿರ ಶಾಲೆಗಳಲ್ಲಿ ಬೋಧಿಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ವಯಸ್ಕರ ಶಿಕ್ಷಣಕ್ಕೂ ಪ್ರೋತ್ಸಾಹ ಕೊಡಲಾಗಿದೆ. ವಯಸ್ಕರ ಶಿಕ್ಷಣದ ಯುನೆಸ್ಕೋ ಕಾರ್ಯಕ್ರಮಗಳ ಅಳವಡಿಕೆಯಲ್ಲಿ ಬಹು ಸಂಖ್ಯೆಯ ಅಧ್ಯಾಪಕರು ತರಬೇತಿ ಪಡೆಯುತ್ತಿದ್ದಾರೆ ಜೆದ್ದಾ, ಮೆಡೀನಾ ಮತ್ತು ರಿಯಾದ್‌ಗಳಲ್ಲಿರುವ ಕೆಲವು ಪ್ರಸಿದ್ಧ ರಾಜ ಭವನಗಳನ್ನು ಶಿಕ್ಷಣ ಸಂಸ್ಥಿ ಶಾಲೆಯ ಸಲಕ್ಕೆ ಕೊಡಲಾಗಿದೆ ಪ್ರಸ್ತುತ ಅಲ್ಲಿ, 474 ಪ್ರಾಥಮಿಕ ಶಾಲೆಗಳೂ, 3 ಅಧ್ಯಾಪಕರ ತರಬೇತಿ ಶಾಲೆಗಳೂ, 12 ಹೈಸ್ಕೂಲುಗಳೂ, 3 ತ್ರೈವಿಧ ಶಿಕ್ಷಣಾಲಯಗಳನ್ನೂ, 3 ತಾಂತ್ರಿಕ ಶಾಲೆಗಳೂ ಇವೆ. ಈ ಸಂಸ್ಥೆಗಳಲ್ಲಿ 1,714 ಮಂದಿ ತಜ್ಞ ಅಧ್ಯಾಪಕರು ಕೆಲಸ ಮಾಡುತ್ತಿದ್ದಾರೆ. ಸುಮಾರು 68,000 ವಿದ್ಯಾರ್ಥಿಗಳು ಉಚಿತ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ

ಎಣ್ಣೆಯ ಸಂಪತ್ತು

ಈ ರಾಷ್ಟ್ರದ ಅದಾಯದ ಮುಖ್ಯ ಮೂಲಸ್ಥಾನ ನೆಂದರೆ ಕಚ್ಚಿಯದ ಕೊಲ್ಲಿ ತೀರದ ಬಳಿಯಿರುವ ಸನ್ಯುದ್ಧನಾದ ತೈಲ ಕ್ಷೇತ್ರಗಳು. ಇಲ್ಲಿಯ ಉತ್ಪಾದನೆಯು 1954ರಲ್ಲಿ ದಿನವೊಂದಕ್ಕೆ 9,53,000 ಬ್ಯಾರೆಲ್‌ಗಳಿಗೆ ಮುಟ್ಟಿತ್ತು. ಉತ್ಪಾದನೆಯ ಕೇಂದ್ರಾಲಯವು ಧಹ್ರಾನ್‌ನಲ್ಲಿದೆ ನುತ್ತು ಮುಖ್ಯ ತೈಲ ಕ್ಷೇತ್ರವು ಅಬ್ಕಾಯಿಕ್ ನಲ್ಲಿದೆ. ಬೇರೆ ಮುಖ್ಯ ತೈಲ ಕ್ಷೇತ್ರಗಳು ಏನ್‌ದಾರ್ ಮತ್ತು ದಮ್ಮಮ್‌ಗಳಲ್ಲಿವೆ 1951ರಲ್ಲಿ ಈ ತೈಲ ಕ್ಷೇತ್ರಗಳು, ಭಾರತ, ಸುಡಾನ್, ಇಟಲಿ, ಪಾಕಿಸ್ತಾನ, ಆಮೇರಿಕ, ಸ್ಕ್ಯಾಲ್ಡೆನ್ ಮತ್ತು ಇತರ ಜೆಕಗಳ ಸುಮಾರು 22,000 ಜನರಿಗೆ ಉದ್ಯೋಗವನ್ನು ಒದಗಿಸಿದವು. ಸೌದಿ ಅರೇಬಿಯಾದ ತೈಲ ಕ್ಷೇತ್ರಗಳು ವಿಶ್ವದ ಸಂಪತ್ತಿನಲ್ಲಿ ಶ್ರೀಮಂತ ಸ್ಥಾನವನ್ನು ಪಡೆದಿದೆ. ಇಲ್ಲಿಯ ಪ್ರತಿಯೊಂದು ಎಣ್ಣೆ ಭಾವಿಯು ಉತ್ಪಾದನೆಯ ಪ್ರಮಾಣದಲ್ಲಿ ಜಗತ್ತಿನಲ್ಲಿಯೇ ಅತ್ಯಧಿಕವಾಗಿದೆ.

ವಾಣಿಜ್ಯ ಬಾಂಧವ್ಯ

ಸೌದಿ ಅರೇಬಿಯಾವು ವಿಶ್ವದ ಬಹು ರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧಗಳನ್ನು ಹೊಂದಿದೆ ಭಾರತದಿಂದ ತರಿಸಿಕೊಳ್ಳುವ ವಸ್ತುಗಳಲ್ಲಿ ಅಕ್ಕಿ, ಹಿಟ್ಟು, ಬೇಳೆಕಾಳು, ಸಕ್ಕರೆ, ಚಾ ಮತ್ತು ಕಾಫಿ, ಖನಿಜದ ಪಣ್ಣು ಗಳು, ಸಂಚಾರ ಪದಾರ್ಥಗಳು, ಸಿದ್ಧ ಗೊಂಡ ಬಟ್ಟೆಗಳು, ಮರದ ಸಾಮಾನುಗಳು, ಕಾದಿ ದಿಮ್ಮಿಗಳು ರೇಷ್ಮೆ ವಸ್ತುಗಳು ಇತ್ಯಾದಿಗಳು ಸೇರಿವೆ. ಭಾರತದಿಂದ ಸೌದಿ ಅರೇಬಿಯಾಕ್ಕೆ ಕಳಿಸುವ ಈ ಪದಾರ್ಥಗಳ ಒಟ್ಟು ವಾರ್ಷಿಕ ಸರಾಸರಿ ಬೆಲೆಯು 11,016,055 ಸೌದಿ ರ್ಯಾಲ್‌ಗಳಷ್ಟಾಗುವುದು (ಸೌದಿ ರ್ಯಾಲ್ ಭಾರತದ ಒಂದೂವರೆ ರೂಪಾಯಿಗೆ ಸಮವಾಗಿದೆ) ಭಾರತಕ್ಕೆ ನಿರ್ಯಾತವಾಗುವ ಸೌದಿ ಅರೇಬಿಯದ ವಸ್ತುಗಳ ವಾರ್ಷಿಕ ಸರಾಸರಿ ಬೆಲೆಯು 12,000 ಸೌದಿ ರ್ಯಾಲ್‌ಗಳಷ್ಟಿವೆ

ಇತರರೊಡನೆ ಗೆಳೆತನ

ಸೌದಿ ಅರೇಬಿಯಾವು ವಿಶ್ವ ಸಂಸ್ಥೆಯಲ್ಲಿ ಸದಸ್ಯತ್ವವನ್ನು ಹೊಂದಿದೆ ಇದು ಇಂಗ್ಲೆಂಡಿ ನೊಡನೆ 'ಚಿರ್ವಾ ಒಪ್ಪಂದ ಸ್ನೇಹವನ್ನು ಹೊಂದಿದೆ. ಆಮೇರಿಕೆಯೊಡನೆ ಪರಸ್ಪರ ನುಮ್ಮ ನಿರ್ಣಯಗಳಲ್ಲಿ ತಾತ್ಕಾಲಿಕ ಒಪ್ಪಂದವನ್ನು ಹೊಂದಿದೆ. ಈಜಿಪ್ಟ್ (1949), ಸಿರಿಯಾ (1950), ಕುವೆಯಿತ್ 1912) ನುತ್ತು ಇಟಲಿ (1932) ಗಳೊಡನೆ ವಾಣಿಜ್ಯ ಒಪ್ಪಂದಗಳಿವೆ ಆಫ್ಘಾನಿಸ್ತಾನ, ಈಜಿಪ್ಟ್, ಫ್ರಾನ್ಸ್, ಜರ್ಮನಿ, ಇಂರಾನ್, ಇರಾಕ್, ಇಟಲಿ, ಕುವೆಯಿತ್, ಲೆಬನಾನ್, ಪಾಕಿಸ್ತಾನ್ ಸಿರಿಯಾ, ಟ್ಯುನಿಸ್-ಜೋರ್ಡಾನ್, ಟರ್ಕಿ ಮತ್ತು ಏಮನ್ ರಾಷ್ಟ್ರಗಳೊಡನೆ 1932ರಿಂದ 1954ರ ಅಂತರದಲ್ಲಿ ಸ್ನೇಹ ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಅರಬ್ ರಾಷ್ಟ್ರಗಳ ಗುಂಪಿನಲ್ಲಿ ಸೌದಿ ಅರೇಬಿಯ ವಿಶೇಷವಾದ ಸ್ಥಾನಮಾನಗಳನ್ನು ಹೊಂದಿದೆ. ಈಜಿಪ್ಟ್ ದೇಶದೊಡನೆ ಅವರ ಸಂಬಂಧ ಬಹಳ ಗಾಢವಾಗಿದೆ— ಎಂಬುದನ್ನು ಇತ್ತೀಚಿನ ಘಟನೆಗಳು ತೋರಿಸಿ ಕೊಟ್ಟಿರುತ್ತವೆ.

ಖ್ರುಷ್ಚೆವ್ ಮತ್ತು ಎಮ್ಮೆ!

ಆರೆ ವಸತಿಯ ಸಂಭಾಷಣೆ

ರಕ್ಷಿತ-ಕಮ್ಯುನಿಸ್ಟ್ ಪ್ರಭುತ್ವಕ್ಕೆ ಖ್ರುಷ್ಚೆವ್ ಬಾಸು ಮಾತಿನ ಮಲ್ಲ ಎಂಬುದನ್ನು ಭಾರತ ಸಂಚಾರ ಕಾಲದಲ್ಲಿ ಅನೇಕ ವೇಳೆ ತೋರಿಸಿ ಕೊಟ್ಟಿದ್ದಾರೆ. ಆದರಂತೆ ತನಗೆ ಹಲವು ವಿಷಯಗಳ ಕುರಿತು ವಿಶೇಷ ತಿಳಿವಳಿಕೆ ಇರುವುದನ್ನು ಅವರು ಸ್ಪಷ್ಟಪಡಿಸಿದ್ದಾರೆ. ತರೆ ಹರಟೆಗಿಂತ ಬುದ್ಧಿಪೂರ್ವಕತೆಗೆಯೇ ತನ್ನ ಮಾತಿನ ದಾಟ ಹರಿಯುತ್ತಿದೆ ಎಂದವರು ಮನಗಾಣಿಸಿದ್ದಾರೆ.

ಮುಂಬಯಿ ಸರಕಾರದವರು ನಡೆಸುತ್ತಿರುವ ಆರೆ ಹಾಲಿನ ಕೇಂದ್ರಕ್ಕೆ ಅವರು ಮೊನ್ನೆ ಭೇಟಿ ಕೊಟ್ಟಾಗ ನಡೆದ ಸಂಭಾಷಣೆಯೊಂದು ನೋಡಿನ ಜಾತುಗಳಿಗೆ ನಿದರ್ಶನವಾಗಿದೆ. ಅಲ್ಲಿಸುತ್ತಾಡುತ್ತಿದ್ದಾಗ ಖ್ರುಷ್ಚೆವ್ ''ನೀವೇನು ಹುಲ್ಲನ್ನಿಲ್ಲಿ ಬೆಳೆಸುತ್ತಿದ್ದೀರಿ?'' ಎಂಬ ಪ್ರಶ್ನೆಸಿದರು. ಆವರ ಪಕ್ಕದಲ್ಲಿದ್ದ ಹಾಲಿನ ಪೂರೈಕೆಯ ಅಧಿಕಾರಿ ಶ್ರೀ. ಖುರೋದಿಯವರು ''ಪರಾಗ್ವೆ ಎಂಬ ಲ್ಯಾಟಿನ್ ಅಮೇರಿಕನ್ ದೇಶದ ಹುಲ್ಲು'' ಎಂದರು. ಮುಂದೆ ಸಂಭಾಷಣೆ ಸ್ವಾರಸ್ಯವಾಗಿ ಬೆಳೆಯಿತು.

''ಎಷ್ಟು ಹುಲ್ಲು ನಿಮಗೆ ಸಿಗುತ್ತದೆ?''

''ನೀರು ಸಿಗದಾ ಹೋಗುವಲ್ಲಿ ಎಕ್ರೆಗೆ ಇನ್ನೂರು ಸಾವಿರ ರಾತಲುಗಳಷ್ಟು - ಇದಲ್ಲದೆ ಪೊರಗಿನಿಂದ ಒಣ ಹುಲ್ಲನ್ನೂ ತರಿಸುತ್ತಿದ್ದೇವೆ.''

''ಎಷ್ಟು ಸಲ ನೀವು ನಿಮ್ಮ ದನಗಳ ಹಾಲನ್ನು ಹಿಂಡುತ್ತೀರಿ?''

''ಎರಡು ಸಲ.''

''ಸಂತಸರಿಯಾಗಿ ಒಂಮ ದನದ ಹಾಲೆಷ್ಟು?''

''ಇಲ್ಲಿರುವುದು ಎಮ್ಮೆಗಳು; ಇವು ವರ್ಷಕ್ಕೆ ಸರಾಸರಿ ನಾಲ್ಕುವರೆ ಸಾವಿರ ರಾತಲು ಹಾಲು ಕೊಡುತ್ತವೆ.''

''ನಿಮ್ಮ ಲೆಕ್ಕ ತಪ್ಪೆಂದು ತೋರುತ್ತದೆ.''

''ಇಲ್ಲ—ಇದು ಸರಿಯಾದ ಲೆಕ್ಕ.''

"ಓ! ನಿಮ್ಮದು ಬ್ರಿಟಿಷರ ರಾತಲು! ನಮ್ಮ ತೂಕದ ಲೆಕ್ಕ ಬೇರೆಯಾಗಿದೆ. ನೀವು ಲೆಕ್ಕ ಹೇಳಿದಾಗ ನಾವು ತಪ್ಪು ರೀತಿಯಲ್ಲಿ ಗುಣಿಸಿ ಕೊಂಡೆವು''

ಹೀಗೆ ಕ್ಷಣಾಪಹೆ ಕೇಳಿ ಖ್ರುಷ್ಚೆವ್ "ಇಲ್ಲಿಯ ಪಾಲಿನಲ್ಲಿ ಕೊಬ್ಬಿನಂಶವೆಷ್ಟು?" ಎಂದು ಸುಂಬನ ಪ್ರಶ್ನೆ ಹಾಕಿದರು.

''ಶೇಕಡಾ ಏಳೂವರೆ''

"ಅದು ಬಹಳ, ಬಹಳ ಒಳ್ಳೆಯದು. ನಮ್ಮ ದೇಶದ ಅನೇಕ ಕೇಂದ್ರಗಳನ್ನು ಪ್ರಮಾಣಕ್ಕಿಂತ ಇದು ತುಂಬಾ ಹೆಚ್ಚಾಗಿದೆ. ನಮ್ಮಲ್ಲಿ ಕೊಬ್ಬಿನ ಅಂಶವು ಶೇಕಡಾ ಮೂರರಿಂದ ನಾಲ್ಕರಷ್ಟಿವೆ ಅವರೆ ನಾವೊಹಸುವುದು ಎಮ್ಮೆಗಳು— ನಮ್ಮಲ್ಲಿರುವುದು ದನಗಳು.''

''ನಮ್ಮ ದನಗಳು ಸಹ ಶೇಕಡಾ ಐದರಷ್ಟು ಕೊಬ್ಬಿನಂಶವಿರುವ ಹಾಲನ್ನು ಕೊಡುತ್ತವೆ.''

"ನಿಮ್ಮಲ್ಲಿ ಹಾಗಾದರೆ ಒಳ್ಳೆಯ ದನಗಳಿವೆ. ಅಷ್ಟು ಯೋಗ್ಯತೆಯ ಹಾಲನ್ನೂ ಕೊಡುವ ದನಗಳು ನಮ್ಮಲ್ಲಿರುವುದು ಸ್ವಲ್ಪ ನಾತ್ರ. ಆದರೆ ನಿಮ್ಮ ದನಗಳಿಂದ ದೊರಕುವ ಹಾಲಿನ ಪ್ರಮಾಣ ಮಾತ್ರ ಬಹಳ ಕೆಳಮಟ್ಟದಲ್ಲಿದೆ. ನಮ್ಮಲ್ಲಿ ಸರಕಾರಿ ಕೇಂದ್ರಗಳಿವೆ. ಅಲ್ಲಿ ದನಗಳು ಸರಾಸರಿ ಐದಿಂದ ಆರು ಸಾವಿರ ಲೀಟರ್, ಅಂದರೆ ನಿಮ್ಮದಕ್ಕಿಂತ ಎರಡೂವರೆ ಪಾಲು ಹೆಚ್ಚು, ಹಾಲು ಕೊಡುತ್ತವೆ."

''ನೀವು ಎಷ್ಟು ವರ್ಷಗಳಿಂದ ಆದರೆ ತಳಿ ಸುಧಾರಣೆ ಮಾಡುತ್ತಿದ್ದೀರಿ?''

"ತಳಿಸುಧಾರಣೆಗೆ ಮಮತ್ವವಿದೆ, ನಾವು ಅನೇಕ ವರ್ಷಗಳಿಂದ ಇದಕ್ಕೆ ಗಮನಕೊಡುತ್ತಿದ್ದೇವೆ."

''ಆದರೆ ನಾವು ಈಗಷ್ಟೇ ಪ್ರಾರಂಭಿಸಿದ್ದೇವೆ''

''ಹಾಗೆಂದು ತಳಿಸುಧಾರಣೆಯೇ ಬಹಳ ಮಹತ್ವದ ವಿಷಯವಲ್ಲ; ದನಗಳ ಸಾಕಣೆ ಮತ್ತು ಆಹಾರವೇ ಮುಖ್ಯವಾದ ಪ್ರಶ್ನೆ.''

''ಮೂರೆರಲ್ಲಿ ಒಂದಂಶದಷ್ಟೇ ತಳಿಸುಧಾರಣೆಗೆ ಪ್ರಾಶಸ್ತ್ಯವೆಂದೂ ಎರಡಂಶ ಆಹಾರ ಮತ್ತು ಪೋಷಣೆಗೆ ಸಲ್ಲುತ್ತ ದೆಂದೂ ನಮಗೆ ಗೊತ್ತಿದೆ. ಆದರೆ ನಿಮ್ಮ ದೇಶವನ್ನೊಳಗೊಂಡು ಎಲ್ಲ ಪಾಶ್ಚಾತ್ಯ ದೇಶಗಳೂ ಹಲವಾರು ವರ್ಷಗಳ ಹಿಂದೆಯೇ ತಮ್ಮ ಜಾಮವಾರು ಸಂಪತ್ತಿನ ಕಡೆಗೆ ಗಮನಕೊಡಬಾರದೆಂಬಿಸಿದವು. ನನ್ನುಲ್ಲಿ ಐದಾರು ವರ್ಷಗಳಿಂದ, ಅಂದರೆ ಸ್ವಾತಂತ್ರ್ಯೋತ್ತರತದಲ್ಲಿಯಷ್ಟೇ, ಇತ್ತ ಲಕ್ಷ್ಯ ಹರಿಸಲ್ಪಡುತ್ತಿದೆ.''

''ನಾನಿದನ್ನು ಒಪ್ಪುತ್ತೇನೆ. ಆದರೆ ನಮ್ಮವರು ನಿಮ್ಮಿಂದಲೇ ಸಲಗೆಗಳನ್ನು ಹೇಗೆಸಾಕಬಹುದೆಂದೂ ತಳಿಸುಧಾರಣೆಮಾಡಬಹುದೆಂದೂ ಕಲಿತಂತೆ ನನಗೆ ತೋರುತ್ತದೆ. ನಮ್ಮವ ಕ್ಕಿಂತ ನಿಮ್ಮ ದೇಶದ ಸಂಸ್ಕೃತಿ ಹಳೆಯದಾಗಿದೆ''

''ಹೌದು, ಇಲ್ಲಿ ಗೋ ಸಂಸ್ಕೃತಿಯೂ ಬಹಳ ಪಳೆಯನಾಗಿ''

ಮುಂಬಯಿಯ ಮುಖ್ಯ ಮಂತ್ರಿ ಮುರಾರ್ಜಿ ದೇಸಾಯರು ನಡುವೆ ಬಾಯಿ ಹಾಕಿ "ಅದರೆ ಬ್ರಿಟಿಷರ ಅಡಳಿತ ಕಾಲದಲ್ಲಿ ಆದನ್ನು ತೀರ ನೆಲಸನು ಮಾಡಲಾಯಿತು" ಎಂದರು.

''ನಾನದನ್ನು ಒಪ್ಪುತ್ತೇನೆ'' ಎಂದು ಖ್ರುಷ್ಚೆವ್ ಹೇಳಲು ''ಕಳೆದ ಇನ್ನೂರು ವರ್ಷಗಳಲ್ಲಿ ನಾವು ಅಸಾಗರಕತೆಯತ್ತಲೇ ನಡೆದಿದ್ದೆವು' ಎಂದು ವಿವರಣೆಯನ್ನು ಎಂಜಾರ್ಜಿ ಕೊಟ್ಟರು ಖ್ರುಷ್ಚೆವ್ ಮಾತುಕತೆಯನ್ನು ನುಂದರಿಸಿ ''ದನಗಳೊಂದರ ಆತಿ ಹೆಚ್ಚಿನ ಹಾಲಿನ ಪಾಖರೆ ಎಷ್ಟು?' ಎಂದು ಖುರೋ ದಿಯರನ್ನು ಕೇಳಿದರು.

''ಶೇಕಡಾ ಏಳೂವರೆಯಷ್ಟು ಕೊಬ್ಬಿನಂಶವಿರುವ ಐದು ಸಾವಿರ ಲೀಟರ್ ಹಾಲು.''

''ನಮ್ಮ ಅತಿ ಹೆಚ್ಚಿನ ದಾಖಲೆ ಹತ್ತೇರಡು ಸಾವಿರ ಲೀಟರ್ ಪಾಲು!''

''ಕೊಬ್ಬಿನಂಶ ಮಾತ್ರ ಶೇಕಡಾ ಮೂವೆ ಅಷ್ಟಲ್ಲವೆ?''

''ಅದೆನ್ನು ನಾನೇ ನಿಮಗೆ ಹೇಳಿದ!''

''ಕೊಬ್ಬಿನಂಶವನ್ನು ೀವು ಲೆಕ್ಕಕ್ಕೆ ತೆಗೆದು ಕೊಂಡರೆ ನಮ್ಮ ದನಗಳೂ ಎಮ್ಮೆಗಳೂ ಹೆಚ್ಚು ಒಳ್ಳೆಯದೆನಿಸತ್ತವೆ.''

"ಆದನ್ನು ನಾವು ಇನ್ನೊಂದು ದೃಷ್ಟಿಯಿಂದ ನೋಡೋಣ. ನನ್ನನ್ನು ರಕ್ಷಿಸಿಕೊಳ್ಳಲು ನಾನು ಇಚ್ಚಿಸುತ್ತೇನೆ. ನಾನು ದನಗಳ ಕುರಿತು ಮಾತಾಡುತ್ತಿದ್ದೇನಾ; ನೀವು ಎಮ್ಮೆಗಳ ಕುರಿತು ಹೇಳುತ್ತಿದ್ದೀರಿ. ಇರಲಿ-ನಿಮ್ಮ ಎಮ್ಮೆಗಳನ್ನೂ ನಮ್ಮ ಎಮ್ಮೆಗಳನ್ನೂ ತೆಗೆದುಕೊಳ್ಳೋಣ. ದಕ್ಷಿಣ ಬ್ಯಾಂಪಲ್ಲಿ ನನ್ನುಲ್ಲೂ ಎಮ್ಮೆಗಳಿವೆ; ಅವುಗಳು ಶೇಕಡಾ ಏಳರಷ್ಟು ಕೊಬ್ಬಿನಂಶವಿರುವ ಹಾಲನ್ನು ಕೊಡುತ್ತವೆ ಆವರೆ ಎಮ್ಮೆಳ ಸಂಖ್ಯೆ ಬಹಳ ಕಡಿಮೆಯಾದು ದರಿಂದ ನಾವು ದನದ ಹಾಲನ್ನೆ ತೆಗೆದುಕೊಳ್ಳುತ್ತೇವೆ. ಆದುದರಿಂದಲೇ ನಾನು ದನಗಳ ಹೈಲಿನ ಉತ್ಪಾದನೆಗೆ ಕುರಿತಾಗಿಯೇ ಮಾತನಾಡುತ್ತಿದ್ದೇನಷ್ಟಿದೆ ಎನ್ನುಗಳ ವಿಷಯವಲ್ಲ. ನಮ್ಮ ದೇಶಕ್ಕೆ ಬನ್ನಿರಿ; ಎಂದರೆ ನಾವೆಲ್ಲ ವನ್ನೂ ತೋರಿಸುತ್ತೇವೆ''

''ನಿಶ್ಚಿ ಆಮಂತ್ರಣವಿತ್ತರೆ ನಾನು ಖಂಡ ತಕ್ಕೂ ಬರುತ್ತೇನೆ''

(೧೧ನೇ ಪುಟ ೧ನೇ ಕಲಂ ನೋಡಿರಿ)

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದೆಕರೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ 5/- ಸ್ಪೆಶಲ್ ರೂ.8/-

Mrs. **P. DEVEE**, F. Ds. (N. J.) (ನಿ.ಪಿ.ಪಿ. ಪ್ರತ್ಯೇಕ)

CAI CUTTA—40 ಸ್ವತಿಸ್ವರೂ: ಶಹಾಕಂಪೆನಿ, ಮಂಗಳೂರು

ಸಾಲ ಸ್ವಂತ ಜವಾಬ್ದಾರಿಯ ಮೇಲೆ ಪೊರೆಯತ್ತದೆ ಸುಲಭ ಕಂತಿನ ಪುರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನಾಡಿ ಕೊಳ್ಳುವುದು.

P. O. Box No. 3219, BOMBAY 3-

ಮಹೇಂದ್ರ ವಿಕ್ರಮರ ಪ್ರವಾಸ

ರಾಜದಂಪತಿಗಳ ಪರಿಚಯ

ಕಳೆದ ಸುಮಾರು ಐನೂರು ವರ್ಷಗಳಿಂದ ಭಾರತದಲ್ಲಿ ಸಂಚಾರ ಕಾರ್ಯಕ್ರಮವನ್ನಿಟ್ಟುಕೊಂಡು ಈ ದೇಶದೊಡನೆ ಹಾಗೂ ದೇಶವಾಸಿಗಳೊಡನೆ ಸಾಮಾನ್ಯವಾದ ಸಂಬಂಧವನ್ನು ಸ್ಥಾಪಿಸಲು ನೇಪಾಳದ ಅರಸ ಮಹೇಂದ್ರ ವೀರ ವಿಕ್ರಮ ಮಹೇಂದ್ರರ ತಂದೆ ತ್ರಿಭುವನರು ೧೯೫೦ ರಲ್ಲಿ ರಾಣಾರ ಉಸಬಟಳಿದಿಂದ ಸ್ವೋತ. ಭಾರತದಲ್ಲಿ ಆಶ್ರಯ ಪಡೆದ ಕತೆ ಎಲ್ಲರಿಗೂ ಗೊತ್ತು. ಸಂತರವು ರಾಜಕೀಯ ಧುರೀಣರು ಪ್ರಜಾಸತ್ತೆಯನ್ನು ಭದ್ರ ಬುನಾದಿ ತಳಪಾಯ

ಶಾ ದೇವರು ಪ್ರಯತ್ನಿಸಿದ್ದಾರೆ. ತನ್ನ ಪತ್ನಿ ರಾಣಿ ರೆತ್ನಾ ರಾಜ್ಯಲಕ್ಷ್ಮಿದೇವಿಯೊಡಗೂಡಿ ಈ ೪೬ನರ್ಷ ಪ್ರಾಯದ ರಾಜರು ಹಿಮಾಲಯದ ತಪ್ಪಲಿನ ನೇಪಾಳದ ಜನತೆಯ ಶುಭಾಶಯಗಳನ್ನು ಭಾರತೀಯರಿಗೆ ಸುಪ್ತಿಸುವುದಕ್ಕೆ ಕೈ ನೋಡಿದ್ದಾರೆ.

ರಾಜಕೀಯ ದುರಂತ

ನೇಪಾಳದ ಕತೆ ಈಗ ಒಂದು ಬಗೆಯಿಂದ ದುರಂತಮಯವಾಗಿಯೇ ಕಾಣಿಸುತ್ತದೆ. ಎಲ್ಲಿಯೇ ಆಗಲಿ ನಾವು ಸುಂತ್ರಿ ರಹಿತ ರಾಜನಿದ್ದುದನ್ನು ಕೇಳಿದ್ದೇವೆಯೆ? ವಿಕ್ರಮಾದಿತ್ಯ ಸಂಥ ಶಕೆಯ ಪುರಾಣಕತೆಯ ಅರಸನಾದ ಭೆಟ್ಟ ಎಂಬ ಶ್ರೇಷ್ಠ ಸುಂತ್ರಿಯಿದ್ದನು; ಆದರೆ ನೇಪಾಳಕ್ಕೆ ಇಂದು ಸುಂತ್ರಿಯೇ ಇಲ್ಲದಂತ ಸ್ಥಿತಿಯಿದೆ; ಅಲ್ಲಿ ಅರಸನೇ ಮಂತ್ರಿಯಾಗಿದ್ದಾನೆ!

ರಾಣಾರ ಹಿಡಿತದಲ್ಲಿರುವ ನೇಪಾಳದ ರಾಜಕೀಯ ಕ್ಷೇತ್ರದಲ್ಲಿ ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿಯೂ ಪ್ರಜಾಪ್ರಭುತ್ವ ಪದ್ಧತಿಯನ್ನು ರೂಢಿಗೊಳಿಸುವುದು ಕಷ್ಟಸಾಧ್ಯವೆನಿಸಿದೆ. ಇದೇ ಅರಸರು ಬಾಲ್ಯದಲ್ಲಿ ಅರಮನೆಯ ಆವರಣದೊಳಗೆ ಶಿಕ್ಷಣ ಪಡೆಯುತ್ತಿದ್ದಾಗ ಆಂಗ್ಲ ಪ್ರಜಾಸತ್ತೆಯ ಪೈಶಿಷ್ಟ್ಯವನ್ನು ಪರಿಸಿದ ಪುಸ್ತಕಪೊಂದನ್ನು ಕಣ್ಣುತಪ್ಪಿಸಿ ಮೇಲಿನ ಮೇಲಿಟ್ಟಿದ್ದರು; ಆದು ರಾಣನೊಬ್ಬನ ಕಣ್ಸೆಳೆಯಲು ಅನರ ಶಿಕ್ಷಕನ ಕೆಲಸವೇ ಹೋಯಿತು!

ಮಹೇಂದ್ರರ ತಂದೆ ತ್ರಿಭುವನರು ೧೯೫೦ ರಲ್ಲಿ ರಾಣಾರ ಉಸಬಟಳಿದಿಂದ ಸ್ವೋತ. ಭಾರತದಲ್ಲಿ ಆಶ್ರಯ ಪಡೆದ ಕತೆ ಎಲ್ಲರಿಗೂ ಗೊತ್ತು. ಸಂತರವು ರಾಜಕೀಯ ಧುರೀಣರು ಪ್ರಜಾಸತ್ತೆಯನ್ನು ಭದ್ರ ಬುನಾದಿ ತಳಪಾಯ

ಮೇಜಿ ನಿಲ್ಲಿಸಲು ಸಮರ್ಥರಾಗದೆ ಹೋದರು. ರಾಣಾರ ವರ್ಚಸ್ಸು ಇನ್ನು ಉಳಿಯಬಾರದೆಂಬ ಬಯಕೆ ಎಲ್ಲರಲ್ಲಿದ್ದರೂ ಯೋಗ್ಯ ಧುರೀಣತ್ವ ಉಂಟಾಗಿಲ್ಲವಾದುದರಿಂದ ಅರಸು ಮಹೇಂದ್ರರೇ ಎಲ್ಲವನ್ನೂ ತಲೆಗೊಡಬೇಕಾಗಿದೆ.

ಪ್ರಗತಿಶೀಲ ವ್ಯಕ್ತಿತ್ವ

ವಿಸ್ಮಯನ ಆಂಶವೆಂದು ಭಾವಿಸಲ್ಪಡುವ ನೇಪಾಳದ ಈ ಅರಸು ಕೋಸುಲ ಹೃದಯದ ವ್ಯಕ್ತಿ-ಸುಧಾರಣೆಗಳಲ್ಲಿ ಅಸಕ್ತಿಯುಳ್ಳವರೂ ಹೌದು. ಅರಸು ತ್ರಿಭುವನರು ಇದೇ ೧೯೫೫ ರಲ್ಲಿ ಮಾರ್ಚಿಯಲ್ಲಿ ಮರಣಗೊಂಡಾಗ ಅನೇಕ ದಿನಗಳ ವರೆಗೆ ಸೂತಕವನ್ನು ಜನರೆಲ್ಲರೂ ಕಡ್ಡಾಯವಾಗಿ ಆಚರಿಸುವುದು ಸಂಪ್ರದಾಯವಾಗಿದ್ದರೂ ಹೊಸ ಅರಸರು ಈ ರೀತಿ ನಿರ್ಬಂಧ ವಿಧಿಸಬಾರದೆಂದು ಭಾವಿಸಿ, ಹಾಗೆ ಅಜ್ಞೆ ಹೊರಡಿಸಿದರು.

ತಾವು ಆರಿಸಿದ ನೆಯ ಬಳಗಡೆಯಷ್ಟೇ ಶಿಕ್ಷಣಪಡಿದಿದ್ದರಿಂದ ಜನತೆಯ ನಿಕಟ ಪರಿಚಯಕ್ಕೆ ಆವಕಾಶಗಳಿರುವುದನ್ನು ಮನಗಂಡು ತಮ್ಮ ಮಕ್ಕಳನ್ನು ದಾರ್ಜಲಿಂಗಿಗೆ ಕಳಿಸಿ ಅಲ್ಲಿ ಸಾಮಾನ್ಯರಮಕ್ಕಳಂತೆಯೇ ಉದಾರವಾದ ಶಿಕ್ಷಣವನ್ನು ಕೊಡಿಸುತ್ತಿದ್ದಾರೆ.

ಇಪ್ಪತ್ತರ ಗಡಿದಾಟುವವರೆಲ್ಲಿ ಇವರಿಗೆ ಸ್ವಕೀಯ ರಾಣಾಜೊಬ್ಬನ ಮಗಳೊಡನೆ ಮದುವೆ ಮಾಡಿದ್ದರು ಆದರೆ ಆಕೆ ಕೆಲವು ವರ್ಷಗಳ ಒಂದೆ ಕೀರಿಕೊಂಡಳು. ಮಹೇಂದ್ರರಿಗೆ ಅವಳ ತಂಗಿಯಲ್ಲಿ ಆಸಮಾಧಾನವಿತ್ತಾದರೂ ತಂದೆ ಮೊದಲು ಒಕ್ಕಾಗಿಯೋ ಈ ಮದುವೆಯನ್ನು ಮೆಚ್ಚಿಕೊಳ್ಳಲಿಲ್ಲ ಕೊನೆಗೆ ಮಹೇಂದ್ರರೇ ಸೆಪ್ಪಿಯೆ - ಆ ತಂಗಿಯೊಡನೆ, ಅಂದರೆ ಈಗಿನ ರಾಣಿಯೊಡನೆ ಅವರು ಮಗುವಿಯಾಗಿ ದಾಂಪತ್ಯ ಸುಖವನ್ನು ಸುಭದ್ರವಿಸಲು ಸಮರ್ಥರಾದರು. ಸಂಪ್ರದಾಯದ ಪ್ರಕಾರ ಸಿಂಹಾಸನಕ್ಕೆ ಉತ್ತರಾಧಿಕಾರಿಯಾದವರಿಗೆ ತಾನು ಪಡೆದೇ ತೀರುವುದಿಕ್ಕಾಗಿ ಒಬ್ಬ ಹೆಂಡತಿ ಜೀವಂತಳಿರುವಾಗಲೇ ಇನ್ನೊಬ್ಬಳನ್ನು ಕಟ್ಟಿಕೊಳ್ಳಬೇಕಾಗಿದ್ದರೂ ಸುಜೇಂದ್ರರು ಉತ್ತಮ ಮನಸ್ಸು ಕೊಟ್ಟಿಲ್ಲ.

ಶುಭಕರ ಸಂಬಂಧ

ಭಾರತದೊಡನೆ ನೇಪಾಳದ ಗೆಳತನ ಪ್ರಾಚೀನ ಕಾಲದಿಂದಿದೆ—ಹಿಮಾಲಯದ ತಪ್ಪಲಿನಲ್ಲಿರುವ ಈ ದೇಶಭಾರತದ ಕಾವ್ಯಗಳಲ್ಲಿ ಸಹ ವರ್ಣಿತವಾಗಿದೆ. ಮಹೇಂದ್ರರ ಕವಿಹೃದಯ ಅನೇಕ ಸುಂದರ ಕವನಗಳನ್ನು ಹಾಡಿದೆ. ತನ್ನ ಮೊದಲನೆಯ ಹೆಂಡತಿ ತೀರಿಕೊಂಡ ಬಳಿಕ ಕವಿತಾಕಾಮಿನಿಯೇ ಅನೇಕ ತಿಂಗಳುಗಳ ವರೆಗೆ ಅವರ ಹೃದಯದಲ್ಲಿ ನೆಲೆಯಾಗಿದ್ದಳೆನ್ನಬಹುದು. ಅವರ ಸುಂದರ ರಸಭರಿತ ಕವನಗಳನ್ನು ಸಿನೆಮಾ ಮಂದಿರಗಳಲ್ಲಿ ಆಕಾಶ ವಾಣಿಗಳಲ್ಲಿ ನುಡಿಸುತ್ತಿದ್ದವರಿಗೆ ಮುಂಬಿನ ಅರಸರ ಪೈದ್ಧತ ತಿಳಿದಿತ್ತೆನ್ನುವುದು ಕಷ್ಟ.

ಅರಸು ಮಹೇಂದ್ರರ ಮೂವರು ಸಹೋದರಿಯರು ಭಾರತದ ಬೇರೆಬೇರೆ ರಾಜಮನೆತನಗಳಿಗೆಸೊಸೆಯಂದಿರಾಗಿಬಂದಿದ್ದಾರೆ. ಭಾರತ ದೊಡನೆ ನೇಪಾಳಕ್ಕೀಗ ರಾಜಕೀಯ ಸಂಬಂಧವಲ್ಲದೆ ವಾಣಿಜ್ಯ ಹಾಗೂ ಆರ್ಥಿಕ ಕ್ಷೇತ್ರದ ವಿಶೇಷವಾದ ಸಂಪರ್ಕ ಏರ್ಪಟ್ಟಿದೆ. ಕೆಲವರು ಭಾರತವು ನೇಪಾಳದಲ್ಲಿಇನ್ನಾವರ್ಜಕವಾಗಿ ಪಸ್ತ ಕ್ಷೇಪ ನಡೆಸುತ್ತಿದೆ ಎನ್ನುತ್ತಾರೆ-ಆದರೆ ನೇಪಾಳದ ಅರಸು ಮಹೇಂದ್ರ ಹೀಗೆರಡೂ ಹೇಳಿಲ್ಲ, ಅಲ್ಲಿಯ ಜನರು ಭಾರತದ ಸಹಾಯಗಳಿಗೆ ಕೃತಜ್ಞತೆಯನ್ನೆ ತೋರಿಸುತ್ತಿದ್ದಾರೆ. ಇದು ಸಂತೋಷಕರವಾದ ವಿಷಯ.

ರಾಜಗದ್ದುಗೆಯನ್ನು ಈಗಾಗಲೇ ಏರಿದ್ದರೂ ವಿದ್ಯುಕ್ತವಾಗಿ ಮಹೇಂದ್ರರ ಕೀರೀಟಧಾರಣೆಯನ್ನು ಮುಂದಿನ ವರ್ಷ ನಡೆಸುವ ವಿಚಾರವಿದೆ. ರಾಜಕೀಯ ಪಕ್ಷಗಳೊಡನೆ ಒಡಂಬಡಿಕೆಗೆ ಬಂದು ಇನ್ನೆರಡು ವರ್ಷಗಳಲ್ಲಿ ಪ್ರಜೆಗಳಿಗೆ ನೇರವಾಗಿ ಜವಾಬ್ದಾರಿಯುಳ್ಳ ಜನಪ್ರಿಯ ಮಂತ್ರಿ ಮಂಡಳವನ್ನು ಸ್ಥಾಪಿಸುವ ಪ್ರಯತ್ನವನ್ನು ಮಹೇಂದ್ರರಿಂದ ನಡೆದಿದೆ. ಇವೆಲ್ಲ ಶುಭ ಕಾರ್ಯಗಳಿಗೆ ಯಶಸ್ಸನ್ನು ಕೋರುತ್ತ ಭಾರತೀಯರು ಆನಂದಿಸುವುದು ಸಹಜವಾಗಿ ಸ್ವಾಭಾವಿಕ

(ನಂತೇ ಪುಟದಿಂದ)

"ನಾವು ನಿಮ್ಮನ್ನು ಆಹ್ವಾನಿಸುತ್ತೇವೆ. ಈಗ ಕೃಷಿವಿಭಾಗದ ಉಪಮಂತ್ರಿ ಶ್ರೀ ರಸು ಲೋಪರನ್ನು ಭೇಟಿಯಾಗಿರಿ. ಅವರು ನಿಮ್ಮನ್ನು ಹೋಲುವುದಿಲ್ಲವೆ? ಅವರು ತಂತ್ರಜ್ಞಿಕಾಸ್ತ್ರನಪರು ನಮ್ಮ ಕೃಷಿಯ ವಿಷಯವಾಗಿ ನಿಮ್ಮನ್ನವರು ಹೇಳಬಲ್ಲರು. ಹತ್ತಿ ಮತ್ತು ಜಾನುವಾರುಗಳ ವಿಷಯವೇ ಅವರ ವಿಶೇಷ ಅಧ್ಯಯನ ಕ್ಷೇತ್ರ. ನಮ್ಮ ಅನುಭವದಿಂದ ನಮಗೆ ಲಾಭಗಳಿಸಬಹುದು. ನಾವದನ್ನು ಬಹಳ ಕಠಿಣ ನೂಗ್ಗದ ಮೂಲಕ ಕಲಿತೆವು; ಆಗ ನಾವು ಬೇಕಾದಷ್ಟು ನೋವು ತಿಂದೆವು. ಆದೇ ವಿಷಯವನ್ನು ಕಲಿಯಲಿಕ್ಕೆ ನೀವು ಸಹ ಅಷ್ಟು ನೋವು ತಿನ್ನಬೇಕೆಂದು ನಾನು ಭಾವಿಸುವುದಿಲ್ಲ."

ಸ್ವಾಭಿಮಾನಿಯೂ ದಾಕ್ಷಿಣ್ಯತ್ವಳ್ಳ ಸ್ವಸ್ಥವಾದಿ ತನದ ಆಜ್ಞಾಶಕ್ತಿರುವ ಖುಶಿಪರ ಮರ್ಜಿ ಬುಲ್ಗಾನಿನ್ನರ ಗಾಂಭೀರ್ಯಕ್ಕಿಂತ ಹೆಚ್ಚಾಗಿ ಜನರ ಮನಸ್ಸನ್ನು ಸಳೆದುಕೊಂಡಿದೆ ಎಂದರೆ ತಪ್ಪಾಗದು.

(ನಂತೇ ಪುಟದಿಂದ)

ಗೆ ಜೇಳೆ ಅವರು ಈ ಸಮಸ್ಯೆಯ ನಿವಾರಣೆಗೆ ಸಂಬಂಧಿಸಿದ ತಮ್ಮ ವಿಚಾರಧಾರೆಗೆ ವಿವರವಾದ ತಳಹದಿಯಾಗಿ ಕೆಳಗಿನ ಮೂರು ಸಂಗತಿಗಳನ್ನು ನಿರೂಪಿಸಿದ್ದಾರೆ —(೧) ಸಮಿಶ್ರ ಜಾಗು ಏಕ ಭಾಷೆಯ ರಾಜ್ಯಗಳೆರಡಕ್ಕೂ ಈ ಕನ್ನಡ ನಾಡಿನ ಸ್ಥಾಪನೆಯಿಂದಾಗುವ ಎಲ್ಲ ರಾಜ್ಯಗಳಿಗೂ ಅನ್ಯಾಯವಾಗುವಂತೆ ಸಹಕಾರ ಗಳಿಂಟೇ ಕು; (೨) ಅಲ್ಪ ಸಂಖ್ಯಾತರಿಗೆ ತಮ್ಮ ಶೈಕ್ಷಣಿಕ, ಸಾಂಸ್ಕೃತಿಕ ಮತ್ತಿತರ ಹಿತಾಸಕ್ತಿಗಳ ರಕ್ಷಣೆಗೆ ಎಲ್ಲ ಅಧಿಕಾರವನ್ನೂ ಪ್ರಾಂತ ಮತ್ತು ಪ್ರತ್ಯೇಕತಾ ಭಾವನೆಯನ್ನು ರಾಜ್ಯೋತ್ಪಾದಿಸುವುದಕ್ಕೆ ಅಧವಾ ಸ್ವಾಭಿವಿಕವಾಗಿ ಇತರರೊಡನೆ ಬೆರೆತು ಹೋಗುವ ಕ್ರಮಕ್ಕೆ ಆವಕಾಶವಿತ್ತುತ್ತಿರುವ ಕ್ರಮ ಕೈಗೊಳ್ಳಲಾಗಿರುವುದರಿಂದ ಅಲ್ಪ ಸಂಖ್ಯಾತರಿಗಿತ್ತ ರಕ್ಷಣೆಯು ಕ್ರಮ ಪರಿಣಾಮಕಾರಿಯಾಗಿದ್ದಿಕ್ಕಿನ್ನಬಹುದು. (೩) ಭಾಷಾವಾರು ಪ್ರಾಂತಗಳಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶಗಳು ಹೆಚ್ಚಾಗಿ ಲಭಿಸುವುದಕ್ಕೆ ಸಾಧ್ಯವಿದೆ ಎಂಬುದನ್ನು ಅಂಕಿ ಅಂಶಗಳ ಮೂಲಕ ಸಮರ್ಥಿಸಿದ್ದಾರೆ.

ಈ ಮೂರು ಸಂಗತಿಗಳಲ್ಲಿ ಮೊದಲನೆಯ ಸಂಗತಿಯ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಎರಡನೆಯ ಸಂಗತಿಯ ಬಗ್ಗೆ ಸಾಕಷ್ಟು ಚರ್ಚೆ ನಡೆದಿಲ್ಲ. ಮೂರನೆಯ ಸಂಗತಿಯ ಬಗ್ಗೆ ಚರ್ಚೆ ನಡೆದಿಲ್ಲವೆಂದೇ ಹೇಳಬೇಕು. ಈ ಮೂರು ಸಂಗತಿಗಳಲ್ಲಿ ಮೊದಲನೆಯ ಸಂಗತಿಯ ಬಗ್ಗೆ ಮಾತ್ರ ಚರ್ಚೆ ನಡೆದಿರುವುದರಿಂದ ಈ ಚರ್ಚೆಯ ಫಲಿತಾಂಶವನ್ನು ಕುರಿತು ಏನನ್ನೂ ಹೇಳಲಾಗದು.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು. (ದ. ಕ.)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮುನೀಯರು ನಮ್ಮ ಬೇಂಕಿನಿಂದ, ಚಿನ್ನಾಭರಣ ನಗಗಳ ಊಡಿನ ಮೇಲೆ ಪಡೆದ ಸಾಲವನ್ನು ನುರುಜಾನತಿ ಸೂಚುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿ ಕೊಂಡಾಗ್ಯೂ ಆಸ್ಲು-ವ-ಬಡ್ಡಿ, ಯಾವುದನ್ನೂ ಈ ತನಕವೂ ಕೊಡದೆ ಜಾಕಿ ಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಚಿಟ್ಟಿ ರಿಜಿಸ್ಟ್ರಿ ನೋಟೀಸುಗಳು ಕಳರಣಾಂತರಗಳಿಂದ ನಮಗೆನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟ ನಗಗಳನ್ನು ಇನೇ ದಶಂಬರ ತಿಂಗಳ ತಾರೀಕು ೨೫ನೇ ಶುಕ್ರವಾರ ಅವರಾವ್ಕೆ ಗಂಟೆ ೩.೦ಕ್ಕೆ - ಯೂ - ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ, ಬೇಂಕಿನ ವರಾಂಡದಲ್ಲಿ ಬಹಿರಂಗವಾಗಿ ಹರಾಜು ಮಾಡಲಾಗುವುದು ತಿಳಿದಿರಲಿ.

ಸಾಲದ ಜಂಗಾಸ್ತ್ರಿ ನಂಬ್ಕೆ	ಹೆಸರು ಮತ್ತು ವಿಳಾಸ	ನೊಬಲಗು ರೂ. ಆ.
215/53	ಶ್ರೀ. ಬಿ. ಎಸ್. ರಾಮಕೃಷ್ಣ ಪೈ, ಮಂಜುನಾಥ ಪೈಯವರ ಮಗ, ಪಂಚಾಯತ್‌ಬೋರ್ಡು ಪ್ರೆಸಿಡೆಂಟ್. ಬಿಜೂರು	188 2
72/54	,, ರಾಘವಕೃಷ್ಣ ಶ್ಯಾನುಭೋಗ್ಕನರಿಂದ ಶ್ಯಾನುಭೋಗರೆ ಮಗ. ಹೊಟೇಲು ವ್ಯಾಪಾರಿ. ಯಡ್ತರೆ ಗ್ರಾಮ ಬೈಂದೂರು.	108 9
259/54	,, ಹಿರಿಯಣ್ಣ ಸೆಟ್ಟಿ, ತಂಗಯ್ಯ ಸೆಟ್ಟಿರ ಆಳಿಯ. ನಾಗೂರು ರಂಗಯ್ಯ ಸೆಟ್ಟಿರ ಮನೆ ಕಿರಿಮಂಜೇಶ್ವರ. P. O.	519 0
342/54	,, S. ಮಂಜಯ್ಯಸೆಟ್ಟಿ, ಕಾರೆಕಟ್ಟೆ ನಾಗಯ್ಯಸೆಟ್ಟಿರ ಮಗ, ಹೊಸಮನೆ ಶಿರೂರು.	373 1
1161/54	,, —do—	94 12
362/54	,, ಶ್ರೀನಿವಾಸ, R. ಹೋಬಳಿದಾರ್. ರಾಮಯ್ಯ ಸೇರುಗಾರರ ಮಗ. ಪಡುವರಿ.	13 13
774/54	,, S ಪಟೆಯಪ್ಪಯ್ಯ. ದೇವಪ್ಪಯ್ಯನ ಮಗ. ಮೇಲ್ಪಮ್ಮ ಶಿರೂರು.	33 13
998/54	,, ರಾಮಯ್ಯ ಸೆಟ್ಟಿ. ಸೇನ ಸೆಟ್ಟಿ ಮನೆ ನಾರಾಯಣ ಸೆಟ್ಟಿರ ಆಳಿಯ. ತಿರೂರು.	66 8
1093/54	,, ಯು. ಶಿವರಾಮ ಸೆಟ್ಟಿ. ಕುಪ್ಪಯ್ಯ ಸೆಟ್ಟಿರ ಆಳಿಯ. ಶಾಲಾ ಅಧ್ಯಾಪಕ ಕೆರ್ಗಾಲು.	55 3
1158/54	,, ಹೊನ್ನೆಯ್ಯನಮಾಸಿ ಕೇರುಗಾರೆ. ಅಣ್ಣಪ್ಪ ಸೇರುಗಾರರ ಮಗ. ಪಡುವರಿ.	17 11
1169/54	,, ಮಂಜಯ್ಯ ಸೆಟ್ಟಿ, ಸೂರ್ಕುಂದ ನುಯ್ಕಾಡಿ ಮನೆ ಗೋವಿಂದ ಸೆಟ್ಟಿರ ಆಳಿಯ, ಸೈಂದೂರು ಗ್ರಾಮ ಸೈಂದೂರು.	97 8
1246/54	,, ಯು. ಬಾಬುವಾಸು ಸೇರ್ವಿ, ಗಣಪಯ್ಯ ಸೇರಿಗರ ಮಗ ಉಪ್ಪುಂದ.	322 1

ಬೈಂದೂರು;
25-11-1955

ಎಚ್. ರಾಜೀವ ಸೆಟ್ಟಿ.
ಏಜಂಟ್

ಉಪ್ಪಿ ಡಿ. ಮುನ್ಸಿಫ್ ಕೋರ್ಟಿನಲ್ಲಿ

O. P. No. 144/1955.

ಕೆ. ಸುಬ್ರಾಯ ಕಾಮತ್ ..ಅರ್ಜಿದಾರ.

ಇವರೆಲ್ಲರ

ಮೇಲ್ಕಂಡ ವ್ಯವಹಾರದ ಅರ್ಜಿದಾರರ ತಂದೆ ಮೃತ ಗಣಪತಿ ಸುಬ್ರಾಯ ಕಾಮತರು ಮುಂಗರೋಲು ಪೊಸ್ಟಲರು ಇನ್ಸೂರೆನ್ಸ್ ಕಂಪೆನಿಯಲ್ಲಿ ಪಾಲಿಸಿ ನಂಬ್ರ 9151ನೆಗೆ ಇನ್ಸೂರು ನೂಡಿದ ರೂಪ್ಯಾ 2018_5-0; ಬೊಂಬಾಯ್ ಲೈಫ್ ಇನ್ಸೂರೆನ್ಸ್ ಪೋಲಿಸಿ ನಂಬ್ರ 111634ನೆಗೆ ನೂಡಿದ ಇನ್ಸೂರೆನ್ಸಿನ ರೂಪ್ಯಾ 1071_4-0; ದಿ ಲಕ್ಷ್ಮಿ ಸ್ಯೂರಿಟಿ ಇನ್ಸೂರೆನ್ಸ್ ಪೋಲಿಸಿ ನಂಬ್ರ 14 1480 ನೆಗೆ ಇನ್ಸೂರೆ ನೂಡಿದ ರೂಪ್ಯಾ 2000_0-0 ಈ ಮೇರೆಗೆ ಸದ್ರಿ ಅಸಲು ಪೆಸೂಲು ಸಡೆಯುವರೆ ತಾನು ಹಕ್ಕುದಾರನಾಗಿ ಆ ಬಗ್ಗೆ ಸಕ್ಷೇಶನ್ ಸರ್ಟಿಫಿಕೇಟು ಕೊಡುವಂತೆ ಆರ್ಜಿದಾನನು ಕೊಟ್ಟ ಸದ್ರಿ ಅರ್ಜಿಯು ತಾ. 13-12-55ಕ್ಕೆ ತನ್ನಾಗೆ ಇಟ್ಟುರುವುದರಿಂದ ಆಕ್ಷೇಪ ಜೇಳಿತಕ್ಕವರು ಆ ದಿನ ಸದ್ರಿ ಕೋರ್ಟು ಮುಂದೆ ಸಾಮಾನ್ಯಾಗಿ ಹಾಜರಿ ರು ಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Petitioner.

Udipi, Dated 23-11-1955.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವ ವರು ಎರಡೆರಡು ಪ್ರತಿಗಳನ್ನು ಕಳುಹಿಸಬೇ ಕಾಗಿದೆ. ಸಂ ನ)

ಕಿಷ್ಕಿಂಧಾಕಾಂಡಂ— (ವೆಂಕಾಮಾತ್ಯ ಕವಿ ವಿರಚಿತ ಶ್ರೀಮದ್ರಾಮಾಯಣದಿಂದ)— ಸಂಪಾದಕರು ಹಾಗು ಪ್ರಕಾಶಕರು: ಸರ ಕಾರಿದ ಪ್ರಾಚ್ಯ ಹಸ್ತಲಿಖಿತ ಪುಸ್ತಕ ಭಂಡಾ ರ, ಮದ್ರಾಸು ಜ. ಬೆಲೆ: ರೂ. ೩-೧೦-೦.

ನಮ್ಮ ೨—೯—೧೯೫೫ನೇ ಸಂಚಿಕೆಯಲ್ಲಿ ಹೈದರಾಲಿಯ ಕಾಲದಲ್ಲಿದ್ದ ಶ್ರೀ ವೆಂಕಾಮಾತ್ಯ ಕವಿಯು ಬರೆದ ರಾಮಾಯಣ ಕಾಸ್ಯದ ಆಯೋಧ್ಯಾಕಾಂಡವನ್ನು ಕುರಿತಾದ ವಿಮರ್ಶೆ ಯಲ್ಲಿ ಸುಂದರವಾದ ಅಲಂಕಾರಗಳಿಂದಲೂ ಪ್ರೌಢ ಶೈಲಿಯಿಂದಲೂ ಲಲಿತ ನಿರೂಪಣೆ ಗಳಿಂದಲೂ ಸೊಗಯಿಸಿರುವ ಈ ಗ್ರಂಥದ ಪ್ರಕಾಶಕರೆನ್ನು ಮನಸಾರೆ ಅಭಿನಂದಿಸಿದ್ದೆ ವು. ಆದೇ ಸಂಸ್ಥೆಯವರಿಂದ ಕಾವ್ಯದ ಮುಂ ದಿನ ಭಾಗವಾದ ಕಿಷ್ಕಿಂಧಾಕಾಂಡವನ್ನು ಪ್ರಕಟಿಸಿದ್ದಾರೆ. ಇಲ್ಲಿಲ್ಲಿ ಇಸ್ಪತ್ತು ಸಂಧಿಗ ಳೆಮ್ಮು ಆಲಂ ಪದ್ಯಗಳು ನಾರ್ಥಿಕ ಪಟ್ಟಿ ಳಿಂದಷ್ಟಿಸಲ್ಪಟ್ಟಿವೆ ಶ್ರೀರಾಮನು ಪಂಪಾಸ ರೋ ವ ರ ದಲ್ಲಿ ಸೀತೆಯ ವಿರಹವನ್ನು ನೆನೆ ನೆನೆದು ಶೋಕಿಸುವಲ್ಲಿಂದ ಹಿಡಿದು ಅಂಜ ನೇಯನು ದಕ್ಷಿಣ ಸಮುದ್ರವನ್ನು ನಗೆಯಲು ಸಿದ್ಧನಾಗಿ ಮಹೇಂದ್ರಾಚಲವನ್ನೇರಿನಲ್ಲಿಯ ತನಕದ ಕತೆಯನ್ನು ಈ ಕಾಂಡದಲ್ಲಿ ಹೇಳ ಲಾಗಿದೆ. ನಾನಲ್ಲಿ ಕಾಣುವ ಶ್ರೀ ರಾಮಚಂ ದ್ರನು ಪಂಡಿತರಿಗಿಂತಲೂ ಹೆಚ್ಚಾಗಿ ಪಾಮರರ ಹೃದಯಕ್ಕೆ ಹತ್ತಿರನಾಗುತ್ತಾನೆ. ಅವನ ಮಾ ತುಗಳು ಸಾಮಾನ್ಯ ಮನುಷ್ಯರ ಭಾವನೆಗಳ ನ್ನೆ ಹೋಲುತ್ತವೆ ಸಂಪಾದಕರು ಸಾಧ್ಯವಿ ದ್ದಷ್ಟು ನುಟ್ಟಿಗಳನ್ನು ಸ್ಪಾಲಿತ್ಯಗಳನ್ನು ತಿದ್ದಲು ಪ್ರಯತ್ನಿಸಿ ಯಶಸ್ವಿಯನ್ನು ಗಳಿಸಿದ್ದಾರೆ ಮುಂ ದಿನ ಭಾಗಗಳನ್ನು ಪ್ರಕಟಿಸುವುದಕ್ಕೆ ಮುಂತಿ ಇವರಿಗೆ ಪ್ರಕಟವಾಗದಿರುವ ಬಾಲಕಾಂಡ ವನ್ನು ಬೆಳಕಿಗೆ ತರುವ ಇಚ್ಛೆಯನ್ನು ಸೊಂದಿ ದ್ದಾರೆ ಪ್ರಸ್ತುತ ಗ್ರಂಥ ಭಾಗದ ಬೆಲೆಯ ನ್ನು (ಹಿಂದಿನದರೊಡನೆ ಹೋಲಿಸಿದರೆ) ಗಣ ನೀಯವಾಗಿ ತಗ್ಗಿಸಿದ್ದಾರೆ. ಕನ್ನಡ ಸಾಹಿ ತ್ಯ ಪ್ರಿಯರು ಈ ಉದ್ಯಮವನ್ನು ಪ್ರೋತ್ಸಾಹಿಸಲಿ!

ಗೋರಾ—

ಅನುವಾದಕರು ಶ್ರೀಮತಿ ಎಚ್ ಎ. ಸಾವಿತ್ರಮ್ಮ ಪ್ರಕಾಶಕರು: ಕಾವ್ಯಾಲಯ, ಮೈಸೂರು ಬೆಲೆ: ೨—೪—೦

ದಿವಂಗತ ರವೀಂದ್ರನಾಥ ಠಾಕೂರರು ಈ ಕಾದಂಬರಿಯ ಮೂಲ ಲೇಖಕರಾಗಿದ್ದಾರೆ ಅನುವಾದಕರು ಸುಮಾರು ಅರವಾಸಿ ಗಾತ್ರ ಕ್ಕೆ ಇಡೀ ಕತೆಯನ್ನು ಸಂಕ್ಷೇಪಿಸಿದ್ದರೂ ಇಷ್ಟೊಂದರಕ್ಕಿಂತಲೂ ಹೆಚ್ಚು ಪುಟಗಳನ್ನು ತುಂಬಿ ಅವು ಆವರಿಸಿ, ಈ ಸಂಪೂರ್ಣಕಾದಂಬರಿ ಯು ರೂಪದಲ್ಲಿ ಬೆಳಕಿಗೆ ಬಂದಿರುತ್ತದೆ. ಇನ್ನೊಬ್ಬ ಪ್ರಕಾಶಕರು ಇದೇ ಕಾದಂಬರಿ ಯ ಮೊದಲಿನ ೨೨ ಅಧ್ಯಾಯಗಳನ್ನು ಮಾತ್ರ ಕನ್ನಡದಲ್ಲಿ ಪ್ರಕಟಿಸಿರುವುದನ್ನು ಇಲ್ಲಿ ನೆನೆಯಬಹುದು. ಅದರೊಡನೆ ಹೊಲಿಸಿದರೆ, ಇಲ್ಲಿಯ ಅನುವಾದ ತುಂಬ ಗಂಭೀರವಾಗಿದೆ, ತೇಜಸ್ವಿಯಾಗಿದೆ, ಮೂಲದ ಆಶಯವನ್ನು ನಿರ್ದುಷ್ಟವಾಗಿ ಹೊರಗೆಡಹುವಂತಿದೆ ಎನ್ನಬ ಹುದು, ಅಲ್ಲದೆ ಕನ್ನಡ ಶೈಲಿಯೂ ಮೆಚ್ಚತ ಕ್ಕ ನುಟ್ಟಿಲ್ಲದೆ ಅದ್ಯಂತವಿಂದ ಗಾತ್ರ ನಣ್ಣ ದೆನಿಸಿದರೂ ಓದುಗನಿಗೆ ಈ ಚಿಕ್ಕ ಗಾತ್ರದ (ಆದರೂ ೪೧೬ ಪುಟಗಳಿವೆ!) ಪುಸ್ತಕವೇ ಯೋಗ್ಯವೆನಿಸುತ್ತದೆ. ಇಲ್ಲಿಯ ಕತೆ ರ್ಗನೇ ಶ ಮಾನದ ಉತ್ತರಾರ್ಧದಲ್ಲಿ ಬಂ ಗಾಳದ ತನಮಾಜಿಕರೊಗದಲ್ಲಿದ್ದ ಮನುವೆತ್ತದ ಪ್ರಶ್ನೆಯೊಂದರ ಒನ್ನೆರೆಯಲ್ಲಿ ನಿರೂಪಿತವಾ ಗಿದೆ ಬ್ರಹ್ಮ ಸಮಾಜ ಮತ್ತು ಹಿಂದೂ ಮತ ಗಳ ಯೋಗ್ಯತೆ, ದೇಶ ಪ್ರೇಮ ಮತ್ತು ಬ್ರಿಟಿ ಷರ ವಾಸ್ಯ ಎಂಬೀ ಪ್ರವೃತ್ತಿಗಳ ಘರ್ಷಣೆ ಇತ್ಯಾದಿ ಮಹತ್ವದ ಜಿಜ್ಞಾಸೆಯ ವಿಷಯಗಳ ನ್ನು ಘಟನೆಗಳಿಗಿಂತಲೂ ವಿಚಾರಗಳೇ ಪ್ರಧಾನ ವಾಗುಳ್ಳ ಕತೆಯ ರೂಪದಲ್ಲಿ ಎತ್ತಿ ಕೊಳ್ಳಲಾ ಗಿದೆ ಇಲ್ಲಿಯ ಪಾತ್ರ ಪೋಷಣೆಯು ತುಂಬ ಪುಷ್ಕಿಯುತವಾಗಿದೆ, ಸ್ಪಷ್ಟವಾಗಿ ಅವು ಕಣ್ಣಿ ನ ಮುಂದೆ ಬಂದು ನಿಲ್ಲುತ್ತವೆ. ಅನಂದಮ ಯಿ ಮತ್ತು ಪರೇಶ ಬಾಬು. ಸೋರಾ ಮತ್ತು ಸುಜರಿತೆ, ವಿನಯ ಮತ್ತು ಲಲಿತ, ಹರಿ ಣ ಮತ್ತು ವರದ, ಹರಿಮೋಹಿನಿ ಮತ್ತು ಅನಿ ತಾ ಇವೆಲ್ಲ ಜೋತೆಗಳು ಒಂದೊಂದು ಗುಂ ಪಿನ ಮನೋಭಾವನೆಯನ್ನು ಜೊಕ್ಕವಾಗಿ ಪ್ರತಿ ಬಿಂಬಿಸುತ್ತವೆ ಸಿತೀರನೆಂಬ ಮೆದುಗನ ಪಾತ್ರ ಸೃಷ್ಟಿಯೂ ರಸವತ್ತಾಗಿ ಮೂಡಿದೆ ಇ ದೊಂದು ನ್ಯೂನ್ಯತೆಗೆ ಮಾತ್ರದರ್ಶಕವಾಗಬಲ್ಲ, ಸಮಾಜದ ಮುನ್ನಡೆಗೆ ದಾರಿದೀಪವಾಗಬಲ್ಲ ವಿಷಯ ಸಂಪತ್ತುಗಳಿಂದ ತುಂಬಿದ, ಮಾನ ಸಿಕ ತುಮುಲದ ರಸವತ್ತಾದ ಸನ್ನಿವೇಶಗಳಿ ರುವ ಮೇಲ್ಪಟ್ಟಿದ ಕಾದಂಬರಿ ಎಂದು ಅನು ಮಾನಿಸಲಿಲ್ಲದು ಹೇಳಬಹುದು

ಕಲಾವಿದ ಕೃಷ್ಣ ಹೆಬ್ಬಾರರು—

ಬರೆದವರು ಶಿವರಾಮ ಕಾರಂತ ಪ್ರಕಾ ಶಕರು ಮಹಾತ್ಮಾ ಗಾಂಧಿ ಸ್ಮಾರಕ ಕಾರ್ಯ ಜ, ಉಡುಪಿ ಬೆಲೆ ರೂ. ೦—೬—೦.

ಭಾರತದಲ್ಲಿಂದು ಶ್ರೀ ಕೆ. ಹೆಬ್ಬಾರರ ಹೆಸರನ್ನು ಕೇಳಿಲ್ಲದ ಚಿತ್ರ ರಸಿಕರು ಸಿಗುವಂ ತಿಲ್ಲ ಅವರನ್ನು ಕುರಿತಾದ ಈ ಚಿಕ್ಕ ಪು ಸ್ತಕಕ್ಕೆ ಎರಡು ದೃಷ್ಟಿಯಿಂದ ಸ್ವಾಗತವನ್ನು ನಾವು ನೀಡಬೇಕಾಗುತ್ತದೆ— ಒಂದನೆಯದಂ ದರೆ ಪುಸ್ತಕದಲ್ಲಿ ಪ್ರಸ್ತಾಪಿಸಲಾದ ಕಲಾವಿದ ಹೆಬ್ಬಾರರು ನಮ್ಮವರು. ಉಡುಪಿಗೆ ಎಂಟೊಂ ಭತ್ತು ಮೈಲು ಅಗ್ನೇಯದಲ್ಲಿರುವ ಕಟ್ಟಿಂಗೆರೆ ಯಲ್ಲಿ ಸುಬ್ಬಿ, ಇಲ್ಲಿಯ ಸ್ಥಾಳಿಕ ಕಾಲೆಯ ಅಧ್ಯಾಪಕರಾಗಿ ತಾರುಣ್ಯದ ಪ್ರಥಮ ದಿನ ಗಳನ್ನು ಕಳವ ನಮ್ಮ ಇಜನ'' ಇಂದು ಅಂ ತಾರಾಷ್ಟ್ರೀಯ ಖ್ಯಾತಿಯ ಚಿತ್ರಕಾರನಾಗಿ ಮೆರೆದಿರುವುದರ ಕಿರಿಳನ್ನು ಇಮ ನಿವರಿಳು ಸ್ತದ ಎರಡನೆಯದೆಂದರೆ, ಚಿತ್ರಕಲಾಕ್ಷೇತ್ರ ದ ಕುರಿತು ನಮ್ಮಲ್ಲಿರುವ ಸಾಹಿತ್ಯ ತೀರ ವಿರ ಳ ಶ್ರೀಯುತ ಹೆಬ್ಬಾರರ ಚಿತ್ರಕಲೆಯ ನೈಶಿಷ್ಟ್ಯವನ್ನು ಗ್ರಹಿಸಿಕೊಳ್ಳುವುದಕ್ಕೆ ಅ ನುಕೂಲವಾಗಬೇಕೆಂಬ ವ್ಯಾಜವಲ್ಲಿ ಈ ಪು ಸ್ತಕವು ಚಿತ್ರ ಕಾರನ ಕುಂಚದ ರಕ್ತಿಯ ಮೂಲ ಸ್ರೋತ ಏನೆಂಬುದನ್ನೂ ನುನವರಿಕೆ ಮಾಡಿಕೊಡುತ್ತದೆ. ಶ್ರೀ ಹೆಬ್ಬಾರರ ಕುರಿತು ಈ ಪುಸ್ತಕದ ಮೂಲಕ ನಾಲ್ಕು ಸಾತಾ ಬ ರೆಯಹೊರಟಿವರು ಹತ್ತು ಸುಖಗಳ ವ್ಯ ಕ್ತಿತ್ವದಿಂದ ರೋಭಸಿನ ವಿಶಿಷ್ಟತಾ ಕಾರಂತ ರೆಂಬುವನ್ನು ಸಾರೆಯಲಾದು ಅವರಿಗೆ ಹೆಬ್ಬಾರರೆಂಬಿಕೆ ಅಕ್ಷರಕಟವಾದ ಪರಿಚಯವಾ ದೆ, ಅಷ್ಟೇ ಗ್ರತ ಚಿತ್ರಕಲಾಕ್ಷೇತ್ರದಲ್ಲಿ ಯೂ ಸಾಕಷ್ಟು ಪರಿಶ್ರಮವಿದೆ, ಸಾಂಸ್ಕೃತಿಕ ಕ್ಷೇತ್ರದ ಬೆಳವಣಿಗೆಯ ಮನಸೊಂದು ಆತ್ಮಕಲ್ಯಾಣದ ಹಾಗು ಬ್ರ ಹ್ಮಾನಂದದ ಮಾರ್ಗಸಾಧನೆಯ ಬಗೆಯನ್ನು ತಿಳಿಯಲು ಅರವುನೆಯಿಂದ ಹೊರಟು ಹೋ ಗುವುದನ್ನು ಹಿನ್ನೆಲೆಯಲ್ಲಿಟ್ಟುಕೊಂಡು ರಚಿಸಿ ದ ಈ ಚಿತ್ರನಾಟಕವು ಶಾಂತಿಗಳಲ್ಲಿ ಸುಕ್ತಳಿಂ ದ ಅಭಿನಯಸಲ್ಪಡಲು ಜೆನ್ನಾಗಿದೆ. ಸಂಭಾ ಹಿಕೆಗಳೂ ದೃಶ್ಯ ಸಂಯೋಜನೆಗಳೂ ಸಾಕ ನ್ನು ಪರಿಣಾಕುಕಾರಿಯಾಗಿವೆ. ಸೂಕ್ಷ್ಮ ವಿ ಮರ್ಶೆಗೆ ಕೆಲವು ರೋಪದೋಷಗಳು — ಮು ಖ್ಯವಾಗಿ ಸಂಭಾಸಣೆಯಲ್ಲಿ ಬರುವ ಕೆಲವು ಮಾತುಗಳ ಔಚಿತ್ಯದ ಹಾಗು ಪಾತ್ರಪೋಷಣೆ ಗು ಸಂಗತಿಯಲ್ಲಿ— ಗೋಚರಿಸುವುದಾದರೂ ಅವುಗಳನ್ನು ಪ್ರೇಕ್ಷಕರು ಗಮನಿಸಲಿಕ್ಕಿಲ್ಲ ಎಂದು ಹೇಳಬಹುದು.

— ಕು.

(ನನೇ ಪುಟದಿಂದ)

ರಾಜಕೀಯ ಪಕ್ಷೆಗಳು ಪ್ರಜಾಪ್ರಭುತ್ವ ಕ್ಕೆ ಸಮೃತವಾದ ಮಾರ್ಗವನ್ನೆ ಅನಲಂ ಬಿಸಲು ನೋಡಬೇಕಾದದ್ದು ಕರ್ತವ್ಯ. ಒಂದು ವಿಷಯದ ಕುರಿತು ೀವ್ರ ಆಸಮಾಧಾನ ಆಥವಾ ಭಿನ್ನಾಭಿಪ್ರಾಯ ವಿರುವುದು ತೀರ ಸ್ವಿಷ್ಟವಾಗಿರುವಾಗ ಏ ನೂ ತಿಳಿಯದೆ, ಗೊಂದಲ ಎಬ್ಬಿಸುವುದ ರ ಹೊರತು ಸಮಸ್ಯೆಯ ನಿವಾರಣೆಗೆ ಯಾವುದೇ ಬಗೆಯ ವಿಧಾಯಕ ಸೂಚನೆ ಯನ್ನು ಕೊಡಲಾರವ ಜನರ ಮನಸ್ಸು ನ್ನು ಉದ್ರೇಕಕ್ಕೆ ಗುರಿಮಾಡುವ ಮತ ಪ್ರದರ್ಶನ, ಮುಷ್ಕರ ಇತ್ಯಾದಿಗಳನ್ನು ಸಂಘಟಿಸುವುದು ತಪ್ಪೆಂದು ಇನ್ನಾದರೂ ಪ್ರತಿಪಕ್ಷೆಗಳು ಮನಗಾಣಲಿ! ಪ್ರಜಾಪ್ರ ಭುತ್ವದಲ್ಲಿ ಜನರು ತಮ್ಮ ಅಭಿಪ್ರಾಯವ ನ್ನು ತಿಳಿಸುವುದಕ್ಕೆ ಒಂದು ಚೆಲುವಾದ ಕ್ರಮವಿದೆ; ಮನವಿಗಳು, ಶಿಷ್ಟ ಮೆಂಡಳ ಗಳು ಇತ್ಯಾದಿಗಳಿಂದ ಜನರು ಮಂತ್ರಿಗ ಳನ್ನು ಚ-ನ-ಯಿತ ಪ್ರತಿನಿಧಿಗಳನ್ನೂ ಪ್ರ ಭಾವಿತರಾಗಿ ಮಾಡಬಲ್ಲರು. ಚರ್ಚೆ, ವಿ ಚಾರ ವಿನಿಮಯಗಳ ಮೂಲಕ ಶಾಂತ ವಾತಾವರಣದಲ್ಲಿಯೇ ಯೋಗ್ಯ ಪರಿಹಾ ರ ಕಂಡು ಹಿಡಿಯಬಲ್ಲರು ಎಲ್ಲಕ್ಕೂ ಹೆ ಚ್ಚಾಗಿ ನಿವೇಕವುಳ್ಳ ಹಿರಿಯರನ್ನು ಅನು ಸರಿಸಿ ನೆಮ್ಮದಿಯಿಂದ ಜಾಳಬಲ್ಲರು— ಇದೇ ಸರಿಯಾದ ಮಾರ್ಗ.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಸು ಂದು ವೆಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿ ಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು.

ನಿರಖು ದೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಮಕ್ಕಳ ಮಗಿ ಪುಸ್ತಕ
ರ ಣ ಸ್ತಿ
ಬೆಲೆ ೦—೧ -೦
ವ್ಯಾಪಾರಿಗಳಿಗೆ ಧಾರಾಳ ಕಮಿಶನ್.
ನವಯುಗ ಸ್ಟೋರ್ಸ್, ಉಡುಪಿ.

ಪ್ರಕಟಣೆ

ರೂಪಾಯಿ 1000 ತನಕ ಸಾಲಗಳು ಅಸ್ತಿ ಜವಾಬ್ದಾರಿ ಆಥವಾ ಜ್ಯಾಮೀನುಗಳಲ್ಲಿ ವಿನೇ ನಮ್ಮ ದಸ್ತಿತಿಂದಲೇ ದೊರೆಯುವುವು. ಹಲವರು ಈಗಾಗಲೇ ಪಡೆದಿರುತ್ತಾರೆ. ವಿವ ರಗಳಿಗೆ ಇಂಗ್ಲಿಷಿನಲ್ಲಿ ಬರೆಯಿರಿ.—

Bombay Mercantile Co.
Bombay--23.

ಅನೇಕ ಇತಿಹಾಸಗಳ ಗ್ರಂಥಕರ್ತ ಎಂ ಆರ್
ಶ್ರೀ ಎ ಎಸ್ ಪಂಚಮುಕೇಶ ಐಯ್ಯರ್, ಎಂ ಎ, ಐ. ಸಿ. ಎಸ್. ರಾರ್-ಎಟ್ ಲಾ, ಎ ಎಸ್.ಎಲ್. ಅವರು ಬರೆದ Tales of Ind ಎಂಬ ಕಥಾಲಿಯ ಅನುವಾದ



ಅನುವಾದಕರು—ಶ್ರೀ ಕೊಡ್ಡಲ್ ಶ್ರೀನಿವಾಸ ರಾವ್

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತು ಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಂರಿಯಾಶೆ ಇದ್ದೇ ಇದೆ ಇದು ಸಿದ್ಧಿಸಬೇಕಾದರೆ ವಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತೂ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

151 ಕತೆಗಳು **ಬೆಲೆ ರೂ 1-12-0**

ಪ್ರತಿಗಳು ಸಿಗುವ ಮುಖ್ಯ ಸ್ಥಳ
ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published By K. H. Shetty, at the Navayuga Press, Udupi S India

REGD. NO. M. 3618

LICENCE NO. 31
Licensed to Post without Prepayme

ನವಯುಗ

ಸಂಪುಟ ೩೫
VOL. 35

ಉಡುಪಿ, 8—12—1955

ಸಂಚಿಕೆ ೧೫
NO. 15

ಕಾಶ್ಮೀರ ಪ್ರಶ್ನೆಯ ಇತ್ಯರ್ಥ

ಪಾಕಿಸ್ತಾನದ ರಾಜಧಾನಿಯಾದ ಕರಾಚಿಯಲ್ಲಿ ಕಳೆದ ವಾರ ಅಖಿಲ ಪಕ್ಷೀಯ ಕಾಶ್ಮೀರ ಪರಿಷತ್ತು ಜರಗಿತು. ಪ್ರಮುಖ ರಾಜಕೀಯ ಪಕ್ಷಗಳ ಧುರೀಣರು, ಪ್ರತಿಷ್ಠಿತ ನಾಗರಿಕರು ಮತ್ತು ಉದ್ದಿಮೆದಾರರು ಇದರಲ್ಲಿ ಭಾಗ ವಹಿಸಿದರು. ಹೀಗೆ ನೆರೆದಿದ್ದ ಸುಮಾರು ೧೦೦ ಮಂದಿ ಮಹಾನುಭಾವರಲ್ಲಿ ಪಾಕಿಸ್ತಾನ ನಿಯಂತ್ರಿತ "ಆಜಾದ್ ಕಾಶ್ಮೀರ್" ಭೂಭಾಗದ ಪ್ರತಿನಿಧಿಗಳೂ ಭಾಗ ವಹಿಸಿದ್ದರು ಪರಿಷತ್ತಿನ ಪ್ರಾರಂಭವು ಪ್ರಧಾನಿ ಚೌಧುರಿ ಮಹಮ್ಮದಾಲಿಗಳ ಒಂದು ತಾಸಿನ ಭಾಷಣದಿಂದಾಯಿತು. ಆಗ ವಿದೇಶಗಳ ರಾಯಭಾರಿಗಳೇ ಮುಂತಾದವರು ಹಾಜರಿದ್ದರು. ಮುಂದೆ ಪರಿಷತ್ತಿನ ಕಾರ್ಯ ಕಲಾಪವೆಲ್ಲ ಗೋಪ್ಯವಾಗಿ ನಡೆಯಿತು.

ಮೂರು ದಿನಗಳ ಈ ಪರಿಷತ್ತಿನ ಕುರಿತು ಪಾಕಿಸ್ತಾನದ ಗವರ್ನರ್ ಜನರಲ್ ಮೇಜರ್ ಜನರಲ್ ಇಸ್ಕಂದರ್ ಮಿರ್ಜಾರು ಬಹಳ ಆಶಾದಾಯಕವಾದ ಮಾತುಗಳನ್ನು ಹೇಳಿದ್ದರು. ದೇಶದೊಳಗಿನ ಸಕಲ ರಾಜಕೀಯ ಪಕ್ಷಗಳೂ ತನ್ನ ವಿಚಾರವನ್ನು ಕೇಂದ್ರೀಕರಿಸಿ, ಕಾಶ್ಮೀರದ ಜನರಿಗೆ ಸ್ವಯಂನಿರ್ಣಯಾಧಿಕಾರವನ್ನು ವ್ಯಕ್ತಪಡಿಸುವ ಅವಕಾಶವನ್ನೊದಗಿಸಲು ಯೋಗ್ಯ ಕಾರ್ಯಕ್ರಮಗಳನ್ನು ಹಾಕಿಕೊಡುವರೆಂದು ಅವರು ಸೂಚಿಸಿದ್ದರು. ಆದರೆ ಪರಿಷತ್ತಿನ ಕಾರ್ಯಕಲಾಪಗಳ ಕುರಿತು ಬಂದ ವರದಿಗಳಾಗಲೀ ಕೊನೆಯಲ್ಲಿ ಸ್ವೀಕರಿಸಿದ ನಿರ್ಣಯಗಳಾಗಲೀ ಸಮಸ್ಯೆಯ ಪರಿಹಾರದ ಕುರಿತು ಯಾವುದೇ ಆಶಾ ಜನಕವಾದ ಅಂಶವನ್ನು ಹೊರಗೆಡಹಲಿಲ್ಲ. ಭಾರತದ ಮೇಲೆಯೇ ಎಲ್ಲ ತಪ್ಪುಗಳನ್ನೂ ಹೊರಿಸಿ ಪಾಕಿಸ್ತಾನದ ಸಂಧಾನಿತಗಿರಿಯನ್ನು ಪ್ರತಿಪಾದಿಸುವ ಮತ್ತು ಭದ್ರತಾ ಮಂಡಳದ ನಿಲುವನ್ನಾಗಿ ವಿವಾದಿಸುವ ಕೆಲಸವನ್ನಷ್ಟೇ ಈ ಪರಿಷತ್ತು ಸಾಂಗಗೊಳಿಸಿತು.

ಪರಿಷತ್ತು ಸ್ವೀಕರಿಸಿದ ಗೊತ್ತುವಳಿಯು ಯಾವುದೇ ವಿಶಿಷ್ಟ ಪ್ರಾಮುಖ್ಯತೆಯಿಂದ ಕೂಡಿಲ್ಲ. ಅದು ಪಾಕಿಸ್ತಾನ ಸರಕಾರವು ಮುಸ್ಲಿಂ ಲೀಗಿನ ನೇತೃತ್ವದಲ್ಲಿ ಕಾಶ್ಮೀರ ಸಮಸ್ಯೆಯ ಕುರಿತು ಸತ್ಯಕ್ಕೆ ಹೊದಿಕೊಳ್ಳದ ಚಿತ್ರಗಳನ್ನೆ ಸಕಲ ಪಕ್ಷಗಳ ಪರವಾಗಿ ನಿಜವಾದ ವಿಷಯಗಳೆಂದು ಸಾರಿತು. ಭಾರತ ಸರಕಾರವು ಬೇರೆ ಬೇರೆ ಸಮಯಗಳಲ್ಲಿ ಕಾಶ್ಮೀರ ವಿವಾದದ ಕುರಿತು ಭದ್ರತಾಮಂಡಳಕ್ಕೆ ದೂರಿಕೊಂಡಿದಿನಿಂದ ತಾನು ಸ್ವೀಕರಿಸಿದ ಅಂತಾರಾಷ್ಟ್ರೀಯ ಜವಾಬ್ದಾರಿಯನ್ನು ನಿಧಿಕ್ಕರಿಸಿತೆಂದು ಪುನರುಚ್ಚರಿಸಿತ. ಅಲ್ಲದೆ ಭದ್ರತಾಮಂಡಳವು ಸ್ವೀಕರಿಸಿದ ಗೊತ್ತುವಳಿಗಳಲ್ಲಿ ಹೇಳಲಾದಂತೆ ಕಾಶ್ಮೀರದ ಜನರಿಗೆ ಸ್ವಯಂನಿರ್ಣಯಾಧಿಕಾರದ ಅವಕಾಶವನ್ನೊದಗಿಸಲು ಭೂರಿಜನ ಮತಗಣನೆಗೆ ಹೋಷಕವಾದ ನಿಲುಮೆ ವಹಿಸದಿರುವುದಕ್ಕಾಗಿ ದೂಷಿಸಿತು. ಭದ್ರತಾ ಮಂಡಳಕ್ಕೂ ತನ್ನ ನಿರ್ಣಯಗಳನ್ನು ಕಾರ್ಯಗತಗೊಳಿಸಲಾಗದ ಮತ್ತು ಭಾರತವನ್ನು ಕುಹಕ ತಂತ್ರಗಳಿಂದ ಪರಾವೃತ್ತಗೊಳಿಸದ ತಪ್ಪಿಗೆ ಮಂಗಳಾರತಿ ಮಾಡಿತು.

ಒಂದೆಡೆ ದಾವಣೆಗಳ ಸುರಿಮಳೆಯನ್ನು ಹೀಗೆ ಕರೆದರೂ ಕಾಶ್ಮೀರದ ಜನತೆಯ ನ್ಯಾಯವಾದ ಭವಿಷ್ಯ ನಿರ್ಣಯವನ್ನು ಪಾಕಿಸ್ತಾನವು ರಾಷ್ಟ್ರೀಯ ಪ್ರಶ್ನೆಯೆಂದು ಪರಿಗಣಿಸುವುದಾಗಿಯೂ ಈ ಪ್ರಶ್ನೆಯ ಇತ್ಯರ್ಥಕ್ಕಾಗಿ ಯಾವುದೇ ತ್ಯಾಗವನ್ನು ಮಾಡಬೇಕಾಗಿ ಬಂದರೂ ಸಹ ಅದು ಮಹತ್ತಾದ ವಿಷಯ ವಾಗಲಾರದೆಂದೂ ರಾಜ್ಯದ ಪ್ರಜೆಗಳು ಈ ಕುರಿತು ನಡೆಸುವಎಲ್ಲ ಪ್ರಯತ್ನಗಳನ್ನೂ ರಾಷ್ಟ್ರೀಯ ತಳಹದಿಯ ಮೇಲೆ ಪ್ರೋತ್ಸಾಹಿಸಬೇಕೆಂದೂ ಸಾರಿತು ಪರಿಷತ್ತಿನ ಕಾರ್ಯಕಲಾಪಗಳ ಬೆಳಕಿನಲ್ಲಿ ಪಾಕಿಸ್ತಾನ ಸರಕಾರವು ಸಾಧ್ಯವಿದ್ದ ಎಲ್ಲ ಹೆಜ್ಜೆಗಳನ್ನೂ ಮುಂದಿಟ್ಟು ರಾಷ್ಟ್ರೀಯ ನಿಶ್ಚಯವನ್ನು ವ್ಯವಹಾರದಲ್ಲಿಳಿಸಬೇಕು ಎಂದದು ನಿರ್ದೇಶಿಸಿತು.

ಒಂದು ಸಮಿತಿಯನ್ನು ಪರಿಷತ್ತು ನೇಮಿಸಿದ್ದು ಅದು ಪಾಕಿಸ್ತಾನ ಸರಕಾರಕ್ಕೆ ಕಾಶ್ಮೀರ ಪ್ರಶ್ನೆಯ ಇತ್ಯರ್ಥದ ಕುರಿತು ಸಲಹೆಗಳನ್ನು ನೀಡುವುದೆಂದು ತಿಳಿದು ಬರುತ್ತದೆ ಹಾಗೆಯೇ ಪಾಕಿಸ್ತಾನ ಸರಕಾರವು ತನ್ನ ಕಚೇರಿಗಳ ಮೂಲಕವಾಗಿ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲಿಯೂ ಕಾಶ್ಮೀರ ವಿಚಾರದಲ್ಲಿ ಒಡಕವಾಗಿರುವ ರಂಗತಿಗಳ ಮೇಲೆ 'ಸರಿಯಾದ' ಅಂಶಗಳನ್ನು ಪ್ರಚಾರ ಮಾಡುವುದೆಂದೂ ಭಾರತದ ವಕಿಲ್ಲರುವ ಕಾಶ್ಮೀರ ಪ್ರದೇಶದೊಳಗಿನ ಅಲಗು ಹೋಗುಗಳ ಕುರಿತು ಸತ್ಯಾಂಶಗಳನ್ನು ತಿಳಿಯಪಡಿಸುವುದೆಂದೂ ವರದಿಗಳು ಹೇಳುತ್ತವೆ. ಇದರಿಂದ ಜಾಗತಿಕ ಅಭಿಪ್ರಾಯವನ್ನು ಕಾಶ್ಮೀರದಲ್ಲಿ ಭಾರತದಿಂದ ನಡೆಯುತ್ತಿರುವ 'ಗೊಂಬೇರ ಆನ್ಯಾಯ'ದ ವಿರುದ್ಧ ಎತ್ತಿಕಟ್ಟಲು ಸಾಧ್ಯವಾಗುವುದೆಂದು ಪಾಕಿಸ್ತಾನದ ಸರಕಾರ ನಂಬಿರುವಂತೆ ಕಾಣುತ್ತದೆ.

ಮೇಲಿನ ಯಾವ ಸಂಗತಿಯೂ ಸಮಸ್ಯೆಯ ಪರಿಹಾರಕ್ಕಾಗಿ ಏನೆ ಮಾಡಲಾಗುವುದೆಂದು ನಿರ್ದಿಷ್ಟವಾಗಿ ಹೇಳುತ್ತಿಲ್ಲ ಪ್ರಯತ್ನ ಮುಂದೊತ್ತಲ್ಪಡುವುದೆಂದಿಷ್ಟೇ ಗೊತ್ತಾಗುತ್ತದೆ ಈ ಪ್ರಯತ್ನಗಳ ನಿಜವಾದ ಸ್ವರೂಪವೇನೆಂಬುದು ಸ್ಪಷ್ಟವಾಗುತ್ತಿಲ್ಲ ಜಾಗತಿಕ ಅಭಿಪ್ರಾಯವನ್ನು ಎತ್ತಿ ಕಟ್ಟುವ ಉದ್ದೇಶ ಪಾಕಿಸ್ತಾನಕ್ಕೆ ಇರುವಂತೆ ಕಾಣುತ್ತದೆ. ಆದರೆ ಭದ್ರತಾ ಮಂಡಳವನ್ನು ದೂಷಿಸಿದ ನೂತ್ರಕ್ಕೆ ಇದು ಈಡೇರಲಾರದು. ಕಾಶ್ಮೀರ ಪ್ರಶ್ನೆಯ ಕುರಿತು ಉಳಿದಿರುವುದು ಒಂದೇ ಒಂದು ವಿಷಯ ಮಾತ್ರ ಅದೆಂದರೆ ಯುದ್ಧ ವಿರಾಮ ರೇಖೆಯ ಇಕ್ಕೆಲಗಳಲ್ಲಿ ಪಾಕಿಸ್ತಾನ ಮತ್ತು ಭಾರತ ನಿಲ್ಲಿಸಬಹುದಾದ ಸೈನ್ಯಗಳ ಸಂಖ್ಯಾ ಪ್ರಮಾಣದ ನಿರ್ಧಾರ. ಈ ಕುರಿತು ಪಾಕಿಸ್ತಾನದ ಪ್ರಧಾನಿಗಳಿಂದಾಗಲೀ ಪರಿಷತ್ತಿನ ಗೊತ್ತುವಳಿಯಿಂದಾಗಲೀ ಯಾವುದೇ ಪ್ರಗತಿಪರ ಸೂಚನೆ ಬಂದಿಲ್ಲದಿರುವುದು ವಿಷಾದಕರ.

ನಿರೀಕ್ಷಕರ ಅಭಿಪ್ರಾಯದಂತೆ, ಪರಿಷತ್ತು ಯಾವುದೇ ವಿಧಾಯಕ ಸೂಚನೆಗಳನ್ನು ಮಾಡಲಾರದೆ ಭುಗಿಯಜ್ಜೇಕಾಗಿ ಬಂದುದಕ್ಕೆ ಪ್ರಧಾನಿ ಚೌಧುರಿ ಮಹಮ್ಮದಾಲಿಗಳ ಭಾಷಣವು ತೀರಾ ನೀರಸವಾಗಿದ್ದುದೂಯಾವುದೇ ಹೊಸ ಸೂಚನೆಗಳಿಲ್ಲದ ಬೈಗಳ ಸುರಿಮಳೆ ಮತ್ತು ಪಾಕಿಸ್ತಾನದ ಉಜ್ವಲ "ನ್ಯಾಯಾನಿಕತೆ"ಯ ವರ್ಣನೆಯಿಂದ ಮಾತ್ರವೇ ತುಂಬಿದ್ದೂ ಕಾರಣ. ಆದರು ಪಾಕಿಸ್ತಾನಿಗಳಿಗೆ ತುಂಬ ಅವಶ್ಯವಾದ ನೆಮ್ಮದಿಯ ಸ್ವಲ್ಪವನ್ನೆಯಲ್ಲಿ ಅವೇಕಪೂರಿತ ಭಾಷಣವನ್ನೇನೂ ಮಾಡಿದರು. ಮುಸ್ಲಿಂ ಲೀಗು ಬಲ್ಲ ಕಾಶ್ಮೀರವು ಎಲ್ಲ ದೃಷ್ಟಿಯಿಂದಲೂ ಪಾಕಿಸ್ತಾನಕ್ಕೆ ಸೇರಬೇಕೆಂಬ ಹಳೆಯ ನಿಲುಮೆಯನ್ನು ಬಲವಾಗಿ ಪ್ರತಿಪಾದಿಸಿದರು. ಶೇಕ್ ಅಬ್ದುಲ್ಲರ ಕುರಿತು —ಹಿಂದೆ ತಾವು ಅವರನ್ನು ಹೀನಾಯವಾಗಿ ನಿಂದಿಸಿದ್ದರೂ ಈಗ ಒಳ್ಳೆ ಅಭಿಮಾನದ ಮಾತುಗಳನ್ನಾಡಿದರು. ಬಕ್ಷಿ ಗುಲಾಂ ಮಹಮ್ಮದರನ್ನು ಭಾರತ ಸರಕಾರವು ದೂರ ಎಸೆದು ಬಿಡುವ ದಿನವೂ ದೂರವಿಲ್ಲ ಎಂದು ಭವಿಷ್ಯ ನುಡಿದರು. ಡಾ. ಜಾನರುನ್ನು ಪಾಕಿಸ್ತಾನಿಗಳಿಗೆ ಮನಃ ಬರುವಂತೆ ಮಾಡಿದರು. ಆದರೆ, ಕಾಶ್ಮೀರ ಸಮಸ್ಯೆಯ ಕುರಿತು ಭಾರತವ ನುನಯೋಲಿಸುವಿಕೆಯ ದಾರಿ ಏನೆಂದು ಮಾತ್ರ ಹೇಳದೆ ಹೋದರು.

ಬದಲಿಗೆ ಭಾರತದ ವಶವಿರುವ ಕಾಶ್ಮೀರ ಪ್ರದೇಶವನ್ನೆ ಸೈನ್ಯವೇ ತುಂಬಿ ಹೋಗಿದೆ ಎಂದು ದೂರಿದೆಯು. ಪ್ರತಿ ೧೪ ಜನರಿಗೆ ಕಾಶ್ಮೀರಿಗೆ ಒಬ್ಬನಂತೆ (೧೦೦) ಭಾರತೀಯ ಯೋಧರು ಅಲ್ಲೀಗ ಇದ್ದಾರೆಂದು ವಿವರಿಸಿದರು. ವಶಾಹತು ವಾದವು ಯಾವುದೇ ರೂಪದಲ್ಲಿದ್ದರೂ ಅದನ್ನು ಖಂಡಿಸುವ ನೆಹರುಗಳು ಕಾಶ್ಮೀರವನ್ನು ಭಾರತದ ವಸಾಹತುವಿನಂತೆ ನೋಡುತ್ತಿರುವುದನ್ನು ಈಗ ಜಗತ್ತು ನೋಡುತ್ತಿದೆ ಎಂದರು. ಜುನಾಗಡ, ಹೈದರಾಬಾದ್-ಗೋವಗಳಂತೆ ಕಾಶ್ಮೀರದಲ್ಲಿಯೂ ಭಾರತವು ಬಲಾತ್ಕಾರ್ಮಣವನ್ನು ಮಾಡಿದೆ ಎಂದು ತಿಳಿಸಿದರು. ಭದ್ರತಾ ಮಂಡಳದ ಗೊತ್ತುವಳಿಗಳ ನೆನಪನ್ನು

(೧೬ ನೆಯ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ.ಭಾರತ.

ಮನೆಯಂತಿರುವ ಸ್ಥಳ ಬೇರೊಂದಿಲ್ಲ.

ಸುಖ, ಸೌಕರ್ಯ, ಶಾಂತಿಗಳಿಗೆ ನಿಜವಾಗಿಯೂ ಮನೆಯೇ ಆತ್ಯುತ್ತಮ ಸ್ಥಾನ. ಆದರೆ ತಮ್ಮ ಹಣವನ್ನು ಕಾಪಾಡಿಕೊಳ್ಳಲು ಅದೇ ಅತ್ಯುತ್ತಮ ಸ್ಥಳವಾಗದು. ನಮ್ಮ ಬ್ಯಾಂಕಿನಲ್ಲಿ ಒಂದು "ಸೇವಿಂಗ್ಸ್ ಬ್ಯಾಂಕ್" ಲೆಕ್ಕವನ್ನು ಆರಂಭಿಸುವುದು ಅದೆಷ್ಟು ಜಾಣ್ಮೆಯ ಕಾರ್ಯವಾಗದು! ಸ್ವಲ್ಪವೇ ಹಣದಿಂದ ನಮ್ಮಲ್ಲಿ ಲೆಕ್ಕ ಆರಂಭಿಸಬಹುದು. ನಮ್ಮ ನೌಕರರು, ನಾವು ನಿಮಗೆ ಸಹಕರಿಸಬಹುದಾದ ಅನೇಕ ರೀತಿಗಳನ್ನು ಸೂಚಿಸಲು ಸಿದ್ಧರಾಗಿರುವರು.

ಚಲಾವಣೆ ಭಂಡವಾಳ ರೂ. ೬,೫೦,೦೦,೦೦೦ಗೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.
Estd. 1925] [Head Office. UDIPI, S. India.

ವಾರ್ಷಿಕ ಚಂದಾ: ರೂ ೫—೦—೦

NAVAYUGA WEEKLY, UDIPI.

ಬೆಲೆ ಸಂಚಿಕೆಗೆ ಎರಡಾಣೆ

ಅಣು ವಿಕಿರಣಶೀಲತೆಯ ಗಂಭೀರ ಪರಿಣಾಮ

ಭಾರತೀಯ ಸಂತಾನದ ಮೇಲಾಗುವ ಪರಿಣಾಮವೇ ಅಧಿಕ

ಅಣುಶಕ್ತ್ಯಸ್ತ್ರಗಳ ಸ್ಫೋಟನವನ್ನು ಪ್ರತಿಬಂಧಿಸುವ ಕುರಿತು ವಿಶೇಷವಾದ ಗಮನವು ನೆಲೆಯಲ್ಪಟ್ಟಿರುವ ಇವತ್ತಿನ ಸನ್ನಿವೇಶದಲ್ಲಿ ಇಂಗ್ಲೆಂಡಿನ ಸುಪ್ರಸಿದ್ಧ ನೈಜ್ಞಾನಿಕ ಲೇಖಕರಾಗಿ ಪ್ರೊ. ಜೆ. ಬಿ. ಎಸ್. ಹಾಲ್ಡೇನರು ಮದ್ರಾಸಿನ 'ಹಿಂದು' ಪತ್ರಿಕೆಗೆ ಬರೆದೊಂದು ಲೇಖನವು ಸಾಮಯಿಕ ಮಹತ್ವವನ್ನು ಪಡೆಯುತ್ತಿದೆ. ತಾನು ಭಾರತೀಯರಿಗೆ ಸಂತೋಷ ಕೊಡಬೇಕೆಂದು ಆದರೆ ಅವರು ತುರ್ತಾಗಿ ಗಮನಿಸಲೇಬೇಕಾದ ವಿಷಯವನ್ನು ಆರಿಸಿದರುವುದಾಗಿಯೂ ಈ ಬಗ್ಗೆ ಭಾರತೀಯರ ಅಭಿಪ್ರಾಯವು ಎಚ್ಚತ್ತಿರೆ ದುಷ್ಪರಿಣಾಮಗಳು ತಡೆಗಟ್ಟಲ್ಪಡುವ ಸಂಭವವಿದೆಯೆಂದೂ ತಮ್ಮ ಲೇಖನದ ಸಂಬಂಧದಲ್ಲಿ ಅವರು ಹೇಳಿದ್ದಾರೆ. ಅವರ ಬರವಣಿಗೆಯನ್ನು ಪ್ರತಿಯೊಬ್ಬ ಭಾರತೀಯನೂ ಮನನಮಾಡುವುದು ಅಪೇಕ್ಷಣೀಯ.

ಅಸ್ವಾಭಾವಿಕ ಲಕ್ಷಣ

ಸುಮಾರು ಮೂರು ದಶಕಗಳ ಹಿಂದೆ ೧೯೨೭ರಲ್ಲಿ, ಅಮೇರಿಕದ ಪ್ರಾಣಿಶಾಸ್ತ್ರಜ್ಞ ಮಿ. ಎಚ್. ಜೆ. ಮುಲ್ಲರರು ಗಂಡು ನುಸಿಗಳನ್ನು ಸುದೀರ್ಘ ಕಾಲದ ವರೆಗೆ ಕ್ಷಕಿರಣಗಳ ಪ್ರಭಾವಕ್ಕೆ ಗುರಿಪಡಿಸಿದರೆ, ಆ ನುಸಿಗಳಿಗೆ ಹುಟ್ಟುವ ಗಂಡು ಅಥವಾ ಹೆಣ್ಣು ಮಕ್ಕಳು ಸಾಮಾನ್ಯ ಸ್ವರೂಪವನ್ನೆ ಹೊಂದುತ್ತವೆ; ಆದರೆ ಆಂಥ ಹೆಣ್ಣು ನುಸಿಗಳಿಗೆ ಹುಟ್ಟಿದ ಗಂಡು ನುಸಿಗಳು ಮಾತ್ರ ಹೆಚ್ಚಾಗಿ ಸಾಯುತ್ತವೆ; ಉಳಿದವುಗಳಾದರೂ ಚಿಕ್ಕ ರಿಕ್ಕೆಗಳು, ಗಿಡ್ಡ ಕಾಲುಗಳು ಇತ್ಯಾದಿ ಜನ್ಯೇಕ ಅಸಹಜ ಲಕ್ಷಣಗಳನ್ನು ಪಡೆಯುತ್ತವೆ. ಎಂದು ಕಂಡು ಹಿಡಿದರು. ಇದಲ್ಲದೆ ಕ್ಷಕಿರಣದ ಪ್ರಭಾವಕ್ಕೆ ಬಿದ್ದ ನುಸಿಯ ವಂಶದಲ್ಲಿ ಹುಟ್ಟಿದ ನುಸಿಗಳು ಪರಸ್ಪರ ಸಂಭೋಗಿಸಿದರೆ, ಉದಾಹರಣಾರ್ಥವಾಗಿ ಅಜ್ಜ ನುಸಿಯು ಕ್ಷಕಿರಣದ ಪ್ರಭಾವಕ್ಕೆ ಬಿದ್ದಿರುವ ಸಂಗತಿಯಲ್ಲಿ ಗಂಡು ಹಾಗು ಹೆಣ್ಣು ಮೊಮ್ಮಕ್ಕಳು ಪರಸ್ಪರ ಸಂಯೋಗಗೊಂಡರೆ, ಮತ್ತ ಅನೇಕ ಸಾವುಗಳೂ ಅಸಹಜ ಲಕ್ಷಣಗಳೂ ತಲೆದೋರುತ್ತವೆ ಎಂದೂ ಅವರು ಗೊತ್ತು ಹಚ್ಚಿದರು.

ಇದೇ ಸಂಗತಿಯು ಅಣು ಜೀವಿಗಳ ನ್ಯೊಳಗೊಂಡು ಬೇರೆ ಪ್ರಾಣಿ ಹಾಗು ಸಸ್ಯಗಳ ಸಂಗತಿಯಲ್ಲೂ ಘಟಿಸುತ್ತದೆ ವಿಕಿರಣಶೀಲ ಅಣುಶಕ್ತಿಯಲ್ಲಿರುವ ಗಾಮಾಕಿರಣಗಳು ಸಹ ಇದೇ ಪರಿಣಾಮವನ್ನು ಮಾಡುತ್ತವೆ ಹಂಗಸರ ಮೇಲೆ ವಿಕಿರಣಶೀಲತೆಯು ಪ್ರಭಾವವುಂಟಾದರೆ ಅವರ ಕೆಲವು ಗಂಡುಮಕ್ಕಳ ಮೇಲೆ ದುಷ್ಪರಿಣಾಮಗಳಾಗುತ್ತವೆ. ಅನುವಂಶಿಕ ವೈಶಿಷ್ಟ್ಯಗಳನ್ನು ದೋಷಪೂರಿತವಾಗಿ ಈ ಪ್ರಭಾವ ಪರಿವರ್ತಿಸುವುದರಿಂದಲೇ ಹೀಗಾಗುತ್ತದೆ. ಅಸಹಜ ಲಕ್ಷಣವನ್ನೂ ರೋಗಗಳನ್ನೂ ಆಕಾಲ ಮರಣವನ್ನೂ ಉಂಟುಮಾಡುವ ಅನುವಂಶಿಕ ದೋಷಗಳು ಗಂಡುರಲ್ಲಿಯೂ ಹೆಂಗಸರಲ್ಲಿಯೂ ಇರುವುದು ನಮಗೆ ಗೊತ್ತಿದೆ ಕೆಲವೊಮ್ಮೆ ಇಂಥ ದೋಷಗಳು ಪ್ರಬಲವಾಗಿ ನ್ನು, ಹೆತ್ತವರಿಂದ ಮುಂದಿನ ಸಂತಾನಕ್ಕೆ ಉಂಟಕೊಳ್ಳುತ್ತವೆ. ಹೊರತೋರಿಕೆಗೆ ಸಾಮಾನ್ಯರಂತಿದ್ದರೂ ಒಂದೇ ಬಗೆಯ ದೋಷವಿರುವ ಸ್ತ್ರೀಪುರುಷರು ಮದುವೆಯಾದರೆ, ಅವರ ಮಕ್ಕಳು ಅಸ್ವಾಭಾವಿಕ ಲಕ್ಷಣವನ್ನು ತೋರಿಸುತ್ತವೆ.

ದೂರಗಾಮಿಯಾದ ಅಪಾಯ

ಹೆತ್ತವರಿಂದ ಹೀಗೆ ಅನುವಂಶಿಕದೋಷಕ್ಕೆ ಮಕ್ಕಳು ಬಿದ್ದ ಪರಿಸ್ಥಿತಿಗಳಲ್ಲಿ ಮೂರ್ಖತನಕ್ಕೆ ಕಾರಣವಾಗುವ ಚಿಕ್ಕ ತಲೆ ಪಡೆಯುವುದು ಮೊದಲು ಕಾಣಿಸಿಕೊಂಡಿರುವುದಾಗಿಯೂ ಹಿಂದಿನಿಂದ ಬುದ್ಧಿಶೂನ್ಯರಾಗಿ ಬಾಲ್ಯದಲ್ಲಿಯೇ ಸಾಯುವುದು, ಮೂತ್ರಾಶಯ ಅಥವಾ ಮೂತ್ರಪಿಂಡಗಳಲ್ಲಿ "ಕಲ್ಲು" ಹುಟ್ಟುವುದು, ಎದೆ ಹಾಲನ್ನು ಶಿಶುಗಳಿಗೆ ವಿಷನುಯವಾಗಿಸುವುದು, ಮತ್ತಿತರ ಹಲವು ಬಗೆಗಳು ಉಲ್ಲೇಖನೀಯ. ಶೀಘ್ರ ಡಾ ಎರಡರಷ್ಟು ಜನರು ಇಂಗ್ಲೆಂಡಿನಲ್ಲಿ ಹೀಗೆ ಸಾಯುತ್ತಿರ್ದರೆ ಭಾರತದಲ್ಲಿ ಸಾಂಕ್ರಾಮಿಕ ರೋಗಗಳಿಂದಲೂ ಪೌಷ್ಟಿಕ ಆಹಾರದ ಕೊರತೆಯಿಂದಲೂ ಸಾಯುವವರು ಹೆಚ್ಚಾಗಿರುವುದರಿಂದ ಆನುವಂಶಿಕ ದೋಷಗಳಿಂದಲೇ ಸಾಯುವವರು ಸ್ವಲ್ಪ ಕಡಿಮೆ ಇರಬಹುದೆಂದು ಹೇಳಬಹುದು. ಸಾಮಾನ್ಯವಾಗಿ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಸಹಜವಾಗಿರುವ ವಿಕಿರಣಶೀಲತೆಯಿಂದಾಗುವ ಪರಿವರ್ತನೆಯಿಂದ ಇಂಥ ದೋಷಗಳೇಳುತ್ತವೆ. ನೆಲದ ಮಟ್ಟದಲ್ಲಿ ವಿಕಿರಣಶೀಲತೆಯ ವೇಗ ಹೆಚ್ಚಿದ ಪಕ್ಷದಲ್ಲಿ ತತ್ಪರಿಣಾಮವಾದ ಪರಿವರ್ತನೆಯೂ ತೀವ್ರಗತಿಯು ಳ್ಳದ್ದಾಗುತ್ತದೆ.

ಜಪಾನಿನ ಮೇಲೆ ಹಾಕಿ, ಸ್ಫೋಟಿಸಿದ ಅಣು ಬಾಂಬುಗಳು ಬಹಳಷ್ಟು ಜನರನ್ನು ಕೊಂದಿವೆ; ಸಾಯದೆ ಉಳಿದವರ ಸಂತಾನದಲ್ಲಿ ಹಲವಾರು ಸಾವುಗಳನ್ನೂ ಅವು ಇನ್ನೂ ತಂದಿವೆ. ಅಣುಬಾಂಬಿನ ಸ್ಫೋಟನವಾದೊಡನೆ ಹಾಗೂ ಅದರಲ್ಲಿಯೇ ತಿಂಗಳುಗಳೊಳಗೆ ಸತ್ತವರ ಆರೆವಾಸಿಯಷ್ಟಾದರೂ ಎರಡನೇ ಬಗೆಯ ಸಾವಿನ ಪ್ರಮಾಣವಿರಬಹುದು. ಈಗ ಜಲಜನಕ ಬಾಂಬುಗಳ ರಚನೆಯಾಗಿದೆ. ಇದರ ವಿಕಿರಣ ಶೀಲ ಧೂಳು ಜಗತ್ತಿನ ಎಲ್ಲ ಭಾಗಗಳನ್ನೂ ಕವಿಯುತ್ತದೆ. ಬ್ರಿಟಿಸಿನಲ್ಲಿ ಅಣುಬಾಂಬುಗಳ ತಯಾರಿಕೆಗೆ ಹೊಣೆಗಾರರಾದ ಸರ್. ಜೋನ್ ಕೊಕ್‌ಕ್ರೋಫ್ಟ್ ಹೇಳುವುದನ್ನು ಗಮನಿಸಿದರೆ, ಇಂಗ್ಲೆಂಡಿನಲ್ಲಿ ಏನೇನೂ ರಕ್ಷಣೆಯಿಲ್ಲದೆ ಅಣುವಿಕಿರಣ ಶೀಲತೆಗೆ ನೇರವಾಗಿ ಬಲಿಯಾದವರು ಮೂವತ್ತರಲ್ಲಿ ಒಂದಂಶದಷ್ಟೇ ಅಪಾಯಕ್ಕೆ ಒಳಗಾಗಿದ್ದಾರೆ ಎನ್ನಬೇಕಾಗುತ್ತದೆ ಆದರೆ ಹೆಚ್ಚಾಗಿ ಇಂಗ್ಲೆಂಡಿನಲ್ಲಿ ಗಾಮಾಕಿರಣಗಳನ್ನು ತಡೆಗಟ್ಟಬಲ್ಲ ಇಟ್ಟಿಗೆ ಮನೆಗಳಿರುವುದರಿಂದ ಮತ್ತು ಜನರು ಈ ಮನೆಗಳೊಳಗೆಯೇ ಹೆಚ್ಚಾಗಿ ಇರುವುದರಿಂದ ಸಾಮಾನ್ಯ ಮನುಷ್ಯನೊಬ್ಬನು ಮುನ್ನೂರರಲ್ಲಿ ಒಂದಂಶದಷ್ಟೇ ಅಪಾಯಕ್ಕೆ ಗುರಿಯಾಗಿರಬಹುದು ಎನ್ನಲಾಗುತ್ತದೆ.

ನಮ್ಮ ದೇಶದಲ್ಲಿ

ಭಾರತದ ಪರಿಸ್ಥಿತಿ ಮಾತ್ರ ಹೀಗಿಲ್ಲ. ಇಲ್ಲಿಯ ಜನರು ಹೆಚ್ಚಾಗಿ ಮನೆಯ ಹೊರಗಡೆಯೇ ದಿನವಿಡೀ ದುಡಿಯುತ್ತಿರುತ್ತಾರೆ; ಅಲ್ಲದೆ ಅವರ ಮನೆಯಾದರೂ ಯಾವುವೇ ರಕ್ಷಣೆಯನ್ನೊದಗಿಸಲಾರದಷ್ಟು ದುರ್ಬಲವಾಗಿರುತ್ತದೆ. ಇದಕ್ಕಿಂತಲೂ ಹೆಚ್ಚಾಗಿ ಭಾರತೀಯರು ಜಲಜನಕ ಬಾಂಬಿನ ಸ್ಫೋಟನ ನಡೆಸುವ ಶಾಂತ ಸಾಗರದ ಬಿಕಿನಿ ದ್ವೀಪಕ್ಕಾಗಲೀ ದಕ್ಷಿಣ ಧ್ರುವ ಸಾಗರ ಪ್ರದೇಶದ ರಾಂಗೆಲ್ ದ್ವೀಪಕ್ಕಾಗಲೀ ಇಂಗ್ಲಿಷರಿಂಗಿತ ಹಚ್ಚು ಹತ್ತಿರವಿದ್ದಾರೆ. ಆದುದರಿಂದ ಈ ಪ್ರಾಯೋಗಿಕ ಸ್ಫೋಟನಗಳ ಪರಿಣಾಮವು ಭಾರತೀಯರ ಸಂತಾನದ ಮೇಲೆಯೇ ಪಾಶ್ಚಾತ್ಯರಿಗಿಂತ ಹೆಚ್ಚು ಗಂಭೀರವಾಗುತ್ತದೆ. ಇವುಗಳು ಎಷ್ಟು ಸಾವನ್ನುಂಟು ಮಾಡಬಹುದು ಎಂದು ಯಾರಿಗೂ ಗೊತ್ತಿಲ್ಲ ಮುಂದಿನ ಕೆಲವು ತಲೆಮಾರುಗಳಲ್ಲಿ ಇನ್ನೂರ ವರೆಗೆ ನಡೆಸಿದ ಸ್ಫೋಟನ ಪ್ರಯೋಗಗಳ ಪರಿಣಾಮವಾಗಿ ಕನಿಷ್ಠ ೩೦೦೦ ಭಾರತೀಯರಾದರೂ ಮರಣಗೊಳ್ಳಬಹುದೆಂದು ಅಂದಾಜು. ಕೆಲವು ಸಾವಿರ ವರ್ಷಗಳಷ್ಟು ಕಾಲವನ್ನು ಇದು ತೆಗೆದುಕೊಳ್ಳಬಹುದೆಂದು ಹೇಳಲಾಗುತ್ತಿದ್ದರೂ ಇಷ್ಟರೊಳಗೆ ಕೆಲವಾದರೂ ಸಾವು ಸಂಭವಿಸಿರಬಹುದೆಂದೂ ನಂಬುವವರಿದ್ದಾರೆ.

ಯುರೋಪು ಅಥವಾ ಅಮೇರಿಕಗಳಿಗಿಂತ ಭಾರತದಲ್ಲಿ ಇಂಥ ಮರಣವು ತೀವ್ರವೂ ಕ್ಷಿಪ್ರವೂ ಆಗಬಹುದೆಂಬುದಕ್ಕೆ ಬೇರೆ ಕೆಲವು ಆಧಾರಗಳೂ ಇವೆ. ಭಾರತದಲ್ಲಿ ರಕ್ತಸಂಬಂಧಿಗಳ ನಡುವೆ ಮದುವೆಯು ತೀರ ಸಾಮಾನ್ಯ ರೂಢಿಯಾಗಿದೆ. ಜಾತಿ ಪದ್ಧತಿ ಮತ್ತು ಗ್ರಾಮವಾಸಗಳೂ ಇಂಥ ಪುರಂಕವನ್ನು ಹತ್ತಿರ ತರುತ್ತವೆ. ರಕ್ತಸಂಬಂಧಿಕರಲ್ಲಿ ಮದುವೆ ನಡೆಯದಂತೆ ಮಾಡಬಹುದಾದರೂ ಅಷ್ಟರಿಂದಲೇ ಉದ್ದೇಶ ಸಾಧನೆಯಾದೀತೆನ್ನುವುದು ಕಷ್ಟ; ಸಾವಿನ ದಿನವನ್ನು ಮುಂದೂಡುವುದಕ್ಕಷ್ಟೇ ಅದು ನೆರವಾದೀತು; ಹೊರತು ಭಂಡಾರ್ಣ ಭಯವನ್ನು ನಿವಾರಿಸಲಾರದು. ಹೀಗೆಂದ ಮಾತ್ರಕ್ಕೆ ಶೀತ ಪ್ರದೇಶಗಳಿಗಿಂತ ಉಷ್ಣ ವಲಯದ ನಿವಾಸಿಗಳ ಭಾವಿ ಸಂತಾನವನ್ನೆ ಹೆಡ್ಡಾಗಿ ಆಹುತಿ ತೆಗೆದುಕೊಳ್ಳುವ ಘೋರಣಿಯಿಂದ ಅಣು ಶಕ್ತ್ಯಸ್ತ್ರಗಳ ಸ್ಫೋಟನ ನಡೆಯುತ್ತದೆ ಎನ್ನಲಾಗದು. ಪ್ರಾಯೋಗಿಕ ಸ್ಫೋಟನಗಳನ್ನು ನಡೆಸುತ್ತಿರುವ ರಾಷ್ಟ್ರಗಳು ಇದನ್ನು ನೆನೆಸಿರುವ ಸಂಭವವಿಲ್ಲ.

ಹಾಲ್ಡೇನರ ಹಾರೈಕೆ

ಆ ರಾಷ್ಟ್ರಗಳಿಗೆ ತಿಳಿದೋ ತಿಳಿಯದೆಯೋ ಆಗುವ ದುಷ್ಪರಿಣಾಮವು ಮಾತ್ರ ತಪ್ಪುವುದಿಲ್ಲ ಎಂಬುದೇ ಚಿಂತಾಜನಕವಾದ ವಿಷಯ. ಬ್ರಿಟನು ಬೇಗನೆ ಜಲಜನಕ ಬಾಂಬಿನ ಸ್ಫೋಟನ ಪ್ರಯೋಗ ನಡೆಸಲು ತೀರ್ಮಾನಿಸಿದೆ; ಅಮೇರಿಕ ಮುಂದಿನ ವರ್ಷದಲ್ಲಿ ಹೊಸ ಪ್ರಯೋಗಗಳನ್ನು ನಡೆಸಲಿದೆ; ರಶ್ಯವು ಮೊನ್ನೆಯಷ್ಟೇ ಭೀಕರ ಜಲಜನಕ ಬಾಂಬನ್ನು—ಆಂಧ್ರ ಶಸ್ತ್ರಾಸ್ತ್ರಗಳನ್ನು ಒಟ್ಟುಸೇರಿಸಬೇಕೆನ್ನುತ್ತಿದ್ದಂತೆಯೇ—ಸಿಡಿಸಿದೆ. ಇಂಥ ಪರಿಸ್ಥಿತಿಯಲ್ಲಿ ಭಾರತ ಸರಕಾರವು ಏನಾದರೂ ಪ್ರಯತ್ನಮಾಡಿದರೆ ಪ್ರಾಯೋಗಿಕ ಸ್ಫೋಟನಗಳನ್ನೂ ನಿಲ್ಲಿಸಬಹುದೆಂದು ಪೊಲ್. ಹಾಲ್ಡೇನರು ಭಾವಿಸಿದ್ದಾರೆ ಭಾರತೀಯರುತಮ್ಮ ಸರಕಾರಕ್ಕಿಂತ ಲೂಹೆಚ್ಚು ಆಸಕ್ತಿಯನ್ನು ಈ ವಿಷಯದಲ್ಲಿ ತೆಗೆದುಕೊಳ್ಳಬಲ್ಲರೆಂದು. ಅವರು ನೆಂಬಿದ್ದಾರೆ ಉದಾಹರಣೆಗೆ, ಜಲಜನಕ ಬಾಂಬು ಮುಂತಾದುವುಗಳನ್ನು ಸಿಡಿಯುವ ಯಾವುದೇ ರಾಷ್ಟ್ರದ ಸರಕುಗಳನ್ನು ಕೊಂಡು ಕೊಂಡು ಉಪಯೋಗಿಸಲು ಭಾರತೀಯರು ನಿರಾಕರಿಸಬಹುದು. ಅದೇವೇ ಇರಲಿ—ಭಾರತೀಯರಿಗೆ ಈ ಪ್ರಾಯೋಗಿಕ ಸ್ಫೋಟನಗಳಿಂದ ಹೆಚ್ಚಿನ ಅಪಾಯವಿವೆ ಎಂದು ಈ ಲೈಂಗಿಕ ಶಾಸ್ತ್ರಜ್ಞರ ಖಚಿತ ಅಭಿಪ್ರಾಯ.

ಇತ್ತೀಚೆ ಜಿನೇವದಲ್ಲಿ ಶಾಂತಿ ಕಾಲದ ಬಳಕೆಗಾಗಿ ಅಣುಶಕ್ತಿಯನ್ನು ಉಪಯೋಗಿಸುವಾಗ ನಡೆದ ಚರ್ಚೆ ಮತ್ತು ವಿಚಾರ ವಿನಿಮಯಗಳಾ ಹಾಲ್ಡೇನರ ನಿಲುಮೆಯನ್ನು ಪುಷ್ಟೀಕರಿಸುತ್ತಿವೆ, ಜೀವವುಳ್ಳ ಎಲ್ಲ ಪ್ರಾಣಿ ಮತ್ತು ಸಸ್ಯಗಳ ಮೇಲೆ ಗಂಭೀರ ಹಾಗು ದೂರಗಾಮಿಯಾದ ದುಷ್ಪರಿಣಾಮವನ್ನೆನ್ನು ಮಾಡಬಲ್ಲ ಅಣುವಿಕಿರಣ ಶೀಲತೆಯಿಂದ ರಕ್ಷಣೆಯನ್ನೊದಗಿಸುವುದಂತು? ಎಂಬುದೇ ಆ ವಿಜ್ಞಾನಿಗಳ ಮುಂದಿದ್ದ ದೊಡ್ಡ ಪ್ರಶ್ನೆಯಾಗಿದ್ದಿತು. ಶಾಂತಿಕಾಲದ ಬಳಕೆಗೆಂದು ಅಣುಶಕ್ತಿಯ ಪ್ರಯೋಜನ ಪಡೆಯುವಾಗ ಈ ವಿಕಿರಣ ಶೀಲತೆ ಮತ್ತು ಇದಕ್ಕೆ ಸಂಬಂಧಿ

(೧೦ನೇ ಪುಟ ನೋಡಿರಿ)

THE BOMBAY LIFE ASSURANCE Co., Ltd.
Excellent Bonuses !
1954 VALUATION.
Whole Life .... Rs. 19/- per 1000/-per year
Endowment .... Rs. 15/- per 1000/- per year.
Record Business: Over Rs. 5 Crores.
It pays you to consult for Representation or Insurance:-
KOCHIKAR BROTHERS, LTD.,
CHIEF AGENTS, **UDIPI.**
or any of their offices at:-
Bangalore, Coimbatore, Kozhikode, Madura, Mangalore and Trivandrum.

ಶಿಕ್ಷಣ ಮಾಧ್ಯಮ ಮತ್ತು ಅಧಿಕೃತ ವ್ಯವಹಾರ

ಅಲ್ಪಸಂಖ್ಯಾಕ ಭಾಷಾಗುಂಪಿನ ಹಿತರಕ್ಷಣೆ

ನಮ್ಮ ಕಳೆದ ಸಂಚಿಕೆಯಲ್ಲಿ ನಿರೂಪಿಸಿದ ತತ್ವಗಳನ್ನು ಅನುಸರಿಸಿ, ಫಜಲಾಲಿ ಆಯೋಗವು ಬಿಲ್ಲ ಸಂಖ್ಯಾಕ ಭಾಷಾ ಗುಂಪಿನ ಹಿತರಕ್ಷಣೆಗೋಸ್ಕರ ಏನು ಶಿಫಾರಸನ್ನು ಮಾಡಿದೆ ಎಂದೀಗ ನೋಡೋಣ! ಆಯೋಗವು ತನ್ನ ಮುಂದೆ ಅನೇಕ ಬಗೆಯ ಸೂಚನೆಗಳನ್ನು ಅವ ಗಾಹನೆಗಾಗಿ ಸಾರ್ವಜನಿಕರಿಂದಿಲೂ ಇ ತರೆಡೆಯಿಂದಲೂ ಮಂಡಿಸಲಾಗಿದೆ ಎಂ ದು ಹೇಳಿದೆ.

ಉದಾಹರಣಾರ್ಥವಾಗಿ ರಾಜ್ಯಗಳ ಸಚಿವ ಸಂಪುಟದಲ್ಲಿ ಅಲ್ಪ ಸಂಖ್ಯಾಕ ಭಾಷಾಗುಂಪಿಗೆ ಪ್ರಾತಿನಿಧ್ಯವಿರಬೇಕೆಂ ದು ಒಂದು ಸೂಚನೆ ಬಂದಿದೆ. ಆದರೆ ಇಂಥ ಹಲವು ಸೂಚನೆಗಳು ಆಯೋಗ ವು ಪಾಕಿಕೊಂಡಿರುವ ಮೂಲ ಸೂತ್ರ ಗಳಿಗೆ ಹೊಂದಿಕೊಳ್ಳುವುದಿಲ್ಲ. ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯವ ಪ್ರಶ್ನೆಯನ್ನೆ ತೆಗೆದುಕೊಂಡರೆ ಶಾಸನಾಂಗದ ಮತ್ತು ರಾಜ್ಯದ ವಿಶಿಷ್ಟ ಪರಿಸ್ಥಿತಿಯು ಅಲ್ಪ ಸಂಖ್ಯಾಕ ಭಾಷಾಗುಂಪಿನಿಂದಲೆಗಿಂದ ಒಬ್ಬನನ್ನೊ ಹೆಚ್ಚು ಮಂದಿಯನ್ನೊ ಮಂತ್ರಿಯಾಗಿ ಆರಿಸುವುದಕ್ಕೆ ಪೋಷಕ ವಲ್ಲದಿದ್ದರೆ, ಕಡ್ಡಾಯವಾಗಿ, ಸೂತ್ರಬಲ ದಿಂದ, ಹಾಗೆ ಮಾಡಬೇಕೆಂದು ವಿಧಿಸು ವುದು ಇಷ್ಟವಾಗಲಾರದು.

ನ್ಯಾಯಸ್ಥಾನಗಳ ಆಶ್ರಯ

ವ್ಯಾಪಾರ, ವಾಣಿಜ್ಯ ಮತ್ತು ಔದ್ಯೋ ಮಿಕ ಕ್ಷೇತ್ರಗಳಲ್ಲಿ ಭೇದಭಾವವನ್ನೂ ಪಕ್ಷಪಾತವನ್ನೂ ಮಾಡಲಾಗುತ್ತದೆ ಎಂ ಬ ದೂರನ್ನು ವಿಚಾರಿಸುವುದಾದರೆ, ಅಂ ಥ ಹವ್ಯಾಸಗಳನ್ನು ಪಡೆಗಟ್ಟಲು ರಾ ಜ್ಯಾಂಗ ಘಟನೆಯಲ್ಲಿ ಸಾಕಷ್ಟು ಶಕ್ತಿ ಯುಳ್ಳ ಸೂತ್ರಗಳಿವೆ. ಘಟನೆಯನ್ನು ಉಲ್ಲಂಘಿಸಿ ರಾಜ್ಯ ಸರಕಾರಗಳು ನಡೆ ಯುತ್ತವೆ ಎಂದು ಹೇಳಬಹುದಾದ ಸಂ ದರ್ಭ ಬರುವಷ್ಟರ ಮಟ್ಟಿಗೆ ಈ ಭೇದ ಭಾವ ನಡೆದರೆ, ನ್ಯಾಯ ಸ್ಥಾನಗಳಲ್ಲಿ ಅ ಹ್ವಾನಿಸುವುದೇ ಏಕಮೇವ ಉಪಾಯ ವಾಗುತ್ತದೆ; ಹೊರತು, ಸಾಮಾನ್ಯ ಸೂ ಚನೆಗಳೆಂದೂ ರಾಜ್ಯ ಸರಕಾರಗಳನ್ನು ಬಂಧಿಸುವುದು ಸಾಧ್ಯವಿಲ್ಲ. ಏಕೆಂದರೆ ಘ ಟನೆಯನ್ನೆ ಮನ್ನಿಸದವುಗಳು ಈ ಸೂಚನೆ ಗಳಿಗೇಕೆ ಗಮನಕೊಟ್ಟಾವು? ಸರಕಾರವು ನಿಷ್ಪಕ್ಷ ಪಾತವನ್ನೆ ಧ್ಯೇಯವಾಗಿಟ್ಟು ಕೊಳ್ಳುವುದೆಂದೂ ಅಲ್ಪ ಸಂಖ್ಯಾಕ ಭಾಷಾಗುಂಪು ನ್ಯಾಯ ಸ್ಥಾನಗಳನ್ನು ಆಶ್ರಯಿಸಲೇ ಬೇಕಾಗಿ ಬರುವ ಹೆಜ್ಜೆ ಗಳನ್ನಿಡುವುದಿಲ್ಲವೆಂದೂ ನಂಬುವುದೇ ಯೋಗ್ಯವಾದ ಮಾರ್ಗ.

ಅಭಿವೃದ್ಧಿ ಪ್ರಯತ್ನಗಳಿಗೆ ಬೆಚ್ಚನಾ ಗುವ ಹೊಣೆಯನ್ನು ಉಚಿತ ರೀತಿಯಲ್ಲಿ ಹೊಚಬೇಕೆನ್ನುವ ಸಮಸ್ಯೆಯು ಕೇವಲ ಅಲ್ಪ ಸಂಖ್ಯಾಕ ಭಾಷಾ ಗುಂಪಿನ ಹಿತ ರಕ್ಷಣೆ ಎಂಬ ಕ್ಷೇತ್ರಕ್ಕಷ್ಟೆ ನಿಯಮಿತವಾಗಿ ಲ್ಲ. ರಾಷ್ಟ್ರ ಹಿತದ ವಿಶಾಲ ತಳಹದಿಯ ಮೇಲೆ ಇಂಥ ಹಂಚುವಿಕೆಯನ್ನು ನಿರ್ಧ ರಿಸಬೇಕಾಗುತ್ತದೆ. ಇದಕ್ಕಾಗಿ ಆಯೋಗ ಅಖಿಲ ಭಾರತ ಸ್ವರೂಪದ ಶಾಂತಿಕ ಮುಂಡಳದಂಥ ಸ್ಥಾಯಿ ಸಂಸ್ಥೆಗಳನ್ನು ಸಂಘಟಿಸಬೇಕೆಂದು ಹೇಳಿದೆ. ಅಲ್ಪ ಸಂ ಖ್ಯಾಕ ಭಾಷಾ ಗುಂಪಿನ ಹಿತರಕ್ಷಣೆ ಎಂ ಬ ವಿಕೋದ್ದೇಶದಿಂದ ಈ ಸ್ಪರ್ಶೆಯನ್ನು ನೋಡುವುದು ಉಚಿತವಾಗಲಾರದು.

ಮಾತೃಭಾಷೆಯಲ್ಲಿ ಶಿಕ್ಷಣ

ಸಮಸ್ಯೆಯ ಬಹಳ ಮುಖ್ಯವಾದ ಮುಖವೆಂದರೆ ಅಲ್ಪ ಸಂಖ್ಯಾಕ ಭಾಷಾ ಗುಂಪಿಗೆ ತಂತಮ್ಮ ಮಾತೃ ಭಾಷೆಯಲ್ಲಿ ಶಿಕ್ಷಣವನ್ನು ಪಡೆಯುವ, ಆಡಳಿತದಲ್ಲಿ ತಂತಮ್ಮ ಭಾಷೆಯನ್ನು ಉಪಯೋಗಿಸು ವಂತೆ ಮಾಡುವ ಮತ್ತು ಸರಕಾರದ ನೌಕರಿ ಸ್ಥಾನಗಳಲ್ಲಿ ಸಾಕಷ್ಟು ಸಂಖ್ಯೆ ಗಳನ್ನು ಪಡೆಯುವ ಅಧಿಕಾರ ಚಲಾ ವಣೆಗೆ ಎಷ್ಟು ಅವಕಾಶವಿದೆ ಎಂಬುದೇ ಆಗಿದೆ. ತೈಕ್ಷಣಿಕ ಸಂಸ್ಥೆಗಳಲ್ಲಿ ಶಿಕ್ಷಣದ ಮಾಧ್ಯಮ ಮತ್ತು ಆಡಳಿತದ ಭಾಷೆ ಇವು ನಿತ್ಯ ವ್ಯವಹಾರದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲೂ ಪ್ರಾಮುಖ್ಯ ಪಾತ್ರವನ್ನು ವಹಿಸುತ್ತವೆ. ಇದನ್ನೆ ಅಲ್ಪ ಸಂಖ್ಯಾಕ ಭಾಷಾಗುಂಪಿನ ಸಮಸ್ಯೆಯ ತಿರುಳೆಂದು ಫಜಲಾಲಿ ಆಯೋಗವು ಪರಿ ಗಣಿಸಿದೆ.

ಭಾರತದ ರಾಜ್ಯಾಂಗ ಘಟನೆಯು, ಈ ಮೊದಲೇ ಹೇಳಿದಂತೆ, ಅಲ್ಪ ಸಂ ಖ್ಯಾತ ವರ್ಗಕ್ಕೆ ಪೂರಕ ಶಾಲೆಗಳನ್ನು ನಡೆಸಲು ಅಧಿಕಾರವನ್ನೀಯುತ್ತದೆ; ಆದ ರೆ ಸಾರ್ವಜನಿಕ ಶಾಲೆಗಳಲ್ಲಿ ಅಲ್ಪ ಸಂ ಖ್ಯಾಕರಿಗೆ ತಮ್ಮ ಮಾತೃ ಭಾಷೆಯಲ್ಲಿ ಯೇ ಶಿಕ್ಷಣವನ್ನು ಪಡೆಯುವ ಅಧಿಕಾರ ವನ್ನು ನಿರ್ದಿಷ್ಟವಾಗಿ ಹೇಳಿಲ್ಲ. ಆಯೋಗ ದ ಹೇಳಿಕೆಯಂತೆ, ಅಲ್ಪಸಂಖ್ಯಾಕಭಾಷಾ ಗುಂಪುಗಳಿಗೆ ತವ್ಮದೇ ಆದ ಶೈಕ್ಷಣಿಕ ಸಂಸ್ಥೆಗಳನ್ನು ಮುಖ್ಯವಾಗಿ ಗ್ರಾಮಾಂತ ರ ಪ್ರದೇಶಗಳಲ್ಲಿ, ಸ್ಥಾಪಿಸುವಷ್ಟು ಶಕ್ತಿ ಯಿಲ್ಲ. ಆದುದರಿಂದ ಇಂಥ ಪರಿಸ್ಥಿತಿಯ ಲ್ಲಿ ಪ್ರಾಥಮಿಕ ಶಾಲೆಯ ಘಟ್ಟದಲ್ಲಿಯಾ ದರೂ ಅಲ್ಪ ಸಂಖ್ಯಾಕ ಭಾಷಾ ಗುಂಪಿನ ವರಿಗೆ ಅವರ ಮಾತೃ ಭಾಷೆಯಲ್ಲಿಯೇ ಶಿ ಕ್ಷಣವನ್ನು ಕೊಡುವ ನೇರವಾದ ಜವಾ ಬ್ದಾರಿಯನ್ನು ಸರಕಾರದ ಮೇಲೆ ಹಾಕ ಬೇಕಾದುದು ನ್ಯಾಯವೆಂದು ಆಯೋಗ ಭಾವಿಸುತ್ತದೆ.

ಕಾಂಗ್ರೆಸಿನ ಗೊತ್ತುವಳಿ

ಸಾರ್ವಜನಿಕ ಶಾಲೆಗಳಲ್ಲಿ ಪ್ರಾಥಮಿ ಕ ಶಿಕ್ಷಣದ ಮಟ್ಟಿಗೆ ಅಲ್ಪ ಸಂಖ್ಯಾಕ ಭಾಷಾ ಗುಂಪಿಗೆ ಮಾತೃ ಭಾಷೆಯಲ್ಲಿ ಯೇ ಶಿಕ್ಷಣ ಪಡೆಯಲು ಇರುವಂಥ ಅ ಧಿಕಾರವನ್ನು ಕಾಂಗ್ರೆಸು ಕಾರ್ಯಕಾರಿ ಸಮಿತಿಯು ತನ್ನ ೧೯೫೪ನೇ ಇಸವಿಯ ಮತ್ತು ೧೯೫೫ನೇ ಮೇ ತಿಂಗಳುಗಳ ಗೊ ತ್ತುವಳಿಗಳಲ್ಲಿ ಮನ್ನಿಸಿದೆ. ರಾಜ್ಯ ಸರಕಾ ರಗಳೂ ಭಾರತ ಸರಕಾರವೂ ಈ ಅಧಿಕಾ ರವನ್ನು ತಾತ್ವಿಕವಾಗಿ ಒಪ್ಪಿವೆ. ಪ್ರಾಂ ತೀಯ ಶಿಕ್ಷಣ ಮಂತ್ರಿಗಳ ಸಮ್ಮೇಳನದ ಲ್ಲಿ (ಅಗೋಸ್ತು, ೧೯೫೪) ಸ್ವೀಕರಿಸಿದ ನಿರ್ಣಯದಿಂದ ಇದು ವ್ಯಕ್ತ ಪ ಡು ತ್ತದೆ, ಭಾರತ ಸರಕಾರವು ಇದನ್ನೆ ಮಂಜೂರು ಮಾಡಿದ್ದು ರಾಜ್ಯ ಸರಕಾರ ಗಳಿಗೆ ವಾರ್ಗದರ್ಶನ ಮಾಡಬಲ್ಲ ಉನ್ನ ತ ಸ್ಥಾನವನ್ನದು ಹೊಂದಿದೆ.

ಮೇಲಿನ ಗೊತ್ತುವಳಿಯ ಒಕ್ಕಣೆ ಈ ಕೆಳಗಿನಂತಿದೆ. "ಸಾಮಾನ್ಯ ಪ್ರಾಥಮಿಕ ಶಿಕ್ಷಣದ ಘಟ್ಟದಲ್ಲಿ ಮಗುವಿಗೆ ಶಿಕ್ಷಣ ವನ್ನು ಕೊಡುವ ಮತ್ತು ಪರೀಕ್ಷೆಗಳನ್ನು ನಡೆಸುವ ಮಾಧ್ಯಮವು ಮಗುವಿನ ಮಾತೃ ಭಾಷೆಯಾಗಿರಬೇಕು. ಇದು ಶಾಲೆಯಲ್ಲಿ ಕನಿಷ್ಠ ಳಂ, ಅಥವಾ ತರಗತಿಯಲ್ಲಿ ೧೦ ವಿದ್ಯಾರ್ಥಿಗಳ ಮಾತೃ ಭಾಷೆಯು ಪ್ರಾದೇಶಿಕ ಅಥವಾ ರಾಜ್ಯ ಸರಕಾರದ ಭಾಷೆಗಿಂತ ಭಿನ್ನವಾಗಿರುವಲ್ಲೆಲ್ಲ ಕನಿಷ್ಠ ಒಬ್ಬ ಅಧ್ಯಾಪಕನನ್ನಾದರೂ ನೇಮಿಸಿ, ಇಂಥ ವ್ಯವಸ್ಥೆಯನ್ನು ಏರ್ಪಡಿಸಬೇಕು. ಈ ಮಟ್ಟಿಗೆ ಹೆತ್ತವರು ಅಥವಾ ರಕ್ಷಕರು ಘೋಷಿಸುವ ಭಾಷೆಯೇ ಮಗುವಿನ ಮಾತೃ ಭಾಷೆ ಎಂದು ಭಾವಿಸಬೇಕು. ವಿದ್ಯಾರ್ಥಿಗಳ ಮಾತೃ ಭಾಷೆಗಿಂತ ಪ್ರಾ ದೇಶಿಕ ಅಥವಾ ರಾಜ್ಯ ಸರಕಾರದ ಭಾ ಷೆಯು ಭಿನ್ನವಾಗಿರುವಲ್ಲಿ ಸಾಮಾನ್ಯ ಪ್ರಾಥಮಿಕ ಶಿಕ್ಷಣ ಘಟ್ಟದ ಮೂರನೇ ತರಗತಿಗೆ ಮೊದಲಾಗದಂತೆ ಹೊಸ ಭಾ ಷೆಯನ್ನು ಕಲಿಸಬೇಕು. ಮಾಧ್ಯಮಿಕ ಶಿಕ್ಷಣದ ಘಟ್ಟದಲ್ಲಿ ಪ್ರಾದೇಶಿಕ ಭಾಷೆ ಯನ್ನು ಶಿಕ್ಷಣ ಮಾಧ್ಯಮವಾಗಿ ರೂಢಿಸಿ ಕೊಳ್ಳುವಾಗ ಹೊಂದಲಿಯೋಗದಂತೆ ಮ ಕ್ಕಳಿಗೆ ಸಾಮಾನ್ಯ ಪ್ರಾಥಮಿಕ ಶಿಕ್ಷಣ ಘಟ್ಟದ ಬಳಿಕ ಪ್ರಾರಂಭದ ಎರಡು ವ ರ್ಷಗಳಲ್ಲಿ ತಂತಮ್ಮ ಮಾತೃ ಭಾಷೆ ಯಲ್ಲಿಯೇ ಸ್ಪರ್ಶೆಗಳನ್ನು ಉತ್ತೀರ್ಣಿಸುವ ಇಚ್ಛೆಯ ಸ್ವಾತಂತ್ರ್ಯವಿರಬೇಕು."

ಘಟನಾತ್ಮಕ ಜತ್ತಾಯ

ಫಜಲಾಲಿ ಆಯೋಗಕ್ಕೆ ರಾಜ್ಯ ಸರ ಕಾರಗಳು ಪೂರೈಸಿದ ವೃತ್ತಾಂತಗಳ ಮೇಲಿಂದ ಹೇಳುವುದಾದರೆ, ಉಪರೋ ಕ್ತ ಗೊತ್ತುವಳಿಯನ್ನು ಅನುಷ್ಠಾನಕ್ಕೆ ತರಲು ಹೆಚ್ಚಿನ ರಾಜ್ಯ ಸರ ಕಾ ರ ಗಳು ಪ್ರಯತ್ನಶೀಲವಾಗಿವೆ. ಆದರೆ ನಿಶ್ಚಯವಾಗಿ ಗೊತ್ತುವಳಿಯ ಮೂ ಲ ಆಶಯಕ್ಕೆ ಅವುಗಳ ಕಾರ್ಯಕ್ರಮ ಎಷ್ಟರ ಮಟ್ಟಿಗೆ ಹೊಂದಿಕೊಳ್ಳುವುದನ್ನು ವುದು ಕಷ್ಟ. ಗೊತ್ತುವಳಿಯು ಕೇವಲ ಶಿಫಾರಸಿನ ರೂಪದಲ್ಲಿದೆ; ಆದುದುಂದ ರಾಜ್ಯ ಸರಕಾರಗಳೆಲ್ಲಿಪ್ಪೂ ಏಕರೂಪದ ಧೋರಣೆಯನ್ನು ಅನುಸರಿಸುವುದು ಸಂ ಶಯ. ಆದುದರಿಂದ ಅಲ್ಪ ಸಂಖ್ಯಾಕ ಭಾಷಾ ಗುಂಪಿಗೆ ಮಾತೃ ಭಾಷೆಯಲ್ಲಿ ಪ್ರಾಥಮಿಕಶಿಕ್ಷಣವನ್ನು ಪಡೆಯು ವುದಕ್ಕಿರುವ ಅಧಿಕಾರವನ್ನು, ಸಾಕಾದ ಷ್ಟು ವಿದ್ಯಾರ್ಥಿಗಳಿರಬೇಕೆಂಬ ಶರ್ತಕ್ಕೆ ಳಪಟ್ಟು ಈಗಿರುವುದಕ್ಕಿಂತ ಹೆಚ್ಚಿನ ದೃಢ ವಾದ ತಳಹದಿಯ ಮೇಲೆ ನಿಲ್ಲಿಸುವ ಆ ವಶ್ಯಕತೆ ಇದೆ. ಆಯೋಗವು ಘಟನಾ ತ್ಮಕವಾಗಿ ಇಂಥ ಅಧಿಕಾರವನ್ನು ನೀಡ ಬೇಕೆಂದೂ ಕೇಂದ್ರ ಸರಕಾರವು ಘಟನೆ ಯ ೩೪೭ನೇ ಸೂತ್ರದನ್ವಯ ಅಧಿಕಾರ ವನ್ನು ಅನುಷ್ಠಾನಕ್ಕೆ ತರಬೇಕೆಂದು ನಿ ರ್ದೇಶಿಸುವ ಹಕ್ಕನ್ನು ಪಡೆಯಬೇಕೆಂದೂ ಸೂಚಿಸಿದೆ.

(ಉಪಸಂಪಾದಕೀಯ)



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೦] [ಪೆನಿಕೇಟಿದ್

ಸ್ಮರಣೆ ಹೆಚ್ಚುತ್ತವೆ, ಶಾಂತ ನಿದ್ದೆ ಬರುತ್ತವೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತವೆ, ಕೂದಲು ಕಪ್ಪಾಗುತ್ತವೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನು ಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಸ್ಥಾನಿನಕ್ಕೆಯ: ದೊಡ್ಡಬಾಟ್ಲಿಗೆ ರೂ. ೩—೪—೦
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಕುಂದಾಪುರ ಡಿ.ಮುನ್ಸಿ. ಕೋರ್ಟಿನಲ್ಲಿ

O. P. No. 88/1949.
R. I. A. No. 1166/1955.
R. I. A. No. 1167/1955.

ಅರ್ಜಿದಾರ:— ಮೇಲಾಯು ಭಾಳ, ಶೀಣರಿ ರಾನು ಮುಂಬುನಾಥ ಪಾಳರ ಮಗ, ಮೈ ಸೂರು ಪ್ರೊವಿನ್ಸ್ ನಾಗರ ತಾಲ್ಲು ನಾಗರ ಕೆಸಬಾ ಮಾಕೇರ್ಟ್ ರೋಡ್ ನಿವಾಸಿ ವಿರುವ. Post Sagar.

ಎದ್ರಿಸ್— ಸೀತಾ ಜ್ಯಾ, ರಾನು ಮುಂಬುನಾಥ ಪಾಳರ ಬಿಧವೆ, ಮತ್ತೂರು ತಾಲ್ಲು ಪು ತ್ತೂರು ಮುನ್ಸಿಫ್ ಕೋರ್ಟು ಜೆರ್ಸಬಂದಿ ಬೆಲ್ತಂಗಡಿಯಲ್ಲಿರುವವಳು. Post Belthangady.

ಸದ್ರಿ ಅರ್ಜಿದಾರನು ಸದ್ರಿ ಅರ್ಜಿ ನ್ಯಾಯ ಪತ್ರಿಕೆಯಲ್ಲಿ ಗಾರ್ಡಿಯನ್ ಡಿಸ್‌ಚಾರ್ಜ್ ಪೂ ರ್ತಿ, ನಿಮ್ಮಿಬ್ಬರಲ್ಲಿರುವ ಹಣವ ಷ್ಟೆಕಿ ತನಗೆ ಸಿಗಬೇಕೆ ರೋಪಾಮು ೩೮೮—೬—೬ನ್ನು ಪಡ ಕೊಳ್ಳುವರೆ ತನ್ನ ವಕೀಲರ ಹೆಸರಿಗೆ ಚೆಕ್ ಕೊಡಿಸುವುದಕ್ಕಾಗಿ ಕೊಟ್ಟ ಮೇಲಿನ ಅರ್ಜಿಗಳು ತಾರೀಖು 16—12—1955ಕ್ಕೆ ತನ್ನಿಗೆ ಇ ತ್ಯರ್ಥವಾಗಿರುತ್ತವೆ. ಈ ಕಾರಣ ಅಕ್ಟೋಪಕೆ ಇವ್ತರಿ ಸದ್ರಿ ದಿವಸ ಪೂರ್ವಾಪ್ಟ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಪ ಯಾ ವಕೀಲರ ಮುಖಾಂತ್ರ ಹಾಜ್ರಾಗಿ ಜಾ ಹೀರು ಸಾಡಿಕೊಳ್ಳಿರಕ್ಕಷ್ಟೆ. ತಪ್ಪಿದ್ರೆ ನಿ ಮ್ಮನ್ನು ಎಕ್ಸ್‌ಪಾರ್ಟೆ ಮಾಡಿ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ಅರ್ಜಿಯನ್ನು ತೀರ್ಮಾ ನಿಸೋಣವೆಂದೀತಿಂತ ಈ ಸೂಚಲಕ ತಿಳುಪ ಸೋಣವಾಗಿದೆ.

M. M. Hebbar,
Advocate for Petitioner.
ಕುಂದಾಪುರ, ತಾ. 28—11—55.

ಸೂಚಿತ ಕರ್ನಾಟಕ ಘಟಕದ ನಿರ್ಮಾಣ

ಮೈಸೂರು ವಿಧಾನ ಮಂಡಳದ ಉಭಯ ಸದನಗಳ ಒಪ್ಪಿಗೆ

ಇದೇ ದಶಂಬರ ೧೯ನೇ ದಿನಾಂಕ ಮೈಸೂರು ವಿಧಾನ ಮಂಡಳದ ಉಭಯ ಸದನಗಳೂ ಕರ್ನಾಟಕ ಏಕೀಕರಣದ ಇತಿಹಾಸದಲ್ಲಿ ಉಜ್ವಲವಾದ ಗೊತ್ತುವಳಿಯೊಂದನ್ನು ಸ್ವೀಕರಿಸಿವೆ. ಅದು ಹೀಗೆ ಹೇಳುತ್ತದೆ—"ರಾಜ್ಯಗಳ ಪುನರ್ಘಟನೆಯ ಆಯೋಗವು ಕರ್ನಾಟಕ ರಾಜ್ಯ ನಿರ್ಮಾಣದ ಕುರಿತು ಕೊಟ್ಟಿರುವ ಸಲಹೆಗಳನ್ನು ಪರ್ಯಾಲೋಚಿಸಿದ ಬಳಿಕ ಈ ಸಭೆಯು ಹೊಸ ರಾಜ್ಯದಲ್ಲಿ (೧) ಬಳ್ಳಾರಿ ಜಿಲ್ಲೆಗೆ ಸೇರಿರುವ ಯಾವ ಭಾಗವನ್ನೂ ಬಿಟ್ಟುಕೊಡದೆ ಈಗಿನ ಮೈಸೂರು ರಾಜ್ಯ, (೨) ಮುಂಬಯಿ ರಾಜ್ಯದ ಬಿಜಾಪುರ, ಧಾರವಾಡ, ಉತ್ತರ ಕನ್ನಡ ಮತ್ತು ಚಂದ್ರಗಡ ತಾಲೂಕಿನ್ನು ಬಿಟ್ಟುಳಿದ ಬೆಳಗಾಂವಿ ಜಿಲ್ಲೆಗಳು, (೩) ಹೈದರಾಬಾದು ರಾಜ್ಯದ ರಾಯಚೂರು ಮತ್ತು ಕಲಬುರ್ಗಿ ಜಿಲ್ಲೆಗಳಲ್ಲದೆ ಅದಕ್ಕೆ ಹೊಂದಿಕೊಂಡಿರುವ ಬೀದರ ಜಿಲ್ಲೆಯ ನಾಲ್ಕು ತಾಲೂಕುಗಳು, (೪) ಚಂದ್ರಗಿರಿ ಹೊಳೆಯ ದಕ್ಷಿಣ ಕ್ಕಿರುವ ಕಾಸರಗೋಡು ತಾಲೂಕಿನ ಭಾಗವನ್ನು ಬಿಟ್ಟುಳಿದ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಯಮುತ್ತೂರು ಜಿಲ್ಲೆಯ ಕೊಳ್ಳೆಗಾಲ ತಾಲೂಕು; (೫) ಕೊಡಗು, ಮತ್ತು (೬) ಹೊಸ ರಾಜ್ಯದಲ್ಲಿ ಸೇರಲು ಇಚ್ಛಿಸುವ ಜನರಿರುವ ಅಕ್ಕ ಪಕ್ಕದ ಪ್ರದೇಶಗಳು—ಇವಿಷ್ಟನ್ನು ಒಳಗೊಂಡ ಭೂ ಭಾಗಗಳು ಸೇರಿರಬೇಕೆಂದು ಅಭಿಪ್ರಾಯ ಪಡುತ್ತದೆ; ಅಲ್ಲದೆ, ತನ್ನ ಸಮ್ಮಿಶ್ರ ಸ್ವರೂಪವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಹೊಸ ರಾಜ್ಯವನ್ನು ಮೈಸೂರು ರಾಜ್ಯವೆಂಬುದಾಗಿ ಮುಂದಕ್ಕೂ ಕರೆಯತ್ತಿರಬೇಕೆಂಬ ಅಭಿಮತವನ್ನು ಸಹ ವ್ಯಕ್ತಪಡಿಸುತ್ತದೆ."

ಬಳ್ಳಾರಿ ಆಂಧ್ರಕ್ಕಿಲ್ಲ

ಮೇಲಿನ ಗೊತ್ತುವಳಿಯ ಕುರಿತು ಮುಖ್ಯ ಮಂತ್ರಿ ಶ್ರೀನುಮಂತಯ್ಯನವರು ಸುದೀರ್ಘ ಭಾಷಣವನ್ನು ಮಾಡುತ್ತಾ ಹೀಗೆಂದರು—"ನಾನೊಬ್ಬ ಜನ ಪ್ರತಿನಿಧಿಯಾಗಿ, ಸಭಾ ನಾಯಕನಾಗಿ, ಕಾಂಗ್ರೆಸು ಪಕ್ಷದ ಧೋರಣೆನಾಗಿ, ರಾಜ್ಯದ ಮುಖ್ಯ ಮಂತ್ರಿಯಾಗಿ, ಅಖಿಲ ಭಾರತ ಕಾಂಗ್ರೆಸಿನ ಸದಸ್ಯನಾಗಿ ಒಂದೇ ಒಂದು ನಿರ್ಣಯವನ್ನು ಸಭೆಯ ಮುಂದಿಡಲು ಇದಕ್ಕೆ ಮುಂಚೆ ಶಕ್ತನಾಗಿರಲಿಲ್ಲ. ನಾನು ಕೆಲಸ ಮಾಡುತ್ತಿರುವ ಮೇಲಿನ ಐದು ಸ್ಥೇತ್ರಗಳಲ್ಲಿ ಭಿನ್ನಾಭಿಪ್ರಾಯವಿದ್ದುದಂದ ಎಲ್ಲ ಅಭಿಪ್ರಾಯಗಳನ್ನೂ ಹೊಂದಿಸಿ ಸಾಮರಸ್ಯದಿಂದ ಮುಂದಿಡಲು ಅವಕಾಶ ವಾಗಲಿಲ್ಲ. ಆದುದರಿಂದ ನಾನು ಅನೇಕ ಸಲ ವ್ಯಕ್ತಿಗತ ಅಭಿವ್ಯಾಯವನ್ನಷ್ಟೆ ವ್ಯಕ್ತಪಡಿಸುತ್ತಿದ್ದೇನೆಂದು ಹೇಳುತ್ತಿರ ಬೇಕಾಯಿತು. ಈ ದಿವಸ ತಮ್ಮೆಲ್ಲರ ಕೃಪೆಯಿಂದ ನನ್ನ ಐದೂ ನೆಲೆಗಳನ್ನೂ ಹೊಂದಿಸಿಕೊಂಡು ನಿರ್ಣಯವೊಂದನ್ನು ಮುಂದಿಡಲು ಸಾಧ್ಯವಾಗಿರುವುದಕ್ಕೆ ಸಂತೋಷಿಸುತ್ತೇನೆ. ಕಾಂಗ್ರೆಸಿನ ನಾಲ್ವರು ಮುಖಂಡರು ಸೂಚಿತ ಕರ್ನಾಟಕ ರಾಜ್ಯದಲ್ಲಿ ಮೈಸೂರಿನರುವಕನ್ನಡಪ್ರದೇಶಗಳು ಸೇರುತ್ತವೆ ಎಂದು ಪ್ರಕಟಿಸಿರುವುದಿಂದ ಈಚೆಗೆ ಒಂದು ಅನುಮಾನ ಉಂಟಾಯಿತು. ಮೈಸೂರು ರಾಜ್ಯದಲ್ಲಿರುವ ಕನ್ನಡೇತರ ಭಾಷೆಯಾಡುವ ಜನರನ್ನು ಬೇರೆ ಕಡೆಗೆ ಕಳಿಸಿಕೊಡಬೇಕಾಗುತ್ತದೋ ಎಂಬುದೇ ಆ ಸಂಶಯ. ವಸ್ತುಸ್ಥಿತಿಯನ್ನು ನಾನು ಮಾತುಕತೆಯನ್ನು ನಡೆಸಿ, ಈ ಬಗ್ಗೆಯೂ ಸ್ಪಷ್ಟೀಕರಣವನ್ನು ಪಡೆದಿದ್ದೇನೆ. ಇದಕ್ಕನುಸಾರವಾಗಿ ಈಗಿರತಕ್ಕ ಮೈಸೂರು ಸಂಸ್ಥಾನವು ಮುಂದೆ ರಚಿತವಾಗಲಿರುವ ರಾಜ್ಯದಲ್ಲಿಯೂ ಇದ್ದುದಿದ್ದಂತೆ ಉಳಿಯುತ್ತದೆ. ಮೈಸೂರಿನ ಯಾವ ಜಿಲ್ಲೆಗಳನ್ನು ಒಡೆಯುತ್ತಾರೋ ಏನೋ ಎಂದಿದ್ದ ಭೀತಿ ಹೀಗೆ ನಿವಾರಣೆಯಾಗಿದೆ. ಉಪರೋಕ್ತ ಗೊತ್ತುವಳಿಯ ಪ್ರಥಮ ಭಾಗದ ಕೂನೆಯಂಶವು ಅಕ್ಕಸಕ್ಕದಲ್ಲಿರುವ ಆಲೂರು, ಆದವಾನಿ, ರಾಯದುರ್ಗ, ಮಡಕಶಿರ ತಾಳವಾಡಿ, ನೀಲಗಿರಿ ಇತ್ಯಾದಿ ಪ್ರದೇಶಗಳ ಜನರು ಇಷ್ಟಪಟ್ಟರೆ ಹೊಸ ರಾಜ್ಯದಲ್ಲಿರಲು ಅಭ್ಯಂತರವಿಲ್ಲ ಎನ್ನುತ್ತದೆ. ನಮ್ಮೊಡನೆ ಸೇರಬಯಸುವವರನ್ನು ಸೇರಿಸಿಕೊಳ್ಳೋಣ ಎಂಬ ತತ್ವವನ್ನೆ ನಾನಿಲ್ಲಿ ಪ್ರತಿಪಾದಿಸಿದ್ದೇನೆ."

ಮೈಸೂರಿನ ನೈತಿಕ ಕರ್ತವ್ಯ

ಮುಂದರಿದು ಅವರು ಮೈಸೂರು ಎಂಬ ಹೆಸರನ್ನುಳಿಸಿಕೊಳ್ಳುವ ಕಾರಣವನ್ನು ಹೀಗೆ ವಿವರಿಸಿದರು—"ನಾನು ಉದ್ದೇಶಪೂರ್ವಕವಾಗಿ ಫಜಲಲಿ ಆಯೋಗದವರು ಬಳಸಿದ ಕರ್ನಾಟಕ ಎಂಬ ಶಬ್ದವನ್ನು ಉಪಯೋಗಿಸದೆ ಬಿಟ್ಟಿದ್ದೇನೆ. ಮೈಸೂರು ರಾಜ್ಯ ಎಂಬುದು ಕೇವಲ ಹೆಸರನ್ನಷ್ಟೇ ಬಿಂಬಿಸುವುದಿಲ್ಲ; ಆ ಹೆಸರಿನಲ್ಲಿ ಒಂದು ಪರಂಪರೆ ಇದೆ, ಘನತೆಯಿದೆ, ಸೊಬಗಿದೆ. ನಾವು ಪೂರ್ಣ ಭಾಷಾನುಗುಣ ರಾಜ್ಯ ರಚನೆಯ ತತ್ವವನ್ನೂ ಒಪ್ಪಿಲ್ಲ. ಹೀಗೆ ಹೇಳುವ ನಾನು ಕೆಲವು ಭಾಗದಲ್ಲಿ ಜನಾನುರಾಗ ಕಳೆದುಕೊಳ್ಳುವೆನೆಂದು ಗೊತ್ತು. ಆದರೆ ಜನಾನುರಾಗಕ್ಕಿಂತ ರಾಷ್ಟ್ರದ ಹಿತ ದೊಡ್ಡದು. ಭಾಷೆಯೊಂದರ ಆಧಾರದ ಮೇಲೆಯೇ ರಾಜ್ಯವನ್ನು ಕಟ್ಟುವುದು ಸಾಧುವಲ್ಲ. ನಾನು ಮೊದಲೇ ಮೈಸೂರಿನ ಸಮ್ಮಿಶ್ರ ಸ್ವರೂಪವನ್ನು ಚಾರಿತ್ರಿಕ ದೃಷ್ಟಿಯಿಂದ ವರ್ಣಿಸಿದ್ದೇನೆ. ಮೈಸೂರು ಕೇವಲ ಕನ್ನಡಿಗರದಲ್ಲ, ತೆಲುಗರದಲ್ಲ, ತಮಿಳರದಲ್ಲ, ಹಿಂದಿ ಅಥವಾ ಉರ್ದು ಮಾತನಾಡುವವರದೂ ಅಷ್ಟೇ. ಇಲ್ಲಿ ನಾವೆಲ್ಲರೂ ಭ್ರಾತೃತ್ವವಾತ್ಸಲ್ಯದಿಂದ ಬಾಳಿದ್ದೇವೆ; ಭಾಷೆಯ ಪ್ರಶ್ನೆ ಇಲ್ಲಿ ಬಂದಿಲ್ಲ. ಅಂತಿರುವಾಗ ಕರ್ನಾಟಕ ಎಂದು ಹೊಸ ರಾಜ್ಯವನ್ನು ಕರೆದರೆ ಕೆಲವರಿಗೆ ಮಾನಸಿಕ ತೃಪ್ತಿ ಉಂಟಾಗಬಹುದು; ಆದರೆ ಉಳಿದವರ ತವಕ್ಕೆ ಈ ರಾಜ್ಯದಲ್ಲಿ ಸ್ಥಳವಿಲ್ಲ ಎಂದು ಭಾವಿಸಬಹುದು. ಮೈಸೂರು ರಾಜ್ಯ ಎಂಬ ಹೆಸರನ್ನು ಮೈಸೂರಿನೊಳಗಿನ ಕೆಲವರ ಸಂತೋಷಕ್ಕೆ ಇರಿಸಿಕೊಳ್ಳುತ್ತಿದ್ದೇನೆಂದಷ್ಟೆ ಭಾವಿಸಲಾಗದು. ಆ ಹೆಸರು ನಾವು ನಡೆಯ ಬೇಕಾದ ಮಾರ್ಗವನ್ನು ಹಾಕಿಕೊಳ್ಳಬೇಕಾದ ಸಂಪ್ರದಾಯವನ್ನು ಸೂಚಿಸುತ್ತಿದೆ. ಆದುದರಿಂದ ಇಷ್ಟರ ವರೆಗೆ ಕರ್ನಾಟಕ ಮಾತಿಗೆ ಜಯವಾಗಲಿ ಎಂದು ಹೇಳುತ್ತಿದ್ದವರು ಇನ್ನು ಮುಂದೆ ಆ ಘೋಷಣೆ ನಾಡಾ ಬಾರದೆಂದು ಪ್ರಾರ್ಥಿಸುತ್ತೇನೆ. ಕರ್ನಾಟಕ ಏಕೀಕರಣದ ಹೋರಾಟ ಕಾಲದಲ್ಲಿ ಉಪಯುಕ್ತವಾಗಿದ್ದ ಆ ಘೋಷಣೆಯನ್ನು ಯುದ್ಧಕಾಲದ ಘೋಷಣೆಯನ್ನು ಶಾಂತಿ ಕಾಲದಲ್ಲಿ ತ್ಯಜಿಸುವಂತೆ ಈಗ ಬಿಟ್ಟು ಬಿಡೋಣ!"

ರಾಜ ಪ್ರಮುಖ ಹುದ್ದೆ ಬೇಡ

ಮುಖ್ಯ ಮಂತ್ರಿಗಳು ಇದೇ ಸಂದರ್ಭದಲ್ಲಿ ರಾಜಪ್ರಮುಖರ ಹುದ್ದೆಯ ಕುರಿತಾಗಿಯೂ ಕೆಲವು ಮಾತುಗಳನ್ನಾಡಿದರು—"ರಾಜಕೀಯದಲ್ಲಿರುವ ನಮಗೆಲ್ಲ ರಾಜ್ಯಾಂಗ ಘಟನೆಯು ಪವಿತ್ರವಾಗಿದೆ. ಭಾರತವನ್ನು ಸ್ವತಂತ್ರ ಸೌರ್ವ ಭೌಮ ಪ್ರಜಾ ಸತ್ತಾತ್ಮಕ ಗಣ ರಾಜ್ಯವಾಗಿ ಘೋಷಿಸಲಾಗಿದೆಯೆಂದೂ ಎಲ್ಲ ನಾಗರಿಕರೂ ಸಾಮಾಜಿಕ, ಆರ್ಥಿಕ ಹಾಗು ರಾಜಕೀಯ ನ್ಯಾಯ ದೊರಕಿಸಿಕೊಡಬೇಕೆಂದೂ ಹೇಳುವ ಸಂವಿಧಾನದ ಭಾಗವನ್ನು ಜ್ಞಾಪಕದಲ್ಲಿಟ್ಟುಕೊಂಡರೆ ಪ್ರಜಾಸತ್ತಾತ್ಮಕ—ಗಣರಾಜ್ಯದಲ್ಲಿ ರಾಜರಿಗೆ ಅವಕಾಶವಿಲ್ಲವೆಂದು ಮನದಟ್ಟಾಗುತ್ತದೆ. ಸ್ಥಾನಮಾನ, ಐಶ್ವರ್ಯ ಈ ದೃಷ್ಟಿಗಳಿಂದ ನಾಗರಿಕರಲ್ಲಿ ಅಜಗಜಾಂತರವಿರುವುದು ಸಲ್ಲದೆಂದು ಹೇಳಿದ ಬಳಿಕ ರಾಜ ಪ್ರಮುಖ ರ ಹುದ್ದೆಯನ್ನು ರದ್ದುಗೊಳಿಸುವುದೇ ಘಟನೆಗೆ ಅನುಗುಣವೆನಿಸುತ್ತದೆ. ರಾಜ ಪ್ರಮುಖರ ಉಲ್ಲೇಖವು ಇದೇ ಘಟನೆಯಲ್ಲಿ ದೆಯಲ್ಲವೇ ಎಂದು ಕೇಳುವವರಿಂದಬಹುದು. ನಾನು ಕೊಡುವ ಸಮಾಧಾನವಿದು: ಘಟನೆಯ ನಿರ್ದೇಶಕ ತತ್ವಗಳನ್ನು ಕಾರ್ಯಗತಗೊಳಿಸಲು ಕಾಲಾವಕಾಶ ಬೇಕಾಗುತ್ತದೆ ಘಟನೆಯನ್ನು ರೂಪಿಸುವಲ್ಲಿ ಬಹು ಮುಖ್ಯ ಹೊಣೆಗಾರಿಕೆಯನ್ನು ಹೊತ್ತ ಕಾಂಗ್ರೆಸು ಕಾಲಕಾಲಕ್ಕೆ ನಿರ್ಣಯಗಳನ್ನು ಕೈಗೊಂತು ಪ್ರಜಾಸತ್ತಾತ್ಮಕ ಗಣರಾಜ್ಯ ಎಂಬುದನ್ನು ಸಂಪೂರ್ಣವಾಗಿ ಸ್ಥಾಪಿಸುವತ್ತ ಪ್ರಜ್ಞೆಯಿಡುತ್ತಿದೆ. ಅವಡಿಯ ಅಧಿವೇಶನದಲ್ಲಿ ಕಾಂಗ್ರೆಸು ಸಮಾಜವಾದಿ ನಮೂದಿಸು ಸಮಾಜ ರಚನೆಯೊಗ ಬೇಕೆಂದು ಹೇಳಿದೆ. ಈಗ ಭಾರತದಲ್ಲಿ ರಾಜಮಹಾರಾಜರ ಅಥವಾ ರಾಜಸ್ಥ ಮುಖ್ಯ ಸ್ಥಾನ ರದ್ದಾಗಬೇಕೆಂಬ ಸಲಹೆ ಏನಿದೆಯೋ ಅದು ರಾಜ್ಯಾಂಗಕ್ಕೂ ನಮ್ಮುದ್ದೇಶಕ್ಕೂ ಸಮ್ಮತವಾಗಿದೆ ಎಂದು ಹೇಳಲು ಇಚ್ಛಿಸುತ್ತೇನೆ."

ವೀರಣ್ಣ ಗೌಡರ ಎಚ್ಚರಿಕೆ

ಒಮ್ಮೆ ಮುಂದರಿದು ಪುನಃ ಸೇರಿದ್ದ ಈ ಸಲದ ಅಧಿವೇಶನದಲ್ಲಿ ಶ್ರೀ ವೀರಣ್ಣ ಗೌಡರು ಎರಡು ಕರ್ನಾಟಕಗಳ ರಚನೆಯೇ ಯೋಗ್ಯವಾದುದೆಂದು ಬಲವಾಗಿ ಪ್ರತಿಪಾದಿಸಿದರಲ್ಲದೆ, ಕರ್ನಾಟಕ ಏಕೀಕರಣವಾದ ದಿನವೇ ಎರಡು ಪ್ರತ್ಯೇಕ ರಾಜ್ಯಗಳ ರಚನೆಗೆ ಹೋರಾಟ ನಡೆದೇ ನಡೆಯುತ್ತದೆ ಎಂದು ಸಾರಿದರು. ಇಂಥ ಭಾರತದಲ್ಲಿ ಜನಾಭಿಪ್ರಾಯಕ್ಕನುಗುಣವಾಗಿ ಆಡಳಿತ ನಡೆಯಬೇಕೆಂದಿರುವಾಗ ಪರಕಾರವನ್ನು ನಡೆಯುತ್ತಿರುವ ಸಂಸ್ಥೆಯ ವರಿಷ್ಠರು ಸದಸ್ಯರಿಗೆ ಹೀಗೆಯೇ ನಡೆದುಕೊಳ್ಳಬೇಕು ಎಂದುಪದೇಶವಿತ್ತು ಸಭೆಯ ಕಾರ್ಯವನ್ನು ಮುಕ್ತಾಯಗೊಳಿಸಿದರು.

ದಿ ಜುಪಿಟರ್ ಜನರಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬಾಯಿ 1.

ಒಟ್ಟು ನಿಧಿ ರೂಪಾಯಿ 3 ಕೋಟಿ 50 ಲಕ್ಷಕ್ಕೆ ಮಿಕ್ಕಿ ಇದೆ.

ಪೋಲಿಸಿದಾರರಿಗೆ ಆಗಾಗ್ಗೆ ಸಲಹೆಯನ್ನಿತ್ತು ಸಹಕರಿಸುವುದೇ ನಮ್ಮ ಧ್ಯೇಯ.

ಹಿಂದೂಸ್ಥಾನದ ಎಲ್ಲಾ ಕಡೆಗಳಲ್ಲೂ, ಪಾಕಿಸ್ತಾನ, ಬರ್ಮಾ, ಸಿಲೋನ್, ಬ್ರಿಟಿಷ್ ಆಫ್ರಿಕಾ, ಲಂಡನ್ ಇತ್ಯಾದಿ ಕಡೆಗಳಲ್ಲಿ ಶಾಖಾ ಆಫೀಸುಗಳೂ ವಿಜನ್ಸಿ ಆಫೀಸುಗಳೂ ಇವೆ.

ಪ್ರತಿನಿಧ್ಯಕ್ಕೆ ಮತ್ತಿತರ ವಿವರಗಳಿಗೆ ಈ ಕೆಳಗಿನವರಿಗೆ ಬರೆಯಿರಿ:

ಯಸ್. ಎ. ಹೆಗ್ಡೆ,

ಸುಪರಿಂಟೆಂಡೆಂಟ್, ಆಫ್ ಏಜನ್ಸೀಸ್,

ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಫೋರ್ಟ್ ಶೆರ್ನ, ಪ. ಕ

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ಪ. ಭಾರತ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಕಟಣೆ

ದಿನಾಂಕ 2—12—1955ರಲ್ಲು, ಬ್ಯಾಂಕಿನ ಹೊಸ ಶಾಖೆಯೊಂದು ಮಧುರೆಯ ಈಸ್ಟ್ ಅವನಿಮೂಲಾ ರಸ್ತೆಯಲ್ಲಿರುವ ಸಂಖ್ಯೆ 40ನೆ ಕಟ್ಟಡದಲ್ಲಿ ತೆರೆಯಲ್ಪಟ್ಟು, ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳನ್ನು ನಡೆಸಲಾರಂಭಿಸಿದೆ.

THE CANARA BANKING CORPORATION LIMITED

Estd:- 1906] [H. O. UDIPI (S.India).

ಬಲವಂತದಿಂದ ಕೆಲಸ ಮಾಡಬೇಕೆ ? ಎಂದು ಅವರು ಪ್ರಶ್ನಿಸಿದರು. ಮೈಸೂರಿನವರು ದಾವಣಗೆರೆ ಪರಿಷತ್ತಿನಲ್ಲಿ ಏಕೀಕರಣಕ್ಕೆ ಒಪ್ಪಿದ್ದರೆ, ಆದಕ್ಕೆ ಹೊರಗಿನವರ ಸಹಾಯವಿಲ್ಲದಿದ್ದರೆ ಮೈಸೂರಿನಿಳಗೆ ದಿನಾವರ ನಡೆಸುತ್ತಿದ್ದ ಸರ್ವಾಧಿಕಾರಿತ್ವವನ್ನು ಎದುರಿಸಿ ಸ್ವಾತಂತ್ರ್ಯ ಗಳಿಸಲು ಸಾಧ್ಯವಾಗಿದೆ ಹೋದೀತೆಂಬ ಸಂಶಯವೇ ಕಾರಣ ಎಂದು ಹೇಳಿದರು. ಬೀರೂರಿನ ಅಧಿವೇಶನದಲ್ಲಿ ಏಕೀಕರಣ ಬೇಕು—ಬೇಡ ಎನ್ನುವವರು ಸರಿ ಸಂಖ್ಯೆಯಲ್ಲಿದ್ದರೆಂದು ಅವರು ನೆನಪಿಗೆ ತಂದು ಕೊಟ್ಟರು. ಉತ್ತರ ಕರ್ನಾಟಕವು ಸಂಪತ್ತಿನಲ್ಲಿ ಕಡಿಮೆಯಿಲ್ಲ. ಅಲ್ಲಿಯವರ ಆದಾಯ ಮೈಸೂರಿಗರಿಗಿಂತ ಹೆಚ್ಚಾಗಿದೆ ಪ್ರಜಾ ಸಂಖ್ಯೆಯೂ ವಿಸ್ತೀರ್ಣವೂ ಮೈಸೂರಿನಷ್ಟೇ ಇದೆ ಎಂಬೆಲ್ಲ ಒಪ್ಪಿಕೊಂಡರೆ ಪೂರ್ವ—ಪಶ್ಚಿಮಕ್ಕೆ ಗೆರೆಯೊಂದನ್ನೆಳೆದ ಮಾತ್ರಕ್ಕೆ ಭಿನ್ನರಿಯಾದ ಅಚ್ಚುಕಟ್ಟಿನ ಪ್ರದೇಶವಾಗಿ ಆ ರಾಜ್ಯ ನಿರ್ಮಾಣಗೊಳ್ಳಬಲ್ಲುದು. ಆದುದರಿಂದ "ನೀವು ಬರುವುದು ಬೇಡ" ಎಂದು ಮೈಸೂರಿನವರು ಹೇಳುತ್ತಿರುವಾಗ "ನಾವು ಬರುವುದಿಲ್ಲ" ಎಂದು ಹೇಳಿರೆಂದು ಉತ್ತರ ಕರ್ನಾಟಕದವರನ್ನು ವಿನಂತಿಸುತ್ತೇನೆ —ಎಂದರು. ರಾಜ್ಯ ದೊಡ್ಡದಾದರೆ ಆತಳಿತ ಸೌಕರ್ಯ ಹೆಚ್ಚಿರುತ್ತದೆ ಎನ್ನುವುದಕ್ಕೆ ಆಧಾರವಿಲ್ಲ; ಮೈಸೂರು ರಾಜ್ಯವು ಒಂದು ಕೋಟಿ ಪ್ರಜೆಗಳ ಬಲದಿಂದಲೇ ಬಂದರ ನುಂತಾನ ಸೌಕರ್ಯಗಳಿಲ್ಲದೆ ಮಾದರಿ ಸಂಸ್ಥಾನವೆಂದು ಹೆಸರು ಪಡೆದಿದೆ; ನಿಜ ಹೇಳಬೇಕೆಂದರೆ ಕೊಳ್ಳೆಗಾಲದಿಂದ ಬೆಳಗಾಂವಿ ನರೆಗಿನ ೫೦೦ ಮೈಲು ವಿಸ್ತೀರ್ಣದ ಹೊಸ ರಾಜ್ಯವಾಗುವುದಾದ ಪಕ್ಷದಲ್ಲಿ ಆಡಳಿತ ಸಡಿಲವಾಗುತ್ತದೆ ಎಂದರು. "ಆ ದೇಶ ಕಳುಹಿಸಿ, ಬಾಯಿ ಕಟ್ಟಿಸಿ, ಹೆದರಿಸಿ, ಬೆದರಿಸಿ, ಶಿಸ್ತಿನ ಕ್ರಮ ತೋರಿಸಿ, ಸುಮ್ಮನಿರಿಸಿ ಕಾಂಗ್ರೆಸಿನ ವರಿಷ್ಠರು ಕೈಚಪ್ಪಾಳೆ ಹೊಡಿಸಿಕೊಂಡಿದ್ದಾರೆ; ಹೀಗೆ ಬಲವಂತದ ಮಾಳಿಸ್ಥಾನ ಮಾಡಿಸಿದರೆ ಮೈಸೂರಮ್ಮನಿಗೆ ದ್ರೋಹ ಮಾಡಿದಂತಾಗುತ್ತದೆ. ಈ ತಾಯಿಯ ಕೊಲೆ ಬೇಡ" ಎಂದವರು ತಮ್ಮ ಭಾಷಣದ ಕೊನೆಯಲ್ಲಿ ಹೇಳಿದರು.

ಮತದಾನದ ವಿವರ

ಆದಾಗ್ಯೂ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರಲ್ಲಿ ಏಕೀಕರಣ ವಾದಿಗಳ ಸಂಖ್ಯೆಯೇ ಹೆಚ್ಚಾಗಿದ್ದಿತು. ಶಾಸನಾಂಗದ ಕೆಳಮನೆಯಲ್ಲಿ ಇಳ ಮಂದಿ ಮುಖ್ಯಮಂತ್ರಿಗಳನ್ನು ಬೆಂಬಲಿಸಿಯೂ ೧೬ ಮಂದಿ ಏಕೀಕರಣವನ್ನು ವಿರೋಧಿಸಿಯೂ ಭಾಷಣಮಿತ್ತರು. ಉಲ್ಲದೆ ಮೂವರು ಸದಸ್ಯರು ಮೈಸೂರಿನ ತೆಲುಗು ಪ್ರದೇಶಗಳು ಅಂದರೆ ಕೋಲಾರ ಜಿಲ್ಲೆಯ ಬಹ್ವಂಶ; ಚಿತ್ರದುರ್ಗಜಿಲ್ಲೆಯ ಮೂಳಕಾಲ್ಮೂರು, ಹಿರಿಯೂರು ಚಳ್ಳಕೆರೆ ಮತ್ತು ಜಗಳೂರು ತಾಲೂಕುಗಳು ಹಾಗು ಆ ಜಿಲ್ಲೆಯ ಪೂರ್ವಭಾಗ; ತುಮಕೂರು ಜಿಲ್ಲೆಯ ಪಾವಗಡ ತಾಲೂಕು ಮತ್ತು ಕೊಂಟಗೆರೆ ಹಾಗು ಮಧ್ಯಗಿರಿ ತಾಲೂಕುಗಳ ಕೆಲಭಾಗ; ಬೆಂಗಳೂರು ನಗರಶಾಭಾವಲಯ; ಬೆಂಗಳೂರು ಜಿಲ್ಲೆಯ ಆನೇಕಲ್ಲು, ದೊಡ್ಡಬಳ್ಳಾಪುರ, ದೇವನಹಳ್ಳಿ, ಹೊಸಕೋಟೆ, ಬೆಂಗಳೂರು ಉತ್ತರ ಮತ್ತು

(ಉಸೇ ಪುಟಗಳನೇ ಕಲಂ. ನೋಡಿರಿ)

ಹಿಂದು ವಾರೀಸು ವಿಧೇಯಕ

ರಾಜ್ಯಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯ

ರಾಜ್ಯಸಭೆಯಲ್ಲಿ ಕಳೆದ ತಿಗನೇ ದಿನಾಂಕದಿಂದ ಹಿಂದು ವಾರೀಸು ವಿಧೇಯಕದ ಮೇಲೆ ಚರ್ಚೆ ನಡೆಯು ತೊಡಗಿ ಇಂನೇ ದಿನಾಂಕ ಸರ್ವಾನುಮತದಿಂದಿಂದು ಬಂತೆ, ತಿದ್ದುಪಡಿ ಹೊಂದಿದ ಳ್ವರೂಪದಲ್ಲಿ, ವಿಧೇಯಕಕ್ಕೆ ಅಂಗೀಕಾರ ಮುದ್ರೆ ಬಿದ್ದಿತು. ಯಾವುದೋ ಒಂದು ಮೂಲೆಯಿಂದೊಬ್ಬರು ಊಹೂಂ ಎಂದರಂತೆ; ಅದು ಕೇಳಿಸಿದ್ದೇ ದೊಡ್ಡದು!

ಜಾರಜರ ಅಧಿಕಾರ

ಪರಿಶೀಲಕ ಸಮಿತಿಯು ವಿಧೇಯಕ ಕೆಲವುಕ್ರಾಂತಿಕಾರಿಯಾದ ಬದಲಾವಣೆಗಳನ್ನು ಮಾಡಿದ್ದಿತು. ಅನೇಕ ಸದಸ್ಯರು ಇವುಗಳ ಯೋಗ್ಯತೆಯನ್ನು ಪ್ರಶ್ನಿಸಿದರು. ಆದರೆ ಹಿಂದು ಸಮಾಜದ ಸುಧಾರಣೆಗೆಂದಷ್ಟೇಯಲ್ಲ, ಭಾರತದ ಪೌರತನದಲ್ಲಿ ಸಮಾನ ಸ್ವರೂಪವನ್ನು ಸಾಧಿಸುವುದಕ್ಕಾಗಿಯೂ ವಿವಾಹ ಮತ್ತು ಉತ್ತರಾಧಿಕಾರದ ಸಂಬಂಧದಲ್ಲಿ ಸಾಮಾನ್ಯ ಶಾಸನಗಳು ಜಾರಿಗೆ ಬರಬೇಕಾದ ಅಗತ್ಯವನ್ನು ಹೆಚ್ಚಿನವರು ಒಪ್ಪಿದರು.

ಕಟ್ಟಾವಾದ ಟೀಕೆಗೆ ಗುರಿಯಾದ ವಿಧೇಯಕದ ಅಂಶಗಳಲ್ಲಿ ಅನೌರಸ ಸಂತಾನಕ್ಕೆ ಔರಸ ಸಂತಾನದಷ್ಟೆ ಸ್ಥಾನಮಾನವನ್ನು ಉತ್ತರಾಧಿಕಾರದ ಸಂಬಂಧದಲ್ಲಿ ಕೊಡುವ ಸೂತ್ರ ಉಲ್ಲೇಖನೀಯ. ಮೂಲ ಮಸೂದೆಯಲ್ಲಿ ಹೀಗೆ ಹೇಳಿರಲಿಲ್ಲ; ಪರಿಶೀಲಕ ಸಮಿತಿ ಈ ಕಲಮನ್ನು ಸೇರಿಸಿತು. ಇದನ್ನು ವಿರೋಧಿಸಿದವರು ಈ ಕಾರಣಗಳನ್ನು ಮುಂದಿಟ್ಟರು—(೧) ಅನೌರಸ ಸಂತಾನಕ್ಕೆ ಸಹ ಶಾಸನಬದ ಉತ್ತರಾಧಿಕಾರಿತ್ವ ಪ್ರಾಪ್ತಿಯಾದ ಪಕ್ಷದಲ್ಲಿ, ಎಷ್ಟೋ ಹೆಂಗಸರು ವೃತ ವ್ಯಕ್ತಿ ಯೊಬ್ಬನಿಗೆಹುಟ್ಟಿದ ಮಗುವೆಂಬ ಕಾರಣ ಮುಂದಿಟ್ಟು, ತನ್ನ ಮಗುವಿಗೆ ಆತನ ಆಸ್ತಿಯಲ್ಲಿ ಪಾಲುಕೇಳಬಹುದು; (೨) ಹೆಂಗಸು—ಗಂಡಸಿನ ಸಂಬಂಧದಲ್ಲಿ ನೀತಿ ಮತ್ತು ಸಾಮಾಜಿಕ ರೂಢಿಯ ಬಂಧನಗಳಿಲ್ಲದೆ, ಮದುವೆಯ ಪಾವಿತ್ರ್ಯವೇ ನಷ್ಟವಾಗಬಹುದು, (೩) ಸರಕಾರವು ಏಕಪತ್ನಿತ್ವ-ಏಕ ಪತಿತ್ವ ಶಾಸನವನ್ನು ಜಾರಿಗೆ ತರಲಿಯವಾಗಿ ಅದಕ್ಕೆ ವ್ಯತಿರಿಕ್ತವಾಗುವಂತೆ ನಡೆಯಕೂಡದು.

ಮಂತ್ರಿಗಳ ಉತ್ತರ

ಉಪರೋಕ್ತ ಕಲಮಿನ ಸಮರ್ಥನೆ ಮಾಡಿದವರು ಹೀಗೆ ಅಭಿಪ್ರಾಯಪಟ್ಟರು—(೧) ಉಪಪತ್ನಿಯ ವ.ಕ್ಕಳಿಗೂ ಸಮಾನ ಪಾಲು ಕೊಡಬೇಕಾಗುವುದೆಂಬ ಹೆದರಿಕೆಯಿಂದಾದರೂ ಹೆಂಗಸಿನೊಡನೆ ಮದುವೆಯಾಗದೆ ಅನೈತಿಕ ಸಂಬಂಧ ನಿರಿಸುವವರು ಕಡಿಮೆಯಾಗಬಹುದು; (೨) ಈಗಾಗಲೇ ಹಿಂದು ಶಾಸನದಂತೆ ಅನೌರಸ ಮಕ್ಕಳಿಗೆ ಕೆಲವುಶರ್ತಗಳಿಗೊಳಪಟ್ಟು ಆಶನಾರ್ಥ ಸಿಗುತ್ತಿರುವುದರಿಂದ, ಅದನ್ನು ಆಸ್ತಿಯಲ್ಲಿ ಪಾಲೆಂದು ತಿದ್ದುವುದು ಅನ್ಯಾಯ ವೆನಿಸದು; (೩) ಜಾರಜಾತರು (ಅನೌರಸ ಸಂತಾನ) ತಮ್ಮ ಹುಟ್ಟಿಗೆ ಹೊಣೆಗಾರರಾಗಿಲ್ಲ. ಹೆತ್ತವರ ಸಂಬಂಧ ಅನೈತಿಕವಾಗಿದೆ ಎಂದ ಮಾತ್ರಕ್ಕೆ ಈ ಮಕ್ಕಳಿಗೆ ಯೋಗ್ಯ ಜೀವನವನ್ನು ನಡೆಸುವ ಅವಕಾಶ ವಿಲ್ಲದಂತೆ ಮಾಡಲಾಗದು; (೪) ಇಂಥ ಸನೊಬ್ಬನ ಅನೌರಸ ಸಂತಾನವೆಂದು ಸಿದ್ಧವಾದರೆ ಮಾತ್ರ ಪಾಲು ಸಿಗುವುದೆಂದು ಕಲಮನ್ನು ಬಿಗಿಪಡಿಸಿದ ಪಕ್ಷದಲ್ಲಿ ಆಸ್ತಿಯ ಮೇಲಿನ ಆಕೆಯಿಂದ ತನ್ನ ಮಕ್ಕಳನ್ನು ಆಸ್ತಿಯನ್ನು ಬಿಟ್ಟು ಹೋದ ವೃತನೊಬ್ಬನ ಜಾರಜಾತ ಸಂತಾನವೆಂದು ಯಾರೊಬ್ಬರೂ ಸಾರಲು ಎಡೆಯಿರುವುದಿಲ್ಲ.

ಮಂತ್ರಿಗಳ ಮೇಲೆ ಈ ಕಲಮನ್ನು ತೆಗೆದು ಹಾಕಬೇಕೆನ್ನುವವರ ಒತ್ತಾಯವೇ ಅಧಿಕವಾಯಿತು. ಜಾರಜಾತರಿಗೂ ಯೋಗ್ಯ ಜೀವನ ನಡೆಸಿಗೊಡಬೇಕೆಂಬ ಫನವಾದ ಉದ್ದೇಶವನ್ನು ಎಲ್ಲರೂ ಮೆಚ್ಚಿಕೊಂಡರು; ಆದರೆ ಉತ್ತರಾಧಿಕಾರಿತ್ವವನ್ನು ನೀಡುವಷ್ಟು ಮುಂದೆ ಹೋಗಬಾರದೆಂದು ಅವರು ಹೇಳಿದರು. ಮಂತ್ರಿಗಳು ಇದನ್ನೂ ಪ್ಪಿದರು. ಏಕಪತ್ನಿ—ಏಕಪತಿ ತತ್ವಕ್ಕೆ ಅಸಂಗತವಾದ ಈ ಕಲಮನ್ನು ತೆಗೆದು ಜಾರಿ "ಪೆಗಿಟಿಮೇಸಿ ಆಕ್ಟ್ ಆಫ್ ಇಂಗ್ಲೆಂಡ್" ಸಾದರಿಯ ಹೊಸ ಶಾಸನವನ್ನು ತಂದು ಎಲ್ಲ ಅನೌರಸ ಸಂತಾನಕ್ಕೂ ಕಳಂಕರಹಿತ ಜೀವನ ನಡೆಸಲಾಗುವಂತೆ ನೋಡುವ ಭರವಸೆಯನ್ನೂ ಅವರು ಈ ಸಂದರ್ಭದಲ್ಲಿ ಕೊಟ್ಟರು. ಇದೊಂದು ಉಭಯ ಸಂಕಟವೆಂದು ಅವರು ಹೇಳಿದರು. ಮಂತ್ರಿಗಳು ಇದನ್ನೂ ಪ್ಪಿದರು. ಏಕಪತ್ನಿ—ಏಕಪತಿ ತತ್ವಕ್ಕೆ ಅಸಂಗತವಾದ ಈ ಕಲಮನ್ನು ತೆಗೆದು ಜಾರಿ "ಪೆಗಿಟಿಮೇಸಿ ಆಕ್ಟ್ ಆಫ್ ಇಂಗ್ಲೆಂಡ್" ಸಾದರಿಯ ಹೊಸ ಶಾಸನವನ್ನು ತಂದು ಎಲ್ಲ ಅನೌರಸ ಸಂತಾನಕ್ಕೂ ಕಳಂಕರಹಿತ ಜೀವನ ನಡೆಸಲಾಗುವಂತೆ ನೋಡುವ ಭರವಸೆಯನ್ನೂ ಅವರು ಈ ಸಂದರ್ಭದಲ್ಲಿ ಕೊಟ್ಟರು. ಇದೊಂದು ಉಭಯ ಸಂಕಟವೆಂದು ಅವರು ಹೇಳಿದರು. ಮಂತ್ರಿಗಳು ಇದನ್ನೂ ಪ್ಪಿದರು.

ಮಗಳಿಗೆ ಪಾಲು

ಮಗಳಿಗೆ ಗಂಡು ಮಗನಷ್ಟೆ ಪಾಲನ್ನು ಕೊಡುವ ಕಲಮು ಸಹ ತೀವ್ರ ಸಂಯಮಕ್ಕೆ ಒಳಗಾಯಿತು. ಇದನ್ನು ಸಮರ್ಥಿಸಿದವರು ಸಾಮಾಜಿಕ ನ್ಯಾಯವಾನವನ್ನೂ ಆರ್ಥಿಕ ಸಮಾನತೆಯನ್ನೂ ಮುಖ್ಯವೆಂಬರಿಗೆ ಈಗಲಾದರೂ ನೀಡುವುದು ಉಚಿತವಾನದಿಂದ ಅವರ ಕಾಲು ನಡೆಸುತ್ತಾ ಬಂದ ಅನ್ಯಾಯವನ್ನ ಪರಿಮಾರ್ಜನೆ ಎಂದರು. ವಿರೋಧಿಸಿದವರು ಹೆಂಗಸಿಗೆ ಗಂಡನ ಆಸ್ತಿಯಲ್ಲೂ ಪಾಲು ಕೊಡುವುದರಿಂದ ಗಂಡುಮಕ್ಕಳನ್ನು ಹೀನಪರಿಸ್ಥಿತಿಗೆ ದೂಡಿದಂತಾಗುವುದೆಂದು ವಾದಿಸಿದರು. ಆದುದರಿಂದ ಮೂಲ ಮಸೂದೆಯಲ್ಲಿ ಹೇಳಿದಂತೆ ಮಗನ ಅನಿವಾಸಿಯಾಸ್ತು ಪಾಲಿಗಷ್ಟೇ ಮಗಳು ಹಕ್ಕುದಾರಳೆಂದು ವಿಧಿಸಿದರೆ ಅದೇ ದೊಡ್ಡ ಸುಧಾರಣೆ ಮತ್ತು ನ್ಯಾಯವಾನದ ಕ್ರಮವಾದೀತು ಎಂದು ಹೇಳಿದರು. ಮಂತ್ರಿಗಳು ಉತ್ತರವೀಯುತ್ತಾ ಪಾಲು ಕೊಡುವುದೇ ಆದರೆ, ಮಗನೊಡನೆ ಸಮಾನ ಪಾಲಿಗೆ ಮಗಳನ್ನು ಅಧಿಕಾರಿಯಾಗಿ ಮಾಡುವುದೇ ಸೂಕ್ತ ಎಂದು ಸಮರ್ಥಿಸಿಕೊಂಡರು.

ತಂದೆಯ ಮರಣಾನಂತರವುಗಳ ಪಾಲನ್ನು ನಿಷ್ಕರ್ಷಿಸುವಾಗ ಈ ನೊದಲೇ ಪಾಲಾಗಿ ಹೋಗಿರುವ ಮಗನ ಆಸ್ತಿಯ ಅಂಶವನ್ನು ಲೆಕ್ಕಕ್ಕೆ ಹಿಡಿಯಬಾರದೆಂದು ಬಹಳ ದೀರ್ಘವಾದ ಬರೆಸಿನ ಜರ್ಜೆಯ ಬಳಿಕ ಸಭೆಯು ತೀರ್ಮಾನಿಸಿತು. ಅವಿಭಕ್ತ ಗಂಡುಮಕ್ಕಳನ್ನು ತಂದೆಯಿಂದ

(ಉಸೇ ಪುಟ ೧೫ನೇ ಕಾಲಂ ನೋಡಿರಿ)

'ಪೊಪ್ಯುಲರ್'ನ

ಅಭಿಮಾನಯುಕ್ತ ಘೋಷಣೆ

1954ನೇ ದಶಂಬರ **31**ಕ್ಕೆ
ಕೊನೆಗೊಳ್ಳುವ ತ್ರೈವಾರ್ಷಿಕ
ಅರವೆ ಮೌಲ್ಯ ನಿರ್ಧಾರದಲ್ಲಿ

ರೂ. 2,13,862 ಮಿಗಿತೆಯಾಗಿ ನಿರ್ಣಯಿಸಲಾಗಿದೆ.

ಅಲ್ಲದೆ

ಲಾಭಸಹಿತವಾದ ಜೀವನಾವಧಿ ವಿಮಾ ಪಾಲಿಸಿಗಳ ಮೇಲೆ ರೂ. **1001**/-ಕ್ಕೆ ವರ್ಷ ಒಂದರ ರೂ. **14**/-ರಂತೆಯೂ ಲಾಭ ಸಹಿತವಾದ ಅವಧಿ ವಿಮಾ ಪಾಲಿಸಿಗಳ ಮೇಲೆ ರೂ. **1000**/- ಕ್ಕೆ ವರ್ಷ ಒಂದರ ರೂ. **12**/-ರಂತೆಯೂ ಹಿಂದಿನಿಂದ ಕೂಡಿ ಕೊಳ್ಳುವ ಬೋನಸ್ಸು ಕೊಡಬಹುದು ಎಂದು ಆ್ಯಕ್ಚುರಿಯವರು ಶಿಫಾರಸು ಮಾಡಿದ್ದಾರೆ.

ಈ ಮೇಲಿನ ದರಗಳಲ್ಲಿಯೇ ಬೋನಸ್ಸು ಕೊಡಬಹುದಾಗಿ **ದೈರೆಕ್ಟರರು** ಮಹಾಸಭೆಗೆ ಶಿಫಾರಸು ಮಾಡಲಿರುವರು

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿ.

ಪ್ರಧಾನ ಕಚೇರಿ: ಪೊಪ್ಯುಲರ್ ಬಿಲ್ಡಿಂಗ್ಸ್, ಮಂಗಳೂರು.

(ಜನೇ ಪುಟದ ೪ನೇ ಕಾಲಂನಿಂದ)

ದೂರವಿರುವ ವಿಭಕ್ತ ಗಂಡು ಮಕ್ಕಳಿಗಿಂತ ಹೀನ ದೆಸೆಯಲ್ಲಿ ಈ ಬಲಮು ಇರುವುದೇದು ಅನೇಕ ಸದಸ್ಯರು ವಿರೋಧ ಸೂಚಿಸಿದರು. ಗಂಡು ಮಗನೊಬ್ಬನು ಪಾಲು ಬೇಡುವನಾದರೆ, ಆ ಪಾಲನ್ನು ನಿರ್ಧರಿಸುವಾಗ ಹೆಣ್ಣು ಮಕ್ಕಳ ಅಧಿಕಾರವನ್ನೂ ಪರಿಗಣಿಸಬೇಕೆಂದ ಕೆಲವರು ಸೂಚಿಸಿದರು. ಬೇರೆ ಕೆಲವರು ತಂದೆ ಜೀವಂತನಿರುವಾಗ ಮಗನಿಗೆ ಅವಿಭಕ್ತ ಕುಟುಂಬದಿಂದ ಬೇರೆಯಾಗುವ ಅಧಿಕಾರವೇ ಇರಕೂಡದೆಂದು ಹೇಳಿದರು.ಅನೇಕರು ಅವಿಭಕ್ತ ಮಿತಾಕ್ಷರ ಕುಟುಂಬ ಪದ್ಧತಿಯನ್ನು ದಾಯಭಾಗ ಪದ್ಧತಿಗೆ ಪರಿವರ್ತಿಸುವುದೇ ಲೇಸೆಂದು ಅಭಿಪ್ರಾಯ ಪಟ್ಟರು. ಇದು ಸಲ್ಲದೆಂದು ಹೇಳಿದವರು ಅವಿಭಕ್ತ ಕುಟುಂಬವು ತನ್ನ ಸದಸ್ಯರಿಗೆ ಆಪಾರ ಸಾಮಾಜಿಕ ರಕ್ಷಣೆ ಕೊಡುತ್ತಿರುವುದರ ಕಡೆಗೆ ಗಮನ ಸೆಳೆದರು.

ಸ್ವೀಕೃತ ತಿದ್ದುಪಡಿ

ಚರ್ಚೆಗೆ ಉತ್ತರ ಕೊಡುತ್ತಾ ಮಂತ್ರಿಗಳು ಎಲ್ಲ ಗಂಡು ಮಕ್ಕಳೂ ಒಟ್ಟುಗೂಡಿ, ಪಾಲನ್ನು ಪಡೆಯೆ ಪ್ರತ್ಯೇಕವಾಗಿದ್ದು ಹೆಣ್ಣು ಮಕ್ಕಳಿಗೆ ಏನೂ ಆಸ್ತಿ ಉಳಿಯದಂತೆ ನೋಡಲು ಒಳಸಂಚು ನಡೆಸಿದರೆ ಯಾವ ಶಾಸನವೂ ಹೆಣ್ಣು ಮಕ್ಕಳನ್ನ ರಕ್ಷಿಸಲಾರದು. ಆದರೆ ಜನರು ಇಂಥ ಹೆಜ್ಜೆ ಇಡುವುದಿಲ್ಲವೆಂಬ ಭರವಸೆ ತನಗಿದೆ ಎಂದರು. ಅವಿಭಕ್ತ ಕುಟುಂಬದ ಗಂಡಸು ಸದಸ್ಯನಿಗೆ ತನ್ನ ಪಾಲಿನಂಶವನ್ನು ನ್ಯಾಯಪತ್ರದ ಮೂಲಕ ಇತರರಿಗೆ ವರ್ಗಾಯಿಸುವ ಅಧಿಕಾರವನ್ನು ಕೊಡುವ ತಿದ್ದುಪಡಿಗೆ ಅವರು ಸಮ್ಮತಿಯಿತ್ತರು. ತನ್ನ ತಂದೆಯ ಕುಟುಂಬದ ಮನೆಯಲ್ಲಿ ಮಗಳಿಗೆ ಆಕೆಯು ಅವಿವಾಹಿತಳಿದ್ದರೆ, ಗಂಡನಿಂದ ಪರಿತ್ಯಕ್ತಳಿದ್ದರೆ ಅಥವಾ ಗಂಡನು ಬಿಟ್ಟುಹೋದ ಮನೆಮಾರಿಲ್ಲದ ವಿಧವೆಯಾಗಿದ್ದರೆ ಮಾತ್ರ ವಾಸಿಸುವ ಅಧಿಕಾರವಿರಬೇಕೆಂಬ ತಿದ್ದುಪಡಿಗೂ ಮಂತ್ರಿಗಳು ಒಪ್ಪಿದರೆ. ಮೃತನ ತಾಯಿ ಮತ್ತು ತಂದೆಯರ ಉತ್ತರಾಧಿಕಾರದ ಮಟ್ಟಿಗೆ ತಾರತಮ್ಯ ನೂಡಬಾರದೆಂಬವರ ನಿಲುಮೆಯನ್ನು ಗಮನಿಸಿ ತಾಯಿಯನ್ನು ಮೊದಲನೆ ವರ್ಗದ ವಾರೀಸುದಾರಳಾಗಿ ಮಾಡುವ ಬದಲು ತಂದೆಯೊಡನೆ ಏರಡನೆ ವರ್ಗದ ಉತ್ತರಾಧಿಕಾರಿಯಾಗಿ ಮಾಡುವ ತಿದ್ದುಪಡಿಗೂ ಮಂತ್ರಿಗಳು ಸೈಗುಟ್ಟಿದ್ದರು ಅಳಿಯ ಸಂತಾನ ಮತ್ತು ಮರುಮಕ್ಕತ್ತಾಯಂ ಪದ್ಧತಿಯ ಮಟ್ಟಿಗೆ ತಾಯಿಯನ್ನು ಮೊದಲನೇ ವರ್ಗದ ಉತ್ತರಾಧಿಕಾರಿಯಾಗಿ ಪರಿಗಣಿಸಬೇಕೆಂಬ ಸೂಚನೆಯನ್ನು ಅವರು ಮನ್ನಿಸಿದರು.

TENDER NOTICE

Sealed tenders are invited for two sets of repair works, at the Sri Mookambika Temple of Kollur, S K., so as to reach the undersigned before 29-12-1955. Details of work and specifications of each set may be had on application with a fee of Rs. 2/- per set. Earnest money of Rs. 400/- per set.

Executive Officer,
Sri Mookambika Temple,
Kollur Post (S. Kanara)
Kollur, 24-11-'55

ಮಂಗಳೂರು

ಮಹಿಳಾ ಉಳಿತಾಯ ಸಪ್ತಾಹವು—

ಮಂಗಳೂರು ಭಗಿನೀ ಸಮಾಜದ ನೇತೃತ್ವದಲ್ಲಿ ತಾ. 26ರಲ್ಲಿ ಸಂಜೆ ಮಹಿಳಾ ಉಳಿತಾಯ ಚಳವಳಿಯ ಕೇಂದ್ರ ಸಲಹಾ ಸಮಿತಿಯ ಸದಸ್ಯೆ ಶ್ರೀಮತಿ ಅಮೃತಾ ರಾವು ಸುಬ್ರಹ್ಮಣ್ಯಂ, ಆನರಿಂದ ಉದ್ಘಾಟಿಸಲ್ಪಟ್ಟ ತು.ಸಪ್ತಾಹದ ಅಧ್ಯಕ್ಷತೆಯನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜೆ. ರಾಜಾರಾಮರು ವಹಿಸಿದ್ದರು. ಭಗಿನೀ ಸಮಾಜದ ಅಧ್ಯಕ್ಷೆ ಶ್ರೀಮತಿ ಲೀಲಾ ಬಾಯಿ ಬಾಳಿಗರು ಸ್ವಾಗತ ಮಾತುಗಳನ್ನಾಡಿದರು.

ಉದ್ಘಾಟಕರು ತಮ್ಮ ಭಾಷಣದಲ್ಲಿ ಮಹಿಳಾ ಉಳಿತಾಯ ಚಳವಳದ ಉದ್ದೇಶಗಳನ್ನು ವಿವರಿಸಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ರಾಷ್ಟ್ರ ನಿರ್ಮಾಣ ಕಾರ್ಯಗಳಿಗಾಗಿ ಸರಕಾರಕ್ಕೆ ತುಂಬಾ ಹಣ ಬೇಕಾಗಿರುವುದರಿಂದ ಸರಕಾರವು ಜನರಿಂದ ಸಾಲ ಇತ್ಯಾದಿ ರೂಪದಲ್ಲಿ ಹಣ ಪಡೆಯಬೇಕಾಗಿದೆ ಇದರಲ್ಲಿ ಸರ್ವರೂ ಯಥಾನುಶಕ್ತಿ ಸಹಾಯನೀಡುವಂತೆ ಹೂಡಲು ಮಹಿಳೆಯರ ಉಳಿತಾಯ ಯೋಜನೆ ಇತ್ಯಾದಿ ಹಲವು ಉಳಿತಾಯ ಯೋಜನೆಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿ ಸರ್ವರ ಪ್ರೋತ್ಸಾಹಪರ ಸಹಕಾರವನ್ನು ಅಪೇಕ್ಷಿಸಿದರು. ಬಳಿಕ ಸಮಾಜವಿಕಾಸಯೋಜನೆಯ ಪ್ರಧಾನ ಸಮಾಜ ಶಿಕ್ಷಣ ಸಂಘಟಕಿ ಕುಮಾರಿ ನಿರ್ಮಾಕ್ಷಿ, ನಗರಸಭಾ ಸದಸ್ಯ ಶ್ರೀ ಕೆ ವಿಶ್ವನಾಥ ಕಾಮತರು ಕಾರ್ಯೋಚಿತ ಮಾತುಗಳನ್ನಾಡಿದರು ಉಳಿತಾಯ ಯೋಜನೆಯನ್ನು ಯಶಸ್ವಿಗೊಳಿಸಲು ಜನರು ಮುಂದೆ ಬರಬೇಕಾಗಿ ಸಭಾಧ್ಯಕ್ಷರು ವಿನಂತಿಸಿದರು. ಸಮಾಜದ ಜನತೆ ಕಾರ್ಯದರ್ಶಿ ಶ್ರೀಮತಿ ಕಲ್ಯಾಣಿ ಡಿ. ಸಿಟ್ಟಿಯವರಿಗೆ ಧನ್ಯವಾದವಿತ್ತರು.

ಅ ಭಾ. ಮಹಿಳಾ ಪರಿಷತ್ತು— ಅಖಿಲಭಾರತ ಮಹಿಳಾ ಪರಿಷತ್ತಿನ 25ನೇ ವರ್ಷಾನಸಭೆಯು ಮಂ-ಳೂರಲ್ಲಿ ಇದೇ ತಾ. 30ರಿಂದ ಜನವರಿ ತಾ. 2ರ ತನಕ ಜರಗಲಿರುವುದು.

ಪ್ರಜಾ ಸೋಶಿಯಲಿಸ್ಟ್ ಪಕ್ಷದ ಜಿಲ್ಲಾ ಸಮಿತಿಸಭೆಯು— ಕಳದ ತಾ 27ರಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಗಯೂಡಲ್ಲಿ ಜರಗಲಿರುವ ಪಕ್ಷದ ವಾರ್ಷಿಕ ಅಧಿವೇಶನಕ್ಕೆ ಶ್ರೀಗಳಾದ ಕೆ. ಆರ್. ಕಾರಂತರು ಮತ್ತು ಶ್ರೀನಿವಾಸ ಸೆಟ್ಟಿರನ್ನು ಪ್ರತಿನಿಧಿಗಳಾಗಿ ಆರಿಸಲಾಯಿತು. ಮುಂದಿನ ಫೆಬ್ರವರಿ ತಿಂಗಳೊಳಗೆ ಜಿಲ್ಲೆಗೆ ಒಳ್ಳೆಯಹತ ಮುಸಾವೆ ಜಾರಿಗೊಳಿಸದಿದ್ದಲ್ಲಿ ಬ್ಯಹ್ಯಾನರದಲ್ಲಿ ಹಲವು ಜಾಲಗೇನೆ ಒಳ್ಳೆಲುಗಳು ಸತ್ಯಾಗ್ರಹ ಮೂಡುವರೆಂ ಬುದಾಗಿ ಮನ್ಸಾಸು ಸರಕಾರಕ್ಕೆ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳಿಗೂ ನೋಟೀಸು ಕೊಡಬೇಕೆಂದಾಯಿತು. ೪ಕ್ಕ ಕಾರ್ಯಕ್ರಮ ಕೈಕೊಳ್ಳಲು ಉಪಸಮಿತಿಯೊಂದು ರಚಿಸಲಾಯಿತು. ಹೊಸ ವರ್ಷಕ್ಕೆ ಶ್ರೀಗಳಾದ ಕೆ. ಆರ್. ಕಾರಂತ ಅಧ್ಯಕ್ಷ; ಡಾ. ಕೆ. ನಾಗಪ್ಪ ಉಳ್ತ, ಯು. ಎಸ್ ನಾಯಕ್, ಎ. ಕೆ. ಕೆರ್ಲ್, ಉಪಾಧ್ಯಕ್ಷರು; ವಿ ಶ್ರೀನಿವಾಸ ಸೆಟ್ಟಿ, ಪ್ರಧಾನ ಕಾರ್ಯದರ್ಶಿ; ಎಚ್ ಮುಹಾಬಲ ರೈ, ಡಾ. ಸಂಜೀವನಾಥ ಮತ್ತು ಎ ಬಾಳಪ್ಪ, ಸಹಾಯಕ ಕಾರ್ಯದರ್ಶಿಗಳು, ಪಿ. ಸೋಮಯ್ಯ, ಆಫೀಸು ಕಾರ್ಯದರ್ಶಿ; ಬಿ. ಎಸ್. ಕಕ್ಕಿಲ್ಲಾಯ, ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ಡಾ. ಯು. ಪಿ. ಮಲ್ಯರ ಅವಿರೋಧ ಹಾಗೂ ಒಮ್ಮತದ ಆಯ್ಕೆ— ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು ಇದೇ ತಾ 4ರಲ್ಲಿ ಡಾ. ಯು. ಪಿ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಆರ್. ಆಚಾರ್ಯರ ಸೂಚನೆ, ಶ್ರೀ ಟಿ. ಎ. ಪೈಗಳ ಅನುಮೋದನೆ, (ಎಂಟು ಮಂದಿ ಅಧ್ಯಕ್ಷಸ್ಥಾನಕ್ಕೆ ನಿಂತವರು ತಂತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದ ನಂತರ) ಡಾ. ಯು. ಪಿ. ಮಲ್ಯರು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿ ಅವಿರೋಧ ಹಾಗೂ ಒಮ್ಮತದಿಂದ ಆರಿಸಲ್ಪಟ್ಟರು.

ಕಾರ್ಯಕಾರೀ ಸಮಿತಿ ಮತ್ತು ಅಧಿಕಾರಿ ವರ್ಗದ ಇತರ ಸದಸ್ಯರನ್ನು ನಾಮಕರಣ ಮಾಡುವ ಅಧಿಕಾರವನ್ನು ಇದ್ಯಕ್ಷರಿಗೆ ಕೊಡಲಾಯಿತು. ಇದೇ ತಾ. 28ರಲ್ಲಿ ಸಂಜೆ ಪಯ್ಯನ್ನೂರಿನಿಂದ ಇಲ್ಲಿಗೆ ಆಗಮಿಸಿರುವ ಪ್ರಧಾನಿ ಪಂಡಿತ ನೆಹರೂರವರು ಮರುದಿನ ಜಿಲ್ಲಾ ಸಂಚಾರವನ್ನು ಕೈಕೊಳ್ಳುವಂತೆ ಆನರನ್ನು ವಿನಂತಿಸಿಕೊಳ್ಳಬೇಕೆಂಬ ನಿರ್ಣಯವಾಯಿತು ಮುಂದಿನ ಮಹಾ ಚುನಾವಣೆಯಲ್ಲಿ ಹುರಿಯಾಳುಗಳಾಗಿನತಕ್ಕ ಕಾಂಗ್ರೆಸಿಗರು ಸಂಸ್ಥೆಯ ಅಧಿಕಾರಿಸ್ಥಾನದಲ್ಲಿ ಇರಬಾರದೆಂದು ಕಾಂಗ್ರೆಸ್ ಕೇಂದ್ರ ಸಂಸ್ಥೆಯ ಸಲಹೆಯಿದ್ದು, ಜಿಲ್ಲಾ ಕಾಂಗ್ರೆಸ್ ಅಧಿಕಾರಿ ವರ್ಗವನ್ನು ಆರಿಸುವಾಗ ಈ ಸಲಹೆಯನ್ನು ಅನುಸರಿಸುವ ಸಾಧ್ಯಸಾಧ್ಯತೆ ಕುರಿತು ಚರ್ಚಿಸಲಿತಿಯಿತು. ಅಧ್ಯಕ್ಷರು ತಮ್ಮನ್ನು ಆರಿಸಿದುದಕ್ಕೆ ಆಭಾರ ಸೂಚಿಸಿ ಮಾತನಾಡಿದರು.

ಸೀತಾನದಿ ಜಾನುವಾರು ಸಂತೆ—

ದ. ಕ. ಜಿಲ್ಲಾ ರೈತರ ಅನುಕೂಲತೆಯ ಬಗ್ಗೆ ಕಾರ್ಕಳ ತಾಲೂಕು ಸೋಮೇಶ್ವರದ ಬಳಿ, ಅಂದರೆ ಸೋಮೇಶ್ವರ ಫಾಟಯ ಬುದದಿಂದ 3 ಮೈಲು ಕೆಳಗೆ ಸೀತಾನದಿ ಎಂಬಲ್ಲಿ ವಾಡಿಕೆಯಂತೆ ಈ ಬಾರಿಯೂ ತಾ. 25-12-55 ರಿಂದ 5-1-56ರ ತನಕ ಜಾನುವಾರು ಜಾತ್ರೆ ಜರಗುವುದು. ಅತ್ಯಂತ ಉತ್ಕೃಷ್ಟ ಜಾನುವಾರುಗಳ ಮಾರಾಟಿಕರಿಗೆ ಬಹುವಾನ ಕೊಡಲಾಗುವುದು ಎಂದು ಕುಂದಾಪುರ ದಿವಿಜನಲ್ಲಿ ಆಫೀಸರರು ತಿಳಿಸುತ್ತಾರೆ.

ಕಾರ್ಕಳದಲ್ಲಿ ಡಾ॥ ಮಾಧವ ಪೈಗಳ ಭಾಷಣ—

ಇಲ್ಲಿಯ ಸಮಾಜ ವಿಕಾಸ ಯೋಜನೆಯನ್ವಯ ಜರುಗಿದ ಗ್ರಾಮಾಧಿನಾಯಕರ ಸಮ್ಮೇಳನದ ಲಹರಿಂಗ ಅಧಿವೇಶನದ ಉಪಸಂಹಾರ ಭಾಷಣವನ್ನು ಉಡುಪಿಯ ಹಲವಾರು ಉದ್ಯಮಗಳ ನಾಯಕರಾದ ಡಾ॥ ಟಿ. ಎಮ್. ಎ ಪೈಗಳು ಮಾತಾಡುತ್ತಾ ಗ್ರಾಮಗಳಲ್ಲಿ ಸ್ಥಳೀಯಗಳು ಸಹಭಾವನೆ ಹೊಂದಿ ತನ್ಮೂಲಕ ಹಿಂದೀ ರಾಷ್ಟ್ರದ ಕಲ್ಯಾಣಾಗಭೇಕಾಗಿದೆ ಎಂದರು. ಈ ವೈಸ್ಸಿಯಂದ ಗ್ರಾಮನಾಯಕರು ತಂತಮ್ಮ ಗ್ರಾಮಗಳಲ್ಲಿ ಗಾಂಧಿ ಸೇವಾ ದುರಂಧರರಾಗಿ ಕಾರ್ಯವಸ ಬೇಕಾಗಿ ಆಗ್ರಹಪೂರ್ವಕ ವಿನಂತಿಸಿದರು.

ಬೈಂದೂರು—ಇಲ್ಲಿಯ ಗ್ರಾಮ ಸೇವಾ ಸಂಘದ ನೇತೃತ್ವದಲ್ಲಿ ತಾ. 1ರಲ್ಲು ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಚ್. ಗಣಪತಿ ಕೆಮ್ಮಾಯರ ಅಧ್ಯಕ್ಷತೆಯಲ್ಲಿ ಸೋಷೆಶಿಯಲ್ ಎಜ್ಯುಕೇಶನ್ ದಿನವನ್ನು ಆಚರಿಸಲಾಯಿತು

ಮೂಲ್ಕಿ ಬ್ಯಾಂಕ್ ಲಿಮಿಟೆಡ್
ಮುಲ್ಕಿ

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು **4½%** ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು.

ನಿರಖು ದೀರ್ಘಕಾಲ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬ್ಯಾಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಪ್ರಕಟಣೆ

ರೂಪಾಯಿ 1000 ತನಕ ಸಾಲಗಳು ಆಸ್ತಿ ಜಾಮೀನ್ದಾರಿ ಆಥವಾ ಜ್ಯಾಮೀನುಗಳಲ್ಲಿ ಹಿನೇ ನಮ್ಮ ದೆಸ್ತಕಿನಿಂದಲೇ ಹೊರಬೀಯುವುವು. ಹಲವರು ಈಗಾಗಲೇ ಪಡೆದಿರುತ್ತಾರೆ. ವಿವರಗಳಿಗೆ ಇಂಗ್ಲಿಷಿನಲ್ಲಿ ಬರೆಯಿರಿ:—

Bombay Mercantile Co.
Bombay--23.

ಪೆಳ್ಳಿ—ಇದೇ ತಾ. 2ರಲ್ಲು ಪಳ್ಳಿ ಪೆಜ ಕೊಂಡಂಗೆ ಶ್ರೀ ಮುದ್ದಣ್ಣ ಹೆಗ್ಡೆಯವರು ರಕ್ತದ ಒತ್ತಡದಿಂದ ದೈವಾಧೀನರಾಗುದು ವಿಷಾದಕರವಿದೆ.

ಬಾರ್ಕೂರು—ಇದೇ ತಾ 4ರಲ್ಲು ಬೆಳಿಗ್ಗೆ ಜಿಲ್ಲಾಕಲೆಕ್ಟರ್ ಶ್ರೀ ಎಸ್. ಜಿ. ರಾಜಾರಾಮ್ ಅವರು ಬಾರ್ಕೂರಲ್ಲಿ ಕಟ್ಟಲಿಕ್ಕಿರುವ ಕಮ್ಯೂನಿಟಿ ಹಾಲಿನ ಶಂಕುಸ್ಥಾಪನೆ ಮಾಡಿದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಕಿರು ವಿಮಾರವನ್ನು ಉದ್ಘಾಟಿಸಿದರು ಶ್ರೀ ಎಸ್ ಎಸ್. ಕೊಳ್ಳಿಬೈಲ್, ಎಮ್. ಎಲ್. ಎ, ಅವರು ರಂಗನ ಕೆರೆ-ಬಂಡಿ ಮರ ರಸ್ತೆಯನ್ನು ತೆರೆದರು. ಈ ಮೂರೂ ಸಮಾರಂಭಗಳಲ್ಲಿ ಅಧ್ಯಕ್ಷತೆಯನ್ನು ಜಿಲ್ಲಾ ಬೋರ್ಡು ಅಧ್ಯಕ್ಷೆ ಡಾ॥ ಕೆ. ಕೆ. ಹೆಗ್ಡೆಯವರು ವಹಿಸಿದ್ದರು. ಬಾರ್ಕೂರು ಪಂಚಾಯತ ಬೋರ್ಡು ಅಧ್ಯಕ್ಷೆ ಶ್ರೀ ಕೆ. ಯಜ್ಞ ನಾರಾಯಣ ರಾಯರು ಸ್ವಾಗತ ಮಾತುಗಳನ್ನಾಡಿದರು ಗ್ರಾಮೋದ್ಧಾರ ಕಮ್ಯುನಿಟಿಯ ಅಧ್ಯಕ್ಷ ಶ್ರೀ ಜೆ. ಪಿ. ಸಿಕೇರರು ಧನ್ಯವಾದಗಳನ್ನರ್ಪಿಸಿದರು.

(ಜನೇ ಪುಟದ ೧ನೇ ಕಾಲಮಿನಿಂದ)

ದೆಕ್ಷಿಣ ತಾಲೂಕುಗಳ ಕೆಲವಂಶ) ಆಂಧ್ರಕ್ಕೆ ಹೋಗಬೇಕೆಂಬ ತಿದ್ದುಪಡಿಯೊಡನೆ ಮುಖ್ಯಮಂತ್ರಿಗಳಿಗೆ ಬೆಂಬಲ ವಿತ್ತರು. (ಆದರೆ ಈ ತಿದ್ದುಪಡಿಯು ಹಿಂದಿನಿಂದ ಬಿದ್ದುಹೋಯಿತು.) ಶಾಸನಾಂಗದ ಮೇಲ್ಮನೆಯಲ್ಲಿ ೩೧ ಮಂದಿ ಚರ್ಚೆಯಲ್ಲಿ ಭಾಗವಹಿಸಿದ್ದರು. ೨೪ ಮಂದಿ ಮುಖ್ಯಮಂತ್ರಿಗಳಿಗೆ ಬೆಂಬಲವಿತ್ತರೆ ೭ ಜನರು ವಿರೋಧಸೂಚಿಸಿದರು. ಮತದಾನದ ಕಾಲಕ್ಕೆ ಕೆಳಮನೆಯಲ್ಲಿ ೨೭೮ ಪಕ್ಷ, ಹಾಗೂ ೩ ವಿರೋಧ ಮತದಿಂದ ಮುಖ್ಯಮಂತ್ರಿಗಳಿಗೆ ಗೊತ್ತುವಳಿ ಅಂಗೀಕೃತವಾಯಿತು. ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿಗಳ ನಿಲುಮೆಗೆ ಭಿನ್ನಾಭಿಪ್ರಾಯವನ್ನು ಸೂಚಿಸಿದ್ದ ಮೂವರು ಮಂತ್ರಿಗಳ ಪೈಕಿ ಶ್ರೀಗಳಾದ ಕಡಿದಾಳ್ ಮಂಜಪ್ಪ ಹಾಗು ಟಿ ಚೆನ್ನಯ್ಯನವರು ತಮ್ಮ ಮನಸ್ಸನ್ನು ಈಗ ಬದಲಾಯಿಸಿ, ವಿಕೇಂದ್ರೀಕರಣಕ್ಕೆ ಅನುಕೂಲ ಮತವನ್ನಿತ್ತರು. ಆದರೆ ಮಂತ್ರಿ ಶ್ರೀ ಎ ಜೆ. ರಾಮಚಂದ್ರಯ್ಯರೂ ಪ್ರದೇಶ ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀ ವೀರಣ್ಣ ಗೌಡರೂ ಶಾಸನಾಂಗದ ಕಾಂಗ್ರೆಸು ಪಕ್ಷದ ಸಚೇತಕ ಶ್ರೀ ಹುಚ್ಚಮಾಸ್ತಿ ಗೌಡರೂ ಕೂಡಿ ಒಟ್ಟು ೩೫ ಮಂದಿ ಕಾಂಗ್ರೆಸಿಗರು "ಅಶಕ್ತ ನಾಕ್ಷಿಗೆ ಒಪ್ಪಿಗೆಯಿಲ್ಲ" ವೆಂಬ ಕಾರಣದಿಂದ ಮುಖ್ಯ ಮಂತ್ರಿಗಳ ಗೊತ್ತುವಳಿಯ ಕುರಿತು ನಡೆದ ಮತದಾನದಲ್ಲಿ ಭಾಗವಹಿಸದೆ ಕುಳಿತರು ವೇಲ್ಮನೆಯಲ್ಲಿ, ಸರಕಾರ ಅನುಸರಿಸಿದನೀತಿ ಚಿಸಮಂಜಸವಾದುದೆಂಬ ನೆಪದ ಮೇಲೆ ಪ್ರಜಾಸಮಾಜವಾದಿ ಪಕ್ಷದ ನಾಲ್ವರು ಸದಸ್ಯರು (ಇವರು ಮೊದಲಿಂದಲೂ ವಿಕೇಕರಣವನ್ನು ವಿರೋಧಿಸಿದ್ದರು) ಸಭಾತ್ಯಾಗಗೈದಿದರು; ಉಳಿದೆಲ್ಲರ ಸರ್ವಾನುಮತದ ಬೆಂಬಲ ಅಲ್ಲಿ ಗೊತ್ತುವಳಿಗೆ ಸಿಕ್ಕಿತು.

ವ್ಯಕ್ತಿ ಮತ್ತು ಪ್ರಭುತ್ವ

"ಏಕಪಕ್ಷೀಯ ಪ್ರಜಾಪ್ರಭುತ್ವವು ಭಾರತದಲ್ಲಿ ಸಾಧ್ಯ"

ಇದೇ ನವಂಬರ ದಿನಾಂಕ ೩೦ರಲ್ಲು ಉಡುಪಿಯ ಮಹಾತ್ಮಾಗಾಂಧಿ ಸ್ಮಾರಕ ಕಾಲೇಜಿನ ಅರ್ಥಶಾಸ್ತ್ರ ಮತ್ತು ಇತಿಹಾಸ ಸಂಘದ ಆಶ್ರಯದಲ್ಲಿ "ವ್ಯಕ್ತಿ ಮತ್ತು ಪ್ರಭುತ್ವ" ಎಂಬ ವಿಷಯದ ಮೇಲೆ ಸಂಕಿರಣವು ನಡೆಯಿತು. ಸುಬ್ರಾಸು ನಿಲ್ದಸಿಯಾಲಯದ ರಾಜನೀತಿ ಶಾಸ್ತ್ರದ ಪ್ರೊಫೆಸರ್ ಭಾಸ್ಕರನ್ ಅಧ್ಯಕ್ಷತೆಯನ್ನು ವಹಿಸಿದ್ದರು.

ಆನರು "ಭಾರತದಲ್ಲಿ ಪ್ರಜಾಪ್ರಭುತ್ವ" ಎಂಬ ಕುರಿತು ಮಾತನಾಡುತ್ತಾ "ಭಾರತಕ್ಕೆ ಪ್ರಜಾತಂತ್ರವು ಹೊಸದಲ್ಲ." ಹಿಮಾಲಯದ ತಪ್ಪಲಲ್ಲಿದ್ದ ಗಣ ರಾಜ್ಯಗಳೂ ದಕ್ಷಿಣ ಚೇರದ ಸ್ಥಾನಿಕ ಸಂಸ್ಥಿಗಳೂ ಪ್ರಜಾತಂತ್ರಾತ್ಮಕವಾಗಿ ಆಳರಿಸುವುದನ್ನು ಇತಿಹಾಸಜ್ಞರು ಶೋಧಿಸಿದ್ದಾರೆ. ಈಗಿನ ಕಾಲದಲ್ಲಿ ನಮ್ಮ ಜಾತೀಯತೆ, ನಿರಕ್ಷರತೆ' ಮುಂತಾದುವುಗಳು ಪ್ರಜಾತಂತ್ರಕ್ಕೆ ವಿಘ್ನಗಳೆಂದು ವಿಮರ್ಶಕರು ಹೇಳುವುದುಂಟು. ಆದರೆ ಸಾರಿರು ವರ್ಷಗಳಿಂದ ಈ ಜಾತಿ, ಅಜ್ಞಾನದಾರಿದ್ರ್ಯಗಳ ನಡುವೆ ನಾವು ರಾಜ್ಯಭಾರವಾಡಿಲ್ಲವೆ? ನಿರಕ್ಷರ ಕುಕ್ಷಿಗಳಾದ ಜನಕ್ಕೆ ನಿರಕ್ಷರರಾದ ಅರಸುಮನೆ ಹಿತಕರವಾದ ರಾಜ್ಯಭಾರವನ್ನು ನಿರ್ಮಿಸಲಿಲ್ಲವೆ? ಈಗ ಎಂಟು ವರ್ಷಗಳಿಂದ ನಾವೇ ತಾನೇ ಆಜ್ಞಾನದ ಮೇಲೆಯೇ ನಮ್ಮ ರಾಷ್ಟ್ರದ ರಥವನ್ನು ಎಳೆಯುತ್ತಿಲ್ಲವೆ? ಎಂಬುದನ್ನು ಸರ್ಯೋಚಿಸಿದರೆ ರೀತಿ, ನೀತಿ, ಭಾಷೆ, ಸಂಪ್ರದಾಯ, ಮತ, ಧರ್ಮ ಇವುಗಳಲ್ಲರೂಪ ವೈವಿಧ್ಯವೂ ಭಿನ್ನತ್ವವೂ ಯಾವುದೇ ತರವ ರಾಜ್ಯಪದ್ಧತಿಗೆಬಾಧ್ಯವೂ ಆಲ್ಲ ಮೂರಕವೂ ಆಲ್ಲ. ಎಂಬುದು ನಮಗೆ ಗೋಚರವಾಗುತ್ತದೆ" ಎಂದರು.

ತಾರತಮ್ಯವೇ ಅಡಿಗಲ್ಲು

ಪ್ರಜಾತಂತ್ರದಲ್ಲಿ ವೈವಿಧ್ಯವೇ ಅಸರೆ ಜೀವನಾಡಿಯೆಂದು ನಾನು ನಂಬಿದ್ದೇನೆ. ಪ್ರಜಾಪ್ರಭುತ್ವವನ್ನು ಲೋಕದ ಮಾನ್ಯರು ಸಾಮಾನ್ಯರೂ ಒಪ್ಪಿಕೊಂಡಿರುವಾಗ ತನ್ನ ತನ್ನು, ಸರಕಿಗೂ ಅದೇ ಹೆಸರನ್ನಿಟ್ಟರೆ ಕುಲಭ್ರದಲ್ಲಿ ಅದನ್ನು ಮೂರಬಯಡೆಂದು ಭಾವಿಸಿ ಎಲ್ಲಾ ರಾಜ್ಯಕ್ರಮಗಳನ್ನು ಪ್ರಜಾತಂತ್ರವೇದೇ ಕರೆಯುವ ಪಟ್ಟು ನಮ್ಮಲ್ಲಿ ಬೆಟವಾಗಿದೆ. ಪ್ರಜಾತಂತ್ರವು ಯಶಸ್ವಿಯಾಗಬೇಕಾದರೆ ಎರಡು ದಾರಿಗಳಿಂತೆ—ಒಂದು, ನಮ್ಮ ಭೇದಗಳನ್ನು ಮರೆತು ಏಕರೂಪವಾದ ಸಮಾಜವನ್ನು ನಿರ್ಮಾಣ ಪಾಡುವುದು. ನಮ್ಮ ನಾಯಕರು ಈ ದಾರಿಯನ್ನು ಹಿಟ್ಟಿದೆನರು. ಆದರೆ ಏಕರೂಪತೆಗೆ ಬೇಕಾದ ಪ್ರೌಢಯದ ಐಕ್ಯ ಯುದ್ಧವೇ ಮೊದಲಾದ ಭಯಂಕರ ಸನ್ನಿವೇಶಗಳಲ್ಲಿ ಮಾತ್ರ ನುಡಾಡುವುದರಿಂದ ಈ ಸಾರ್ಗವು ಸಾಮಾನ್ಯ ಪರಿಸ್ಥಿತಿಯಲ್ಲಿ ಅಪೇಕ್ಷಣೀಯವಲ್ಲ ಎಂಬುದೂ ನಮ್ಮಲ್ಲಿರುವ ಹಳೆಯ ಭೇದಗಳ ಬದಲು ಹೊಸ ಹೊಸ ಆರ್ಥಿಕ ಮತ್ತು ರಾಜಕೀಯ ತತ್ವಗಳ ಮೇಲಿಂದ ಹೊಸ ಹೊಸ ಭೇದಗಳನ್ನು ಕಲ್ಪಿಸಿಕೊಳ್ಳಬೇಕು ಎನ್ನುವ ದಾರಿಯನ್ನು ಕೆಲವರು ತೋರಿಸುತ್ತಾರೆ. ಇದರಿಂದಾಗಿ ಹೊಸದೊಂದು ಭೇದವನ್ನು ಕಲ್ಪಿಸಿದ ಹಾಗೆ ಅದೀತೆ ಹೊರತು ಕಮ್ಯೂನಿಸ್ಟ್ ಪೈಜ್ಞನರು ಕೆಪಿಟಲಿಸ್ಟ್ ವೈಶ್ಯನರು ಎಂಬ ಹೊಸ ಜಾತಿ ಭೇದ ಉಟ್ಟುಬೀಳತ ಹೊರತು—ಇರುವ ಹಳೆಯ ಭೇದಗಳು ಮಾಯವಾಗುವುದಿಲ್ಲ. ಆದುದರಿಂದ ನಮ್ಮ ಭೇದಗಳ ಭದ್ರಪಾದ ಬುನಾದಿಯ ಮೇಲೆಯೇ ಭಾರತೀಯ ಪ್ರಜಾಪ್ರಭುತ್ವವನ್ನು ನಿರ್ಮಾಣ ಮಾಡಬೇಕಾದ ಆವಶ್ಯಕತೆಯನ್ನು ಎಲ್ಲರೂ ಮನಗಾಣಬಹುದು. ಎಂದು ಆನರು ತಮ್ಮ ಆಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸರ್ವಗ್ರಾಹಿ ಕಾಂಗ್ರೆಸು

ನಮ್ಮಲ್ಲಿರುವ ಪ್ರಬಲ ಪಕ್ಷವೆಂದರೆ ಕಾಂಗ್ರೆಸು. ಇದು ಭಾರತದಲ್ಲಿ ಸರ್ವಾಧಿಕಾರವನ್ನು ಚಲಾಯಿಸುತ್ತಿದೆ. ಎಂದು ಅದರ ಶತ್ರುಗಳು ಹೇಳುವ ಮಾತನ್ನು ನಾನು ಒಪ್ಪಲಾರೆ. ರಾಷ್ಟ್ರಕ್ಕೂ ಜನತೆಗೂ ಅನಿವಾರ್ಯ ಮತ್ತು ಯಶಸ್ವಿಯಾದ ಸಂಪರ್ಕವನ್ನು ಕೂಡಿಸುವ ಒಂದೇ ಒಂದು ಪಕ್ಷವಾದ ಕಾಂಗ್ರೆಸ್ಸಿನ ಹೊಣೆ ಹೊತ್ತಿದ್ದು. ಇತಿಹಾಸ ಆವಕ್ಕೂ ದೊಡ್ಡದು ಎರಡು ಪ್ರಬಲ ಪಕ್ಷಗಳಿದ್ದರೆ ಮಾತ್ರ ಪ್ರಜಾತಂತ್ರವು ಜಯಶ್ರದ್ಧವಾಗುತ್ತದೆ ಎನ್ನುವವರು ಬ್ರಿಟನ್ನಿನ ಕಡೆಕ್ಕೆ ತೋರಿಸುತ್ತಾರೆ. ಆದರೆ ಬ್ರಿಟನ್ನನ್ನು ಬಿಟ್ಟರೆ ಬೇರೆ ಎಲ್ಲಿ ಎರಡು ಪಕ್ಷಗಳ ಹೋರಾಟ ನಡೆಯುತ್ತಿದೆ. ಪ್ರಪಂಚದ ಇತರ ಎಲ್ಲಾ ರಾಷ್ಟ್ರಗಳಲ್ಲೂ ಹೆಸರಿಗೆ ಎರಡಿದ್ದರೂ ಭೋರಣೆ ಒಂದೇ ಎಂಬುದಾಗಿಯೂ ಆಥವಾ ಎರಡಕ್ಕಿಂತ ಹೆಚ್ಚು ಪಕ್ಷಗಳು ಇರುವುದಾಗಿಯೂ ನಾವು ತಿಳಿಯಬೇಕು. ಬೇರೆದೇಶಗಳಲ್ಲಿ ಒಂದು ಪಕ್ಷಕ್ಕೂ ಇನ್ನೊಂದು ಪಕ್ಷಕ್ಕೂ ನಡೆಯುವ ಜಗಳಗಳು ನಮ್ಮ ಕಾಂಗ್ರೆಸ್ಸಿನಲ್ಲಿ ಆಡಳಿತಗಳೇ ನಡೆಯುವುದು ಭಾರತದ ವೈಶಿಷ್ಟ್ಯವೆಂದು ನನಗೆ ಕಾಣುತ್ತದೆ. ಕಾಂಗ್ರೆಸ್ಸಿನ ಬಾಗಿಲು ಎಂಥವರಿಗೂ ಯಾವಾಗಲೂ ತೆರೆದೇ ಇದೆ. ನಮ್ಮ ಜನತೆಯ ಮನೋಸೃತ್ತಿಯನ್ನೂ ಸತ್ಯವರಿಸ್ಥಿತಿಯನ್ನೂ ಈ ಸರ್ವಗ್ರಾಹಿ ಕಾಂಗ್ರೆಸ್ಸು ಯಥಾನುತ್ತಾಗಿ ಪ್ರತಿನಿಧಿಸುತ್ತದೆ. ಜೀವಪದ್ಧತಿಯೇ ಇಂದು ತುಂಡವಾದ ಆಭಿಪ್ರಾಯ ಭೇದಗಳಿಲ್ಲದ ಪ್ರಬಲ ಪ್ರತಿಪಕ್ಷವನ್ನ ಜನನ ಬೇಗೆ? ಈಗಿನ ಕಾಂಗ್ರೆಸಿನಲ್ಲಿ ಪಕ್ಷ ಪ್ರತಿಪಕ್ಷ ಎಲ್ಲವೂ ಆಡಕವಾಗಿ ರುತ್ತವೆಂದೂ ಹೇಸಸಾಗಿ ಸುಳಿಯುವ ವಿಚಾರಗಳನ್ನು ಕಾಂಗ್ರೆಸ್ಸು ಸ್ವಾಗತಿಸುವುದರಿಂದಲೂ ಭಾರತೀಯ ಪ್ರಜಾ ತಂತ್ರವು ಯಶಸ್ಸಿಗೆ ಪ್ರತಿಪಕ್ಷದ ಕೊರತೆ ವಿಘ್ನವಲ್ಲವೆಂದು ನಾವು ತೀರ್ಮಾನಿಸುವಂತಾಯಿತು. ಹಾಗೆ ಸಂದರ್ಭ ಬಂದರೆ ನಮ್ಮ ದೇಶಕ್ಕೆ ಪ್ರಾಸ್ಸಿನಂತೆ ಸರ್ವ ಪಕ್ಷೀಯ ಸರಕಾರವೆ ಹಿತಕರವಾದೀತು. ಒಟ್ಟಿನಲ್ಲಿ ಭಿನ್ನತ್ವವುಳ್ಳ ನಮ್ಮ ಸಮಾಜ ಪುರುಷನನ್ನು ತಿದ್ದಿ ಆವನಿಗೆ ಪ್ರಜಾಪ್ರಭುತ್ವದ ಆಲಂಕಾರವನ್ನು ತೊಡಿಸಬೇಕೆನ್ನುವುದು ಅನಾವಶ್ಯಕ. ಕಾಲಕ್ರಮೇಣ ಈ ಭೇದಗಳು ಆಳಿ ಮಸೋ ಹಿನ್ನಾಯಿತು. ಆವು ಆಳಿದ ಮೇಲೆಯೇ ಪ್ರಜಾಪ್ರಭುತ್ವವೆಂಬ ಸೌಧವಿನಲ್ಲಿ ಹುರು ಳಲ್ಲ." ಎಂದು ಅಧ್ಯಕ್ಷರು ತಮ್ಮ ಭಾಷಣವನ್ನು ಮುಗಿಸಿದರು.

ಸಮರಸತೆಯೇ ಜೀವಾಳ

ವಿಚಾರ ಸಂಕಿರಣದ ಉದ್ಘಾಟನೆಯನ್ನು ಮಾಡುತ್ತಾ ಪ್ರಿನ್ಸಿಪಾಲ್ ಸುಂದರ ರಾಯರು ತಮ್ಮ ಸೂಚಕ ಭಾಷಣದಲ್ಲಿ ಮಧ್ಯಕಾಲೀನ ಮುನ್ಸಿಪ್, ಲಾಸ್ಟ್, ರಸ್ಸೆಲ್, ಹಾಯಕ್, ಮಂಡಿಸಿದ ಆಧುನಿಕ ವಿಚಾರಸರಣಿಯ ನಂತರ ಮಾತುಗಳನ್ನು ಉದ್ಧರಿಸಿ ಇಂದಿನ ಯುಗಸಾಮಾನ್ಯದಲ್ಲಿ ಪ್ರಭುತ್ವದ ಶಕ್ತಿ ವರ್ಧಿಸಿದಂತೆ ವ್ಯಕ್ತಿಯ ಸ್ವಾತಂತ್ರ್ಯವೈಕುಗ್ಗಿರುವುದಕ್ಕೆ ವಿಷಾದಿಸಿದರು. ಎಲ್ಲರೂ ಸ್ವಾತಂತ್ರ್ಯದ ಮೇಲೆ ಭಾಷಣಮಾಡುವ ಈ ಕಾಲದಲ್ಲಿ ಮೂತು ಹೆಚ್ಚಿದಂತೆ ಸ್ವಾತಂತ್ರ್ಯ ಕಡಿಮೆಯಾದ್ದನ್ನು ಜ್ಞಾಪಿಸಿದರು. ವ್ಯಕ್ತಿಯ ಕ್ಷೇಮಾಭ್ಯುದಯವು ರಾಷ್ಟ್ರದ ಅಧಿಕಾರದ ವ್ಯಾಪ್ತಿಯು ಎಲ್ಲಿಂದು ವ್ಯಕ್ತಿಯೂ ತಿಳಿದಲ್ಲಿ ವ್ಯಕ್ತಿ ಪ್ರಭುತ್ವಗಳ ಘರ್ಷಣೆ ಮಾಯವಾಗಿ ಅವು ಪರಸ್ಪರ ಸಹಸಾಸವಾಗಿ ಮೇಳವಿಸಿ ಪ್ರಜಾಪ್ರಭುತ್ವದ ಸ್ವರ್ಣಯುಗವನ್ನು ತರುವುದೆಂದು ಸೂಚಿಸುತ್ತಾ ವ್ಯಕ್ತಿಯ ಮಾನಸಿಕ ಸ್ವಾತಂತ್ರ್ಯಕ್ಕೆ ಶತ್ರುಗಳ್— ವಾರ್ತಾ ಸ್ವಾತಂತ್ರ್ಯಕ್ಕೆ ಜನತೆಗೂ ಅನಿವಾರ್ಯ ಮತ್ತು ಪ್ರಭುತ್ವದ ಪ್ರತಿಕ್ರಿಯೆಯನ್ನು ಗ್ರೀಕ್ ತತ್ವಜ್ಞಾನಿ ಪ್ಲೆಟೊ ಬಗೆಪರಿಸಿದ ರೀತಿಯನ್ನು ಕೆ. ಬಿ. ರಾಮಕೃಷ್ಣರಾಯರು ವಿವರಿಸುತ್ತಾ 'ಈ ಎರಡು ವಸ್ತುಗಳಲ್ಲಿ ವಿರೋಧವಿಲ್ಲ ಕೇವಲ ತೋರಿಕೆಗೆ ಮಾತ್ರ ಎಂಬುದಾಗಿ ಪ್ಲೇಟೊ ಸಮರ್ಥಿಸುವ 'ಸಾರ್ವದೇಶಿಕ ನ್ಯಾಯ'ವನ್ನು ಒಪ್ಪಿಕೊಂಡಲ್ಲಿ ಅವರ ಗರ್ಭದಲ್ಲಿಯೇ ವ್ಯಕ್ತಿಯೂ ಪ್ರಭುತ್ವವೂ ಮಧುರವಾಗಿ ಮಿಲನ ಹೊಂದಿ ಎರಡರ ಕನಸೂಲನದಿಂದ ಎಲ್ಲಾ ಕಾಲದ ಎಲ್ಲಾ ದೇಶದ ರಾಷ್ಟ್ರಗಳಿಗೆ ಆಧಾರಸ್ವರೂಪವಾದ ತತ್ವವು ಉತ್ಪನ್ನವಾಗುವುದೆಂಬುದಾಗಿ ಹೇಳಿದರು.

ವ್ಯಕ್ತಿಯ ಪ್ರಭುತ್ವ

ಫ್ರೆಂಡ್ ತತ್ವಜ್ಞೇತ್ರವಾದ ರೂಸೊನ ವಿಚಾರಗಳ ಕುರಿತು ಆಡಿದ ಫ್ರೆಂಚ್ ತ್ಯಾಗರಾಜನ ಆನರು ರೂಸೊವಿನ ಜನಪ್ರಿಯ "ಜನರಾ ಸಾಮಾನ್ಯಭಿಪ್ರಾಯತ್ವ"ವನ್ನು ವಿವರಿಸುತ್ತಾ ಆ ವಿಚಿತ್ರ ವ್ಯಕ್ತಿಯ ವಿಚಾರ ಸರಣಿಯಲ್ಲಿರುವ ವಿರೋಧಗಳನ್ನೂ ನಿರೋಧಾಭಾಸಗಳನ್ನೂ ಸ್ಪಷ್ಟೀಕರಿಸಿದರು. ಮುಂಗೊರೂನ ಶ್ರೀ ವಾಸುದೇವ ರಾಯರು ಭಾರತವು ಏಕೀಕರಿಸಿದ ಪ್ರಜಾಪ್ರಭುತ್ವದ ಮಾದರಿಗೆ ಶಾತನಂತಿರುವ ಅಂಗ್ಲ ವಿಚಾರಕ ಮಿಲ್‌ಮಾತಾರಯನ ನೆಲೆಯಿಂದ ಮಾತನಾಡಿ ಒಂದೆರಡು ಸಂದರ್ಭಗಳನ್ನು ಬಿಟ್ಟರೆ ಇತರ ಎಲ್ಲಾ ಪ್ರಸಂಗಗಳಲ್ಲಿಯೂ ರಾಷ್ಟ್ರದ ಶಕ್ತಿಯು ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅನುಪಾತಿಯಾಗಿರಬೇಕೆಂಬ ಅಭಿಪ್ರಾಯವನ್ನು ಸಾಧಾರವಾಗಿ ಮಂಡಿಸಿದರು. ಇಪ್ಪತ್ತನೆಯ ಶತಮಾನವ ಪ್ರಪಾಸ್ಮಿಕ ರಾಜನೀತಿಜ್ಞ ಹೆರೊಲ್ಡ್ ಲಾಸ್ಕಿಯು ಮಿಲ್ ಮತ ಪ್ರಾರಂಭನ ಸ್ವಾತಂತ್ರ್ಯಕ್ಕ ತತ್ವಕ್ಕೆ ಪೂರಕವಾಗಿಯೂ ಔದ್ಯೋಗಿಕ ಸಮಾಜಗಳಿಗೆ ಆನವಾರ್ಯವಾಗಿಯೂ ಇರುವ ಸಮಾನತೆಯ ತತ್ವವನ್ನು ಪಶಿಷ್ಟವಾಗಿ ಪ್ರಜಾಸರಿಗೊಳಿಸಿ ಸಾಮಾಜಿಕ ನ್ಯಾಯವೇರ್ಪಡುವಂತೆ ಕಟ್ಟಿದ ವಿಚಾರ ಪಂಥಗಳನ್ನು ಕುರಿತು ಕಾಲಿ ಏಳುವರು ಮಂಡಿಸಿದರು. ಕೊನೆಯದಾಗಿ "ಪ್ರಗತಿಗೆ ಬೇಕಾಗುವಷ್ಟು ಸ್ವಾತಂತ್ರ್ಯವನ್ನು ನಾಗರಿಕತೆಯ ಉಳಿವಿಗೆ ಬೇಕಾದಷ್ಟು ಸಮಾಜ ಸಂಘಟನೆಯೊಡನೆ ಸಮರಸಗೊಳಿಸುವುದು ಹೇಗೆ" ಎಂಬುದೇ ನಮ್ಮ ಯುಗದಲ್ಲಿ ಕಾಡಿಸಿರುವ ಸಮಸ್ಯೆ ಎಂದು ಹೇಳುತ್ತಾ ಈ ಪ್ರಶ್ನೆಯನ್ನು ತತ್ವಜ್ಞಾನಿ ರಸ್ಕಿಲ್ ಆವರು ಆರಾಜಕವಾದದಿಂದ ಹಿಡಿದು ಸಮಾಜವಾದದ ವರೆಗಿನ ಸೂಸವಾದದಕಳವರಿಯ ಮೇಲೆ ಬಗೆಪರಿಸಿ, ವ್ಯಕ್ತಿಯ ಪ್ರಭುತ್ವವನ್ನು ಆಧಾರವಾಗಿಟ್ಟುಕೊಂಡು ಸಾರ್ವಭೌಮತ್ವವನ್ನು ಸ್ಥಾಪಿಸಿದ ರೀತಿಯನ್ನು ಶ್ರೀ ಕು. ಶಿ. ಹರಿದಾಸ ಭಟ್ಟರು ಸಾಧಿಸಿದರು.

(೧೦ನೇ ಪುಟದಿಂದ)

ಭಾರತಕ್ಕೆ ಮಾಡಿಕೊಡಲು ಹೋದ ಇವರು ಪಾಕಿಸ್ತಾನದೇ ಅಕ್ರಮಣ ಗೈದ ರಾಷ್ಟ್ರವೆಂದು ಭದ್ರತಾ ಮಂಡಳಿ ಸಾರಿಂದು ದನ್ನು ಮಾತ್ರ ನುಡಿಸಾಡಿದರು. ಆದಾಗ್ಯೂ ಉಭಯ ರಾಷ್ಟ್ರಗಳಲ್ಲಿ ಸ್ನೇಹ ಶಾಂತಿಗಳು ನೆಲೆಗೊಳ್ಳುವಂತೆ ಕ್ಲೋಕ್, ಪಾಸಸ್ತಾ ಪಡಗನ್ನು ಪರಿಹರಿಸುವುದು ಆಗ ವ್ಯವೆಂದು ಸ್ಪತಪಡಿಸಿದರು.

ಆದು ಹೇಗೆ ಸಾಧ್ಯ ಎಂಬ ಪ್ರಶ್ನೆಗೆ ಆವರು ವಿವರವಾದ ಉತ್ತರವನ್ನೇನೂ ಕೊಡಲಿಲ್ಲ. ಆದರೆ ಯುದ್ಧವು ಕಾಶ್ಮೀರ ಪ್ರಶ್ನೆಯ ಇತ್ಯರ್ಥಕ್ಕೆ ಸೋಪಕವಾದ ಅಂಶವೆಂಬ ಸೂಚನೆಯನ್ನು ಮಾತ್ರ ತಿರಸ್ಕರಿಸಿದರು. ಪರಿಷತ್ತಿನಲ್ಲಿ ಏನಾದರೂ ಒಂದು ಒಳ್ಳೆಯ ಮಾತು ಬಂದಿದ್ದರೆ ಇನ್ನೊಂದೆ! ಅಮೇರಿಕದ ಸೈನ್ಯ ಸಹಾಯದಿಂದ ಕಾಶ್ಮೀರ ಸ್ವಸ್ಥಿಯನ್ನು ಬಿಡಿಸುವ ಆತುರ ತೋರಿಸಿದ್ದ ಹಿಂದಿನ ಮಹಿಮ್ಮದಾಲಿಗಳ ಸ್ಥಾನದಲ್ಲಿ ಈ ಚಾಧುರಿ ಮಹಮ್ಮದಾಲಿಗಳು ನಿಂತು ಪ್ರಕಟಿಸಿದ ಸಮಾಧಾನಕರ ವಾದ ಏಕ ಮಾತ್ರ ವಿಷಯ ಇವಾಗಿದೆ. ಭಾರತೀಯರು ಇದನ್ನು ನಿಜಕ್ಕೂ ಮೆಚ್ಚುತ್ತಾರೆ—ಈ ನೀತಿಯಾದರೂ ಪೆಚ್ಚು ತಿಳಿವಳಿಕೆಯನ್ನು ವಿಘಟಿಸಲಿ ಎಂದು ಹಾರೈಸುತ್ತಾರೆ.

ಅಲ್ಲವೆ "ಯುದ್ಧವಿಲ್ಲ" ಎಂಬ ಘೋಷಣೆಯನ್ನು ಹೊರಡಿಸಿದರೆ, ಉಭಯ ರಾಷ್ಟ್ರಗಳ ಸಮ್ಮತ ಏಂವರ್ತನೆಯಾಗುವುದೆಂದು ಬಹಳ ಹಿಂದೆಯೇ ಭಾರತ ಸರಕಾರವು ಮಾಡಿದ್ದ ಪೂಹನೆಯನ್ನು ಪಾಕಿಸ್ತಾನವು ಈಗಲಾದರೂ ಒಪ್ಪಿಕೊಂಡರೆ ಲೇಸೆಂಬ ಭಾವತೀಯರ ಸಾಮಾನ್ಯ ಆಭಿಪ್ರಾಯ. ಈ ಆಭಿಪ್ರಾಯವು ಪಾಕಿಸ್ತಾನದ ಪರವಾಗಿಯೂ ವಿನಿಯುಗೊಂಡರೆ ಕಾಶ್ಮೀರ ಪ್ರಶ್ನೆಯನ್ನು ಬಿಡಿಸುವುದೆ. ಕಷ್ಟವಾಗಲಾರದು. ಆದರೆ 'ಜೆ-ಡಿ' ಕೂಗನ್ನು ತಲೆವತ್ತಿಗೊತವಿರುವತ್ತ ಶಕ್ತಿಯು ಆಂತರಿಕ ನೈತಹಾರವು ತೀವ್ರ ಕಷಿಮಿಬಿನ್ನಿರುವ ಪಾಕಿಸ್ತಾನದ ಪರಕಾರಕ್ಕೆ ಇನ್ನೂ ಬಂದಿಲ್ಲ: ಆನ್ಯಥಾ ಅದು ಹೀಗಾಯವಾದ ಆರೋಪಗಳನ್ನು ಭಾರತದ ಮೇಲೆ ಮಾಡುತ್ತಿರಲಿಲ್ಲ. ಕಾರಣ ಲೋಕದ ಮುಂದೆ ಭಾರತದ ತಪ್ಪನ್ನು ವರ್ಣಿಸಲು ಹೋಗುವುದಕ್ಕಿಂತಲೂ ತನ್ನ ಆಂತರಿಕ ಪರಿಸ್ಥಿತಿಯನ್ನು ಸುಧಾರಿಸಿ, ಜನರಿಗೆ ಶಾಂತಿ ಸುಖಗಳನ್ನೊದಗಿಸಲು ಪಾಕಿಸ್ತಾನವು ನೋಡಿತರೆ, ಆಗ ಕುಸಿತ ಜನರನ್ನು ಕಾಶ್ಮೀರತತ್ವ ಮುಖಮಾಡಿ ಸಿಲ್ಲಿಸುವ ಆಗತ್ಯ ಬರಲಾರದು ಎಂದೂ ಇಲ್ಲಿ ಸೂಚಿಸುತ್ತಿದೆಳಿತು.

In the Court of the District Munsif of Mangalore. South Kanara.

O. S. No. 490 of 1955.

Ramayya Shetty and another— Plaintiffs.

Vs

Maroli Bhasker, son of Maroli Babu, Cloth Merchant, Maroli Village, Mangalore Town. — Defendant.

To — Defendant,

Take notice that the above-named plaintiffs have instituted the above suit for possession of the leasehold property along with rental and mesne profits and the said suit stands posted to 19—12—1955 at 11 A. M. for final disposal. You are warned to appear on that date failing which the suit will be decided exparte.

B. S. Kakkilaya,
Advocate for Plaintiffs.

Mangalore, 30—11—1955.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ನಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮಂಗಳೂರು, ಹುಬ್ಬಳ್ಳಿ.

ನಾಲ ಸ್ವಂತ ಜಪಾಜ್ಞೆಯ ಮೇಲೆ ಹೊರಡುತ್ತದೆ ಸುಲಭ ಕಂತಿನ ಮರುವಾವತಿ. ಇಂದ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಯನ್ನು ಕಳುಹಿಸಿರಿ.

P. O. Box No. 3219, BOMBAY 3.

ಸಂಶೋಧನೆಯ ಬೆಳವಣಿಗೆ

ವ್ಯಾಪಾರ ಕ್ಷೇತ್ರದ ಪ್ರತಿನಿಧಿಗಳ ಪಾತ್ರ

ದಕ್ಷಿಣ ಕನ್ನಡ ಜಿಲ್ಲೆಯ ಆಡ್ಯನಡ್ಕದ ಶ್ರೀ ಜೆ. ವಿ. ಭಟ್ಟ ಎಂಬ ಸುತ್ತಿಕ್ಷಿತ ತರುಣನು ನವಿಧೋಪಯೋಗಿ ಪಂಪೊಂದನ್ನು ಕಂಡು ಹಿಡಿದಿದ್ದಾರೆಂಬ ಇನು ರೈತರಿಗೆ ಬಹಳ ಲಾಭಯುಂಟಾಗಬಲ್ಲುದೆಂದೂ ವರದಿಗಳು ಬಂದಿವೆ. ಜಿಲ್ಲಾ ಕಲೆಕ್ಟರರೇ ಮುಂತಾದವರು ಈ ಹೊಸ ಯಂತ್ರದ ಕುರಿತು ಆಸಕ್ತಿ ತೋರಿಸಿರುವರಾಗಿಯೂ ತಿಳಿದು ಬರುತ್ತದೆ.

ಶ್ರೀ ಭಟ್ಟರ ಪಂಪು ಯಾವುದೇ ತರದ ಎಣ್ಣೆ ಆಥವಾ ಕಲ್ಲಿದ್ದಲು ಆಥವಾ ವಿದ್ಯುಚ್ಛಕ್ತಿಯನ್ನು ಉಪಯೋಗಿಸದೆ ನೀರಿನ ಪ್ರವಾಹದ ಒತ್ತಡದಿಂದಲೇ—ಅದು ತೀರ ಕಡಿಮೆಯಾಗಿದ್ದರೂ—ಕೆಲಸಮಾಡುತ್ತದೆ. ಬಾವಿ ಮತ್ತು ಕೆರೆಗಳ ನೀರನ್ನೆತ್ತುವುದಕ್ಕೂ ಆಡಿಕೆ ತೋಟದ ಮಂಜಾಗಿ ರೋಗ ನಿವಾರಣೆಗಾಗಿ ಔಷಧವನ್ನು ಚಿಮುಕಿಸುವುದಕ್ಕೂ ಇದನ್ನು ಉಪಯೋಗಿಸಬಹುದು. ಚಿಕ್ಕ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಧ್ಯತೆಯೂ ಈ ಯಂತ್ರಕ್ಕಿದೆ ಎಂದು ಪರಿಣಿತರ ಅಭಿಪ್ರಾಯ.

ಇಂಥ ಉಪಯುಕ್ತ ಸಂಶೋಧನೆಗಳು ಆದಷ್ಟು ಹೆಚ್ಚಾಗಬೇಕು; ಅಲ್ಲದೆ ಅವುಗಳಿಗೆ ಜನರಿಂದಲೂ—ಅದಕ್ಕೂ ಹೆಚ್ಚಾಗಿ ಸರಕಾರದಿಂದಲೂ—ಪ್ರೋತ್ಸಾಹ ಸಿಗಬೇಕು. ಸಾಮೂಹಿಕವಾಗಿ ಶ್ರೀ ಭಟ್ಟರ ಯಂತ್ರವನ್ನು ಸಿದ್ಧಪಡಿಸಿದರೆ ಒಂದೊಂದಕ್ಕೆ ಐನೂರು ರೂಪಾಯಿಯನ್ನು ಕಡಿಮೆ ಕರ್ಚು ಬೀಳಬಹುದೆಂದು ಹೇಳಲಾಗುತ್ತದೆ. ಈ ಯಂತ್ರದಲ್ಲಿ ಕೆಲವು ಬದಲಾವಣೆಗಳ ಅವಶ್ಯಕತೆ ಬೇಳಬಹುದಾದರೂ ಇಂಥ ಸಾಹಸಗಳನ್ನು ಬೆಂಬಲಿಸುವುದು ಸರಕಾರದ ಕರ್ತವ್ಯ.

ಆದರೆ ನಮ್ಮ ಸರಕಾರಗಳು ಹೊಸ ಪ್ರಯೋಗಗಳಿಗೆ ಉತ್ತೇಜನೆಯನ್ನು ನೀಡುತ್ತಿವೆಯೆ? ಎಂದು ಕೇಳಿದರೆ ನಿರಾಶೆಯ ನಿಟ್ಟುಸಿರನ್ನು ಬಿಡಬೇಕಾಗುತ್ತದೆ. ಕನ್ನಡದಲ್ಲಿ ಟೈಪ್‌ರೈಟರ್ ಯಂತ್ರಕ್ಕೆ ಸಂದರ್ಭೋಚಿತವಾದ ರೂಪವೊಂದನ್ನು ಕೊಡಲು ನನುಗಿನ್ನೂ ಸಾಧ್ಯವಾಗಿಲ್ಲ; ಬಳಕೆಯ ಕನ್ನಡವೇ ಅಲ್ಲವೆನ್ನುವಷ್ಟು ಸುಟ್ಟು ನ ಲಿಪಿ ಸುಧಾರಣೆಯುಳ್ಳ ಟೈಪ್‌ರೈಟರ್ ಯಂತ್ರವನ್ನು ಕನ್ನಡ ರಾಜ್ಯವಾಪ ಮೈಸೂರು ಸರಕಾರ ನೇಮಿಸಿದ ತಾತಾಚಾರ್ಯ ಸಮಿತಿ ಶಿಫಾರಸುಮಾಡಿದೆ; ಲಿಪಿ ಬದಲಾವಣೆ ಇರದ ಯಂತ್ರಗಳ ಸೃಷ್ಟಿಯಾಗಿದ್ದರೂ ಅದನ್ನು ಸರಕಾರ ಬೆಂಬಲಿಸಿಲ್ಲ. ಸರಕಾರದ ಬೆಂಬಲವಿಲ್ಲದೆ, ಮಾನ್ಯತೆ ಇಲ್ಲದೆ, ಪ್ರಾಯೋಗಿಕ ನುಟ್ಟಿಕ್ಕಿಂತ ವ್ಯವಹಾರದಲ್ಲಿ ಬಳಕೆಗೆ ಪಂಪು ಯಂತ್ರಗಳ ಸೃಷ್ಟಿಯಾಗುವುದು ಕಷ್ಟ.

ಹೊಸ ವಿಚಾರಗಳನ್ನು ಅವುಗಳ ಪ್ರಯೋಜನಾಂಶ ಕಣ್ಣಿಗೆ ಸ್ಪಷ್ಟವಾಗಿ ಗೋಚರಿಸುತ್ತಿರುವಾಗಲಾದರೂ ಆಸಕ್ತಿಯಿಂದ ಪರೀಕ್ಷಿಸುವ ತೆರೆದ ಮನೆಯನ್ನಿಲ್ಲಿದೆ ಸಂಶೋಧನೆಯ ಕ್ಷೇತ್ರದಲ್ಲಿ ಪ್ರಗತಿ ಸಾಧಿಸುವಂತಿಲ್ಲ. ದುರ್ದೈವದಿಂದ ಇಂದು ನಾವು ಜಗತ್ತಿನಲ್ಲಿ ಅನುಭವಿಸುವ ಎಲ್ಲ ಸೌಕರ್ಯಗಳನ್ನು ಸೃಷ್ಟಿಸಿದವರೂ ಅವ ಹೇಳನೆಗೆಯೇ ತಮ್ಮ ಜೀವಮಾನ ಕಾಲದಲ್ಲಿ ಗುರಿಯಾದರು; ಹೊಸತು ಗಾರನವನ್ನು ಆವರಿಗೆ ಕೊಟ್ಟವರಿಲ್ಲ. ಕೇಳಲು ಆತ್ಮವಿಶ್ವಾಸದ ಬಲದಿಂದಲೇ ಅವರು ವಿಕ್ಷಿಪ್ತರಾಗಿ ಪ್ರತಿ ಕೂಲ ಪರಿಸ್ಥಿತಿಯನ್ನು ಎದುರಿಸಿದರು. ಅಮೇರಿಕದ ಜನರಲ್ ಇಲೆಕ್ಟ್ರಿಕ್ ಸಂಸ್ಥೆಯ ಉಪಾಧ್ಯಕ್ಷರಾಗಿದ್ದ ದಿವಂಗತ ಚಾರ್ಲ್ಸ್ ಡಬ್ಲ್ಯು. ಆ್ಯಕ್ಲ್ಟಿನ್ ತಮ್ಮ ಕಂಪೆನಿಯ ವ್ಯವಹಾರದ ಕುರಿತು ಮಾತನಾಡುವಾಗ ಒಂದು ಸಲ ಹೇಳಿದ್ದರು—"ನಮದಿಮ್ಮೂರು ವರ್ಷಗಳ ಹಿಂದೆ ಕೇವಲ ಕೆಲವು ವ್ಯಕ್ತಿಗಳ ಮನಸ್ಸಿನಲ್ಲಿದ್ದ ಎಷ್ಟೋ ಸುಧಾರಿತ ಸಾಧನೆಗಳೇ ನಮ್ಮ ಕಂಪೆನಿಯ ಒಟ್ಟು ವ್ಯಾಪಾರದಲ್ಲಿ ೬೦% ಪ್ರಮಾಣವನ್ನು ಆವರಿಸುತ್ತಿವೆ. ಆದರೆ ಮೊದಲು ಈ ಸರಕುಗಳ ಕುರಿತು ಆಸಕ್ತಿಯನ್ನು ಜನರು ತೋರಿಸಲೇ ಇಲ್ಲ. ಅಲಾಸ್ಕದಲ್ಲಿ ಸ್ಟಾಬೆರಿ ಹಣ್ಣನ್ನು ಬೆಳೆಸುವ ಅಭಿವೃದ್ಧಿಕಾರದ ಮೇಲಿಂದ್ದ ಹಾಣಿಕೊಂಡು ಹೋಗುವ ವಿಚಾರದಲ್ಲಿ ಈ ಸೌಲಭ್ಯಗಳೂ ಹುರುಳಿಲ್ಲದವೆಂಬ ಉಪೇಕ್ಷೆ ಜನರಲ್ಲಿದ್ದಿತು."

ಇಂದು ಅಲಾಸ್ಕದಲ್ಲಿ ವರ್ಷಕ್ಕೆರಡು ಸಲ ಸ್ಟಾಬೆರಿ ಹಣ್ಣಿನ ಪೈರನ್ನು ಕೊಯ್ಯಲಾಗುತ್ತದೆ; ಗಗನವಲ್ಲಿ ಹಾರಿಹೋಗುವುದು ನಿತ್ಯದ ವಿಷಯವಾಗಿದೆ. ಉಸಿಮೆಗಳನ್ನು ಕೊಟ್ಟು ಮಾತನಾಡಿದ ಆ್ಯಕ್ಲ್ಟಿನ್ ಜನರು ನಿರರ್ಥಕ ವೆಂದುಕೊಂಡಿದ್ದ ವಿಷಯಗಳು ನಿಜವಾಗಿ ಎಷ್ಟು ಪ್ರಯೋಜನವನ್ನು ತಂದುಕೊಟ್ಟಿವೆ ಎಂಬ ಮಾರ್ಮಿಕವಾಗಿ ನುಡಿದರೆಂದು ಹೇಳಲು ಆಡ್ಡಿಯಿಲ್ಲ.

ಸಾಮ್ಯುವೆಲ್ ಸೂರ್ಸೆ ಅಮೇರಿಕದ ಕಾಂಗ್ರೆಸಿನ ಮುಂದೆ ತಂತಿ ಯಂತ್ರವನ್ನು ಇಟ್ಟು, ಅದು ಜನರಿಗೆ ತನ್ನ ಬಯಮಾನ ಎಂದು ಹೇಳಿದರು ಆಗ ಸಾರ್ವಜನಿಕ ಸಂಪರ್ಕ ವ್ಯವಸ್ಥೆಯ ಹೊಣೆಯನ್ನು ಹೊತ್ತಿದ್ದ ಟಿಫ್ಪಾಲು ಖಾತೆಯ ಉನ್ನತಾಧಿಕಾರಿಗಳು ಈ ಯಂತ್ರಕ್ಕೆ ಯಾವ ವ್ಯಾವಹಾರಿಕ ಮೂಲ್ಯವೂ ಇಲ್ಲವೆಂದು ಮೂರ್ಸೆಯ ಕೊಡುಗೆಯನ್ನು ತಿರಸ್ಕರಿಸಿದರು!

ಪ್ರಸಿದ್ಧ ಪತ್ರಿಕೆಯೊಂದು ಎಡಿಸನ್ ಎಂಬ ವ್ಯಕ್ತಿಯ ತಾನು ಆನಿಲ ನೀಪಗಳ ಸ್ಥಾನದಲ್ಲಿ ವಿದ್ಯುದ್ದೀಪಗಳನ್ನು ಉರಿಸುವುದಾಗಿ ಪುರುಷು ತೋರಿಸುತ್ತಿರುವನೆಂದೊಮ್ಮೆ ಬರೆಯಿತು. ಆದರೆ ಲಂಡನ್ನಿನ ಪಾರ್ಲಿಮೆಂಟು ಅ ನಗರದ ಬೀದಿಗಳನ್ನೆಲ್ಲ ಈಹೊಸ ಬಗೆಯ ದೀಪಗಳಿಂದ ಅಲಂಕರಿಸುವ ಸೂಚನೆಯನ್ನು ತಿರಸ್ಕರಿಸಿತು. ಸಂಬಂಧಿಸಿದ ಸಸ್ಥಿತಿಯ ಅಧ್ಯಕ್ಷರನ್ನು ಎಡಿಸನ್ನನೊಡನೆ ವಿಚಾರ ವಿನಿಮಯಕ್ಕೆ ಕಳಿಸಿ ಸೂಚನೆಯು ತಿಕ್ಷಸ್ಕಾರಯೋಗ್ಯವೆಂಬ ತೀರ್ಮಾನಕ್ಕೆ ಬಂದಿರಾ ಎಂದು ಕೇಳಿದಾಗ ವಿಡಿಸನನಿಗೆ ಯಾವ ವೈಜ್ಞಾನಿಕ ನೆರೆಯೂ ಇಲ್ಲವೆಂಬ ಬಿರುನುಡಿಯೆ ಉತ್ತರವಿ ಬಂದಿತು.

ನಿತ್ಯವೂ ಇಂದು ಲಕ್ಷಾಂತರ ಜನರ ಉಪಯೋಗಕ್ಕೆ ಬೀಳುತ್ತಿರುವ ಟೆಲಿಫೋನಿನ ಕತೆ ಯಂತೂ ಇದೇ ಉಪಾಹಾಸತೆಯ ಸಮಾಧಿಯ ಮೇಲೆ ನಿಂತಿದೆ—ಸಂಗೀಯ ಮೂಲಕ ಮಾತನಾಡಬಬಹುದು ಎಂದು ಪ್ರಚಾರ ಮಾಡುತ್ತಿದ್ದ ವ್ಯಾಪಾರಿಗಳ ಪ್ರತಿನಿಧಿಗಳಿಗೆ ಮರುಳಾಗುತ್ತಿದ್ದ "ತಿಳಿಗೇಡಿ" ಜನರನ್ನು ತಿದ್ದಿ, ಅವರಲ್ಲಿ ವಿವೇಕವನ್ನು ತುಂಬಿಸುವುದಕ್ಕೆಯೇ ಟೆಲಿಫೋನಿನ ಪ್ರಥಮ ದಿನಗಳಲ್ಲಿ ಸುರಿಸ್ಥಿತರೂ ಆಧ್ಯರೂ ಬುದ್ಧಿ ಚಂತರೂ ಪ್ರಯತ್ನಿಸುತ್ತಿದ್ದರು. ಸಮಾಜದ ಈ ಪ್ರತಿನಿಧಿತರ ಯೋಗ್ಯತೆ ಎಷ್ಟಿದ್ದರೆಬಯಸಬೇಕೆಂದು ನಾವೀಗ ನಕ್ಕು ಲೆಕ್ಕ ಮಾಡಬಹುದು.

ಹಕ್ಕಿಯಂತೆ ಮನುಷ್ಯನೂ ಹಾರಬಹುದು ಎಂದು ಹೊಸ್ಸಾಂಗಲೀ ಹೇಳಿದಾಗ ಜನ ರೆಲ್ಲರೂ ಆತನನ್ನು ಅಪಹಾಸ್ಯ ಮಾಡಿದರು. ಈ ಹೊಸ್ಸಿಲ್ಸ್ ಬಹಳ ಭಾವನಾಜೀವಿ; "ಹಕ್ಕಿಯ ತೆರದಲಿ ಪಕ್ಕಗಳಿದ್ದರೆ ಗಿಕ್ಕನೆ ಗಗನಕೆ ಹಾರುತಲಿದ್ದೆ" ಎಂಬ ಕಲ್ಪನೆಯು ನೂಡಿ ಬರುವಷ್ಟು ಭಾವನೆ ತೀವ್ರವಾಗುಳ್ಳ ಈ ವ್ಯಕ್ತಿ ಅಪಹಾಸ್ಯದ ಏಟುಗಳನ್ನು ತಡೆದುಕೊಳ್ಳುವನ್ನು ಮಾನಸಿಕ ಸ್ಥೈರ್ಯವಿಲ್ಲದೆ ಜೀವಾರ್ಪಣೆ ಮಾಡಿದರು. ನೂತನ ಸಂಶೋಧನೆಯು ಉತ್ಪಾಪಹ ಆವರ ಪ್ರಾಣವನ್ನೆ ಹಿಂಡಿ ಬಲಿತೆಗೆದುಕೊಂಡಿತ್ತು ಎನ್ನುವುದಕ್ಕಿಂತ ಜನರ ತಿರಸ್ಕಾರವೇ ಕೊಂದಿತೆಂದು ಇಂದು ಹೇಳಬಹುದು.

ಬಲವು ವರ್ಷಗಳ ಹಿಂದೆ" ಪೇಟೆಂಟ್" (ಅಂದರೆ ನೂತನ ವಸ್ತುಗಳ ಸ್ವಾಮ್ಯವನ್ನು ತಮ್ಮ ಹೆಸರಲ್ಲಿ ಸ್ಥಾಪಿಸಿ, ಬೇರೆ ಯಾರೂ ಅವುಗಳನ್ನು ನಕಲಿಯಾಗಿ ಉತ್ಪಾದಿಸದಂತೆ ಕಡೆಗಟ್ಟಲು ತೆಗೆದುಕೊಳ್ಳುವ ಕ್ರಮ) ಪಾಬಲ್ಯ ಮಾಡಿಕೊಳ್ಳಲು ಬರುವ ಸಂಶೋಧಕರನ್ನು ಗಾಳಿಯಲ್ಲಿ ಹಾರಾಡುತ್ತಿರುವಮಷ್ಟಕೆರೆದು ಆ ಕಾರ್ಯಾಲಯದ ಜನರು ಜರೆಯುತ್ತಿದ್ದರು.

ಸಂಜ್ಞಾಸಂಪರ್ಕ ಶಾಸ್ತ್ರದ ಜನಕನೆಂದು ಹೆಸರಾದ ಮೇಜರ್ ಜನರಲ್ ಜಾರ್ಜ್ ಸಿ. ಸ್ಕಾಟ್ಯರ್ ಒಂದು ಘಟನೆಯನ್ನು ಪುತಾಕತೆಯೆಲ್ಲಿ ಪ್ರಸ್ತಾಪಿಸುತ್ತಿದ್ದರು. ಒಮ್ಮೆ ಆವರು ಯಾವುದೋ ಆದಿತ್ಯವಾರ ಒಂದು ಹೊಸ ವಿಚಾರದ ಪ್ರಯೋಗ ನಡೆಸಲಿಕ್ಕೋಸ್ಕರ ತಂತಿ ಯಂತ್ರವನ್ನು ಉಪಯೋಗಿಸಲು ಬಿಡಬೇಕೆಂದು ಬ್ರಿಟಿಷ್ ಸರಕಾರವನ್ನು ಕೇಳಿಕೊಂಡರಂತೆ; ಆವರನ್ನು ಒಂದು ವಿಚಾರವಾದ ಕೋಡೆಗೆ ತಂದು ಬಿಡಲಾಯಿತು. ಆ ಕೋಡೆಯಲ್ಲಿ ಮಾರ್ಕೊನಿ ಎಂಬ ತರುಣ ಕುಳಿತಿದ್ದನು. ರೇಡಿಯೋದ ಕುರಿತು ನಡೆಸುತ್ತಿದ್ದ ಪ್ರಯೋಗಗಳಿಂದಾಗಿ ಜನರನ್ನೆಲ್ಲ ಚೇಸರ ಪಡಿಸುತ್ತಿದ್ದನೆಂಬ ಅಪಾದನೆಯ ಮೇಲೆ ಸೆರೆ ಮನೆವಾಸದ ಶಿಕ್ಷೆಗೆ ಇಟ್ಟಲಿಯಲ್ಲಿ ನಿಯೋಗಿಯಾಗಿದ್ದ ಪಾರ್ಕೊನಿಯೇ ಈತ! ಅಲ್ಲಿಯ ಶಿಕ್ಷೆಯನ್ನು ತಪ್ಪಿಸಿಕೊಳ್ಳಲಿಕ್ಕಾಗಿ ಅವನು ಇಂಗ್ಲೆಂಡಿಗೆ ಓಡಿ ಬಂದಿದ್ದನೆಂಬುವರೆ ಮೇಲಿಂದ ಜನರ ಭಾವನೆಯನ್ನು ಅಳೆಯಬಬಹುದು.

ಮೇಲಿನೆಲ್ಲ ನಿದರ್ಶನಗಳು ಪ್ರಾಚೀನ ಪುರಾಣದ ಕಂತೆಗಳಲ್ಲ—ಅಧುನಿಕ ಇತಿಹಾಸದ ಸುವರ್ಣ ಪುಟಗಳಲ್ಲಿ ಇವು ಉಲ್ಲೇಖಗೊಂಡಿವೆ. ನಮ್ಮ ಸಮಾಜದ ಬುದ್ಧಿವಂತರು ಪ್ರಗತಿಯನ್ನು ಹೇಗೆ ಹಿಡಿಯುತ್ತಿದ್ದರು; ಅವರು ಹೊಸತೆಂಬ ಕಾರಣಕ್ಕಾಗಿಯೂ ಕುತೂಹಲವನ್ನು ತೋರಿಸದೆ ಸಂಪ್ರದಾಯಪ್ರಿಯತೆಯಿಂದ ಹುಟ್ಟಿದ ಉಪೇಕ್ಷೆಯನ್ನೂ ಮಿಥ್ಯಾಭಿಮಾನ ಪ್ರೇರಿತ ಸಂಯಮವನ್ನೂ ಹೇಗೆ ಪ್ರಕಟಿಸುತ್ತಿದ್ದರು—ಎಂಬುವನ್ನು ಇವು ಸ್ಪಷ್ಟಗೊಳಿಸುತ್ತಿವೆ. ಆದರೆ ಇಂಯ ಹೊಸ ಶೋಧನೆಗಳನ್ನು ಜಗತ್ತು ಹೆಚ್ಚು ಸೌಹಾರ್ದ ದೃಷ್ಟಿಯಿಂದ ಸಾಮಾನ್ಯವಾಗಿ ನೋಡುತ್ತಿದೆ. ೧೦ ಕೋಟಿ ಅಶ್ವ ಶಕ್ತಿಯುಳ್ಳ ರಾಕ್ಷಸ ಯಂತ್ರಗಳನ್ನೂ ಸಾವಿರಾರು ಎಕ್ಕೆ ಉಳಬಲ್ಲ ಟ್ರಾಕ್ಟರುಗಳನ್ನೂ ತಾಸಿಗೆ ಎಂಟು ನೂರು ಮೈಲು ಓಡಬಲ್ಲ ವಿಮಾನಗಳನ್ನೂ ಜತ್ತಿನ ಯಾವ ಮೂಲೆಯ ಸುದ್ದಿಯನ್ನಾದರೂ ಕೊಡಬಲ್ಲ ರೇಡಿಯೋಗಳನ್ನೂ ಎಷ್ಟು ಸಮಯದ ಪರಿಣಾವರೂ ಆಹಾರವನ್ನು ಕೆಡದೆ ರಕ್ಷಿಸಬಲ್ಲ ಶೀತಾಲಯಗಳನ್ನೂ ಕಂಡು ಜನರು ಬೆರಗುಬ್ಬದಿಲ್ಲ; ಮೂಗು ಮುರಿಯುವುದೂ ಇಲ್ಲ

ಹಾಗಾದರೆ ಜನರು ಹೊಸ ವಿಚಾರಗಳಿಗೆ ತೆರೆದಮನಸ್ಸಿನ ಸ್ವಾಗತವನ್ನಿತ್ತಿರೆಂದಿಗೂ ಇಲ್ಲ! ಅಮೇರಿಕಾ ಮುಂತಾದ ದೇಶಗಳು ಭಾತಿಕ ಸೌಕರ್ಯ ಸಾಧನಗಳನ್ನು ವಿಶೇಷವಾಗಿ ಇಂದು ಉಪಯೋಗಿಸುತ್ತಿದ್ದರೆ, ಅವು ಹೊಸ ಭೂಖಂಡಗಳೆಂಬ ಸನಾಧಾನವಿದೆ; ಅಲ್ಲಿಯ

(ಇನೇ ಪುಟ ನೋಡಿರಿ)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಗಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

"Ably written—Quite up-to-date valuable service"
ಎಂದು ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲ್
ಸೈದೈರಕ್ಷ ಕೇಪ್ಟನ್ ಜಿ. ಶ್ರೀನಿವಾಸ ಮೂರ್ತಿ, ಎಮ್. ಡಿ. ಸಿ. ಎಮ್.
ಇವರು ಮುನ್ನುಡಿಯಲ್ಲಿ ಕೊಂಡಾಡಿದ್ದಾರೆ.

ಮಕ್ಕಳು, ಹೆಂಗಸರು, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ್ರಾ. ಖರ್ಚು ಬೇರೆ).

ಪ್ರತಿಗಳು ಸಿಗುವ ಮುಖ್ಯ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೊಸ ಪ್ರಯೋಗ

ಬಾಲ ವಾಚನಾಲಯಗಳಿಗೆ ಬಿಲೆ ಹೆಚ್ಚಿಸುವ ಗ್ರಂಥಗಳು.
ಕನ್ನಡ ಕಂದನು ಕಾಡಿಡುವ ಅಮೂಲ್ಯ ಕೃತಿಗಳು.

ಪ್ರಾಥಮಿಕ ಶಿಕ್ಷಕರಿಂದ ನಡೆಸಲ್ಪಡುವ, ಒಂದೇ ಒಂದಾವ ಸ್ಯಾ. ಶಿಕ್ಷಕರ ಪ್ರೋತ್ಸಾಹ ನಾರ್ಥ ತೆರೆದ ಸಮಿತಿಯಿಂದ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗಾಗಿಯೇ ಹೆಣೆದ

ಪುಟಿಚೆಂಡು- ಕವಿತಾ ಸಂಕಲನ. ಭಾಗ-೧. ೧೩೪. ಭಾಗ-೨. ೧೦೪ ಜನರ ಕವಿತೆಗಳು

ಆಜೆಕಲ್ಲು- ಕಥಾ ಸಂಕಲನ. ಭಾಗ-೧. ೪೦, ಭಾಗ-೨. ೪೬ ಜನರ ಕತೆಗಳು.

ಭಾ_೧-ರಿಂದ ೪, ೨—೫ರಿಂದ ೭ ವರ್ಷಕ್ಕೆ. ಬೆಲೆ ೧೨ ಆಣೆಯಂತೆ. ಉತ್ತರದಲ್ಲಿ ಬೇಂದ್ರೆ ಯರಿಂದ, ದಕ್ಷಿಣದ ಶ್ರೀ ಕುವೆಂಪು, ಪೂರ್ವದ ಶ್ರೀ ಕಾವ್ಯಾನಂದರಿಂದ, ಪಶ್ಚಿಮದ ಶ್ರೀ ಗೋವಿಂದ ಪೈ ಅವರ ವರೆಗಿನ ೪೦೦ ಜನ ಲೇಖಕರ ವಿವಿಧ ಕೃತಿ ವ್ಯಕ್ತಿ ಪರಿಚಯಗಳನ್ನೂ ಒಂದೇ ಕಡೆಗೆ ಕಾಣಬೇಕೆಂದಿದ್ದರೆ, ಶಿಕ್ಷಕರಿಗೆ ಬೆಂಬಲ ನೀಡಲು ಇಂದೇ ಬರೆಯಿರಿ. ವಿದ್ಯಾರ್ಥಿಗಳಿಗೆ ಆಂಚೆ ಚೆಟ್ಟ ಉಚಿತ.

ಶಿಕ್ಷಕರಲ್ಲಿ ಬೆಂಬಲಸೂಚಿ ಸೇವೆ ತಕ್ಕೊಳ್ಳಬೇಕಾಗಿ ವಿನ್ನಪ.

ಭಾರತೀ ಸಾಹಿತ್ಯ ಭಂಡಾರ ಯರನಾಳ.

ಅಂಚೆ:— ಮನಗೋಳಿ. ಜಿ:— ವಿಜಾಪುರ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ವತಹಿಸ್ವರು: ಶಹಾಕಂಪೆಸ್ಸಿ, ಮಂಗಳೂರು

ಜವಾಹರಲಾಲ ನೆಹರು ಹಾಗು ಭಾರತ

ಮಹಾನಾಯಕನ ಸಾಧನೆಗಳ ಪರಿಚಯ

ರೆಕ್ಕೆಪ್ರಶ್ನೆಗಳು ಭಾರತದ ಪ್ರಧಾನಿ ಶ್ರೀ ಜವಾಹರಲಾಲ ನೆಹರುಗಳ ವ್ಯಕ್ತಿತ್ವ ಸನ್ನು ಅತ್ಯಾದರದಿಂದ ಪ್ರಶಂಸಿಸಿದ್ದಾರೆ. ಗಾಂಧೀಜಿಯು ನೇತೃತ್ವದಲ್ಲಿ ಸ್ವಾತಂತ್ರ್ಯವ ನ್ನು ಸಂಪಾದಿಸಿದ ಭಾರತೀಯರನ್ನು ಉನ್ನತಿಯ ಸೂರ್ಗದಲ್ಲಿ ಮುನ್ನಡೆಸಿಹುರುವ ಮಹಾ ಧುರೀಣನೆಂದು ಅವರು ನೆಹರುಗಳನ್ನು ಕೊಂಡಾಡಿದ್ದಾರೆ. ಇಂಥಾವರನ್ನು ಪ್ರಧಾನಿಯಾಗಿ ಪಡೆದಿರುವುದು "ನಮ್ಮ ಭಾಗ್ಯ" ಎಂದು ಭಾರತೀಯರಿಗೆಲ್ಲ ಅವರು ತಿಳಿಸಿ ಹೇಳಿದ್ದಾರೆ.

ಜ್ಯಾತಿಯ ಗುಟ್ಟು

ಪ್ರಸಿದ್ಧ ಇತಿಹಾಸಕಾರರಾದ ಸರ್ದಾರ್ ಕೆ. ಎಂ ಪಣಿಕ್ಕರರ ಅಭಿಪ್ರಾಯದಲ್ಲಿ ಗಾಂಧೀಜಿಯನ್ನು ರಾಷ್ಟ್ರಪಿತನೆಂದು ಕರೆಯುಬುದಾದರೆ ನೆಹರುಗಳನ್ನು ರಾಷ್ಟ್ರ ನಿರ್ಮಾಪಕನೆಂದು ಭಾವಿಸಬಹುದು. ಭಾರತ ಸರಕಾರದ ಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡ ದಿನದಿಂದ ನೆಹರುಗಳು ತಮ್ಮ ಅಶ್ಚರ್ಯಕರವಾದ ಶಕ್ತಿಸಾಮರ್ಥ್ಯಗಳನ್ನೂ ದೂರದರ್ಶಿತ್ವವನ್ನೂ ಧುರೀಣತ್ವವನ್ನೂ ಭಾರತದ ಪುನರ್ನಿರ್ಮಾಣಕ್ಕಾಗಿಯೇ ಮೀಸಲಿರಿಸಿದ್ದಾರೆ; ಭಾರತವನ್ನು ಜಗತ್ತಿನಲ್ಲಿ ಗೌರವಾರ್ಹವಾದ ಸ್ಥಾನ ಕ್ಕೆತ್ತಲು ಅವರು ಉಪಯೋಗಿಸಿದ್ದಾರೆ.

ಸಾಮಾನ್ಯವಾಗಿ ನೆಹರುಗಳು ರೂಪಿಸಿದ ಮತ್ತು ನ್ಯಹಾರದಲ್ಲಿರಿಸಿದ ವಿದೇಶ ಧೋರಣೆಯೇ ಅವರಿಗೆ ಜಗತ್ತಿನ ಗೌರವವನ್ನು ತಂದೊರಕಿಸಿಕೊಟ್ಟಿತೆಂದು ಭಾವಿಸಲಾಗುತ್ತದೆ. ಆದರೆ ವಿದೇಶ ಧೋರಣೆಯು ಎಷ್ಟೇ ಒಳ್ಳೆಯದಿ ನಿರಲಿ, ರಾಜಕೀಯ ಸ್ಥಿಮಿಣ್ಯವು ಎಷ್ಟೇ ಪಕ್ವತೆಯಿಂದ ಕೂಡಿರಲಿ, ಜಗತ್ತಿನ ದೃಷ್ಟಿಯಿಂದ ಅದರದೆ ಸ್ಥಾನವನ್ನು ದೊರಕಿಸಿ ಕೊಡುವುದಕ್ಕೆ ಎಷ್ಟಕ್ಕೂ ಆದು ಸಾಲದು. ದೇಶದೊಳಗಿನ ಬಲ, ದೇಶದೊಳಗೆ ನಡೆಸಿಕೊಂಡು ಹೋಗುವ ಚಟುವಟಿಕೆ, ದೇಶದ ಜನರು ತಮ್ಮ ಮುಂದಿಟ್ಟು ಕೊಂಡಿರುವ ಆದರ್ಶ ಇತ್ಯಾದಿಗಳಿಗೆಯೇ ಜಗತ್ತು ಮಹತ್ವವನ್ನು ಕೊಡುತ್ತದೆ. ಆದುದರಿಂದ ನೆಹರುಗಳ ಕೀರ್ತಿ ಮತ್ತು ಗೌರವಗಳು ವಿದೇಶ ಧೋರಣೆಯ ಫಲಿತಾಂಶವೆಂದೂ ಆವರ ವಿದೇಶ ಧೋರಣೆಯನ್ನಷ್ಟೇ ನುನ್ನಿಸಿ ಅಂತರಿಕ ಧೋರಣೆಯು ನಿಷ್ಪ್ರಯೋಜಕವೆಂದು ಟೀಕಿಸಿ ಬಹುದೆಂದೂ ಭಾರತೀಯರು ಭಾವಿಸಿದರೆ ಅದರಷ್ಟು ದೊಡ್ಡ ತಪ್ಪು ಬೇರೆ ಇರಲಾರದು.

ಆಂತರಿಕ ಧೋರಣೆ

ದೇಶದ ಆಂತರಿಕ ಧೋರಣೆಯನ್ನು ನೆಹರು ಹೇಗೆ ರೂಪಿಸಿದ್ದಾರೆ? ಈ ವಿಷಯವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ನೆಹರುಗಳ ಧೋರಣೆಯ ಕೆಲವು ಮುಖ್ಯಾಂಶಗಳು ಸ್ಪಷ್ಟವಾಗಿ ಗೋಚರಿಸುತ್ತವೆ ಮೊದಲನೆಯದಾಗಿ ನೆಹರುಗಳು ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ಆರ್ಥಿಕ ಜೀವನವು ರೂಪುಗೊಂಡಿರುವ ಸಮಾಜವನ್ನು ವ್ಯವಸ್ಥಿತರೀತಿಯಲ್ಲಿ ಸುವುದಕ್ಕೆ ಸಂಕಲ್ಪಿಸಿದ್ದಾರೆ. ಬಂಡವಾಳವನ್ನು ಸಮಷ್ಟಿ ವಾಗಿರಬಹುದು; ಶಕ್ತಿ ಸಂಪನ್ನವಾಗಿರಬಹುದು; ಬೆಟ್ಟದ ಪ್ರಮಾಣಕ್ಷೇತ್ರದಲ್ಲಿ ಬಹಳಮುಂದುವರಿದಿರಬಹುದು—ಆದಾಗ್ಯೂ ಸಮಾಜದ ಕೆಲವೇ ಜನರ ಮಟ್ಟಿಗಷ್ಟೇ ಇವುಗಳ ಪ್ರಯೋಜನ ಪರಿಮಿತವಾಗಿರಬಹುದು. ನಮ್ಮ ದೇಶದಲ್ಲಿ ಸಮಾಜವೆಂದರೆ ಸಕಲ ನಾಗರಿಕರೆಂದು ಭಾವಿಸುವ ಸುತ್ತು ರಾಷ್ಟ್ರದ ಆಳ್ವಿದಯವೆಂದರೆ ನ್ಯಕ್ತಿಯ ಜೀವನದಲ್ಲಿ ಪ್ರತಿಬಿಂಬಿಸುವ ಅಂಶವೆಂಬ ಸಾಮಾಜಿಕ ನ್ಯಾಯ ಸೂತ್ರವ ಕರೆಗೆ ಇತ್ತೀಚೆಯ ವರೆಗೆ ಯಾರೂ ವಿಶೇಷವಾದ ಗಮನವನ್ನು ಕೊಟ್ಟಿರಲಿಲ್ಲ. ಮಹಾತ್ಮಾ ಗಾಂಧಿಯವರೇ ಭಾರತೀಯರನ್ನು ಈ ವಿಚಾರಗಳ ಕಡೆಗೆ ಸೆಳೆದರೆಂದು ಹೇಳಬಹುದು. ಗಾಂಧೀಜಿಯವರು ಆಸ್ಪೃಶ್ಯರ ಹಾಗು ಗ್ರಾಮೋದ್ಯಾರ ಪ್ರದೇಶಗಳ ಆರ್ಥಿಕ ಸ್ಥಿತಿಯ ಕುರಿತು ಅಲೋಚಿಸದ ಒಂದೇ ಒಂದು ದಿನವೂ ಇರಲಿಲ್ಲವೆಂದರೆ ಅತಿಶಯೋಕ್ತಿಯಾಗದು. ಆದರೆ ಮಹಾತ್ಮಾ ಗಾಂಧೀಜಿಯ ಸುಟ್ಟಗೆ ಇಪ್ಪು ಜೆಜ್ಜಾಗಿ ತಾತ್ವಿಕ ವಿಷಯಗಳಾಗಿದ್ದವು ಈ ತತ್ವಗಳನ್ನು ಜನಪ್ರಿಯಗೊಳಿಸಲಿಕ್ಕಾಗಿಯಷ್ಟೇ ಅವರು ಹೋರಾಡಿದರು. ನೆಹರುಗಳ ಪಾಲಿಗೆ ಇದು ಬೇರೆಯೇ ವಿಷಯವಾಗಿದೆ. ತಾತ್ವಿಕವಾಗಿ ಒಪ್ಪಿದುದನ್ನು ಆಚರಣೆಕ್ಕೆ ತರುತ್ತಿರುವ ಮಹಾ ಹೊಣೆಗಾರಿಕೆ ಅವರದು.

ಕಲ್ಯಾಣ ರಾಷ್ಟ್ರದ ಪ್ರವರ್ತಕ

ವಿಳಂಟು ವರ್ಷಗಳ ತಪ್ಪ ಪ್ರಧಾನಿ ಪಟ್ಟದ ಅವಧಿಯಲ್ಲಿ ನೆಹರುಗಳು ಭಾರತೀಯರನ್ನು "ಕಲ್ಯಾಣ ರಾಷ್ಟ್ರ" ಎಂಬೆನೋ ಕರೆಯು ತ್ತಾರೋ ಆ ದಾರಿಯಲ್ಲಿ ಒಂದೊಂದೇ ಹೆಜ್ಜೆ ನವನ್ನಡೆಸಿಕೊಂಡು ಹೋಗಿದ್ದಾರೆ. ಇದು ನೆಪಮಾತ್ರ ಇನ್ನೊಂದು ಮಹಾ ಸಾಧನೆಯಾಗಿದೆ. ಕಲ್ಯಾಣ ರಾಷ್ಟ್ರವನ್ನು ಕೆಲವೊಮ್ಮೆ ಸ್ವಾತಂತ್ರ್ಯಕ್ಕಿಂತ ಗುಲಾಮರು ದೇಶವಾಗಿ ಪರಿಣಮಿಸುವುದುಂಟು. ಕೆಲವು ಸಾಮಾಜಿಕ ಪ್ರಯೋಜನಾಂಶಗಳು ಜನತೆಯ ಪ್ರತಿಯೊಂದೂ ವರ್ಗಕ್ಕೆ ದೊರಕುತ್ತವೆ; ಮತ್ತು ಅಂಥ ಚಟುವಟಿಕೆಯಿಂದ ಪ್ರತಿಯೊಬ್ಬ ವ್ಯಕ್ತಿಯು ಭೌತಿಕ ಪ್ರಯೋಜನವನ್ನು ಪಡೆಯಬಹುದು ಎಂದು ಸಾಮಾನ್ಯವಾದ ಕಲ್ಯಾಣ ರಾಷ್ಟ್ರದ ಕಲ್ಪನೆ ಹೇಳುತ್ತದೆ. ಆದರೆ ನೆಹರುಗಳು ಇಷ್ಟನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡಿಲ್ಲ. ಆವರಿಗೆ ಬೇರಾವುದೇ ಭಾರತೀಯನಿಗಿಂತ ಹೆಚ್ಚಾಗಿ ನಾಗರಿಕ ಸ್ವಾತಂತ್ರ್ಯವು ಪ್ರಿಯವೆನಿಸಿದೆ; ಶ್ರಮಿಕತ್ವವು ಅಥವಾ ರಾಜ್ಯದ ಆ ಸ್ವಾತಂತ್ರ್ಯದ ಆವರ್ತನವನ್ನು ಹೊರಗೆಡಹುವ ಸಾಧನ ಮಾತ್ರವೆಂದು ಅವರಿಗೆ ತೋರಿದೆ. ರಾಜ್ಯದ ಅಧಿಕಾರ ಕ್ಷೇತ್ರವು ಸಾಮಾನ್ಯಜನಕ್ಕೆ ಸಿಗುತ್ತಿರುವಾಗ ಇಂದಿನ ಪರಿಸ್ಥಿತಿಯಲ್ಲಿ ನಾಗರಿಕರ ಸ್ವಾತಂತ್ರ್ಯವನ್ನು ರಕ್ಷಿಸುವುದೆಂತೆಂಬ ವಿಚಾರದ ಕಡೆಗೆ ನೆಹರುಗಳನ್ನು ಹೆಚ್ಚು ಗಮನಸೀಯುತ್ತಿರುವಂತು ಬೇರೆ ಯಾರೂ ಈ ದೇಶದಲ್ಲಿಲ್ಲ. ನೆಹರು ಗಳಿಂದ ಸ್ಫೂರ್ತಿ ಪಡೆದೇ ನಮ್ಮ ರಾಜ್ಯಾಂಗ ಘಟನೆಯನ್ನು ರೂಪಿಸಿದ ಮಹಾನುಭಾವರು ವಾಕ್ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ ಇತ್ಯಾದಿ ಮೂಲಭೂತ ಅಧಿಕಾರಗಳನ್ನು ನಾಗರಿಕರಿಗೆ ಕೊಡಮಾಡಿದರು; ಇವೆಷ್ಟೂ ಇಂದಿನ ಪ್ರತಿಯೊಂದೂ ಸಮಾಜದಲ್ಲಿ ಒಂದಲ್ಲ ಒಂದು ನೆವದಿಂದ ಆಹ್ವಾನಿಸಲ್ಪಡುತ್ತಿದ್ದರೂ ನೆಹರುಗಳು ಅವನ್ನು ಲೆಕ್ಕಿಸದೆ ವಿಕ್ಟೋರಿಯಾ ರಾಣಿ ಕಾಲದ ಪಿಜಾರಕರಿಂತ ಸಾಮಾಜನಾದದ ಭೂತಹಿಡಿದವರಿಗೆ ತೋರುತ್ತಾರೆ.

ನಾಗರಿಕ ಅಧಿಕಾರ

ಸರ್ವಾಧಿಕಾರ ನಡೆಯುವ ರಾಜ್ಯಗಳಿಂದ ಮಾತ್ರವೇ ನಾಗರಿಕ ಸ್ವಾತಂತ್ರ್ಯಕ್ಕೆ ಅಪಾಯದ ಅತ್ಯಾನ ಬರುತ್ತದೆ, ಬಂದಿದೆ ಎನ್ನುವುದು ಸರಿಯಲ್ಲ. ಪ್ರಜಾಪ್ರಭುತ್ವದ ಎಲ್ಲ ವಿನ ರಗಳಿಂದ ಕೂಡಿರುವ ಮಾಗು ಸ್ವತಂತ್ರ ಜೀವನದ ಅಲಂಕಾರವನ್ನು ತೊಟ್ಟು ಬಲವು ರಾಷ್ಟ್ರಗಳಲ್ಲಿ ನಾಕ್ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ ಇತ್ಯಾದಿಗಳಿಗೆ ನಿರ್ಬಂಧವಿದೆ. ಉದಾಹರಣೆಗಾಗಿ ಅಮೆರಿಕದಲ್ಲಿ ಕಮ್ಯೂನಿಸ್ಟ್ ಪಕ್ಷವು ಸಂಘಟನೆಯ ಅಧಿಕಾರವನ್ನು ಪಡೆದಿಲ್ಲ; ಜುನಾನಿಯೆಯಲ್ಲಿ ಭಾಗವಹಿಸುವಂತಿಯೂ ಇಲ್ಲ. ಕಳೆದ ಏಳೆಂಟು ವರ್ಷಗಳ ಅವಧಿಯಲ್ಲಿ ಭಾರತದಲ್ಲಿ ಸರಕಾರದ ಅಧಿಕಾರ ವ್ಯಾಪ್ತಿಯು ಹೆಚ್ಚುತ್ತಾ ಹೋಗಿದ್ದರೂ ನಾಗರಿಕರ ಸ್ವಾತಂತ್ರ್ಯವು ಅದೇ ವಿಸ್ತಾರದಲ್ಲಿ ಕಡಿಮೆಯಾಗಿರದಿರುವುದಕ್ಕೆ ರಾಜ್ಯ ವ್ಯವಹಾರದ ಚುಕ್ಕಾಣಿಯನ್ನು ನಿರ್ವಹಣಾತ್ಮಕ ಆಡಳಿತದಲ್ಲಿಯೂ ಜನರಿಗೆ ಸ್ವಾತಂತ್ರ್ಯವನ್ನನುಭವಿಸಲಿರುವ ಅಧಿಕಾರ ದಲ್ಲಿಯೂ ವಿಶ್ವಾಸವಶ್ಯಳ್ಳ ವ್ಯಕ್ತಿ ನೆಹರುಗಳು ಹಿಡಿದಿರುವುದೇ ಕಾರಣ. ರಾಜ್ಯದ ಚಟುವಟಿಕೆಗಳನ್ನು ಹೆಚ್ಚಿಸುತ್ತಿದ್ದಂತೆಯೆ ಜನರಿಗೆ ತಮ್ಮ ನಾಗರಿಕ ಸ್ವಾತಂತ್ರ್ಯವನ್ನು ಸುಸಂಘಟಿತ ರೂಪವಲ್ಲಿ ರಾಷ್ಟ್ರದ ಅಭ್ಯುದಯಕ್ಕಾಗಿ ಉಪಯೋಗಿಸುವಂತೆ ಪ್ರೋತ್ಸಾಹಿಸುವುದನ್ನೂ ಪ್ರಧಾನಿಯು ಮರೆಯದಿರುವುದೇ ನೆಪರುಗಳ ವ್ಯಕ್ತಿತ್ವದ ಮುಖ್ಯ ವೈಶಿಷ್ಟ್ಯವಾಗಿದೆ. "ಕೇವಲ ನಮ್ಮಿಷ್ಟಕ್ಕೆ ಚಿಂತಿಸಿ ಕುಳಿತಿರಬೇಡಿರಿ; ನಿಮ್ಮಿಷ್ಟಕ್ಕೆ ನೀವು ವಿಚಾರಿಸಿಯಾವರೂ ನನ್ನನ್ನು ಅನುಸರಿಸಿರಿ' ಎಂದು ಹೇಳುವ ನೈತಿಕತೆಗೆ ನೈತಿಕ ಧೈರ್ಯಬೇಕಾಗುತ್ತದೆ. ನೆಪರುಗಳಲ್ಲಿ ಈ ಸಾಪನವಿದೆ; ಮತ್ತಿದೇ ಅವರ ಅತ್ಯಂತ ದೊಡ್ಡ ಯೋಗ್ಯತೆಯಾಗಿದೆ.

ವಿಶ್ವ ಕುಟುಂಬತ್ವ

ಭಾರತವನ್ನು ಯಾವಾಗಲೂ ಲೋಕನ್ಯವ ಹಾರದ ಸೃಷ್ಟಿಕರ್ತರಾದ ನೆಹರುಗಳು ವ್ಯಕ್ತಿತ್ವತೂಕನನ್ನೂ ಕೋಭೆಯನ್ನೂ ಹೆಚ್ಚಿಸಿರುವ ಇನ್ನೊಂದು ಮಹತ್ವದ ಅಂಶವಾಗಿದೆ. ಜಗತ್ತಿಗಿಂತ ಪ್ರತ್ಯೇಕ ಅಸ್ತಿತ್ವನನ್ನು ಭಾರತವು ಪಡೆದಿದೆ ಎಂದರೆ ತಿಳಿಯುವುದೇ ಇಲ್ಲ. ನಮ್ಮಲ್ಲಿಯ ಅನೇಕ ಸಮಸ್ಯೆಗಳನ್ನು ಹೇಗಾದರೂ ಪರಿಹರಿಸಿ ಹೆಸರಿಗೆನಾದರೂ ಒಕ್ಕಟ್ಟುಂಟು ಮಾಡಿ ಕಲ್ಪನೆಯನ್ನು ಇಟ್ಟುಕೊಂಡಿದ್ದರೂ; ಆದರೆ ಜಗತ್ತಿನ ಜಟಿಲಗಳೇ ಆ ಕಲ್ಪನೆಯನ್ನು ವಿಶಾಲವಾದ ವ್ಯಾಪ್ತಿಯನ್ನು ಹೊಂದಿರಲಿಪ್ಪ. ಇದಕ್ಕೆ ಮಹಾತ್ಮಾ ಗಾಂಧೀಜಿ ಸಹ ಆಕಾವಾದಿಪ್ಪ. ನೆಪರುಗಳೇ ಮೊದಲಬಾರಿಗೆ ಭಾರತೀಯರಲ್ಲಿ ಜಾಗತಿಕ ಸಹಕಾರ ಪವನ್ನುಂಟು ಮಾಡಿದರು. ಆದರಂತೆ ವೈಜ್ಞಾನಿಕ ಪ್ರಗತಿಯನ್ನು ಭಾರತೀಯರ ಪಾಲಿಗೆ ಪ್ರಿಯವೆನಿಸುವಂತೆ ಮಾಡಿದ ಕೀರ್ತಿಯೂ ನೆಹರುಗಳಿಗೆಯೇ ಸಲ್ಲುತ್ತದೆ. ಕಡಕೇಳಿ ತಂದ ವೈಜ್ಞಾನಿಕ ಮಾಹಿತಿಯು ಯಾವುದೇ ದೇಶ ವನ್ನು ಪ್ರಗತಿಪಥದಲ್ಲಿ ಒಯ್ಯಬಾರದೆಂದು ವೈಫಲ್ಯಾನಿ ಮನಗಂಡ ನೆಹರುಗಳು ಭಾರತೀಯರ ಹತ್ತಿರವೇ ಸಾಕಾದಷ್ಟು ವಿಶಾಲ ಪ್ರಮಾಣದಲ್ಲಿ ವೈಜ್ಞಾನಿಕ ತಿಳಿವಳಿಕೆಯ ಸಂಗ್ರಹವಿರಬೇಕೆಂಬು ಒತ್ತಿ ಹೇಳಿದರು ಅನ್ಯಥಾ ಗೊಂಬೆಯನ್ನೆ ಮನುವೆಂದು ತಿಳಿದು ಅಡಿಸುವಂತೆ ನಾವು ಪ್ರಗತಿಯ ಭ್ರಾಮಕ ಕಲ್ಪನೆಯಲ್ಲಿಯೇ ಉಳಿಯುವವೆಂದು ಅವರು ತಿಳಿಸಿ ಹೇಳಿದರು. ವೈಜ್ಞಾನಿಕ ಮನೋಭಾವವೂ ಸಮಸ್ಯೆಗಳನ್ನು ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸುವ ನೈಪುಣ್ಯವೂ ಭಾರತೀಯರಲ್ಲಿ ಉಂಟಾದರೆ ಜಗತ್ತಿನಲ್ಲಿ ಈ ದೇಶವು ಬಹಳ ದೂರ ಮುಂದರಿಯುವುದು ಸಾಧ್ಯವೆಂದೂ ಅವರ ಸ್ಥಾನಮಾನವು ಗೌರವಾರ್ಹವಾದ ಉನ್ನತ ಮಟ್ಟದಲ್ಲಿರುವುದು ಅಸಂಭವವಲ್ಲ ವೆಂದೂ ನೆಪರುಗಳು ಜನರಿಗೆ ಉಪದೇಶಿಸಿ ಅವರನ್ನು ಕಳೆದ ಏಳೆಂಟು ವರ್ಷಗಳಲ್ಲಿ ಒಲಿಸಿಕೊಂಡರು. ಇವೆಲ್ಲ ರೀತಿಯಿಂದ ಭಾರತದ ಹಾಗು ಭಾರತೀಯರ ಉತ್ಕರ್ಷಕ್ಕಾಗಿ ಅವಿಶ್ರಾಂತವಾಗಿ ಹೋಗಿದ ಪ್ರಧಾನಿ ನೆಪರುಗಳಿಗೆ ನಾವು ಕೃತಜ್ಞರಾಗಿರಬೇಡವೆ? ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಪಿಡಿಸುವುದಕ್ಕೆ ನೆವಾಪಡೆ ರಾಂತಿಮತ ನೆಪರುಗಳೆಂದು ಲೋಕ ಕರೆಯುವಾಗ ಭಾರತೀಯ ಜೀವನದ ಮೂಲಭೂತ ಸಮಸ್ಯೆಗಳಿಗೆ ಸರಿಪಾರವನ್ನು ಹುಡುಕಿಸಿ, ರಾಷ್ಟ್ರೀಯ ಮನೋಭಾವನೆ ಸ್ಪಷ್ಟ ಕಲ್ಪನೆಯನ್ನು ಹೊಂದಿವ ಭಿನ್ನಿಷ್ಟಿನ ಚಿತ್ರ ಸಂವಿಧಾನವಾಗುವಂತೆ ಪ್ರಯತ್ನ ಶೀಲನಾತ್ಮ ಎಲ್ಲ ಭಾರತೀಯರೂ ತನ್ನನ್ನು ಸಿದ್ಧಯಿಂದ ಹಿಂಬಾಲಿಸುವಂತೆ ಮನವೊಲಿಸಿದ ಘನವಾದ ಸಾಧನೆಗಳಿಗೆ ನಾವು ನಮಘಾತನ ನಿರ್ಮಾಣ ಕನೆಂಬ ಗೌರವದಿಂದ ನೆಪರುಗಳನ್ನು ಅರಿ ಸಬೇಡವೆ?

(ತನೇ ಪುಟದಿಂದ)

ಸಿದ ಥೂಳು ಅಪಾಯಕಾರಿಯಲ್ಲದೆ ಮಟ್ಟಸ್ಥರಿಯಂತೆ ಏನು ಮಾಡಬಹುದು? ಎಂಬುದಕ್ಕೆ ವಿಶೇಷವಾದ ಮಹತ್ವವನ್ನು ಪರಿಪತ್ತಿನಲ್ಲಿ ಕೊಡಲಾಯಿತು. ಆದರೆ ಸಮಾಧಾನಕರವಾದ ಕೀರ್ಮಾನಕ್ಕೆ ಬರುವುದೇನೂ ಸಾಧ್ಯವಾಗಲಿಲ್ಲ. ಇಂತಿರುವಾಗ ನಿಸ್ಸಂಶಯವಾಗಿಯೂ ಅತ್ಯಧಿಕ ಪ್ರಮಾಣದಲ್ಲಿ ಅಣುವಿಕಿರಣ ಶೀಲತೆಗೆ ಎಡೆಕೊಡುವ ಬಾಂಬು ಸ್ಫೋಟನೆ ಪ್ರಯೋಗಗಳಿಂದ ರಕ್ಷಣೆ ಪಡೆಯಲು ಇಂಥ ಪ್ರಯೋಗಗಳ ಪ್ರತಿಬಂಧದ ಹೊರತು ಬೇರೆ ದಾರಿ ಯೇನಿದೆ?

ನಿಮ್ಮ ಅಮೂಲ್ಯ ಒಡವೆ ನಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಹರ ಜವಾಬ್ದಾರಿಯನ್ನು ಕಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿನಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನವ್ಮೊಡನೆ ವಿಚಾರಿಸಿರಿ.

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್ಸ್

ಮಂಗಳೂರು—3.

ಉಡ್ಪಿ ಡಿ. ಮುಂ. ಕೋರ್ಟ್‌ನಲ್ಲಿ

ಕ್ರಮಸಂಖ್ಯೆ 527/1955

R. I. A. 1266/1955

ಮುತ್ತಕ್ಕ ಪೂಜಾರ್ತಿ—ವಾದಿಳು.

ಮತ್ತು

ಚೀಂಕ ಪೂಜಾರಿ, ಕೊರಗ ಪೂಜಾರಿ ಆಳಿಯು, ಉಡ್ಪಿ ತಾಲ್ಲೂಕು ಉಪ್ಪರು ಗ್ರಾಮದ ತೆಂಕಬೆಟ್ಟು — ಪ್ರತಿವಾದಿ.

ಇವರೊಳಗೆ

ವಾದಿಗೆ ಪ್ರತಿವಾದಿಯು ತಾ. 30-4-'51 ರಲ್ಲಿ ರೂಪಾಯಿ 400—0—0ಕ್ಕೆ ಬರೆಕೊಟ್ಟ ಡಿಸೂಂದ ನೋಟ್ಬಿನ ಆಸ್ತಿ ಬಿದ್ದಿ ಕೂಡಾ ರೂಪಾಯಿ 488—8—0ಕ್ಕೆ ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 12—12—'55 ಕ್ಕೆ ಪ್ರತಿವಾದಿಗೆ ಖಿನೆ ನೋಟೀಸು ಮಾಡಿಸುವ ಬಗ್ಗೆ ಇಟ್ಟಿದೆ. ಪ್ರತಿವಾದಿಗೆ ಅಕ್ಟೋಸ ಇರುವುದಾದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ತಪ್ಪದೆ ಹಾಜ್ರಾಗಿ ಜ್ಯಾಬ್ತೀರು ಮಾಡಿಕೊಳ್ಳತಕ್ಕದ್ದು ಎಂದು ಸಂಗ್ತಿ ಈ ಮೂಲಕ ತಿಳಿಸಿಯದೆ.

K. Laxminarayana Aithal.
Vakil for Plaintiff

ಉಡ್ಪಿ, 30—11—55.



(೩ನೇ ಪುಟದಿಂದ)

ಮಾನ್ಯಮಿಕ ಶಿಕ್ಷಣದ ಮಟ್ಟಿಗೆ, ಗ್ರಂಥಾಲಯ ಇಸವಿಯಲ್ಲಿ ಕೇಂದ್ರ ಶಿಕ್ಷಣ ಸಲಹಾ ಮಂಡಳದ ಸಭೆಯು ಅಂಗೀಕರಿಸಿದ ಗೊತ್ತುವಳಿಗನುಸಾರ, ಶಿಕ್ಷಣ ಮಾಧ್ಯಮವು ಪ್ರಾದೇಶಿಕ ಭಾಷೆಯಾಗಿರಬೇಕು. ಆದಾಗ್ಯೂ ಆಯಾ ಪ್ರದೇಶದಲ್ಲಿರುವ ಅಲ್ಪ ಸಂಖ್ಯಾಕ ಭಾಷಾ ಗುಂಪಿನ ವಿದ್ಯಾರ್ಥಿಗಳ ಸಂಖ್ಯೆಯು ನ್ಯಾಯವಾಗಿ ಸಮ್ಮತಿಸುವಂತಿದ್ದರೆ ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸಿ ಮಾತೃ ಭಾಷೆಯಲ್ಲಿಯೇ ಈ ಮಕ್ಕಳಿಗೆ ಶಿಕ್ಷಣ ಕೊಡಬೇಕು. ಒಂದೇ ಶಾಲೆಯಲ್ಲಿ ಒಟ್ಟು ವಿದ್ಯಾರ್ಥಿಗಳಲ್ಲಿ ಮೂರರಲ್ಲಿ ಒಂದಂಶದಷ್ಟು ಬಲವಿರುವ ಅಲ್ಪ ಸಂಖ್ಯಾಕ ಭಾಷಾ ಗುಂಪು ಬಯಸಿದರೂ ಮಾತೃ ಭಾಷೆಯಲ್ಲಿ ಶಿಕ್ಷಣವನ್ನು ಈ ವಿದ್ಯಾರ್ಥಿಗಳಿಗೆ ಕೊಡಬೇಕು—ಎಂಬುದಾಗಿಯೂ ಈ ಗೊತ್ತುವಳಿ ಹೇಳುತ್ತದೆ. ಇಷ್ಟರಿಂದಲೇ ಸಮಸ್ಯೆಯು ಸಂಪೂರ್ಣವಾಗಿ ಪರಿಹಾರವಾಗುವುದೇ ಎಂಬುದು ಅನುಮಾನ. ಮಾಧ್ಯಮಿಕ ಶಿಕ್ಷಣವನ್ನು ಪಾಠಮಿಕ ಶಿಕ್ಷಣಕ್ಕಿಂತ ಬೇರೆಯೇ ಆದ ತಳಹದಿಯ ಮೇಲೆ ಮತ್ತು ಪ್ರತ್ಯೇಕ ದೃಷ್ಟಿಕೋಣದಿಂದ ವಿಚಾರಿಸಬೇಕೆಂಬುದೇನೋ ನಿಜ. ಆದರೆ ಕೇಂದ್ರ ಸರಕಾರವು ರಾಜ್ಯ ಸರಕಾರಗಳಿಗೊಡನೆ ಸಲಹೆ ಕೇಳಿ ಘೋರಣೆಯನ್ನು ಹೆಚ್ಚು ಸ್ಪಷ್ಟವಾಗಿ ನಿರೂಪಿಸಬೇಕೆಂದೂ ಅಂಥ ಪರಿಷ್ಕೃತ ಘೋರಣೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ಅದು ಯೋಗ್ಯ ಹೆಜ್ಜೆಯನ್ನು ಮುಂದಿಡಬೇಕೆಂದೂ ಆಯೋಗದ ಅಭಿಪ್ರಾಯ.

ಆಡಳಿತದಲ್ಲಿ ಭಾಷೆ

ಸರಕಾರದ ಅಧಿಕೃತ ಉದ್ದೇಶಗಳಿಗಾಗಿ ಅಲ್ಪ ಸಂಖ್ಯಾಕ ಗುಂಪಿನ ಭಾಷೆಯನ್ನು ಬಳಸುವುದು ಮುಂದಿನ ವಿಚಾರ. ರಾಜ್ಯಾಂಗ ಘಟನೆಯು ಹಿಂದೆಯೇ ಹೇಳಿದಂತೆ ರಾಷ್ಟ್ರಾಧ್ಯಕ್ಷರಿಗೆ ಯೋಗ್ಯ ಸಂದರ್ಭದಲ್ಲಿ ಇಂಥ ಭಾಷೆಯನ್ನು ಆಡಳಿತದಲ್ಲಿ ಉಪಯೋಗಿಸಬೇಕೆಂದು ನಿರ್ದೇಶಿಸುವ ಅಧಿಕಾರವನ್ನಿತ್ತಿದ್ದರೂ ಇಷ್ಟರ ವರೆಗೆ ಅಂಥದೊಂದು ಕ್ರಮವನ್ನು ರಾಷ್ಟ್ರಾಧ್ಯಕ್ಷರು ತೆಗೆದುಕೊಂಡಿಲ್ಲ; ರಾಜ್ಯ ಸರಕಾರಗಳಿಗೆಯೇ ಹೆಚ್ಚು ಕಡಿಮೆ ಈ ವಿಷಯವನ್ನು ಗಮನಿಸಲು ಬಿಟ್ಟಂತೆ ಕಾಣುತ್ತದೆ. ರಾಜ್ಯ ಸರಕಾರಗಳಲ್ಲಿ ಇಷ್ಟರ ವರೆಗೆ ಉತ್ತರ ಪ್ರದೇಶ, ಬಿಹಾರ, ಮಧ್ಯ ಭಾರತ, ಮಧ್ಯ ಪ್ರದೇಶ, ರಾಜಸ್ಥಾನ, ಅಜ್ಮೇರ ಮತ್ತು ಸೌರಾಷ್ಟ್ರಗಳು ಘಟನೆಯ ೩೫೫ನೇ ಸೂತ್ರದನ್ವಯ ಶಾಸನವನ್ನು ಅಂಗೀಕರಿಸಿ ತಂತಮ್ಮ ಪ್ರಾದೇಶಿಕ ಭಾಷೆಗಳನ್ನು ಅಧಿಕೃತ ಭಾಷೆಯೆಂದು ಮನ್ನಿಸಿವೆ. ಉಳಿದ ರಾಜ್ಯಗಳಲ್ಲಿ ಇಂಗ್ಲಿಷನ್ನೇ ಸರಕಾರದ ಭಾಷೆಯಾಗಿ ಬಳಸಲಾಗುತ್ತಿದೆ. ಮಧ್ಯ ಪ್ರದೇಶದಂಥ ಕೆಲವು ರಾಜ್ಯಗಳು ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಅಧಿಕೃತ ಉದ್ದೇಶಗಳಿಗೆ ಬಳಸುತ್ತಿವೆ. ಮುಂಬಯಿ, ಹೈದರಾಬಾದು ರಾಜ್ಯಗಳಲ್ಲಿ ಜಿಲ್ಲೆ, ಮತ್ತು ತಾಲೂಕುಗಳ ವ್ಯವಹಾರವನ್ನು ಆಯಾ ಘಟಕದ ಸಾಮಾನ್ಯ ಭಾಷೆಯಲ್ಲಿ ಸರಕಾರವು ನಡೆಸುತ್ತಿದೆ.

ಹೈದರಾಬಾದು, ಪೆಪ್ಸು, ರಾಜಸ್ಥಾನ, ತಿರು-ಕೊಚ್ಚಿ ಮತ್ತು ಮಧ್ಯ ಭಾರತಗಳ ಹೈಕೋರ್ಟುಗಳಲ್ಲಿ ಪ್ರಾದೇಶಿಕ ಭಾಷೆ (ಅಥವಾ ಭಾಷೆಗಳ) ಬಳಕೆಯನ್ನು ಮನ್ನಿಸಲಾಗಿದೆ; ಬೇರೆ ರಾಜ್ಯಗಳಲ್ಲಿ ಇಂಗ್ಲಿಷೇ ಮುಂದರಿಯುತ್ತಿದೆ. ಕೆಳ ಕೋರ್ಟುಗಳು ಸಾಮಾನ್ಯ ವ್ಯವಹಾರವನ್ನು ಪ್ರಾದೇಶಿಕ ಭಾಷೆಯಲ್ಲಿ ನಡೆಸಿಕೊಂಡು ಹೋಗಿ, ತೀರ್ಮಾನವನ್ನಷ್ಟೇ ಇಂಗ್ಲೀಷಿನಲ್ಲಿ ಬರೆಯುತ್ತವೆ. ಅಲ್ಪಸಂಖ್ಯಾಕ ಗುಂಪಿನ ಭಾಷೆಗಳನ್ನು ಬಳಸುವುದಕ್ಕೆ ಎಷ್ಟೋ ರಾಜ್ಯಗಳು ಅನುಮತಿಯನ್ನು ಕೊಟ್ಟಿರುತ್ತವೆ. ಕೆಲವು ವಿಶಿಷ್ಟ ಪ್ರದೇಶಗಳಲ್ಲಿ ಎರಡು ಅಥವಾ ಹೆಚ್ಚು ಭಾಷೆಗಳನ್ನು ಉಪಯೋಗಿಸಲು ಮದ್ರಾಸು, ಮುಂಬಯಿ, ಪಶ್ಚಿಮ ಬಂಗಾಳ, ಬಿಹಾರ, ಒರಿಸ್ಸ, ಆಂಧ್ರ, ಹೈದರಾಬಾದ್, ಮತ್ತು ತಿರು-ಕೊಚ್ಚಿ ಈ ರಾಜ್ಯಗಳು ಬಿಟ್ಟಿರುತ್ತವೆ.

ಸವಲತ್ತುಗಳ ಅಗತ್ಯ

ಇದರ ಬೆಳಕಿನಲ್ಲಿ ಇಂದಿನ ಪರಿಸ್ಥಿತಿಯನ್ನು ನೋಡಿದರೆ ಅಲ್ಪ ಸಂಖ್ಯಾಕ ಗುಂಪಿನ ಭಾಷೆಗೆ ಮನ್ನಣೆಯನ್ನು ಕೊಡಬೇಕೆಂದು ಸಾಮಾನ್ಯವಾಗಿ ಒಪ್ಪಲಾಗುತ್ತಿದ್ದರೂ ಆಡಳಿತದಲ್ಲಿ ಇಂಥ ಭಾಷೆಯನ್ನು ಬಳಸುವ ಮಟ್ಟಿಗೆ ಸ್ಪಷ್ಟವಾದ ಯಾವುದೇ ಘೋರಣೆಯನ್ನು ಅನುಸರಿಸುತ್ತಿಲ್ಲ ವೆನ್ನಬೇಕಾಗುತ್ತದೆ. ಫಜಲಲಿ ಆಯೋಗವು ಇಂಥ ಸ್ಪಷ್ಟ ನಿಲುಮೆಯ ಸ್ವರೂಪ ಹೇಗಿರಬೇಕೆಂಬುದನ್ನು ವಿವರವಾಗಿ ಸೂಚಿಸಲು ಹೋಗಿಲ್ಲ. ಆದಾಗ್ಯೂ ಒಂದು ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ೭೦% ಪ್ರಜೆಗಳು ಒಂದೇ ಭಾಷೆಯನ್ನಾಡುತ್ತಿದ್ದರೆ ಜನವನ್ನು ಏಕಭಾಷೆಯೇ ಪ್ರಧಾನವಾಗುಳ್ಳ ಪ್ರದೇಶವೆಂದು ಭಾವಿಸಬಹುದು; ಸುಮಾರು ೩೦% ಅಥವಾ ಹೆಚ್ಚು ಜನಸಂಖ್ಯೆಯುಳ್ಳ ಅಲ್ಪ ಸಂಖ್ಯಾಂಕ ಭಾಷಾ ಗುಂಪೊಂದು ರಾಜ್ಯದಲ್ಲಿದ್ದು ದಾದರೆ, ಅಂಥ ರಾಜ್ಯವು ಒಂದಕ್ಕಿಂತ ಹೆಚ್ಚು ಭಾಷೆಗಳಿಗೆ ಪ್ರಾಮುಖ್ಯತೆಯನ್ನು ಕೊಡಬೇಕು—ಎಂದು ಆಯೋಗ ಸಲಹೆ ಮಾಡಿದೆ.

ಜಿಲ್ಲಾ ಮಟ್ಟದಲ್ಲಿಯೂ ಇದೇ ತತ್ವವನ್ನು ಅನುಸರಿಸುವುದೊಳಿತೆಂದು ಅದು ಹೇಳಿದೆ. ಅಂದರೆ,ಜಿಲ್ಲೆಯೊಂದರಲ್ಲಿ ೭೦% ಜನರು ರಾಜ್ಯ ಸರಕಾರದ ಅಧಿಕೃತ ಭಾಷೆಗಿಂತ ಭಿನ್ನ ಭಾಷೆಯನ್ನಾಡುವ ಗುಂಪಾಗಿ ಕಂಡುಬಂದರೆ ಅಧಿಕೃತ ಭಾಷೆಯ ಬದಲು ಸ್ಥಳೀಯ ಭಾಷೆಯನ್ನೆ ಆಡಳಿತದಲ್ಲಿ ಉಪಯೋಗಿಸಬೇಕು. ಹಾಗೆಯೇ ೩೦% ಆಲ್ಪವಿದ್ದರೂ ೧೫% ಅಥವಾ ೨೦% ನಾಗರಿಕರು ನಗರ, ಗ್ರಾಮ, ತಾಲೂಕು ಮುಂತಾದ ಬೇರೆ ಬೇರೆ ಘಟಕಗಳಲ್ಲಿ ಒಂದು ವಿಶಿಷ್ಟ ಭಾಷೆಯನ್ನಾಡುತ್ತಿದ್ದರೆ, ಆಂಥವರ ಅನುಕೂಲತೆಗಾಗಿ ಸರಕಾರದ ಪ್ರಾಮುಖ್ಯಕಾಗದ ಪತ್ರಗಳನ್ನು (ಉದಾ: ಮತದಾರ ಪಟ್ಟಿ, ರೇಶನ್ ಕಾರ್ಡು, ಸಾರ್ವಜನಿಕ ಪ್ರಕಟಣೆಗಳು ಇತ್ಯಾದಿ) ಎರಡು ಅಥವಾ ಹೆಚ್ಚು ಭಾಷೆಗಳಲ್ಲಿ ಮುದ್ರಿಸುವುದು ಅಪೇಕ್ಷಣೀಯ ಎಂದು ಆಯೋಗ ತಿಳಿಸಿದೆ. ಜಿಲ್ಲಾ ದೆ ನ್ಯಾಯಸ್ಥಾನಗಳಲ್ಲಿ ಅಲ್ಪಸಂಖ್ಯಾಕ ಭಾಷೆಯಲ್ಲಿಯೇ ಅರ್ಜಿ ಇತ್ಯಾದಿಗಳನ್ನು ದಾಖಲು ಮಾಡಲು ಅವಕಾಶವಿರಬೇಕೆಂದೂ ಅದು ಸೂಚಿಸಿದೆ ಜುನಾವಣೆಗೆ ಯಾವುದಾದರೊಂದು ಭಾಷೆಯಲ್ಲಿ ಸಾಕಷ್ಟು ಪರಿಜ್ಞಾನ ಅಗತ್ಯವೆಂದು ವಿಧಿಸುತ್ತಿದ್ದರೆ. ಅಲ್ಪ ಸಂಖ್ಯಾಕ ಗುಂಪಿನ ಭಾಷೆಗೂ ಅಂಥ ಮನ್ನಣೆ ಸಲ್ಲಬೇಕು. ಇವೆಲ್ಲವನ್ನು ಕೇಂದ್ರ ಸರಕಾರದವರು ರಾಜ್ಯ ಸರಕಾರಗಳೊಡನೆ ಪರ್ಯಾಲೋಚಿಸಿ, ಸ್ಪಷ್ಟ ನೀತಿ ಸೂತ್ರವನ್ನು ಹಾಕಿಕೊಳ್ಳಬೇಕು—ಎಂದಿವೆ ಆಯೋಗ.

(ಸಶೇಷ)

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆತ್ತಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ವ್ಯವಹಾರ ಗಣಿತಂ—

ಸಂಪಾದಕರು: ಎಂ. ಮರಿಯಪ್ಪ ಭಟ್ಟ. ಪ್ರಕಾಶಕರು: ಸರಕಾರದ ಪ್ರಾಥಮಿಕ ಪಠ್ಯಪುಸ್ತಕ ಭಂಡಾರ, ಮದ್ರಾಸು ೫. ಬೆಲೆ: ರೂ. ೩-೮-೦.

ಹನ್ನೆರಡನೇ ಶತಮಾನದ ಉತ್ತರಾರ್ಧದಲ್ಲಿದ್ದ ಕರ್ನಾಟಕದ ಜೈನ ಕವಿರಾಜಾದಿತ್ಯನು ತನ್ನ ಗಣಿತ ಗ್ರಂಥಗಳಿಗಾಗಿ ತುಂಬ ಹೆಸರು ಪಡೆದಿರುವಂತಿದ್ದಾನೆ. ಆತನು ಪ್ರತಿಭಾವಂತ ಕವಿಯಾಗಿದ್ದಂತೆ ಗಣಿತ ಸೂತ್ರಗಳನ್ನು ಸೊಗಸಾದ (ಕಂದ) ಪದ್ಯಗಳಲ್ಲಿ ಪೇಳಿದ್ದಾನೆ. ಸೊಯ್ಸಳ ಆರಸರ ಕಾಲದ ಅನೇಕ ಘಟನೆಗಳು ಈತನ ಗಣಿತ ಸಮಸ್ಯೆಗಳಲ್ಲಿ ಉಲ್ಲೇಖಗೊಂಡಿವೆ; ಅಲ್ಲದೆ ಆಕಾಲದ ತೂಕ, ಅಳತೆ, ನಾಣ್ಯ ಸಪ್ತಧಿ, ವಸ್ತುಗಳ ಬೆಲೆ ಆರ್ಥಿಕ ಹಾಗೂ ಸಾಮಾಜಿಕ ಕ್ಷೇತ್ರದ ವ್ಯವಹಾರಕ್ರಮ ಇತ್ಯಾದಿ ಸಾಮಾಜಿಕ ಮಹತ್ವದ ಸಲವಾರು ವಿಷಯಗಳ ಮೇಲೆಯೂ ಇವು ಪ್ರಕಾಶವನ್ನು ಚೆಲ್ಲುತ್ತವೆ. ೪೦ ಸಾಂಖ್ಯಾನಗಳ ವಿವರಣೆಯಿಂದ ತೊಡಗಿ ಕೂಡಿಸು, ಕಳಿ, ಗುಣಿಸು, ಭಾಗಿಸು ಎಂಬ ನಾಲ್ಕು ಮುಖ್ಯ ವಿಷಯಗಳನ್ನು ವರ್ಣಿಸಿ, ಮುಂದೆ ನಿತ್ಯಜೀವನದಲ್ಲಿ ಆವಶ್ಯಕವೆನಿಸಿದ ಅನೇಕ ಗಣಿತ ಕೃತ್ಯಗಳನ್ನು ಈ ಪುಸ್ತಕದಲ್ಲಿ ಟಿಪ್ಪಣಿ ಸಹಿತವಾಗಿ ಚರ್ಚಿಸಲಾಗಿದೆ. ರಾಜಾದಿತ್ಯನು ಸೂತ್ರರೂಪಿಸಿದ ಎಷ್ಟೋ ಕ್ರಮಗಳು ವಿದ್ಯಾರ್ಥಿಗಳಿಗೆ ನಾವಿಂದು ಪ್ರೌಢ ಮಾಧ್ಯಮಿಕ ಘಟ್ಟದವರೆಗಿನ ಶಾಲೆಗಳಲ್ಲಿ ಕಲಿಸುತ್ತಿರುವ ಸೂತ್ರಗಳನ್ನು ಜ್ಞಾಪಿಸುವಷ್ಟು ಹೋಲಿಕೆಯಿಂದ ಕೂಡಿವೆ. ಎಂಟು ಶತಮಾನಗಳಷ್ಟು ಹಿಂದಿನ ಕಾಲದಲ್ಲಿಯೇ ಕನ್ನಡಿಗರು $(n^2+n)\div 2$ ಎಂಬ ಪ್ರಸಿದ್ಧ ಗಣಿತ ಸೂತ್ರದ ತಿಳಿವಳಿಕೆಯನ್ನು ಹೊಂದಿದ್ದರೆಂಬುದನ್ನು ಈ ಪುಸ್ತಕವು ಸ್ಪಷ್ಟಪಡಿಸುತ್ತದೆ. ಸಾಮಾನ್ಯ ಬುದ್ಧಿವಂತಿಕೆಯು ಅವಶ್ಯವಿರುವ ಅನೇಕ ಪ್ರಯೋಗಗಳನ್ನೂ ಈ ಪುಸ್ತಕ ವಿವರಿಸುತ್ತದೆ. ಸಂಪಾದಕರು ಉದ್ದೇಶಕವಾದ ನುಡಿಯನ್ನು ಪುಸ್ತಕಕ್ಕೆ ಬರೆದಿರುವುದಲ್ಲದೆ ನಾಲ್ಕು ಪ್ರತಿಗಳ ನೆರವಿನಿಂದ ಪರಿಷ್ಕೃತ ಸ್ವರೂಪವನ್ನು ಪುಸ್ತಕಕ್ಕೆ ಕೊಡಲು ಪ್ರಯತ್ನಿಸಿದ್ದಾರೆ. ಗಣಿತದ ಮೇರೆಗಿನ ಮೋಹದಿಂದ ಪ್ರಾಚೀನ ಸಾಮಾಜಿಕ ಚಿತ್ರಣದ ಲೋಕದ ಜಾಲದೊಳಗೆ ಬಂದು ಇಣುಕಿದವರೂ ಈ ಪುಸ್ತಕವನ್ನು ಕನ್ನಡ ಸಾಹಿತ್ಯಭಂಡಾರಗಳು ಆದರಿಸಲಿ! ಹಾಗೆ ಕನ್ನಡದಲ್ಲಿ ಗಣಿತಶಾಸ್ತ್ರ ಗ್ರಂಥಗಳನ್ನು ಮೊದಲನೆಯದಾಗಿ ಬರೆದ ಕವಿಯನ್ನು ಗೌರವಿಸಲಿ!

(೧೦ನೇ ಪುಟದಿಂದ)

ಜನರು ಹೊಸ ವಾತಾವರಣಕ್ಕೆ ಸುಲಭವಲ್ಲಿ ಒಗ್ಗಿಕೊಂಡರೆಂಬ ವಿಚಾರಕ್ಕೆ ಸ್ವಲ್ಪ ಮಟ್ಟಿಗೆ ತೃಪ್ತಿ ನೀಡುತ್ತದೆ. ಆದರೆ, ಇಷ್ಟರಿಂದಲೇ ಆಡಳಿತಗಳನ್ನು ದೂರ ಮಾಡಲಾಯಿತೆ? ಸಂಪ್ರದಾಯ ಬಂಧನವನ್ನು ಕಳಚಲು ವ್ಯವಸ್ಥಿತವಾದ ಕಾರ್ಯಕ್ರಮವೇನನ್ನೂ ಹಾಕಿಕೊಳ್ಳಲಿಲ್ಲವೆ?

ಈ ವಿಷಯದಲ್ಲಿ ನಜಿದ ಪ್ರಯತ್ನವೇ ಅತ್ಯಧಿಕ ಎಂಬುದು ವಿಚಾರಾರ್ಹವಲ್ಲ. ಜನವರಿಕೆಯಾಗುತ್ತದೆ ವ್ಯಾಪಾರ ಪ್ರತಿನಿಧಿಗಳ ಅವಿಶ್ರಾಂತ ದುಡಿಮೆಯೇ ಎಲ್ಲ ಹೊಸ ಸಂಶೋಧನೆಗಳನ್ನೂ ಇಷ್ಟು ಜನಪ್ರಿಯವಾಗಿ ಸಾಧಿಸಿದೆ. ಸಾಮಾನ್ಯ ಜನರನ್ನು ಕಂಡು, ಉತ್ತಮ ಜೀವನದ ಚಿತ್ರವನ್ನು ಅವರ ಮುಂದೆ ಬೀರಿ, ಸೂಕ್ತ ಸಲಕರಣೆಗಳ ಕೂಡುವ ಪ್ರತಿಭೆಯನ್ನು ಪುಟ್ಟುಸುವ ಧನವಾದ ಕಾರ್ಯ ಇವರದು.

ಏನೋ ಒಂದು ಕೊರತೆಯ ಅನುಭವವನ್ನು ಉಂಟು ಮಾಡಿ, ಆವನ್ನು ನಿವಾರಿಸುವ ಉತ್ಸಾಹವನ್ನು ಹುಟ್ಟಿಸಿ, ಉಪಯುಕ್ತ ಸಾಮಾಗ್ರಿಗಳನ್ನು ಸೆಚ್ಚತನದಿಂದ ಸಾಧಿಸುವ ಜಾಣ್ಮೆ ವ್ಯಾಪಾರಿ ಪ್ರತಿನಿಧಿಗಳಿಗೆ ಕರಗತವಾಗಿದ್ದಿದ್ದರೆ ಯಾವ ಸರಕಾರವೂ ನಿರಾಕರಿಸಲಿಲ್ಲದ ಸರಕಿಗೆ ನಿರಾಕರಿಸಲ್ಪಡಿದ್ದರೆ ನಾಗರಿಕತೆ ಎಷ್ಟು ಮುಂದರಿಯುತ್ತಿದೆ ಎಂಬುದು ನನಗೆ ಅನುಭವಕ್ಕೆ ಬಂದಿದೆ. ಹೊಸ ಸಂಶೋಧನೆಗಳಿಗೆ ಜನಪ್ರಿಯತೆಯ ಮತ್ತು ಬೇಡಿಕೆಯ ಸ್ವಾಗತ ಪತ್ರ ಚೊರಕಿದ್ದರೆ—ಜಗತ್ತು ಇಷ್ಟು ಮುಂದರಿಯುತ್ತಿರಲಿಲ್ಲ ಅಂಥ ವಾತಾವರಣವನ್ನು ನಿರ್ಮಿಸಿದ ಕೀರ್ತಿ ವ್ಯಾಪಾರಿ ಪ್ರತಿನಿಧಿಗಳಿಗೆ ಸಲ್ಲುತ್ತದೆ

ಹೊಸ ವಿಚಾರಗಳು ಆಸೇಕರ ತಲೆಯಲ್ಲಿ ಮೂಡಬಹುದು, ಅವುಗಳನ್ನು ವ್ಯವಸ್ಥಿತ ರೀತಿಯಲ್ಲಿ ಕಾರ್ಯಗತಗೊಳಿಸುವುದಕ್ಕೆ ಅಸಾಮಾನ್ಯ ಪ್ರತಿಭೆಬೇಕಾಗುತ್ತದೆ. ನಾವು ಇವರನ್ನು ಸಂಶೋಧಕರೆಂದು —ತಡವಾಗಿಯಾದರೂ —ಗೌರವಿಸುತ್ತೇವೆ. ಇಂಥ ಗೌರವವನ್ನು ಸಂಶೋಧಕರಿಗೆ ತಂದು ಕೊಡುವವರೇ ವ್ಯಾಪಾರಿ ಪ್ರತಿನಿಧಿಗಳು ಎನ್ನಬೇಕಾಗುತ್ತದೆ. ಅವರ ನಿರಂತರ ಸಾಹಸವಿಲ್ಲದೆ ಹೋದರೆ ಜನರಲ್ಲಿದ್ದ ಜಡ್ಯತ್ವ, ತಿರಸ್ಕಾರ ಮತ್ತು ಉಪೇಕ್ಷೆಯ ಧನವನ್ನು ಕುತೂಹಲ, ವ್ಯಾಮೋಹ ಮತ್ತು ಆದರಗಳು ಅಕ್ರಮಿಸುವಂತಿರಲಿಲ್ಲ ಕಾರಣ, ಭಾರತದಲ್ಲಿ ಹೊಸ ಸಂಶೋಧಕರಿಗೆ ಉತ್ತೇಜನ ಕೊಡಬೇಕು; ಸಂಗತಿಯ ತಕ್ಕ ಪ್ರಚಾರ ಕಾರ್ಯಕ್ರಮವನ್ನು ಆರಂಭದಿಂದ ನಡೆಸಬೇಕು. ಆಗ ನಾವು ಮಹತ್ವದ ಹೆಜ್ಜೆಯೊಂದನ್ನು ಪ್ರಗತಿ ಪಥದಲ್ಲಿಟ್ಟಂತಾಗುತ್ತದೆ.

ನಿಮ್ಮಿಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—



[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ.
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಮುಖ್ಯ ಸ್ಥಳ
ನವಭಾರತ ಪುಸ್ತಕ ಭಂಡಾರ, ಉಡುಪಿ

Edited, Printed & Published By K. H. Shetty, at the Navayuga Press, Udipi S India

REGD. NO. M. 3618

LICENCE NO. 31
Licensed to Post without Prepaymen

ನವಯುಗ

ಸಂಪುಟ ೩೫ VOL. 35

ಉಡುಪಿ, 15—12—1955

ಸಂಚಿಕೆ ೧೬ NO. 16

ತುಟಿ ಮೀರಿದ ಮಾತು

ಗೋವೆಯ ವಿಷಯದಲ್ಲೀಗ ಮರಳಿ ಬಿರುಗಾಳಿ ಎದ್ದಿದೆ. ಇದಕ್ಕೆ ಕಾರಣ ಅಮೇರಿಕದ ವಿದೇಶ ಖಾತೆಯ ಕಾರ್ಯದರ್ಶಿ ಡಲ್ಲೇಸರು ಪೋರ್ಚುಗಾಲಿನ ವಿದೇಶ ಮಂತ್ರಿ ಡಾ. ಪಾವುಲೊ ಕುಂಞರೊ ಡನೆ ಸೇರಿ ಹೊರಡಿಸಿದ ಸಂಯುಕ್ತ ಪ್ರಕಟಣೆಯಾಗಿದೆ. ನೆಹರುಗಳು ಈ ಕುರಿತು ಲೋಕಸಭೆಯಲ್ಲಿ ಮಾತನಾಡುತ್ತಾ "ಸಂಯುಕ್ತ ಪ್ರಕಟಣೆಯ ಕುರಿತು ಸರಕಾರದ ನಿಲುವೇ ಏನೆಂಬುದನ್ನು ಸ್ಪಷ್ಟ ಪಡಿಸಬೇಕೆಂಬುದನ್ನು ನಾನು ಒಪ್ಪುತ್ತೇನೆ. ಇದು ಬಹಳ ಮುಖ್ಯವಾದ ವಿಷಯ. ಅದು ಮುಖ್ಯವಾದುದರಿಂದಲೇ ಬಹಳ ದೂರ ಗಾಮಿಯಾದ ಪರಿಣಾಮಗಳನ್ನುಂಟು ಮಾಡುವ ವಿಷಯವೆಂಬುದೂ ನಿಜ. ಆದರೆ ಅದರ ಕುರಿತು ಹೆಚ್ಚಿಗೇನನ್ನೂ ಹೇಳುವುದಕ್ಕೆ ಮುಂಚೆ ರಾಜಕೀಯ ಮಟ್ಟದಲ್ಲಿ ಸ್ವಾಸ್ಥ್ಯಪೂರ್ಣ ಕ್ರಮಗಳನ್ನು ತೆಗೆದುಕೊಂಡು ವಿಷಯವನ್ನು ಅಧಿಕೃತವಾಗಿ ತಿಳಿಯಲು ಅಪೇಕ್ಷಿಸುತ್ತೇನೆ" ಎಂದಿದ್ದಾರೆ.

ಭಾರತ ಸರಕಾರಕ್ಕೆ ಇಷ್ಟರಲ್ಲಿಯೇ ಅಧಿಕೃತ ಮಾಹಿತಿ ಬಂದಿರಬಹುದು. ಅದೇನಿದ್ದರೂ ಸಾರ್ವಜನಿಕರ ಮಟ್ಟಿಗೆ ಡಲ್ಲೇಸರು ಸಂಯುಕ್ತ ಪ್ರಕಟಣೆಯ ಕುರಿತು ಪತ್ರಿಕೋದ್ಯಮಿಗಳ ಪ್ರಶ್ನೆಗೆ ಉತ್ತರಿಸುತ್ತಾ ಹೊರಗೆಡವಿದರೆನ್ನಲಾದ ವಿಷಯಗಳು ಅಮೇರಿಕದ ನಿಲುಮೆಯನ್ನು ಗ್ರಹಿಸಲು ಸಾಕಷ್ಟು ದತ್ತಾಂಶಗಳನ್ನು ಒದಗಿಸುತ್ತವೆ. ಡಲ್ಲೇಸರು ಹೇಳುವುದೇನು? "ನಾನು ತಿಳಿದ ಮಟ್ಟಿಗೆ ಇಡೀ ಲೋಕವೇ ಗೋವೆಯು ಪೋರ್ಚುಗಾಲಿನ ಪ್ರಾಂತ್ಯವೆಂದು ಭಾವಿಸಿದೆ. ಕಳೆದ ನಾಲ್ಕೂರು ವರ್ಷಗಳಿಂದ ಇದು ಹಾಗಿದೆ. ಗೋವೆ ಮತ್ತಿತರ ಪೋರ್ಚುಗೀಜ ಪ್ರದೇಶಗಳು ಪೋರ್ಚುಗಾಲಿನ ಘಟನೆಯ ಅಧೀನವಿವೆ; ಅಲ್ಲಿಯ ನಿವಾಸಿಗಳು ಪೋರ್ಚುಗಾಲಿನ ನಾಗರಿಕರ ಪೂರ್ಣಾಧಿಕಾರವನ್ನು ಅನುಭವಿಸುತ್ತಿದ್ದಾರೆ. ಪೋರ್ಚುಗಾಲಿನ ಘಟನೆಯನ್ನಲ್ಲದೆ ಈ ಪ್ರದೇಶಗಳ ಸ್ವಾತಂತ್ರ್ಯದ ಕುರಿತು ಯಾವದೇ ವಿವಾದವಿರುವುದು ಸಾಧ್ಯವಿಲ್ಲ."

ಇದನ್ನು ಭಾರತೀಯರು ಎಂದಾದರೂ ಒಪ್ಪುವಂತಿದೆಯೆ? ಘಟನಾತ್ಮಕ ಹಕ್ಕು ಎಂದು ಪೋರ್ಚುಗೀಜರು ಹೇಳುತ್ತಿರುವುದರಲ್ಲಿ ಹುರುಳಿಲ್ಲವೆಂಬುದೇ ಭಾರತೀಯರ ಸಾಮಾನ್ಯ ನಿಲುಮೆಯಾಗಿದೆ. ಗೋವೆಯು ವಸಾಹತುವಲ್ಲ; ಅದು ಪೋರ್ಚುಗಾಲಿನ ಅವಿಭಾಜ್ಯ ಅಂಗವೆಂದು ಡಾ. ಸಾಲಾಝಾರರು ಹೇಳುತ್ತಿರುವುದನ್ನು ಒಪ್ಪಿದ ಭಾರತೀಯರಿಲ್ಲ. ಒಪ್ಪುವುದು ಸಾಧ್ಯವೂ ಇಲ್ಲ. ನಾಲ್ಕೂರು ವರ್ಷಗಳಿಂದ ಅಡಳಿತ ನಡೆಸಿದ ಪೋರ್ಚುಗೀಜರು ವಸಾಹತುಗಳಿಗಿಂತ ಜೆನ್ನಾಗಿ ಈ ಪ್ರದೇಶಗಳನ್ನು ನಡೆಸಿಕೊಂಡಿಲ್ಲ. ಗೌಣನೇ ಇರಬಹುದಷ್ಟು ಈಚಿಗೆ ವಸಾಹತುಗಳನ್ನು ಬೇಗಾದರೂ ಉಳಿಸಿಕೊಳ್ಳುವ ತೀವ್ರಚ್ಛೆಯಿಂದ ಪೋರ್ಚುಗಾಲಿನ ಘಟನೆಯನ್ನೇ ಈ ಭೂಪ್ರದೇಶಕ್ಕೆ ನೇರಾಗಿ ಅಪ್ವಯಿಸಲಾಯಿತು. ಆದರೆ ಈಗಲಾದರೂ ಪೋರ್ಚುಗಾಲಿನ ನಾಗರಿಕರ ಹಕ್ಕು ಬಾಧ್ಯತೆಗಳು ಅಲ್ಲಿ ಎಲ್ಲಿವೆ? ಇದ್ದರೂ ಭಾರತದ ನೆಲದೊಡನೆ ಎಲ್ಲ ರೀತಿಯಿಂದಲೂ ಸೇರಿ ಹೋಗಿರುವ ಹಾಗು ಅತಿನಿಕಟವಾಗಿ ಪ್ರತಿಯೊಂದೂ ದೃಷ್ಟಿಕೋಣದಿಂದ ಹೊಂದಿಕೊಂಡಿರುವ ಗೋವೆಯು ಆರು ಸಾವಿರ ಮೈಲು ದೂರದ ಪೋರ್ಚುಗಾಲಿನ ಅವಿಭಾಜ್ಯ ಅಂಗವಾಗುವುದು ಹೇಗೆ? —ತಿಳಿಯದು.

ಡಲ್ಲೇಸರ ಇನ್ನೊಂದು ಮಾತನ್ನೆ ತೆಗೆದುಕೊಳ್ಳೋಣ. ಉತ್ತರ ಅಟ್ಲಾಂಟಿಕ್ ಒಪ್ಪಂದದ ಕಕ್ಷೆಯಲ್ಲಿ ವಿಶ್ವದಲ್ಲಿರುವ ಗೋವೆ ಇತ್ಯಾದಿ ಪ್ರದೇಶಗಳು ಬರಲಾರವೆಂದು ಅವರು ಹೇಳುತ್ತಾರೆ ಅದು ಹೇಗೆ? ಪೋರ್ಚುಗಾಲಿನ ಅವಿಭಾಜ್ಯ ಅಂಗವೆಂದು ಒಪ್ಪಿಕೊಂಡ ಮೇಲೆ ಒಪ್ಪಂದದ ಕಕ್ಷೆಯಲ್ಲಿ ಪೋರ್ಚುಗಾಲಿನ ಭೂಭಾಗವೊಡನೆ ಗೋವೆ ಮುಂತಾದ ಪ್ರದೇಶಗಳೂ ಸಹಜವಾಗಿಯೇ ಸೇರಿಕೊಳ್ಳಬೇಕಾಗುತ್ತದೆ. ಹಾಗಾಗದು ವೆಂದಿಲ್ಲ ಎಂದು ಡಲೇಸರು ಹೇಳುವುದು ನ್ಯಾಯೋಚಿತವೆನಿಸುವುದಿಲ್ಲ. ಡಲೇಸರು ಗೋವೆಯ ಕುರಿತು ಒಪ್ಪಂದವನ್ನು ಅನ್ವಯಿಸುವಷ್ಟು ಮುಂದೆ ಹೋಗಬೇಕೆಂದು ನಮ್ಮ ವಾದವಲ್ಲ—ಹಾಗಾಗದೆ ಈಗ ಆ ಪರು ಹೇಳಿರುವಹಾತೆ ಕೊನೆಯ ವರೆಗೆ ಉಳಿದರೆ ನಮಗೆ ಸಂತೋಷ. ಆದರೆ ಇದರ ಕುರಿತು ಭರವಸೆಯನ್ನು ಹೊಂದುವಂತಿಲ್ಲ—ಏಕೆಂದರೆ, ಡಲ್ಲೇಸರ ಕೈಯಲ್ಲಿ ವಿದೇಶ ಘೋರಣೆಯು ಹೇಗೆ ಬೇಕೆಂದರೆ ಹಾಗೆ, ಯಾವಾಗ ಬೇಕೆಂದರೆ ಆಗ, ಬದಲಾಯಿಸಬಲ್ಲುದೆಂಬುದಕ್ಕೆ ಅವರ ಈಗಿನ ಅಂತರ್ಧಾರ್ಗವೇ ನಿದರ್ಶನ.

ಉದಾಸರಣೆಗೆ ಅವರು ಆಗೋಸ್ತಿನ ೨ನೇ ದಿನಾಂಕ ಏನು ಹೇಳದರೆಂದು ನೋಡೋಣ—"ಗೋವೆಯ ಕುರಿತಾದ ಘರ್ಷಣೆಯಿಂದ ಅಮೇರಿಕವು ತುಂಬ ಕಳವಳಗೊಂಡಿದೆ. ಭಾರತ ಸರಕಾರವು ಗೋವೆಯನ್ನು ಪುನಃ ತೆಗೆದುಕೊಳ್ಳಲು ಬಲ ಪ್ರಯೋಗ ಮಾಡುವುದಿಲ್ಲವೆಂಬ ನೆ ಹುಗಳ ಹೇಳಿಕೆಯಿಂದ ನನಗೆ ಸಂತೋಷವಾಗಿದೆ. ಅಮೇರಿಕವು ಯಾವಾಗಲೂ ಸಂಯುಕ್ತ ರಾಷ್ಟ್ರ ಸಂಘದ ತಾಮ್ರ ಪಟವನ್ನು ಎತ್ತಿ ಹಿಡಿಯುತ್ತದೆ; ಮತ್ತು ಶಾಂತಿಯುತವಾದ ಪದ್ಧತಿಯಿಂದ ವಿವಾದಗಳು ಬಗೆಹರಿಯಬೇಕೆನ್ನುತ್ತದೆ ನೆಹರುಗಳು ಈ ತತ್ವವನ್ನು ದೃಢೀಕರಿಸಿದುದರಿಂದ ನನಗೆ ಆನಂದವೆನಿಸಿದೆ. ಪೋರ್ಚುಗಾಲವೂ ಇದೇ ದೃಷ್ಟಿಕೋಣವನ್ನಿಟ್ಟುಕೊಳ್ಳುವುದೆಂದು ನಂಬುತ್ತೇನೆ." ಎಂಬುದಾಗಿ ಆಗ ಡಲ್ಲೇಸರು ಹೇಳಿದ್ದರು. ಈಗ ಪರಿಸ್ಥಿತಿಯು ಬದಲಾಗಿದೆಯೆ? "ಈ ವಿಷಯದಲ್ಲಿ ಬಲತ್ಕಾರವನ್ನು ಬಿಟ್ಟುಗೊಡಬೇಕೆಂದು ಅಮೇರಿಕ ಒತ್ತಾಯಪೂರ್ವಕ ತೀಳುತ್ತದೆ. ನಾವು ಹೊರಡಿಸಿದ ಸಂಯುಕ್ತ ಪ್ರಕಟಣೆಯು ಶಾಂತ ವಿಧಾನದಿಂದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ವಿರುದ್ಧವಾಗಿ ದ್ವೇಷ ಮತ್ತು ಆಗ್ರಹವನ್ನು ತೋರ್ಪಡಿಸುವುದಕ್ಕೆ ಉದ್ಯುಕ್ತವಾದ ಹೇಳಿಕೆಗಳನ್ನು ಉದ್ದೇಶಿಸಿದೆ. ರಷಿಯದ ಧೋರಣರು ಭಾರತ ಸಂದರ್ಶನ ಕಾಲದಲ್ಲಿ ಭಾವಾತ್ಮಕ ಉದ್ರೇಕವನ್ನು ಹುಟ್ಟಿಸಲು ನೋಡಿದುದರ ವಿರುದ್ಧ ಸ್ವರವನ್ನೆತ್ತುವುದೇ ಈ ಪ್ರಕಟಣೆಯ ಹೇತು. ರಷಿಯದ ನಾಯಕರು ಗೋವೆಯ ಕುರಿತಾಡಿದ ಮಾತುಗಳು ಬಲಪ್ರಯೋಗವನ್ನು ಪ್ರೇರೇಪಿಸುವ ವಾತಾವರಣವನ್ನು ಉಂಟು ಮಾಡುವಂಥ ಪುಗಳೆಂದು ತೋರಿದುದರಿಂದ ನಾವು ಆಕ್ಷೇಪಿಸಿತ್ತಿದ್ದೇವೆ."

ಇದನ್ನು ನೋಡಿದರೆ, ರಷಿಯದ ಧುರೀಣರು ಕೊಟ್ಟ ಹೇಳಿಕೆಗಳಿಂದ ಭಾರತ ಸರಕಾರವು ಬಲಪ್ರಯೋಗಕ್ಕೆ ಹೋಗುವುದೆಂದು ಅಮೇರಿಕ ಅಭಿಪ್ರಾಯ ಪಟ್ಟಿದೆ ಎಂದು ಅರ್ಥವಾಗುತ್ತದೆ. ರಷಿಯದ ನಾಯಕರು ಎಂದಾದರೂ ಬಲಾತ್ಕಾರವಾಗಿ ಗೋವೆಯನ್ನು ವಶಪಡಿಸಿಕೊಳ್ಳಬೇಕೆಂದು ತಮ್ಮ ಭಾಷಣದಲ್ಲಿ ಸೂಚಿಸಿದ್ದಿದೆಯೆ? ಇಲ್ಲವೇ ಇಲ್ಲ—ಅವರು ವಸಾಹತುವಾದದ ಅಳಿಗಾಲ ಸಮೀಪಿಸಿದೆ; ಆದುದರಿಂದ ಗೋವೆಯಲ್ಲಿ ಪೋರ್ಚುಗೀಜರು ಇನ್ನು ಉಳಿಯುವುದಕ್ಕೆ ನ್ಯಾಯವಿಲ್ಲ; ನಾಗರಿಕ ಜಗತ್ತು ಇದನ್ನು ಒಪ್ಪದು; ಅದು ಭಾರತವನ್ನು ಸೇರುವುದೇ ನಿಶ್ಚಯ ಎಂದಿದ್ದರು ಇದಕ್ಕೆ ಅಮೇರಿಕ ಆಕ್ಷೇಪವೆತ್ತುತ್ತದೆಯೆ? ವಸಾಹತುವಾದದ ವಿರುದ್ಧ ಅದು ಸ್ವತಃ ಬ್ರಿಟನಿನೊಡನೆ ಹೋರಾಡಿ ಸ್ವಾತಂತ್ರ್ಯವನ್ನು ಸಂಪಾದಿಸಿದೆ. ಕಳೆದ ಎರಡು ಶತಕಗಳಿಂದ ವಸಾಹತುವಾದದ ವಿರುದ್ಧ ತನ್ನ ಧ್ವನಿಯನ್ನೆತ್ತಲು ಪ್ರತಿಯೊಂದೂ ಸಂದರ್ಭವನ್ನು ಉಪಯೋಗಿಸಿದೆ. ಎರಡು ನೂರು ವರ್ಷಗಳಿಂದ ಬೀಡು ಬಿಟ್ಟಿದ್ದ ಬ್ರಿಟಿಷರೂ ಫ್ರೆಂಚರೂ ಭಾರತದಿಂದೆ—ಹಾಗು ಇತರ ಏಶ್ಯದ ರಾಷ್ಟ್ರಗಳಿಂದ—ಕಾಲ್ತೆಗೆದುದನ್ನು ನೋಡಿದೆ; ಅದಕ್ಕಾಗಿ ಸಂತೋಷಿಸಿದೆ. ಈಗ ಪೋರ್ಚುಗೀಜರೂ ಈ ಮಾದರಿಯನ್ನನುಸರಿಸಬೇಕೆಂದು ಹೇಳುವಾಗ ತನ್ನ ಸಂಪ್ರದಾಯಕ್ಕೆ ಉದ ವಿರುದ್ಧ ನಿಂತಿರುವುದೇಕೆ? ಗೋವೆಯು ಒಂದು ವಸಾಹತು ಎಂಬ ನಿಲುಮೆಯನ್ನು ಎತ್ತಿ ಹಿಡಿಯದೆ ಪೋರ್ಚುಗಾಲದ ಘಟನೆಯನ್ನು ಉಲ್ಲೇಖಿಸುವುದೇಕೆ? ತೈವಾನವು (ಫೊರ್ಮೋಸ) ಕೆಂಪು ಚೀನದ ಪ್ರದೇಶವೆಂದು ಆ ರಾಷ್ಟ್ರದ ಘಟನೆಯಲ್ಲಿರುವುದನ್ನು ಮನ್ನಿಸದ ಅಮೇ

(೭ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಸ್ಥಾಪನೆ: ೧೯೨೫] [ಸ್ರಧಾನ ಕಾರ್ಯಾಲಯ: ಉಡುಪಿ, ದ.ಭಾರತ.

ಮನೆಯಂತಿರುವ ಸ್ಥಳ ಬೇರೊಂದಿಲ್ಲ.

ಸುಖ, ಸೌಕರ್ಯ, ಶಾಂತಿಗಳಿಗೆ ನಿಜವಾಗಿಯೂ ಮನೆಯೇ ಅತ್ಯುತ್ತಮ ಸ್ಥಾನ. ಆದರೆ ತಮ್ಮ ಹಣವನ್ನು ಕಾಪಾಡಿಕೊಳ್ಳಲು ಅದು ಅತ್ಯುತ್ತಮ ಸ್ಥಳ ವಾಗದು. ನಮ್ಮ ಬ್ಯಾಂಕಿನಲ್ಲಿ ಒಂದು "ಸೇವಿಂಗ್ಸ್ ಬ್ಯಾಂಕ್" ಲೆಕ್ಕವನ್ನು ಆರಂಭಿಸುವುದು ಅದೆಷ್ಟು ಜಾಣ್ಮೆಯ ಕಾರ್ಯವಾಗದು! ಸ್ವಲ್ಪವೇ ಹಣದಿಂದ ನಮ್ಮಲ್ಲಿ ಲೆಕ್ಕ ಆರಂಭಿಸಬಹುದು. ನಮ್ಮ ನೌಕರರು, ನಾವು ನಿಮಗೆ ಸಹಕರಿಸ ಬಹುದಾದ ಅನೇಕ ರೀತಿಗಳನ್ನು ಸೂಚಿಸಲು ಸಿದ್ಧರಾಗಿರುವರು.

ಚಲಾವಣೆ ಭಂಡವಾಳ ರೂ. ೭,೫೦,೦೦,೦೦೦ಗೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.
Estd: 1925] [Head Office: UDIPI, S. India.

ವಾರ್ಷಿಕ ಚಂದಾ: ರೂ. ೫—೦೦—೦ NAVAYUGA WEEKLY, UDIPI. ಬಿಡಿ ಸಂಚಿಕೆ ಎರಡಾಣೆ

ದೇಶೀಯ ರಾಜರ ಪಾಲಿನ ಸುವರ್ಣಯುಗದ ಕೊನೆಗಾಲ

ಆಂಗ್ಲ ಪ್ರಭುತ್ವದ ಆಶ್ರಯದಲ್ಲಿ ಅವರಿಗಿದ್ದ ತೃಪ್ತಿಯ ಚಿತ್ರ

ಫಜಲಾಲಿ ಆಯೋಗವು ರಾಜ ಪ್ರಮುಖ ಹುದ್ದೆಯನ್ನು ರದ್ದುಪಡಿಸಬೇಕೆಂದು ಮಾಡಿರುವ ಯೋಗ್ಯ ಸೂಚನೆಯಿಂದಾಗಿ ಭಾರತೀಯ ರಾಜರುಗಳ ಪುರಾಣ ಯುಗಕ್ಕೊಂದು ಅಂತ್ಯ ಸವಿೂಪಿಸುತ್ತಿರುವಂತೆ ಕಾಣುತ್ತದೆ. ಸೂರ್ಯ ಮತ್ತು ಚಂದ್ರರ ವಂಶಜರೆಂದು ಕೊಳ್ಳುತ್ತಿದ್ದ ಈ ಸಾಹಸಿಗಳು ಹಲವು ದಶಕಗಳ ವರೆಗೆ ಸ್ವತಂತ್ರ ಭಾರತವು ತಲೆ ಎತ್ತುವುದನ್ನು ತಡೆದು ಹಿಡಿದಿದ್ದರು.

ನೈಸರಾಯಿಯ ಅಭಿಪ್ರಾಯ

ಭಾರತೀಯ ರಾಜ-ಮಹಾರಾಜರುಗಳ ಪಾತ್ರವನ್ನು ಕುರಿತು ಮಾತನಾಡುತ್ತಾ ೧೯೪೪ರಲ್ಲಿ ವೈಸರಾಯಿಯಾಗಿದ್ದ ಲಾರ್ಡ್ ಲಿನ್‌ಲಿತ್‌ಗೋ ಹೀಗೆಂದರು- "ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯು ದೇಶೀಯ ರಾಜರ ಅಸ್ತಿತ್ವದೊಡನೆ ಚಿತಿ ನಿಕಟವಾಗಿ ಹೊಂದಿಕೊಂಡಿದೆ; ಒಮ್ಮೆ ಈ ದೇಶೀಯ ಸಂಸ್ಥಾನಗಳನ್ನು ಬ್ರಿಟಿಷ್ ಪ್ರಾಬಲ್ಯಕ್ಕೆಗೊಡನೆ ವಿಲೀನಗೊಳ್ಳಲು ಒತ್ತಾಯಿಸಿದುದಾದರೆ, ಭಾರತದಲ್ಲಿ ಬ್ರಿಟಿಷರ ಭವಿಷ್ಯವು ತತ್ತರಿಸುವುದು ನಿಶ್ಚಯ."

ಭಾರತದಲ್ಲಿ ೧೯೫೦ನೇ ಇಸವಿಯ ಪೊತ್ತಿಗೆ ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಡಾಲಹೌಸಿಯ ಕಾಲದ ವರೆಗೆ, ದೇಶೀಯ ರಾಜರುಗಳಿಗೆ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯು ರಕ್ಷಣೆಗೆ ತನ್ಮನ್ನೊಮ್ಮೆ ಒಪ್ಪಿಸಿಕೊಂಡ ಬಳಿಕ ಚಿಂತಿಸಬೇಕಾದ ವಿಷಯವೇ ಇರಲಿಲ್ಲ. ಆದರೆ "ಡಾಕ್ಟ್ರಿನ್ ಆಫ್ ಲ್ಯಾಪ್ಸ್" ಎಂಬ ನೂತನ ಸೂತ್ರವನ್ನು ಜಾರಿಗೆ ತಂದು ದೇಶೀಯ ರಾಜರು ದತ್ತಕ್ಕೆ ತೆಗೆದುಕೊಂಡ ಮಕ್ಕಳಿಗೆ ಉತ್ತರಾಧಿಕಾರಿತ್ವವನ್ನು ಶಾಸನಬದ್ಧವಾಗಿ ಮನ್ನಿಸುವುದು ಅಥವಾ ನಿರಾಕರಿಸುವುದು ತನ್ನ ಮರ್ಜಿಗೆ ಸೇರಿದ ವಿಷಯವೆಂದು ಲಾರ್ಡ್ ಡಾಲಹೌಸಿ ಸಾರಿದಾಗ, ಈ ರಾಜರ ಪರಮಾಧಿಕಾರ ಸಂಪೂರ್ಣವಾಗಿ ನತಿಸಿ ಹೋಯಿತು.

ಅದಾಗ್ಯೂ ಹೆಚ್ಚಿನ ದೇಶೀಯ ಸಂಸ್ಥಾನಿಕರು ಎಚ್ಚರಗೊಳ್ಳದೆ ಬ್ರಿಟಿಷರು ಸಿಪಾಯಿ ದಂಗೆ ಎಂದು ಕರೆಯುವ ಪ್ರಥಮ ಭಾರತೀಯ ಸ್ವಾತಂತ್ರ್ಯ ಯುದ್ಧದಲ್ಲಿ (೧೮೫೭) ಆಸಕ್ತಿಯನ್ನು ವಹಿಸದೆ ಹಿಂದೆಯೇ ಉಳಿದದ್ದು ಅವರ ಮೇಲಿನ ದೊಡ್ಡ ಕಳಂಕವಾಗಿದೆ. ಕೆಲವು ಮಂತ್ರಾ ಪಮಂಡಿರನ್ನು ಬಿಟ್ಟರೆ ಶೂರರಾದ ಭಾರತೀಯ ಯೋಧರಿಗೆ ನೆರವಾಗುವ ಯಾವುದೇಕೆಲಸವನ್ನು ದೇಶೀಯ ಸಂಸ್ಥಾನಿಕರುವಾಡಲಿಲ್ಲ. ಬದಲಿಗೆ ಪಾಟಿಯಾಲದ ಮಹಾರಾಜರೇ ಮುಂತಾದ ಕೆಲವರು ಸ್ವಾತಂತ್ರ್ಯ ಯುದ್ಧವನ್ನು ಹತ್ತಿಕ್ಕುವುದಕ್ಕೆ ಬ್ರಿಟಿಷರಿಗೆ ಧಾರಾಳವಾಗಿ ಸಹಾಯವನ್ನೆ ಸಲ್ಲಿಸಿದರು.

ರಾಣಿಯ ಭರವಸೆ

ವಿಕ್ಟೋರಿಯ ಮಹಾರಾಣಿಯು ಆಂಗ್ಲ ಪ್ರಭುತ್ವಕ್ಕೆ ಸ್ಥಳೀಯ ಸಾಮ್ರಾಸಿಕರ ಹೆಕ್ಕು ಬಾಧ್ಯತೆಗಳ ಕ್ಷೇತ್ರದಲ್ಲಿ ಹಸ್ತಕ್ಷೇಪ ಮಾಡುವ ಇಚ್ಛೆ ಇಲ್ಲವೆಂದು ಘೋಷಿಸಿದಳು. ಆಂಗ್ಲ ಪ್ರಭುತ್ವದ ಸಂತೋಷ ಬಲದಿಂದ ಸಿಂಹಾಸನದಲ್ಲಿ ಸಂಸ್ಥಾನಿಕರು ಕುಳಿತಿರುವಷ್ಟು ಕಾಲ "ಡಾಕ್ಟ್ರಿನ್ ಆಫ್ ಲ್ಯಾಪ್ಸ್" ಸೂತ್ರವನ್ನು ಅನ್ವಯ ಮೇಲೆ ಹೇರುವುದಿಲ್ಲ ವೆಂದೂ ಅವಳು ಭರವಸೆ ನೀಡಿದಳು.

ದೇಶೀಯ ಸಂಸ್ಥಾನಿಕರು ಈ ಸವಲತ್ತುಗಳ ಪ್ರಯೋಜನವನ್ನು ೧೯೪೭ರಿಂದ ೧೯೪೯ನೇ ಇಸವಿಯ ವರೆಗೆ ಧಾರಾಳವಾಗಿ ಪಡೆದುಕೊಂಡರು. ಭಾರತದ ಇತಿಹಾಸದಲ್ಲಿ ಹಿಂದೆಂದೂ ಇರದಷ್ಟು ಭದ್ರವಾಗಿ ಇವರು ಈ ದೀರ್ಘಾವಧಿಯಲ್ಲಿ ಸಿಂಹಾಸನದ ಮೇಲೆ ನಿಶ್ಚಿಂತೆಯಿಂದ ಒರಗಿಕುಳಿತರು.

ಆಂಗ್ಲ ಪ್ರಭುತ್ವವು ಸ್ಥಳೀಯ ವ್ಯವಹಾರದ ನಿಟ್ಟಿಗೆ ದೇಶೀಯ ಸಂಸ್ಥಾನಿಕರ ಆಡಳಿತದಲ್ಲಿ ಹಸ್ತಕ್ಷೇಪವನ್ನು ಮಾಡುತ್ತಿರಲಿಲ್ಲ. ಆದರೆ ಎಲ್ಲ ಸಂಸ್ಥಾನಗಳಲ್ಲಿಯೂ ಆಂಗ್ಲ ಪ್ರಭುತ್ವದ ಪ್ರತಿನಿಧಿಯೊಬ್ಬನು (ಬ್ರಿಟಿಷ್ ರೆಸಿಡೆಂಟ್) ಸಂಸ್ಥಾನಿಕನಿಗಿಂತಲೂ ಹೆಚ್ಚು ಪ್ರಭಾವವನ್ನು ತೋರಿಸುತ್ತಿದ್ದನೆಂಬುದು ಸುಳ್ಳಲ್ಲ.

ರಾಜೋಚಿತ ಸಮಾರಂಭಗಳಲ್ಲಿ ಹಾರಿಸುವ ಫಿರಂಗಿಗಳ ಸಂಖ್ಯೆಯ ಮೇಲಿಂದ ಈ ಸಂಸ್ಥಾನಿಕರ ಸ್ಥಾನಮಾನವನ್ನು ನಿರ್ಣಯಿಸುತ್ತಿದ್ದರು. ಭಾರತದ ಚಕ್ರವರ್ತಿನಿ ಎಂಬುದಾಗಿ ವಿಕ್ಟೋರಿಯಾ ಮಹಾರಾಣಿಯು ೧೮೭೭ರಲ್ಲಿ ಬಿರುದನ್ನು ಹೊತ್ತು ಕೊಳ್ಳುವ ವರೆಗೆ ಹೈದರಾಬಾದಿನ ನಿಜಾಮನೊಬ್ಬನಿಗೆ ಮಾತ್ರ ೨೧ ಫಿರಂಗಿಗಳ ಸಲಾಮು ಸಲ್ಲುತ್ತಿದ್ದಿತು.

ಸಿಂಧಿಯಾ ಮತ್ತು ಹೋಳ್ಕರರಿಗೆ ತಂತಮ್ಮ ಸಂಸ್ಥಾನಗಳ ಹೊರಗೆ ನೈಸರಾಯಿಯಷ್ಟೇ, ಮತ್ತು ಸಂಸ್ಥಾನಗಳ ಒಳಗಡೆ ವೈಸರಾಯಿಗಿಂತ ಹೆಚ್ಚು ಫಿರಂಗಿಗಳ ಸಲಾಮು ಸಲ್ಲುತ್ತಿದ್ದಿತು. ಆದರೆ, ಗ್ವಾಲಿಯರ್‌ನಲ್ಲಿ ಸಿಂಧಿಯಾ ಮತ್ತು ಹೋಳ್ಕರರನ್ನು ಈ ಹಕ್ಕು ಬಾಧ್ಯತೆಯಿಂದ ಬಲಾತ್ಕಾರವಾಗಿ ಹೊರತು ಪಡಿಸಲಾಯಿತು.

ವಜ್ರ ಮಹೋತ್ಸವದ ಕಾಲದಲ್ಲಿ

೧೮೭೭ರಲ್ಲಿ ನಡೆದ ವಿಕ್ಟೋರಿಯಾ ಮಹಾರಾಣಿಯ ವಜ್ರ ಮಹೋತ್ಸವವು ಆಂಗ್ಲ ಸಾಮ್ರಾಜ್ಯದ ಚರಿತ್ರೆಯಲ್ಲಿ ಚಿರಸ್ಮರಣೀಯವಾದ ಘಟನೆಯಾಗಿದೆ. ಆಗ ಭಾರತದ ದೇಶೀಯ ರಾಜರು ಇಂಗ್ಲೆಂಡಿಗೆ ಪ್ರವಾಸ ಹೊರಟು, ಸಮಾರಂಭದಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ಉತ್ಸುಕತೆ ತೋರಿಸಿದರು.

ಭಾರತೀಯ ರಾಜರನ್ನು ಮಹಾರಾಣಿಯು ವಿಂಡ್ಸರ್ ಅರಮನೆಯಲ್ಲಿ ಬರಮಾಡಿಕೊಂಡಳು. ಅಲ್ಲಿಂದ ಭಾರತದ ಕುರಿತಾಗಿ ಗೌರವವನ್ನು ತೋರಿಸುವ ಇಚ್ಛೆಯಿಂದ ಹಿಂದುಸ್ತಾನಿಯಲ್ಲಿಯೇ ಇವರಿಗೆಲ್ಲ ಸ್ವಾಗತವನ್ನು ಕೋರಿದಳು. ಭಾರತದೊಡನೆ ತಾದಾತ್ಮ್ಯವನ್ನು ಹೊಂದುವ ಉತ್ಕಟೇಚ್ಛೆಯಿಂದಾಗಿ ಮಹಾರಾಣಿಯು ಹಿಂದುಸ್ತಾನಿ ಭಾಷೆಯನ್ನು ವೈಸರಾಯಿಯು ಅರಿಸಿ ಕಾಣಿಸಿದ್ದ ಪ್ರಸಿದ್ಧ ಪಂಡಿತ ನೊಬ್ಬನಿಂದ ಆಗ ಕಲಿಯುತ್ತಿದ್ದಳು.

ಅವಳು ಎಲ್ಲ ಸಂಸ್ಥಾನಿಕರಿಗೂ ತನ್ನ ಇನಿಮೆಲ್ ಚಿತ್ರಗಳನ್ನು ಸ್ಮೃತಿ ಚಿಹ್ನೆಯಾಗಿ ಕೊಟ್ಟಳು. ಇದಕ್ಕೆ ಪ್ರತಿಯಾಗಿ ಬಿಕಾನೇರಿನ ಮಹಾರಾಜ ಸರ್. ಪ್ರತಾಪ ಸಿಂಘನು ತನ್ನ ನುಂಡಾಸಿನಿಂದ ಮುತ್ತಿನ ಆಭರಣವೊಂದನ್ನು ಹೊರ ತೆಗೆದು ಮಹಾ ರಾಣಿಗೆ ಬಹುಮಾನವಾಗಿ ನೀಡಿದನು; ಬಿಲ್ಲನೆ. ತನ್ನ ಪಿಸ್ತೂಲನ್ನು ಅನಳ ಪದತಲದಲ್ಲಿಟ್ಟು ಪಸ್ಟೆಲ್ಲ ಸೊತ್ತುಗಳೂ ಅವಳ ಸೇವೆಗೆ ಒಸಲಾಗಿವೆ ಎಂದು ಭರವಸೆಯಿತ್ತನು.

ಕೂಚ್‌ಬಿಹಾರಿನ ಮಹಾ ರಾಣಿಯು ವಜ್ರ ಖಚಿತ ಆಭರಣವೊಂದನ್ನು ರಾಣಿಗೆ ಕೊಟ್ಟಳು. ರಾಣಿಯು ವಿಂಡ್ಸರ ಅರಮನೆಯಿಂದ ದೊರ ಬೀಳುವ ಹೊತ್ತಿಗೆ ಮೊಘಾಲಿನ ತಾಕೂರನು ಬೆಳ್ಳಿಯ ಕವಚದಿಂದ ಕೂಡಿದ ಸಣ್ಣ ಕುದುರೆಯ ಮೇಲಿಂದ ಕೆಳಗಿಳಿದು ಬಂದು ರಾಣಿಯನ್ನು ಆಶ್ವಯೋಕಣ ಗೈಯಬೇಕೆಂದು ವಿನಯದಿಂದ ಪ್ರಾರ್ಥಿಸಿದನು

ವಿನಾಯತಿಗಳ ಮಾಡಾರಿ

ಆಂಗ್ಲ ಆಸ್ಥಾನದಲ್ಲಿ ಬಳಕೆಯಲ್ಲಿದ್ದ ಅನೇಕ ಸಂಪ್ರದಾಯಗಳಿಂದ ಭಾರತೀಯ ಸಂಸ್ಥಾನಿಕರನ್ನು ವಿನಾಯತಿ ಪಡಿಸಿದ್ದರು. ಉದಾಹರಣೆಗಾಗಿ - ಒಬ್ಬ ವ್ಯಕ್ತಿಗೆ ನೈಟ್ ಹುಡ್ ("ಸರ್" ಎಂಬ ಪದವಿ) ಕೊಡುವಾಗ ಸಾರ್ವಭೌಮ ಪೀಠಾಧಿಕಾರಿಯ ಮುಂದೆ ಈ ವ್ಯಕ್ತಿ ಮೊಣಕಾಲೂರಬೇಕೆಂಬುದು ಆಂಗ್ಲ ಸಂಪ್ರದಾಯ; ಕೆಲವು ಅಸವಾದಗಳನ್ನು ಬಿಟ್ಟರೆ ಭಾರತದ ಎಲ್ಲ ಸಂಸ್ಥಾನಿಕರಿಗೂ ಈ ಪದವಿಯನ್ನು ಆಂಗ್ಲ ಪ್ರಭುತ್ವದವರು ದಯಪಾಲಿಸಿದರು. ಆದರೆ, ಮೊಣಕಾಲೂರಬೇಕೆಂಬ ನಿಯಮಕ್ಕೆ ಇವರನ್ನು ಒತ್ತಾಯಿಸಲಿಲ್ಲ.

ಆಗಾಖಾನರು ತಮ್ಮ ಜೀವನ ಸ್ಮೃತಿಗಳಲ್ಲಿ ವಿಕ್ಟೋರಿಯಾ ಮಹಾರಾಣಿಯು ತನಗೆ "ಆರ್ಡರ್ ಆಫ್ ದಿ ಸ್ಟಾರ್ ಆಫ್ ಇಂಡಿಯಾ" ಪ್ರಶಸ್ತಿಯನ್ನು ನೀಡುವಾಗ ನೀವು "ಪ್ರಶಸ್ತಿಯನ್ನು ಸ್ವೀಕರಿಸುವಾಗ ಮೊಣಕಾಲೂರಬೇಕೆಂಬ ನಾನು ಬೇಳುವುದಿಲ್ಲ ಏಕೆಂದರೆ ನೀವು ಸ್ವತಃ ರಾಜ ವಂಶಜರಿದ್ದೀರಿ." ಎಂಬ ಮಾತನ್ನು ಹೇಳಿದ್ದಳೆಂದು ಬರೆದಿದ್ದಾರೆ.

ಆದರೆ ಸಾಮ್ರಾಲಂಕಾರಗಳ ಮಟ್ಟಿಗೆ ವಿಶೇಷ ಜಾಗರೂಕತೆಯನ್ನು ಸಂಸ್ಥಾನಿಕರು ವಹಿಸಬೇಕಾಗಿದ್ದಿತು. ಆಗಾಖಾನರ ಸ್ಮೃತಿ ಚಿತ್ರಗಳನ್ನೆ ಆಶ್ರಯಿಸಿ, ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದು.

ಐದನೇ ಜಾರ್ಜ್ ಆರಸರೊಮ್ಮೆ ವಿಂಡ್ಸರ್ ಅರಮನೆಯಲ್ಲಿ ರಾಜಭೋಜನವನ್ನು ಕೊಟ್ಟಾಗ ಯಾರೋ ಒಬ್ಬ

(೧೧ನೇ ಪುಟ ನೋಡಿರಿ)

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೮.

ಇದುವೇ ಪಾಲಿಸಿದಾರರಲ್ಲಿ ವಿಶ್ವಾಸವನ್ನು ಹುಟ್ಟಿಸುವ ಹೆಸರು.
ಅಲ್ಲದೆ ಸ್ಥಾಪಿತವಾದಂದಿನಿಂದಲೂ ಜೋನಸು ಹಂಚಿದ ಕಂಪೆನಿ.
ನಿಮಗೆ ಇಳಿಸಲು ಅಥವಾ ಪ್ರತಿನಿಧಿಸಲು ಅಪೇಕ್ಷಿಸುವವರು
ವಿವರಕ್ಕಾಗಿ ಬರೆಯಿರಿ.

T. R. A. Pai, Managing Director,

THE CANARA MUTUAL ASSURANCE COMPANY LTD.,

Head Office: UDIPI, S. India.

CHIEF AGENTS:

THE COMMERCIAL CORPORATION OF INDIA LTD.,

UDIPI, S. India.



ನಂದಿಕೊಂಡದ ಜಲಾಶಯ ಯೋಜನೆ

ಬೌದ್ಧ ಸಂಸ್ಕೃತಿಯ ಜಗತ್ಪ್ರಸಿದ್ಧ ಕೇಂದ್ರ

ಪ್ರಧಾನಿ ನೆಹರುಗಳು ನೊಸ್ನೆ ೧೦ನೇ ದಿನಾಂಕ ನಾಗಾರ್ಜುನ ಸಾಗರ ಜಲಾಶಯ ಯೋಜನೆಯ ಅಡಿಗಲ್ಲನ್ನಿಟ್ಟರು. ಮಾನವತೆಯು ಪೂಜೆಮಾಡುವ ದೇಗುಲ ಎಂದವರು ಈ ಸಂದರ್ಭದಲ್ಲಿ ಇಂಥ ಯೋಜನಾ ಕ್ಷೇತ್ರಗಳನ್ನು ಕರೆದರು.

ಕೃಷ್ಣಾ ನದಿಯ ಮೇಲೆ ಹೈದರಾಬಾದಿನಿಂದ ನೂರು ಮೈಲು ದಕ್ಷಿಣಕ್ಕೆ ಆಂಧ್ರ ಪ್ರಾಂತ ಹೈದರಾಬಾದು ರಾಜ್ಯಗಳ ಗಡಿಗೆ ಹೊಂದಿಕೊಂಡು ನಂದಿಕೊಂಡ ಎಂಬ ಗ್ರಾಮವಿದೆ. ಸಲ್ಲಮಲೆ ಬೆಟ್ಟಗಳ ಸಾಲಿನಲ್ಲಿರುವ ಸುಮಾರು ೧೧೦ ಚದರ ಮೈಲು ಪ್ರದೇಶವನ್ನು ವ್ಯಾಪಿಸುವಷ್ಟು ವಿಸ್ತಾರವಾದ ಜಲಾಶಯ ನಿರ್ಮಾಣ ಕಾರ್ಯವು ಇನ್ನಿಲ್ಲಿ ತೊಡಗುತ್ತದೆ.

ಘನವಾದ ಕಾರ್ಯ

ಒಟ್ಟು ಒಂಭತ್ತು ವರ್ಷಗಳು ಈ ಯೋಜನೆಯ ಕಾರ್ಯಾಚರಣೆಗೆ ಬೇಕಾಗಿದ್ದರೂ ಪ್ರಥಮದ ಐದು ವರ್ಷಗಳ ಕೊನೆಯಲ್ಲಿ ಜಲಾಶಯದ ನೀರನ್ನು ಉಪಯೋಗಿಸಲು ಬರುವಂತೆ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ. ಅಷ್ಟು ಹೊತ್ತಿಗೆ ಜಲಾಶಯದಿಂದ ಹೈದರಾಬಾದು ರಾಜ್ಯದಲ್ಲಿ ೧೦೯ ಮೈಲು ಮತ್ತು ಆಂಧ್ರದಲ್ಲಿ ೧೪೦ ಮೈಲು ಉದ್ದಕ್ಕೆ ಕಾಲುವೆಗಳು ಹರಿದಿರುತ್ತವೆ. ಯೋಜನೆ ಮುಗಿದಾಗ ಈ ಕಾಲುವೆಗಳ ಉದ್ದವು ಕ್ರಮವಾಗಿ ೧೪೦ ಹಾಗು ೨೭೬ ಮೈಲುಗಳಷ್ಟಾಗುತ್ತವೆ.

ಆಂಧ್ರ ರಾಜ್ಯದ ಕೃಷ್ಣ, ಗುಂಟೂರು ಮತ್ತು ನೆಲ್ಲೂರು ಜಿಲ್ಲೆಗಳಿಗೂ ಹೈದರಾಬಾದು ರಾಜ್ಯದ ಮಿರಯಾಲಗೂಡ, ಹುಜೂರ್‌ನಗರ, ಖಮ್ಮಂ, ಪಳೊಂಚ, ಮಧಿರ ಮತ್ತು ನಂದಿಗ್ರಾಮ ತಾಲೂಕುಗಳಿಗೂ (ಅನುಕ್ರಮವಾಗಿ ೧೭೮ ಹಾಗು ೧೮೦ ಲಕ್ಷ ಎಕ್ರೆ) ಈ ಅಣೆಕಟ್ಟಿನಿಂದ ಪ್ರಯೋಜನ ಸಿಗುತ್ತದೆಯೆಂತು ಅತ್ತವನ್ನೂ ಕಬ್ಬನ್ನೂ ಧಾರಾಳವಾಗಿ ಬೆಳೆಯುವ ಸದವಕಾಶ ಲಭಿಸುತ್ತದೆ.

ಇವಲ್ಲದೆ ಕನಿಷ್ಟ ಪಕ್ಷಕ್ಕೆ ೭೫ ಸಾವಿರ ಕಿಲೋವಾಟುಗಳನ್ನು ವಿದ್ಯುಚ್ಛಕ್ತಿಯೂ ಈ ಯೋಜನೆಯಿಂದ ದೊರಕುತ್ತದೆ. ಯೋಜನೆಯು ಒಟ್ಟು ನೆಚ್ಚ ೧೨೨ ಕೋಟಿ ರೂಪಾಯಿಗಳನ್ನು ವಿಂಗಡಿಸುತ್ತದೆ. ಇದರಲ್ಲಿ ಆಂಧ್ರದ ಪಾಲು ೬೫% ಉಳಿದ ನೆಚ್ಚ ಹೈದರಾಬಾದು ರಾಜ್ಯದ ಪಾಲಿಗೆ ಹೋಗುತ್ತದೆ.

ಸಾಂಸ್ಕೃತಿಕ ಕೇಂದ್ರ

ಜಲಾಶಯ ನಿರ್ಮಾಣದ ಈ ಯೋಜನೆಯಿಂದಾಗಿ ಸುಮಾರು೩೦ ಗ್ರಾಮಗಳು ಮುನ್ನೂರು ಅಡಿ ಯಷ್ಟು ಆಳವಾದ ನೀರಿನಲ್ಲಿ ಮುಳುಗಿ ಹೋಗುತ್ತವೆ. ಇದು ಭಾರತದ ಪ್ರಾಚೀನ ಚರಿತ್ರೆಯ ಅಧ್ಯಯನ ನಡೆಸುವವರ ಪಾಲಿಗೆ ವಿಶೇಷ ಖೇದದಾಯಕವಾದ ವಿಷಯ. ಪ್ರಧಾನಿಗಳು ತಮ್ಮ ಭಾಷಣದಲ್ಲಿ ಇದನ್ನು ಪ್ರಸ್ತಾಪಿಸಿ, ಜನತೆಯ ಸುಖ ಸಮೃದ್ಧಿಯನ್ನು ಹೆಚ್ಚಿಸುವುದೆಂಬ ಸಂತೋಷದ ಜೊತೆಗೆ ಎರಡು ಸಾವಿರ ವರ್ಷಗಳಷ್ಟು ಪುರಾತನವಾದ ಬೌದ್ಧ ಸಂಸ್ಕೃತಿಯ ಕ್ಷೇತ್ರವೊಂದು ಕಣ್ಮರೆಯಾಗುವುದಲ್ಲ—ಎಂಬ ದುಃಖ ತಪ್ತನ್ನು ಅವರಿಸುತ್ತಿದೆ ಎಂದಿದ್ದರು.

ಬುದ್ಧನ ಮರಣಾನಂತರ ಕೆಲವು ಶತಕಗಳಲ್ಲಿ ಪ್ರಾನು-ಭೂವನಕ್ಕೆ ಬಂದ ಮಹಾಯಾನಸಂಧದಸ್ಥಾಪಕ ಆಚಾರ್ಯ ನಾಗಾರ್ಜುನರು ನೆಲೆನಿಂದೇ ಈ ಯೋಜನೆಯ ಕ್ಷೇತ್ರವಾಗಿದೆ. ಜಲಾಶಯದಿಂದ ಮುಳುಗಿ ಹೋಗುವ ಭೂಭಾಗದಲ್ಲಿ ಪ್ರಸಿದ್ಧ ಬೌದ್ಧ ವಿಶ್ವವಿದ್ಯಾನಿಲಯವಿತ್ತೆಂದು ಪ್ರತೀತಿ ಇಲ್ಲದೆ ಬದು ಇಕ್ಷ್ವಾಕು ವಂಶಜರ ರಾಜಧಾನಿಯಾಗಿತ್ತೆಂದೂ ತಿಳಿದು ಬರುತ್ತದೆ.

ಚೀನಿಸ ಯಾತ್ರಿಕ ಹ್ಯೂಯೆನ್ ತ್ಸಿಯಾಂಗನ ಕಾಲದಲ್ಲಿ ಈ ಪ್ರದೇಶವು ಬಹಳ ಸಮೃದ್ಧ ಸ್ಥಿತಿಯಲ್ಲಿದ್ದಿತು. ಎಲ್ಲಿದ ಸಂಸ್ಕೃತಿಯ ಕೇಂದ್ರವಾಗಿ ಅದು ಮೆರೆಯುತ್ತಿದ್ದಿತು. ನದಿಗೆ ಹೊಂದಿಕೊಂಡು ಈಗಲೂ ಕಾಣಿಸುತ್ತಿರುವ ಬಂದರಿನ ಅವಶೇಷಗಳನ್ನು ನೋಡಿದರೆ, ವಿಜಯವಾಡದಿಂದ ನೂರು ಮೈಲಷ್ಟು ನದಿಯ ಮೇಲ್ಭಾಗದಲ್ಲಿದ್ದರೂ ಆ ಕಾಲದಲ್ಲಿ ಅತಿಪೂರ್ವದ ದೇಶಗಳಿಂದಲೂ ಜಿಜ್ಞಾಸುಗಳನ್ನು ನಾಕೆಗಳು ಇಲ್ಲಿಗೆ ಕೂಡಿಸಿ ತರುತ್ತಿದ್ದನೆಂಬ ಊಹೆಯಾಗುತ್ತದೆ.

ಆಚಾರ್ಯ ನಾಗಾರ್ಜುನ

ಶಾತವಾಹನರ ಕಾಲದಲ್ಲಿ ಶ್ರೀ ಪರ್ವತ ಎಂಬುದಾಗಿ ಈ ಪ್ರದೇಶ ಹೆಸರಾಗಿದ್ದಿತು. ಇಕ್ಷ್ವಾಕು ಅರಸರು ವಿಜಯಪುರ ಎಂದಿದನ್ನು ಕರೆದರು. ಶಾತವಾಹನ ವಂಶಜನಾದ ಚಕ್ರವರ್ತಿ ಹಳೆಯು ಕ್ರಿಸ್ತಶಕ ಒಂದನೇ ಶತಮಾನದಲ್ಲಿ ಆಚಾರ್ಯ ನಾಗಾರ್ಜುನರಿಗೆ ಒಂದು ಮಠವನ್ನು ಇಲ್ಲಿ ಕಟ್ಟಿಸಿ ಕೊಟ್ಟುದರಿಂದ ನಾಗಾರ್ಜುನಕೊಂಡ ಎಂದು ಈ ಭಾಗ ಜನರಿಂದ ಕರೆಯಲ್ಪಟ್ಟಿತು.

ಆಚಾರ್ಯ ನಾಗಾರ್ಜುನರ ವಾಸ್ತವ್ಯ ಕಾಲದಲ್ಲಿಯೇ ಬೌದ್ಧ ಧರ್ಮವು ಮಹಾಯಾನದ ರೂಪದಲ್ಲಿ ಟಿಬೇಟು, ಚೀನ ಮತ್ತಿತರ ಪೂರ್ವ ದೇಶಗಳಿಗೆ ಹಬ್ಬಿತು. ಆ ದೇಶಗಳ ಪ್ರಾಚೀನ ಸಾಹಿತ್ಯದಲ್ಲಿ ಆಚಾರ್ಯ ನಾಗಾರ್ಜುನರ ಹೆಸರು ಈಗಲೂ ಕಂಡುಬರುತ್ತದೆ. ಇದೇ ಸ್ಥಳದಲ್ಲಿ ಸುಮಾರು ೪-೫ನೇ ಶತಮಾನದಲ್ಲಿದ್ದರೆನ್ನಲಾದ ತಂತ್ರಾಚಾರ್ಯ ನಾಗಾರ್ಜುನರೂ ನೆಲಸಿದ್ದರು.

ಶಂಕರಾಚಾರ್ಯರು ಎಂಟನೇ ಶತಮಾನದಲ್ಲಿ ಹಿಂದು ಮತವನ್ನು ಪುನರುಜ್ಜೀವನಗೊಳಿಸಿ ಬೌದ್ಧ ಮತಕ್ಕೆ ಮತ್ತೆಂದೂ ಬಾರದಂತೆ ತಲೆ ಎತ್ತದಷ್ಟು ಪ್ರಬಲವಾದ ಪೆಟ್ಟನ್ನು ಕೊಡುವ ವರೆಗೆ ಈ ಕಣಿವೆಯಲ್ಲಿ ಮಹಾಯಾನವು ಉಚ್ಛ್ರಾಯಾವಸ್ಥೆಯಲ್ಲಿದ್ದಿತು. ಶಂಕರಾಚಾರ್ಯರು ಈ ಬೌದ್ಧ ಸಾಂಸ್ಕೃತಿಕ ಕ್ಷೇತ್ರದ ವರ್ಚಸ್ಸನ್ನು ತೀರ ಕುಗ್ಗಿಸಿ, ಅಲ್ಲಿ ತಮ್ಮ ಮತವನ್ನು ಸ್ಥಾಪಿಸಿದರು. ಈಗಲೂ ಈ ಸ್ಥಳ ಪುಷ್ಪಗಿರಿ ಮುರದ ಪಶಪಲ್ಲಿರುತ್ತದೆ.

ಸಂತೋಷಕರ ಕೆಲಸ

ಶ್ರೇಷ್ಠ ವಿಜ್ಞಾನ ಬೌದ್ಧ ಸಾಂಸ್ಕೃತಿಕ ಕ್ಷೇತ್ರವಾಗಿ ಈ ಪ್ರದೇಶವಿರುವುದು ೧೯೫೬ನೇ ಇಸವಿಯ ವರೆಗೆ ಬೆಳಕಿಗೆ ಬರಲಿಲ್ಲ. ಇಂದಿನಿಂದೀಚೆಗೆ ಇಲ್ಲಿ ಬೆಟ್ಟಗುಡ್ಡೆಯಲ್ಲಿ ಹುದುಗಿರುವ ವಿಹಾರಗಳು, ಚೈತ್ಯಾಲಯಗಳು ಮತ್ತು ಸ್ತೂಪಗಳು ಸಂಶೋಧಕರ ತೀಕ್ಷ್ಣ ಗಮನವನ್ನೆಳೆಯುತ್ತವೆ. ಇಕ್ಷ್ವಾಕು ಅರಸರ ಅರಮನೆಯೂ ಪ್ರಾಚೀನ ರೇಖೆಗೆ ಹೊಂದಿಕೊಂಡು ಕಣಿವೆಯ ಕೇಂದ್ರದಲ್ಲಿದೆ; ಎರಡು ಮೈಲು ಪೂರ್ವಕ್ಕೆ ಹಳೆಯ ವಿಶ್ವವಿದ್ಯಾನಿಲಯದ ಅವಶೇಷಗಳು ಕಂಡು ಬರುತ್ತವೆ. ಒಂದು ಮಹಾ ಚೈತ್ಯಾಲಯದಲ್ಲಿ ಬುದ್ಧನದೆನ್ನಲಾದ ಅವಶೇಷ ದೊರೆತಿದ್ದು ಅದಕ್ಕೆಗ ಸಾರಾನಾಥದ ವಿಹಾರದಲ್ಲಿ ಪೂಜೆ ನಲ್ಲುತ್ತವೆ.

ಶಾತವಾಹನ ಅರಸರು ಆಚಾರ್ಯ ನಾಗಾರ್ಜುನರಿಗಾಗಿ ಕಟ್ಟಿಸಿದ್ದರೆಂದು ವಿವರವಾಗಿ ಹ್ಯುಯೆನ್ ತ್ಸಿಯಾಂಗನಿಂದ ವರ್ಣಿಸಲ್ಪಟ್ಟಿರುವ ಮಠವಿನ್ನೂ ಕಣ್ಣಿಗೆ ಬಿದ್ದಿಲ್ಲ. ಈ ವಂಶಜರ ಬಳಿಕ ಆಳಿದ ಇಕ್ಷ್ವಾಕುಗಳೂ ಹಿಂದೂ ಮತಾವಲಂಬಿಗಳಾಗಿದ್ದರು. ಆದರೆ ತಮ್ಮ ರಾಣಿಯರಿಗೆ ಬೌದ್ಧ ಧರ್ಮವನ್ನು ಪೋಷಿಸಲು ಅವಕಾಶವಿತ್ತಿದ್ದರು. ಇಕ್ಷ್ವಾಕು ವಂಶಜರಲ್ಲೆಲ್ಲ ಶ್ರೇಷ್ಠ ರಮಣಿಯಾದ ಶಾಂತಿ ಶ್ರೀದೇವಿಯು ನಾಲ್ಕು ಮುಖ್ಯ ಸ್ಥಾನಗಳಲ್ಲಿ ಏಪ್ಪೆರಂತೆ ಜೊತೆಯಾಗಿ ಸ್ತೂಪಗಳಾಜಿಗಳಿರುವ ಮಹಾ ಚೈತ್ಯಾಲಯವನ್ನು ಕಟ್ಟಿಸಿದಳು. ಈ ಕಂಭಗಳ ಮೇಲಿರುವ ಬರೆಹಗಳು ಇತಿಹಾಸಕಾರರಿಗೆ ಸ್ವಲ್ಪ ಮಾತ್ರ ಗೊತ್ತಿರುವ ಇಕ್ಷ್ವಾಕು ವಂಶದ ಮೇಲೆ ವಿಶೇಷ ಪ್ರಕಾಶವನ್ನು ಚೆಲ್ಲುತ್ತವೆ.

ಬೋಧಿ ಶ್ರೀದೇವಿ ಎಂಬ ಇನ್ನೊಬ್ಬ ಉಪಾಸಿನಿಯು ಸಿಂಹಳ, ಕಾಶ್ಮೀರ, ಚೀನ,

(೪ನೇ ಪುಟದ ೧ನೇ ಕಲಂ ನೋಡಿರಿ)

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ.
ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ಮೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್
ಆಯಿಲ್ ಫ್ಯಾಕ್ಟರಿ,
ಮೈಸೂರು.

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಅಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಜೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಸ್ಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ½ ರಾತಲಿಗೆ ರೂ. 1/13.

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿಶೇಷವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ,
ಮದ್ರಾಸ್—3.

(೩ನೇ ಪುಟ ದಿಂದ)

ನೇಪಾಳಗಳ ಜೆಜ್ಜಾಸು ಬಂಧುಗಳಿಗೆಂದು ಜೈತ್ಯಗೃಹಗಳನ್ನು ನಿರ್ಮಿಸಿದಳು. ಜಪಾನ್, ಜೈಲೇಂಡ್ ಮುಂತಾದ ದೇಶಗಳಿಂದಲೂ ಆಗ ವಿದ್ಯಾರ್ಥಿಗಳು ಇಲ್ಲಿ ಬೌದ್ಧ ಧರ್ಮ ಶಿಕ್ಷಣಕ್ಕೆ ಬರುತ್ತಿದ್ದರು.

ಬೆಲೆ ಬಾಳುವ ಅವಶೇಷ

ಇಷ್ಟರ ವರೆಗೆ ೬೦೦ ಜೊತ್ತ ಹಾಗು ೪೦೦ ಸಾಮಾನ್ಯ ಅವಶೇಷಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ, ಇನ್ನೂ ೨೦೦೦ ಎಕ್ರೆ ಜಾಗದಲ್ಲಿ ಪರಿಶೀಲನೆ ನಡೆಯಬೇಕಾಗಿದ್ದು, ಯೋಜನೆಯು ಪೂರ್ತಿಯಾಗಿ ಸೀರು ಅವರಿಸಲ್ಪಡುವುದಕ್ಕೆ ಮೊದಲೇ ಈ ಕೆಲಸವನ್ನು ಮುಗಿಸುವ ಆತುರವನ್ನು ಸರಕಾರ ತೋರಿಸುವುದೆಂದು ಸಂಸತ್ತಿನಲ್ಲಿ ಮುಂತ್ರಿಗಳಕ್ತ ಹೇಳಿಕೆಯೊಂದು ತಿಳಿಸುತ್ತದೆ.

ನೀರು ಈ ಪ್ರದೇಶವನ್ನು ವ್ಯಾಪಿಸಿದಾಗ ನಾಗಾರ್ಜುನ ಬೆಟ್ಟವೊಂದು ದ್ವೀಪದಂತೆ ತಲೆ ಎತ್ತಿ ನಿಲ್ಲುತ್ತದೆ. ಇಲ್ಲಿ ಈಕಣಿವೆಯ ಎಲ್ಲ ಅವಶೇಷಗಳನ್ನೂ ಸಂಗ್ರಹಿಸಿ ಇಡಬೇಕೆಂದು ಮತ್ತು ಸಾರಾನಾಥದಲ್ಲೀಗ ಪೂಜೆ ಹೊಂದುತ್ತಿರುವ ಇಲ್ಲಿ ಜೊತೆತ ಬುದ್ಧನ ಅವಶೇಷವನ್ನು ತಂದಿಡಬೇಕೆಂದು ಹೇಳಲಾಗುತ್ತದೆ. ಹಾಗಾದರೆ, ಈ ಕೃತಕ ದ್ವೀಪಕ್ಕೆ ಶ್ರೀ ಚೈತನ್ಯ ದೇವರಿನೆಲೆ ವೀಡಾದ ನವದ್ವೀಪಕ್ಕೆ ವೈಷ್ಣವರು ಯಾತ್ರೆ ಬೆಳೆಸಿದಂತೆ ಬೌದ್ಧರ ಆಗಮನ ವಾದೀತು.

ಕೃಷ್ಣಾ ಕಣಿವೆಯಲ್ಲಿ ಬೌದ್ಧ ಸಂಸ್ಕೃತಿಯ ಇನ್ನೊಂದು ಕೇಂದ್ರವೆನಿಸಿದ ಅಮರಾವತಿಯ ಅವಶೇಷಗಳೊಡನೆ ಇಲ್ಲಿಯ ಶಿಲ್ಪ ಸೌಂದರ್ಯ ವಿಶೇಷ ಸಾಮ್ಯವನ್ನು ಪಡೆದಿದೆ. ಆಂಧ್ರಕ್ಕೆ ವಿಶಿಷ್ಟವಾದ ಕೆಲವು ಸಂಪ್ರದಾಯಗಳೂ ಈ ಕೆತ್ತನೆ ಕೆಲಸ ಮತ್ತು ಕಟ್ಟಡ ನಿರ್ಮಾಣ ಕಲೆಯಲ್ಲಿವೆ. ನಾಜೂಕು ಮತ್ತು ಆಕರ್ಷಣೆಗೂ ಇವು ಹೆಸರಾಗಿದ್ದು ಬೌದ್ಧ ಕಲಾ ಕ್ಷೇತ್ರದ ಅಭ್ಯಾಸಿಗಳಿಗೆ ಇಲ್ಲಿ ಹೆಬ್ಬದೂಟವಿದೆ.

ಬೇರೆ ಬೇರೆ ಕತೆಗಳ ಚಿತ್ರಣವೇ ಕೆತ್ತನೆಯ ಕೆಲಸದಲ್ಲಿದ್ದರೂ ಸಾಳಿ ಮೂಲದ ಕತೆಗಳಿಗೆ ಇವು ಅಸ್ಪ ಹೊಂದಿಕೊಳ್ಳುವುದಿಲ್ಲ; ಸಂಸ್ಕೃತದ ಆ ಶ್ರಯವನ್ನೂ ಪಡೆದಿರುವಂತೆ ಭಾಸವಾಗುತ್ತದೆ. ಬರೆಹಗಳು ಸಾಮಾನ್ಯವಾಗಿ ಅರ್ಧ ಜೊಕ್ಕ ಟವಾದ ಪ್ರಾಕೃತ ಭಾಷೆಯಲ್ಲಿವೆ; ಇದನ್ನು ದ್ರಾವಿಡ ಭಾಷೆಯ ಮೂಲದವರು ಆ ಕಾಲದಲ್ಲಿ ಬಳಸುತ್ತಿದ್ದರು.

ಫಜಲಾಲಿ ಆಯೋಗದ ವರದಿಯ ಚರ್ಚೆ

ವಿಚಾರವಿನಿಮಯ ಶಾಂತವಾಗಿರಲೆಂದು ನೆಹರು

ಲೋಕ ಸಭೆಯಲ್ಲಿ ಇಂದೇ ೧೪ನೇ ದಿನಾಂಕದಿಂದ ಫಜಲಾಲಿ ಆಯೋಗದ ವರದಿಯ ಕುರಿತು ಸಾಮಾನ್ಯ ಚರ್ಚೆ ಪ್ರಾರಂಭವಾಗಿದೆ. ವಿವಿಧಾಭಿಪ್ರಾಯಗಳ ಮಂಥನಕ್ಕೆ ಅವಕಾಶ ಮಾಡಿಕೊಡುವುದೇ ಈ ಚರ್ಚೆಯ ಉದ್ದೇಶ. ಸಭಾಧ್ಯಕ್ಷರು ಒಂದೇ ವಿಚಾರವುಳ್ಳ ಗುಂಪುಗಳನರು ತಮ್ಮ ಪರವಾಗಿ ಯಾರು ಮಾತನಾಡಬೇಕೆಂಬುದನ್ನು ಮೊದಲೇ ನಿರ್ಧರಿಸಿಕೊಂಡರೆ, ಅದಷ್ಟು ಹೆಚ್ಚು ದೃಷ್ಟಿಕೋಣದಿಂದ ವರದಿಯನ್ನು ಚರ್ಚಿಸುವುದು ಸಾಧ್ಯವಾಗುತ್ತದೆ ಎಂದು ಮೊದಲೇ ಸೂಚಿಸಿದ್ದಾರೆ. ಮುಂದಿನ ೩೦ನೇ ತಾರೀಕಿನ ವರೆಗೆ ಅಖಂಡವಾಗಿ ಈ ಚರ್ಚೆ ಮುಂದರಿಯುತ್ತದೆ. ರಾಜ್ಯ ಸಭೆಯಲ್ಲಿ ವರದಿಯ ಮೇಲೆ ಚರ್ಚೆಯು ೧೫ನೇ ದಿನಾಂಕದಿಂದ ತೊಡಗುತ್ತದೆ.

ಪ್ರತಿನಿಧಿಗಳ ಕರ್ತವ್ಯ

ಕಾಂಗ್ರೆಸಿಗರು ಚರ್ಚೆಯಲ್ಲಿ ಜೇಗೆ ಭಾಗವಹಿಸಬೇಕೆಂಬುದನ್ನು ಗೊತ್ತುಪಡಿಸಲು ೧೧ನೇ ದಿನಾಂಕ ಸಂಬಂಧಿಸಿದ ಸಂಸತ್ಸದಸ್ಯರು ಸಭೆ ಸೇರಿದ್ದರು. ಅಲ್ಲಿ ಭಾಷಣ ಮಾಡಿದ ಶ್ರೀ. ಗಾಡಗೀಳ ರಂಥ ಪ್ರಭೃತಿಗಳು ಭಿನ್ನಾಭಿಪ್ರಾಯಗಳನ್ನು ಮಾತುಕತೆ ಮತ್ತು ಸಂಧಾನವ ಮನೋಭಾವದಿಂದ ಬಗೆಹರಿಸುವುದು ಸಾಧ್ಯವೆಂದು ಹೇಳಿದರಾಗಿ ತಿಳಿದು ಬರುತ್ತದೆ. ಸಂಸತ್ಸದಸ್ಯರು ಕೇವಲ ಪಕ್ಷದ ಪರವಾಗಿ ನಾಮನಿರ್ದೇಶ ಹೊಂದಿದವರಲ್ಲ; ಮತದಾರ ಕ್ಷೇತ್ರದ ಪ್ರತಿನಿಧಿಗಳೂ ಆವರಾಗಿದ್ದಾರೆ; ಆದುದರಿಂದ ಮತದಾರರ ಪ್ರಾಮಾಣಿಕ ಅಭಿಪ್ರಾಯವೇನೆಂಬುದನ್ನು ಪ್ರಕಟಿಸಲು ಅವರಿಗೆ ಅಧಿಕಾರವಿದೆ. ಇಂಥ ಅಭಿಪ್ರಾಯ ಪ್ರಕಟಣೆಯನ್ನು ಗೌರವಾರ್ಹವಾದ ರೀತಿಯಲ್ಲಿ ಮಾಡುವುದಕ್ಕೆ ಅವಕಾಶವಿರಬೇಕು; ಮತ್ತು ಬೇರೆ ಬೇರೆ ಸೂಚನೆಗಳನ್ನು ಮುಂದಿಡಲು ಅಸ್ಪದಸಿಗಬೇಕು ಎಂದೂ ಶ್ರೀ. ಗಾಡ್ಗೀಳರು ಹೇಳಿರುವರೆಂದು ಕೇಳುತ್ತೇವೆ

ಅಭಿಪ್ರಾಯ ಸ್ವಾತಂತ್ರ್ಯ

ಸ್ವಧಾನಿ ನೆಹರುಗಳು 'ಕಾಂಗ್ರೆಸಿಗರಿಗೆ ವಾತಾವರಣವು ಕಾವೇರುವಂತೆ ಮಾತನಾಡಬಾರದೆಂದು ಉಪದೇಶಿಸಿದರಾಗಿ ವರದಿಗಳು ಹೇಳುತ್ತವೆ. ಕಾಂಗ್ರೆಸಿಗರಿಗೆ ಅಭಿಪ್ರಾಯ ಸ್ವಾತಂತ್ರ್ಯವನ್ನು ಕೊಡಲಾಗುತ್ತದೆ; ಆದರೆ ಅವರು ಉಪಯೋಗಿಸುವ ಭಾಷೆಯು ಮರ್ಯಾದಾಯುಕ್ತವೂ ಸಂಯಮಿತವೂ ಆಗಿರಬೇಕು. ಆಯೋಗದ ವರದಿಯ ಕುರಿತು ಇನ್ನೂ ಕೊನೆಯ ನಿರ್ಣಯವನ್ನು ಕೈಗೊಂಡಿಲ್ಲ. ಆದುದರಿಂದ ಚರ್ಚೆಯನ್ನು ಪ್ರಾರಂಭಿಸಬೇಕೆಂಬ ಸರಕಾರದ ಸೂಚನೆಗೆ ತಿದ್ದುಪಡಿಗಳನ್ನು ಕಾಂಗ್ರೆಸಿಗರು ಮಂಡಿಸಬಾರದು.

ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು ಬಿಚ್ಚು ಮನಸ್ಸಿನಿಂದ ವರದಿಯನ್ನು ಪರಿಶೀಲಿಸುತ್ತಿದೆ; ನಕಾರಿಗಳು, ಅಂಕೆ ಸಂಖ್ಯೆಗಳು ಇತ್ಯಾದಿಗಳ ಸಹಾಯವನ್ನೂ ಅದು ಈ ಮಟ್ಟಿಗೆ ತೆಗೆದುಕೊಳ್ಳುತ್ತಿದೆ" ಎಂದು ನೆಹರುಗಳು ತಿಳಿಸಿದರೆನ್ನಲಾಗುತ್ತದೆ.

ಅಲ್ಪ ಸಂಖ್ಯಾಕರ ಹಿತರಕ್ಷಣೆ

ಕಾಂಗ್ರೆಸಿಗರು ಕಾರ್ಯಕಾರಿ ಸಮಿತಿಯ ನಿರ್ಣಯಕ್ಕೆ ಮನ್ನಣೆ ಕೊಡಬೇಕು ಎಂದು ನೆಹರುಗಳ ಖಚಿತ ಅಭಿಪ್ರಾಯ. ತಮಗೆ ಅಸಕ್ತಿಯಿರುವ ಕೆಲವು ಗಡಿ ಬದಲಾವಣೆಗಳ ಅವಶ್ಯಕತೆಯ ಪ್ರತಿಪಾದನೆಯನ್ನಷ್ಟೇ ಸದಸ್ಯರು ಮಾಡಿದರೆ ಸಾಲದು. ವರದಿಯ ಚರ್ಚೆ ಆಥವಾ ಅಧ್ಯಯನವು ಇವ್ಯಕ್ಕೆ ಸೀಮಿತವಾಗಿರಲಾಗದು. ಭಾಷೆಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರೆನಿಸಿದ ಗುಂಪುಗಳ ಹಿತರಕ್ಷಣೆ, ರಾಷ್ಟ್ರೀಯ, ಪ್ರಾದೇಶಿಕ ಹಾಗು ಆಧಿಕೃತ ಭಾಷೆಗಳ ಉಪಯೋಗ ಮತ್ತು ಬೆಳವಣಿಗೆ ಇತ್ಯಾದಿ ಇತರ ಮುಖ್ಯ ವಿಷಯಗಳಿಗೆ ಸಂಬಂಧಿಸಿದ ವರದಿಯ ಅಧ್ಯಾಯಗಳನ್ನು ಸಹ ಸದಸ್ಯರು ಯುಕ್ತ ರೀತಿಯಲ್ಲಿ ವಿವೇಚಿಸಬೇಕೆಂದು ನೆಹರು ವಿನಂತಿಸಿದ್ದಾರೆ. ಸರಕಾರದವರು ಸದಸ್ಯರೆಲ್ಲರ ಅವಗಾಹನೆಗಾಗಿ ಬೇರೆ ಬೇರೆ ಶಾಸನಾಂಗಗಳಲ್ಲಿ ಈಗಾಗಲೇ ನಡೆದಿರುವ ಚರ್ಚೆಯ ಅಂಶಗಳನ್ನೊಳಗೊಂಡ ಕಾಗದ ಪತ್ರಗಳನ್ನು ಪೂರೈಸಿವ್ದಾರೆ. ಇದರಿಂದ ಸಂಸತ್ತಿನ ಸದಸ್ಯರಿಗೆ ದೇಶದ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡಲು ಅನುಕೂಲವಾಗುತ್ತದೆ. ಈಗ ನಡೆಯುತ್ತಿರುವ ಚರ್ಚೆಯ ಆಧಾರದ ಮೇಲೆ ಸರಕಾರವು ತನ್ನ ಅಂತಿಮ ನಿರ್ಣಯಗಳನ್ನು ಕೈಗೊಳ್ಳುತ್ತದೆ.

ಕರ್ನಾಟಕ—ಮುಂಬಯಿ

ಕರ್ನಾಟಕದ ರಚನೆಯಲ್ಲಿ ಈಗ ಯಾವ ಸಂಶಯವೂ ಉಳಿದಿಲ್ಲ. ಮೈಸೂರು ಮಂತ್ರಿಮಂಡಳದಲ್ಲಿ ಭಿನ್ನಾಭಿಪ್ರಾಯವನ್ನು ಹೊಂದಿ, ಶಾಸನ ಸಭೆಯಲ್ಲಿ ತಟಸ್ಥ ಉಳಿದಿದ್ದ ಮಂತ್ರಿ ಶ್ರೀ. ಎ. ಜಿ. ರಾಮಚಂದ್ರರಾಯರೂ ಈಗ ಜನಮತಕ್ಕೂ ಕಾಂಗ್ರೆಸಿನ ನಿರ್ಣಯಕ್ಕೂ ಅಸ್ತು ಎಂದಿದ್ದಾರೆ. ಪ್ರತ್ಯೇಕ ಅಸ್ತಿತ್ವದ ಆಶೆಯನ್ನಿಟ್ಟು ಕೊಂಡಿದ್ದ ಕೊಡಗು ಇತರ 'ಕ' ವರ್ಗದ ಪ್ರಾಂತ್ಯಗಳಂತೆ ತನ್ನ ಅಸ್ತಿತ್ವಕ್ಕೂ ಕೊನೆಗಾಲ ಬಂದಿದೆ ಎಂಬುದನ್ನು ಮನಗೊಂಡು ಕರ್ನಾಟಕ ಏಕೀಕರಣಕ್ಕೆ ಸಮ್ಮತಿ ಸೂಚಿಸಿದೆ. ಮುಂಬಯಿಯು ಶಾಸನಾಂಗದೊಂದು ಕರ್ನಾಟಕ ಏಕೀಕರಣದ ಕುರಿತು ನಿರ್ಧಾರ ಕೈಗೊಂಡಿಲ್ಲ. ಅಲ್ಲಿ ವರದಿಯ ಚರ್ಚೆ ಇನ್ನೆರಡು ತಿಂಗಳಿಗೆ ಮುಂದೂಡಲ್ಪಟ್ಟಿರುವುದೇ ಇದಕ್ಕೆ ಕಾರಣ. ಮುಂಬಯಿ ನಗರ ಪ್ರತ್ಯೇಕ ರಾಜ್ಯವಾಗಬೇಕೋ ಮಹಾ ರಾಷ್ಟ್ರದಲ್ಲಿ ಸೇರಿ ಹೋಗಬೇಕೋ ಎಂಬ ವಿವಾದ ಇನ್ನೂ ಕೊನೆಯ ಘಟ್ಟಕ್ಕೆ ಬಂದ. ಮುಟ್ಟಿಲ್ಲ

'ಪೊಪ್ಯುಲರ್'ನ

ಅಭಿಮಾನಯುಕ್ತ ಘೋಷಣೆ

1954ನೇ ದಶಂಬರ **31**ಕ್ಕೆ

ಕೊನೆಗೊಳ್ಳುವ ತ್ರೈವಾರ್ಷಿಕ

ಆರನೆ ಮೌಲ್ಯ ನಿರ್ಧಾರದಲ್ಲಿ

ರೂ. 2,13,862 ಮಿಗಿತೆಯಾಗಿ ನಿರ್ಣಯಿಸಲಾಗಿದೆ.

ಅಲ್ಲದೆ

ಲಾಭಸಹಿತವಾದ ಜೀವಾವಧಿ ವಿಮಾ ಪಾಲಿಸಿಗಳ ಮೇಲೆ ರೂ. **1000**/-ಕ್ಕೆ ವರ್ಷ ಒಂದರ ರೂ. **14**/-ರಂತೆಯೂ ಲಾಭ ಸಹಿತವಾದ ಅವಧಿ ವಿಮಾ ಪಾಲಿಸಿಗಳ ಮೇಲೆ ರೂ. **1000**/- ಕ್ಕೆ ವರ್ಷ ಒಂದರ ರೂ. **12**/-ರಂತೆಯೂ ಹಿಂದಿನಿಂದ ಕೂಡಿಕೊಳ್ಳುವ ಬೋನಸ್ಸು ಕೊಡಬಹುದೆಂದು ಆಕ್ಟುವರಿಯವರು ಶಿಫಾರಸು ಮಾಡಿದ್ದಾರೆ.

ಈ ಮೇಲಿನ ದರಗಳಲ್ಲಿಯೇ ಬೋನಸ್ಸು ಕೊಡಬಹುದಾಗಿ ಡೈರೆಕ್ಟರರು ಮಹಾಸಭೆಗೆ ಶಿಫಾರಸು ಮಾಡಲಿರುವರು

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿ.

ಪ್ರಧಾನ ಕಚೇರಿ: ಪೊಪ್ಯುಲರ್ ಬಿಲ್ಡಿಂಗ್ಸ್, ಮಂಗಳೂರು.

THE POPULAR INSURANCE COMPANY LIMITED

H. O. POPULAR BUILDINGS, MANGALORE.

ಗೀತೆಯು ಕೈಗನ್ನಡಿ

ನವಯುಗ ಪ್ರೆಸ್, ಉಡುಪಿ.

ಕಾಶ್ಮೀರ ಸಮಸ್ಯೆಯ ಇತ್ಯರ್ಥ

ಎಂದೋ ಆಗಿದೆಯೆಂದು ರಚಿಯದ ನಾಯಕರ ಘೋಷಣೆ

ರಷ್ಯದ ನಾಯಕರು ಬರ್ಮದಿಂದ ಮರಳಿದ ಬಳಿಕ ಭಾರತ ಸಂಚಾರದ ದ್ವಿತೀಯ ಘಟ್ಟವನ್ನು ಪೂರೈಸಿದರು. ಕಾಶ್ಮೀರಕ್ಕೂ ಎರಡು ದಿನಗಳ ಭೇಟಿಯನ್ನಿತ್ತರು. ಅಲ್ಲಿಯ ಸವಾರಂಭಗಳಲ್ಲಿ ಮಾತನಾಡುತ್ತಾ ಮಾರ್ಷಲ್ ಬುಲ್ಗಾನಿನ್ ಕಾಶ್ಮೀರವು ಭಾರತದ ಉತ್ತರ ಭೂ ಭಾಗವೆಂದು ಸಾರಿದರು. ಮಿ. ಖ್ರುಶ್ಚೆಫ್ ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಕಾಶ್ಮೀರದ ಜನತೆಯು ಭಾರತದ ರಾಜ್ಯಗಳಲ್ಲಿ ಕಾಶ್ಮೀರ ಒಂದೆಂಬ ನಿರ್ಣಯವನ್ನು ಎಂದೋ ಮಾಡಿದೆ ಎಂದು ಸಾರಿದರು.

ವಿವಾದದ ತೀರ್ಮಾನ

ಪಾಕಿಸ್ತಾನದ ಮೇಲೆ ಮಿ. ಖ್ರುಶ್ಚೆಫ್ ಮಾರ್ಮಿಕವಾದ ವಾಗ್ಬಾಣಗಳನ್ನೆಸೆದರು. ಅದು ಪಾಶ್ಚಾತ್ಯ ರಾಷ್ಟ್ರಗಳ ಕೈಗೊಂಬೆಯಾಗಿ ಸೈನಿಕ ಒಪ್ಪಂದಗಳಲ್ಲಿ ಭಾಗ ವಹಿಸುತ್ತಿರುವುದನ್ನು ಖಂಡಿಸಿದರು. ಭಾರತ ಮತ್ತು ಪಾಕಿಸ್ತಾನಗಳು ವಿಭಜನೆಯ ಕಹಿ ಅನುಭವವನ್ನು ಸದಾಕಾಲ ಊರ್ಜಿತದಲ್ಲಿಡಬೇಕೆಂದು ನಾವು ಹೇಳುವುದಿಲ್ಲ; ಅವುಗಳು ಶಾಂತ ಸಹಜೀವನ ನಡೆಸಿದರೆ ನಮಗೆ ಸಂತೋಷ. ಆದರೆ ಕೆಲವು ರಾಷ್ಟ್ರಗಳು ತಿಳಿದಿರುವಂತೆ ಪಾಕಿಸ್ತಾನ ಮತ್ತು ಭಾರತಗಳ ಮೇರೆಯಲ್ಲಿ (ಕಾಶ್ಮೀರಕ್ಕೆ ಸಂಬಂಧಪಟ್ಟು) ಗಡಿ ಬದಲಾವಣೆಗಳಾಗಬೇಕಾವ ಅಗತ್ಯ ವೀಗ ಉಳಿದಿಲ್ಲ ಎಂದವರು ಘೋಷಿಸಿದರು

ಭದ್ರತಾ ಮಂಡಳದಲ್ಲಿ

ಕಾಶ್ಮೀರ ಪ್ರಶ್ನೆಯ ಇತ್ಯರ್ಥದ ಬಗ್ಗೆ ಬಹಳ "ಅಸಕ್ತಿ"ಯಿಂದ ಕಲಸ ಮಾಡಿದೆನೆಂದು ಅಭಿಮಾನಪಟ್ಟುಕೊಳ್ಳುತ್ತಿರುವ ಭದ್ರತಾ ಮಂಡಳದ ವಲಯದಲ್ಲಿ ಈ ಮಾತುಗಳಿಂದ ತೀವ್ರ ಪ್ರತಿಕ್ರಿಯೆ ಉಂಟಾಗಿದೆ. ಬ್ರಿಟನ್ ಮತ್ತು ಅಮೇರಿಕಗಳ ಹೆಸರನ್ನು ನೇರವಾಗಿ ಮಿ. ಖ್ರುಶ್ಚೆಫ್ ಎತ್ತದಿದ್ದರೂ ಎಂದೊ ಇತ್ಯರ್ಥವಾಗಿರುವ ಕಾಶ್ಮೀರ ಪ್ರಶ್ನೆಯನ್ನು ವಿವಾದವಾಗಿಯೇ ಉಳಿಯುಗೊಡುವ ರಾಷ್ಟ್ರಗಳು ಅವೇ ಎಂಬುದಾಗಿ ಸೂಚಿಸಿರುವುದರಿಂದ ಈ ವರ್ಗಗಳಲ್ಲಿ ಹೇಳಲಾಗುತ್ತದೆ. ಇದು ಅಮೇರಿಕ ಮತ್ತು ಬ್ರಿಟನುಗಳ ಅಭಿಮಾನವನ್ನು ಕುಕ್ಕುವ ಮಾತು; ಆದ್ದರಿಂದ ಭದ್ರತಾ ಮಂಡಳದ ಮೂಲಕ ನಡೆದಿರುವ ಎಲ್ಲ ಪ್ರಯತ್ನಗಳ ಮೇಲೂ ಕಣ್ಣೀರೆರೆಚುವ ಮಾತು ಎಂಬ ಅಭಿಪ್ರಾಯ ಬಲಗೊಂಡಿರುತ್ತದೆ.

ಪಾಕಿಸ್ತಾನದ ಪ್ರತಿಕ್ರಿಯೆ

ಕರಾಚಿ ಮತ್ತಿತರೆಡೆಯ ಪ್ರಮುಖ ಪಾಕಿಸ್ತಾನಿ ಪತ್ರಿಕೆಗಳು ರಷ್ಯದ ನಾಯಕರ ಹೇಳಿಕೆಯನ್ನು ಉಗ್ರವಾಗಿ ನಿಷೇಧಿಸಿವೆ. ಭಾರತದ ಸೈನ್ಯ ಬಲದ ರಕ್ಷಣೆಯಲ್ಲಿ ರಷ್ಯದ ಈ ನಾಯಕರು ಬಂದು ಅಭಿಪ್ರಾಯ ಪ್ರಕಟಣೆಗೆ ಅವಕಾಶವಿಲ್ಲದಂತೆ ಹತ್ತಿಕ್ಕಲ್ಪಟ್ಟಿರುವ ಕಾಶ್ಮೀರಿಗಳ ಮುಂದೆ ನಿಮ್ಮ ಭವಿಷ್ಯ ಎಂದೋ ಇತ್ಯರ್ಥವಾಗಿದೆ ಎಂದೆ. ಹೇಳಬೇಕಾದರೆ ಅದಕ್ಕೆ ಬಹಳ ಎದೆಗಾರಿಕೆ ಬೇಕು; ಜನತೆಯ ಅಭಿಪ್ರಾಯಕ್ಕೆ ರಷ್ಯದ ನಾಯಕರು ತಿಲಾಂಶವೂ ಬೆಲೆ ಕೊಡುವವರಲ್ಲ ಪೆಂಬ ನಗ್ನ ಸತ್ಯವನ್ನಿದು ತೋರಿಸುತ್ತದೆ ಎಂದು "ಡಾನ್" ಪತ್ರಿಕೆ ಬರೆದಿದೆ. ಪಾಕಿಸ್ತಾನ ಸರಕಾರದ ವಿದೇಶ ನೀತಿಯ ವಿಫಲತೆಯ ಕುರಿತೂ ಅದು ಮತ್ತು "ಟೈಮ್ಸ್ ಆಫ್ ಕರಾಚಿ" ಎಂಬ ಪತ್ರಿಕೆಗಳು ವಿಷಾದಿಸಿವೆ. ಅಮೇರಿಕ ಮತ್ತು ಬ್ರಿಟನುಗಳು ಹೇಳುವುದೇನು ಎಂಬುದೇ ಅವುಗಳ ಸವಾಲು. ಪಾಕಿಸ್ತಾನ ಸರಕಾರವಾದರೂ ಭದ್ರತಾ ಮಂಡಳದ ಗೊತ್ತುವಳಿಗೆ ವಿರುದ್ಧವಾಗಿ ರಷ್ಯ ನಡೆಯುತ್ತಿರುವುದಕ್ಕೆ ವ್ಯಸನಿಸಿದೆ.

ರಟ್ಟಾದ ಗುಟ್ಟು

ಶ್ರೀ ನಗರದ ತಮ್ಮ ಭಾಷಣದಲ್ಲಿ ಮಿ. ಖ್ರುಶ್ಚೆಫ್ ಇನ್ನೊಂದು ಗುಟ್ಟನ್ನು ಬಹಿರಂಗಪಡಿಸಿ, ಪಾಕಿಸ್ತಾನದ ವರ್ತನೆಯನ್ನು ಟೀಕಿಸಿದರು. ಕಾಶ್ಮೀರ ಮತ್ತು ಆಫ್ಘಾನಿಸ್ತಾನಗಳಿಗೆ ರಷ್ಯದ ನಾಯಕರು ಭೇಟಿ ಕೊಡುತ್ತಿರುವುದಕ್ಕೆ ಪಾಕಿಸ್ತಾನವು ನಿಷೇಧವನ್ನು ಸೂಚಿಸಿತ್ತೆಂದು ಅವರು ಹೇಳುತ್ತಾ "ನಾವು ಎಲ್ಲಿಗೆ ಹೋಗಬೇಕು, ನಾವೆಂಥ ಸ್ನೇಹಿತರನ್ನು ಮಾಡಿಕೊಳ್ಳಬೇಕು ಎಂದು ಯಾರೂ ಹೇಳಿಕೊಡಬೇಕಾದ ಅಗತ್ಯವಿಲ್ಲ" ಎಂದು ಬಹಿರಂಗವಾಗಿ ನುಡಿಯುತ್ತಿರುವಿತ್ತರು. ಸೈನಿಕ ಒಪ್ಪಂದದಿಂದ ದ್ವೇಷವನ್ನು ವಿಸ್ತರಿಸುವ ಪಶ್ಚಿಮ ರಾಷ್ಟ್ರಗಳ ಆಧೀನಕ್ಕೆ ಒಳಪಟ್ಟ ರಾಷ್ಟ್ರವೆಂದು ಪಾಕಿಸ್ತಾನವನ್ನು ದೂಷಿಸಿದುದಲ್ಲದೆ ಹೀಗೂ ಮಾಡಬಾರದೆಂದು ಎಚ್ಚರಿಸಿದಂತಾಯಿತು.

ಮಹತ್ವದ ಉದ್ಗಾರ

ತಮ್ಮ ಭಾರತ ಸಂಚಾರದಲ್ಲಿ ರಷ್ಯದ ನಾಯಕರು ರಾಜಕೀಯ ಮಹತ್ವದ ಮೂರು ಘೋಷಣೆಗಳನ್ನು ಮಾಡಿದರು. (೧) ಲೆನಿನ್ ಮತ್ತು ಗಾಂಧಿಯವರನ್ನು ತಮ್ಮಿಬ್ಬರಾಷ್ಟ್ರಗಳ ಮಹಾ ಗುರುವೆಂದರು; ಇವರಿಂದ ಭಾರತೀಯ ಕಮ್ಯೂನಿಸ್ಟರಿಗೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದೇ ಕಷ್ಟವೆನಿಸುತ್ತದೆ. (೨) ಗೋವೆಯು ಭಾರತದ ಅವಿಭಾಜ್ಯ ಅಂಗವೆಂದು ಘೋಷಿಸಿ ಪೋರ್ಚುಗೀಸರು ಅದನ್ನು ಸ್ವಇಚ್ಛೆಯಿಂದ ಬಿಡಿದುಕೊಂಡಿರುವುದು ಮಾನವ ನಾಗರಿಕತೆಗೆ ನಾಚಿಕೆಗೇಡು ಎಂದರು, ಇದರಿಂದ ಆಫ್ರೋ ಏಷ್ಯ ರಾಷ್ಟ್ರಗಳ ವಸಾಹತು ವಿರೋಧಿ ನಿಲುವಿಗೆ ಮತ್ತು ಭಾರತದ ಧೋರಣೆಗೆ ಜಗತ್ತಿನ ಪ್ರಬಲ ರಾಷ್ಟ್ರವೊಂದು ಬೆಂಬಲವಿತ್ತಂತಾಯಿತು; ಮತ್ತು (೩) ಕಾಶ್ಮೀರ ಪ್ರಶ್ನೆಯು ಇತ್ಯರ್ಥವಾಗಿ ಹೋಗಿದೆ ಎಂದರು; ಅಮೇರಿಕದ ಸೈನಿಕ ಒಪ್ಪಂದ ಹಾಗು ಇತ್ತೀಚೆಯ ಘಟನೆಗಳ ಮೇಲಿಂದ ಕಾಶ್ಮೀರ ಪ್ರಶ್ನೆಯನ್ನು ಹಿಂದಿನ ಗೊತ್ತುವಳಿಗಳ ತಳಹದಿಯಲ್ಲಿ ತೀರ್ಮಾನಿಸುವಂತಿಲ್ಲವೆಂಬ ಭಾರತದ ವಾದಕ್ಕೆ ನೈತಿಕ ಪುಷ್ಟಿಯನ್ನು ಇದು ನೀಡಿದಂತಾಯಿತು.


ಎಲ್ಲರಿಗೂ ಗೊತ್ತು –
ತ್ವರಿತದಿಂದ ತಲುಪಿಸಲ್ಪಡುವಿಕೆಯೇ ಬ್ರುಕ್ ಬಾಂಡ್ ಚಹಾ ಅತ್ಯಂತ ಹಸನಾಗಿರುವುದು ಎಂಬುದನ್ನು ಖಂಡಿತ ಮಾಡುತ್ತದೆ
ಪ್ರತಿಯೊಂದು ಬ್ರುಕ್ ಬಾಂಡ್ ಪೊಟ್ಟಣವೂ ಹೆಚ್ಚು ಬಟ್ಟಲು ಉತ್ತಮ ಚಹಾವನ್ನೊದಗಿಸುತ್ತದೆ
ಪ್ರತಿನಿತ್ಯವೂ 24,90,496 ಪೊಟ್ಟಣ ಬ್ರುಕ್ ಬಾಂಡ್ ಚಹಾ ಮಾರಲ್ಪಡುತ್ತದೆ
Brooke Bond Tea
Brooke Bond Tea
ಅಪಕಾರಣವೇ ಇತರ ಯಾವದೇ ಚಹಾಗಿಂತಲೂ
ಬ್ರುಕ್ ಬಾಂಡ್ ಚಹಾವನ್ನೇ
ಹೆಚ್ಚು ಜನರು ಕೊಳ್ಳುತ್ತಾರೆ!
Bb 99 TR

NAVAYUGA

Popular Kannada Weekly

Founder —

Sri **A. B SHETTY**, *M.L.A*

Minister for Public Health, Govt. of Madras

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೫-೧೨-'೫೫	೧೬

ಕಾಶ್ಮೀರ

ತಮ್ಮ ಭಾರತ ಸಂಚಾರ ಕಾಲದಲ್ಲಿ ರಶ್ಯದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ ಮತ್ತು ಆ ದೇಶದ ನಾಮ್ಕಾವಾದಿ ಪಕ್ಷದ ಕಾರ್ಯದರ್ಶಿ ಮಿ. ಖ್ರುಶ್ಚೆವ್ ಕಾಶ್ಮೀರಕ್ಕೆ ಭೇಟಿ ಕೊಟ್ಟುದು ಪಾಕಿಸ್ತಾನಕ್ಕೆ ಎಷ್ಟೆಕ್ಕೂ ಪಥ್ಯವಾಗಿಲ್ಲವೆಂಬುದನ್ನು ಅದು ರಾಯಭಾರಿ ಮಟ್ಟದಲ್ಲಿ ನಿಷೇಧ ಪತ್ರವನ್ನು ಕಳಿಸಿದುದರಿಂದಲೇ ಸ್ಪಷ್ಟವಾಗುತ್ತದೆ; ಕಾಶ್ಮೀರದ ಸ್ಥಾನಮಾನದ ಕುರಿತು ರಶ್ಯದ ಪ್ರಭೃತಿಗಳು ಹೊರಡಿಸಿದ ಉದ್ಗಾರಗಳಿಂದಂತೂ ಪಾಕಿಸ್ತಾನವು ಸಿಟ್ಟಿನಿಂದ ಕುಣಿಯುತ್ತಿರುವಂತೆ ಕಾಣುತ್ತದೆ ಅಲ್ಲಿಯ ಪತ್ರಿಕೆಗಳು ಸರಕಾರದ ಅಂತರಾಷ್ಟ್ರೀಯ ಧೋರಣೆಯನ್ನು ಹಳಿಯುವುದರೊಡನೆ ಭದ್ರತಾ ಮಂಡಳದ ನಿಷ್ಕ್ರಿಯತೆಯನ್ನು ದೊಷಿಸಿ ಆಮೇರಿಕ ಮತ್ತು ಬ್ರಿಟನುಗಳ ಸ್ವಾಭಿಮಾನವನ್ನು ಚುಚ್ಚುವ ಮಾತುಗಳನ್ನಾಡಿರುತ್ತವೆ ಸರಕಾರದಲ್ಲಿರುವ ಹೊಣೆಗಾರ ವ್ಯಕ್ತಿಗಳು—ಇನರಲ್ಲಿ ಪ್ರಧಾನಿ ಜಾವಿದ್ ಮಹಮ್ಮದಾಲಿ ಮತ್ತು ವಿದೇಶ ಮಂತ್ರಿ ಹಮಿದುಲ್ ಹಕ್ ಚೌಧುರಿ ಸೇರಿದ್ದಾರೆ—ರಶ್ಯದ ನಾಯಕರ ಉದ್ಗಾರವನ್ನು ತೀನ್ರವಾಗಿ ಖಂಡಿಸಿರುವುದೂ ಅರ್ಥಪೂರ್ಣವಾಗಿದೆ. ಲೋಕ ಶಾಂತಿಯ ಸ್ಥಾಪನೆಗೆ ರಶ್ಯದ ನಾಯಕರ ನಿಲುಮೆಯು ತೀರ ವ್ಯತಿರಿಕ್ತವಾಗಿದೆ ಎಂದೂ ಕಾಶ್ಮೀರ ಜನತೆಗೆ ಯಾವ ಕಾಲಕ್ಕೂ ಇರಬೇಕಾದ ಸ್ವಯಂ ನಿರ್ಣಯಾಧಿಕಾರವನ್ನು ರಶ್ಯದ ನಾಯಕರು ಲೆಕ್ಕಿಸದಷ್ಟುಮುಂದೆ ಹೋಗಿರುವರೆಂದೂ ಅವರು ಟೀಕೆಯ ಸುರಿಮಳೆಗರೆದಿದ್ದಾರೆ. ಭದ್ರತಾ ಮಂಡಳದಲ್ಲಿ ಶಾಶ್ವತ ಸ್ಥಾನವನ್ನು ಪಡೆದಿರುವ ರಾಷ್ಟ್ರವೊಂದು ಆ ಸಂಸ್ಥೆಗೆ ಮುಂದಿ ಇನ್ನೂ ಇತ್ಯರ್ಥವಾಗಿರದಿರುವ ಪ್ರಾಮುಖ್ಯ ಪ್ರಶ್ನೆಯೊಂದರ ಕುರಿತು ಹೀಗೆ ಅಭಿಪ್ರಾಯ ಪಡುವುದೆಂದರೆ ಏಕಪಕ್ಷೀಯ ನ್ಯಾಯಕ್ಕೆ ಸೈಗುಟ್ಟಿದ್ದಂತೆ ಎಂದು ಪಾಕಿಸ್ತಾನದಲ್ಲಿಯೂ ಅದನ್ನು ಬೆಂಬಲಿಸುವ ವರ್ಗಗಳಲ್ಲಿಯೂ ಹೇಳಲಾಗುತ್ತದೆ. ಇಷ್ಟು ವಿವೇಕವುಳ್ಳ ವರ್ಗಗಳು ಭದ್ರತಾ ಮಂಡಳದ ರಶ್ಯ ಪಷ್ಟೇ ಸಮಾನ ಸ್ಥಾನಮಾನವನ್ನು ಹೊಂದಿರುವ ಅಮೇರಿಕ ಮತ್ತು ಬ್ರಿಟನುಗಳ ಸ್ವಾಭಿಮಾನವನ್ನೂ ಕುಕ್ಕುವ ವಾತಾವರಣವನ್ನು ಆಡುವುದರಲ್ಲಿ ನ್ಯಾಯ ಸಮ್ಮತವಾದ ಆಂಶವೇನಿದೆ? ಈ ಪ್ರಶ್ನೆಗೆ ಸಮರ್ಪಕ ಉತ್ತರ ಸಿಕ್ಕಿಲ್ಲ ಎನ್ನಕ್ಕಿಂತೆ ಹೆಚ್ಚಾಗಿ, ಆ ಮೇರಿಕವು ಪಾಕಿಸ್ತಾನದೊಡನೆ ಸೈನಿಕ ಒಪ್ಪಂದ ಮಾಡಿಕೊಂಡುದರಿಂದ ಕಾಶ್ಮೀರ ಪ್ರಶ್ನೆಯ ಮೇಲೆ ಯಾವುದೇ ಪರಿಣಾಮ ವಾಗುವಂತಿಲ್ಲವೆಂದು ಪಾಕಿಸ್ತಾನವೂ ಆಮೇರಿಕವೂ ಹೇಳುತ್ತಾ ಬಂದಿವೆ ಎಂದ ಮೇಲೆ ರಶ್ಯದ ನಾಯಕರು ಕೀವಲ ಕೆಲವು ಉದ್ಗಾರಗಳನ್ನು ಹೊರಡಿಸಿದುದರಿಂದ ಆಗುವುದೇನು? ಪೊಣ್ಣೆಯಿಂದ ಮಾತ್ರ ಒಬ್ಬನ ತಲೆಯೊಡೆಯಬಹುದೇ ಹೊರತು ಮಾತಿನಿಂದ, ಅಧವಾ ಮಾತಿಗೆ ಬೇಕಾದರೆ "ಶಾಪ"ದಿಂದ, ಪ್ರತಿಸ್ಪರ್ಧಿಯ ಪ್ರಾಣ ತೆಗೆಯಲಷ್ಟು ಪ್ರಭಾವ ಈ ಕಾಲದಲ್ಲಿ ಯಾರಿಗೂ ಉಳಿದಿಲ್ಲ. ಆದುದರಿಂದ "ಕಾಶ್ಮೀರ ಪ್ರಶ್ನೆಯು ಎಂದೊ ಇತ್ಯರ್ಥವಾಗಿ ಹೋಗಿದೆ, ಆ ರಾಜ್ಯದ ನೆಪದಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಗಡಿಯಲ್ಲಿ ಬದಲಾವಣೆಯಾಗಬೇಕಾಗಿದೆ ಎಂದು ವಾದಿಸುವ ಪ್ರಮೇಯ ಈಗ ಉಳಿದಿಲ್ಲ" ಎಂದು ಮಿ. ಖ್ರುಶ್ಚೆವ್ ಹೇಳಿದಷ್ಟಕ್ಕೆ ಪಾಕಿಸ್ತಾನವಾಗಲೀ ಪಾಶ್ಚಾತ್ಯ ರಾಷ್ಟ್ರಗಳಾಗಲೀ ಹೆದರಿ ಸಾಯುವುದೇಕೆ? ನಿ ಖ್ರುಶ್ಚೆವ್ ಒಂದು ರಾಜಕೀಯ ಪಕ್ಷದ— ಆ ಪಕ್ಷಕ್ಕೆ ರಶ್ಯದಲ್ಲಿ ಮಹತ್ವದ ಸ್ಥಾನವಿದೆ ಎಂಬುದು ನಿಜ— ಕಾರ್ಯದರ್ಶಿಯಾಗಿದ್ದಾರೆ ಮಾತ್ರ, ಅವರೆ ಮಾತಿಗೇಕೆ ಇಷ್ಟು ಪೆಜ್ಜಿನ ಬೆಲೆ? ಅವರಾದರೂ ತಪ್ಪಿ ಆಡಿದರೆಂದು, ಅವರು ತೀರ ಹೊಸತಾದ ವಿಷಯವೊಂದನ್ನು ಜಗತ್ತಿನ ಮುಂದಿಟ್ಟ ರೆಂದು ಕಳವಳ ತೋರಿಸುವುದೇಕೆ? ಭಾರತದ ರಾಜ್ಯಾಂಗ ಘಟನೆಯಲ್ಲಿ ಮನ್ನಣೆಯನ್ನು ಪಡೆದ ಮಾತನ್ನು—ಅಂದರೆ ಕಾಶ್ಮೀರವು ಭಾರತದ ರಾಜ್ಯಗಳಲ್ಲಿ ಒಂದಾಗಿರುವುದನ್ನು—ಪಾರ್ಲಮೆಂಟ್ ಬುಲ್ಗಾನಿನ್ ಹೇಳಿದರು, ಅದನ್ನು ಆಲ್ಲಗಳೆಯುವುದರಲ್ಲಿ ಪುರುಷಾರ್ಥವಿರಬೇಕೆ? ಡಲ್ಲೇಸರು "ಗೋವೆಯು ಪೋರ್ಚುಗಾಲದ ಪ್ರಾಂತ್ಯ" ಎಂಬುದಾಗಿ 'ಇದ್ದ ಸಂಗತಿಯನ್ನು' ಜಗತ್ತಿಗೆ ಗೊತ್ತಿರುವ ವಿಷಯವನ್ನು" 'ಹೇಳಿರುವುದು ತಪ್ಪಲ್ಲವಾದರೆ ರಶ್ಯದ ನಾಯಕರ ಮಾತಿನಿಂದ ಹೊಹಾರುವುದೇಕೆ? ಪಾಕಿಸ್ತಾನಕ್ಕೆ ಬೇಕಾದವರೊಡನೆ, ಬೇಕಾದ ರೀತಿಯಲ್ಲಿ ಸೈನಿಕ ಒಪ್ಪಂದವಲ್ಲ ಗಂಭೀರ ಹಾಗು ದೂರಗಾಮಿಯಾದ ಪರಿಣಾಮಗಳನ್ನು ಮಾಡಬಲ್ಲ ಹೆಜ್ಜೆಗಳನ್ನು ಮುಂದಿಡಲು ನ್ಯಾಯವಾಗಿ ಹಕ್ಕು ಇರುವುದಾದರೆ, ರಶ್ಯದ ನಾಯಕರಿಗೆ ಕಾಶ್ಮೀರ ಅಧವಾ ಅಫಘಾನಿಸ್ತಾನದಂಥ ದೇಶಗಳಿಗೆ ಕಾಲಿಡುವ ಅಧಿಕಾರವು ಇಲ್ಲ ವೆಂಬ ರೀತಿಯಲ್ಲಿ ನಿಷೇಧ ಸೂಚಿಸುವ ಪಾಕಿಸ್ತಾನದ ವರ್ತನೆ ತೀರ ಬಾಲಿಶವಾದುದಲ್ಲವೆ? ಪಾಕಿಸ್ತಾನವು ಕಾಶ್ಮೀರ ಸ್ಪರ್ಶಿಸಿ ವಿಷಯದಲ್ಲಿ ಮೊದಲಿನಿಂದಲೂ ತಪ್ಪನ್ನೆ ಮಾಡುತ್ತಾ ಬಂದಿದೆ. ಶೇಕ್ ಅಬ್ದುಲ್ಲರು ಜನನಾಯಕನ ಸ್ಥಾನದಿಂದ ಮಹಮ್ಮದಾಲಿ ಜಿನ್ನಾರೊಡನೆ ಕಾಶ್ಮೀರದ ಭವಿಷ್ಯದ ಕುರಿತು ಗರ್ಭಗುಡಿಯಲ್ಲಿ ಮಾತುಕತೆ ನಡೆಸುವ ಒಲವನ್ನು ತೋರಿಸಿದಾಗ ಕಾಶ್ಮೀರದ ರಾಜರಿಗಷ್ಟಿದೆ, "ನಾಯಕ"ನೆನಿಸಿಕೊಳ್ಳುವ ಶೇಕ್ ಅಬ್ದುಲ್ಲರಿಗೆ ಜನರ ಪರವಾಗಿ ಮಾತನಾಡಲು ಅಧಿಕಾರವೇನು ಎಂದು ಪಾಕಿಸ್ತಾನ ಕೇಳಿದ್ದಿತು! ಭಾರತವು ರಾಜರ ಅಭಿಮತಾನುಸಾರವಾಗಿ ಗುಡ್ಡಗಾಡುಗಳ ಜನರ ಮತ್ತು ಪಾಕಿಸ್ತಾನಿ ಶಸ್ತ್ರಧಾರಿಗಳ ಆಕ್ರಮಣದಿಂದ ಕಾಶ್ಮೀರವನ್ನು ಉಳಿಸಿರುವುದು ಈ ದೃಷ್ಟಿಯಿಂದ ತಪ್ಪಾಗುವುದೆಂತು? ಮೂಲಭೂತವಾದ ಈ ಸಂಗತಿಯನ್ನು ಪಾಕಿಸ್ತಾನವು ಒಪ್ಪಿಕೊಳ್ಳದೆ ಅಂದಿನಿಂದ ಇಂದಿನ ವರೆಗೂ ಹಟಮಾರಿತನದ ಧೋರಣೆಯನ್ನು ವಹಿಸಿರುತ್ತದೆ "ಕಾಶ್ಮೀರವು ನಮ್ಮದು" ಎಂಬ ಪಲ್ಲವಿಯನ್ನೆ ಪಾಕಿಸ್ತಾನದ ಸರಕಾರಿ ವಲಯಗಳೂ ಮಿ. ಸುಹ್ರವರ್ದಿಯವರಂಥ ದೂರದೃಷ್ಟಿಯ ಮುತ್ಸದ್ದಿಗಳೂ ಹಾಡುವುದರಲ್ಲಿ ತೋರಿಸಿದ ಆಸಕ್ತಿಯನ್ನು ನ್ಯಾಯವಾದ ಮತ್ತು ವಿವೇಕ ಸಮ್ಮತವಾದ ಆಂಶಗಳ ವಿವೇಚನೆಯ ಸಂಬಂಧದಲ್ಲಿ ಎಂದೂ ತೋರಿಸಿದ್ದಿಲ್ಲ. ಕಾಶ್ಮೀರದ ಕುರಿತು ಭಾರತವು ರಾಜರ ಅಭಿಮತದಂತೆ ನಡೆದುಕೊಳ್ಳುತ್ತ ಕಾಲದಲ್ಲಿ ಜನರ ಅಭಿಲಾಷೆಯನ್ನು ಮನ್ನಿಸುವ ಭರವಸೆಯನ್ನಿತ್ತಿತು. ಅದು ಸಾವಧಿಕ ಮತಗಣನೆಯ ಮೂಲಕವೇ ನಡೆಯಬೇಕೆಂದು ಅದು ಹೇಳಿದ್ದಿಲ್ಲ;ಇಂಥ ಭರವಸೆಯ ಅವಶ್ಯಕತೆ ಇತ್ತೆಂದೂ—ಮಿ.ಜಿನ್ನರ ಉಪರೋಕ್ತ ನಿಲುಮೆಯನ್ನು ಗಮನಿಸಿದ ಬಳಿಕ—ತೋರಲಾರದು. ಭಾರತವು ಕಾಶ್ಮೀರದ ಜನರ ಕುರಿತು ತೋರಿಸಿದ ಔದಾರ್ಯವೆಂದೇ ಇದನ್ನು ಪರಿಗಣಿಸುವುದು ಒಳಿತು. ಅಂಥ ಜನಾಭಿಪ್ರಾಯವು ಕಾಶ್ಮೀರದ ಘಟನಾ ಸಮಿತಿಯ ನಿರ್ಣಯದಿಂದ ಸರ್ವಶ್ರುತವಾಗಿದೆ ಇದು ಭಾರತ ಸರಕಾರಕ್ಕೆ ಮನಪರಿಕೆಯಾಗಿದ್ದರೂ ಪಾಕಿಸ್ತಾನ ಸರಕಾರ ಸಹ ಕಾಶ್ಮೀರ ಸಮಸ್ಯೆಯ ಕುರಿತು ಸಮಾಧಾನಕರವೆಂದು ನಿರ್ಣಯವಾಗಿದೆ ಎಂದು ಭಾವಿಸಲಿ ಎಂಬುದಕ್ಕೋಸ್ಕರ ಇನ್ನೂ ತನ್ನ ಹಿಂದಿನ ಭರವಸೆಗೆ ಭಾರತ ಅಂಟಿಕುಳಿತಿದೆ; ಆ ಭರವಸೆಯ ಕಾರ್ಯಾಚರಣೆಗೆ ಆಡ್ಡಿಯಾಗುತ್ತಿರುವ ವಿಷಯವೊಂದಿದ್ದರೆ ಅದು ಜನಮತಗಣನೆ ನಡೆಸಲು ಅವಶ್ಯವಿರುವ ಸನ್ನಿವೇಶ ನಿರ್ಮಾಣಕಾರ್ಯಕ್ಕೆ ತಡೆಯೊಡ್ಡುತ್ತಿರುವ ಪಾಕಿಸ್ತಾನದ ಮನೋಭಾವ ಎಂದೆನ್ನಬೇಕಾಗುತ್ತದೆ. ಪ್ರಾಮುಖ್ಯವಾದ ಈ ವಿಷಯವನ್ನು ಗಮನಿಸದೆ ರಶ್ಯದ ನಾಯಕರ ಉದ್ಗಾರಗಳಿಂದ ಸಿಟ್ಟುಗೊಳ್ಳುವುದರಲ್ಲಿ ಅರ್ಥವೇನಿದೆ? ರಶ್ಯದ ನಾಯಕರು ಉದ್ಗಾರವು ಭಾರತ ಸರಕಾರದ ಅಭಿಪ್ರಾಯವಾಗಿದೆ ಎಂದಿಲ್ಲಿಯಾದರೂ ವ್ಯಕ್ತವಾಗಿದೆಯೆ? ಹೊರ ತೋರಿಕೆಗೆ ಹಾಗೆ ಕಂಡರೂ ಭಾರತ ಸರಕಾರ ಅಂಥ ಸಮ್ಮತಿ ಮುದ್ರೆಯನ್ನೆಂದೂ ಕೊಟ್ಟರೆ ವುದಿಲ್ಲ; ಕೊಡಲಿಕ್ಕೂ ಇಲ್ಲ ಇದನ್ನು ಉದ್ವೇಗ ಪರವಶವಾಗಿ ಗಮನಿಸದೆ ಹೋದ ಪಾಕಿಸ್ತಾನದ ಸರಕಾರವೂ ಪಾಶ್ಚತ್ಯ ರಾಷ್ಟ್ರಗಳೂ ಲೋಕದ ಜನತೆಯೂ ಆಗತ್ಯವಾಗಿ ಮನಗಾಣಬೇಕೆಂದು ಇಲ್ಲಿ ಸೂಚಿಸಲು ಬಯಸುತ್ತೇನೆ. ರಶ್ಯದ ನಾಯಕರು ತಮಗೆ ಸರಿ ಕಂಡುದನ್ನು ಹೇಳಿದ್ದರೆ ಅದಕ್ಕಾಗಿ ಸಂತೋಷಿಸಬೇಕು, ನ್ಯಾಯ ಅದರಲ್ಲಿಲ್ಲವೆನೆ ಎಂಬುದನ್ನು ವಿಮರ್ಶಿಸಬೇಕು—ಹೊರತು ಉದ್ವೇಕ ಪ್ರದರ್ಶನವಾಗಲೀ ಖಂಡ ಖಂಡದ ಮೂರ್ಖ ಮಾತುಗಾರಿಕೆಯಾಗಲೀ ಉಚಿತವೆನಿಸದು

ಉಡುಪಿ

ನಗರ ಸಭಾಪತಿಗಳಿಗೆ ಸತ್ಕಾರ— ಕಡಿಯಾಳಿ ಶ್ರೀ ಗಣಪತಿ ದೇವಸ್ಥಾನದಲ್ಲಿ ನಗರಸಭಾಪತಿ ಶ್ರೀ ಕೆ. ಕೆ ಪೈಗಳನ್ನು ಗೌರವಿಸುವ ಸಮಾರಂಭವೊಂದು ಶನಿವಾರ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಉಡುಪಿ ಧರ್ಮ ಪೀಠಾಧಿಕಾರಿಗೆ ಜಯ— ಮದ್ರಾಸು ಹೈಕೋರ್ಟಿನ ಜಸ್ಟಿಸ್ ಶ್ರೀ ಜಿ ರಾಜಗೋಪಾಲನ್ ಮತ್ತು ಜಸ್ಟಿಸ್ ಶ್ರೀ ಎನ್. ರಾಜಗೋಪಾಲ ಅಯ್ಯಂಗಾರರು 1951ರ ಹಿಂದೂ ಧಾರ್ಮಿಕ ಉಂಬಳಿಗಳ ಕಾಯಿದೆಯ ಕೆಲವು ನಿಶ್ಚಿತ ಸೆಕ್ಷನುಗಳು ನಿರರ್ಥಕವೆಂದು ತೀರ್ಮಾನಿಸಿದರು. ಕಾಯಿದೆಯ ಕೆಲವು ಹೊಣೆಜನುಗಳನ್ನು ಹಿಂದೂ ಧಾರ್ಮಿಕ ಉಂಬಳಿಗಳ ಕಮೊಷನರರು ಜ್ಞಾಪಿಗೆ ತರದಂತೆ ರಿಟ್ ಗಳನ್ನು ಹೊರಡಿಸಬೇಕೆಂದು ಉಡುಪಿಯ ಶ್ರೀಕೃಷ್ಣ ಮಠದ ಆಡಳಿತೆ ನಡೆಸುವ ಎಂಟು ಮಠಗಳ ಅಧಿಕಾರಿಗಳು, ಸಲ್ಲಿಸಿದ ಅರ್ಜಿಗಳ ಕುರಿತು ನ್ಯಾಯಮೂರ್ತಿಗಳು ತೀರ್ಮಾನ ಕೊಡುತ್ತಿದ್ದರು ಕಾಂಚಿ ಕಾಮಕೋಟಿ ಪೀಠದ ಶ್ರೀ ಶಂಕರಾಚಾರ್ಯ ಸ್ವಾಮಿಗಳ ಪರವಾಗಿಯೂ ರಿಟ್ ಅರ್ಜಿ ಸಲ್ಲಿಸಲಾಗಿತ್ತು.

ಅರ್ಜಿಗಳ ಕುರಿತು ತೀರ್ಪನ್ನಿಯತ್ತಾ, ನ್ಯಾಯಮೂರ್ತಿಗಳು, ಕಾಯಿದೆಯ ಕೆಲವು ಪ್ರಾವಿಜನುಗಳನ್ನು ತಿದ್ದುಪಡಿ ಮಾಡಲಾಗಿದ್ದರೂ 21, 30(2) ಮತ್ತು 31ನೆ ಸೆಕ್ಷನುಗಳು ಮೂಲಾಧಿಪತಿಗಳ ಮೇಲೆ ನ್ಯಾಯ ವಿರೋಧವಾದ ತಡೆಗಳನ್ನು ಹೊರಿಸುವುದರಿಂದ, ಈ ಸೆಕ್ಷನುಗಳು ನಿರರ್ಥಕವಾಗಿವೆ ಎಂದು ಅಭಿಪ್ರಾಯಪಟ್ಟರು.

ನಗರಸಭೆಯು— ತಾ. 10ರಲ್ಲಿ ನಗರಸಭಾಪತಿ ಶ್ರೀ ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಿಗಿತು ಸಿಬರ್ ಅನ್ಸೆತ್ರೆ ಸುಮ್ಮುದಿ. ಮು ಕೋರ್ಟಿನ ಹಿಂಬದಿ ರಸ್ತೆಗಳ ಮೇಲ್ಪಾಲ್ಕೆಗೆ ಕಲ್ಲು ಬಳಿಯುವರೆಗೆ ಸರಕಾರವು ಕೊಡುವ ರೊಖಾಯಿ 3800/-ರೆ ಸಾಲವನ್ನು ತರಿಸಬೇಕೆಂದು ನಿರ್ಣಯವಾಯಿತು. ಆಲ್ಲದೆ ಕೆಲಸವನ್ನು ಕೊಡಲೇ ಸುರುಮಾಡಿಸಬೇಕೆಂದು ಕಮಿಷನರರಿಗೆ ತಿಳಿಸಲಾಯಿತು ಅಜ್ಜರಕಾಡು ಭುಜಂಗ ಪಾರ್ಕಿನಲ್ಲಿ ಮೆಟ್ಟಲುಗಳನ್ನು ಕಟ್ಟಲು ತಗಲುವ ಕರ್ಚು ರೂ. 425/-ನ್ನು ತಾನು ಕೊಡುವೆನಾಗಿ ತಿಳಿಸುವುದಕ್ಕೆ ಮುನ್ಸಾಸಿನ ಡಾ. ಯು ಎಸ್. ನಾರಾಯಣ ರಾಯರನ್ನು ಅಭಿನಂದಿಸಲಾಯಿತು ಕನ್ನಮೂರ್ತಿ ಎಲಿಮಂಟರಿ ಶಾಲೆಯನ್ನು ಈಗ ಇದ್ದಂತೆ ಇರಗೊಡಿಸಬೇಕೆಂದೂ ಸರಕಾರವು ಎಲ್ಲಾ ಖರ್ಚಿನ ಹಣವನ್ನು ಕೊಡುವುದಾದರೆ ಹೊಸತಾಗಿ ಬುನಾದಿ ಶಿಕ್ಷಣ ಶಾಲೆಯನ್ನು ತೆರೆಯಲು ನಗರಸಭೆಯು ತಯಾರಿದೆ ಎಂದು ಶಾಲಾ ಡಿಸ್ಟ್ರಿಬ್ಯೂಷನ್ಸ್ ಪೆಕ್ಟರರಿಪತ್ರಕ್ಕೆ ಉತ್ತರಿಕೊಡಬೇಕೆಂದು ನಿರ್ಣಯವಾಯಿತು.

ಯುವಕ ಕಾಂಗ್ರೆಸ್ ಸಭೆಯಲ್ಲಿ- ಶ್ರೀ ಟಿ ಎ ಪೈ, ಎಮ್ ಎಲ್. ಎ ಅವರು ತಾ ೨೨ರಲ್ಲಿ ಉಡುಪಿ ಪಟ್ಟಣ ಹಾಗೂ ತಾಲೂಕಿನಲ್ಲಾಗುತ್ತಾ ಅಭಿವೃದ್ಧಿಕಾರ್ಯಗಳ ಕುರಿತು ಮಾತನಾಡುತ್ತಾ ಬೇಗನೆ ಉಡುಪಿಯಿಂದ ಆರೆವೂರು, ಕಾಪುವಿನಿಂದ ಹೆಜಮಾಡಿ ಮತ್ತು ಮಂಗಳೂರಿನಿಂದ ಮೂಲ್ಕಿಯು ತನಕ ವಿದ್ಯುತ್ ಸಾಕರ್ಯಗಳನ್ನು ಕೊಡಗಾಗುವುದೆಂದರು ದಿವಂಗತ ಶ್ರೀ ವಿರೆಲ ಕಾಮತರ ಸ್ಮಾರಕವಾಗಿ ಸಾರ್ವಜನಿಕ ಬಳಕೆಗಾಗಿ ಸುಸಜ್ಜಿತ ವಾಚನಾಲಯವೊಂದನ್ನು ಸ್ಥಳೀಯ ಅಭಿವೃದ್ಧಿ ಯೋಜನೆಯ ಸಹಾಯ ಪಡೆದು ನಿರ್ಮಿಸಲಾಗುವುದೆಂದರು ನಾಲ್ಕು ಮಕ್ಕಳ ಆಟದ ಬಯಲುಗಳನ್ನು ತೆರೆಯುವ ವ್ಯವಸ್ಥೆಯು ಮಾಡಲಾಗುವುದೆಂದರು ರಥಬೀದಿಯಲ್ಲಿಯ ಆರ್ಚಾರ್ಯರ ರಸ್ತೆಯನ್ನು ಹ್ಯಾನೇಜ್ ಇಲಾಖೆಯವರೂ ಉಳಿದ ಆರ್ಚಾರ್ಯರನ್ನು ಎಂಟು ಮಠಗಳ ಸ್ವಾಮಿಗಳವರೆ ಮತ್ತು ಜೆ

Advertisement is a science— It is not a matter of opinion It requires planning and careful selection Make NAVAYUGA REPUBLIC DAY SPECIAL 1956 your Messenger to carry the news of your goods and achieve results

(೧ನೇ ಪುಟದಿಂದ)

ರಿಕ ಇಲ್ಲೇಕೆ ಬೀಗೆ ವಾದಿಸಲು ಹೋಗಿದೆ —ಎಂಬುದರ ಕುರಿತು ವಿಶೇಷ ಸ್ಪಷ್ಟೀಕರಣ ಅತ್ಯಾವಶ್ಯವಿದೆ

ಆನುಷಂಗಿಕವಾಗಿ ಬೇರೆ ಕೆಲವು ಸಂಗತಿಗಳೂ ಇಲ್ಲಿ ತಲೆ ಎತ್ತುತ್ತವೆ—ಉದಾಹರಣೆಗೆ, ಭಾರತ ಸರಕಾರವು ಎಂದಾದರೂ ಬಲಪ್ರಯೋಗ ಮಾಡುವ ಉತ್ಸಾಹವನ್ನು ತೋರಿಸಿದುದಿದೆಯೆ? ಜಗತ್ತಿನ ಸ್ಪಯೊಬ್ಬನಿಗೂ ತಿಳಿದಿರುವಂತೆ ಶಾಂತಿಹಾಗು ಅಹಿಂಸಾತ್ಮಕ ಸತ್ಯಾಗ್ರಹವನ್ನು ಪಡೆ ಅದು ಪಡೆದು ನಿಲ್ಲಿಸಿತು; ಮೂವತ್ತೈದಂತಲೂ ಹೆಚ್ಚು ಜನ ಭಾರತೀಯರನ್ನು ನಾಗರಿಕ ಶಾಸನವನ್ನು ಮುರಿದು ಪೋರ್ಚುಗೀಜರು ಗುಂಡಿನೇಟಿಗೆ ಗುರಿ ಮಾಡಿದಾಗ ಮತ್ತು ಮೂನ್ನೂರಕ್ಕಿಂತಲೂ ಹೆಚ್ಚು ಜನರನ್ನು ಸೆರೆಮನೆಯಲ್ಲಿ ಸಹನಾತೀತ ಯಾತನೆಗೆ ಗುರಿಪಡಿಸಿದಾಗ ಅದು ಶಾಂತಿ ಮಂತ್ರವನ್ನೆ ಪಠಿಸಿತು. ರಶ್ಯದ ನಾಯಕರ ಮಾತುಗಳಿಂದ ಉಬ್ಬಿಕೊಂಡು, ಅದು ಗೋವೆಯ ಕುರಿತು ತನ್ನ ನಿಲುಮೆ ಬದಲಾಯಿಸಿದ ಲಕ್ಷಣ ಯಾರಿಗಾದರೂ ಕಂಡುದಿದೆಯೆ? ನಮ್ಮ ಪ್ರಧಾನಿಗಳು ಸಂಸತ್ತಿನಲ್ಲಿ ಡಲೇಸರೂ ಕುಂಇಂರೂ ಹೊರಡಿಸಿದ ಸಂಯುಕ್ತ ಪ್ರಕಟಣೆಯ ಕುರಿತು ವಿಶೇಷ ಹೇಳಿಕೊಡುವ ಮೊದಲು ವಿಷಯಗಳ ಸತ್ಯವನ್ನು ಮನಗಾಣಬೇಕೆಂದು ತಿಳಿಸುವಷ್ಟು; ಹಾಗೆ ಸತ್ಯವನ್ನು ಸಮಜಾಯಿಷಿಸುವುದು— ಔದಾರ್ಯವನ್ನಾ ಮುನ್ನೋಟವನ್ನೂ ತೋರಿಸಿದರು. ಡಲೇಸರಂಥ ಜಗತ್ತಿನ ಅತಿ ದೊಡ್ಡ ರಾಷ್ಟ್ರದ ಪ್ರಭೃತಿಗಳು ವಿವೇಕಹೀನರಂತೆ ನುಡಿದದ್ದು ತೀರ ಆಯೋಗ್ಯ.

ಮೆಡ್ಯೇವದಿಂದ ಡಲೇಸರು ತಾವು ತಿಳಿಗೇಡಿತನವನ್ನು ತೋರಿಸಿದೆವೆಂದು ಒಪ್ಪುವುದೇ ಇಲ್ಲ-"ಏನು ಹೇಳಿದೆನೊ ಅದನ್ನು ಬುದ್ಧಿಪೂರ್ವಕವಾಗಿ, ಸಮಯ ಸಂದರ್ಭಗಳನ್ನು ತೂಗಿ ನೋಡಿ ಹೇಳಿದ್ದೇನೆ" ಎಂದು ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಂಡರು; ಬೀಗೆ ಭಾರತಕ್ಕಾದ ಗಾಯಕ್ಕೆ ಉಪ್ಪನ್ನು ತಿಕ್ಕಿದರು. ಸ್ವದೇಶದ ವಸಾಹತು ವಿರೋಧಿ ಸಂಪ್ರದಾಯಕ್ಕೆ ಮಸಿ ಬಳಿದರು; ಭಾರತವು ಯುದ್ಧೋತ್ಸಾಹವನ್ನು ತೋರಿಸಬಹುದೆಂಬ ವ್ಯರ್ಥ ಸಂಶೆ ಎಂದ ರಶ್ಯದ ನಾಯಕರ ಉದ್ಗಾರವನ್ನು ಖಂಡಿಸಲು ಹೋಗಿ ಡಾ.ಕುಂಇಂರು ಅಮೇರಿಕದಲ್ಲಿ ಭಾರತದ ವಿರುದ್ಧ ರಣಕಹಳೆಯನ್ನೂದುವಂತೆ ಮಾಡಿದರು. ಅಮೇರಿಕವು ಪಾಕಿಸ್ತಾನಕ್ಕೆ ಸೈನಿಕ ಸಹಾಯವನ್ನಿತ್ತುದು ವತ್ತು ಪಾಕಿಸ್ತಾನದ ಆಗಿನ ಪ್ರಧಾನಿ ಮಹಮ್ಮದಾಲಿಯವರು ಕಾಶ್ಮೀರದ ಪ್ರಶ್ನೆ ಇವರಿಂದ ಸುಲಭದಲ್ಲಿ ಇತ್ಯರ್ಥವಾಗಬಹುದೆಂದು ಹೇಳಿದುದು ತಪ್ಪಲ್ಲವೆಂದೂ ಅನಂತರ ದೋಷವಿಲ್ಲವೆಂದೂ ಭಾವಿಸಿದ ಡಲ್ಲೇಸರು ರಶ್ಯದ ನಾಯಕರ ವಸಾಹತು ವಿರೋಧಿ ನಿಲುಮೆಗೆ—ಅದಕ್ಕು ವ್ಯಕ್ತಪಡಿಸಿದ ಮಾತಿಗೆ

ನೆಹರು ಬುಲ್ಗಾನಿನ್ನರ ಸಂಯುಕ್ತ ಪ್ರಕಟಣೆ

ಭಾರತದಿಂದ ರಶಿಯದ ನಾಯಕರ ನಿರ್ಗಮನ

ರಶ್ಯದ ಇತಿಹಾಸದಲ್ಲಿಯೇ ಅಪೂರ್ವವೆಂಬಂತೆ ಕಮ್ಯುನಿಸ್ಟೇತರ ರಾಷ್ಟ್ರವಾದ ಭಾರತಕ್ಕೆ ಭೇಟಿಕೊಟ್ಟು ಎರಡು ವಾರಗಳ ಪ್ರವಾಸವನ್ನು ಮಾಡಿ ಇದೇ ೧೪ನೇ ದಿನಾಂಕ ಪ್ರಾತಃಕಾಲ ಮಾಸ್ಕೋಲ್ ನಿಕೊಲ್ಯಾ ಬುಲ್ಗಾನಿನ್ ಮತ್ತು ಮಿ ನಿಕೀಟಾ ಖ್ರುಶ್ಚೆಫ್ ಅವಘಾನಿಸ್ತಾನದ ರಾಜಧಾನಿಯಾದ ಕಾಬೂಲಿಗೆ ರಶ್ಯಕ್ಕೆ ಮರಳುವ ವಾಯಿ-ಲ್ಲಿ ತೆರಳಿದರು. ವಿಮಾನ ನಿಲ್ದಾಣದಲ್ಲಿ ಅವರನ್ನು ಅತ್ಯಂತ ಸಂಭ್ರಮದಿಂದ ಬೀಳ್ಕೊಡ್ಕೊಲಾಯಿತು.

—ಯುದ್ಧ ಪ್ರಜ್ಞೋದನೆ ಮಾಡುವ ಶಕ್ತಿ ಇದೆ ಎಂದುಕೊಂಡು ತೀರ ತಿಳಿಗೇಡಿತನವನ್ನು ಪ್ರದರ್ಶಿಸಿದರು.

ಪೋರ್ಚುಗಾಲಿನ ವಸಾಹತುಗುಳ್ಳಿಯ ಅಣು ಮತ್ತು ಜಲಜನಕ ಬಾಂಬುಗಳ ತಯಾರಿಕೆಗೆ ಬೇಕಾದ ಯುರೇನಿಯಂ ಇತ್ಯಾದಿ ಖನಿಜಗಳ ಹೇರಳ ಸಂಗ್ರಹವಿದೆ; ಅದರ ಮೇಲೆ ಡಲ್ಲೀಸರ ಕಣ್ಣು ಬಿದ್ದಿರಬಹುದು. ತುರ್ಕಿಸ್ತಾನದ ಅಂಕಾರಾದಿಂದ ಫಿಲಿಪೀನಿನ ಮನಿಲಾವರೆಗೆ ಸೈನಿಕ ಒಪ್ಪಂದ ಕ್ಷೇತ್ರಗಳನ್ನು ವಿಸ್ತರಿಸುವ ಮಹಾತ್ವಾಕಾಂಕ್ಷೆಗೆ—ಭಾರತದ ಭೂಭಾಗದಲ್ಲಿರುವ ಗೋವೆಯಲ್ಲಿ ಶಾಶ್ವತನ್ನೂರುವುದು ಅವಶ್ಯಕತೆಯನ್ನಿಸಿರಬಹುದು ಇದಕ್ಕಾಗಿ ಡಲೇಸರು ವಸಾಹತು ವಿರೋಧಿ ಧೋರಣೆಯನ್ನು ತ್ಯಜಿಸಲು ಮುಂದಿ ಹೋದರೆಂದು ನಾವು ಭಾವಿಸಬೇಕಾಗುತ್ತದೆ. ಆದರೆ ಸ್ವತಂತ್ರ ಜಗತ್ತಿನ ರಕ್ಷಣೆ ಮತ್ತು ಲೋಕ ಶಾಂತಿಯ ನೆಲಸುವಿಕೆಗೆ ಅವರೇನಾದರೂ ಹಿತವನ್ನು ತನ್ಮೂರ್ವಕವಾಗಿ ಮಾಡಿದರೆ? ಇಲ್ಲವೆಂಬುದು ತೀರ ಸ್ಪಷ್ಟ.

ಡಾ ಕುಂಇಂರು ಈಗ ಭಾರತದ "ಸಾಮ್ರಾಜ್ಯ ಶಾಹಿ ಆಕ್ರಮಣ ಮನೋವೃತ್ತಿ"ಯ ಕುರಿತು ಅಲ್ಲಸಲ್ಲದ ಮಾತುಗಳನ್ನಾಡತೊಡ್ಡಾರೆ. ರಶ್ಯದ ನಾಯಕರ ಪ್ರತಿಯೊಂದೂ ಮಾತನ್ನು ನ್ಯಾಯಾನ್ಯಾಯದ ಲೆಕ್ಕವಿಲ್ಲದೆ ವಿರೋಧಿಸುವ ಅಮೇರಿಕದಪತ್ರಿಕೆಗಳನ್ನರೂ ಭಾರತಾಣೂ ಡಾ.ಕುಂಇಂರವರ್ಯಮಾತುಗಳನ್ನು ಸತ್ಯವೆಂಬ ಭ್ರಮೆಯಿಂದ ನಂಬಿಕೊಳ್ಳುತ್ತಾರೆ.ಡಾ ಕುಂಇಂರುಸಂಯುಕ್ತ ಪ್ರಕಟಣೆಯನ್ನು ಹೊರಡಿಸಿದ ಬೆನ್ನಿಗೆ ವನುಕೇಳಿದರು ಗೊತ್ತೆ? "ಆಕ್ರಮಣವನ್ನು ಭಾರತ ಮಾಡಿದರೆ ನಾವು ಸಂಯುಕ್ತ ರಾಗುವುದು ನಿಶ್ಚಿತ, ಆದರೆ ಆಪತ್ಕೆ ಮುಂಚೆ ನಾವು ತೀರ್ಪು ಕೃತಿಭಟನೆ ಕೊಟ್ಟೇ ತೀರುತ್ತೇನೆ" ಇದೇ ಮಹಾನುಭಾವ ಮೊನ್ನೆ ೧೫ನೇ ದಿನಾಂಕ ಮರಳಿ ಹೀಗೆ ಬೊಗಳಿದರು— "ಗೋವೆಯ ಮೇಲಿನ ಪೋರ್ಚುಗಾಲದ ಪ್ರಭುತ್ವವನ್ನು ಬಿಟ್ಟು ಕೊಡುವುದೆಂದರೆ ಕಮ್ಯುನಿಸ್ಟರ ಕೈಯನ್ನು ಬಲಪಡಿಸಿದಂತೆ! ಪಾಶ್ಚಾತ್ಯ ರಾಷ್ಟ್ರಗಳಿಗೆ ಇದರಿಂದ ಅಪಾರ ನಷ್ಟವಾಗುತ್ತದೆ. ಪ್ರಜೆಗಳಿಗೆ ಸ್ವಾತಂತ್ರ್ಯ ಕೊಡುವ ಪ್ರಶ್ನೆ ಗೋವೆಯಲ್ಲಿಲ್ಲ ಭಾರತದ ಸಾಮ್ರಾಜ್ಯವಾದಕ್ಕೆ ಸೈಗುಟ್ಟುವ ಗಂಭೀರ ವಿಷಯ ಅದು.ಜಾತಿಸಿದ್ಧತಿ ಊರ್ಜಿತದಲ್ಲಿರುವ ಭಾರತದಕೈಯಲ್ಲಿ ಗೋವೆಯು ದ್ವಿತೀಯ ವರ್ಗದನಾಕಶತುವೆನಿಸುವುದು ನಿಶ್ಚಯ." ಇಂಥ ಹೇಯ ಆಪಾದನೆಗಳಿಗೆ ಡಾ. ಕುಂಇಂರನ್ನು ಪ್ರೇರಿಸಿದ ಡಲ್ಲೇಸರ ಕುರಿತು ಭಾರತ ಇನ್ನೂ ಸದಭಿಪ್ರಾಯವನ್ನಿಟ್ಟುಕೊಂಡಿರಬೇಕೆ? ತಪ್ಪು ತಿಳಿವಳಿಕೆ ಬೇಡ ಎನ್ನುವ ಅವೇರಿಕದ ರಾಯಭಾರಿಗಳು ದಯವಿಟ್ಟು ಇವನ್ನು ಉತ್ತರಿಸಲಿ! ಹೆಚ್ಚಿನ ನಿವರಣೆ ಕೊಡಲಿ!

—ಕಾರ್ತಿಕೇಯ.

ಸ್ಪಾಮಾಣಿಕ ಹಾರೈಕೆ

ಮಂಗಳವಾರ ರಾತ್ರಿ ರಶಿಯಾ—ಭಾರತಗಳ ಪ್ರಧಾನಿದ್ವಯರು ಸಂಯುಕ್ತ ಪ್ರಕಟನೆಗೆ ಸಹಿ ಹಾಕಿದರು. ಲೋಕ ಶಾಂತಿಯ ಸಂಘಟನೆಗೆಅಭಯರಾಷ್ಟ್ರಗಳಲ್ಲಾದ ತಿಳಿವಳಿಕೆಯು ಬಹಳ ನೆರವಿತ್ತಿದೆ ಎಂದಿದರಲ್ಲಿ ಹೇಳಲಾಗಿದೆಯಲ್ಲವೆ, ಭಿಲ್ಯಾ ಮತ್ತಿತರ ಔದ್ಯಮಿಕ ಅಭಿವೃದ್ಧಿ ಕ್ಷೇತ್ರಗಳಲ್ಲಿರಷ್ಯ ದ್ರವ್ಯಗಳಲ್ಲಿನ ಹೆಚ್ಚು ಹೆಚ್ಚು ಸಹಕಾರವು ಎರಡನೇ ಯೋಜನೆಯ ಹೊತ್ತಿಗೆ ವ್ಯಕ್ತವಾಗಿಲೆಂಬ ಸ್ಪಾಮಾಣಿಕ ಹಾರೈಕೆಯೂ ಈ ಪ್ರಕಟಣೆಯಲ್ಲಿದೆ.

ಅಣುಶಸ್ತ್ರಗಳ ಪ್ರತಿಬಂಧ

ಜಿನೇವದ ಉಚ್ಚ ಮಟ್ಟದ ಮಾತುಕತೆಗಳಲ್ಲಿನ ಈಗಿನ ಮಂದಗತಿಯು ತಾತ್ಕಾಲಿಕವಾದುದೆಂಬ ನಂಬಿಕೆಯನ್ನು ಪ್ರಧಾನಿಗಳಿಬ್ಬರೂ ವ್ಯಕ್ತಪಡಿಸಿದ್ದಾರೆ. ಅಣು ಶಸ್ತ್ರಗಳ ಉತ್ಪಾದನೆ, ಉಪಯೋಗ ಮತ್ತು ಸ್ಫೋಟನ ಪ್ರಯೋಗಗಳನ್ನು ಯಾವುದೇ ಶರ್ತವಿಲ್ಲದೆ ನಿಲ್ಲಿಸಿಬಿಡಬೇಕೆಂದು ಅವರು ಪರಸ್ಪರ ಸಮ್ಮತಿಯಿಂದ ಸಾರಿದ್ದಾರೆ. ಆಲ್ಲದೆ ಸಾಂವ್ಯವಾಯಿಕ ಶಸ್ತ್ರಗಳ ಸಂಗ್ರಹವನ್ನು ಕಡಿಮೆಮಾಡಿ, ಲೋಕ ಶಾಂತಿಗಾಗಿ ನಿಶ್ಯಸ್ತ್ರೀಕರಣವತ್ತ ಹೆಜ್ಜೆ ಇಡಬೇಕೆಂದು ಹೇಳಿದ್ದಾರೆ. ಸೈನಿಕ ಒಪ್ಪಂದಗಳನ್ನು ಕಟ್ಟು ಮಾತಿನಲ್ಲಿ ಖಂಡಿಸಿದ್ದಾರೆ.

ಕೆಂಪು ಚೀನಕ್ಕೆ ಪ್ರವೇಶ

ರಾಷ್ಟ್ರಸಂಘದ ಸದಸ್ಯತ್ವವು ಎಲ್ಲ ರಾಷ್ಟ್ರಗಳಿಗೂ ತೆರೆದಿರಬೇಕು; ಕೆಂಪು ಚೀನಕ್ಕೆ ಅದರಲ್ಲಿ ಪ್ರವೇಶ ಸಿಗಬೇಕು ಎಂಬ ನಿಲುವೆಯನ್ನು ಪುನರ್ಚರಿಸಿದ್ದಾರೆ. ಆಲ್ಲದೆ ಫೊರ್ಮೋಸದ ಮೇಲೆ ಕೆಂಪು ಚೀನಕ್ಕೆ ನ್ಯಾಯವಾದ ಅಧಿಕಾರವಿದೆ ಎಂಬ ನಿಲುವೆಯನ್ನು ಮರಳಿ ಪ್ರತಿಪಾದಿಸಿದ್ದಾರೆ. ಇಂಡೋಚೀನದಲ್ಲಿ ಜಿನೇವ ಒಡಂಬಡಿಕೆಯ ಕಾರ್ಯಾಚರಣೆಗೆ ಆಗುತ್ತಿರುವ ಅಡಚಣೆಗಳನ್ನು ಪ್ರಸ್ತಾಪಿಸಿ ಅವುಗಳ ನಿವಾರಣೆ ಅತ್ಯಗತ್ಯವೆಂದಿದ್ದಾರೆ. ಪಂಚಶೀಲಗಳನ್ನು ನಿಷ್ಠೆಯಿಂದ ಎತ್ತಿ ಹಿಡಿದಿದ್ದಾರೆ.

ಜನತೆಗೆ ಸಂದೇಶ

ರಶಿಯದ ನಾಯಕರು ಭಾರತಕ್ಕೆ ತಮ್ಮ ವಿದಾಯ ಸಂದೇಶದಲ್ಲಿ ಮೈತ್ರಿ ಭಾವಕ್ಕೆ ಪೋಷಕವಾದ ಮಾತುಗಳನ್ನಾಡಿದ್ದಾರೆ. "ಭಾರತವು ಸ್ವಾತಂತ್ರ್ಯಗಳಿಸಿದ ಬಳಿಕ ಎಲ್ಲ ರಂಗದಲ್ಲಿಯೂ ಹೆಚ್ಚಿನ ಯಶಸ್ಸನ್ನು ಹೊಂದಿದೆ. ನಮ್ಮೆರಡು ದೇಶಗಳು ಬೇರೆ ಬೇರೆ ಸಿದ್ಧಾಂತಗಳನ್ನು ಅಭಿವೃದ್ಧಿ ಕ್ಷೇತ್ರದ ಪ್ರಯೋಜನಕ್ಕೆ ಹೊಂದಿಸಿಕೊಂಡಿದ್ದರೂ ಸಹಕಾರಕ್ಕೆ ಹೆಚ್ಚಿನ ಅವಕಾಶವಿರುವುದು ಮಾತ್ರ ನಿಜ. ನಮಗೆ ಅಮೇರಿಕಾ ಅಥವಾ ಬ್ರಿಟನುಗಳ ವಿರುದ್ಧ ಭಾರತವನ್ನು ಎತ್ತಿಕಟ್ಟುವ ಉದ್ದೇಶವಿಲ್ಲ. ನಮಗೆ ಸರಿತೋರಿದುದನ್ನು ಮಾತ್ರ ಸ್ಪಷ್ಟವಾಗಿಯೇ ಹೇಳಿದ್ದೇವೆ. ಗೋವೆಯಮಟ್ಟಿಗೆ, ವಸಾಹತುವಾದಕ್ಕೆ ನಾವು ವಿರೋಧಿ ಸೂಚಿಸಿ ಮಾತನಾಡಿದ್ದೇವೆಯೇ ಹೊರತು, ಬೇರೆ ಹೇಳು ಆದರಲ್ಲಿಲ್ಲ" ಎಂದು ಮುಂತಾಗಿ ಅವರು ತಿಳಿಸಿದ್ದಾರೆ. ಮೇಲಿನ ಮಾತುಗಳು ಭಾರತೀಯರನ್ನೆಲ್ಲ ಸಂತೋಷಪಡಿಸುತ್ತವೆ; ಸರಕಾರದ ಮೇಲಿನ ವಿಶ್ವಾಸವನ್ನು ಹೆಚ್ಚಿಸುತ್ತವೆ.

ಏಶ್ಯದಲ್ಲಿಯೇ ದೊಡ್ಡ ಔದ್ಯಮಿಕ ಜಾತ್ರೆ



ಪ್ರಧಾನಿ ನವಂಬರಿಗಳು ಕಳೆದ ಅಕ್ಟೋಬರೆ ೯ರಂದು ಹೊಸ ದೆಹಲಿಯಲ್ಲಿ ಉದ್ಘಾಟಿಸಿದ ಔದ್ಯಮಿಕ ಜಾತ್ರೆಯು ಏಶ್ಯದ ಇತಿಹಾಸದಲ್ಲಿಯೇ ದೊಡ್ಡದು; ಅಲ್ಲದೆ ಜಗತ್ತಿನ ದ್ವಿತೀಯ ಯುದ್ಧೋತ್ತರ ಜಾತ್ರೆಯಲ್ಲೂ ದೊಡ್ಡದು. ಪ್ರತಿನಿತ್ಯವೂ ಐವತ್ತು ಸಾವಿರಕ್ಕಿಂತಲೂ ಹೆಚ್ಚು ಜನರನ್ನು ದೇಶದ ನಾನಾ ಮೂಲೆಗಳಿಂದ ಈ ಜಾತ್ರೆಯು ಆಕರ್ಷಿಸುತ್ತಾ ಬಂದಿದೆ. ಜಾತ್ರೆಯನ್ನು ಅನು ಸರಿದಿರುವ ಜನಪ್ರಿಯತೆಯು ಸೃಷ್ಟಿಯಾಗಿದೆ ಮೊದಲು ನಿಶ್ಚಯಿಸಿದಂತೆ ಇದೇ ೧೪ರಂದು ಕೊನೆಗೊಳಿಸುವ ಬದಲು ಪರ್ಷಾಂತ್ಯದವರೆಗೆ ಜೂಜೀತನಲ್ಲಿರಬೇಕೆಂದು ನಿಶ್ಚಯಿಸಲಾಗಿದೆ. ಈ ಜಾತ್ರೆಯಲ್ಲಿನ ಭಾರತ ಸರಕಾರದ ೬೦೦೦ ಚದರ ಅಡಿ ವಿಸ್ತೀರ್ಣದ ಪ್ರದರ್ಶನ ಗೃಹಗಳು ಔದ್ಯೋಗಿಕ ಚಟುವಟಿಕೆಗಳ ವಿಸ್ತಾರವನ್ನು ಕಣ್ಣ ಮುಂದೆ ಸ್ಪಷ್ಟವಾಗಿ ನಿಲ್ಲಿಸುತ್ತವೆ. ಮೊನ್ನೆ ೧೫ನೇ ದಿನಾಂಕ ರಶ್ಯದ ಪ್ರಧಾನಿಗಳು ೧೦ ನಿಮಿಷ ಕಾಲ ಇವನ್ನು ನೀಕ್ಷಿಸಿ, ಭಾರತದ ಪ್ರಗತಿಯ ಕುರಿತು ತೃಪ್ತಿಯನ್ನು ವ್ಯಕ್ತಪಡಿಸಿದರು. ಮೇಲಿನ ಚಿತ್ರದಲ್ಲಿ ಕಲ್ಯಾಣ ಕೇಂದ್ರಗಳ ಮುಂಭಾಗದಲ್ಲಿ ಯರು ತಯಾರಿಸಿದ ವಸ್ತುಗಳನ್ನು ಪ್ರದರ್ಶನದಲ್ಲಿಟ್ಟಿರುವಂತೆ ಕಾಣಬಹುದು.

ಲ್ಲಾ ಕಲೆಕ್ಟರರಿಗೆ ಸಹಾಯ ಧನ ದಿಂದಲೂ ಸಿಮೆಂಟ್ ಕಾಂಕ್ರೀಟ್ ಸಾಡಲಾಗುವುದೆಂದರು. ಕಾಂಕ್ರೀಟ ಕೆಲಸ ಪ್ರಾರಂಭವಾಗಿದ್ದು ಇನವರಿ ಪ್ರಥಮ ವಾರದಲ್ಲಿ ಮುಗಿಯಬಹುದೆನ್ನಲಾಗಿದೆ.

ಕಲ್ಯಾಣಪುರ:— ಭಾಗವತ ಅಂಕುಸ್ತು ಬೂಬ ಪೂಜಾರಿಯವರ ಧರ್ಮ ಪತ್ನಿಯೂ ರಿಟಾಯರ್ಡ್ ಸಬ್ ರಿಜಿಸ್ಟ್ರಾರ್ ಶ್ರೀ ಎಸ್. ಕೆ. ಜಾತಸ್ವಾ ಬಿ. ಎ., ಮತ್ತು ತ್ರಿವಂಕೂರಿನ ಶ್ರೀ ನಾರಾಯಣ ಗುರು ಸ್ವಾಮಿಯ ಶಿಷ್ಯ ವರ್ಗಕ್ಕೆ ಸೇರಿದ ಕೀರ್ತಿಶೇಷ ಸ್ವಾಮಿ ವಿಸ್ಮೃತೀರ್ಥರ ಮಾತೃಶ್ರಿಯವರೂ ಆದ ಶ್ರೀಮತಿ ರಂಗಮ್ಮನವರು ಇದೇ ತಾ. 1ರಷ್ಟು ಉಡುಪಿ ತಾಲೂಕಿನ ನಯಂಪಳ್ಳಿಯ ತನ್ನ ಸ್ವಗೃಹದಲ್ಲಿ ಅಪಾರ ವಯಸ್ಸಿನಲ್ಲಿ ದೈವಾಧೀನರಾದುದು ವಿಷಾದಕರವಿನಿ.

ಪ್ರಕಟಣೆ

ಕುಂದಾಪುರ ತಾಲೂಕು ನೂಜಾಡಿ ಗ್ರಾಮದ ಮೂಡನಗದ್ದೆಯಲ್ಲಿರುವ ಶಿರೂರು ಅಶ್ವತ್ಥಯ್ಯನವರ ಮಗ ಗಣಪಯ್ಯನು ಈ ಮೂಲಕ ಎಲ್ಲರಿಗೂ ತಿಳಿಯಪಡಿಸುವುದೇನೆಂದರೆ:—

ತಾ. 12—11—1955ನೇ ದಿವಸ ನಾನು ಮನೆಯಿಂದ ಹೊರಟು ಕುಂದಾಪುರಕ್ಕೆ ಹೋಗುತ್ತಿದ್ದಾಗ ನನ್ನ ವಿಭಕ್ತ ತಮ್ಮ ಪರಮೇಶ್ವರಯ್ಯನ ವಳಸಂಬಗೆ ನೇರಿ ಆತನ ಸ್ತ್ರೀ ಹಿತರೂ ನನ್ನ ದ್ವೇಷಿಕರೂ ಆದ ಸೈಲಾದಿ ಶಿವರಾಮಿ ಶೆಟ್ಟಿ ಆಳಿಯ ಸೂರಪ್ಪ ಶೆಟ್ಟಿ, ನೂಜಾಡಿ ಕೆಳಮನೆ ಶೀನಪ್ಪ ಶೆಟ್ಟಿ, ಬಾಳೆಕೆರೆ ಆಣ್ಣಪ್ಪ ಶೆಟ್ಟಿ, ದೇವಡಿಗ ಬೆಳ್ಳಿಗದ್ದೆ ವೆಂಕ್ಕಿ-ಪ-ಇನ್ನೂ ಕೆಲವರು ಕೂಡಿ, ನಿರ್ಜನ ಪ್ರದೇಶದಲ್ಲಿ ನನ್ನನ್ನು ಹಿಡಿದು, ಕೆಡವಿ, ಬಾಜುಗೆ ಬಸ್ತ್ರ ತುಂಬಿ, ಬೆದರಿಸಿ ಸುಮಾರು 8—10 ಖಾಲಿ ಕಾಗದಗಳಲ್ಲಿ ನನ್ನ ಇಚ್ಛೆಗೆ ವಿರುದ್ಧವಾಗಿ ಬಲತ್ಕಾರದಿಂದ ನನ್ನ ಎಡ ಹೆಬ್ಬೆಟ್ಟನ್ನು ಗುರ್ತುಗಳನ್ನು ತಕ್ಕೊಂಡು, ನನ್ನ ಕೈಯಲ್ಲಿದ್ದ ರಿಕಾರ್ಡುಗಳು, ಕೆಲವು ಸಾಮಾನು ಸರಂಜು ರೂ. 25—0—0ನ್ನು ಕೈಚೀಲ ಸಮೇತ ಕಸಿದುಕೊಂಡು ಹೋಗಿರುವ ಬಾಬಿನಲ್ಲಿ ನಾನು ಈ ಪೊಲೀಸು ತಾ. 15-11-1955ರಲ್ಲಿ ಮೇಲಾಧಿಕಾರಿಗಳಿಗೆ ಅರ್ಜಿ ಮಾಡಿಕೊಂಡಿರುತ್ತೇನೆ. ಸದ್ರಿಯವರು ಬಲತ್ಕಾರವಾಗಿ ತಕ್ಕೊಂಡ ನನ್ನ ಎಡ ಹೆಬ್ಬೆಟ್ಟು ಗುರ್ತವ ಖಾಲಿ ಕಾಗದಪಲ್ಲಿ ನನಗೆ ಸಂಬಂಧ ಪಡುವಂತಹ ಯಾವುದೇ ರೀತಿಯ ದಸ್ತಾವೇಜು ಪತ್ರಗಳನ್ನು ಮಾಡಿದಲ್ಲಿ ಆ ಪತ್ರ ಸೃಷ್ಟಿಸಿಯು ಕಾನೂದ ಪತ್ರಗಳು ಸಿಂಧುವಾಗಿ ತಕ್ಕೆ ವುಗಳಲ್ಲ ಹಾಗೂ ನನಗೆ ಬದ್ಧವಾಗತಕ್ಕವುಗಳಲ್ಲವೆಂದೆ ಈ ಮೂಲಕ ತಿಳಿಯಪಡಿಸಿರುತ್ತೇನೆ

ಶಿರೂರು ಗಣಪ್ಪಯ್ಯನೆರುಜು.

ನೂಜಾಡ್ತಿ, ತಾ. 28—11—1955.

ಕುರಾಡಿ—ಇಲ್ಲಿಯ ನವಭಾರತ ಬಾಲಾ ಪ್ರಕ್ತನ ವಿದ್ಯಾರ್ಥಿ ಸಂಘದ ಸಭೆಯು ತಾ. 4ರಲ್ಲು ಶ್ರೀ ಬಿ. ಸುಬ್ಬಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ. ಬಿ. ಶ್ರೀನಿವಾಸ ಶಾನುಭಾಗ ಮೊದಲಾದವರ ಭಾಷಣಗಳಾದುವು. ಪು. ಡಾ. ಕೆ. ಕೆ. ಕಲ್ಕೂರರು ಧನ್ಯವಾದಗೆ ಅರ್ಹತ್ತರು.

ಕಾಪು— ಉಡುಪಿ ಯಕ್ಷಗಾನ ಕಲಾ ಮಂಡಲದವರು ಕಾಪು ಬೋರ್ಡು ಹಾಗೂ ಶಾಲೆಯ ಸಹಾಯಾರ್ಥವಾಗಿ ತಾ. 3ರಲ್ಲು ಶ್ರೀ ಕಾಪು ಮಂಜುನಾಥ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ "ಶ್ರೀ ಕೃಷ್ಣ ಸಂಧಾನ ಮತ್ತು ಭೀಷ್ಮ ಪರ್ವ" ಎಂಬ ಯಕ್ಷಗಾನ ಪ್ರಸಂಗವನ್ನು ಸುರಿತ ಅರ್ಥಧಾರಿಗಳ ಕೂಡುವಿಕೆಯಿಂದ ಜರಗಿಸಿದರು.

ಹೊಸೂರು - ಸ್ಥಳೀಯ ಪಂಚಾಯತ್ ಬೋರ್ಡಿನ ಸಾಮಾನ್ಯ ಸಭೆಯು ಕಳದ ತಾ. 30ರಲ್ಲಿ ಶ್ರೀ ಕಜೆ. ಬಿ. ಸುಂಜಯ್ಯ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿ ಇದೇ ತಾ. 5ರಿಂದ ಪಂಚಾಯತ ಕೋರ್ಟನ್ನು ಪ್ರಾರಂಭಿಸುವ ನಿರ್ಣಯವಾಯಿತು.

ತಲ್ಲೂರು— ರಾಷ್ಟ್ರೀಯ ವಿಸ್ತರಣಾ ಯೋಜನೆ, ಬೈಂದೂರು ಶಾಖೆಯಿಂದ ನಿರ್ಮಿತವಾದ ತಲ್ಲೂರು ನೇಲಕಟ್ಟೆಯ ಐದು ಮೈಲು ರಸ್ತೆಯು ಇದೀಗ ಪೂರ್ಣಗೊಂಡಿದೆ. ತಲ್ಲೂರು ಬೋರ್ಡು ಹಾ. ಎ ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯನ್ನು ತಾ. 4ರಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ನೆರವೇರಿಸಿದರು. ಬೈಂದೂರು ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಚ್. ಗಣಪತ ಕೆದ್ಲಾಯರು ಸಭಾಧ್ಯಕ್ಷತೆ ನಡಿಸಿದ್ದರು. ಶ್ರೀಗಳಾದ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ; ಎಸ್. ಎಮ್. ಹೆಗ್ಡೆ, ಆರ್. ಕೆ. ಸಂಜೀವ ರಾವ್, ಎಚ್ ಎಸ್. ಗೋಪಾಲನ್, ಲೆ. ಫಾ. ಎ. ಸಿ. ಆರಾಧ್ಯ, ರಾಮಕೃಷ್ಣ, ಪ್ರಭು, ರಾಧಾಕೃಷ್ಣ ರಾವ್ ಮೊದಲಾದವರು ಕಾಲೋಚಿತವಾಗಿ ಮಾತುಗಳನ್ನಾಡಿದರು. ಶ್ರೀ ವೈ. ಸಭಾರಾಮ ರಾಯರು ಧನ್ಯವಾದವಿತ್ತರು.

ಕುಂದಾಪುರ—ಈಚೆಗೆ ಕುಂದಾಪುರದಲ್ಲಿ ಜರಗಿದ ದ ಕ. ಜಿಲ್ಲಾ ವಿದ್ಯಾ ಪರಿಷತ್ತಿನ ಸ್ವಾಗತ ಸಮಿತಿ ಸಭೆಯು ತಾ. 3ರಲ್ಲು ಶ್ರೀ ವೈ. ಮಂಜಯ್ಯ ಸೆಟ್ಟಿ, ಎಸ್. ಎಲ್. ಎ., ಆವರ ಅಧ್ಯಕ್ಷತೆಯಲ್ಲಿ ಜರಗಿತು. ಪರಿಷತ್ತಿಗೆ ಜನಮೆಯಾದ ಹಾಗೂ ಖರ್ಚಾದ ವಿಷಯಗಳ ಪರಿಶೀಲನೆ ನಡೆಯಿತು. ಜನಮೆಯಾದ ರೂಪಾಯಿ 1121—14—9 ಪೈಕಿ ಖರ್ಚು ಕಳೆದು ಉಳಿದ ಹಣದಲ್ಲಿ ಒಂದು ನೂರು ರೂ. ಪಾಯಿಯನ್ನು ಸ್ಥಳೀಯ ಬೋರ್ಡ್ ಹೈಸ್ಕೂಲಿನ ಹೆಡ್ಮಾಸ್ತರರ ಹೆಸರಲ್ಲಿ ಯುಕ್ತ ಕಂಡ ಯಾಪ್ರದಾಹರೊಂದು ಬೇಂಕಿನಲ್ಲಿ ಶೇವಣಿಕಾತಿ ಯಾಗಿಟ್ಟು ಆದಕ್ಕೆ ವರ್ಷಂಪ್ರತಿ ಸಿಕ್ಕುವ ಬಡ್ಡಿಯನ್ನು ಆಯಾಯಾ ವರ್ಷದಲ್ಲಿ ನಡೆಯುವ ಶಾಲಾವರ್ಧಂತಿಯಂದು ಅರಸಿ ಫಾರ್ಮಿನಲ್ಲಿ ಕನ್ನಡದಲ್ಲಿ ಪ್ರಥಮ ಶ್ರೇಣಿಗಳಿಸಿದ ವಿದ್ಯಾರ್ಥಿಗೆ 1955ನೆ ಕುಂದಾಪುರ ವ. ಕ. ಜಿಲ್ಲಾ ವಿದ್ಯಾ ಸರಿಷತ್ತಿನ ಸ್ಮಾರಕಾರ್ಥವಾಗಿ ಬಹುಮಾನ ಕೊಡುವಂತೆ ಉಪಯೋಗಿಸಬೇಕೆಂಬ ತೀರ್ಮಾನವಾಯಿತು. ಶ್ರೀ ಕೆ. ಎಸ್. ಉರಾಳರು ಧನ್ಯವಾದವಿತ್ತರು.

ಪೆರ್ಲ— ದಿವಂಗತ ಮುಳಿಯ ತಿಮ್ಮಪ್ಪಯ್ಯನ ಸ್ಮಾರಕಾರ್ಥವಾಗಿ ವರ್ಷದಿಪಲ್ಲಟ್ಟಿ ರುವ ಕಥಾ ಸ್ಪರ್ಧೆಗೆ ದ. ಕ. ಜಿಲ್ಲೆಯ ಎಲ್ಲಾ ಹೈಸ್ಕೂಲುಗಳೂ, ಸಂಸ್ಕೃತ ಶಾಲೆಗಳ ಎಡ್ವಾನ್ಸ್ ತರಗತಿಯ ವಿದ್ಯಾರ್ಥಿಗಳೂ ಸ್ಪರ್ಧಿಸಬಹುದು. ಕಥೆಗಳು ಮೂರು ಸಾವಿರ ತಟ್ಟಗಳಿಗೆ ಮಿಕ್ಕಿರಬಾರದು. ಹೆಡ್ಮಾಸ್ತರರ ಪ್ರಮಾಣ ಪತ್ರದೊಂದಿಗೆ ಇದೇ ತಾ. 31 ರೊಳಗೆ ತಲ್ಪಿಸುವಂತೆ ಶ್ರೀ. ಸಿ. ಕೆ. ಶಾಸ್ತ್ರಿ, ಅಧ್ಯಕ್ಷ, ಮುಳಿಯ ತಿಮ್ಮಪ್ಪಯ್ಯ ಸ್ಮಾರಕ ಸಮಿತಿ, ಪೆರ್ಲ ಪೋಸ್ಟು, ಕಾಸರಗೋಡು ತಾಲೂಕು (ದ. ಕ.) ಈ ವಿಳಾಸಕ್ಕೆ ಕಳುಹಿಸತಕ್ಕದು.

ಬ್ರಹ್ಮಾವರ— ಸ್ಥಳೀಯ ಎಸ್. ಎಮ್. ಎಸ್. ಹೈಸ್ಕೂಲಿನ ಸ್ವಾಶಕರಾದ ದಿವಂಗತ ಲೆ. ಫಾ. ಪಿ. ಜೆ. ಕೋಲಿಯವರ ಭಾವ ಚಿತ್ರವನ್ನು ತಾ 8ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರು ಆನಾವರಣ ಮಾಡಿದರು. ಶ್ರೀಗಳಾದ ಬಿ ಜಗಜ್ಜೀವನ ನಾಯಕ ಸೆಟ್ಟಿ, ಕೆ. ಆರ್. ಗುಂಡಿ, ವೈ. ರಾಮಸ್ ಗುರುಕಲ್, ಫಾರ್ವರ್ ಮಗೀಸ್, ವೈ ಕಾಡಿ ವೆಂಕಟಕೃಷ್ಣ ರಾವ್ ಮೊದಲಾದವರು ಕಾಲೋಚಿತವಾಗಿ ಮಾತುಗಳನ್ನಾಡಿದರು. ರಾಲಾ ಕರೆ ಸ್ಪೋಂಡೆಂಟ್ ರೆ. ಫಾ. ಕುರಿಯ ಕುರ್, ಆವರು ಧನ್ಯವಾದಗಳನ್ನರ್ಪಿಸಿದರು.

ಧರ್ಮಸ್ಥಳದಲ್ಲಿ ಜಿಲ್ಲಾ ಅಭಿವೃದ್ಧಿ ಸಮ್ಮೇಳನ — ದ. ಕ. ಜಿಲ್ಲಾ ಅಭಿವೃದ್ಧಿ ಸಮ್ಮೇಳನವು ತಾ. 11ರಷ್ಟು ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಅಲ್ಲಿಯ ಪರಮ ಪೂಜ್ಯರ ಸನ್ನಿಧಿಯಲ್ಲಿ ಶ್ರೀ ಕೆ. ಭಾಸ್ಕರಾನಂದ ಹೆಗ್ಡೆ, ಎಮ್. ಪಿ. ಯವರ ಅಧ್ಯಕ್ಷತೆಯಲ್ಲಿ ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಶ್ರೀ ರತ್ನವರ್ಮ ಹೆಗ್ಡೆಯವರ ಉದ್ಘಾಟನೆಯಲ್ಲಿ ನಡೆಯಿತು.

ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ., ಆವರು ಸಮ್ಮೇಳನದ ಉದ್ದೇಶ ವನ್ನು ವಿವರಿಸಿದರು. ಖ್ಯಾತ ಸುನ್ನತ್ತಿಜನಾ ಸಮಿತಿ ವರದಿ ಕುರಿತು ಪ್ರಸ್ತಾಪಿಸಿ, ಆ ಸಮಿತಿಯು ಶಿಫಾರಸು ಮಾಡಿದ ಕರ್ನಾಟಕ ಪ್ರಾಂತದ ರೂಪುರೇಷೆಗಳನ್ನು ವಿವರಿಸಿ ಭಾರತದ 16 ಸಂಸ್ಥಾನಗಳಲ್ಲಿ ಜನಸಂಖ್ಯೆ ಮೇರೆಗೆ ಕರ್ನಾಟಕಕ್ಕೆ 8ನೇ ಸ್ಥಾನವೂ ವಿಸ್ತೀರ್ಣದ ದೃಷ್ಟಿಯಿಂದ 7ನೇ ಸ್ಥಾನವೂ ದೊರೆಯುತ್ತಿದೆಂದರು. ನಂತರ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ರೀತಿಯ ಅಭಿವೃದ್ಧಿ ಕಾರ್ಯಗಳಾಗಬೇಕೆಂಬುದನ್ನೂ ಸೂಚಿಸಿದರು. ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ, ಟಿ. ಎ. ಪೈ, ಎಡ್ವಾ. ನಾರಾಯಣ ರಾವ್ ಮೊದಲಾದವರು ಚರ್ಚೆಯಲ್ಲಿ ಭಾಗವಹಿಸಿದ್ದರು.

ಆ ಮೇರೆ ಹೊಸ ಸ್ವಾಂತ್ಯ ಸಮ್ಮಾನಕಾಲದಲ್ಲಿ ಒದಗಬಹುದಾದ ಸಮಸ್ಯೆ ಪರಿಹಾರಕ್ಕೆ ಈಗಿನ ಯೋಜನೆಗಳು, ಮುಂದಿನ ಅಡಚಣೆಗಳು ಮೊದಲಾದ ಸಕಲ ವಿಚಾರಗಳನ್ನೊಳಗೊಂಡ ಜಿಲ್ಲಾ ಭವ್ಯದ್ದಿ ವಿಚಾರ ಪರಿಶೀಲಿಸಿ ಸರಕಾರದ ಮಟ್ಟದಲ್ಲೂ ಸಾರ್ವಜನಿಕ ಮಟ್ಟದಲ್ಲೂ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಸಮಿತಿಯೊಂದು ರಚಿಸಲ್ಪಟ್ಟಿತು. ಈ ಸಮಿತಿಯಲ್ಲಿ ಕೇಂದ್ರ ಮತ್ತು ಪ್ರಾಂತದ ಶಾಸನಸಭೆಗಳ ಎಲ್ಲಾ ಸದಸ್ಯರೂ, ಜಿಲ್ಲಾ ಬೋರ್ಡು ಅಧ್ಯಕ್ಷರು, ನಗರಸಭೆಗಳ ಅಧ್ಯಕ್ಷರು, ಮೇಜರ್ ಪಂಚಾಯತುಗಳ ಅಧ್ಯಕ್ಷರು ಅಲ್ಲದೆ ಶ್ರೀಗಳಾದ ಮೊಳಹಳ್ಳಿ ಶಿವರಾವ್, ಧರ್ಮಸ್ಥಳ ರತ್ನವರ್ಮ ಹೆಗ್ಡೆ, ಡಾ. ಯು. ಪಿ. ಮಲ್ಯ, ಕೆ. ಆರ್. ಆಚಾರ್, ಬಿ. ವಿ. ಕಕ್ಕಿಲ್ಲಾಯ, ಡಾ. ಕೆ. ನಾಗಪ್ಪ ಆಳ್ವ, ಪಿ. ಆರ್. ಪೂಂಜ, ಪಂಡಿತ ಗಜಾನನ ರಾವ್, ವಿ. ಎಸ್. ಕುಡ್ವ, ಎಮ್. ಎಸ್. ವಿಶ್ವಾಂಬರ ರಾವ್ ಮೊದಲಾದವರು ಸದಸ್ಯರಿರುವರು.

ದೆಹಲಿ ಕರ್ನಾಟಕ ಸಂಘದಲ್ಲಿ ಕಳೆದ ತಾ. 26ರಲ್ಲು ದಿವಾನ್ ಚ್ಯಂದ್ ಟ್ರಸ್ಟಿನ ಭವನದಲ್ಲಿ ಡಾ! ಶಿವರಾಮ್, ಅವರು ಸಾಹಿತ್ಯವಲ್ಲಿ ಹಾಸ್ಯ ಎಂಬ ವಿಷಯದ ಮೇಲೆ ಭಾಷಣ ಮಾಡಿದರು. ಸಂಘದ ಕಾರ್ಯದರ್ಶಿ ಶ್ರೀ ಸಿ. ಕೆ. ತಿರುಮಲೇಶ್, ಅವರು ಧನ್ಯವಾದಗಳನ್ನರ್ಪಿಸಿದರು.

ರಾಯಚೂರು- ತಿನೆ ಕನ್ನಡ ಸಾಹಿತ್ಯ ಸಮ್ಮೇಳನವು ಇದೇ ತಾ. 25ರಿಂದ 27ರ ತನಕ ರಾಯಚೂರಿನಲ್ಲಿ ಶ್ರೀ ಅಪ್ಪ ರಂಗಾ ಜಾಗ್ ಜಹಗೀರದಾರ (ಶ್ರೀರಂಗ) ಅವರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಸ್ವೆದರಾಬಾದಿನ ಮುಖ್ಯಮಂತ್ರಿ ಶ್ರೀ ವಿ. ರಾಮಕೃಷ್ಣ ರಾಯರು ಸಮ್ಮೇಳನವನ್ನು ಉದ್ಘಾಟಿಸುವರು. ಶ್ರೀ ಗುಬ್ಬಿವೀರಣ್ಣ, ಎಮ್. ಎಲ್. ಸಿ. ಮೈಸೂರು ಅವರು ನಾಟಕ ಗೋಷ್ಠಿಯ ಅಧ್ಯಕ್ಷತೆವಹಿಸುವರು. ಶ್ರೀಮತಿ ಪುಟ್ಟಮ್ಮ ಪಾಟೀಲ, ಬೊಂಬಾಯಿ, ಅವರು ಮಹಿಳಾ ಗೋಷ್ಠಿಯ ಅಧ್ಯಕ್ಷಸ್ಥಾನ ವಹಿಸಿಕೊಳ್ಳುವರು. ಶ್ರೀ ಸಿದ್ದಯ್ಯ ಪುರಾಣಿಕರು 'ಏಕಾಂಕ ನಾಟಕಗಳು' ವಿಷಯದ ಮೇಲೂ, ಶ್ರೀ ಶ್ರೀಕಂಠಯ್ಯನವರು 'ಸಣ್ಣ ಕಥೆಗಳು' ಎಂಬ ವಿಷಯದ ಮೇಲೂ ಶ್ರೀಮತಿ ವಿನೋದಾ ಬಾಯಿಯವರು 'ಹೊಸ್ತಿನ್ಯನಿರ್ಣಯ' ದ ಮೇಲೂ ಗೋಷ್ಠಿಗಳಲ್ಲಿ ಉಪನ್ಯಾಸ ನೀಡುವರು.

· ಅತ್ಯಾಕರ್ಷಕ ನಾಟಕ ಸಾಮಾನುಗಳು!



ಕುಣಿತ, ನರ್ತನ ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕಾಣವೆಲು, ತೋಷನ್, ಗಡ್ಡ, ಮುಂಡಾಸು, ಕಿರೀಟ, ಜರಿ ಜಪ್ಪರಿ, ಜರಿ ರವಕೆ, ಕಿವಿ ಬೆಂಡೋಲೆ, ತುಟಿಗೆ ಹಚ್ಚುವ ಮಿರುಗಿನ ಅಂಟು, ತಲೆಸೂಡಿ ಸುತ್ತುವ ಬಲೆ ಇತ್ಯಾದಿ ಪಾತ್ರಿ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ.

ಸನಿವರವಾದ ಕ್ಯಾಟಲಾಗಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Dharamshi Mulji, Dresswala,

132 C, Bhagatwadi, Bhuleshwar Road, BOMBAY—2.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ವಾಕೈರು: ಶಹಾಕಂಪೆನಿ, ಮಂಗಳೂರು

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:— (1) ಉಡುಪಿ (2) ಮಂಗಳ ಗೆಲ್ಲಿ, ಹುಬ್ಬಳ್ಳಿ.

ಮಂಗಳೂರು

ನೆಹರೂ ಅಗಮನ ಪ್ರಧಾನ ಮಂತ್ರಿ ನೆಹರೂರವರು ಇವೇ ತಾ ೫೫ರಲ್ಲಿ ಸಂಜೆ ೭ ಗಂಟೆಗೆ ಪಂಪ್ವೆಲ್‌ನಿಂದ ಸ್ಪೆಶಲ್ ರೈಲು ಮೂಲಕ ಮಂಗಳೂರಿಗೆ ಬರಲಿರುತ್ತಾರೆ. ಅಂದು ರಾತ್ರಿ ೭½ ಗಂಟೆಯಿಂದ ೮½ ಗಂಟೆಯ ತನಕ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಭಾಷಣಮಾಡುವರು. ಅವರು ಮರುದಿನ ಬೆಳಗ್ಗೆ ೬ಗಂಟೆಗೆ ಬಜ್ಪೆಗೆ ಹೋಗಿ ಸ್ಪೆಶಲ್ ವಿಮಾನ ಮೂಲಕ ದಿಂತೆರಳುವರು. ನಗರ ವಾಸಿಗಳು ನಗರವನ್ನು ಚೊಕ್ಕಗೊಳಿಸಿ ಅಲಂಕರಿಸಬೇಕೆಂದೂ ಅಭೂತ ಪೂರ್ವ ಸ್ವಾಗತವನ್ನು ಯಬೇಕೆಂದೂ ಜಿಲ್ಲಾ ಕಲೆಕ್ಟರರು ವಿನಂತಿಸುತ್ತಾರೆ.

ನಗರಸಭೆಯ ಉಪಾಧ್ಯಕ್ಷರ ಆಯ್ಕೆ— ಮಂಗಳೂರು ನಗರ ಸಭೆಯು ತಾ ೫ರಲ್ಲಿ ೫ಂಜೆ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಎಸ್. ಭಾಸ್ಕರ ರೈಗಳ ಸೂಚನೆ, ಶ್ರೀ ಎಸ್. ಗೋಪಾಲ ಸಾರೆಸ್ಸರ ಅನುಮೋದನೆಗಳಾಗಿ ಶ್ರೀ ಸಿರಿಲ್ ಗೋನ್ಸಾಲ್ವಿಸರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು. ಡಾ. ಕೆ. ನಾಗಪ್ಪ ಅಳ್ವ, ಶ್ರೀಗಳಾದ ಎ ಶಾಂತಾರಾಮ ಪೈ, ಎಮ್. ರಮಾನಾಥ ಮತ್ತು ಸಭಾಸದರಿಗಳು ಶ್ರೀ ಗೋನ್ಸಾಲ್ವಿಸರನ್ನು ಅಭಿನಂದಿಸಿದರು. ಅವರು ಆ ಬಗ್ಗೆ ಉಪಕಾರಸ್ಮರಣೆ ಮಾಡಿದರು.

ಡಿಪ್ರೆಸ್ಡ್ ಕ್ಲಾಸಸ್ ಲೀಗಿನ ಸಭೆಯು— ತಾ. ೪ರಲ್ಲಿ ಶ್ರೀ ಕೆ. ಉತ್ತರ, ಎಮ್. ಎಲ್ ಎ. ಇವರ ಅಧ್ಯಕ್ಷತೆಯಲ್ಲಿ ಜರಗಿ ಕೆಲವು ನಿರ್ಣಯಗಳಾಮಿತು.

ಜಿಲ್ಲಾ ಮೆಡಿಕಲ್ ಎಸೋಸಿಯೇಶನ್ ಮಹಾಸಭೆಯು— ತಾ. ೪ರಲ್ಲಿ ಸಹಕಾರಿ ಬ್ಯಾಂಕಿನ ಕಟ್ಟಡದಲ್ಲಿ ಡಾ. ಕೆ. ನಾಗಪ್ಪ ಅಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಸರ್ ಡಿ. ಎಮ್ ಪತ್ರಗಳ ಪರಿಶೀಲನೆಯೂ ಬಳಿಕ ಹೊಸ ವರ್ಷದ ಕಾರ್ಯ ನಿರ್ವಾಹಕ ಮಂಡಳಿಗೆ ಡಾ ಎಮ್. ಉಮೇಶರಾವ್, ಅಧ್ಯಕ್ಷ; ಡಾ. ಕೆ. ನಾಗಪ್ಪ ಅಳ್ವ ಮತ್ತು ಡಾ. (ಮಿಸ್) ಲಿಡಿಯಾ ಕುಲಾಸೊ, ಉಪಾಧ್ಯಕ್ಷರುಗಳು; ಡಾ. ವಿ. ಆರ್. ಭಟ್, ಕಾರ್ಯದರ್ಶಿ. ಡಾ. ಬಿ. ಆರ್. ಹೆಗ್ಡೆ, ಜತೆಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಸಭೆ ಮುಗಿದ ಬಳಿಕ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪೈಸ್ ಪಿನ್ಸಿಪಾಲ್ ಡಾ. ಜಿ. ಡಿ. ಪಿಲಿಯಾರವು 'ಕೇನ್ಸರ್' ರೋಗದ ಕುರಿತು ಭಾಷಣಮಿತ್ತರು. ಡಾ. ಎಸ್. ಮಂಗೇಶ್ ರಾಯರು ಅಧ್ಯಕ್ಷತೆ ವಹಿಸಿದ್ದರು.

ಕಬ್ಬು ವ್ಯವಸಾಯಿಗಳಿಗೆ ಸರಕಾರಿ ಸಾಲ— ಸುವ್ಯಾಸು ಸರಕಾರ ಕಬ್ಬಿನ ವ್ಯವಸಾಯಿಗಳಿಲ್ಲರಿಗೂ ಅಮೋನಿಯಮ್ ಸಲ್ಫೇಟು ಗೊಬ್ಬರವನ್ನು ಕೊಂಡುಕೊಳ್ಳುವರೆ ಎಕ್ರೆಗೆ ರೂಪಾಯಿ ಐವತ್ತರ ಪ್ರಕಾರ ತಾ. 1-11-55ರಿಂದ ತಾ. 30—6—56ರ ತನಕ ಸಾಲವನ್ನು ಕೊಡುವ ಬಗ್ಗೆ ದ. ಕ. ಜಿಲ್ಲೆಗೆ ರೂಪಾಯಿ ೨೦,೦೦೦ ಮಂಜೂರುಮಾಡಿ ಬಿ. ಈ ಸಾಲವನ್ನು ಸಾಧಾರಣವಾಗಿ ಬೀಜ ಮತ್ತು ಗೊಬ್ಬರಕ್ಕೆ ಪಡೆಯುವ ತಕ್ಕವಾ ಸಾಲಗಳ ರ್ತದಂತೆ ಸ್ಥಳೀಯ ಜವಾಬ್ದಾರಿಯಲ್ಲಿ ಪಡೆಯಬಹುದು. ವಿಶೇಷ ವಿವರಗಳನ್ನು ದ. ಕ. ಜಿಲ್ಲಾ ಎಗ್ರಿಕಲ್ಚರಲ್ ಆಫೀಸರ್ ಯಾ ವ್ಯವಸಾಯ ಪ್ರದರ್ಶಕರು ಆವರಲ್ಲಿ ವಿಚಾರಿಸಬಹುದು.

ಶ್ರೀ ವಿ. ಎಸ್. ಕುಡ್ವರು— ಮಂಗಳೂರು ಸಿ. ಪಿ. ಸಿ. ಕಂಪೆನಿ ಮೊದಲಾದ ಸಂಸ್ಥೆಗಳ ಮೆನೇಜಿಂಗ್ ಡೈರೆಕ್ಟರರೂ ನವ ಭಾರತ ಪತ್ರಿಕಾ ಸಂಪಾದಕರೂ ಆದ ಶ್ರೀ ವಿ. ಎಸ್. ಕುಡ್ವರು ನಾಲ್ಕು ತಿಂಗಳ ವಿದೇಶ ಪ್ರವಾಸವನ್ನು ಮುಗಿಸಿ ತಾ. 11ರಲ್ಲಿ ಪೂರ್ವಸ್ಥ ವಿಮಾನಮೂಲಕ ಬೊಂಬಾಯಿಯಿಂದ ಮಂಗಳೂರಿಗೆ ಆಗಮಿಸಿದರು. ಬಜ್ಪೆ ವಿಮಾನ ನಿಲ್ದಾಣದಲ್ಲಿ ಶ್ರೀಗಳಾದ ಕೆ. ಸದಾನಂದ ಹೆಗ್ಡೆ, ಎಮ್. ಪಿ, ಎಸ್. ನಿಜಲ್ಲಪ್ಪ ಎಮ್.ಎಲ್. ಸಿ, ಜಿಲ್ಲಾ ಬೋರ್ಡು ಅಧ್ಯಕ್ಷೆ ಡಾ. ಕೆ. ಕೆ. ಹೆಗ್ಡೆ, ಸಿ. ಪಿ. ಸಿ ಜನರಲ್ ಮೆನೇಜರ್, ಕೆ. ಎಸ್. ಭಂಡಾರ್‌ಕಾರ್ ಮೊದಲಾದವರು ಶ್ರೀ ಕುಡ್ವರನ್ನು ಸ್ವಾಗತಿಸಿ ಹಾರೆಗಳನ್ನು ಅರ್ಪಿಸಿ ಗೌರವಿಸಿದರು.

ಶ್ರೀ ಶ್ರೀಧರ ಸ್ವಾಮಿಗಳವರು— ಮಂಗಳೂರು ಗಣಪತಿ ಹ್ಯಾಸ್ಕೂಲಿನ ಶಾರದಾ ಭವನವಲ್ಲಿ ಕಳೆದ ವಾರವಲ್ಲಿ ಸೂರು ದಿನಗಳ ತನಕ 'ನಿಜಧರ್ಮ ಮತ್ತು ಭಕ್ತಿ, ಜ್ಞಾನ, ಯೋಗಗಳು' ಎಂಬ ಕುರಿತು ಪ್ರವಚನಮಾಡಿದರು. ಶ್ರೀ ಕೋಟಿ ಶಂಕರ ನಾರಾಯಣ ಕಾರಂತರು ಧನ್ಯವಾದ ಗಳನ್ನಿತ್ತರು

ರೋಟರಿ ಕ್ಲಬ್ಬಿನಲ್ಲಿ— ಕೃಷಿ ಮತ್ತು ಪ. ಕ. ಜಿಲ್ಲೆಯ ಭತ್ತದ ಬೆಳೆ' ಎಂಬ ವಿಷಯದ ಮೇಲೆ ತಾ. 1ರಲ್ಲಿ ಮಂಗಳೂರು ರೋಟರಿ ಕ್ಲಬ್ಬಿನ ಸಭೆಯಲ್ಲಿ ಶ್ರೀ ಕೆ ಕೃಷ್ಣಯ್ಯ ಹೆಗ್ಡೆಯವರು ಭಾಷಣಮಿತ್ತರು. ಶ್ರೀ ಪಿ. ಆರ್. ರಂಗನಾಥ ಪೂಂಜರು ಸಭಾಧ್ಯಕ್ಷತೆ ವಹಿಸಿದ್ದರು.

ಉದ್ಘಾಟನಾ ಸಮಾರಂಭ— ಮುಸ್ಲಿಂ ಬ್ರದರ್‌ಹುಡ್ ಸಂಸ್ಥೆಯು ಅಶ್ರಯದಲ್ಲಿ ತಾ. 4ರಲ್ಲಿ ಮಯ್ಯದ್ದೆ ಧರ್ಮಾರ್ಥ ರಾತ್ರಿರಾತ್ರೆಯನ್ನು ಶ್ರೀ ಪಬಿಬುರ್ ರಹಿಮಾನರೂ ವಾಜಸಾಲೆಯವನ್ನು ಡಾ. ಆಪಮ್ಮದ್ ಮೊಗ್ರಾಲರೂ ಉದ್ಘಾಟಿಸಿದರು ಮಂಗಳೂರು ಸಬ್ ಜಡ್ಜ್ ಶ್ರೀ ಪಿ. ಕೆ. ಮ್ಯಾದುರವರು ಸಭಾಧ್ಯಕ್ಷತೆ ವಹಿಸಿದ್ದರು.

ಜಿಲ್ಲೆಯ ಮೊನುಗಾರಿಕೆ ಕೇಂದ್ರಗಳ ಪರಿಶೀಲನೆ - ಜಾಗತಿಕ ಆಹಾರ ಮತ್ತು ಕೃಷಿ ಸಂಸ್ಥೆಯ ಮೊನುಗಾರಿಕೆಯ ಬಂದರುಗಳ ತಜ್ಞರಾದ ಮಿ ಕಾರ್ಲ್ ಜಿ ಬ್ಯೂಕ್ ಮತ್ತು ಮಿ. ಸಿ. ಡಾಸ್ಸರ್ ಬ್ಯೂಕ್ ರವರು ತಾ. 1ರಲ್ಲಿ ಮಂಗಳೂರಿಗೆ ಬಂದು ಜಿಲ್ಲೆಯ ಮೊನುಗಾರಿಕೆ ಬಂದರುಗಳಾದ ಮೊಲ್ಕಿ, ಮಲ್ಪೆ, ಮಂಗಳೂರುಪೆಟ್ಟೆ, ಗಂಗೊಳ್ಳಿ ಮತ್ತು ಮಂಗಳೂರು ಕೇಂದ್ರಗಳ ಪರಿಶೀಲನೆ ನಡೆಸಿದರು. ದ. ಕ. ಜಿಲ್ಲಾ ಫಿಶರೀಸ್ ಅ. ಡೈರೆಕ್ಟರ್ ಶ್ರೀ ದೂಮಪ್ಪ, ಫಿಶರೀಸ್ ಇಂಜಿನಿಯರಿಂಗ್ ಅ. ಡ್ರೈರೆಕ್ಟರ್ ಶ್ರೀ ಜೈರಾಜ್ ಅವರೂ ತಜ್ಞರೊಡನಿದ್ದರು. ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಜಿ ರಾಜಾರಾಮ್, ಮಂಗಳೂರು ಮೋರ್ಟ್‌ಆಫೀಸರ್ ಶ್ರೀ ಅ ದ್ಯಾಸಿ, ಶ್ರೀಗಳಾದ ಬಿ ವಿ. ಬಾಳಿಗ, ಎಮ್. ಎಲ್. ಎ; ಮತ್ತು ಟಿ. ಎ. ಪೈ, ಎಮ್. ಎಲ್. ಎ, ಇವರೊಡನೆಯೂ ತಜ್ಞರು ವಿಚಾರ ವಿನಿಮಯ ನಡೆಸಿದರು.

ತ್ರೈಮಾಸಿಕ ಅಧಿವೇಶನ—ಸರಕಾರಿ ಬನಾದಿ ತರಬೇತಿ ಶಾಲೆಯಲ್ಲಿ ಗುರುಪುರ ಮತ್ತು ಮಂಗಳೂರು ಬುನಾದಿ ಕೇಂದ್ರಗಳ ಅಧ್ಯಾಪಕ ಅಧ್ಯಾಪಿಕೆಯರ ತ್ರೈಮಾಸಿಕ ಸಭೆಯು ಮಂಗಳೂರು ರೇಂಜಿನ ಶಾಲಾ ವಿಚಾರಣಾ ಇನ್ಸ್‌ಪೆಕ್ಟರ್ ಶ್ರೀ ಪೈ ಗೋಪಾಲರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂಬಂಧದ ವಸ್ತು ಪ್ರದರ್ಶನವನ್ನು ತರಬೇತಿ ಶಾಲೆಯ ಹೆಡ್ಮಾಸ್ಟರ್ ಶ್ರೀ ಜೇಜು ಬಾಜ್ಜಿಲ, ಆವರು ಉದ್ಘಾಟಿಸಿದರು ಶ್ರೀಗಳಾದ ಬಿ. ಕೃಷ್ಣ ಮತ್ತು ಪಿ. ವಿಠ್ಠಲದಾಸ್‌ರವರು ಭಾಷಣಮಾಡಿದರು. ಸಾಂಸ್ಕೃತಿಕ ಚಟುವಟಿಕೆಯಲ್ಲಿ ಕನಾ ಬೇಸಿಕ್, ಬೆಸೆಂಟ್ ಬೇಸಿಕ್, ಕದ್ರಿ ವಿದ್ಯಾಮಂದಿರ ಬೇಸಿಕ್ ಮತ್ತು ಸರಕಾರಿ ಬುನಾದಿ ತರಬೇತಿ ಶಾಲೆಯವರು ಭಾಗವಹಿಸಿದ್ದರು.

ಜಿಲ್ಲಾ ಸರ್ವ ಪಶ್ಚೀಯ ಗೋವಾ ವಿಮೋಚನಾ ಸಮಿತಿ ಸಭೆಯು— ಶ್ರೀ ಜೆ ಎ. ಪ್ರಿಟೋರವರ ಅಧ್ಯಕ್ಷತೆಯಲ್ಲಿ ಜರಗಿತು. ಈ ತನಕ ರೂ. 1383-14-11 ಜಮಾ ಮತ್ತು ರೂ. 1030-2-6 ಖರ್ಚಾಗಿ ಉಳಿದ ಶಿಲ್ಕು ರೂಪಾಯಿ 348--12--5 ನ್ನು ಸೂಚಿಸಿದ ಲೆಕ್ಕ ಪತ್ರಗಳು ಮಂಜೂರು ಮಾಡಲಾಯಿತು. ಗೋವೆಯಲ್ಲಿ ಸತ್ಯಾಗ್ರಹ ಬೂದಿ ಬಂಧಿತರಾಗಿರುವ ಭಾರತೀಯರ ಮುಂದಿನ ವಿಚಾರಣೆಯ ವಿಷಯದಲ್ಲಿ ಭಾರತ ಸರಕಾರವುತೋರಿದ ಅಸಹಾಯತೆಯ ಕುರಿತು ವಿಷಾದ ವ್ಯಕ್ತಪಡಿಸಿ, ಆವರೆಲ್ಲರಿ ಬಿಡುಗಡೆ ಬಗ್ಗೆ ಕೂಡಲೇ ಸರ್ವ ಪ್ರಯತ್ನಗಳನ್ನೂ ಮಾಡಬೇಕೆಂದು ಭಾರತ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು

ಶ್ರೀ ರಮಾನಾಥ್‌ರಾವ್ ಸುಜೀರ ನಿಧನ— ನಿವೃತ್ತ ಜಿಲ್ಲಾ ನ್ಯಾಯಾಧೀಶರೂ, ಮಂಗಳೂರಿನ ಸನಾಜ ಸೇವಾ ಕಾರ್ಯಕರ್ತರೆದ್ದೊಟ್ಟರೂ ಆದರಾವ್ ಬಹದ್ದೂರ್ ಶ್ರೀ ರಮಾನಾಥ್ ಸುಜೀರರು ತಾ. 8ರಲ್ಲಿ ರಾತ್ರಿ ತಮ್ಮ 60ನೆ ವಯಸ್ಸಿನಲ್ಲಿ ದಿನಂಗತರಾದುದು ವಿಷಾದಕರ. ತಾ. 9ರಲ್ಲಿ ಅವರ ಗೌರವಾರ್ಥವಾಗಿ ಬೆಸೆಂಟ್ ಜಾಲಿಕಾ ಸಾರಿ ಶಾಲೆಗೆ ರಜಾ ಕೊಡಲಾಗಿತ್ತು.

ವೆಸ್ಟರ್ನ್ ಇಂಡಿಯಾ ಟ್ರಾಲ್ ಮೆನ್ಸ್ ಫೆಡರೇಶನ್ ಎಸೋಸಿಯೇಶನಿನ- ಮಹಾಸಭೆಯು ತಾ. 8ರಲ್ಲಿ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎ. ಎಲ್. ರೇಗೊರವರು ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಯಂತ್ರ ಬಗ್ಗೆ ಸ್ಥಿರವಾದ ಬೇಡಿಕೆಯಿದ್ದರೂ, ಬೆಲೆಗಳು ಅಸ್ಥಿರವಾಗಿದ್ದು, ಬೆಲೆಳನ್ನು ಒಂದು ನ್ಯಾಯವಾದ ಆರ್ಥಿಕ ಮಟ್ಟದಲ್ಲಿರಿಸಲು ಮಾಡಿದ ಪ್ರಯತ್ನಗಳು ಸಫಲವಾಗಲಿಲ್ಲವೆಂದರು ಇಲ್ಲಿಯ ಹಂಡುಗುಳಕ್ಕು ಸರಕಾರೀ ಕಾಮಗಾರಿಕೆಗಳಿಗೆ ಉಪಯೋಗಿಸಬೇಕೆಂದು ಸರಕಾರದ ಗಮನಕ್ಕೆ ಪದೇ ಪದೇ ತರಲಾಗಿದೆ ಆದು ಸಫಲವಾಗುವ ದಿನವನ್ನು ಇದಿರುನೋಡುತ್ತೇನೆ. ಎಂದು ಹೇಳಿದರು.

ಮಂಗಳೂರಲ್ಲಿ ಅಮೇರಿಕನ್ ಸಾಂಸ್ಕೃತಿಕ ಅಧಿಕಾರಿಗಳು— ದಕ್ಷಿಣಕನ್ನಡ ವಿವಿಧ ಕೇಂದ್ರಗಳ ಶ್ರವಾಸಕಾರ್ಯವಾಗಿ ಬಂದಿರುವ ಸಂಯುಕ್ತ ಅಮೇರಿಕಾ ಸರಕಾರದ ವಾರ್ತಾ ಸಂಸ್ಥೆಯ ಮುಖ್ಯಸ್ಥ ಶಾಖೆಯ ಸಾಂಸ್ಕೃತಿಕ ವಿಚಾರಗಳ ಅಧಿಕಾರಿಗಳಾದ ಮಿ. ಪಾಲ್‌ಸಿನೆಬರ್ಜರವರ ಗೌರವಾರ್ಥವಾಗಿ ತಾ. 6ರಲ್ಲಿ ಶ್ರ. ಸೊ. ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯಾದ ಶ್ರೀ ಕೆ. ಆರ್. ಕಾರಂತರು ತಮ್ಮ ನಿವಾಸದಲ್ಲಿ ವಿಶೇಷ ವಿನಿಮಯ ಸತ್ಕಾರ ಕೂಟವನ್ನಿತ್ತರು. ಸಿ. ರೆಬರ್ಟ್ಸ್ ರು ಶಾಶ್ವತ ಜಾಗತಿಕ ಶಾಂತಿಸ್ಥಾಪನೆಗಾಗಿ ಭಾರತ ಸುತ್ತು ಅಮೇರಿಕಗಳೊಡನೆ ಇನ್ನೂ ಹೆಚ್ಚಿನ ನಿಕಟ ಸಂಪರ್ಕ ಮತ್ತು ಸೌಹಾರ್ದತೆಯು ಬೆಳೆಯಬೇಕೆಂದು ವಿನಂತಿಸಿದರು. ಡಾ. ಯು. ಪಿ. ಶುಲ್ಯ, ಶ್ರೀಗಳಾದ ಎಸ್. ನಿಜಲ್ಲಪ್ಪ, ಎಮ್. ಎಲ್. ಸಿ, ಕೆ. ಆರ್. ಆಚಾರ್, ಕೆ. ಸೂರ್ಯನಾರಾಯಣ ಅಡಿಗ, ಪಿ. ಆರ್. ರಂಗನಾಥ ಪೂಂಜ, ಕೆ. ವಿ. ಕಾರಂತ್, ಗೆ. ಫಾ. ಡಬ್ಲ್ಯು ಎಫ್. ಸಿಕೇರಾ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಕೆ. ಆರ್. ಕಾರಂತರು ಧನ್ಯವಾದವಿತ್ತರು.

ಮಂಗಳೂರು ಸೆಕೆಲ್ ಕಾಂಗ್ರೆಸ್ ಕಮಿಟಿ ಸಭೆಯು— ತಾ. 10ರಲ್ಲಿ ಜರಗಿ ಶ್ರೀ ಎಚ್. ಕೆ ತಿಂಗಳಾಯರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಶ್ರೀ ಬಿ ಆರ್. ಕಕ್ಕೇರರು ಸಭಾಧ್ಯಕ್ಷತೆ ವಹಿಸಿದ್ದರು.

ದಿ ವಿಜಯ ಬೇಂಕ್ ಲಿಮಿಟೆಡ್, ಕುಂದಾಪುರ, (ದ. ಕ.)

ಏಲಂ ನೋಟೀಸು.

ಈ ಕೆಳಗೆ ಹೆಸರು ತಾಜೀಸಿದ ಮುನೀಮರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಮರು ವಾಸಿ ಪಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ, ಅಸ್ಸು ವ ಬಡ್ಡಿಯನ್ನು ಈ ವರೆಗೆ ಕೊಡದೆ ವಾಕಿ ಪಾಡಿ ಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟು ರಿಜಿಸ್ಟ್ರಿ ನೋಟೀಸುಗಳು ಕೆಲವರು ನೈತಪಟ್ಟಿರುವರೆಂಬುದಾಗಿಯೂ, ಇನ್ನು ಕೆಲವರು ಇಸ್ಯಾರ್ ಮಾಡಿರುವರೆಂಬುದಾಗಿಯೂ, ನಮಗೆನೇನೇ ಖಾತರಿಯು ಬಂದಿರುವುದರಿಂದಲೂ ಸದ್ರಿಯವರು ಸದ್ಯಕ್ಕೆ ಈಡಿಟ್ಟ ನಗದುಗಳನ್ನು ಇವೇ ತಾರೀಕು 31—12—1955ನೇ ಶನಿವಾರ ಆಸರಾಸ್ಪ ಸಾಂಟೆ 2ಕ್ಕೆ ಸರಿಯಾಗಿ ಯಾ ಬೇಂಕಿಗೆ ಯಃಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಸರಾಸರಿಯಲ್ಲಿ ಬಹಿರಂಗವಾಗಿ ಏಲಂ ಮಾಡಲಾಬೀತು ಎಂಬುದನ್ನು ಈ ಮೂಲಕ ತಿಳಿಸೋಣಾಗಿಯದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ.	30-9-55ರ ವರೆಗೆ ಬಡ್ಡಿ ಸೇರಿ ಮೊಬಲಗು
1/55	ಮಂಜುನಾಥ ಗಾಣಿಗ, ತೋಸ್ಸೆ ಸಣ್ಣಯ್ಯನವರ ಮಗ, ಮೆಸ್ಕಾಕೋಸ್ಸ್ ರೆಕ್ಕೆ, ಕುಂದಾಪುರ, ದ ಕ.	135 14 0
955/54	ಮಹಾಬಲ ಹೆಗ್ಡೆ, ರಾಮಣ್ಣ ಶೆಟ್ಟರ ಅಳಿಯ, ಇನರ್ಜಾಡಿ ಬನೆ, ಯಪಾಡಿ ಮಕ್ಕಾಡಿ ಗ್ರಾಮ, ಪೆಂಕ್ಸ್ ಸ್ಟಾಬರಕಟ್ಟೆ, ದ. ಕ.	72 13 0
958/54	ಸಂಜೀವ ಶೆಟ್ಟಿ, ಮಂಜಯ್ಯ ಶೆಟ್ಟರ ಮಗ, ಸಣ್ಣಕೆಟ್ಟು ಅಡಾರು ಗ್ರಾಮ, ಪೋಸ್ಟ್ ಕಾರ್ಕಾಡಿ, ದ ಕ.	55 0 0
260/54	ಕೆ. ಸುಂದರಾಮ ಶೇಟ್, ಆನಂತ ಶೇಟರ ಮಗ, ಮ್ಯಾವೆಲ್ಲರ್, ಕುಂದಾಪುರ, ದ. ಕ	69 15 0
859/54	ನರಸಿಂಹ ಶೆಟ್ಟಿ, ಸಂಕಯ್ಯ ಶೆಟ್ಟರ ಮಗ, ಕಳಮನೆ, ಹೊಸಾಳ ಗ್ರಾಮ, ಪೋಸ್ಟ್ ಬಾಕೂರು, ದ. ಕ.	137 1 0

Office of the Vijaya Bank Ltd., Coondapoor, Dated 9—12—55.

B R. Adyanthaya, AGENT.

ಶ್ರೀವಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ



ಬಾಲ ಸುಧ

ಇವು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ನುಲಬವ್ಯತೆ, ಹೆಜ್ಜಾಗಿ ಭೇದಿ ಆಗುವಿಕೆ, ನುಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದನು, ಈ ಎಲ್ಲಾ ವ್ಯಾದಿಗಳಿಗೆ ರಾಮ್ಯಾಯುಧವಾಗಿವೆ. ಹೀಗಿರುವ ಔಷಧಿ ಇನ್ನೊಂದಿಲ್ಲವೆಂದು ಹೇಳಬಲ್ಲೆವು. ಈ ಔಷಧಿಳ್ಳೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವಪಟ್ಟಿಯೆ ನೇರವಲ್ಲಿ ಅನೇಕ ವಿಧವಲ್ಲಿ ಅಭಿವೃದ್ಧಿಯಾಗಿರುತ್ತವೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುವರ್ತನೆ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆರ್ಕಂಟೈಲ್ ಸ್ಟೋರ್ಸ್— ಪಂತಾವಣಿ.

ರಾಜಾಜಿಯ ಜೀವನಾನುಭವ

ವ್ಯವಹಾರ ವೇದಾಂತದ ಅಧ್ವರ್ಯು

ಸುಬ್ರಾಸಿನ ವಕೀಲ ಶಿಕ್ಷಣ ಶಾಲೆಯಲ್ಲಿ ೧೮೯೨ನೇ ಇಸವಿಯ ಒಂದುದಿನ ಸ್ವಾಮಿ ವಿವೇಕಾನಂದರು ಆಹ್ವಾನಿತರಾಗಿದ್ದರು. ಆಗ ಅವರ ಕಣ್ಣುಗಳನ್ನು ಒಂದು ಕೋಣೆಯಲ್ಲಿದ್ದ ಶ್ರೀ ಕೃಷ್ಣನ ಚಿತ್ರ ಸೆಳೆಯಿತು. ತಮ್ಮನ್ನು ಹಿಂಬಾಲಿಸಿಕೊಂಡು ಬರುತ್ತಿದ್ದ ವಿದ್ಯಾರ್ಥಿ ವೃಂದದಲ್ಲಿ ಹತ್ತಿರವಿದ್ದೊಬ್ಬನನ್ನು ಕುರಿತು "ಶ್ರೀಕೃಷ್ಣನನ್ನು ನೀಲಬಣ್ಣದಿಂದೇಕೆ ಗೀರು ತಿಸಿದನೆಂದು ಹೇಳಬಲ್ಲಿರಾ?" ಎಂದು ಸ್ವಾಮೀಜಿ ಕೇಳಿದರು.

"ಮಾನವನ ಗ್ರಹಣ ಶಕ್ತಿಗೆ ಆಕಾರ ಮತ್ತು ಸಾಗರಗಳು ಆತೀತವಾಗಿವೆ; ಅವರಂತೆ ದೇವರ ಗುಣ ಧರ್ಮವೂ. ಆದುದರಿಂದ ಆ ಕಾಶ ನುತ್ತು ಸಾಗರಗಳ ಬಣ್ಣವಾದ ನೀಲಿಯನ್ನೆ ಚಿತ್ರದಲ್ಲಿ ಬಳಕೆಯಾಗಿದೆ."

ಸ್ವಾಮೀಜಿಗೆ ಈ ಕ್ಷಿಪ್ರ ಹಾಗು ಸಮುಂಜಸ ಉತ್ತರವನ್ನು ಕೇಳಿ ಆಶ್ಚರ್ಯವಾಯಿತು. ಜಾಗೆ ಉತ್ತರವಿತ್ತ, ಇನ್ನೂ ಇಪ್ಪತ್ತು ತುಂಬಿರದಿದ್ದ ವಿದ್ಯಾರ್ಥಿಯೇ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿ. ಆಧುನಿಕ ಭಾರತದ ಅತಿ ಹಿರಿಯನೂ ನುಡಾಮೇಧಾವಿಯೂ ಆಗಿರುವ ರಾಜಕಾರಣಿ!

ರಾಜಾಜಿಗೆ ಮೊನ್ನೆ ದಶಂಬರ ಬರೊಂದು ೭೬ ವರ್ಷ ತುಂಬಿತು. ಅವರು ಈ ಸಂದರ್ಭದಲ್ಲಿ ತಾನು ರಾವಣಾಯಣ ಮತ್ತು ಮಹಾಭಾರತಗಳನ್ನು ಎಲ್ಲರಿಗೂ ತಿಳಿಯುವ ಸುಲಭ ಶೈಲಿಯಲ್ಲಿ ಬರೆಯಬೇಕೆಂದು ದೊಡ್ಡ ಕೆಲಸ ಎಂದು ಹೇಳಿದ್ದಾರೆ. ತನ್ನ ಜೀವನ ಸಾರ್ಥಕವಾಯಿತೆಂಬ ಆನುಭವವನ್ನು ಈ ಮಹಾಕಾರ್ಯ ನಾಡಿಸಿಕೊಟ್ಟಿದೆ ಎನ್ನುವ ಅಭಿಪ್ರಾಯವನ್ನು ಅವರು ಸೂಡಿಸಿವ್ವಾರೆ.

ಹಾಗೆ ನೋಡಿದ್ದು, ರಾಜಾಜಿ ಈಗ ರಾಜಕಾರಣದಿಂದ ದೂರವಿದ್ದಾರೆಂದು ಕಾಣುತ್ತದೆ. ಪ್ರಾಚೀನ ಪುರಾಣ ಹಾಗು ಶಾಸ್ತ್ರಗ್ರಂಥಗಳಲ್ಲಿಯೇ ಅವರಿಗೆ ವಿಶೇಷ ಆಸಕ್ತಿ ಇರುವಂತೆ ತೋರುತ್ತದೆ ಆದರೆ, "ಬಿ ಸಿ ಜಿ" ಪಾಕಿನ ಕುರಿತು ಪ್ರಯೋಗೋತ್ತರ ಪರೀಕ್ಷೆಯ ನ್ಯಾಸ್ಥೆಯಿಲ್ಲಿದೆ ಸಾಮಾನ್ಯಿಕ ಜಳವಳ ಅಪರಾಧವೆನ್ನುವ ಅಚಲ ಅಭಿಪ್ರಾಯವನ್ನಾಗದೀ ಆಮೇರಿಕಪ್ರರ್ಯಟ ಸಚ್ಚ ವರ್ತನೆಯ ಬಗ್ಗೆ ಸಂಶಯ ಪಟ್ಟುಕೊಳ್ಳದೆ ಆಣುಬಾಂಬನ್ನು ಅಟ್ಲಾಂಟಿಕ್ ಸಾಗರಕ್ಕೆ ಒಗೆದುಬಿಡಬೇಕೆಂಬ ಅವರ ಒಲುನೆಯನ್ನಾಗಲಿ ಕೇಳುವಾಗ ರಾಜಾಜಿ ರಾಜಕೀಯ ರಂಗದಿಂದ ಇನ್ನೂ ಕಾಲ್ತೆಗೆದಿಲ್ಲ ಪೆಂಬ ತಿಳಿಕಳಿಕೆ ನನ್ನಲ್ಲಿ ಉಂಟಾಗುತ್ತದೆ.

"ಸಿ. ಆರ್." ಎಂಬೆರಡು ಆಂಗ್ಲಪದಗಳ ಉಚ್ಚಾರವು ಹಿಂದೀಯಲ್ಲಿನ "ಸಿಯಾರ್" ಶಬ್ದದ ನೆನಪನ್ನು ತಂದು ಕೊಡುತ್ತದೆ; ನರಿರಾಯನ ಸ್ಮರಣೆ ನಮಗಾಗ ಸಹಜವಾಗಿಯೇ ಬರುತ್ತದೆ. ರಾಜಾಜಿಯನ್ನು ನರಿ ಎಂದು ವ್ಯಂಗ್ಯಹಾರ ರಂಗದಲ್ಲಿ ಕರೆದವರದ್ದಾರೆ—ಅವರೇ ಕಮ್ಯುನಿಸ್ಟರು! ((ಸ್ಟೇಟ್ಸ್‌ಮನ್ ನೆಂಜುರಿ ಫಾಕ್ಸ್" (ಇಪ್ಪತ್ತನೇ ಶತಮಾನದ ನರಿ) ಎಂದು ಅವರು ಹೋಲಿಸಿದ್ದರಿಸ ಪ್ರಸಿದ್ಧ ಜಲಚ್ಚಿತ್ರ ಕಂಪನಿಯ ಹೆಸರನ್ನು ಬಳಸಿ ರಾಜಾಜಿಯನ್ನು "ಎಮೆಧ್‌ಗಾನಾಗಿ" ಬಣ್ಣಿಸಲು ನೋಡಿದ್ದಾರೆ!

ಮಹಾತ್ಮಾ ಗಾಂಧೀಜಿಯು ಆತ್ಮ ಚರಿತ್ರೆಯನ್ನು ಬರೆದ ಲೂಯಿ ಫಿಶರರೊಳನರ ವೈಶ್ವಿಯಲ್ಲಿ ಮಾತ್ರ ರಾಜಾಜಿ ಭಾರತದ ಆತ್ಮೀತ ಹಿರಿಯ ಮೇಧಾವಿಗಳಲ್ಲಿ ಒಬ್ಬರು; ಅಲ್ಲಿದೆ ಗಾಂಧೀಜಿಯಬ್ಬೇ ಜುರುಕಾಪ ಮತ್ತು ಗಾಂಧೀಜಿಯದೆಸ್ಟೆ ನಿಷ್ಠೆಪಟ್ಟಪೇಷ್ಟೇ ಸಂಶಯಾತ್ಮಕ ದೃಷ್ಟಿಯುಳ್ಳ ಪಂಡಿತರು ಪಡೆದ ಜೀವ. ವಿದೇಶ್ಯಗಳ ಪತ್ರಿಕೆಗಳು ರಾಜಾಜಿಯ ಮೆದುಳು ಬೇಧಿನ ಅಲಂಗಿನಷ್ಟು ಹರಿತ ಎಂದಿವೆ. ದಕ್ಷಿಣದ ಬ್ರಾಹ್ಮಣನನ್ನು ಗ್ಲಾಡ್‌ಸ್ಟನ್ ಉದಾರವಾದದ ಪ್ರತಿಪಾದಕನೆಂದೂ ಬ್ರಿಟಿಷ್ ಜನತೆ ಕರೆದಿದೆ.

ಸರ್ ಸ್ಟಾಫೋರ್ಡ್ ಕ್ರಿಪ್ಸ್ ೧೯೪೦ರಲ್ಲಿ ಭಾರತಕ್ಕೆ ಬಂದಿದ್ದಾಗ ಪತ್ರಿಕೋದ್ಯಮಿಗಳನ್ನು ಅತ್ಯಂತ ಹಿರಿಯ ಭಾರತೀಯ ರಾಜಕಾರಣಿಯೆಂದು ಪ್ರಶ್ನಿಸಿದರು. ಗಾಂಧೀಜಿ, ನೆಹರು, ಪಟೇಲ, ಜಿನ್ನಾ—ಹೀಗೆ ಕೃಮವಾಗಿ ಪತ್ರಿಕೋದ್ಯೋಗಿಗಳು ಹೆಸರನ್ನು ಜಪಿಸಿದರು. ((ಇವರೆಲ್ಲ ಹಿರಿಯರು—ಹಿಸ್ಟ್ರೇನೆ. ಆದರೆ ಇವರೆಲ್ಲಿಲ್ಲ ಅತ್ಯಂತ ಹಿರಿಯರೆಂದರೆ ರಾಜಾಜಿ" ಎಂದು ಕ್ರಿಪ್ಸ್ ಆಗ ತಿಳಿಸಿ ಹೇಳಿದರು.

ಮಹಾತ್ಮರು ಕ್ರಿಪ್ಸ್ ಯೋಜನೆಯನ್ನು ಆಗ ಒಪ್ಪಲಿಲ್ಲ; ಒಪ್ಪಬೇಕೆಂದು ಮಹಾತ್ಮರನ್ನು —ಮತ್ತು ಕಾಂಗ್ರೆಸ್ಸನ್ನು—ಒತ್ತಾಯಿಸಿದವರಿದ್ದರೆ ಅದು ರಾಜಾಜಿ ಮಾತ್ರ. ಆಗ ರಾಜಾಜಿಯ ಮೇಲೆ ದೇಶವೇ ಮುನಿದಿತ್ತು; ಸ್ವತಃ ಗಾಂಧೀಜಿ ಸಿಟ್ಟಾದರು. ಗಾಂಧೀಜಿಯ ಕೊಪಾಗ್ನಿಗೆ ಗುರಿಯಾಗಿದ್ದರು ಉಳಿದ ಪಕ್ಷಾತ್ರಾ ಪ್ರತಿನಿಧಿಗಳೆಂದರೆ ರಾಜಾಜಿಯೊಬ್ಬನೇ ಎಂಬ ಪುರಾತಿಹಾಸಿಕ ಸತ್ಯ. ಸುಭಾಷ್‌ಬೋಸ್, ಆ್ಯನಿ ಬೆಸೆಂಟ್ ಇವರ ಕತೆ ಕೇಳಿದವರಿಗೆ ರಾಜಾಜಿಯ ಜೀವನವೊಂದು ಈ ಮಟ್ಟಿಗೆ ಪವಾದ.

ರಾಜಾಜಿಗೆ ಮಹಾತ್ಮರಲ್ಲಿ ತುಂಬ ವಿಶ್ವಾಸ; ಗಾಂಧೀಜಿಗೆ ಸರ್ ಆಲ್ಫ್ರೆ ವಿಶ್ವಾಸ ರಾಜೆಟ್ ಶಾಸನವನ್ನು ವಿರೋಧಿಸುವ ರಾಷ್ಟ್ರವ್ಯಾಪಿ ಬಲವಳವನ್ನು ೧೯೧೯ರಲ್ಲಿ ಸಂಘಟಿಸಲು ಮಹಾತ್ಮರು ನಿರ್ಧರಿಸಿದಾಗ ರಾಜಾಜಿಯು ಸುಬ್ಬರಾಯಲ್ಲಿ ಅವರು ಅತಿಥಿಯಾಗಿದ್ದರು. ರಾಜಾಜಿಗೆ ಮಾತ್ರ ಅಂದು ತುಂಬ ಸಂಕೋಚ—ಗಾಂಧೀಜಿಯವರು ರಾಜಾಜಿಯನ್ನು ತನ್ನ ಜಾಗೆಯೇ ಒಬ್ಬ ಅತಿಥಿಯಾಗಿರಬೇಕೆಂದು ಮೊದಲು ಭಾವಿಸಿದ್ದರಂತೆ! ಮಹದೇವಭಾಯಿ ಈ ಭ್ರಮೆಯನ್ನು ಹೋಗಲಾಡಿಸಿದರು.

ಅಂದು ದೆಳಿದ ಆತ್ಮೀಯತೆಯು ಗಾಂಧೀಜಿಯ ಉತ್ತರಾಧಿಕಾರಿತ್ವ ರಾಜಾಜಿಯ ಸಾಲಿಗೆ ಹೋಗುವುದೋ ಎಂದು ಎಲ್ಲರೂ ಆಡಿಕೊಳ್ಳುವಷ್ಟು ಮುಂದೆ ಬೆಳೆಯಿತು. ಗಾಂಧೀಜಿಯು ತೀರ ಆಪರೇವಾದಿಗಳಾಗಿದ್ದರೆಂದು ರಾಜಾಜಿ ಹೇಳುತ್ತಿದ್ದರು "ಆಹಿಂಸೆಯು ನನ್ನ ಕಣ್ಣುಗಳನ್ನು ಮಸಕು ಮಾಡಿದೆ ಎಂದು ರಾಜಾಜಿಯ ವಿಚಾರ' ಎಂದು ಸ್ವತಃ ಗಾಂಧೀಜಿ ಸಹ ಹೇಳುತ್ತಿದ್ದರು. ಆದಾ ಸ್ಟೇಯಿಂಗ್ ಇಂಡಿಯ" (ತರುಣ ಭಾರತ) ಪತ್ರಿಕೆಯು ಸಂಪಾದಕನ ಹೊಣೆಗಾರಿ ಸ್ವಾವಕ್ಕೆ ಆನರು ರಾಜಾಜಿಯನ್ನೆ ಆರಿಸಿದರು.

ರಾಮನಾನುನನ್ನು ಜಪಿಸುತ್ತಾ ಗಾಂಧೀಜಿ ಯತಾತ್ಮರಾದುದನ್ನು ಕೇಳಿದಾಗ ರಾಜಾಜಿ ಕಲ್ಕತ್ತೆಯ ರಾಜಭವನದಲ್ಲಿದ್ದರು. ಅವರಿಗೆ ತೀವ್ರ ಆಘಾತವಾಯಿತು—ಆದರೊರವನೆಆವರಿಗೆ ಸಹಜವಾದ ಮುಂಜಾಗರೂಕತೆಯು ವಿಜಾರವೂ ಹೊಳೆಯಿತು ಬೇರೇನನ್ನೂ ಮಾಡುವು ದಕ್ಕೆ ಮುಂಚೆ ಆನರು ಅಾರ್ಡ್ ಮೌಂಟ್ ಬ್ಯಾಟನ್ನರಿಗೆ ಟೆಲಿಫೋನಿನಾಡಿ, ಪ್ರಧಾನಿ ಜವಾಹರಲಾಲರ ಜೀವದ ಕುರಿತು ವಿಶೇಷ ಜಾಗ್ರತೆಯನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿದರು.

ನೆಪರೂರ ವಿಸಾದಪಿತ ಧ್ವನಿಯಾಗಲೀ ಸರೋಜಿನಿ ನಾಯ್ಡುರ ಕವಿತಾ ಸ್ಪರ್ಶಿಭೆಯಾಗಲೀ ತನ್ನ ಕೈಯಲ್ಲಿ ಪೋಲೀಸಾದಳಕವಿದ್ದ ಮಹಾತ್ಮರನ್ನು ಉಳಿಸಲಾರವೆ ಪೋದೆನೆ ಎಂಬ ಪಟೇಲರ ಉದಾರವಾಗಲೀ ರಾಜಾಜಿಯ ಕರಿಣ ವ್ಯವಹಾರೋಚಿತ ಮಾತುಗಳ ಮುಂದೆ ಕ್ಷುಲ್ಲಿಕವಸಿಸುತ್ತವೆ ಆಪರಿಪೂರ್ಣವಾದ ಈ ಜಗತ್ತಿನಲ್ಲಿ ವಿಜ್ಞಾಪಕೆ ಮತ್ತು ಆಕ್ಷೃಗಳನ್ನು ಇಲ್ಲಿಂದಂತೆ ನಾಡುವುದು ಕಷ್ಟ; ಆಪರೆ ಸತ್ಯಾವನ್ನು ಸಪ್ರಾವದಿಂದ ಮಾತ್ರನೇ ಪಡೆಯಬಹುದೆಂಬುದನ್ನು ಮಾತ್ರ ನೆನಪಿಸಿಜೋಣ"ಎಂದಷ್ಟೇ ರಾಜಾಜಿ ಆಗ ನುಡಿದರು.

ಪಾಕಿಸ್ತಾನವನ್ನು ಕೊಟ್ಟುಬಿಡಿ ಎಂದು ಕ್ರಿಪ್ಸ್ ಯೋಜನೆಗೆ ಸೈಗುಟ್ಟಿದ್ದ ರಾಜಾಜಿಯ ಮೇಲೆ ಹೆಚ್ಚಿನ ಆಕ್ರೋಪಪ್ರಪ್ಪದ್ದು ಬಂಗಾಳಿಗರಿಗೆ ಎಂದು ಕಾಣುತ್ತದೆ ಕ್ರಾಂತಿಕಾರಿ ಗುಂಪುಗಳ ತವರು ಮನೆಯಾದ ಆ ಬಂಗಾಳಕ್ಕೆ ೧೯೪೨ರಲ್ಲಿ ರಾಜಾಜಿಯೇ ರಾಜ್ಯಪಾಲರಾಗಿ ಹೋದದು ಆಗೇನು ನಡೆಯಿತು? ಉದ್ರಿಕ್ತ ಜನ ಸಮುದಾಯ ರಾಜಭವನವನ್ನು ಮುತ್ತಿ ಉತ್ತಮೋತ್ತಮ ಚಿತ್ರಗಳನ್ನು ಹಾಳುಗೆಡವಿತು; ಸರಕುಗಳನ್ನೆಲ್ಲೊ ಎತ್ತಿಕೊಂಡು ಹೋಯಿತು, ಇನ್ನುಳಿದ ಲೂಟೆರೋಭಾಟ ನಡೆಸಿತು.

ಪೋಲೀಸರು ಬಲಪ್ರಯೋಗದಿಂದ ಇದನ್ನು ತಪ್ಪಿಸಬಾರದೆಂದು ರಾಜಾಜಿಯೇಳಿದರು. ಶತವರ್ಷಗಳ ಮಿತ್ರವಿದ ಪ್ರತಿಕಾರಾಗಿ ಜನ ಸಮುದಾಯಕ್ಕೆ ಈ ರಾಜಭವನ ಸುತ್ತಲ್ಲಿಯ ಕೋಟೆ—ಸರಕುಗಳು ಕಾಣಿಸುತ್ತವೆ. ಈಗ ಲಾದರೂ ಸ್ವಾತಂತ್ರ್ಯವನ್ನು ಅನುಭವಿಸಲಿ ಎಂದು ರಾಜಾಜಿ ಪೋಲೀಸರನ್ನು ತಡೆದರು ನುಯವಾದ ಮಾತುಗಳಿಂದ ಜನ ಜಂಘಾಬಲ ಪಂತೆ ಪೋಲೀಸರೂ ಮಾಡಿದರು ಮಹಾತ್ಮರ ಪ್ರಾರ್ಥನೆಯು ಪರಿಣಾಮವಾಗಿ ಜನರು ಎತ್ತಿಕೊಂಡಮ್ಮ ಹೋಗಿದ್ದ ಸುವಾರು ಹಂಬಾ ಗೂ ಪಾಮಿ ಬೆಲೆಯ ಸರಕುಗಳಲ್ಲಿ ಹೆಚ್ಚಿನವು ಮರಳಿ ಬಂತು.

ಬಂಗಾಳವನ್ನು ಬಿಟ್ಟು ಭಾರತದ ಪ್ರಥಮ ಭಾರತೀಯ ಗವರ್ನರ್ ಜನರಲ್ ಮುದ್ದಿಯಸ್ಥೇಗಲು ರಾಜಾಜಿ ಬಂದಾಗ ಎಲ್ಲ ಬಂಗಾಳಿಗಳೂ ಈ ಸಮರ್ಪ ಅಡಳಿತಗಾರನ ಅಗಲುವಿಕೆಗೆ ಮುಮಿಸಿದರು. ಹೊಸದೆಹಲಿಯ ಸಮಾರಂಭದ ಬಳಿಕ ಬರ್ಚರ್ ಮಪಲಿಸಿದ್ದ ಸುಹಿಳಿಯರು ಪಾಡಿಕೆಯಂತೆ ಗೌರವವನ್ನು ಸೂಚಿಸಲು ಬಾವಾಗ ಈ ಸುಮಕಣಿಗೆ ತುಂಬ ನಾಚಿಕೆಯಾಯಿತು "ಬೇರೆ ಮಯನಾಮಿ ನನಗೆ ಹಾಗೆ ಸಾಷಪಟ್ಟೆವಿ " ಎಂದು ಇವರು ಹೆಂಗಸರಿಂದ ತಪ್ಪಿಸಿಕೊಳ್ಳಲು ಹೆಣಗಿದರು.

ರಾಷ್ಟ್ರಾಧ್ಯಕ್ಷ ಸ್ಥಾನವನ್ನು ತನ್ನ ಮುದಿ ಪ್ರಾಯದ ನೆಪಯೇ ನಿರಾಕರಿಸಿದರೆಂಬಂತಾ ರಾಜಾಜಿಯ ಕುರಿತು ಹೇಳಲಾಗುತ್ತದೆ. ಆದರೆ ಕರ್ತವ್ಯದ ಕರೆ ಬಂದಾಗ ಸಮ್ಮನಿಸಲಿಯುವು ಮ ಅವರ ಸ್ವಭಾವವಲ್ಲ ೧೯೫೬ರಲ್ಲಿ ಮದ್ರಾಸಿನಲ್ಲಿ, ಪಟೇಲರ ನಿಧನಾನಂತರ ಕೇಂದ್ರದಲ್ಲಿ ೧೯೫೨ರ ಮಹಾ ಚುನಾವಣೆಯ ಬಳಿಕ ಮರಳಿ ಮಂತ್ರಿಸಿದ್ದಲ್ಲಿ ಆನರು ಜಾವಾರ್ಹರಿಗೆ ಹೆಗಲು ಕೊಟ್ಟಿರು.

ಬ್ರಿಟಿಷರ ಮಾಜಿ ಸ್ಪಧಾನ ಜರ್ಚಿಲರೆ ಕುರಿತು ಸ್ವಾರಿನ್ ಹೇಳುತ್ತಿದ್ದರು—"ಬ್ರಿಟಿಷರು ಇನ್ನೊಮ್ಮೆ ಎಂದಾದರೂ ಆಸಕ್ತಿಗಲ್ಲಿ ಸಿಕ್ಕಿದರೆ ಆಗ ಆವೇ ರಣಾಶ್ವರನ್ನು ಆಶ್ರಯಿಸುತ್ತಾರೆ" ಭಾರತೀಯರ ವಿಚಾರ ಇದೇ ಸತಾಕು ರಾಜಾಜಿಯ ಸಂಗತಿಯಲ್ಲಿ ಅನ್ವಯಿಸುತ್ತದೆ. ತತ್ವಜ್ಞಾನಿಯನ್ನೋ ರಾಜಕಾರಣಿಯನ್ನೂ ಆಸ್ಥೇ ವ್ಯಕ್ತಿಯಾಗಿ ಸಿಕೊಂಡಿರುವ ಈ ಪ್ರಾಣಕ್ಕೆ ನಮಗೆ ಯಾವ ಕಾಲಕ್ಕೆ ಬೇಕಾಗುವುದೋ ಕಣ ಹೇಳುವಂತಿಲ್ಲ. ಬೇಕಾಗಿದ್ದಾಗ ಜೊತೆಗಿರಲಿ ನನ್ನ ಭಾಗ್ಯ! —ಸಾಧಾರ.

ದಿ ವಿಜಯಾ ಬೇಂಕ್, ಲಿಮಿಟೆಡ್, ಬೈಂದೂರು. (ದ. ಕ.)

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹಾನೀಯರು ನನ್ನ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇರೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿ ಕೊಂಡಾಗ್ಯೂ, ಆಸ್ಲ್-ಸ-ಬಡ್ಡಿ, ಯಾವುದನ್ನೂ ಈ ತನಕವೂ ಕೊಡೆದೆ ಬಾಕಿ ಮಾಡಿಕೊಂಡಿರುವುದರಿಂದಲ್ಲಿ, ಇನ್ನು ಕೆಲವರಿಗೆ ಬಿಟ್ಟು ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಸರ್ವಿಯವರು ನನ್ನಲ್ಲಿ ಈಡಿಟ್ಟ ಚಿನ್ನಾಭರಣ ನಗಗಳನ್ನು ಇದೇ ದಶಂಬರ ತಿಂಗಳ ತಾ 19ನೇ ಸೋಮವಾರ ಅಪರಾಹ್ನ ಗಂಟೆ 3.0ಕ್ಕೆ—ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ವರಾಂಡದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು. ತಿಳಿದಿರಲಿ.

ಸಾಲದ ಜಂಜ್ರಾ ನಂಬರು	ಹೆಸರು ಮತ್ತು ನಿಳಾಸ	ಮೊಬಲಗು ರೂ.	ಅ.
93/53	ಶ್ರೀ ಅಲ್ಬಾಡಿ ಸೀತ ಶೆಟ್ಟಿ, ಬುದ್ದಿವಂತ ಶೆಟ್ಟರ ಅಳಿಯ, ಕಾಲ್ಕೋದು ಗ್ರಾಮ, ಕಾಲ್ತೋಡು	860	0
600/53	,, ಬಾದ ಪುರುಷೋತ್ತಮ ಪೋಶಿ, ಕುಪ್ಪಾ ಜೋಶಿಯವರ ಮಗ, ಬೈಂದೂರು.	64	1
769/53	ಶ್ರೀಮತಿ ಚಿಕ್ಕಿ, ಸೀಲು ಹೆಂಗ್ಸಿನ ಮಗಳು, ಬಂಕೇಶ್ವರ, ಬೈಂದೂರು.	10	8
827/53	ಶ್ರೀ. ಪಾಸನ್ನಾದಿ ಪಟಿದ್ವೀನ್ ಸಾಹೇಬ, ಇಬ್ರಾಹಿಮ ಸಾಹೇಬರ ಮಗ, ಶಿರೂರು.	25	0
918/53	,, ತುಂಬಿಗೆದ್ದೆ ಮಂಜುನಾಥ ಸೇರುಗಾರ, ನಾಗಪ್ಪ ಸೇರುಗಾರರ ಮಗ, ಬಾಡೆ, ಬೈಂದೂರು.	31	8
947/53	,, ಶೇಕ್ ಅಬೂ ನುಹಮ್ಮದ್, ಉಸ್ಮೂರಿ ಸಾಹೇಬರ ಮಗ, ಶಿರೂರು.	27	5
230/54	,, D K ರಾಮಯ್ಯ ನಾಯಕ್: ನಾಗಪ್ಪ ನಾಯಕರ ಮಗ, ಪಡುವರಿ.	12	0
239/54	do.	36	12
337/54	,, M ಸೇಷಯ್ಯ ಸೇನಿಗಾರ, ಸಣ್ಣಯ್ಯ ಸೇರುಗಾರರ ಮಗ್ಗ, ಪೆದಮನಸೆ, ಮಗ್ಯೂಡಿ.	58	11
364/54	,, B. ವೆಂಕಟ್ರಮಣ ನಾಯಕ್, ಮಂಜಪ್ಪ ನಾಯಕಳ ಮಗ, ಬಿಜನಾರು ಗ್ರಾಮ, ಜಿಜೂರು.	54	6
647/54	,, ಪಾಂಡುರಂಗ ಪೈ, ನರಸಿಂಪ ಪೈಯವರ ಮಗ, ಪೆಟ್ಟಿನ ಹೊಳೆ, ಕಾಲ್ತೋಡು.	94	14
702/54	,, ಪಟಾನದ ಮಹಾಬಲ ಸೇನಿಗಾರ, ಬೊಗ್ಗಯ್ಯ ಸೇರುಗಾರರ ನುಗ, ಪಡುವರಿ.	73	0
835/54	,, ಮಡ್ಡೋಡಿ ಸುಬ್ರಾಯ ಸೇರುಗಾರ, ಕೃಷ್ಣಪ್ಪ ಸೇರುಗಾರರ ಮಗ, ಮಯ್ಯಾಡಿ.	22	8
884/54	,, V. ಜನಾರ್ಧನ ಹಂಪ, ಲಕ್ಷ್ಮೀನಾರಾಯಣ ಪಂಡಿಯರ ಮಗ, ಗ್ರಾಮಪಟ ಶ್ಯಾನುಭಾಗ, ಸೋಳಿಯೊಳೆ ಯೇಳಜೆತು. ಪೊಸ್ಟು.	16	11
979/54	,, ಕಾಮಾ ಇಸ್ಮಾಯಿಲ್ಜಿ, ಇಸುಬ್ ಸಾಹೇಬರ ಮಗ, ಕೆಸರುಕೋಡಿ, ಶಿರೂರು.	39	1
1068/54	,, ಪುಪ್ಪಾರ್ ಸಾಹೇಬ, ಅಬ್ದುಲ್ ಕಾದೀರ ಸಾಹೇಬರ ಮಗ, ತಾರಾಪತಿ, ಪಡುಸರಿ.	33	6
1115/54	,, ಯು. ಸುಬ್ರಾಯ ಹೊಳ್ಳ, ಉಪ್ಪುಂದ ಗ್ರಾಮದ ಶ್ಯಾನುಭಾಗ, ಉಪ್ಪುಂದ.	96	10
1166/54	,, ಮಡ್ಡೋಡಿ ಗಣಪಯ್ಯ ಸೇರುಗಾರರ, ಸುಬ್ರಾಯ ಸೇರುಗಾರರ ಮಗ, ಮಯ್ಯಾಡಿ.	156	11
1284/54	,, ಕೆ ಜನಾರ್ಧನ ಸೆಟ್ಟಿ, ಶೇಸ ಸೇಟರ ಮಗ, ಕಂಬದ ಕೋಣೆ.	21	8
1354/54	,, ಗಂಗೊಳ್ಳಿ ಶಂಕರ ಸೇರುಗಾರ, ಸೇಶಯ್ಯ ಸೇರುಗಾರರ ಮಗ, ಮಯ್ಯಾಡಿ.	11	12

ಬೈಂದೂರು 9-12-'56.

ಎಚ್ ರಾಜೀವ ಸೆಟ್ಟಿ, ಏಜಂಟ್.

ದೇಶೀಯ ರಾಜರ ಪಾಲಿನ ಸುವರ್ಣಯುಗದ ಕೊನೆಗಾಲ

(೨ನೇ ಪುಟದಿಂದ)

ಮಹಾರಾಜನು ತನ್ನ ಪ್ರಜೆಸ್ತಿಗಳನ್ನು ಅಸ್ತವ್ಯಸ್ತವಾಗಿ ಧರಿಸಿಕೊಂಡಿದ್ದುದನ್ನು ಕಂಡರು. ಇವರಿಂದ ಜಾರ್ಜರಿಗೆ ತುಂಬ ವೇದನೆಯಾಯಿತು. ಇಂಥ ಅಜಾಗರೂಕತೆಗಾಗಿ ಆ ಮಹಾರಾಜನನ್ನು ಅವರು ಬಹಿರಂಗವಾಗಿಯೇ ಗದರಿಸಿದರು.

ದೆಹಲಿಯ ದರ್ಬಾರು

ಶತಮಾನಗಳ ವೈಭವಕಾಲದಲ್ಲಿ ಥಿಲ್ಲಿ ದರ್ಬಾರಿನಷ್ಟು (೧೯೧೧) ಶ್ರೇಷ್ಠ ಸಮಾರಂಭವನ್ನು ಹೊಸದೆಹಲಿಯು ಕಂಡು ದಿಲ್ಲವೆಂದು ಹೇಳಬಹುದು. ಆಗ ೧೬೧ ಮಂದಿ ಸಂಸ್ಥಾನಿಕರು ಈ ವಿಜೃಂಭಣೆಯ ಉತ್ಸವದಲ್ಲಿ ಭಾಗವಹಿಸಿದರು. ಪ್ರತಿಯೊಬ್ಬ ಸಂಸ್ಥಾನಿಕನೂ ತಾನು ಉಳಿದವರಿಗಿಂತ ಶ್ರೇಷ್ಠನೆಂದು ತೋರಿಸಿಕೊಳ್ಳಲು ಹಾತೊರೆಯುತ್ತಿದ್ದನು.

ನಿದರ್ಶನಕ್ಕಾಗಿ ದೇಶೀಯ ಸಂಸ್ಥಾನಿಕರಲ್ಲೆಲ್ಲ ಶ್ರೇಷ್ಠನೆಂಬ ತನ್ನ ಅಧಿಕಾರವನ್ನು ಉದಯಪುರದ ಮಹಾರಾಣನು ಹೈದರಾಬಾದಿನ ನಿಜಾಮನನ್ನು ಬದಿಗೊತ್ತಿ ಸ್ಥಾಪಿಸಲು ಸಮರ್ಥನಾದನು. ದರ್ಬಾರಿನಲ್ಲಿ ಸದಾಕಾಲ ವೈಕ್ತಿಕ ಉಪಸ್ಥಿತಿಯನ್ನು ಅವಶ್ಯಕತೆ ಇಲ್ಲವೆಂಬ ಒಪ್ಪಿಗೆಯನ್ನು ಆತನು ಪಡೆದನು. ಅಲ್ಲದೆ ಸ್ವತಃ ದರ್ಬಾರ್ ಮಹಲಿನಲ್ಲಿ ಉಪಸ್ಥಿತನಿದ್ದಾಗ ಶ್ವೇತಚ್ಛತ್ರಸನ್ನು ಬಿಡಿಸಿ ಇಟ್ಟುಕೊಳ್ಳುವ ಅಧಿಕಾರವನ್ನೂ ಅವನು ಸಂಪಾದಿಸಿದನು.

ದರ್ಬಾರ್ ಮಹಲಿನಲ್ಲಿ ಆಸನಗಳಿಗೆ ಬಗ್ಗಿ ವಂದಿಸಿದ ಬಳಿಕ ಬೆನ್ನು ತೋರಿಸಬಾರದೆಂದು ಈ ಮಹಾರಾಜರಿಗೆಲ್ಲ ಪೇಳಿದ್ದರು. ಹಿಂದೆ ಹಿಂದೆ ಹೆಜ್ಜೆಯಿಟ್ಟು ಕೊಂಡೇ ಅವರು ತಮ್ಮ ಸ್ಥಾನವನ್ನು ಸೇರಬೇಕಾಗಿದ್ದಿತು. ಈ ಸೂಚನೆಗೆ ಎಲ್ಲ ಸಂಸ್ಥಾನಿಕರೂ ಒಪ್ಪಿದರೂ, ಅದರೆ ಬಡೋದೆಯ ಗಾಯಕವಾಡನು ಇವಕ್ಕೆ ಸಮ್ಮತಿಸಲಿಲ್ಲ. ಆಂಗ್ಲ ಪ್ರಭುತ್ವದಿಂದ ಆನನಿಗೆ ಅಧಿಕೃತ ಎಚ್ಚರ ಹೋದರೂ ಆತನು ಅದನ್ನು ಗಮನಿಸಲಿಲ್ಲ.

ಎಲ್ಲ ಸಂಸ್ಥಾನಿಕರೂ ಗಾಯಕವಾಡನು ಹೇಗೆ ವರ್ತಿಸುವನೆಂಬ ಕುತೂಹಲದಿಂದ ದರ್ಬಾರ್ ಮಹಲಿನಲ್ಲಿ ಕೂಡಿದ್ದರು ಪ್ರತಿಯೊಬ್ಬ ಸಂಸ್ಥಾನಿಕನೂ ಸಾರ್ವಭೌಮ ರಾಜನ ಮುಂದೆ ತನ್ನ ಮಿಡ್ಡಿವನ್ನಿಟ್ಟು, ತಲೆತಗ್ಗಿಸಿ, ಆಂಗ್ಲ ಪ್ರಭುತ್ವಕ್ಕೆ ನಿಷ್ಠೆಯನ್ನು ಪ್ರತಿಜ್ಞೆ ಮಾಡಿ, ಹೆಜ್ಜೆಯೆನ್ನು ಹಿಂದಿಡುತ್ತಾ ತನ್ನ ಸ್ಥಾನವನ್ನು ಸೇರುತ್ತಿದ್ದನು

ಹೆಜ್ಜೆ ತಪ್ಪಿದಾಗ....

ಹೈದರಾಬಾದಿನ ನಿಜಾಮನು ನಾತ್ರ ತುಸು ತಪ್ಪಿದನು; ಆಗ ಎಲ್ಲರೂ ಅಚ್ಚರಿಗೊಂಡರು. ಸಿಂಹಾಸನವನ್ನು ಅಲಂಕರಿಸಿದ್ದ ರಾಜ ದಂಪತಿಗಳಿಗೆ ವಂದಿಸಿದ ಬಳಿಕ ನಿಜಾಮನು ಬೆನ್ನು ತಿರುಗಿಸಿ ತನ್ನ ಸ್ಥಾನದೆಡೆ ನಾಲ್ಕು ಹೆಜ್ಜೆ ಇಟ್ಟನು; ಕೂಡಲೇ ಅವನಿಗೆ ತನ್ನ ತಪ್ಪು ಹೊಳೆಯಿತು ಸಾರ್ವಭೌಮನೊಡನೆ ಕ್ಷಮೆ ಕೇಳಿ ಹೆಜ್ಜೆಯನ್ನು ಹಿಂದಿಡುತ್ತಾ ತನ್ನ ಸ್ಥಾನವನ್ನಾತ ಸೇರಿದನು.

ಬಡೋದೆಯ ಗಾಯಕವಾಡನು ಮಾತ್ರ ಜಪ್ಪಡ್ಡು ಹೊಡೆಯಲಿಲ್ಲ. ಮುಂದೆ ಹೋಗಿ, ಅನಡ್ಡೆಯಿಂದ ನಪ-ಸ್ಕಾರ ಗೈದಂತೆ ಮಾಡಿ ಸಾರ್ವಭೌಮನಿಗೆ ಬೆನ್ನುಕೊಟ್ಟೇ ಆತನು ಹಿಂತಿರುಗಿದನು. ಇದರಿಂದ ಆ ಸಾರ್ವಭೌಮನಿಗೆ ತುಂಬ ನೋವಾಯಿತು. ಅದರೆ ದೀರ್ಘ ಪರ್ಯಾಲೋಚನೆಯ ಬಳಿಕ ಗಾಯಕವಾಡನ ವಿರುದ್ಧ ಕ್ರಪ ನೇಸನ್ನೂ ತೆಗೆದುಕೊಳ್ಳುವ ಅಗತ್ಯ ವಿಲ್ಲವೆಂದು ತೀರ್ಮಾನಿಸಲಾಯಿತು. ಹಿಂದಿನಿಂದ ಪತ್ರಮುಖೇನ ಅನುಚಿತೋಗ್ಯದ ಕಾರಣವನ್ನಿತ್ತು ಗಾಯಕವಾಡನು ತನ್ನ ಕೃತಿಗೆ ಕ್ಷಮೆ ಕೋರಿದರೂ ಬ್ರಿಟಿಷರು ಆತನನ್ನು ಕೊನೆಗೂ ಕ್ಷಮಿಸಲಿಲ್ಲ

ದೇಶೀಯ ಸಂಸ್ಥಾನಿಕರ ವೈಭವಗಳಿಂದ ಆಂಗ್ಲ ಪ್ರಭುತ್ವದ ಮನಸ್ಸು ಕೆಲವೊಮ್ಮೆ ಕದಡುತ್ತಿದ್ದಿತು. ಹೊಸದೆಹಲಿಯಲ್ಲಿ ಈಗ ರಾಷ್ಟ್ರಪತಿ ಭವನವೆಂದು ಕರೆಯಲ್ಪಡುವ ಭವ್ಯ ಕಟ್ಟಡವನ್ನು ಕಟ್ಟುವುದಕ್ಕೆ ಕಾರಣವಾಗಿ ವೈಸರಾಯಿಯು ಹೀಗೆ ಶೇಳಿದ್ದನು — "ನನ್ನಲ್ಲಿಗೆ ಹೈದರಾಬಾದಿನ ನಿಜಾಮ್, ಜಯಪುರದ ಮಹಾರಾಜ ಇಂಥವರೂ ಅಧಿಗಳಾಗಿ ಬರುತ್ತಾರೆ; ಅವರಿಗೆ ಲಂಡನಿನ ಬಕ್ಕಿಂಗ್ಹಾಮ್ ಅರಮನೆಗಿಂತಲೂ ಹೆಚ್ಚು ಶೋಭೆಯ ಅರಮನೆಗಳಿವೆ."

ತಿರಸ್ಕಾರ ತಪ್ಪಲಿಲ್ಲ

ಇಷ್ಟಾದರೂ ಬ್ರಿಟಿಷ್ ಅಧಿಕಾರಿಗಳಾಗಲೀ ವ್ಯಾಪಾರಿಗಳಾಗಲೀ ದೇಶೀಯ ಸಂಸ್ಥಾನಿಕರನ್ನು ಆದರಿಸುತ್ತಿರಲಿಲ್ಲ. ಮುಂಬಯಿ ಮತ್ತು ಕಲ್ಕತ್ತಗಳಲ್ಲಿದ್ದ ಐರೋಪ್ಯ ಕ್ಲಬ್ಬುಗಳಲ್ಲಿ ಈ ಸಂಸ್ಥಾನಿಕರನ್ನು ಸಹ ಹಿಂಮಲವನೆಂದು ದೂರ ವಿಡುತ್ತಿದ್ದರು. ಪ್ರಸಿದ್ಧ ಆಂಗ್ಲ ಕಾದಂಬರಿಕಾರ ಸೋಮರ್‌ಸೆಟ್ ಮಾಮ್ ರೊಡನೆ ಬಿರಾನಿನ ರಾಜಕುಮಾರನು "ಮುಂಬಯಿಯ ಐರೋಪ್ಯ ಕ್ಲಬ್ಬಿನಲ್ಲಿ ಭಾರತೀಯರನ್ನೂ ನಾಯಿಗಳನ್ನೂ ಸೇರಿಸಿಕೊಳ್ಳುವುದಿಲ್ಲ; ಕಲ್ಕತ್ತದ ಬಂಗಾಳ ಕ್ಲಬ್ಬಿನಲ್ಲಿ ನಾಯಿಗಳನ್ನು ಸೇರಿಸಿಕೊಳ್ಳುತ್ತಾರೆ, ಆದರೆ ಭಾರತೀಯರಿಗೆ ಪ್ರವೇಶವಿಲ್ಲ" ಎಂದಿದ್ದನು.

ಬಿಕಾನೇರಿನ ಮಹಾರಾಜನಿಗೆ ಮುಂಬಯಿ ಕ್ಲಬ್ಬೊಂದರ ಕಾರ್ಯದರ್ಶಿಯು ಹೀಗೆಂದನು — "ನಿಯಮಬದ್ಧರಾದ ನಾವು ಭಾರತೀಯರಿಗೆ ಪ್ರವೇಶ ಕೊಡುವುದಿಲ್ಲ. ಆದರೆ ತಾವು ನಮ್ಮನ್ನು ಕೂಡಿಕೊಳ್ಳಬಹುದು." ಇದಕ್ಕೆ ಮಹಾರಾಜ ತಪ್ಪದೆ ಉತ್ತರನಿತ್ತನು — "ಬೇಡ — ಉಪಕಾರವಾಯಿತು.... ನಿಮ್ಮ ಅರಸರೊಡನೆ ಬಕ್ಕಿಂಗ್ಹಾಮ್ ಅರಮನೆಯಲ್ಲಿ ನಾನು ಭೋಜನ ಸ್ವೀಕರಿಸಿದ್ದೇನೆ; ಇಲ್ಲಿ ನಿಮ್ಮ ಕ್ಲಬ್ಬಿನ ಅವಶ್ಯಕತೆ ನನಗಿಲ್ಲ"

ಭಾರತದ ಬ್ರಿಟಿಷ್ ಪ್ರಾಂತ್ಯಗಳಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳದ ಝಳವು ದೇಶೀಯ ಸಂಸ್ಥಾನಗಳಿಗೂ ಹತ್ತುತ್ತಿದ್ದಿತು. ಆಗ ಈ ಸಂಸ್ಥಾನಿಕರು ತಾವು ರಾಷ್ಟ್ರೀಯ ಮನೋವೃತ್ತಿಗೆ ಅನುಕೂಲರಲ್ಲವೆಂದು ಶ್ರುತಪಡಿಸಲು ಸ್ವಾತಂತ್ರ್ಯಯೋಧರನ್ನು ನಿಷ್ಕರುಣೆಯಿಂದ ನಡೆಸಿಕೊಳ್ಳುತ್ತಿದ್ದರು.

ಸ್ವಾತಂತ್ರ್ಯದಲ್ಲಿ ಆಸಕ್ತಿ

ಕಪುರತಲದಂಥ ಕೆಲವು ರಾಜ ಕುಟುಂಬಗಳು ಸ್ವಾತಂತ್ರ್ಯ ಹೋರಾಟದಲ್ಲಿ ವಿಶೇಷ ಆಸಕ್ತಿಯನ್ನು ತಳೆದಿದ್ದವೆಂಬುದು ನಿಜ. ಈಗ ಕೇಂದ್ರದ ಆರೋಗ್ಯ ಮಂತ್ರಿಯಾಗಿರುವ ರಾಜ ಕುಮಾರಿ ಅಮೃತ ಕೌರರು ತನ್ನ ತಂದೆ ರಾಜ ಹರ್ನಾಮ್ ಸಿಂಘೆರು ಶ್ರೀ ಗೋಪಾಲ ಕೃಷ್ಣ ಗೋಖಲೆ ಮುತ್ತಿತರ ಅನೇಕ ರಾಷ್ಟ್ರೀಯ ಧುರೀಣರೊಡನೆ ಬಹಳ ಆತ್ಮೀಯತೆಯಿಂದಿದ್ದರೆಂದು ಹೇಳುತ್ತಾರೆ. ಗಾಂಧೀಜಿಯು ಭಾರತದಲ್ಲಿ ಮಹತ್ಕಾರ್ಯಗಳನ್ನು ಮಾಡಲಿರುವರೆಂದೂ ಅನುದಿನವೂ ಅವರನ್ನು ಕಾಣಬೇಕೆಂದು ತನ್ನ ತಂದೆ ತನ್ನನ್ನು ಒತ್ತಾಯಿಸುತ್ತಿದ್ದರಾಗಿಯೂ ಅವರು ತಿಳಿಸುತ್ತಾರೆ.

ನಭೂತಪೂ ಮಹಾರಾಜರು ರಾಷ್ಟ್ರೀಯ ಮನೋವೃತ್ತಿಯುಳ್ಳವರನ್ನು ಬಹಳ ಜಿನ್ನಾಗಿ ಆದರಿಸುತ್ತಿದ್ದರು. ಈಸಕ್ತಾನುಭೂತಿಯಿಂದಾಗಿ ಅವರು ತಮ್ಮ ಸಿಂಹಾಸನವನ್ನೆ ಕಳೆದುಕೊಳ್ಳಬೇಕಾಯಿತು. ದಿವಂಗತೆ ಸರೋಜಿನಿ ನಾಯ್ಡು ರವರು ಮಹಾತ್ಮಗಾಂಧೀಜಿಯ ಆತ್ಮ ಚರಿತ್ರೆಯನ್ನು ಬರೆದ ಮಿ. ಲೂಯಿಸ್‌ಫಿಶರ್‌ರೊಡನೆ ಮಾತನಾಡುತ್ತಾ ಕಾಂಗ್ರೆಸು ಕಾರ್ಯಕಾರಿ ಸಮಿತಿಯೊಡನೆ ಅನೇಕ ಸಂಸ್ಥಾನಿಕರು ಪತ್ರವ್ಯವಹಾರ ನಡೆಸುತ್ತಿದ್ದರೆಂದೂ ಆರ್ಥಿಕ ಸಹಾಯವನ್ನು ಧಾರಾಳವಾಗಿ ನೀಡುತ್ತಿದ್ದರೆಂದೂ ಹೇಳಿದ್ದಂಟು.

ಪಟೇಲರ ಸಂಘಟನೆ

ಭಾರತಕ್ಕೆ ಸ್ವಾತಂತ್ರ್ಯ ದೊರೆತ ೧೯೪೭ನೇ ಆಗೊಸ್ತು ೧೫ಳಕ್ಕೆ ಪತ್ತಿರವಿಂದಂತೆ ಭಾರತೀಯ ಸಂಸ್ಥಾನಿಕರಿಗೆ ದಿಗ್ಭ್ರಮೆಯೇ ಆಯಿತು. ಅಂದು ಶಾಸನ ದೃಷ್ಟಿಯಿಂದ ಬ್ರಿಟಿಷರು ಭಾರತದಿಂದ ಹೊರಗಿ ಈ ಸಂಸ್ಥಾನಿಕರೇ ಮಗು ದೊಮ್ಮೆ ಸರ್ವತಂತ್ರ ಸ್ವತಂತ್ರ ಸಾರ್ವಭೌಮಾಧಿಕಾರಿ ಸಂಪನ್ನೆ ರಾಜರಿನಿಸುತ್ತಿದ್ದರು. ಆದರೆ ದೇಶದ ಮುಖ್ಯ ಭಾಗ

(೧೨ನೇ ಪುಟ ನೋಡಿರಿ)

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 540/55.

ಶೇಷಪ್ಪಯ್ಯನ್ ಪೋತಿ — ವಾದಿ.

ಮತ್ತು

ಅಕ್ಕಣ ಅನಂತಕೃಷ್ಣಯ್ಯ ಕೂಡಾ

— ಪ್ರತಿವಾದಿರು.

ಯಿವರೊಳಗೆ—

ಸದ್ರಿ ವ್ಯಾಜ್ಯದ 10ರಿಂದ 3ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ-

1, ಅಕ್ಕಣಿ ಅನಂತಕೃಷ್ಣಯ್ಯ. ಅಕ್ಕಣಿ ಸುಬ್ರಾಯರು ನಮಗೆ, ಸ್ವತಹಾ ಮತ್ತು ಮ್ಯಾನೆರ 2ನೇ ಪ್ರತಿವಾದಿಯ ಗಾರ್ಡಿಯನ್‌ನಾಗಿ ಸಹಾ 2ನೆ ಮುಂದರೆ ಮ್ಯಾನರ್, 1ನೇ ಪ್ರತಿವಾದಿ ಮಗ. ಗಾರ್ಡಿಯನ್ ತಂಜಿ 1ನೇ ಪ್ರತಿವಾದಿ 3 ಪದ್ಮಾವತಿ ಅವ್ವ. ಅಕ್ಕಣಿ ಅಣ್ಣಯ್ಯ ಯಾನೆ ಶಂಕ್ರನಾರಾಯಣಯ್ಯನ ವಿಧವೆ—ಉಡ್ಪಿ ತಾಲೂಕು ಮಟ್ಟು ಗ್ರಾಮದವರಿರುವವರು.

ವಾದಿಯು ಪ್ರತಿವಾದಿರ ಸೇರಿ ತಾ. 26.5.1952ನೇ ಈ ದಸ್ತಾವೇಜಿನ ಬಾಬ್ತು ಅಕ್ಷರಬಿ ಬಡ್ಡಿ ಕೂಡಾ ರೂಪ್ಯಾ 4799.10.0 ಕ್ಕೆ ದಾಕ್ಲೆ ಪಟ್ಟುರುವ ಮೇಲ್ಕಂಡ ವ್ಯಾಜ್ಯವು ತಾ. 19—12—1955ಕ್ಕೆ ಯಿಪ್ಪರುತ್ತಿದೆ-ಸದ್ರಿ ವ್ಯಾಜ್ಯದಲ್ಲಿ ನಿಮಗೆ ಉದಾಸರಣೆ ರಾಳ್ಳು ಮಾಡಿ ನ್ಯಸರಿಸುವುದಿದ್ದಲ್ಲಿ ಸದ್ರಿ ತಾ. 19—12—55ನೇ ದಿನ್ವ ಬೇಕ್ಕೆ 10 ಗಂಟೆಗೆ ಮೇಲ್ಕಂಡ ಕೋರ್ಟು ನುಂಗೆ ಸ್ವತಹಾ ಪ ವಕೀಲರ ಮುಖಾಂತ್ರ ಹಾಜ್ರಾಗಿ ಜಾವಿರುವಹಾಗೆಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ನಿವ್ಯಾಹಾಡಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

P. V. Achar
Vakil for Plaintiff.

ಉಡುಪಿ ತಾ. 6—12—55.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. 80/1955.

ಆನಂತರಾಜ ಶೆಟ್ಟಿ — ಅರ್ಜಿದಾರ.

1, ಜ್ಞಾಲಿನಿ ಹೆಂಗ್ಸು 2, ರನಿರಾಜ ಶೆಟ್ಟಿ 3, ಸುಶೀಲಕುಮಾರಿ 4, ಮನೋರಮಾ 5, ಸರಸ್ವತಿ 6, ನಿನಯ ಕುಮಾರಿ- ತಂದಿಂದ 6ನೆ ವರೆಗಿನವರು ಮ್ಯಾನರರು ಗಾರ್ಡಿಯನಷಿಪ ತಾಯಿ 1ನೆ ಎದ್ರಿರು. ಮೆಲ್ಲಿರೂ ಯಡರ್ಡೂರು ಅಂಚೆ ಮುಂಡೂರು ಗ್ರಾಮದ ಗುತ್ತಿನ ಮನೆಯವರಲ್ಲಿರುವವರು — ಯೆದ್ರಿರು.

ಸಂಬಂಧಪಟ್ಟ ಎಲ್ಲರಿಗೂ ಈ ಮೂಲಕ ತಿಳಿಸುವುದೇನೆಂದ್ರೆ.

ಪುತ್ತೂರು ತಾಲೂಕು ಯಡರ್ಡೂರು ಮಗಣೆ ಮುಂಡೂರು ಗ್ರಾಮದ ಗುತ್ತಿನಮನೆ ಯಲ್ಲಿರುತ್ತಿದ್ದ ಹಾಲ ಪುತಪಟ್ಟ ಯರೀಂಧರ ಶೆಟ್ಟಿಗೆ ಹೊರಗಿನಿಂದ ಬರತಕ್ಕ ಸಣಗಳನ್ನು ವಸೂಲು ಮಾಡುವಂತೆ ತನಗೆ ಪಾರಿಪತ್ಯವಿಕೇಟು ಕೊಡಿಸಬೇಕಾಗಿ ಅರ್ಜಿದಾರನು ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಅರ್ಜಿಯು ತಾ. 4-1-1956ಕ್ಕೆ ಇಟ್ಟಿದೆ. ಅಕ್ಕೀ ವಿಸುವವನು ಆ ದಿನ್ವ ಸುಮ್ಮಾ ಯಾ ವಕೀಲರ ಮುಖಾಂತ್ರ ಹಗಲು 11 ಗಂಟೆಗೆ ಹಾಜರಾಗಿ ತಮ್ಮ ಆಕ್ಷೇಪಣೆಗಳನ್ನು ನಾಖಲಿಸಿದ್ದಲ್ಲಿ ಅರ್ಜಿದಾರನು ಅಪೇಕ್ಷಿಸಿಸುವಂತೆ ಅವನ ಹೆಸರಲ್ಲಿ ವಾರಿಪತ್ಯವಿಕೇಟು ಕೊಡಲಾಗುವುದು ಯೆಂತ ಕೋರ್ಟು ಮಹಂತ್ರಿಯವರ ಈ ನೋಟೀಸನ್ನು ಕೊಟ್ಟಿವೆ.

ಸಪೂರ ಆನಂದ ರಾವ್.
ಅರ್ಜಿದಾರನ ವಕೀಲ.

ಪುತ್ತೂರು 6-12-1955.



(ಗಂನೇ ಪುಟದಿಂದ)

ದ ಆಡಳಿತ ಸೂತ್ರವನ್ನು ಕೈಗೆ ತೆಗೆದು ಕೊಂಡಿದ್ದ ಕಾಂಗ್ರೆಸು ಹೀಗಾಗಗೊಡ ದುವೇ ಎಂಬ ಸಂಶಯವಿದ್ದಿತು.

ಹೊಯ್ದಾಡುತ್ತಿದ್ದ ಈ ಸಂಸ್ಥಾನಿಕರಿಗೆ ಆಂಗ್ಲ ಸರಕಾರವು ಪಾಕಿಸ್ತಾನ ಅಥವಾ ಭಾರತಗಳಲ್ಲಿ ಯಾವುದಾದರೊಂದಕ್ಕೆ ಸೇರಿ ಹೋಗುವುದೇ ಸ್ವಂತ ಹಿತ ಹಾಗು ಪ್ರಜೆಗಳ ಕಲ್ಯಾಣ ದೃಷ್ಟಿಯಿಂದ ಯೋಗ್ಯವೆಂದು ಸಲಹೆ ಮಾಡಿತು. ಆದರೆ ಕೆಲವು ರಾಜ್ಯಗಳು (ಉದಾ: ಹೈದರಾಬಾದು) ಪ್ರತ್ಯೇಕ ಅಸ್ತಿತ್ವವು ಸಾಧ್ಯವೆಂದು ಭಾವಿಸಿದವು; ಆಗ ಸರ್ದಾರ್ ಪಟೇಲರು ವಹಿಸಿದ ಪಾತ್ರ ಎಲ್ಲರಿಗೂ ಗೊತ್ತಿದೆ. ಅವರಂದಾಗಿಯೇ ಐನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿದ್ದ ದೇಶೀಯ ಸಂಸ್ಥಾನಗಳನ್ನು ಏಳೆಂಟು ರಾಜ್ಯಗಳಲ್ಲಿ ಪುನರ್ಘಟಿಸಲು ಸಾಧ್ಯವಾಯಿತು.

ಕುಗ್ಗಿದ ವರ್ಚಸ್ಸು

ಅಂದಿನಿಂದ ಈ ಸಂಸ್ಥಾನಿಕರ ಲೌಕಿಕ ಶಕ್ತಿಯು ಕುಂದಿದೆ. ದೇಶದ ಪ್ರತಿಯೊಂದೂ ದೊಡ್ಡ ನಗರದಲ್ಲಿ ಭವ್ಯ ಅರಮನೆಗಳಿದ್ದ ನಿಜಾವ ರಂಥವರಿಗೆ ರಾಜಧಾನಿಯಲ್ಲೊಂದು ಮತ್ತು ದೇಶದ ಬೇರೆಯಾವುದಾದರೊಂದು ನಗರದಲ್ಲಿ ಒಂದು—ಹೀಗೆ ಎರಡು ಅರಮನೆಗಳನ್ನು ಮಾತ್ರ ಇಟ್ಟು ಕೊಳ್ಳಲು ಬಿಡಲಾಗಿದೆ. ಸಂಸ್ಥಾನಿಕರೊಡನಿದ್ದ ಅಮೂಲ್ಯ ರತ್ನಾಭರಣ ಹಾಗು ಇತರ ಅಲಂಕಾರ ವಸ್ತುಗಳಲ್ಲೆಲ್ಲ ರಾಜ್ಯದ ಸೊತ್ತು ಮತ್ತು ಸಂಸ್ಥಾನಿಕರ ಖಾಸಗಿ ಸೊತ್ತು ಎಂದು ವಿಭಜಿಸಲಾಗಿದೆ.

ಕೀರ್ತಿ ಸುತ್ತಿತರ ರಾಜ ವೈಭವ ಸೂಚಕ ಆಭರಣ, ಅಲಂಕಾರಗಳು ರಾಜ್ಯಕ್ಕೆ ಸೇರಿದವುಗಳೆಂದು ನಿರ್ಣಯಿಸಲ್ಪಟ್ಟು ಪ್ರತಿ ವರ್ಷವೂ ಕೇಂದ್ರ ಸರಕಾರ ಇವುಗಳ ಸಂಗ್ರಹವ ತನಿಖೆಯನ್ನು ಈಗ ನಡೆಸುತ್ತಿದೆ. ಬಡೋದೆ, ಕಾಶ್ಮೀರ ಮುಂತಾದ ರಾಜ್ಯಗಳಲ್ಲಿ ಸಂಸ್ಥಾನಿಕರ ಸಂಬಂಧವಿದ್ದ ಮತ್ತು ಅವಾರ ದ್ರವ್ಯ ರಾಶಿಯ ದ್ದ ವಿಶ್ವಸ್ತ ಮಂಡಳಗಳನ್ನು ಸರಕಾರ ನೇ ವಹಿಸಿಕೊಂಡು ಬರಬೇತ್ತಿದೆ. ಹಳೆಯ ಸಂಸ್ಥಾನಿಕರಿಗೆ ಸ್ವಂತ ಖರ್ಚಿಗೆ ಸ್ವಲ್ಪ ಹಣ ಕೊಡುತ್ತಿರುವುದೆಷ್ಟೊ ಅಷ್ಟೇ ಈಗ ಸಲ್ಲುತ್ತಿರುವ ಮರ್ಯಾದೆ; ಇದರ ಮೇಲೆ ಆದಾಯಕರ ಹೇರಲ್ಪಡುವುದಿಲ್ಲ ಎಂಬುದೇ ಲಾಭ.

ಕೊನೆಗಾಲ ಬಂದಿದೆ

ಆರ್ಥಿಕವಾಗಿ ಸಂಸ್ಥಾನಿಕರ ಸ್ಥಾನ ಮಾನ ತಗ್ಗಿದುದರಿಂದ ಲಲಿತ ಕಲೆಗಳಿಗೆ ಸಿಗುತ್ತಿದ್ದ ಪ್ರೋತ್ಸಾಹ ತುಂಬ ಕಡಿಮೆ ಯಾಯಿತೆಂಬುದು. ನಿಜ. ಸಂಗೀತ, ಚಿತ್ರ ಮುಂತಾದ ಶ್ರೇಷ್ಠ ಕಲೆಗಳನ್ನು ರಾಜ ಮಹಾರಾಜರುಗಳು ಧಾರಾಳವಾಗಿ ಪೋಷಿಸುತ್ತಿದ್ದರು. ಇಂದು ಕೇಂದ್ರ ಸರಕಾರವು ಈ ಬಗ್ಗೆ ತನ್ನ ಹೊಣೆಯಿದೆ ಎಂದು ತಿಳಿದುಕೊಂಡು ಸ್ವಲ್ಪ ಕೆಲಸ ವನ್ನು ಮಾಡುತ್ತಿದ್ದರೂ ಅದು ಹಿಂದಿನ ಮಟ್ಟಕ್ಕೆ ಬಂದಿಲ್ಲ; ಬಹುಶಃ ಬರಲಾರದು.

ತನ್ನ ಹಿಂದಿನ ವೈಭವಗಳಿಂದ ವಂಚಿತರಾದ ಹಳೆಯ ಸಂಸ್ಥಾನಿಕರಲ್ಲಿ ಈಗ ಕೆಲವರು ಶಾಸನಾಂಗದಲ್ಲಿ ವ್ಯಾತಿನಿಧ್ಯ ವನ್ನು ಪಡೆಯಲು ಪ್ರಯತ್ನಿಸಿ ಯಶಸ್ಸು ಗಳಿಸಿದ್ದಾರೆ; ಬೇರೆ ಕೆಲವರು ಭಾರತದ ವಿದೇಶ ರಾಯಭಾರ ವರ್ಗದಲ್ಲಿ ಕೆಲಸ ವನ್ನು ಪಡೆದಿದ್ದಾರೆ. ಹುಟ್ಟಿದಂದಿನಿಂದ ಲೇ ಗೌರವೋನ್ನತ ನೆಡವಳಿಕೆಯನ್ನಿಟ್ಟು ಕೊಂಡಿರುವ ಈ ರಾಜವಂಶಜರು ವಿದೇಶಗಳಲ್ಲಿ ಪ್ರತಿನಿಧಿತರ ಮುಂದೆ ವ್ಯವಹರಿಸಲು ತಕ್ಕವರೆಂದು ಸಿದ್ಧಗೊಂಡಿದೆ.

ವ್ಯಾಪಾರ ಕ್ಷೇತ್ರದಲ್ಲಿಯೂ ಅನೇಕ ಸಂಸ್ಥಾನಿಕರು ಕಾಲಿಟ್ಟಿದ್ದಾರೆ. ಬಂಗಾಳದಲ್ಲಿ ಕೆಲವು ಮಾಜಿ ಸಂಸ್ಥಾನಿಕರು ತಿಕಾರಿ ಕ್ಲಬ್ಬುಗಳನ್ನು ತೆರೆದು ವಿದೇಶಗಳಿಂದ ಬರುವ ಸ್ರವಾಸಿಕರ ಆತಿಥ್ಯಕ್ಕೆ ಸಿದ್ಧರಾಗಿ ನಿಂತಿದ್ದಾರೆ. ನವಾನಗರದ ಜಾಮ್ ಸಾಹೇಬರಂಥವರು ಸಂಯುಕ್ತ ರಾಷ್ಟ್ರ ಸಂಘದ ಅನೇಕ ಪ್ರಮುಖ ಸಭೆಗಳಲ್ಲಿ ಅಧ್ಯಕ್ಷ ಸ್ಥಾನವನ್ನು ಸಹ ಭಾರತ ಸರಕಾರದ ಪ್ರತಿನಿಧಿಯಾಗಿ ವಹಿಸಿದ್ದಾರೆ. ಆಗ ಎಲ್ಲರೂ ಅವರನ್ನು ಕಂಡು ಬೆಕ್ಕಿಸ ಬೆರಗಾಗುತ್ತಿದ್ದರು; ತುಂಬ ಅಕರ್ಷಣೆಯನ್ನು ಹೊಂದುತ್ತಿದ್ದರು. ಆದರ ಕಾರಣ ಜಾಮ್ ಸಾಹೇಬರು ಕಾರ್ಯನಿರ್ವಹಿಸುತ್ತಿದ್ದ ಪದ್ಧತಿಯ ನೈಪುಣ್ಯವಲ್ಲ—ಆವರ ಕೋಟಿಗೆ ಗುಂಡಿಯಾಗಿ ಸಿಕ್ಕಿಸಿದ್ದ ದೊಡ್ಡ ದೊಡ್ಡ ವಜ್ರದ ಹರಳುಗಳ ಥಳ ಥಳಿಸುವ ಹೊಳಪು!

—K. R N Swamy.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಸುಧೆ:—

ಬರೆದವರು: ವಾಗೀಶ. ಪ್ರಕಾಶಕರು: ಸುದರ್ಶನರು ಎಂಡ್ ಕೋ., ಆಲ್ಬರ್ಟ್ಸ್‌ರೋಡ್, ಬೆಂಗಳೂರು ೩. ಬೆಲೆ: ರೂ. ೧—೪—೦.

ಚತುರ ಮಾತಿನ, ಹುಚ್ಚು ಹಾಸ್ಯದ ಪದ್ಯಗಳು ಸಂಸ್ಕೃತ ಸಾಹಿತ್ಯದಲ್ಲಿ ಹೇರಳವಾಗಿ ಸಿಗುತ್ತವೆ. ''ವಾಗೀಶ'' ಎಂಬ ಕಾವ್ಯ ನಾಮಾಂಕಿತದಲ್ಲಿ ಶ್ರೀ ಎಚ್. ಎಂ. ರಾಮರಾಧ್ಯರು ಪ್ರಸ್ತುತ ಗ್ರಂಥದ ಮೂಲಕ ನಮಗೆ ಇಂಥ ಹಲವಾರು ಪದ್ಯಗಳ ಮಾಧುರಿಯನ್ನು ಕನ್ನಡದಲ್ಲಿ ಒದಗಿಸಿಕೊಟ್ಟಿವ್ವಾರೆ. ಮನಸ್ಸನ್ನು ಅರಳಿಸುವ ನಗುವೇ ಇಲ್ಲಿನ ಪದ್ಯಗಳ ಧ್ಯೇಯ. ಅವುಗಳಲ್ಲಿ ಹಾಸ್ಯರಸವು ಪ್ರಧಾನವಾಗಿದ್ದರೂ ಭಾವ ಬಂಧುರತೆಯೂ ಕಥನ ಕಾಶಲ್ಯವೂ ಅನೇಕವೆಳೆ ಮಿಂಚಿರುತ್ತದೆ. ವೈದ್ಯರಾಜನನ್ನು (''ನೀನು ಯಮರಾಗಣ್ಣ'') ಎಂದೆನ್ನುವ ಪದ್ಯವನ್ನು ನೋಡಿರಿ—

ಕಾಣದೇ ಕಿಸುಬಿಂದು ಮಸಣದಲಿ ಹೊಗೆಯೆಂದು ಹೆಣ್ಣು ಸದ್ದೊಂದು ಗಂಡನ ಕೇಳಿತು; ಸ್ರಾಯಶಃ ಸಮ್ಮೂರ ವೈದ್ಯನು ಪರಸ್ಥಳಕೆ ಹೋಗಿರುವನೇನೊ—ಎಂದದು ನೋಳಿತು.

ಇಲ್ಲಿನ ವ್ಯಂಗ್ಯ ಬಯಲೆ ಮಾರ್ಮಿಕವಾಗಿದೆ. ಯಮನು ಹರಣವನ್ನಷ್ಟೇ ತೆಗೆದುಕೊಳ್ಳುವನಾದರೆ ವೈದ್ಯನು ಹರಣದೊಡನೆ ಹಣವನ್ನೂ ಕೀಳುತ್ತಾನೆ ಎಂದಿಲ್ಲಿಯ ತಾತ್ಪರ್ಯ! ಇನ್ನೊಂದು ಕತೆ ಕೇಳಿ. ಬುಂಡಯ್ಯನನ್ನು ಅವನ ಹೆಂಡತಿ ಗುಂಡಮ್ಮ ಮಡಕೆ ಳಿಂದ ಅವ ಬಿಡೆಯುವನವರೆಗೆ ಹೊಡೆಯುತ್ತಿದ್ದಳು. ಇದರಿಂದ ಬುಂಡಯ್ಯ ತುಂಬ ನೊಂದುಕೊಳ್ಳುತ್ತಿದ್ದನು. ಒಮ್ಮೆ ಆತ ನೆರೆಯೂರಿಗೆ ಎತ್ತು ಕೊಳ್ಳಲು ಹೋದಾಗ ಗೆಳೆಯನ ಮನೆಯ ಲ್ಲಿಳಿದ. ಆ ಗೆಳೆಯನ ಹೆಂಡತಿಗೆ ಸಹ ಗಂಡನ ಮೇಲೆ ಯಾವಾಗಲೂ ಸಿಟ್ಟು. ಆತಳ ಮೂಡುಕೆಗಳಿಂದ ಗಂಡನಿಗೆ ಮೊಡೆಯುವ ಉಭ್ಯಾಸ. ಬುಂಡಯ್ಯನ ಎದುರೇ ಆಕೆ ಗಂಡನನ್ನು ಹೊಡೆದಳು. ಮಡಕೆ ಒಡೆಯಿತು; ಒಡನೆಯೇ ಆ ಹೆಂಡತಿ ''ಒಡೆದ ಮಡಕೆಯ ಬೆಲೆಕೊಡು; ಇಲ್ಲದಿದ್ದರೆ ಬಿಡುವುದಿಲ್ಲ'' ಎನ್ನ ಹತ್ತಿದಳು! ''ಇಂಥವಳಿಗಿಂತ ನನ್ನ ಹೆಂಡತಿಯೇ ಲೇಸು'' ಎಂಬ ಪಾಠವನ್ನೂ ಬುಂಡಯ್ಯ ''ಎಲ್ಲರ ಮನೆಯ ದೋಸೆಯೂ ತೂತು'' ಎಂಬ ನಾಣ್ನುಡಿಯೊಂದಿಗೆ ಕಲಿತು ಕೊಂಡ. ಹೀಗಿರುವ ಪತ್ರ್ಯೇಕತೆ ಸ್ವಾರಸ್ಯ ಪ್ರಸಂಗಗಳನ್ನು ಈ ಪುಸ್ತಕದ ಪದ್ಯಗಳು ವರ್ಣಿಸುತ್ತವೆ; ಸಾಮಾನ್ಯ ಓದುಗನನ್ನು ಸಹ ಮೆಚ್ಚಿಸುವಷ್ಟು ಅವು ಸರಳವಾಗಿವೆ. ಎಲ್ಲಿಯಾದರೂ ಏಜಾರ್ಥ ಸುಲಭದಲ್ಲಿ ಹೊಳೆಯದಿದ್ದರೆ ಕೊನೆಗೆ ಅರ್ಥವಿವರಣೆಯಿದೆ; ಅಲ್ಲದೆ ಕೆಲವು ಪದ್ಯಗಳ ಹಿನ್ನೆಲೆಯೂ ವರ್ಣಿಸಲ್ಪಟ್ಟಿದೆ. ಇದರಿಂದ ಪುಸ್ತಕನನ್ನೋಮವನವರೆಲ್ಲ ಕಪ್ಪವೂ ನೀಗುತ್ತದೆ. —ಕು.

ಪ್ರಕಟಣೆ

ರೂಪಾಯಿ 1000 ತನಕ ಸಾಲಗಳು ಆಸ್ತಿ ಜವಾಬ್ದಾರಿ ಆಧಾರ ಜ್ಯಾಮೀನುಗಳಿಲ್ಲದೇ ನಿಮ್ಮ ದಸ್ತಖತಿನಿಂದಲೇ ದೊರೆಯುವುವು. ಹಲವರು ಈಗಾಗಲೇ ಪಡೆದಿರುತ್ತಾರೆ. ವಿವರಗಳಿಗೆ ಇಂಗ್ಲಿಷಿನಲ್ಲಿ ಬರೆಯಿರಿ:—

Bombay Mercantile Co.
Bombay--23.

ನಾಲ ಸ್ವಂತ ಜವಾಬ್ದಾರಿಯ ಮೇಲೆ ದೊರೆಯುತ್ತದೆ. ಸುಲಭ ಕಂತಿನ ಮರುಪಾವತಿ. ಇಂಗ್ಲಿಷಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿ ಕೊಳ್ಳುವುದು.

P. O. Box No. 3219, BOMBAY 3-





ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ.

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್ಸ್

ಮಂಗಳೂರು—3.

ಅಸಾಧಾರಣ ಪಾಂಡಿತ್ಯವುಳ್ಳ ಗ್ರಂಥಕರ್ತರೂ ಆದ ಶ್ರೀ. ಎ.ಎಸ್.ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್. ಬಾರ್.ಎಟ್.ಲಾ. ಎ. ಎಸ್.ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಅನುವಾದಕರು—ಶ್ರೀ. ಕೊರಡ್ಕಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತೂ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

151 ಕತೆಗಳು ಬೆಲೆ ರೂ. 1-12-0

ನವಭಾರತ ಪುಸ್ತಕ ಭಂಡಾರ, ಮದ್ರಾಸ್

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 22—12—1955

ಸಂಚಿಕೆ ೧೭
NO. 17

ಕೋರೆ ದಾಡೆಯ ಬೇಲಿ

"ಸೀಟೊ", "ನಾಟೊ", "ಮೇಟೊ" "ವಾರ್ಸೊ" ಇವೆಲ್ಲ ಹೆಸರುಗಳನ್ನು ಕೇಳುವಾಗ ವಿಚಿತ್ರ ಅನುಭವವಾಗುತ್ತದೆ. ಅಲ್ಲವೆ? ಪಾಶ್ಚಾತ್ಯ ರಾಷ್ಟ್ರಗಳವರು-ರಶ್ಯವೂ ಇದರಲ್ಲಿ ಬರುತ್ತದೆ—ತಂತಮ್ಮ "ಸ್ನೇಹಿತ"ರನ್ನು ಕೂಡಿಕೊಂಡು ಮಾಡಿಕೊಂಡ ಸೈನಿಕ ಒಪ್ಪಂದಗಳನ್ನು ಸಂಕ್ಷಿಪ್ತದಲ್ಲಿ ಹೀಗೆ ಕರೆಯಲಾಗುತ್ತದೆ. ಇವಲ್ಲದೆ ಬೇರೆ ಅನೇಕ ಸೈನಿಕ ಒಡಂಬಡಿಕೆಗಳು ಇರುವುವಾದರೂ ಮೇಲೆ ಹೇಳಿದ ನಾಲ್ಕು ಒಪ್ಪಂದಗಳು ಬಹಳ ವ್ಯಾಮುಖ್ಯತೆಯನ್ನು ರಾಜಕೀಯ ದೃಷ್ಟಿಯಿಂದ ಪಡೆಯುತ್ತವೆ.

ಭೂಪಟವನ್ನು ಬಿಡಿಸಿ ಇಟ್ಟುಕೊಂಡರೆ ಪೋರ್ಚುಗಾಲಿನ ಭೂಭಾಗದಿಂದ ಹೊಂಟು ತುರ್ಕಿಸ್ತಾನದ ವರೆಗೆ ಉತ್ತರ ಅಟ್ಲಾಂಟಿಕ ಒಪ್ಪಂದ ರಾಷ್ಟ್ರಗಳು ವ್ಯಾಪಿಸಿರುವುದನ್ನು ನೋಡಬಹುದು; ಅಲ್ಲಿಂದ ಪಾಕಿಸ್ತಾನದ ವರೆಗೆ ಬಗ್ದಾದ್ ಒಪ್ಪಂದದ ರಾಷ್ಟ್ರಗಳ ಸರಪಣಿ ಜಾಚಿವೆ; ಭಾರತ, ಬರ್ಮಾ ಮತ್ತು ಇಂಡೋಚೀನಗಳನ್ನು ನಡುವೆ ಬಿಟ್ಟು ಪಾಕಿಸ್ತಾನದಿಂದ ಫಿಲಿಪೀನಿನ ವರೆಗೆ ಆಗ್ನೇಯ ಏಶ್ಯಾ ಒಪ್ಪಂದ ರಾಷ್ಟ್ರಗಳ ಪ್ರದೇಶವಿದೆ. ಕುತೂಹಲವನ್ನು ಕೆರಳಿಸುವ ಜೋದ್ಯದ ಅಂಶವೆಂದರೆ ಇವೆಲ್ಲ ಒಪ್ಪಂದಗಳಲ್ಲಿಯೂ ಅಮೇರಿಕ ಪಡೆದಿರುವ ಸದಸ್ಯತನ. ಇದರೊಂದಿಗೆ ನ್ಯೂಜೀಲೆಂಡ್, ಆಸ್ಟ್ರೇಲಿಯ, ಬ್ರಿಟನ್, ಫ್ರಾನ್ಸ್ ಮುಂತಾದವುಗಳು ಆಗ್ನೇಯ ಏಶ್ಯಪರಕ್ಷಣೆಯಲ್ಲಿತೋರಿಸುತ್ತಿರುವ ಆಸಕ್ತಿಯೂ ವಿಚಿತ್ರ!

ಅಮೇರಿಕವು ವೈಯಕ್ತಿಕವಾಗಿ ಪಾಕಿಸ್ತಾನ ಮುಂತಾದ ಹಲವಾರು ದೇಶಗಳೊಡನೆ ಸೈನಿಕ ಒಪ್ಪಂದಗಳನ್ನು ಮಾಡಿಕೊಂಡಿದೆ; ಅರಬ ಗುಂಪಿನ ರಾಷ್ಟ್ರಗಳಾದ ಸಿರಿಯಾ, ಇಜಿಪ್ಟ್ ಇತ್ಯಾದಿಗಳೂ ತಂತಮ್ಮಲ್ಲಿ ಇಂಥ ಒಪ್ಪಂದಗಳನ್ನು ಮಾಡಿರುತ್ತವೆ. ಕಮ್ಯುನಿಸ್ಟ್ ಗುಂಪಿನ ಪ್ರಬಲ ರಾಷ್ಟ್ರಗಳಾದ ರಶ್ಯ ಮತ್ತು ಕೆಂಪು ಚೀನಗಳು ಪರಸ್ಪರ ಸೈನಿಕ ಒಪ್ಪಂದಗಳಿಂದ ಬಿಗಿಯಲ್ಪಟ್ಟಿವೆ; ಇದಲ್ಲದೆ ವಾರ್ಸಾದಲ್ಲಿ ಪೂರ್ವ ಯುರೋಪಿನ ರಾಷ್ಟ್ರಗಳೆಲ್ಲವನ್ನೂ ರಶ್ಯವು ತನ್ನ ಕೂಟದ ಸೈನಿಕ ಒಪ್ಪಂದಕ್ಕೆ ಸೇರಿಸಿಕೊಂಡಿದೆ. ದಕ್ಷಿಣ ಅಮೇರಿಕದ ರಾಷ್ಟ್ರಗಳು ಸಹ ಪರಸ್ಪರ ಸೈನಿಕ ಒಪ್ಪಂದಗಳನ್ನು ಮಾಡಿಕೊಂಡಿರುವುದು ಜಗಜ್ಜನಿತ ವಿಷಯ.

ರಾಷ್ಟ್ರಗಳು ಈ ಬಗೆಯ ಸೈನಿಕ ಒಪ್ಪಂದಗಳನ್ನು ಮಾಡಿಕೊಳ್ಳುವ ಉದ್ದೇಶವೇನು? ಶತ್ರುಪಕ್ಷದವರಿಂದ ಪಾಳಿಯಾದರೆ ಅದನ್ನು ಸಾಮೂಹಿಕ ಸಹಾಯದ ಬಲದಿಂದ ತಕ್ಷಣ ಪ್ರತಿಭಟಿಸುವುದು ಸೈನಿಕ ಒಪ್ಪಂದದ ವ್ಯಾವಹಾರಿಕ ಮುಖವಾದರೆ ಶತ್ರುಗಳು ಎಂದೆಂದಿಗೂ ಧಾಳಿಯ ವಿಚಾರವನ್ನೆ ಮಾಡದಂತೆ ತನ್ನ ಶಕ್ತಿ ಪ್ರದರ್ಶನ ಬಲದಿಂದ ಅವರ ಎದೆ ನಡುಗಿಸುವುದು ಮನೋವೈಜ್ಞಾನಿಕ ಮಹತ್ವದ ಮುಖ. ಇದರಿಂದಾಗುವ ಅನಾಹುತವೆಂದರೆ ಶತ್ರುಗಳಿರುವರೆಂದೂ ಅವರು ಪ್ರಬಲರಾಗಿರುವರೆಂದೂ ಪ್ರಜೆಗಳಲ್ಲಿ ಹುಟ್ಟಿಕೊಳ್ಳುವ ಭಯ; ಹಾಗು ಎಲ್ಲ ಚಟುವಟಿಕೆಗಳನ್ನೂ ಸೈನಿಕ ಸಲಕರಣೆಗಳ ಉತ್ಪಾದನೆಗಾಗಿ ಮೀಸಲಿರಿಸುವ ಚಟ.

ಪಾಶ್ಚಾತ್ಯ ರಾಷ್ಟ್ರಗಳೂ ರಶ್ಯವೂ ಏನೇ ಹೇಳುತ್ತಿರಲಿ—ಭಾರತ ಮುಂತಾದ ಕೆಲವು ತಟಸ್ಥ ರಾಷ್ಟ್ರಗಳು ಈ ಸೈನಿಕ ಒಪ್ಪಂದಗಳಿಂದ ಲೋಕ ಕ್ಷೇಮವಾಗಲಾರದು ಎಂದು ಅಭಿಪ್ರಾಯ ಪಡುತ್ತವೆ. ಪ್ರಧಾನಿ ನೆಹರುಗಳು ಇದೇ ಅನೇಕ ದಿನಾಂಕ ಬಗ್ದಾದ್ ಒಪ್ಪಂದದ ಕುರಿತು ಮಾತನಾಡುವಾಗ "ಶಾಂತಿ ಮತ್ತು ಭದ್ರತೆಯ ದೃಷ್ಟಿಯಿಂದ ಇಂಥ ಸೈನಿಕ ಒಪ್ಪಂದಗಳಾಗುತ್ತಿರುವುದು ಶೋಚನೀಯ" ಎಂದಿದ್ದಾರೆ. ಅದು ಸತ್ಯವೆಷ್ಟಾದ ವಿಷಯವೆಂದು ಹೇಳುತ್ತಾ ಬ್ರಿಟನು ಈ ಒಪ್ಪಂದದಲ್ಲಿ ಭಾಗಿಯಾಗಿರುವುದಕ್ಕೆ ಭಾರತವು ನಿಷೇದನ್ನು ಸೂಚಿಸಿದೆ. ಇರಾನು ಸೇರಿಕೊಂಡುದಕ್ಕೆ ರಶ್ಯ ತನ್ನ ಪ್ರತಿಭಟನೆ ನ್ಯಕ್ತಮಾಡಿದೆ.

ಅಸಂಕ್ರೋಕ್ತ ಮಾದರಿಯ ನಿಷೇಧ ಪತ್ರಗಳ ಸಾಮಾನ್ಯವಾಗಿ ಸೈನಿಕ ಒಪ್ಪಂದಗಳನ್ನು ಮಾಡಿಕೊಳ್ಳುವಾಗ, ಒಪ್ಪಂದದಿಂದ ಆಪಾಯವುಂಟೆನ್ನುವ ರಾಷ್ಟ್ರಗಳಿಂದ ಬರುವುದು ತೀರ ಸ್ವಾಭಾವಿಕ. ಆದರೆ ಭಾರತದಂಥ ರಾಷ್ಟ್ರವು ತನ್ನ ನಿಷೇಧವನ್ನು ಸೂಚಿಸುವಾಗ ಸೈನಿಕ ತಳಹದಿಯ ಮೇಲೆ ನಿಂತುಕೊಂಡಿರುವುದು ಅನೇಕ ಸಲ ವ್ಯಕ್ತವಾಗಿದೆ. ಅದು ಭಯವನ್ನೆ ಆಶ್ರಯಿಸಿರುವ ಚಿಕಿತ್ಸಾ ಕ್ರಮವನ್ನು ಮೆಚ್ಚಿಕೊಳ್ಳುತ್ತಿಲ್ಲ; ಅತಿ ಹೆಚ್ಚಿನ ಅವಿಶ್ವಾಸ ಪಟ್ಟುಕೊಳ್ಳುವುದು ಅವಿವೇಕವೆಂದೇ ಅದರ ವಿಶ್ವಾಸ.

ಆದುದರಿಂದಲೇ ಅಧ್ಯಕ್ಷ ಐಸೆನ್‌ಹೋವರರು ಪಾಕಿಸ್ತಾನಕ್ಕೆ ಕೊಟ್ಟಂತೆ ನಿಮಗೂ ಸೈನಿಕ ಸಹಾಯ ಕೊಡುತ್ತೇವೆ ಎಂದು ರಾಜಗೋಪಾಲಾಚಾರಿಯರಲ್ಲಿ ಹೇಳಿದಾಗ ನೆಹರುಗಳು ಅದನ್ನು ನಿರಾಕರಿಸುತ್ತಾ "ಒಂದು ಸೈನಿಕ ಒಪ್ಪಂದವನ್ನು ಇನ್ನೊಂದರಿಂದ ಬುಡಮೇಲು ಮಾಡಿ ಬಿಡಬಹುದೆಂದು ಭಾವಿಸುವುದಾಗಲೀ ಒಂದರಿಂದಾಗುವ ಆಪಾಯವನ್ನು ಹಾಗೆಆಪಾಯವಿದೆ ಎಂದ ರಾಷ್ಟ್ರಕ್ಕೆ ಸೈನಿಕ ಸಹಾಯ ಸಲ್ಲಿಸುವುದರಿಂದಾಗಲೀ ನಿವಾರಿಸಲು ಸಾಧ್ಯವಿಲ್ಲ" ಎಂದರು.

ಮೊನ್ನೆ ಈ ನೇ ದಿನಾಂಕ ಸಂಯುಕ್ತ ರಾಷ್ಟ್ರ ಸುಭದ ರಾಜಕೀಯ ಸಮಿತಿಯಲ್ಲಿ ಮಾತನಾಡುವಾಗ ಭಾರತದ ಪ್ರತಿನಿಧಿ ಶ್ರೀ. ವಿ. ಕೆ. ಕೃಷ್ಣ ಮೆನೊನ್ನರು ಇದೇ ಮಾತನ್ನು ಮತ್ತಷ್ಟು ಸ್ಪಷ್ಟರೂಪದಲ್ಲಿ ಒತ್ತಿ ಹೇಳಿದರು. "ಕೆಟ್ಟುಪ್ಪನನ್ನು ಕೆಟ್ಟದರಿಂದಲೇ ಪರಿಹರಿಸುವ ಮಾರ್ಗ ತೆರೆದಿಲ್ಲ" ಎನ್ನುತ್ತಾ ಅವರು "ಯುದ್ಧ ಪದ್ಧತಿಯನ್ನು ಅನುಸರಿಸಿ ಶಾಂತಿಯನ್ನು ಸ್ಥಾಪಿಸುವ" ಇಡೀ ವ್ಯವಸ್ಥೆಯನ್ನು ಖಂಡಿಸಿದರು.

ಸೈನಿಕ ಒಪ್ಪಂದಗಳನ್ನು ಸಂರಕ್ಷಣೆಯ ಉದ್ದೇಶದಿಂದ ಮಾಡಲಾಗುತ್ತದೆ ಎಂದು ಸಾಶ್ಚಾತ್ಯರು ವಾದ; ಆದರೆ "ಯಾರ ವಿರುದ್ಧ ಸಂರಕ್ಷಣೆ?" ಎಂದು ಮೆನೊನ್ನರು ಕೇಳುತ್ತಾರೆ. ಯದ್ಧವನ್ನು ಮಾಡಬೇಕೆಂಬುದೇ ಒಂದು ಹವ್ಯಾಸವಾದರೆ, ಕಾಗದದಲ್ಲಿ ಎಷ್ಟೇ ಘನಗಂಭೀರವಾದ ಒಡಂಬಡಿಕೆಯಿದ್ದರೂ ಅದನ್ನು ಮುರಿದು ಬಿಡುವುದು, ಹಾಗೆ ಶಾಂತಿ ಭಂಗಿಸುವುದು ಕಷ್ಟವಾದುದಲ್ಲ. ಒಪ್ಪಂದಕ್ಕೆ ಬಂದ ಬಳಿಕ ಅದನ್ನು ಮುರಿಯುವುದು "ಸಾಧ" ಎಂಬ ಮಾದರಿಯ ಸೈನಿಕ ಮೂಲ್ಯ ರಾಷ್ಟ್ರಗಳಲ್ಲಿ ಇರುವುದು ಹೌದಾದರೆ, ಸೈನಿಕ ಒಪ್ಪಂದಗಳನ್ನು ಮಾಡಿಕೊಳ್ಳದೆ, "ಎಲ್ಲರೂ ನಮ್ಮ ಮಿತ್ರರು" ಎಂದು ಭಾವಿಸಬಾರದೇಕೆ?

ಇನ್ನೂ ಒಂದು ಮಾತು: ಅಣು ಯುಗದಲ್ಲಿ ಸಾಂಪ್ರದಾಯಿಕ ಶಸ್ತ್ರಗಳ ಕುರಿತು ಮಾಡಿಕೊಳ್ಳುವ ಒಪ್ಪಂದಗಳಿಗೇನು ಮಹತ್ವ ಬಂದೀತು? ಅಮೇರಿಕದ ಸಂಗ್ರಹದಲ್ಲಿರುವ ಬಾಂಬುಬಂದೂಕನೆಯೇ ಅದು ಜನಾನಿನ ಮೇಲೆ ಅವನ್ನು ಪ್ರಯೋಗಿಸಿ ದ್ವಿತೀಯ ಮಹಾ ಯುದ್ಧವನ್ನು ಒಂದೇ ದಿನದಲ್ಲಿ ನಿಲ್ಲಿಸಿಬಿಟ್ಟೀತು! ಈಗ ಇಷ್ಟು ಸಹ ಕಷ್ಟವಿಲ್ಲ—ಬಾಂಬುಗಳ ತಯಾರಿಕೆಯಲ್ಲಿ ಎಷ್ಟೋ ಪ್ರಗತಿಯಾಗಿರುವುದರಿಂದ ಸೈನಿಕರನ್ನು ಶತ್ರುಗಳೆದುರು ತಂದು ನಿಲ್ಲಿಸುವಷ್ಟು ಹೊತ್ತಿನೊಳಗೆ ಯುದ್ಧದ ಪರಿಣಾಮವನ್ನು ಒಂದೋ ಹಾಗೆ-ಅಥವಾ ಹೀಗೆ ಸಾರಿಬಿಡಬಹುದು.

ಆದರೂ ಪಾಶ್ಚಾತ್ಯ ರಾಷ್ಟ್ರಗಳು ಇಂಥ ಒಡಂಬಡಿಕೆಗಳಿಗೆ ಬೆಲೆ ಕೊಡುತ್ತಿರುವುದೇಕೆ? ಹೆಸರಿಗೆ ಮಾತ್ರ ಯುನೈಟೆಡ್ ನೇಷನ್ಸ್ ಸಮ್ಮನಿ ಆನಾಹುತದ ವಿರುದ್ಧ ಹೋರಾಟ" ಎಂದು ಇಂಥ ಸೈನಿಕ ಒಪ್ಪಂದಗಳನ್ನು ಅವು ವರ್ಣಿಸುತ್ತವೆ. ಆದರೆ ಅಂತಾರಾದಿಂದ ಮನಿಲಾದ ವರೆಗೆ ಕಮ್ಯುನಿಸ್ಟರು ಪ್ರಾಬಲ್ಯಕ್ಕೆ ಬಂದಿರುವುದೆಲ್ಲಿ? ರಶ್ಯ ಚೀನಗಳ ಮಟ್ಟಿಗೆ ಅಣು ಶಸ್ತ್ರವನ್ನು ಪ್ರಯೋಗಿಸುವುದೇ ಮದ್ದು ಹೊರತು ಈ ಸೈನಿಕ ಒಪ್ಪಂದಗಳ ಕಾರ್ಯಾಚರಣೆ ನಿಷ್ಪ್ರಯೋಜಕ. ಏಶ್ಯದ ಬಡ ರಾಷ್ಟ್ರಗಳ ಮಟ್ಟಿಗೆ ಮಾತ್ರ ಇವುಗಳು ಪಾಶ್ಚಾತ್ಯರ ನೆರವಿಗೆ ಬರಬಹುದು.

ಏಶ್ಯದ ರಾಷ್ಟ್ರಗಳಲ್ಲಿ ಈಗ ರಾಷ್ಟ್ರೀಯ ಮನೋಭಾವನೆ ಜಾಗೃತವಾಗಿದೆ; ಅವುಗಳಲ್ಲಿ ಭಾರತ, ಬರ್ಮಾ, ಇಂಡೋಚೀನ ದಂಥವು ಸ್ವತಂತ್ರ ಧೋರಣೆಯನ್ನು

(೭ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿ.
ಸ್ಥಾಪನೆ: ೧೯೨೬] [ಸ್ಥಾನ ಕಾರ್ಯಾಲಯ: ಉಡುಪಿ, ದ. ಕೆನರಾ.

ಮನೆಯಂತಿರುವ ಸ್ಥಳ ಬೇರೊಂದಿಲ್ಲ.

ಸುಖ, ಸೌಕರ್ಯ, ಶಾಂತಿಗಳಿಗೆ ನಿಜವಾಗಿಯೂ ಮನೆಯೇ ಅತ್ಯುತ್ತಮ ಸ್ಥಾನ. ಆದರೆ ತಮ್ಮ ಹಣವನ್ನು ಕಾಪಾಡಿಕೊಳ್ಳಲು ಅದು ಅತ್ಯುತ್ತಮ ಸ್ಥಳವಾಗದು. ನಮ್ಮ ಬ್ಯಾಂಕಿನಲ್ಲಿ ಒಂದು "ಸೇವಿಂಗ್ಸ್ ಬ್ಯಾಂಕ್" ಲೆಕ್ಕವನ್ನು ತೆರೆಯುವುದು ಜಾಣ್ಮೆಯ ಕಾರ್ಯವಾಗದು! ಸ್ವಲ್ಪವೇ ಹಣದಿಂದ ನಮ್ಮಲ್ಲಿ ಲೆಕ್ಕ ತೆರೆಯಬಹುದು. ನಮ್ಮ ನೌಕರರು, ನಾವು ನಿಮಗೆ ಸಹಕರಿಸಬಹುದಾದ ಅನೇಕ ರೀತಿಗಳನ್ನು ಸೂಚಿಸಲು ಸಿದ್ಧರಾಗಿರುವರು.

ಚಲಾವಣೆ ಭಂಡವಾಳ ರೂ. ೭,೫೦,೦೦,೦೦೦ಗೂ ಮಿಕ್ಕಿದೆ.

THE CANARA INDUSTRIAL & BANKING SYNDICATE LTD.
Estd: 1925] [Head Office: UDIPI, S. India.

ಸೋವಿಯೆಟಿನೊಡನೆ ಭಾರತದ ಗೆಳೆತನ

ಪಾಶ್ಚಾತ್ಯ ರಾಷ್ಟ್ರಗಳ ಸಂಶಯಗ್ರಸ್ತ ಆಕ್ಷೇಪಗಳಿಗೆ ಉತ್ತರ

ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವೆಂದು ನಂಬಿಕೊಂಡಿರುವ ನಮ್ಮ ಪಾಲಿಗೆ ಜಗತ್ತಿನ ಮಹಾ ರಾಷ್ಟ್ರವೆಂದೆ ನಿಸುವುದಕ್ಕಿಂತಲೂ ನೆರೆ ರಾಷ್ಟ್ರವೆಂದೇ ತೋರುವ ರಷ್ಯದ ಪ್ರಮುಖ ಧುರೀಣರು ಪರಿವಾರ ಸಮೇತ ಭಾರತದಲ್ಲಿ ಸಂಚರಿಸಿ ಹೋದ ಬಳಿಕ, "ಮುಂದೇನು?" ಎಂಬ ಪ್ರಶ್ನೆ ಎದ್ದಿರುತ್ತದೆ.

ಭಾರತ ಸರಕಾರದವರೂ ಭಾರತೀಯರೂ ಅತ್ಯಂತ ಸಂಭ್ರಮದ ಸ್ವಾಗತವನ್ನು ರಷ್ಯದ ರಾಜಕೀಯ ಪರಿವಾರಕ್ಕೆ ಕೊಟ್ಟರು ಅತಿಥಿ ಸತ್ಕಾರದಲ್ಲಿ ಜನರೂ ಸರಕಾರದ ನೇತಾರರೂ ಸ್ವಲ್ಪವೂ ಅಪರ್ಣ್ಯವನ್ನು ತೋರಿಸಲಿಲ್ಲ. ಸ್ನೇಹಕ್ಕೆ ತಿಲಾಂಜಲಿಷ್ಟವರೂ ಕುಂದು ಬರುವಂತೆ ಅವರು ನಡೆದುಕೊಳ್ಳಲಿಲ್ಲ—ಎಲ್ಲ ನಿಜ ಆದರೆ ಇದರ ಪರಿಣಾಮ: ನುಖಕರವಾಗಿ ಕಂಡು ಬರುತ್ತದೆಯೆ ಎಂಬುದೀಗ ವಿಚಾರಿಸಬೇಕಾದ ವಿಷಯ.

ಸಂಶಯದ ವಾತಾವರಣ

ರಷ್ಯದ ನಾಯಕರಿಗೆ ಭಾರತೀಯರು ಹಾಗು ಅವರನ್ನು ಪ್ರತಿನಿಧಿಸುವ ಸರಕಾರದವರು ಆಮಂತ್ರಣವನ್ನಿತ್ತು ಸ್ವಾಗತಿಸುವುದೆಂದರೆ ಪಾಶ್ಚಾತ್ಯ ರಾಷ್ಟ್ರಗಳನ್ನು ಧಿಕ್ಕರಿಸಿದಂತೆಯೇ ಅಲ್ಲವೆ? ನೆಹರುಗಳು ಕಮ್ಯೂನಿಸ್ಟರಾದ ರೀತಿಯೇ ಅರ್ಥವಲ್ಲವೆ? ಕಟಿಸ್ಥೆ ನೀತಿಯನ್ನು ಬಿಟ್ಟು ಭಾರತವು "ಕೆಂಪು" ತಾರೆಯ ವರ್ಚಸ್ಸಿಗೆ ಬಲಿಬಿದ್ದಿತೆಂದು ಇದರ ಗೂಢ ವಲ್ಲವೆ? ಎಂದು ಮುಂತಾಗಿ ಬಗೆ ಬಗೆಯಾಗಿ ಅಮೇರಿಕ ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರಶ್ನಿಸಲಾಗುತ್ತಿದೆ. ಅಲ್ಲಿಗೆ ಭಾರತದ ಕುರಿತು ಸಂಶಯ ವಾತಾವರಣವೇ ತುಂಬಿದೆ.

ಭಾರತವನ್ನು ಅಮೇರಿಕವಾಗಲೀ ಇತರ ಪಾಶ್ಚಾತ್ಯ ರಾಷ್ಟ್ರಗಳಾಗಲೀ ಎಂದೂ ಸರಿಯಾಗಿ ಅರ್ಥಮಾಡಿಕೊಂಡಿರಲಿಲ್ಲ. (ರಷ್ಯವೂ ಇದಕ್ಕೆ ಅಪವಾದವಲ್ಲ.) ಆದರೆ ಅವುಗಳ ಸಂಶಯವು ವಿಶೇಷವಾಗಿ ಬಲಗೊಳ್ಳುವಂತೆ ಈಗ ಘಟನೆಗಳು ಜರಗಿವೆ. ಇಂಥ ಶಂಕೆಗೆ ಏನಾದರೂ ನಿಜವಾದ ಆಧಾರವಿದೆಯೆ, ನಮ್ಮ ನಿಲುವಿನ ಕುರಿತು ಮಾಡುವ ಟೀಕೆಗಳಲ್ಲಿ ಸತ್ಯಾಂಶವಿದೆಯೆ:—ವಿಚಾರಿಸೋಣ!

ಸಂಭ್ರಮದ ಸ್ವಾಗತವನ್ನು ಭಾರತೀಯರು ಕಮ್ಯುನಿಸ್ಟರಿಗೆ—ಅಂದರೆ ರಷ್ಯದ ನಾಯಕರಿಗೆ—ಕೊಟ್ಟರು, ನಿಜ. ಇದರಲ್ಲಿ ಪಾಶ್ಚಾತ್ಯರ ವಿರುದ್ಧ ಒಳಸಂಚು ನಡೆಸುವ ಉದ್ದೇಶವಿತ್ತೆ? ಎಂದಿಗೂ ಇಲ್ಲ. ಎಲ್ಲ ಭಾರತೀಯರೂ ಪ್ರಧಾನಿ ನೆಹರೂ ಗಳಿಗೆ ರಷ್ಯದಲ್ಲಿ ಸ್ವಾಗತದ ವೈಭವನನ್ನು ಕೇಳಿ, ಅವನ್ನು ವಿವರಿಸುವ ಉತ್ಸಾಹವನ್ನಷ್ಟೆ ತಮ್ಮ ಅತಿಥ್ಯದಲ್ಲಿ ತೋರಿಸಿದ್ದಾರೆ. ಇದು ನೆಹರುಗಳಿಗೆ ದೊರೆತ ಅದರಕ್ಕೆ ಪ್ರತಿಯಾಗಿ ಸಂದ ಗೌರವ.

ಕಮ್ಯೂನಿಸ್ಟರನ್ನು ಆಮಂತ್ರಣವಿತ್ತು ಒರೆಹೊಡಿಕೊಂಡುದು ತಪ್ಪೆ? ತಾತ್ವಿಕವಾಗಿ ನೋಡಿದರೆ ಭಾರತವು ಶಾಂತಿಯುತ ಸಹ ಜೀವನ ಹಾಗು ಅಂತಾರಾಷ್ಟ್ರೀಯ ಸಹಕಾರದಲ್ಲಿ ವಿಶ್ವಾಸವುಳ್ಳರಾಷ್ಟ್ರ. ಅದರ ನಿಟ್ಟಿಗೆ ರಷ್ಯದ ನಾಯಕರನ್ನು—ಅವರ ರಾಜಕೀಯ ಪದ್ಧತಿ ಬೇರೆಯಾಗಿದ್ದರೂ - ದೂರವಿಡುವ ಪ್ರಮೇಯವಿಲ್ಲ.

ಪಾಶ್ಚಾತ್ಯ ರಾಷ್ಟ್ರಗಳ ದೃಷ್ಟಿಯಿಂದ ನೋಡಿದರೂ ಭಾರತ ಸರಕಾರದ ಹಾಗು ಜನತೆಯ ಅತಿಥ್ಯದಲ್ಲಿ ತಪ್ಪು ತೋರಲಾರದು. ಏಕೆಂದರೆ ಸಾರ್ವಭೌಮಾಧಿಕಾರ ಸಂಪನ್ನವಾದ ಸ್ವತಂತ್ರ ರಾಷ್ಟ್ರಗಳನ್ನು ತಮ್ಮ ಸಮಾನಸ್ಥಂಧದಲ್ಲಿ ಬರಮಾಡಿಕೊಳ್ಳುವುದೊಂದು ರಾಜಕೀಯ ಸಂಪ್ರದಾಯ. ಅಮೇರಿಕವು ೧೯೪೪ರಲ್ಲಿ ಪ್ರಧಾನಿ ನೆಹರುಗಳನ್ನು ಬರಮಾಡಿಕೊಂಡಿರುವುದೂ ಬ್ರಿಟನು ಮುಂದಿನ ವೇಸಗೆಯಲ್ಲಿ ರಷ್ಯದ ನಾಯಕರನ್ನು ಸಂದರ್ಶನ ನೀಡಲು ಆಹ್ವಾನಿಸಿರುವುದೂ ತಪ್ಪಲ್ಲದಿದ್ದರೆ ಭಾರತದ ವರ್ತನೆಯನ್ನೂ ಆಕ್ಷೇಪಿಸಲಾಗದು.

ಪಶ್ಚಿಮಕ್ಕೂ ಸ್ವಾಗತ

ಹಾಗಿರುವಾಗ ಪಾಶ್ಚಾತ್ಯರು ಕಳವಳಗೊಂಡಿರುವುದೇಕೆ? ಸ್ವಾಗತದ ಉಪಾರ ನೈಭವವು ಅವರ ಕಣ್ಣನ್ನು ಕೋರೈಸಿ, ಮತಿಭ್ರಾಂತಿಯನ್ನು ಮಾಡಿದೆ ಎಂದು ನಂಬಲು ಬಲವಾದ ಕಾರಣವಿಲ್ಲ. ಏಕೆಂದರೆ ನಾಳೆ ಅಮೇರಿಕದ ಅಧ್ಯಕ್ಷರು ಭಾರತ ಸಂಚಾರ ಕಾರ್ಯಕ್ರಮವನ್ನು ಕೈಗೊಂಡರೆ, ಅದಕ್ಕಾ ಪ್ರಧಾನಿ ಈಡನ್ನರು ಆ ಸುಸ್ಸು ಮಾಡಿದರೆ ಅವರನ್ನೂ ಭಾರತೀಯರು ಇಷ್ಟೇ ವೈಭವದಿಂದ ಬರಮಾಡಿಕೊಳ್ಳುತ್ತಾರೆ.

ಒಂದು ವೇಳೆ ರಷ್ಯದ ನಾಯಕರಿಗೆ ದೊರೆತ ಸ್ವಾಗತವೇ ತೂಕದ ಹೆಚ್ಚಿಂದು ತುಲನೆಯ ಬಳಿಕ ಕಂಡು ಬಂದರೂ, ಪಾಶ್ಚಾತ್ಯ ರಾಷ್ಟ್ರಗಳು ಸ್ವಲ್ಪ ತಿಳಿವಳಿಕೆಯನ್ನು ಉಪಯೋಗಿಸಿ ಸಮಾಧಾನ ಪಟ್ಟುಕೊಳ್ಳಬೇಕಾಗಿದೆ.

ಎಲ್ಲರಿಗೂ ತಿಳಿದಿರುವಂತೆ ಸ್ಟಾಲಿನ್ನರ ಕಾಲದಲ್ಲಿ ರಷ್ಯಕ್ಕೆ "ಉಕ್ಕಿನ ಪರದೆ" ಬಿದ್ದಿದ್ದಿತು; ಆಗ ಕಮ್ಯುನಿಸ್ಟೇತರ ರಾಷ್ಟ್ರಗಳವರೊಡನೆ ರಷ್ಯಕ್ಕೆ ಸಂಸರ್ಕ ಏನೇನೂ ಇರಲಿಲ್ಲ. ಪರದೆಯನ್ನು ಇಳಿಬಿಟ್ಟುದಕ್ಕೆ ಪಾಶ್ಚಾತ್ಯ ರಾಷ್ಟ್ರಗಳವರು ರಷ್ಯವನ್ನು ಕಟುವಾಗಿ ಆಕ್ಷೇಪಿಸಿದ್ದರು.

ಈಗ ಆ ಪರದೆಯನ್ನು ಸರಿಸಿ, "ಹೂವಿನ ಪರದೆ"ಗೆ ಮಾರು ಹೋಗುವಷ್ಟು ವಿವೇಕವನ್ನು ಕಮ್ಯುನಿಸ್ಟರು ತೋರಿಸಿರುವಾಗ ಪಾಶ್ಚಾತ್ಯರಿಗೆ ಸಂತೋಷವಾಗಬೇಡವೆ? ಭಾರತೀಯರಂತೆ "ಸಹ ಜೀವನ"ದಲ್ಲಿ ವಿಶ್ವಾಸವುಳ್ಳವರ ಸ್ನೇಹವನ್ನೆ ರಷ್ಯನರು ಪ್ರಥಮವಾಗಿ ಮಾಡಿಕೊಂಡರೆ. ಆನು ಹಿತಕರವೆನಿಸದೇ ಜೇಡವೆ? ಇಷ್ಟರ ವರೆಗೆ ಕಣ್ಮರೆಯಾಗಿದ್ದ, ಏನೋ ಎಂಥದೊ ಎಂಬ ಪರಿಜ್ಞಾನವಿಲ್ಲದೆ ರಹಸ್ಯವಾಗಿದ್ದ ನಾಡಿನ ಧುರೀಣರು ನಿಧಾನವಾಗಿ ಹೊರಗೆ ಕಾಣಿಸಿಕೊಂಡಾಗ ವೈಗಾಲಯವನ್ನವಲೋಕಿಸುವಂಥ ಕುತೂಹಲ ಹಾಗು ಭಾವಾವೇಗ ಜನರಲ್ಲಿ ಮೂಡಲಾರದೆ?

ಭಾರತೀಯರ ಸಂಭ್ರಮದ ಸ್ವಾಗತಕ್ಕೆ ಹಿನ್ನೆಲೆಯನ್ನೊದಗಿಸಿದ ಸಂಗತಿಗಳಲ್ಲಿ ಇದೂ ಒಂದು. ಜಗತ್ತಿನೊಡನೆ ಬೆರೆಯ ಬಯಸುವ ಒಂದು ಜನಾಂಗದ ಕಾತುರವನ್ನು ಅವರು ರಷ್ಯದ ನಾಯಕರ ಸ್ವಾಗತದಲ್ಲಿ ಗುರುತಿಸಿಕೊಂಡಿದ್ದಾರೆ. ಜಾಗತಿಕ ತ್ವೇಷ ರಮನಕ್ಕೆ ಪ್ರತ್ಯೇಕ ಒಣಗಳ ಸ್ಥಾಪನೆಯ ಮಾರ್ಗವನ್ನು ಬಿಟ್ಟುಗೊಡುವುದು ಯೋಗ್ಯವೆಂದಾದರೆ, ಭಾರತದ ಕೆಲಸವು ಪುಧ್ಯಸ್ಥಿಕೆಯ ಯಶಸ್ವಿ ನಿರ್ವಹಣೆಗೆ ಲೇಪೇಕು.

ಪಾಶ್ಚಾತ್ಯರನ್ನು ಕೆಂಳಿಸಿದ ಮುಖ್ಯ ವಿಷಯವೆಂದರೆ ರಷ್ಯನ ನಾಯಕರು ಭಾರತ ಸಂಚಾರ ಕಾಲದಲ್ಲಿ ಹೊರಡಿಸಿದ ಕೆಲವೊಂದು ಉದ್ಗಾರಗಳೇ ಆಗಿರಬೇಕು. ಡಲ್ಲೇಸರು ಗೋವೆಯು ಕುರಿತು ವ್ಯಕ್ತಪಡಿಸಿದ ಅಭಿಪ್ರಾಯವು ಈ ಊಹೆಯನ್ನು ಪುಷ್ಟೀಕರಿಸುತ್ತದೆ. ರಷ್ಯದ ನಾಯಕರ ಉದ್ಗಾರಗಳ ನಿಷೇಧವೇನಾದರೂ ಇರಲಿ, ಕುಶ್ಚಾರೊಡನೆ ಸೇರಿ ಹೊರಡಿಸಿದ ಸಂಯುಕ್ತ ನ್ಯಕಟನೆಯ ಕೆಲವು ಸಾಲಿನ ಅರ್ಥ ಎಂದವರು ಬಾಯಿ ಬಿಟ್ಟು ಸ್ಪಷ್ಟೀಕರಣ ರೂಪದಲ್ಲಿ ನೀಡಿದ್ದಾರೆ.

ಕಮ್ಯುನಿಸಮ್ಮಿನ ಭಯ

ಇದನ್ನು ಅಮೇರಿಕದ, ಅಥವಾ ಬ್ರಿಟನಿನ ದೃಷ್ಟಿಯಿಂದ ನಾವು ಹೇಗೆ ವಿವೇಚಿಸಬೇಕು? ಕಮ್ಯುನಿಸ್ಟರ ಪ್ರಚಾರ ತಂತ್ರ, ಪ್ರಚ್ಛನ್ನ ಯುದ್ಧದ ಕ್ಷೇತ್ರವಿಸ್ತಾರ ಎಂದವು ಸಾಮಾನ್ಯವಾಗಿ ಹೇಳುತ್ತವೆ. ರಷ್ಯದ ಪ್ರಮಾಣಿಕತೆಯಲ್ಲಿ ಅವುಗಳ ನಂಬಿಕೆ ಮೊದಲೇ ಕಡಿಮೆಯಾಗಿರುವಾಗ ಮಿ. ಖ್ರುಶ್ಚೇಫರು ಹೊರಡಿಸಿದ ಉದ್ಗಾರಗಳಿಂದ ಅವುಗಳು ತೋಸಾವಿಷ್ಟವಾಗುವುದು ತೀರ ಸಹಜ.

ಯಾವ ಕಾಲತ್ಕೂ ಪಾಶ್ಚಾತ್ಯ ರಾಷ್ಟ್ರಗಳಿಗೆ ಕಮ್ಯುನಿಸಮ್ಮಿನಲ್ಲಿ ವಿಶ್ವಾಸ ವಿದ್ದಿಲ್ಲ. ಬ್ರಿಟನಿನ ಪ್ರಧಾನಿ ಈಡನ್ ಮೊನ್ನೆ ೧೩ನೇ ದಿನಾಂಕ ಏನು ಹೇಳಿದರು ಗೊತ್ತೆ? "ಮೂಲ ಭೂತವಾಗಿ ಕಮ್ಯುನಿಸಂ ಜಗತ್ತಿನಲ್ಲಿ ಪ್ರಭುತ್ವವನ್ನು ಸ್ಥಾಪಿಸುವ ಉದ್ದೇಶವಿಟ್ಟುಕೊಂಡಿದೆ. ಸಹ ಜೀವನ ಬೇಕೆಂದಾದರೆ ಉಭಯ ರಂಗದಲ್ಲೂ ಸಮಾನ ನಡತೆ ಹಾಗು ತಿಳಿವಳಿಕೆಬೇಕು. ಕಮ್ಯುನಿಸಮ್ಮಿನ ಘೋಷಿತ ಧ್ಯೇಯದ ಮುಂದೆ ಸಹಜೀವನ ಹೇಗೆ ಸಾಧ್ಯ?"

ಭಾರತೀಯರು ಇದನ್ನು ಉತ್ತರಿಸಬಲ್ಲರಾದರೆ ಅದು ಹೀಗೆ—ರಷ್ಯವು ಪ್ರಜಾ ಪ್ರಭುತ್ವ ಪದ್ಧತಿಯನ್ನು ಒಂದು ದೇಶದ ಸರಕಾರವು ಅನುಸರಿಸುತ್ತಿರುವುದಕ್ಕೆ ವಿರೋಧವನ್ನು ಈಗ ವ್ಯಕ್ತಪಡಿಸುತ್ತಿಲ್ಲ. ರಾಜಕೀಯ ಪದ್ಧತಿಗಳು ಭಿನ್ನವಾಗಿದ್ದರೂ ಸರಕಾರಗಳು ಕೂಡಿ ನಡೆಯಬಲ್ಲ ಹಲವು ರಂಗಗಳಿವೆ ಎಂದನು ಈಗಿತಿಳಿದು ಕೊಂಡಿದೆ. ಭಂಡವಳಿವಾದಿ ರಾಷ್ಟ್ರಗಳೊಡನೆ ಸಾಮ್ಯವಾದಿ ರಾಷ್ಟ್ರ ಕೂಡಿ ನಡೆಯು ಬಲ್ಲುದೆಂದು ಅನೀಗ ಹೇಳುತ್ತದೆ.

ಅದೇ ಈಡನ್ ಇನ್ನೊಂದು ಗಂಭೀರ ಪ್ರಶ್ನೆಯನ್ನು ಹಾಕಿದ್ದಾರೆ: "ನಾವು ನಸಾಂಹತು ವಾದಿಗಳಂದು ಅವರು ಹೇಳುತ್ತಾರೆ. ಕಮ್ಯುನಿಸಮ್ಮೇ ಸ್ವಾತಂತ್ರ್ಯ ಮಾರ್ಗವೆನ್ನುತ್ತಾರೆ. ಆದರೆ ಬ್ರುಸೆಲ್ಸ್, ವಾರ್ಸಾ, ಹೆಂಬರ್ಗ್, ಪೂರ್ವ ಬರ್ಲಿನ್ ಇಲ್ಲೆಲ್ಲಿಯಾದರೂ ಸ್ವಾತಂತ್ರ್ಯದ ಗಂಧ ಗಾಳಿಯಿದೆಯೆ? ನೈಪ್ರೆಸ್ಸಿನಂಥ ಧಮ್ಮಿ ಭೂಭಾಗದಷ್ಟು ವಾದ ಪ್ರಸಿದ್ಧವಾದಗಳನ್ನಿಟ್ಟು ಮಾತಿನ ಹೋಗಾಟ ನಡೆಸಲಾದರೂ ಸ್ವಾತಂತ್ರ್ಯವಿದೆ? ರಷ್ಯದ ವರ್ಜಿನಿಯಲ್ಲಿ?"

ಅಮೇರಿಕದ ಸೆನೇಟರ್ ರಾಲ್ಫ್ ಇ. ಫ್ಲಾಂಡರ್ಸ್ ಇದನ್ನೆ ಸ್ವಲ್ಪ ಮಾತುಗಳಲ್ಲಿ ೧೬ನೇ ದಿನಾಂಕ ಮುಂಬಯಿಯಲ್ಲಿ ವಿವರಿಸಿದರು— "ನೋವಿಯಟಿನ ನಾಯಕರು ಮಾನವ ಜನಾಂಗದ ಹಿತಾನಕ್ತಿಗೆ ನಿರುದ್ಧವಾದ ಧೋರಣೆಯು ಹಾಗು ಆ ಧೋರಣೆಯನ್ನು ಅನುಸರಿಸುವ ಸರಕಾರದ ಪ್ರತಿನಿಧಿಗಳಾಗಿದ್ದಾರೆ ಅವರಿಗೇನಾದರೂ ಸೌಹಾರ್ದತೋರಿಸುವುದು ಗಲೀ ಅಂಧ ಜನರನ್ನು ಆದರಿಸುವುದಾಗಲೀ ಅವೆರಿಕದ ಜನರ ತಿಳಿವಳಿಕೆಗೆ ವಿರೋಧ ವಿಷಯ ಏಕೆಂದರೆ ತಮ್ಮ ಅನಾ ನೈತಿಕ ವಿಶ್ವಾಸವನ್ನೂ ವ್ಯಾಪ್ತಿತ್ಯಕ್ಕೆ ಧೋಷಣೆಯನ್ನೂ ಬೇರು ಸಹಿತ ಕಿತ್ತು ಬಾಕುತ್ತವೆ. ರಷ್ಯದ ಸರಕಾರದ ಮೂಲದ ಜೀವನವನ್ನೂ ಸ್ವಾತಂತ್ರ್ಯವನ್ನೂ ಸಂತೋಷವನ್ನೂ ಹಿತ್ತಿಕ್ಕಿದ. ದ್ವಿತೀಯ ಯುದ್ಧದ ಒಳಕ ೯ ಕೋಟಿ ಜನರನ್ನು ತನ್ನ ಹೊಸ ವಸಾಹತು ಆಳಿಕೆಗೆ ಯುರೋಪಿನಲ್ಲಿ ಅದು ಗುರುಪಡಿಸಿದೆ."

ನಮಗೂ ಅರ್ಥವಾಗುತ್ತದೆ

ಇದನ್ನು ಅರ್ಥಮಾಡಿಕೊಳ್ಳುವುದು ಭಾರತೀಯರ ತಿಳಿವಿಗೆ ವಿರೋಧವಿದೇನಲ್ಲ. ರಷ್ಯದ ಪ್ರೀತಿಯ ಹಿಂದೆ ಕಮ್ಯುನಿಸಂ ಸ್ವರೂಪದ ಪ್ರಭುತ್ವ ಸ್ಥಾಪಿಸುವ ಯುರೋಪೇತರವಿಷಯಕ್ಕಾಗಿ ಎಚ್ಚರಿಸುವ ಮಾತಾಗಲಿವು ಎಂದು ಭಾರತೀಯರು ಜೆನ್ನಾಗಿ ಬಲ್ಲರು. ಆದರೆ ಈಗ ಎಲ್ಲ ಪಾಶ್ಚಾತ್ಯ ರಾಷ್ಟ್ರಗಳಂತೆ ಭಾರತವೂ ರಷ್ಯಕ್ಕೆ ವನ್ನಜೆ ನೀಡಿದ ಬಳಿಕ ಉಪ್ಪಿಯ ನಾಯಕರಿಗೆ ಸ್ವಾಗತ ಕೊಟ್ಟು ಪಾಶ್ಚಕ್ಕೆ ಕೊಳ್ಳೆ ಹೋದೀತೆಂದು?

(೧೩ನೇ ಪುಟ ನೋಡಿರಿ)

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಕಾರ್ವಾ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಪ್ರಕಟಣೆ

ದಿನಾಂಕ 2—12—1955ರಲ್ಲು, ಬ್ಯಾಂಕಿನ ಹೊಸ ಶಾಖೆಯೊಂದು **ಮಧುರೆಯ** ಈಸ್ಟ್ ಅವನಿಮೂಲಾ ರಸ್ತೆಯಲ್ಲಿರುವ ನಂಬ್ರ 40ನೆ ಕಟ್ಟಡದಲ್ಲಿ ತೆರೆಯಲ್ಪಟ್ಟು, ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ಸಹವಾಟುಗಳನ್ನು ನಡೆಸಲಾರಂಭಿಸಿದೆ.

THE CANARA BANKING CORPORATION LIMITED

Estd:- 1906] [H. O. UDIPI (S India).

ರಶಿಯದ ನಾಯಕರ ವಿದಾಯ ಭಾಷಣ

ಶಾಂತಿಯುತ ಸಹಜೀವನ ಹಾಗು ಸಹಕಾರದ ಆತುರ

ಹಿಮಾಲಯವನ್ನು ನೇರಾಗಿ ಹಾರಿ ಬಂದಿದ್ದ ರಶಿಯದ ಮಹಾ ನಾಯಕರು ಮೂರು ವಾರಗಳ ಸಂಚಾರವನ್ನು ಮುಗಿಸಿ ಸ್ವದೇಶಕ್ಕೆ ಕಳೆದೆವಾರ ಮರಳುವ ಮುನ್ನ ಭಾರತೀಯರನ್ನು ಉದ್ದೇಶಿಸಿ ಅಖಿಲಭಾರತ ಆಕಾಶವಾಣಿಯಲ್ಲಿ ಭಾಷಣವನ್ನು ಮಾಡಿದರು. ಈ ಭಾಷಣವು ಭಾರತೀಯರು ರಶ್ಯದ ಪ್ರಭೃತಿಗಳಿಗೆ ತೋರಿಸಿದ ಪ್ರೀತಿ ಸೌಹಾರ್ದಗಳಿಗೆ ಕೃತಜ್ಞತೆಯನ್ನು ಸಾರ್ವತ್ರಿಕವಾಗಿ ಅರ್ಪಿಸಲು ಅವರಿಗೆ ಅವಕಾಶ ಮಾಡಿಕೊಟ್ಟಂತಲ್ಲದೆ, ಭಾರತದ ಕುರಿತಾಗಿಯೂ ಭಾರತೀಯ ಜನತಾಗಿದ ಕುರಿತಾಗಿಯೂ ಅವರು ಏನು ಭಾವಿಸಿರುವರೆಂಬುದನ್ನು ಸ್ಪಷ್ಟಪಡಿಸುವುದಕ್ಕೆ ಕೊನೆಯ ಸಂದರ್ಭವೊಂದನ್ನು ಒದಗಿಸಿಕೊಟ್ಟಿತು.

ಸಂತೋಷದಾಯಕ ನೆನಪು

ರಶ್ಯದ ಪ್ರಧಾನಿ ದಾಶ್ಕಲ್ ಬುಲ್ಗಾನಿನ್ ತಮ್ಮ ಭಾಷಣದಲ್ಲಿ ಹೀಗೆಂದರು—"ನಾವು ನಿಮ್ಮ ದೇಶದ ಹಾಗು ಜನರ ಅನೇಕ ಸಂತೋಷದಾಯಕ ನೆನಪುಗಳನ್ನು ಕೊನೆಯ ವರೆಗೂ ಕಾಯ್ದುಕೊಳ್ಳುತ್ತೇವೆ. ನಮ್ಮ ಭಾರತ ಸಂಚಾರ ಕಾಲದಲ್ಲಿ ನಾವು ದೇಶದ ಅನೇಕ ನಗರಗಳನ್ನೂ ಪ್ರದೇಶಗಳನ್ನೂ ಸಂದರ್ಶಿಸಿದ್ದೇವೆ. ನಾವು ಮಹಾ ನಿರ್ಮಾಣ ಕ್ಷೇತ್ರಗಳನ್ನು ಮುಂಬಯಿ, ಕಲ್ಕತ್ತ, ಬೆಂಗಳೂರು, ಮದ್ರಾಸು, ಸಿಂಧ್ರಿಗಳಂಥ ಔದ್ಯಮಿಕ ವಲಯಗಳನ್ನೂ ನೋಡಿದ್ದೇವೆ. ಕೃಷಿ ಅಭಿವೃದ್ಧಿಯ ಕೇಂದ್ರಗಳನ್ನೂ ವೈಜ್ಞಾನಿಕ ಸಂಶೋಧನೆಯ ಪ್ರಯೋಗಾಲಯಗಳನ್ನೂ ಪ್ರಾಚೀನ ಸಂಸ್ಕೃತಿಯ ಆದ್ಭುತ ಅವಶೇಷಗಳನ್ನೂ ನೋಡಿದ್ದೇವೆ. ನಿಮ್ಮ ದೇಶದ ವಿವಿಧ ಜನರ ಜೀವನ, ಚಟುವಟಿಕೆ ಮತ್ತು ಸಂಸ್ಕೃತಿಯೊಡನೆ ಪರಿಚಯವನ್ನೂ ಸ್ವಲ್ಪ ಮಟ್ಟಿಗೆ ಬೆಳೆಸಿಕೊಂಡಿದ್ದೇವೆ.

"ನಮ್ಮ ಮೇಲೆ ಬಹಳ ದೊಡ್ಡದಾದ ಮತ್ತು ಎಂದೆಂದಿಗೂ ಮರೆಯಲಾರದ ಪ್ರಭಾವವನ್ನು ಅಚ್ಚೊತ್ತಿದವರೆಂದರೆ ಜನರು — ಶಕ್ತ್ಯುತ್ಸಾಹಗಳಿಂದ ತುಂಬಿದ, ತಾರುಣ್ಯದ ಉತ್ಕರ್ಷವನ್ನು ತೋರ್ಪಡಿಸುತ್ತಿರುವ, ಬುದ್ಧಿಶಕ್ತಿ ಮತ್ತು ಕಾರ್ಯಸ್ಫೂರ್ತಿಯನ್ನು ವ್ಯಕ್ತಪಡಿಸುತ್ತಿರುವ, ಶಾಂತಿಗಾಗಿ ವೈಧವಾಗಿ ಹಂಬಲಿಸುವ ಶಾಂತಿಪ್ರಿಯವಾದ ಎಲ್ಲ ಜನಾಂಗಗಳೊಡನೆಯೂ ಸಹಕಾರವನ್ನು ನೀಡಲು ಆತುರ ಹೊಂದಿದ ಜನರು ಭಾರತೀಯರಾಗಿದ್ದಾರೆ. ನಾವು ಹೋದಲ್ಲೆಲ್ಲ ಇವರು ಅಂತಃಕರಣ ಪೂರ್ವಕ ಸ್ವಾಗತವನ್ನಿತ್ತಿದ್ದಾರೆ. ಪ್ರತಿಯೊಂದೂ ಸ್ಥಳದಲ್ಲಿನ ಜನರು ರಶಿಯದ ಜನರಿಗೆ ತಮ್ಮ ಪ್ರೀತಿ ಹಾಗು ಶುಭೇಚ್ಛೆಗಳನ್ನು ವ್ಯಾಮಾಣಿಕವಾಗಿ ವ್ಯಕ್ತಪಡಿಸಿದ್ದಾರೆ!

ದೇಶದ ಸಾಧನೆ

"ನಿಮ್ಮ ದೇಶಕ್ಕೆ ಅದರ ಚಿರಿತ್ರೆಯ ಪ್ರಾಮುಖ್ಯ ಘಟ್ಟವೊಂದರಲ್ಲಿ ನಮ್ಮ ಸಂದರ್ಶನ ನಡೆಯಿತು. ದೀರ್ಘಕಾಲದ ವಸಾಹತು ಶೃಂಖಲತ್ವದ ಬಳಿಕ ಇದೀಗ ಭಾರತೀಯರು ತಮ್ಮ ಅದೃಷ್ಟವನ್ನು ರೂಪಿಸಿಕೊಳ್ಳುವ ಅಧಿಕಾರವನ್ನು ಪಡೆದಿದ್ದಾರೆ. ಈಗ ಕೆಲವೇ ವರ್ಷಗಳಿಂದ ಅನುಭವಿಸುತ್ತಿರುವ ಸ್ವಾತಂತ್ರ್ಯದ ಅಲ್ಪಾವಧಿಯಲ್ಲಿ ಭಾರತವು ಅನೇಕ ಮಹಾಕಾರ್ಯಗಳನ್ನು ಸಾಧಿಸಿದೆ. ಅಂತರಾಷ್ಟ್ರೀಯ ಸಂಸ್ಥೆಗಳನ್ನು ಬಿಡಿಸುವುದರಲ್ಲಿ ಭಾರತವು ಬಹಳ ಪ್ರಾಮುಖ್ಯವಾದ ಪಾತ್ರವನ್ನು ವಹಿಸುತ್ತದೆ.

"ನಾವಿ ನಮ್ಮ ಕಣ್ಣಿನಿಂದಲೇ ನೋಡಿದಂತೆ ಭಾರತದ ಜನರು ಸಹ ತಮ್ಮ ಆರ್ಥಿಕಾಭಿವೃದ್ಧಿ ಕ್ಷೇತ್ರದಲ್ಲಿಯೂ ಔದ್ಯಮಿಕ ಪುನರುಜ್ಜೀವನದ ರಂಗದಲ್ಲಿಯೂ ಮಹಾಯಶಸ್ಸನ್ನು ಸಂಪಾದಿಸಿದ್ದಾರೆ.

"ನಮ್ಮೆರಡು ದೇಶಗಳ ನಡುವೆ ಈಗಿರುವ ಸ್ನೇಹ ಬಾಂಧವ್ಯವು ಎಲ್ಲ ಜಗತ್ತಿನ ಆರ್ಥಿಕ, ವೈಜ್ಞಾನಿಕ ಹಾಗು ಸಾಂಸ್ಕೃತಿಕ ಸಹಕಾರಕ್ಕೆ ಅವಕಾಶವಾಡಿಕೊಡುತ್ತದೆ. ಭಾರತವು ನಮ್ಮ ವೈಜ್ಞಾನಿಕ ಹಾಗು ತಾಂತ್ರಿಕ ಅನುಭವವನ್ನೂ ನಿರ್ಮಾಣಕಾರ್ಯದಲ್ಲಿನ ಅನುಭವವನ್ನೂ ಪಾಲುಗೊಳ್ಳಬಯಸುವುದಾದರೆ ಅದಕ್ಕೆ ಸಕಾರಾತ್ಮಕವಾಗಿಯೂ ನಾವು ಸದಾ ಸಿದ್ಧರಾಗಿದ್ದೇವೆ.

"ರಶ್ಯ ಮತ್ತು ಭಾರತಗಳ ಸ್ನೇಹ ಸಂಬಂಧವು ಪಂಚಶೀಲಗಳ ತಳಹದಿಯ ಮೇಲೆ ನಿಂತಿರುವುದು ಎಲ್ಲರಿಗೂ ಈಗ ಗೊತ್ತಿರುವ ವಿಷಯ. ನಮ್ಮೆರಡು ದೇಶಗಳ ಸ್ನೇಹ ಸಂಬಂಧವು ಬೇರೆ ಬೇರೆ ರಾಜಕೀಯ ಪದ್ಧತಿಯನ್ನು ಅನುಸರಿಸುತ್ತಿದ್ದರೂ ವೈಶ್ವಿಕ ಮತ್ತು ಸಹಕಾರಕ್ಕೆ ಮುಂದಾಗಿರುವ ರಾಷ್ಟ್ರಗಳ ಉತ್ತಮ ನಿದರ್ಶನ."

"ನಾವು ಬಾಂಧವರು"

ರಶ್ಯದ ಸಾಮ್ಯವಾದಿ ಪಕ್ಷದ ಪ್ರಥಮ ಕಾರ್ಯದರ್ಶಿ ಮಿ. ಖ್ರುಶ್ಚೆಫ್ ತಮ್ಮ ಭಾಷಣದಲ್ಲಿ ಹೀಗೆಂದರು-"ಕಳೆದ ಮೂರು ವಾರಗಳಲ್ಲಿ ನಾವು ನಿಮ್ಮ ದೇಶದಲ್ಲಿ ಅತಿಥಿಗಳಾಗಿ ಉಳಿದು ಅನೇಕ ರಾಜ್ಯಗಳಲ್ಲಿ ಸಂಚರಿಸಿ ಭಾರತದ ಆಶ್ಚರ್ಯಕರ ಜನತೊಡನೆಯೂ ಸಂಪತ್ಸಮೃದ್ಧವಾದ ಹಾಗು ಪ್ರಾಚೀನವಾದ ಭಾರತೀಯ ಸಂಸ್ಕೃತಿಯೊಡನೆಯೂ ಸ್ವಲ್ಪ ಮಟ್ಟಿನ ಪರಿಚಯವನ್ನು ಮಾಡಿಕೊಂಡಿದ್ದೇವೆ.

"ರಶ್ಯದ ಪ್ರತಿನಿಧಿಗಳಾಗಿ ಬಂದ ನಮಗೆ ಭಾರತದ ಧುರೀಣರೂ ಭಾರತೀಯರೂ ನೀಡಿದ ಸ್ನೇಹಾದರ ಪೂರ್ವಕವಾದ ಸ್ವಾಗತವು ನಮ್ಮ ಹೃದಯವನ್ನು ಮುಟ್ಟಿರುತ್ತದೆ. ಅದನ್ನು ನಾವೆಂದೂ ಮರೆಯುವಂತಿಲ್ಲ. ರಶಿಯ-ಭಾರತ ಸ್ನೇಹಾನುಭವವನ್ನು ನಾವು ಹಿಂದೆಯೂ ನೋಡಿದ್ದೆವು; ಆದರೆ ಇಲ್ಲಿ ನಾವೇನು ನೋಡಿದ್ದೇವೋ ಅದು ನಮ್ಮ ಊಹೆಗೆ ನಿಲುಕಿದ ಅನುಭವವನ್ನಿತ್ತಿತು. ನಮ್ಮ ಹೃದಯದಲ್ಲಿ ತುಂಬಿದ ಭಾವನೆಗಳನ್ನು ಮಾತುಗಳಲ್ಲಿ ವ್ಯಕ್ತಪಡಿಸುವುದು ಕಷ್ಟ.

"ನಾವು ಕೋಪ ಎಲ್ಲ ನಗರ ಹಾಗು ಹಳ್ಳಿಗಳಲ್ಲಿ ರಶಿಯ ಮತ್ತು ಭಾರತಗಳ ನಡುವಣ ಸ್ನೇಹವನ್ನು ಉದ್ಘೋಷಿಸುವ ಸ್ವಾಗತ ವಾಕ್ಯಗಳನ್ನು ಓದಿದ್ದೇವೆ. ಪಲ್ಲವಿಗಳ ಘೋಷಣೆಯನ್ನು ಕೇಳಿದ್ದೇವೆ. "ಹಿಂದೀ – ರೂಸೀ ಭಾಯೀ–ಭಾಯೀ!" ಎಂಬ ಸಾಮಾನ್ಯವಾದ, ಆದರೆ ಹೃದಯಕ್ಕೆ ಆತಿಪ್ರಿಯವಾದ, ಘೋಷಣೆಯನ್ನು ನಾವು ಯಾವಾಗಲೂ ಕೇಳಿದ್ದೇವೆ.

"ಇವುಗಳಿಂದ ನಾವು ನಿಜವಾಗಿಯೂ ಬಹಳ ಆನಂದಿತರಾಗಿದ್ದೇವೆ. ಏಕೆಂದರೆ ಭಾರತದ ಜನರ ಕುರಿತಾಗಿ ರಶಿಯದ ಜನತೆಯಲ್ಲಿರುವ ಭಾವನೆಯನ್ನೇ ಈ ಮಾತುಗಳು ವ್ಯಕ್ತಪಡಿಸಿರುತ್ತವೆ.

"ಹಾದು– ನಮ್ಮೆರಡು ಜನಾಂಗಗಳ ನರು ನೋದರರಾಗಿದ್ದಾರೆ; ಆಭ್ಯುದಯ ಕಾಲದಲ್ಲಿ ಕೋ ಕಷ್ಟಕಾಲದಲ್ಲಿ ಸಹ ಅವರು ನೋದರರೇ!

ಅಭಿಮಾನದ ವಿಷಯ

"ನಮ್ಮೆರಡು ಜನಾಂಗಗಳ ಸ್ನೇಹವು ಮಹತ್ವದ ಐತಿಹಾಸಿಕ ಸಾಧನೆಯಾಗಿದೆ. ಈ ಸ್ನೇಹವನ್ನು ಪ್ರತಿಯೊಂದೂ ವಿಧದಿಂದ ಮೆಚ್ಚಿಕೊಂಡು ಅದನ್ನು ಬಲಪಡಿಸಬೇಕು. ಏಕೆಂದರೆ ಅದು ಉಭಯ ಜನಾಂಗಗಳಿಗೂ ಪ್ರಯೋಜನಕಾರಿಯಾಗಿದೆ.

"ನಾವು ಭಾರತದಲ್ಲಿ ಅನೇಕ ರಾಷ್ಟ್ರಿಯ ಯೋಜನಾ ಕೇಂದ್ರಗಳನ್ನೂ ಔದ್ಯಮಿಕ ಘಟಕಗಳನ್ನೂ ನೋಡಿದ್ದೇವೆ. ಜೆಲವು ಮಹಾ ಕೈಗಾರಿಕೆಗಳನ್ನೂ ನೀರಾವರಿ ಹಾಗು ವಿದ್ಯುಚ್ಛಕ್ತಿಯ ಯೋಜನೆಗಳನ್ನೂ ಕಂಡಿದ್ದೇವೆ. ಇವುಗಳನ್ನು ನಮಗೆ ತೋರಿಸುವಾಗ ಭಾರತೀಯ ಸ್ನೇಹಿತರು ಎಷ್ಟು ಅಭಿಮಾನದಿಂದ ಕೂಡಿದ್ದರು! ನಾವು ಈ ಅಭಿಮಾನವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲವರಾಗಿದ್ದೇವೆ. ಏಕೆಂದರೆ ಈ ಔದ್ಯಮಿಕ ಯೋಜನೆಗಳಲ್ಲಿಯೇ ಭಾರತದ ಭದ್ರ ಭವಿಷ್ಯವೂ ರಾಷ್ಟ್ರೀಯ ಶಕ್ತಿಯೂ ಸ್ವಾತಂತ್ರ್ಯದ ರಕ್ಷಣೆಯೂ ನಿಹಿತವಾಗಿದ್ದು ಇವಕ್ಕೆ ಸಂಬಂಧಿಸಿದ ಕೆಲಸವಲ್ಲಿ ನಡೆಯುತ್ತಿರುತ್ತದೆ.

"ಇಂಥ ಔದ್ಯಮಿಕ ಘಟಕಗಳನ್ನು ರಚಿಸಲು ನಿಮಗೆ ಸ್ವಂತ ದೇಶಬಾಂಧವರೇ ಕುಶಲ ಕೆಲಸಗಾರರಾಗಿ ಸಿಗಬೇಕಾಗಿದೆ; ಮುಖ್ಯವಾಗಿ ತಾಂತ್ರಿಕ ವಿಷಯಗಳಲ್ಲಿ ನಿಮ್ಮಲ್ಲಿಯೇ ತಜ್ಞರಾದವರಿರಬೇಕಾಗಿದೆ. ನಿಮ್ಮ ತಾಂತ್ರಿಕ ಸಿಬಂಧಿಯು ಬೆಳೆಯುತ್ತಾ ಇರುವುದನ್ನು ನಾವು ನೋಡಿದ್ದೇವೆ. ಭಾರತಕ್ಕೆ ಸೇರಿರುವ ನಿಮ್ಮ ಕುಶಲ ಹಾಗು ನಿಪುಣ ಇಂಜಿನಿಯರರೂ ಇತರ ತಾಂತ್ರಿಕರೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ನಿರತರಾಗಿರುವುದನ್ನು ನಾವು ನೋಡಿದ್ದೇವೆ. ತಾಯ್ನಾಡಿನ ಏಳಿಗೆಗಾಗಿ ಅವರು ಮಿಡಿಯುವ ಕಳಕಳಿಯನ್ನು ಹೊಂದಿದ್ದಾರೆ.

ವಿಪುಲ ಸಹಕಾರ

"ಆದರೆ ನಿಮ್ಮ ದೇಶದಲ್ಲಿ ಇಂಥ ಜನರು ಹೆಚ್ಚಾಗಲಿಕ್ಕೋಸ್ಕರ ನಮ್ಮ ತಿಳಿವಳಿಕೆಯಲ್ಲಿ ಮತ್ತು ಅನುಭವದಲ್ಲಿ ಪಾಲುಗೊಂಡು ನಾವು ಔದ್ಯಮಿಕ ಪ್ರಗತಿಯನ್ನು ಸಾಧಿಸುವಲ್ಲಿ ಆತಂಕಗಳನ್ನು ಎದುರಿಸಿದ ಬಗೆಯನ್ನು ಮುಂದಾಗಿ ತಿಳಿದುಕೊಂಡು ಈ ಸಂಬಂಧದ ಘರ್ಷಣೆಗಳನ್ನು ಪರಿಹರಿಸಿ ನಿಮ್ಮ ದೇಶದ ಕ್ಷಿಪ್ರ ಪ್ರಗತಿಯನ್ನು ಸಾಧಿಸುವ ಇಚ್ಛೆ ನಿಮಗಿದ್ದರೆ ನಾವು ಸಹಕಾರ ನೀಡಲು ತಯಾರಿದ್ದೇವೆ. ನಿಮಗೆ ಕಲಿಸುವ ಆತುರ ನಮ್ಮಲ್ಲಿದೆ ಎಂಬುದಕ್ಕಾಗಿ ನಾನು ಹೀಗೆ ಹೇಳುತ್ತಿಲ್ಲ. ನಾವು ಭಾರತದ ಜನರಿಗೆ ಸ್ವಾರ್ಥದ ಲವಲೇಶವಿಲ್ಲದೆ ಕೇವಲ ಸಹಾಯವಸ್ತವ್ಯವನ್ನೆ ನೀಡುವ ಇಚ್ಛೆಯಿಂದ ಪ್ರೇರಿತರಾಗಿದ್ದೇವೆ. ಸ್ವತಂತ್ರವಾದ ಹಾಗು ಸಾರ್ವಭೌಮಾಧಿಕಾರ ಸಂಪನ್ನವಾದ ಭಾರತವು ಅಭಿವೃದ್ಧಿಯನ್ನು ಹೊಂದಿ ಬಲಾಢ್ಯ ರಾಷ್ಟ್ರವಾಗಬೇಕೆಂಬುದೇ ನಮ್ಮ ಆಶಯ.

"ರಶ್ಯ ಮತ್ತು ಭಾರತಗಳು ಅಬಿವೃದ್ಧಿಗೆ ಬೇರೆ ಬೇರೆಯಾದ ಮಾರ್ಗಗಳನ್ನು ಅವಲಂಬಿಸಿರುತ್ತವೆ. ನಾವು ಯಾವಾಗಲೂ ಪ್ರತಿಯೊಂದೂ ರಾಷ್ಟ್ರದ ಜನರೇ ತಮ್ಮ ಅಭಿವೃದ್ಧಿಗೆ ಯಾವ ಕ್ರಮವನ್ನು ನಿರ್ಧರಿಸಬೇಕೆಂದೂ ಇದು ಆ ದೇಶ ಆಂತರಿಕ ಪ್ರಶ್ನೆಯೆಂದೂ ಹೇಳುತ್ತಾ ಬಂದಿದ್ದೇವೆ.

"ಈಗ ಜೆಲವು ರಾಷ್ಟ್ರಗಳು ಅಂಗೀಕರಿಸಿ ಅನುಸರಿಸುತ್ತಿರುವ ಪಂಚಶೀಲದ ತಳಹದಿಯು ಮೇಲೆ ನಮ್ಮಲ್ಲಿಯು ಪರಸ್ಪರ ಸಂಬಂಧ ನಿಂತಿದೆ. ರಾಜಕೀಯ ಪದ್ಧತಿಗಳು ಭಿನ್ನವಾಗಿದ್ದರೂ ಶಾಂತಿಯುತವಾದ ಸಹ ಜೀವನವು ರಾಷ್ಟ್ರಗಳಲ್ಲಿ ಸಾಧ್ಯವೆಂಬುದು ಈಗ ವಿವಾದಾತೀತವಾದ ವಿಷಯ."

THE BOMBAY LIFE ASSURANCE Co., Ltd.
Excellent Bonuses !
1954 VALUATION.
Whole Life .... Rs. 19/- per 1000/-per year
Endowment .... Rs. 15/- per 1000/- per year.
Record Business: Over Rs, 5 Crores.
It pays you to consult for Representation or Insurance:-
KOCHIKAR BROTHERS, LTD.,
CHIEF AGENTS, **UDIPI.**
or any of their offices at:-
Bangalore, Coimbatore, Kozhikode, Madura, Mangalore and Trivandrum.

ಸ್ವಂತ ಜನಾಭ್ಯುದಯ ಮೇಲೆ ದೊರೆಯತ್ತದೆ. ಸುಲಭ ನಿಯಮಗಳಿಂದ ಮರುವಾವತಿ. ಇಂದಿನಿಸಿನಲ್ಲಿ ಕೆಳಗಿನ ವಿಳಾಸಕ್ಕೆ ಅರ್ಜಿಮಾಡಿಕೊಳ್ಳುವುದು.
P. O. Box No. 3219, BOMBAY 3.

ಮುಂಬಯಿ ನಗರದ ಕುರಿತು ಹಗರಣ

ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಲು ಒತ್ತಾಯ

ಲೋಕ ಸಭೆಯಲ್ಲಿಯೂ ರಾಜ್ಯ ಸಭೆಯಲ್ಲಿಯೂ ಫಜಲಾಲಿ ಆಯೋಗದ ಕುರಿತು ಸದಸ್ಯರ ವಿಚಾರಗಳನ್ನು ವ್ಯಕ್ತ ಪಡಿಸುವುದಕ್ಕೆ ಅವಕಾಶ ಮಾಡಿ ಕೊಡುವ ಚರ್ಚೆಯು ಈಗ ನಡೆಯುತ್ತಿದೆ. ಸುಮಾರು ಇನ್ನೂರು ಮಂದಿ ಸದಸ್ಯರು ಲೋಕ ಸಭೆಯಲ್ಲಿ ಮಾತನಾಡುವ ಇಚ್ಛೆಯನ್ನು ತೋರಿಸಿದ್ದಾರೆ. ಆದರೆ ಅಧ್ಯಕ್ಷರು ಇಷ್ಟು ಸದಸ್ಯರಿಗೆ ಅವಕಾಶ ನೀಡುವುದು ಸಾಧ್ಯವಾಗಲಾರದೆಂದು ಅಭಿಪ್ರಾಯ ಪಟ್ಟಿದ್ದಾರೆ. ಆದುದರಿಂದ ಒಂದೇ ಬಗೆಯ ಘೋರಣೆಯನ್ನಿಟ್ಟುಕೊಂಡ ಗುಂಪುಗಳವರು ತಮ್ಮ ಪ್ರತಿನಿಧಿಯಾಗಿ ಒಬ್ಬ ಸದಸ್ಯನನ್ನು ಆರಿಸಿ, ಆತನೊಬ್ಬನೇ ಮಾತನಾಡುವಂತೆ ಮಾಡುವುದು ಶ್ರೇಯಸ್ಕರ ಎಂದು ಸೂಚಿಸಿದ್ದಾರೆ.

ಪುನರ್ಘಟನೆಯನ್ನು ಮುಂದೂಡ ಬಾಗದು

ಚರ್ಚೆಯನ್ನು ಗೃಹಮಂತ್ರಿ ಪಂಡಿತ ಪಂತರು ಪ್ರಾರಂಭಿಸಿದರು. ಅವರು ತಮ್ಮ ಸುದೀರ್ಘ ಭಾಷಣದಲ್ಲಿ ಸರಕಾರದ ನಿಲುಮೆ ಏನೆಂಬುದನ್ನು ಎಲ್ಲಿಯೂ ಸರಿಯಾಗಿ ಹೇಳಲಿಲ್ಲ. ಒಂದು ಸಂಗತಿಯನ್ನು ಮಾತ್ರ ಪ್ರಸ್ಪಷ್ಟಪಡಿಸಿದರು--ಫಜಲಾಲಿ ಆಯೋಗದ ವರದಿಯನ್ನು ಕಾರ್ಯಗತ ಗೊಳಿಸಲಾಗದೆನ್ನುವ ನಿರಾಶಾ ಭಾವನೆಗೆ ಈಗ ಎಡೆ ಇಲ್ಲ ಎಂದರು. ರಾಜ್ಯಗಳ ಪುನರ್ಘಟನೆಯ ವಿಷಯದಲ್ಲಿ ಕಳೆದ ಕೆಲವು ದಶಕಗಳಿಂದ ನಡೆದು ಬರುತ್ತಿರುವ ಆಂದೋಲನವು ಒಂದು ಬಗೆಯ ಅನಿಶ್ಚಿತತೆಯನ್ನು ಹುಟ್ಟಿಸಿದೆ; ಪ್ರಜೆಗಳನ್ನು ಈಗಲೂ ಸಂಶಯದಲ್ಲಿ ತಳ್ಳುವುದು ಹಿತವಲ್ಲ. ಫಜಲಾಲಿ ಆಯೋಗದ ಕಾರ್ಯಾಚರಣೆಯಲ್ಲಿ ಎಷ್ಟೇ ಕಷ್ಟ ಬಾಲಿ--ಆ ಪಡೆದಂತೆ ರಾಜ್ಯಗಳ ಪುನರ್ಘಟನೆಯನ್ನು ಮುಂದೂಡುವುದು ಈಗ ಸರಿಯಲ್ಲ. ಎಷ್ಟೋ ಜಟಿಲ ಪ್ರಶ್ನೆಗಳನ್ನು ಬಗೆಹರಿಸಿದ ನಮಗೆ ಇದು ದೊಡ್ಡ ವಿಷಯವಾಗದು ಎಂದರು.

ಗಮನಿಸಬೇಕಾದ ವಿಷಯ

ಪಂತರು ಮುಂದಿನ ಅಕ್ಟೋಬರಿನಲ್ಲಿ ಹೊಸ ರಾಜ್ಯಗಳು ರೂಪುಗೊಳ್ಳುತ್ತವೆ ಎಂಬ ಸಾಮಾನ್ಯ ಗ್ರಹಿಕೆಯನ್ನು ಸದಸ್ಯರು ಇಟ್ಟುಕೊಳ್ಳಬೇಕೆಂದು ಕೇಳಿದರು. ಆಗ ಮುಂದಿನ ಚುನಾವಣೆಗಳಾಗುವ ನಡುಗಾಲದ ವರ್ಷಾಡುಗಳನ್ನು ಮಾಡಬೇಕಾಗುತ್ತದೆ. ರಾಷ್ಟ್ರಾಧ್ಯಕ್ಷರೇ ಎಲ್ಲ ರಾಜ್ಯಗಳ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಳ್ಳಬಹುದೆಂಬುದು ನಿಜ ಆದರೆ ಅದು ವ್ಯಾವಹಾರಿಕವಾದುದಲ್ಲ. ಆದುದರಿಂದ ನಡುಗಾಲದ ಶಾಸನಾಂಗಗಳ ಸ್ವರೂಪ ಹೇಗಿರಬೇಕು, ಮಂತ್ರಿಮಂಡಲದ ರಚನೆ ಎಂತಾಗಬೇಕು, ರಾಜ್ಯಗಳ ಪುನರ್ಘಟನೆಯಲ್ಲಿ ಬರುವ ಸಾಲಮೂಲಗಳ ವಿಭಜನೆ, ನೌಕರರ ಬದಲಾವಣೆ ಇತ್ಯಾದಿ ವಿಷಯಗಳನ್ನು ಹೇಗೆ ಸಾಂಗಗೊಳಿಸಬೇಕು ಎಂದೆಲ್ಲ ಸದಸ್ಯರು ಸೂಚಿಸಬೇಕಾಗಿ ಅವರು ವಿನಂತಿಸಿದರು. ಅಲ್ಪ ಸಂಖ್ಯಾಕ ಭಾಷಾ ಗುಂಪಿನ ಹಿತಾಸಕ್ತಿಯನ್ನು ರಕ್ಷಿಸುವ ಕುರಿತು ಆಯೋಗ ಸೂಚಿಸಿದ ಕ್ರಮಗಳ ಕಡೆಗೆ ಅವರು ಸದಸ್ಯರ ಗಮನವನ್ನು ಸೆಳೆದರು. ಪ್ರಜೆಯ ಭಾಷೆ ಏನೇ ಇರಲಿ--ಆತನ ವ್ಯಕ್ತಿತ್ವದ ಸಂಪೂರ್ಣ ವಿಕಾಸಕ್ಕೆ ಹಾಗು ಭಾರತಪರವಾಗಿರಬೇಕೆಂಬ ಆತನ ಅಧಿಕಾರಕ್ಕೆ ವ್ಯತ್ಯಯ ಬರಬಾರದೆಂಬುದೇ ಈ ಸಿಫಾರಸುಗಳ ವಿಷಯ ಎಂದವರು ತಿಳಿಸಿದರು.

ಪಾರ್ಲಿಮೆಂಟಿಗೆ ಪರಮಾಧಿಕಾರ

ಆಯೋಗದ ವರದಿಯೇ ಕೊನೆಯ ಮಾತಲ್ಲ ಎಂದು ಹೇಳಿ, ಪಾರ್ಲಿಮೆಂಟಿನ ನಿರ್ಣಯದಲ್ಲಿ ಸರಕಾರ ವಿಶ್ವಾಸವಿಡುವುದೆಂದರು. ಆಯೋಗ್ಯೂ ಆಯೋಗದ ವರದಿಯಲ್ಲಿನ ಅಂಶಗಳನ್ನು ಲಘು ಮನಸ್ಸಿನಿಂದ ನೋಡಬಾರದೆಂದು ಎಚ್ಚರಿಸಿದರು. ಕಠಿಣವಾದ ಈ ಸಮಸ್ಯೆಯನ್ನು ಆಯೋಗದ ನಿಸ್ಪೃಷ್ಟಪಾತ ದೃಷ್ಟಿಕೋಣದ ಸಮರ್ಥ ಸದಸ್ಯರು ದೀರ್ಘ ಕಾಲದ ನಂತರ ಕೂಲಂಕಷವಾಗಿ ಮನನ ಮಾಡಿ ತಮ್ಮ ಅಭಿಪ್ರಾಯಗಳನ್ನು ಈ ವರದಿಯಲ್ಲಿ ಕ್ರೋಢೀಕರಿಸಿದ್ದಾರೆ; ಸಮಸ್ಯೆಯನ್ನು ನಾನಾ ಮುಖದಿಂದ ಪ್ರತಿಯೊಬ್ಬ ಸದಸ್ಯನೂ ಪರಿಶೀಲಿಸಿರುವುದು ಸಂತಸ. ಆದುದರಿಂದ ಸಂಸತ್ಸದಸ್ಯರು ಸೂಚಿಸುವ ಬದಲಾವಣೆಗಳು ಆಯೋಗದ ಸೂಚನೆಗಳು ಮಾತುವ ಪರಿಣಾಮಗಳಿಂದಲೂ ಒಳ್ಳೆಯದನ್ನು ತರುವಂತಿರಬೇಕು ಎಂದರು. ಮುಂಬಯಿ, ಪಂಜಾಬು, ತೆಲಂಗಾಣ, ಇತ್ಯಾದಿ ಸಮಸ್ಯೆಗಳ ಕುರಿತು ಇನ್ನೂ ಇತ್ಯರ್ಥಕ್ಕೆ ಸಂಬಂಧಿಸಿದ ಧುರೀಣರಿಗೆ ಬರಲಾಗಿಲ್ಲವೆಂಬ ವಿಷಯದತ್ತ ಅವರು ಸದಸ್ಯರ ಗಮನವನ್ನು ಆಕರ್ಷಿಸಿದರು.

ಕೃಪಲಾನಿಯವರ ಅಭಿಪ್ರಾಯ

ಆಚಾರ್ಯ ಕೃಪಲಾನಿಯವರು ಚರ್ಚೆಯಲ್ಲಿ ಮೊದಲಾಗಿ ಭಾಗವಹಿಸಿದರು. ಆಂಧ್ರ ರಾಜ್ಯದ ಸ್ಥಾಪನೆಯ ಬಳಿಕ ಜನರಲ್ಲಿ ತಾವು ಗೊಂದಲವನ್ನು ಹುಟ್ಟಿಸಿದರೆ ಸರಿಯಾತ್ತದೆ ಎಂಬ ಭಾವನೆಯನ್ನು ಹುಟ್ಟಿದೆ; ಸರಕಾರವು ಈ ಗೊಂದಲ ನಿವಾರಣೆಗೆ ತಾನೇನಾದರೂ ಅವಸರದ ನಿರ್ಣಯವನ್ನು ಹೇರುವುದಕ್ಕೆ ಮನಸ್ಸು ಮಾಡಬಹುದಾಗಿದ್ದರೂ ಆಯೋಗದ ವರಕ್ಕೆ ಈ ಸ್ಥಿತಿಯನ್ನು ಒಪ್ಪಿಸಿಕೊಡುವ ಜಾಣತನದ ಮಾರ್ಗವನ್ನು ಅನುಸರಿಸಿತು ಎನ್ನುತ್ತಾ ಅವರು ಧುರೀಣರು ಈಗಲೂ ಜನರನ್ನು ಉದ್ರೇಕಿಸುವ ನಾತಾಡುವುದನ್ನು ಬಿಟ್ಟುಗೊಡದಿರುವುದಕ್ಕೆ ವಿಷಾದಿಸಿದರು. ಹೊಣೆಗಾರ ಸ್ಥಾನದ ವ್ಯಕ್ತಿಗಳೇ ವರದಿಯ ಕೆಲವಂಶಗಳ ಕುರಿತು "ಆಶ್ಚರ್ಯ" ವ್ಯಕ್ತಪಡಿಸಿದರು; ಆದರೆ ಆಶ್ಚರ್ಯಚಕಿತರಾಗಿ ತಮ್ಮನ್ನು ಮಾಡಿದ ಅಂಶಗಳೇನೆಂದು ಅವರು ಹೇಳದೆ ಹೋದುದರಿಂದ ಜನರಲ್ಲಿ ತಮಗೆ ಸರಿತೋರಿದ ವರದಿಯ ಸೂಚನೆಗಳ ಕುರಿತೇ ಧುರೀಣರಿಗೆ ಆಶ್ಚರ್ಯವಾಯಿತೆಂಬ ಭಾವನೆ ಉಂಟಾಯಿತು ಎಂದು ಹೇಳಿದರು. ಭಾಷೆಯನ್ನು ಸಂಖ್ಯಾತಿಯೊಡನೆ ಜೋಡಿಸುವ ಧೋರಣೆಯನ್ನು ಅವರು ಖಂಡಿಸಿದರು. ಅಲ್ಪ ಸಂಖ್ಯಾಕರೂ ಭಾಷಾ ಗುಂಪಿನ ಹಿತರಕ್ಷಣೆಗಾಗಿ ಆಯೋಗ ಮಾಡಿದ ಸೂಚನೆಗಳನ್ನು ಅವರು ಬೆಂಬಲಿಸಿದರು.

ವಿಶಾಲಾಂಧ್ರಕ್ಕೆ ಒತ್ತಾಯ

ಶ್ರೀ. ಎ. ಕೆ. ಗೋಪಾಲನ್ನರು ಕಮ್ಯುನಿಸ್ಟರ ಧುರೀಣನೆಂದು ಮಾತನಾಡುತ್ತಾ ಭಾಷಾನುಗುಣವಾಗಿ ರಾಜ್ಯಗಳನ್ನು ರಚಿಸಬೇಕೆಂಬ ನಿಲುಮೆಯನ್ನು ಎತ್ತಿ ಹಿಡಿದರು. ಈ ದೃಷ್ಟಿಯಿಂದ ಕರ್ನಾಟಕ, ಕೇರಳ ಇತ್ಯಾದಿ ರಾಜ್ಯಗಳ ರಚನೆಗೆ ಮಾಡಿದ ಸಿಫಾರಸನ್ನು ಅವರುಸ್ವಾಗತಿಸಿದರು; ಆಲ್ಲದೆ ರಾಜಪ್ರಮುಖ ಹುದ್ದೆಯನ್ನು ರದ್ದುಪಡಿಸುವ ಸೂಚನೆಗೂ ಸಂತೋಷಿಸಿದರು. ತೆಲಂಗಾಣವನ್ನು ಪ್ರತ್ಯೇಕವಾಗಿಡಬಾರದೆಂದೂ ಮುಂಬಯಿ ನಗರವನ್ನು ವಿದರ್ಭ ಸಹಿತವಾದ ಸಂಯುಕ್ತ ಮಹಾರಾಷ್ಟ್ರ ರಾಜ್ಯದ ರಾಜಧಾನಿಯಾಗಿ ಮಾಡಬೇಕೆಂದೂಅವರು ಸೂಚಿಸಿದರು. ಕಾಂಗ್ರೆಸಿನ ಶ್ರೀ ರಘುರಾಮಯ್ಯನವರೂ ವಿಶಾಲಾಂಧ್ರದ ರಚನೆಯಾಗಬೇಕೆಂದೂ ತೆಲಂಗಾಣವು ಸ್ವತ್ಕೇಗ ಉಳಿಯಲಾಗದೆಂದೂ ಹೇಳಿದರು. ಲೋಕ ಸಭೆಯ ಉಪಾಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರರೂ ಇದೇ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು. ಅನಂರು ಹೊಸಪೇಟೆ ಮತ್ತು ಸಿರಗುಪ್ಪೆಗಳು ಕನ್ನಡ ಭಾಗವೆಂದು ಒಪ್ಪಿದರು. ಆದರೆ ಬಳ್ಳಾರಿಯು ಹಲವು ದಶಕಗಳಿಂದ ಆಂಧ್ರಮೊಸನೆ ನಿಕಟ ಸಂಪರ್ಕ ಪಡೆದಿದೆ ಎಂದೂ ಕರ್ನಾಟಕಕ್ಕೆ ಸಂತ ಆಂಧ್ರಕ್ಕೆ ತುಂಗಭದ್ರ ಆಣೆಕಟ್ಟಿನ ಸ್ಯೋಜನ ಹೆಚ್ಚೆಂದೂ ಹೊಳ್ಳು ವಾದವನ್ನು ಮುಂಡಿಸಿದರು.

ಬಳ್ಳಾರಿ ಕನ್ನಡ ಪ್ರದೇಶ

ಕರ್ನಾಟಕದ ಶ್ರೀ ನಿಜಲಿಂಗಪ್ಪನವರು ಬಳ್ಳಾರಿಯು ಎಲ್ಲ ದೃಷ್ಟಿಯಿಂದಲೂ ಕನ್ನಡದ ನೆಲವೆಂದೂ ಅದನ್ನು ತುಂಗಭದ್ರ ಆಣೆಕಟ್ಟಿನ ನೆಪದಿಂದ ಆಂಧ್ರದಲ್ಲಿ ಸೇರಿಸುವುದಕ್ಕೆ ನ್ಯಾಯವಿಲ್ಲವೆಂದೂ ನೋಡಿದರು. ಭಾಷೆಯು ಮುಖ್ಯಾಂಶವಾಗಿದ್ದರೂ ಜನಾಭಿಪ್ರಾಯವೂ ಮಹತ್ವದ ವಿಷಯ ಎಂದವರು ತಿಳಿಸಿ ಕೋಲಾರವನ್ನು ಕೇಳುವ ಆಂಧ್ರರು ಕೋಲಾರದ ಜನರ ಅಭಿಮತವೇನೆಂಬ ತಿಳಿದುಕೊಳ್ಳಬೇಕಾಗಿ ನಿನಂತಿಸಿದರು. ರಾಜಪ್ರಮುಖ ಹುದ್ದೆಯ ರದ್ದತಿ ಮತ್ತು ಎ, ಬಿ, ಸಿ ಎಂದು ಮುಂತಾಗಿ ರಾಜ್ಯಗಳನ್ನು ವಿಂಗಡಿಸಿದ್ದ ಕ್ರಮವನ್ನು ಅಂತ್ಯನನ್ನು ಆಯೋಗ ಸೂಚಿಸಿರುವುದಕ್ಕೆ ಅವರು ಆನಂದಿಸಿದರು. ಟಿಪ್ಪು ಸುಲ್ತಾನನ ಕಾಲದವರೆಗೆ ಒಂದೇ ಆಳಿಕೆಗೆ ಒಳಪಟ್ಟಿದ್ದರೂ ಬ್ರಿಟಿಷರ ತಂತ್ರದಲ್ಲಿ ವಿವಿಧ ಸರಕಾರಗಳ ಕೆಳಗೆ ಹಂಚಿಹೋದ ಕನ್ನಡ ನಾಡು ಮರಳಿ ಒಂದುಗೂಡುವಂತೆ ಆಯೋಗ ಮಾಡಿರುವುದಕ್ಕೆ ಅವರು ಅಭಿನಂದನೆಯನ್ನು ಸಲ್ಲಿಸಿದರು. ಮೈಸೂರಿನ ಕೆಲವರು ಕರ್ನಾಟಕ ಏಕೀಕರಣಕ್ಕೆ ವಿರೋಧವಿದ್ದಾರೆನ್ನುವ ವಿಷಯವನ್ನು ಪ್ರಸ್ತಾಪಿಸುತ್ತಾ, ಮೈಸೂರಿನ ಶಾಸನಾಂಗದ ಗೊತ್ತುವಳಿ ಹೀಗೆನ್ನುವುದಿಲ್ಲ ಎಂದರು. ಕನ್ನಡ ಮಾತನಾಡುವ ಎಲ್ಲ ಪ್ರದೇಶಗಳೂ ಕರ್ನಾಟಕದಲ್ಲಿ ಸೇರಬೇಕು ಎಂದವರು ಒತ್ತಾಯಿಸಿದರು.

ಅತ್ಯಾಕರ್ಷಕ ನಾಟಕ ಸಾಮಾನುಗಳು!

ಕುಣಿತ, ನರ್ತನೆ ನಾಟಕಾದಿಗಳಲ್ಲಿ ನಟನಟಿಯರು ಉಪಯೋಗಿಸುವ ಯಾವತ್ತೂ ಕೂಡಲು, ತೋಫನ್, ಗಡ್ಡ, ಮುಂಡಾಸು, ಕಿರೀಟ, ಜರಿ ಜ್ಞಿರಿ, ಜರಿ ರವಕೆ, ಕಿವಿ ಬೆಂಡೋಲೆ, ತುಟಿಗೆ ಹಚ್ಚುವ ಮಿರುಗಿನ ಅಂಟು, ತಲೆಸೂದಿ ಸುತ್ತುವ ಬಲೆ ಇತ್ಯಾದಿ ಮಾತ್ರಿ ಸಾಮಾನ್ಯ ಸಾಮಾನುಗಳು ಅತ್ಯಂತ ಸುಲಭ ಬೆಲೆಗೆ ಧಾರಾಳವಾಗಿ ದೊರೆಯುತ್ತವೆ.

ಸವಿವರವಾದ ಕ್ಯಾಟಲಾಗಿಗೆ
ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

Dharamshi Mulji, Dresswala,
132 C, Bhagatwadi, Bhuleshwar Road, BOMBAY—2.

ನೋಟೀಸು

ಪೆರ್ಡೂರು ಮಹತೋಬಾರ್ ಶ್ರೀ ಅನಂತಪದ್ಮನಾಭ ದೇವಸ್ಥಾನದ ಬಾಬ್ತು ಭತ್ತ ಮುಡಿ 485 (ನಾನ್ನೂರ ಎಂಭತ್ತೈದು) ಖರೀದಿಗೆ ಕೊಡುವುದಿದೆ. ಆ ಬಗ್ಗೆ ಇದೇ ತಾರೀಕು 30—12—55ನೇ ಶುಕ್ರವಾರ ಅಪರಾಹ್ನ ಘಂಟೆ 4ಕ್ಕೆ ಭಂಡಾರದ ಶರ್ತಕ್ಕೆ ಒಳಪಟ್ಟು ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಆಪೇಕ್ಷೆ ಉಳ್ಳವರು ಬಂದು ಏಲಂನಲ್ಲಿ ಭಾಗವಹಿಸಬಹುದು.

SRI ANANTHAPADMANABHA TEMPLE, PERDUR.

ಪೆರ್ಡೂರು,
ತಾ. 14—12—55. } K. B. Shetty,
Executive Officer.

ಮುಂಬಯಿ ನಗರ

ಮೈಸೂರಿನ ಪ್ರಜಾಸಮಾಜವಾದಿ ಧುರೀಣ ಶ್ರೀ. ಎಂ. ಪಿ. ಗುರುಸಾದ ಸ್ವಾಮಿಯವರೇ ಮುಂತಾದವರು ಕರ್ನಾಟಕ ಏಕೀಕರಣವನ್ನು ಸ್ವಾಗತಿಸಿದರು. ಪ್ರೊ. ರಂಗ ವಿಶಾಲಾಂಧ್ರದ ರಚನೆಗೆ ನೆಹರು ಆಪ್ತಿಯ ಜನರ ವಿಚಾರಗಳನ್ನು ತಿಳಿದು ಕೊಳ್ಳುವುದು ಅಪೇಕ್ಷಣೀಯ ಎಂದರು. ಸರದಾರ ಹುಕುಮು ಸಿಂಗರು ಪಂಜಾಬಿ ಸುಭಾದ ಬೇಡಿಕೆಯ ಪರವಾಗಿ ಮಾತನಾಡುತ್ತಾ ಆಯೋಗದ ಸೂಚನೆಗಳನ್ನು ಕಟುವಾಗಿ ಟೀಕಿಸಿದರು. ಆದರೆ ಹೆಚ್ಚಿನ ಬರುಸು ತಲೆದೋರಿದುದೆಂದರೆ ಮುಂಬಯಿ ನಗರದ ಭವಿಷ್ಯದ ಕುರಿತು ಸದಸ್ಯರು ಮಾತನಾಡಿದಾಗ ಎನ್ನಬಹುದು. ಶ್ರೀ. ಸದೋಬಾ ಪಾಟೀಲರು ಮುಂಬಯಿಯ ಮೇಲೆ ಮಹಾರಾಷ್ಟ್ರೀಯರು ಮುಂದಿಟ್ಟಿರುವ ಅಧಿಕಾರವನ್ನು ತಿರಸ್ಕರಿಸುತ್ತಾ ಈ ನಗರವು ಎಂದಿಗೂ ಏಕ ಭಾಷೀಯ ವಲಯದ ರಾಜಧಾನಿಯಾಗಲಾರದು ಎಂದು ಸಾರಿದರು. ಮಹಾರಾಷ್ಟ್ರೀಯರಿಗೆ ಆಯೋಗದ ಸೂಚನೆಯಂತೆ ವಿಶಾಲ ಮುಂಬಯಿ ರಾಜ್ಯದಲ್ಲಿರುವುದು ಬೇಡವಾಗಿದ್ದರೆ ಮುಂಬಯಿ ನಗರವನ್ನು ಪ್ರತ್ಯೇಕ ರಾಜ್ಯವಾಗಿ ರೂಪಿಸುವ ಪರಿಷ್ಕರ ಸೂಚನೆಯನ್ನು ಅವರು ಒಪ್ಪಲೇಬೇಕು ಎಂದರು.

ಗಾಡಗೀಳರ ವಾದ

ಕೇಂದ್ರದ ಹಿಂದಿನ ಮಂತ್ರಿ ಶ್ರೀ ಗಾಡಗೀಳರು ವಾಪೇಲರ ನಿಲುಮೆಗೆ ತೀರ ವಿರುದ್ಧವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮುಂಬಯಿ ನಗರದ ಸಮಸ್ಯೆಯು ಇತ್ಯರ್ಥಕ್ಕಾಗಿ ಮಹಾರಾಷ್ಟ್ರೀಯರು ಬಹಳ ದೂರದ ವರೆಗೆ ರಿಯಾಯಿತಿಯನ್ನು ತೋರಿಸುತ್ತಾ ಹೋಗಲು ಸಿದ್ಧರಾಗಿದ್ದಾರೆ; ಆದರೆ ಈ ರಿಯಾಯಿತಿಗೂ ಕೊನೆಗೊಂದು ಮಿತಿ ಇದೆ ಎನ್ನುತ್ತಾ ಗಾಡಗೀಳರು ಹೊಗಸು ತನ್ನ ನೀತಿಯನ್ನು, ರಾಷ್ಟ್ರವು ತನ್ನ ಸ್ವಾತಂತ್ರ್ಯವನ್ನು ಬಲಿಗೊಡುವುದು ಅಸಾಧ್ಯ ಹೇಗೂ ಹಾಗೆ ಮಹಾರಾಷ್ಟ್ರೀಯರು ಸ್ವಾಭಿಮಾನಶೂನ್ಯರಾಗುವಂತಿಲ್ಲ ಎಂದು ಸಾರಿದರು. ಮುಂಬಯಿ ನಗರ ಮಹಾರಾಷ್ಟ್ರೀಯರದು; ಅದನ್ನು ಮಹಾರಾಷ್ಟ್ರದ ರಾಜಧಾನಿಯಾಗಿಯೇ ಇಡಬೇಕು. ಹಾಗೆ ಮಾಡುವುದರಲ್ಲಿಯೇ ಮುಂಬಯಿ ನಗರದ ಬಂತವಳ ಪಾರಿಗಳ ಹಿತವೂ ಇದೆ— ಅಲ್ಲದಿದ್ದರೆ ನವಂಬರ್ ದಲ್ಲಿ ನಡೆದ ಘಟನೆಗಳ ಪುನರಾವರ್ತನೆಯಾದೀತು; ನಗರದ ಭವಿಷ್ಯ ಬೀದಿಯಲ್ಲಿ ನಿರ್ಣಯಿಸಲ್ಪಟ್ಟೀತು. ಮಹಾರಾಷ್ಟ್ರೀಯರು ಸ್ನೇಹಿತರ ನೆಲೆಯಿಂದ ಒಳ್ಳೆಯ ಮಿತ್ರರು; ಆದರೆ ಅವರಿಗೆ ಅನ್ಯಾಯ ಮಾಡಿದರೆ ಅದಕ್ಕೆ ಅವರು ಪ್ರತೀಕಾರ ಮಾಡಿಯೇ ತೀರುವುದು ಖಂಡಿತ ಎಂದು ಘೋಷಿಸಿದರು. ನಾವು ಮುಂಬಯಿ ನಗರದ ಮಹಾರಾಷ್ಟ್ರೇತರ ವರ್ಗಕ್ಕೆ ವಿಶೇಷ ಸೌಲಭ್ಯಗಳನ್ನೂ ರಕ್ಷಣೆಯನ್ನೂ ಕೊಡಲು ಸಿದ್ಧರಿದ್ದೇವೆ; ಆದರೆ ಆ ನಗರದ ಮೇಲಿನ ಅಧಿಕಾರವನ್ನು ತ್ಯಜಿಸುವಂತಿಲ್ಲ ಎಂದೂ ಅವರು ಸಾರಿದರು.

ದಯವಾಡಿ ಚಂದಾಹಣವನ್ನು ಕಳಿಸಿಕೊಡಿರಿ.

ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವ

ಪ್ರಧಾನಿ ನೆಹರುಗಳ ದೆಸೆಯಿಂದ ೧೬ ದೇಶಗಳಿಗೆ ಪ್ರವೇಶ

ಸಂಯುಕ್ತ ರಾಷ್ಟ್ರ ಸಂಘದ ಈ ಸಲದ ಅಧಿವೇಶನವು ಸುಕಾರ್ಯವಾಗಿದೆ— ಅದು ಯಶಸ್ವಿಯಾಯೇ ಮುಗಿಯಿತೆಂದು ಹೇಳಬಹುದು. ಈ ಭಾವನೆಗೆ ಕಾರಣವಾದ ಅಂಶವೆಂದರೆ ೧೬ ರಾಷ್ಟ್ರಗಳಿಗೆ ಹೊಸತಾಗಿ ದೊರೆತ ಸದಸ್ಯತ್ವ. ಇದರ ಕೀರ್ತಿ ಯಾರಿಗೆ ಸಲ್ಲಬೇಕೆಂದು ಅಮೇರಿಕದ ಜನಸ್ಪಿಯ ಪತ್ರಿಕೆಯೊಂದು ಅಭಿಪ್ರಾಯವನ್ನು ಕ್ರೋಢೀಕರಿಸಲು ನೋಡಿದಾಗ ಭಾರತದ ಶ್ರೀ. ಕೃಷ್ಣ ಮೆನೊನ್ ಮತ್ತು ಕೆನಡದ ಮಿ ಪಾವುಲ್ ಮಾರ್ಟಿನ್ ಇವರಿಗೆ ಸಲ್ಲಬೇಕೆಂದು ಬಹುಮತವು ತಿಳಿಸಿತು.

ಹೊಸ ಸದಸ್ಯ ದೇಶಗಳು

ಇದೇ ೧೪ನೇ ದಿನಾಂಕ ನಾಟಕೀಯ ಭಂಗಿಯಲ್ಲಿ ೧೬ ರಾಷ್ಟ್ರಗಳಿಗೆ ಸಂಯುಕ್ತ ರಾಷ್ಟ್ರ ಸಂಸ್ಥೆಯ ಸದಸ್ಯತ್ವ ದೊರಕಿತು. ಇವುಗಳಲ್ಲಿ ಆರು ರಾಷ್ಟ್ರಗಳು ಬಾಂಡುರಿಂಗ್ ಸಮ್ಮೇಳನದಲ್ಲಿ ಭಾಗವಹಿಸಿದ ಆಫ್ರೋಏಷ್ಯ ಗುಂಪಿಗೂ ೪ ಕಮ್ಯುನಿಷ್ಟ್ ಯುರೋಪಿನ ಗುಂಪಿಗೂ ೪ ಪಾಶ್ಚಾತ್ಯರ ವರ್ಚಸ್ಸಿನ ಯುರೋಪಿನ ಗುಂಪಿಗೂ ಉಳಿದ ಎರಡು ತಟಸ್ಥ ಗುಂಪಿಗೂ ಸೇರುತ್ತವೆ. ಪ್ರವೇಶ ಪಡೆದ ರಾಷ್ಟ್ರಗಳ ಹೆಸರು ಹೀಗಿದೆ— ಆಲ್ಬೇನಿಯ, ಜೋರ್ಡಾನ್, ಐರ್ಲೇಂಡ್, ಪೋರ್ಚುಗಲ್, ಹಂಗೇರಿ ಇಟಲಿ, ಆಸ್ಟ್ರಿಯ, ರುಮೇನಿಯ, ಬಲ್ಗೇರಿಯ, ಫಿನ್‌ಲೇಂಡ್, ಸಿಲೋನ್, ನೇಪಾಳ, ಲಿಬಿಯ, ಕಂಬೋಡಿಯ, ಲಾವೊಸ್ ಮತ್ತು ಸ್ಪೈನ್. ಜಪಾನ್ ಮತ್ತು ಹೊರ ಮಂಗೋಲಿಯಗಳೆಂಬ ಬೇರೆ ಎರಡು ರಾಷ್ಟ್ರಗಳ ಪ್ರವೇಶಕ್ಕೆ ಹೆಚ್ಚಿನವರ ಬೆಂಬಲವಿದ್ದರೂ ಪ್ರತಿಷೇದಾಧಿಕಾರ ಪ್ರಯೋಗದ ದೆಸೆಯಿಂದ ಈ ದಿಸೆಯಲ್ಲಿ ನಡೆದ ಪ್ರಯತ್ನ ಫಲಿಸಲಿಲ್ಲ

ಮೆನೊನ್ನರ ಪ್ರಯತ್ನ

ಒಟ್ಟು ಹದಿನೆಂಟು ರಾಷ್ಟ್ರಗಳಿಗೆ ಈ ಸಲದ ಅಧಿವೇಶನ ಕಾಲದಲ್ಲಿ ಪ್ರವೇಶ ದೊರಕಿಸಿ ಕೊಡಬೇಕೆಂದು ಪ್ರಯತ್ನ ಶೀಲರಾದವರೇ ಕೆನಡದ ಮಾರ್ಟಿನ್. ಅವರಿಗೆ ಹಿಂದಿನಿಂದ ಹೆಚ್ಚಿನ ಸಹಾಯವನ್ನು ಸಲ್ಲಿಸಿ, ಪ್ರಧಾನಿ ನೆಹರುಗಳ ಮೂಲಕ ಭಾರತದ ವರ್ಚಸ್ಸನ್ನು ಹೊಸ ದೆಹಲಿಯಲ್ಲಿ ಬಂದಿಳಿದಿದ್ದ ರಶ್ಯದ ಪ್ರಧಾನಿ ಬುಲ್ಗಾನಿನ್ ಮುಂತಾದವರ ಮೇಲೆ ಬೀರಿಸಿ, ಸದಸ್ಯತ್ವವನ್ನು ದೊರಕಿಸಿ ಕೊಡುವಮಾರ್ಗದಲ್ಲಿದ್ದ ಆತಂಕಗಳನ್ನು ಬಹುಮಟ್ಟಿಗೆ ದೂರ ಮಾಡಿದವರೇ ಮೆನನ್. ಇದಕ್ಕೆ ಸಂಬಂಧಿಸಿ ನಡೆದ ಕತೆ ಮನೋಜ್ಞವಾಗಿದೆ. ಎಲ್ಲ ರಾಷ್ಟ್ರಗಳವರೂ ಈಗ ಪ್ರವೇಶ ದೊರಕಿದ ೧೬ ರಾಷ್ಟ್ರಗಳಿಗೆ ಅನುಕೂಲವಾದ ಅಭಿಪ್ರಾಯವನ್ನೆ ಹೊಂದಿದ್ದರು. ಹೊರ ಮಂಗೋಲಿಯದ ವಿಷ್ಟಿಗೆ ಭದ್ರತಾ ಮಂಡಳದಲ್ಲಿ ಚೀನದ ಪ್ರತಿನಿಧಿ ಎಂಬ ನೆಲೆಯಿಂದ ಶಾಶ್ವತ ಸ್ಥಾನವನ್ನೆ ಪಡೆದಿರುವ ಚಿಯಾಂಗರ ಸರಕಾರ ನಿಷೇಧವನ್ನು ಸೂಚಿಸಿತು; ತನ್ನ ಬೆಂಬಲಕ್ಕೆ ನಿಲ್ಲಬಹುದಾಗಿರುವ ಹೊರ ಮಂಗೋಲಿಯಕ್ಕೆ ಸ್ಥಾನ ದೊರಕದಿದನ್ನು ಕಂಡು ರಶ್ಯವು ಪಾಶ್ಚಾತ್ಯ ರಾಷ್ಟ್ರಗಳ ಬೆಂಬಲವಿರುವ ೧೭ ರಾಷ್ಟ್ರಗಳ ಪ್ರವೇಶಕ್ಕೆ ಅಡ್ಡಿ ಮಾಡಿತು. ಉಳಿದ ರಾಷ್ಟ್ರಗಳ ಪ್ರವೇಶವೂ ಆಗ ದುರ್ಗಮವಾಯಿತು.

ನೆಹರುಗಳ ಮನವೊಲಿಸುವಿಕೆ

ಒಸ್ಮೆ ಹೀಗೆ ಅಧ್ಯಾಯ ಮುಗಿಯಲು ಈ ಸಿದ್ಧಿಯನ್ನು ಕೇಳಿ ನೆಹರುಗಳು ತುಂಬ ವಿಷಾದಿಸಿದರು. ಅವರು ಹೊರ ಮಂಗೋಲಿಯಕ್ಕೆ ಪ್ರವೇಶ ಸಿಗಲಿಲ್ಲವೆಂಬ ಸಿಟ್ಟಿನಿಂದ ರಶ್ಯವು ಬಾಕಿ ರಾಷ್ಟ್ರಗಳ ಪ್ರವೇಶಕ್ಕೆ—ಪಾಶ್ಚಾತ್ಯರಿಗೆ ಬುದ್ಧಿ ಕಲಿಸುವ ಇಚ್ಛೆಯಿಂದಲೆ ಆಗಲಿ— ಅಡ್ಡಿ ಮಾಡಿದುದನ್ನು ಬುಲ್ಗಾನಿನ್‌ರೊಡನೆ "ಸರಿಯಾದ ಕೆಲಸ ಆದಾಗಲಿಲ್ಲ" ಎಂದು ಆಕ್ಷೇಪಿಸಿದರು; ಅಲ್ಲದೆ ಅವರೆ ಮನವೊಲಿಸುವುದಕ್ಕೂ ಸಮರ್ಥರಾದರು. ರಶ್ಯದ ಪ್ರಧಾನಿಗಳು ಒಡನೆಯೇ ಸಂಯುಕ್ತ ರಾಷ್ಟ್ರ ಸಂಘದಲ್ಲಿನ ತನ್ನ ಪ್ರತಿನಿಧಿಗೆ ಸೂಚನೆ ಕಳುಹಿಸಿ ಮೇಲೆ ಹೇಳಿದ ೧೬ ರಾಷ್ಟ್ರಗಳ ಪ್ರವೇಶಕ್ಕೆ ಬೆಂಬಲವನ್ನು ವ್ಯಕ್ತ ಮಾಡಲು ಆಜ್ಞೆ ನೀಡಿದರು. ಈ ಔದಾರ್ಯಕ್ಕೆ ಭಾರತ ಸರಕಾರವು ರಶ್ಯಕ್ಕೆ ತುಂಬ ಕೃತಜ್ಞತೆಗಳನ್ನು ಸಲ್ಲಿಸಿದೆ; ಇದಕ್ಕೆ ಪ್ರತಿಯಾಗಿ ಪ್ರವೇಶ ಪಡೆದ ಎಲ್ಲ ರಾಷ್ಟ್ರಗಳ ಹಾಗು ಸಾಯುಕ್ತ ರಾಷ್ಟ್ರ ಸಂಘವನ್ನು ನಿಜವಾಗಿ ವಿಶ್ವಸಂಸ್ಥೆಯಾಗಿ ಮಾಡುವುದರಲ್ಲಿ ಆಸಕ್ತಿಯುಳ್ಳ ಎಲ್ಲರ ಪ್ರಶಂಸೆಯು 'ನೆಹರುಗಳ ಯಶಸ್ವಿ ಮಧ್ಯಸ್ಥಿಕೆಗೆ ದೊರಕಿದೆ.

ಚಿಯಾಂಗರ ಹಠ

ಈಗ ಜಪಾನಿಗೆ ಪ್ರವೇಶ ಸಿಕ್ಕಿಲ್ಲ— ಹೊರ ಮಂಗೋಲಿಯಕ್ಕೆ ಪ್ರವೇಶ ಕೊಡಲು ನಿರಾಕರಿಸಿದುದೇ ಇದರ ಕಾರಣ. ಹೊರ ಮಂಗೋಲಿಯಕ್ಕೆ ಪ್ರವೇಶ ಸಿಗದಂತೆ ನೂಡಿದ ಚಿಯಾಂಗರ ನಿಲುಮೆಯು ಯಾರಿಗೂ ಅರ್ಥವಾಗುತ್ತಿಲ್ಲ—ಅಮೇರಿಕಕ್ಕೆ ಸಹ ಇದು ಸಹನೆಯಾಗಿಲ್ಲ. ಚಿಯಾಂಗರು ಸಾಮಾನ್ಯವಾಗಿ ಅಮೇರಿಕದ ಕೈಯಚ್ಚಿನ ಗಿಣಿ—ಆದರೆ ಈಗ ಅಧ್ಯಕ್ಷ ಐಸೆನ್ ಹೋವರ್ ನೀಡಿದ ಸಲಹೆಗೂ ಧಿಕ್ಕಾರವನ್ನು ತೋರಿಸಿದ್ದಾರೆ. ಇದರಲ್ಲಿ ಅವರ ಉದ್ದೇಶವೇನಿರಬಹುದು? ರಾಜಕೀಯ ನಿರೀಕ್ಷಕರು ಅಭಿಪ್ರಾಯದಂತೆ, ಚಿಯಾಂಗರು ಅಮೇರಿಕವನ್ನು ಕೆಂಪು ಚೀನದ ವಿರುದ್ಧ ಎತ್ತಿ ಕಟ್ಟುವುದಕ್ಕಾಗಿಯೇ ಈ ತಂತ್ರವನ್ನು ಅನುಸರಿಸಿದ್ದಾರೆ. ಆದು ಹೇಗೆ? ಮಂಗೋಲಿಯಕ್ಕೆ ಸ್ಥಾನ ಸಿಗದುದರಿಂದ ಕಮ್ಯುನಿಸ್ಟರಿಗೆ ಸಿಟ್ಟಾಗುವುದು ಸಹಜ. ಅಮೇರಿಕೊಡನೆ ಈಗ ಕೆಂಪು ಚೀನ ರಾಜಕೀಯ ಮಟ್ಟದಲ್ಲಿ ಕೆಲವು ವಿಷಯಗಳ ಕುರಿತು ಸಂಧಾನದ ಮಾತುಕತೆ ನಡೆಯುತ್ತಿದೆ. ಚಿಯಾಂಗರ ಮನವೊಲಿಸಲು ಅಮೇರಿಕಕ್ಕೆ ಸಾಧ್ಯವಾಗದಿದ್ದುದನ್ನು ಕಂಡ ಕಮ್ಯುನಿಸ್ಟರು ಇನ್ನು ಮುಂದೆ ಅಮೇರಿಕದೊಡನೆ ಹೆಚ್ಚು ಸಲಿಗೆಯನ್ನು ತೋರಿಸದೆ ದ್ವೇಷ ಸಾಧಿಸಬಹುದು. ಅಮೇರಿಕ ಈಗ ಹೊಸ ಚುನಾವಣೆಗಳನ್ನು ಎದುರಿಸುತ್ತಿರುವುದರಿಂದ ಚಿಯಾಂಗರನ್ನು ಇಷ್ಟಕ್ಕಾಗಿ ಅಧ್ಯಕ್ಷ ಐಕರು ದೂಷಿಸಿವರೆ ಅವರ ರಾಜಕೀಯ ಧೋರಣೆ ದಿವಾಳಿ ಹೋಗುತ್ತದೆ. ಅವರು ಚಿಯಾಂಗರನ್ನೆ ಬೆಂಬಲಿಸಿ ಅನಿವಾರ್ಯವಾಗಿ ಮಾತನಾಡಿದರೆ, ಕೆಂಪು ಚೀನದ ಸಿಟ್ಟುನೆತ್ತಿಗೇರಬಹುದು. ಚಿಯಾಂಗರಿಗೆ ಪದ್ಯಕ್ಕೆ ಬೇಕಾದ ಪರಿಣಾಮ ಇದೇ ಆಗಿದೆ

ಕಕ್ಕದ ಅಡ್ಡಿ

ಜಪಾನಿನ ಪ್ರವೇಶಕ್ಕೆ ರಶ್ಯನೇ ಅಡ್ಡಿ ಮಾಡಿತು! ಹೊರ ಮಂಗೋಲಿಯದ

(೨ನೇ ಪುಟ ನೋಡಿರಿ)

ಭವ್ಯ ಶುದ್ಧ ಸೌರಭ.

ಮೈಸೂರು ಗಂಧದ ಎಣ್ಣೆ ಅತ್ಯುತ್ತಮ ಗುಣದ ಎಣ್ಣೆಯೆಂದು ಪರಿಗಣಿತವಾಗಿದೆ. ಮೈಸೂರು ಸರ್ಕಾರದ ಮುದ್ರೆ ಮತ್ತು ಚಿಹ್ನೆ ಇರುವ ಶುದ್ಧ ಮೂಲ ಶೀಷೆಗಳನ್ನು ಪಡೆಯುವ ಭರವಸೆಯನ್ನು ಹೊಂದಿರಿ.

ಮೈಸೂರು ಗಂಧದ ಎಣ್ಣೆ

ಅಪ್ಪಟವಾದ ಗಂಧದ ಎಣ್ಣೆ.

ಬೆರಕೆಯ ನೋಸದ ಎಣ್ಣೆಯನ್ನು ಕೊಳ್ಳುವುದು ಬೇಡ.

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ,

ಮೈಸೂರು.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೫	ಉಡುಪಿ ೨೨-೧೨-೧೯೫೫	ಸಂಚಿಕೆ ೧೨

ಯಾವುದು ನಿಜವಾದ ಚೀನ?

ಸಂಯುಕ್ತ ರಾಷ್ಟ್ರಸಂಘದ ಸದಸ್ಯತ್ವವು ಈಗ ೧೬ ರಾಷ್ಟ್ರಗಳಿಗೆ ಹೊಸತಾಗಿ ದೊರಕಿದೆ. ಇದು ಸಾಮಾನ್ಯವಾಗಿ ವಿಶ್ವ ಸಂಸ್ಥೆ ಎಂದುಕರೆಯಲ್ಪಡುವ ಸಂಯುಕ್ತ ರಾಷ್ಟ್ರ ಸಂಘವನ್ನು ನಿಜವಾದ ಅರ್ಥದಲ್ಲಿ ಜಗತ್ತಿನ ಪ್ರತಿನಿಧಿಯಾಗಿ ಮಾಡಿದೆ ಎನ್ನಲಾಗುತ್ತದೆ. ರಾಷ್ಟ್ರಸಂಘದ ಸ್ಥಾಪನೆಯ ಹೊತ್ತಿಗೆ ೫೦ ರಾಷ್ಟ್ರಗಳಷ್ಟೆ ಸದಸ್ಯತ್ವವನ್ನು ಹೊಂದಿದ್ದವು; ಆ ಮೇಲೆ ೯ ರಾಷ್ಟ್ರಗಳಿಗೆ ಸ್ವವೇಶ ನೀಡಲಾಯಿತು. ಮುಂದೆ ಆಮೇರಿಕಕ್ಕೂ ರಶ್ಯಕ್ಕೂ ಮನಸ್ತಾಪ ಹೆಚ್ಚಾದ ದೆಸೆಯಿಂದ ಒಂದರ ಬೆಂಬಲವಿದ್ದ ದೇಶದ ಅರ್ಜಿಗೆ ಇನ್ನೊಂದರು ಮನ್ನಣೆಯನ್ನು ಕೊಡದೆ ಪ್ರವೇಶ ದುರ್ಲಭವಾಗಿ ಹೋಯಿತು. ಈ ಸಲದ ಅಧಿವೇಶನ ಕಾಲದಲ್ಲಿ "ಜಿನೆವಾ ವಾತಾವರಣ" ಎಷ್ಟು ಮಟ್ಟಿಗೆ ಉಳಿದಿದೆ ಎಂಬುದರ ಪ್ರಯೋಗ ಮಾಡಿ ನೋಡುವ ಹುಮ್ಮಸ್ಸಿನಿಂದಲೋ ಎಂಬಂತೆ ಕೆನಡದ ರಾಜಕೀಯ ಧುರೀಣರು ೧೮ ಹೊಸ ರಾಷ್ಟ್ರಗಳ ಪ್ರವೇಶಕ್ಕೆ ಅಮೇರಿಕ ಹಾಗು ರಶ್ಯದ-ಎರಡೂ ಗುಂಪುಗಳ ಮನಪೊಲಿಸಲು ಬಹಳವಾಗಿ ಹೆಣಗಿದರು. ಈ ಕೆಲಸದಲ್ಲಿ ಸಾಮಾನ್ಯ ಯಶಸ್ಸು ಸಿಕ್ಕಿದೆ. ೧೬ ರಾಷ್ಟ್ರಗಳಿಗೆ ಸದಸ್ಯತ್ವ ದೊರೆತು, ರಾಷ್ಟ್ರಸಂಘವೆ ೭೭ ರಾಷ್ಟ್ರಗಳ ಪ್ರತಿನಿಧಿಯಾಗಿ ಮೆರೆಯುವ ಅವಕಾಶ ಒದಗಿದೆ. ಕಮ್ಯುನಿಸಂ ಪದ್ಧತಿಯನ್ನು ಅಂಗೀಕರಿಸಿರುವ ದೇಶದಲ್ಲಿಯ ಸರಕಾರಗಳಿಗೆ ಜನತೆಯ ನಿಜವಾದ [ಬೆಂಬಲವಿಲ್ಲ, ಆದುದರಿಂದ ಆ ಸರಕಾರಗಳು ಪ್ರಾತಿನಿಧಿಕ ಸ್ವರೂಪವನ್ನು ಹೊಂದಿಲ್ಲ ಎಂದೆಲ್ಲ ಹೇಳುತ್ತಿದ್ದ ಅಮೇರಿಕವು--ರಶ್ಯದ ಪ್ರಾತಿನಿಧಿಕ ಸ್ವರೂಪವನ್ನು ಒಪ್ಪಿದ ಉದಾಹರಣೆಯಿದ್ದರೂ ಸಹ—ಕೇವಲ ಸರ್ವಾಧಿಕಾರಿತ್ವವೆ ನಡೆಯುತ್ತಿರುವ ಪೋರ್ಚುಗಲ್, ಸ್ಪೇಯಿನ್ ಇಂಥ ದೇಶಗಳ ಪ್ರವೇಶಕ್ಕೆ ಅದು ಸಮ್ಮತಿಸಿರುವುದು ಒಂದು ವಿಶೇಷ. ಈ ರಾಷ್ಟ್ರಗಳಿಗೆ ಸಂಯುಕ್ತ ರಾಷ್ಟ್ರ ಸಂಘದ ತಾತ್ಪು ಪಟದಲ್ಲಿ ಎಷ್ಟರ ಮಟ್ಟಿಗೆ ವಿಶ್ವಾಸವಿಳಿಯುತ್ತದೋ ಕಾದು ನೋಡಬೇಕಾಗಿದೆ; ದಕ್ಷಿಣ ಆಫ್ರಿಕದಂಥ ರಾಷ್ಟ್ರಕ್ಕೆ ವರ್ಣ ದ್ವೇಷವು ಪವಿತ್ರವೆನಿಸಿದಂತೆ, ಫ್ರಾನ್ಸ್, ಬ್ರಿಟನ್ ಇತ್ಯಾದಿಗಳಿಗೆ ವಸಾಹತು ವಾದವು "ಅಂತರಿಕ ವಿಷಯ" ಎಂದು ಕಂಡಂತೆ—ಪೋರ್ಚುಗಲ್, ಸ್ಪೇಯಿನ್ ಇವುಗಳ ಪಾಲಿಗೆ ತಮ್ಮ ಪೊಂಡು ದಾರಿಯೇ ಸಮಂಜಸವಾದು ದೆಂಬ ವಾದ ಮುಂದಿಡುವ ದಿನಗಳು ಬರ ಬಹುದು. ಅದೇನೇ ಇರಲಿ-ಊರಿದ್ದೆಲ್ಲಿ ಹೊಲಗೇರಿಯೂ ಇದ್ದೇ ತೀರುವುದೆಂಬಂತೆ ಜಗತ್ತಿನ ಪ್ರಾತಿನಿಧಿಕ ಸ್ವರೂಪವನ್ನು ವ್ಯತ್ಯಪಡಿಸುವ ರಾಷ್ಟ್ರ ಸಂಘವು ಒಳ್ಳೆಯ ಅಂಶಗಳ ಮಿರುಗಿನೊಡನೆ ಕೆಲವು ಕೆಟ್ಟ ವಿಷಯಗಳನ್ನೂ ತನ್ನ ಹೊಟ್ಟೆಯ ಬ್ಲಿಟ್ಟು ಕೊಳ್ಳಬೇಕಾಗುತ್ತದೆ. ವ್ಯಾವಹಾರಿಕ ಕ್ಷೇತ್ರದಲ್ಲಿಯ ಈ ಕಷ್ಟವನ್ನು ಯಾರಿಂದರೂ ಚಿನ್ನಾಗಿ ಅರ್ಥಮಾಡಿಕೊಳ್ಳಬಲ್ಲರು-ಆದುದರಿಂದ ಹೊಸ ರಾಷ್ಟ್ರಗಳು ತಾಮ್ಮುಪಟಕ್ಕೆ ನಿಷ್ಠೆ ತೋರಿಸುತ್ತವೆ ಎಂಬ ಈಗಿನ ನಂಬಿಕೆಯಿಂದಲೇ ನಾವು ಸಂತೋಷಪಡಬೇಕಲ್ಲದೆ, ಹೆಚ್ಚಿ ತಪ್ಪಿದಂತೆ ಅವು ಕಂಡರೆ ಎಚ್ಚರಿಕೆಯ ಹಾಗು ತಿಳಿಸಿ ಹೇಳುವ ಕ್ರಮವನ್ನು ಅನುಸರಿಸಿ ಪಾಪಿತ್ಯ ರಕ್ಷಣೆಗೆ ಮುಂದಾಗಬಹುದು. ಭಾರತದ ಅಭಿಪ್ರಾಯವಂತೂ ಇದೇ ಆಗಿದೆ -ಆದುದರಿಂದ ನಮ್ಮ ಸರಕಾರವು ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವವನ್ನು ಹೆಚ್ಚಿಸುವುದಕ್ಕೆ ತುಂಬ ಪ್ರಯತ್ನ ಮಾಡಿದೆ; ಯಶಸ್ಸನ್ನು ಗಳಿಸಿದೆ; ಇದು ಶ್ಲಾಘನೀಯವಾದ ವಿಚಾರ. ಆದರೆ ಪಾಶ್ಚಾತ್ಯ ರಾಷ್ಟ್ರಗಳ ದೃಷ್ಟಿಯಿಂದ ಈಗ ರಾಷ್ಟ್ರ ಸಂಘವು ಜಗತ್ತನ್ನು ಎಷ್ಟೇ ಹೆಚ್ಚಾಗಿ ಪ್ರತಿನಿಧಿಸಲಿ-ಎಷ್ಟಾದ ನಿಲುಮೆಯಂತೆ ಅದು ಜಗತ್ತಿನ ಮೂರರಲ್ಲಿ ಒಂದಂಶ ಜನತೆಯ ಪ್ರತಿನಿಧಿತ್ವವನ್ನು ಪಡೆಯದೆ ಉಳಿದಿದೆ: "ಕೆಂಪು" ಚೀನಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರವೇಶ ಸಿಗುವ ವರೆಗೆ ಅದನ್ನು ನಿಜವಾದ ವಿಶ್ವ ಸಂಸ್ಥೆ ಎನ್ನಲಾಗದೆಂದು ಭಾರತವೂ ಇತರ ವಿಶ್ವದ ರಾಷ್ಟ್ರಗಳೂ ರಶ್ಯ ಹಾಗು ಅದರ ಹಿಂಬಾಲಕ ರಾಷ್ಟ್ರಗಳೂ ಅಭಿಪ್ರಾಯಪಡುತ್ತವೆ. ಚೀನದ ಜೇರಿನಲ್ಲಿರುವ ಸ್ಥಾನದಲ್ಲೀಗ ಚಿಯಾಂಗರ "ರಾಷ್ಟ್ರೀಯ" ಚೀನದ ಪ್ರತಿನಿಧಿ ಕುಳಿತು ಕೊಳ್ಳುತ್ತಿದ್ದಾನೆ; ಅಮೇರಿಕದ ಬೆಂಬಲದಿಂದ ಇದು ಸಾಧ್ಯವಾಗಿದೆಯೆ ಹೊರತು ಬೇರಾವ ನೈತಿಕ ಬಲವೂ ಇದಕ್ಕಿಲ್ಲ. ಚಿಯಾಂಗರ ಕೈಗೊಂಬೆ ಹೇಳಿದ ಮಾತುಗಳೇ ಚೀನದ ಅಭಿಪ್ರಾಯಗಳೆಂದು ಭಾವಿಸುವುದು ಈಗ ತೀರ ಹಾಸ್ಯಾಸ್ಪದ ವೆನಿಸುತ್ತದೆ; ಕಳೆದ ಏಳು ವರ್ಷಗಳಿಂದ ತಲೂ ಹೆಚ್ಚು ಸಮಯದಿಂದ ದೃಢವಾಗಿ ಅಸ್ತಿತ್ವಕ್ಕೆ ಬಂದು, ದೇಶದೊಳಗೆ ಭದ್ರ ಆಡಳಿತವನ್ನು ನೆಲೆಗೊಳಿಸಿರುವ "ಕೆಂಪು" ಚೀನದ ಸರಕಾರವೇ ಅರುವತ್ತು ಕೋಟಿಗಿಂತಲೂ ಹೆಚ್ಚು ಸಂಖ್ಯೆಯ ಚೀನರ ಅಭಿಪ್ರಾಯವನ್ನು ಮಂಡಿಸಬಲ್ಲುದಲ್ಲದೆ, ದ್ವೀಪಾಂತರವಾಸಿಯಾದ ಚಿಯಾಂಗರ ಸರಕಾರವಲ್ಲ. ಚಿಯಾಂಗರದು "ರಾಷ್ಟ್ರೀಯ" ಸರಕಾರವೆನ್ನುವುದು ಎಷ್ಟಕ್ಕೂ ವಿವೇಕಯುತವೆನಿಸದು. "ಕೆಂಪು" ಚೀನದ ಪ್ರವೇಶ ನಿರಾಕರಣೆ ಗಂತೂ ಈ "ರಾಷ್ಟ್ರೀಯ" ಸರಕಾರ ದ್ವೀಪಾಂತರವಾಸವನ್ನನುಭವಿಸುತ್ತಲೇ ಆಗಲಿ, ಅಸ್ತಿತ್ವದಲ್ಲಿದೆ ಎಂಬ ಮಾತು ಯೋಗ್ಯ ಕಾರಣವಾಗಲಾರದು. "ಕೆಂಪು" ಚೀನವು ಈಗ ನಾವೆಷ್ಟು ದೂರದೃಷ್ಟಿ ಬೀರಬಹುದೊ ಅಷ್ಟುಸಮಯದ ವರೆಗೆ ಉಳಿಯಲು ಬಂದಿದೆಯೇ ಹೊರತು ಅದು ಚಿಯಾಂಗರ ಬಲದಿಂದ ಬುಡ ಮೇಲಾಗುವಂತಿಲ್ಲ. ಸತ್ಯ ಹೀಗಿರುವಾಗ ಅದು ಸರಕಾರವೇ ಅಲ್ಲವೆನ್ನುವ ಅಮೇರಿಕದ ನಿಲುಮೆ ಹಠಮಾರಿತನವಾದೀತು ಹೊರತು ವಸ್ತು ಸ್ಥಿತಿಯ ವರ್ಣನೆಯಾಗದು. ಸ್ವತಃ ಅಮೇರಿಕವೇ "ಕೆಂಪು" ಚೀನದ "ಪ್ರತಿನಿಧಿ"ಯೊಡನೆ ಜನೇವದಲ್ಲಿ ಮಾತುಕತೆ ನಡೆಸುತ್ತಿದೆ; ವಸ್ತುವೇ ಇಲ್ಲದಿದ್ದರೆ ನೆರೆಳೆಲ್ಲಿಂದ? ಕೆಂಪು ಚೀನದಲ್ಲಿರುವುದು ಸರಕಾರವೇ ಅಲ್ಲವೆಂದ ಮೇಲೆ ಅಮೇರಿಕ ಮಾತನಾಡುವುದು ಯಾರ ಪ್ರತಿನಿಧಿಯೊಡನೆ? ಈ ಹಿನ್ನೆಲೆಯಲ್ಲಿ ಅಮೇರಿಕವು ಇನ್ನಾದರೂ ತನ್ನ ನಿಲುಮೆಯನ್ನು ಸುಸಂವಿಮರ್ಶಿಸಬೇಕು. ಕೊರಿಯದ ಕಾಳಗ, ಇಂಡೋಚೀನದ ಸಮರ ಇತ್ಯಾದಿ ಘನಗಂಭೀರ ಸಮಸ್ಯೆಗಳ ಇತ್ಯರ್ಥ ಕಾಲದಲ್ಲಿ "ಕೆಂಪು" ಚೀನದೊಡನೆ ಸಂಧಾನ ಮಾಡಿಕೊಳ್ಳಲೇ ಬೇಕಾಗಿಬಂದ ಸತ್ಯವನ್ನು ಮರೆಯ ಕೂಡದು. ಆ ದೇಶದೊಡನೆ ಸಾರ್ವತ್ರಿಕ ಪ್ರಭಾವವನ್ನು, ಜಾಗತಿಕ ಪ್ರತಿನಿಧಿ ಸ್ವರೂಪದ ಸಂಸ್ಥೆಯೊಂದರ ಸದಸ್ಯತ್ವ ಕೊಡಿರುವ ಮೂಲಕ, ಬೀರುವ ಆವಕಾಶ ದೊರೆತರೆ ಅ ಮೇರಿಕಕ್ಕೂ ಲಾಭವೇ ಆದೀತು; ಏಶ್ಯದ ಹಾಗು ಜಗತ್ತಿನ ಕಠಿಣ ಸಮಸ್ಯೆಗಳ ನಿವಾರಣೆಗಂತೂ ಇದು ತುಂಬ ಲಾಭದಾಯಕವಾಗುವುದು ಖಂಡಿತ. "ಯಾವುದು ನಿಜವಾದ ಚೀನ?" ಎಂಬುದೇ ಮುನ್ನಗಾಣ ಬೇಕಾದ ವಿಷಯ. ಅಮೇರಿಕ ಮನಗೆಂಡರೆ ಎಲ್ಲಿಗೆ ಎಲ್ಲರೂ ಮನಗೆಂಡು ತಾಗುತ್ತದೆ: ಇನ್ನಾದರೂ, ಅಮೇರಿಕ ವಿವೇಕವನ್ನು ತೋರಿಸಲಿ!

ಉಡುಪಿ

ಅಖಿಲಭಾರತ ಉತ್ಪಾದಕ ಸಂಘದ— ಕೇಂದ್ರ ಸಮಿತಿಯ ಸಭೆಯು ಮಣಿಪಾಲದಲ್ಲಿ ತಾ. ೨೬ರಂದು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ 'ಜನರಲ್ ಎಸೆಂಬ್ಲಿ ಹಾಲ್'ನಲ್ಲಿ ಪೂ. 11.30ಕ್ಕೆ ಸೇರಲಿದೆಯೆಂದೂ, ಸಭೆಯ ಉದ್ಘಾಟನೆಯನ್ನು ಮೈಸೂರಿನ ಕೈಗಾರಿಕಾ ಮಂತ್ರಿಗಳಾದ ಶ್ರೀ ಎಚ್. ಎಸ್. ಚಿನ್ನೆ ಬಸಪ್ಪನವರು ಜರಗಿಸಲಿರುವರೆಂದೂ, ಸಭೆಗೆ ಎಲ್ಲರೂ ಬರಬೇಕೆಂದೂ, ಸ್ವಾಗತ ಸಮಿತಿಯ ಅಧ್ಯಕ್ಷರಾದ ಡಾ. ಟಿ. ಮೂಧನ ಕೈಗಳು ತಿಳಿಸುತ್ತಾರೆ.

ಉಡುಪಿ ಸರ್ಕಲ್ ಕಾಂಗ್ರೆಸ್— ಕಮಿಟಿಯ ನೂತನ ಸದಸ್ಯರ ಸಭೆಯು ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ತಾ. ೧೯ರಂದು ಜರಗಿ ಕಾರ್ಯಕಾರಿ ಸಮಿತಿಯು ರಚಿಸಲ್ಪಟ್ಟಿತು. ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆ (ಅಧ್ಯಕ್ಷ) ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಮತ್ತು ಶ್ರೀಮತಿ ಪಾಂಗಾಳ ಅನ್ನಪ್ಣ ನಾಯಕ್; (ಉಪಾಧ್ಯಕ್ಷರು) ಶ್ರೀ ಕೆ. ನರೆಸರಿ ಕಾಮತ್; (ಕಾರ್ಯದರ್ಶಿ) ಶ್ರೀ ಎ. ಜೆ. ಅಡ್ಕೆ ಮತ್ತು ಶ್ರೀಮತಿ ಮನೋರಮಾ ಆಚಾರ್ಯ; (ಜತೆ ಕಾರ್ಯದರ್ಶಿಗಳು) ಶ್ರೀ ಕೆ. ಹೊಸ್ಕಟ್ಟೆ ಶೆಟ್ಟಿ (ಕೋಷಾಧಿಕಾರಿ) ಶ್ರೀಗಳಾದ ವಿ.ಆಮಾನಾಥ ಹೆಗ್ಡೆ, ಕೆ.ಆನಂದ ಹೆಗ್ಡೆ, ವಿ.ರಾಮವಾಸಪ್ಪೆ, ಕೆ. ಗೋವಿಂದಾಚಾರ್ಯ ಕಾಮತ್, ಬಿ. ವೈಕಾ, ಕೊಚ್ಚಿಕಾರ್ ಮಂಜುನಾಥ ಪೈ, ಮತ್ತು ದೋಕ್ಕಿಣೆರ್ಯಂಡಿಸರು ಸದಸ್ಯರಾಗಿ ಆರಿಸಲ್ಪಟ್ಟರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಗಳು ಆರಂಭದಲ್ಲಿ ಕಾಂಗ್ರೆಸಿಗರ ಜನಾಬ್ಜಾರಿಯ ಕುರಿತೂ ಅಂತ್ಯದಲ್ಲಿ ಅಧ್ಯಕ್ಷ ಶ್ರೀ ಹೆಗ್ಡೇರ ಕಾಂಗ್ರೆಸ್ ನಿಷ್ಠೆಯ ಕುರಿತೂ ಮಾತನಾಡಿದರು.

ಹುರಿಹಗ್ಗ ಸಹಕಾರಿ ಸಂಘದ ಮಹಾಸಭೆಯು— ತಾ. ೧೬ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಗೆ ಹುರಿಹಗ್ಗದ ವ್ಯವಸಾಯದ ಬಗ್ಗೆ ೪ ಲಕ್ಷ ರೂಪಾಯಿ ಸಹಾಯ ದೊರೆತುವುದೆಂದು ಅವರು ಹೇಳಿದರು.

ಇಂಜಿನಿಯರಿಂಗ್ ವಿಭಾಗದ ಉದ್ಘಾಟನೆ— ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನಲ್ಲಿ ತಾ. ೧೬ರಲ್ಲಿ ಶ್ರೀ ಟಿ. ಎ. ಪೈ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ನಿರ್ವಾಹಕಾರಿ ಶ್ರೀ ಎಚ್. ಸಂಜೀವ ಭಟ್ಟರು ಎಂಜಿನಿಯರಿಂಗ್ ವಿಭಾಗದ ಉದ್ಘಾಟನೆಯನ್ನು ನೆರವೇರಿಸಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಎಸ್. ಎನ್. ಮಥಾಯಿಸರು ಸ್ವಾಗತಭಾಷಣ ಮಾಡಿದರು.

ಉಡುಪಿ ಪರಿಯಾಳ ಸಮಾಜ ಸುಧಾರಕ ಸಂಘದ— ಕಾರ್ಯಕಾರೀ ಸಮಿತಿ ಸಭೆಯು ತಾ. ೧೪ರಲ್ಲಿ ಸಂಘದ ಅಧ್ಯಕ್ಷ ಶ್ರೀ ಯು. ಪಿ. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾದ ವಿದ್ಯಾವೇತನದ ನಿಧಿಯಿಂದ ಮೂರು ಶಾಲಾ ಬಡವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೊಡುವುದೆಂದೂ ಸಂಘದ ವಾರ್ಷಿಕ ಅಧಿವೇಶನವನ್ನು ಎಂದಿನಂತೆ ಈ ಬಾರಿಯೂ ಉಚ್ಚಿಲದಲ್ಲಿ ಜರಗಿಸಬೇಕೆಂದೂ ನಿರ್ಣಯವಾಯಿತು.

ಮುನಿಸಿಪಲ್ ಕೌನ್ಸಿಲಿನ ವಿಶೇಷ ಸಭೆಯು— ತಾ. ೧೬ರಲ್ಲಿ ಸ್ಪೆಂಜಿ ಚಿರ್ಮೆನ್ ಶ್ರೀ ಕೆ. ಕೆ. ಪೈ ಅಧ್ಯಕ್ಷತೆಯಲ್ಲಿ ಜರಗಿತು. ನೀಟಿಕ ಸಮಿತಿಗೆ ಶ್ರೀ ಟಿ. ಪೈಕಾರನವರು ಒಮ್ಮತದಿಂದ ಆರಿಸಲ್ಪಟ್ಟರು. ನಂತರ ಇನ್ನೊಂದು ಸಭೆಯು ಜರಗಿತು. ಕಂಬ್ಯಾಕ್ಟ್ ಕಮಿಟಿಗೆ ಶ್ರೀ ಟಿ.ಎ.ವಾಸುದೇವನ್ ರವರು ಸರ್ವಾನುಮತದಿಂದ ಆರಿಸಲ್ಪಟ್ಟರು.

ಬಂಟರ ಯಾನೆ ನಾಡವರಸಂಘ

ನಮ್ಮ ಸಂಘದ ವಾರ್ಷಿಕ ಮಹಾಸಭೆಯು ಇದೇ ದೆರಂಬರ ತಾ. ೨೫ನೇ ಆದಿತ್ಯವಾರ ಅಪರಾಹ್ನ ಘಂಟೆ ೩ಕ್ಕೆ ಶ್ರೀ ಕೆ. ಸುಬ್ಬಣ್ಣ ಸಕ್ಕಳರ (Retd. Sub Registrar) ಆಧ್ಯಕ್ಷತೆಯಲ್ಲಿ ಸುಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದು. ತಾವು ಸಭೆಗೆ ಮಯಪೂಡಿ ಬರಬೇಕಾಗಿ ಸಂಘದ ಆಡಳಿತ ಕಮಿಟಿಯ ಸರವಾಗಿ ವಿನಂತಿ.

ಕೆ ಸುಂದರರಾಮು ಶೆಟ್ಟಿ.
ಕಾರ್ಯದರ್ಶಿ,
ಸುಂಗಳೂರು

ಶ್ರೀ ಹಿ. ರಾ. ಸುಳ್ಳರು ದಿವಂಗತರಾದರು— ಜಿಲ್ಲೆಯ ಹಿರಿಯ ಕಾಂಗ್ರೆಸಿಗರೂ, ಸತತ ಖಾದಿಧಾರಿಗಳೂ ಸುಪ್ರಸಿದ್ಧ 'ಗಾಂಧೀ ಶಿಷ್ಯ'ರೂ ಆದ ಶ್ರೀ ಬಿರಿಯಡಕ ರಾಮರಾಯ ಸುಳ್ಳರು ದಿನಾಂಕ ೧೯ರಂದು ತಮ್ಮ ಮಂಗಳೂರಿನ ನಿವಾಸದಲ್ಲಿ ಹೃದಯ ಸ್ತಂಬನದಿಂದ ದಿವಂಗತರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ.

ಶ್ರೀ ಹಿ. ರಾ. ಸುಳ್ಳರು ೧೪-೯-೧೯೧೯ರಲ್ಲಿ ಜನ್ಮವೆತ್ತಿದರು. ತಮ್ಮ ಕಾಲೇಜು ಶಿಕ್ಷಣದ ಸಮಯದಲ್ಲಿ ಗಾಂಧೀಜಿಯವರ ಕರೆಗೆ ಸ್ಪೂರ್ತಿಗೊಂಡು ಅಸಹಕಾರ ಚಳವಳಿಗೆ ಮುಮುಕಿದರು. ಮುಂದೆ ಜೆಲ್ಲೆಯಾದ್ಯಂತ ಸಂಘಟನಾ ಕಾರ್ಯವನ್ನೂ, ಪ್ರಚಾರವನ್ನೂ ಕೈಗೊಂಡು, ೧೯೩೦ರಲ್ಲಿ ಬಂಧಿಸಲ್ಪಟ್ಟು ಒಂದು ವರ್ಷ ಜೈಲುವಾಸವನ್ನನುಭವಿಸಿದರು. ಶ್ರೀಯುತರು ಸಂಪಾದಕರಾಗಿ, ಲೇಖಕರಾಗಿ, ಕನ್ನಡ ಪತ್ರಿಕೋದ್ಯಮಕ್ಕೆ ತುಂಬಾ ಸೇವೆ ಸಲ್ಲಿಸಿದ್ದಾರೆ. ಇತ್ತೀಚೆಗೆ ಇವರು ಬರೆದ 'ವಾಲಿಂಟಿಯರ್ ರ್ಯಾನು' ಯೆಂಬ ಸುಸ್ತಕದಲ್ಲಿ ಇವರು ತಮ್ಮ ಅತ್ಯಕತೆಯನ್ನು ಚಿತ್ರಿಸಿರುತ್ತಾರೆ. ಶ್ರೀ ಸುಳ್ಳರು ತಮ್ಮ ಪಾಡಿದ ಹಾಗೂ ಎಂಟು ಸುಂದಿ ಸುತ್ತಳಸು ತೊರೆದು ಹೋಗಿರುತ್ತಾರೆ. ಪೃತರ ಆತ್ಮಕ್ಕೆ ಶಾಂತಿಯೊರಕಲಿ.

ಚಂದಾದಾರರಲ್ಲಿ—

ನಾವು ವರ್ಷಕ್ಕೊಮ್ಮೆ ರಜೆ ಮಾಡುವಂತೆ ಬರುವ ನಾರದ (ತಾ. 29—12—55ರ) 'ನವಯುಗ' ಸಂಚಿಕೆಯ ಪ್ರಕಟಣೆಯನ್ನು ನಿಲ್ಲಿಸಿದ್ದೇವೆ. ಜನವರಿ ತಾ. 5ರ ಸಂಚಿಕೆ ಕ್ರಮವಾಗಿ ಹೊರಡುವುದು, ಅಲ್ಲದೆ ತಾ. ತಾ. 26—1—1956ಕ್ಕೆ ಪ್ರಜಾರಾಜ್ಯ ವಿಶೇಷ ಸಂಚಿಕೆಯು ವಾಡಿಕೆಯಂತೆ ವಿಶೇಷ ತರದಲ್ಲಿ ಹೊರಡುವುದು.

—ಸಂಚಾಲಕ.

(೧ನೇ ಪುಟದಿಂದ)

ಅಂತಾರಾಷ್ಟ್ರೀಯ ಕ್ಷೇತ್ರವಲ್ಲಿ ಅನುಸರಿಸುತ್ತಿರುವುದಲ್ಲವೆ ಆರ್ಥಿಕಾಭಿವೃದ್ಧಿಯ ಉದ್ದೇಶವನ್ನಿಟ್ಟುಕೊಂಡಿವೆ. ಇಷ್ಟರ ವರೆಗೆ ಇಲ್ಲಿ ಏಷಾಹತು ಆಳಿಕೆಯನ್ನು ನಡೆಸಿದ ಬ್ರಿಟನ್, ಫ್ರಾನ್ಸ್ ಇತ್ಯಾದಿಗಳಿಗೆ ಇದು ಬಹುಶಃ ಸಹಿಸಲಿಯಲಿಲ್ಲ. ಅವುಗಳು ವಿಸ್ತರಾಷ್ಟ್ರವಾದ ಅಮೇರಿಕದ ಸಹಾನುಭೂತಿಯನ್ನು ಸಂಪಾದಿಸಿ, ಏಶ್ಯದ ರಾಷ್ಟ್ರಗಳ ಪುನರುತ್ಥಾನವನ್ನು ತಡೆಗಟ್ಟಲು ಸೈನಿಕ ಒಪ್ಪಂದಗಳಲ್ಲಿ ನಿರತವಾಗಿವೆ; ಆಸ್ಟ್ರೇಲಿಯ, ಥೈಲೆಂಡ್, ಪಾಕಿಸ್ತಾನ್ ಮುಂತಾದ ಅವುಗಳ ಬಾಲ ಬಡಕ ರಾಷ್ಟ್ರಗಳು ಹೌದಪ್ಪ ಗಳ ಪಾತ್ರವನ್ನು ವಹಿಸುತ್ತಿವೆ.

ನೇಲಿನಂತೆ ನಾವು ಭಾವಿಸಿದರೆ ತಪ್ಪೇನು? ಅಮೇರಿಕದ ಡಲ್ಲೆಸರು ತಮ್ಮ ದೇಶದ ಕ್ಷೇಮವು ಚಿಗ್ನೇಯ ಏಶ್ಯದ ಶಾಂತಿಯನ್ನು ಹೊಂದಿಕೊಂಡಿದೆ ಎಂದು ಹೇಳುತ್ತಾರೆ. ಈಡನ್ ಸಹ ಇದೇ ಅಭಿಪ್ರಾಯವನ್ನು ಪುಷ್ಟೀಕರಿಸುತ್ತಾರೆ. ಏಶ್ಯದ ರಾಷ್ಟ್ರಗಳನ್ನು ಆಪತ್ತಿನಿಂದ ರಕ್ಷಿಸುವುದು ಇವುಗಳ ಕರ್ತವ್ಯವಂತೆ! ಭಾರತವನ್ನು ನಮ್ಮ ಸರಕಾರದ ಅನುಮತಿಯಿಲ್ಲದೆ ರಕ್ಷಿಸುವಷ್ಟು ಮುಂದಾಗುವ ಈ "ಮಿತ್ರ"ರ ಕುರಿತು ನಾವು ಏನು ಅಭಿಪ್ರಾಯವನ್ನು ತಾಳೋಣ?

ನೆನೆನ್ನರು ಸ್ಪಷ್ಟವಾಗಿಯೇ ಈ ಪ್ರಶ್ನೆಯನ್ನು ಕೇಳಿದ್ದಾರೆ—"ತನ್ನ ಅಧೀನವಿಲ್ಲದ ಪ್ರದೇಶಗಳ ರಕ್ಷಣೆಯ ಹೊಣೆಯನ್ನು ಹೊತ್ತಿದ್ದೇವೆಂದು ಸೀಟೊ ರಾಷ್ಟ್ರಗಳ ಸದಸ್ಯರು ಬಹಿರಂಗವಾಗಿ ಹೇಳುತ್ತಿರುವುದು ನಮ್ಮ ಸಾರ್ವಭೌಮಾಧಿಕಾರಕ್ಕೆ ನ್ಯತ್ಯಯವನ್ನುಂಟು ಮಾಡುತ್ತದೆ. ಇದು ನಮ್ಮ ಅಧಿಕಾರ ಮರ್ಯಾದೆಯನ್ನೂ ಸ್ವಾಭಿಮಾನವನ್ನೂ ಕೆಣಕುವ ವಿಷಯ". ಮುಂದರಿದು ಅವರು ಇದಕ್ಕಿರುವ ಹಲ್ಲೆಷ್ಟು ಎಂದು ಕೇಳಿದ್ದಾರೆ.

ಹೌದು, ಸೈನಿಕ ಒಪ್ಪಂದಗಳಿಗೆ ಕೋರೆ ದಾಡೆಗಳಿವೆ—ಈ ಕ್ರೂರ ಹಲ್ಲುಗಳು ಒಪ್ಪಂದಕ್ಕೆ ಸೇರಿದ ರಾಷ್ಟ್ರಗಳ ಗೌರವವನ್ನು ಮೆಸಕ್ಕೆ ತಿನ್ನುವಷ್ಟಿವೆ, ಸ್ವತಂತ್ರ ಆಸ್ತಿತ್ವವನ್ನು ಸಹ ಹಾಳುಗೆಡವುತ್ತವೆ. ಒಪ್ಪಂದಕ್ಕೆ ಸೇರಿಕೊಂಡ ರಾಷ್ಟ್ರಗಳಿಗಾದರೂ ಲಾಭಕ್ಕಿಂತ ಹಾನಿಯೇ ಹೆಚ್ಚು: ಏಕೆಂದರೆ ದೊಡ್ಡ ರಾಷ್ಟ್ರಗಳ ಸೂತ್ರ ಚಾಲನಕ್ಕೆ ಸೈಗುಟ್ಟುಬಿತ್ತಾ ಅವುಗಳ ಅನುಗ್ರಹ ಹಾಗು ಒತ್ತಾಯಗಳನ್ನು ಅವಲಂಬಿಸುವ ಪಾಡು ಚಿಕ್ಕ ರಾಷ್ಟ್ರಗಳದಾಗುತ್ತದೆ.

ಉದಾಹರಣೆಗೆ ನಾವು ಪಾಕಿಸ್ತಾನವನ್ನೆ ತೆಗೆದುಕೊಳ್ಳೋಣ—ಇತ್ತೀಚೆಗೆ ಅಮೇರಿಕವು ಎರಡು ಕೋಟಿ ಡಾಲರುಗಳನ್ನು ಪಾಕಿಸ್ತಾನದ ವಿಮಾನ ನಿಲ್ದಾಣ, ಬಂದರು ಹಾಗು ಮಾರ್ಗ ವ್ಯವಸ್ಥೆಯ ಅಭಿವೃದ್ಧಿಗಾಗಿ ಕೊಡಮಾಡಿತು. ವಿಮಾನ ನಿಲ್ದಾಣಗಳನ್ನು ಅತ್ಯಾಧುನಿಕ ರೀತಿಯ ಜೆಟ್ ವಿಮಾನಗಳು ಇಳಿಯುವಷ್ಟು ಚೆನ್ನಾಗಿ ಸಜ್ಜುಗೊಳಿಸುವ ಉದ್ದೇಶವಿದೆ ಎನ್ನಲಾಯಿತು. ಅಮೇರಿಕದಿಂದ ಇಂಜಿನಿಯರರ ತಂಡದೊಡನೆ ಯುದ್ಧ ವ್ಯೂಹ ತಜ್ಞರೂ ಆಗಮಿಸಿದರು. ಇವರಿಗೇ ಸಿಲ್ಲಿ ಕೆಲಸ? ಪಾಕಿಸ್ತಾನವನ್ನು ಸಮರ ಭೂಮಿಯಾಗಿ ಮಾರ್ಪಡಿಸುವುದೇ ಅವರ ಉದ್ದೇಶವೆಂಬುದು ಸ್ಪಷ್ಟ. ಜೆಟ್ ವಿಮಾನಗಳು ಹೊತ್ತು ತರುವುದು ಪ್ರವಾಸಿಕರನ್ನಲ್ಲ – ಸೈನಿಕರನ್ನು ಎಂದಿಲ್ಲರಿಗೂ ಗೊತ್ತು.

ಹೀಗೆ ಪಾಕಿಸ್ತಾನದಲ್ಲಿ ಶಾಂತಿ ಕಾಲದ ಚಟುವಟಿಕೆಗಳಿಗಿಂತ ಸೈನಿಕ ಚಟುವಟಿಕೆಯೇ ಹೆಚ್ಚಿಕೊಳ್ಳುತ್ತಿದೆ; ಸಾಮಾನ್ಯವಾಗಿ ಸೈನಿಕ ಒಪ್ಪಂದಗಳಿಗೆ ಸೇರಿಕೊಂಡ ಎಲ್ಲ ರಾಷ್ಟ್ರಗಳ ಗತಿಯೂ ಇದೇ ಆಗಿದೆ. ಪಾಕಿಸ್ತಾನ, ಥೈಲೆಂಡ್, ಇರಾನ್ ಮುಂತಾದ ತೀರ ಹಿಂದುಳಿದ ಹಾಗು ಬಡತನದಿಂದ ಕಂಗೆಡುವ ರಾಷ್ಟ್ರಗಳು ಪ್ರಜೆಗಳ ಸುಖ ಜೀವನಕ್ಕೆ ದಾರಿಮಾಡಿ ಕೊಡುವ ಆರ್ಥಿಕಾಭಿವೃದ್ಧಿ ಕಲಸಗಳಿಗೆ ಹಣವನ್ನು ವ್ಯಯಿಸುವುದಕ್ಕೆ ಹೋಗದೆ, ಆ ಹಣದಪೊಡ್ಡ ಪೊತ್ತವನ್ನು ಸೈನಿಕ ಚಟುವಟಿಕೆಗಳಿಗೆ ಮೀಸಲಿರಿಸಿದರೆ, ಅವುಗಳ ಉನ್ನತಿಯಾಗುವುದೆಂತು?

ಇದೆಲ್ಲ "ಆಂತರಿಕ ವಿಷಯ" ಎಂದು ನಾವು ಸುಮ್ಮನಿರಬಹುದು.—ಆದರೆ ಪಾಶ್ಚಾತ್ಯ ರಾಷ್ಟ್ರಗಳ ಗತ್ಯಂತರಿಕೆಯನ್ನಿಲ್ಲಿ ಸ್ಪಷ್ಟವಾಗಿ ಎತ್ತಿ ತೋರಿಸುವುದಕ್ಕೆ ಇಷ್ಟು ಹೇಳಬೇಕಾಯಿತು. ಸೈನಿಕ ಸಲಕರಣೆಗಳೂ ಆ ಸಂಬಂಧದ ಮಾರ್ಗದರ್ಶನವೂ ಅಮೇರಿಕ, ಬ್ರಿಟನ್ ಇತ್ಯಾದಿಗಳಿಂದಲೇ ಈ ರಾಷ್ಟ್ರಗಳಿಗೆ ಬರಬೇಕಾಗುತ್ತದೆ. ಇದರೊಂದಿಗೆ ಯಃಶ್ಚ ಭಯದಿಂದ ತ್ರಸ್ತರಾದ ಪ್ರಜೆಗಳ ಮುಂದೆ ಆರ್ಥಿಕಾಭಿವೃದ್ಧಿಯ ಸೋಗು ಹಾಕಿಕೊಂಡ ಕೆಲವಾವರೂ ಕೆಲಸಗಳನ್ನು ಮಾಡಲಿಕ್ಕೋಸ್ಕರ ಮರಳಿ ಆ ದೊಡ್ಡ ರಾಷ್ಟ್ರಗಳ ಆರ್ಥಿಕ ಸಹಾಯವನ್ನೆ ಶರಣೆನ್ನ ಬೇಕಾಗುತ್ತದೆ. ಆಗ ಪಾಕಿಸ್ತಾನದಂಥ ರಾಷ್ಟ್ರದ ಸೌರ್ವಭೌಮತ್ವವು ನಾಮ ಮಾತ್ರ ನೆನಿಸುವುದಲ್ಲದೆ ವ್ಯವಹಾರದಲ್ಲಿ ಸುಳ್ಳೇಆಗುತ್ತದೆ.

ಕೋರೆ ದಾಡೆಯ ಬೇಲಿಯನ್ನು ರಚಿಸಿದುದರಿಂದ ಒಂದಿಡೆ ಹೀಗೆ ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಉದ್ದೇಶ ಸಾಧಿಸಿಕೊಂಡರೆ, ಇನ್ನೊಂದೆಡೆ ಒಪ್ಪಂದಕ್ಕೆ ಸೇರದಿರುವ ರಾಷ್ಟ್ರಗಳು ಶಕ್ತಿಯ ಸಮತೂಕವನ್ನು ಉಳಿಸಿಕೊಳ್ಳುವ ಸಾಮಾನ್ಯ ಉದ್ದೇಶದಿಂದಲಾದರೂ ತಮ್ಮ ಆದಾಯದ ಹೆಚ್ಚಿನಂಕನವನ್ನು ಸಂರಕ್ಷಣೆಗಾಗಿ ವ್ಯಯಿಸುವಂತೆ ಅವುಒತ್ತಾಯತರುತ್ತವೆ.ಆಗ್ನೇಯ ಏಶ್ಯದಲ್ಲಿ ಅಮೇರಿಕದ ಛಂಂ ಬಣವಾಳಿಗಳು, ಇರಿ ಯುದ್ಧ ವಿಮಾನದಳಗಳು, ಮತ್ತು ೩ ಲಕ್ಷ ಸೈನಿಕರಿರುವ ಏಮು ಸುಸಜ್ಜಿತ ಸೇನಾಪಡೆಗಳಿವೆ. ಯಾರ ನೆಲದ ಮೇಲೆ, ಯಾರಿಗಾಗಿ ಇವು ಬಂಬಿದಿವೆ? ತಟಸ್ಥ ರಾಷ್ಟ್ರಗಳು ಏಳಿಗೆ ಹೊಂದದಂತೆ ತಡೆಯುವುದೇ—ಅವುಗಳನ್ನು ತಮ್ಮ ಬಣಕ್ಕೆ ಎಳೆದುಕೊಳ್ಳುವುದೇ— ಇವುಗಳ ಹೇತುಃ ಕಮ್ಯುನಿಸಂ ಭಯ ಕೇವಲ ನೆಪ.

(೬ನೇ ಪುಟದಿಂದ)

ಪ್ರವೇಶವನ್ನು ಸುಲಭ ಸಾಧ್ಯವಾಗಿ ಮಾಡಿಕೊಳ್ಳಲು ಪಾಶ್ಚಾತ್ಯರಿಗೆ ಆಸಕ್ತಿಯುಳ್ಳ ಒಂದು ವಿಷಯ ತನ್ನ ಮುಷ್ಟಿಯಲ್ಲಿರಬೇಕೆಂದು ಅದು ನಂಬಿದೆ. ಆದಕ್ಕಾಗಿ ಜಪಾನನ್ನು ಸದಸ್ಯ ರಾಷ್ಟ್ರವಾಗಿ ಸ್ವೀಕರಿಸಲುವಿರೋಧಿಸಿದೆಎಂಬುದುಹೊರತೋರಿಕೆಗೆ ಸ್ಪಷ್ಟವಾಗುವ ವಿಷಯ. ಇನ್ನೂಆಳವಾಗಿ ವಿಚಾರಿಸಿದರೆಆಗ ಚೀರಿಕೆಲವು ಸಂಗತಿಗಳೂ ವ್ಯಕ್ತವಾಗುತ್ತವೆ—ಮೊದಲನೆಯದಾಗಿ ಜಪಾನು ತನ್ನ ಪ್ರವೇಶಕ್ಕೆ ಅಡ್ಡಿ ಮಾಡಿದ ರಾಷ್ಟ್ರವೆಂದರೆ ಚಿಯಾಂಗರ "ರಾಷ್ಟ್ರೀಯ" ಚೀನ ಎಂದು ಪ ಪಾತಕಾಲ ಕೆಡಿ ಕಾರುತ್ತಿರಬಹುದು. ಚಿಯಾಂಗರೂ ಜಪಾನೀಯರೂ ಇಬ್ಬರೂ ವೇಕಾಗಿರುವ ಅಮೇರಿಕಕ್ಕೆ ಇದು ದೊಡ್ಡ ಸೀಕಲಾಟವನ್ನು ತಂದೊಡ್ಡುತ್ತಿದೆ. ಅಮೇರಿಕವು ಒಂದೋ ಜಪಾನನ್ನೂ ಅಥವಾ ಚಿಯಾಂಗರನ್ನು ಆದರಿಸುವ ಅನಿವಾರ್ಯ ಪ್ರಸಂಗ ಬರುತ್ತದೆ. ಜಪಾನು ಬಲಿಷ್ಠ ದೇಶ; ವಿಶಾಲವಾದ ಭೂಭಾಗವನ್ನು ಹೊಂದಿದೆ. ಚಿಯಾಂಗಶಿಂಡನೆ ಇರುವುದೇನು? ಒಂದು ದ್ವೀಪ–ಆ ದ್ವೀಪ ರಕ್ಷಣೆಗಾದರೂ ಅಮೇರಿಕದ ಬಂಡವಾಳ ಬೇಕು; ಸೈನಿಕ ಸಿಬಂಧಿಯೂ ಬೇಕು. ಇಂಥವರಲ್ಲಿ ಚಿಯಾಂಗರನ್ನು ಅಮೇರಿಕ ಕೈಬಿಡುವಷ್ಟು ದೂರವೆಲ್ಲದಿದ್ದರೂ ಉದಾಸೀನತೆಯಿಂದ ನೋಡ ಬಹುದು.ಆಗ ಸಹಜವಾಗಿಯೇ ಕೆಂಪು ಚೀನದ ಪ್ರಭಾವ ಹೆಚ್ಚಿಕೊಳ್ಳುತ್ತದೆ. ರಶ್ಯದ ಮನಸ್ಸಿನ ಗುಂ ಇದು.

ಆಶ್ಚರ್ಯದ ಕೇಂದ್ರ

ಸಾಮಾನ್ಯವಾಗಿ ಎಲ್ಲರನ್ನೂ ಆಶ್ಚರ್ಯದಲ್ಲಿ ಕೆಡವಿದ ವಿಷಯವೆಂದರೆ ಪೋರ್ಚುಗಲ್, ಸ್ಪೈನ್ ಇತ್ಯಾದಿ ದೇಶಗಳಿಗೆ ದೊರೆತ ಪ್ರವೇಶ. ಇವುಗಳು ಸರ್ವಾಧಿಕಾರಿ ತಂತ್ರವನ್ನು ಅನುಸರಿಸುತ್ತಿವೆ. ಕಳೆದ ವ.ಹಾ ಯುದ್ಧ ಕಾಲದಲ್ಲಿ ಯಾಂತೂ ಸ್ಪೆಯಿನ್ ಈಗ ಅದರ ಪ್ರತೀಕಕ್ಕೆ ಬೇಬಲವಿತ್ತ ಮಹಾ ರಾಷ್ಟ್ರಗಳಿಗೆ ಅನುಕೂಲ ರೀತಿಯಲ್ಲಿ ವರ್ತಿಸಿರಲಿಲ್ಲ. ಪಾಶ್ಚಾತ್ಯ ರಾಷ್ಟ್ರಗಳಿಗೆ ಇಷ್ಟಿರುವ ಆಸಕ್ತಿ ಅಣು ಖನಿಜ ಹಾಗು ಯುದ್ಧ ವ್ಯೂಹ ಕೇಂದ್ರಗಳ ಮಟ್ಟಿಗೆ ಸೀಮಿತವಾಗಿದೆ. ರಶ್ಯಕ್ಕೆ ಇನ್ನು ಅಪ್ರಿಯವಾಗಿದ್ದರೂ ತನ್ನ ಬೆಂಬಲಿಗ ರಾಷ್ಟ್ರಗಳಿಗೆ ಪ್ರವೇಶ ದೊರಕಿಸಿ ಕೊಡುವುದಕ್ಕೆ ಸಾಕಷ್ಟು ಬಹುಮತ ಗಳಿಸಲು ಅದು ಮನಸ್ಸಿನಲ್ಲಿರುದ್ಧ ಒಪ್ಪಿಗೆ ಕೊಡಬೇಕಾಗಿದೆ. ಸ್ಪೈಸ್ತ ಪಂಥಾನುಯಾಯಿ ರಾಷ್ಟ್ರಗಳಾದ ಸ್ಪೆಯಿನ್, ಪೋರ್ಚುಗಲ್ ಇವುಗಳ ಪ್ರವೇಶಕ್ಕೆ ವಿರುದ್ಧವಾಗಿ ರಶ್ಯ ನಿಂತರೆ ಆಗ ದಕ್ಷಿಣ ಅಮೇರಿಕ ಸ್ವದೇಶದ ೨೦ ರಾಷ್ಟ್ರಗಳು ಅದಕ್ಕೆಂದಿಗೂ ಬೆಂಬಲ ಕೊಡದೆ ಹೋಗುವ ಭಯವಿತ್ತಿತು. ತಾನು ಸಂಯುಕ್ತ ರಾಷ್ಟ್ರ ಸಂಘದ ವಿಸ್ತಾರಕ್ಕೆ ಅನುಕೂಲವಿರುವೆನೆಂಬ ಭಾವನೆಯನ್ನು ಕುಟ್ಟಿಸುವುದೂ ಇದರ ಉದ್ದೇಶಗಳಲ್ಲಿ ಒಂದು.

Advertisement is a science— It is not a matter of opinion. It requires planning and careful selection. Make NAVAYUGA REPUBLIC DAY SPECIAL 1956 your Messenger to carry the news of your goods and achieve results.

ಅಮೇರಿಕದ ಹೇಚು

ಜಪಾನಿಗೆ ಪ್ರವೇಶ ಸಿಗದಿರುವ ಈ ಪರಿಸ್ಥಿತಿಯು ಅಮೇರಿಕಕ್ಕೆ ಎಳ್ಳಷ್ಟೂ ತೃಪ್ತಿ ತಂದಿಲ್ಲ. ತನ್ನ ವಿಶೇಷಾಧಿಕಾರದ ಬಲದಿಂದ ಅದು ರಶ್ಯವು ಒಪ್ಪಿದೆ ೧೬ ರಾಷ್ಟ್ರಗಳ ಪ್ರವೇಶವನ್ನು ನಿರ್ಬಂಧಿಸುವುದು ಸಾಧ್ಯವಿದ್ದಿತಾದರೂ ಹಾಗೆಲ್ಲಿಯಾದರೂ ಅಮೇರಿಕ ಮಾಡಲು ಹೋಗುತ್ತಿದ್ದರೆ ರಶ್ಯ ಒಪ್ಪಿದರೂ ರಾಷ್ಟ್ರಗಳಿಗೆ ಪ್ರವೇಶ ಸಿಗದಂತೆ ಮಾಡಿದ ನೊಡ್ಡ ಅಪವಾದವು ಅಮೇರಿಕದ ಮೇಲೆ ಬರುತ್ತಿತ್ತೆಂಬುದು ನಿಜ. ಈಗ ಪ್ರವೇಶ ದೊರಕಿಸಿ ಕೊಟ್ಟ ಶ್ರೇಯಸ್ಸೆಲ್ಲ ರಶ್ಯದ ಪಾಲಿಗೆ ಹೋಗಿದೆ; ಅಮೇರಿಕಕ್ಕೆ ಆಪವಾದದ ಭಯವೊಂದು ನೂತ್ರ ತಪ್ಪಿದೆ. ಹೀಗೆ ತನ್ನ ವರ್ಚಸ್ಸನ್ನು ರಶ್ಯ ಬೆಳೆಸಿಕೊಂಡಿರುವಾಗ ಚಿಯಾಂಗರ ರಾಷ್ಟ್ರೀಯ ಚೀನದ ಸರ್ವನಿಯು ಅಮೇರಿಕದ ಮುಖಭಂಗವನ್ನೆ ಸೂಚಿಸಿದೆ—ಏಕರ ಅಧೀಶವನ್ನು ಸಹ ಹಿರುವಷ್ಟು ಚಿಯಾಂಗರು ಧೈರ್ಯ ತೋರಿಸಿದರೆಂದ ಮೇಲೆ ಉಳಿದುದೇನು? ಚಿಯಾಂಗರ ಚೀನದ ಮೇಲೆ ರಾಷ್ಟ್ರ ಸಂಘದ ಬಹುಮತಕ್ಕೆ ವಿಶ್ವಾಸ ವಿದ್ದಿರಲಿಲ್ಲ; ಹೆಚ್ಚಿನವರು ಕೆಂಪು ಚೀನಕ್ಕೆ ಪ್ರವೇಶ ಸಿಗಬೇಕು ಎನ್ನುತ್ತಿದ್ದರು. ಈಗ ಈ ಗುಂಡು ಹೆಚ್ಚು ಶಕ್ತಿಯಿಂದ ಈ ದಿನೆಯಲ್ಲಿ ಹೆಜ್ಜೆ ಮುಂದಿಡಬಹುದು. ಅಮೇರಿಕವು ಇಷ್ಟರ ವರೆಗೆ ಇಂಥ ಪ್ರಯತ್ನಗಳನ್ನು ವಿಫಲ ಮಾಡುತ್ತಾ ಬಂದಿದ್ದರೂ ತನ್ನ ಕೈಗೂಸಾದ ಚಿಯಾಂಗರನ್ನು ನಿಯಂತ್ರಣದಲ್ಲಿಡಲು ತಪ್ಪಿದ ಮಹಾ ನಿರ್ದರ್ಶನವೊಂದು ದೊರಕಿರುವ ಬಳಿಕ ಅಮೇರಿಕದ ಮೇಲೆ ಯಾರಿಗೂ ಸಹಾನುಭೂತಿ ಉಳಿಯದು. ಇದೇ ಚಿಯಾನವಣೆಯ ವೇಳೆ ಸಮೀಪಿಸಿರುವಾಗ ಅಮೇರಿಕಕ್ಕೆ ಬಂದಿರುವ ಪೇಚು.

"ಮೈಸೂರು ರಾಜ್ಯ"

ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ. ಎಸ್. ಚಿನ್ನಯ್ಯನವರು ಕಾಂಗ್ರೆಸಿನ ವರಿಷ್ಠರನ್ನು ಹೊಸ ದೆಹಲಿಯಲ್ಲಿ ಕಳೆದ ವಾರ ಕಂಡು ಬಂದ ಬಳಿಕ ವಿಕೇಕಣದ ಬಳಿಕ ರಚಿತವಾಗುವ ನೂತನ ಕರ್ನಾಟಕ ರಾಜ್ಯಕ್ಕೆ "ಮೈಸೂರು" ಎಂದು ಹೆಸರಿಡುವ ಸೂಚನೆಯನ್ನು ಧುರೀಣರು ಒಪ್ಪಿದ್ದಾರೆ ಎಂದು ಬೆಂಗಳೂರಿನಲ್ಲಿ ಹೇಳಿದರು. ಹೊಸ ರಾಜ್ಯಕ್ಕೆ "ಮೈಸೂರು" ಎಂಬ ಹೆಸರನ್ನೆ "ಮುಂದಿನ ಬೇಕು" ಎಂದು ಮುಖ್ಯ ಮಂತ್ರಿ ಶ್ರೀ. ಹನುಮಂತಯ್ಯನವರು ಪ್ರತಿಪಾದಿಸಿದ್ದರು; ಮತ್ತು ಮೈಸೂರು ಶಾಸನ ಸಭೆ ಸಹ ಇದನ್ನು ಅನುಮೋದಿಸಿದ್ದಿತು.

ಬಳ್ಳಾರಿ ಕನ್ನಡಕ್ಕೆ

ಶ್ರೀಗಳಾದ ಚಿನ್ನಯ್ಯನವರೂ ಹನುಮಂತಯ್ಯನವರೂ ಬಳ್ಳಾರಿಯು ಕನ್ನಡದಲ್ಲಿ ಉಳಿದೇ ತೀರುವ ನಂಬಿಕೆಯನ್ನು ಮರಳಿ ವ್ಯಕ್ತಪಡಿಸಿದ್ದಾರೆ. ಕಾಂಗ್ರೆಸಿನ ವರಿಷ್ಠರ ಅಭಿಪ್ರಾಯವೂ ಇದೇ ಆಗಿರುವುದರಿಂದ ಮುಂದೆ ಕನ್ನಡಿಗರು ಗಡಿಪ್ರದೇಶಗಳ ಮುಂಗಿಟ್ಟಿನಾದಕ್ಕೆ ದೊರೆತ ಉತ್ತರವನ್ನು ಪ್ರಸ್ತಾಪಿಸುತ್ತಾ ಚಿಕ್ಕ ಹಳ್ಳಿಗಳು ಅಥವಾ ಕೆಲವು ಫಿರ್ಕಗಳ ಬಗ್ಗೆ ಆಗ್ರಹಪೂರ್ವಕವಾಗಿ ಕಾಂಗ್ರೆಸಿನ ವರಿಷ್ಠರ ಅಭಿಪ್ರಾಯವೆಂದು ಆಗಾಗ ತಿಳಿಸಿದ್ದಾರೆ. ಆದರೆ ಚಿಂದ್ರಗಿರಿ ಹೊಳೆಯ ಉತ್ತರ ಭಾಗದಲ್ಲಿರುವ ಕಾಸರಗೋಡು ತಾಲೂಕು, ಬೆಳಗಾಂವಿ ಜಿಲ್ಲೆ, ಉತ್ತರ ಕನ್ನಡ ಇತ್ಯಾದಿಗಳನ್ನು ಕರ್ನಾಟಕದಲ್ಲಿ ಬಾಳಿಸುವ ಕುರಿತಾಗಿ ಆ ಕಾರಾಯಕ್ರ ಮಾತುಗಳನ್ನಾಡಿದ್ದಾರೆ ಮಂಡಾ ರಾಷ್ಟ್ರೀಯರು ಉತ್ತರ ಕನ್ನಡ, ಬೆಳಗಾಂವಿ ಈ ಜಿಲ್ಲೆಗಳ ಭಾಗಗಳ ಮೇಲೆ ತಮ್ಮ ಹಕ್ಕನ್ನು ಸ್ಥಾಪಿಸಿದ್ದರು.

ಪಡುಬಿದ್ರೆ:—ಸ್ಥಳೀಯ ಸಂಚಾಯತ್ ಪ್ರವಾಸ ಗೃಹದ ಉದ್ಘಾಟನೆಯನ್ನು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ತಾ. 15ರಲ್ಲಿ ನೆರವೇರಿಸಿದರು. ಉಡುಪಿ ತಹಸೀಲ್ದಾರ್ ಶ್ರೀ ಕೆ. ಶಿಂಗಪ್ಪಯ್ಯನವರು ಸಭಾಧ್ಯಕ್ಷತೆ ವಹಿಸಿದ್ದರು.

ಮಂಜೇಶ್ವರ:—ಈ ಕೇಂದ್ರದ ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ವಾರ್ಷಿಕೋತ್ಸವವು ತಾ. 10ರಲ್ಲಿ ಮಾಯಿಪಾಡಿ ಸರಕಾರಿ ಬುನಾದಿ ತರಬೇತು ಶಾಲಾ ಅಧ್ಯಾಪಕ ಶ್ರೀ ಪಿ. ಸಿ. ಐತಾಳರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿ ಶ್ರೀ ಕೆ. ವಾಸುದೇವ ನಾಯ್ಕರು ಧನ್ಯವಾದಗಳನ್ನಿತ್ತರು.

ಮುದರಂಗಡಿ— ಭೂದಾನ ಪ್ರಚಾರ ಸಭೆಯು ತಾ. 14ರಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಗೋವಿಂದ ಎ. ಟಿ. ಆಳ್ವ, ಶ್ರೀನಿವಾಸ ಪೈ, ಮತ್ತು ಶ್ಯಾನು ಶೆಟ್ಟರ ಭಾಷಣಗಳಾದುವು. ಶ್ರೀ ವಾಸು ಶೆಟ್ಟರು ಧನ್ಯವಾದಗಳನ್ನಿತ್ತರು.

ಬಂಟಕಲ್ಲು ಶಿರ್ವ— ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದ ಆಡಳಿತ ಮಂಡಳಿಯ ಸಭೆಯು ತಾ. 11ರಲ್ಲು ಶ್ರೀ ಕಜ್ಕಾಡಿ ಮಂಜುನಾಥ ನ್ಯಾಕರ ಅಧ್ಯಕ್ಷತೆಯಲ್ಲಿ ಜರಗಿ ಮಹಾ ಸಭೆಯನ್ನು ಜನವರಿ ತಿಂಗಳ ತಾ. 29ರಲ್ಲಿ ಜರಗಿಸಬೇಕೆಂದು ನಿರ್ಣಯವಾಯಿತು. ಅಲ್ಲದೆ ಸಮಾಜದ ಏಳಿಗೆಕರಣ ದೃಷ್ಟಿಯಿಂದ ಸಮಾಜದ ಅಖಿಲ ಭಾರತ ಸಮ್ಮೇಳನವನ್ನು ಜನವರಿ ತಾ. 27 ಮತ್ತು 28ರಲ್ಲಿ ಜರಗಿಸಬೇಕೆಂದೂ ನಿರ್ಧಾರವಾಯಿತು.

ಬೆಳ್ಳಣ್ಣು—ಜಾನುವಾರುಗಳ ಸಾಕುವಿಕೆಯ ಕಡೆಗೆ ಜನರು ಹೆಚ್ಚಿನ ಆಸಕ್ತಿ ವಹಿಸುವಂತೆಯೂ ಸುತ್ತು ಹುಲ್ಲುತ್ಪಾದನೆ ಕೋರಿನ ಉದ್ದೇಶದಿಂದಲೂ ಬೆಳ್ಳಣ್ಣಿನಲ್ಲಿ ತಾ. 11ರಲ್ಲಿ ಪ್ರಥಮ ಪಶು ಪ್ರದರ್ಶನ ನಿರ್ವಹಿಸಲಾದು ದನ್ನು ಕಮ್ಯುನಿಟಿ ಪ್ರೊಜೆಕ್ಟ್ ಆಫೀಸರ್ ಶ್ರೀ ಎಚ್. ನರಸಿಂಹನವರು ಉದ್ಘಾಟಿಸಿದರು. ಡಾ। ಕೆ. ಬಾಳ್ತಿ ಶೆಟ್ಟರು ಅಧ್ಯಕ್ಷತೆ ವಹಿಸಿದ್ದರು. ಡಾ। ಕೊರಿಡ್ಕಲ್ಲ ಪೆಂಕ ಟ್ರಾಯರು ಸ್ವಾಗತ ಭಾಷಣ ಮಾಡಿದರು. ಪ್ರದರ್ಶನದಲ್ಲಿ ಉತ್ತಮ ಪಿಂಡು ಪರಿಗಣಿಸಲಾದ ಜಾನುವಾರುಗಳಿಗೆ ಅಧ್ಯಕ್ಷರು ಬಹುಮಾನಗಳನ್ನೂ ಪ್ರಶಸ್ತಿ ಪತ್ರಗಳನ್ನೂ ವಿತರಿಸಿದರು. ಸಭಿಕರ ಪರವಾಗಿ ಡಾ. ಕೆ. ಕುಮಾರನ್, ಎಸ್. ಕೃಷ್ಣ ಶೆಟ್ಟಿ ಮೊದಲಾದವರು ಕಾರ್ಯೋಚಿತವಾದ ಮಾತುಗಳನ್ನಾಡಿದರು. ಪ್ರದರ್ಶನ ಸಂಘಟನೆಯ ಬಗ್ಗೆ ಸಮಾಧಾನ ವ್ಯಕ್ತಪಡಿಸಲಾಯಿತು.

ಪುತ್ತೂರು— ಜೆ. ಕೆ. ಜಿಲ್ಲಾ ಸ್ಥಳೀಯ ಸುಸ್ತಕಭಂಡಾರದ ಹೊಸ ಶಾಖೆಯೊಂದನ್ನು ತಾ. 10ರಲ್ಲಿ ಶ್ರೀ ಎಸ್. ನರಸಿಂಹಯ್ಯ, ಎಮ್. ಎಲ್. ಸಿ. ಅವರು ಪುತ್ತೂರಲ್ಲಿ ಉದ್ಘಾಟಿಸಿದರು. ಶ್ರೀ ಕೃಷ್ಣಸ್ವಾಮಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಎಲ್. ಎಲ್. ಎ. ಅಧ್ಯಕ್ಷ ಶ್ರೀ ಎಮ್. ಎಸ್. ನಿಡಂಬರ ರಾಯರು ಸ್ವಾಗತಮಾತುಗಳನ್ನಾಡಿ ನಿರಂಯಿಸ್ಯೋದಿಸಿದರು. ಪುತ್ತೂರಿನ ಮುಂದಾಳುಗಳು ಪುಸ್ತಕಭಂಡಾರಕ್ಕೆ ಸಾಧಾರಣ ರೂಪಾಯಿ 30,000 ಬೆಜ್ಜದ ಒಂದು ಹೊಸಕಟ್ಟಡ ಕಟ್ಟಿಸುವ ಆಲೋಚನೆಯಲ್ಲಿ ಇದ್ದಾರೆ. ಆದರೆ ಬೆಜ್ಜದ ರೂ. 15,000, ಎಲ್. ಎಲ್. ಎ. ಫಂಡಿನಿಂದ ಕೊಡಲಾಗುವುದು ಎಂದು ಹೇಳಿದರು.

ಧರ್ಮಸ್ಥಳ— ಶ್ರೀ ಧರ್ಮಸ್ಥಳ ಸರ್ವಧರ್ಮ ಸಮ್ಮೇಳನವು ಇದೇ ದಿನಾಂಕ ೧೩ರಂದು ಜರಗಿತು. ಶ್ರೀ ಎಂ. ಯು.ನಾನಾ ಚಾರ್ಯರು ಅಧ್ಯಕ್ಷತೆ ವಹಿಸಿದ್ದ ಈ ಸಮ್ಮೇಳನವು ಸ್ಥಳೀಯ ನೂತನ ಧರ್ಮಾಧಿಕಾರಿಗಳಾದ ಶ್ರೀ ರತ್ನವರ್ಮ ಹೆಗ್ಗಡೆಯವರ ನೇತೃತ್ವದಲ್ಲಿ ಜರಗಿತು. ಶ್ರೀ ಹೆಗ್ಗಡೆಯವರು ತಮ್ಮ ಭಾಷಣದಲ್ಲಿ ತಾವು ಶಿರಿಯರು, ಅನಂಯಭವಿ ಆದರೂ ಶ್ರೀ ಮಂಜುನಾಥ ಸ್ವಾಮಿಯ ಕೃಪೆ ಹಾಗೂ ಸಜ್ಜನ ನಿಷ್ಠಜ್ಜನರ ಸಹಾಯದಿಂದ ಪೂರ್ವಜರಿಂದ ಬಂದ ಸಂಸ್ಥೆಯನ್ನು ಮುನ್ನಡೆಯುವ ಶಕ್ತಿ ನವಗುಂಬಾಗಲಿ ಎಂದಾಶಿಸಿದರು.

ಧರ್ಮಸಮ್ಮೇಳನದ ಆಂಗವಾಗಿ ದಿನಾಂಕ ೧೩ರಂದು ಶ್ರೀ ವಿ.ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಾಹಿತ್ಯೋತ್ಸವವು ಜರಗಿತು. ಅಧ್ಯಕ್ಷರಿಗೆ ಶ್ರೀಬಿ.ರಾಮಚಂದ್ರರಾಯರ ಬಿನ್ನ ವತ್ತಳೆಯ ಬಳಿಕ ಶ್ರೀ ಶಿವರಾಮ ಕಾರಂತರು ಭಾಷಣಕಾರರ ಪರಿಚಯ ಮಾಡಿಕೊಟ್ಟರು. ಶ್ರೀ ಗೋವಿಂದ ಪೈ ಕೆ.ಸಿ.ರಾಯರು, ಸಾಲಿಗ್ರಾಮ. ಬಿ. ಚಂದ್ರಶಾಸ್ತ್ರಿ, ಕು. ಶಿ. ಹರಿದಾಸ ಭಟ್, ವಿ. ಜಿ. ಕೊಲಶಿರೆ, ಕೆ. ಜಿ. ಶಾಸ್ತ್ರಿ, ನಿ. ಕೆ. ಯಸ್. ಧರಣೇಂದ್ರಯ್ಯ ಮೊದಲಾದವರು ವಿವಿಧ ವಿಷಯಗಳ ಕುರಿತು ಭಾಷಣಮಿತ್ತರು. ಆಧ್ಯಕ್ಷರು ಗಾಸಿಗರ ಸೌಂದರ್ಯದ ಕುರಿತು ಭಾಷಣಗಿತ್ತರು. ಶ್ರೀ ಕೆ. ಶಿವರಾಮ ಕಾರಂತರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು.

ಕನ್ನಡ ಸಾಹಿತ್ಯ ಸಮ್ಮೇಲನ

ಇದೇ ನವಂಬರ ತಿಂಗಳ 25ರಿಂದ 27ರ ವರೆಗೆ ಕನ್ನಡ ಸಾಹಿತ್ಯ ಸಮ್ಮೇಳನವು ರಾಯಚೂರಿನಲ್ಲಿ ಜರಗಲಿದೆಯೆಂದು ಈಗ ತಾನೇ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಕಳೆದ ಬಾರಿ ಮೈಸೂರಲ್ಲಿ ಜರಗಿದ ಸಾಹಿತ್ಯ ಸಮ್ಮೇಲನದಲ್ಲಿ ರಾಯಚೂರಿನಲ್ಲಿ ಮುಂದಿನ ಸಾಹಿತ್ಯ ಸಮ್ಮೇಲನವು ಸೇರಬೇಕೆಂಬ ಆದರಿಕೆ ಆಹ್ವಾನ ಬಂದಿತ್ತು. ಈ ಆಹ್ವಾನವನ್ನು ಸಾಹಿತ್ಯ ಪರಿಷತ್ತು ಸಂತೋಷದಿಂದ ಸ್ವೀಕರಿಸಿದೆ. ಆದರೆ ಈ ನವಂಬರದಲ್ಲಿ ಕೇವಲ ಆರು ತಿಂಗಳು ಗಳಲ್ಲಿಯೇ ಸಮ್ಮೇಲನ ಸೇರಲಿದೆಯೆಂದು ತಿಳಿದಿರಲಿಲ್ಲ. ಅಲ್ಲದೆ ಕನ್ನಡಿಗರ ಅಸುಕಾಲದ ಬಯಕೆ ಕರ್ನಾಟಕದ ಏಕೀಕರಣವಾಗುವ ಈ ಸುಸಂದರ್ಭವನ್ನು ಸನ್ನಿಹತವಾಗುವ ಈ ಕಾಲದಲ್ಲಿ ಜರಗಲಿರುವ ಸಾಹಿತ್ಯ ಸಮ್ಮೇಲನದಲ್ಲಿ ಹೆಚ್ಚಿನ ಕನ್ನಡಿಗರು ಭಾಗವಹಿಸಬೇಕು. ಈ ಬಾರಿ ಜರಗಬೇಕಾಗಿರುವ ರಾಯಚೂರಿನ ಸಾಹಿತ್ಯ ಸಮ್ಮೇಲನವು 1956ರ ಮೇ ತಿಂಗಳಲ್ಲಿ ಜರಗುವುದೆಂತಾದರೆ ಹೆಚ್ಚಿನ ಕನ್ನಡಿಗರಿಗೆ ಸಾಹಿತ್ಯ ಸಮ್ಮೇಲನದಲ್ಲಿ ಭಾಗವಹಿಸುವ ಸಂದರ್ಭವನ್ನು ಕಲ್ಪಿಸಿ ಕೊಟ್ಟಂತಾಗುತ್ತಿತ್ತು.

ಶ್ರೀಪತಿರಾವ್ ಪಲಿಮಾರ್,
ಬಿ. ಎ. ಬಿ. ಟಿ.
ಹಾತೂರು (ಕೊಡಗು) '10—12—55.

ಪ್ರಕಟಣೆ

ಸುರತ್ಕಲ್ ಮೂಗಾರ್ದು ಮಾಗಣೆಯ ಶ್ರೀ ಸದಾಶಿವ ದೇವಸ್ಥಾನಕ್ಕೆ ಕೂಡಿದ ಸಾರ್ವಜನಿಕ ಸಭೆಯು ಮುಂದಾಯು ಕೋಟಿ ಯೋಗಣ ಭಾಂಡ್‌ವಾಲ ಜೋಟಲಾಲ್ ನೋಲಿಸಿಟರ್ ಆಫೀಸಿನ ವಕಾರದಲ್ಲಿ ತಾ. 11—12—55ನ್ನು ದಿನಾ ಳಿಂದ ತಿಕ್ಕೆ ಸುರತ್ಕಲ್ ಶ್ರೀ ಮಹಲಿಂಗೇಶ್ವರ ದೇವಸ್ಥಾನ ಸಂಘದ ನೇತೃತ್ವದಲ್ಲಿ ಜರಗಿಸಲ್ಪಟ್ಟು ಕೆಳಗಿನ ಅಭಿವೃದ್ಧಿಯೋಗಳನ್ನು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಸುರತ್ಕಲ್ ಮೂಗಾರ್ದು ಮಾಗಣೆಯ ಸದ್ರಿ ದೇವಸ್ಥಾನದ ಏಳಿಗೆಯ ಸಲುವಾಗಿ ಗ್ರಾಮನಿವಾಸಿಕರಿಂದಆರಿಸಲ್ಪಡುವ ಏಳು ಜನರ ಕಮಿಟಿಯನ್ನು ಜೀರ್ಣೋದ್ಧಾರ, ಪೂಜೆ ಉತ್ಸವಾದಿಗಳು ಪೂರ್ವ ಕ್ರಮದಂತೆ ಸದ್ರಿ ಕಮಿಟಿಯನವರಿಂದ ನಡೆಯಿಸಿಕೊಂಡು ಬರುವಂತೆ, ಮಾಡಬೇಕೆಂದು ಎಂತೋಮೆಂಟ್ ಪ್ರಾಕ್ಟೀಷನರ್‌ಗಳಲ್ಲಿ ಈ ಸಭೆಯು ಕೇಳಿಕೊಳ್ಳುವುದು.

ಶ್ರೀನಾನ್ ಬಸಪ್ಪ ಅಮೀನರು, ಶ್ರೀ ದತ್ತ ಸುವರ್ಣರು ಶ್ರೀ ನಾಸ್ವೆರ್ ಮಹಾಬಲ ಶೆಟ್ಟರು ದೊಡ್ಡ ಕೊಪ್ಪಲ ಮೊಗವೀರ ಸಭೆಯ ಕಾರ್ಯದರ್ಶಿಗಳವರು, ಸಭೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮಂಗಳ ಉತ್ತಮ ಭಾಷಣದಿಂದ ಸಭೆಯನ್ನು ಆನಂದಗೊಳಿಸಿದರು.

ಸಂಘ ದೇವಸ್ಥಾನದಲ್ಲಿ ಕೈಗೊಂಡ ಕಾರ್ಯಾರ್ಥ, ಮಿತ್ರಪಟ್ಟ ಮೊಗವೀರ ಸಭೆಯಿಂದ ರೂ. 250/ರ ಮೇಲೆ ದಾನವಾಗಿತ್ತು. ಹೆಸರನ್ನು ಶಿಲೆಯ ಮೇಲೆ ಬರೆಯಿಸಿಕೊಳ್ಳುವುದಾಗಿ ಶ್ರೀ ದತ್ತ ಸುವರ್ಣರು ಸೂಚಿಸಿದರು.

ದೊಡ್ಡ ಕೊಪ್ಪಲ ಮೋಗವೀರ ಸಭೆಯಿಂದ ತಮಗುನಪೇಕ್ಷಿತನಳಿಂದ ಸಹಕಾರವನ್ನೀವೆಮೆಂದು ಮಾ. ಕಾರ್ಯದರ್ಶಿಯವರು ವಿವರಿಸಿದರು.

ಶ್ರೀ ಮುಕ್ಕಣ್ಣಾಯ ಶೆಟ್ಟಿಮನೆ ಮತ್ತು ಶೆಟ್ಟಿಯ ಸ್ಮರಣಾರ್ಥ, ರೂ. 365ರ ಸಂಚ್ಯೆಯನ್ನು ರೂ. 401 ಬರೆಯಬೇಕೆಂದು ಜಯ ಲಕ್ಷ್ಮೀ ಕಂಸೆನ ಡ್ಯಾರೆಕ್ಟರ್ ಭೂಸ್ವರ್ ಬಯಾಬಲ ಶೆಟ್ಟರು ಸೂಚಿಸಿದರು.

ಸಂಘವು ದೇವಸ್ಥಾನದಲ್ಲಿ ಕೈಗೊಂಡ ಕಾರ್ಯಾರ್ಥ ರೂಪಾಯಿ 250/-ರ ಮೇಲೆ ಸಭಾಯ ಧನಸೀಡಿ ಸಭೆಗೆ ಚೆತ್ತೃಪಿಸಿದನ ಮುನೀಯಂರನ್ನು ಸತ್ಕರಿಸಿದ ಮಿತ್ರರೆಲ್ಲರಿಗೂ ತುಂಬಾ ಆಬಾರವಿಯಾಗಿರುವುದೆಂಬುದನ್ನು ಸೂಚಿಸಿ ಧನ್ಯವಾದವನ್ನರ್ಪಿಸಿ ಸಭೆಯು ಮುಕ್ತಾಯವಾಯಿತು.

ಆರ್. ಕೆ. ಶೆಟ್ಟಿ,
ಅಧ್ಯಕ್ಷ.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 106/1955.

ಕಾವೇರಿಕಾನ ಸುಬ್ರಾಯ ಭಟ್ಟ ಕೂಡಾ— ಅರ್ಜಿದಾರರು.

ಮತ್ತು

ಕಾವೇರಿಕಾನ ಕೃಷ್ಣ ಭಟ್ಟ-ರೆಸ್ಪಾಂಡೆಂಟ್.

ಇವರೊಳಗೆ—

ಕಾಸರಗೋಡು ತಾಲೂಕು ಎಡನಾಡು ಗ್ರಾಮದ ಕಾವೇರಿಕಾನ ಸುಬ್ರಾಯ ಭಟ್ಟರ ಪರ ಪಿಂಕಪ್ಪ ಭಟ್ಟರು ಮೃತಪಟ್ಟದ್ದರಿಂದ ಸದ್ರಿ O. P. ಅರ್ಜಿ ಪೆಡ್ಯೂಲಿನಲ್ಲಿ ವಿವರಿಸಿದ ಲೈಸೇಜನ್ನು ಸರಿಯಾಗಿ ಮಾಡುವಲ್ಲಿ ಅರ್ಜಿದಾರರು ವಾರೀಸ್ಸು ಸರ್ಟಿಫಿಕೇಟು ಆನೆಕ್ಸೆಸಿ ಮಾಡಿದ ಸದ್ರಿ ಅರ್ಜಿಯು ತಾ. 12.1.1956 ಕ್ಕೆ ತನಿಪೆಗೆ ಇಟ್ಟಿರುತ್ತದೆ. ಆಕ್ಷೇಪಣೆಗೇನಾದರೂ ಇದ್ದರೆ ಸಂಬಂಧಪಟ್ಟವರು ಆ ದಿವಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದ್ರೆ ಕೋರ್ಟಿಗೆ ಯುಕ್ತ ತೋರುವಂತೆ ತೀರ್ಮಾನಿಸಲಾಗುವುದು.

K. Shankar Rao
Advocate for Petitioner.

ಕಾಸರಗೋಡು, ತಾ. 17—12—1955.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MULKI.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service, sound investment and a personal touch with its Policy-holders and Representatives. At whatever stage we welcome your association with the POPULAR.

THE
POPULAR INSURANCE CO., LTD.
"POPULAR BUILDINGS" MANGALORE-1

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಪೇಟೆಂಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಹುತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಉಡ್ಪಿ ಡಿ. ಮುಂ. ಕೋರ್ಟಿನಲ್ಲಿ

O. P. No. 148/55.

ಶಾಂತಿ ಪೂಜಾರ್ತಿ — ಅರ್ಜಿದಾರರು.

ಮತ್ತು

ಮೈನರ್ ಆಮ್ಮು ಕೂಡಾ — ಎದ್ರುರು.

ಇವರೊಳಗೆ—

ಅರ್ಜಿದಾರಳು ಜ್ಯಾಹೀರು ಮಾಡುವದೇನಂದರೆ:—

ತಾ. 2-5-1952ರಲ್ಲು ಜೊಬಾಯಿಯಲ್ಲಿ ಮೃತಪಟ್ಟ ಮರ್ಗನಾದ ಕೋಟೆ ಗಾಮದ ಸಿದ್ದು ಪೂಜಾರಿರ ಬಾಬ್ತು "ಇಂಡಿಯನ್ ಮುಕೆರ್‌ಂಟೈಲ್ ಇನ್ಸುರೆನ್ಸ್ ಕಂಪೆನಿ, ಜೊಂಬೆ" ಯಿದರ ಪೊಲಿಸಿ ನಂಬ್ರ 23506 ರಲ್ಲಿ ತನ್ನ ಹೆಸ್ರಿಗೆ ಬರೆಬೇಕಾದ ಏನೇಜು ಪಡೆಯಬೇರೆ ಸಕ್ಸೆಶನ್ ಸರ್ಟಿಫಿಕೇಟು ಆಪೇಕ್ಷಿಸಿ ತಾಯಿ ಅರ್ಜದಾರಳು ಮಾಡಿರುವ ಮೇಲ್ಕಂಡ ಅರ್ಜಿ ತಾ. 8—1—56ಕ್ಕೆ ತನ್ನಿಗೆ ಇಟ್ಟಿದೆ. ಆಕ್ಷೇಪಣೆಯುಳ್ಳವರು ಸದ್ರಿ ತಾರೀಕಿಗೆ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

Narayana Rao K.
Advocate for Petitioner.
Camp: Udipi, 16—12—55.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವ ವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ವಿನೋದಿನಿ—

ಆಸುವಾಡಕರು: ಆಯೋಬಲ ಶಂಕರ್. ಪ್ರಕಾಶಕರು: ಕಾವ್ಯಾಲಯ, ಮೈಸೂರು ಬೆಲೆ. ರೂ. ೧—೪—೦

ಭಾರತೆಯ ವಿಶ್ವವಂದ್ಯ ಕವಿಗಳೂ ಲೇಖಕರೂ ಆದ ದಿವಂಗತ ರವೀಂದ್ರನಾಥ ಠಾಕೂರರ ಶ್ರೇಷ್ಠ ಕೃತಿಗಳಲ್ಲಿ ಕೆಲವನ್ನು ಕನ್ನಡಿಸಿರುವ ದಿನ ಪ್ರಸಿದ್ಧ ಪ್ರಕಾಶಕರಾದ ಆವ್ಯಾಲಯ ದವರು ಈಗಾಗಲೇ ಕನ್ನಡಭಾಷೆಯಲ್ಲಿ ಕನ್ನ ಡಿಗರಿಗೆ ಒದಗಿಸಿಕೊಟ್ಟು ಉಪಕಾರಮಾಡಿರು ವುದು ಎಲ್ಲರ ಗಮನಕ್ಕೂ ಬಂದಿರಬಹುದಾದ ವಿಷಯ. ಇದೀಗ ಈ ಪ್ರಕಾಶಕರು ಮೂಲ ಬಂಗಲಾವನ್ನು ಬಿಟ್ಟರೆ ಬೇರಾವುದೇ ಭಾಷೆ ಯಲ್ಲಿ ಬಹುಕಿ: ಅನುವಾದಿಸಲ್ಪಡದಿರುವ "ಚೋಖೇರ್ ಬಾಲಿ" ಎಂಬ ರವೀಂದ್ರರ ಕಾದಂಬರಿಯನ್ನು ಕನ್ನಡಿಗರಿಗಾಗಿ "ವಿನೋದಿನಿ" ಎಂಬ ನಾಮಕರಣವನ್ನಿತ್ತು ಪ್ರಕಟಿಸಿ ದ್ದಾರೆ. ಈ ಕಾದಂಬರಿಯನ್ನು ಓದಿದ ಮೇಲೆ, ಇವರ ಮೇಲೆ ಇಷ್ಟು ತಡವಾಗಿ ಮಾತ್ರ ಗಮನ ಸಲೇಕೆ ಹೊಯಿತೋ, ಶರಚ್ಚಂದ್ರರ ಕಾದಂ ಬರಿಗಳ ಸುಗ್ಗಿಯನ್ನಾಣ್ವ ಕಾಲಕ್ಕೆ, ಅವು ಗಳಿಗೆ ಸರಿ ಸಾಟಿಯಾಗಿ ನಿಲ್ಲಿಸಬ ಇಂಥ ಕಾ ದಂಬರಿ ಕನ್ನಡದಲ್ಲಿ ಅನುವಾದಿತಗೊಂಡು ಏಕೆ ಪ್ರಕಟವಾಗಿಲ್ಲವೆಲ್ಲಾ ಎಂದೆನಿಸುತ್ತದೆ. ಇಲ್ಲಿಯ ವಸ್ತು ಸಾಮಾಜಿಕವಾಗಿದೆ; ಹೆಣ್ಣು ಮತ್ತು ಗಂಡಿನ ನಾಜೂಕಾದ ಸಂಬಂಧವನ್ನು ಕುರಿತಾಗಿದೆ. ಸನ್ನಿವೇಶಗಳನ್ನು ರೇಖಿಸಿ ನಿರೂಪಿಸಿದ ರೀತಿಯು ಸಂಭಾಷಣಾ ಚಾಮರ್ಯ ದಿಂದ ಕೂಡಿದ್ದು ಮನೋಜ್ಞವೆನಿಸಿದೆ. ಮಾನಸಿಕ ತುಮುಲ ವಿವರಗಳನ್ನು ಕಲಾತ್ಮಕವಾಗಿ ವ್ಯಕ್ತಪ ಡಿಸುವುದರಲ್ಲಿ ರವೀಂದ್ರರು ತಮ್ಮ ಪ್ರತಿಭೆಯ ನ್ನು ಚೆನ್ನಾಗಿ ಪ್ರದರ್ಶಿಸಿದ್ದಾರೆ. ಮಹೇಂದ್ರ ಆತನ ಹೆಂಡತಿ ಆಶಾ, ಆಶಾಳನ್ನು ಮೊದಲು ಮದುವೆಯಾಗಬೇಕಿಂದಿದ್ದ ಬಿಹಾರಿ, ಮಹೇಂ ದ್ರನೊದನೆ ಲಗ್ನ ನಿಶ್ಚಯವಾಗುವ ಭಾಗ್ಯವ ನ್ನು ಕಳೆದುಕೊಂಡರೂ ಆತನ ಸಂಸರ್ಗದಲ್ಲಿ ರಬೇಕಾಗಿ ಬಂದ ವಿನೋದಿನಿ—ಇಷ್ಟು ಜನ ದಿ ಇಲ್ಲಿಯ ಮುಖ್ಯ ಪಾತ್ರವಾಗಿದ್ದಾರೆ. ಇವ ರೆಲ್ಲರ ವ್ಯಕ್ತಿತ್ವ ಚಿತ್ರಣವು ಬಹಳ ಮಾರ್ಮಿಕ ವಾಗಿ ರೂಪುಗೊಂಡಿರುವುದಲ್ಲದೆ ಸ್ವಾಭಾವಿಕ ವೂ ಮೂಡಿದೆ. ಕತೆ ಸಾಂಪ್ರದಾಯಿಕ ದೃಷ್ಟಿಯಿಂದ ನೋಡಿದರೆ ಸುಖಾಂತ್ಯವನ್ನು ತೊಂದುತ್ತದೆ. ಶುಭದ ಮಾರ್ಗವೇನೆಂಬುದ ನ್ನು ಹಾಗೆ ಸೂಚಿಸಿಕುತ್ತದೆ ಎನ್ನಬಹುದು. ಸಾಮಾನ್ಯ ಓದುಗನ ಪಾಲಿಗಿದು ಕೋವಾನಾ ಚಕ ಸಾಹಿತ್ಯ.

ನಾರದ ವಿನೋದ ಮತ್ತು ಚಂದ್ರಾವಳೀ—

ಬರೆದವರು: ವಿದ್ವಾನ್ ಪಿ. ಎಲ್. ರಾಘವೇಂದ್ರ ರಾವ್. ಪ್ರಕಾರಕರು: ಹಿಂದೀ ಪುಸ್ತಕ ಭಂಡಾರ, ಶ್ರೀ ರಾಮಾಂಜನೇಯ ಬಿಲ್ಡಿಂಗ್, ಉಡುಪಿ. ಬೆಲೆ: ರೂ. ೦—೧೦—೦.

ಪೌರಾಣಿಕ ಆಖ್ಯಾಯಿಕೆಗಳ ಆಧಾರದ ಮೇಲೆ ಚಿಕ್ಕಮಕ್ಕಳ ಆಭಿನಯಕ್ಕಾಗಿ ಬರೆದ ಇವೆರಡು ನಾಟಕಗಳು ಸಾಕಷ್ಟು ಚೆನ್ನಾಗಿ ಬರೆಯಲ್ಪಟ್ಟಿವೆ. ಭಾಷೆ ಮತ್ತು ಶೈಲಿಯು ಮಕ್ಕಳ ದೃಷ್ಟಿಯಿಂದ ಪ್ರಾಥವಾಗಿವೆಯಾದ ದರೂ ರಂಗಭೂಮಿಯ ಮೇಲೆ ಆಭಿನಯಿಸು ವಾಗ ಜಾರಿ ಗಮನಕ್ಕೆ ಆಷ್ಟಾಗಿ ಈ ಪೋಷಣ ನ್ನು ಗುರುತಿಸಲಿಕ್ಕಿಲ್ಲ ಎನ್ನಬಹುದು ಉಕ್ತಿ ಚಮತ್ಕಾರದಿಂದ ಕೂಡಿದ ಹಾಸ್ಯರಸಭರಿತ ವಾಕ್ಯಗಳು ಆಲ್ಲಲ್ಲಿ ಕಾಣಿಸಿಕೊಂಡಿರುವುದು ಈ ನಾಟಕಗಳ ವೈಶಿಷ್ಟ್ಯ.

ಶ್ರೀ ಕ್ಷೇತ್ರ ಧರ್ಮಸ್ಥಳದ ಮಹಾ ನಡಾವಳಿ—

ಬರೆದವರು: ಕಷ್ಮಿಂಜೆ ಸುಬ್ರಾಯ ಉಪಾ ಧ್ಯಾಯ. ಪ್ರಕಾರಕರು ಪಿ. ಕೃಷ್ಣ ಹೆಬ್ಬಾರ್, ಮುಂಡಾಡಿ, ದಕ್ಷಿಣಕನ್ನಡ ಬೆಲೆ: ರೂ. ೦—೪—೦.

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ದಿವಂಗತ ಮಂಜಯ್ಯ ಹೆಗ್ಗಡೆಯವರು ಧರ್ಮಾಧಿಕಾರಿಯಾಗಿ ದ್ದಾಗಿನಿಂದ ಇಸವಿಯಂದು "ಮಹಾನ ಡಾವಳಿ" ಉತ್ಸವವು ಅತ್ಯಂತ ವೈಭವದಿಂದ ಜರಗಿದ್ದಿತು. ಕ್ರಮವಂತೆ ನಡೆಯುವ ಪೂಜಾ ದಿನಗಳಲ್ಲದೆ ಸಾಹಿತ್ಯೋತ್ಸವ, ಸರ್ವಧರ್ಮ ಸಮ್ಮೇಳನ ಇತ್ಯಾದಿ ಲೋಕ ಹಿತಕರ ಕೆಲಸ ಗಳನ್ನೂ ಈ ಸಂದರ್ಭದಲ್ಲಿ ಹೆಗ್ಗಡೆಯವರು ಸಾಂಗಗೊಳಿಸಿದರು. ಇವೆಲ್ಲವನ್ನೂ ಸುಮಾರು ೭೦ ಪದ್ಯಗಳಲ್ಲಿ ಇಲ್ಲಿ ಸುಂದರವಾಗಿ ನಿರೂಪಿ ಸಲಾಗಿದೆ. ವಾರ್ಷಿಕ ಪಟ್ಟಿದಿ ಘಂಡಸ್ಸಿನಲ್ಲಿ ಈ ಪದ್ಯಗಳಿದ್ದು ಶಬ್ದ ಬಂಧವು ಮನೋಜ್ಞ ರಿವಾಗಿದೆ; ಉತ್ಪ್ರೇಕ್ಷೆಯ ಬದಲಿಗೆ ಸ್ವಾ ಮಾನಿಕ ಭಾವವೇ ತುಂಬಿರುವುದು ಈ ಪದ್ಯ ಗಳ ಸಂಗತಿಯಲ್ಲಿ ಎತ್ತಿ ಹೇಳತಕ್ಕ ವಿಷಯ. (ಉದಾ: ೫, ೬, ೨೨, ೨೮ರಿಂದ ೫೩, ೬೮ ಇತ್ಯಾದಿ) ಇದಕ್ಕೆ ಜೋಡಿಸಿರುವ ದಿವಂಗತ ಹೆಗ್ಗಡೆಯವರ ಚರಿತ್ರೆಯು ಪುಸ್ತಕದ ಶೋಭೆಯನ್ನು ದ್ವಿಗುಣಿಸಿದೆ ಎನ್ನ ಬಹುದು.

—ಕು.

ಮಂಗಳೂರು

ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿ ಇದರ ಕಾರ್ಯಕಾರೀ— ಮಂಡಳಿಗೆ ಶ್ರೀಗಳಾದ ಕೆ. ಆರ್. ಆಚಾರ್, ಮತ್ತು ಎಫ್. ಎಕ್ಸ್. ಡಿ. ಪಿಂಟೊ ಉಪಾಧ್ಯಕ್ಷರು ಗಳು, ಕೆ. ಕೆ. ಶೆಟ್ಟಿ ಮತ್ತು ಭೋಜ ರಾವ್ ಜೋಳಾರ್, ಪ್ರಧಾನ ಕಾರ್ಯದರ್ಶಿಗಳು, ಬಿ. ಪ್ಯೆಕುಂಠ ಬಾಳಿಗ ಕೋಶಾಧಿಕಾರಿ, ಬಿ. ಬಿ. ಶೆಟ್ಟಿ, ವೈ. ಮಂಜಯ್ಯ ಶೆಟ್ಟಿ, ಟಿ. ಎ. ಪೈ, ಕೆ. ವೇಣುಗೋಪಾಲ ನಾಯಕ್, ಎಂ. ಲೋಕಯ್ಯ ಶೆಟ್ಟಿ, ವೈ. ಸಂಜೀವ ಶೆಟ್ಟಿ, ಎನ್. ಉಪೇಂದ್ರ ನಾಯಕ್, ಕೆ. ವರದರಾ ಜ ಪ್ರಭು, ಇತರ ಸದಸ್ಯರುಗಳಾಗಿ, ಆಧ್ಯಕ್ಷೆ ಹಾ. ಯು. ಪಿ. ಮಲ್ಯರು ಆರಿಸಿಕೊಂಡಿರು ವರು.

ನೆರೆಹಾವಳಿ ನಿಧಿಗೆ ಸಹಾಯದ ಬಗ್ಗೆ ವಿನಂತಿ— ತಮಿಳುನಾಡಿನಲ್ಲಿ ಈಚೆಗೆ ಉಂಟಾದ ಪ್ರಚಂಡ ಬಿರುಗಾಳಿ ಮತ್ತು ಮಳೆಗೆ ತುತ್ತಾಗಿ, ಜನಾಯಕ್ಕೆ ಆಪಾರವಾದ ಬಂಧುಗಳ ಸಹಾಯಕ್ಕಾಗಿ ಸರ್ವಪಕ್ಷಸಲಾಹ ವಿಧಿಗೆ ದ. ಕ. ಜಿಲ್ಲೆಯ ಮಹಾಜನರೆಲ್ಲರೂ ಉದಾರ ಮನಸ್ಸಿನಿಂದ ಧನ ಸಹಾಯನೀಡ ಬೇಕಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ! ಯು. ಪಿ. ಮಲ್ಯರು ಜಾಹೀರು ವಿನಂತಿ ಮಾಡಿರುವರು. ಧನ ಸಹಾಯ ನೀಡು ವವರು, ಡಾ! ಯು ಪಿ. ಮಲ್ಯ, ಆಧ್ಯಕ್ಷೆ, ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿ, ಮಂಗಳೂರು ಅವರ ವಿಳಾಸಕ್ಕೆ ಕಳುಹಿಸಬಹುದು.

ಕೇಂದ್ರ ವೈದ್ಯಾನಿನಲ್ಲಿ ನವಗ್ರಹ ಶಾಂತಿ— ತಾ. ೧೪ರಂದು ಸೂರ್ಯಗ್ರಾಸದ ನಿಮಿತ್ತ ಕೇಂದ್ರ ವೈದ್ಯಾನಿನಲ್ಲಿ ನವಗ್ರಹ ಶಾಂತಿ ಯಜ್ಞವು ಶ್ರೀ. ಬಿ. ಆರ್. ಕಕ್ಕೇರರ ಆಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ. ಎಸ್. ಆರ್. ಭಟ್ಟರು ಯಜ್ಞವನ್ನು ಉದ್ಘಾಟಿಸಿದರು. ಸ್ವಾಮಿ ಭೋಜಾನಂದ, ಸ್ವಾಮಿ ಶಂಕರಾನಂದ ಮತ್ತು ಸ್ವಾಮಿ ನಾರಾಯಣಾನಂದರು ಯಜ್ಞದಲ್ಲಿ ದೀಕ್ಷಿತರಾಗಿದ್ದರು.

ವಿದೇಶ ಪ್ರವಾಸಾನುಭವದ ಕುರಿತು ಶ್ರೀ ವಿ. ಎಸ್. ಕುಡ್ವರ ಭಾಷಣ- ಇದೇ ತಾ. 15ರಂದು ರಾತ್ರಿ ಯೋಗಿ ಕ್ಲಬ್ಬಿನವರು ತಮ್ಮ ಕ್ಲಬ್ಬಿನ ಆಧ್ಯಕ್ಷರಾದ ಶ್ರೀ ವಿ. ಎಸ್. ಕುಡ್ವರು ವಿದೇಶ ಪ್ರವಾಸ ಮುಗಿ ಸಿ ಹಿಂತಿರುಗಿದ ನಿಮಿತ್ತವಾಗಿ ಸತ್ಕಾರಕೂ ಟವನ್ನೇರ್ಪಡಿಸಿದರು.

ಶ್ರೀ ಕುಡ್ವರು ತಮ್ಮ ವಿದೇಶ ಪ್ರವಾಸದ ಅನುಭವಗಳನ್ನು ವಿವರಿಸಿದರು. ಶ್ರೀಗಳಾದ ಬಿ. ವೈಕುಂಠ ಬಾಳಿಗ, ಕೆ. ಸದಾನಂದ ಹೆಗ್ಡೆ, ಪಿ. ಆರ್. ವೆಂಗನಾಥ ಕೂಡಾರು ಶ್ರೀ ಕುಡ್ವರ ಕುರಿತು ಮಾತನಾಡುತ್ತಾ ಅವರು ವಿದೇಶಗಳಲ್ಲಿ ಪಡೆದ ಅನುಭವವನ್ನು ಜಿಲ್ಲೆಯ ಹಾಗೂ ದೇಶದ ಅಭಿವೃದ್ಧಿಗೆ ಉಪಯೋಗಿಸ ಲೆಂದು ಹಾರೈಸಿದರು.

ದ. ಕ. ಜಿಲ್ಲಾ ಅಭಿವೃದ್ಧಿ ಸಂಘದ ಸಭೆಯು— ತಾ. 16ರಲ್ಲಿ ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರ ಆಧ್ಯಕ್ಷತೆಯಲ್ಲಿ ಜರಗಿತು. ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿ ಲಿಮಿಟೆಡ್ ಈ ಸಂಸ್ಥೆಯನ್ನು ರಾಷ್ಟ್ರೀಕರಿಸುವುದಸ್ಸು, ಪ್ರಾಂತ ಸುವರ್ಣಜಯಂತಿಯಾಗುವುದೆಂಬ ಕಾರಣಕೊಟ್ಟು ಮದ್ರಾಸು ಸರಕಾರವು ಮುಂದೂಡಲು ನಿರ್ಧರಿಸಿರುವುದನ್ನು ಖಂಡಿಸಿರುವ ಮತ್ತು ಈ ಮುಂದೂಡುವ ನಿರ್ಧಾರವನ್ನು ರದ್ದುಗೊಳಿಸಿ ಕಂಪೆನಿಯನ್ನು ಕೂಡಲೇ ರಾಷ್ಟ್ರೀಕರಿಸುವ ಮತ್ತು ಈಗಾಗಲೇ ಮಂಜೂರು ಮಾಡಲ್ಪಟ್ಟಿರುವ ಜಿಲ್ಲೆಯ ವಿದ್ಯುತ್ ಪಸ್ತರಣಾ ಯೋಜನೆಗಳನ್ನು ಕಾರ್ಯಗತಗೊಳಿಸುವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ನಿರ್ಣಯವಾಗಿ ಆ ದನ್ನು ಸರಕಾರಕ್ಕೆ ತಿಳಿಸಲಾಯಿತು. ಇದೇ ರೀತಿಯ ತಂತಿ ಹಾಗೂ ಮನವಿಯನ್ನು ಮುಖ್ಯ ಮಂತ್ರಿ ಶ್ರೀ. ಕಾಮರಾಜ ನಾಡರರಿಗೆ ಮಂಗಳೂರಿನ ಕೆನರಾ ಚೇಂಬರ್ ಆಫ್ ಕಾಮರ್ಸಿನವರೂ ಕಳುಹಿಸಿರುವರು.

ದ. ಕ. ಜಿಲ್ಲಾ ಭಿನ್ನಭೃದ್ಧಿ ಸಮಿತಿ ಸಭೆಯು— ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ. ಅವರ ಆಧ್ಯಕ್ಷತೆಯಲ್ಲಿ ಜರಗಿತು. ಸಮಿತಿಗೆ ಹೊಸ ಸದಸ್ಯರನ್ನು ಚುನಾಯಿಸುವ ತನಕ ಶ್ರೀಗಳಾದ ಕೆ.ಎಸ್. ಹೆಗ್ಡೆ, ಎಮ್. ಪಿ. ಆಧ್ಯಕ್ಷರು ಎಫ್. ಎಕ್ಸ್ ಡಿ. ಪಿಂಟೋ, ಉಚಾಧ್ಯಕ್ಷರು; ಬಿ. ಬಿ. ಶೆಟ್ಟಿ. ಮತ್ತು ಎಮ್. ಎಸ್. ಏಕಾಂಬರ ರಾವ್, ಜತೆಕಾರ್ಯದರ್ಶಿಗಳು; ಕೆ. ವಿಶ್ವನಾಥ ಕಾಮತ್, ಕೋಶಾಧಿಕಾರಿ; ಬಿ.ವಿ. ಬಾಳಿಗ, ಡಾ. ನಾಗಪ್ಪ ಆಳ್ವ, ಎಸ್. ನರಸಿಪ್ಪಯ್ಯ, ವಿ. ಎಸ್. ಕುಡ್ವ, ಎಮ್. ಎಸ್. ಏಕಾಂಬರ ರಾಯರಿರುವ ಸಮಿತಿ ರಚಿಸಲಾಯಿತು.

ವಿದೇಶದಲ್ಲಿ ಪತ್ರಿಕೋದ್ಯಮ— ಮಂಗಳೂರು ಪತ್ರಿಕೋದ್ಯಮಿಗಳ ಸಂಘದ ಆಶ್ರಯದಲ್ಲಿ 'ನವಭಾರತ' ಸಂಪಾದಕರಾದ ಶ್ರೀ. ವಿ. ಎಸ್. ಕುಡ್ವರು 'ವಿದೇಶದಲ್ಲಿ ಪತ್ರಿಕೋದ್ಯಮ' ಕುರಿತು ಮಾತನಾಡುತ್ತಾ ಹೀಗೆಂದರು: ಇಂಗ್ಲಾಂಡಿನ ದೈನಿಕ ಪತ್ರಿಕೆಗಳು ಸಾಮಾನ್ಯವಾಗಿ ನಮ್ಮ ನೇರದ ಇಂಗ್ಲಿಷು ಪತ್ರಿಕೆಗಳಂತೆಯೇ ಇವೆ. ಜರ್ಮನ್ನಿ, ಪ್ರಾನ್ಸು ಗಳ ಪತ್ರಿಕೆಗಳೂ ನಮ್ಮ ರೀತಿಯಲ್ಲಿಯೇ ಇವೆ. ಸ್ವೀಡನ್ನಿನಲ್ಲಿ ದೈನಿಕ ಪತ್ರಿಕೆಗಳು ದೊಡ್ಡ ಗಾತ್ರದವುಗಳಾಗಿದ್ದು, 50—60 ಪುಟಗಳ ಸ್ಥರ ನರೆಗಿದ್ದು, ಆಮೇರಿಕದ ನಂತರ ಆತಿ ಹೆಚ್ಚಿನ ಪುಟ ಸಂಖ್ಯೆಯಲ್ಲಿದ್ದ ದೈನಿಕಗಳು ಸ್ವೀಡನ್ನಿನಲ್ಲಿವೆ. ಎಂದು ತೊಡಲಾಗಿ ಹೇಳಿ ದರು.

'NAVAYUGA' WEEKLY

is in the list of periodicals and Newspapers approved for use in Secondary Schools as per proceedings Roc· No 466 N/·0 dated 12-12-1950 of the Director of public Instructions Madras.

ಗೀತೆಯು ಕೈಗನ್ನಡಿ

ನವಯುಗ ಪ್ರೆಸ್, ಉಡುಪಿ.

The Vijaya Bank, Ltd; Brahmavar.

ದಿ ವಿಜಯಾ ಬ್ಯಾಂಕ್. ಲಿಮಿಟೆಡ್; ಬ್ರಹ್ಮಾವರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮನಸೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ನಿಜಿಸ್ಟ್ರಿನೋಟೀಸು ನಾಲಿಸಿ ಕೇಳಿಕೊಂಡಾಗ್ಯೂ ಅಕ್ಕು ನ ಬಡ್ಡಿ ಯಾಪುವನ್ನೂ ಈ ತನಕವೂ ಕೊಡದೆ ಬಾಕಿನಾಡಿಕೊಂಡಿರುವುದರಿಂದಲೂ, ಕಡ್ರಿಯವರು ನಮ್ಮಲ್ಲಿ ಈವಿಟ್ಟ ನಗಗಳನ್ನು ಇದೇ ಬರಿಸ 28—12—55ನೇ ಬುಧವಾರ ಅಪರಾಪ್ತ ಗಂಟೆ 3ಕ್ಕೆ ಸರಿಯಾಗಿ ಯಾ ಬ್ಯಾಂಕಿ ಗೆ ಯಾಕ್ತಕಂಡ ಇತರ ಯಾವುದೇ ದಿನಗಳಲ್ಲಿ ಮುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ನಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 30-9-55ರ ವರೆಗೆ.
406/.54	ಆನಂದ ಶೆಟ್ಟಿ, ಕೃಷ್ಣಪ್ಪ ಶೆಟ್ರ ಆಳಿಯ, ಕಾಡೂರು ಗ್ರಾಮ, ಮೋಸ್ಟು ಕೊಕ್ಕರ್ಣೆ.	71 3
448/- ,,	ಯಸ್. ಶಿವರಾಮ ಶೆಟ್ಟಿ, ಮುತ್ತಯ್ಯ ಶೆಟ್ರ ಆಳಿಯ, ಶಿರೂರುಪೈಲು ಮನೆ, ಮೋಸ್ಟು ಕೊಕ್ಕರ್ಣೆ.	43 1
457/- ,,	ಬಿ. ಆನಂದ ಹೆಗ್ಡೆ, ಕೃಷ್ಣಪ್ಪ ಶೆಟ್ರ ಆಳಿಯ, ಪಳ್ಳಿ ಬೈಲು ಹೊಸಮನೆ, ಬಿಲ್ಲಾಡಿ ಗ್ರಾಮ, ಮೋಸ್ಟು ಸ್ಯಾಬರಕಟ್ಟೆ.	128 0
722/- ,,	ಐ. ರಾಜೀವ ಶೆಟ್ಟಿ, ಐ. ನಾರಾಯಣ ಶೆಟ್ರ ಆಳಿಯ, ಕುಂಜಾಲು.	150 0
933/- ,,	ಪಿ. ಭಾಸ್ಕರ ಹೆಗ್ಡೆ, ಐ. ನಾರಿಯಣ ಶೆಟ್ರ ಆಳಿಯ, ಇನ್ನೂಂದಿ, ಹಾಲಂಗಿ ಗ್ರಾಮ, ಮೋಸ್ಟು ಕೊಳ್ಳೂಗಿರಿ.	278 9
1087/- ,,	ಆಂತಯ್ಯ ಶೆಟ್ಟಿ, ಮಹಾಬಲ ಶೆಟ್ರ ಆಳಿಯ, ಹಂಪಾಡಿ ಗ್ರಾಮ, ಮೋಸ್ಟು ಬ್ರಹ್ಮಾವರ.	76 8
1088/- ,,	ಶಾನು ಆಡಾರಿ, ಪದ್ದಣ್ಣ ಆಚಾರಿ ಮಗ, ನಾರಂಬಳ್ಳಿ ಗ್ರಾಮ, ಮೋಸ್ಟು ಬ್ರಹ್ಮಾವರ.	60 0
1116/- ,,	ಯು. ಶಿವರಾಮ ಶೆಟ್ಟಿ, ಟೀಚರ್, ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆ, ಬ್ರಹ್ಮಾವರ.	142 11
345/.55	ನಾರಾಯಣ ಶೆಟ್ಟಿ, ನಂದ್ಯಪ್ಪ ಶೆಟ್ರ ಮಗ, ಕಾಡೂರು ಗ್ರಾಮ, ಬಳೆಸುನಿ, ಮೋಸ್ಟು ಕೊಕ್ಕರ್ಣೆ.	168 9

ಬ್ರಹ್ಮಾವರ
17—12—55.

ಬಿ- ಭಾಸ್ಕರ ಶೆಟ್ಟಿ.
ಮೆನೇಜರ್

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 304/51. R. E. P. 420/55.

ಅರ್ಜಿದಾರರು...M. ರಾಮಕೃಷ್ಣ ರಾವ್.

ಎದ್ರುರು.... 1. ಸರ್ವೋತ್ತಮಯ್ಯ.

2. ರಾಘವೇಂದ್ರ ರಾವ್.

ಕುಂದಾಪುರ ತಾಲ್ಲುಕು ಕೋಟೇಶ್ವರ ಗ್ರಾಮದಲ್ಲಿರುವ ಕೇಪಿಗಿರಿಯಸ್ಸನವರ ಮಗ ಸರ್ವೋತ್ತಮಯ್ಯಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ-

ಸದ್ರಿ ವ್ಯವಹಾರಣೆಯಲ್ಲಿ ರಿಕ್ತಿ ಹಣ ಬರಬೇಮಾಡಿಕೊಳ್ಳುವರೆ ಅರ್ಜಿದಾರರು ಎದ್ರುರ ಮೇಲೆ ಮೇಲಿನ ಅನುಲ್ಲಾರಿ ಅರ್ಜಿ ಪಾಟ್ಟು ಮಾಡಿರುತ್ತಾನೆ. ಆ ಕುರಿತು ವಿನಾದೆರೂ ಆಕ್ಷೇಪಣೆಗಳಿದ್ದರೆ ತಾ. 22-12-55ನೇ ದಿವಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪಿಸಿರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N· S· Parameshwaraih
Advocate for Petr.

ಕುಂದಾಪುರ, ತಾ. 10—12—55.

ರಶಿಯದ ನಾಯಕರ ಭಾರತ ಸಂಚಾರ

ದೇಶದ ಜನರೊಡನೆ ಅವರು ಬೆರೆತುಕೊಂಡ ಬಗೆ

ಭಾರತದಲ್ಲಿ "ಐತಿಹಾಸಿಕ" ಮಹತ್ವದ ಪ್ರವಾಸವನ್ನು ಮುಗಿಸಿ ಕಳೆದ ವಾರ ಸ್ವದೇಶ ಶಾಫಿಮುಬಾದ ರಶ್ಯದ ಶ್ರಧಾನ ಮಾರ್ಶಲ್ ಬುಲ್ಗಾನಿನ್ ಮತ್ತು ಅಲ್ಲಿಯ ಸಾಮ್ಯವಾದಿ ಪಕ್ಷದ ಮುಖ್ಯ ಕಾರ್ಯದರ್ಶಿ ಮಿ. ಖ್ರುಶ್ಚೆಫ್ ಭಾರತೀಯರ ಮೇಲೆ ತಮ್ಮ ಪ್ರಭಾವವನ್ನು ಅಚ್ಚೊತ್ತಿ ಯೇ ಹೋಗಿದ್ದಾರೆ.

ಕೊಯಮುತ್ತೂರಿನಲ್ಲಿ ಮಾರ್ಷಲ್ ಬುಲ್ಗಾನಿನ್ "ಭಾರತದಲ್ಲಿ ನಿಮ್ಮ ಮೇಲೆ ತುಂಬ ಹರಿಣಾಮ ಮಾಡಿದುದೇನು?" ಎಂಬ ಪ್ರಶ್ನೆಯನ್ನು "ನರೋದಾ"(ಅಂದರೆ, "ಜನರು") ಎಂದು ಉತ್ತರಿಸಿದರು. ಇದು ಅಕ್ಷರಶಃ ನಿಜ.

"ನಾವು ಭಾರತೀಯರನ್ನು ನೋಡಿದ್ದೇವೆ; ನಮ್ಮ ನೇಲಿನ ಅವರ ಪ್ರೀತಿ ಮತ್ತು ಸ್ನೇಹ ನನ್ನೂ ಸಮೃದ್ಧವಾದ ಜೀವನವನ್ನು ಕಟ್ಟುವುದಕ್ಕೆ ಅವಶ್ಯಕವೆನಿಸಿದ ಶಾಂತಿಯ ಬಯಕೆ ಅವರಿಗಿರುವುದನ್ನೂ ಕಂಡು ನಾವು ನಿಜಕ್ಕೂ ಮುಗ್ಧರಾಗಿದ್ದೇವೆ."— ಭಾರತ ಸಂಚಾರದ ಕೊನೆಯಲ್ಲಿ ರಶ್ಯದ ಪ್ರಭೃತಿಗಳು ಹೀಗೆ ತಮ್ಮ ಆಭಿಪ್ರಾಯವನ್ನು ವ್ಯಕ್ತಪಡಿಸಿದರು.

ಪಾಲಂ ವಿಮಾನ ನಿಲ್ದಾಣದಲ್ಲಿ ಬೀಳ್ಕೊಡುವ ಸಮಯ ಬಂದಾಗ ಪ್ರಧಾನಿ ನೆಹರು ಗಳು ಭಾವನೋದ್ರಿಕ್ತ ಧ್ವನಿಯಲ್ಲಿ ಸುನೂರು ಆರು ತಿಂಗಳ ಹಿಂದೆ "ನನ್ನ ಹೃದಯದ ಭಾಗ ವೊಂದನ್ನು ಇಲ್ಲಿ ಬಿಟ್ಟು ಹೋಗುತ್ತಿದ್ದೇನೆ" ಎಂದು ತೊಮ್ಮೋದಲ್ಲಿ ಹೇಳಿದ್ದ ತನ್ನ ಪೂರ್ತ ನ್ನು ನೆನಪಿಗೆ ತಂದುಕೊಂಡೋ ಏನಂತೆ "ನನಗೆ ಶಕ್ತಿರವರಾದ ಅತ್ಯಿರವರೊಬ್ಬರು ಹೊರಟು ನಂತಾಗ ಹೃದಯದ ಒಂದು ಭಾಗ ವೇ ಸ್ರತ್ಯೇಕಗೊಂಡಂತಾಗುತ್ತದೆ" ಎಂದು ನುಡಿದರು.

"ನಾವು ಹೃದಯದ ಭಾಗವೊಂದನ್ನು ಬಿಟ್ಟು ಹೋಗುತ್ತಿದ್ದೇನೆ; ಹೊರದುವ'ಈ ಗ ಳಿಗೆಯಲ್ಲಿ ಭಾರತ ಸರಕಾರ ಮತ್ತು ಭಾರತದ ನಾಗರಿಕರು ನಮಗೆ ತೋರಿಸಿದ ಸ್ನೇಹದ ಸವಿ ನೆನಪುಗಳು ನಮ್ಮ ಹೃದಯದಲ್ಲಿ ಶುಂಬಿವೆ" ಎಂದು ಮಿ. ಖ್ರುಶ್ಚೆಫ್ ಘೋಷಿಸಿದರು. "ಇ ನ್ನೊಮ್ಮೆ ಒಟ್ಟು ಸೇರುವ ವರೆಗೆ, ನಮಸ್ಕಾ ರ!!" ಎಂಬ ರಶ್ಯನ್ ಶಬ್ದದೊಡನೆ ಮಾರ್ಷ ಲ್ ಬುಲ್ಗಾನಿನ್ ವಿದೇಶವನ್ನು ತೆಗೆದು ಕೊಂಡರು.

❖

ಉದಕ ಮಂಡಲಪಲ್ಲಿ ಒಂದೆಡೆ ರಶ್ಯದ ಸನ್ಮಾನ್ಯ ಅತಿಥಿಗಳು ಆಡಿಕೆ ತೋಟವನ್ನು ನೋಡಿಕೊಂಡು ಬರಲು ಹೋದರು. ಎತ್ತ ರಕ್ಕೆ ತೆಳ್ಳನೆ ಬೆಳೆದಿದ್ದ ಆಡಿಕೆ ಮರವನ್ನು ಹತ್ತಿ ಹಣ್ಣನ್ನು ಕೊಯ್ಯುವ ಕೆಲಸಗಾರರು ನುರಿದಂದ ಇಳಿದುದೆಯೇ ಒಂದರಿಂದ ಇ ನ್ನೊಂದರ ತುದಿಗೆ ನೆಗೆದುಕೊಂಡು ಹಾರು ತ್ತಾ ಸಂಜೆಯ ವರೆಗೆ ಕೆಲಸ ಮಾಡುವರೆಂ ದೂ ಅಸ್ಟು ಹೆತ್ತಾಗೆ ೫೦ಮಾರು ೪೦೦ ಮರ ಗಳ ಅಡಿಕೆ ಕೊಯ್ದಾಗುವುದೆಂದೂ ಅವರಿಗೆ ಹೇಳಲಾಯಿತು.

ಇದನ್ನು ಆಸಕ್ತಿಯಿಂದ ಕೇಳುತ್ತಿದ್ದ ಖ್ರುಶ್ಚೆಫ್ ಹೊ ಸ ವಿ ಚಾ ರ ವೊಂ ದು ಸ್ಫುರಿಸಿದ ರಂತೆ ಬುಲ್ಗಾನಿನ್ರೊಡನೆ "ಬೀಗೆ ಇಸ್ಟು ಪ್ಟಿಪ್ರದಲ್ಲಿ ನಿಮಗೆ ಮಗ ಹತ್ತಲು ಸಾಧ್ಯವೆ?" ಎಂದು ಕೇಳಿದರು. "ನೀವೇ ಹತ್ತಿ ತೋರಿಸಿ, ನೋಡೋಣ" ಎಂದು ಬುಲ್ಗಾನಿನ್ ಹೇಳಿದಾಗ "ಊಹೂಂ — ಮಂತ್ರಿ ಮಂಡಲದ ಅಧ್ಯಕ್ಷ (ಪ್ರಧಾನ ಮಂತ್ರಿ) ಸ್ಥಾನವನ್ನು ಅಲಂಕರಿಸಿರುವ ನೀವೇ ಮೊದಲು ಹತ್ತಬೇಕು; ಆ ಮೇಲೆ ನಿಮ್ಮನ್ನು ನಾನು ಅನುಸರಿಸುತ್ತೇನೆ" ಎಂದು ಖ್ರುಶ್ಚೆಫ್ ತಪ್ಪಿಸಿಕೊಂಡರು!

ಭಾರತದಲ್ಲಿ ರಶ್ಯದ ನಾಯಕರ ತಿರುಗಾಟ ದಲ್ಲಿ ಖ್ರುಶ್ಚೆಫ್ ನೂತನವಾದವನ್ನು ಹೆಚ್ಚು ಬುಲ್ಗಾನಿನ್ ಬಾಯಿ ಬಿಚ್ಚಲಿಲ್ಲವೆಂಬುದು ಎಲ್ಲರ ಅನುಭವಕ್ಕೂ ಬಂದಿರುವ ವಿಷಯ. ಇದರ ಕಾರಣವನ್ನು ಮೇಲಿನ ವಿನೋದ ಘಟನೆಯೊಡನೆ ಮಾತ್ರವಲ್ಲ, ಕೆಳಗಿನ ಖ್ರು

"ನಮ್ಮ ಪ್ರಧಾನಿ ಮಂತ್ರಿ ಬುಲ್ಗಾನಿನ್ ಒಂದು ಸೂಚನೆಯನ್ನು ಸೂಡುತ್ತಾರೆ; ಆದರ ವಿವರಣೆಯನ್ನು ಜನರಿಗೆ ಆಥವಾಗುವಂತೆ ಒಪ್ಪಿಸುವುದು ನನ್ನ ಕೆಲಸ."

ಆದುದರಿಂದಲೇ "ಕಾಶ್ಮೀರವು ಭಾರತದ ಉತ್ತರ ಭೂ ಭಾಗ" ಎಂದು ಮಾತ್ರ ಬು ಲ್ಗಾನಿನ್ ಹೇಳಿದಾಗ ಖ್ರುಶ್ಚೆಫ್ "ಕಾಶ್ಮೀರದ ಭವಿಷ್ಯ ನಿರ್ಧಾರ ಎಂದೋ ಆಗಿಹೋಗಿ ದೆ" ಎಂದರು; "ಗೋವೆಯಲ್ಲಿ ಹೋರ್ಚುಗೀ ಜರು ಇನ್ನೂ ಉಳಿದಿರುವುದು ನಾಗರಿಕತೆಗೆ ನಾಚಿಕೆ ಗೇಡು" ಎಂದು ಬುಲ್ಗಾನಿನ್ ಸಾರಿ ದಾಗ "ಗೋವೆಯಲ್ಲಿ ಪೋರ್ಚುಗೀಜರಿಗೆ ನ್ಯಾ ಯವಾದ ಅಧಿಕಾರವೇ ಇಲ್ಲ; ಅದು ಭಾರತದ ಅವಿಭಾಜ್ಯ ಅಂಗ" ಎಂದು ಖ್ರುಶ್ಚೆಫ್ ವ್ಯಾ ಖ್ಯಾನ ನೀತ್ತರು.

ಅರ್ಥವನ್ನು ವಿವರಿಸುವ ಜವಾಬ್ದಾರಿಯು ನ್ನು ತಾನು ನರ್ವಹಿಸಬೇಕಾದುನರಿಂದಲೇ ತ ನ್ನ ಭಾಷಣ ದೀರ್ಘವಾಗಿರುತ್ತದೆಂದು ಖ್ರು ಶ್ಚೆಫ್ ಹೇಳಿದ್ದಾರೆ. ಆದರೆ ಮುಂಬಯಿಯ ಲ್ಲಿ ಆವರು ಶ್ರೀ ಮುರಾರ್ಜಿ ದೇಸಾಯಿಯವ ರೊಡನೆ ತನ್ನ ದೀರ್ಘ ಭಾಷಣಕ್ಕೆ ಕ್ಷಮೆಯ ನ್ನು ಕೇಳಿದರು. "ಭಾಷಣಕಾರರೆಂದರೆ ಕುಡುಕರು ಹಾಗೆ—ಚಿಕ್ಕ ಭಾಷಣ ಮಾಡುವ ಆಶ್ವಾಸನೆಯನ್ನು ಅವರು ಯಾವಾಗಲೂ ಕೊ ಡುತ್ತಾರೆ; ಆದರೆ ಹಾಗೆ ಮಾಡಲು ಮಾತ್ರ ಅವರು ಯೋಗುವುದಿಲ್ಲ. ಒಮ್ಮೆ ಕ್ರಾರಂಭಿ ಸಿದರೆ, ಎಷ್ಟು ಸಾಯಿದ ವರೆಗೆ ಮಾತಾಡಿದೆ ವೆಂದು ಅವರಿಗೆ ತಿಳಿಯುವುದೇ ಇಲ್ಲ. ಪುನಃ ದೀರ್ಘ ಭಾಷಣವನ್ನು ಪತಾದುವುದಿಲ್ಲವೆಂದು ನಾನು ಮಾತ್ರ ಭರವಸೆ ಕೊಡುತ್ತೇನೆ" ಎಂದು ಖ್ರುಶ್ಚೆಫ್ ಈ ಸಂದರ್ಭದಲ್ಲಿ ಲಘು ಮನಸ್ಸಿನ ನಂದ ನುಡಿದರು.

❖

ಕಾಶ್ಮೀರದಲ್ಲಿ ಯುವರಾಜ ಕರಣ ಸಿಂಗ ರು ಆತಿಥಿಗಳನ್ನು ಸಾತನಾಡಿಸುತ್ತಾ "ಈ ರಾ ಜ್ಯಕ್ಕೆ ಬರುತ್ತೇವೆಂದು ನೀವಿತ್ತ ಮಾತನ್ನು ನಡೆಸಿದಿರಿ!" ಎಂದರು ಆಗ "ನಾವು ಯಾವಾಗ ಲೂ ನಮ್ಮ ಮಾತನ್ನು ಪರಿಪಾಲಿಸುತ್ತೇವೆ. ಅನ್ಯೋನ್ಯತೆಯಲ್ಲಿ ಆನಂದ್ಯವಾದ ಕೆಲಸ ವೆಂದೇ ನಾವು ಭಾವಿಸುತ್ತೇವೆ." ಎನ್ನುತ್ತಾ ಖ್ರುಶ್ಚೆಫ್ "ಖಂ ನಾವು ಸ್ನೇಹಿತರನ್ನು ಸೂಡಿಕೊಂಡೆವೆಂದರೆ, ಮತ್ತೆಂದೂ ಆಗಲು ವುದಿಲ್ಲ. ಕೊನೆಯ ವರೆಗೂ ನಾವು ಮಿತ್ರ ರಾಗಿ ಉಳಿಯುತ್ತೇವೆ" ಎಂದು ಸಾರಿದರು.

ಸ್ನೇಹ ಭರದಲ್ಲಿ ಇವರು ಸಲಿಗೆಯ ಎಷ್ಟೋ ನೂತುಗಳನ್ನು ಅಡಿವ್ವಾರೆ; ಉಜ್ಜ್ವಸ್ಥಾನದ ದ್ದಿರುವ ಸ್ಪಟ್ಟಿಗಳ ನಿತ್ಯ ನಪಪಳಿಕೆಯಲ್ಲಿ ಈಂ ದು ಬಾರಿ, ಸಾನಾನ್ಯರಿಗೆ "ವಿಚಿತ್ರ" ಎಂ ದೇ ಕಾಣುವ ನರ್ತನೆಗಳನ್ನೂ ರಶ್ಯದ ಪ್ರ ಭೃತಿಗಳು ತೋರಿಸಿದ್ದಾರೆ.

ತಮ್ಮ ಸ್ವಾಗತಕ್ಕೆ ಅಂಬಾರಿ ಹಾಕಿ ಶೃಂಗ ರಿಸಿದಆನೆಗಳನ್ನು ತಂದು ನಿಲ್ಲಿಸಿದುದನ್ನು ಖ್ರು ಶ್ಚೆಫ್ ಗಮನಿಸದೆ ಹೋಗಲಿಲ್ಲ. ಹೊಸಬೆಲಿ ಯಲ್ಲಿ ಅವರಿಗೆ ಪ್ರಥಮ ಸ್ವಾಗತವನ್ನು ಕೊ ಡುವಾಗಲೇ ಅನೆ ಅಲ್ಲಿದ್ದಿತು. ಅನೆಯ ಕು ರಿತು ಯಾರೋ ಖ್ರುಶ್ಚೆಫರ ಅಭಿಪ್ರಾಯ ಕೇಳಿ ದರು. ಅವಕ್ಕೆ "ಅದು ನೋಡಲೇನೊ ಸುಂ ದರವಾದ ಪ್ರಾಣಿ—ಆವರೆ, ಟ್ರ್ಯಾಕ್ಟರಿನಷ್ಟು ಉಪಯುಕ್ತವೂ ವಿಧೇಯಂತೆ ತೋರಿಸುವಂಥ ದೂ ಅಲ್ಲ" ಎಂಬ ಉತ್ತರ ಬಂತು.

ಪುಡಿಯುಳ್ಳಿ ಖ್ರುಶ್ಚೆಫ್ ದೈತ ಪರಿವಾರ ದಲ್ಲಿ ಒಬ್ಬರಂತೆಯೇ ನತೆದುಕೊಂಡರು. ಛತ್ತ ಕೊಯ್ಯುತ್ತಿದ್ದ ಗಡ್ಡಿಗೆ ಹೋಗಿ ಒಬ್ಬನ ಕೈಯಿಂದ ಕುಡುಗೋಲನ್ನಿಸಿದುಕೊಂಡು "ನಾನಿಬ್ಬರೂ ಒಟ್ಟಿಗೆ ಕೆಲಸ ಮಾಡೋಣ" ಎನ್ನಹತ್ತಿದರು. ಆಲ್ಲದೆ ತೆನೆ ಹಾಳಾಗದಂತೆ, ಆದರೆ ಸಮಯವೂ ಕೆಡದಂತೆ, ಶೀಘ್ರ ಗತಿ ಯಲ್ಲಿ ಕೊಯ್ಯುವುದೆಂದರೆ ಹೇಗೆ ಎಂದೂ ತೋರಿಸಿಕೊಟ್ಟರು.

ಛತ್ತದ ಸಂಶೋಧನಾ ಕೇಂದ್ರದಲ್ಲಿ ಸಸಿ ಯೊಂದನ್ನು ನಟ್ಟು ಕೈ ಮೇಲಕ್ಕೆತ್ತುವಷ್ಟಕ್ಕೆ ಖ್ರುಶ್ಚೆಫರ ಮುಂದೆ ಸಾಬೂನನ್ನು ತಂದಿ ಟ್ಟರು. ಆಗ "ಕೈ ಮತ್ತೆ ತೊಳೆದರೆ ಆಗು ತ್ತದೆ; ಮೊದಲು ಸಸಿಗೆ ನೀರೆರೆಯೋಣ. ಇದಕ್ಕೆ ವಿಳಂಬಿಸಿದರೆ ಬುಲ್ಗಾನಿನ್ ಈ ಶಾಂತ ಸ್ವರ್ಗೀಯಲ್ಲಿ ಗೆದ್ದು ಬಿಡಬಹುದು!" ಎಂದರು. ಒಂದು ಕೊಡ ನೀರು ತಂದು ಸುರುವಿದ ಬಳಿಕ "ಬೇಗನೇ ಬೆಳೆಯಲಿಕ್ಕೆ ಈ ಸಸಿಗೆ ಹೆತ್ತು ನೀರು ಬೇಕೆಂದು ಕಾಣು ತ್ತದೆ" ಎನ್ನುತ್ತಾ ಇನ್ನೊಂದು ಕೊಡ ನೀರು ಬೇಡಿದರು.

❖

ಆತಿಥಿಗಳು ಭಾರತದ ನಾನಾ ಬಗೆಯ ತಿಂಡಿಗಳನ್ನು ಚಪ್ಪರಿಸಿ, ಬಹಳ ಮೆಚ್ಚಿಗೆ ಯನ್ನು ಸೂಚಿಸಿದರು. ಮುಂಬಯಿಯಲ್ಲಿ ಜೆಬೇಬಿ, ಶ್ರೀಖಂಡ, ವಡೆ ಇತ್ಯಾದಿ ಗಳ ರು ಚಿ ನೋಡಿದರು. ಕೊಯ ಮುತ್ತೂರಿಗೆ ಬಂದಿಳಿದ ಬಳಿಕ ತಾಂಬೂಲ ಚರ್ವಣದ ಜಟಿವೂ ಅವರಿಗೆ ಅಂಟಿಕೊಂಡಿ ತು. "ಓ, ಇದು ಬಾಯಿಯನ್ನು ಕೆಂಪುಗೆ ನೂಡುತ್ತದೆ" ಎಂದು ಖ್ರುಶ್ಚೆಫ್ ಕೆಂಬಣ್ಣದ ಮೇಲಿನ ತಮ್ಮ ಪ್ರೀತಿಯನ್ನು ಪ್ರಕಟಿಸಿದರು. ಅಲ್ಲದೆ ರಶ್ಯದಲ್ಲಿ ಸಹ ತಮಗೆ ಇಂಥ ಅಸುಭ ವವಾಗಬೇಕೆಂದು ಹಂಬಲಿಸಿದರು.

ಮುರಾರ್ಜಿಯವರೆ ರಾಜ್ಯದಲ್ಲಿ ಪೂರ್ಣ ಪ್ರಥಿ ಬಂಧವಿದೆ ಎಂಬುದರ ಅಡಕಕ್ಕೂ ಖ್ರುಶ್ಚೆಫ್ ಕೈಹಾಕಿದರು. ಟಾಟಾರ ಗಿರಣಿಯನ್ನು ವೀ ಕ್ಷಿಸುತ್ತಿದ್ದಾಗ ಒಂದು ಲೋಟಿ ಟೊಮಾಟೊ ರಸವನ್ನು ಕುಡಿಯುತ್ತಾ "ನಮ್ಮ ಶಾಸನವ ನ್ನು ಮುರಿಯದಾರೆಜೆಂಬ ಸದುದ್ದೇಶದಿಂದ ವಿಮಾನವು ಮುಂಬಯಿಯಲ್ಲಿ ಇಳಿಯುವುದಕ್ಕೆ ಮೊದಲೇ ನಾನು ಜುಸು ಮುಮ್ಮ ಸೇವಿಸಿದೆ. ಮುಂಬಯಿಯ ಹವೆಯಲ್ಲಿ ಬೇರೆ ಪಾನೀಯ ನಸಗೆ ಬೇಕಾಗಲಿಕ್ಕಿಲ್ಲ" ಎಂದರು.

ಅಲ್ಲಿಯೇ ಇದ್ದ ಶ್ರೀ ಹೋಮಿಮೋದಿ "ನಿನ್ನ ವ್ಹೋಡ್ಕಾ ಮತ್ತು ಕವಿಯೇನಿ (ರಶ್ಯದ ಮ ದ್ಯ) ರುಚಿ ಜೇಗೆ" ಎಂದು ಕೇಳಿದರು. ಆಗ ಖ್ರುಶ್ಚೆಫ್ "ನಿನಗವ್ವ ಪ್ರಿಯವೆಂದು ನನಗೆ ಪೊದಲೇ ಗೊತ್ತಿರುತ್ತಿದ್ದರೆ, ನಿನ್ನ ಆಂಗಿಯೊ ಳಗನೆ ಆಡಗಿಸಿಯಾದರೂ ತರಲು ನಾನು ನೋಡುತ್ತಿದ್ದೆ!" ಎಂದು ನಗೆಗಡಲ ನಡುವೆ ಹೇಳಿದರು.

ಇನ್ನೊಂದೆಡೆ ಆವರಿಗೆ ಕಾಫಿಯನ್ನು ಕುಡಿ ಯಗೊಟ್ಟರು. ಆಗ "ಇದು ನನಗೆ ಪೊತೆ ರುವ ಸಲುವೆಗೆ ಯೋಗ್ಯವಲ್ಲ. ನನ್ನ ಪಾಕ್ಕೆ ರದು ಕಾಫಿ ಮತ್ತು ಬೊಕಲೇಟನ್ನು ಉಷ ಯೋಗಿಸಬಾರದೆಂದು ಹೇಳಿದ್ದಾರೆ. ಆದರೆ ಈಗ ಇಲ್ಲಿ ಆ ಡಾಕ್ಟರರಿಲ್ಲವಾದ ಕಾರಣ, ನಿ ಮ್ಮೆಲ್ಲಕೊಟ್ಟಿಗೆ ನಾನೂ ಕಾಫಿಯನ್ನೆ ಕುಡಿಯು ತ್ತೇನೆ" ಎಂದರು.

ಎಳ ನೀರಿನ ಬಗ್ಗೆ ಒಳ್ಳೆಯ ಮಾತನ್ನು ಖ್ರುಶ್ಚೆಫ್ ಮುಂಬಯಿಯಲ್ಲಿರುವಾಗ ಆಡಿದ್ದು ದನ್ನು ಕೇಳಿಯೋ ಏನೋ, ಮದ್ರಾಸಿನಲ್ಲಿ ರಾ ಜ್ಯಪಾಲ ಶ್ರೀ ಶ್ರೀಪ್ರಕಾಶರು ರಾಜ ಭವನದ ಲ್ಲಿ ಎಳ ನೀರನ್ನು ಕುಡಿಯಲೆಂದು ಪ್ರೀತಿಯಿಂ ದ ಕೊಟ್ಟರು. ಆಗ ಮಾತ್ರ ಖ್ರುಶ್ಚೆಫ್ "ಟೇಡ, ನನಗೆ ಆನಾನಾಸಿನ ರಸವೇ ಆದೀ ತು" ಎಂದು ಶ್ರೀ ಪ್ರಕಾಶರ ಕೈಯನ್ನು ಪೆ ಲ್ಲಿಸಿ ಹಿಂದಕ್ಕೆ ತಳ್ಳಿದರು!

❖

ಭವ್ಯ ಸ್ವಾಗತದಿಂದ ದಿಗ್ಭ್ರಮೆ ಹೊಂದಿ ದಂತೆ ತನ್ನ ಸಂಗಾತಿ ಕುಡು ಬಂದಾಗ (ಮ ದ್ರಾಸಿನಲ್ಲಿ) "ನಮ್ಮನ್ನು ನೋಡಿದರೆ ಭಾರತ ದಿಂದ ತುಂಬ ಪ್ರಭಾನಿತರಾಗಿದುಂತೆ ಭಾಸ ವಾಗುತ್ತದೆ. ನೀವು ಇಲ್ಲಿಯೇ ಇಕಿರಬಾರದೆ ದ್ದು?' ಎಂದು ಬುಲ್ಗಾನಿನ್ ಅಪಾರೀಕ್ಷಿತ ಪ್ರಶ್ನೆ ಯೊಂದನ್ನು ಖ್ರುಶ್ಚೆಫ್ರಿಗೆ ಹಾಕಿದರು. ಉತ್ತಾ ಪಿಪಡಲ್ಲಿತೀಲುತ್ತಿದ್ದ ಖ್ರುಶ್ಚೆಫ್ ಒಡನೆಯೇ "ಹಾದ್ದು ನಾನದನ್ನು ಗಂಭೀರವಾಗಿ ವಿಚಾ ರಿಸುತ್ತಿದ್ದೇನೆ" ಎನ್ನುತ್ತಾ ಪ್ರಸಂಗವಥಾ ನತೆಯನ್ನು ತೋರಿಸಿದರು.

ಭಾಕ್ರಾ ಮತ್ತು ನಂಗಲಗಳಿಗೆ ಭೇಟಿಯಿ ತ್ತಾಗ ಆತಿಥಿಗಳು ಮಂಜು ಬಳಲಿದ್ದರು. ಸಂ ಜಾದಿನ ನೀರಾವರಿ ಮಂತ್ರಿ ಚೌಧರಿ ಲಾಹಿ ರಿ ಸಿಂಘರು ರಶ್ಯದ ತಂಡದಲ್ಲಿದ್ದ ಮಿ. ಮಿ ಖೈಲೋನೊಡನೆ ಈ ಮಾತನ್ನು ಎತ್ತಿದರು. "ಇಷ್ಟ, ಇಷ್ಟ—ಬಳಲಿಕೆಯ ಅನುಭವವೇ ಆಗಲಿಲ್ಲ. ನಿಜವಾಗಿ ಉತ್ಸಾಹವೇ ಮೈಯಲ್ಲಿ ತುಂಬಿ ಕೊಂಡಿತು. ನಾನೀನ್ನು ನನ್ನ ಸ್ನೇಹಿತ ರಿಗೆ ಭಾರತವು ಒಬ್ಬನ ಸ್ವಾರ್ಥವನ್ನು ಕಪಿಪ್ಪೆ ಇಪ್ಪತ್ತು ವರ್ಷದಷ್ಟಾದರೂ ಹಗ್ಗಿಸುತ್ತದೆ ಎಂದು ಹೇಳುತ್ತೇನೆ" ಎಂಬ ತೃಪ್ತಿಯ ಮಾ ತನ್ನಾಗ ರಶ್ಯದ ಮಂತ್ರಿ ಆಡಿದರು.

ನಮ್ಮ ದೇಶದಲ್ಲಿ ಎಲ್ಲಿ ಹೋದರೂ ಸಂ ಪ್ರದಾಯದ ಹಾಗು ಶಾಸ್ತ್ರಬದ್ಧವಾಯಿಕ ವೈಶಿಷ್ಟ್ಯ ದಿಂದ ಕೂಡಿದ ಸ್ವಾಗತವೇ ರಶ್ಯದ ನಾಯಕ ರಿಗೆ ನೀಡಲ್ಪಟ್ಟಿತು. ಪೂರ್ಣ ಕುಂಭ, ವಾದ್ಯ ಘೋಷ, ಆರತಿ, ಕುಂಕುಮಾರ್ಚನೆ ಇತ್ಯಾದಿ ಗಳೊಂದಿಗೆ ನುಂಬಯಿಪ್ಪಿ ಗಾಂಧೀ ಟೋಪಿ, ಬೆಂಗಳೂರಿನಲ್ಲಿ ನುದುವನೆಗಳ ರಾಲು, ಜೈ ಪುರದಲ್ಲಿ ರಜಪೂತರ ಮುಂಡಾಸು ಇವೇ ನುಂತಾದುವನ್ನೂ ಧರಿಸಿ ಆವರು ತುಂಬ ಮೀ ದರು

ಹುಪ್ಪನೂಲೆಯೂ ನಮಸ್ಕಾರ ಕ್ರನುವೂ ಆತಿಥಿಗಳ ಮನಸ್ಸಿಗೆ ತುಂಬ ನಾಟಬೇಕು. ಎಂತಲೇ ಬೆಂಗಳೂರಿನಲ್ಲಿ "ನಮ್ಮ ದೇಶಕ್ಕೆ ಉಕ್ತಿನ ಪರಿ ಇದೆ ಎನ್ನುತ್ತಾರೆ; ಈಗ ಇಲ್ಲಿ ಬಂದರೆ ಸೂವಿನ ಪರದೆ ನಮಗೆ ಕಾದಿದೆ" ಎಂದು ಖ್ರುಶ್ಚೆಫ್ ಹೇಳುವಂತಾ ಯಿತು. "ನಮಸ್ತೆ" ಎನ್ನುವುದರಲ್ಲಿಂತೂ ರಶ್ಯದ ಆತಿಥಿಗಳು ಎಸ್ಟು ಪಳಗಿ ಸೋದರು, ಮತ್ತು ಭಾರತೀಯರನ್ನು ಈ ಪದ್ಧತಿಯಂತೆ ಸ್ವಾಗತಿಸುವುದರಲ್ಲಿ ಎಸ್ಟು ಉತ್ಸಾಹತೆ ತೋ ರಿಸಿದರು ಎಂದರೆ— ಅಂಬಾಲಾದ ರೈಲ್ವೆ ನಿಲ್ದಾಣದಲ್ಲಿ ಸುಸ್ವಕ ವ್ಯಾಪಾರಿಯೊಬ್ಬನ ಮುಂದೆ ಅಕಸ್ಮಾತ್ತಾಗಿ ನಿಂತು "ರಾಮ್ ರಾಮ್" ಎಂದು ಕೈ ಜೋಡಿಸಿದರು. ಪೂಡ ಲು ಮಂಕನಂತಾದರೂ ಅಂಗಡಿಕಾರನಿಗೆ ಮತ್ತೆ ವಿನೋದವೆನಿಸಿ ಪ್ರತಿವಂದನೆಯನ್ನಾತ ಸಲ್ಲಿಸಿದನು.

❖

ತಮ್ಮ ಬಗ್ಗೆ ಭಾರತೀಯರಲ್ಲಿ ಆಪಾರ ವಿಶ್ವಾಸವಿದೆ ನಂಬುವ ಆತಿಥಿಗಳ ಗಮ ನಕ್ಕೆ ಭಾರತಕ್ಕೆ ಕಾಲಿಟ್ಟ ಕೆಲವೇ ಹೊತ್ತಿಗೆ ಬಂತು. ರಾಷ್ಟ್ರಪತಿ ಭವನದ ಪೊಗಲ ತೋ ಟದಲ್ಲಿ ಆತಿಥಿಗಳಿಗೆ ಸತ್ಕಾರವನ್ನು ಏರ್ಪಡಿಸಿ ದ್ದರು. ಆಗ ಚಿತ್ರಗ್ರಾಹಕರು ಬಿಟ್ಟೂಬಿಡದೆ ಅಲ್ಲಿ ಸುತ್ತಾಡುತ್ತಿದ್ದು ಬುಲ್ಗಾನಿನ್ ಮತ್ತು ಖ್ರುಶ್ಚೆಫ್ ಎಲ್ಲಿಲ್ಲಿ ಆನುಕೂಲ ಕೋ ಣಗಳಲ್ಲಿ ಕಂಡು ಬಂದರೊ ಅಲ್ಲಿಲ್ಲ "ಟಕ್ ಟಕ್" ಎಂದು ಚಿತ್ರವಿಳಿಸುತ್ತಿದ್ದರು.

ಬಡುವಿಲ್ಲದೆ ನಡೆಯುತ್ತಿದ್ದ ಈ ಚಟುವಟಿ ಕೆಯನ್ನು ಕಂಡು ಬುಲ್ಗಾನಿನ್ "ನಿನಗೆ ಬೇ ಕಾದಷ್ಟು ಚಿತ್ರ ಇನ್ನೂ ನೊರಕಲಿಲ್ಲವೆ?" ಎಂದು ಕೇಳಿದರು. ಒಬ್ಬ ಚಿತ್ರಗ್ರಾಹಕನು "ಇಲ್ಲ—ನಾವು ಚಿತ್ರ ತೆಗೆಯುತ್ತಾ ಹೋಗು ತ್ತೇವೆ" ಎಂದುತ್ತರಿಸಲು ಖ್ರುಶ್ಚೆಫ್ ನಮಗೆ ಬಾಯಿಹಾಕಿ "ನಿನಗೆ ಚಿತ್ರಗ್ರಾಹಕ ಕಟಲ ದ ಕೊರತೆಯಾಗದೆ!" ಎಂದನು. "ಊಹೂಂ ಎಂದೂ ಇಲ್ಲ; ನಮ್ಮೊಡನೆ ಚೀಕಾಸ್ಪೆ ಸಂಸ್ಥಾನವೆ!" ಎಂದು ಆಗ ಆವರಿಗೆ ಹೇಳಿ ಲಾಯಿತು.

ಕಲ್ಕತ್ತದಲ್ಲಿ ಆತಿಥಿಗಳು ಒಂದು ಸಣಡಿನ ಕಾರ್ಯಾಸೆಗೆ ಭೇಟಿಕೊಟ್ಟರು. ಆಗ ಆವರಿಗೆ

ಕುಮಾರಿ ಬಿಲ್ಲೆಗಳು (ಸತಕಾರಿ ರಜಿಸ್ಟರ್ಡ್)

ಹಡತಪ್ಪಿದ ಮತ್ತು ನಿಂತುಹೋದ ಮುಟ್ಟು

ಮೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾ ಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. ೫/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ಪಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ಟಾಕಿಸ್ಟರು: ಶಹಾಕಂಪೆನ್ಸಿ, ಮಂಗಳೂರು

ರಶ್ಯದ ಸ್ಟಾಲಿನ್‌ಗ್ರಾಡ್ ನಗರವು ಯುದ್ಧದಿಂದ ಧ್ವಂಸಗೊಂಡಿದ್ದಾಗ ಕೆಲಸಗಾರರಿಗೆ ವಾಸಿಸಲು ಇಲ್ಲಿಂದ ಕಳಿಸಿದ್ದ ಕಣಜದ ಜೇರಿಯ ಬೆಳ್ಳೆಯ ಸಾಮರಿಯೊಂದನ್ನು ಆರ್ಸಿಸಲಾಯಿತು. "ಈ ಸಾಮರಿ ಸರಿ ಇದೆಯೆ?" ಎಂದು ನಿರೀಕ್ಷಣೆಯ ಅಧಿಕಾರಿ ಮಿ. ಜೆ. ಪಿ. ಬೆಲ್ ಕೇಳಿದರು. "ಹೌದು, ಫಾದು—ನಾನಾಗ ಸ್ಟಾಲಿನ್ ಗ್ರಾಡ್ ಸೈನಿಕ ವ್ಯೂಹ ಮಂಡಳದ ಸದಸ್ಯನಾಗಿದ್ದೆ; ಆಧುನಿಕಂದ ನನಗೆ ಆದರ ಪರಿಜಯ ಚೆನ್ನಾಗಿದೆ. ನಿಮ್ಮ ಕಣಜದ ತಯಾರಿಕೆಗಳು ಉತ್ತಮವಿವೆ; ನಿಮಗೆ ಯಶಸ್ಸು ಕೋರುತ್ತೇನೆ" ಎಂದು ಪ್ರಿನ್ಸೆಫ್ ಕೃತಜ್ಞತೆಯಿಂದ ಆಗ ನುಡಿದರು.

ಭಾರತದ ಸಸ್ಯ ವಿಜ್ಞಾನ ಕೇಂದ್ರದಿಂದ ಆರೇಳು ಸಾವಿರ ಬಗೆಯ ವನಸ್ಪತಿಗಳ ಮಾದರಿಯನ್ನು ರಶ್ಯಕ್ಕೆ ಅನೇಕ ವರ್ಷಗಳ ಹಿಂದೆ ಕಳಿಸಿ ಕೊಡಲಾಗಿದೆ ಎಂದು ಕೆಲವ್ತತ್ತಿದ್ದಲ್ಲಿ ತಿಳಿಸಿದಾಗ "ಆವನ್ನು ನೀವು ಪೆಟ್ರೊಗ್ರಾಡ್ (ಈಗ ಲೆನಿನ್‌ಗ್ರಾಡ್) ನಗರಕ್ಕೆ ಕಳಿಸಿದ್ದಿರಿ" ಎಂದು ಪ್ರಿನ್ಸೆಫ್ ಆಶ್ಚರ್ಯತೆಯಿಂದ ನುಡಿದರು.

ಶ್ರೀ ಪ್ರಕಾರರು ತಮ್ಮ ಸ್ವಾಗತ ಭಾಷಣದಲ್ಲಿ ಟರ್ಶೇನೋವ್ ಎಂಬ ರಶ್ಯನ ಲೇಖನ ಮಾತೊಂದನ್ನು ಉದಾಹರಿಸಿದ್ದರು. ಪ್ರಿನ್ಸೆಫ್ ಇದನ್ನು ತುಂಬ ಸೊಚ್ಚಿಕೊಂಡು "ನಿಮ್ಮಲ್ಲಿ ಬಹಳ ಮಂದಿ ಆತನ ಗ್ರಂಥಗಳನ್ನು ಓದಿರಲಿಕ್ಕಿಲ್ಲ" ಎಂದರು. ಕೆಲ್ವತ್ತಪ್ಪಲ್ಲಿ ಪ್ರಿನ್ಸೆಫ್ ಭಾಷಣವನ್ನು ಮಾಡುವಾಗ ರವೀಂದ್ರನಾಥ ಠಾಕೂರರನ್ನು ಉಲ್ಲೇಖಿಸಿ ರಶ್ಯದ ಈ ಪರಮ ಸ್ನೇಹಿತನ ನಾಡಿಗೆ ಬರುವಲ್ಲಿ ತಮಗಾಗುತ್ತಿರುವ ಆನಂದವನ್ನು ಸೂಚಿಸಿದರು.

❖

ಬರ್ಮಾದಿಂದ ಆಸ್ಪತ್ರೋಲ್ ನಗರಕ್ಕೆ ಬಂದೊಡನೆಯೆ "ಮನೆಗೆ ಹುಸಿ ಬಂದೆನೆಂಬ ಆನುಭವವಾಗುತ್ತಿದೆ" ಎಂದು ಬುಲ್ಗಾನಿನ್ ಹೇಳಿದರು. ಆಸ್ಟ್ರಾ ನಿಕಟ ಬಾಂಧವ್ಯವನ್ನು ಆವರು ಭಾರತವಲ್ಲಿದ್ದ ಕೆಲವಿನಗಳಲ್ಲಿ ಸ್ಥಾಪಿಸಿದ್ದರು.

ಹುಣೆಯ ಸೈನಿಕ ಕೇಂದ್ರವಲ್ಲಿ ಅತಿಥಿಗಳನ್ನು ಸತ್ಕರಿಸಿದ ಭಾರತೀಯ ಸೇನಾಧಿಕಾರಿಗಳು "ದ್ವಿತೀಯ ಮಹಾಯುದ್ಧ ಕಾಲದ ವೀರ ಜೋಧ ಮಾರ್ಷಲ್ ಝುಕೋವ್ ನಮ್ಮೊಡನೆ ಬರದಿದ್ದುದನ್ನು ಕಂಡು ನಮಗೆ ನಿರಾಪತ್ಯಾಗಿದೆ" ಎಂದರು. ಮಾರ್ಷಲ್ ಬುಲ್ಗಾನಿನ್ ಈ ವಿಶ್ವಾಸದಿಂದ ಪರ್ಯಮಳಿಕತರಾದರು. ಭಾರತೀಯರು ರಶ್ಯದ ಆ ವೀರ ಯೋಧನಿಗೆ ತೋರಿಸಿದ ಪ್ರೀತ್ಯಾದರೆಗಳನ್ನು ತಾನು ಮುಟ್ಟಿಸುವುದಾಗಿ ಅವರು ತಿಳಿಸಿದರು.

ಆಗ್ರಾನಲ್ಲಿ ತಮಗಿತ್ತ ಸ್ವಾಗತಕ್ಕೆ ರಾಜ್ಯಪಾಲ ಶ್ರೀ ಮುನ್ಶಿಯವರಿಗೆ ಟಾರ್ಶಲ್ ಬುಲ್ಗಾನಿನ್ ಆಭಾರ ಸೂಚಿಸಿದರು; ಆಗ ಪತ್ರಿಕೆಯಲ್ಲಿ ಶ್ರೀಮತಿ ಲೀಲಾವತಿ ಮುನ್ಶಿಯವರೂ ಇದ್ದುದನ್ನು ಕಂಡ ಪ್ರಿನ್ಸೆಫ್ "ನಾಪಿಸೀಗ ಬುಲ್ಗಾನಿನ್ ಪುರಿಕು ಬಿಟ್ಟುದನ್ನು ಕೂಡಿಸುತ್ತಿದ್ದೇನಿ— ಆಂದರೆ, ನಾವು ಶ್ರೀಮತಿ ಮುನ್ಶಿಯವರನ್ನು ಸಪ ಆವರು ವ್ಯಕ್ತಪಡಿಸಿದ ಸ್ನೇಹಾದರಗಳಿಗಾಗಿ ಕೃತಜ್ಞರಾಗಿರಬೇಕಾಗಿದೆ" ಎಂದರು.

ನೀಲಗಿರಿಗು ಮೂಲ ನಿವಾಸಿಗಳಾದ ಕೊಡವರು ಪುಷ್ಪ ಹಾರವನ್ನು ಆರ್ಪಿಸಿದಾಗ ಅವರೊಡನೆ ನಿಂತುಕೊಂಡು ಚಿತ್ರ ನಿಳಿಸಲು ಅತಿಥಿಗಳು ತಪ್ಪಲಲ್ಲ; ಪೈಸುರದಲ್ಲಿ ಮೋಲೊ ಆಟಗಾರರೊಡನೆ ಕೂಡಿ ಚಿತ್ರವಿಳಿಸಲು ಅವರು ಉದಾಸೀನತೆ ತೋರಿಸಲಿಲ್ಲ. ಬಿಹಾರದಲ್ಲಿ ಕಾರ್ಖಾನೆಗಳನ್ನು ಸಂದರ್ಶಿಸಿದಾಗ ಕೂಲಿಕಾರ ಮಕ್ಕಳು ತೋರಿಸಿದ ಗೌರವಕ್ಕೆ ಪ್ರತಿಯಾಗಿ ಪ್ರೀತಿಯಿಂದ ಬೆನ್ನು ತಟ್ಟಲು ಮರೆಯಲಿಲ್ಲ. ಹುಣೆಯ ಸಾರ್ವಜನಿಕ ಸೇವಕರನ್ನು ಸರಿಜಯ ಮಾಡಿಕೊಟ್ಟಾಗ, ಆತಿಥಿಗಳು "ನಿನ್ನ ಚಿತ್ರವಿಳಿಸಿ ಕೊಡಿರಿ" ಎಂದು ತಾವಾಗಿ ವಿನಂತಿಸುವಷ್ಟು ಸೌಜನ್ಯವನ್ನು ತೋರಿಸಿದರು. ಮಹಾರಾಜಜನೆಯ ಕಾರ್ಯಕ್ರಮಗಳು ಜರಗಿದಾಗ ಕಲಾವಿದರನ್ನು ಆನಂದ ಬಿಡದೆ ಅದರಿಸುತ್ತಿದ್ದರು. ನರ್ತಕಿ ತಾರಾ ಚೌಧುರಿ, ನಟ ನಿರ್ದೇಸ್ ಇವರ ಗುರುತು ಹಿಡಿಯುವಷ್ಟು ಅವರು ಜೊರ್ಕಾಗಿದ್ದರು.

ಪ ಮುಖ ಆತಿಥಿಗಳ ಚಿತ್ರಗಳನ್ನು ಕಲಾ ವಿದರೊಬ್ಬರು ಪ್ರೀತಿಯಿಂದ ಪೂರ್ಣಯಿಸಿ ಆರ್ಪಿಸಿದಾಗ "ನನ್ನ ಚಿತ್ರವು ಎಶ್ಟು ಜೇಲತಕ್ಕತ್ತಿಸ್ಸು ಸುಂದರವಾಗಿದೆ" ಎಂದು ಪ್ರಿನ್ಸೆಫ್ ಹಾಗು "ನನ್ನ ಚಿತ್ರವು ನಿಜವಾಗಿಯೂ ಒಳ್ಳೆಯದಿದೆ" ಎಂದು ಬುಲ್ಗಾನಿನ್ ಬರೆದುಕೊಡುವಷ್ಟು ಮುಂದೆ ಹೋದರು.

❖

ಇಷ್ಟಾದರೂ ಎಸ್ಟೇ ಜೇಲೆ ರಶ್ಯದ ನಾಯಕರು—ಆದರೆಲ್ಲೂ ಮುಮ್ಮುಖಾಗಿ ಪ್ರಿನ್ಸೆಫ್—ತರ್ಕಕ್ಕೆ ಇಳಿದು ಆತಿಥಿ ಧರ್ಮವನ್ನು ಮೀರಿದಂತೆ ನಡೆದುಕೊಂಡ ಗಳಿಗೆಗಳುಂಟು. ಕಾಶ್ಮೀರದಲ್ಲಿ ಅವರಿಗೆ ಗಂಧದಲ್ಲಿ ಕೆತ್ತಿದ ಶ್ರೀ. ಜವಾಹರಲಾಲ ನೆಹರೂರ ಮೂರ್ತಿಯನ್ನು ತೋರಿಸಲಾಯಿತು. "ಇದಾರಿದು ನೂರಿಸ್ಸಿಗೆ ಲಂತೆ?' ಎಂದು ಕೇಳಿದಾಗ "ಇದನು ಪೈಸೆ ನಮ್ಮ ಪೆಜ್ಜುಗೆಗೆ ಖರ್ತವಾಗಿದ್ದಾನೆ— ಆದರೆ ಕೆತ್ತನೆಯ ಕೆಲಸ ಚೆನ್ನಾಗಿ ಸಡೆದಿದೆ ಎಂದು ನೂತ್ರ ಹೇಳುವಂತಿಲ್ಲ!" ಎಂದು ಪ್ರಿನ್ಸೆಫ್ ದಾಕ್ಷಿಣ್ಯವಿಲ್ಲದೆ ಟೀಕಿಸಿದರು.

ಆಧ್ಯಯೇ ಆವರಿಗೊಂದು ತಿರುಗಾಡುವಾಗ ಕೈಯಲ್ಲಿ ಹಿಡಿದುಕೊಳ್ಳುವ ಕೋಲನ್ನು ತೋರಿಸಿ "ಜೇಗಿನೆ-" ಎಂದು ಮಾತೋ ಒಳ್ಳರು ಕೇಳಿದರು. ಬುಲ್ಗಾನಿನ್ ಆವನ್ನು ಕೈಗೆ ತೆಗೆದುಕೊಂಡು "ಓಹೋ ...ನೋಡಲು ಚೆನ್ನಾಗಿದೆ. ಆದರೆ ಅದನ್ನು ಇಲ್ಲಿ ಹಿಡಿದುಕೊಳ್ಳುವ ಅಗತ್ಯ ಯಾರಿಗಿದೆ?" ಎಂದು ಕೇಳಿಯೇ ಬಿಟ್ಟರು. ಮುಂದರಿದು "ಇವು ಅಜ್ಜಂದಿರ ಪ್ರಯೋಜನಕ್ಕೆ ಬರಬಹುದು—ಆದರೆ ಇಲ್ಲಿರುವ ನಾವ್ಯ ಯಾರೂ ಆಸ್ಟ್ರು ಮುದಿ ವಯಸ್ಸಿನವರಲ್ಲ" ಎಂದು ನಕ್ಕರು.

ಆರೆಯ ಪಾಲಿನ ವನಸಾಕತನ್ನು "ನಿಜ್ಜಿ, ನಿನ್ನನ್ನು ನಾನು ರಕ್ಷಿಸಿ ಕೊಳ್ಳಲು ಇಚ್ಛಿಸುತ್ತೇನೆ" ಎನ್ನುತ್ತಾ ಅಧಿಕಾರಿಗಳೊಡನೆ ತರ್ಕಕ್ಕೆ ಇಳಿದ ಪ್ರಿನ್ಸೆಫ್ ಪೆರಂಬೂರಿನ ಕೈಲ್ತೆಗಾಡಿ ತಯಾರಿಕೆಯ ಕಾರ್ಖಾನೆಯನ್ನು ಕಟ್ಟುವಾ ಆಲ್ಲಿ ಉಕ್ತು ನೈರ್ಥವಾಗಿ ಬಳಸಲ್ಪಟ್ಟತೆಂದೂ ಆಧುನಿಕ ಪದ್ಧತಿಯನ್ನು ಉಪಯೋಗಿಸಿ ಕಾರ್ಖಾನೆಯನ್ನು ಕಟ್ಟಿದಲ್ಲಿ ಸಾಮಾನ್ಯ ಉತ್ಪತ್ತಿಯ ಪ್ರಮಾಣವು ಹೆಚ್ಚಿದರೆ ಲಾಭವಾಗುತ್ತಿತ್ತೆಂದೂ ಹೇಳಿದರು. ತಜ್ಞರು ಮಹಾಲಿನ ಸಾಂದರ್ಯಕ್ಕೆ ಮನ ಸೋತಂತೆ, ಆವನ್ನು ರಚಿಸಲು ಸಾರ್ವಳ್ಳಿ ಮನುಷ್ಯನ ಸಾಲಾಮರಾಗಿ ಕೆಲಸಮಾಡಬೇಕಾಗಿಬಂದ ಸಾಮಾನ್ಯ ಜನರಿಗಾಗಿ ಅವರು ಮರುಗಿದರು.

ಸ್ವಾಧೀನಾನನ್ನು ಆವರು ಎಲ್ಲಿಯೂ ಬಿಡಲಿಲ್ಲ; ಸರಿಯೊಪ್ಪದನ್ನು ಹೇಳುವ ಧೈರ್ಯವಲ್ಲಿ ಅತಿಥಿ ಧರ್ಮದ ಪಾಲನೆ (ಅಂದರೆ ಯಾರೂ ಬಹಳ ಮುಖ ಭೇಗವಾಗದಂತೆ ಸಂಕೋಚ ತೋರಿಸುವ ವಿವೇಕ) ಅವರಿಂದ ತೋರಿಕ್ಕಲ್ಲ ದಲಿಲ್ಲ—ಎಂಬು ತೋರುವ ಕೆಲವು ಘಟನೆಗಳು ಜರಗಿವೆ. ಕೊಯಮುತ್ತೂರಿನಲ್ಲಿ ಆನರು ಯುಡುಗನೊಬ್ಬನೊಡನೆ ನೀನು ಮುಂದೇ ನಾನುವಿ ಎಂದು ಕೇಳಿದಾಗ ಸಮರ್ಪಕ ಉತ್ತರವೇ ಸಿಗಲಿಲ್ಲ. ಆಗ ಪ್ರಿನ್ಸೆಫ್ ರಶ್ಯದ ಬಾಲಕನೊಬ್ಬನ ಜೀವನೋದ್ದೇಶದ ಘನತೆಯನ್ನು ವರ್ಣಿಸಿದರು. ಭಾಕ್ರಾ ನಂಗಲಿನಲ್ಲಿ ಅಮೇರಿಕದ ಇಂಜಿನಿಯರನು "ನೀನೇಕೆ ನಮ್ಮ ದೇಶಕ್ಕೆ ಬರುವುದಿಲ್ಲ?" ಎಂದಾ "ನಿಮ್ಮ ಸರಕಾರವು ಆಪ್ಪಣೆ ಪತ್ರವನ್ನು ಕೊಡುವುದಿಲ್ಲವಲ್ಲ" ಎಂದೇ ಉತ್ತರಿಸಿದರು. ಪೊಸದೆಹಲಿಯ ಟೆಕ್ನಿಮಿಕ ಜಾತ್ರೆಯನ್ನು ಸಂದರ್ಶಿಸಿದಾಗ ಅಮೇರಿಕದ ಪ್ರದರ್ಶನ ಗೃಹದಲ್ಲಿ ಮರಸಿಗಿಯುವ ಆನೇಕ ಯಂತ್ರಗಳಿದ್ದುದನ್ನು ಕಂಡು "ನಾವು ಮೊದಲು ಇದನ್ನು ನಿಮ್ಮ ದೇಶದಿಂದ ತರಿಸುತ್ತಿದ್ದೆವು; ಈಗ ನೀವು ಇವನ್ನು ನಮಗೆ ಮಾರಾಟ ಮಾಡಲು ಒಪ್ಪುವುದಿಲ್ಲ. ಆದುದರಿಂದ ನಾವೇ ಕಷ್ಟಪಟ್ಟು ಈ ಯಂತ್ರಗಳ ರಚನೆಯನ್ನು ಕಲಿತುಕೊಂಡು, ತಯಾರಿಸಬೇಕಾಯಿತು" ಎಂದು ಪ್ರಿನ್ಸೆಫ್ ರಾಗ ಎಳೆದರು.

❖

ಆತಿಥಿಗಳ ನಡವಳಿಕೆಯ ಆನುಭವವನ್ನು ಸ್ವಲ್ಪ ಮಟ್ಟಿಗೆ ಸೂಡಿಕೊಂಡ ಬಳಿಕ ಭಾರತೀಯರು ಸ್ವಾಧೀನಾನಕ್ಕೆ ಧಕ್ಕೆ ಬರುವ ರೀತಿಯಲ್ಲಿ ಘಟನೆ ಪರಿವರ್ತನೆ ಹೊಂದದಂತೆ ತಿಯಲ್ಲಿ ಘಟನೆ ಪರಿವರ್ತನೆ ಹೊಂದದಂತೆ ಜಾಗರೂಕತೆಯನ್ನು ವಹಿಸಿದರೆಂದರೆ ತಪ್ಪಲ್ಲ. ಭಾಕ್ರಾ ಯೋಜನೆಯಲ್ಲಿ ಭಾಗವಹಿಸುತ್ತಿದ್ದ ಭಾರತೀಯ ಇಂಜಿನಿಯರನೊಬ್ಬನೊಡನೆ "ಇನ್ನೊಂದು ಆಣೆಕಟ್ಟನ್ನು ನೀವು ಕಟ್ಟಬಲ್ಲಿರಾ?" ಎಂದು ಆತಿಥಿಸರ್ವಾರದನ ರೊಬ್ಬರು ಕೇಳಿದಾಗ "ನಿಶ್ಚಯವಾಗಿ!" ಧೈರ್ಯದಿಂದ ಉತ್ತರ ಬಂತು.

ಪ್ರಿನ್ಸೆಫ್ ಆಧುನಿಕ ಜಾತ್ರೆಯಲ್ಲಿ ಟ್ರಾಕ್ಟರ್ ಮೈತ್ತೆಯಂತ್ರಗಳನ್ನು ಕಂಡಾಗ ಪ್ರಿನ್ಸೆಫ್ "ನೀನಿದನ್ನು ಮತ್ತೆಯನ್ನು ಉತ್ಪಾದಿಸಿದರೆಲ್ಲಿಲ್ಲ" ಎಂದು ನೂತಿನಿಂದ ತಿಳಿದರು. "ಆದರೆ ಇದನ್ನು ನಾವೇ ನಿರ್ಮಿಸಿದ್ದೇವೆ, ಆದು ನಮ್ಮ ಪತ್ರಜೆ ವಿಸಯ" ಎಂದು ಕೂಡಲೇ ಬಾಣದ ಮೊನೆಯಂತೆ ಬಂದ ಸುರುತ್ತರ ಆವರ ಬಾಯಿಯನ್ನು ಮುಚ್ಚಿಸಿತು.

ಮುಂದೆ ಭಾರತದ ಕೈಸಾಯಿನ ಸರಕುಗಳನ್ನು ನೋಡುವಾಗ ಮತ್ತು ಕೈಮಗ್ಗದ ಬಟ್ಟೆಗಳ ಸೊಬಗನ್ನು ಕಣ್ಣಾರೆ ಕಂಡಾಗ ಪ್ರಿನ್ಸೆಫ್ ಮೆಚ್ಚಿನೆಯ ಧ್ವನಿಯಲ್ಲಿ ಮೆಚ್ಚುಗೆಯ ಮಾತನಾಡಿದರು. "ಇಂಪು ನಿಮ್ಮ ಆಮೂಲ್ಯ ಭಂಡಾರ!" ಎಂದವರು ಎತ್ತಿ ಜೇಳಿದುವಲ್ಲದೆ, ಪತ್ರಿರವಿನ್ನ ಭಾರತೀಯ ತರಜಿಯೋವಳಿಗಳನ್ನು ಉದ್ದೇಶಿಸಿ "ನಿನಗೆ ಇಂಥ ಸೀರೆ-ಕುಪ್ಪಸಗಳು ಜೇಕೆಯಿಸುತ್ತ ವೆಯಲ್ಲಿನೆ? ನಿಜವಾಗಿಯೂ ಅವು ಮೋಹಕವಾಗಿವೆ, ನಿನಗೆ ಒಪ್ಪುವಂತೆಯೂ ಜೇಕಾದ ಬಡತೆಗಳು ಅನೆಂಬುದು ನಿಜ. ನೀವು ಅವುಗಳಿಗೆ ಮುಗುಳಾಗಿ ಧರಿಸಿದರೂ ಸಹಜ" ಎಂದು ಪ್ರಲಂಸೋದ್ಗಾರ ಗೈದರು.

❖

ಜಗೆ ಜಗೆಯ ಕುಸುರಿನ ಕೆಲಸವಿರುವ ಕಲಾವೈವಿಧ್ಯದ ಮ್ಯೋತಕವೆನಿಸಿದ ಉಡುಗೊರೆಗಳು ತನಗೆ ಸಿಕ್ಕಿದಾಗ ಆವಕ್ಕೆ ಬಹಳಾಗಿ ತಮ್ಮಲ್ಲಿ ಕೊಡಲಿರುವ ರಶ್ಯದ ವಸ್ತುಗಳ ಕುರಿತು ಅತಿಥಿಗಳು ಜೇರನಾಟ್ಟು ಕೊಂಡಿದ್ದೆಂತೆ ಕಾಣುತ್ತದೆ. ಆಗ್ರಾದಲ್ಲಿ ಬುಲ್ಗಾನಿನ್ ಹೇಳಿದ ಮಾತೇ ಇದಕ್ಕೆ ನಿದರ್ಶನ.

"ನೀವು ಮುನುಸ್ಯನು—ಆಂದರೆ ಕಲಾವಿದನು—ನಿನು ಮಾಡಬಯಸೋ ಅವನ್ನು ನಮಗೆ ಪ್ರೀತಿಯಿಂದ ಕೊಟ್ಟಿದ್ದೀರಿ. ನಿಮ್ಮ ದೇಶದ ಹಾಗು ಜನತೆಯ ದೊಡ್ಡ ಮುನುಸ್ಯನ ಜ್ಯೋತಿಕ ಆವಾಗಿದೆ ನಾವ್ತ ನೂತ್ರ ಯಂತ್ರ-ಳು ಉತ್ಪಾದಿಸಿದ ಸರಕುಗಳನ್ನೆ ಕೊಡುತ್ತಿದ್ದೇವೆ."

ಆಪರೆ ಇನೆರಡೂ ಬಗೆಯ ಕಾಣಿಕೆಗಳು ಪ್ರೇಮ ಹಾಗು ಸ್ನೇಹಸೂಚಕವಾಗಿವೆ ಎಂದ ವನ್ನು ನೆನಸಿಗೆ ತಂದರೆಂದೆನಿಸಿದ್ದರು; ಆಲ್ಲವೆ ತಮ್ಮಲ್ಲಿರುವ ಒಳ್ಳೆಯ ಸರಕೆಂದರೆ ಯಂತ್ರ ನಿರ್ಮಿತವಾದುವುಗಳೇ ಎಂಬು ಪ್ರಾಮಾಣಿಕವಾಗಿ ಒಪ್ಪಿಕೊಂಡರು.

ರಶ್ಯದ ಜಾನಪದ ಸಂಗೀತಜ್ಞಳ ರಿಕಾರ್ಡನ್ನೂ ಗ್ರಾಮಫೋನನ್ನೂ ಶ್ರೀಮತಿ ಮುನ್ಶಿಯವರಿಗೆ ಕೊಡುತ್ತಾ ಬುಲ್ಗಾನಿನ್ "ಈ ಪದ್ಯಗಳಲ್ಲಿ ರಶ್ಯದ ಜನತೆಯ ಆಟ್ಟಹಾಸ, ನಗು ಮತ್ತು ಸಂತೋಷ ಯಡುಗಿದೆ ಎಂದರು. ಪತ್ತಿರವಿನ್ನ ಪ್ರಿನ್ಸೆಫ್ ನಡುವೆ ಜಾಯಾಪೇಕ್ಷಿಯೊಬ್ಬರು "ನಮ್ಮ ಸ್ನೇಹಕ್ಕೆ ಭಾಷೆಯೊಂದು ಆಡ್ಡಿಯಾಗಿ ಈಗ ನಿಂತಿದೆಯೆ?" ಎಂದು ಕೇಳಿದರು.

ಇಲ್ಲ—ರಶ್ಯದ ಜನರೊಡನೆ ಸ್ನೇಹಕ್ಕೆ ಭಾಷೆಯು ಆಡ್ಡಿಯಾಗಿಲ್ಲ; ಆವರಂತೆ ಆನು ಆನುಸರಿಸುತ್ತಾ ಬಂದಿರುವ ಭಿನ್ನ ರಾಜಕೀಯ ಪದ್ಧತಿಯೂ ಆಡಚಣೆಯಾಗಿಲ್ಲ. ಏಕೆಂದರೆ ನಾನಾಜತೆಮ ಆಲೋಚ್ಯರಗಳು ಎಲ್ಲವ್ತರೂ ಒಂದೇ—ಭಾರತೀಯರಿಗಂತೂ ನಿಶ್ಚವೇ ಒಂದು ಕುಟುಂಬ!

"ಹಿಂದೀ-ರೂಸೀ ಭಾಯಿ-ಭಾಯಿ!" ಎಂಬ ಪಲ್ಲವಿಯಮುಳ್ಳಕ್ಕೆ ಇದೇ ಕಾರಣ.

ನಿಮ್ಮ ಅಮೂಲ್ಯ ಒಡವೆ ನಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಸಾರ ಜನಾಬ್ಬರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಪೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್ಸ್

ಮಂಗಳೂರು—3.

BHUVANENDRA PRODUCTS LTD., KATAPADI S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ನೈಪುಣರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ನ ಆನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಪರ್ಟ್ಸ್ ಲಿಮಿಟೆಡ್ ಕಟಪಾಡಿ, ದ.ಕ.

ಡಿಪೋ:- (1) ಉಡುಪಿ (2) ಮಂಗಳ ಗಪ್ಪಿ, ಹುಬ್ಬಳ್ಳಿ.



(ಎನೇ ಪುಟದಿಂದ)

ಮೊದಲೇ ಹೇಳಿದಂತೆ ರಶ್ಯವ ನಾಯಕರು ಇಲ್ಲಿ ಹೊರಡಿಸಿದ ಉದ್ಗಾರಗಳ ಕಡೆಗೆ ಪಾಶ್ಚಾತ್ಯರು ಗಮನ ಸೆಳೆಯುತ್ತಾರೆ ಭಾರತೀಯರು ಈ "ಪ್ರಚಾರ ತಂತ್ರ" ಕ್ಕೆ ಬಲಿ ಬೀಳಬಹುದು ಎಂದನರ ಭಯ. ನಾವು ನಿಜಕ್ಕೂ ಅಷ್ಟು ವಿವೇಕ ಶೂನ್ಯರೇ? ಮಾರ್ಷಲ್ ಬುಲ್ಗಾನಿನ್ ಅಥವಾ ಮಿಸ್ಟರ್ ಖ್ರುಶ್ಚೇಫ್ ಹೇಳಿದ್ದಕ್ಕೆಲ್ಲ ನಾವು ಸೈಗುಟ್ಟುದ್ದೇವೆಯೆ? ಹಾಗೆ ಹೂಂಗುಟ್ಟುವಂತಿದೆಯೆ?

ಅತಿಥಿಗಳಾಗಿ ಬಂದವರು ವಿವಾದಾಸ್ಪದವಾದ ಮಹತ್ವದ ಪ್ರಶ್ನೆಗಳ ಬಗ್ಗೆ ಸಾರ್ವಜನಿಕ ಸಭೆಗಳಲ್ಲಿ ಅಭಿಪ್ರಾಯಗಳನ್ನು ಮಂಡಿಸಬಾರದಿತ್ತೆಂದು ಕೆಲವರ ಮತ. ಇದು ತಪ್ಪೆನ್ನುವಂತಿಲ್ಲ— ನಮ್ಮ ಪ್ರಧಾನಿ ನೆಹರುಗಳು ರಶ್ಯದಲ್ಲಿದ್ದಾಗ ಈ ಮಟ್ಟಿಗೆ ಬಹಳ ಸಂಯಮವನ್ನೂ ತಾಳ್ಮೆಯನ್ನೂ ತೋರಿಸಿದ್ದರು. ಭಾರತದಲ್ಲಿ ಯಾದರೂ ರಶ್ಯದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ ತಮ್ಮ ಭಾಷಣಗಳಲ್ಲಿ ಗಂಭೀರರಾಗಿದ್ದರು. ನಾಳಿಗೆ ಸಡಿಲು ಬಿಟ್ಟು ನಡೆದವರೆಂದರೆ ಖ್ರುಶ್ಚೇಫ್!

ಇದನ್ನು ಭಾರತೀಯ ಮುತ್ಸದ್ದಿಗಳೂ ಒಪ್ಪಿಕೊಳ್ಳುತ್ತಾರೆ— ಸಂಸತ್ತಿನಲ್ಲಿ ಸಹ ಇದರ ಪ್ರಸ್ತಾಪ ಬಂದಿತೆಂಬುದನ್ನು ಇಲ್ಲಿ ನೆನೆಯುವುದೊಳಿತು. ಸ್ನೇಹ ಬೆಳೆಸಲು ಬಂದವರು ಬಹಿರಂಗವಾಗಿ ಕುತ್ಸಿತ ಟೀಕೆಗಳನ್ನು ಮಾಡಹೋಗದೆ ತುಸು ಗಂಭೀರವಾಗಿ ವರ್ತಿಸಿ, ಸರಕಾರಿ ಮಟ್ಟದಲ್ಲಿ ತಮ್ಮ ಅಭಿಪ್ರಾಯಗಳನ್ನು ವಿವಾದಾಸ್ಪದ ವಿಷಯಗಳ ಕುರಿತು ತಿಳಿಸಿ ಹೇಳಬಹುದಿತ್ತು ಎನ್ನಬಹುದು. ಆದರೆ, ಸ್ವಾರಂಭವಲ್ಲಿಯೇ ಹೇಳಿದಂತೆ, ತಮ್ಮ ದೇಶದ ಹೊಗಳಿ ತಿರುಗಾದಿದ ಅನುಭವ ರಶ್ಯದ ಈ ಧುರೀಣರಿಗೆ ಹೆಚ್ಚಿಲ್ಲವಲ್ಲವೆ? ಆದುದರಿಂದ ತಿಳಿದವರು ತಿಳಿಯದವರ ವರ್ತನೆಗೆ ತುಸು ತಾಳ್ಮೆಯನ್ನು ವಹಿಸಬೇಕಾಗುತ್ತದೆ.

ಮಂತ್ರಿ ನಿತ್ಯಾನಂದ ಕಾನುಂಗೊರವರು ಭಾರತ ಸರಕಾರದ ಪರವಾಗಿ ರಶ್ಯದ ನಾಯಕರ ಸರಿವಾರದೊಡನೆ ಇದ್ದ ತನ್ನ ಅನುಭವವನ್ನು ವಿವರಿಸುವಾಗ ಅತಿಥಿಗಳು ಅಧಿಕಾರೇತರ ರೀತಿಯಲ್ಲಿ ವರ್ತಿಸಿದರು ಎಂದಿದ್ದಾರೆ. ಇದು ನಿಜ—ಅವರು ರಾಜಕೀಯ ಮುತ್ಸದ್ದಿಗಳಂತಲ್ಲ ಕೇವಲ ಸ್ನೇಹಿತರಂತೆ ನಡೆದುಕೊಂಡಿದ್ದಾರೆ; ತಮಗೆ ಸರಿ ಕಂಡುದನ್ನು ಬಿಚ್ಚು ಮನಸ್ಸಿನಿಂದ ಆಡಿ ತೋರಿಸಿದ್ದಾರೆ. ಭಾರತದ ನೆಲ ಮುತ್ತು ವಾತಾವರಣ ಇಲ್ಲಿ ನಿಮಿತ್ತ ಮಾತ್ರ; ಒಂದು ರೀತಿಯಿಂದ ಮೊಸ್ಕೋ ರೇಡಿಯೊವನ್ನು ಇಲ್ಲಿ ಕೇಳುತ್ತಿದ್ದಂತೆ; ಅದೇ ಹಳೆಯ ರಾಗ!

ಅದೇ ಹಿಂದಿನ ನಿಲುಮೆ

ಪ್ರಧಾನಿದ್ವಯರೂ ಖ್ರುಶ್ಚೇಫರೂ ಸಹಿ ಹಾಕಿದ ಸಂಯುಕ್ತ ಘೋಷಣೆಯಲ್ಲಿ ಪಾಶ್ಚಾತ್ಯ ರಾಷ್ಟ್ರಗಳನ್ನು ಹೊಸತಾಗಿ ಕೆಣಕುವಂಥದು ಇದೆಯೆ? ಎಂದಿಗೂ ಇಲ್ಲ —ಭಾರತ ಸರಕಾರವು ಕಳೆದ ಎಂಟು ವರ್ಷಗಳಿಂದ ಹೇಳುತ್ತಾ ಬಂದುದನ್ನೆ ಈ ಪ್ರಕಟಣೆಯು ಒತ್ತಿ ಹೇಳುತ್ತದೆ. ಜಿನೇವದ ಸಮ್ಮೇಳನದಲ್ಲಿ ಪಾಶ್ಚಾತ್ಯ ರಾಷ್ಟ್ರಗಳೇ ಹಿಂದೇಟು ಹೊಡೆದವು ಎಂಬ ಅಭಿಪ್ರಾಯ ಮುಂತಾದವುಗಳು ರಶ್ಯದ ಗುಂಪಿಗೆ ಭಾರತ ಸೇರಿ ಹೋಯಿತು ಎಂದೆನ್ನುವ ನತೀರ್ಮಾನವನ್ನೆ ಹುಟ್ಟಿಸಬೇಕಾಗಿಲ್ಲ. ಕೆಂಪು ಚೀನಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸ್ಥಾನ ಸಿಗಬೇಕೆಂದು ಭಾರತ ಕೇಳಿದ್ದ ಮಾತ್ರಕ್ಕೆ ನಾವು ಕಮ್ಯುನಿಸ್ಟರು ಹೇಗಾಗಲಿಲ್ಲವೆ? ಈಗಲೂ ಹಾಗೆಯೇ ತಟಸ್ಥರಾಗಿದ್ದೇವೆ.

ಇನ್ನು ಆರ್ಥಿಕ ಹಾಗು ತಾಂತ್ರಿಕ ಸಹಕಾರದ ವಿಚಾರ—ಇದು ಪಾಶ್ಚಾತ್ಯ ರಾಷ್ಟ್ರಗಳ ಪಾಲಿಗೆ ಕುಡೋದ್ಯದ ವಿಷಯವಾಗಿದೆ. ಡಲ್ಲೇಸರು ಹೇಳುತ್ತಾರೆ —"ತಮ್ಮ ಪ್ರಜೆಗಳಿಗೆ ಕೊಡಲಾರದುದನ್ನು ಇವರು ಹೊರಗಿನವರಿಗೆ ಹೇಗೆ ಕೊಡುತ್ತಾರೆ!" ಡಲ್ಲೇಸರ ಹೇಳಿಕೆಯಂತೆ ರಶ್ಯದಲ್ಲಿ ದಿನ ಬಳಕೆಯ ಸಾಮಾನುಗಳು ಕಡಿಮೆಯಾಗಿವೆ; ಬದಲಿಗೆ ಸೈನ್ಯ ಸಲಕರಣೆಗಳು ಹೆಚ್ಚಿವೆ; ಇವುಗಳನ್ನು ಅವರು ಹೊರದೇಶಕ್ಕೆ ಕೊಡುವಷ್ಟು ಮುಂದೆ ಸಾಗಿದ್ದಾರೆ.

ಸುದೈವದಿಂದ ಭಾರತವು ಯಾರಿಂದಲೂ ಸೈನ್ಯ ಸಲಕರಣೆಗಳನ್ನಾಗಲೀ ಸಹಾಯವನ್ನಾಗಲೀ ಅಪೇಕ್ಷಿಸಿಲ್ಲ. ಆದುದರಿಂದ ಭಾರತವನ್ನು ಈ ಮಟ್ಟಿಗೆ ಆಪ್ತೇಸಿಸುವಂತಿಲ್ಲ. ತನ್ನ ಜನಗಳಿಗೆ ಬೇಕಾದಷ್ಟು ವಸ್ತುಗಳನ್ನು ಪೂರೈಸುತ್ತಿಲ್ಲ ಎಂಬ ಡಲ್ಲೇಸರ ಆತಂಕನೆಗೆ "ಅದು ಆಂತರಿಕ ವಿಷಯ—ನಮಗೆ ಸೇರಿದುದಲ್ಲ" ಎನ್ನ ಬೇಕಾಗುತ್ತದೆ. ಅಮೇರಿಕದ ಸರಕಾರ ನಮಗೆ ಧಾರಾಳ ಸಹಾಯ ನೀಡುವುದಕ್ಕೋಸ್ಕರ ಎಷ್ಟು ತೆರಿಗೆ ಹೆಚ್ಚಿಸಿದೆಯೊ, ಯಾರಿಗೆ ಗೊತ್ತು?

ಸಹಾಯದ ಮಾತು

ಮಧ್ಯ ಪೂರ್ವ ಮತ್ತು ಏಶ್ಯದ ರಾಷ್ಟ್ರಗಳಲ್ಲಿ ಆರ್ಥಿಕ ಸಹಾಯ ಮತ್ತು ತಾಂತ್ರಿಕ ತಜ್ಞರನ್ನು ನೀಡುವ ಭರವಸೆಯನ್ನಿತ್ತು ರಶ್ಯವು ಭಾವನಾತ್ಮಕ ಮಟ್ಟದಲ್ಲಿ ಜನಪ್ರಿಯತೆಯನ್ನುಗಳಿಸಲುನೋಡಿದೆ ಎಂದು ಡಲ್ಲೇಸರ ಇನ್ನೊಂದು ಆತಂಕ ಕಾರಣವಾಗಿದೆ. ಇದು ಅಮೇರಿಕದಕೊಡುಗೆಗಳಿಗೆ ಇಷ್ಟೇ ಚೆನ್ನಾಗಿ ಅನ್ವಯಿಸುವುದಿಲ್ಲವೆ? ಅಮೇರಿಕದ ಡಾಲರುಗಳಿಂದ ಹಿಡಿದು ತುಪ್ಪದ ವರೆಗೆ ನಮ್ಮ ದೇಶದಲ್ಲಿ ಕಳೆದ ಕೆಲವು ವರ್ಷಗಳಿಂದ ಬಾರದೆ ಉಳಿದ ಸರಕೇನಾದರೂ ಇದೆಯೆ? ಹಾಗೆ ಅಮೇರಿಕ ಪ್ರೀತಿ ಸಂಪಾದಿಸುವಲ್ಲಿ ದುರುದ್ದೇಶವಿಲ್ಲದಿದ್ದರೆ ರಶ್ಯದ ಮಟ್ಟಿಗೇಕೆ ಆದರ ಪ್ರಸ್ತಾಪ?

ಮೇಲಾಗಿ ಭಾರತವು ಅಮೇರಿಕದಿಂದ ಅಥವಾ ಕೊಲೊಂಬೋ ಯೋಜನೆಯ ಸದಸ್ಯರಿಂದ ಸಹಾಯ ಸ್ವೀಕರಿಸುವಾಗ ರಶ್ಯ ಮತ್ತಿತರ ಕಮ್ಯುನಿಸಂ ಪಂಥದ ರಾಷ್ಟ್ರಗಳ ನಿಶ್ಶರ್ತ ಸಹಾಯವನ್ನೂ ನಿರಾಕರಿಸುವೆನೆಂದು ವಾಗ್ದಾನವಿತ್ತಿದೆಯೆ? ಎಲ್ಲರಿಗೂ ತಿಳಿದಿರುವಂತೆ ತಾಂತ್ರಿಕ ಸಹಾಯವನ್ನು ಎಲ್ಲಿಂದ ಬಂದರೂ ನಾವು ಸ್ವೀಕರಿಸಿದ್ದೇವೆ.

ಎನ್ನೆ ಕಾರ್ಖಾನೆಗಳಲ್ಲಿ ಅಮೇರಿಕದ ತಂತ್ರವನ್ನೆಸಯೋಗಿಸಿದ್ದೇವೆ; ಆಣೆಕಟ್ಟು ಮತ್ತು ವಿದ್ಯುಚ್ಛಕ್ತಿ ಯೋಜನೆಗಳಲ್ಲಿ ಆ ದೇಶದ ತಜ್ಞರನ್ನು ಕೆಲಸಕ್ಕಿಟ್ಟುಕೊಂಡಿದ್ದೇವೆ. ಬ್ರಿಟನಿನ ಸಹಾಯದಿಂದ ಇಷ್ಟರಲ್ಲಿಯೇ ಉಕ್ಕಿನ ಕಾರ್ಖಾನೆಯನ್ನು ಹೊಸತಾಗಿ ಸ್ಥಾಪಿಸಲಿದ್ದೇವೆ. ಒಳ್ಳೆಯ ಕೆಲಸಕ್ಕೆ ಎಲ್ಲಿಂದ ಸಲಹೆ ಸಹಾಯ ಬಂದರೂ ಸ್ವೀಕರಿಸುವುದು ನಮ್ಮ ಮೂಲ ಧೋರಣೆಯಾಗಿದೆ. ಇಂಥದರಲ್ಲಿ ರಶ್ಯನ ನೆರವಿನಿಂದ ಭಿಲಾಯಿಯ ಉಕ್ಕಿನ ಕಾರ್ಖಾನೆ ಮತ್ತಿತರ ಬೇರೆ ಕೆಲವು ಕೆಲಸಗಳನ್ನು ಮಾಡಿಸಿಕೊಂಡರೆ ಪಾಶ್ಚಾತ್ಯ ರಾಷ್ಟ್ರಗಳ ಅವಮಾನವಾಗುತ್ತದೆಯೆ?

ಮನೆಗೆ ಬಂದ ಅತಿಥಿಗಳು ಸ್ವಾಗತವತ್ಸಲರ ಅಭಿಮಾನವನ್ನು ಚುಚ್ಚುವ ಮಾತುಗಳನ್ನು ಸಹ ಆಡಿದುವಾಗ ಮತ್ತಿದನ್ನು ಬೆರಳು ಕಚ್ಚಿ ಭಾರತೀಯರು ಕೇಳಿ ಸಹನೆಯಿಂದಿರುವಾಗ, "ಇದೋ, ಅವನಾನದ ಮಾತು!" ಎಂದು ಪಾಶ್ಚಾತ್ಯರು ಎಚ್ಚರಿಸುವ ಅಗತ್ಯವೇನೂ ಉಳಿಯುವುದಿಲ್ಲ. "ನಮ್ಮ ಸಹಕಾರಕ್ಕೆ ಇನ್ನೆಲ್ಲಿವೆ ಅವಕಾಶ?" ಎಂಬ ನುಡಿಮಂತಿಕೆಯನ್ನು ಪಾಶ್ಚಾತ್ಯ ರಾಷ್ಟ್ರಗಳು ತೋರಿಸಬೇಕಾದ ಪ್ರಸಂಗವೂ ಬಂದಿಲ್ಲ. ರಶ್ಯದ ಪ್ರಭೃತಿಗಳೇ ನಿಸ್ಸಂದಿಗ್ಧ ಮಾತುಗಳಲ್ಲಿ ಭಾರತವು ಪಾಶ್ಚಾತ್ಯ ರಾಷ್ಟ್ರಗಳಿಂದ ಆರ್ಥಿಕ ಹಾಗು ತಾಂತ್ರಿಕ ಸಹಾಯ ಪಡೆಯುವುದಕ್ಕೆ ತಮ್ಮ ಆತಂಕವಿಲ್ಲವೆಂದಿದ್ದಾರೆ. ಮನಸ್ಸಿದ್ದರೆ, ಪಾಶ್ಚಾತ್ಯ ರಾಷ್ಟ್ರಗಳು ಸಹಾಯವನ್ನು ಮುಂದೆಯೂ ಕೊಡಬಹುದು

ಪ್ರಜಾಪ್ರಭುತ್ವದಲ್ಲಿ ವಿಶ್ವಾಸ

ಭಾರತೀಯರು ಪ್ರಜಾಸ್ವಾಭುತ್ವ ಪದ್ಧತಿಯನ್ನು ಮನಸ್ಸಿಸುತ್ತಾರೆ: ಸ್ವಾತಂತ್ರ್ಯ ಪ್ರೇಮಿಗಳಾಗಿಯೇ ಕೊನೆಯು ವರೆಗೆ ಅವರುಉಳಿಯಬಯಸುತ್ತಾರೆ.ಈಧ್ಯೇಯಕ್ಕೆ ಪೋಷಕವಾಗುವ ರೀತಿಯಲ್ಲಿ ಯಾವ್ಯಾರು ಎಷ್ಟೆಷ್ಟು ಮಟ್ಟಿಗೆ ಅನುಕೂಲ ವರ್ತನೆ ತೋರಿಸುತ್ತಾರೆಂದು ಭಾರತೀಯರು ನಿರೀಕ್ಷಿಸುತ್ತಿರುತ್ತಾರೆ. ತಮ್ಮ ಸಮತೋಲ ಬುದ್ಧಿಯನ್ನು ಅವರು ಕೆಡಿಸಿಕೊಂಡಿಲ್ಲ. ನೆಹೆರುಗಳು ಇರುವಷ್ಟು ಕಾಲವಾದರೂ ಈ ಗುಣ ಬಾಳುವುದೆಂದು ಅಮೇರಿಕದ ಒಬ್ಬ ಸಿನೇಟರೇ ಹೇಳಿದ್ದಾರೆ. ಅಷ್ಟು ನಂಬಿಕೆ ಎಲ್ಲ ಪಾಶ್ಚಾತ್ಯರಿಗಿರಲಿ!

ರಶ್ಯದ ನಾಯಕರ ವರ್ತನೆ ಸಂಪೂರ್ಣ ಸಂಭಾವಿತ ತನದೆ ಮಾದರಿ ಎಂದು ಭಾರತೀಯ ವಿಮರ್ಶಕರು ತಿಳಿವಿಲ್ಲ. ಸೈನಿಕ ಒಪ್ಪಂದಗಳನ್ನು ಖಂಡಿಸುವ, ಅಣುಶಸ್ತ್ರಗಳ ಸ್ಫೋಟನವನ್ನು ಪ್ರತಿಬಂಧಿಸಬೇಕೆನ್ನುವ, ಮಾನವ ಸ್ವಾತಂತ್ರ್ಯವನ್ನು ಮನ್ನಿಸುವ ರಶ್ಯವ ನಾಯಕರು ತಾವು ವಾರ್ಸಾ ಒಪ್ಪಂದದಂಥ ಕೃತಿಯನ್ನೂ ಮೊನ್ನೆ ತಾನೆನೆಡೆಸಿದಂಥ ಅಣು ಸ್ಫೋಟನಗಳನ್ನೂ ಪೂರ್ವ ಯುರೋಪಿನ ರಾಷ್ಟ್ರಗಳಲ್ಲಿ ಜನತಾ ಸರಕಾರದ ಹೆಸರಿನ ದಾಸ್ಯ ವ್ಯವಸ್ಥೆಯನ್ನು ತಂದಿರುವುದನ್ನೂ ಭಾರತೀಯರು ಗಮನಿಸದೆ ಹೋಗಿಲ್ಲ ಮಾತಿನಿಂದಾದರೂ ಅವರು ಪಾಶ್ಚಾತ್ಯರಿಗಿಂತ ಒಂದು ಹೆಜ್ಜೆ ಮುಂದಿದ್ದಾರೆ— ಆಷ್ಟೇ ಇಲ್ಲಿ ಸಲ್ಲುವ ಮಹತ್ವ

"ಕೊಮಿನ್ ಫಾರ್ಮ್" ಮಾದರಿಯ ಅಂತಾರಾಷ್ಟ್ರೀಯ ಸ್ವರೂಪದ ಕಮ್ಯುನಿಸಂ ಪ್ರಚಾರ ಯಂತ್ರವನ್ನು ಉಳಿಸುವ ಬಯಕೆ ಈಗಲೂ ರಶ್ಯದ ನಾಯಕರಿಗೆ ಇರುವುದರಿಂದ "ಆಂತರಿಕ ವ್ಯವಹಾರದಲ್ಲಿ ತಾತ್ವಿಕ ಸ್ವರೂಪದ ಹಸ್ತಕ್ಷೇಪವನ್ನು ಸಸ ಮಾಡಲಾಗದು" ಎಂಬ ಅವರ ಒಪ್ಪಿಗೆಯ ಮಾತು ಭಾರತೀಯ ಕಮ್ಯೂನಿಸ್ಟರ ವಿಷಯದಲ್ಲಿ ಎಷ್ಟರ ಮಟ್ಟಿಗೆ ಕಾರ್ಯಗತವಾಗುವುದೋ ಕಾದು ನೋಡಬೇಕಾಗಿದೆ. ಆದರೆ ಪ್ರಜಾಪ್ರಭುತ್ವಕ್ಕೆ ವಿಶೇಷ ಬೆಂಬಲವಿರುವ ದೇಶವೆಲ್ಲಿ ಇಂಥ ವಾತಾವರಣ ಸಂಗಡಗಳ ಸಹಜ ಬೆಳವಣಿಗೆಗೆ ಮೊಸ್ಕೊ ಪ್ರೇರಣೆಯೇ ಆತಂಕವಾಗುತ್ತದೆ ಎಂಬುದನ್ನು ಮರೆಯಲಾಗದು. ನೆಹೆರುಗಳಂತೂ ದೇಶದೊಳಗೆ ಕಮ್ಯುನಿಸ್ಟರನ್ನು ಎತ್ತಿ ಹಿಡಿದವರಲ್ಲ. ಇದು ಪಾಶ್ಚಾತ್ಯರಿಗೂ ಗೊತ್ತು; ದಯವಿಟ್ಟು ಅದನ್ನಿಲ್ಲಿ ಅವರು ನೆನಪಿಗೆ ತಂದುಕೊಳ್ಳಲಿ!

—ಕಾರ್ತಿಕೇಯ.

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ನಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
. ನಕ್ಕು ನಗಿಸುವ ಆರು ನಗೆನೋಟಗಳು—



ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಪಾರಾ ಕಮ್ಮ ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಸಕ್ಕದ ಮನೆಯವರ ಕಾಟ ಕೂಟದ ಮರ್ಮವನ್ನೂ, ನಿಶ್ಚೈಸಿದ್ದು 25 ಸಾವಿರ ವರದಕ್ಷಿಣೆ, ಸಿಕ್ಕಿದ್ದು ಬರೇ ಎಪ್ಪದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ? ಹಾಗಿದ್ದರೆ

ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ: 0—10—0

Edited, Printed & Published By K. H. Shetty, at the Navayuga Press, Udipi S. India.